ಕರ್ಮವೀರ

ದೀಪಾವಳಿ ಸಂಚಿಕೆ ೧೯೬೯

ಬೆಲೆ: ಮೂರು ರೂಪಾಯಿ





ಸವರನ್ ಬೀಡಿ ಫ್ಯಾಕ್ಟರಿ
ಇವರಿಂದ
ಸಕಲರಿಗೂ ದೀಪಾವಳಿಯ
ಶುಭಾಶಯುಗಳು

ಸ್ಪೇಷಲ್ ಸವರನ್

ಬೀಡಿಗಳಲ್ಲಿ ಅತ್ಯುತ್ತಮ
ಬೀಡಿಗಳು

ದೇಶದ ಅತಿ ಶ್ರೇಷ್ಠ ದರ್ಜೆಯ
ತಂಬಾಕಿನಿಂದ ತಯಾರಿಸಲ್ಪಡುತ್ತಿರುವ
ಜನಪ್ರಿಯ ಬೀಡಿಗಳು



ವ್ಯಾಪಾರಿಗಳಿಗೆ ಉತ್ತಮ ಅನುಕೂಲತೆಗಳು
ಬೇಗನೇ ಪತ್ರವ್ಯವಹಾರ ಮಾಡಿರಿ

ಪಿ. ಸಯ್ಯದ್‌ಸಾಹೇಬ್ & ಸನ್ಸ್
ಸವರನ್ ಬೀಡಿ ಫ್ಯಾಕ್ಟರಿ ಪಿ. ಬಿ., ಬಳ್ಳಾರಿ

Phone : 342 Tele : BELLBANK

BELLARY DISTRICT CO-OPERATIVE CENTRAL BANK LTD.,

Head Office: HOSPET – District Bellary

Branches : Thirteen

Spread over all Taluka Headquarters and important Towns, in the District to serve the Societies affiliated. Premier Bank in the District to finance various schemes sponsored by the Government to help the Agriculturists. Financers to the Co-operative Sugar Factory Kampli, Bellary District.

DEPOSITS AND RESERVES AS ON 30th JUNE 1969.

		(Rs. in Lakhs)
1.	**Share Capital Authorised**	50·00
2.	**Share Capital Paid-up**	50·95
3.	**Reserve Fund and Other Funds**	14·28
4.	**Deposits**	123·71
5.	**Working Capital**	365·45

Rates of interest allowed on various kind of Deposits

SAVINGS BANK . . . 3-¾%

Fixed Deposits

90 DAYS	3¾%
6 MONTHS	5¼%
1 YEAR	6%
2 YEARS	6¼%
3 YEARS	6½%
5 YEARS	6¾%
7 YEARS UPTO 9 YEARS	7%
9 YEARS ABOVE	8%
PROVIDENT DEPOSIT	6% C.I.
RECURRING DEPOSIT	6%
PIGMY 6 YEARS	4%
PIGMY 1 YEAR	2¾%

Banking transactions of all description undertaken under the Mutual Agreement Schemes.

A. G. Pandurangi, B. A., B. Com., Secretary.

M. H. M. Gurushankaraiah, LL. B., Vice-President.

Allum Karibasappa, M. L. A., President.

A. L. Virupakshappa, B.A., LL B., Assistant Secretary

Whilest in
MANGALORE
Stay at

Happy
Deepawali
to all



MOTI MAHAL

PHONE :
5611-5 Lines



GRAMS :
'MOTIMAHAL'

Luxury ★★★ Hotel

South India's Largest & Most Charming Hotel

ATTRACTIVE TARRIFF

- ★ Modern Amenities and Large Family Suites
- ★ Centrally Air-conditioned
- ★ DELIGHTFUL BAR
- ★ Banquet and Conference Fecilities
- ★ Superb Indian and Continental Cuisine
- ★ Daily Dinner, Dance and Cabaret Shows
- ★ Under-Ground Car-Park

INDIAN AIRLINES OFFICE IN PREMISES



SUN
SUNGLOSS
BHUTE GLASS TRADERS
Pan Bazar Cross road HUBLI -20 (Mysore state)



ನಮ್ಮ ಗ್ರಾಹಕರಿಗೆ ಹಾಗೂ ಹಿತಚಿಂತಕರಿಗೆ
ದೀಪಾವಳಿಯ ಹಾಗೂ ನೂತನ
ವರುಷದ ಶುಭಾಶಯಗಳು

ನವಯುಗ

ಸೋಪ ಫ್ಯಾಕ್ಟರಿ

838 ರವಿವಾರ ಪೇಠ, ಬೆಳಗಾವಿ

Phone No:
ಫ್ಯಾಕ್ಟರಿ : **1018** * ಆಫೀಸು : **1579**

ನಮ್ಮ ಗ್ರಾಹಕರಿಗೆ ಹಾಗೂ ಹಿತಚಿಂತಕರಿಗ ದೀಪಾವಳಿ ಹಾಗೂ ನೂತನ ವರುಷದ ಶುಭಾಶಯಗಳು



ಸರ್ವಾದರಣೀಯವಾದ ಇಂದಿನವರೆಗೂ ತನ್ನದೇ ಆದ
ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿರುವ
ಏಕಮೇವ ಬೀಡಿ ಎಂದರೆ!

ಟೇನಿಸ ಬೀಡಿ

(ನಕಲಿ ಮಾಲಿನ ಬಗ್ಗೆ ದೂರವಿರಿ)

ಸೇಲ್ಸ ಡಿಪ್ರೋ :
ಕಡೋಲಕರಗಲ್ಲಿ ಬೆಳಗಾವಿ
ಖಾನಾಪುರ ಜಿಲ್ಲಾ ಬೆಳಗಾವಿ

ಫ್ಯಾಕ್ಟರಿ:
ಹೆ ಆ ನಿಪ್ಪಾಣಿ Phone · 39
ಬ್ರ್ಯಾಂಚ್ ಬೆಳಗಾವಿ Phone : 439

ಮಾಲೀಕರು – ಸಿ. ಎನ್. ಸದಲಗೆ ನಿಪ್ಪಾಣಿ. ಜಿಲ್ಲಾ : ಬೆಳಗಾವಿ

HAPPY DEEPAWALI TO ALL OUR PATRONS



Give a Filip to your Sales Through Effective Outdoor Advertising Media

BUS SHELTERS
BUS PANELS
HOARDINGS

Well maintained Mysore State Road Transport Corporation Vehicles will carry your message throughout Mysore State

which is a perennial Tourist Attraction

FOR FULL PARTICULARS PLEASE CONTACT:

Sole Advertising Concessionaires:

ENNAR SYNDICATE

23, J. C. W. Road, Bangalore-2

Phone | **27061** **29922**

Telegrams: ENNARCORPN

Telephone: 29922

ENNAR CORPORATION

21, Jayachamaraja Wadiyar Road, BANGALORE-2.

Distributors for Mysore State

Power Packed Performance

Dry Charged "M.E.C." Batteries

Manufactured by The Mysore Electro Chemical works Ltd., Bangalore, with the technical collaboration of Messrs. Accumulatorenfabric Sonnenschein GmbH, West Germany & Messrs. Semperit, A. G., of Austria.

Telephone: 29922

ENNAR CORPORATION (INSTRUMENTS)

23, Jayachamaraja Wadiyar Road. BANGALORE-2

Sole Selling Agents for South India for:

"SYSTRONICS" Electronic & Electro-Medical Instruments manufactured by Mesers. Systronics, Nareda, Ahmedabad (a Sarabhai Group of concerns) &

Dealers in Battery Eliminators.

ದೀಪಾವಳಿಯ
ಹಾರ್ದಿಕ
ಅಭಿನಂದನೆಗಳು

ಎಮ್‌ಇಐ

ಆಯಿಲ್ ಇಮರ್ಸ್ಡ್ • ಮೆಟಲ್‌ಕ್ಲ್ಯಾಡ್ • ಹೆವಿ-ಡ್ಯೂಟಿ

ಸ್ಟಾರ್ ಡೆಲ್ಟಾ ಸ್ಟಾರ್ಟರ್ಸ್

ಟೈಪ್ ಎನ್‌ಎಸ್‌ಡಿ 100 ಎಚ್.ಪಿ. ವರೆಗೆ

MEI


ಇಲೆಕ್ಟ್ರಿಕ್ ಪವರ್ ನಿಯಂತ್ರಣದಲ್ಲಿ ಎಲ್ಲದಕ್ಕೂ ಅತ್ಯಂತ ಭದ್ರವಾದುದು.

ತಯಾರಿಸುವವರು:
ದಿ ಮೈಸೂರ್ ಇಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್
ಬೆಂಗಳೂರು
ಇಂಜನಿಯರಿಂಗ್ ಫ್ಯಾಬ್ರಿಕೇಶನ್.

I.A.E.C.

ಐ.ಎ.ಇ.ಸಿ. (ಮೈಸೂರ್)
ಪ್ರೈವೇಟ್ ಲಿಮಿಟೆಡ್

ಬೆಂಗಳೂರು ಸಿಟಿ-21
ಸಂಬಂಧಿತ ಆಫೀಸುಗಳು
ಬೊಂಬಾಯಿ • ದೆಹಲಿ • ಕಲ್ಕತ್ತ •
ಮದರಾಸು • ಹೈದರಾಬಾದು.



I. A. E. C. (MYSORE) PVT. LTD.,

3/4, Okalipuram, BANGALORE-21

Telegrams. 'AGRICOLA' Telephones: 22245,26763 Telex. 209

INDEX TO ADVERTISERS



ಪರಿವಿಡಿ

ಕರ್ಮವೀರ

ದೀಪಾವಳಿ ಸಂಚಿಕೆ

೧೯೬೯



ಸಂಪಾದಕರು :

ರಂಗನಾಥ ದಿವಾಕರ

ಸಹಾಯಕ ಸಂಪಾದಕರು :

ಎಸ್. ವಿ. ಪಾಟೀಲ

ನಮ್ಮ ನುಡಿ

'ಕರ್ಮವೀರ'ನ ನೆಚ್ಚಿನ ಓದುಗರಿಗೆ ದೀಪಾವಳಿಯ ಶುಭಸಂದರ್ಭದಲ್ಲಿ ವಾಡಿಕೆಯಂತೆ ಈ ದೀಪಾವಳಿ ಸಂಚಿಕೆಯನ್ನು ತುಂಬ ಹರುಷದಿಂದ ಅರ್ಪಿಸುತ್ತಿದ್ದೇವೆ.

ದೀಪಾವಳಿಯ ಈ ಸಂದರ್ಭವು ಕತ್ತಲೆಯನ್ನು ಕಳೆದು ಬೆಳಕನ್ನು ಬರಮಾಡಿಕೊಳ್ಳುವ ಸುಸಂದರ್ಭ. ನಮ್ಮ ನಾಡು ಹಲವಾರು ವರುಷಗಳ ನಂತರ ಈ ಸಲ ಮೊದಲ ಬಾರಿಗೆ ಸಮೃದ್ಧ ಬೆಳೆಯುತ್ತ, ಹಸಿರು ಕ್ರಾಂತಿಯತ್ತ ಭರದಿಂದ ಹೆಜ್ಜೆ ಹಾಕುತ್ತಿದೆ. ನಿಸರ್ಗವೂ ಒಲಿದು ಬಂದು ಈ ಸಮೃದ್ಧಿಗೆ, ಕ್ರಾಂತಿಗೆ ತನ್ನ ಹೆಚ್ಚಿನ ನೆರವನ್ನು ನೀಡಿರುವುದು. ಹೀಗಾಗಿ ಈ ಸಲ ನಮ್ಮ ಕೃಷಿಕರು, ಉದ್ಯಮಿಗಳು, ವ್ಯವಹಾರಸ್ಥರು ದೀಪಾವಳಿಯನ್ನು ತುಂಬ ಹರುಷದಿಂದ ಆಚರಿಸಲು ಮುಂದಾಗುವುದು ಸ್ವಾಭಾವಿಕವಾಗಿರುವುದು. ಸ್ವತಂತ್ರ ಭಾರತದಲ್ಲಿ ಈ ದೀಪಾವಳಿ ಆರ್ಥಿಕಸ್ವಾತಂತ್ರ್ಯವನ್ನು ದೊರಕಿಸಿಕೊಡುವ ಸುಪ್ರಸಂಗವಾಗಿ ಪರಿಣಮಿಸಿರುವುದು.

ನಮ್ಮ ನಾಡು ಜನ ಇಂತು ಹರುಷ, ಹುಮ್ಮಸಗಳಿಂದ ನಲಿವಾಗ ಅವರ ಈ ಸಂತೋಷವನ್ನು ಹೆಚ್ಚಿಸಲು 'ಕರ್ಮವೀರ' ಅಂದ ಚೆಂದದ ವರ್ಣಗಳಿಂದ, ನಾನಾ ಬಗೆಯ ಸಾಹಿತ್ಯದ ಸವಿಯೂಟದಿಂದ ಅವರನ್ನು ತಣಿಸಲು ಮುಂದಾಗುವುದೂ ಸ್ವಾಭಾವಿಕವೇ. ನಾಡಿನ ಶ್ರೇಷ್ಠ ಹಾಗು ಉದಯೋನ್ಮುಖ ಸಾಹಿತಿಗಳ ಲೇಖನಿಯಿಂದ ಮೂಡಿಬಂದ ಕತೆ, ಹರಟೆ, ಕವನ, ನಾಟಕ, ಅಲ್ಲದೇ ಒಂದು ಸಂಪೂರ್ಣ ಕಾದಂಬರಿ, ಮತ್ತು ಎಲ್ಲರಿಗೂ ಬೇಕಾದ ವರ್ಷಭವಿಷ್ಯ ಈ ಸಂಚಿಕೆಯ ಮುಖಾಂತರ ಓದುಗರನ್ನು ರಂಜಿಸಲು ಮುಂದಾಗಿವೆ. ಇದೆಲ್ಲದರ ಜೊತೆಗೆ 'ಭಾರತೀಯ ಸಾಹಿತ್ಯಗಳಲ್ಲಿ ನವ್ಯ ಪ್ರವೃತ್ತಿಗಳು' ಈ ವಿಷಯವಾಗಿ (ಗುಜರಾತಿ, ಮರಾಠಿ ಕನ್ನಡ, ಇಂಗ್ಲೀಷ್, ತೆಲುಗು ಭಾಷೆಗಳಲ್ಲಿ) ಒಂದು ವಿಚಾರಸಂಕಿರಣವನ್ನು ಆಯಾ ಭಾಷೆಗಳ ತಜ್ಞರು ಒದಗಿಸಿದ್ದಾರೆ. ನಾವು ತುಳಿದ, ತುಳಿವ ದಾರಿಯನ್ನು ಸಮೀಕ್ಷಿಸಲು ಈ ವಿಚಾರಸಂಕಿರಣ ನೆರವಾಗುವುದೆಂದು ನಾವು ನಂಬಿದ್ದೇವೆ. ಎಳೆಯರಿಗಾಗಿ ಬೋಧಕ ಬಾಲಪ್ರಪಂಚ ಮತ್ತು ಆಕರ್ಷಕವಾಗಿರುವ ಚಿತ್ರಪ್ರಪಂಚವನ್ನು ಈ ಸಂಚಿಕೆ ಒಳಗೊಂಡಿದೆ. ಮೂವರು ಖ್ಯಾತ ಚಿತ್ರಕಲಾವಿದರ ಆತ್ಮಕಥನ ಈ ಸಲದ ವಿಶೇಷ ಆಕರ್ಷಣೆ. ಹೀಗೆ ಸರ್ವರಿಗೂ ಈ ಸಂಚಿಕೆ ಸಂಗ್ರಾಹ್ಯವಾಗುವ ರೀತಿಯಲ್ಲಿ ಶ್ರಮಿಸಿದ್ದೇವೆ.

ಈ ದೀಪಾವಳಿ ಸಂಚಿಕೆ ಸರ್ವಾಂಗಸುಂದರವಾಗುವಂತೆ ನೆರವು ನೀಡಿದ ನಮ್ಮ ಸಹಕಾರಿಗಳಿಗೆ, ಜಾಹೀರಾತು ನೀಡಿ ಅಂದಗೊಳಿಸಿದ ಜಾಹೀರಾತುದಾರರಿಗೆ, ಲೇಖನಾದಿಗಳನ್ನು ನೀಡಿ ಮೆರುಗೊಳಿಸಿದ ಲೇಖಕರಿಗೆ, ಆಕರ್ಷಕ ಮುಖಚಿತ್ರ ಒದಗಿಸಿದ ಖ್ಯಾತ ಕಲಾವಿದ ಶ್ರೀ ವಿ. ವಿ. ಆಲಮೇಲಕರ ಅವರಿಗೆ ನಮ್ಮ ಧನ್ಯವಾದಗಳು.

ಈ ದೀಪಾವಳಿ ಸರ್ವರಿಗೂ ಹರುಷವನ್ನುಂಟುಮಾಡಲಿ.

.... ಅವನ ಸ್ವರ್ಗ, ಅವನ ಮುಕ್ತಿ
ಅವನ ಕೈಯಲ್ಲಿಯೇ ಇದೆ

ಮಾನವನ ಮುಂದಿನ ಮಾರ್ಗ

— ರಂಗನಾಥ ದಿವಾಕರ

ಬಾಹ್ಯಜ್ಞಾನ

ಪ್ರತಿನಿತ್ಯ ನಾವು ದಿನಪತ್ರಿಕೆಗಳನ್ನು ಓದುತ್ತೇವೆ. ಆಗ ನಮ್ಮ ಸುತ್ತಮುತ್ತಲಿನ ಜನ ಏನು ಮಾಡುತ್ತಿರುವರು, ಅವರ ವಿಚಾರ, ಭಾವ-ಭಾವನೆಗಳು, ಆಶೆ ಆಕಾಂಕ್ಷೆಗಳು ಯಾವವು ಎಂಬುದರ ಚಿತ್ರ ನಮ್ಮೆದುರು ನಿಲ್ಲುವದು. ದೇಶ ವಿದೇಶಗಳಲ್ಲಿ ಏನು ನಡೆದಿದೆ, ಮಾನವನು ಈ ಪೃಥ್ವೀತಲದ ಮೇಲೆ ಏನು ಮಾಡುತ್ತಿರುವನು, ಅದೇಕೆ ಚಂದ್ರಲೋಕಕ್ಕೆ ಹೋಗಿ ಅವನು ಏನು ಮಾಡಿದನು ಎಂಬುದು ಸಹ ನಮಗೆ ಗೊತ್ತಾಗುವದು.

ಒಂದೇ ಮಾತಿನಲ್ಲಿ ಹೇಳುವುದಾದರೆ, ವಿಶ್ವದಲ್ಲಿ ಏನು ನಡೆದಿದೆ, ವಿಶ್ವವ್ಯಾಪಾರ-ವ್ಯವಹಾರಗಳು ಹೇಗೆ ನಡೆದಿವೆ, ಅವುಗಳಲ್ಲಿ ಮಾನವ ಯಾವ ಪಾತ್ರವನ್ನು ವಹಿಸುತ್ತಿದ್ದಾನೆ ಎಂಬುದರ ಪ್ರತಿಬಿಂಬ, ಒಂದು ಕೈಗನ್ನಡಿಯಲ್ಲಿ ಮೂಡುವಂತೆ ನಮ್ಮ ಮನಸ್ಸಿನಲ್ಲಿ ಮೂಡುತ್ತಾ ಇರುವದು. ಈ ಜ್ಞಾನವಾಗಲು ಕಣ್ಣು, ಕಿವಿ, ಕೈ, ಮೈ ಇವೇ ನಮ್ಮ ಮುಖ್ಯ ಸಾಧನಗಳು. ಇದು ಬಾಹ್ಯಸೃಷ್ಟಿಯ ಜ್ಞಾನದ ಮಾತಾಯಿತು.

ಅಂತರ್‌ಜ್ಞಾನ

ಇನ್ನು ಮಾನವನಿಗೆ ಇನ್ನೊಂದು ಶಕ್ತಿ ಇದೆ. ಅವನು ತನ್ನ ಮನಸಿನಲ್ಲಿ ಏನು ನಡೆದಿದೆ ಎಂಬುದನ್ನು ಇಣುಕಿ ನೋಡಬಲ್ಲ, ತಿಳಿಯಬಲ್ಲ. ಅವನು ತನ್ನ ಮನೋವ್ಯಾಪಾರಗಳ ಸಾಕ್ಷಿ ಆಗಬಲ್ಲ.

ವಿವೇಕ

ಈ ರೀತಿ ಮಾನವನು ಬಾಹ್ಯಜ್ಞಾನ ಮತ್ತು ಅಂತರ್‌ಜ್ಞಾನ ಇವೆರಡನ್ನೂ ತನ್ನ ಮನಸಿನಲ್ಲಿ ಪಡೆಯಬಲ್ಲ. ಇಷ್ಟೇ ಅಲ್ಲ, ತಾನು ಆ ಎರಡೂ ಜ್ಞಾನಗಳ ಸಾಕ್ಷಿಯಾಗಬಲ್ಲ. ಅವುಗಳ ತಳಕು ಹಾಕಬಲ್ಲ. ಒಂದಕ್ಕೊಂದು ಹೊಂದಿಸಿ, ಹೋಲಿಸಿ ನೋಡಬಲ್ಲ. ಇದಕ್ಕೂ ಮುಂದೆ ಹೋಗಿ, ತನಗೆ ಇಷ್ಟವಾದುದು ಯಾವದೆಂಬುದನ್ನು ಗುರುತಿಸಬಲ್ಲ; ಇಷ್ಟಾನಿಷ್ಟಗಳನ್ನು ಗುರುತಿಸುವುದಲ್ಲದೆ ಒಳಿತು ಯಾವುದು ಕೆಡುಕು ಯಾವುದೆಂಬುದನ್ನೂ ತಿಳಿಯಬಲ್ಲ. ಹೀಗೆ ಇಷ್ಟಾನಿಷ್ಟ, ಒಳಿತು ಕೆಡುಕು ಇವುಗಳನ್ನು ಅರಿತು ಅನಿಷ್ಟವನ್ನು ಬಿಟ್ಟು ಇಷ್ಟವನ್ನೆ ಪಡೆಯುವ, ಅದೇ ರೀತಿ ಕೆಡುಕನ್ನು ಬಿಟ್ಟು ಒಳಿತನ್ನೇ ಆರಿಸುವ ಸಂಕಲ್ಪಶಕ್ತಿ ಕೂಡ ಮಾನವನಲ್ಲಿ ಇದೆ. ಆ ಸಂಕಲ್ಪದಂತೆ ಕಾರ್ಯ ಮಾಡುವ ಕರ್ತೃತ್ವಶಕ್ತಿಯು ಅವನಲ್ಲಿದೆ

ಸ್ಮೃತಿ

ಇದಲ್ಲದೆ ತನಗಾದ ಜ್ಞಾನ, ಅನುಭವಾದಿಗಳನ್ನು ತಲತಲಾಂತರದಿಂದ ಮುಂದಿನ ಪೀಳಿಗೆಗಳಿಗೆ ತಿಳಿಯುವಂತೆ ಮಾಡುವ ಭಾಷೆ ಲೇಖನಾದಿ ಸಾಧನಗಳನ್ನುದರೂ ಮಾನವನು ವಶಪಡಿಸಿಕೊಂಡಿದ್ದಾನೆ. ಆದುದರಿಂದ ವ್ಯಕ್ತಿಗತ ಸ್ಮರಣಶಕ್ತಿ, ಸ್ಮೃತಿಭಾಂಡಾರಗಳಲ್ಲದೆ ಮಾನವಕುಲದ ಅನುಭವಸರ್ವಸ್ವದ ಭಾಂಡಾರವು ಅವನಿಗೆ ವಶವರ್ತಿಯಾಗಿದೆ. ಆದುದರಿಂದ ಈ ಭೂಲೋಕದಲ್ಲಿರುವ ಅನಂತಪ್ರಾಣಿಗಳಿಗಿಂತ ಮಾನವನು ಹಲವಾರು ಹೆಚ್ಚಿನ ಗುಣ ಶಕ್ತಿ—ಕರ್ಮಗಳನ್ನು ಪಡೆದಿರುವನು. ಅವನಿಗೆ ಭೂತಕಾಲದ ಪ್ರಜ್ಞೆ ಇದೆ, ವರ್ತಮಾನಕಾಲದ ಜ್ಞಾನವಿದೆ, ಭವಿಷ್ಯಕಾಲದ ಕಲ್ಪನೆ ಇದೆ.

ಇತಿಹಾಸ

ಒಟ್ಟಿಗೆ ಮಾನವನಿಗೆ ಇತಿಹಾಸವಿದೆ. ಹಿಂದೆ, ಇಂದು, ಮುಂದೆ ಇವುಗಳಲ್ಲಿ ಏಕಸೂತ್ರತೆ ಇದೆ; ಒಂದು ಸರಪಳಿಯ ಕೊಂಡಿಗಳಂತೆ ಅವನ ಭೂತ-ವರ್ತಮಾನ ಭವಿಷ್ಯಗಳು ಒಂದಕ್ಕೊಂದು ಬಿಡುಗಡೆಯಾಗದಂತೆ ತೊಡಗಿಕೊಂಡಿವೆ; ಬಿಡಿಸಲಾರದಂತೆ ಅವು ಏಕಜೀವನವಾಗಿ ಬದ್ಧವಾಗಿವೆ. ಮಾನವಕುಲದ ಜೀವನ ಎಂಬುದೊಂದು ಅವ್ಯಾಹತ ಹರಿಯುತ್ತಿರುವ ಅಖಂಡ ಪ್ರವಾಹ, ಕಾಲದ ಪಾತ್ರದಲ್ಲಿ ಮಾನವ ಜೀವನ ಎಡೆಬಿಡದೆ ಹರಿಯುತಿದೆ.

ಆದುದರಿಂದಲೇ ಮಾನವನ ಭವಿಷ್ಯದ ಬಗ್ಗೆ, ಅವನ ಮುಂದಿನ ಮಾರ್ಗದ ಬಗ್ಗೆ ವಿಚಾರ ಮಾಡಲು ಆಸ್ಪದವಿದೆ.

ಮಾನವ ಮತ್ತು ಜೀವಕೋಟಿ

ಮಾನವನು ಹಲವಾರು ಪ್ರತ್ಯೇಕ ಶಕ್ತಿಗಳನ್ನು ಪಡೆದಿದ್ದರೂ ಅವನು ಜೀವಕೋಟಿಯಿಂದಾಗಲಿ ಜಡ ಸೃಷ್ಟಿಯಿಂದಾಗಲಿ ದೂರ ಸ್ವತಂತ್ರನಿರುವನೆಂದು ತಿಳಿಯುವದು ತಪ್ಪು. ಅವನೊಂದು ಉಚ್ಚಮಟ್ಟದಲ್ಲಿದ್ದಾನೆ ಎನ್ನಬಹುದೇ ಹೊರತು, ಅವನು ಪ್ರತ್ಯೇಕನೂ ಅಲ್ಲ, ಸ್ವತಂತ್ರನೂ ಅಲ್ಲ. ಈ ವಿಶ್ವವ್ಯಾಪಾರಗಳಲ್ಲಿಯೇ ಅವನೊಬ್ಬ ಘಟಕ. ತಾನು ಯಾರು, ತಾನೆಲ್ಲಿರುವೆ, ಇತ್ಯಾದಿ ತಿಳಿಯುವ ಶಕ್ತಿ ಮಾನವನಿಗಿದೆ. ಇದೇ ಅವನ ವಿಶೇಷ. ಅದೇ ಗೊತ್ತಾಗಿಂದಿದ್ದರೆ ಅವನು ತನ್ನ ಇತಿಹಾಸವನ್ನು ಕಂಡುಕೊಳ್ಳುವದು ಹೇಗೆ, ತನ್ನ ಭವಿಷ್ಯವನ್ನು ರೂಪಿಸುವ ಶಕ್ತಿಯನ್ನಾದರೂ ಪಡೆಯುವುದು ಹೇಗೆ?

ಜೀವಕೋಟಿ ನಡೆದುಬಂದ ದಾರಿಯೇ ಮಾನವನ ದಾರಿ. ಆದರೆ ಅವನು ಒಂದು ಹೆಜ್ಜೆ ಮುಂದೆ ಯಾಕೆಂದರೆ ತನ್ನರಿವು ಮಾಡಿಕೊಳ್ಳುವ ಸಾಮರ್ಥ್ಯ ಅವನಲ್ಲಿದೆ. ಅವನಿಗೆ ಒಂದು ದಿವ್ಯ ವರದಂತೆ ಅದು ಪ್ರಾಪ್ತವಾಗಿದೆ. ಆ ವರ, ಆ ಶಕ್ತಿ ಪಡೆದುದರಿಂದ ಅವನ ಹೊಣೆಗಾರಿಕೆಯೂ ಹೆಚ್ಚಾಗಿದೆ; ಬಾಲಕನು ಪ್ರೌಢನಾದ ಬಳಿಕ ಅವನ ಹೊಣೆ ಹೆಚ್ಚಾಗುವಂತೆಯೇ ಈಗ ಮಾನವನ ಹೊಣೆ ಹೆಚ್ಚಾಗಿದೆ. ಜಡ ವಿಶ್ವ ಜೀವಕೋಟಿ ಇವುಗಳೊಡನೆ ಇದ್ದ ತನ್ನ ಅವಿಭಾಜ್ಯ ಸಂಬಂಧವನ್ನು ಚಾಚೂ ಮರೆಯದೆ, ಅವುಗಳ ಹೆಗಲ ಮೇಲೆಯೇ ತಾನು ಸವಾರನಾಗಿ ಸಾಗಿದ್ದಾನೆ ಎಂಬುದನ್ನು ಪ್ರತಿಕ್ಷಣವೂ ಲಕ್ಷ್ಯದಲ್ಲಿಟ್ಟು ಮಾನವನು ನಡೆಯುವದು ಅವಶ್ಯ.

ಉನ್ನತಿಯ ಪ್ರಜ್ಞೆ

ಜಡವೆನಿಸುವ ಪಂಚಭೂತಗಳನ್ನು ಬಿಟ್ಟರೆ ಮಾನವನ ಶರೀರವು ಶೂನ್ಯವತ್ ಆಗುವದು. ಜೀವಕೋಟಿಗಿರುವ ಪಂಚೇಂದ್ರಿಯಗಳನ್ನು ಬೇರ್ಪಡಿಸಿದರೆ ಮಾನವನಿಗೆ ಜ್ಞಾನಸಾಧನೆಗಳೇ ಇಲ್ಲದಂತಾಗುವವು. ಆ ದೃಷ್ಟಿಯಿಂದ ನೋಡಿದರೆ ಮಾನವನು ಜಡನೂ ಅಹುದು, ಒಂದು ಸಾಮಾನ್ಯ ಪ್ರಾಣಿಯೂ ಅಹುದು. ಆದರೆ ಈ ಸ್ಥಿತಿಯಿಂದ ತಾನು ಮುಂದರಿದು ಹೋಗುವ ಪ್ರಜ್ಞೆ, ಶಕ್ತಿಯನ್ನು ಮಾನವನು ಪಡೆದುದರಿಂದ ಅವನು ಮಾನವನೆನಿಸುವನು.

ಮುಂದಿನ ಹೆಜ್ಜೆ

ತಾನು ಜಡ—ಚೈತನ್ಯಗಳ ಸಮೂಹನಾಗಿದ್ದರೂ ಇದಕ್ಕಿಂತ ಮುಂದೆ ಹೋಗಬಲ್ಲೆ, ಸಾಗಬಲ್ಲೆ ಎಂಬ ಜ್ಞಾನ, ಅದರಿಂದುಂಟಾಗುವ ಆತ್ಮವಿಶ್ವಾಸ ಇವೇ ಮಾನವನ ಮುಖ್ಯ ಲಕ್ಷಣ. ನಾಯಿ, ಕುದುರೆ, ಮಂಗ ಇತ್ಯಾದಿ ಪ್ರಾಣಿಗಳ ಇತರ ಲಕ್ಷಣಗಳೆಲ್ಲವೂ ಮಾನವನಿಗೆ ಇವೆ. ಆದರೆ ಅವುಗಳಲ್ಲಿಲ್ಲದ ಪ್ರಜ್ಞೆ, ತನ್ನರಿವು, ತಾನು ತನ್ನ ಉದ್ಧಾರವನ್ನು ಏಳಿಗೆಯನ್ನು ಮಾಡಿಕೊಳ್ಳಬಲ್ಲೆ ಎಂಬ ಉತ್ಸಾಹ ಮಾನವನಲ್ಲಿದೆ.

ಇತರ ಪ್ರಾಣಿಗಳಂತೆ ಸುಖದುಃಖ, ಶೀತೋಷ್ಣ, ಆಹಾರ ನಿದ್ರಾದಿ ಆವಶ್ಯಕತೆಗಳು ಮನುಷ್ಯನನ್ನೂ ಆವರಿಸಿಕೊಂಡಿವೆ. ಆದರೆ ನಾನು ಈಗ ಇವುಗಳ ಗುಲಾಮನಿದ್ದರೂ ಒಂದು ದಿನ ಸ್ವಾಮಿಯಾಗಬಲ್ಲೆ ಎಂಬರಿವು ಅವನಿಗಿದೆ. ಆ ಪ್ರಯತ್ನವನ್ನು ಅವನು ಮಾಡಬಲ್ಲ. ಆ ಸ್ಫೂರ್ತಿ, ಆ ಚೈತನ್ಯ ಅವನಲ್ಲಿದೆ.


ಆ ಚೈತನ್ಯವನ್ನು ಚೇತರಿಸುವುದೇ ಮಾನವನ ಪ್ರಗತಿಯ ಮೊದಲ ಹೆಜ್ಜೆಯಾಗಬೇಕು.

ನಾನು ಚಿತ್ತಪ್ರಧಾನ ಜೀವಿ

ದೇಹ-ಪ್ರಾಣ-ಮನ ಈ ಮೂರೂ ಕೂಡಿ ಒಟ್ಟು ಮಾನವ ಎನಿಸುವನು, ಮಾನವನು ತನ್ನ ಉತ್ಕ್ರಾಂತಿಯನ್ನು, ತನ್ನ ಉನ್ನತಿಯನ್ನು, ತನ್ನ ಉದ್ಧಾರವನ್ನು ತಾನೇ ಮಾಡಿಕೊಳ್ಳಲು ಎಷ್ಟೋ ಮಟ್ಟಿಗೆ ಶಕ್ತನಿರುವುದರಿಂದ, ಅವನು ತಾನು ಬರೀ ದೇಹವಲ್ಲ, ಬರೀ ಪ್ರಾಣವಲ್ಲ. ತಾನು ಚಿತ್ತಪ್ರಧಾನ ವ್ಯಕ್ತಿವಿಶೇಷ, ಎಂಬುದನ್ನೂ ಅನುಭವಿಸುವದು ಅವಶ್ಯ. ಇದೊಂದು ಬರಿ ಕಲ್ಪನೆಯಾಗಿ ಉಳಿಯಕೂಡದು, ಒಂದು ವಿಚಾರವೆನಿಸಿ ಮಾಯವಾಗಬಾರದು. ಅದೊಂದು ಅನುಭವಬದ್ಧಮೂಲವಾದ ಒಂದು ಮನವರಿಕೆಯಾಗಬೇಕು. ಈ ಅನುಭವದ ಮೂಲಕವೇ ಮಾನವನು ದೇಹೇಂದ್ರಿಯ ಪ್ರಾಣಾದಿಗಳ ಗುಲಾಮಗಿರಿಯನ್ನು ನೀಗಿ ಸ್ವತಂತ್ರನಾಗಿ ಸ್ವಾಮಿಯಾಗಬಲ್ಲನು. ಆ ಅನುಭವದ ಮೂಲಕವೇ ಮಾನವನು ದೇಹೇಂದ್ರಿಯಗಳನ್ನೆಲ್ಲ ತನ್ನ ಸ್ವಾತಂತ್ರ್ಯದ ಸಾಧನಗಳನ್ನಾಗಿ ಉಪಯೋಗಿಸಬಲ್ಲ.

ಮಾನವನ ಉನ್ನತಿ

ಈ ಹೊತ್ತು ಮಾನವನ ಸ್ಥಿತಿ ಬಹಳೇ ದಯನೀಯವಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅವನು ತನ್ನ ಸ್ವಾರ್ಥ, ರಾಗದ್ವೇಷ ಕ್ರೋಧ-ಮೋಹ, ಕಾಮ-ದಾಹ ಇವುಗಳಿಗೆ ಗುಲಾಮನಾದುದರಿಂದ ಅವನು ಬಾಹ್ಯಸೃಷ್ಟಿಯ ಮೇಲೆ ಎಷ್ಟೇ ಪ್ರಭುತ್ವವನ್ನು ಪಡೆದಿದ್ದರೂ ಮಾನವಕುಲ ಈ ಹೊತ್ತು ಅಶಾಂತಿ, ಭಯ, ಅಂಧಕಾರ, ಶೋಷಣ ಇವುಗಳಿಂದ ಕ್ಷೀಣಗೊಳ್ಳುತ್ತಿದೆ. ತನ್ನವೇ ಶಕ್ತಿಗಳು ಎನಿಸಿದ ರಾಗದ್ವೇಷಾದಿಗಳ ಮೇಲೆ ಪ್ರಭುತ್ವವನ್ನು ದೊರಕಿಸಿದ ಹೊರತು ಮಾನವಕುಲವು ಸುಖಿಯಾಗಲಾರದು, ದುಃಖಮುಕ್ತವಾಗಲಾರದು, ಶಾಂತಿಯನ್ನು ಪಡೆಯಲಾರದು; ಮಾನವನು ಬೇಡುವದು ಶಾಂತಿ, ಸಮಾಧಾನ, ನೆಮ್ಮದಿ, ತೃಪ್ತಿ; ಪರಸ್ಪರ ಸೌಹಾರ್ದ, ಪ್ರೇಮ, ಸರಸ ಸಮ್ಮೇಲ, ಸುಖ. ಪರಿಣತ ಆನಂದದ ಸಾಮ್ರಾಜ್ಯ. ಆದರೆ ಇವೆಲ್ಲ ಬರೀ ಇಚ್ಛಿಸಿದರೆ ಪ್ರಾಪ್ತವಾಗುವ ಮಾತುಗಳಲ್ಲ. ದೇವರು ದಯಪಾಲಿಸುವ ವಸ್ತುಗಳಲ್ಲ. ಮಾನವನು ಈಗ ಪ್ರಬುದ್ಧನು. ತನ್ನನ್ನು ತಾನು ಅರಿಯುವ ಶಕ್ತಿಯುಳ್ಳವನು. ವಿಶ್ವದೊಡನೆ, ವಿಶ್ವಶಕ್ತಿಗಳೊಡನೆ ತನ್ಮಯನಾಗಬಲ್ಲ ಶಕ್ತಿಯುಳ್ಳವನು ಮಾನವನು. ಅವನೇಕೆ ಹೀಗೆ ಬಳಲಬೇಕು, ದುಃಖ ಪಡಬೇಕು? ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಎಂಬುದನ್ನರಿತು ಆಚರಿಸಿದರೆ ಅವನ ಸ್ವರ್ಗ, ಅವನ ಮುಕ್ತಿ ಅವನ ಕೈಯ್ಯಲ್ಲಿಯೇ ಇದೆ.



ಬಲೂನ್ ದೀಪಾವಳಿ



ರಾಕೆಟ್ಟ ನೊಳಗೊಂದು ರಾಕೆಟ್!...

ಇದೋ ನಮ್ಮ ದೀಪಾವಳಿ
ವೈವಿಧ್ಯ



‘ದೀಪಧರೆ’



ಇದು ಭಟ್ಟರ ದೀಪಾವಳಿ!!



ತಿಂಮ ಗುರುಪಾದಪ್ಪನನ್ನು ಕಂಡಾಗ

— ಬೀchi

ಅಲ್ಲಿ ನಿಂತಿದ್ದ ಗಂಡು, ಹೆಂಣು, ಚಿಕ್ಕ ಪುಟ್ಟ ಮಕ್ಕಳು ಎಲ್ಲರೂ ಇದ್ದಕ್ಕಿದ್ದಂತೆ ಬಿದ್ದು ಬಿದ್ದು ನಗಲಾರಂಭಿಸಿಬಿಟ್ಟರು. ಅದವರ ತಪ್ಪೇ? ಆ ದೃಶ್ಯ ಹಾಗಿತ್ತು

ಸಂಜೆ ಸಮಯ, ರವೀಂದ್ರ ಕಲಾಕ್ಷೇತ್ರದ ಮುಂದು. ನೂರಾರು ಜನ. ಒಳಕ್ಕೆ ಹೋಗಬೇಕು. ಕಾರ್ಯಕ್ರಮ ಇನ್ನೂ ಆರಂಭವಾಗಿಲ್ಲ. ಏಕೆ? ಮಾಮೂಲು ಕಾರಣ ಯಥಾಪ್ರಕಾರ ನಮ್ಮ ಕಡ ಸಚಿವರು ಇನ್ನೂ ಆಗಮಿಸಲಿಲ್ಲ. ಅದಕ್ಕಾಗಿ ಸಭಿಕರೆಲ್ಲ ಹೊರಗಡೆ ಅಲ್ಲಬ್ಬರು, ಇಲ್ಲಿ ಮೂವರು ಒಂದು ಹೆಂಣು ಎರಡು ಗಂಡು. ಬರೀ ಮೂರು ಹೆಂಣು ಒಂದು ಚಿಕ್ಕ ಹುಡುಗ ಹೀಗೆ ಗುಂಪು ಗುಂಪಾಗಿ ನಿಂತು ಹರಟುತ್ತಿದ್ದಾರೆ. ಪಿಸಿ ಪಿಸಿ ಗುಜು ಗುಜು ಸಾಗಿದೆ

ಅಪೂರ್ವ ದೃಶ್ಯ- ಗುರುಪಾದಪ್ಪ ತಿಂಮನ ಆಲಿಂಗನ! ಪಬ್ಲಿಕ್ ಪ್ರದರ್ಶನ! ನಕ್ಕುದುದು ಅವರ ತಪ್ಪೆ?

ಗುರುಪಾದಪ್ಪನ ತೆಕ್ಕೆಯಿಂದ ಕೊಸರಿಕೊಳ್ಳಲು ತಿಂಮನ ವ್ಯರ್ಥ ಪ್ರಯತ್ನ. ಗುರುಪಾದಪ್ಪನದು ಒಂಟಿಯ ಹಿಡಿತ



"ಮಂದಿ ನಗತಾರಲ್ಲೊ ಗುರುಪಾದೂ!"

"ನಗಲಿ ಬಾರೋ. ನಕ್ರೆ ಅವರ ಹಲ್ಲೇ ಕಾಣಸ್ತಾವ"

"ಹಲ್ಲಿಲ್ಲದವರೂ ನಕ್ತಾರೋ"

ಗುರುಪಾದಪ್ಪ ದೊಡ್ಡದಾಗಿ ನಕ್ಕ. ಆಲಿಂಗನವನ್ನು ಮೆಲ್ಲನೆ ಸಡಿಲಿಸಿ ನುಡಿದ.

"ಮಂದಿನ್ನ ನಗಸಲಿಕ್ಕೇ ಹುಟ್ಟೇದೆಪಾ ನೀನು ಕರ್ನಾಟಕದ ತುಂಬ- ಇರ್ಲಿ, ನಗಲಿ ಬಿಡು ಆ ಮಕ್ಕ್ಳು."

ಎರಡು ದಶಕಗಳು ಅಗಲಿ ಅಕಸ್ಮಾತ್ ಪುನರ್ಮಿಲನವಾದಾಗ ಪ್ರಣಯಿಗಳೂ ಇಂತಹ ಮಹದಾನಂದವನ್ನು ಅನುಭವಿಸಲಾರರು. ಅಷ್ಟು ಎದೆ ತುಂಬಿ ಬಂಧ ಹರ್ಷ. ಯಾರಿಗೆ- ಗುರುಪಾದಪ್ಪನಿಗೋ, ತಿಂಮನಿಗೊ? ಇಬ್ಬರಿಗೂ!

ಉಭಯಕುಶಲೋಪರಿ ಆಗಬೇಡವೆ? ತಿಂಮ ಆರಂಭಿಸಿದ.

"ಅಂದಾಂಗ ನಿನ್ನ ದೆವ್ವ ಹ್ಯಾಗದೋ ಗುರುಪಾದೂ!"

ಆಗ ನೋಡಬೇಕಿತ್ತು ಗುರುಪಾದಪ್ಪನ ಮುಖಾರವಿಂದವನ್ನು. ಮೊದಲೇ ವಿಶಾಲವಾದ ಮುಖ. ಇನ್ನಷ್ಟು ಗಲವಾಯಿತು ಹಿರಿಹಿರಿ ಹಿಗ್ಗಿ. ಚಿಕ್ಕ ಮಗುವಿನ ಹೃದಯ ಗುರುಪಾದಪ್ಪನದು, ಬಾಯಿ ಇನ್ನೂ ಚಿಕ್ಕ ಮಗುವಿನದು- ಹಲ್ಲು ಒಂದೂ ಇಲ್ಲ. ಆ ಬೊಚ್ಚು ಬಾಯಿ ಅದೆಷ್ಟು ಸಮಯ ತೆರೆದೇ ಇತ್ತೊ?

"ಇನ್ನೂ ನೆನಪಿಟ್ಟೀಯಲ್ಲೋ ಸೂ...... ಮಗನೇ!"

ಗುರುಪಾದಪ್ಪನ ಭಾಷೆ ಮಾತ್ರ ಬಹಳ 'ನೇಟು'-ಆ ಶಿಕ್ಷೆ ಅನುಭವಿಸಿದವರಿಗಷ್ಟೆ ಗೊತ್ತು.

ಕಟೆದು ಕೆತ್ತಿದ ವಿಗ್ರಹವಲ್ಲ ನಮ್ಮ ಗುರುಪಾದಪ್ಪ, ಉಳಿ ಮುಟ್ಟಲಿಲ್ಲ ಪಾಪ! ಕಲ್ಲು ಗುಡ್ಡದ ಮೇಲೆ ಒಡಮೂಡಿದ ಕಾಡು ಹನುಮಪ್ಪ ಅಲ್ಲವೇ? ಕೃತ್ರಿಮತೆ, ಅಂದ, ಚೆಂದ, ಪೌಡರು,



ಪಾಲೀಷು ಎಲ್ಲಿಂದ ಬರಬೇಕು, ಆತನ ಮಾತಿನಲ್ಲಿ? ಬರೆಯಲು ಬಾರದ ಭಾಷೆಯನ್ನು ಬಳಸಿದ ಹೊರತು ಆ ಪ್ರಾಣಿಗೆ ಹೃದಯ ತುಂಬದು. ಪ್ರೀತಿ ಉಕ್ಕೇರಿ ಬಂದಾಗ ತನ್ನ ಮಗನನ್ನೇ ಸೂ...ಮಗನೆ ಅನ್ನುವವರಿಲ್ಲವೆ?

ಈ ಗುರುಪಾದಪ್ಪನನ್ನು ತಿಂಮ ತಪ್ಪು ತಿಳಿಯುತ್ತಾನೆಯೇ? ಮಾತು ಬರೀ ಮಾತು, ಆದರೆ ಹಿಂದಿನ ಧ್ವನಿ? ಆ ಹೃದಯ, ಆ ಅಂತಃಕರಣ ಸಿಹಿ ಮಾತುಗಾರರಲ್ಲಿ ಇರಲು ಸಾಧ್ಯವೇ?

ಎಷ್ಟು ವರ್ಷದ ಹಳೆಯ ಗೆಳೆತನ? ತುಂಬಾ ಪುರಾತನ ಮಿತ್ರರಲ್ಲವೆ ಅವರು! ಎರಡು ದಶಕಗಳು ಹಿಂದಕ್ಕೆ ಓಡಬೇಕು ತಿಂಮನ ತಲೆ. ಅಂದಿನದೊಂದು ಘಟನೆ ನೆನಪಾಗಿದೆ ಅವನಿಗೆ. ಆಗಿನ್ನೂ ಈ ಗುರುಪಾದಪ್ಪ ಸಮಾಜದ ಕಣ್ಣಿಂದು ಬಂದು ಗುರುಪಾದಪ್ಪನಾಗಿ ನಿಂತಿರಲಿಲ್ಲ. ಪ್ರಾಯಶಃ ತನ್ನ ಪಿತೃವಿನ ಮಾನಸಿ ಗಜಗರ್ಭದಲ್ಲಿ ಮಲಗಿರಬೇಕು. ಅಜ್ಞಾತವಾಸದಲ್ಲಿದ್ದ ಆ ಗುರುಪಾದಪ್ಪನನ್ನು ಅನುಕೂ

ಲಕ್ಷ್ಯಗಿ ಹಚ್ಚೆ ಗಪ್ಪ ಹಿಂದು ಕರೆಯೋಣ ಇಲ್ಲ.

ಗಪ್ಪನಿಗೆ ಕತೆ ಬರೆಯುವ ಗೀಳು ಇಂದು ನಿನ್ನೆಯದಲ್ಲ. ಆಗಲೇ ಇತ್ತು ಈ ರೋಗ. ಕಥೆ ಎಂದರೆ ಹುಡುಗ ಹುಡುಗಿಯರ ನಲ್ಮೆಯ ಚುಂಬನದ ಕಥೆಯೇ? ಥೂ! ಅಂತಹ ರಸಿಕತೆಯನ್ನೆಲ್ಲ ಗಪ್ಪ ತನ್ನ ಬೃಹತ್ ನಾಶೀಪುಡಿ ಡಬ್ಬಿಯಿಂದಲೂ ಮುಟ್ಟುವವನಲ್ಲ. ಜೀವನದಲ್ಲಿಯೇ ಕಾಣದದು ಸಾಹಿತ್ಯದಲ್ಲಿ ಹೇಗೆ ಬಂದೀತು ಹಾಳು!

ಹಾಗಾದರೆ ಮಕ್ಕಳು, ಮರಿ ಆಕೆಲ್ಲವೇ ಗಪ್ಪನಿಗೆ? ಇದು ಅರೆದಡ್ಡರು ಕೇಳಬೇಕಾದ ಪ್ರಶ್ನೆ. ಅದೊಂದು ದೈಹಿಕ ಕ್ರಿಯೆ, ಪ್ರತಿಕ್ರಿಯೆ. ಪ್ರಕೃತಿಯ ಜವಾಬ್ದಾರಿ ಅದು. ಇದಕ್ಕೆ ರಸಿಕತೆಯೇ ಬೇಕೇನು?

ಆಗ ಗುರುಪಾದಪ್ಪನ ಸಾಹಿತ್ಯದ ಸಂಪೂರ್ಣ ಸಾಮಗ್ರಿ ದೆವ್ವ! ದೆವ್ವದ ಕತೆಗಳನ್ನು ಬರೆವುದೆಂದರೆ ಕಡುಬು ತಿಂದ ಸಂತೋಷ. ಗಪ್ಪ ದೆವ್ವಕ್ಕೆ ಅಂಜುವುದಿಲ್ಲ. ದೆವ್ವವೂ ಗಪ್ಪನಿಗೆ ಅಂಜದು. ಅಂಜಿಕೆ ಏಕೆ? ಅವರಿಬ್ಬರೂ ಸ್ತ್ರೀ ಜಾತಿ ವೈರಿಗಳಲ್ಲವಲ್ಲಾ?

ದೆವ್ವದಿಂದ ಒಂದು ದೊಡ್ಡ ಉಪಕಾರವಾಗಿತ್ತು ಗಪ್ಪನಿಗೆ. ಆತ ಬರೆದಿದ್ದ ಒಂದು ದೆವ್ವದ ಕತೆಗೆ ಬಹುಮಾನ ದೊರೆಯಿತು

ಇದು ನೆನಪಾಗಿಯೋ ನಿನ್ನ ದೆವ್ವ ಹೇಗಿದೆ ಎಂದು ತಿಂಮ ಗುರುಪಾದಪ್ಪನನ್ನು ಕೇಳಿದುದು.

ಗಪ್ಪನಿಗೆ ಇನ್ನೊಂದು ಗೀಳೂ ಇತ್ತು, ಆಗ. ಈಗ ಇದೆಯೋ, ಇಲ್ಲವೋ ತಿಂಮ ಅರಿಯ. ತಾನು ಬರೆದುದನ್ನು ತನ್ನ ಮೆಚ್ಚುಗೆಯ ಮಿತ್ರರಿಗೆ ತಾನೇ ಓದಿ ಕೇಳಿಸಬೇಕು. ಅವರಿಂದ ಸೈ ಅನಿಸಿಕೊಳ್ಳದಿದ್ದರೆ ಆತನಿಗೆ ಕಾಗೆಪಿಂಡ ಇಲ್ಲ.

ರಾತ್ರಿ ಘಂಟೆ ಹನ್ನೆರಡು. ನಿದ್ರೆ ಕಣ್ತುಂಬಿ ಬರುತ್ತಿದೆ

"ಏಳು ಮಾರಾಯಾ! ನಾನು ನನ್ನ ಕಥೀ ಓತ್ತೀನಿ ಕೇಳು."

ತಿವಿದು ತಿವಿದು ಎಬ್ಬಿಸುತ್ತಾನೆ ಈ ಗಪ್ಪ.

"ನಾಳೆ ಓದುವೆಂತಿ ಬಿಡೋ; ನಿದ್ದಿ ಬಕದ ನನಗೆ"

ತಪ್ಪಿಸಿಕೊಳ್ಳಲು ಪ್ರಯತ್ನ ತಿಂಮನದು. ಗಪ್ಪ ಬಿಡುತ್ತಾನೆಯೆ?

"ಚಹಾ ಕೊಡಿಸ್ತೀನು ಬಾರಪಾ. ಚಹಾ ಕುಡಿಂದ ಮ್ಯಾಲಾದರೂ ಕೇಳ್ತೀಯಲ್ಲಾ?"

ಅಲ್ಲಿದ್ದ ಮಿತ್ರರಿಗೆ ನಗೆ. ಗಪ್ಪನ ಖರ್ಚಿನಲ್ಲಿ ಚಹಾ ಗಿಟ್ಟಿಸುವ ಸಂಚು ಅವರದು.

"ಏ! ಗಪ್ಪನ ಚಹಾ ಕುಡದು ಬಂದು ಕೂಡೋಣ ನಡ್ರಿ."

ಒಬ್ಬ ಶಕುನಿ ಸೂಚಿಸಿದ. ಗಪ್ಪನ ಸ್ವಾಭಿಮಾನ ಉಕ್ಕಿ ಬಂತು.

"ನಾನು ಅಂಜಕೀನಿ ಅಂತ ತಿಳಿದೀರೇನ್ರೊ? ಬರ್ರಿ, ಎಲ್ಲಾ ನನ್ನ ಮಕ್ಳು ಬರ್ರಿ. ಅದೆಷ್ಟು ಚಾ ಕುಡೀತೀರೊ ಕುಡಿಬರ್ರಿ."

ಧಿಡೀರನೆ ಎದ್ದರು ಎಲ್ಲರೂ. ತಿಂಮನೂ ಎದ್ದು ಹೊರಟ ಅವರೊಂದಿಗೆ.

ಹೊಟೇಲ ಕಟ್ಟೆ ಹತ್ತುವಾಗ ಗಪ್ಪ ಸ್ಪಷ್ಟವಾಗಿ ಹೇಳಿಬಿಟ್ಟ,

"ಈಗ ಚಾ ಕುಡಿಯೋ ಎಲ್ಲಾ ನನ್ನ ಮಕ್ಳು ನನ್ನ ಕಥಿ ಕೇಳ್ಲೇಬೇಕು ಆ ಮ್ಯಾಲೆ ಚಕ್ರಾ ಕೊಟ್ರ ನಾ ಬಿಡೋಂವಲ್ಲ"

ಹೀಗೆಲ್ಲ ಚಹಾ ಕುಡಿಸಿ ತನ್ನ ದೆವ್ವದ ಕತೆ ಓದಿದ್ದ ತಿಂಮನ ಮುಂದು

ಇಂತಹ ದೂರದ ಸುಮಿತ್ರ ಬೆಂಗಳೂರಲ್ಲಿ ಕೈಗೆ ಸಿಕ್ಕಾಗ ತಿಮ್ಮ ಬಿಡುತ್ತಾನೆಯೆ?

"ನಾಳೆ ನಿಮ್ಮನಿಗೆ ಊಟಕ್ಕೆ ಬಾ ಗುರುಪಾದಪ್ಪಾ"

ತಿಂಮನ ಪ್ರೀತಿಯ ಔತಣ- ಗುರುಪಾದಪ್ಪ ಒಲ್ಲೆ ಅಂದಾನೆಯೇ?

"ನಾಳೆ ಊರಿಗೆ ಹೋಗಬೇಕಿತ್ತಲ್ಲೋ! ಆತುಬಿಡು ನಾಡದ್ದು ಹೋದರಾತು." ಎಂದೆಂದು ಹಿಂದೆಯೇ "ನಿನ್ನನಿ ರಿಯಾ ಸೂ.... ಈಗ ನೋಡ್ಯಾನೋ? ನಾ ಬರೋದು ಹ್ಯಾಂಗ?" ಎಂದು ಜೋಡಿಸಿದ.

ಆ ಕೂಡಲೆ ಅದರ ಏರ್ಪಾಟು ಆಯಿತು.



ಜೊತೆ ಇದ್ದ ಕಿರಿಯ ಮಿತ್ರರು ಆ ಹೊಣೆ ಹೊತ್ತುಕೊಂಡರು.

ಕೃಷ್ಣ, ಸುದಾಮರ ಮಿಲನ ಅಲ್ಲವೇ? ಆದರೆ ಗುರುಪಾದಪ್ಪ ಮತ್ತು ತಿಂಮ ಇವರಲ್ಲಿ ಕೃಷ್ಣ ಯಾರು, ಯಾರು ಸುದಾಮ. ಇದಕ್ಕುತ್ತರ ಅವರಿಬ್ಬರಿಗೇ ಗೊತ್ತು—ಇಬ್ಬರೂ ಕೃಷ್ಣ, ಇಬ್ಬರೂ ಸುದಾಮ?

ತಿಂಮನ ಓದುಕೋಣೆಯಲ್ಲಿ ಕಾಲಿಟ್ಟ ಗುರುಪಾದಪ್ಪ, ಆವಾಕ್ಕಾದ.

"ಇದೇನೋ ಮಾರಾಯಾ! ಒಳ್ಳೆ ಸಾಹಿತಿ ಇಟ್ಟಾಗೆ ಎಷ್ಟು ಬುಕ್ಕುಗಳು ಇಟ್ಟೀಯಲ್ಲೋ!"

ಈ ಉದ್ಗಾರದಿಂದ ತಿಂಮನಿಗೆ ಪರಮಾಶ್ಚರ್ಯ!

"ಯಾಕೆ, ನೀನು ಪುಸ್ತಕಗಳ್ನ ಇಟ್ಟಿಲ್ಲೇನು!"

"ಛೂ! ಕೇಳಬ್ಯಾಡ-ಹಂಗೆ ಓದೂ ಚಟಾನೇ ಇಲ್ಲಪಾ"

"ಇಂಗ್ಲೀಷು?"

"ಛಿ ಛಿ! ಯಾವುದೂ ಓದೂ ಪಾಪಕ್ಕೇ ಹೋಗಿಲ್ಲ ನಾನು"

ಈಗ ಅರ್ಥವಾಯಿತು, ಗುರುಪಾದಪ್ಪ ಬರೆದುದು ಏಕೆ ಅಷ್ಟು ಹಸೀ ಇರುತ್ತದೆ ಎಂಬುದು. ಯಾರೆಂಜಲೂ ಇಲ್ಲ, ನೆಲ್ಮೆಲಿಗೆ ಆಗದೆ ನೇರವಾಗಿ ಬಂದ ಜೀವನದ ಎಂಜಲು. ಬಾಳೆ-ನೆಂಜಲು

ಗುರುಪಾದಪ್ಪ ಹೆಮ್ಮೆಯಿಂದ ಹೇಳಿಕೊಂಡ:

"ನಂದೆಲ್ಲಾನೂ ಒರಿಜಿನಲ್ಲೋ! ನಾನೂ ಒರಿಜಿನಲ್ಲು"

"ನೀನು ಒರಿಜಿನಲ್ಲಲ್ಲ—ಅಬೋರಿಜಿನಲ್ಲು"

ಗಹಗಹಿಸಿ ನಕ್ಕರು ಇಬ್ಬರೂ. ಸ್ನೇಹದ ಸಲುಗೆಯಲ್ಲಿ ಸಹಜವಾಗಿ ಬರುವ ನಗೆಮಾತುಗಳಿಗೆ ಕೋಪಿಸಿಕೊಳ್ಳುವ ದಡ್ಡನೇ ಗುರುಪಾದಪ್ಪ? ಬಹು ಸೂಕ್ಷ್ಮಮತಿ ಅತ-ಹೊರನೋಟಕ್ಕೆ ಹಾಗೆ ಕಾಣದಿದ್ದರೂ.

ಆ, ಈ ಮಾತನಾಡುವಾಗ ಗುರುಪಾದಪ್ಪನ ಬೃಹತ್ ಗ್ರಂಥವಾದ 'ಗ್ರಾಮಾಯಣ'ದ ಮಾತು ಬಂತು. ಅದು ಉತ್ತಮ ಮಟ್ಟದ ಕೃತಿ ಎಂದು ತಿಂಮ ಕೆಲ ಹಿರಿಯರ ಬಾಯಿಂದ ಕೇಳಿದ್ದೂ ಉಂಟು.

"ನನ್ನ ಗ್ರಾಮಾಯಣದಾಗ ಒಂದು ಹೆಂಣೂ ಇಲ್ಲ ನೋಡೋ"

"ಅದನ್ನ ನೀ ಹೇಳಬೇಕಿಲ್ಲ. ನಿನ್ನ ನೋಡಿದರೇ ಗೊತ್ತಾಗ್ತದೆ."

ಗುರುಪಾದಪ್ಪನ ಸಾಹಿತ್ಯವಂಟಪದ ಮೇಲಿಂದು 'ಸ್ತ್ರೀಯರಿಗೆ ಪ್ರವೇಶವಿಲ್ಲ' ಎಂಬ ಬೋರ್ಡ್ ಸದಾ ನೇತಾಡುತ್ತಿದೆ.

"ಒಂದಿಷ್ಟು ಚಹಾ ಕುಡಿತೀದೇನು ಗುರುಪಾದೂ?"

"ಯಾಕೋ ಮಾರಾಯ್ಯ, ನನ್ನ ಊಟ ಕೆಡಸಬೇಕೂ ಅಂತ ಮಾಡೀದೇನು?"

ತಿಂಮ ತಣ್ಣಗಾದ

ಊಟ ಮುಗಿಸಿ ಹರಟೆಗೆ ಕುಳಿತಾಗ ಏನೆಲ್ಲ ಮಾತು. ಆದರೆ ಇನ್ನೊಬ್ಬರ ಬಗ್ಗೆ ಟೀಕೆ. ಕೊಂಕು ಮಾತು ದೂಷಣೆ ಎಂಬುದಿಲ್ಲ. ಹೈಬ್ರಿಡ್ ಜೋಳದ ಮಾತೇ ಹೆಚ್ಚು ಹೊತ್ತು.



ಗುರುಪಾದಪ್ಪ ಹೈಬ್ರಿಡ್ ಜೋಳ ಬೆಳೆಯುತ್ತಾನೆ; ತಿಂಮ ಹೈಬ್ರಿಡ್ ಸಾಹಿತ್ಯ ಬೆಳೆಯುತ್ತಾನೆ

"ನಾನು ಕರೆದಷ್ಟಕ್ಕೆ ನೀನು ಬಂದಿ. ಸಂತೋಷಾತು ಗುರುಪಾದಪ್ಪ!"

"ಯಾರುಪಕಾರಕ್ಕೆ ಬರ್ತೀನೋ ನೀನು ಅಂದ್ರೆ ಏನು ತಿಳಿದಿ?"

ಒಂದು ಮಾತು ಇಬ್ಬರ ಹೃದಯವನ್ನೂ ಸ್ಪರ್ಶಿಸಿತು. ತಿಂಮನಿಂದ ಗುರುಪಾದಪ್ಪನಿಗೆ, ಗುರುಪಾದಪ್ಪನಿಂದ ತಿಂಮನಿಗೆ ಆಗಬೇಕಾದುದು ಏನಿದೆ? ಯಾವ ಲಾಭದ ಆಸೆ ಯಾರಿಗಿದೆ? ಇಬ್ಬರೂ ಸೇರಿ ಒಂದರ್ಧ ಗಂಟೆ ಒಟ್ಟಿಗಿದ್ದುದೇ ಲಾಭ; ಇಬ್ಬರಿಗೂ ಲಾಭ!

"ನಮ್ಮೂರ ಕಡಿ ಬಾರೋ ತಿಂಮಾ! ನಿನ್ನ ನೋಡ್ಲಿಕ್ಕೆ ಹಸದಾರೆ ಆ ಜನ" ಔತಣವಿತ್ತು ಹೊರಬಿದ್ದಿತು ಹಳ್ಳಿಯ ಹುಲಿ.

ನಮ್ಮ ಕನ್ನಡ ನೇಟಿ ಗುರುಪಾದಪ್ಪ ಒಂದು ಬದನೂರು ವರ್ಷ ಬಾಳಲಿ. ಪುಸ್ತಕ ಬರೆಯಲಿ, ಬಿಡಲಿ ಎಂದು ತನ್ನಲ್ಲಿ ಅಂದುಕೊಳ್ಳುತ್ತ ಅಣ್ಣನನ್ನು ಬೀಳ್ಕೊಟ್ಟ ತಿಂಮ.

ಬದುಕಿದ್ದರೆ ಮತ್ತೆ ಭೇಟಿ-ಇಲ್ಲದಿದ್ದರೆ ಅಲ್ಲೇ!

***

ದೀಪಾವಳಿಯು ಸರ್ವರಿಗೂ ಶುಭದಾಯಕವಾಗಲಿ!

ದೇಸಾಯಿ ಮತ್ತು ಕಂಪನಿ, ಹುಬ್ಬಳ್ಳಿ

ಶಾಖೆಗಳು: ಬೆಳಗಾವಿ ಹಾಗೂ ವಿಜಾಪೂರ

ಅಧಿಕೃತ ಡೀಲರರು:

ಮ್ಯಾಸ್ಸಿಫರ್ಗ್ಯುಸನ್ ಟ್ರ್ಯಾಕ್ಟರುಗಳು
ಹಾಗೂ ಉಪಕರಣಗಳು

ವರ್ದಿಂಗ್ಟನ್ ಸಿಂಪ್ಸನ್ ಇಲೆಕ್ಟ್ರಿಕ್
ಪಂಪುಸೆಟ್ಟುಗಳು

ಮೋಟಾರ ಟಾಯರ್-ಟ್ಯೂಬ ಬ್ಯಾಟ್ರಿ
ಹಾಗೂ ಬಿಡಿಭಾಗಗಳ ಸಂಗ್ರಾಹಕರು

ಸಾಯಕಲ್ ಹಾಗೂ ಬಿಡಿಭಾಗಗಳ
ಡೀಲರರು

ಬರ್ಮಾಶಲ್ ಬರಶೇನ್
ಏಜಂಟರು

DC

DESAI AND COMPANY

HUBLI - BELGAUM - BIJAPUR

ಕುಟುಂಬಯೋಜನೆಯನ್ನು ಹೇಗೆ ಯಶಸ್ವಿಯಾಗಿಸಬೇಕು!

— ಲಾಂಗೂಲಾಚಾರ್ಯ

ನಮ್ಮ ದೇಶ ಒಂದು ತರಹದ ಚಂಡೀ ದೇಶ ಅಂತ ಕಾಣುತ್ತದೆ. ಎಲ್ಲಾ ಕಡೆ "ಉತ್ಪಾದನೆ ಹೆಚ್ಚಿಸಿರಿ" ಅಂತ ಮಂತ್ರಿಗಳು ತುತ್ತೂರಿ ಊದಿದರೆ ಉತ್ಪಾದನೆ ಕಡಿಮೆಯಾಗುತ್ತದೆ. "ಮಕ್ಕಳ ಉತ್ಪಾದನ ಕಡಿಮೆ ಮಾಡಿರಿ!" ಎಂದು ಡೋಲು ಬಾರಿಸಿದರೆ ಉತ್ಪಾದನೆ ಹೆಚ್ಚಾಗುತ್ತದೆ ಇಷ್ಟೆಲ್ಲ ಮಕ್ಕಳು ಈ ವರೆಗೆ ಎಲ್ಲಿ ಏನು ಮಾಡುತ್ತಿದ್ದವೋ ಆಶ್ಚರ್ಯವಾಗುತ್ತದೆ. ಈಗ ಎಲ್ಲವೂ ಈ ಲೋಕಕ್ಕೆ ಬರಲು ಒಮ್ಮೆಲೇ ಏತಕ್ಕಾಗಿ ಧಡಪಡಿಸುತ್ತವೋ ಗೊತ್ತಿಲ್ಲ. ಇಲ್ಲಿ ಮೊದಲೇ ಹುಟ್ಟಿದವರೆಲ್ಲ ಹುಟ್ಟುತ್ತಿರುವವರನ್ನು "ನೀ ನ್ಯಾಕೆ ಬಂದ್ಯೋ ಎಲೆ ಜೀವ!" ಎಂದು ಸ್ವಾಗತಿಸುತ್ತಿದ್ದಾರೆ ಎಂದು ಅವಕ್ಕೆ ಸುದ್ದಿ ಮುಟ್ಟಿಲ್ಲವೋ ಏನೋ. ದೇವರಾದರೂ "ಬೇಡದವರಿಗೆ ಬೇಡದ ವರಗಳ ನೀಡುತಲಿ ಕುಣದಾಡುತಲಿ" ಇದ್ದಾನೆ.

ಆದ್ದರಿಂದ ನಮ್ಮ ದೇಶದಲ್ಲಿ ಎಲ್ಲೆಲ್ಲಿ ಗೋಡೆಗಳು ಖಾಲಿ ಇವೆಯೋ ಅಲ್ಲೆಲ್ಲಾ "ಎರಡು ಬೇಕು, ಮೂರು ಸಾಕು!", "ಮಿತ ಕುಟುಂಬ, ಹಿತ ಕುಟುಂಬ!" "ಅರಚಲಿಕ್ಕೊಬ್ಬ ಮಗಳು, ಕಿರುಚಲಿಕ್ಕೊಬ್ಬ ಮಗ ಸಾಕು!" ಇತ್ಯಾದಿಯಾಗಿ "ಕವಿತ್ವಪೂರ್ಣವಾದ ಘೋಷಣೆಗಳನ್ನು ಬಳಿಯುತ್ತಿದ್ದೇವೆ. ಪ್ರತಿ ಬೀಡಾ ಅಂಗಡಿಯಲ್ಲಿಯೂ "ನಿರೋಧ"ಗಳು ಮಾರಾಟವಾಗತೊಡಗಿವೆ. ಆದರೆ ಯಾರು ಈ ಪ್ರಪಂಚಕ್ಕೆ ಬರುವುದನ್ನು ಅವು ನಿರೋಧಿಸಬೇಕಾಗಿತ್ತೋ ಆ



ಮಕ್ಕಳು ಯಾವ ಮಾಯಕದಿಂದಲೋ ಇಲ್ಲಿಗೆ ಗೇಟ್ ಕ್ರ್ಯಾಶ್ ಮಾಡಿ ಬಂದು ಆ ನಿರೋಧಗಳನ್ನು ಊದಿ ಬುಗ್ಗೆ ಮಾಡಿ ನಮ್ಮನ್ನು ನಗೆಗೀಡು ಮಾಡುತ್ತಿವೆ.

ತಲೆ ಕೆಡಿಸುವ ಪ್ರಶ್ನೆಗಳು

ಇದೆಲ್ಲ ಯಾಕಾಗುತ್ತಿದೆ? ಎಂದು ನಾನು ಜನಸಂಖ್ಯಾಶಾಸ್ತ್ರಿಗಳೊಬ್ಬರಿಗೆ ಕೇಳಿದೆ. "ನಾವು ಅತಿಯಾಗಿ ಹುಟ್ಟುತ್ತಿದ್ದೇವೆಂಬುದು ಅಷ್ಟು ಸರಿಯಲ್ಲ. ಸಾಕಷ್ಟು ಸಾಯುತ್ತಿಲ್ಲ. ಅದರಿಂದಲೇ ಜನಸಂಖ್ಯೆ ಹೆಚ್ಚುತ್ತಿದೆ," ಎಂದರವರು. ವೈದ್ಯಶಾಸ್ತ್ರ ಅಭಿವೃದ್ಧಿಹೊಂದಿದ್ದರಿಂದ ಹೆಚ್ಚು ಜನರು ಹೆಚ್ಚು ಕಾಲ ಬದುಕಿ ಹೆಚ್ಚು ಮಕ್ಕಳನ್ನು ಪಡೆಯುತ್ತಿದ್ದಾರೆ. "ಜನರು ಹೆಚ್ಚು ಸಾಯುವ ಹಾಗೆ ನಾವೇನೂ ಅನುಕೂಲ ಮಾಡಿಕೊಡಲಾರೆವೆ?" ಎಂದು ಪ್ರಶ್ನಿಸಿದೆ "ಉದಾಹರಣೆಗೆ ಮೆಡಿಕಲ್ ಕಾಲೇಜ್ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆಹೆಚ್ಚಿಸುವ ಮೂಲಕ?" "ಇಲ್ಲ, ಕಾಲೇಜಿನ ಹೊಸ ಡಾಕ್ಟರರ ಕೈಲಿ ಸಾಯುವವರಿಗಿಂತ ಹಳೇ ಡಾಕ್ಟರರ ಕೈಲಿ ಬದುಕುವವರ ಸಂಖ್ಯೆ ಹೆಚ್ಚಾಗಿದೆ" ಎಂದುತ್ತರ ಬಂತು.

ಯುಗಯುಗಾಂತರಗಳಿಂದ ನಿವೃತ್ತಿಪರವಾಗಿದ್ದ ನಮ್ಮ ದೇಶ ಆಧ್ಯಾತ್ಮಿಕ ಸ್ವರೂಪವನ್ನು ಕಳೆದುಕೊಂಡು ತೀರ ಮೆಟೀರಿಯಲಿಸ್ಟ್ ಆಗುತ್ತಿರುವುದು ಜನಸಂಖ್ಯಾವೃದ್ಧಿಗೆ ಒಂದು ಕಾರಣವೆಂದು ನನ್ನ ಆಧ್ಯಾತ್ಮಿ ಮಿತ್ರರೊಬ್ಬರು ಅಭಿಪ್ರಾಯಪಡುತ್ತಾರೆ. ಜನರಿಗೀಗ ಪರಲೋಕದಲ್ಲಿ ಆಸಕ್ತಿ ಕಡಿಮೆಯಾಗಿದೆ. ಈ ಭೌತಿಕ ಪ್ರಪಂಚದಲ್ಲೇ ಲೋಲುಪರಾಗಿದ್ದಾರೆ. ಸ್ವರ್ಗಲೋಕ ಎಂಬುದು ಬೇರೆ ಇಲ್ಲ ಎಂಬ ಪ್ರಚಾರದಿಂದಾಗಿ ಜನರು ಸತ್ತು ಸ್ವರ್ಗ ಸೇರುವ ಅವಸರದಲ್ಲಿಲ್ಲ. ಪರಲೋಕದಲ್ಲಿ ಜನರ ನಂಬಿಕೆಯನ್ನು ಹೆಚ್ಚಿಸುವುದಕ್ಕೆ ಸರಕಾರದವರು ಸಕ್ರಿಯ ಕ್ರಮಗಳನ್ನು ಕೈಕೊಳ್ಳಬೇಕೆಂಬುದು ಅವರ ಪ್ರಿಸ್ಕ್ರಿಪ್ಷನ್. ಡಾ. ಚಂದ್ರಶೇಖರರು ಗಮನಿಸುವರೆ?

ಜನಸಂಖ್ಯೆಯನ್ನು ತಗ್ಗಿಸುವುದಕ್ಕೆ ಕೆಲವರು ಆಕಸ್ಮಿಕ ಮೊದಲಾದೆಡೆ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಆದರೆ ಜನಸಂಖ್ಯೆ ಇಳಿಯಬೇಕೆನ್ನುವ ಸರಕಾರವೇ ಅವರಿಗೆ ಅಡ್ಡಗಾಲು ಹಾಕುತ್ತಿರುವುದು ಆಶ್ಚರ್ಯ. ಇದಕ್ಕಿಂತಲೂ ಮೂರ್ಖತನದ ಧೋರಣೆಗಳನ್ನೂ ಸರಕಾರಗಳು ಅನುಸರಿಸುತ್ತಿವೆ. ಒಂದೇಟಿಗೆ ಲಕ್ಷಾಂತರ ಜನರನ್ನು ಕೊಲ್ಲಬಲ್ಲ ಆಯುಧಗಳನ್ನು ಅವು ಉತ್ಪಾದಿಸುತ್ತವೆ.



ಆದರೆ ಅವುಗಳನ್ನು ಉಪಯೋಗಿಸದೆ ವ್ಯರ್ಥವಾಗಿ ಹಾಳುಮಾಡುತ್ತಿವೆ ದುಃಖದಾಯಕ ಸಂಗತಿಯೆಂದರೆ ಈ ಪೃಥ್ವಿಯ ಮೇಲೆ ಹಿರಿಯ ಹಿಟ್ಲರನೊಡನೆ ಮಹಾಯುಗ ಕೊನೆಗೊಂಡಿತು. ಸಾಯುವುದಕ್ಕೂ ಕೊಲ್ಲುವುದಕ್ಕೂ ಯಾರಿಗೂ ಆತುರ ಉಳಿದಿಲ್ಲ

ಆದ್ದರಿಂದ ಹುಟ್ಟುವುದನ್ನು ಕಡಿಮೆ ಮಾಡುವುದೊಂದೇ ಈಗ ನಮ್ಮ ಮುಂದಿರುವ ಉಪಾಯವೆಂದು ಸರಕಾರ ನಿರ್ಧಾರ ಮಾಡಿದೆ. ಅದಕ್ಕೇ ಕುಟುಂಬ ಯೋಜನೆ ಅನ್ನುವುದು. ಆದ್ದರಿಂದಲೇ ಗೋಡೆ ತುಂಬಾ ಪೋಸ್ಟರುಗಳು ಹುಟ್ಟಿಕೊಂಡಿರುವುದು ಆದರೆ ಅನೇಕ ಕಾರಣಗಳಿಂದ ಕುಟುಂಬ ಯೋಜನೆ ಅಥವಾ ಮಿತ ಕುಟುಂಬ ಡಾ. ಚಂದ್ರಶೇಖರರು ಸಂತೋಷ

ಪಡುವಷ್ಟು ಯಶಸ್ವಿಯಾಗಿಲ್ಲ; ಹೆಣ್ಣು ಹಡೆದವರಿಗೆ ಗಂಡು ಬೇಕೆಂಬಾಸೆ, ಗಂಡು ಹುಟ್ಟಿದವರಿಗೆ ಹೆಣ್ಣು ಬೇಕೆಂಬಾಸೆ; ಅದಕ್ಕಾಗಿ ಮರಳಿ ಯತ್ನವ ಮಾಡು, ಮರಳಿ ಯತ್ನವ ಮಾಡು; ಹೀಗೆ ಅಂಕೆ ಅಂಕೆಮೀರಿ ಹೋಗುತ್ತದೆ.

$\frac{0}{n} = 0$

ಮತ್ತೆ ತರ್ಕಗಳು ಬೇರೆ ಇವೆ. ನಾನು ವಿಪುಲಕುಟುಂಬಿಯಾದ ನಮ್ಮ ಮುನಸುರೆಯ-ವಳ ಗಂಡನಿಗೆ ಕುಟುಂಬ ಯೋಜನೆ ಮಾಡಲು ಸೂಚಿಸಿದೆ. "ನೋಡಪ್ಪಾ, ನಿನಗೆ ತಿಂಗಳಿಗೆ ೫೦೦ ರೂ. ಉತ್ಪನ್ನವಿದ್ದು ಇಬ್ಬರು ಮಕ್ಕಳಿದ್ದರೆ ನೀವು ಗಂಡಾ ಹೆಂಡತಿ ಮಕ್ಕಳು ಸೇರಿ ತಲಾ ೧೨೫ ರೂ. ಬರುತ್ತದೆ. ಅದೇ ಆರು ಮಕ್ಕಳಾದರೆ ೬೨.೫೦ ಬರುತ್ತದೆ. ಹತ್ತಾದರೆ ಬರೇ ತಲಾ ೪೧.೬೬ ಬರುತ್ತದೆ. ತಲಾ ನೂರಿಪ್ಪತ್ತೈದರಲ್ಲಿ ಆರಾಮವಾಗಿರುವುದು ಸುಖವೋ ೪೧.೬೬ ರಲ್ಲಿ ತೊಳಲಾಡುವುದು ಸುಖವೋ?" ಎಂದು ನಾನು ಗಣಿತಶಾಸ್ತ್ರವನ್ನು ಬಿಚ್ಚಿದೆ. ಅವನು ಬೀಡಿಯ ಕಚ್ಚಿನಿಂದ ಒಂದು ಝುರುಕಿ ಎಳೆದು ನಗುತ್ತ ಹೇಳಿದ: "ಏನಂತೀರಾ ಸೋಮಿಯೋರು. ನನಗೆ ವರಮಾನನೇ ಇಲ್ಲ. ನನಗೆ ಎರಡು ಮಕ್ಕಳಾದರೂ ಅವರಿಗೆ ಬರೋ ಪಾಲು ಒಂದೇ. ಇಪ್ಪತ್ತೈದಾದರೂ ಒಂದೇ." ಶೂನ್ಯವನ್ನು ಎಷ್ಟು ದೊಡ್ಡ ಸಂಖ್ಯೆಯಿಂದ ಭಾಗಿಸಿದರೂ ಉತ್ತರ ಶೂನ್ಯವೇ ಎಂದು ಎರಡನೇ ಇಯತ್ತೆಯಲ್ಲಿ ಕಲಿತದ್ದು ನನಪಾಗಿ ನಾನು ಬಾಯಿ ಮುಚ್ಚಿಕೊಂಡೆ. ಈ ಮಹಾಶಯನ ಕೈಯಲ್ಲಿ ತಿಂಗಳಿಗೆ ೫೦೦ ರೂಪಾಯಿ ಹಾಕಿದ ಹೊರತು ಅವನನ್ನು ಕುಟುಂಬ ಯೋಜನೆಗೆ ಮುಖ ಹಾಕಿ ಕಾಡ ನಡೆಯುವಂತೆ ಮಾಡುವುದು ಸಾಧ್ಯವೇ ಇಲ್ಲ.

ಆ ಮೇಲೆ ನಾನು ತಿಂಗಳಾ ಎರಡು ಸಾವಿರ ಆದಾಯವಿರುವ ನನ್ನ ಮಿತ್ರನ ಮೇಲೆ ನನ್ನ ಉಪದೇಶಾಸ್ತ್ರವನ್ನು ಹೂಡಿದೆ. ಅವನ ಹೆಂಡತಿ ವೇದದಲ್ಲಿ ಹೇಳಿದ ಹತ್ತು ಮಕ್ಕಳನ್ನು ಹಡೆದಾಗಿತ್ತು; ಆದರೂ ಅವಳು ಗಂಡನನ್ನು ಹನ್ನೊಂದನೇ ಮಗುವಾಗಿ * ಮಾಡಿಕೊಳ್ಳುತ್ತಿರುವಂತೆ ಕಾಣಲಿಲ್ಲ. ಭಾಗಾಹಾರ ಗಣಿತ ಅವನಿಗೆ ನಾಟಬಲ್ಲದೆಂದು ನಾನು ಭಾವಿಸಿದ್ದೆ. ಆದರೆ ಅವನೂ ಜಪ್ಪೆನ್ನಲಿಲ್ಲ. "ಮೂರ್ಖರಿಗೆ ನಿನ್ನ ಕುಟುಂಬ ಯೋಜನೆಯು ಮದ್ದು ತಿನ್ನಿಸಲಾರದೆ ನನ್ನ ಕಡೆ ಬಂದಿದ್ದೀಯಾ? ಇದು ಪ್ರಜಾಸತ್ತೆ ಮತ್ತು ಸಮಾಜವಾದಿ ದೇಶ. ಇಲ್ಲಿ ತಲೆಗಳಿಗೆ ಬೆಲೆ ಹೊರತು ತಲೆಯೊಳಗಿರುವುದಕ್ಕಲ್ಲ. ನಿನ್ನ ಆ ಶೂನ್ಯ ಪಂಡಿತ ಲೆಕ್ಕವಿಲ್ಲದೆ ಮಕ್ಕಳನ್ನು ಹಡೆಯಲಿ ನಾನು ಮೂರು ಮಕ್ಕಳಿಗೆ ನಿಲ್ಲಿಸುತ್ತೇನೆ ಪರಿಣಾಮ ಏನಾಗುತ್ತದೆ? ಸಮಾಜದಲ್ಲಿ ಹೆಡ್ಡರ ಸಂಖ್ಯೆ ಬೆಳೆದು ಬುದ್ಧಿವಂತರದು ಇಳಿಯುತ್ತದೆ. ಹೆಚ್ಚು ಹೆಡ್ಡರು ಕಡಿಮೆ ಬುದ್ಧಿವಂತರ ಮೇಲೆ ಸವಾರಿ ಮಾಡುತ್ತಾರೆ. ಸಮಾಜವಾದಿ ಸರಕಾರ ಯಾವಾಗಲೂ ಬುದ್ಧಿವಂತ, ಕಾರ್ಯತತ್ಪರ ಜನರಿಂದ ಕಸಿದುಕೊಂಡು ಮೂರ್ಖ, ಸೋಮಾರಿ, ವ್ಯಗ್ರ... ಹೊಟ್ಟೆ ಹೊರೆಯುತ್ತದೆ. ಇದರಲ್ಲಿ ನಾನು ಯಾಕೆ ಸಹಕರಿಸಬೇಕು? ನಾನು ಮೂರೇ ಮಕ್ಕಳನ್ನು ಹಡೆದಿದ್ದೇನೆಂದು ನಿನ್ನ ಸರಕಾರ ನಾಳೆ ನನ್ನ ಮಕ್ಕಳಿಗೆ ನಿನ್ನ ಶೂನ್ಯಪಂಡಿತನ ಮಕ್ಕಳಿಗಿಂತ ಹೆಚ್ಚು ರೇಶನ್ ಕೊಡುತ್ತದೆಯೆ? ಇಲ್ಲ. ನನ್ನ ಹುಟ್ಟದಿರುವ ಮಕ್ಕಳ ಬಾಯಿಂದ ಸೆಳೆದು ಈತನ ಮಕ್ಕಳ ಹೊಟ್ಟೆಗೆ ಹಾಕುವುದು ಬೇಡ."



ನಾನು ಅವಾಕ್ಕಾದೆ. ಆದರೆ ಕುಟುಂಬ ಯೋಜನಾ ಉಪದೇಶವನ್ನು ಬಿಡಲಿಲ್ಲ. ಐದು ಮಕ್ಕಳ ತಂದೆಯೊಬ್ಬನನ್ನು ಹಿಡಿದೆ. ಆತ ಇನ್ನೊಂದು ಯಕ್ಷಪ್ರಶ್ನೆಯನ್ನು ಮುಂದೊಡ್ಡಿದ. "ನಿನ್ನ ಸರಕಾರದ ಮಂತ್ರಿಗಳು ಕಡಿದಷ್ಟೇ ತುರಿಸಿಕೊಳ್ಳುವವರು. ನಾಳೆ ಮಂತ್ರಿಗಳಾಗಿ ಉಳಿಯುತ್ತೇವೆಂಬ ಧೈರ್ಯವಿಲ್ಲದ್ದರಿಂದ ಅವರು ಇಂದಿನ ದಿನ ತಲೆ ಉಳಿದರೆ ಸಾಕು, ಎನ್ನುತ್ತಾರೆ. ಮಂತ್ರಿಗಳು ಬಂದಾರು, ಹೋದಾರು, ಕುಟುಂಬ ಕಾಯಂ ಆಗಿ ಉಳಿಯುತ್ತದೆ. ಈಗ ನಿನ್ನ ಮಂತ್ರಿ ಹೇಳುವ ಹಾಗೆ 'ಆರ್ತಿಗೊಬ್ಬ ಮಗಳು ಕೀರ್ತಿಗೊಬ್ಬ ಮಗ' ಸಾಕು ಅಂತ ಒಪ್ಪಿಕೊಳ್ಳುವಾ. ಇಪ್ಪತ್ತು ವರ್ಷಗಳ ನಂತರ ಏನಾಗುತ್ತೆ? ನಾನು ರಿಟೈರ್ ಆಗುತ್ತೇನೆ. ನನ್ನ ಹೆಂಡತಿ ಮುಪ್ಪಾಗುತ್ತಾಳೆ. ನನ್ನ ಆರ್ತಿಯ ಮಗಳು ಮದುವೆ ಮಾಡಿಕೊಂಡು ಹೋಗುತ್ತಾಳೆ. ನಮ್ಮ ಮುದುಕರಿಬ್ಬರ ಹೊಟ್ಟೆಯನ್ನು ಒಬ್ಬ ಮಗ ಹೊರೆಯಬೇಕು. ದೇಶದ ಹತ್ತು ಕೋಟಿ ಸಂಸಾರಗಳು ನಿನ್ನ ಮಂತ್ರಿಯ ಮಂತ್ರವನ್ನು ಒಪ್ಪಿದರೆ ಇನ್ನು ಇಪ್ಪತ್ತು ವರ್ಷಗಳಲ್ಲಿ ದುಡಿಯುವ ತರುಣರಷ್ಟೇ ದುಡಿಯದ ಮುದುಕರಿರುತ್ತಾರೆ. ಮುದುಕರ ಹೊಟ್ಟೆ ಹೊರೆಯುವುದರಲ್ಲೇ ತರುಣ ತರುಣಿಯರ ಸಮಯ ಹೋಗುತ್ತದೆ. ಸ್ವತಃ ಲಗ್ನವಾಗಿ ಸಂಸಾರ ಬೆಳೆಸುವುದು ಅವರಿಗೆ ಕನಸಿನ ಮಾತಾಗುತ್ತದೆ. ಅಮೇರಿಕದಂಥ ಶ್ರೀಮಂತ ದೇಶದಲ್ಲೇ ತಂದೆ ತಾಯಿಗಳನ್ನು ಸಾಕುವ ಶಕ್ತಿ ಮಕ್ಕಳಿಗೆ ಉಳಿದಿಲ್ಲವಂತೆ ಇಲ್ಲಿಯ ಮಾತೇನು? ನಿನ್ನ ಡಾ. ಚಂದ್ರಶೇಖರ ಇದಕ್ಕೇನನ್ನುತ್ತಾನಂತೆ? ಮುದುಕರನ್ನೆಲ್ಲಾ ಫಿರಂಗೀ ಬಾಯಿಗೆ ಕೊಡುತ್ತಾನಂತೇನು?"

ನಾನು ಸ್ಟಂಪ್ ಔಟ್ ಆದೆ.

ಆದರೆ ಕುಟುಂಬ ಯೋಜನೆ ಬೇಕೇ ಬೇಕೆಂಬುದು ನನ್ನ ಖಚಿತ ಅಭಿಪ್ರಾಯ. ಜನರು ಗೋಡೆಗಳಲ್ಲಿ ಬರೆದ್ದದ್ದನ್ನು ಓದಿ ಮನೆಗೆ ಹೋಗಿ ಮತ್ತಷ್ಟು ಮಕ್ಕಳನ್ನು ಹಡೆಯುತ್ತಾರೆನ್ನುವುದೂ ಅಷ್ಟೇ ಖಚಿತವಾದ ಅನುಭವ. ಏನು ಮಾಡಬೇಕು? ಗರ್ಭಪಾತವನ್ನು ಕಾನೂನುಬದ್ಧವಾಗಿ ಮಾಡೋಣವೆ? ಹೌದು, ಸರಕಾರ ಹಾಗೆ ಮಾಡಲು ಹೊರಟದೆ. ಆದರೆ ನನ್ನ ಇನ್ನೊಬ್ಬ ಮಿತ್ರ ಕೇಳುತ್ತಾನೆ: "ಹುಟ್ಟದಿದ್ದವರನ್ನು ಯಾಕೆ ಕೊಲ್ಲುತ್ತೀರಿ? ರಿಟೈರ್ ಆಗಿ, ಕೆಲಸಕ್ಕೆ ಬಾರದ ಮುದುಕರನ್ನೆಲ್ಲ ಯಾಕೆ ನೋವಾಗದ ಹಾಗೆ ಕೊಲ್ಲುವುದಿಲ್ಲ? ನಾಳಿನ ಮಕ್ಕಳನ್ನು ಕೊಲ್ಲುವುದಕ್ಕೆ ಹಿಂಜರಿಯದ ನಿಮಗೆ ಈ ಜೊಂಡುಗಟ್ಟಿದ ಮುದುಕರನ್ನು ಕೊಲ್ಲುವುದಕ್ಕೆ ಯಾವ ಧರ್ಮ ಅಡ್ಡ ಬರುತ್ತದೆ?"

"ಧರ್ಮ ಅಡ್ಡ ಬರುವುದಿಲ್ಲ. ಆದರೆ ಕೆಲಸಕ್ಕೆ ಬಾರದ ಅನೇಕ ಮುದುಕರು ನಮ್ಮ ಲೀಡರುಗಳಾಗಿ ಜೀವನಯಾಪನೆ ಮಾಡುತ್ತಿದ್ದಾರೆ. ಅವರು ನೋವಿಲ್ಲದೆ ಕೂಡ ಸಾಯುವುದಕ್ಕೆ ಒಪ್ಪಲಾರರು. ಇದು ಪ್ರಾಕ್ಟಿಕಲ್ ಪ್ರಾಬ್ಲಮ್" ಎಂದು ನಾನು ಸುಮ್ಮನಾದೆ.

ರಾಷ್ಟ್ರೀಕರಣ

ಇಷ್ಟೆಲ್ಲ ತಲೆತಿನ್ನುವ ಸಮಸ್ಯೆಗಳಿಂದ ಕಂಗಾಲಾಗಿದ್ದ ನಾನು, ಮೊನ್ನೆ ಕೆಲ ಪ್ರತಿಭಾಶಾಲಿ ತರುಣರು "ಕುಟುಂಬ ಯೋಜನೆಯ ಯಶ



* "ಪತಿಮೇಕಾದಶಂ ಕೃಧಿ" ಹತ್ತು ಮಕ್ಕಳನ್ನು ಹಡೆದು ಗಂಡನನ್ನು ಹನ್ನೊಂದನೆಯವನನ್ನಾಗಿ ಮಾಡಿಕೋ ಎಂದು ವಧುವಿಗೆ ಮಾಡುವ ಉಪದೇಶ.

ಸ್ಸಿಗೆ ಕುಟುಂಬವನ್ನೇ ರಾಷ್ಟ್ರೀಕರಿಸಬೇಕು" ಎಂದು ಸೂಚಿಸಿದಾಗ ಕ್ಯಾಲ್ಸಿಯಂ ಇಂಜಕ್ಶನ್ ತೆಗೆದುಕೊಂಡವನ ಹಾಗೆ ಉತ್ಸಾಹದಿಂದ ಎದ್ದು ಕುಳಿತೆ. ನನ್ನ ಮಿದುಳು ತಿರುಗಿಸಿ ಬಿಟ್ಟ ಬೊಗರಿಯ ಹಾಗೆ ಗರಗರ ಎನ್ನತೊಡಗಿತು. ಹೌದು, ಇಲ್ಲಿತ್ತು ರಾಮಬಾಣ. ಒಂದೇ ಪೆಟ್ಟಿಗೆ ಕುಟುಂಬ ಯೋಜನೆಯ ಯಶಸ್ಸಿಗೆ ಸಿದ್ಧ ಪಥಿ.

ಕುಟುಂಬ ಯೋಜನೆ ಅಂದರೇನು? ಅದರ ಗುರಿಯೇನು? ಮಕ್ಕಳು ಕಡಮೆ ಹುಟ್ಟಬೇಕು ಎಂದಲ್ಲವೆ? ಅರ್ಥಾತ್ ಕುಟುಂಬ ಕೈಗಾರಿಕೆಯಲ್ಲಿ—ಉತ್ಪಾದನೆ ಇಳಿಮುಖವಾಗಬೇಕು ಎಂದು ತಾನೆ ಅದರ ಗುರಿ?

ಈಗ ನಮ್ಮ ಅನುಭವ ಯಾವುದಾದರೊಂದು ಕೈಗಾರಿಕೆ ರಾಷ್ಟ್ರೀಕರಣ ಹೊಂದಿದರೆ ಯಾವ ಪ್ರೋತ್ಸಾಹದ ಅಗತ್ಯವೂ ಇಲ್ಲದೆ, ಯಾವ ಗೋಡೆಯ ಮೇಲೆ ಏನನ್ನೂ ಬರೆಯದೇನೇ ತಂತಾನೇ ಉತ್ಪಾದನೆ ಇಳಿಮುಖವಾಗುತ್ತದೆ. ಕುಟುಂಬಗಳ ರಾಷ್ಟ್ರೀಕರಣವಾದರೆ ಯಾವ ಪ್ರಯತ್ನವೂ ಇಲ್ಲದೆ ಉತ್ಪಾದನೆ ಕಡಿಮೆಯಾಗಿಬಿಡುವುದು. ಇದು ಸ್ವಯಂ—ವೇದ್ಯವಾದ ತಥ್ಯ.

ಆದರೆ ರಾಷ್ಟ್ರೀಕರಣದಂಥ ಪ್ರಚಂಡ ಕ್ರಮವನ್ನು ಕೂಡಲೇ ಕೈಕೊಳ್ಳುವುದು ಕಷ್ಟವೆ ಸೈ. ಹದಿನಾಲ್ಕು ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಬೇಕಾದರೂ ಮುಂಚೆ ಸಮಾಜೀಕರಣದ ನಡುಮನೆಯಿಂದ ಹಾಯ್ದು ಹೋಗಬೇಕಾಯಿತು. ಹತ್ತು ಕೋಟಿ ಕುಟುಂಬಗಳ ರಾಷ್ಟ್ರೀಕರಣವನ್ನು ಒಮ್ಮೆಲೇ ಕೈಕೊಳ್ಳುವುದು ಸರಿಯೇ? ಆದ್ದರಿಂದ ಮೊದಲು ಕುಟುಂಬದ ಸಮಾಜೀಕರಣವಾಗಬೇಕು:

ಸಮಾಜೀಕರಣದಿಂದಲೇ ನಮ್ಮ ಗುರಿ ಸಾಧಿಸುವ ಶಕ್ಯತೆಯೂ ಇದೆ. ಅದಕ್ಕಾಗಿ ಕೆಲ ಸೂಚನೆಗಳನ್ನು ನಿಮ್ಮ ಮುಂದಿಡುತ್ತೇನೆ.

೧. ಯಾರೂ ೨೫ ನೇ ವಯಸ್ಸಿನೊಳಗೆ ಮದುವೆಯಾಗಕೂಡದು. ಮತ್ತು ಲೈಸೆನ್ಸ್ ಇಲ್ಲದೆ ಮದುವೆಯಾಗತಕ್ಕದ್ದಲ್ಲ ಎಂದು ಕಾನೂನು ಮಾಡಬೇಕು.

೨ ವರದಕ್ಷಿಣಾ ನಿರೋಧ ಕಾನೂನನ್ನು ರದ್ದುಪಡಿಸಬೇಕು. (ವರದಕ್ಷಿಣೆಯಿಂದ ಮದುವೆಗಳು—ಮತ್ತು ತನ್ಮೂಲಕ ಮಕ್ಕಳಾಗುವುದು ಎಷ್ಟು ಮುಂದೆ ಬೀಳುತ್ತವೆಂಬ ಕಲ್ಪನೆ ಸರಕಾರಕ್ಕಿಲ್ಲ. "ಮಿನಿಮಂ ವರದಕ್ಷಿಣಾ ಆ್ಯಕ್ಟ್" ಒಂದನ್ನು ಪಾಸು ಮಾಡಿ ಈಗ ವರದಕ್ಷಿಣೆ ಇಲ್ಲದ ಸಮಾಜಗಳಿಗೂ ಅದನ್ನು ವಿಸ್ತರಿಸಿದರೆ ಕುಟುಂಬ ಯೋಜನೆಗೆ ಬಹಳ ಅನುಕೂಲವಾದೀತು.) ಮಾತ್ರ ವರದಕ್ಷಿಣೆಯಲ್ಲಿ ಶೇಕಡಾ ೫೦ ರಷ್ಟನ್ನು ಸರಕಾರ ಬೊಕ್ಕಸಕ್ಕೆ ಸೇರಿಸಿಕೊಳ್ಳಬೇಕು. ಕೈಲಿ ಹೆಚ್ಚು ಸ್ಪೇರ್ ಹಣ ಇದ್ದರೆ ಅದು ಮಕ್ಕಳ ಉತ್ಪಾದನೆಗೆ ಪ್ರೋತ್ಸಾಹ ಕೊಡುವ ಭಯವಿದೆ.

೩. ವಿವಾಹ ಲೈಸನ್ಸುಗಳಿಗಾಗಿ ಅರ್ಜಿಯನ್ನು ದಿಲ್ಲಿಯಲ್ಲಿರುವ ಕೇಂದ್ರ ವಿವಾಹ ಬ್ಯೂರೋವಿಗೆ ಕಳಿಸಬೇಕು. ಅದು ಸರಕಾರವೇ ಮುದ್ರಿಸಿದ ಫಾರ್ಮುಗಳಲ್ಲಿ ಇರಬೇಕು. ಆ ಫಾರ್ಮುಗಳ ಪೂರೈಕೆ ಸಾಕಷ್ಟು ಇಲ್ಲದಂತೆ ನೋಡಿಕೊಂಡರೆ ಮದುವೆಗಳನ್ನು ತಾತ್ಕಾಲಿಕವಾಗಿ ತಡೆಯಬಹುದು. ವರ್ಷಕ್ಕೆ ಈ ದೇಶದಲ್ಲಿ ೮೦ ಲಕ್ಷ ಮದುವೆಗಳಾಗುವುದರಿಂದ ಫಾರ್ಮುಗಳ ಕೊರತೆಯನ್ನುಂಟುಮಾಡುವುದಕ್ಕೆ ವಿಶೇಷ ಪ್ರಯತ್ನ ಅಗತ್ಯವಾಗಲಾರದು.

ಲೈಸನ್ಸುಗಳಿಗಾಗಿ ಬಂದ ಅರ್ಜಿಗಳು ಸ್ವಾಭಾವಿಕವಾಗಿಯೇ ದಿಲ್ಲಿಯಲ್ಲಿ ಒಂದೆರಡು ವರ್ಷ ಕೊಳೆಯುತ್ತಿರಬೇಕಾಗುವುದು. ಈ

ಒಕ್ಕಲು



ಹೆಚ್ಚು ಹೆಚ್ಚಾದಂತೆ ಮನೆಯೊಳಗೆ ಮಕ್ಕಳು
ನಕ್ಕು ನೋಡಿತು ಓಣಿಯೊಳಗಿನ ಒಕ್ಕಲು
ಇದನೋಡಿ ರೇಗುವಳು ನನ್ನವಳು ಬಲು ಜೋಡಿ;
ಅಂಟಿಕೊಂಡಿಹುದೇನು ನಿಮ್ಮ ಮನೆಗೂ ಈ ರಾಡಿ !

–ರಾಘವೇಂದ್ರ

ಅವಧಿಯಲ್ಲಿ ವಿವಾಹ ಲೈಸನ್ಸಿಗಾಗಿ ಅರ್ಜಿ ಹಾಕಿದ ಇಬ್ಬರಲ್ಲಿ ಒಬ್ಬರು ಮನಸ್ಸು ಬದಲಿಸುವ ಆಶೆ ಇದೆ. ಹೊಸ ಸಂಗಾತಿಯೊಡನೆ ಲಗ್ನವಾಗಬೇಕೆಂದಿದ್ದರೆ ಪುನಃ ಅರ್ಜಿ ಮಾಡಬೇಕು ಮತ್ತು ಪುನಃ ಮನಸ್ಸು ಬದಲು ಮಾಡಲು ಅವಕಾಶವಿದ್ದೇ ಇದೆ

೪. ಇಷ್ಟೆಲ್ಲ ಗಂಡಾಂತರವನ್ನು ದಾಟಿಯೂ ಗಂಡು, ಹೆಣ್ಣು ಲಗ್ನವಾಗಲೇಬೇಕೆಂಬ ಹಟದಿಂದ ಅರ್ಜಿಯ ಬೆನ್ನು ಹತ್ತಿದರೆ ಆ ಇಬ್ಬರೂ ಹುಟ್ಟಿದ್ದರೆಂಬುದಕ್ಕೆ ಪ್ರಮಾಣ ಪತ್ರವನ್ನು ಕೇಳಬಹುದು. ಹುಟ್ಟಿದ್ದು ಸಿದ್ಧವಾಗದೆ ವಯಸ್ಸು ಖಚಿತವಾಗುವುದಿಲ್ಲ ತಾನೆ. ಹುಟ್ಟಿದ್ದಲ್ಲದೆ ಅರ್ಜಿ ಕಾಲದಲ್ಲಿ ಇಬ್ಬರೂ ಬದುಕಿರುವರೆಂಬುದಕ್ಕೂ ಪ್ರಮಾಣವನ್ನೊದಗಿಸಬೇಕು. ಬದುಕಿಲ್ಲದವರಿಗೆ ಮದುವೆಯಾಗುವುದಕ್ಕೆ ಹಕ್ಕಿಲ್ಲ? ವಿಚಾರಣಾ ಕಾಲದಲ್ಲಿ ಬದುಕಿದ್ದರೆ ಸಾಲದು, ಅರ್ಜೀ ಕಾಲದಲ್ಲಿ ಕೂಡ ಬದುಕಿದ್ದರೆಂಬುದಕ್ಕೆ ಪ್ರಮಾಣ ಬೇಕು. ಇವೊತ್ತು ಜೀವಂತ ಇದ್ದವನು ನಿನ್ನೆಯೂ ಇದ್ದನೆಂದು ನಂಬುವುದು ಹೇಗೆ? ಅವನು ಅಕಸ್ಮಾತ್ತಾಗಿ ಎಲ್ಲಿಂದಲೋ ಹಾಜರಾಗಬಹುದು.

ಲೈಸನ್ಸ್ ಅರ್ಜಿಗಳ ತೀರ್ಮಾನದಲ್ಲಿ ಇನ್ನೂ ಎಷ್ಟೋ ಒಳಪಟ್ಟುಗಳಿಗೆ ಅವಕಾಶವಿದೆ. ಆದರೆ ಅವುಗಳನ್ನು ಸೃಷ್ಟಿಸುವುದರಲ್ಲಿ ನಾನು ಸರಕಾರಿ ನೌಕರರಿಗೆ ಪಾಠ ಹೇಳುವ ಅಗತ್ಯವಿಲ್ಲ.

ಇಷ್ಟೆಲ್ಲ ಕೆಂಪು ಟೇಪನ್ನು ಬಿಡಿಸಿಕೊಂಡು ಒಂದು ಜೋಡಿ ಮದುವೆಯಾಗಲೇಬೇಕೆಂದು ಮೊಂಡು ಹಿಡಿದರೆ ಅದಕ್ಕೆ ಕನಿಷ್ಠ ಪಕ್ಷದಲ್ಲಿ ಐದು ವರ್ಷಗಳು ಬೇಕಾಗುವವು. ಆದರೆ ಅವರು ಈ ಅವಧಿಯಲ್ಲಿ ಬುದ್ಧಿವಂತರಾಗುವ ಆಶೆ ಇಲ್ಲದಿಲ್ಲ.

೫. ಮದುವೆಯಾಗಲು ಲೈಸನ್ಸ್ ಪಡೆದಾಕ್ಷಣ ಮಕ್ಕಳು ಹಡೆಯುವುದಕ್ಕೆ ಲೈಸನ್ಸ್ ಇದೆಯೆಂದು ಯಾರೂ ಭಾವಿಸಬಾರದು. ಮದುವೆಯಾಗಿ ಕನಿಷ್ಠ ಒಂದು ವರ್ಷದ ನಂತರ ಮಕ್ಕಳು ಹಡೆಯುವ ಲೈಸನ್ಸಿಗೆ ಅರ್ಜಿ ಸ್ವೀಕರಿಸಲಾಗುತ್ತದೆ. ಅದು ಕಡತಗಳಲ್ಲಿ ತನ್ನ ಕುಂಭಕರ್ಣ ನಿದ್ರೆಯ ವಾಡಿಕೆಯ ಅವಧಿಯನ್ನು ಮುಗಿಸಿದ ತರುವಾಯ ಅದನ್ನು ಒತ್ತಾಯ ಬಂದರೆ ವಿಚಾರಣೆಗೆ ತೆಗೆದುಕೊಳ್ಳಬೇಕು. ಅರ್ಜಿದಾರರು ತಮಗೆ ಮದುವೆಯಾಗಿದೆ ಮತ್ತು ಇದೇ ಜೋಡಿಯ ನಡುವೆ ಮದುವೆಯಾಗಿದೆ ಎಂದು ಸಿದ್ಧಪಡಿಸಬೇಕಾಗುವುದು. ಮದುವೆಗೆ ಲೈಸನ್ಸ್ ಸಿಕ್ಕಿದೆ ಎಂದಾಕ್ಷಣ ಮದುವೆಯಾಗಿದೆ ಎನ್ನುವುದನ್ನು ನಂಬಲು ಸಾಧ್ಯವಿಲ್ಲ. ಅಲ್ಲದೆ, ಮದುವೆಗೂ ಅರ್ಜಿಗೂ ನಡುವೆ ಡೈವೋರ್ಸ್ ಆಗಿಲ್ಲವೆಂಬುದಕ್ಕೂ ಪ್ರಮಾಣ ಬೇಕು.

ಇಷ್ಟೆಲ್ಲವನ್ನೂ ಸಾಧಿಸಿ ಮಕ್ಕಳನ್ನು ಹೊಂದುವ ಲೈಸನ್ಸ್ ಸಿಗಬೇಕಾದರೆ ಕನಿಷ್ಠ ಪಕ್ಷ ಮತ್ತೆ ಆರೇಳು ವರ್ಷಗಳು ಮುಗಿದಿರುವುವು. ಗಂಡನ ಹಲ್ಲುಗಳು ಉದುರಲಾರಂಭಿಸಿರುವವು. ಹೆಂಡತಿಗೆ ಮುಟ್ಟು ನಿಲ್ಲುವ ವಯಸ್ಸು ಹತ್ತಿರವಾಗಿರುವುದು. ಆ ಮೇಲೆ ಅವರು ಎಷ್ಟೇ ಹೆಣಗಿದರೂ ಒಂದೆರಡಕ್ಕಿಂತ ಹೆಚ್ಚು ಮಕ್ಕಳನ್ನು ಹಡೆದು ಡಾ ಚಂದ್ರಶೇಖರರಿಗಾಗಲಿ ಜಗಜೀವನರಾಮರಿಗಾಗಲಿ ತಲೆನೋವುಂಟು ಮಾಡಲಾರರು. ಅವರು ತಮ್ಮ ಎಲ್ಲಾ ಸಮಯವನ್ನು ರಾಜಕೀಯ ಕುಸ್ತಿಗೆ ವಿನಿಯೋಗಿಸಬಹುದು.



ನಿರಂತರ ಬೆಳಗುವ ಜ್ಯೋತಿ
ಪ್ರತಿಯೊಂದು ಮನೆಯಲ್ಲಿಯೂ ಆನಂದದ ಸುಗ್ಗಿ. ಪ್ರತಿಯೊಂದು ಮನೆಯೂ ಸಮೃದ್ಧಿಯ ಬೀಡು. ನಿಮ್ಮ ಪ್ರೀತಿಗೆ ಪಾತ್ರರಾದವರು ಸಂತೋಷದಿಂದ ನಲಿದಾಡುತಿದ್ದಾರೆ. ಅವರ ಭವಿಷ್ಯವು ಭದ್ರವಾಗಿರುವುದು. ಅವರ ಆನಂದದ ಜ್ಯೋತಿಯು ಮಸುಕಾಗದಿರಲಿ. ಆದಕ್ಕಾಗಿ ಇಂದೇ ಉಳಿತಾಯ ಮಾಡಿರಿ. ದೀಪಾವಳಿಯ ಹರ್ಷವು ವರ್ಷಗಟ್ಟಲೆ ಮನೆ ಮನೆಗಳನ್ನು ಬೆಳಗುತ್ತಿರಲಿ.
BANK OF BARODA
ನೀವು ಎಂದೆಂದೂ ಸಮೃದ್ಧಿಶಾಲಿಗಳಾಗಿರಲು
ಬ್ಯಾಂಕ್ ಆಫ್ ಬರೋಡಾ
ಹೆಡ್ ಆಫೀಸ್ : ಮಾಂಡ್ವಿ, ಬರೋಡಾ,
ಭಾರತದಲ್ಲಿ ಮತ್ತು ವಿದೇಶಗಳಲ್ಲಿ 400ಕ್ಕಿಂತಲೂ ಹೆಚ್ಚು ಶಾಖೆಗಳಿವೆ
Shilpi BOB 32/69 KAN

ಸುಣ್ಣದವನು ಎಳೆದ ಬಣ್ಣದ ಕೈ

— ಎನ್ಕೆ

ಹೂಂ! ನಿಮಗೇನೊ ಇದು ಹರಟೆ, ನನಗೋ ಮೈಯೆಲ್ಲ ಪರಚಿಕೊಳ್ಳೋ ಅಂಥ ಅವಸ್ಥೆ. 'ಶೇಷಂ ಕೋಪೇನ ಪೂರಯೇತ್' ಅಂತಾರಲ್ಲ, ಹಾಗೆ 'ಶೇಷಂ ಸಾಹಿತ್ಯೇನ ಪೂರಯೇತ್' ಅಂತ ಈ ಹರಟೆ ಬರೆದು ಹಗುರು ಮಾಡಿಕೊಳ್ತಿದ್ದೀನಿ. ಯಾಕಂದರೆ ಅಧ ಪೆದ್ದುತನಕ್ಕೆ ಮೊದಲೆ ಪೇಚಾಡತ ಇರೋವಾಗ ನನ್ನ ಚಿಕ್ಕ ಚಿರಂಜೀವನೂ ನನಗೆ ವಿದುರನೀತಿ ಹೇಳಲಿಕ್ಕೆ ಬಂದರೆ? ಇದೇನು, ದೀಪಾವಳಿ ಪ್ರಸಂಗದೊಳಗ ಇಂಥ ಪ್ರಲಾಪ ಯಾಕ ಉದ್ಭವ ಆಯಿತು ಅಂತೀರೇನು? ಏನು ಮಾಡೋದು, ನಮ್ಮ ಪ್ರಾರಬ್ಧ. ದೀಪಾವಳಿಗೆ ಅಂತಲೇ ಮನೆಗೆ ಒಂದಿಷ್ಟು ಸುಣ್ಣ ಬಣ್ಣ ಮಾಡಿಸಬೇಕು ಅಂತ ನಾನು ಕೈ ಹಾಕಿದ್ದು; ಅತ ಕೈ ಕೊಟ್ಟದ್ದು.

ಮನೆ ಬಂದ ಮೇಲೆ ವರುಷಕ್ಕೊಮ್ಮೆ ಆದರೂ ಸುಣ್ಣ ಬಣ್ಣ ಬೇಕಲ್ಲೇನ್ರಿ? ಸ್ವಂತ ಮನೆ ಆದರೇನು, ಬಾಡಿಗೆ ಮನೆ ಆದರೇನು? ಬಾಡಿಗೆ ಮನೆ ಆದರೆ ಮಾಲಕರೇ ಪ್ರತಿವರುಷಾನೂ ಸುಣ್ಣ ಹಚ್ಚಿಸಿ ಕೊಡತಾರೆ ಅನ್ನೋ ಗ್ಯಾರಂಟಿ ಎಲ್ಲಿ? ಅಂತಲೇ ನಮ್ಮ ಮನೆಯ ಸುಣ್ಣ ಬಣ್ಣ ನಾವು ಮಾಡಿಸೋಣ ಅಂತ ಮನಸ್ಸು ಮಾಡಿದ್ದು. ಹಾಗೆ ನೋಡಿದರೆ ನಾಗರಪಂಚಮಿಯಿಂದಲೆ ಸುಣ್ಣ ಹಚ್ಚಿಸಬೇಕೆಂದು ಸಣ್ಣಾಗಿ ಸುರು ಮಾಡಿದರು ಮನೆಯಲ್ಲಿ. ನನಗೂ ಒಂದಿಷ್ಟು ಬೇಸರ. ಬೇಸರವೇನು ಒಂದಿಷ್ಟು ಕಾತರ ಎನ್ನಬಹುದು. ಅದರಲ್ಲೂ ನನ್ನ ರೂಂಗೆ ಸುಣ್ಣ ಬಣ್ಣ ಅಂದರೆ ನಾನೇ ಪ್ರತ್ಯಕ್ಷ ನಿಂತು ಮೇಲ್ವಿಚಾರಣೆ ಮಾಡಬೇಕು. ನನ್ನದು ಒಂದಿಷ್ಟು ಛಾನಸತನ ಎನ್ನಿ ಬೇಕಾದರೆ. ಮುಖ್ಯವಾಗಿ ನನ್ನ ಪುಸ್ತಕಗಳು. ಯಾವ ಯಾವ ಪುಸ್ತಕ ಎಲ್ಲಿರಬೇಕೋ ಅಲ್ಲಿಯೆ ಇರಬೇಕು. ನನ್ನ ಚಿರಂಜೀವನಿಗೆ ನನ್ನ ಪುಸ್ತಕಗಳನ್ನು ಜೋಡಿಸಲು ಹೇಳಿದರೆ ಆಯಿತು. ಪುಕ್ಕಟೆಯಾಗಿ ಬಂದ ರಶಿಯಾ ಸಾಹಿತ್ಯವನ್ನೆಲ್ಲಾ ಕೈಗೆಟುಕುವ ರ‍್ಯಾಕ್‌ಗೆ ಹಚ್ಚಿಬಿಡುವ ರಸಿಕತೆ ಅತನದು. ನಾನೊ ಬಲಗೈಗೇ ಎಟುಕುವ ಪುಟ್ಟ ಸೆಲ್ಫ್ ಮೇಲೆ ರಾತ್ರಿ ನಿದ್ದೆ ಬರುವ ಪುಸ್ತಕಗಳನ್ನಿಟ್ಟಿರುತ್ತೇನೆ ಅದಕ್ಕೂ ಮೇಲಿನ ಫಳಿಯ ಮೇಲೆ ಫುಲ್ ಆದಾಗ ಓದುವ ಪುಸ್ತಕ ಇಟ್ಟಿರುತ್ತೇನೆ. ನಗಬೇಡಿ. ನಮ್ಮ ಹಳೆಯ ಪ್ರೊಫೆಸರ್ ಒಬ್ಬರಿಂದ ಕಲಿತುಕೊಂಡ ರೋಗ ಇದು ಅನ್ನಿ, ಬೇಕಾದರೆ. ಅವರು ಟಾಯ್‌ಫಾಯ್ಡ್ ಆದಾಗ ನಾರ್ಮಲ್ ಬಂದ ಮೇಲೆ ವಿಶ್ರಾಂತಿಯ ಕಾಲದಲ್ಲಿ ಓದೋದಕ್ಕೆ ಪುಸ್ತಕಗಳು ಬೇರೆ, ಪ್ರವಾಸದಲ್ಲಿ ಓದುವ ಪುಸ್ತಕಗಳು ಬೇರೆ, ಚಳಿಗಾಲದ ರಜೆಯಲ್ಲಿ ಓದುವ ಶೃಂಗಾರ ಪುಸ್ತಕಗಳು ಬೇರೆ, ಬೇಸಗೆಯ ರಜೆಯಲ್ಲಿ ಓದುವ ವೋಡ್‌ಹೌಸನ ಹಾಸ್ಯ ಕಾದಂಬರಿಗಳು ಬೇರೆ ಹೀಗೆಲ್ಲ ವಿಂಗಡಿಸಿರುತ್ತಿದ್ದರು. 'ಟಾಯ್‌ಫಾಯ್ಡ್ ವಿರಾಮದಲ್ಲಿ ವೋಡಹೌಸ್ ಯಾಕೆ ಓದಬಾರದು? ಅಂತ ನಾನೊಮ್ಮೆ ಪ್ರಶ್ನೆ ಮಾಡಿದಾಗ 'ಹೊಟ್ಟೆ ಹುಣ್ಣಾಗುವಂತೆ ನಗಿಸುವ ಕಾದಂಬರಿಗಳನ್ನು ಓದಿದರೆ ಟಾಯ್‌ಫಾಯ್ಡ್‌ನಲ್ಲಿ ಕರುಳಿಗೆ ಫರಫೋರೆಜ್ ಆಗೋ ಚಾನ್ಸ್ ಇರುತ್ತದೆ' ಎಂದು ಸಯುಕ್ತಿಕ ಕಾರಣ ಕೊಡುತ್ತಿದ್ದರು. ಇರಲಿ, ಅಂತೂ ನನ್ನ ಗುರುಗಳಷ್ಟು ಚಿಕಿತ್ಸಕತನದಿಂದಲ್ಲದಿದ್ದರೂ ಒಂದಿಷ್ಟು ಅನುಕೂಲತೆಗಳ ದೃಷ್ಟಿಯಿಂದ ನಾನು ನನ್ನ ಪುಸ್ತಕಗಳನ್ನೂ ವ್ಯವಸ್ಥಿಸುತ್ತೇನೆ. ರಾತ್ರಿ ದಿಂಬಿಗೆ, ಮಗ್ಗುಲಿಗೆ ನನ್ನ ಮಂಚದ ಗುಂಟ ಕೂಡ ಪುಸ್ತಕಗಳನ್ನು ಹರವಿಕೊಂಡಿರುವಲ್ಲಿ ಒಂದು ಹೆಚ್ಚಿನ ಸಂಭ್ರಮ ನನಗೆ. ನಾನೇ ಒಂದೆಡೆಗೆ ಬರೆದಿದ್ದೇನೆ ಕೂಡ, ಗ್ರಂಥಗಳೆ ನನ್ನ ಪಾಲಿನ 'ಸಾವಿರದ ಸಹಚರಿಯರು'ದ್ದ ಹಾಗೆ ಅಂತ. ಕ್ಷಮಿಸಿ ಯಾವುದೋ ಮಾತು ಹೇಳತ ಎಲ್ಲಿಗೋ ಬಂದು ಬಿಟ್ಟೆ. ಛೆ. ಛೆ. ಎಲ್ಲಿಗೋ ಏನು? ದಾರಿಗೆ ಬಂದಿದ್ದೇನೆ. ಹರಟೆ ಅಂದರೆ ಹೀಗೆ. ದಾರಿಬಿಟ್ಟು ನಡೆದಂತೆ ತೋರಿದರೂ ದಾರಿಗುಂಟಲೆ ಹೆಜ್ಜೆ ಮೂಡಿರುತ್ತದೆ. ಬೇಕಾದರೆ ನಾನಿಟ್ಟ ಹೆಜ್ಜೆಗಳನ್ನು ನೋಡಿ. ಸುಣ್ಣದ ಕೈಗುಂಟವೆ ಬಂದಿದೆ ನನ್ನ ಬಣ್ಣನೆ.



ಹಾ! ಸುಣ್ಣ ಬಳೆಯುವವನು ಸಿಕ್ಕದೆ ನಾಗರ ಪಂಚಮಿಗೆ ಸುಣ್ಣದ ಕೆಲಸ ಆಗಲಿಲ್ಲ ಗಣೇಶ ಚತುರ್ಥಿ ಬಂತು ಸುಣ್ಣದವನೇನೋ ಸಿಕ್ಕಿದ್ದ. ಬಣ್ಣದವನು ಸಿಕ್ಕಲಿಲ್ಲ. ಗಣೇಶ ಚತುರ್ಥಿ ಬಂದ ಮೇಲೆ ಬಣ್ಣ ಇಲ್ಲದಿದ್ದರೆ ಹೇಗೆ? ಆ ಮುಹೂರ್ತಕ ಬರಿ ಸುಣ್ಣದ ಕೈ ಎಳೆಯುವವ. 'ಹೋಗಲಿ ಬಿಡು' ಎಂದೆ. ಆದರೆ ಗಣೇಶನ ಮಟ್ಟಿಗಾದರೂ ಇರಲಿ ಅಂತ ನಮ್ಮ ಚಿರಂಜೀವನೆ ಸುಣ್ಣ ಬಳೆದ 'Very good!' ಎಂದು / ಶಾಬಾಸ್‌ಗಿರಿ ಕೊಟ್ಟೆ ನಾನು.



'ನಮ್ಮ ನಮ್ಮ ಮನೆ ಕೆಲಸ ಹೀಗೆ ನಾವೇ ಮಾಡಿಕೊಳ್ಳಬೇಕು! ಇದರಲ್ಲಿ ಯಾರಪ್ಪನದೇನು ಭೀತಿ? ಇತ್ತ ಉಳಿತಾಯವೂ ಆಯಿತು ಇತ್ತ ನಾನೇ ಮಾಡಿದ್ದು ಅನ್ನೋ ಸ್ವಂತ ಸಂತೋಷವೂ ಆಯಿತು' ಎಂದೆಲ್ಲ ಮೆಚ್ಚುಗೆಯ ಮಳೆ ಸುರಿಸಿದರೆ ನನ್ನ ಚಿರಂಜೀವನಿಗೂ ಮೆಚ್ಚುಗೆಯ ಮೊಳೆ ಸರ್ಗಿಸಿದಂತಾಯಿತೋ ಏನೋ, 'ಹೂಂ! ಇರ್ಲಿ ಬಿಡಪಾ ಸುಣ್ಣದವನು ಸಿಕ್ಕಿಗಲೇ ಇಡಿಯ ಮನಗೆಲ್ಲಾ ಹಚ್ಚಿಸೋಣ' ಎಂದ. ಅಂತೂ ನವರಾತ್ರಿಗಾದರೂ ಸುಣ್ಣಬಣ್ಣ ಮಾಡಿಸೋಣ ಅಂದರೆ ನನಗೆ ಒಂಭತ್ತೂ ದಿನ ನಾಡಹಬ್ಬದ ಅವಾಂತರಗಳು! ನಾನು ಸ್ವತಃ ನಿಲ್ಲದೆ ರೂಮಿನ ಸುಣ್ಣಬಣ್ಣ ಕಾಣುವಂತಿರಲಿಲ್ಲ. ನಾನೇ ನನ್ನ

ಹೆಚ್ಚುಗೆಯ ಡಿಸ್‌ಟೆಂಪರ್ ಬಣ್ಣವನ್ನು ನನ್ನ ಟೆಂಪರ್‌ಗೆ ಸರಿ ಹೋಗುವಂತೆ ಆಯ್ಕೆ ಮಾಡ ಬೇಕು. ಅದನ್ನು ಅರಿಸುವುದಕ್ಕೇ ಆರು ತಾಸು ಬೇಕು ನನಗೆ. ಹೀಗಾಗಿ ನವರಾತ್ರಿಯೂ ದಾಟತು.

ಅಂತೂ ದೀಪಾವಳಿ ಹೊಸ್ತಿಲಿಗೆ, ಅಳಿಯತನದ ಬೇಸೂ ಇಲ್ಲದಿದ್ದರೂ ಮನೆ ಬಂದಿಷ್ಟು ಕಳೆ



ಗೊಂಡು ಗೆಲುವಾಗಿ ಕಾಣಲಿ ಅಂತ ಯೋಚಿಸು ತಿದ್ದುದಕ್ಕೂ ಒಬ್ಬ ನಿರುದ್ಯೋಗಿ ಸುಣ್ಣ ಬಣ್ಣ ಬಳಿಯುವನ ಸಿಕ್ಕ. ಆತ ಸುಣ್ಣ ಬಳಿಯುವು ದಕ್ಕಿಂತಲೂ ನಿಮ್ಮ ಮುಖದ ಮೇಲೆ ಕೈ ಎಳೆ ಯುವುದರಲ್ಲೇ ಹೆಚ್ಚು ಚತುರ ಅಂತ ಹೇಳ ಬೇಕು. ಯಾಕೆಂದರೆ ನನ್ನ ಚಿರಂಜೀವನ ಬತ್ತಾ ಯಕ್ಕೆ ಬಳಗಾಗದ ಸುಣ್ಣ ಬಣ್ಣದ ಕಾರ್ಯಕ್ರ ಮವನ್ನು ಇದು ವರೆಗೂ ಮುಂದೂಡುತ್ತ ಬಂದ ನಾನು ಒಂದೇ ಮಾತಿಗೆ ಈ ಸುಣ್ಣದವನ ಬಣ್ಣದ ಮಾತಿಗೆ ಬಲಿ ಬೀಳಬೇಕೆಂದರೆ? ಒಂದು ದುರ್ಬಲ ಕ್ಷಣ. ಇಲ್ಲದೆ ಇನ್ನೇನು? ಆತ ನನ್ನನ್ನು ಹ್ಯಾಗೆ ಬಲಿ ಹಾಕಿದಾ ಅಂತೀರಿ? ಆತ ಗೋಡೆಯ ಮೇಲೆ ಕೈಯೆಳೆಯುವವನಲ್ಲ ಮೋರೆಯ ಮೇಲೆ ಕೈಯೆಳೆಯುವವನು ಅನ್ನೋದು ಆಗ ಹೊಳೆಯಲಿಲ್ಲ ಸ್ವಾಮಿ ನನಗೆ. ಆತ ಬಣ್ಣ ಬಳಿಯುವುದು ಮನೆಗಲ್ಲ, ಮಾತಿಗೆ ಎಂಬುದು ಪ್ರತ್ಯಕ್ಷಕ್ಕೆ ಬಂದುದು ಆಮೇಲೆ. ಪಶ್ಚಾತ್ ಬುದ್ಧಿಯಿಂದ ಪ್ರಯೋಜನವೇನು? ಆತ ನನ್ನನ್ನು ಹ್ಯಾಗೆ ಮೋಹಿಸಿದ ಅಂತೀರಿ?

"ಸ್ವಾಮಿ, ಇಲ್ಲೇ ಬಾಜು ಮನೆಯ ಸುಣ್ಣ ಹಚ್ಚಲಿಕ್ಕೆ ಬಂದಿದ್ದೆ. ಇವೊತ್ತೊಂದು ದಿನ ಖಾಲಿ ಇದ್ದೀನಿ. ನಾಳೆ ಮತ್ತೆ ಕಲೆಕ್ಟರು. ಡಿ. ಎಸ್. ಪಿ., ವೈಸ್ ಚಾನ್ಸಲರ್‌ಗಳ ಮನೆಗೆ ಹೋಗಬೇಕು. ಪ್ರೊಫೆಸರ್ ಜನಗಳಂತೂ ನನ್ನನ್ನೇ ಕರೀತಾರೆ. ಯಾಕೆಂದರೆ ಯಾವ ಯಾವ ಪುಸ್ತಕಾ ಎಲ್ಲಿ ಎಲ್ಲಿ ಇಟ್ಟಿರುತಾರೋ ಮತ್ತೆ ಸುಣ್ಣ ಆದ ಮೇಲೆ ಅದೇ ಸ್ಥಳದಾಗ ಇಟ್ಟುಕೊಡತೀನಿ. ಯಾವ ಯಾವ ಕನ್ನಡಿ ಯಾವ ಯಾವ ಫೋಟೊ ಯಾವ ಯಾವ ಗೋಡೆಗೆ ಎಲ್ಲೆಲ್ಲಿ ಇರುತ್ತೈತೋ ಅಲ್ಲಲ್ಲಿಗೇ ಸುಣ್ಣ ಬಳಿದು ಆದ ಮೇಲೆ ಹಚ್ಚಿಕೊಡತೀನ್ರಿ. ಒಂದು ಸೂಜಿ ಮೊದಲು ಮಾಡಿಕೊಂಡು ಯಾವ ಯಾವ ಸಾಮಾನು ಎಲ್ಲೆಲ್ಲಿದ್ದುತ್ತೈತೋ ಅಲ್ಲೇ ಇಟ್ಟುಕೊಡತೀನ್ರಿ..."

ನನ್ನನ್ನು ಮೋಹಗೊಳಿಸಿದ್ದು ಈ ಮಾತು. ಮುಖ್ಯವಾಗಿ ನನ್ನ ರೂಮಿನಲ್ಲಿಯ ಪುಸ್ತಕಗ ಳನ್ನು ಯಾವ ಯಾವ ಸ್ಥಳಕ್ಕೆ ಹಚ್ಚಬೇಕೋ ಅಲ್ಲಲ್ಲಿಗೇ ಹಚ್ಚುವ ಭರವಸೆ.

"ಆದ್ದಾಯಿತು. ಸುಣ್ಣ ಹಚ್ಚುವುದಕ್ಕೆ ಮೊದಲು ಸಾಮಾನುಗಳನ್ನು ಎತ್ತಿಡಬೇಕಲ್ಲಪ್ಪ, ಅದನ್ನು ಯಾರು ಮಾಡೋದು? ನನಗೀಗ ಬಿಡುವಿಲ್ಲ—" ಎಂದು ನಾನು ನುಡಿದುದಕ್ಕೆ ಆತನೇನೆನ್ನಬೇಕು? 'ಇಲ್ಲ ರಾಯರೇ, ಸುಣ್ಣ ಬಳಿದ ಮೇಲೆ ಸಾಮಾನುಗಳನ್ನ ಇದ್ದಕಿದ್ದಂತೆ ಹಚ್ಚಿ ಕೊಡುವವರು ಸುಣ್ಣಕ್ಕೆ ಮುಂಚೆ ಎತ್ತಿ ಇಟ್ಟುಕೊಳ್ಳೋದಿಲ್ಲೇನ್ರಿ? ನೀವು ಕಾಳಜಿ ಬಿಡ್ರಿ. ನಿಮಗ ಬಂದಿಷ್ಟೂ ತೊಂದರೆ ಮಾಡೋದಿಲ್ಲ." ಸುಣ್ಣ ಬಳಿಯುವವರು ಹೀಗೂ ಉಂಟೆ? ಸುಣ್ಣಕ್ಕೆ ಮೊದಲು ಸಾಮಾನೆಲ್ಲಾ ಎತ್ತಿಡಬೇಕು, ಮೈತುಂಬ, ಮೈಯೊಳಗೆ ಧೂಳು, ಕಸ. ಸಾಮಾನುಗಳನ್ನೆಲ್ಲ ಹೆಣ ಹೊರೆ ಎತ್ತಿಡಬೇಕು, ಬೆನ್ನಮೂಳೆ ಮುರಿಯೋ ಹಾಗೆ. ಆ ಮೇಲೆ ಸುಣ್ಣ ಡಾಂಬರು ಆದಮೇಲೆ ಎಲ್ಲಾ ಕಪಾಟಗೂ ಪೆಟ್ಟಿಗೆಗಳಿಗೂ, ಬಟ್ಟೆಗಳಿಗೂ ಸುಣ್ಣ ಡಾಂಬರಿನ ಒಕುಳಿ ನಮ್ಮ ಮುಖಕ್ಕೆ ಡಾಂಬರು! ಎರಡು ದಿನ ಆದರೂ ಡಾಂಬರ್ ವಾಸನೆ ಹೋಗುವುದಿಲ್ಲ. ಇಷ್ಟೆಲ್ಲಾ ಸುಣ್ಣ ಸಾರಣೆಗಳ ತಾಪತ್ರಯ ಇರುವಾಗ ಇದನ್ನೆಲ್ಲ ತಪ್ಪಿಸುವ ಈ ಮಾರಾಯನ ಈ ಬಣ್ಣದ ಮಾತಿಗೇ ನಾನು ಬಲಿ ಬಿದ್ದದ್ದು.

'ಆತನಪ್ಪ ಒಟ್ಟು ಗುತ್ತಿಗೆ ಹೇಳಿ ಬಿಡು ಎಷ್ಟು ಕೊಡಬೇಕು' ಎಲ್ಲಾ ಮನೆಗಳ ಕ್ಷೇತ್ರ ನೋಡಿ ಏನೇನೊ ಎಣಿಕೆ ಹಾಕಿ ಹೀಟಿಕೆ ಹಾಕಿದ-

'ನೋಡ್ರಿ ಬೇಕಾದರೆ ದಿನಗೂಲಿ ಮಾಡಿರಿ. ಬೇಕಾದರೆ ಗುತ್ತಿಗೆ ಮಾಡ್ರಿ. ಮೊನ್ನೆ ಇಲ್ಲಿ ಗವರ್ನರ್ ಮನೆಯಲ್ಲಿ ಹಚ್ಚಿ ಬಂದೀನಿ. ಇದಕ್ಕೂ ಸ್ವಲ್ಪ ದೊಡ್ಡ ಮನೆ ನೂರಾಇಪ್ಪತ್ತು ತಗೊಂಡಿದ್ದೀನಿ!

'ಏನೊ ಹೀಗೆಲ್ಲಾ ಹೇಳಿದರೆ, ಬರಾಬರಿ ಒಂದು ಮಾತು ಹೇಳು.'

'ನೋಡ್ರಿ ಡಿಸ್‌ಟೆಂಪರ್ ಹಚ್ಚಿ, ಬಾರ್ಡರ್ ಬಣ್ಣಾ, ಕೆಳಗಡೆ ಡಾಂಬರು, ಅಡಿಗೆಮನೆಗೆ ಮಟ್ಟಿಮಣ್ಣು ಹೀಂಗೆಲ್ಲಾ ಆತು. ನಾಲ್ವತ್ತು ರೂಪಾಯಿ ಕೊಟ್ಟು ಬಿಡ್ರಿ!'

'ಅದು ಸಾಧ್ಯವಿಲ್ಲಪ್ಪ ಬ್ಯಾಡಾ ಬಿಡು!

'ಏನ್ ಸಾರ್! ಡಿಸ್‌ಟೆಂಪರ್ ಡಬ್ಬಿಗಳೇ ನಾಲ್ಕು ಬೇಕು. ಮೂವತ್ತು ರೂಪಾಯಿ ಅದಕ್ಕೆ ಹೋಗತೈತೆ. ಡಿಸ್‌ಟೆಂಪರ್ ಬೇಕಾದರೆ ನೀವೇ ತಂದು ಕೊಡಿ!'

'ನನಗೆ ಯಾವುದೂ ಹಚ್ಚಬ್ಯಾಡ. ಎಲ್ಲಾ ನಿನ್ನದೇ ಒಟ್ಟು ಗುತ್ತಿಗೆ ಹೇಳಿಬಿಡು.'

'ಹಾಂಗಾದರೆ ಡಿಸ್‌ಟೆಂಪರ್ ಬಿಟ್ಟುಬಿಡ್ರಿ ಬರೇ ಸುಣ್ಣಾ ಡಾಂಬರಿಗೆ ಇಪ್ಪತ್ತೈದು ಕೊಡ್ರಿ.' ಅಂತೂ ಕೊನೆಗೆ ನನ್ನ ರೂಂಗೊಂದೇ ಬಣ್ಣ, ಉಳಿದೆಡೆಗೆಲ್ಲಾ ಸುಣ್ಣ. ಎಲ್ಲಾ ಮನೆಗಳಿಗೂ ಡಾಂಬರು ಎಂದು ಮೂವತ್ತು ರೂಪಾಯಿಗೆ ಗೊತ್ತಾಯಿತು.'

'ಸಾಹೇಬರ ಸುಣ್ಣಾ, ಡಾಂಬರು ನಿಮ್ಮ

'ನನ್ನನ್ನು ಶ್ರೀಮಂತನಾಗಿ ಮಾಡುವ ವರ ಕೊಟ್ಟ ದೇವರಿಗೆ ಉತ್ಸನ್ನಕರದಿಂದ ಈ ಸಂಪತ್ತನ್ನು ಮುಕ್ತಗೊಳಿಸುವ ವರ ಕೊಡಲು ಪ್ರಾರ್ಥಿಸುತ್ತಿದ್ದೇನೆ'



ಅವ್ವನ್ನ ಹೊರಗ ತೆಗೀತೀನಿ

ಶ್ರೀ ಕೃಷ್ಣಮೂರ್ತಿ ಪುರಾಣಿಕ

ಒಂದು ವಾರದಿಂದಲೂ ಒಂದೇ ಸವನೆ ಹೊಯ್ಯುತ್ತಿರುವ ಮಳೆ ಪೂರ್ಣ ನಿಂತಿರಲಿಲ್ಲ. ಈಗ ಆಗಾಗ ಸೆಳಕುಗಳು ಬರುತ್ತಿದ್ದವು. ತುಂತುರು ತುಂತುರು ಜಬ್ಬರ ಮಳೆಯಂತೂ ನಿಂತೇ ಇರಲಿಲ್ಲ. ನೀರು ತುಂಬಿಕೊಂಡ ಮೋಡಗಳು ಆಗಸದ ತುಂಬ ಹಳೆಯ ಹಚ್ಚಡದಂತೆ ಆಚ್ಛಾದಿತವಾಗಿದ್ದವು. ಮುಗಿಲಿಗೆ ತೂತುಗಳು ಬಿದ್ದಿರುವಂತೆ ಆಗಾಗ ಈ ಹರಿದ ಹಚ್ಚಡದಿಂದ ನೀರು ಬಸಿಯುತ್ತಿತ್ತು.

ಭಾಗವ್ವನ ಮನೆಯಲ್ಲಿ ಒಂದು ಅಂಗುಲ ನೆಲವೂ ಒಣದಾಗಿರಲಿಲ್ಲ. ಮಣ್ಣು ಮೇಲು ಮುದ್ದಿಯ ಮಾಳಿಗೆಯು ಹಗಲು ಇರುಳು ಒಂದೇ ಸವನೆ ಟಪಟಪ ಸೋರುತ್ತಿತ್ತು. ನೆಲದ ಮೇಲೆ ಬಿದ್ದ ಹನಿಯು ಇಷ್ಟಗಲವಾಗಿ ಬೇರೆ ಹನಿಗಳ ಸಂಪರ್ಕ ಬೆಳೆಸಿಕೊಂಡು ನೆಲವೆಲ್ಲ ಒದ್ದೆಯಾಗಿಬಿಟ್ಟಿತ್ತು. ಮೊದಲೇ ಸವಳು ನೆಲಗಟ್ಟು. ಈ ಮಳೆಯಲ್ಲಿ ಅದು ಜವುಳಾಗಿ ನೀರು ಒಡೆಯುತ್ತಿತ್ತು; ಅದರಲ್ಲಿ ಮನೆ ಸೋರಹತ್ತಿದ ಬಳಿಕಂತೂ ಭಾಗವ್ವನ ಮನೆಯು ನೆಲಗಟ್ಟು ರಾಡಿಯೇ ಆಗಿಬಿಡುತ್ತಿತ್ತು.

ಮೂರು ಕೋಣೆಗಳ, ಒಂದು ಚಿಕ್ಕ ಹಿತ್ತಲದ ಹಿರಿಯರಿಂದ ಬಂದ ಮನೆ ಹಸಿ ಹೆಂಟೆಗಳ ಗೋಡೆ; ಮಣ್ಣು ಮೇಲುಮುದ್ದಿ ಛತ್ತಿಗೆ ಮುಶವಾಳ ಕಟ್ಟಿಗೆಗಳ ತುಂಡುಗಳನ್ನು ಅರಬೇವಿನ ತೊಲೆಗೆ ಜೋಡಿಸಲಾಗಿತ್ತು. ಮಣಿದ ಆ ತುಂಡುಗಳು ಮಣ್ಣನ್ನು ಹಿಡಿಯಲಾರದೆ ಬೇಸಗೆಯಲ್ಲಿ ಎಲ್ಲರಿಗೂ ಧೂಳಿಸ್ನಾನವಾಗುತ್ತಿತ್ತು. ಆದರೂ ಹಿರಿಯರಿಂದ ಬಂದ ಮನೆ ಈ ಅಭಿಮಾನದಿಂದಲೇ ಭಾಗವ್ವನ ಗಂಡ ಅದನ್ನು ಪ್ರತಿವರುಷ ರಿಪೇರಿ ಮಾಡುತ್ತಿದ್ದನು. ಬಿದ್ದ ಗೋಡೆಗಳಿಗೆ ಮಣ್ಣು ಮೆತ್ತುತ್ತಿದ್ದನು. ಮಾಳಿಗೆಯ ಹುಲ್ಲನ್ನು ಕಿತ್ತು ತಿಳುವಾಗಿ ಎರೆ ಮಣ್ಣನ್ನು ಹರವುತ್ತಿದ್ದನು. ಬಿದ್ದ ಕುಂಬಿಗಳಿಗೆ ಅರಲು ಮೆತ್ತಿ ಒಡೆದ 'ಪನ್ನೋಳಿಗೆ'ಗಳನ್ನು ಜೋಡಿಸಿ ಕೂಡಿಸುತ್ತಿದ್ದನು.

ಆದರೆ ಈ ಮಣ್ಣಿನ ಮೆತ್ತಲು ಒಂದು ದೊಡ್ಡ ಮಳೆ ಬಂದೊಡನೆ ಹರಿದು ಹೋಗುತ್ತಿತ್ತು.

"ನೀರೆಲ್ಲ ಒಳಗೇ ಬರುತ್ತದೆ ಭಾಗಿ !"

"ಮತ್ತೆ ಮಹಾರಾಯರದು ಗಚ್ಚಿನ ಮನೆಯೇನು!"

"ಮತ್ತೆ ಮೆತ್ತಬೇಕು "

"ಮೆತ್ತುವದು, ಕಿತ್ತುವದು ಸಾಕಾಗಿದೆ ಜನ್ಮ. ಒಂದೇ ಕೋಣೆಯದೊಂದು ಬಾಡಿಗೆಯ ಹೊಸ ಮನೆಯಲ್ಲಿ ಹೋಗಿ ಬಿಡಬೇಕು ಪಾಪ! ಆರು ತಿಂಗಳ ಕಂದಯ್ಯ ಒಂದೇ ಸವನೆ ನಡುಗುತ್ತಿದೆ."

"ಆದರೆ ಇದು ಹಿರಿಯರ ಮನೆ ಭಾಗಿ!"

"ಮನೆಯ ಹಗ್ಗವೆಂದು ನೇಣು ಹಾಕಿಕೊಳ್ಳಬೇಕೇನು?"

"ನೀನು ಬಿಡು, ನಾನೇ ಮಾಡುತ್ತೇನೆ "

ಎಂದ ಭಾಗವ್ವನ ಗಂಡ ಕೆಸರು ತುಳಿಯುತ್ತಿದ್ದನು. ಮೊದಲು ಪ್ರತಿಭಟಿಸಿದ ಹೆಂಡತಿ ಈಗ ಗಂಡನಿಗೆ ನೆರವಾಗುತ್ತಿದ್ದಳು.

ಭಾಗವ್ವನ ಗಂಡನಿರುವವರೆಗೆ ಈ ಮನೆಯ ಬಿರುಕುಗಳನ್ನು ಮುಚ್ಚಿ ಮಳೆಗಾಲದಲ್ಲಿ ಸೋರದಂತೆ ಮಾಡುತ್ತಿದ್ದನು. ಈಗ ಮೂರು ವರುಷಗಳ ಹಿಂದೆ ಕಣ್ಣು ಮುಚ್ಚಿದ ಬಳಿಕ ಈ ಮನೆಯನ್ನು ನೋಡುವವರೇ ಇಲ್ಲವಾಯಿತು. ದಟ್ಟ ದಾರಿದ್ರ್ಯದಲ್ಲಿ ಮುಳುಗಿದ ಭಾಗವ್ವನಿಗೆ ಎರಡು ಊಟ ಸಿಕ್ಕರೆ ಸಾಕಾಗುತ್ತಿತ್ತು. ಮನೆಯ ದುರಸ್ತಿಯನ್ನೇನು ಮಾಡಿಯಾಳು? ಅದಕ್ಕೆ ಹಣವೆಲ್ಲಿಂದ ಬರಬೇಕು. ಅಂತೆಯೆ ಎರಡು ವರುಷಗಳ ಹಿಂದೆ ಬಿದ್ದ ಹಿಂದಿನ ಕೋಣೆಯನ್ನು ಅದರ ಪಾಡಿಗೆ ಬಿಟ್ಟು ಭಾಗವ್ವ ಮಗನೊಡನೆ ಉಳಿದ ಕೋಣೆಗಳಲ್ಲಿಯೇ ವಾಸಿಸುತ್ತಿದ್ದಳು.

ಇದು ಮನೆಯಾಗಿರಲಿಲ್ಲ. ತಿಳುವಳಿಕೆಯುಳ್ಳ ಕತ್ತೆಗಳು ಕೂಡ ಇಲ್ಲಿ ನಿಲ್ಲಲು ಹಿಂದೆಮುಂದೆ ನೋಡುತ್ತಿದ್ದವು. ಒಂದು ಮಣ್ಣಿನ ಗುಡ್ಡೆಯ ಒಳಗೆ ಕೂತು ಕೊರೆದಂತಿತ್ತು ಭಾಗವ್ವನ ಮನೆ.

ಗಂಡ ಸತ್ತಬಳಿಕ ಮನೆಯ ಬಗ್ಗೆ ಭಾಗವ್ವನ ಪ್ರೀತಿ ಹೆಚ್ಚಾಯಿತು. ಅವಳು ಬೇರೆ ಕೋಣೆಗೆ ಹೋಗುವ ವಿಚಾರವನ್ನು ಬಿಟ್ಟುಕೊಟ್ಟಳು.

ತನ್ನ ಸಾಮಾನುಗಳನ್ನು ಈ ಕೋಣೆಗಳಲ್ಲಿಯೆ ಒಟ್ಟಿದಳು. ತಗಡಿನ ಎರಡು ಡಬ್ಬಿಗಳು, ನಾಲ್ಕು ಬುಟ್ಟಿಗಳು, ಎರಡು ಕಟ್ಟಿಗೆಯ ಮಾರುದ್ದ ಮಣೆಗಳು, ಗೊಂಗಡಿಗಳು, ಅರಿವೆ ಅಂಚಡಿಗಳು, ಅಡಿಗೆಯ ಗಡಿಗೆಗಳು, ಒಂದು ದೊಡ್ಡ ಕಟ್ಟಿಗೆಯ ಸಂದೂಕ, ಮತ್ತೆ ಏನೇನೋ ಅವರ ಆಸ್ತಿ ಎಲ್ಲ ಕಡೆಗೂ ಹ ಹಾರಿದಂತೆ ಕುಳಿತುಕೊಂಡಿದ್ದವು.

ಅವಳ ಪ್ರೀತಿ ಕಂದ ವಾಸಣ್ಣನ ಮೇಲೆ ಕೇಂದ್ರೀಕೃತವಾಗಿತ್ತು. ದುಡಿದ ದುಡ್ಡಿನಲ್ಲಿ ಅವನಿಗೆ ಒಂದು ಮಿಳ್ಳೆ ಹಾಲು ತರುತ್ತಿದ್ದಳು. ಅನ್ನ ಮಾಡಿ ಹಾಕುತ್ತಿದ್ದಳು. ತಾನು ನುಚ್ಚಿನ ಮುದ್ದೆ, ರೊಟ್ಟಿಗಳನ್ನು ತಿಂದು ಅವನಿಗೆ ಅನ್ನ, ಹಾಲು, ಮೊಸರು ಹಾಕುತ್ತಿದ್ದಳು.

ಒಂದೇ ಮಗು. ಅವಳ ಜೀವ ಪ್ರಾಣ.

೧

ಪಡಸಾಲೆಯಲ್ಲಿ ಸೋರಿ ನಿಂತ ನೀರನ್ನು ಹೊರ ಚೆಲ್ಲಿ ಚೆಲ್ಲಿ ಸಾಕಾಗಿ ಭಾಗವ್ವ ಟೊಂಕವನ್ನು ಹಿಡಿದುಕೊಂಡು ಒಂದು ಕ್ಷಣ ನಿಂತಳು. ಅವಳ ಬೆನ್ನು ನೋಯುತ್ತಿತ್ತು. ಸೊಂಟಕ್ಕೆ ಸೂಲಿ ಬರುವ ಅನುಭವದ ವೇದನೆಯಾಗತೊಡಗಿತು.

ಪಡಸಾಲೆಯಲ್ಲಿ ನಿಲ್ಲಲು ಒಣ ಜಾಗವಿರಲಿಲ್ಲ. ಅಲ್ಲಲ್ಲಿ ಕಟ್ಟಿಗೆಯ ಫಳಿಗಳನ್ನು ಇಟ್ಟು ನಡೆದಾಡುವಂತೆ ಮಾಡಿದ್ದಳು ಭಾಗವ್ವ. ಒಳಗಿನ ಕೋಣೆಯು ಒಂದಂಕಣ ಮಾತ್ರ ಸೋರುತ್ತಿರಲಿಲ್ಲ. ಉಳಿದ ಭಾಗವೆಲ್ಲ ರಾಡಿಯೆ. ಒಂದು ಮೂಲೆಯಲ್ಲಿ ತಗ್ಗಾಗಿ ಡವುಡವು ನೀರು ನಿಲ್ಲುತ್ತಿತ್ತು.

ಭಾಗವ್ವಗೆ ಫಕ್ಕನೆ ವಾಸಣ್ಣನ ನೆನಪಾಯಿತು.

"ಪುಟ್ಟಣ್ಣಾ!"

"ಇಲ್ಲಿದ್ದೀನಿ ಅವ್ವಾ!"

"ಏನ ಮಾಡ್ತೀಯೋ ಕಂದಾ!"

"ಒಳಗೆ ಬಾ, ಗೊತ್ತಾಗತದ."

ಭಾಗವ್ವ ಕುತೂಹಲದಿಂದ ಒಳಗೆ ನಡೆದಳು.

ಅಲ್ಲಿ ಅವಳ ಕುಮಾರ ಕಂಠೀರವನು ಒಂದು ಹರಿಯನ್ನು ಕಡಿದು ಆ ಮೂಲೆಯಲ್ಲಿ ನಿಂತ ನೀರನ್ನು ಬಚ್ಚಲಕ್ಕೆ ಸಾಗಿಸುತ್ತಿದ್ದನು. ಈ ಪುಟ್ಟ ಇಂಜನೀಯರನನ್ನು ನೋಡಿ ಭಾಗವ್ವನು ಸಂತೋಷದಿಂದ,

"ಹಾಗೆಲ್ಲಾ ನೀರಾಟಾ ಆಡಬಾರದು ಮಗೂ!"

"ಏನಾಗ್ತದ?"

"ನೆಗಡಿ, ಕೆಮ್ಮು ಬರತದ."

"ಮತ್ತ ನಿನಗ? ನೀನೂ ನೀರಾಗ ಇರತೀಯಲಾ!"

"ನಾ ದೊಡ್ಡಾಕಿ."

"ದೊಡ್ಡವರಿಗೆ ದೊಡ್ಡ ನೆಗಡಿ ಬರತದ. ನಾ ಸಣ್ಣಾವಾ, ನನಗ ಸಣ್ಣ ನೆಗಡಿ ಬರತದ. ಹೌದಲ್ಲೋ ಅವ್ವಾ!"

ಮಗನ ಈ ಮುದ್ದು ಮಾತುಗಳನ್ನು ಕೇಳಿ ಭಾಗವ್ವನಿಗೆ ದಣಿವೆಲ್ಲ ಹಾರಿ ಹೋದಂತಾಯಿತು. ಅವಳು ಅವನನ್ನು ಎತ್ತಿಕೊಂಡು ಮುದ್ದಿಟ್ಟಳು.

ಆ ದಿನ ಬಿಸಿಲು ಬಿದ್ದಿತು. ಬಹಳ ದಿನಗಳಿಂದಲೂ ಕಾಣೆಯಾದ ಸಂತೋಷವದು. ಭಾಗವ್ವನಿಗಂತೂ ಈ ಬಿಸಿಲು ಜೀವಸಂಜೀವಿನಿಯೇ ಆಯಿತು. ಅವಳು ಮನೆಯ ಮುಂದಿನ ಗಿಡದ ಸುತ್ತಲೂ ತನ್ನ ಅರಿವೆ ಅಂಚಡಿಗಳನ್ನು ಒಣಹಾಕತೊಡಗಿದಳು. ಅವಳ ಮಗುವು ತನ್ನ ಪುಟ್ಟ ಕೈಗಳಿಂದ ತಾಯಿಗೆ ನೆರವಾಗತೊಡಗಿತು. ತನ್ನ ಚಡ್ಡಿಗಳನ್ನು, ತೋಯ್ದ ಅಂಗಿಯನ್ನು ಒಣ ಹಾಕತೊಡಗಿತು ಮಗು.

"ಅವ್ವಾ!"

"ಏನು ಪುಟ್ಟಣ್ಣಾ?"

"ಇವನ್ನೆಲ್ಲ ಯಾಕ ಹೀಂಗ ಬಯಲಿಗೆ ಹಾಕತೀದಿ."

"ಒದ್ದಿ ಆಗ್ಯಾವ. ಒಣಗಿಸಬೇಕಲ್ಲಾ ಎಂಥಾ ಛಂದ ಬಿಸಲು ಬಿದ್ದದ ನೋಡು ಬಾಳು!"

"ಅವ್ವಾ!"

"ಹೂಂ!"



"ನಾನೂ ಒದ್ದಿ ಆಗೀನಿ. ನನ್ನೂ ಒಣಗಿಸು."

ಎಂದ ಪುಟ್ಟ ಗಿಡದ ಬುಡಕ್ಕೆ ಅಂಗತ್ತವಾಗಿ ಮಲಗಿಬಿಟ್ಟನು. ತಾಯಿ ಸಂಭ್ರಮದಿಂದ ಅವನನ್ನು ಎತ್ತಿಕೋಡು ಲಟಲಟ ಮುದ್ದು ಕೊಟ್ಟು,

"ಎಂಥಾ ಛಂದ ಮಾತಾಡ್ತದ ಕೂಸು". ಎಂದು ಮುದ್ದಾಡಿದಳು.

ತಾಯಿಗೆ ಮಗನ ಮಾತುಗಳು ಜೇನುಹನಿಯಾಗಿರುತ್ತಿದ್ದವು. ಅವಳ ಬಾಳಹಂದರದಲ್ಲಿ ಬಿಟ್ಟ ಈ ಹೂವನ್ನು ಅವಳು ಅತ್ಯಂತ ಜತನದಿಂದ ಕಾಪಾಡುತ್ತಿದ್ದಳು.

ಥಳಿ ಥಳಿ ಬಿದ್ದ ಬಿಸಲಿನಿಂದ ಭಾಗವ್ವನ ಮನೆಯ ವಸ್ತುಗಳೆಲ್ಲ ಒಣಗಿದವು ಅನೇಕ ದಿನಗಳಿಂದ ಭೂಸಂಗಟ್ಟಿದ ಒಡವೆಗಳು ಈಗ ದುರ್ವಾಸನೆಯನ್ನು ಕಳೆದುಕೊಂಡವು. ಈ ಎರಡು ದಿನ ಭಾಗವ್ವ ಮನೆಯ ಉಸಾಬರಿಯನ್ನೇ ಮಾಡಿದಳು. ತಾನೇ ಸ್ವತಃ ಮಾಳಿಗೆಯನ್ನು ಹತ್ತಿ ಸೊಂಟಮಟ ಬೆಳೆದ ಹುಲ್ಲನ್ನು ಕಿತ್ತಿದಳು. ಪುಟ್ಟನಿಗೆ ಆ ಹಣಜಿಯ ತೆನೆಗಳನ್ನು ತಾಯಿಗೆ ಅಂಟಿಸಿ ನಗುವದೇ ಕೆಲಸವಾಯಿತು.

"ತೆಳಗ ಇಳಿ ಪುಟ್ಟಾ, ಬಿದ್ದಗಿದ್ದಿ"

"ನಾ ಯಾಕ ಬೀಳ್ಲಿ. ಮೊನ್ನೆ ನೀನೇ ಬಿದ್ದಿದ್ದಿ ದೊಡ್ಡವರು ಬೀಳ್ತಾರ ಸಣ್ಣವರು ಬೀಳ್ತಾರೇನು?"

"ಮುನ್ನೆ ಕಾಲ ಜಾರಿತಪಾ!"

"ಮತ್ತೆ ಇಂದ ಕೈ ಜಾರತದ."

"ಸುಮ್ಮ ಹೋಗೋ."

"ನೀ ಸುಮ್ಮ ಹೋಗೋ !"

ತಾಯಿ ನಕ್ಕಳು; ಮಗುವೂ ನಕ್ಕಿತು.

ಆ ಹೊತ್ತಿಗೆ ಎದುರಿಗಿನ ಮನೆಯ ಶ್ರೀಮಂತರ ಮಗು ಶೀನೀ ಆಡುತ್ತ ಅಲ್ಲಿಗೆ ಬಂದನು. ಅವನು ಹಾಕಿಕೊಂಡ ರೇಶಿಮೆ-ಜರದ ಅಂಗಿಯನ್ನು ವಾಸಣ್ಣ ನೋಡಿ ಓಡುತ್ತ ಹೋಗಿ ತನ್ನ ಗೆಳೆಯನ ಅಂಗಿಯನ್ನು ಹಿಡಿದುಕೊಂಡು ಅವ್ವನಿಗೆ ಕೇಳಿದನು.

"ಅವ್ವಾ! ನನಗೂ ಶೀನೀ ಅಂಥಾ ಅಂಗಿ ಹೊಲಿಸು"

"ಅದು ಜರದ ಅಂಗಿ ಮಗಾ! ಸಾವಕಾರ ಹಾಕ್ಕೋಬೇಕು."

"ನಾನೂ ಸಾವಕಾರ ಇದ್ದೀನಿ. ನನಗೂ ಹೊಲಿಸು. ಶೀನೀನೂ ನನ್ನಂಗ ಇದ್ದಾನೆ. ಶೀನಿಗೂ ಎರಡು ಕೈ ಎರಡು ಕಾಲು..."

"ಹೌದು ಬಿಡು ಮಗಾ! ಅವನ ಕೈಯಾಗ ಚಿನ್ನದ ಉಂಗುರ ಅವ. ಕೊಳ್ಳಾಗ ಬಂಗಾರದ ಸರ ಅದ..."

"ಅವರ ಅವ್ವ ಮಾಡಿಸ್ಯಾಳ ನನ್ನವ್ವ ನೀನೂ ಮಾಡಿಸು ಅವ್ವಾ! ನನಗೂ ಶೀನೀ ಅಂಥಾ ಅಂಗೀ ಹೊಲಿಸು"

"ಆಗಲೆಪಾ ಆಗಲಿ. ಹೊಲಿಸತೀನಿ ಆತಲ್ಲೊ."

"ಎಂದ ಹೊಲಿಸತೀದಿ? ಈ ಸದ್ಯಾ ಹೇಳಿಸು"

"ದೀಪಾವಳಿ ಬರಲಿ ಹೊಲಸತೀನಿ."

"ಅಂದ್ರೆ ಆಕಾಶಬುಟ್ಟಿದೂ ಹೌದಲ್ಲೊ"

"ಹೌದು. ನೀ ಗಿಲಗಂಚೀ ಹಂದಿದ್ದೆಲಾ"

"ಹೂಂ ಗೊತ್ತದ. ನನ್ನ ಗಿಲಗಂಚೀ ಚೀಲ ಹಾಗ ಎರಡು ಕಟ್ಟಿರಬ ಗಂಡಾ ಹೇಣ್ತೆ ಬಂದಿದ್ದೊ..."

"ಹಿಂಗೇನು?"

"ಹೌದ ಮತ್ತ. ನೀ ದೀಪಾಳ್ಯಾಗ ಅಂಗಿ ಹೊಲಸ್ತೀ ಹೌದಲ್ಲೊ."

"ಹೂಂ! ಹೂಂ!"

"ಮತ್ತೆ ಅವ್ವಾ! ನೀ ಹೊಲಸ್ತೀ ಬಿಡು. ಆದರ ದೀಪಾವಳೀನೇ ಬಂದಿದ್ದರ..."

"ಬರದೇನ ಮಾಡತದೋ?"

"ಎಲ್ಲಾರಿಗೂ ಬರ್ತದೇನು?"

"ಹೌದು."

"ಹಂಗಾರ ಶೀನೀ ಅಂಥಾ ಅಂಗಿ ಹೊಲಿಸು."

"ದೀಪಾವಳಿ ಅನಕಾ ಬಂಲಿ ಹುಟ್ಟಿಣ್ಣಾ."

"ಅದು ನಾಳೆ ಬಂತೆಂದರ ನಾಳೆ ಹೊಲಿಸಿ ಬಿಡು."

ತಾಯಿ ಮಗನ ಮಾತುಗಳನ್ನು ಸಂಭ್ರಮದಿಂದ ಕೇಳಿದಳು. ಅವಳು ಆಗಲೇ ಉಳಿತಾಯದ ಲೆಕ್ಕ ಹಾಕತೊಡಗಿದಳು. ಯಾವ ಉಳಿತಾಯದಿಂದ ಮಗುವಿಗೆ ಜರದ—ರೇಷಿಮೆಯ ಅಂಗಿ ಸಿಗುವದೋ ಅದನ್ನು ಯೋಚಿಸತೊಡಗಿದಳು.

ಒಂದು ಹೊತ್ತು ಉಪವಾಸ ಬಿದ್ದರೂ ಸರಿ ಮಗನಿಗೆ ಈ ಅಂಗಿ ಹೊಲಿಸಿ ಕೊಡಲೇಬೇಕು.

ಮನೆಯ ಮುಂದಿರುವ ಶೀನೀ ತಾಯಿ ಶಾಂತಾಬಾಯಿಯಿಂದ ಕೂಲಿಯ ಹಣವನ್ನು ಇಸಿದುಕೊಳ್ಳಬಾರದು. ಅದನ್ನೇ ಪುಟ್ಟನ ಅಂಗಿಗೆ ಬಳಸಿಕೊಳ್ಳಬೇಕು. ಶಾಂತಾಬಾಯಿ ಸಜ್ಜನಳು. ಪುಟ್ಟನ ಮೇಲೆ ಅವಳಿಗೆ ಎಂತಹ ಪ್ರೀತಿ!

ಈ ಹಗಲುಗನಸಿನಲ್ಲಿ ಭಾಗವ್ವ ದಿನಗಳನ್ನು ಕಳೆಯತೊಡಗಿದಳು.

೩

ಭಾಗವ್ವನಲ್ಲಿ ಈ ಹಾಳುಮನೆಯ ಬಗ್ಗೆ ಇರುವ ಪ್ರೀತಿ ಅಸದಳವಾಗಿತ್ತು. ಹೆಂಟೆಯ ಮನೆ, ಅಲ್ಲಲ್ಲಿ ಬಿದ್ದ ಗೋಡೆ, ಹೆಗ್ಗಣಗಳ ವಾಸಸ್ಥಾನ. ಇಲ್ಲಣದ ತೋರಣ, ಎಲ್ಲವೂ ಹುಡಿ ಹುಡಿ, ಆದರೂ ಭಾಗವ್ವನಿಗೆ ಇದು ಗಂಡನ ಮನೆಯಾಗಿತ್ತು. ಪರಂಪರೆಯಿಂದ ಬಂದ ಭಾಗ್ಯಲಕ್ಷ್ಮಿಯಾಗಿತ್ತು.

ಪರಂಪರೆಯಿಂದ ಬಂದ ಒಡಕು ಗಡಿಗೆ ಮಡಿಕೆ, ಕಲಗಡಿಗಿ, ಕಲಪರಟಿ, ಮುರುಕ ಸಂದೂಕ, ಭಾಂಡಿಗಳ ಮೇಲೆಯೂ ಅವಳಿಗೆ ಅನುಪಮ ಪ್ರೀತಿಯಿತ್ತು. ಇವೆಲ್ಲ ತನ್ನ ಆಸ್ತಿಗಳೆಂದು ಅವಳು ಅವುಗಳನ್ನು ರಕ್ಷಿಸುತ್ತಿದ್ದಳು. ಹೊರಗೆ ಹೋಗುವಾಗ ಈ ಭದ್ರತೆಗಾಗಿ ಭಾಗವ್ವ ಆರು ಕಾಸಿನ ತಗಡಿನ ಕೀಲೀ ಜಡಿದು ಹೋಗುತ್ತಿದ್ದಳು. ಬಯಲಿನಲ್ಲಿಟ್ಟರೂ ಯಾರೂ ಮುಟ್ಟದ ಅವಳ ಸಾಮಾನುಗಳ ಬಗ್ಗೆ ಅವಳಲ್ಲಿ ಅಷ್ಟು ಗಾಢತೆ ಇತ್ತು.

ಈ ಹೆಂಟೆಯ ಮಣ್ಣಿನ ಆಸ್ತಿಯ ಹಿಪೇರಿಯನ್ನು ಮಗನು ಪ್ರಬುದ್ಧನಾಗಿ ದೊಡ್ಡ ಅಧಿಕಾರಿಯಾಗಿ ಮಾಡಿಸಬೇಕು. ಗಚ್ಚು ಸಿಮೆಂಟುಗಳಿಂದ ಇದು ಶೋಭಿಸಬೇಕು, ಎಂಬುದು ಭಾಗವ್ವನ ಹಗಲುಗನಸಾಗಿತ್ತು.

ಗಂಡನ ಪ್ರೀತಿಯೇ ಇದಕ್ಕೆ ಕಾರಣವಾಗಿತ್ತು. ಭಾಗವ್ವ ಗಂಡನೊಡನೆ ಒಡಹಿನದ ಪ್ರೀತಿಯ ಸಂಸಾರವನ್ನು ಸಂಭ್ರಮದಿಂದಲೇ ಮಾಡಿದ್ದಳು. ಈ ಮುರುಕು ಗುಡಿಸಲಲ್ಲಿಯೇ ಜೀವನವನ್ನು ಸಾಗಿಸಿದ್ದಳು. ಅದ್ದರಿಂದಲೇ ಈ ನೆಲಗಟ್ಟಿನ ಅಂಗುಲಂಗುಲ ನೆಲವು ಕೂಡ ಅವಳಿಗೆ ಪವಿತ್ರವಾಗಿತ್ತು. ಮುತ್ತಾತನಿಂದ ಬಂದ ಈ ಮನೆಯಲ್ಲಿ ಮಗನು ತೂಗುಮಂಚವನ್ನು ಕಟ್ಟಬೇಕೆಂದು ಭಾಗವ್ವ ಅಪೇಕ್ಷಿಸುತ್ತಿದ್ದಳು. ಮಗನನ್ನು ವಿದ್ಯಾವಂತನನ್ನಾಗಿ ಮಾಡಿ ತನ್ನ ಅಪೇಕ್ಷೆಯನ್ನು ಕೈಗೂಡಿಸಿಕೊಳ್ಳಬೇಕೆಂದು



ತನ್ನ ಆಯುಷ್ಯದ ಕೂಡಿಕೆಗಳನ್ನು ಹಾಕಿ ಕೊಂಡಿದ್ದಳು. ಆದುದರಿಂದ ಮಗನಿಗಾಗಿ ದುಡಿಯುವ ಅವಳಿಗೆ ದಣಿವೇ ಆಗುತ್ತಿರಲಿಲ್ಲ.

ಈ ಮಳೆಗಾಲದಲ್ಲಿಯೂ ಶಾಂತಾಬಾಯಿಯ ಮನೆಯಲ್ಲಿ ಮಾಡುವ ಕೆಲಸಗಳು ಅನೇಕವಾಗಿ ರುತ್ತಿದ್ದವು ತಾಯಿ. ಮಗು, ಅಕ್ಷಿಯೇ ಸದಾ ಕಾಲ ಇಬೇಕಾಗುತ್ತಿತ್ತು. ತಾಯಿ ದುಡಿಯು ತ್ತಿದ್ದಳು. ವಾಸಣ್ಣ ಶೀನಿಯೊಡನೆ ಆಡುತ್ತಿದ್ದನು.

"ನನ್ನ ಮಗ್ಗ ಶೀನೀ ಅಂಥಾ ಅಂಗಿ ಬೇಕಾಗೇದ ನೋಡ್ರವಾ ಶಾಂತಕ್ಕ! ಹಗಲೆಲ್ಲಾ ಅದನ್ನ ಮಾತಾಡತಾನ."

"ಅದಕ್ಕೇನು ಹೊಲಿಸಿಕೊಡಲಾ"

"ಎಲ್ಲಿಂದ ಬರತದ್ರವ್ವಾ ಅಷ್ಟು ದುಡ್ಡು.

"ಅದಕ್ಕೆಷ್ಟು ಹತ್ತದ ಸುಟ್ಟಬಲ್ಲಿ. ನಾನೆಲ್ಲಾ ಹೊಲಿಸಿಕೊಡತೇನಿ ಸುಮ್ಮನಿರ್ರಿ. ಶೀನೀ ಅರಿವೆ ಇನ್ನೂ ಉಳಿದದ.

"ಎಂಥಾ ದೊಡ್ಡಮನಸರೇ ನಮ್ಮವ್ವಾ ನಿಮ್ಮದು. ಸಾವಕಾರ ಮನ್ಯಾಗ ಕೂತು ನನ್ನ ಮಗಾ ಸುದ್ದಾ ಸಾವಕಾರಂಗs ಮಾತಾಡತೊಡಗೇದ ನೋಡಿ."

"ಭಾಳಾ ಶ್ಯಾಣ್ಯಾ ಇದ್ದಾನ ಪುಟ್ಟಣ್ಣ!"

ಆ ದಿನ ಭಾಗವ್ವ ಮನೆಗೆ ಹೋಗುವಾಗ ಶಾಂತಕ್ಕ ಅವಳನ್ನು ಪಕ್ಕಕ್ಕೆ ಕರೆದು ಅವಳ ಕೈಯಲ್ಲಿ ಒಂದು ಪೊಟ್ಟಣವನ್ನು ಕೊಟ್ಟು ಹೇಳಿದಳು.

"ಶೀನೀಗೇ ಅಂತ ಹೊಲಿಸಿದ ಈ ಜರದ ಅಂಗಿ ಅವಗ ಹಾಳತಾಗಲಿಲ್ಲ. ಅವನಿಗೆ ಮತ್ತೊಂದು ಹೊಲಿಸಬೇಕಾತು. ಇದು ಪುಟ್ಟಣ್ಣನ ಮೈಗೆ ಬರೋಬ್ಬರ ಆಗತದ ಒಯ್ದು ಬಿಡಿರಿ."

ದೀಪದ ಬೆಳಕಿನಲ್ಲಿ ಶಾಂತಕ್ಕ ಅದನ್ನು ಬಿಚ್ಚಿ ತೋರಿಸಿದಳು. ಅಂಗಿ ಥಳಥಳ ಹೊಳೆಯುತ್ತಿತ್ತು. ಭಾಗವ್ವನ ಕಣ್ಣುಗಳಲ್ಲಿ ಪಳಕ್ಕನೆ ನೀರು ಬಿದ್ದಿತು.

"ನನ್ನ ಪುಟ್ಟಣ್ಣಾಗ ನೀವೇ ತಾಯಿ ನೋಡ್ರಿ. ಇದನ್ನ ನೋಡಿ ಕುಣದಾಡತಾನ ಮಗ! ಅಂದಂಗ ಶಾಂತಕ್ಕ! ನೀವು ಪುಟ್ಟಣ್ಣನ ಕೈಬಿಡಬ್ಯಾಡ್ರವಾ ಶೀನೀಗೂಡ ಅವನ್ನ ಶ್ಯಾಣ್ಯಾ ಮಾಡರಿ ಭಾಳ ಹುಷಾರ ಇದ್ದಾನ ಅವಾ."

"ಅದರ ಕಾಳಜಿ ಬಿಡಿರಿ. ನನಗೇನು ಶೀನಿ ಬ್ಯಾರೇ ಅಲ್ಲ, ಪುಟ್ಟ ಬ್ಯಾರೇ ಅಲ್ಲ. ತಿಳೀತೇನು?

"ದೇವರು ನಿಮ್ಮ ಹೊಟ್ಟಿ ತಣ್ಣಗಿಡಲಿ ತಾಯಿ" ಎನ್ನುತ್ತ ಭಾಗವ್ವ ಆ ಅಂಗಿಯನ್ನು ಆನಂದಭಾಷ್ಪಗಳೊಂದಿಗೆ ಮನೆಗೆ ತಂದು ತನ್ನ ತಗಡಿನ ಸಂದೂಕದಲ್ಲಿ ಭದ್ರವಾಗಿಟ್ಟಳು.

ಪುಟ್ಟಣ್ಣ ದಿನಾಲು ತಾಯಿಗೆ ಕೇಳುತ್ತಿದ್ದನು.

"ದೀಪಾವಳಿ ಇಷ್ಟ್ಯಾಕ ತಡಾ ಮಾಡತದs ಅವ್ವಾ"!

"ತಡಾ ಯಾಕ ಅಗ್ತದ, ಬರೂಹೊತ್ತಿಗೆ ಬಂದೇಬರ್ತದ.

"ಆಗ ನನಗ ಶೀನೀ ಅಂಥಾ ಅಂಗಿ ಹೊಲಸ್ತೀ ಹಾದಲ್ಲೊ."

"ಹೊಲಸ್ತೇನಿ ಬಿಡು."

"ಖರೇಂದ್ರ?"

"ಹೂಂ!"

"ನನ್ನ ಕೊರಳ ಮುಟ್ಟಿ ಆಣೆ ಮಾಡು. ಭೂಮಿ ಮುಟ್ಟಿ, ನೆಲಾ ಮುಟ್ಟಿ ಹೇಳು."

"ಆಣೆ ಚೂರಿ ಬ್ಯಾಡ ಮಗಾ. ಹೊಲಸ್ತೀನಿ ಅಂದ್ರ ಹೊಲಸ್ತೀನಿ."

ಈ ಮಾತನ್ನು ಕೇಳಿ ಪುಟ್ಟನು ಸಂಭ್ರಮದಿಂದ ಕುಣಿದಾಡಿದನು. ಮಗನ ಈ ಸಂತೋಷವನ್ನು ನೋಡಿ ಭಾಗವ್ವನಿಗೆ ಬಹಳ ತೃಪ್ತಿಯಾಯಿತು.

ಅವಳಿಗೂ ದೀಪಾವಳಿ ಎಂದು ಬಂದೀತೋ ಅನ್ನಿಸಿತು. ಮಗನಿಗೆ ಜರದ ಅಂಗಿ ತೊಡಿಸಿ ನೋಡುವ ಆತುರ ಅವಳಲ್ಲಿ ಸಹಸ್ರ ಮಡಿ ಹೆಚ್ಚಾಯಿತು.

ಮತ್ತೆ ಮಳೆ ಪ್ರಾರಂಭವಾಯಿತು. ಸಪ್ಟೆಂಬರ್ ತಿಂಗಳಲ್ಲ ಇಂಥ ಮಳೆ ಎಂದೂ ಆಗಿರಲಿಲ್ಲ. ಹಿಡಿದ ಮಳೆ ಬಿಡದೆ ಒಂದೇ ಸವನೆ ಜಡಿಯತೊಡಗಿತು. ಭಾಗವ್ವನ ಮನೆ ಮತ್ತೆ ಸೋರುವ ಮನೆಯಾಗಿ ಜಂಪೇಟ್ಟು ಹಂಗೋಲು ಹಾಕುವಂತಾಯಿತು. ಮನೆಯಲ್ಲಿ ಒಂದು ಗೇಣು ಕೂಡ ಸ್ಥಳವಿಲ್ಲದ್ದರಿಂದ ಭಾಗವ್ವ ಪುಟ್ಟನೊಂದಿಗೆ ಶಾಂತಕ್ಕನ ಮನೆಯಲ್ಲಿಯೇ ಮಲಗತೊಡಗಿದಳು.

ಭಾಗವ್ವನ ಮನೆ ತಪ ತಪ ಸೋಯುತ್ತಿಂತಿತು. ಮಾಳಿಗೆಯ ಮೇಲೆ ನೀರು ಡವುಡವು ನಿಂತು ಒಳಗೆ ಇಳಿಯತೊಡಗಿತ್ತು. ಆದರೆ ಭಾಗವ್ವನಿಗೆ ಏನೂ ಮಾಡಲು ಬರುವಂತಿರಲಿಲ್ಲ. ಮಳೆ ನಿಂತ ಕೂಡಲೆ ಎಲ್ಲವನ್ನೂ ಪೂರೈಸಬೇಕೆಂದು ನಿರ್ಧರಿಸಿದಳು.



ಮಳೆ ನಿಂತಿತು. ಮತ್ತೆ ಬಿಸಿಲು ಕಾಯ ತೊಡಗಿತು. ಭಾಗವ್ವ ಮತ್ತೆ ಮಗನೊಡನೆ ಮನೆಯಲ್ಲಿ ಮಲಗತೊಡಗಿದಳು.

ಒಳಗಿನ ಕೋಣೆಯ ಮೇಲ್ಛಾವಣಿಯಿಂದ ಬಳ ಬಳ ಮಣ್ಣು ಉದುರತೊಡಗಿತು. ಇಲಿ ಆಡುತ್ತಿರಬೇಕೆಂದು ಅವಳು ನಿಷ್ಕಾಳಜಿ ಮಾಡಿದಳು.

ಶಾಂತಕ್ಕನ ಮನೆಯಲ್ಲಿ ಆ ದಿನ ಬಹಳ ಕೆಲಸವಿದ್ದುದರಿಂದ ರಾತ್ರಿ ಕೆಲವು ಸಮಯವೂ ಭಾಗವ್ವ ಅಲ್ಲಿರಲೇಬೇಕಾಯಿತು. ಕೆಲಸ ಮುಗಿದಾಗ ಮಧ್ಯರಾತ್ರಿಯಾಗಿ ಹೋಗಿತ್ತು. ಅಲ್ಲದೆ ಸಿಟಿ ಸಿಟಿ ಹನಿಯೂ ಬರಲಾರಂಭಿಸಿತು.

"ಪುಟ್ಟ ಮಲಗೇದ ಇಲ್ಲೇ ಮಲಗಲಿಬಿಡು ಭಾಗವ್ವ! ಮುಂಜಾನೆ ಎದ್ದ ಬರತದ. ಈ ಹನಿಯಾಗ ಯಾಕ ಕರಕೊಂಡು ಹೋಗತೀದಿ."

"ಹಾಂಗs ಆಗಲಿ ಬಿಡ್ರಿ. ಪುಟ್ಟನಿಗನಕಾ ಇದೇ ತಾಯಿಮನಿ ಆಗೇದ ಭಾಳ ಮಾಡತೀರಿ ಕಂದಮ್ಮಗ" ಎನ್ನುತ್ತ ಭಾಗವ್ವ ಮನೆಗೆ ನಡೆದಳು

ಮಳೆ ಮತ್ತೆ ಜೋರಾಯಿತು. ಭಾಗವ್ವ ಬಾಗಿಲು ಹಾಕಿಕೊಳ್ಳುವ ಹೊತ್ತಿಗೆ ದೊಡ್ಡ ಹನಿಗಳೇ ಬಂದವು. ಅರ್ಧ ತಾಸಿನಲ್ಲಿಯೇ ಮಳೆ ನಿಂತಿತು.

ಭಾಗವ್ವ ಸೋರುತ್ತಿರುವ ಭಾಗದಿಂದ ಸಾಮಾನುಗಳನ್ನೆಲ್ಲ ಒಣ ಜಾಗಗೆ ಸಾಗಿಸಿದಳು. ಅದರಲ್ಲಿ ಪುಟ್ಟನ ಜರದಂಗಿಯನ್ನಿಟ್ಟುಕೊಂಡ ತಗಡಿನ ಸಂದುಕ ಅಗ್ರಸ್ಥಾನವನ್ನು ಪಡೆದಿತ್ತು. ಅವಳು ಜೀವ ನಿಲ್ಲದೆ ಆ ಅಂಗಿಯನ್ನು ಮತ್ತೊಮ್ಮೆ ನೋಡಬೇಕೆಂದು ಸಂದುಕವನ್ನು ತೆಗೆದು ಕೈಯಲ್ಲಿ ತೆಗೆದುಕೊಂಡಳು. ಅವಳಿಗೆ ಬಹಳ ಸಂತೋಷವಾಯಿತು. ಪುಟ್ಟನು ಆ ಅಂಗಿಯನ್ನು ತೊಟ್ಟುಕೊಂಡು ಓಡಾಡುತ್ತಿರುವಂತೆ ಅವಳಿಗೆ ನ್ನಿಸಿರಬೇಕು. ಎಂಥಲೇ ಸಂಭ್ರಮದಿಂದ ನಕ್ಕಳು.

ಒಳಗಿನ ಕೋಣೆಯಲ್ಲಿ ಧಡ-ಧಡ. ಸರಕ್ಕ ಧಡ್-ಧಡ್... ಸಪ್ಪಳಾಗಿ ಹುಡಿಯುದ್ದಿತು.

ಗೋಡೆ ಛಾವಣಿ ಕುಸಿದವೆಂದು ಹೌಹಾರಿದ ಭಾಗವ್ವ ಚಟ್ಟನೆ ಎದ್ದಳು. ಹುಡಿ ಬಾಯಿಗೆ ಬರಹತ್ತಿತು. ಅವಳು ತಲೆ ಬಾಗಿಲ ಕಡೆಗೆ ತಿರುಗಿದಳು.

ಒಮ್ಮೆಲೇ ಧಡಧಡ......ಸರ...ಸರಕ್ಕ, ಸಪ್ಪಳಾಯಿತು.

ಭಾಗವ್ವ ಕೇಳಿದ್ದು ಇಷ್ಟೇ ಸಪ್ಪಳ.

ಕ್ಷಣಾರ್ಧದಲ್ಲಿ ಭಾಗವ್ವ ತನ್ನ ಗಂಡನ ಮನೆಯ ಮಣ್ಣಿನ ಗುಡ್ಡೆಯಲ್ಲಿ ಹೂತು ಹೋದಳು.

"ಭಾಗವ್ವನ ಮನೆ ಬಿತ್ತು......ಭಾಗವ್ವನ ಮನೆ ಬಿತ್ತು...ಅಯ್ಯೋ...ಭಾಗವ್ವ..." ಎಂದು ಚೀರುತ್ತ ಆ ಗಾಢಾಂಧಕಾರದಲ್ಲಿ ಜನಸಮುದ್ರ ನೆರೆಯಿತು.

"ಇದೇ ಈಗ ಹೋಗಿದ್ಲು......ಪಾಪ...... ಅಯ್ಯಯ್ಯೋ!..."



"ಅವಳ ಕೂಸು!...ಪುಟ್ಟಣ್ಣ!"

ಪುಟ್ಟನಿಗೆ ಆ ಹೊತ್ತಿನಲ್ಲಿ ಏನು ಕನಸಾಯಿತೋ ಹಾಸಿಗೆಯ ಮೇಲೆ ಧಿಗ್ಗನೆ ಎದ್ದು ಕುಳಿತು 'ಅವ್ವಾ'! ಎಂದು ಚೀರಿ ಮತ್ತೆ ಮಲಗಿದನು.

ಶಾಂತಕ್ಕ ಅವನಿಗೆ ಹೊದಿಸಿ ಮತ್ತೆ ಓಡಿ ಬಂದರು. ಬೆಳಕು ಹರಿಯುವವರೆಗೆ ಜನ ಮಣ್ಣು ಅತ್ತ ಇತ್ತ ಸರಿಸಿ ನೋಡಿದರು. ಆದರೆ ಬೆಳಗು ಮುಂಜಾನೆ ಅಪ್ಪಿಗೆಯಲ್ಲಿ ಜರದ ಅಂಗಿಯನ್ನು ಗಪ್ಪನೆ ಹಿಡಿದುಕೊಂಡು ಪ್ರಾಣ ನೀಗಿದ ಭಾಗವ್ವನನ್ನು ನೋಡಿ ಶಾಂತಕ್ಕ ಗೋಳೋ ಎಂದು ಅತ್ತಳು. ಎಲ್ಲರೂ ಅತ್ತರು. ಭಾಗವ್ವನ ಈ ಅನಿರೀಕ್ಷಿತ ಸಾವು ಹಳ್ಳಿಯೇ ಚೀರುವಂತೆ ಮಾಡಿತು.

ಸಾವಿರ ಬಾಯಿ ಚೀರಿದವು. ಸಾವಿರ ಕಣ್ಣು ಸುರಿದವು ಬಾಯಿ ಚೀರಿತು; ಕಣ್ಣು ಅತ್ತಿತು.

ಭಾಗವ್ವನ ಮಣ್ಣಿನ ದೇಹ ಮಣ್ಣನ್ನು

ಕೂಡಿತು. ಮನೆ ಇದ್ದ ಸ್ಥಳದಲ್ಲಿ ಇನ್ನೂ ಮಣ್ಣುಗುಡ್ಡೆ ನಿಂತಿತ್ತು.

ಪುಟ್ಟ ಈ ಮಣ್ಣು ಗುಡ್ಡೆಯನ್ನು ನೋಡುತ್ತ "ಅವ್ವ?...ಅವ್ವ ಎಲ್ಲಿದ್ದಾಳ ಅವ್ವ?" ಎಂದು ಕೇಳುತ್ತಿದ್ದನು

ಈ ದೃಶ್ಯ ಹೃದಯಸ್ಪರ್ಶಿಯಾಗಿತ್ತು.

× × ×

ನಾಲ್ಕು ದಿನಗಳು ಸರಿದವು.

ಆ ದಿನ ಪುಟ್ಟ ಶೀನಿಯನ್ನು ಕೇಳಿದನು

"ಶೀನೀ! ಅವ್ವ ಎಲ್ಲಿ ಹೋಗ್ಯಾಳೋ ಮಾರಾಯಾ! ನನ್ನ ಜೀವ ನೆನಪತದಪಾ!"

"ಈ ಮಣ್ಣುಗುಡ್ಡ್ಯಾಗ ಹೋಗ್ಯಾಳಂತೋ!"

"ಮತ್ತ ಎಂದ ಬರತಾಳ? ದೀಪಾವಳಿಗೆ ಬರತಾಳಲ್ಲಾ ನನಗ ಜರದ ಅಂಗೀ ಹೊಲಸ್ತೀನಂತ ಹೇಳ್ಯಾಳೋ ಮಾರಾಯಾ!"

ಹಿಂದೆ ನಿಂತು ಈ ಮಾತನ್ನು ಕೇಳುತ್ತಿದ್ದ ಶಾಂತಕ್ಕ ಬಾಯಿಯಲ್ಲಿ ಸೆರಗನ್ನು ತುಂಬಿಕೊಂಡು ಕಣ್ಣೀರು ಹಾಕುತ್ತ ಹೋಗಿಬಿಟ್ಟಳು.

ಅಂದು ಚುಮುಚುಮು ನಸುಕಾಗಿತ್ತು. ಹಾಸಿಗೆಯ ಮೇಲೆ ಮಲಗಿದ ಪುಟ್ಟ ಅಲ್ಲಿ ಕಾಣಲಿಲ್ಲ. ಶಾಂತಕ್ಕ ಧಾವಿಸಿ ಹೊರಗೆ ಬಂದಳು

ಪುಟ್ಟಣ್ಣ ಮಣ್ಣುಗುಡ್ಡೆಯ ಕಡೆಗೆ ನಡೆದಿದ್ದ. ಅವನ ಕೈಯಲ್ಲಿ ಒಂದು ಕಟ್ಟಿಗೆಯ ತುಂಡು ಇತ್ತು.

ಪುಟ್ಟನು ಆ ಮಣ್ಣುಗುಡ್ಡೆಯ ಮೇಲೆ ಕುಳಿತು "ಅವ್ವಾ! ಅವ್ವಾ! ಎಲ್ಲಿದ್ದೀಯೆ ಅವ್ವಾ! ಎಂದು ಮುಳು ಮುಳು ಅಳುತ್ತ ತನ್ನ ಆ ಚಿಕ್ಕ ಕಟ್ಟಿಗೆಯ ತುಂಡಿನಿಂದ ಮಣ್ಣನ್ನು ಅಗೆಯತೊಡಗಿದನು

ಶಾಂತಕ್ಕ ಓಡುತ್ತ ಬಂದಳು. ಅವಳ ಬೆನ್ನಹಿಂದೆ ಶೀನಿಯೂ ಅಕ್ಕ ಪಕ್ಕದ ಹೆಣ್ಣುಮಕ್ಕಳೂ ಓಡೋಡಿ ಬಂದರು.

"ಏನ ಮಾಡ್ತೀಯೋ ಪುಟ್ಟಾ?"

"ಅವ್ವನ್ನ ಹೊರಗ ತೆಗೀತೀನಿ."

"ಅಯ್ಯೊ! ನನ್ನ ಕಂದಾ!..."

ಶಾಂತಕ್ಕ ಅವನನ್ನು ಎತ್ತಿಕೊಂಡು ಮೈಗೆ ಮೆತ್ತಿದ ಧೂಳ ಜಾಡಿಸಿದಳು

"ನನ್ನ ಬಿಡು ಅವ್ವಾ!...ನಾ ಅವ್ವನ್ನ ಹೊರಗ ತೆಗೆತೀನಿ."

"ನಾನೇ ನಿನ್ನ ಅವ್ವ ಅಲ್ಲೇನೋ ಪುಟ್ಟಾ!" ಎಂದು ಶಾಂತಕ್ಕ ರೋದನದಲ್ಲಿಯೇ ಹೇಳಿದಳು.

ಪುಟ್ಟನು ಅವಳನ್ನು ನೋಡಿ ತಾನೂ ತುಟಿಯನ್ನು ಮುಂದೆ ಚಾಚಿ ಅಳುತ್ತ "ಅವ್ವ...ಅವ್ವ" ...ಎಂದು...ಶಾಂತಕ್ಕನನ್ನು ತಬ್ಬಿಕೊಂಡನು

ಈ ದೃಶ್ಯ ಹೃದಯಸ್ಪರ್ಶಿಯಾಗಿತ್ತು.



ಅಧ್ಯಕ್ಷ ಪದವಿ

★
★
ಸೇವ ನಮಿರಾಜಮಲ್ಲ
★
★★

ಕಾನೂನಿನ ಪ್ರಕಾರ ದೇಶಕ್ಕೊಬ್ಬ ಅಧ್ಯಕ್ಷ, ಸಂಸ್ಥೆಗೊಬ್ಬ ಅಧ್ಯಕ್ಷನಿರಬಹುದು. ಆದರ, ದೇಶದಲ್ಲಿ ಒಂದಲ್ಲ ಒಂದು ಕಾಲದಲ್ಲಿ ಅಧ್ಯಕ್ಷ ಪಟ್ಟವನ್ನಲಂಕರಿಸಿದವರ ಸಂಖ್ಯೆ ಎಷ್ಟಿರಬಹುದೆಂದು ಊಹಿಸುವುದೂ ಕಷ್ಟ. ಅಂಕೆಸಂಖ್ಯೆಗಳನ್ನು ವಿಶ್ಲೇಷಿಸುವ ತಜ್ಞರೂ ಈ ಸಂಖ್ಯೆಯತ್ತ ಗಮನ ಹರಿಸಿದಂತೆ ತೋರುವುದಿಲ್ಲ. ಭಾರತದ ಏಳು ಲಕ್ಷ ಹಳ್ಳಿಗಳಲ್ಲೂ ಕನಿಷ್ಠ ಪಕ್ಷ ವರ್ಷದಲ್ಲಿ ಸ್ವಾತಂತ್ರ್ಯೋತ್ಸವವನ್ನು ಎರಡು ಬಾರಿ, ಗಾಂಧಿ ಜಯಂತಿಯನ್ನು ಒಂದು ಬಾರಿ ಕಡ್ಡಾಯವಾಗಿ ಆಚರಿಸಲಾಗುತ್ತದೆ. ಇವಲ್ಲದೆ ಪ್ರಾದೇಶಿಕ ನಾಯಕ ನಾಯಕಿ ಜಯಂತಿಗಳು, ವಾರ್ಷಿಕೋತ್ಸವಗಳು ಸಾರ್ವತ್ರಿಕವಾಗಿ ನಡೆಯುತ್ತವೆ. ವಿಶಿಷ್ಟ ಉದ್ದೇಶದ ಸಭೆಗಳೂ ಸಮಾರಂಭಗಳೂ, ಆಗಾಗ ಅಲ್ಲಲ್ಲಿ ಜರುಗದಿಲ್ಲ. ಸಪ್ತಾಹ, ಹಬ್ಬಗಳ ಸಭೆಗಳಿಗೆ ಲೆಕ್ಕವಿಲ್ಲ.

ವಿದ್ಯಾಲಯಗಳಲ್ಲಿ ನಡೆಯುವ ಸಭೆಗಳು ಅನೇಕ. ವಿದ್ಯಾರ್ಥಿಸಂಘಗಳು ಪ್ರತಿಯೊಂದು ವಿದ್ಯಾಸಂಸ್ಥೆಯಲ್ಲೂ ವಿಷಯಕ್ಕೊಂದರಂತೆ ಇರುವುವು. ಶೈಕ್ಷಣಿಕ ವರ್ಷಾರಂಭದಲ್ಲಿ ಇವುಗಳ ಉದ್ಘಾಟನೆಯಾಗಬೇಕು; ವರ್ಷಾಂತ್ಯದಲ್ಲಿ ಇವುಗಳ ಮುಕ್ತಾಯ ಸಭೆಗಳು ಅಥವಾ ವರ್ಧಂತಿಗಳು ಸಂಸ್ಥೆಗಳಲ್ಲಿ ಮುಷ್ಕರವಿಲ್ಲದಿದ್ದರೆ ನಡೆದೇ ತೀರುತ್ತವೆ.

ಇಂಥ ಪ್ರತಿಯೊಂದು ಸಭೆಗೂ ಅಧ್ಯಕ್ಷನೊಬ್ಬನಿಲ್ಲದೆ ನಿರ್ವಾಹವಿಲ್ಲ. ಹೀಗೆ ಅಧ್ಯಕ್ಷರಾಗುವವರು ಚುನಾಯಿತ ವ್ಯಕ್ತಿಯಾಗಬಹುದು, ನಾಮಕರಣ ಮಾಡಲ್ಪಟ್ಟ ವ್ಯಕ್ತಿಯಾಗಬಹುದು. ಅಂತೂ ಕೆಲ ನಿಮಿಷಗಳಿಂದ ಹಿಡಿದು ವರ್ಷಗಳ ತನಕವೂ ಅಧ್ಯಕ್ಷಪಟ್ಟವನ್ನಲಂಕರಿಸುವ ಮಂದಿ ನಿಮ್ಮಲ್ಲಿ ಲಕ್ಷಗಟ್ಟಲೆ ಇದ್ದರೆನ್ನುವುದು ಅಭಿಮಾನದ ವಿಷಯವೇ. ಇವರ ಪೈಕಿ ಅಧಿಕಾರಸ್ಥಾನದ ಅಧ್ಯಕ್ಷರುಗಳಿಗೆ ಪಗಾರ, ತುಟ್ಟಿಭತ್ತೆ, ಪ್ರಯಾಣಭತ್ತೆ ದಿನಭತ್ತೆ, ಪುಕ್ಕಟೆ ವಸತಿ, ಪುಕ್ಕಟೆ ವಾಹನ, ಪುಕ್ಕಟೆ ವೈದ್ಯಕೀಯ ಉಪಚಾರ ಇತ್ಯಾದಿ ಹಲವಾರು ಲಿಖಿತ ಮತ್ತು/ಅಥವಾ ಅಲಿಖಿತ ಸೌಲಭ್ಯಗಳಿವೆ ಉಳಿದವರು ಸಭಾಧ್ಯಕ್ಷರು. ಅಂಥವರಲ್ಲಿ ಕೆಲವರಿಗೆ ಗೌರವಧನ, ಪ್ರಯಾಣಭತ್ತೆ ಇತ್ಯಾದಿ ದೊರೆಯಬಹುದು; ಆದರ ಹೆಚ್ಚಿನ ಸಭಾಧ್ಯಕ್ಷರು ತಮ್ಮ ಕೈಯಿಂದಲೇ ಪ್ರಯಾಣ ಇತ್ಯಾದಿಗಳಿಗೆ ಖರ್ಚುಮಾಡಿ ಪ್ರತಿಫಲವಾಗಿ ಹೆಚ್ಚೆಂದರೆ ಒಂದು ಹೂಹಾರವನ್ನೊ ಗಂಧದ ಚೆಕ್ಕೆಯ ಹಾರವನ್ನೋ ಪಡೆಯಬಹುದು. ಅಧ್ಯಕ್ಷಪಟ್ಟವನ್ನಲಂಕರಿಸುವವರಲ್ಲಿ ಮೇಲೆ ಹೇಳಿದವರ ಪೈಕಿ ಕೊನೆಯ ವರ್ಗದವರೇ ಬಹುಸಂಖ್ಯಾಕರೆನ್ನುವುದರಲ್ಲಿ ಸಂಶಯವಿಲ್ಲ.



ಸಭಾಧ್ಯಕ್ಷರ ಆಯ್ಕೆಯು ಚುನಾವಣೆಯ ಮೂಲಕ ನಡೆಯುವ ಸಂದರ್ಭ ಬಂದರೂ ಅದು ತೆರೆಯಮರೆಯಲ್ಲಿ ನಡೆಯಬಹುದು. ನಡೆಯುವ ಸಭೆ ಎಂಥ ಉದ್ದೇಶದ್ದು; ಅದಕ್ಕೆ ಯಾರು ಅಧ್ಯಕ್ಷರಾಗುವುದು ಯೋಗ್ಯ ಎಂಬ ಬಗ್ಗೆ ಸಭೆಯನ್ನು ಏರ್ಪಡಿಸುವ ಸಮಿತಿ, ಸಂಘ ಮುಂತಾದವುಗಳಲ್ಲಿ ಬಿರುಸಾಗಿ ಇಲ್ಲವೇ ತಣ್ಣಗೆ ಚರ್ಚೆಯಾಗಿ ನಿರ್ಧಾರವಾಗುವುದು. ಮುಂಜಾಗ್ರತೆಯಾಗಿ ಅಧ್ಯಕ್ಷಪದವನ್ನಲಂಕರಿಸಬಲ್ಲವರ ಪಟ್ಟಿಯೂ ಒಮ್ಮೊಮ್ಮೆ ತಯಾರಾಗುವುದುಂಟು. ಆ ಮೇಲೆ ಅಧ್ಯಕ್ಷರ ಬೇಟೆ ನಡೆಯುವುದು. ಸಮಿತಿ ಸೂಚಿಸಿದ ವ್ಯಕ್ತಿಯೇ ಸಿಕ್ಕಿದರೆ ಆಯಿತು. ಒಂದು ವೇಳೆ ಹಾಗೆ ಸಿಗದಿದ್ದರೆ ಮತ್ತೆ ಆಪದ್ಬಾಂಧವ ಅಧ್ಯಕ್ಷರನ್ನು ಹುಡುಕಿ ನಾಮಕರಣ ಮಾಡಬೇಕಾಗುತ್ತದೆ.

ಸಭೆಯಲ್ಲಿ ಕುಳಿತು ಮಾತಾಡಿ ಸಮಾರಂಭಕ್ಕೆ ಶೋಭೆ ತರುವುದನ್ನು ಬಿಟ್ಟು ಬೇರೇನೂ ಪ್ರಯೋಜನವನ್ನು ಮಾಡಲಾರದಂಥವರನ್ನೇ ಹೆಚ್ಚಾಗಿ ಆಪದ್ಬಾಂಧವ ಅಧ್ಯಕ್ಷರನ್ನಾಗಿ ನೇಮಿಸಲಾಗುವುದು. ಸಂಘಟಕರಿಗೂ ಇಂಥ ಅಧ್ಯಕ್ಷರನ್ನು ಅರಿಸಿದುದರಿಂದ ತಮ್ಮ ಸಭೆಗಾಗಿರುವ ಅವಮಾನೆಲ್ಲ ಚೆನ್ನಾಗಿ ಗೊತ್ತು. ಹಾವೇರಿಯಿಂದ ಅಧ್ಯಕ್ಷರಿಗಾಗಿಯೇ ತರಿಸಿದ ಏಲಕ್ಕಿ ಬೀಜದ ಹಾರವನ್ನು ಈ ಆಪದ್ಬಾಂಧವ ಅಧ್ಯಕ್ಷರ ಕೊರಳಿಗೆ ಹಾಕಬೇಕೊ, ಅಥವಾ ಕೇವಲ ಖಾದಿ ನೂಲಿನ ಹಾರವೇ ಸಾಕೋ ಎಂಬ ಬಗ್ಗೆ ಸ್ವಾಭಾವಿಕವಾದ ಅನುಮಾನ ಬರಬಹುದು. ಆದರೆ ಮಾಲಾರ್ಪಣೆಯ ಕಾರ್ಯಕ್ರಮ ಇಂದಿನ

ಸಭೆಗಳಲ್ಲಿ ಹೆಚ್ಚು ಕಡಿಮೆ ಕಡ್ಡಾಯವಾಗಿ ಬಿಟ್ಟಿದೆ ಎನ್ನಬಹುದಾಗಿದೆ.

ನಿಜವಾಗಿ ಉಪಕಾರ ಮಾಡುವ ಆಪದ್ಬಾಂಧವ ಅಧ್ಯಕ್ಷರನ್ನು ತಿರಸ್ಕಾರದಿಂದ ನಡೆಸಿಕೊಳ್ಳುವ ಸಭಾ ಸಂಘಟಕರು ತಾವು ಕೃತಘ್ನರೆಂಬ ಅಪಕೀರ್ತಿಗೆ ಒಳಗಾದೆವೆಂದೂ ಅಂಜುವುದಿಲ್ಲ. ಹೇಗಾದರೂ ಅಧ್ಯಕ್ಷರ ಕುರ್ಚಿ ಖಾಲಿಯಾಗಿರದಂತೆ ನೋಡಿಕೊಳ್ಳುವುದೇ ಅವರ ಮುಖ್ಯೋದ್ದೇಶವಾಗಿದೆ ಎಂದರೂ ಸರಿಯೇ. ಸಭಿಕರನ್ನು ಸ್ವಾಗತಿಸುವ ಭರದಲ್ಲಿ ಇಂಥ ಆಪದ್ಬಾಂಧವ ಅಧ್ಯಕ್ಷರ ಪರಿಚಯ ಮಾಡಿಕೊಡಲೂ ಹಿಂಜರಿಯುವವರಿದ್ದಾರೆ. ಅದರಲ್ಲೂ ಅಂಥ ಅಧ್ಯಕ್ಷರು ಯಾರಾದರೂ ಅಧಿಕಾರೇತರ ವ್ಯಕ್ತಿ, ಶಿಕ್ಷಕ ಮುಂತಾದವರಾಗಿದ್ದರಂತೂ ಅವರಿಗೆ ಕೇವಲ ಅಧ್ಯಕ್ಷಪಟ್ಟದ ಕುರ್ಚಿ ಬಿಸಿ ಮಾಡುವುದೊಂದೇ ಕೆಲಸವಾಗುತ್ತದೆ. ಏಕೆಂದರೆ ಅನೇಕ ಜನರ ಭಾಷಣಗಳಾದ ಬಳಿಕ ಥಟ್ಟನೆ ವಂದನಾರ್ಪಣ ಮಾಡುವ ಕಾರ್ಯದರ್ಶಿಯು ವೇದಿಕೆಯ ಮೇಲೆ ಪ್ರತ್ಯಕ್ಷನಾಗಿ ತನ್ನ ಧನ್ಯವಾದವನ್ನೀಯುವ ಕೆಲಸವನ್ನು ಆರಂಭಿಸಿಬಿಡುತ್ತಾನೆ, ಮಾತ್ರವಲ್ಲ, ಸಮಯಾಭಾವದಿಂದಾಗಿ ಅಧ್ಯಕ್ಷರ ಭಾಷಣವನ್ನು ಈಗ ಲೋಪ ಮಾಡಲಾಗಿದೆಯೆಂದೂ ಸಾರುತ್ತಾನೆ. ಅಂತೂ ಅಧ್ಯಕ್ಷರು ತಮ್ಮ ಮಾಲೆಯೊಡನೆ ಅಲ್ಲಿಂದ ಮೆಲ್ಲಗೆ ಹೊರಬೀಳಬೇಕಾಗುತ್ತದೆ. ಅವರಿಗೆ ತಿಂಡಿ ತೀರ್ಥಗಳ ಸತ್ಕಾರವಂತೂ ನಾಸ್ತಿ.

ಇನ್ನು ಕೆಲವು ಚತುರರಾದ ಸಭಾ ಸಂಘಟಕರಿದ್ದಾರೆ. ಅವರು ತಮ್ಮ ಸಭೆಗೆ ಅಧ್ಯಕ್ಷರನ್ನು ಮೊದಲೇ ಆಯ್ಕೆ ಮಾಡುವುದಿಲ್ಲ. ಸಭಾ ಸಂಘಟನೆಯು ವಂತಿಗೆ ಎತ್ತುವುದರಿಂದ ಆರಂಭವಾಗುತ್ತದೆ. ವಂತಿಗೆ ಕೊಳ್ಳಲು ಹೋಗುವ ಪುಢಾರಿಗಳ ಇಂಗಿತವನ್ನು ಅವರು ಮೊದಲೇ ಅರಿತಿರುತ್ತಾರೆ. ವಂತಿಗೆ ಕೊಡುವವರು ಸಭೆಗೆ ಅಧ್ಯಕ್ಷರು ಯಾರೆಂದು ಪ್ರಶ್ನಿಸಲು ಇಂಥವರನ್ನು ಮಾಡಬೇಕೆಂದಿದ್ದೇವೆ ಎನ್ನುತ್ತಾರೆ ಹಾಗಾದರೆ ತನ್ನನ್ನು ಅಧ್ಯಕ್ಷನನ್ನಾಗಿ ಆರಿಸಿದರೆ ತಾನು ಹೆಚ್ಚು ಹಣ ವಂತಿಗೆ ಕೊಡುತ್ತೇನೆಂಬ ವಾಗ್ದಾನ ಬರುತ್ತದೆ. ಇಂಥವರಿಂದ ಎರಡು ಮೂರು ವಾಗ್ದಾನಗಳನ್ನು ಪಡೆದು ಮತ್ತೆ ಅವರಲ್ಲೇ ಒಬ್ಬರನ್ನು ಉದ್ಘಾಟಕರು, ಇನ್ನೊಬ್ಬರನ್ನು ಅಧ್ಯಕ್ಷರೆಂದು ನಾಮಕರಣ ಮಾಡಬೇಕಾಗುತ್ತದೆ ಸಭೆಯು ಅವಸ್ಥೆ ಏನಾದರೂ ಸಭಾ ವೇದಿಕೆಯಲ್ಲಿ ಹೌಸ್ ಫುಲ್. ಸ್ವಾಗತ ಭಾಷಣ. ಮೂರು ಪರಿಚಯ ಭಾಷಣಗಳು ಮೂರು ಅತಿಥಿಗಳ ಭಾಷಣಗಳು ಧನ್ಯವಾದಗಳ ಸಮರ್ಪಣೆ—ಹೀಗೆ ಭಾಷಣಗಳ ಜಡಿಮಳೆಯ ಕಾರ್ಯಕ್ರಮವಿದೆ ಎಂದು ತಿಳಿದ ಬಳಿಕ ಸಭೆಗೆ ಬರುವವರಾದರೂ. ಭಾಷಣಗಳು ಮುಗಿದ ಮೇಲೆಯೇ ಸಭೆಗೆ ಹೋಗಿ ಮನೋರಂಜನೆಯೇನಾದರೂ ಇದ್ದರೆ ನೋಡೋಣ ಎಂದು ಕಾಯ್ದುಕೊಂಡಿರುವುದೇ ಹೆಚ್ಚು

ಹಳ್ಳಿಪ್ರದೇಶದಿಂದ ಬರುವ ಸಭಾ ಸಂಘಟಕರು ಪಟ್ಟಣದ ಅಧ್ಯಕ್ಷರನ್ನು ಆರಿಸುವಾಗ ವಾಹನಯುಕ್ತ ವ್ಯಕ್ತಿಗಳಿಗೇ ಅಗ್ರ ಪ್ರಾಶಸ್ತ್ಯ ಕೊಡುತ್ತಾರೆ. ಏಕೆಂದರೆ ಅಧ್ಯಕ್ಷರನ್ನು ಒಯ್ಯುವ ಮತ್ತು ಮರಳಿಸುವ ಭಾರ ಅವರಿಗೆ ಇದರಿಂದಾಗಿ ಇಲ್ಲವಾಗುತ್ತದೆ. ಅಧ್ಯಕ್ಷರಿಗೆ ಪ್ರಯಾಣಭತ್ತೆಯನ್ನಂತೂ ಕೊಡುವ ಪ್ರಯಾಸವೇ ಇಲ್ಲ. ಮಾತ್ರವಲ್ಲ, ಅದೇ ಊರಲ್ಲಿ ಇರುವ ಇನ್ನೂ ಒಬ್ಬಿಬ್ಬ ಭಾಷಣಗಾರರನ್ನೋ ಸಂಗೀತಗಾರರನ್ನೋ ಕೀರ್ತನಕಾರರನ್ನೊ ಈ ವಾಹನಾಧಿಪತಿ ಸಭಾಪತಿಗಳೊಡನೆ ಸಹ ಪ್ರಯಾಣ ಮಾಡುವ ವ್ಯವಸ್ಥೆಯನ್ನು ಮಾಡಲೂ ಅನುಕೂಲವಾಗುತ್ತದೆ.

ಇನ್ನು ಕೆಲವು ಸಭಾ ಸಂಘಟಕರು ವಿವಿಧೋದ್ದೇಶಗಳಿಗಾಗಿ ಸಭಾಧ್ಯಕ್ಷರನ್ನು ಹುಡುಕುತ್ತಾರೆ. ಊರಿಗೊಂದು ಸೇತುವೆಯಾಗಬೇಕಿದ್ದರೆ ತತ್ಸಂಬಂಧ ಪ್ರಭಾವವುಳ್ಳ ಮಹನೀಯರನ್ನೇ ತಮ್ಮ ಸಭೆಯಲ್ಲಿ ಅಧ್ಯಕ್ಷರಾಗಲು ಕಾಡುತ್ತಾರೆ.



ಓದುಗರ ಸಂಭ್ರಮ

ತಮ್ಮೂರ ಸಭೆಗೆ ಹೆಚ್ಚಿನ ಸೌಕರ್ಯ- ಸೌಲಭ್ಯಗಳು ದೊರಕಬೇಕಾದವರು ತತ್ಸಂಬಂಧ ಅಧಿಕಾರಿಗಳನ್ನೇ ಹೇಗಾದರೂ ಅಧ್ಯಕ್ಷಪದಕ್ಕಾಗಿ ತಮ್ಮೂರಿಗೆ ಬರಮಾಡುತ್ತಾರೆ ತಮ್ಮೂರಿನ ಹಳೆಯ ದೇವಾಲಯ ಜೀರ್ಣೋದ್ಧಾರವಾಗಬೇಕೆಂದಿರುವವರು ಆ ಕೆಲಸಕ್ಕೆ ಸಂಬಂಧಿಸಿದವರನ್ನೇ ಆಮಂತ್ರಿಸಿ ಅವರ ಮನ ಒಲಿಸಿಕೊಳ್ಳುತ್ತಾರೆ ಇನ್ನು ಕೆಲವರು ವೈಯಕ್ತಿಕ ಲಾಭದಾಯಕ ಕೆಲಸವಾಗಬೇಕಾದವರು ಸಂಬಂಧಪಟ್ಟವರನ್ನು ಸಭಾಧ್ಯಕ್ಷ ಪದವಿಯ ಪ್ರಲೋಭನಕ್ಕೆ ಸಿಕ್ಕಿಸಿ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುತ್ತಾರೆ ಮತ್ತೆ ಕೆಲವರು ತಮ್ಮ ಗುರುಶಿಷ್ಯ ಅಥವಾ ಅಧಿಕಾರಿ ನೌಕರ ಸಂಬಂಧದ ಅನ್ಯೋನ್ಯತೆಯನ್ನು ಕುದುರಿಸಲಿಕ್ಕಾಗಿ ತಮ್ಮ ಗುರುಗಳನ್ನೇ ಅಧಿಕಾರಿಗಳನ್ನೇ ಸಭೆಗೆ ಅಧ್ಯಕ್ಷರನ್ನಾಗಿ ಆಮಂತ್ರಿಸಿ ಅವರಿಗೆ ತಮ್ಮಿಂದ ಸಲ್ಲಲಿರುವ ಸಕಲ ಋಣಭಾರವನ್ನು ಸ್ವಾಗತ ಭಾಷಣ ಅಥವಾ ಪರಿಚಯ ಭಾಷಣ ವಂದನಾರ್ಪಣೆಯ ಮೂಲಕ ಸಲ್ಲಿಸಿಬಿಡುತ್ತಾರೆ. ಅಂತೂ ಈ ಸಭಾಧ್ಯಕ್ಷ ಪದವಿಯ ವ್ಯಾಮೋಹಕ್ಕೆ ಒಳಗಾಗದ ಸಂನ್ಯಾಸಿಗಳು ಕೂಡಾ ಇಂದು ಇಲ್ಲವೆಂದರೆ ಅತಿಶಯವಾಗಲಾರದು.

ಕೆಲವರಿಗೆ ತಮ್ಮ ಸಂಘ ಸಂಸ್ಥೆಯ ಕುರಿತು ಮತ್ತು ತಮ್ಮ ಕುರಿತು ಪ್ರಚಾರ ಲಾಭ ಪಡೆಯುವ ಆಕಾಂಕ್ಷೆಯಿರುತ್ತದೆ ಅಂಥವರು ಪತ್ರಿಕಾ ವರದಿಗಾರರ ಮೊರೆಹೋಗುತ್ತಾರೆ. ಆ ವರದಿಗಾರರಿಗೆ ವಾಹನಾದಿ ಸೌಲಭ್ಯಗಳನ್ನು ಒದಗಿಸಿ, ಬೇಕಾದಷ್ಟು ಸತ್ಕಾರವನ್ನು ಮಾಡುತ್ತಾರೆ. ಇನ್ನೂ ಕೆಲವರು ಇದಕ್ಕಿಂತಲೂ ಮುಂದೆ ಹೋಗಿ ಸಾಕ್ಷಾತ್ ಪತ್ರಿಕಾ ಸಂಪಾದಕರನ್ನೋ ಸಹ ಸಂಪಾದಕರನ್ನೊ ತಮ್ಮ ಸಭೆಗೆ ಅಧ್ಯಕ್ಷರನ್ನಾಗಿ ಆರಿಸುತ್ತಾರೆ. ಇಂಥ ಸಭೆಗಳ ವರದಿಗಳು ಸಂಬಂಧಪಟ್ಟ ಸಂಪಾದಕರ ಪತ್ರಿಕೆಯಲ್ಲಾದರೂ ದಪ್ಪಕ್ಷರಗಳಿಂದ, ಸಚಿತ್ರವಾಗಿ ಪ್ರಕಟವಾಗದಿರುವುದು ವಿರಳ. ಕೆಲವೊಮ್ಮೆ ಆ ಸಭೆಗೆ ಸಂಬಂಧಿಸಿದ ಟೀಕೆ ಟಿಪ್ಪಣಿ ಅಥವಾ ಸಂಪಾದಕೀಯ ಬರಹವೂ ಪ್ರಕಟವಾಗಿ ಸಭಾ ಸಂಘಟಕರು ಊಹಿಸಿದ್ದಕ್ಕಿಂತಲೂ ಹೆಚ್ಚಿನ ಉದ್ದೇಶಗಳು ಕೈಗೂಡುವ ಸಂಭವವೂ ಇಲ್ಲದಿಲ್ಲ.

ಇನ್ನು ಕೆಲವು ಕೇವಲ ಸಭೆಗಳನ್ನು ನಡೆಸಲಿಕ್ಕಾಗಿಯೇ ಇರುವ ಸಂಸ್ಥೆಗಳೂ ಇವೆ. ತಿಂಗಳಿಗೊಂದರಂತೆ ಇವುಗಳ ಬಹಿರಂಗ ಸಭೆ ನಡೆದರೂ ವರ್ಷಕ್ಕೆ ಹನ್ನೆರಡು ಮಂದಿ ಅಧ್ಯಕ್ಷರನ್ನು ಇವು ಹುಡುಕಬೇಕಾಗುತ್ತದೆ. ಹೀಗಿರುವಾಗ ಆಯಾ ಪ್ರದೇಶದ ಅಧಿಕಾರಿ ವರ್ಗದವರು ಇವುಗಳ ಅಧ್ಯಕ್ಷ ಪಟ್ಟಕ್ಕೆ ಬಲಿಬೀಳದಿರುವುದು ವಿರಳ. ದೇಶದಲ್ಲಿ ಸಾವಿರಾರು ಇಂಥ ಸಂಸ್ಥೆಗಳಿರುವುದರಿಂದ ಇವುಗಳು ವರ್ಷವೊಂದರಲ್ಲಿ ಆರಿಸುವ ಅಧ್ಯಕ್ಷರ ಸಂಖ್ಯೆ ಕೆಲವು ಲಕ್ಷಗಳಾಗಬಹುದು. ಹೀಗಾಗಿ ಅಧ್ಯಕ್ಷನಾಗುವವನಿಗೆ ಇಂಥಿಂಥ ವಿಶಿಷ್ಟವಾದ ಅರ್ಹತೆಗಳು ಬೇಕೇಬೇಕು ಎಂಬ ನಿಯಮಗಳು ಇಂದು ತುಂಬಾ ಸಡಿಲಾಗಿ ಹೋಗಿವೆ.

ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಬರುವಂತೆ ಅಧ್ಯಕ್ಷರನ್ನು ಆಮಂತ್ರಿಸುವ ಕಾಲ ನಿಶಿಸುತ್ತಿದೆ. ಏಕೆಂದರೆ ಅಧ್ಯಕ್ಷಪಟ್ಟ ಸಭೆಗಳಿಗೆ ಈಗೀಗ ಕೇವಲ ಔಪಚಾರಿಕ ಅಥವಾ ನಿಮಿತ್ತಮಾತ್ರವಾಗಿ ಉಳಿದಿದೆ. ಆದರೂ ಒಂದು ಸಭೆಗೆ ಒಬ್ಬ ಅಧ್ಯಕ್ಷ ಬೇಕೇ ಬೇಕು ಎಂಬ ಈ ಕಡ್ಡಾಯದ ಅಲಿಖಿತ ನಿಯಮ ಇನ್ನು ಎಷ್ಟು ಕಾಲ ಆಚರಣೆಯಲ್ಲಿರಬಹುದೆಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಅಧ್ಯಕ್ಷರಾಗಬೇಕೆಂಬ ಅಪೇಕ್ಷೆಯುಳ್ಳವರು ತಮಗೆ ಬರುವ ಆಹ್ವಾನಗಳನ್ನು ತಿರಸ್ಕರಿಸಬಾರದು ಮಾತ್ರವಲ್ಲ, ಏನಕೇನ ಪ್ರಕಾರೇಣ ಅಂಥ ಆಹ್ವಾನಗಳು ಬರುವಂತೆ ಪ್ರೇರೇಪಿಸುವ ಕಾಲ ಈಗ ಪ್ರಾಪ್ತವಾಗಿದೆ.

ದೀಪಾವಳಿಯ ಶುಭಾಶಯಗಳು!



ಸತ್ಕಾರ

ಮಾರುತಿಗಲ್ಲಿ, ಬೆಳಗಾವಿ

ಫೋನ್: 545

ಬೆಳಗಾವಿಯಲ್ಲಿ ಕೇಂದ್ರಸ್ಥಳದಲ್ಲಿ ಹಾಗೂ ಉಳಿದುಕೊಳ್ಳಲು ಎಲ್ಲ ಬಗೆಯ ಅತ್ಯಾಧುನಿಕ ಸಲಕರಣೆಗಳಿಂದ ಸುಸಜ್ಜಿತವಾದ ಪರಿಪೂರ್ಣವಾದ ಭವ್ಯ ಹೊಟೆಲ್ ....

ಸ್ವಚ್ಛತೆ, ನಮ್ರತೆ, ಹಾಗೂ ತ್ವರಿತಸೇವೆ ಇವು ನಮ್ಮ ವೈಶಿಷ್ಟ್ಯ.







ಎಲ್ಲರೂ ಅದೃಶ್ಯ ಮಹಾಶಕ್ತಿಯೊಂದನ್ನು ದೇವರೆಂದು ತಿಳಿದು ಪೂಜಿಸುತ್ತಾರೆ. ಆದರೆ ನಾನು ನಮ್ಮನ್ನು ಹೆತ್ತು, ಹೊತ್ತು ಬೆಳೆಸಿದ ಮಾತೆಯನ್ನು ಆ ಅದೃಶ್ಯ ಶಕ್ತಿಯ ಪ್ರತ್ಯಕ್ಷ ರೂಪವೆಂದು ಬಗೆಯುತ್ತೇನೆ. ಆದ್ದರಿಂದ ದೇವರ ಪ್ರತಿನಿಧಿಯೆನಿಸಿದ, ಪ್ರತಿಯೊಬ್ಬರಿಗೂ ಪೂಜನೀಯಳಾದ, ಪರಮಪಾವನೆಯಾದ, ಅಪಾರ ವಾತ್ಸಲ್ಯಮಯಿಯಾದ ಮಾತೆಯನ್ನೇ ನನ್ನ ದೇವರೆಂದು ತಿಳಿಯುತ್ತೇನೆ.

ಹೆಣ್ಣು ತನ್ನ ಜೀವನದಲ್ಲಿ ನಾನಾ ರೂಪಗಳನ್ನು ಧಾರಣ ಮಾಡುತ್ತಾಳೆ. ಮಗಳಾಗಿ ತಂದೆ ತಾಯಿಗಳಿಗೆ ಕನ್ಯಾದಾನ ಮಾಡುವ



ಅವಕಾಶವನ್ನು ಕಲ್ಪಿಸಿಕೊಡುತ್ತಾಳೆ. ಸಹೋದರಿಯಾಗಿ ಸೋದರನ ಜೊತೆ ನಲುಮೆಯಿಂದ ಇರುತ್ತಾಳೆ. ಸತಿಯಾಗಿ ಒಬ್ಬ ಪುರುಷನ ಬಾಳನ್ನು ಬೆಳಗುತ್ತಾಳೆ. "ಗೃಹಿಣೀ ಗೃಹಮ್ ಉಚ್ಯತೆ" ಎಂಬಂತೆ ಹೆಣ್ಣು ಗೃಹಿಣಿಯಾಗಿ ಮನೆತನದ ಹೊಣೆಗಾರಿಕೆಯನ್ನು ವಹಿಸಿಕೊಳ್ಳುತ್ತಾಳೆ. ತಾಯಿಯಾಗಿ ತನ್ನ ವಾತ್ಸಲ್ಯವನ್ನೆಲ್ಲ ಮಗು

ವಿಗೆ ಧಾರೆಯೆರೆಯುತ್ತಾಳೆ, ಅಜ್ಜಿಯಾಗಿ ಮೊಮ್ಮಕ್ಕಳಿಗೆ ಕಥೆ ಹೇಳುತ್ತಾಳೆ. ಹೆಣ್ಣು ತಾಯ್ತನ ತನ್ನ ಪರಮಭಾಗ್ಯವೆಂದು ಭಾವಿಸಿರುತ್ತಾಳೆ.

"ಮಾತೃ ದೇವೋ ಭವ" ಎಂದು ವೇದವೇ ಹೇಳುತ್ತಿದೆ. ಇನ್ನು ನಾನು ಹೇಳುವದೇನು ಮಹಾ? ವೇದವು ತಂದೆಗಿಂತಲೂ ತಾಯಿಗೆ ಹೆಚ್ಚಿನ ಪ್ರಾಮುಖ್ಯವನ್ನಿತ್ತಿದೆ. ಆದರೆ ತಾಯಿ ದೇವರೆಂಬುದು ವೇದವಾಕ್ಯವೆಂದು ನಾನು ಅವಳನ್ನು ದೇವರೆಂದುಕೊಂಡಿಲ್ಲ. ಆದರೆ ಅವಳ ಶ್ರೇಷ್ಠತೆ,

ಮಗುವಿಗಾಗಿ ತಾಯಿ ಮಾಡುವ ತ್ಯಾಗ ಅಪಾರವಾದುದು. ಒಂಭತ್ತು ತಿಂಗಳು ಹೊಟ್ಟೆಯಲ್ಲಿ ಹೊತ್ತು, ಹೆತ್ತು ಲೋಕಕ್ಕೊಬ್ಬ ವ್ಯಕ್ತಿಯನ್ನು ನೀಡುವದರಲ್ಲಿ ಅವಳು ಪುನರ್ಜನ್ಮ ಪಡೆದಂತಾಗುವದು. ಮಗುವಿಗಾಗಿ ಎಷ್ಟೇ ಕಷ್ಟ ಬಂದರೂ ಸಹಿಸಿಕೊಂಡು, ಮಗು ಬೆಟ್ಟದಷ್ಟು ಕಷ್ಟ ನೀಡಿದರೂ ಗಟ್ಟಿಮನದಿಂದ ತಾಳಿಕೊಂಡು ಹೋಗುವದರಲ್ಲಿಯೇ ತಾಯಿಯ ಮಹಾನತೆ ಅಡಗಿದೆ. ಮಗನು ಎಷ್ಟೇ ಕಷ್ಟ ನೀಡಿದರೂ ಯಾವದೇ, ಎಂಥದೇ ಕೆಲಸ ಮಾಡಿದರೂ ಅವನನ್ನು ತಿರಸ್ಕರಿಸದೇ ವಾತ್ಸಲ್ಯವನ್ನೇ ತೋರಿ ತಾಯಿ "ಹೆತ್ತ ಕರುಳಿಗೆ ನಾಚಿಕೆಯಿಲ್ಲ." ಎಂಬ ನಾಣ್ಣುಡಿಯನ್ನು ಸಿದ್ಧಮಾಡಿ ತೋರಿಸುವಳು.

ತಾಯ್ತಂದೆಗಳಿಗಿಂತಲೂ, ಪ್ರೇಮದ ಪತಿಗಿಂತಲೂ ಮಾಜಿಕ್ಕದ ಹರಳಿಗಿಂತಲೂ ಅವಳಿಗೆ ಮಗನೇ ಹೆಚ್ಚು. ದೇವರ ಪ್ರತಿನಿಧಿಯಾದ, ಅಪಾರ ತ್ಯಾಗಮಯಿಯೂ ವಾತ್ಸಲ್ಯಮಯಿಯೂ ಸಹನಶೀಲೆಯೂ



ಮಾತೃದೇವೋಭವ

ಮಹತ್ವವನ್ನು ಅರಿತುಕೊಂಡು ಅವಳನ್ನು ನನ್ನ ದೇವರೆಂದು ಒಪ್ಪಿಕೊಂಡಿದ್ದೇನೆ.

ಮನೆಯು ಮೊದಲ ಪಾಠಶಾಲೆ. ಅಲ್ಲಿರುವ ದೇವತಾ ಸದೃಶಳಾದ ತಾಯಿಯೇ ಮೊದಲ ಗುರುವು. ಮಗುವಿನ ಬಾಳಭವಿಷ್ಯ ಬರೆಯುವ ಲೇಖನಿಯೂ ಅವಳಾಗಿದ್ದಾಳೆ. "ಮೂರು ವರ್ಷದ ಗುಣ, ನೂರು ವರ್ಷದ ವರೆಗೆ" ಎಂಬಂತೆ ಮಗು ತನ್ನ ಮೂರನೇ ವಯಸ್ಸಿನಲ್ಲಿ ತಾಯಿಯಿಂದ ಕಲಿತ ಒಳ್ಳೆಯ, ಅಥವಾ ಕೆಟ್ಟ ಗುಣಗಳನ್ನೇ ಮುಂದಕ್ಕೆ ಬೆಳೆಸಿಕೊಂಡು ಬರುವದು. ಹೀಗೆ ಮಗುವಿನ ಒಳಿತು, ಕೆಡಕು ಎರಡೂ ತಾಯಿಯ ಕೈಯಲ್ಲಿಯೇ ಇವೆ. ಆದರೆ ಯಾವ ತಾಯಿಯೂ ತನ್ನ ಮಗುವಿಗೆ ಕೆಡಕನ್ನುಂಟು ಮಾಡಲಾರಳು. ಅವಳು ಮಗುವಿಗೆ ಒಳಿತನ್ನೇ ಹೇಳಿ, ಸದ್ಗುಣಗಳನ್ನು ಮಗುವಿನಲ್ಲಿ ಮೂಡಿಸಿ, ಮಗುವಿಗೆ ಉತ್ತಮ ಸಂಸ್ಕಾರ ನೀಡಿ, ತನ್ನ ಮಗು ಸಮಾಜದಲ್ಲಿ ಘನತೆಯನ್ನು ಸಂಪಾದಿಸುವಂತೆ ಪ್ರೋತ್ಸಾಹ ನೀಡುವಳು.

ಶಾಲೆಯಿಂದ ಮಗ ಬಳಲಿ ಬಂದಾಗ ತನ್ನ ಕಂದ ಬಳಲಿ ಬಂದನೆಂದು ಬೇಗ ಮಮತೆಯಿಂದ ನಗುತ್ತ, ಸ್ವಾಗತಿಸುತ್ತ, ಮಗುವಿನ ಮೇಲೆ ಮೃದುಮಾತುಗಳ ಅಮೃತ ವರ್ಷವನ್ನೇ ಸುರಿಸಿ ಅವನ ದಣಿದ ಮನಕ್ಕೆ ತಾಯಿ ತಂಪನ್ನೀಯುವಳು.


"ಹೆತ್ತವರಿಗೆ ಹೆಗ್ಗಣ ಮುದ್ದು" ಎಂಬಂತೆ ತಾಯಿಗೆ ತನ್ನ ಮಗು ಹೇಗಿದ್ದರೂ ಅದು ಸುಂದರವೇ ಆಗಿರುವದು. ಜನಪದ ಸಾಹಿತ್ಯ ಹೇಳುವಂತೆ "ಅಳುವ ಕಂದನ ತುಟಿಯು ಹವಳದ ಕುಡಿಯಂಗ, ಕುಡಿಹುಬ್ಬು ಬೇವಿನೆಸಳಂಗ| ಕಣ್ಣೋಟ ಶಿವನ ಕೈಯಲಗು ಹೊಳೆದಂಗ." ಎಂಬಂತೆ ತಾಯಿಗೆ ತನ್ನ ಮಗು ಅತ್ತರೂ ಚಂದ, ನಕ್ಕರೂ ಚಂದ.

ಹೀಗೆ ತಾಯಿ ತನ್ನ ಮಗನನ್ನು ಯಾವಾಗಲೂ ಒಂದೇ ವಾತ್ಸಲ್ಯದ ದೃಷ್ಟಿಯಿಂದ ನೋಡುವಳು. ಅಕ್ಕರೆಯ

ಆದ ತಾಯಿ ಯಾವಾಗಲೂ "ಎನ್ನ ಚಿನ್ನ ತಣ್ಣಗಿರಲಿ, ಎನ್ನ ರನ್ನ ಸುಖವ ಪಡೆಯಲಿ, ಎನ್ನ ಮುದ್ದು ಕಂದ ಕೀರ್ತಿವಂತನಾಗಿ ಬಾಳಲಿ" ಎಂದೇ ಆಶಿಸುವಳು.

ಈ ಲೋಕದಲ್ಲಿ ತಾಯಿಯೆಂಬುದು ಅಮೂಲ್ಯವಾದ ವಸ್ತು. ಈ ವಸ್ತುವನ್ನು ಕಳೆದುಕೊಂಡವರು ಅದೃಷ್ಟಹೀನರು. ಈ ತಾಯಿಯ ಹಿರಿಮೆ ಅವರ್ಣನೀಯವಾದದ್ದು. "The hand that rocks the cradle, Rules the world" ಎಂಬಂತೆ ಹೆಣ್ಣು ತನ್ನ ಅಪಾರವಾದ ಮಹಿಮೆಯನ್ನು ತಾಯಿಯ ರೂಪದಲ್ಲಿ ಜಗತ್ತಿಗೆ ತೋರಿಸಿಕೊಟ್ಟಿದ್ದಾಳೆ.


—ಕು| ವಿದ್ಯಾ ಪಾಟೀಲ



ದೇವನಲ್ಲವೆ?

೧

ಏರಿ ಸೂರ್ಯ ಮುಳುಗುವಂತೆ
ಇರುಳು ಹಗಲು ಆಗುವಂತೆ
ತಾರೆ ತಪ್ಪಿ ಸರಿಯದಂತೆ,
ಕರುಣಿಪವನು ದೇವನಲ್ಲವೆ?



೨

ಕಡಲು ಕರೆಯ ನುಂಗದಂತೆ,
ಸುಡುವ ಸೂರ್ಯ ಎರಗದಂತೆ,
ಮೋಡ ಬೆಂಕಿ ಸುರಿಸದಂತೆ,
ಮಾಡುವವನು ದೇವನಲ್ಲವೆ?


೩

ಬಾನು ಕಳಚಿ ಬೀಳದಂತೆ
ಮೀನು ಮೊಸಳೆಯಾಗದಂತೆ
ಧೇನು ವ್ಯಾಘ್ರವಾಗದಂತೆ
ಮಾನದಂಡಧಾರಿ ದೇವನಲ್ಲವೆ?



೪

ಕಂಪು, ತಂಪು, ಇಂಪು, ನೊಂಪು
ಪೊಂಪುಳ ಇಳೆಗೆ ಸೂಡಿ ಪೆಂಪು
ಬರೆದು ವಿಶ್ವಕಾವ್ಯ ಜೆಂಪು
ಒರೆಯುವವನು ದೇವನಲ್ಲವೆ?



೫

ಸೊಗದ ಸುಗ್ಗಿ ಮಾತ್ರವಲ್ಲ;
ಜಗಕೆ ಪಿಡುಗು ಬಡಿವುದಲ್ಲ!
ಬಗೆದು ಸುಖದ ದುಃಖವೆಲ್ಲ
ನೊಗವ ಹೂಡಿಪವನು ದೇವನಲ್ಲವೆ?

೬

ಸೃಷ್ಟಿ ನಿಯಮ ಸೂತ್ರ ತಿಳಿದು
ಕಷ್ಟ ಸುಖದಿ ಮಲೆತುದುಡಿದು
ಅಷ್ಟಸಿದ್ಧಿ ಬಿಡದೆ ಪಡೆದು
ತುಷ್ಟಿ ಎಮಗೆ ಈಯುವವನು,
ದೇವನಲ್ಲವೆ?

೭

ಅಂತರಾಳದಲ್ಲಿ ಇದ್ದು ಹುಗಿದು
ತಂತು ಒಡಲ ಬಿಗಿದು ಹಿಡಿದು
ಹಂತ ಹಂತವಾಗಿ ಬಿಡದೆ ಮಿಡಿದ
ಅಂತರ್ಯಾಮಿ ದೇವನಲ್ಲವೇ?

—ದಾಮೋದರ ಬಾಳಿಗಾ

ಅಭಯ ಸಂದೇಶ

• ಶಿವರಾಮ ಜೋಶಿ

ಇಂದು ಬುದ್ಧಪೂರ್ಣಿಮೆ. ಈ ಬಾರಿ ಊರಿಗೆ ಊರೇ ಸಿಂಗರಿಸಿಕೊಂಡು ಸಂಭ್ರಮದಿಂದ ಸುಮುಹೂರ್ತವನ್ನು ಇದಿರು ನೋಡುತ್ತಿದೆ. ಊರ ಮುಂಭಾಗದಲ್ಲಿ ನಿರ್ಮಿಸಲಾದ ಭವ್ಯ ಶಿಲಾಮಂಟಪದ ಬಳಿ ಹಿರಿಕಿರಿಯರು, ಹೆಂಗಸರು, ಮಕ್ಕಳು ಬುದ್ಧಮೂರ್ತಿಯನ್ನು ಸ್ವಾಗತಿಸಲು ಉತ್ಸಾಹದಿಂದ ಕಾದು ನಿಂತಿದ್ದಾರೆ. ಸಾಲು ಗುದುರೆಗಳ ರಥ ಬುದ್ಧಮೂರ್ತಿಯನ್ನು ಹೊತ್ತು ಮಂಟಪದ ಬಳಿ ಬಂದಾಗ ಸೂರ್ಯ ನಡುನೆತ್ತಿ ಸಮೀಪಿಸುತ್ತಿದ್ದ. ಉರಿಬಿಸಿಲಿನ ತಾಪವನ್ನೂ ಲೆಕ್ಕಿಸದೆ ಜನಸಮ್ಮರ್ದ ಜಯಘೋಷ ಮಾಡುತ್ತ ಮಂಗಳವಾದ್ಯಗಳೊಂದಿಗೆ ಬುದ್ಧದೇವನನ್ನು ರಥದಿಂದ ಕೆಳಗಿಳಿಸಿ ತಾತ್ಪೂರ್ತಿಕವಾಗಿ ಕಟ್ಟಿದ್ದ ಕಟ್ಟೆಯ ಮೇಲೆ ಇರಿಸಿದರು. ಬೌದ್ಧಭಿಕ್ಷುಗಳ ಮಂತ್ರಪಠನದೊಂದಿಗೆ ಪ್ರತಿಷ್ಠಾನ ಸಮಾರಂಭ ಪ್ರಾರಂಭವಾಯಿತು.

ಹಿಮಾಲಯ ತಪ್ಪಲಿನ ಆ ಊರಿನ ಜನ ಬುದ್ಧದೇವನ ಸಂದೇಶದಂತೆ ಸತ್ಯ, ಅಹಿಂಸೆಯಿಂದ ನಡೆಯುವುದೇ ಮಾನವನ ನಿಜವಾದ ಧರ್ಮವೆಂದು ಬಗೆದಿದ್ದರು. 'ಸತ್ಯಂ ವದ ಧರ್ಮಂ ಚರ' ಎಂಬುದೇ ನಿಜ ತಾರಕಮಂತ್ರವೆಂದುಕೊಂಡಿದ್ದರು. ಬುದ್ಧನ ದಿವ್ಯ ಸಂದೇಶವನ್ನು ಶಿರಸಾವಹಿಸಿ ಪಾಲಿಸುವ ವಿವಿಧ ಧರ್ಮ, ವಿವಿಧ ವರ್ಣಗಳ ಆ ಊರಿನ ಜನತೆ ಅವತಾರಪುರುಷ ಬುದ್ಧನ ಮಂದಿರ ನಿರ್ಮಿಸಬೇಕೆಂದು ನಿರ್ಧರಿಸಿದರು. ಸಕಲ ವರ್ಣದವರಿಗೂ ದರ್ಶನ, ಪೂಜನಗಳಿಗೆ ಮುಕ್ತ ಪ್ರವೇಶವಿರುವಂತೆ ಸುಂದರ ಶಿಲಾಮಂಟಪ ರಚಿತವಾಯಿತು. ನಾಲ್ಕು ನಿಟ್ಟಿನಿಂದಲೂ ಬುದ್ಧಮೂರ್ತಿ ಕಾಣಿಸುವಂತೆ ಉನ್ನತ ಪೀಠ ತಯಾರಾಯಿತು. ಅಮೃತಶಿಲೆಯ ಸುಂದರ ವಿಗ್ರಹ ತಯಾರಿಸಲು ಶ್ರೇಷ್ಠ ಶಿಲ್ಪಿಯೊಬ್ಬನನ್ನೂ ನೇಮಿಸಿಯಾಗಿತ್ತು. ಬರುವ ಬುದ್ಧಪೂರ್ಣಿಮೆಯಂದೇ ಮೂರ್ತಿ ಪ್ರತಿಷ್ಠಾಪನವಾಗಬೇಕೆಂದು ನಿರ್ಧರಿಸಲಾಯಿತು. ಮುಂದಿನ ಪೂರ್ಣಿಮೆ ಬಂತು. ಪ್ರತಿಷ್ಠಾಪನೆಗೆ ಸಿದ್ಧವಾದ ಮೂರ್ತಿಯೂ ಬಂತು. ಪ್ರಥಮ ನೋಟದಲ್ಲೇ ಬುದ್ಧದೇವ ಎಲ್ಲರ ಮನಸೆಳೆದುಬಿಟ್ಟ. ಸತ್ಯ, ಅಹಿಂಸೆ, ದಯೆಯ ಸಾಕಾರ ಮೂರ್ತಿಯೇ ಕಣ್ಣಮುಂದೆ ಕುಳಿತಂತಿತ್ತು, ಜನ ಭಾವುಕರಾಗಿ ನೋಡಿದಷ್ಟೂ ಮುಗ್ಧ ಸೌಂದರ್ಯದ ಕಳೆ ಮೂರ್ತಿಯ ಮುಖದ ಮೇಲೆ ನಾಟ್ಯವಾಡಿದಂತೆ ತೋರುತ್ತಿತ್ತು. ಅರೆತೆರೆದ ತಾವರೆ ಹೂಗಳಂಥ ಕಂಗಳಿಂದ ಕರುಣೆಯ ಕಿರಣ ಹೊರಟಂತೆ, ಮೊಗ್ಗುನಗೆಯ ಮೃದು ತುಟಿಗಳಿಂದ ಸತ್ಯನುಡಿಯ ಮುತ್ತೊಂದು ಜಾರಿದಂತೆ, ಚಾಚಿದ ಅಭಯಹಸ್ತ ಜಾರುವವರನ್ನು ಎಚ್ಚರಿಸುವಂತೆ, ಪದ್ಮಾಸೀನ ಸ್ಥಿರ-ಗಾಂಭೀರ್ಯ, ಅಸ್ಥಿರತೆ, ಚಂಚಲತೆಗಳನ್ನು



ಹೋಣೆಗೊಳಿಸುವಂತೆ. ಗೌತಮ ಬುದ್ಧ ರೂಪ ಮೂರ್ತಿವೆತ್ತಾಗಿದ್ದ. ಶಿಲ್ಪಿ ತನ್ನ ಕಲಾಕೌಶಲ್ಯವನ್ನೇ ಧಾರೆಯೆರೆದಿದ್ದನೇನೋ! ಕೆತ್ತನೆ ಕಲೆ ಅಮೋಘವಾಗಿತ್ತು. ವಿಗ್ರಹ ಕಳೆ ಪೂರ್ಣವಾಗಿತ್ತು. ಮೂರ್ತಿಯ ದರ್ಶನ ಪಡೆದವರೆಲ್ಲ 'ಧನ್ಯ ಧನ್ಯ' ಎಂದು ಉದ್ಗಾರ ವೆತ್ತಿದರು.

ನಿಶ್ಚಯಿಸಿದ ಶುಭಮುಹೂರ್ತಕ್ಕೆ ಸರಿಯಾಗಿ ಮೂರ್ತಿಯ ಪ್ರತಿಷ್ಠಾಪನ ಕಾರ್ಯ ನೆರವೇರಿತು. ಮಂಟಪ ಕಿಕ್ಕಿರಿದು ತುಂಬಿ ಹೊರಗೆ ಬಯಲಿನಲ್ಲಿಯೂ ನೆರೆದ ಜನ ಬುದ್ಧದೇವನ ಜಯ ಜಯಕಾರ ಮಾಡುತ್ತ ಬುದ್ಧ ಸಂದೇಶ ಮಂತ್ರಗಳನ್ನು ಪಠಿಸಿತು. ಊರಿನ ಇತಿಹಾಸದಲ್ಲೆ ಅದೊಂದು ಅವಿಸ್ಮರಣೀಯ ಸಂದರ್ಭ; ಹಿಂದೆಂದೂ ಎಲ್ಲ ಜಾತಿಯ, ಎಲ್ಲ ಪಂಗಡಗಳ ಜನ ಅಷ್ಟು ಆತ್ಮೀಯತೆಯಿಂದ, ಅಷ್ಟು ಉಲ್ಲಾಸದಿಂದ, ಸಂಭ್ರಮದಿಂದ ಒಂದೆಡೆ ಸೇರಿದ್ದಿಲ್ಲ, ಸಮಾರಂಭ ಆಚರಿಸಿದ್ದಿಲ್ಲ. ಊರಿಗೆ ಊರೇ ಒಂದಾಗಿ ಸೇರಿದ ಪ್ರಜಾಸಮೂಹ ಏಕ ಮಾನವನಾಗಿ, ಮಾನವ ಶ್ರೇಷ್ಠ. ಅಹಿಂಸಾ ಪುರುಷ, ದಯಾಘನ ಬುದ್ಧನ ಮುಂದೆ ಕೈಜೋಡಿಸಿ ನಿಂತಿತ್ತು, ಅಂದು.

ಅಂದಿನ ಈ ಏಕತಾಭಾವ ಹಾಗೇ ಮುಂದರಿಯಿತು. ಅಂದಿನಿಂದ ಊರಿನ ಕಳೆಯೇ ಬದಲಾಯಿತು. ಪ್ರಸನ್ನತೆಯು ತಾನೇ ತಾನಾಗಿ ಬುದ್ಧಮಂದಿರದಿಂದ ಚಿಮ್ಮಿ ದಶದಿಕ್ಕಿಗೂ ಪಸರಿಸಿ, ಇಡೀ ಊರೇ ಶಾಂತಿಯ ತವರಾಯಿತು. ಸಹನೆಯ ಆಗರವಾಯಿತು, ಈ ಹಿಂದೆ ಅಲ್ಲಿ ಶಾಂತಿ, ಸಹನೆ ಇರಲೇ ಇಲ್ಲವೆಂತಲ್ಲ. ಹಿಂದಿದ್ದ ಜನತೆಯ ಶಾಂತಿ ಸಹನೆಯ ಗುಣಗಳೇ ಬುದ್ಧನ ಆಗಮನಕ್ಕೆ ಕಾರಣವಾಗಿ, ಆಗಮಿಸಿದ ಬುದ್ಧನಿಂದ ಈಗ ಇಮ್ಮಡಿ, ಮುಮ್ಮಡಿಗೊಂಡಿದ್ದವು. ಊರಿನ ಜೀವನ ಪ್ರಶಾಂತ ನದಿಯಂತೆ ಸಾಗಿತು, ಋತುರಾಜನೊಂದಿಗೆ ಹೆಜ್ಜೆಯಿಕ್ಕುತ್ತ. ಆದರೆ ಅದೊಂದು ದಿನ, ಹರ್ಷಾರವದಿಂದ ಕುಣಿಯುತ್ತ ಪ್ರಶಾಂತ ನದಿ ರೌದ್ರಪ್ರಪಾತಕ್ಕೆ ಧುಮ್ಮಿಕ್ಕುವಂತೆ, ಆ ಊರಿನ ಜೀವನವಾಹಿಯಲ್ಲಿಯೂ ಕರಾಳ ಛಾಯೆ ಯಾವರಿಸಿತು.

ಅದೊಂದು ದಿನ. ಎಡಬಿಡದೆ ಮಳೆ ಸುರಿಯುತ್ತಿದ್ದ ವರ್ಷಕಾಲ. ಬೀದಿ, ಬೀದಿ, ರಸ್ತೆ ರಸ್ತೆಯಲ್ಲಿ ನೀರು ಹರಿಯುತ್ತಿತ್ತು. ಮಳೆಯಿಂದಾಗಿ ಜನವೆಲ್ಲ ಮನೆಹಿಡಿದು ಕುಳಿತಿತ್ತು, ಯಾವಾಗ ಮಳೆ ನಿಂತೀತೋ ಎಂದು. ಬುದ್ಧದೇವನ ನಿತ್ಯ ದರ್ಶನಕ್ಕೂ ಅಡ್ಡಿಮಾಡಿತ್ತು ಮಳೆ, ಮೂರು ನಾಲ್ಕು ದಿನಗಳಿಂದ. ರಾತ್ರಿಹೊತ್ತು. ಎಲ್ಲೆಲ್ಲೂ ಗಾಢಾಂಧಕಾರ. ಇಡೀ ಊರು ಪವಡಿಸಿತ್ತು, ಬುದ್ಧದೇವನ ವಿನಾ. 'ಖಟ್ ಖಟ್ ಖಡಲ್' ಸಿಡಿಲು ಅಬ್ಬರಿಸಿ ಬಿತ್ತು, ಕಣ್ಣು ಕೋರೈಸುವ ಮಿಂಚನ್ನು ಹಿಂಬಾಲಿಸಿ. ಸಿಡಿಲಿನ ಗರ್ಜನೆಗೆ ನಿದ್ರಾದೇವಿಯ ಮಡಿಲಿನಿಂದ ಊರಿಗೆ ಊರೇ ಬೆಚ್ಚಿ ಎಚ್ಚತ್ತಿತು. ಹೊರಗೆ ಧಾರಾಕಾರ ಮಳೆ, ಕರಾಳ ಕತ್ತಲು!

ಬೆಳಗಾದಾಗ ಮಳೆ ನಿಂತಿತ್ತು. ಮೋಡ ಚೆದುರುತ್ತಿತ್ತು. ಮೂರುದಿನಗಳಿಂದ ಗೌತಮನ ದರ್ಶನವಿಲ್ಲದೆ ಅಸಮಾಧಾನಗೊಂಡಿದ್ದ ಜನ ಏಳುತ್ತಲೇ ಬುದ್ಧಮಂದಿರದೆಡೆಗೆ ಧಾವಿಸಿದರು. ಅಲ್ಲಿ ಅವರು ಕಂಡ ದೃಶ್ಯ ಘೋರ. ಪೀಠದ ಮೇಲೆ, ಮಂದಹಾಸ ಬೀರಿ ಅಭಯ ನೀಡುತ್ತಿದ್ದ ದೇವದೇವನ ಮೂರ್ತಿಯೆ ಇಲ್ಲ. ಆತ್ಮನಿಲ್ಲದ ಹೃದಯವೇಕೆಂದು ಮಂಟಪವೂ ತನ್ನೊಂದು ಭಾಗ ಕಳಚಿಹಾಕಿತ್ತು! ಬುದ್ಧದೇವನೆಲ್ಲಿ? ಎಲ್ಲಿ, ಎಂದು ಜನ ಮಂಟಪಕ್ಕೆ ನುಗ್ಗಿದರು. ಮಂಟಪದಲ್ಲಿ, ಅರ್ಧಪೀಠದೆತ್ತರಕ್ಕೆ ಹರಿಯುತ್ತಿದ್ದ ನೀರಿನಲ್ಲಿ ಶ್ವೇತಮೂರ್ತಿಯ ಶಿರೋಭಾಗ ಕಾಣಿಸಿತು. ಹತ್ತಾರು ಕೈಗಳು ಮೂರ್ತಿಯನ್ನು ಹಿಡಿದೆತ್ತಿದವು. ಅದೇ ಮಂದಹಾಸ, ಅದೇ ತೇಜಸ್ಸು... ಆದರೆ ಆ ಅಭಯಹಸ್ತ ಮಾತ್ರ ಇಲ್ಲ. ಭಗ್ನ ಹೃದಯಗಳನ್ನು ಸಂತೈಸುತ್ತಿದ್ದ ಆ ದಿವ್ಯ ಹಸ್ತವೇ ಇಲ್ಲ; ಭಗ್ನವಾಗಿ ಹೋಗಿದೆ. ನೆರೆದ ಜನಗಳ ಮುಖದಲ್ಲಿ ಮ್ಲಾನ ಆವರಿಸಿತು. ಕಿಚ್ಚಿನಂತೆ ಸುದ್ದಿ ಹರಡಿ ಊರೇ ಬೇಗುದಿಗೊಂಡಿತು.

ಹತ್ತಾರು, ನೂರಾರು ಕೈಗಳು ಕಾಣದ ದಿವ್ಯ ಹಸ್ತವನ್ನರಸಲು ಹರಿವ ನೀರಿನಲ್ಲಿ ಆಡಿದವು. ಆಡುವ ಕೈಗಳಿಗೆ ಸೋಕಿದುದು ಆಡುವ ಕೈಗಳೇ. ಆಡಿಸುವ ಆ 'ಕೈ' ಮಾತ್ರ ಸಿಗಲಿಲ್ಲ. ಮಂಟಪದಿಂದ ನೀರು ಹರಿದು ಖಾಲಿಯಾಯಿತು. ಶೂನ್ಯವಾಗಿ ಮಿರುಗುವ ಹಾಸುಗಲ್ಲಿನ ವಿನಾ ಮತ್ತೇನೂ ಅಲ್ಲಿ ಕಾಣಲಿಲ್ಲ. ಬುದ್ಧಮೂರ್ತಿ ಇನ್ನೂ ನಗುನಗುತ್ತಲೇ ಪೀಠಕ್ಕೊರಗಿ ಕುಳಿತಿದ್ದ! ಭಾರಹೃದಯದಿಂದ ಮಾತು ಹೊರಡದೆ ಮೂಕರಾಗಿ ನಿಂತರು ಜನ. ನೀರು ಕೊಚ್ಚಿ ಹೋದಲ್ಲೆಲ್ಲಾ ಸುತ್ತಾಡಿ ಶೋಧಿಸಿ ಬಂದವು ಕೆಲವು. 'ಕಾಣೆಯಾದ ಕೈ' ಎಲ್ಲೂ ಕಾಣಲಿಲ್ಲ. ಮಂಟಪವನ್ನು ಮುರಿದು ದೇವಮೂರ್ತಿಯ ಕೈಯನ್ನು ಆಹುತಿ ತೆಗೆದುಕೊಂಡ ಸಿಡಿಲು ನಮ್ಮನ್ನೇಕೆ ಜೀವದಿಂದುಳಿಸಿತೋ ಎಂದು ಭಾವುಕ ಹೃದಯಗಳು ಮೂಕವೇದನೆಯಿಂದ ಅತ್ತವು. ಆದರೆ ಬುದ್ಧ ನಗುತ್ತಲೇ ಇದ್ದ ಇನ್ನೂ!

ಮೂರ್ತಿಯನ್ನು ಕಟೆದ ಶಿಲ್ಪಿಗೆ ಸುದ್ದಿ ಹೋಯಿತು. ದೂರದೂರಿನ ಶಿಲ್ಪಿ ಓಡೋಡಿ ಬಂದ. ಭಗ್ನಹಸ್ತ ಮೂರ್ತಿಯನ್ನು ಕಂಡು ಕಣ್ಮುಚ್ಚಿ ಕಣ್ಣೀರು ಸುರಿಸಿದ.

"ಶಿಲ್ಪಿ, ಇನ್ನೊಂದು ಮೂರ್ತಿ ತಯಾರಿಸುವೆಯಾ?" ಕೇಳಿತು ಜನ.

"ಊಹುಂ. ನನ್ನ ಕಲೆ ಕಂಡು ಪ್ರಕೃತಿ ಮಾತೆಗೂ ಮತ್ಸರ!, ನಾನಿನ್ನು ಉಳಿ ಹಿಡಿಯಲಾರೆ" ಸರಸರನೇ ಅಲ್ಲಿಂದ ಹೋಗಿಬಿಟ್ಟ ಶಿಲ್ಪಿ.

ದಾರಿಗಾಣದ ಜನ ಅದೇ ಮೂರ್ತಿಯನ್ನು ಮತ್ತೆ ಪೀಠಕ್ಕೇರಿಸಿದರು. ಅದೇ ಕಳಾಪೂರ್ಣ ತೇಜಸ್ಸು, ಅದೇ ಸುಂದರ ವದನ. ಆದರೆ ಅಭಯ ನೀಡುವ ಹಸ್ತ? ಅದಿಲ್ಲ, ಅದೊಂದಿಲ್ಲ. ಭಾರ ಹೃದಯದಿಂದ ಜನ ಮರಳಿತು– ಕಾಣದ ಕೈಗಾಗಿ ಚಿಂತಿಸುತ್ತ.

ಮಾರನೆಯ ಮುಂಜಾವದಲ್ಲೇ ಜನ ಮಂಟಪದ ಬಳಿ ಗುಂಪು ಗುಂಪಾಗಿ ಬಂದು ಸೇರತೊಡಗಿದರು. 'ಕಾಣದ ಕೈ' ಇತ್ತ ಆ ಸಂದೇಶ ರಾತ್ರಿ ಬೆಳಗಾಗುವುದರೊಳಗೇ ಊರನ್ನೇ ಜಾಗೃತಗೊಳಿಸಿತ್ತು. ಯಾರೋ ಒಬ್ಬ ಬೆಳಗಿನ ಜಾವದಲ್ಲೆ ಬಂದ, ಬುದ್ಧದೇವನ ದರ್ಶನಕ್ಕೆಂದು. ಪೀಠದ ಕಡೆಗೆ ಅವನ ಲಕ್ಷ್ಯ ಹೋಯಿತು ಅನಪೇಕ್ಷಿತವಾಗಿ. ಅಲ್ಲೊಂದು ಕೆತ್ತನೆಯ ಸಂದೇಶ-ಎರಡೇ ಸಾಲುಗಳು:

"ಬಂಧುಗಳೇ, ಕಾಣದ ನನ್ನ ಕೈಗಾಗಿ ಚಿಂತೆಯೇಕೆ, ನನ್ನ ಒಂದು ಕೈಗೆ ನಿಮ್ಮ ಎರಡು ಕೈಗಳವೆ. ನಿಮ್ಮ ಕೈಗಳೇ ನನ್ನ ಕೈಗಳು, ನಾನು ಮಾಡುವುದನ್ನೇ ನೀವು ಮಾಡಿರಿ."

ಸಂದೇಶ ಓದುತ್ತಲೇ ಅವನಿಗೆ ಮೈಯಲ್ಲಿ ಮಿಂಚು ಹುಟ್ಟಿದಂತಾಯಿತು. ಅದೇ ವೇಗದಲ್ಲಿ ಊರಿನೊಳಕ್ಕೆ ಓಡಿದ, ಸಂದೇಶ ಮುಟ್ಟಿಸಿದ.

'ಶೂನ್ಯ ಸಂಪಾದನೆ' ಚಿತ್ರ ಬದಲಿಸಿತು!

— ಎ. ಎ. ಆಲಮೇಲಕರ

ಅಂತೂ ಹೈಸ್ಕೂಲ್ ಐದನೆಯ ತರಗತಿಯನ್ನು ನಾನಾಗ ತಲುಪಿದ್ದೆ. ಒಂದು ಪರೀಕ್ಷೆಯೂ ಆಯಿತು. ಆದರೆ ಈ ಪರೀಕ್ಷಾಪ್ರಸಂಗವೇ ನನ್ನ ಜೀವನದ ದಾರಿಯನ್ನು ನಿರ್ಧರಿಸಲಿದೆಯೆಂದು ಮಾತ್ರ ಕನಸುಮನಸಿನಲ್ಲೂ ನಾನೆಣಿಸಿರಲಿಲ್ಲ.

ಅಂದು ನನ್ನ ಗುರುಗಳಾಗಿದ್ದ ಶ್ರೀ ಆಪ್ಟೆ ಮಾಸ್ತರರು ಪರೀಕ್ಷೆಯ ನಂತರ ಒಂದು ದಿನ ಕ್ಲಾಸಿನಲ್ಲಿ ಕಾಲಿಡುತ್ತಿದ್ದಂತೆಯೇ ನನ್ನ ಉತ್ತರದ ಪೇಪರನ್ನು ಕೈಯಲ್ಲಿ ಹಿಡಿದು "ಕ್ಲಾಸಿನಲ್ಲಿಯೇ ಇಂಗ್ಲೀಷ್ ವಿಷಯದಲ್ಲಿ ಅತಿ ಹೆಚ್ಚು ಗುಣಗಳು ಆಲಮೇಲಕರನಿಗೆ!" ಎಂದು ಸಾರುತ್ತ ನನ್ನ ಆ ಪೇಪರನ್ನು ಎತ್ತರದಲ್ಲಿ ಹಿಡಿದು ಎಲ್ಲರಿಗೂ ತೋರಿಸಿದರು.

ಆ ಕಾಗದ ಮೇಲಿದ್ದುದೊಂದು ದೊಡ್ಡ ಬಂಡೀಗಾಲಿ – ಶೂನ್ಯ. ನನಗೆ ಅರ್ಥವಾಯಿತು, ನನಗೆ ಸಿಕ್ಕಿದ್ದ ಗುಣಗಳೆಷ್ಟೆಂದು. ಮನಕ್ಕೆ ಅತ್ಯಂತ ಖೇದವೆನಿಸಿ, ಕ್ಲಾಸಿನಲ್ಲಿಯೇ ಅತ್ತುಬಿಟ್ಟೆ. ನನಗೆ 'ಸೊನ್ನೆ' ಸಿಕ್ಕಿದೆ ಎಂಬ ದುಃಖಕ್ಕಿಂತಲೂ ಗುರುಗಳು ಕ್ಲಾಸಿನಲ್ಲಿ ನನ್ನನ್ನು ಹೀಯಾಳಿಸಿ, ಅಪಮಾನಗೊಳಿಸಿದರಲ್ಲ ಎಂಬ ವೇದನೆಯೇ ಅಸಹ್ಯವಾಗಿತ್ತು.

ಈ ಬಗೆಯ ಶಿಕ್ಷಣ, ಈ ಶಾಲೆ ನನಗೆ ಸರಿಹೊಂದುವುದಿಲ್ಲ ಎಂದು ನನ್ನ ಮನಸ್ಸು ಆ ಕ್ಷಣವೇ ನಿರ್ಧರಿಸಿಬಿಟ್ಟಿತು. ಗುರುಗಳಿಗೆ ಆ ವಿಷಯವನ್ನು ಆಗಲೇ ತಿಳಿಸಿ ನನ್ನ ಮನಸ್ಸಿನ ಉದ್ವೇಗದ ಹೊರೆಯನ್ನು ತುಸುವಾದರೂ ಕಡಿಮೆ ಮಾಡಿಕೊಳ್ಳಬೇಕೆಂದುಕೊಂಡೆ. ಮನಸ್ಸಿನಲ್ಲಿ ಮೂಡಿದ್ದು ತಾನಾಗಿಯೇ ಶಬ್ದರೂಪ ತಳೆಯಿತು.

"ಸರ್, ನಾನು ಶಾಲೆಯನ್ನು ಬಿಡುವ ನಿರ್ಧಾರ ಮಾಡಿದ್ದೇನೆ. ಐದನೇ ಕ್ಲಾಸನ್ನೇ ದಾಟುವದು ನನ್ನಿಂದ ಆಗದಿರುವಾಗ ಮ್ಯಾಟ್ರಿಕ್ ಮುಗಿಸುವ ವಿಚಾರ ಮಾಡುವದು ಸಹ ಯೋಗ್ಯವಾಗಲಿಕ್ಕಿಲ್ಲ! ಹೀಗೆಂದು, ನಾನು ಶಾಲೆ ಬಿಟ್ಟು ಬೀದಿ ಬೀದಿ ಅಲೆಯುತ್ತೇನೆಂದು ಮಾತ್ರ ಭಾವಿಸಬೇಡಿರಿ. ಚಿತ್ರಕಲೆಯನ್ನಷ್ಟೇ ಇನ್ನು ಮುಂದಿನ ನನ್ನ ವಿಷಯವನ್ನಾಗಿಟ್ಟುಕೊಂಡು ಅಭ್ಯಸಿಸುವೆ!

"ಆದರೆ ಒಂದು ಮಾತು ಸರ್, ಇಂದು ನೀವು ನನಗಿತ್ತ ಮಾರ್ಕ್ಸ್ ಎಂದರೆ ದೊಡ್ಡದೊಂದು ಸೊನ್ನೆ. ಮುಂದೆ ನನ್ನ ಚಿತ್ರಕಲೆಗಾಗಿ ಈ ಸೊನ್ನೆಯಾಕಾರದ ಬೆಳ್ಳಿ–ಬಂಗಾರದ ಪದಕಗಳನ್ನು ದೊರಕಿಸುತ್ತೇನೆ. ಹಾಗಾದಾಗ ಬಂದು ನಿಮಗೆ ತೋರಿಸಿ ಆಶೀರ್ವಾದ ಪಡೆಯುತ್ತೇನೆ. ಆಗಲಾದರೂ ನಿಮ್ಮ ಈ ದಡ್ಡ ಶಿಷ್ಯನ ಬಗ್ಗೆ ನಿಮಗೆ ಅಭಿಮಾನವೆನಿಸೀತು." ಎಂದು ನನ್ನ ಬಾಯಿಂದ ಯಾವುದೊ ಶಕ್ತಿಯೇ ಆಡಿಸಿಬಿಟ್ಟಿರಬೇಕು. ನಾನು ಆ ಕ್ಷಣವೇ ಅಲ್ಲಿಂದ ಹೊರಬಿದ್ದು ನಡೆದೆ; ಪುನಃ ವಿದ್ಯಾರ್ಥಿಯಾಗಿ ಆ ಶಾಲೆಗೆ ಮರಳಲಿಲ್ಲ.

ಹೊರಬಂದು ಹಿಂದೊಮ್ಮೆ ತಿರುಗಿ ನೋಡಿದಾಗ ಎದೆಯ ಬಡಿತ ಜೋರಾಗಿತ್ತು, ಕಣ್ಣು ತೇವವಾಗತೊಡಗಿದ್ದವು. ನನ್ನ ಮಟ್ಟಿಗೆ ಈ ಬಗೆಯ ಶಿಕ್ಷಣಕ್ಕೆ ನಾನು ಆಗಲೆ ಮಂಗಳ ಹಾಡಿಬಿಟ್ಟಿದ್ದೆ. ನನ್ನ ಜೀವನದಲ್ಲಿಯ ಒಂದು ಅಧ್ಯಾಯವೇ ಕೊನೆಗೊಂಡಿತೆಂಬ ಭಾವ ನನ್ನಲ್ಲುಂಟಾಗಿತ್ತು. ಅಂತಲೇ ದುಃಖ ಅಷ್ಟೊಂದು ಪ್ರಖರವಾಗಿತ್ತೇನೋ. ಆ ಶಾಲೆಯ ಕಟ್ಟಡ ನೋಡುತ್ತ ನಿಂತಿದ್ದಂತೆಯೇ ಕಣ್ಣೀರು ಧಾರೆಯಾಗಿ ಇಳಿಯುತ್ತಿತ್ತು! ಶಾಲೆಯ ಕಟ್ಟಡಕ್ಕೊಮ್ಮೆ ನಮಸ್ಕಾರ ಮಾಡಿದೆ. "ಇಂದು ವಿದ್ಯಾರ್ಥಿಯಾಗಿ ನಿನ್ನ ಮಡಿಲಲ್ಲಿರುವ ಭಾಗ್ಯ ನನಗಿಲ್ಲ. ಮುಂದೆಯಾದರೂ ನಿನ್ನೀ 'ಹಳೆ ವಿದ್ಯಾರ್ಥಿ'ಗೆ ಕೀರ್ತಿವಂತನಾಗಿ ಬಾ ಎಂದು ಆಶೀರ್ವದಿಸು" ಎಂದು ಮನದಲ್ಲಿಯೇ ನಾಡಿದೆ! ಆದರೆ ಮನಸ್ಸು ಭಾರವಾಗಿ ಕಾಲು ಕಿತ್ತಲಾರದವನಾಗಿದ್ದೆ. ಮನದಲ್ಲಿಯ ನನ್ನ ಈ ದುಗುಡವನ್ನು ನನ್ನ ಗೆಳೆಯ ಮುಕುಂದ ಕಿರ್ಲೋಸ್ಕರ ಗುರುತಿಸಿದನೇನೋ. ನನ್ನನ್ನು ತನ್ನ ಮನೆಗೆ ಕರೆದೊಯ್ದು ತನ್ನ ತಂದೆ, ಶ್ರೀ ಶಂ. ವಾ. ಕಿರ್ಲೋಸ್ಕರರ ಭೆಟ್ಟಿ ಮಾಡಿಸಿದ. ಅವರು ಒಳ್ಳೆಯ ಚಿತ್ರಕಲಾವಿದರು. ಅವರ ಚಿತ್ರಗಳನ್ನು ನೋಡಿ ಭಾರವಾಗಿದ್ದ ಮನ ಸ್ವಲ್ಪ ಹಗುರಾಯಿತು. ಅವರಂತೆಯೇ ನಾನೂ ಚಿತ್ರಕಾರನಾಗಬೇಕೆಂದು ನನಗೆ ನಾನೇ ಮತ್ತೊಮ್ಮೆ ಹೇಳಿಕೊಂಡೆ.

ಇದು ನಡೆದುದು ನಾನು ಸೊಲ್ಲಾಪುರದಲ್ಲಿ ಎಚ್. ಡಿ. ಹೈಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದಾಗ.

ಅಕ್ಷರಾಭ್ಯಾಸದೊಂದಿಗೆಯೆ ಚಿತ್ರಕಲೆ

ನನ್ನ ತಂದೆ ಅಹಮ್ಮದಾಬಾದಿನಲ್ಲಿ ಒಂದು ಬಟ್ಟೆ ತಯಾರಿಸುವ ಗಿರಣಿಯಲ್ಲಿ ಸ್ಪಿನ್ನಿಂಗ್ ಮಾಸ್ಟರ್ ಎಂದು ಕೆಲಸ ಮಾಡುತ್ತಿರುವಾಗ ನನ್ನ ಜನ್ಮ ೧೯೨೦ ರಲ್ಲಿ ಆಯಿತು.

ಮುಂದೆ, ನನ್ನ ತಂದೆಯವರು ಅಹಮ್ಮದಾಬಾದಿನಿಂದ ದಿಲ್ಲಿಗೆ ಹೋಗಬೇಕಾಗಿತ್ತು. ಅಲ್ಲಿ ಅವರು ಘನಶ್ಯಾಮದಾಸ ಬಿರ್ಲಾ ಬಟ್ಟೆಗಿರಣಿಯಲ್ಲಿ ಸ್ಪಿನ್ನಿಂಗ್ ಮಾಸ್ಟರ್ ಮತ್ತು ಮಿಲ್ ಮನೇಜರ್ ಎಂದು ಇದ್ದರು. ಎಂಟು ವರ್ಷಗಳ ಕಾಲ ದಿಲ್ಲಿಯಲ್ಲಿ ಸಂದಿತು. ನನಗಾಗ ಎಂಟು ವರ್ಷ. ನನ್ನ ತಂದೆಗೆ ನಮ್ಮೆಲ್ಲರ ಶಿಕ್ಷಣದ ಬಗೆಗೆ ಚಿಂತೆ. ನೌಕರಿಯ ನಿಮಿತ್ತ ಅವರು ಬೇರೆ ಬೇರೆ ಊರುಗಳಿಗೆ ಬದಲಿಯಾಗಿ ಹೋಗಬೇಕಾಗುತ್ತಿತ್ತು. ಅಂತೆಯೆ ತಂದೆ–ತಾಯಿಗಳು ನನ್ನನ್ನೂ ನನ್ನಿಬ್ಬರು ಬಂಧುಗಳನ್ನೂ ನಮ್ಮ ಸೋದರತ್ತೆಯ ಬಳಿ ಸೊಲ್ಲಾಪುರಕ್ಕೆ ಕಳಿಸಿದರು. ಇಲ್ಲಿ ನಮ್ಮ ಶಿಕ್ಷಣ ಮರಾಠಿಯಲ್ಲಿ ಆರಂಭವಾಯಿತು.

ಅದುವರೆಗೆ ದಿಲ್ಲಿಯಲ್ಲಿದ್ದು ಮನೆಯಲ್ಲಿ ಹಿಂದಿ ಉರ್ದು ಭಾಷೆಗಳನ್ನು ಮಾತ್ರ ಮಾತಾಡುತ್ತಿದ್ದುದರಿಂದ ಮರಾಠಿಯ ಸಂಪರ್ಕವೇ ನನಗಿರಲಿಲ್ಲ. ಆದರೆ ಕೆಲ ಮಟ್ಟಿಗೆ ಹಿಂದಿ ಲಿಪಿಯ ಪರಿಚಯ ಆ ಮೊದಲೇ ನನಗಿದ್ದು ಹಿಂದಿ ಮತ್ತು ಮರಾಠಿ ಲಿಪಿಗಳಲ್ಲಿಯ ಸಾಮ್ಯದಿಂದಾಗಿ ನನಗೆ ತುಂಬ ಅನುಕೂಲವಾಯಿತು. ಆಗಿನಿಂದಲೂ ಅಕ್ಷರಗಳನ್ನು ಕಲಿಯುವುದರ ಜೊತೆಗೆ ಆಯಾ ಅಕ್ಷರಗಳು ಸೂಚಿಸುವ ಶಬ್ದದ ಚಿತ್ರವನ್ನು ಬರೆಯುವುದು ನನ್ನ ಹವ್ಯಾಸವಾಗಿಬಿಟ್ಟಿತು. 'ಗ' ಬರೆಯುವುದರ

ಜೊತೆಗೆ ಗಡಿಗೆಯ ಚಿತ್ರವನ್ನು 'ಪ'ದ ಜೊತೆಗೆ 'ಮಠಾ'(ಗೋವಿನ ಜೋಳ)ದ ಚಿತ್ರವನ್ನೂ ಬಿಡಿಸುತ್ತಿದ್ದೆ. ಇದನ್ನು ಗಮನಿಸಿ ಗುರು ಶ್ರೀ ಕುಲಕರ್ಣಿಯವರು ಅತ್ಯಂತ ಸಂತುಷ್ಟರಾದರು ಮಾತ್ರವಲ್ಲ, ನನ್ನನ್ನು ಮುಂದಿನ ತರಗತಿಗೆ 'ಬಡತಿ' ಕೊಟ್ಟು ಕಳಿಸಿದರು. ಮುಂದೆ ಮೂರನೆಯ ತರಗತಿಯಲ್ಲಿರುವಾಗಲೂ ಇದೇ ಕಾರಣಕ್ಕಾಗಿ ನನಗೆ ಮುಂದಿನ ಕ್ಲಾಸಿಗೆ 'ಬಡತಿ' ದೊರೆಯಿತು.

ಬಾಲ್ಯಸ್ನೇಹಿತರು

ಈ ಶಾಲೆಯಲ್ಲಿ ನನ್ನ ಕ್ಲಾಸಿನಲ್ಲಿಯೇ ಶ್ರೀ ಮುಕುಂದ ಕಿರ್ಲೋಸ್ಕರ (ಸದ್ಯಕ್ಕೆ ಮರಾಠಿ ಜನಪ್ರಿಯ ಮಾಸಿಕಗಳಾದ 'ಮನೋಹರ' ಮತ್ತು 'ಕಿರ್ಲೋಸ್ಕರ'ಗಳ ಸಂಪಾದಕರು) ಡಾ. ಕೊಂತಮ್, ಶ್ರೀ ಕಾವಳೆ, ಶ್ರೀ ಸೇಠ ಇವರೆಲ್ಲ ಇದ್ದರು. ಇವರೆಲ್ಲರೊಟ್ಟಿಗೆ ನನ್ನದೊಂದು ಗುಂಪಾಯಿತು.

ನಮ್ಮಲ್ಲಿ ಮುಕುಂದ ಕಿರ್ಲೋಸ್ಕರ ಮತ್ತು ಸೇಠ ಜಾಣ ವಿದ್ಯಾರ್ಥಿಗಳೆನಿಸಿದ್ದರೆ, ಕೊಂತಮ್ ಅವರು ಒಳ್ಳೆಯ ಕ್ರಿಕೆಟ್ ಆಟಗಾರರು. ನನ್ನ ಮತ್ತು ಕಾವಳೆಯವರ ಆಸಕ್ತಿ ಚಿತ್ರಕಲೆಯಲ್ಲಿ.

ಹೈಸ್ಕೂಲಿನಲ್ಲಿದ್ದಾಗ ನನ್ನ ಮನಸ್ಸೆಲ್ಲ ಚಿತ್ರಕಲೆಯೆಡೆಗೆಯೇ ಹಾತೊರೆಯುತ್ತಿತ್ತು. ಏನಾದರೊಂದು ಕಾರಣ ಮಾಡಿ, ನಾನು ಹೆಚ್ಚಿನ ವೇಳೆಯನ್ನೆಲ್ಲ ಡ್ರಾಯಿಂಗ್ ಕ್ಲಾಸಿನಲ್ಲಿಯೇ ಕಳೆಯುತ್ತಿದ್ದೆ. ಇಲ್ಲಿಂದಲೇ ೧೯೩೪ರಲ್ಲಿ ನಾನು ಇಂಟರ್‌ಮೀಡಿಯೇಟ್ ಡ್ರಾಯಿಂಗ್ ಗ್ರೇಡ್ ಪರೀಕ್ಷೆಯನ್ನು ಪಾಸಾದೆ. ಆಗ, ನನ್ನ ಚಿತ್ರಕಲಾ ಶಿಕ್ಷಕರಾಗಿದ್ದವರು ಶ್ರೀ ಕೇ. ನಾ. ಕೇಳಕರರು. ಅವರೇ ಪ್ರಾರಂಭಾವಸ್ಥೆಯಲ್ಲಿ ನನ್ನಲ್ಲಿನ ಸುಪ್ತ ಕಲೆಗೆ ಒಂದು ಬಗೆಯ ಚೇತನವನ್ನಿತ್ತರು.

ಮೊದಲ ಪಾರಿತೋಷಕ

ಆಗ ಹೈಸ್ಕೂಲಿನ ಮುಖ್ಯಾಧ್ಯಾಪಕರಾಗಿದ್ದ ಶ್ರೀ ಹೇರ್ಲೇಕರರು ಶಾಲೆಯ ಅಭ್ಯಾಸ ಕೋಣೆಗಳ ಅಚ್ಚುಕಟ್ಟುತನಕ್ಕೆ ವಿಶೇಷ ಮಹತ್ವ ಕೊಡುತ್ತಿದ್ದರು. ಇದು ವಿದ್ಯಾರ್ಥಿಗಳಲ್ಲಿ ಒಂದು ಸ್ಪರ್ಧೆಯ ವಿಷಯವಾಗಿ ಬೆಳೆಯಲೆಂದು ಉತ್ತಮವಾಗಿ ಅಲಂಕೃತವಾದ ಕೋಣೆಗಳಿಗೆ ಪಾರಿತೋಷಕವಾಗಿ ಒಂದು ಶಿವಾಜಿ ಢಾಲನ್ನು ಕೊಡುತ್ತಿದ್ದರು. ಈ ಸ್ಪರ್ಧೆಯ ಕಾಲ ಸಮೀಪಿಸುತ್ತಿದ್ದಂತೆ, ನಾ ಮೇಲು ನೀ ಮೇಲು ಎಂದು ವಿದ್ಯಾರ್ಥಿಗಳು ತಮ್ಮ ತಮ್ಮ ಕ್ಲಾಸನ್ನು ತಳಿರುತೋರಣಗಳಿಂದಲೂ ಅಪ್ಪುದ ಚಿತ್ರಗಳಿಂದಲೂ ಅಲಂಕರಿಸುತ್ತಿದ್ದರು. ನಾನು ಐದನೆಯ ತರಗತಿಯಲ್ಲಿದ್ದ ವರ್ಷವದು. ಶೀರ್ಮಾನದ ದಿನದಂದು ನಾನಿದ್ದ ಕ್ಲಾಸಿನಲ್ಲಿ ಯಾವ ಹೆಚ್ಚಿನ ಅಲಂಕಾರವೂ ಇರಲಿಲ್ಲ. ನಾನು ಚಿತ್ರಿಸಿದ ಶ್ರೀ ಹೇರ್ಲೇಕರ (ಮುಖ್ಯಾಧ್ಯಾಪಕರು) ಅವರ ಚಿತ್ರ ಹಾಗು ಗೆಳೆಯ ಕಾವಳೆಯವರು ಚಿತ್ರಿಸಿದ ಶ್ರೀಮತಿ ಗೋಹರಬಾಯಿ ಕರ್ನಾಟಕಿಯವರ ಚಿತ್ರ ಇವೆರಡೇ ಗೋಡೆಯನ್ನಲಂಕರಿಸಿದ್ದವು. ಕ್ಲಾಸನ್ನು ಅಚ್ಚುಕಟ್ಟಾಗಿ ಕಸಗುಡಿಸಿ ಟೇಬಲ್ ಮೇಲೊಂದು ಬಿಳಿವಸ್ತ್ರವನ್ನು ಹಾಕಿ ಫ್ಲಾವರ್ ಪಾಟನ್ನು ಇಡಲಾಗಿತ್ತು.

ನಮ್ಮ ಕ್ಲಾಸಿನ ಈ ನಿರಾಭರಣ ಸೌಂದರ್ಯ ಬಹುಶಃ ನಿರ್ಣಾಯಕರ ಮನ ಸೆಳೆದಿರಬೇಕು. ಶಿವಾಜಿ ಢಾಲು ಯಾರಿಗೆ ದೊರೆತೀತೆಂದು ಎಲ್ಲರೂ ಕುತೂಹಲದಿಂದ ಕಾಯುತ್ತಿರುವಂತೆಯೇ ಅದನ್ನು ನಮ್ಮ ೫ನೆಯ ಬಿ ಕ್ಲಾಸಿಗೆ ಕೊಟ್ಟಿರುವ ನಿರ್ಣಯ ಬಂತು. ಅದರೊಟ್ಟಿಗೆಯೆ ನನಗೆ ಮತ್ತು ಕಾವಳೆಯವರಿಗೆ ವಿಶೇಷ ಬಹುಮಾನವೆಂದು ಒಂದೊಂದು ಪದಕವನ್ನು ನೀಡಿರುವುದಾಗಿ ಮುಖ್ಯಾಧ್ಯಾಪಕರು ಸಾರಿದಾಗಂತೂ ನನಗೆ ಸ್ವರ್ಗ ಮೂರೇ ಗೇಣುಳಿದಂತೆನಿಸಿತು. ಅಂದು ನಾವಿಬ್ಬರೂ ಆ ಪದಕ ಧರಿಸಿಕೊಂಡೇ ಊರೆಲ್ಲ ಮೆರೆದದ್ದಾಯಿತು.

ಇಂತು ಬಹುಮಾನಿತನಾದ ವರ್ಷವೇ ಆ ಶಾಲೆಯಲ್ಲಿ ನಾನಿದ್ದ ಕೊನೆಯ ವರ್ಷವೂ ಆಗಬೇಕಾಗಿ ಬಂದುದು ವೈಚಿತ್ರ್ಯವೇ ಸರಿ.

ಚಿತ್ರಕಲೆಯೇ ನನ್ನ ಮುಂದಿನ ಅಭ್ಯಾಸ ಜೀವನದ ಗುರಿಯೆಂದು ನಿರ್ಧಾರವಾದ ಮೇಲೆ, ನಾನು ಮತ್ತೆ ಅಹಮದಾಬಾದಿಗೆ ಮರಳಿದೆ. ಅಲ್ಲಿ ಆರ್. ಸಿ. ಹಾಯಸ್ಕೂಲ್ ಮೂಲಕ ಮುಂಬಯಿ ಸರಕಾರದ - ಡ್ರಾಯಿಂಗ್ ಮತ್ತು ಪೇಂಟಿಂಗ್ ಕೋರ್ಸಿನ - ಎಲಿಮೆಂಟರಿ ಪರೀಕ್ಷೆಯನ್ನು ೧೯೩೭ರಲ್ಲಿ ಪಾಸಾದೆ.

ಚಿತ್ರಕಲೆಯಲ್ಲಿ ನನಗಿರುವ ಆಸಕ್ತಿಯನ್ನು ಗಮನಿಸಿದ ನನ್ನ ತಂದೆ-ತಾಯಿಗಳು ಅದರಲ್ಲಿ ಉಚ್ಚ ವ್ಯಾಸಂಗಕ್ಕೆಂದು ನನ್ನನ್ನು ಮುಂಬಯಿಗೆ ಆ ವರ್ಷವೇ ಕಳಿಸಿದರು. ಆಗ ಮುಂಬಯಿಯಲ್ಲಿರುತ್ತಿದ್ದ ನನ್ನ ಅಕ್ಕನ ಮನೆಯಲ್ಲೇ ನನ್ನ ವಾಸ್ತವ್ಯ. ಅಂದಿನ ಅಗ್ಗದ ದಿನಗಳಲ್ಲಿ ತಂದೆಯವರು ನನಗೆ ತಿಂಗಳಿಗೆ ಕಳಿಸುತ್ತಿದ್ದ ಹತ್ತು ರೂಪಾಯಿಗಳು ನನ್ನ ಎಲ್ಲ ವೆಚ್ಚಕ್ಕೂ ಸಾಕಾಗಿ ಉಳಿಯುತ್ತಿತ್ತು!

ಜೆ. ಜೆ. ಸ್ಕೂಲಿನಲ್ಲಿ ಪ್ರವೇಶ ಸಿಗಲಿಲ್ಲ!

ಜೀವನದಲ್ಲಿ ಕೆಲವೊಂದು ಸಲ ಅನುಭವ

'ಹಕ್ಕಿಗಳ ಮಾರಾಟ'





'ನಾನು. ನನ್ನವಳು'

ಗಳೇ ಸರಿಯಾದ ದಾರಿಯನ್ನು ತೋರಿಸುತ್ತವೆ.

ಜೂನ್ ೧೦ ಜೆ. ಜೆ. ಸ್ಕೂಲ್ ಪ್ರವೇಶಕ್ಕೆ ಕೊನೆಯ ದಿನ ಎಂದು ನಾನು ಅರಿತಿರಲಿಲ್ಲ. ನಾನು ಅಲ್ಲಿ ಪ್ರವೇಶಕ್ಕೆಂದು ಪ್ರಯತ್ನಿಸಲು ಹೋದದ್ದು ಈ ಅವಧಿಯನ್ನು ದಾಟಿ! ಆಗ ಅಲ್ಲಿ ಡೆಪ್ಯೂಟಿ ಡಾಯರೆಕ್ಟರರಾಗಿದ್ದವರು ಈಗಿನ ಪ್ರಸಿದ್ಧ ಚಿತ್ರಕಾರ ಶ್ರೀ ಎಮ್. ಆರ್. ಆಚರೇಕರರು. ಸಮಯ ಮೀರಿ ಹೋದ್ದರಿಂದ ಪ್ರವೇಶ ಸಾಧ್ಯವಿಲ್ಲವೆಂದೂ ಖಾಸಗಿ ಶಾಲೆಯಲ್ಲೆಲ್ಲಾದರೂ ಪ್ರಯತ್ನಿಸಬೇಕೆಂದೂ ಅವರು ಹೇಳಿದರು. ಮುಂದೆ ಏನು ಮಾಡಬೇಕೆಂಬುದೇ ಹೊಳೆಯದೆ ಶಾಲೆಯ ಉದ್ಯಾನದಲ್ಲಿ ಭಾರವಾದ ಮನಸ್ಸಿನಿಂದ ಕುಳಿತೆ.

ಇಂತು ನಿರಾಶೆಯ ಮಬ್ಬಿನಲ್ಲಿ ನಾನು ಕುಳಿತಿದ್ದಾಗ ಅಪರಿಚಿತ ವ್ಯಕ್ತಿಯೊಬ್ಬರು ನನ್ನ ಬಳಿ ಬಂದು ತುಂಬ ಕಳಕಳಿಯಿಂದ ಮಾತಾಡಿಸಿದರು. ನನ್ನ ವ್ಯಥೆಗೆ ಕಾರಣವನ್ನು ನನ್ನಿಂದ ಕೇಳಿ ಅರಿತುಕೊಂಡು ನಿರಾಶೆಗೆಷ್ಟು ಕಾರಣವಿಲ್ಲವೆಂದು ಹೇಳಿ ನನಗೆ ನೂತನ ಕಲಾಮಂದಿರದ ಮತ್ತು ಅದರ ಪ್ರಿನ್ಸಿಪಾಲ್ ಶ್ರೀ ದಂಡಾವತಿಮಠರ ವಿಳಾಸವಿತ್ತು, ಅಲ್ಲಿ ಒಂದು ವರ್ಷ ಅಭ್ಯಸಿಸಿ ಮರುವರ್ಷ ಬೇಕಾದರೆ ಜೆ. ಜೆ. ಸ್ಕೂಲಿಗೆ ಬರಬಹುದೆಂದರು. ಇಂತು ನನಗೆ ಆ ಕ್ಷಣಕ್ಕೆ ಆಶೆಯ ದಾರಿ ತೋರಿದ ಅಪರಿಚಿತ ವ್ಯಕ್ತಿ ಶ್ರೀ ವಾಯ್. ಕೆ. ಶುಕ್ಲ ಎಂಬವರು.

ಗುರುದರ್ಶನ

ಚಿತ್ರಕಲೆಯಲ್ಲಿ ನನ್ನ ಮೊದಲ ಗುರು ಸೊಲ್ಲಾಪುರದ ಹೈಸ್ಕೂಲಿನಲ್ಲಿ ಡ್ರಾಯಿಂಗ್ ಶಿಕ್ಷಕರಾಗಿದ್ದ ಶ್ರೀ ಕೇಳಕರರು. ಇದೀಗ ಶ್ರೀ ಶುಕ್ಲರ ಸಲಹೆಯನ್ನನುಸರಿಸಿ ಹೊಸ ಗುರುವಿನ ಬಳಿ ನಡೆದಿದ್ದೆ.

ಗ್ರ್ಯಾಂಟ್ ರೋಡ್ ಸ್ಟೇಶನ್ನಿನಲ್ಲಿಳಿದು ನಾನಾ ಚೌಕಿನ ಮಾರ್ಗವಾಗಿ ಫ್ರೆಂಚ್ ಬ್ರಿಜ್ಜಿನ ಮೇಲೆ ಬಂದೆ. ಅಲ್ಲಿ ಕಂಡಿತು, ಬ್ಲೆವಾಟ್ಸ್ಕಿ ಲಾಜ್. ಈ ಕಟ್ಟಡದ ಎರಡನೆಯ ಅಂತಸ್ತಿನ ಮೇಲಿರುವದೇ ನೂತನ ಕಲಾಮಂದಿರ.

ಮೆಟ್ಟಲೇರಿ ಹೋಗಿ ಕೇಳಿದೆ: "ನಾನು ಒಳಗೆ ಬರಬಹುದೆ?"

"ಯಸ್" ಬಂತು ಉತ್ತರ.

ನಾನು ಒಳಗೆ ಹೋಗಿ ಕಲಾಮಂದಿರದ ಪ್ರಿನ್ಸಿಪಾಲ್ ದಂಡಾವತಿಮಠರಿಗೆ ವಂದಿಸಿ, ನನ್ನ ಪರಿಚಯವನ್ನು ನಾನೇ ಮಾಡಿಕೊಂಡೆ. ನಂತರ ನಾನು ಬಂದುದರ ಉದ್ದೇಶವನ್ನು ವಿವರಿಸಿ ಹೇಳಿದೆ. ಅವರು ಒಂದು ಫಾರ್ಮು ತುಂಬಿಸಿಕೊಂಡು ನನ್ನ ಕೈಗೊಂದು ಕಾಗದ, ಪೆನ್ಸಿಲ್ ನೀಡಿದರು. ಅನಂತರ ಶಾಲೆಯಲ್ಲಿದ್ದ ಒಂದು ಮೂರ್ತಿಯತ್ತ ಬೆರಳು ಮಾಡಿ ಅದನ್ನು ಚಿತ್ರಿಸುವಂತೆ ಹೇಳಿದರು. ನಾನು ಚಿತ್ರಿಸಿ ತೋರಿಸಿದಾಗ "ಬಹಳ ಚೆನ್ನಾಗಿದೆ" ಎಂದು ಪ್ರೀತಿಯಿಂದ ಮೈದಡವಿ ಪ್ರೋತ್ಸಾಹಿಸಿದರು. ಅನರ ಅಂದಿನ ಆ ಪ್ರಥಮ ವಾತ್ಸಲ್ಯಮಯ ಸ್ಪರ್ಶವೇ ಮುಂದೆ ನನ್ನ ಕಲಾಜೀವನದಾದ್ದಕ್ಕೂ ದಾರಿದೀಪವಾಯಿತು.

ಲ್ಯಾಂಡ್‌ಸ್ಕೇಪ್ ಚಿತ್ರಣದಲ್ಲಿ ನನಗೆ ವಿಶೇಷ ಆಸಕ್ತಿಯಿದ್ದುದರಿಂದ ಆಗಿನ್ನೂ ಇಷ್ಟೊಂದು ಬೆಳೆದಿರದಿದ್ದ ಮಾತುಂಗಾ, ವಡಾಳಾ, ಸಾಯನ್ ಮುಂತಾದೆಡೆಗಳಲ್ಲಿ ಅಲೆಯುತ್ತ ಅಲ್ಲಲ್ಲಿಯ ಚಿತ್ರಗಳನ್ನು ರಚಿಸಿ ಶ್ರೀ ದಂಡಾವತಿಮಠ ಗುರುಗಳಿಗೆ ತೋರಿಸಿ ಅವರ ಸಲಹೆ ಪಡೆಯುವುದು ನನ್ನ ನಿತ್ಯದ ರೂಢಿಯಾಯಿತು. ಲ್ಯಾಂಡ್‌ಸ್ಕೇಪ್ ನನ್ನ ಪ್ರಥಮ ಪ್ರೇಮವಾಗಿದ್ದರೂ ಉಳಿದ ವಿಷಯಗಳನ್ನು ನಾನು ಅಲಕ್ಷಿಸಲಿಲ್ಲ.

ಒಂದು ದಿನ ವಡಾಳಾ ಗುಡ್ಡದ ಮೇಲಿನಿಂದ ಕಾಣುವ ದೃಶ್ಯವನ್ನು ಜಲವರ್ಣದಲ್ಲಿ ಚಿತ್ರಿಸಿ ಅದನ್ನು ಗುರುಗಳಿಗೆ ತೋರಿಸಿದೆ. "ವಾಹವ್ವಾ, ಎಷ್ಟು ಸುಂದರವಾಗಿದೆ! ಎಲ್ಲಿಯ ದೃಶ್ಯವಿದು?" ಎಂದವರು ನನ್ನನ್ನು ಉತ್ತೇಜಿಸುವ ಧ್ವನಿಯಲ್ಲೇ ಕೇಳಿದರು.

"ವಡಾಳಾ ಗುಡ್ಡದ ಮೇಲೆ ಕುಳಿತು ಕೆಳಗಿನ ದೃಶ್ಯವನ್ನು ಚಿತ್ರಿಸಿರುವೆ."

"ಹಾಗಾದರೆ ನಿಮ್ಮ ಆಯ್ ಲೆವೆಲ್ ಎಲ್ಲಿತ್ತು?"

ಈ ಶಬ್ದಗಳು ಕಿವಿ ಸೇರುತ್ತಲೇ ನನ್ನ ಮುಖ ಮಂಕಾಯಿತು. ಅದನ್ನು ಗುರುತಿಸಿದ ಗುರುಗಳು, "ಭಯಪಡಬೇಡ. ಪ್ರಾರಂಭದಲ್ಲಿ ಈ ರೀತಿ ತಪ್ಪುಗಳು ಆಗುವುದು ಸ್ವಾಭಾವಿಕ. ಅನುಭವ ಹೆಚ್ಚಿದಂತೆ ನೀನು ಉತ್ತಮ 'ಲ್ಯಾಂಡ್‌ಸ್ಕೇಪ್ ಸ್ಪೆಶಾಲಿಸ್ಟ್' ಆಗುವಿ" ಎಂದು ನುಡಿಯುತ್ತ, ಹಲವು ಸ್ಕೆಚ್ಚುಗಳನ್ನು ತಾವೇ ಮಾಡಿ ತೋರಿಸುತ್ತ ನನಗೆ ಪರ್‌ಸ್ಪೆಕ್ಟಿವ್ ಮತ್ತು ಆಯ್ ಲೆವೆಲ್‌ಗಳ ಜ್ಞಾನ ಮಾಡಿಕೊಟ್ಟರು.

ಒಂದು ವರ್ಷದ ಮಟ್ಟಿಗೆಂದು ನಾನು ನೂತನ ಕಲಾಮಂದಿರವನ್ನು ಸೇರಿದ್ದೆನಾದರೂ ಒಮ್ಮೆ ಈ ಕಲಾದೇಗುಲವನ್ನು ಪ್ರವೇಶಿಸಿದ ನಂತರ ಮಾತ್ರ ಬೇರೆಡೆ ಹೋಗುವ ಯೋಚನೆಯೇ ಸುಳಿಯಲಿಲ್ಲ. ಶ್ರೀ ದಂಡಾವತಿಮಠರು ನನ್ನ ಪಾಲಿಗೆ ಬರಿ ಶಿಕ್ಷಕರಾಗದೆಯೆ ಗುರುದೇವನೆ ಆಗಿದ್ದರು. ಅವರು ನನ್ನ ಬಗ್ಗೆ ತೋರುತ್ತಿದ್ದ ವಾತ್ಸಲ್ಯ, ನೀಡುತ್ತಿದ್ದ ಪ್ರೋತ್ಸಾಹ, ಚಿತ್ರಕಲೆಯ ಸೂಕ್ಷ್ಮಾತಿಸೂಕ್ಷ್ಮಗಳನ್ನು ತಿಳಿಹೇಳುವ ರೀತಿ ಎಂದೆಂದಿಗೂ ನನ್ನ ಕಣ್ಣೆದುರು ಕಟ್ಟಿದಂತೆಯೆ ಉಳಿದಿವೆ.

ನಾನು ಡಿಪ್ಲೋಮಾ ಕೊನೆಯ ವರ್ಷದಲ್ಲಿ ಅಭ್ಯಾಸ ಮಾಡುತ್ತಿದ್ದಾಗ ಇಂದಿನ ಕೆಲ ಪ್ರಸಿದ್ಧ ಚಿತ್ರಕಾರರಾದ ಶ್ರೀ ಕೆ. ಕೆ. ಹೆಬ್ಬಾರ, ಶ್ರೀ ಚಾವಡಾ, ಶ್ರೀ ಎಸ್. ಎಂ. ಪಂಡಿತರು ಕಲಾಮಂದಿರವನ್ನು ವಿದ್ಯಾರ್ಥಿಗಳಾಗಿ ಪ್ರವೇಶಿಸಿದರು. ೧೯೪೦ರಲ್ಲಿ ನನ್ನ ಡಿಪ್ಲೋಮಾ ಮುಗಿಯಿತು.

ಆ ವರ್ಷ ಶಾಲೆಯ ವಾರ್ಷಿಕೋತ್ಸವಕ್ಕೆ ಜೆ. ಜೆ. ಸ್ಕೂಲಿನ ಶ್ರೀ ಸೊಲೋಮನ್ ಮುಖ್ಯ ಅತಿಥಿಯಾಗಿ ಬಂದಿದ್ದರು. ಪ್ರದರ್ಶನದ ಉದ್ಘಾಟನೆಯನ್ನು ನೆರವೇರಿಸಿದ ಅವರು ನನ್ನೊಂದು ನಿಸರ್ಗಚಿತ್ರದಿಂದ ಆಕರ್ಷಿತರಾದರೆಂದು ತೋರುತ್ತದೆ. ಶ್ರೀ ದಂಡಾವತಿಮಠರ ಮೂಲಕ ನನ್ನನ್ನು ಕರೆಸಿಕೊಂಡು ಬೆನ್ನು ತಟ್ಟಿ ಪ್ರಶಂಸಿ, "ವೆರಿ ಗುಡ್" ಎಂದು ತಮ್ಮ ಕಿಸೆಯಿಂದ ಹದಿನೈದು ರೂಪಾಯಿಗಳನ್ನು ತೆಗೆದು ನನ್ನ ಕೈಗಿಡುತ್ತ "ಈ ಚಿತ್ರ ನನಗಿರಲಿ" ಎಂದುಬಿಟ್ಟರು. ಅದು ಮಾರಾಟವಾದ ನನ್ನ ಮೊದಲ ಚಿತ್ರ.



' ಪೇಟೆಯಿಂದ '

ಚಿತ್ರಕಾರನಿಗೆ ಬರಿ ಪ್ರೋತ್ಸಾಹನದ ಮಾತು ಮಾತ್ರ ಸಾಲದು, ಅವನ ಕೃತಿಗಳು ಮಾರಾಟವಾಗಿ ಅವನಿಗೆ ಆರ್ಥಿಕ ನೆರವೂ ದೊರೆಯಬೇಕೆಂಬ ಅರಿವು ಅಂದಿನ ಅಧಿಕಾರಿಗಳಲ್ಲಿ ಇರುತ್ತಿತ್ತು.

ಪ್ರವಾಸದ ಹುಚ್ಚು

ಡಿಪ್ಲೋಮಾ ಮುಗಿದ ನಂತರ ದೇಶದ ವಿವಿಧ ಭಾಗಗಳಲ್ಲಿ ಅಡ್ಡಾಡಿ ಜನಜೀವನವನ್ನು ಸಮೀಪದಿಂದ ನೋಡಬೇಕು, ಚಿತ್ರಿಸಬೇಕು ಎಂಬ ಹಂಬಲ ನನಗೆ. ಆಗಲೂ ನನ್ನ ನೆರವಿಗೆ ಬಂದವರು ಕಿರ್ಲೋಸ್ಕರ ಬಂಧುಗಳೆ. ಶ್ರೀ ಶಂ. ವಾ. ಕಿರ್ಲೋಸ್ಕರರ ತಮ್ಮ ಶ್ರೀ ಕೃಷ್ಣ ಕಿರ್ಲೋಸ್ಕರರು ನಾನು ಡಿಪ್ಲೋಮಾ ಕಲಿಯುತ್ತಿರುವಾಗ ಮಾಡಿದ್ದ ಐದು ಚಿತ್ರಗಳನ್ನು ಇಪ್ಪತ್ತೈದು ರೂಪಾಯಿಗಳಿಗೆ ಕೊಂಡುಕೊಂಡರು.

ಅಂದು ದೊರೆತ ಈ ಇಪ್ಪತ್ತೈದು ರೂಪಾಯಿಗಳ ಆಧಾರದಿಂದಲೇ ನಾನು ಗುಜರಾತ್, ಸೌರಾಷ್ಟ್ರ ಪ್ರವಾಸಕ್ಕೆ ನಡೆದೆ. ಆದರೆ ಅಲ್ಲಲ್ಲಿ ಸುತ್ತಾಡಿ ಭಾವನಗರಕ್ಕೆ ಬಂದಾಗ ನನ್ನ ಕೈಯಲ್ಲುಳಿದದ್ದು ಐದು ರೂಪಾಯಿಗಳು ಮಾತ್ರ. ಇನ್ನೂ ನೋಡಬೇಕಾದುದು ಬೇಕಷ್ಟಿತ್ತು. ಆದದ್ದಾಗಲೆಂದು ನನ್ನ ಕಾರ್ಯದಲ್ಲಿ ನಾನು ಮಗ್ನನಾದೆ.

ಭಾವನಗರದ ಪೇಟೆಯಲ್ಲಿ ನನ್ನ ಸ್ಕೆಚ್ಚಿಂಗ್ ಕೆಲಸ ಭರದಿಂದ ಸಾಗಿತ್ತು. ಸ್ವಾಭಾವಿಕವಾಗಿಯೆ ರಸಿಕ(?) ಜನ ಸುತ್ತೂ ನೆರೆದಿತ್ತು. ಹೀಗೆ ನೆರೆದ ಜನರಲ್ಲಿ ಒಬ್ಬ ವ್ಯಕ್ತಿ ಮಾತ್ರ ನನ್ನ ಹಿಂದಿನಿಂದ ಕದಲಲಿಲ್ಲ. ನನ್ನ ಸ್ಕೆಚಿಂಗ್ ಮುಗಿದೊಡನೆಯೆ ನನ್ನನ್ನು ಮಾತಾಡಿಸಿ ತಮ್ಮ ಪರಿಚಯ ಹೇಳಿ, ಒತ್ತಾಯದಿಂದ ನನ್ನನ್ನು ತಮ್ಮ ಮನೆಗೆಯೆ ಕರೆದೊಯ್ದರು. ಅವರು ಸ್ಥಳೀಯ ಚಿತ್ರಕಾರ ಶ್ರೀ ವನರಾಜ ಮಾಳಿ. ಅವರಲ್ಲಿಯೆ ಊಟ ಮುಗಿಸಿ ಕುಳಿತಿದ್ದಾಗ ಅವರು ನನ್ನ ಮುಂದಿನ ಕಾರ್ಯಕ್ರಮದ ಬಗ್ಗೆ ವಿಚಾರಿಸಿದರು. ಅದೇಕೊ ನನಗೆ ಅವರೊಡನೆ ಮಾತಾಡಲು ಎಷ್ಟೂ ಸಂಕೋಚವೇ ಎನಿಸಲಿಲ್ಲ. "ನನ್ನ ಕೈಲೀಗ ಉಳಿದಿರುವುದು ಐದು ರೂಪಾಯಿ ಮಾತ್ರ. ಅಷ್ಟು ಮುಗಿಯುವ ವರೆಗೆ ತಿರುಗಾಡಿ ನಂತರ ಊರಿಗೆ ಮರಳುವುದು" ಎಂದುಬಿಟ್ಟೆ.

ಆಗ ಅವರು ನನಗೆ ಮಡುಕದಿರುವಂತೆ ಸಲಹೆ ನೀಡಿ, ತಮ್ಮ ರಾಜರಿಂದ ಕಲೆಗೆ ವಿಶೇಷ ಪ್ರೋತ್ಸಾಹ ದೊರೆಯುತ್ತಿದ್ದ ವಿಷಯವನ್ನು ತಿಳಿಸಿದರು. ಅನಂತರ ಹೋಗಿ ಸಂಸ್ಥಾನದ ಅಧಿಕಾರಿಗಳನ್ನು ಕಂಡು ಸೌರಾಷ್ಟ್ರವೆಲ್ಲ ಸುತ್ತಾಡುವುದಕ್ಕೆಂದು ಉಚಿತ ರೇಲ್ವೆ ಪಾಸುಗಳನ್ನು ಪಡೆದುಕೊಂಡು ಬಂದರು. ಅದರಿಂದಾಗಿ ಮತ್ತೆ ಎಂಟು ದಿನಗಳ ಕಾಲ ಅಲ್ಲಲ್ಲಿ ಅತ್ತ ದಾಡಿ ಅನೇಕ ಚಿತ್ರಗಳನ್ನು ಮಾಡಿಕೊಳ್ಳುವ ಅವಕಾಶ ನನಗೆ ದೊರೆಯಿತು.

ಕುಂಚವೇ ಕಾಪಾಡಿತು!

ಆಗೊಂದು ದಿನ ಗೀರ ಅರಣ್ಯ ಪ್ರದೇಶದಲ್ಲಿ ಒಂದು ಹಳ್ಳಿಯ ಬಳಿ ನದಿಯ ದಂಡೆಯ ಮೇಲೆ ನಾನು ಲ್ಯಾಂಡ್‌ಸ್ಕೇಪ್ ಚಿತ್ರಿಸುವಲ್ಲಿ ಮೈಮರೆತಿದ್ದೆ. ಮಾಳಿಯವರು ಮತ್ತೆಲ್ಲಿಯೊ ಹೋಗಿದ್ದಿರಬೇಕು. ಎಲ್ಲಿಂದಲೋ ಬಂದ ಗುಡುಗು ನನ್ನ ಸಮಾಧಿಗೆ ಭಂಗ ತಂತು. ಮುಖ ಮೇಲೆತ್ತಿ ನೋಡಿದಾಗ ಕಂಡುದು ನನ್ನನ್ನು ಒಮ್ಮೆಲೆ ಕಂಗೆಡಿಸಿತು. ನಾಲ್ವತ್ತು ಐವತ್ತು ಜನ ಭರ್ಚಿ, ಭಾಲೆಗಳಂತಹ ಆಯುಧಗಳನ್ನು ನನಗೆಯೆ ಗುರಿ ಹಿಡಿದು ನಿಂತಿದ್ದರು ! ನಿರಾಯುಧನಾಗಿದ್ದ ನನ್ನೊಬ್ಬನನ್ನು ಎದುರಿಸಲು ಇಷ್ಟು ಜನ ಆಯುಧಪಾಣಿಗಳು ಬಂದುದನ್ನು ಕಂಡು ನನ್ನ ಬಗ್ಗೆ ನನಗೆಯೆ ಅರೆನಿಮಿಷ ಹೆಮ್ಮೆಯೆನಿಸದಿರಲಿಲ್ಲ. ಯಮರಾಯ ತನ್ನ ದೂತರೊಂದಿಗೆ ಒಮ್ಮೆಲೆ ದಾಳಿಯಿಟ್ಟಿರುವನೇನೊ ಎನಿಸಿ ಕೈ ಕಾಲುಗಳಲ್ಲಿಯ ಶಕ್ತಿಯೇ ಕುಂದಿದಂತಾಗಿ ಪಿಳಿಪಿಳಿ ಕಣ್ಣು ಬಿಡುತ್ತ ಅವರನ್ನೇ ನೋಡತೊಡಗಿದೆ. ಅಂಥದರಲ್ಲೂ ಅವರ 'ಕಾಡು' ಉಡುತೊಡುಗೆ ನನ್ನನ್ನು ಆಕರ್ಷಿಸಿತು. ನಾನು ತಲೆ ತಗ್ಗಿಸಿ ಅವರ ವರ್ಣಮಯ ವೇಷವನ್ನು ಚಿತ್ರಿಸಿಕೊಳ್ಳತೊಡಗಿದೆ.

ಅವರಲ್ಲಿಯ ಒಬ್ಬ ಮೆಲ್ಲನೆ ಹೆಜ್ಜೆಯಿಡುತ್ತ ಭಾಲೆಯ ಮೊನೆಯನ್ನು ನನ್ನೆದುರು ಮಾಡಿಕೊಂಡೇ ನನ್ನ ಬಳಿ ಬಂದ. ನನ್ನ ಎದೆಯ ಬಡಿತ ಇನ್ನೂ ಹೆಚ್ಚಿತು.

"ನೀವಾರು ? ಎಲ್ಲಿಂದ ಬಂದಿದ್ದೀರಿ ? ನಿಮ್ಮ ಜಾತಿ ಯಾವುದು ? ಚಿತ್ರಕ್ಕಾಗಿ ನೀರನ್ನು ಎಲ್ಲಿಂದ ತಂದಿದ್ದೀರಿ? ಭಾವಿಯಿಂದ ತಂದಿದ್ದರೆ ನಮ್ಮೂರಿನ ಎಲ್ಲರ ಜಾತಿಯೇ ಕೆಟ್ಟು ಹೋಗುತ್ತದೆ" ಎಂದು ಅತ್ಯಂತ ಗಡುಚಾದ ಧ್ವನಿಯಲ್ಲಿ ಅರಚಿದ. ನನ್ನ ಚಿತ್ರ ಮುಂದೆ ಸಾಗಿಯೆ ಇತ್ತು. ಕುಂಚಕ್ಕೆ ವಿಶ್ರಾಂತಿ ಇರಲಿಲ್ಲ. ಅವನ ಈ ಮಾತು ಕೇಳುತ್ತ ಕೇಳುತ್ತಲೇ ಆ ವ್ಯಕ್ತಿಯನ್ನು ಬರೆಯುತ್ತಿದ್ದ ಚಿತ್ರದಲ್ಲಿ ಅಳವಡಿಸಿಬಿಟ್ಟೆ........

....ಕೆಂಪು ರುಮಾಲು, ವಿಶಿಷ್ಟ ಸೌರಾಷ್ಟ್ರದ ವನವಾಸಿಗಳ ಪಾಯಜಾಮಾ, ನಿರಿಗೆಯುಳ್ಳ ಬಗಲಬಂದಿ, ಕೈಯಲ್ಲಿ ಭಾಲೆ........

"ಯಾರ ಚಿತ್ರವಿದು ?" ಅವನು ಕೇಳಿದ.

"ನಿಮ್ಮದೆ" ನಾನು ಶಾಂತ ರೀತಿಯಿಂದ ಉತ್ತರಿಸಿದೆ.

ಆ ಕ್ಷಣಕ್ಕೆ ಏನು ಹೊಳೆಯಿತೊ, "ಮೊದಲು ಕೈಯಿಂದ ಚಿತ್ರ ತೆಗೆದು ಮುಂಬಯಿಗೆ ಹೋದ ನಂತರ ಸಿನೆಮಾ ಮಾಡುತ್ತೇನೆ. ಇನ್ನು ಕೆಲವೇ ದಿನಗಳಲ್ಲಿ ನೀವು ಭಾವನಗ

ರಕ್ಕೆ ಹೋದರೆ ಸಿನಿಮಾದಲ್ಲಿ ನಿಮ್ಮನ್ನೇ ನೋಡುತ್ತೀರಿ" ಎಂದು ನುಡಿಮುಟ್ಟಿ.

ಈ ಹುಸಿಗುಂಡು ಅವನಿಗೆ ತಾಗಬೇಕಾದ ಸ್ಥಳದಲ್ಲಿಯೇ ತಾಗಿತ್ತು. ಆನಂದಭರಿತನಾದ ಅವನು ನಮ್ಮನ್ನು ತಮ್ಮ ಮನೆಗೆ ಆಮಂತ್ರಿಸಿದ. ಅವನೇ ಊರ ಪ್ರಮುಖನೆಂದು ತೋರುತ್ತದೆ. ಊರವರೆಲ್ಲ ಬಂದು ನಾನು ಬರೆದಿಟ್ಟ ಅವನ ಚಿತ್ರವನ್ನು ನೋಡಿ ಹೋದರು. ಅಂದು ಅವರ ವಿಶೇಷ ಖಾದ್ಯವಾದ 'ಲಾಪಶಿ' ತಯಾರಿಸಿ ನಮಗೆ ಭೋಜನವೇರ್ಪಡಿಸಿದ. ಮುಂದಿನ ಐದು ದಿನಗಳ ಕಾಲ ಅವನಲ್ಲಿ ಅತಿಥಿಗಳಾಗುಳಿದು ಅನೇಕ ಚಿತ್ರಗಳನ್ನು ಮಾಡಿಕೊಂಡು ಮುನ್ನಡೆದೆವು.

ಅಲ್ಲಿಂದ ಗಿರಿನಾರ್ ಪರ್ವತದ ಮೇಲಿರುವ 'ಶತ್ರುಂಜಯ' ಜೈನಮಂದಿರಕ್ಕೆ ಹೋದರೆ ಪೂಜಾರಿ ನಮ್ಮನ್ನು ಒಳಗೆ ಸೇರಿಸಲೊಲ್ಲ. ಅವನ ಮೊದಲ ಪ್ರಶ್ನೆಯೇ "ನಿಮ್ಮ ಜಾತಿ ಯಾವುದು?" ಎಂಬುದು. ಜೈನರ ಹೊರತು ಅಲ್ಲಾರಿಗೂ ಪ್ರವೇಶವೇ ಇಲ್ಲವಂತೆ. "ಹೊರಗಿನಿಂದಲೇ ಎಲ್ಲವನ್ನೂ ನೋಡಿ" ಎಂದು ಹೇಳಿದ.

ನಿರುಪಾಯನಾಗಿ ನಾನು ಹೊರಗಿನಿಂದಲೇ ಮಂದಿರವನ್ನು ಚಿತ್ರಿಸಿಕೊಂಡೆ. ಆ ಪೂಜಾರಿಯ ವೇಷಭೂಷಣಗಳು ನನ್ನನ್ನಾಕರ್ಷಿಸಿದ್ದರಿಂದ ಒಳಗೆ ದೇವತಾರ್ಚನದಲ್ಲಿ ಮಗ್ನನಾಗಿದ್ದ ಅವನನ್ನೂ ಚಿತ್ರಿಸಿಕೊಂಡೆ. ನಾನಿನ್ನೂ ಅದನ್ನು ಮುಗಿಸುವುದರಲ್ಲಿದ್ದಾಗ ಅವನು ಹೊರಬಂದು ಅದನ್ನು ನೋಡಿ ಬೆರಗುಗಣ್ಣುಗಳಿಂದ, "ಅರೆ ನೀವು ಕೈಯಿಂದಲೆ ಫೋಟೊ ತೆಗೆಯುತ್ತೀರಾ!" ಎಂದು ಉದ್ಗರಿಸಿದ. ಆ ಚಿತ್ರ ಅವನ ದೃಷ್ಟಿಯನ್ನೇ ಬದಲಿಸಿರಬೇಕು. "ನೀವು ಹೊರಗೆ ಏಕೆ ಕುಳಿತಿದ್ದೀರಿ? ಒಳಗೆ ಬನ್ನಿ ಎಲ್ಲವನ್ನೂ ತೋರಿಸುತ್ತೇನೆ" ಎಂದು ನನ್ನನ್ನೂ ಮಾಳಿಯವರನ್ನೂ ಒಳಗೆ ಕರೆದೊಯ್ದು ಮಂದಿರದ ಪ್ರತಿಯೊಂದು ಭಾಗವನ್ನೂ ಅದರ ವೈಭವವನ್ನೂ ತೋರಿಸಿದ. ಆ ಕ್ಷಣಕ್ಕೆ ಚಿತ್ರವೊಂದು ನಮ್ಮಲ್ಲಿಯ ಜಾತಿ ವೈಷಮ್ಯವನ್ನು ತೊಡೆದು ಹಾಕಿಬಿಟ್ಟಿತು.

ಕಣಕ್ಕಿಳಿದೆ

ಬಾಂಬೆ ಆರ್ಟ್ ಸೊಸೈಟಿಯು ೧೯೪೮ರಲ್ಲಿ ಏರ್ಪಡಿಸಿದ್ದ ಕಲಾಪ್ರದರ್ಶನದಲ್ಲಿ ನನ್ನ 'ಗೇಟ್‌ವೇ ಆಫ್ ಇಂಡಿಯಾ' ಎಂಬ ಚಿತ್ರಕ್ಕೆ ಶ್ರೇಷ್ಠ ಜಲವರ್ಣ ಚಿತ್ರ ಎಂದು 'ಗವರ್ನರ್ಸ್ ಪ್ರೈಜ್' ದೊರೆಯಿತು. ಆ ಪಾರಿತೋಷಕ ಸ್ವೀಕರಿಸುವಾಗಲಂತೂ ನಾನು ಗಾಳಿಯಲ್ಲಿಯೇ ತೇಲುತ್ತಿರುವೆನೇನೊ ಎಂದು ಭಾಸವಾಯಿತು ನನಗೆ.

ಅದೇ ವರ್ಷ ಈ ಸೊಸೈಟಿಯ ಮುಖಾಂತರವೇ ನನ್ನ ಪ್ರಪ್ರಥಮ ಪ್ರದರ್ಶನ–ಒನ್ ಮ್ಯಾನ್ ಶೋ–ಆರ್ಟಿಸ್ಟ್ ಏಡ್ ಸೆಂಟರಿನಲ್ಲಿ ಏರ್ಪಡಿಸಿದೆ. ಗುಜರಾತ, ಸೌರಾಷ್ಟ್ರ ಪ್ರವಾಸದಲ್ಲಿ ಸಿದ್ಧಗೊಳಿಸಲಾಗಿದ್ದ ನಾಲ್ವತ್ತು ಚಿತ್ರಗಳನ್ನು ಪ್ರದರ್ಶಿಸಲಾಗಿತ್ತು. ಅವುಗಳಲ್ಲಿ ಇಪ್ಪತ್ತೆರಡು ಮಾರಾಟವಾಗಿ ಹೋದವು.

ಈಗಲೂ 'ಬೋಣಿಗಿ' ಕಿರ್ಲೋಸ್ಕರ ಬಂಧುಗಳಿಂದಲೇ ಆಯಿತು. ಮುಂದೆ ಚಿತ್ರಗಳಿಗೆ ಬೇಡಿಕೆ ಹೆಚ್ಚಾಗಿ ವ್ಯಾಪಾರೀ ಸ್ವರೂಪವೂ ಬಂತು! ಇದುವರೆಗೆ ನನ್ನ ಏಳುಸಾವಿರ ಚಿತ್ರಗಳು ಮಾರಾಟವಾಗಿವೆ. ಜಗತ್ತಿನ ಬೇರೆ ಬೇರೆ ದೇಶಗಳವರು ಅವುಗಳನ್ನು ಕೊಂಡುಕೊಂಡಿದ್ದಾರೆ. ಮೊದಲನೆಯ ಪ್ರದರ್ಶನದ ನಂತರ ಒಂದರ ಮೇಲೊಂದು ಪ್ರದರ್ಶನಗಳನ್ನು ಏರ್ಪಡಿಸಿದೆ. ಕಳೆದ ವರ್ಷವೇ (೧೯೬೮) ನನ್ನ ಇಪತ್ತೈದನೆಯ ಪ್ರದರ್ಶನ ನಡೆಯಿತು. ಬೆಳ್ಳಿಹಬ್ಬವನ್ನಾಚರಿಸಿದೆ!

ಮಧ್ಯಪ್ರದೇಶವನ್ನು ಸಂಚರಿಸಿದಾಗ ಅಲ್ಲಿನ ಆದಿವಾಸಿಗಳ ಹಲವು ಚಿತ್ರಗಳನ್ನು ರಚಿಸಿದೆ. ಅವುಗಳಲ್ಲಿ ಅರವತ್ತು ಚಿತ್ರಗಳ ಒಂದು ಪ್ರದರ್ಶನವೇರ್ಪಡಿಸಿದರೆ ಐವತ್ತೆಂಟು ಚಿತ್ರಗಳು ಮಾರಾಟವಾದುವು. ಇದೇ ನನಗೆ ಜನಮನ್ನಣೆಯನ್ನೂ ಆರ್ಥಿಕ ಬಲವನ್ನೂ ತಂದುಕೊಟ್ಟ ಅತ್ಯಂತ ಯಶಸ್ವೀ ಪ್ರದರ್ಶನವೆಂದು ನಾನು ಭಾವಿಸಿರುವೆ.

೧೯೪೦ ರಿಂದ ೧೯೫೩ ರ ವರೆಗೆ ೧೩ ವರ್ಷಗಳ ಕಾಲ ನಾನು ಒಂದು ಬ್ಲಾಕ್‌ಮೇಕಿಂಗ್ ಕಂಪನಿಯಲ್ಲಿ 'ಫಿಗರ್ ಆರ್ಟಿಸ್ಟ್' ಎಂದು ಕೆಲಸಮಾಡುತ್ತಿದ್ದೆ. ಆಗಲೂ ಪ್ರವಾಸ, ಚಿತ್ರಪ್ರದರ್ಶನಗಳನ್ನು ನಡೆಸಿಕೊಂಡು ಬಂದೆ!

೧೯೫೩ ರಲ್ಲಿ ಸ್ವತಂತ್ರ ಚಿತ್ರಕಾರನಾಗಿ ಬಾಳುವದಾಗಿ ನಿರ್ಧರಿಸಿದೆ! ಇದೇ ವರ್ಷ ಬಾಂಬೆ ಆರ್ಟ್ ಸೊಸಾಯಿಟಿಯವರು ಜಹಾಂಗೀರ ಆರ್ಟ್ ಗ್ಯಾಲರಿಯಲ್ಲೇರ್ಪಡಿಸಿದ ಪ್ರದರ್ಶನದಲ್ಲಿ 'ಪೂರ್ಣಿಮಾ' ಎಂಬ ನನ್ನ ಚಿತ್ರಕ್ಕೆ ಸುವರ್ಣಪದಕ ದೊರೆಯಿತು.

ಈ ವರ್ಷವು ನನ್ನ ಜೀವನದಲ್ಲಿ ಅತ್ಯಂತ ಮಹತ್ವದ ಪರೀಕ್ಷಾಕಾಲವೆನ್ನಬೇಕು. ನೌಕರಿಯನ್ನಂತೂ ಬಿಟ್ಟುಬಿಟ್ಟಾಗಿತ್ತು. ಸ್ವತಂತ್ರ ಕಲಾವಿದನಾಗಿ ನನ್ನ ಜೀವನವನ್ನಂತು ರೂಪಿಸಿಕೊಳ್ಳಬೇಕೆಂಬ ಯೋಚನೆಯಲ್ಲಿಯೇ ನಾನಿದ್ದಾಗ ಒಂದು ದಿನ ಮುಂಬಯಿಯ ಬೋರೀಬಂದರದಲ್ಲಿ ನಾನು ವಾಸವಾಗಿದ್ದ ಹಳೆಯ ಕಟ್ಟಡಕ್ಕೆ ಅಕಸ್ಮಾತ್ ಬೆಂಕಿ ಬಿದ್ದು ಅದು ಸಂಪೂರ್ಣ ಬೂದಿಯಾಗಿಹೋಯಿತು. ಅವಸರದಿಂದ ಮನೆಯಿಂದ ಹೊರಗೋಡಿ ಬರುವಾಗ ನಾನು ಕೈಲಿ ಹಿಡಿದಿದ್ದ ಪೆನ್ಸಿಲ್ ತುಂಡೊಂದನುಳಿದರೆ ನನ್ನದೆನ್ನುವುದಲ್ಲ – ಅದೇ ಸಿಕ್ಕಿದ್ದ ಸುವರ್ಣಪದಕವೂ ಸಹ– ಅಗ್ನಿಗೆ ಅರ್ಪಿತವಾಗಿತ್ತು.

ಈ ಸುದ್ದಿ ತಿಳಿದೊಡನೆಯೆ ನನ್ನ ಅನೇಕ ಹಿತೈಷಿಗಳು, ಮಿತ್ರರು, ಸಂಘ ಸಂಸ್ಥೆಗಳು ನನ್ನ ನೆರವಿಗೆ ಬಂದು ನನಗೆ ಹತ್ತು ಸಾವಿರ ರೂಪಾಯಿಗಳನ್ನು ಅತ್ಯಂತ ನಿರಪೇಕ್ಷ ಬುದ್ಧಿಯಿಂದ ಕೊಟ್ಟಿರದಿದ್ದರೆ ನನ್ನೀ ಐಹಿಕ ಜೀವನದಲ್ಲಿ ನಾನು ಚೇತರಿಸಿಕೊಳ್ಳಬಹುದಿತ್ತೇ ಎಂಬುದನ್ನು ದೇವರೇ ಬಲ್ಲ.

ನನ್ನದೇ ಆದ ಶೈಲಿ

ಈ ಸಂದರ್ಭದಲ್ಲಿ ನನ್ನ ಗೆಳೆಯ ಶ್ರೀ ಮುಕುಂದ ಕಿರ್ಲೋಸ್ಕರ ತಕ್ಷಣ ನನಗೆ ಕಾಗದ ಬರೆದು ಸಂತಯಿಸಿದರು. ಅವರ ಪತ್ರದಲ್ಲಿಯ "........ನಿನ್ನ ಎಲ್ಲವೂ ಅಗ್ನಿಗೆ ಆಹುತಿಯಾಗಿರಬೇಕು; ಆದರೆ ನಿನ್ನ ಕೈಯಲ್ಲಿಯ 'ಬೆರಳು'ಗಳು ಚೆನ್ನಾಗಿವೆ ತಾನೆ?...." ಎಂಬ ವಾಕ್ಯ– ಅದರಲ್ಲೂ 'ಬೆರಳು' ಶಬ್ದ ನನ್ನಲ್ಲೊಂದು ವಿಶಿಷ್ಟ ಮಾರ್ಪಾಡಿಗೆ ಕಾರಣ

ನನ್ನ ಕುಟುಂಬ, ಎಡದಿಂದ ಬಲಕ್ಕೆ : ೧) ಕು. ವಿನಾ ೨) ಇಶದ ೩) ಕು. ಹೀರಾ (ಮಕ್ಕಳು) ೪) ಕು. ಬೇದಾ (ಪತ್ನಿ) ೫) ಸಯ್ಯದ (ಮಗ) ಹಿಂದೆ– ಅಳಿಯ (ಪಾಪಾ) ಮತ್ತು ಹಿರಿ ಮಗಳು ..., ಮೊಮ್ಮಗಳು ... (ಕಂಕುಳಲ್ಲಿ)



ವಾಯಿತು. ಆ ಶಬ್ದವಿತ್ತ ಪ್ರಚೋದನೆಯಿಂದಾಗಿ ಹೊಸ ಪ್ರಯೋಗಕ್ಕಿಳಿದ ನಾನು ಚಿತ್ರಗಳಿಗೆ ಆದಷ್ಟು ಬೆರಳುಗಳಿಂದಲೇ ಬಣ್ಣ ತುಂಬತೊಡಗಿದೆ! ಮೊದಲು ರಟ್ಟಿನ ಮೇಲೆ ಚಿತ್ರದ ಸ್ಕೆಚ್ ಮಾಡುವದು, ನಂತರ ಹಚ್ಚಿನ ಭಾಗಕ್ಕೆ ಬೆರಳಿನಿಂದಲೇ ಬಣ್ಣ ತುಂಬುವುದು. ಆಮೇಲೆ, ಅದನ್ನು ಚೆನ್ನಾಗಿ ಕವಡಿಯಿಂದ ತಿಕ್ಕಿ ಕುಂಚದಿಂದ ಎಲ್ಲ ರೇಖೆಗಳನ್ನು ಸೂಕ್ಷ್ಮವಾಗಿ ಕಪ್ಪು ಮಷಿಯಿಂದ ಎಳೆಯತೊಡಗಿದೆ. ಹೀಗೆ ನಿರ್ಮಿಸಿದ ಚಿತ್ರಗಳದೇ ಒಂದು ವಿಶಿಷ್ಟವಾದ 'ಶೈಲಿ' ನಿರ್ಮಾಣವಾಯಿತು. ಅದನ್ನೇ 'ಆಲಮೇಲಕರ ಶೈಲಿ' ಎಂದು ಜನ ಕರೆದರು! ಈ ಶೈಲಿಯಲ್ಲಿ ಚಿತ್ರಿಸಿದ ಚಿತ್ರಗಳಿಗೆ ಒಂದು ವಿಶಿಷ್ಟವಾದ ಸೌಂದರ್ಯ, ಬಣ್ಣಗಳಲ್ಲಿ ಒಂದು 'ಹಾರ್ಮನಿ' ಪ್ರಾಪ್ತವಾಗಿ ಇವು ನೂರಾರು ವರ್ಷಗಳ ಹಿಂದಿನ ಚಿತ್ರಗಳು ಎಂಬ ಕಲ್ಪನೆಯನ್ನುಂಟುಮಾಡತೊಡಗಿತು.

ನಾನು ವಿವಿಧ ಪ್ರಾಂತಗಳನ್ನು ತಿರುಗಿ, ಅಲ್ಲಲ್ಲಿಯ ಜನಜೀವನವನ್ನು ಅಭ್ಯಸಿಸಿ ಪಡೆದ ಅನುಭವ ಇಂದು ಈ ನನ್ನ ಶೈಲಿಯಲ್ಲಿ ಪೂರ್ಣ ಅಭಿವ್ಯಕ್ತಿ ಪಡೆಯಿತು. ವಸ್ತ್ರ, ವಸ್ತು ಎಲ್ಲವನ್ನೂ ನನ್ನ ಮನಕ್ಕೆ ಬಂದಂತೆ ಉಪಯೋಗಿಸಿಕೊಂಡೆ; ಗುಡಿ ಗುಂಡಾರಗಳನ್ನು ಕಂಡಾಗ ಅಲ್ಲಲ್ಲಿಯ ಶಿಲ್ಪದಲ್ಲಿಯ ಗುಣ, ಆಚಾರ, ವಿಚಾರ ನನ್ನ ಚಿತ್ರಗಳ ಮೇಲೆ ನನ್ನ ಮನಸ್ಸು ಗ್ರಹಿಸಿದ ಪರಿಣಾಮ ಬೀರತೊಡಗಿದುವು. ನಮ್ಮ ಭರತಭೂಮಿಯಲ್ಲಿ ಏನಿಲ್ಲ? ನಾನು, ಜನ್ಮ ಜನ್ಮವೂ ಇಲ್ಲಿಯೆ ಜನಿಸಿ ಪ್ರತಿ ಜನ್ಮದಲ್ಲಿಯೂ ಕಲೆಯ ಪೂಜಾರಿಯೇ ಆಗಿ ಬಂದರೂ ಮುಗಿಯದಷ್ಟು ಕಲೆ ಈ ಮಣ್ಣಿನಲ್ಲಿದೆ!

ನನ್ನ ಶೈಲಿಯ ಅನುಕರಣವನ್ನು ಕೆಲ ಉದಯೋನ್ಮುಖ ಕಲಾವಿದರು ಅನುಸರಿಸಿದರು. ಅವರಲ್ಲಿ ಶ್ರೀಮತಿ ಬಿ. ಪ್ರಭಾ, ರಾವುತ, ಭಟ್ಟ, ಲೇಲೆ ಮುಂತಾದವರ ಹೆಸರೆತ್ತಿ ಹೇಳಬಹುದು. ಅವರೆಲ್ಲ ಈಗ ಕಲಾಜಗತ್ತಿಗೆ ಸಾಕಷ್ಟು ಪರಿಚಿತರೂ ಅಹುದು.

ಬೂದಿಯಿಂದ ಬದುಕಿಗೆ..

ನನ್ನ ಸರ್ವಸ್ವವೂ ಅಗ್ನಿಗಾಹುತಿಯಾದುದು ನನ್ನಲ್ಲಿ ನಿರಾಶೆಯ ಬದಲು ನವಚೈತನ್ಯವನ್ನೇ ಮೂಡಿಸಿತೇನೊ. ಹಗಲು ರಾತ್ರಿಗಳನ್ನು ಲೆಕ್ಕಿಸದೆಯೆ ಚಿತ್ರನಿರ್ಮಿತಿಯಲ್ಲಿಯೆ ಮಗ್ನನಾದೆ. ಅದೊಂದು ದೃಷ್ಟಿಯಿಂದ ತಪಸ್ಸೇ ಎನಿಸಿತು.

ಈ ಪರಿಶ್ರಮದ ಫಲವಾಗಿ ಮೂಡಿಬಂದ ಹಲವು ಚಿತ್ರಗಳ ಒಂದು ಪ್ರದರ್ಶನವನ್ನು ಜಹಾಂಗೀರ್ ಆರ್ಟ್ ಗ್ಯಾಲರಿಯಲ್ಲೇರ್ಪಡಿಸಿ ಅದನ್ನು 'From ashes to life'–'ಬೂದಿಯಿಂದ ಬದುಕಿಗೆ' ಎಂದು ಕರೆದೆ. ಟೈಮ್ಸ್ ಗುಂಪಿನ ಪತ್ರಿಕೆಗಳ ಕಲಾನಿರ್ದೇಶಕರಾಗಿದ್ದ ಶ್ರೀ ಡಬ್ಲೂ. ಲಾಂಗ್‌ಹೇಮರ್ ಅವರೇ ಈ ಪ್ರದರ್ಶನದ ಉದ್ಘಾಟಕರು. ಈ ಪ್ರಸಂಗದಲ್ಲಿ ಶ್ರೀ ಕಾವಸ್ಜಿ ಜಹಾಂಗೀರ ಅವರು ನನಗೊಂದು ಸುವರ್ಣಪದಕ ದಯಪಾಲಿಸಿದರು.

ಇದಾದ ಕೆಲವೇ ದಿನಗಳಲ್ಲಿ ನನ್ನ 'Divine Love'- 'ಪವಿತ್ರಪ್ರೇಮ' ಎಂಬ ಚಿತ್ರಕ್ಕೆ ದಿಲ್ಲಿಯ ರಾಷ್ಟ್ರೀಯ ಪ್ರದರ್ಶನದಲ್ಲಿ ಲಲಿತಕಲಾ ಅಕ್ಯಾಡಮಿಯ ಒಂದು ಸಾವಿರ ರೂಪಾಯಿಗಳ ಬಹುಮಾನ ಅಂದಿನ ರಾಷ್ಟ್ರಪತಿ ಡಾ. ರಾಜೇಂದ್ರಪ್ರಸಾದರ ಹಸ್ತದಿಂದ ದೊರೆಯಿತು.

× × ×

ಜೀವನದಲ್ಲಿ ಅದೆಷ್ಟೋ ಸಂಕಟಗಳನ್ನು ದುರಿಸಬೇಕಾಗಿ ಬಂದರೂ ಅವುಗಳ ಜೊತೆ ಹಿಂದೆಯೆ ಕೀರ್ತಿ, ಯಶಸ್ಸುಗಳೂ ಬಂದಿವೆ. ಎಳೆಯನಾಗಿದ್ದಾಗ ಉದ್ವಿಗ್ನ ಮನಸ್ಥಿತಿಯಲ್ಲಾಡಿದ ಒಂದು ಮಾತಿಗೆ ಮೂರ್ತಸ್ವರೂಪ ಬರಲಿತ್ತು. 'ಶೂನ್ಯ' ಸಂಪಾದಿಸಿ ಹೊರಬಿದ್ದಿದ್ದ ಶಾಲೆ– ಸೊಲ್ಲಾಪುರದ ಎಚ್. ಡಿ. ಹೈಸ್ಕೂಲು– ಅಂದು ನನ್ನನ್ನು ಅಂತಾರಾಷ್ಟ್ರೀಯ ಕೀರ್ತಿ ಪಡೆದ ತನ್ನ ಹಳೆಯ ವಿದ್ಯಾರ್ಥಿಯೆಂದು ಕರೆದು ಗೌರವಿಸಲಿತ್ತು. ಆ ಸಭೆಗೆ ನನಗೆ ಶೂನ್ಯವಿತ್ತಿದ್ದ ಶ್ರೀ ಆಪ್ಟೆ ಗುರುಗಳೂ ಬಂದಿದ್ದರು. ಮಿತ್ರ ಶ್ರೀ ಮುಕುಂದ ಕಿರ್ಲೋಸ್ಕರರೂ ಬಂದಿದ್ದರು. ಸತ್ಕಾರಕ್ಕೆ ಉತ್ತರವಾಗಿ ನಾನು 'ಶೂನ್ಯಸಂಪಾದನೆ'ಯ ಪ್ರಸಂಗವನ್ನು ನೆನೆದುಕೊಂಡು ಅಂದು ಅದು ನಡೆದಿರದಿದ್ದರೆ ನಾನು ಕಲಾವಿದನಾಗಬಹುದಿತ್ತೋ ಇಲ್ಲವೊ ಎಂದು ಹೇಳಿ ಶ್ರೀ ಆಪ್ಟೆ ಗುರುಗಳಿಗೆ ಕೃತಜ್ಞತೆಯಿಂದ ಸಾಷ್ಟಾಂಗವೆರಗಿದೆ. ಅಷ್ಟೊಂದು ಹೃತ್ಪೂರ್ವಕವಾಗಿ ನಾನು ಬೇರಾವ ಕೆಲಸವನ್ನೂ ಮಾಡಿರಲಿಕ್ಕಿಲ್ಲ. ನಮ್ಮಿಬ್ಬರ ಕಂಗಳೂ ತೇವಗೊಂಡವು. ಶ್ರೀ ಕಿರ್ಲೋಸ್ಕರರೂ ಕಣ್ಣೊರಿಸಿಕೊಂಡುದನ್ನು ಕಂಡೆ.

× × ×

ಅದೊಂದು ದಿನ ಮುಂಬಯಿಯ ರಾಜ್ಯಪಾಲರ ನಿವಾಸದಿಂದ ಪತ್ರ ಬಂತು. ಇಂಡೋನೇಶಿಯದ ಅಧ್ಯಕ್ಷ ಸುಕರ್ಣರಿಗಾಗಿ ನನ್ನ ಕೆಲವು ಚಿತ್ರಗಳನ್ನು ತರಬೇಕಾಗಿ ತಿಳಿಸಲಾಗಿತ್ತು. ನಾನಲ್ಲಿಗೆ ನನ್ನ ಮೂರು ಚಿತ್ರಗಳೊಂದಿಗೆ ಹೋದಾಗ ಇನ್ನೂ ಎಂಟು ಹತ್ತು ಜನ ಕಲಾವಿದರೂ ಆ ರೀತಿ ಆಮಂತ್ರಿತರಾಗಿ ಬಂದಿದ್ದರು. ಬಹುಶಃ ಅವರೆಲ್ಲರ ಚಿತ್ರಗಳೂ 'ನವ್ಯ' ಶೈಲಿಯಲ್ಲಿದ್ದಿರಬೇಕು. ಎಲ್ಲವನ್ನೂ ನೋಡುತ್ತ ಬಂದ ಅಧ್ಯಕ್ಷರು, "ಏನು ಭಾರತೀಯ ಶೈಲಿಯಲ್ಲಿಯ ಚಿತ್ರಗಳೇ ಇಲ್ಲವೆ?" ಎಂದು ಕೇಳಿದರು. "ಆ ಕೋಣೆಯಲ್ಲಿ ನನ್ನ ಚಿತ್ರಗಳಿವೆ, ನೋಡುವಿರಾ?" ಎಂದೆ ನಾನು. ಅವನ್ನು ಕಂಡು ಸಂತಸಗೊಂಡ ಅವರು ಆ ಮೂರನ್ನೂ ಕೊಂಡುಕೊಂಡರಲ್ಲದೆ ನನ್ನನ್ನು ತಮ್ಮ ದೇಶಕ್ಕೆ ಆಮಂತ್ರಿಸಿದರು. ಅದರ ಪರಿಣಾಮ, ೧೯೬೦ ಹಾಗು ೧೯೬೧ ರಲ್ಲಿ ಎರಡು ಸಲ ಆ ದೇಶಕ್ಕೆ ಭೆಟ್ಟಿಯಿತ್ತು ಯಶಸ್ವಿ ಪ್ರದರ್ಶನಗಳನ್ನೇರ್ಪಡಿಸಿದೆ.

ಜೀವನದಲ್ಲಿ ಕಲಾಸಾಧನೆಯ ದಾರಿಯಲ್ಲಿರುವಾಗ ಸುಖ–ದುಃಖ, ಯಶಾಪಯಶಗಳ ಅನೇಕ ಸಿಹಿ–ಕಹಿ ಪ್ರಸಂಗಗಳು ಬಂದುಹೋಗಿ ಜೀವನವನ್ನು ನಿಷ್ಕಾಮಕರ್ಮಿಯಂತೆ ನೋಡುವ ಒಂದು ದೃಷ್ಟಿಕೋನವನ್ನು ನನಗೆ ತಂದಿತ್ತಿವೆಯೆನ್ನಬೇಕು. ಅಂತೆಯೆ ನನ್ನ ದಾರಿಯಲ್ಲಿಯೇ ನಡೆದ ಹೊಸ ಹೊಸ ಪ್ರಯೋಗಗಳನ್ನು ಮಾಡುವಲ್ಲಿಯೆ ನನಗೊಂದು ಸಮಾಧಾನ ದೊರೆಯುತ್ತದೆ. ಇದೀಗ ಕೆಲವು ವರ್ಷಗಳಿಂದ ಜಲವರ್ಣದ ಪರಿಣಾಮವನ್ನೇ ತೈಲವರ್ಣಚಿತ್ರಗಳಲ್ಲೂ ತರಬೇಕೆಂಬ ಯತ್ನದಲ್ಲಿ ನಿರತನಾಗಿರುವೆ. ಬಹುಮಟ್ಟಿಗೆ ಈ ಕಾರ್ಯದಲ್ಲಿ ಯಶಸ್ಸೂ ದೊರೆತಿದೆ.

ನನ್ನ ಇನ್ನೊಬ್ಬ ಗುರು

ನನ್ನ ಜೀವನದಲ್ಲಿ ಗುರುಗಳಿಗೆ ವಿಶಿಷ್ಟ ಮಹತ್ವವಿದೆ. ಮೊದಲಿನವರು ಸೊಲ್ಲಾಪುರದಲ್ಲಿ ಶ್ರೀ ಕೇಳಕರರಾದರೆ ಎರಡನೆಯವರು ನೂತನ ಕಲಾಮಂದಿರದ ಶ್ರೀ ದಂಡಾವತಿಮಠರು. ಮೂರನೆಯವರು ಅಹಮದಾಬಾದಿನ ಶ್ರೀ ಎ. ಎಲ್. ಖತ್ರಿ.

ಡಿಪ್ಲೊಮಾ ಮುಗಿದ ನಂತರ ಮುಂಬಯಿಯಲ್ಲಿ ನೌಕರಿಗಾಗಿ ಅಲೆದಲೆದು ನಿರಾಶನಾಗಿ ಸುಸ್ತಾಗಿ ಅಹಮದಾಬಾದಿಗೆ ಹೋಗಿದ್ದೆ. ಅಲ್ಲಿ ಭಾರತೀಯ ಶೈಲಿಯ ಪ್ರಸಿದ್ಧ ಕಲಾವಿದ ಶ್ರೀ ಖತ್ರಿಯವರಲ್ಲಿ ಅಭ್ಯಾಸಮಾಡುವ ನಿರ್ಧಾರದಿಂದ ಅವರಲ್ಲಿಗೆ ಹೋದೆ. ಅವರಲ್ಲಿ ಭಾರತೀಯ ಕಲಾಭಂಡಾರವೇ ಇದೆ.

ಸ್ಟುಡಿಯೋದ ಕಸ ಗುಡಿಸುವುದು, ಗಡಿಗೆ ತೊಳೆದು ನೀರು ತುಂಬುವುದು ಮೊದಲಾದ ಕೆಲವು ಕರಾರುಗಳಿಗೊಳಪಟ್ಟು ನಾನು ಅಲ್ಲಿರಬೇಕಾಯಿತು. ಅದೆಲ್ಲಕ್ಕೂ ನಾನೊಪ್ಪಿದೆ. ನಾವಿಬ್ಬರೂ ಎರಡು ಪ್ರತ್ಯೇಕ ಕೋಣೆಗಳಲ್ಲಿಯೇ ಕೆಲಸ ಮಾಡುತ್ತಿದ್ದೆವು. ಒಟ್ಟಿಗೆ ಅವರೊಂದಿಗೆ ಎರಡು ವರ್ಷ ಕಳೆದರೂ ಅವರು ಚಿತ್ರ ಬರೆಯುವುದನ್ನು ಒಮ್ಮೆಯೂ ಪ್ರತ್ಯಕ್ಷ ನೋಡಲಿಲ್ಲ. ಆದರೆ ಅವರು ಚಿತ್ರವನ್ನು ಪೂರ್ಣ ಮುಗಿಸಿದ ನಂತರ ಅದನ್ನು ಕಣ್ತುಂಬ ನೋಡಿ ರಸಗ್ರಹಣ ಮಾಡುತ್ತಿದ್ದೆ.

ನಿತ್ಯವೂ ನನ್ನಿಂದ ಕಸ ಗುಡಿಸುವ, ನೀರು ತುಂಬಿಸುವಂಥ ಕೆಲಸಗಳನ್ನು ಅವರು ಮಾಡಿಸುತ್ತಿದ್ದುದರ ಉದ್ದೇಶ ನನಗೆ ಹಿಂದಿನಿಂದ ಅರ್ಥವಾಯಿತು. ಯಾವುದೇ ಬಗೆಯ ಅಹಂಭಾವ ಹಾಗು ಇತರ ವಿಕಾರಗಳು ನನ್ನತ್ತ ಸುಳಿಯದೆಯೆ ನಾನು ಕರ್ಮಮಾರ್ಗದಲ್ಲಿರಬೇಕೆಂಬುದೇ ಅದಾಗಿತ್ತು. "ಮನಃಪೂರ್ವಕ ಕೆಲಸ ಮಾಡುತ್ತ ಹೋಗು; ಫಲ ತಂತಾನೆ ಹಿಂಬಾಲಿಸುವುದು. ಎಂಥ ಪ್ರಸಂಗ ಬಂದರೂ ಮನಸ್ಸು ನಿಶ್ಚಲವಾಗಿರಲಿ. ದುಃಖ ಬಂತೆಂದು ಮನಸ್ಸು ಸುಟ್ಟುಹೋಗಬಾರದು" ಎಂದವರು ಯಾವಾಗಲೂ ಹೇಳುತ್ತಿದ್ದರು.

ಅವರ ಆ ಮಾತು ನನಗೆ ಸದಾ ಊರುಗೋಲಾಗಿ ಪರಿಣಮಿಸಿದೆ. ಮುಂಬಯಿಯಲ್ಲಿ ನನ್ನ ಮನೆ ಸುಟ್ಟು ಭಸ್ಮವಾಯಿತು; ಎರಡು ಸಲ ಮೋಟಾರಿನ ಕೆಳಕ್ಕೆ ಸಿಕ್ಕು ಅಪಘಾತದಿಂದ ಪಾರಾಗಿದ್ದೇನೆ; ಮೂರು ಸಲ ದೊಡ್ಡ ಶಸ್ತ್ರಕ್ರಿಯೆಗಳು ನಡೆದಿವೆ. ಎಲ್ಲ ಪ್ರಸಂಗಗಳಲ್ಲೂ ಗುರುವಿನ ಈ ಉಪದೇಶವೇ ನನ್ನನ್ನು ರಕ್ಷಿಸಿದೆ.

ಒಮ್ಮೊಮ್ಮೆ ನನಗೆ ದೊರೆತ ಚಿನ್ನದ ಬೆಳ್ಳಿಯ ಪದಕಗಳನ್ನು ಕಂಡು ನನಗೆಯೆ ನನ್ನ ಬಗ್ಗೆ ಅತಿಯಾದ ಹೆಮ್ಮೆಯೆನಿಸುತ್ತಿತ್ತು. ಅವೆಲ್ಲವನ್ನೂ ಕಾಜಿನ ಕಪಾಟಿನಲ್ಲಿ ಅಲಂಕರಿಸಿದ್ದೆ. ಅದೊಂದು ಕ್ಷಣ ನನ್ನ ಮೌಢ್ಯದ ಅರಿವು ನನಗಾಗಿ ಅವೆಲ್ಲವನ್ನೂ ಅಕ್ಕಸಾಲಿಗನ ಬಳಿಗೊಯ್ದು ಕರಗಿಸಿ ಲೋಹವನ್ನು ಮಾರಿ ಬಂದ ಹಣದಿಂದ ಇನ್ನಷ್ಟು ಬಣ್ಣಗಳನ್ನು ಕೊಂಡುಕೊಂಡೆ.

ಕೆಲವೊಮ್ಮೆ ನನ್ನ ಜೇಬಿನಲ್ಲಿ ಸಾವಿರಾರು ರೂಪಾಯಿಗಳಿರುತ್ತವೆಯಾದರೂ ಒಮ್ಮೊಮ್ಮೆ ಎರಡು ರೂಪಾಯಿಗಳೂ ಇರುವುದಿಲ್ಲ. ಆದರೆ ಎರಡೂ ಬಗೆಯ ಪ್ರಸಂಗಗಳಲ್ಲಿ ಮನಸ್ಸಿನ ಸ್ತಿಮಿತವನ್ನು ಕಾಯ್ದುಕೊಳ್ಳಲು ಗುರೂಪದೇಶ ನನಗೆ ನೆರವಾಗಿದೆ.

ನವ್ಯಕಲೆ ಮತ್ತು ನಾನು


"ಮುಂಬಯಿಯಲ್ಲಿ 'ಮಾಡರ್ನ್'- ನವ್ಯ-ಸಮುದ್ರದ ತೆರೆಗಳು ಚೌಪಾಟಿಯ ದಂಡೆಯನ್ನು ಅಪ್ಪಳಿಸುತ್ತಿವೆ. ಅವುಗಳ ರಭಸಕ್ಕೆ ಬಂಡೆಗಲ್ಲುಗಳೂ ಸವೆಯುತ್ತಿವೆ. ಆ 'ನವ್ಯ' ಸಮುದ್ರದ ದಡದಲ್ಲಿ ನೀನೊಂದು ಉಸುಕಿನ ಕಣವಾಗಿದ್ದರೂ ಸರಿ; ಆದರೆ ನೀನು ನೀನೇ ಆಗಿರು" ಅಹಮದಾಬಾದನ್ನು ಬಿಡುವ ಮುನ್ನ ಗುರು ಶ್ರೀ ಖತ್ರಿಯವರು ನನಗೆ ಹೇಳಿದ ಕಿವಿಮಾತಿದು.

ನಾನು ಭಾರತೀಯ; ನನ್ನ ಜೀವನ ಭಾರತೀಯ; ಊಟ ಉಡಿಗೆ, ಆಚಾರ ವಿಚಾರ, ಶರೀರ, ಆತ್ಮ ಎಲ್ಲವೂ ಭಾರತೀಯವೆ. ನನ್ನ ಚಿತ್ರಶೈಲಿ ವಿಧಾನಗಳೂ ಭಾರತೀಯ; ನನ್ನ ಸರ್ವಸ್ವವೂ ಭಾರತೀಯವೆ. ಭಾರತೀಯ ಕಲಾ ಪರಂಪರೆಗೆ ಭಾರತೀಯವೇ ಆದ ಮೌಲ್ಯಗಳಿವೆ. ಅಂದಾಗ ಎಲ್ಲಿಂದಲೊ ಎರವಲು ತಂದುದನ್ನು ಅಂಧಶ್ರದ್ಧೆಯಿಂದ ನಂಬಿ ಅದಕ್ಕೆ ಶರಣು ಹೋಗಬೇಕೇಕೆ?

× × ×

ಅದೊಂದು ಆಕಸ್ಮಿಕ. ದಿಲ್ಲಿಯ ಕುಮಾರ ಆರ್ಟ್ ಗ್ಯಾಲರಿಯಿಂದ ಕರೆ ಬಂತು. ಐದು ವರ್ಷಗಳ ಕಾಲ ಅವರಿಗೆ ನನ್ನ ಚಿತ್ರಗಳನ್ನು ಪೂರಯಿಸುವ 'ಬಾಂಡ್' ಬರೆದು ಕೊಟ್ಟು ಅಲ್ಲಿರಲು ಹೋದೆ. ಕಲೆಗೆ ಇಲ್ಲಿ ಪ್ರೋತ್ಸಾಹನ ದೊರೆವುದೆಂದುಕೊಂಡು ಹೋಗಿದ್ದ ನನಗೆ ಅಲ್ಲಾದುದು ಭ್ರಮನಿರಸನ ಮಾತ್ರ. ಕಲಾವಿದ ಹೊಟ್ಟೆಪಾಡಿಗಾಗಿ ಇಂಥ ಗ್ಯಾಲರಿಗಳಿಗೆ ತನ್ನ ಕೃತಿಗಳನ್ನು ಮಾರಿಕೊಂಡರೂ ಅವನು ಉಪವಾಸ ಸಾಯಬೇಕು. ಆದರೆ ಆರ್ಟ್ ಗ್ಯಾಲರಿಗಳ ಒಡೆಯರು ಕಲಾವಿದನ ತಪಸ್ಸಿನ ಫಲವನ್ನು ಹೇರಳ ಹಣಕ್ಕೆ ಮಾರಿಕೊಂಡು ನಾಲ್ಕಾರು ಬಿಲ್ಡಿಂಗ್‌ಗಳ ನಿಟ್ಟು ಮೆರೆಯುತ್ತಾರೆ.

ದಿಲ್ಲಿಯ ಈ ಐದು ವರ್ಷಗಳ ವಾಸ ನನ್ನ



" ನನಗೆ ಬೇರೇನೂ ಚಟಗಳಿಲ್ಲ. ಕಾರ್ಯನಿರತನಾದಾಗ ಆಗಾಗ ಚಹಾ ಬಂದು ಬೇಕಾಗುತ್ತದೆ ಅದನ್ನು ನನ್ನ ಪತ್ನಿ ಪೂರಯಿಸುತ್ತಾಳೆ "

ಜೀವನದಲ್ಲಿಯ ಅತ್ಯಂತ ಬೇಸರದ ನಿರಾಶೆಯ ಕಾಲವೆನ್ನಬೇಕು.

ನಾನೀಗ 'ಪ್ರಿನ್ಸಿಪಾಲ್'

ಅದೊಂದು ದಿನ ಗುರು ಶ್ರೀ ದಂಡಾವತಿಮಠರಿಂದ ಕರೆ ಬಂತು. ಅವರು ಆದೇ ಧಾರವಾಡದಿಂದ ಬಂದಿದ್ದರು.

"ಆಲಮೇಲಕರ, ನಿಮಗೊಂದು ಹೊಣೆಗಾರಿಕೆಯ ಕೆಲಸ ವಹಿಸಿಕೊಡಬೇಕೆಂದಿರುವೆ. ನಾನು ನಿವೃತ್ತನಾದಂದಿನಿಂದ ನಮ್ಮ ಕಲಾಮಂದಿರದ ಆಡಳಿತದಲ್ಲಿ ಶೈಥಿಲ್ಯ ಕಂಡು ಬರುತ್ತಿದೆ. ಇದು ಅಧೋಗತಿಗಿಳಿಯದೆಯೆ ಊರ್ಜಿತಹೊಂದಬೇಕು. ಅಂತೆಯೆ ಈ ಕಾರ್ಯವನ್ನು ನಿಮಗೊಪ್ಪಿಸಬೇಕೆಂದಿರುವೆ," ಅವರು ಎಂದಿನ ವಾತ್ಸಲ್ಯದ ಅಧಿಕಾರವಾಣಿಯಲ್ಲೇ ಹೇಳಿದರು.

ನನಗಿದು ಅನಿರೀಕ್ಷಿತವಾಗಿತ್ತು. ಕಲಿಸುವುದೂ ಒಂದು ಕಲೆ, ಅದರ ಅನುಭವ ನನಗೆಷ್ಟು ಇರಲಿಲ್ಲ. ನನ್ನ ಯೋಗ್ಯತೆಯ ಬಗ್ಗೆ ನನ್ನಲ್ಲಿಯೆ ಸಂದೇಹ ಮೂಡಿತು. ಆದರೆ ಗುರುಗಳು ನನ್ನ ಆಕ್ಷೇಪವನ್ನು ಕಿವಿಗೆ ಹಾಕಿಕೊಳ್ಳಲೇಯಿಲ್ಲ. ಅವರ ಆಜ್ಞೆಯ ಮೇರೆಗೆಯೆ ಅವರ ಸ್ಥಾನವನ್ನು ತುಂಬುವ ಪ್ರಯತ್ನ ಮಾಡುತ್ತಲಿರುವೆ. ದೇವರು ಈ ಕಾರ್ಯದಲ್ಲಿ ಯಶ ಕರುಣಿಸಬೇಕು.

× × ×

ನಮ್ಮದು ಬಹು ದೊಡ್ಡ ಕುಟುಂಬ. ಮಕ್ಕಳ ಹಿತವನ್ನೇ ಬಯಸುವ ೮೨ ವರ್ಷದ ತಂದೆ, ೭೮ ವರ್ಷದ ತಾಯಿ ಇದ್ದಾರೆ. ಸೋದರರು, ಸೋದರಿಯರಿದ್ದಾರೆ. ಅವರೆಲ್ಲರಿಗೂ ಮಕ್ಕಳು ಮೊಮ್ಮಕ್ಕಳಿವೆ. ಮುಂಬಯಿಯ ಪಾಯಿಧುನಿಯ ಹಳೆಯ ಮನೆಯಲ್ಲಿ ಪತ್ನಿ ಹಾಗು ಆರು ಜನ ಮಕ್ಕಳೊಂದಿಗಿರುವೆ. ಇತ್ತೀಚೆ ನಾನೂ 'ಅಜ್ಜ' ನಾಗಿದ್ದೇನೆ. ಆದರೆ ನನ್ನ ಜೀವನಕ್ಕೊಂದು ಆದರ್ಶವನ್ನು ನೀಡಿದ ವ್ಯಕ್ತಿ ನಮ್ಮ ಸೋದರತ್ತೆ. ಎಂಥ ಕತ್ತಲಲ್ಲೂ ಕೈ ಹಿಡಿದು ನಡೆಸುವ ಆತ್ಮ ಅವಳದು.

ಕಲೆಯ ಸೇವಕ ನಾನು. ಭಾರತೀಯ ಕಲೆಯ ಆರಾಧನೆಯೆ ನನ್ನ ಜೀವನದ ಉಸಿರು. ★★

ಪ್ರಯೋಗಶೀಲ ಕಲೆ ನನ್ನ ಮಾಧ್ಯಮ

— ಕೆ. ಕೆ ಹೆಬ್ಬಾರ್

'ಕರ್ಮವೀರ'ದ ಶ್ರೀ ಎಸ್. ವಿ. ಪಾಟೀಲರು ಹಾಗೂ ಮಿತ್ರರಾದ ಶ್ರೀ ಸಂತೋಷ ಕುಮಾರ ಗುಲ್ವಾಡಿಯವರು ದೀಪಾವಳಿ ಸಂಚಿಕೆಯಲ್ಲಿ ನನ್ನ ಆತ್ಮಕಥನ ಬರೆಯಬೇಕೆಂದು ಕೇಳಿದಾಗ ನಾನು ಸ್ವಲ್ಪ ಹಿಂಜರಿದೆ. ಏಕೆಂದರೆ ಕಲಾವಿದನೊಬ್ಬನ ಮಾಧ್ಯಮ ಬಣ್ಣ ಮತ್ತು ರೇಖೆಗಳಲ್ಲಿರುತ್ತದಲ್ಲದೆ ಬರಹ ರೂಪದಲ್ಲಿ ಅಲ್ಲ. ಅದರಲ್ಲೂ ಕಲಾವಿದ ತನ್ನ ಬಗೆಗೆ ತಾನು ಹೇಳಿಕೊಳ್ಳುವುದೇನಿರುತ್ತದೆ? ಎಲ್ಲವನ್ನೂ ಅವನ ಕೃತಿಯೇ ಸಾರುತ್ತದೆ. ಆದರೆ ಸದ್ಯ ಮಿತ್ರರ ಮಾತನ್ನು ಮೀರುವಂತಿರಲಿಲ್ಲ.

ಕಲಾವಿದನೆಂದಾಗಲಿ, ವ್ಯಕ್ತಿಯೆಂದಾಗಲಿ ನನ್ನನ್ನು ಭೆಟ್ಟಿಯಾಗಲು ಬರುವ ಕಲಾಪ್ರಿಯರು, ಪತ್ರಿಕೋದ್ಯೋಗಿಗಳು, ವಿಚಾರವಂತರು, ವಿಮರ್ಶಕರು ನನ್ನ ಬಗೆಗೆ, ನನ್ನ ಕಲೆಯ ಬಗೆಗೆ ಕುತೂಹಲದಿಂದ ಪ್ರಶ್ನಿಸಿದಾಗ ಅವರಿಗೆಲ್ಲ ಒಂದು ಮಾತನ್ನು ನಾನು ಹೇಳಿಕೊಂಡು ಬಂದಿದ್ದೇನೆ. ಈಗ ಅದನ್ನೇ ಇಲ್ಲಿ ಮತ್ತೆ ಹೇಳಿದರೆ ಅಪ್ರಸ್ತುತವಾಗಲಾರದು.

ಎಲ್ಲ ಕಲಾವಿದರಂತೆ ನಾನೂ ಒಬ್ಬ ಕ್ರಿಯಾಶೀಲ, ಪ್ರಯೋಗಶೀಲ ಜೀವಿ. ಜೀವನದ ಬಗೆಗೆ ನನ್ನಲ್ಲಿರುವ ಭಾವನೆಗಳನ್ನು ಸರಳವಾದ ಮಾರ್ಗದಿಂದ ಸ್ಪಷ್ಟವಾಗಿ ಅಭಿವ್ಯಕ್ತಗೊಳಿಸಲು ನಾನು ಯಾವಾಗಲೂ ಆಸಕ್ತಿಯಿಂದ ಪ್ರಯೋಗಗಳನ್ನು ಮಾಡುತ್ತಿರುತ್ತೇನೆ. ಹೊಸ ಕೃತಿಯೊಂದನ್ನು ಕೈಗೆ ತೆಗೆದುಕೊಂಡೊಡನೆ ಈ ಮೊದಲಿನ ನನ್ನ ಸಾಧನೆಯನ್ನು ಮರೆತು ಬಿಡಲು ಪ್ರಯತ್ನಿಸಿ, ಉತ್ತಮ ಫಲಿತಾಂಶ ಕೊಡಲು ಹೊಸ ವಿಚಾರಗಳನ್ನು ಸಾಧಿಸುವೆ. ಕೆಲವೊಮ್ಮೆ ಇತರ ಕಲಾವಿದರು ತಮ್ಮ ಕಲ್ಪನೆಗಳನ್ನು ನನ್ನ ಕ್ರಮದಲ್ಲೇ ಆದರೆ ಹೆಚ್ಚಿನ ಸೌಲಭ್ಯದಿಂದ ಹಾಗೂ ವೇಗದಿಂದ ಅಭಿವ್ಯಕ್ತಗೊಳಿಸುವುದನ್ನು ಕುತೂಹಲದಿಂದ ನೋಡುತ್ತೇನೆ. ಅವರ ಮತ್ತು ನನ್ನ ನಡುವೆ ಸಮಾನತೆ ಕಂಡುಬಂದಾಗ ಅವರನ್ನು ಅರಿತುಕೊಳ್ಳಲು, ಅಂತರಂಗದಲ್ಲಿ ಮೈತ್ರಿ ಬೆಳೆಸಲು ಪ್ರಯತ್ನಿಸುವೆ. ನನ್ನ ಸ್ವಂತ ಶೈಲಿಯ ಅಚ್ಚು ಕೆಡದಂತೆ ನಾನು ಪ್ರಯೋಗಗಳನ್ನು ಮಾಡಿ, ಅನುಭವಿಸಿ ಕಾರ್ಯಗಳನ್ನು ಕೈಗೊಳ್ಳುವೆ.

ಇದಿಷ್ಟು ಅಂದು ೧೯೧೧ರಲ್ಲಿ ಉಡುಪಿಯ ಬಳಿಯ ಕಟ್ಟಿಂಗೇರಿಯಲ್ಲಿ ಹುಟ್ಟಿದಂದಿನಿಂದ ಇಂದಿನ ವರೆಗೆ ನಾನು ನನ್ನ ಕಲಾಪ್ರಯೋಗದ ವಿಚಾರ ಸಂಕ್ಷೇಪವಾಗಿ ಹೇಳಬಹುದಾದುದು. ಈ ಮಧ್ಯೆ ನನ್ನ ವಿಚಾರಗಳು ಎಷ್ಟೋ ಅರಳಿವೆ, ಅನುಭವ ಬಲಿತಿದೆ, ಕಲಿತಿದ್ದು, ಪ್ರಯೋಗ ಮಾಡಿದುದು ತುಂಬ ಇದೆ, ಕಲಾಮಾಧ್ಯಮ ಪಕ್ವಗೊಂಡಿದೆ. ಅದರ ಅಭಿವ್ಯಕ್ತಿಯನ್ನು ನಾನು ಬಣ್ಣ – ರೇಖೆಗಳಲ್ಲಿ ಹೊರಗೆಡಹುತ್ತ ಬಂದಿದ್ದೇನೆ. ಅದರಿಂದ ಪ್ರತಿ ಬಾರಿಯೂ ಹೊಸ ಹೊಸ ಅನುಭವ ಪಡೆದಿದ್ದೇನೆ, ಆನಂದ ಪಟ್ಟಿದ್ದೇನೆ, ಧನ್ಯತೆಯನ್ನು ಕಂಡಿದ್ದೇನೆ.

ಪ್ರತಿಭೆ ಮತ್ತು ಪ್ರಭಾವ ಇವು ಪ್ರತಿಯೊಬ್ಬ ಕಲಾವಿದನ ಎರಡು ಕಣ್ಣುಗಳು, ಅಂತೆಯೆ ಅವಕಾಶ ಹಾಗೂ ಸಾಧನೆ ಇವೂ ಇನ್ನೆರಡು ಕಣ್ಣುಗಳು. ನಾನೂ ಇವಕ್ಕೆ ಹೊರತಾಗಿಲ್ಲ. ಕಲಾವಿದನೊಬ್ಬ ಈ ವಿಚಾರ ಮಾತನಾಡುವುದು ಬಹಳ ಇದೆ. ಪ್ರಕೃತ ನನ್ನ ವೈಯಕ್ತಿಕ ಸೀಮೆಯೊಳಗಿನ ಚೌಕಟ್ಟಿನಲ್ಲಿ ಇವು ಹೇಗೆ ಹೊಂದಿದುವು ಎಂದು ಹೇಳುವೆ.

ಜನ್ಮಸ್ಥಳದ ಪ್ರಭಾವ

ದೇವರ ಪ್ರತಿಯೊಂದು ಕೃತಿಯಲ್ಲೂ ಪ್ರತಿಭೆಯಿದ್ದೇ ಇದೆ. ಕೆಲವರು ಅದನ್ನು ಗುರುತಿಸಿಕೊಳ್ಳುತ್ತಾರೆ; ಕೆಲವರು ಮರೆಯುತ್ತಾರೆ. ಬಹುಶಃ ನಾನು ಮೊದಲನೆಯ ಗುಂಪಿಗೆ ಸೇರಿದವನಿರಬೇಕು. ಎಂದೇ ದಕ್ಷಿಣ ಕನ್ನಡದ ಒಂದು ಸಣ್ಣ ಹಳ್ಳಿಯಲ್ಲಿ ಹುಟ್ಟಿದ ನಾನು ಅಲ್ಲಿದ್ದ ಕೆಲವೇ ವರ್ಷಗಳಲ್ಲಾದರೂ ಅಲ್ಲಿಯ ಜೀವನ ನನ್ನ ಮೇಲೆ ಅದ್ಭುತ ಪ್ರಭಾವ ಮಾಡಿದುದನ್ನು ನಾನು ಇಂದಿಗೂ ಮರೆತಿಲ್ಲ. ಈ ಪ್ರಭಾವ ನನ್ನಲ್ಲಿ ಎಷ್ಟೊಂದು ಬಗೆಯಲ್ಲಿ

ಕಲಾವಿದ ಹೆಬ್ಬಾರ್ ಮತ್ತು ರೇಖಾ ಹೆಬ್ಬಾರ್



ಸ್ಪಂದಿಸಿದೆ ಎಂಬ ಅರಿವು ನನಗಿದೆ. ಇಂದು ದಕ್ಷಿಣ ಕನ್ನಡ ಜಿಲ್ಲೆ ಮತ್ತು ನನ್ನ ಸಂಪರ್ಕ ಭೌತಿಕವಾಗಿ ವಿಶೇಷವಿಲ್ಲ. ಆದರೆ ಅಲ್ಲಿಯ ಜೀವನ, ಸಂಸ್ಕೃತಿ, ಅಲ್ಲಿಯ ನೆಲ, ಹಳ್ಳಿಯ ಜನರು, ಯಕ್ಷಗಾನ – ತಾಳ ಮದ್ದಳೆ, ಜಾನಪದ ನೃತ್ಯ – ಗೀತಗಳು ನನ್ನಲ್ಲಿ ಇಂದಿಗೂ ಹೊಸ ಕಲಾಚೇತನವನ್ನೇ ಹರಿಸುತ್ತಿವೆ.

ದಕ್ಷಿಣ ಕನ್ನಡದ ಜೀವನ ಒಂದು ವಿಶಿಷ್ಟ ರೀತಿಯದು. ಅಲ್ಲಿಯ ಸಂಸ್ಕೃತಿಗೆ ಒಂದು ಪ್ರತ್ಯೇಕತೆಯಿದೆ. ಅಲ್ಲಿಯ ಕೆಂಬಣ್ಣದ ಭೂಮಿ, ಕೆಸರ ಗದ್ದೆಗಳು, ಹಸಿರು ನೆಲ, ಕಂದುಬಣ್ಣದ ಗುಡ್ಡಗಳು, ನೀಲಿಯಾಗಸ, ಸಾಗರ, ಬಣ್ಣಬಣ್ಣದ ಯಕ್ಷಗಾನ – ಬಯಲಾಟದ ವೇಷಧಾರಿಗಳು, ಭೀಕರ ವರ್ಷಋತು, ಜಾತ್ರೆ, ಕೋಳಿ ಜೂಜು, ಸಂತೆಗಳು ನನ್ನಲ್ಲಿ ಇಂದಿಗೂ ಹೊಸ ಸ್ಫೂರ್ತಿಯನ್ನು ಹರಿಯಿಸುತ್ತಲೇ ಇವೆ. ಆದರೆ ಇವೆಲ್ಲಕ್ಕೂ ಕಳಸವಿಟ್ಟ ಹಿರಿಯ ಸ್ಫೂರ್ತಿ ನನ್ನ ಮಾತೋಶ್ರೀ.


ತಾಯಿಯ ಪ್ರೋತ್ಸಾಹ

ನನ್ನಲ್ಲಿ ದೈವದತ್ತವಾಗಿದ್ದ ಕಲಾಚೇತನವನ್ನು ಮೊದಲಾಗಿ ಗುರುತಿಸಿ, ಅದಕ್ಕೆ ಪ್ರೋತ್ಸಾಹ ಕೊಟ್ಟವರು ನನ್ನ ತಾಯಿ. ಅಮ್ಮನ ಪ್ರೋತ್ಸಾಹರೂಪದ ಆ ಆಶೀರ್ವಾದ ಬಲದಿಂದಲೇ ಕಲಾಜೀವನದಲ್ಲಿ ಇಂದಿನವರೆಗೆ ಇಷ್ಟು ದೂರ ನಾನು ನಡೆದು ಬಂದಿದ್ದೇನೆ. ನನ್ನಲ್ಲಿ ಸುಪ್ತವಾಗಿದ್ದ ಕಲಾಪ್ರತಿಭೆಯನ್ನು ನನ್ನ ಅರಿವಿಗೆ ತಂದುಕೊಟ್ಟವರಲ್ಲಿ ಎರಡನೆಯವರು ಉಡುಪಿಯ ಕಲಾವಿದರಾದ ಶ್ರೀ ಪಿ. ಶ್ರೀನಿವಾಸರಾವ್.

ಮೊದಲ ಹೆಜ್ಜೆಯೇನೋ ಇಟ್ಟಾಗಿತ್ತು. ಆದರೆ ಅವಕಾಶ? ಕಟ್ಟಿಂಗೇರಿಯ ಆ ಮೂಲೆಯಲ್ಲಿ ಕೂತು ಕಲಾವಿದನೊಬ್ಬ ಎಷ್ಟು ಕಲಿಯಬಹುದು, ಎಷ್ಟು ದೂರ ನಡೆಯಬಹುದು? ದಕ್ಷಿಣ ಕನ್ನಡ ಜಿಲ್ಲೆ ಇದಕ್ಕೆ ಒಳ್ಳೆಯ ಸ್ಥಳವಲ್ಲ – ಅಂದಿಗೂ ಇಂದಿಗೂ. ಇದನ್ನು ಅರಿಯದೆ ಅಥವಾ ಪರಿಸ್ಥಿತಿಯ ಒಳಗಾಗಿ ನಮ್ಮ ಎಷ್ಟೆಷ್ಟು ಒಳ್ಳೆಯ ಕಲಾವಿದರು ಅನಾಮಧೇಯರಾಗಿ ಅಲ್ಲೇ ಉಳಿದಿಲ್ಲ! ನಾನು ಅವರ ದಾರಿ ತುಳಿಯಬಾರದು ಎಂದುಕೊಂಡೆ.

ಶಾಲೆಗಳು ಕಲಾವಿದರನ್ನು ಸಿದ್ಧಪಡಿಸುವ ಕಾರ್ಖಾನೆಗಳಲ್ಲ. ಆದರೂ ಸಮಾಜದ ರಚನೆಗೆ ಸರಿಯಾಗಿ ಕಲಾವಿದ ಕೆಲವೊಮ್ಮೆ ಇಂಥವುಗಳಿಗೆ ಒಳಗಾಗಬೇಕಾಗುತ್ತದೆ. ಮೈಸೂರಿನ 'ಚಾಮರಾಜ ಟೆಕ್ನಿಕಲ್ ಇನ್ಸ್ಟಿಟ್ಯೂಟ್'ನಲ್ಲಿ ನನ್ನ ಸಮಯ ಹೋದುದು ಈ ದೃಷ್ಟಿಯಿಂದ. ನಿಸರ್ಗದಿಂದ ದೂರವಾಗಿ, ಅದರ ಮತ್ತು ಕಲಾವಿದರ ನಡುವೆ ಅಭೇದ್ಯ ಗೋಡೆ ಕಟ್ಟಿ, ಆ ಅನುಭವ, ಆ ಸಂತೋಷಗಳಿಂದ ನಮ್ಮನ್ನು ದೂರ ಒಯ್ಯುವ ಈ ಕಲಾಶಾಲೆಗಳಲ್ಲಿ ಬರೀ ಯಾಂತ್ರಿಕತೆಯನ್ನು ಕಂಡ ನಾನು ಮುಂದಿನ ನನ್ನ ಭವಿಷ್ಯವನ್ನು ಮುಂಬಯಿಯಲ್ಲಿ ಗುರುತಿಸಿದೆ. ಅದನ್ನು ಸಾಧಿಸಿ, ಭದ್ರವಾಗಿ ಮಾಡಿಕೊಂಡ ಆತ್ಮಸಂತೋಷ ಇಂದು ನನಗಿದೆ.

ಮುಂಬಯಿಯಲ್ಲಿ 'ನೂತನ ಕಲಾ ಮಂದಿರ'' ಮತ್ತು 'ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್'ಗಳಲ್ಲಿ ಕಲಿತು ೧೯೩೮ರಲ್ಲಿ ಡಿಪ್ಲೊಮಾವನ್ನು ಕೂಡ ಪಡೆದುದಾಯಿತು. ಲೋಕರೂಢಿಯಿಂದ ಕಲಾವಿದನೊಬ್ಬನನ್ನು ಅಳೆಯುವ ಮಾನದಂಡವಿದು. ಆದರೆ ನಾನು ಅಷ್ಟಕ್ಕೇ ಸಮಾಧಾನ ಪಡಲಿಲ್ಲ, ನನ್ನ ಜೀವನ ಆರಂಭವಾಗಿತ್ತಷ್ಟೆ. ಇದಕ್ಕೆ ಸರಿಯಾಗಿ ಜೆ. ಜೆ. ಕಲಾಶಾಲೆಯ ಪ್ರಿನ್ಸಿಪಾಲ್ ಜೆರಾರ್ಡರು ನನ್ನ ಭಾವನೆಗಳನ್ನು ಗುರುತಿಸಿದುದು ನನ್ನ ಜೀವನದಲ್ಲಿ ಒಂದು ಮೈಲುಗಲ್ಲಾಯಿತು. ಸ್ಲೇಡ್–ಕೆನ್ಸಿಂಗ್‌ಟನ್ ಶೈಲಿಗಳಿಂದ ಬೇಸತ್ತ ಅವರು ರಚನಾತ್ಮಕ ಶೈಲಿಯನ್ನು ಗುರುತಿಸಲು ಹಾರೈಸಿದ್ದರು. ಈಗ ಬಾಯಾರಿದವರಿಗೆ ನೀರು ದೊರೆತಂತಾಯಿತು; ಅವರಿಗೂ, ನನಗೂ. ಜೆರಾರ್ಡರ ಮಾರ್ಗದರ್ಶನವನ್ನು ನಾನು ಹೇಗೆ ಮರೆಯಬಲ್ಲೆ? ನನ್ನ ಕಲಾಜೀವನಕ್ಕೆ ಅವರು ದೃಷ್ಟಿ ಕೊಟ್ಟರು; ಒಂದು ಮಹತ್ವದ ಉದ್ದೇಶವಿದೆ ಎಂಬುದನ್ನು ತೋರಿಸಿಕೊಟ್ಟರು. ಅವರು ನಿಜವಾಗಿಯೂ ನನ್ನ ಕಲಾಗುರು.



ಕಲಾವಿದ ಕೆ. ಕೆ. ಹೆಬ್ಬಾರ

ಮಹತ್ವದ ಮೈಲಿಗಲ್ಲುಗಳು

೧೯೫೯ ನನ್ನ ಜೀವನದಲ್ಲೊಂದು ಮಹತ್ವದ ವರ್ಷ. ನನ್ನ 'ಕಾರ್ಲಿ ಗುಹೆಗಳಲ್ಲಿ' ಕೃತಿ ಕಲ್ಕತ್ತದ 'ಎಕಡೆಮಿ ಆಫ್ ಆರ್ಟ್ಸ್' ನಿಂದ ಬಂಗಾರದ ಪದಕ ಗಿಟ್ಟಿಸಿತು. ನನ್ನ ರಚನಾತ್ಮಕ ಕ್ಷೇತ್ರ ಈಗ ವಿಸ್ತರಿಸಿತು. ಈ ಮೊದಲೇ ಕಾಂಗ್ರಾ, ಮುಗಲ್, ರಜಪೂತ್ ಶೈಲಿಗಳಲ್ಲಿ ಪ್ರಯೋಗಗಳನ್ನು ನಡೆಸಿ ನನ್ನದೇ ಶೈಲಿಯನ್ನು ರೂಪಿಸಿಕೊಂಡು ಹೋಗುವ ನನ್ನ ಪ್ರಯತ್ನವನ್ನು ಗುರುತಿಸಿದುದು ನನ್ನ ಜೀವನ ದಶೆಯನ್ನೇ ಬದಲಾಯಿಸಿತು. ಭಾರತೀಯ ವಿಷಯಗಳನ್ನು ತೆಗೆದುಕೊಂಡು ಪಾಶ್ಚಾತ್ಯ ತಂತ್ರದಲ್ಲಿ ನನ್ನ ಶೈಲಿ ರೂಪುಗೊಳ್ಳುತ್ತಿದ್ದುದನ್ನು ಹಲವರು ಮೆಚ್ಚಿಕೊಂಡರು.

ಕಲಾವಿದ ನಿರಂತರ ಸಾಧಕ. ನಿಸರ್ಗದಿಂದ, ಅವನ ಸುತ್ತಮುತ್ತಲಿನ ಜೀವನದಿಂದ ಅವನು ತಿಳಿದುಕೊಂಡು, ಅದನ್ನು ತನ್ನ ರಚನಾತ್ಮಕ ಕ್ರಿಯಾಶಕ್ತಿಯಿಂದ ಕಲಾಕೃತಿಯನ್ನಾಗಿ ಮಾಡುವ ದೊಡ್ಡ ಹೊಣೆ ಅವನದು. ೧೯೪೦ರಿಂದ ೪೭ರ ವರೆಗೆ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಪಾರ್ಟ್ ಟೈಮ್ ಶಿಕ್ಷಕನಾಗಿದ್ದ ನಾನು ಈ ಅವಕಾಶವನ್ನು ಇನ್ನೂ ಹೊಸ ಹೊಸ ಪ್ರಯೋಗಗಳನ್ನು, ಸಾಧನೆಗಳನ್ನು ಮಾಡಲು ಉಪಯೋಗಿಸಿಕೊಂಡೆ.

ನನ್ನ ಕಲಾಜೀವನದಲ್ಲಿ ೧೯೪೯ ಇನ್ನೊಂದು ಮಹತ್ವದ ವರ್ಷ. ನನ್ನ ಮೊದಲ ಏಕ ಕಲಾವಿದ ಪ್ರದರ್ಶನ ನಡೆದುದು ಅದೇ ವರ್ಷ. ಕಲಾಪ್ರಪಂಚದಲ್ಲಿ ಇದೊಂದು ವಿಶಿಷ್ಟ ಸಾಧನೆ ಮಾತ್ರವಲ್ಲ, ಕಲಾವಿದನೊಬ್ಬನು ತನ್ನ ಶೈಲಿಯನ್ನು ಪರಿಚಯ ಮಾಡಿಕೊಡುವ ಅಮೂಲ್ಯ ಅವಕಾಶ. ಇತರ ಕಲಾವಿದರು, ಕಲಾಭಿಮಾನಿಗಳು, ವಿಮರ್ಶಕರು, ಈ ಕೃತಿಗಳನ್ನು ಕಂಡು ಕಲಾವಿದನ ಅನುಭವವನ್ನು ತಮ್ಮದನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿದಾಗ ಕಲಾವಿದ ತನ್ನ ಪ್ರಯತ್ನ ಸಾರ್ಥಕ ಎಂದುಕೊಳ್ಳುತ್ತಾನೆ. ೧೯೪೮ರಲ್ಲಿ ನನ್ನ ಕೃತಿಗಳ ಪ್ರಥಮ ಗ್ರಂಥವು ಡೀಲಕ್ಸ್ ಪ್ರತಿರೂಪದಲ್ಲಿ ಪ್ರಕಟವಾದುದು ನನ್ನ ಇನ್ನೊಂದು ಹೆಜ್ಜೆಯಾಗಿತ್ತು. ಬಾಂಬೆ ಆರ್ಟ್ ಸೊಸೈಟಿಯ ಬಂಗಾರ ಪದಕವನ್ನು ನನ್ನ ಕೃತಿಗಳು ತಂದುದು ಆಗಲೆ. ನನ್ನ ಕೃತಿಯೊಂದನ್ನು ವರ್ಷದ ಶ್ರೇಷ್ಠ ರಚನೆಯೆಂದು ಭಾರತ ಸರಕಾರವು ರೂ. ೨೫೦೦ ಕೊಟ್ಟು ನನ್ನನ್ನು ಗೌರವಿಸಿತು. ಇವು ನನ್ನ ಯುರೋಪು ಪ್ರಯಾಣಕ್ಕೆ ಅನುವು ಮಾಡಿಕೊಟ್ಟುವು.

ಪ್ಯಾರಿಸ್ಸಿನ 'ಅಕಾಡೆಮಿ ಜ್ಯೂಲಿಯಸ್'ನಲ್ಲಿ ಸಾಧನೆ ಮಾಡುವ ಅವಕಾಶ ನನಗೊದಗಿತು. ಇದರಿಂದ ನನಗೆ ಹೊಸ ವಿಚಾರಗಳಲ್ಲಿ, ತಂತ್ರಗಳಲ್ಲಿ ಪ್ರಯೋಗ ಮಾಡಲು ಅನುವು ದೊರೆಯಿತು. ೧೯೪೮ – ೫೦ರ ನಡುವಿನ ಕಾಲದಲ್ಲಿ ಲಂಡನ್, ಪ್ಯಾರಿಸ್, ಸ್ವಿಜರ್‌ಲೆಂಡ್‌ಗಳಲ್ಲಿ ನನ್ನ ಕಲಾಕೃತಿಗಳ ಪ್ರದರ್ಶನಗಳಾದುವು. 'ಈ ಕೋಲ್ ಎಸ್ಪಿನ್ಯೂ'ದಲ್ಲಿ ಗ್ರಾಫಿಕ್ ಕಲೆಯಲ್ಲಿ ಇನ್ನೂ ಪರಿಣತಿ ಪಡೆದುದು ಆಗಲೆ.

ಈ ಸಂದರ್ಭದಲ್ಲಿ ಜಾರ್ಜ್ ರೊವಾಲ್ಟ್‌ರು ನನಗೆ ಹೇಳಿದ ಮಾತು ಈಗಲೂ ನೆನಪಿದೆ – "ನೀನೇಕೆ ಇಲ್ಲಿಗೆ ಬಂದೆ ಮಗು? ನಿನಗೆ ನಿನ್ನದೇ ಆದ ಶೈಲಿ ಸಿದ್ಧಿಸಿದೆ. ಅದನ್ನು ನಿನ್ನದೇ ರೀತಿಯಲ್ಲಿ ನೀನು ರೂಢಿಸಿಕೊಳ್ಳಬೇಕು." ಹೌದು. ಕಲಾವಿದನೊಬ್ಬನಲ್ಲಿ ಬೇರೆ ಶೈಲಿಗಳು ಎಷ್ಟೇ ಪ್ರಭಾವ ಮಾಡಿದರೂ ತನ್ನ ಶೈಲಿ ರೂಪಿಸಿಕೊಳ್ಳುವುದು ಅತ್ಯವಶ್ಯ. ಅವರ ಮಾತು ಇಂದಿಗೂ ನನಗೆ ಮಾರ್ಗದರ್ಶಿ.

ನನ್ನ ವಿದೇಶಯಾತ್ರೆಗಳಲ್ಲೆಲ್ಲ ನನ್ನ ಕೃತಿಗಳ ಮೂಲಕ ಭಾರತೀಯತ್ವವೆಂದರೇನು ಎಂಬುದನ್ನು ತೋರಿಸುವ ಅವಕಾಶ ನನಗೆ ದೊರೆಯುತ್ತಿತ್ತು. ೧೯೫೩ರಲ್ಲಿ ನಾನು ರಶ್ಯ, ಪೋಲೆಂಡ್, ಪಶ್ಚಿಮ ಜರ್ಮನಿಗಳಿಗೆ ಭಾರತೀಯ ಸಾಂಸ್ಕೃತಿಕ ಕಲಾನಿಯೋಗದ ಸದಸ್ಯನಾಗಿ ಹೋದಾಗ ಅಲ್ಲಿಯ ರಸಿಕರಿಗೆ ಭಾರತೀಯ ಕಲೆಯ ಒಂದು ರೂಪವನ್ನು ತೋರಿಸಿದೆ. ಮುಂದೆ ಜಾವಾ, ಬಾಲಿಗಳಿಗೂ ನಾನು ಭೆಟ್ಟಿಯಿತ್ತೆ. ಇಡೀ ಜಗತ್ತನ್ನು ಸುತ್ತಿದ ನನಗೆ ಇನ್ನೂ ಇನ್ನೂ ತಿಳಿದುಕೊಳ್ಳಬೇಕಾದುದು ಎಷ್ಟಿದೆ ಎಂದೇ ಆಶ್ಚರ್ಯವಾಗುತ್ತಿದೆ. ಪ್ರತಿ ಸಲ ನನ್ನ ಅನುಭವದ ಕ್ಷೇತ್ರ ವಿಶಾಲವಾಗುತ್ತಿದೆ. ಇತ್ತೀಚೆಗೆ ಆಸ್ಟ್ರೇಲಿಯಾಗೆ ಹೋಗಿ ಬಂದಾಗಲೂ ನನಗೆ ಹೀಗೇ ಅನಿಸಿತು.

ನನ್ನ ವಿದೇಶಯಾತ್ರೆಗಳ ಫಲವಾಗಿ 'ಸ್ಟ್ರೀಟ್ ಸೀನ್ – ಪೋಲೆಂಡ್' (೧೯೫೩), 'ಪೋಲಿಶ್ ಶೆಫರ್ಡ್' (೧೯೫೩), 'ರಶ್ಯನ್ ಫೋಕ್ ಡಾನ್ಸ್' ಮೊದಲಾದುವು ಮೂಡಿ ಬಂದುವು.

ಭಾರತೀಯತ್ವ

ಭಾರತೀಯ ಕಲಾವಿದನೊಬ್ಬ ಜಗತ್ತನ್ನು ಸುತ್ತಿ ಬಂದರೂ ಅವನ ಕಲೆಯಲ್ಲಿ ಪ್ರತಿಧ್ವನಿತವಾಗುವುದು ಭಾರತೀಯತ್ವವೆ. ಏಕೆಂದರೆ ಅವನ ಹಿನ್ನೆಲೆ ಅಂಥದ್ದು. ಅವನ ಹೃದಯ, ಭಾವನೆಗಳಲ್ಲಿ ಭಾರತೀಯ ಅಚ್ಚು ಇದ್ದೇ ಇದೆ. ನಾನು ಇದಕ್ಕೆ ಹೊರತಾಗಿಲ್ಲ. ನನ್ನ ಕೃತಿಗಳಲ್ಲೆಲ್ಲ ಈ ಭಾರತೀಯತ್ವವನ್ನೇ ನನ್ನದೇ ಆದ ವಿಶಿಷ್ಟ ರೀತಿಯಲ್ಲಿ ಅಭಿವ್ಯಕ್ತಗೊಳಿಸುತ್ತ ಇದ್ದೇನೆ.

ಕೇರಳದ ಪ್ರಭಾವವನ್ನು ನನ್ನ 'ಮೈಡನ್‌ಹುಡ್' (೧೯೪೬) ಮತ್ತು 'ಸನ್ನಿಸತ್' (೧೯೪೬) ಗಳಲ್ಲಿದ್ದರೆ ನಮ್ಮ ಕನ್ನಡ ನಾಡಿನ ಪ್ರಭಾವವನ್ನು 'ಕೆಟಲ್ ಮಾರ್ಚ್' (ಸುಬ್ರಹ್ಮಣ್ಯ, ಹಾಸನಗಳ ದನಗಳ ಜಾತ್ರೆಯ ಪ್ರಭಾವ), 'ಗದ್ದೆಯಲ್ಲಿ', 'ಹಂಚಿನ ಕಾರ್ಖಾನೆ', 'ಕೋಳಿಜೂಜು', 'ರಂಗಪಂಚಮಿ' (೧೯೫೭ – ಏರ್ ಇಂಡಿಯಾ ಇಂಟರ್‌ನ್ಯಾಷನಲ್‌ನಲ್ಲಿದೆ)ಗಳಲ್ಲಿ ಗುರುತಿಸಿದ್ದಾರೆ. 'ಡ್ರಮ್ಮರ್' (೧೯೪೮), 'ಚೆಗ್ಗರ್ಸ್' (೧೯೪೭)–ಪ್ಯಾರಿಸ್ಸಿನ ಮ್ಯೂಸಿಯಂ ಆಫ್ ಮಾಡರ್ನ್ ಆರ್ಟ್‌ನಲ್ಲಿದೆ). 'ಅಫಘನ್' (೧೯೪೧), 'ಫೆಸ್ಟಿವಲ್ ಡಾನ್ಸ್' (೧೯೪೫), 'ಪಾಟ್ಸ್ ಎಂಡ್ ಪೆನ್ಸ್' (೧೯೪೨), 'ಪಂಡಿತ್ಸ್' (೧೯೪೭), 'ಲೇಜಿಮ್' (೧೯೫೨), ಮಡಿಕೆ ಕುಡಿಕೆ, ವೈದ್ಯನ ಕುಣಿತ, ಪ್ರೀತಿ, 'ಚಿರ್ಪಿಂಗ್', ಮಹಾಬಲೇಶ್ವರದ ಸಂತೆ, 'ಪುಂಗಿ' (೧೯೫೭ – ಟಾಟಾ ಇನ್ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರೀಸರ್ಚ್‌ನಲ್ಲಿದೆ), ಕುಲುಕಣಿವೆ ದೃಶ್ಯಗಳು, ಮಾಹಿಮ್ ದರ್ಗಾ (೧೯೫೭ – ನಾನು ಮೊದಲು ನಿಲ್ಲುತ್ತಿದ್ದ ಮುಂಬಯಿಯ ಬಡಾವಣೆ – ಲಲಿತಕಲಾ ಎಕಾಡೆಮಿಯಲ್ಲಿದೆ), 'ಘುಡ್' (೧೯೫೯), 'ಸೀತೆ' (೧೯೫೯), 'ಕನ್‌ಸ್ಟ್ರಕ್ಶನ್' (೧೯೫೬), 'ಮದರ್ ಎಂಡ್ ಚೈಲ್ಡ್' (೧೯೫೮), 'ಫೌಂಡಿಂಗ್' (೧೯೫೭), 'ಸ್ಲೀಪರ್ಸ್' (೧೯೫೮), 'ಭಂಗಿ', 'ಸೊರೋಸ್' (೧೯೫೮) ಮೊದಲಾದುವುಗಳಲ್ಲೆಲ್ಲ ಭಾರತೀಯತೆಯ ಹಲವು ಮುಖಗಳನ್ನು ನಾನು ತೋರಿಸಿದ್ದೇನೆ.

ಸಂಗೀತ ನೃತ್ಯದ ಕುರಿತಾಗಿಯೂ ನಾನು ಕೆಲವು ಕೃತಿಗಳನ್ನು ರಚಿಸಿದ್ದೇನೆ. ತಂಬೂರಾ, ಕೆಂಪು ಮತ್ತು ಬಂಗಾರ, ವೀಣಾವಾದನ, ಸಿತಾರುವಾದಕಿ, ನಾಗನೃತ್ಯ ಇವು ಕೆಲವು ಉದಾಹರಣೆಗಳು. ಕಲೆಯ ಗುರಿ, ಸಂಗೀತದ ಗುರಿ ಒಂದೇ. ಹಾಡುತ್ತ ಲೀನನಾಗಿ, ಅದರಲ್ಲೇ ಸಮ್ಮಿಳಿತನಾಗುವ ತಾದಾತ್ಮ್ಯ, ದೊರೆಯುವ ಅವರ್ಣನೀಯ ಆನಂದ – ಇದು ಎಲ್ಲರಿಗೂ ಲಭ್ಯವಲ್ಲ. ಕಲಾವಿದನ ಪ್ರಪಂಚದಲ್ಲಿ ಮಾತ್ರ ಆಗುವ ಅನುಭವವು ಇದೇ ಆಗಿದೆ.

ಆಧುನಿಕ – ವೈಜ್ಞಾನಿಕ ವಿಚಾರಗಳನ್ನೂ ನಾನು ಕೆಲವು ಚಿತ್ರಗಳಲ್ಲಿ ಪ್ರತಿಬಿಂಬಿಸಲು ಪ್ರಯತ್ನಿಸಿದ್ದೇನೆ. 'ಅರೌಂಡ್ ದಿ ವರ್ಲ್ಡ್', 'ಟೈಮ್', 'ಸ್ಪೇಸ್' ಹಾಗೂ ಇತ್ತೀಚೆಗೆ ಅಪೋಲೊ ೧೧ ಚಂದ್ರನಲ್ಲಿ ಮಾನವನನ್ನು ಕೊಂಡೊಯ್ದ ವಿಚಾರ ಕೃತಿ ರಚಿಸಿದ್ದೇನೆ.

ನನ್ನದೇ ಬಗೆಗೆ ಹೇಳುವುದಾದರೆ ನನ್ನ ಸೆಲ್ಫ್ ಪೋರ್ಟ್ರೇಟ್, 'ಆರ್ಟಿಸ್ಟ್ ಎಂಡ್ ಮದರ್' ಹಾಗೂ ಆತ್ಮೀಯರಾದ ಶಿವರಾಮ ಕಾರಂತರ ಚಿತ್ರ, ಪ್ರಸಿದ್ಧ ಕಲಾವಿದ ಎನ್. ಎಸ್. ಬೇಂದ್ರೆಯವರ ಚಿತ್ರಗಳಿವೆ.

ನನ್ನ ಜೀವನದಲ್ಲಾದ ಇನ್ನೊಂದು ವಿಶೇಷ ಘಟನಾವಳಿ ಎಂದರೆ ಸತತವಾಗಿ ಮೂರು ವರ್ಷಗಳಲ್ಲಿ ನನಗೆ ಕೇಂದ್ರ ಅಕಾಡಮಿಯ ಪ್ರಶಸ್ತಿ ದೊರೆತುದು. ೧೯೬೧ರಲ್ಲಿ ನನಗೆ ರಾಷ್ಟ್ರಪತಿಗಳು 'ಪದ್ಮಶ್ರೀ'ಯನ್ನೂ ದಯಪಾಲಿಸಿದರು. ಇದು ನನ್ನ ಸಾಧನೆಗೆ ರಾಷ್ಟ್ರ ಕೊಟ್ಟ ಗೌರವ. ಆದರೆ ಕಲಾವಿದನಿಗೆ ತನ್ನ ಕೃತಿಗಳನ್ನು ಕಲಾ ಹೃದಯವುಳ್ಳವರು ಅರ್ಥ ಮಾಡಿಕೊಂಡು, ಮೆಚ್ಚುಗೆ ಸೂಚಿಸಿದಾಗಲೇ ಹೆಚ್ಚಿನ ತೃಪ್ತಿ ಸಿಗುತ್ತದೆ; ಧನ್ಯತೆ ಮೂಡುತ್ತದೆ.

ಆಧುನಿಕ ಕಲೆಯ ಕುರಿತು ನಮ್ಮ ಜನರಲ್ಲಿ ಇಂದಿಗೂ ಚಿತ್ರವಿಚಿತ್ರ ಭಾವನೆಗಳಿವೆ. ಕಲೆ

ಯೆಂದರೆ ಜೀವನದ ಫೋಟೋ ತೆಗೆಯುವುದಲ್ಲ. Art Mirrors Life ಎಂಬುದಕ್ಕೆ ಇದಲ್ಲ ಅರ್ಥ. ಜೀವನದ ಅನುಭವ ಕಲಾವಿದನ ಹೃದಯ – ಮನಸ್ಸುಗಳನ್ನು ಹೊಕ್ಕು ಕಲಾಕೃತಿಯಾಗಿ ಹೊರಹೊಮ್ಮುವಾಗ ಅದು ಜೀವನದ ವಾಸ್ತವಿಕ (realism) ಪ್ರತಿಬಿಂಬವಾಗಿರುವುದಿಲ್ಲ. ಅರ್ಥಾತ್ ಬಹಿರಾಕಾರವನ್ನು ತಿಳಿಸುವುದು ಕಲಾವಿದನ ಮುಖ್ಯ ಕೆಲಸವಲ್ಲ. ಅಂತರ್ಯದ ಸತ್ಯ, ಸೌಂದರ್ಯ, ಅನುಭವಗಳನ್ನು ತೋರಿಸುವುದೇ ಕಲೆ. ಆತ್ಮಸಂಸ್ಕಾರವುಳ್ಳ ಕಲಾವಿದರು ಇಂಥ ಸತ್ಯ – ಸೌಂದರ್ಯಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ತಮ್ಮ ಕೃತಿಗಳಲ್ಲಿ ತೋರಿಸಬಲ್ಲರು. ಇದಕ್ಕೆ ಕಲಾವಿದನ ಸ್ವಂತ ಮನೋಧರ್ಮ ಮತ್ತು ಅನುಭವಗಳು ಬೇಕು.

ಆಧುನಿಕ ಕಲೆ ಹೊಸ ಶೈಲಿಯನ್ನು ತಂದಿತೆಂಬುದೇನೋ ನಿಜ. ಆದರೆ ಅದರಲ್ಲಿ ಪ್ರಯೋಗ – ಆಚರಣೆಗಳು ಮೊದಲಿನಿಂದಲೂ ಇವೆ. ಏಕೆಂದರೆ ಕಲೆಯೆಂದರೆ ಇದ್ದುದನ್ನು ಇದ್ದಂತೆ ಬರೆಯುವುದಲ್ಲ. ಪ್ರಕೃತಿಯಲ್ಲಿರುವ ಕೆಲವು ತತ್ವಗಳಿಗೆ ಕಲಾವಿದ ತನ್ನ ಭಾವನೆಯ, ಅನುಭವದ, ರಚನಾತ್ಮಕ ಸಿದ್ಧಿಯ ರಸಪಾಕ ಬೆರಸುತ್ತಾನೆ. ಆಗ ಅದು ಒಂದು ಕೃತಿಯಾಗುತ್ತದೆ. ಕಲಾವಿದನ ಈ ಭಾವನೆ, ಕಲ್ಪನೆಗಳು ಸಹಜವಾಗಿ ಹೊರಹೊಮ್ಮಬೇಕು. ಚಿತ್ರಣ ವಾಸ್ತವವಾಗಿ ಮೂಡಬೇಕು.

ಇಲ್ಲಿ ನನ್ನ ಮಗಳು ರೇಖಾ ಕುರಿತು ಕೂಡ ಒಂದು ಮಾತು ಬರೆಯುವುದೊಳಿತು. ಆಕೆಯಲ್ಲಿ ಕಲಾವಂತಿಕೆ ಸಹಜವಾಗಿ – ನನ್ನ ಇತರ ಇಬ್ಬರು ಮಕ್ಕಳಿಗಿಂತ ಹೆಚ್ಚಾಗಿ – ಚಿಗುರಿತು. ಅವಳು ಸ್ವತಂತ್ರವಾಗಿ ಬಾಲ್ಯದಿಂದಲೂ ತನ್ನ ಭಾವನೆಗಳನ್ನು ಬಣ್ಣ – ರೇಖೆಗಳ ಮೂಲಕ ಹೊರಹೊಮ್ಮಿಸತೊಡಗಿದಳು. ಆರಂಭದಲ್ಲಿ ಇದಕ್ಕೆ ನಾನು ಮೂಕ ಪ್ರೇಕ್ಷಕನಾಗಿದ್ದೆ. ಆಕೆಯ ಕಲಾವಂತಿಕೆ ಮಾತ್ರ ಚಿಗುರುತ್ತಿತ್ತು. ಅದು ಸಹಜವಾಗಿ ಆಕೆಯೊಂದಿಗೇ ಬೆಳೆಯುತ್ತಿತ್ತು. ಈ ಪ್ರತಿಭೆ, ಈ ರಚನಾತ್ಮಕತೆ, ಈ ಸಂಸ್ಕಾರವನ್ನು ಅವಳಲ್ಲಿ ಗುರುತಿಸಿದ ಬಳಿಕವೇ ನಾನು ಅವಳನ್ನು ಪ್ರೋತ್ಸಾಹಿಸಲಾರಂಭಿಸಿದೆ. ಈ ಸ್ವತಂತ್ರ ಅರಳುವಿಕೆ ಮಾತ್ರ ಕಲಾಪ್ರಪಂಚದಲ್ಲಿ ರಚನಾತ್ಮಕತೆಯನ್ನು ತರುತ್ತದೆ.

ಏಕೆಂದರೆ ಕಲಾವಿದನೊಬ್ಬನಿಗೆ ಯಾವ ರೀತಿಯ ಬಂಧನವೂ ಅವನ ಕೃತಿಗೆ ಅಡ್ಡಿಯಾಗಬಾರದು. ಹಾಗೆಯೇ ಅವನ ಒಂದು ಕೃತಿ ಇನ್ನೊಂದರ ಅನುಕರಣೆಯಾಗಬಾರದು. ಪ್ರತಿಯೊಂದು ಕೃತಿ ಒಂದು ಹೊಸ ಅನುಭವ ತಾನೆ? ಪ್ರತಿಯೊಂದರಲ್ಲೂ ಅವನು ಕೆಲವು ಹೊಸ ತತ್ವಗಳನ್ನು ಪ್ರತಿಪಾದಿಸುತ್ತಾನೆ, ಹೊಸ ಸೌಂದರ್ಯವನ್ನು ಸೂಸುತ್ತಾನೆ, ನವೀನ ರಚನಾತ್ಮಕ ಶೈಲಿಯನ್ನು ನಿರೂಪಿಸುತ್ತಾನೆ.

ನಮ್ಮಲ್ಲಿ ಒಬ್ಬ ಹೆಂಗಸಿನ ಚಿತ್ರ ಬಿಡಿಸಿ ಅದಕ್ಕೆ ಒಂದು ಕಿರೀಟ, ನಾಲ್ಕು ಕೈಗಳು, ಕಮಲಗಳನ್ನು ಜೋಡಿಸಿದೊಡನೆ ಲಕ್ಷ್ಮಿಯಾಗುತ್ತಾಳೆ. ಕೈಯಲ್ಲಿ ವೀಣೆ ಕೊಟ್ಟರೆ ಸರಸ್ವತಿಯಾಗುತ್ತಾಳೆ. ಇದುವೆ ನಮ್ಮ ಪರಂಪರೆಯಾಗಬೇಕೆ ? ಇದನ್ನಷ್ಟೆ ತೋರಿಸುವುದಕ್ಕಿಂತ ಕಲೆಗೆ ಹಿರಿದಾದ, ಅಂತಿಮ ಉದ್ದೇಶವಿದೆ.

ಕಲಾವಿದನಿಗೆ ತನ್ನಲ್ಲಿರುವ ಭಾವನೆಗಳನ್ನು ಅಭಿವ್ಯಕ್ತಗೊಳಿಸುವುದಕ್ಕಿಂತ ಹಿರಿದಾದ ಗುಣ – ಹೊಣೆಗಳಿವೆ. ಜನರ ಅಭಿರುಚಿಯನ್ನು ಅದೇ ಕಾಪಾಡಿಕೊಳ್ಳುವುದು. ಜನರಲ್ಲಿ ಅಭಿರುಚಿಯನ್ನುಂಟುಮಾಡುವುದಕ್ಕಿಂತಲೂ ಅದನ್ನು ಬೆಳೆಸಿ ಕಾಯ್ದಿಟ್ಟುಕೊಳ್ಳುವುದು ಹಿರಿದಾದ ಸಾಹಸ. ಜನರಲ್ಲಿಯೂ ಕಲೆಯನ್ನರಿತುಕೊಳ್ಳಬೇಕಾದರೆ ಅದರ ಬಗೆಗೆ ಅಭಿರುಚಿಯಿರಬೇಕು. ಆಸಕ್ತಿಯಿರಬೇಕು. ಮೇಲಾಗಿ ಕಲಾವಿದನ ಕುಂಚದ ಶಕ್ತಿಯನ್ನರಿತುಕೊಳ್ಳುವ ಆತ್ಮೀಯತೆ ಬೇಕು; ಭಾವನಾಪ್ರಧಾನವಾದ ಕಲಾವಂತ ಹೃದಯ ಬೇಕು; ಮೂಲವಾಗಿ ಸಂಸ್ಕಾರ ಬೇಕು.



ಕಲಾವಿದ ಹೇಗಾದೆ?

ನಾನು ಚಿತ್ರಕಲಾವಿದನು ಹೇಗಾದೆ? ಎಂಬುದು ನನಗೂ ಸಮಸ್ಯೆಯೆ. ಅದರಲ್ಲಿಯೂ ನನ್ನ ಬಗೆಗೆ ನಾನೇ ಹೇಳಿಕೊಳ್ಳುವುದು ಬಲು ದೊಡ್ಡ ಸಮಸ್ಯೆ. 'ತನ್ನ ಬಣ್ಣಿಸಬೇಡ; ಇದಿರ ಹಳಿಯಲು ಬೇಡ' ಎಂಬ ಬಸವೋಕ್ತಿಯ ನೆನಪಾಗುತ್ತದೆ. ಸುದೈವದಿಂದ ಇವೆರಡು ಭಾವಗಳೂ ನನ್ನ ಜೀವನದಲ್ಲಿ ಮೈಗೂಡಿಕೊಂಡು ಬರಲಿಲ್ಲ-ಬೆಳೆಯಲಿಲ್ಲ ಎಂಬುದೇ ನನ್ನ ಹೆಮ್ಮೆ. ನಾನು ಅಂದರೆ ಕಲಾವಿದ 'ಡಿಝು' ಹೇಗೆ? ಅವನ ಕಲೆ ಹೇಗೆ? ಎಂದು ನಾನೇ ಹೇಳಬೇಕಾಗಿಲ್ಲ. ಅದು ಸಹೃದಯ ರಸಿಕರ ಕೆಲಸ; ಅಲ್ಲ, ಕರ್ತವ್ಯ. ನನ್ನ ತುತೂರಿ ನಾನೇ ಊದಿದರೆ ಕರ್ಕಶವಾದೀತು; ಹಾಗೆ ಆಗದಂತೆ ಎಚ್ಚರಿಕೆ ವಹಿಸಲು ಯತ್ನಿಸಿದ್ದೇನೆ. ಕೇಳಿ ನನ್ನ ಕತೆ.

ಹೈಸ್ಕೂಲ ಶಿಕ್ಷಣಕ್ಕಾಗಿ ಅಲ್ಲಲ್ಲಿ ಅಲೆದಾಡಿ ಅಥಣಿಯಲ್ಲಿ ನಿಂತೆ. ಅಲ್ಲಿಯೂ ಹೆಚ್ಚಿನ ಅವಕಾಶವಿರಲಿಲ್ಲ. ಚಿತ್ರ ಬರೆಯಬೇಕೆಂಬ ಹಂಬಲ ಹುದುಗಿಕೊಂಡಿದ್ದರೂ ಹೊರಬರಲಿಲ್ಲ. ಆಗಾಗ ಚಿತ್ರಗಳನ್ನು ಗೀಚುತ್ತಿದ್ದೆನಾದರೂ ಹೇಳಿಕೊಳ್ಳಬೇಕಾದಂತಹ ಹುಚ್ಚು ಹಿಡಿದಿರಲಿಲ್ಲ. ಆದರೂ ಆಗಿನ ನನ್ನ ಮನೋಮೌನಗೌರವ. ನಾಲ್ಕನೆ ಇಯತ್ತೆಯ ಪಠ್ಯಪುಸ್ತಕದಲ್ಲಿ ಸುಪ್ರಸಿದ್ಧ ಕಲಾವಿದ 'ಮೊನೆಲ್'ನ ಚರಿತ್ರೆಯ ಪಾಠವಿತ್ತು; ಜೊತೆಗೆ 'ಕರಗಸದಿಂದ ಬೊಡ್ಡೆಯನ್ನು ಕೊರೆಯುವ' ಚಿತ್ರವೊಂದಿತ್ತು. ಆ ಚಿತ್ರ ಇಂದಿಗೂ ಕಣ್ಣೆದುರು ಕಟ್ಟಿದಂತಿದೆ.

ನಾನು ತೆಗೆದ ಚಿತ್ರ

ಮಳೆಗಾಲ ಪ್ರಾರಂಭವಾಗಿತ್ತು. ಜಿಟಿಗುಮಳೆ ಸುರಿಯುತ್ತಿತ್ತು. ನಾನಿದ್ದ ಎಂಟಾಣೆ ಬಾಡಿಗೆಯ ಮನೆಯ ಮುಂದೆ ಸುಮ್ಮನೇ ನಿಂತಿದ್ದೆ. ನಮ್ಮ ಕನ್ನಡ ಮಾಸ್ತರರು ಆ ದಾರಿಯಲ್ಲಿ ಹೋಗುತ್ತಿದ್ದವರು, ನನ್ನನ್ನೂ ನನ್ನ ಹಿಂದಿದ್ದ ಮನೆಯನ್ನೂ ಕಂಡು 'ಏನೂ, ಕುಲಕರ್ಣಿ, ಅರಮನೀನೆ ಹಿಡಿದಿಯಲ್ಲ!' ಎಂದು ಹಾಸ್ಯದ ಚಟಾಕಿ ಹಾರಿಸಿದರು. ನಾನೂ ಒಮ್ಮೆ ಹೊರಳಿ ಮನೆಯನ್ನು ನಿರೀಕ್ಷಿಸಿದೆ. ಒಳಗೆ ಹೋಗಿ ಕಾಗದ ಪೆನ್ಸಿಲು ಹಿಡಿದು ಮುರುಕು ಮಹಲಿನ ಚಿತ್ರ ಬರೆದೆ. ಮನಸ್ಸು 'ಅಬ್ಬಾ! ಎಷ್ಟು ಸುಂದರ ನನ್ನ ಅರಮನೆ' ಎಂದಿತು. ನಾನು ತೆಗೆದ ಚಿತ್ರ ನಾನೇ ಮೆಚ್ಚಿಕೊಂಡೆ. ಇನ್ನೊಬ್ಬರಿಗೆ ತೋರಿಸುವ ಧೈರ್ಯವಿರಲಿಲ್ಲವೇನೋ!

ನಾನು...ನನ್ನತನ...!

-ಡಿಝು

ಕಲಾವಿದ ಎಲ್ಲಿಯೂ ಹುಟ್ಟಬಹುದು; ಹುಟ್ಟುತ್ತಾನೆ. ಇದು ಜೀವನದ ಗತಿ; ಧರ್ಮ. ಅವನು ಹುಟ್ಟುವ ಕಾಲ, ಸ್ಥಳ, ಮನೆತನ ದೈವಕೃತ; ಮನೆತನದ ಆರ್ಥಿಕ ಸ್ಥಿತಿಗತಿಗಳು ಕಲಾವಿದನನ್ನಾಗಿ ಮಾಡಲಾರವು. ಅವುಗಳ ಪ್ರಭಾವ, ಪರಿಣಾಮ ಕಲಾವಿದನ ಮನಸ್ಸಿನ ಮೇಲೆ ಕೆಲಮಟ್ಟಿಗೆ ಉಂಟಾಗುತ್ತದೆ. ಸುತ್ತಲಿನ ವಾತಾವರಣ ಪ್ರೇರಕವಾಗಿದ್ದರೆ ಕಲಾವಿದ ಹುರುಪುಗೊಳ್ಳುತ್ತಾನೆ; ಇಲ್ಲದಿದ್ದರೆ ಅದನ್ನು ಭೇದಿಸಿಕೊಂಡು ತಲೆಯೆತ್ತಿ ನಿಲ್ಲಬೇಕಾಗುತ್ತದೆ. ಇದೆಲ್ಲ ನನ್ನ ವೈಯಕ್ತಿಕ ಅನಿಸಿಕೆ; ಅನುಭವ. ಕಲಾವಿದ 'ಡಿ.ರಿಝು' ಬೆಳೆದ ಜೀವನದಲ್ಲಿ ಆಡಂಬರದ ಆಥ್ಯತೆಯಿಲ್ಲ; ಕನಿಕರದ ಕೊರಗಿಲ್ಲ. ಎಲ್ಲ ಸಾಮಾನ್ಯರಂತೆ ನನ್ನದೂ ಸಾದಾ ಬದುಕು.

ನನ್ನ ಊರು ಕಿರಿಯ ಬರಡುಹಳ್ಳಿ. ಆ ಕಾಲದಲ್ಲಿ ಕಲೆಯ ಗಂಧದ ಗಾಳಿಯೂ ಸುಳಿಯದ ಸಣ್ಣ ಹಳ್ಳಿಯದು. ಊರಿನ ಸುತ್ತಲೂ ನಿಸರ್ಗ ಸೌಂದರ್ಯದ ಸೊಬಗಿಲ್ಲ. ಶಿಲ್ಪಕಲೆಯ ಹಳೆಯ ಗುಡಿಗಳಿಲ್ಲ. ಇಂತಹ ಒಣ-ಒಣ, ಭಣ-ಭಣ ವಾತಾವರಣದಲ್ಲಿ ನನ್ನ ಬಾಲ್ಯ, ಶಿಕ್ಷಣ ನಡೆಯಿತು. ಸಣ್ಣವನಿರುವಾಗ, ಮುಂದೆ ಕಲಾವಿದನಾಗಬೇಕೆಂಬ ಕನಸು ಕಂಡಿರಲಿಲ್ಲ, ಅಂತಹ ಯೋಚನೆಯೂ ಹೊಳೆದಿರಲಿಲ್ಲ. 'ಬೀಜಕ್ಕೆ ಬಿಟ್ಟ ಕಾಯಿ ಹೀಚಿನಲ್ಲಿಯೇ ನೋಡಬೇಕೆಂಬ ಹಿರಿಯರ ಹಾರೈಕೆಯಾಗಲಿ, ಉತ್ತೇಜನವಾಗಲಿ ಅವತ್ತ ನನಗೆ ದೊರೆಯಲಿಲ್ಲ.

ಭಾವವನ್ನು, ಇವತ್ತು ಕೆದಕಿದಾಗ, ಕೆಲವು ಘಟನೆಗಳು – ಕಲೆಯ ದೃಷ್ಟಿಯಿಂದ – ನೆನಪಿನ ಸುಳಿಯಲ್ಲಿ ಸಿಲುಕಿವೆ.

ನಮ್ಮೂರ ಬದಿಯಲ್ಲಿ ಒಂದು ಹಳ್ಳವಿದೆ. ಮುಂಗಾರಿನ ಮಳೆಯ ರಭಸಕ್ಕೆ ಉಕ್ಕೇರಿ ಹರಿಯುತ್ತದೆ. ಮೊದಲ ಸಲ ತೂರಿಕೊಂಡು ಬರುವ ಆ ನೀರಿನ ಓಟ, ಆರ್ಭಟೆಗಳನ್ನು ಕಣ್ತುಂಬ ಸವಿಯುತ್ತಿದ್ದೆ. ಮನೆಯಲ್ಲಿಯ ಪುಟ್ಟ ಸಾಲಿಗ್ರಾಮದಲ್ಲಿಯ ರೇಖಾಚಿತ್ರ, ಕಲ್ಲಿನಲ್ಲಿ ಕೊರೆದ ಹನುಮಂತನ ಮೂರ್ತಿ, ಮಣ್ಣೆತ್ತಿನ ಅಮಾವಾಸ್ಯೆಗಾಗಿ ಮಾಡುತ್ತಿದ್ದ ಬಿಳಿಯ ಜೇಡಿಮಣ್ಣಿನ ಬಸವಣ್ಣ, ನಾಟಕ ಕಂಪನಿಗಳ ಚಿತ್ರಪಟಗಳು ಕಿರಿಯನ ಕಣ್ಣುಗಳನ್ನು ಅರಳಿಸುತ್ತಿದ್ದವು. ಹಳೆಯ ಓಲೆಗ್ರಂಥವೊಂದರಲ್ಲಿಯ ರೇಖಾಚಿತ್ರಗಳು ಮನಸೆಳೆದಿದ್ದವು. ನೆರೆಮನೆಯವರಲ್ಲಿದ್ದ ತೈಲಚಿತ್ರವೊಂದು ಕುತೂಹಲ ಕೆರಳಿಸಿತ್ತು. ಇದನ್ನು ಹೇಗೆ ತೆಗೆದಿರಬೇಕು? ಎಂಬ ಕೌತುಕ. ತೆಗೆದ ಕಲಾವಿದನು ಎಂತಹನಿರಬೇಕೆಂಬ

ಆ ವಯಸ್ಸಿನಲ್ಲಿ ಕಲಾವಿದನಾಗಬೇಕೆಂಬ ಸ್ಪಷ್ಟ ಅರಿವು ಮೂಡಿರದಿದ್ದರೂ, ಚಿತ್ರಕಲೆಯನ್ನು ಕಾಣುವ ಕುತೂಹಲ ನೋಟವಿತ್ತು. ನೋಡಿದ ಚಿತ್ರಗಳನ್ನು ಮನದ ಮೇಲೆ ಮೂಡುವಂತೆ ಚಿಂತಿಸುವ ಭಾವವಿತ್ತು. ಆ ನೋಟ ಚಿಗುರಲು, ಆ ಭಾವ ಅರಳಲು ಪ್ರೇರಣೆಯಿರಲಿಲ್ಲ. ಕಲಾವಿದನಾಗಲು ನನಗಿದ್ದ ಹಿನ್ನೆಲೆ ಹೀಗಿದೆ. ಇಷ್ಟು ಸಾಕಲ್ಲವೇ? ಕಲಾವಿದ ಕಣ್ಮರೆಯಾಗಿದ್ದ. ಅದಕ್ಕೆಂದೇ ನಾನು 'ಕಲಾವಿದ ಹುಟ್ಟುತ್ತಾನೆ' ಎಂದು ಹೇಳಿದುದು.

ತೈಲಚಿತ್ರವಿದ್ದ ನೆರೆಮನೆಯವರಲ್ಲಿ ಅದೇನೋ ಒಂದು ಪ್ರಸಂಗ; ಸರಿಯಾಗಿ ನೆನಪಿಗೆ ಬಾರದು. ಆಗಾಗ ಚಿತ್ರಬರೆಯುವ ನನ್ನ ಚಟವನ್ನು ಕಂಡ ಅವರು 'ನಮ್ಮ ಮನೆ ಗೋಡೆ ಮೇಲೆ ಒಂದು ದೇವರ ಚಿತ್ರ ಬರೆ ನೋಡೋಣ' ಎಂದರು. ಸುಮಾರು ಐದು ಫೂಟು ಎತ್ತರದ ಕೃಷ್ಣನ ಚಿತ್ರವನ್ನು ಬರೆದೆ, ಬಣ್ಣ ತುಂಬಿದೆ. ಇದುವೇ, ನನ್ನ ಭಿತ್ತಿಚಿತ್ರದ ಪ್ರಥಮ ಪ್ರಕಟರೂಪ. ನೋಡಿದವ

ರು ಬೆನ್ನು ಚಪ್ಪರಿಸಿದರು; ಮನೆಯವರು ಮೆಚ್ಚಿದರು. ಕಿರಿಯನಿಗೆ ಹುರುಪು ನೀಡಿದ ಸೌಜನ್ಯ ಅವರ ದೊಡ್ಡತನ.

೧೯೩೭-೩೮ ರಲ್ಲಿಯ ಮಾತು. ಶಾಲೆಯಲ್ಲಿ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಪದ್ಯವನ್ನು ಹಾಡಿದ್ದಕ್ಕೆ, ನನ್ನನ್ನೂ, ನನ್ನ ಗೆಳೆಯರಿಬ್ಬರನ್ನೂ ಒಂದು ವರ್ಷ ಶಾಲೆಗೆ ಬರಕೂಡದೆಂದು ಶಿಕ್ಷಿಸಿದರು, ಅಂದೇ ಹೊರಗೂ ಹಾಕಿದರು. ಒಂದು ವರುಷ ಶಿಕ್ಷಣ, ಆಯುಷ್ಯ ಹಾಳಾಯಿತಲ್ಲ ಎಂದು ನನ್ನ ತಂದೆಯವರಿಗೆ ಚಿಂತೆ. ಮಧ್ಯಸ್ತಿಕೆ ನಡೆಯಿಸಿ, ಪರೀಕ್ಷೆಗೆ ಕೂಡಲು ಅನುಮತಿ ಪಡೆದರು. 'ಉದಯವಾಗಲಿ' ಹಾಡಿದರೂ ಶಿಕ್ಷೆಯೇ! ಎಂದು ಇಂದು ನಾವು ಹುಬ್ಬೇರಿಸಬಹುದು. ಆದರೆ ಅಂತಹ ಕಾಲವೂ ಬಂದಿತ್ತು.

ನಮ್ಮ ಮನೆತನಕ್ಕೆ ಋಣಾನುಬಂಧವುಳ್ಳ ಒಬ್ಬ ಮಾಮಲೇದಾರರಿದ್ದರು. ಅವರು ನೌಕರಶಾಹಿಯಲ್ಲಿಯ 'ಜೀ, ಜೀ' ಭಾವಕ್ಕೆ ಬೇಸತ್ತು, ನೌಕರಿಗೆ ಶರಣು ಹೊಡೆದಿದ್ದರು. ಅವರು ನನಗೆ ಆಗಾಗ 'ನೀನು ಹಮಾಲಿ ಮಾಡಿದರೂ ಚಿಂತೆಯಿಲ್ಲ; ಸರಕಾರಿ ನೌಕರಿ ಮಾಡಬೇಡ. ಸ್ವಾವಲಂಬನ ವೃತ್ತಿಯೊಂದನ್ನು ಕಲಿ' ಎಂದು ತಮ್ಮ ಅನುಭವಪ್ರಣೀತ ಉಪದೇಶ ನೀಯುತ್ತಿದ್ದರು. ಆ ಎಳೆಯ ವಯಸ್ಸಿನಲ್ಲಿ ಅವರ ಮಾತು ನನ್ನಲ್ಲಿ ಬೇರೂರಿತೆಂದು ಈಗ ಹೇಳಲಾರೆ. ಆದರೂ ಕಲಮಟ್ಟಿನ ಸ್ವತಂತ್ರ ವೃತ್ತಿಯ ಕಲಾಜೀವನ ನನ್ನದಾಗಿ ಬಂದುದು ಕಾಕತಾಲೀಯ ನ್ಯಾಯ ಎನ್ನಬಹುದು.

ಕಲಾ ವಿದ್ಯಾರ್ಥಿ

ಮ್ಯಾಟ್ರಿಕ್ಯುಲೇಶನ್ ಪಾಸಾದ ನಂತರ 'ಮುಂದೇನು?' ಎಂಬ ಪ್ರಶ್ನೆ ಎದುರಾಯಿತು. ಈಗಿನಂತೆ ಆಗೂ ಮುಂಬಯಿ ತರುಣರಿಗೆ ಅತಿ ರಂಜಿತ ಆಕರ್ಷಣೆಯಾಗಿತ್ತು. ರೇಲ್ವೆ ಟಿಕೀಟು, ಕಿಸೆಯಲ್ಲಿ ಹನ್ನೆರಡು ರೂಪಾಯಿ, ಈ ಭಂಡವಲದಿಂದ ಮುಂಬಯಿಗೆ ಹೊರಟೆ. 'ಅಲ್ಲಿಗೆ ಹೋದನಂತರ ಮುಂದಿನ ವಿಚಾರ' ಎಂಬುದು ನನ್ನ ಆಗಿನ ನಿರ್ಧಾರ. ಮೆಡಿಕಲ್ ವಿದ್ಯಾರ್ಥಿಗಳೆಯ ಆಶ್ರಯ ನೀಡಿದನು. ಚಿತ್ರಕಲೆಯಲ್ಲಿ 'ಡಿಪ್ಲೊಮಾ' ಮಾಡಬೇಕೆಂದು ಜೆ ಜೆ ಸ್ಕೂಲ್ ಆಫ್ ಆರ್ಟ್ಸ್ ಸಂಸ್ಥೆಯನ್ನು ಸೇರಿದನು. ಕಲಿಯಲು ಕೆಲಸ ಮಾಡಬೇಕಾಯಿತು. ಚಿತ್ರಪಟ ಬರೆಯುವುದು, ಪ್ರೂಫ್ ತಿದ್ದುವುದು, ರೇಶನಿಂಗ್ ಆಫೀಸ್, ಬ್ಯಾಂಕುಗಳಲ್ಲಿ ಕಾರಕೂನಿಕೆ-ಹೀಗೆ ವಿವಿಧ ವೃತ್ತಿಗಳನ್ನು ಅವಲಂಬಿಸಿದನು. ಮುಂಬಯಿ ಜೀವನದ ಈ ಅವಧಿಯಲ್ಲಿ ಅನೇಕ ಕನ್ನಡ ಮಿತ್ರರು ಸಹಾಯ, ಸಲಹೆಯಿತ್ತರು. ಅವರಿಗೆಲ್ಲ ನಾನು ಋಣಿಯಾಗಿರುವೆ.

'ಡಿಪ್ಲೊಮಾ' ವರ್ಗದ ಶಿಕ್ಷಕರು ಒಮ್ಮೆ ವಸಂತಋತುವಿನ ಪ್ರಕೃತಿ ಚಿತ್ರ ತೆಗೆಯಲು ಹೇಳಿದರು. ಕಲ್ಪನೆಯ ಕುದುರೆಯನ್ನೇರಿ ಚಿತ್ರ ಬರೆದೆ. 'ಕರಿಯ ಮಣ್ಣಿನ ಎರೆ ಹೊಲ, ಅದರಲ್ಲೊಂದು ಜಾಲಿಯ ಮರ, ಅದಕ್ಕೆ ಹಳದಿ ಹೂವು, ಕಾಯಿಗಳು, ಕೆಳಗಡೆಗೆ ಜಿಗಿದಾಡುವ ನಾಲ್ಕಾರು ಕುರಿಮರಿಗಳು' ಇದು ನಾನು ತೆಗೆದ ವಸಂತಕಾಲ. ಗುರುಗಳಿಗೆ ಹಿಡಿಸಲಿಲ್ಲ. 'ಕಾಳಿದಾಸನ ಋತುಸಂಹಾರ ಓದು. ಪ್ರಕೃತಿಯ ಸೊಬಗಿನ ಮರುಗು ಆಗ ಅರ್ಥವಾಗುತ್ತದೆ' ಎಂದರು. ಕಾಳಿದಾಸನ ಹೆಸರನ್ನು ಮೊದಲ ಸಲ ಕೇಳಿದಂತಾಯಿತು. 'ಇದು ನಾ ಕಂಡ ವಸಂತಋತುವಿನ ದೃಶ್ಯ. ಪರರಿಂದ ಎರವು ಪಡೆಯುವುದೇಕೆ?' ಎಂದೆ ವಿನಯದಿಂದ. ಗುರುಗಳು ಗದರಿದರು. ಪರೀಕ್ಷೆ ಮುಗಿವವರೆಗೂ ಮತ್ತೆ ಮಾತಾಡಲಿಲ್ಲ. 'ಹುಡುಗ ತನ್ನದನ್ನೆ ಸಾಧಿಸುತ್ತಾನೆ. ಹಟಮಾರಿ' ಎಂದುಕೊಂಡಿರಬೇಕು.

ಸೆರೆಮನೆಯಲ್ಲಿ ಕಾವ್ಯ

ಸ್ವಾತಂತ್ರ್ಯ ಚಳುವಳಿಯ ಬಿರುಗಾಳಿ ಬೀಸಿತು. ನಾನೂ ಮೈಯೊಡ್ಡಿದೆ. ಮೂರು ಸಲ ಸರಕಾರ ನನ್ನನ್ನು ಬಂಧಿಸಿತು. ಸುಮಾರು ಎರಡು ವರುಷ ಕಾಲ ಸೆರೆಮನೆ ವಾಸವಾಯಿತು. ಕಲೆಯ ಅಭ್ಯಾಸ ನಿಂತಿತು. ಕನ್ನಡ ಓದುವ ಚಟ ಮೊದಲಿನಿಂದಲೂ ಇತ್ತು. ಯರವಡಾ ಜೇಲಿನಲ್ಲಿರುವಾಗ ನಾಲ್ಕುನೂರು ಸಾಲುಗಳ ನೀಳ್ಗವನವೊಂದು ಮಿಂಚಿ ಬಂದಿತು. ಅದಿನ್ನೂ ಕತ್ತಲೆ ಕೋಣೆಯಲ್ಲಿಯೇ ಇದೆ. ಯಾರಿಗೂ ತೋರಿಸುವ ಧೈರ್ಯ ಮಾಡಿಲ್ಲ.

ಬಾಳ ಕಾಣಿಕೆ ಯಾರಿಗರ್ಪಿಸಲಿ ಗೆಳೆಯ
ಕೆಂದುಟಿಯ ಕಂಬನಿಯ ಕಾಮಕಾಮಿನಿಗೊ
ದಾಸ್ಯ ಜೀವನನೊರೆವ ಚಿತ್ರಕಲೆಗೊ
ಕ್ರಾಂತಿಯಲಿ ಮಡಿವಮರ ವೀರರಡಿ
ಗಳಿಗೊ ||

ಜೀವನದ ದಾರಿಯ ಹೊಯ್ದಾಟದಲ್ಲಿ ಬಂದ ಉದ್ಗಾರ! ಮುಂಬಯಿ ಸರಕಾರದ ಪಾನ ಪ್ರತಿಬಂಧಕ್ಕೆ ಸಂಬಂಧಿಸಿದ ಪತ್ರಿಕೆಯೊಂದರಲ್ಲಿ, ಗೆಳೆಯ ದಿ. ನಗಲೂರ ರಂಗನಾಥರು ನನ್ನದೊಂದು ಕವನ ಪ್ರಕಟಿಸಿದರು. ಆಗ ಸರಕಾರ ೨೫ ರೂ. ಗಳ ಪ್ರತಿಫಲ ಇತ್ತುದು ಆಶ್ಚರ್ಯಕರವಲ್ಲವೇ! ಇಲ್ಲಿಗೆ ನನ್ನ ಸಾಹಿತ್ಯ ಸೃಷ್ಟಿಯು ಸೆಲೆ ಹರಿಗಡಿಯಿತು; ಅಭಿರುಚಿ ಆರಲಿಲ್ಲ. ಕಲೆಯು ಕೈ ಮಾ ಡಿ ಕರೆಯುತ್ತಿತ್ತು.


ಪ್ರಕಟನಾದ ಪ್ರಥಮ ವರ್ಣಚಿತ್ರ

'ಡಿಪ್ಲೊಮಾ' ಕೊನೆಯ ವರುಷದ ಪರೀಕ್ಷೆ ನಡೆದಿರುವಾಗಲೆ 'ಡಿಸ್ಕವರಿ ಆಫ್ ಇಂಡಿಯಾ' ಎಂಬ ನೃತ್ಯ ನಾಟಕಕ್ಕೆ ರೇಖಾಚಿತ್ರಗಳನ್ನು ಬರೆದೆನು. ಈ ಚಿತ್ರಗಳನ್ನು ನೋಡಿ, ಮೆಚ್ಚಿಕೊಂಡ 'ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ' ವಾರಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಬ್ರೌನ್ ಅವರು ತಮ್ಮಲ್ಲಿಯೇ ಕೆಲಸ ಕೊಟ್ಟರು. ಇಲ್ಲಿಯ ವರೆಗೆ ಈ ಪತ್ರಿಕೆಯ



↑ ದೇವ ಮೂ

↓ ಟೆರಾಕೋಟ್ಟಾ ಮೂರ್ತಿಗಳು



↓ ಅವಸಾನಕಾ



ಮುಖಪುಟಕ್ಕೆ ಕೇವಲ ಫೋಟೋಗಳನ್ನು ಪ್ರಕಟಿಸುವ ಸಂಪ್ರದಾಯವಿತ್ತು. ಶ್ರೀ ಬ್ರೌನರು ನನ್ನ ವರ್ಣಚಿತ್ರವೊಂದನ್ನು ಪ್ರಥಮ ಸಲ ಪ್ರಕಟಿಸಿ ಆ ಸಂಪ್ರದಾಯ ಮುರಿದರು. ವ್ಯಯಕ್ತಿಕ ಕಾರಣಗಳಿಗಾಗಿ ಈ ಕೆಲಸ ಬಿಡಬೇಕಾಯಿತು.

ಪ್ರವಾಸ ನನಗೆ ತೀರ ಮೆಚ್ಚುಗೆಯದು. ಭಾರತದ ಪ್ರಾಚೀನ ಚಿತ್ರಕಲೆ, ಶಿಲ್ಪಕಲೆಗಳನ್ನು ಕಣ್ಣಾರೆ ಕಾಣಬೇಕೆಂಬ ಹಂಬಲ ಹೆಚ್ಚಿತು. ಬಾದಾಮಿ, ಪಟ್ಟದಕಲ್ಲು, ಐಹೊಳೆ, ಹಳೇಬೀಡು, ಬೇಲೂರು ಮೊದಲಾದ ಶಿಲ್ಪ ಕಲೆಯ ತವರುಗಳನ್ನು ಸಂದರ್ಶಿಸಿದೆ. 'ಇಂಡಿಯನ್ ಮಿನಿಯೇಚರ್ಸ'ಗಳು ನನ್ನ ಮನಸ್ಸಿನ ಮೇಲೆ ವಿಶೇಷ ಪ್ರಭಾವ ಬೀರಿದವು. ಶಿಲ್ಪ, ಚಿತ್ರಕಲೆಗಳ ಭಾರತೀಯ ಮತ್ತು ಪಾಶ್ಚಾತ್ಯ- ನಿರೀಕ್ಷೆ, ಅಭ್ಯಾಸ, ಚಿಂತನೆಗಳಿಗೆ ಮೊದಲಾಯಿತು. ಈ ವರೆಗೆ ಭಾರತದ ಕಲೆಯ ಆಗರಗಳನ್ನು ತಿರುಗಿರುವೆ. ಪ್ರವಾಸ ನನ್ನ ಅನುಭವಗಳನ್ನು ಅರಳಿಸಿತು; ಕಲೆಯನ್ನು ಕಾಣುವ ಕಣ್ಣು ಬೆಳಗಿತು. ಕಲೆಯ ಕುಂಚು ಚುರುಕಾಯಿತು. ಇಂದಿಗೂ ನಾನು ಪ್ರವಾಸಿ. ವರುಷಕ್ಕೊಮ್ಮೆ ಅಲೆಯದಿದ್ದರೆ ಮನಸ್ಸಿಗೆ ಸಮಾಧಾನವಿಲ್ಲ.



ಸಃಗಂ ನ್ೕಕೆ

ಕನ್ನಡದ ಕಿರಿ-ಒಣ ನೆಲ

'ಕನ್ನಡ ನಾಡಿನಲ್ಲಿ ನೋಡು ನಿನ್ನ ದೈವ' ಎಂದುಕೊಂಡು, ಮುಂಬಯಿ ಬಿಟ್ಟು ಧಾರವಾಡಕ್ಕೆ ಹೋದೆನು. ಕಲಾವಿದನ ಕಲಾ ಉತ್ಕರ್ಷಗೆ ಕನ್ನಡದ ನೆಲ ಕಿರಿದು, ಒಣದು ಎಂಬ ಅನುಭವ ಬರಲು ಹೆಚ್ಚು ಕಾಲ ಕಾಯಬೇಕಾಗಿರಲಿಲ್ಲ. ಕನ್ನಡಿಗರ ಉದಾಸೀನತೆ, ನಿರಭಿಮಾನಗಳು ಮತ್ತೆ ಮುಂಬೈಗೆ ಅಟ್ಟಿದವು.

ಬರಿಗೈಯಿಂದ ಹಿಂದಿರುಗುವಾಗಲೇ ಸತಾರ ವಿದ್ಯಾರ್ಥಿನಿ ಜೀವನ ಸಂಗಾತಿಯಾಗಿ ಬಂದಳು; ನಾನು ಚತುರ್ಭುಜನಾದೆ. ಕಿರುಕೋಣೆಯೊಂದರಲ್ಲಿ ಹೊಸ ಜೀವನಪಥ ಪ್ರಾರಂಭವಾಯಿತು.

ಹೊಸ ಹೊಣೆಗಾರಿಕೆಗೆ ತಕ್ಕಂತೆ ದುಡಿಮೆ ಸಾಗಬೇಕಿತ್ತು. ನನ್ನ ಗುಜರಾತಿ ಮಿತ್ರರೊಬ್ಬರು 'ಚೇತನ' ಎಂಬ ಸಾಹಿತ್ಯಿಕ ಪತ್ರಿಕೆಗೆ ರೇಖಾಚಿತ್ರಗಳನ್ನು ಬರೆಯಲು ಕೇಳಿ ಉಪಕರಿಸಿದರು. ಒಂದು ಶುಭಗಳಿಗೆಯಲ್ಲಿ, ವ್ಯಂಗ್ಯ ಚಿತ್ರಗಳನ್ನು ಬರೆದ ಸಂವೇದನೆಯಾಯಿತು. ಜೀವನದ ವಿವಿಧ ಕ್ಷೇತ್ರಗಳಲ್ಲಿಯ ಘಟನೆಗಳ ಬಗೆಗೆ ವಿಡಂಬನೆ, ಹಾಸ್ಯಗಳಿಂದ ಕೂಡಿದ ವ್ಯಂಗ್ಯ ಚಿತ್ರಗಳು ಮೂಡಿಬರುವವು. ಇವನ್ನು ಮೆಚ್ಚಿದ 'ಫ್ರೀಪ್ರೆಸ್ ಜರ್ನಲ್' ದಿನ ಪತ್ರಿಕೆಯ ಸಂಪಾದಕರಾಗಿದ್ದ ದಿ. ಸದಾನಂದರು ವ್ಯಂಗ್ಯಚಿತ್ರಕಾರರೆಂದು ತಮ್ಮಲ್ಲಿ ಕೆಲಸ ಕೊಟ್ಟರು. ಭಾರತದಲ್ಲಿಯೇ ಪಾಕೆಟ್ ಕಾರ್ಟೂನ್ಸ್‌ಗಳನ್ನು ಮೊಟ್ಟಮೊದಲು ಪ್ರಾರಂಭಿಸಿದವನೇ ವ್ಯಂಗ್ಯಚಿತ್ರಕಾರ 'ಡಿಝು.'

ಕೆಲ ಪ್ರದರ್ಶನಗಳು

ಮುಂಬಯಿಯಲ್ಲಿ ಮೂರು- ನಾಲ್ಕು 'ಒನ್ ಮ್ಯಾನ್ ಶೋ' ಚಿತ್ರಕಲಾಪ್ರದರ್ಶನಗಳನ್ನು ಏರ್ಪಡಿಸಿದೆನು. ಕಲಾವೃಂದದ ಪರಿಚಯ ಬೆಳೆಯಿತು. ರಸಿಕರು ತಲೆದೂಗಿದರು. ವಿಮರ್ಶೆಗಳು ಪತ್ರಿಕೆಗಳಲ್ಲಿ ಪ್ರಕಟವಾದವು.



"ಪಕ್ಕದ್ಮನೆ ಸೂರಪ್ಪನವರು ನೂರು ರೂಪಾಯ್ ಪಟಾಕಿ ತರ್ಸಿದಾರಂತೆ ಹಾರ್ಸೋದನ್ನ ನೋಡ್ಕೊಂಬನ್ರೋ ನನ್ನ ಕೇಳ್ಬೇಡಿ' ಅಂತ ಮಕ್ಕಳನ್ನೆಲ್ಲಾ ಅಲ್ಲಿಗೇ ಕಳ್ಸಿಬಿಟ್ಟಿದೀನಿ!..."

ಬೇರೆ ಬೇರೆ ಪಟ್ಟಣಗಳಲ್ಲಿಯೂ – ಕರ್ನಾಟಕ ಒಂದನ್ನು ಬಿಟ್ಟು– ವರ್ಣಚಿತ್ರಕಲಾ ಪ್ರದರ್ಶನಗಳು ನಡೆದವು. ಬಹುಮಾನಗಳು ದೊರೆತವು. ಪಾಶ್ಚಾತ್ಯ ಪತ್ರಿಕೆಗಳಲ್ಲಿ ವ್ಯಂಗ್ಯಚಿತ್ರಗಳು ತಲೆದೋರಿದವು. ಇದೆಲ್ಲದರಿಂದ 'ಡಿಝು' ಕೇವಲ ವ್ಯಂಗ್ಯಚಿತ್ರಕಾರನಲ್ಲ; ವರ್ಣಚಿತ್ರಕಲೆಯಲ್ಲಿ ಸಾಕಷ್ಟು ಸಾಧನೆ ಮಾಡಿದವ ಎಂಬ ತಿಳುವಳಿಕೆ ಕಲಾಪ್ರಪಂಚದಲ್ಲಿ ಹರಡಿತು. ಇದೆಲ್ಲ ವ್ಯಾವಹಾರಿಕವಾಗಿ ಬಂದುದು. ಇಷ್ಟರಿಂದಲೆ ಕಲಾವಿದನ ನಿಜವಾದ ಸತ್ವವನ್ನು ಅಳೆಯಬಾರದು. ಜನಾಭಿಪ್ರಾಯ ಕಲೆಯ ಅಳತೆಗೋಲಲ್ಲ.

ನನಗೆ ಜೀವನದ ಬಗೆಗೆ ಆಸ್ಥೆಯಿದೆ; ಶ್ರದ್ಧೆಯಿದೆ. ಜೀವನದ ಹಲವಾರು ಮುಖಗಳನ್ನು ಕಾಣಬೇಕು; ಅರ್ಥಮಾಡಿಕೊಳ್ಳಬೇಕು ಎಂಬ ಲವಲವಿಕೆಯಿದೆ. ಜೀವನದ ಆಗು–ಹೋಗುಗಳು ಕಲಾವಿದನ ಹೃದಯವನ್ನು ಕಲಕುತ್ತವೆ. ಜೀವನದ ಜೊತೆಗೆ ಕಲಾವಿದ ಬೆಳೆಯುತ್ತಾನೆ. ನಾನು ಕಲಾವಿದನಾಗಿದ್ದರೂ, ಸಾಮಾನ್ಯ ಮನುಷ್ಯ. ಅಂತೆಯೇ ನಾನು ಬದುಕಿರುವ ಸಮಾಜದ ಪ್ರಭಾವದಿಂದ ನುಸುಳಿಕೊಳ್ಳಲಾರೆ, ಜೀವನ–ಕಲೆ ಒಂದಕ್ಕೊಂದು ಪೂರಕವಾಗಿರಬೇಕೆಂಬುದೇ ನನ್ನ ಕಲೆಯ ದೃಷ್ಟಿ! ಕಲೆಯು ಜೀವನದ ಪ್ರತಿನಿಧಿಯಾಗಿರಬೇಕು. ನನ್ನ ವರ್ಣಚಿತ್ರಗಳಲ್ಲಿ ಈ ಮೂಲಭಾವನೆಯೇ ತಳಹದಿ. ಅದಕ್ಕಾಗಿ ಟೀಕೆಗಳೂ ಬಂದುದುಂಟು. ಸುತ್ತಲಿನ ಜೀವನದಿಂದ ಪ್ರಭಾವಿತನಾಗಿ ಕಲಾವಿದ ಚಿತ್ರ ಬರೆದರೆ ಅವನ ವೈಯಕ್ತಿಕ ಜೀವನವೂ ಹಾಗೆಯೇ ಇರಬೇಕು– ಇದ್ದೇ ಇದೆ ಎನ್ನುವವರೆಗೂ–ಎಂದು ಆರೋಪಿಸಲಾದೀತೇ? ಲಂಚ, ವಂಚನೆ, ಮೋಸ, ಅನೀತಿ, ಅನ್ಯಾಯ, ಕುಡುಕತನ ಮತ–ಜಾತಿ–ಭಾಷೆ–ಪ್ರದೇಶಗಳ ಸಂಕುಚಿತ ಭಾವನೆ ಮೊದಲಾದುವನ್ನೆಲ್ಲ ಕಲಾವಿದ ತನ್ನ ವೈಯಕ್ತಿಕ ಜೀವನದಲ್ಲಿಯೂ ನಡೆಯಿಸುವನೆಂದು ಹೇಳುವುದು ಕಲೆಗೆ ಬಹು ದೊಡ್ಡ ಅನ್ಯಾಯ ಬಗೆದಂತೆ.

ನನ್ನ ಚಿತ್ರಗಳು

'ನೀವು ಹೀಗೆಯೇ ಏಕೆ ಚಿತ್ರಿಸುವಿರಿ? ಇಂತಹ ವರ್ಣವ್ಯವಸ್ಥೆಯೇ ಏಕೆ?' ಮೊದಲಾದ ಪ್ರಶ್ನೆಗಳನ್ನು ಕೇಳಿದವರುಂಟು. ಸಂವೇದನೆಗಳ ಒತ್ತಡದಿಂದ, ಪ್ರತಿಭೆ ಮಿಂಚಿದಾಗ ಕಲೆ ತಾನೇ ತಾನಾಗಿ ಹುಟ್ಟುತ್ತದೆ. ಅದೇಕೆ? ಎಂದು ಹೇಳಲಾರೆ. ಬಣ್ಣಗಳ ಮಾತೂ ಅಷ್ಟೆ. ಕ್ಯಾನವಾಸಿನ ಮುಂದೆ ಕುಂಚ ಹಿಡಿದು ನಿಂತಾಗ ಬಣ್ಣಗಳ ರಾಣಿ ತಾನೇ ತಾನಾಗಿ ಲಾಸ್ಯವಾಡುತ್ತಾಳೆ. ಕಾವ್ಯರಚನೆಯಲ್ಲಿ ಛಂದಸ್ಸು ಮೈಗೂಡಿಕೊಂಡಿರುವಂತೆ, ಬಣ್ಣಗಳ ಸಂಯೋಜನೆ ಪೂರ್ವಯೋಚಿತವಲ್ಲ. ಭಾವನೆಗಳ ತಾಂಡವದಲ್ಲಿ, ಕಲ್ಪನೆಯ ಓಟದಲ್ಲಿ, ಮನಸ್ಸು ತೇಲಿ ನಲಿದಂತೆ ಕುಂಚದ ಕೈ ಬಣ್ಣ ತುಂಬುತ್ತದೆ. ವರ್ಣಚಿತ್ರದ ಮೂಲಗ್ರಹಿಕೆಗೆ ಬಾಧೆಯಾಗದಂತೆ ಬಣ್ಣ ಸಂಯೋಜಿತವಾಗುತ್ತದೆ. ಇದು ನನ್ನ ಅನುಭವ.

ನಾನು ಬರೆದ ಒಂದೊಂದು ವರ್ಣಚಿತ್ರದ ಮೂಲಭಾವವನ್ನು ವಿವರಿಸಬಲ್ಲೆ. 'ಏನೋ ಹೀಗೆ ತೆಗೆದಿರುವೆ ನನಗೆ ತಿಳಿಯದು. ನಿಮಗೆ ಹೊಳೆದಂತೆ ಅರ್ಥಮಾಡಿಕೊಳ್ಳಿರಿ' ಎಂದು ಜಾರಿಕೊಳ್ಳುವ ಭಾವನೆ ನನಗಿಲ್ಲ. ಕಲಾವಿದ ಪ್ರೇಕ್ಷಕರಲ್ಲಿ ವಿಚಾರವಿನಿಮಯ ನಡೆಯಬೇಕು. ಒಬ್ಬರನ್ನೊಬ್ಬರು ತಿಳಿದುಕೊಳ್ಳಬೇಕು. ರಸಿಕ ಕಲಾವಿದನ ಮಟ್ಟಕ್ಕೇರಲು ಯತ್ನಿಸಬೇಕು. ಕಲಾವಿದ, ತನ್ನಷ್ಟಕ್ಕೆ ತಾನು ಹಿಡಿದು ನಿಲ್ಲದೆ– ರಸಿಕನನ್ನು ಮೇಲೆತ್ತಲು ಮನಸ್ಸು ಮಾಡಬೇಕು. ಇದರಿಂದ ಉತ್ತಮ ಕಲೆ ಹುಟ್ಟುತ್ತದೆ.

ನಾನು ಯಾವುದೇ ಕಲಾಪಥಕ್ಕೆ ಕಟ್ಟುಬಿದ್ದವನಲ್ಲ. ಯಾವುದೇ ಹೆಸರಾಂತ ಕಲಾವಿದನ ಪ್ರಭಾವಕ್ಕೆ ಸಿಗಿಬಿದ್ದವನಲ್ಲ. ಅನುಸರಣೆ, ಅನುಕರಣೆ ನನ್ನ ಜಾಯಮಾನಕ್ಕೆ ಒಗ್ಗದ ಮಾತು. ಕಲೆ ಎಲ್ಲಿಂದಲೇ ಬರಲಿ; ಯಾರಿಂದಲೇ ನಿರ್ಮಾಣವಾಗಿರಲಿ ಅದನ್ನು ಮುಕ್ತ ಮನಸ್ಸಿನಿಂದ, ಸಹೃದಯದಿಂದ ಸ್ವಾಗತಿಸುವೆ. ಅಭ್ಯಾಸ, ಚಿಂತನೆಗಳು ನನ್ನ ಊರುಗೋಲುಗಳು. ಚಿತ್ರಕಲಾ ಪ್ರಪಂಚಕ್ಕೆ ನನ್ನದೇ ಆದ 'ನನ್ನತನ'ದ ಕಲೆಯನ್ನು ಅರ್ಪಿಸಬೇಕೆಂಬುದೇ ನನ್ನ ಹಿರಿಯ ಆಸೆ. ನಾನು ಚಿತ್ರಿಸಿದ ಕಲೆ ಹೇಗಿದೆ ಎಂದು ನಾನೇ ಹೇಳಲಾರೆ. 'ನನ್ನತನ'ವನ್ನು ಎತ್ತಿತೋರುವ ವರ್ಣಚಿತ್ರಕಲೆಯಲ್ಲಿ ಜೀವವಿದ್ದರೆ ಬದುಕುತ್ತದೆ; ಶಕ್ತಿಯಿದ್ದರೆ ತಾಳುತ್ತದೆ; ದರ್ಶನವಿದ್ದರೆ ಬಾಳುತ್ತದೆ. ★★


ಫ್ಯಾಶನಿನ ಜಗತ್ತಿನಲ್ಲಿ
ಹೊಸ
ಆಕರ್ಷಣೆ
ಒಂದರ ಮೇಲೆ ಮತ್ತೊಂದು — ಈ ಪ್ರಕಾರ
ಇರುವ ಬಿಳಿ ಹಾಗೂ ಬಣ್ಣದ ತ್ರಿಕೋಣಗಳ ಅಪೂರ್ವ ಪ್ಯಾಟರ್ನ್.
ಧರಿಸಿದಾಗ ನಿಮ್ಮ ಮೇಲೆ ಪ್ರಶಂಸೆಯ ಸುರಿಮಳೆಯಾಗುವುದು.
ಅಲ್ಲದೆ, ಅತ್ಯಂತ ಅನುಕೂಲವಾದ ಅದನ್ನು ಧರಿಸುವುದು
ಆನಂದದಾಯಕವಾಗಿರುತ್ತದೆ. ಎಲ್ಲಾ ಟಾಟಾ ಟೆಕ್ಸ್‌ಟೈಲ್ಸ್
ವಾಯಿಲ್‌ಗಳು ಒಗೆದಷ್ಟು, ಇಸ್ತ್ರಿ ಮಾಡಿದಷ್ಟು ಹೆಚ್ಚೆಚ್ಚು
ಅಂದವಾಗಿಯೇ ಇರುತ್ತವಲ್ಲದೆ, ಅದರ ಸೊಬಗಿಗೆ
ಕುಂದುಬರುವುದಿಲ್ಲ. ಅವು ಸದಾ ಆಹ್ಲಾದ ದಾಯಕವಾಗಿರುತ್ತವೆ.
TATA Textiles ಟಾಟಾ ಟೆಕ್ಸ್‌ಟೈಲ್ಸ್‌ನವರ ವಾಯಿಲ್ಸ್

ಇಲ್ಲಿ ಕೇಳುವವರಿಲ್ಲ

— ಜಯಶ್ರೀ ರಾಜಶೇಖರ

ಬೇವಿನಡಿಯ ಕಟ್ಟೆಯ ಮೇಲೆ ಜನ ಸೇರಿದ್ದರು. “ ಮಹಿಮಾರ ಕುಣಿತ ” ಅಥವಾ ಹಳ್ಳಿಯ ಜನರ ಸಮೂಹನೃತ್ಯ ನಡೆದಿತ್ತು.

“ಹುಂಗಾಮಿಲ್ಲದ ಹುಂಗಾಮಾದಾಗ ನೀಗಮ ಬಿಂದದಂಗಂತೆ” ಹುಂಚನಗೌಡನ ವ್ಯಾಖ್ಯೆ

“ ಹುಂಗ್ಯಾಕ ಅಂತೀರಿ ಗೌಡರ ” ಸರಪಂಚ ಕರಿಯಪ್ಪನ ಪ್ರಶ್ನೆ.

“ ಹೌದ್ರಿ ಮತ್ತ? ಈ ಹೆಣ್ಣು ಹದಿನೈದು ವರ್ಷಗಳ ಹಿಂದ ಹಿಂಗ ಕುಣೀಲಿಕ್ಕ ಹೊಂಟಿದ್ರ ಇತ್ತು ನೋಡ್ರಿ ಮಜಾ. ನೋಡಾವರ ಎದೀನ ಕುಣಿಸ್ತಿತ್ತು. ”

“ ಹದಿನೈದು ವರ್ಷಗಳ ಹಿಂದೂ ನೀನೂ ಕುಣಿದಾಳಪಾ ಪರಸಿ...ಇದೇ ರಂಗಪ್ಪನ ಕೂಡಾ. ನೀವೆಲ್ಲಾ ಆಗಿನ್ನೂ ಸಾಲೀಹುಡುಗರಾಗಿದ್ರಿ,” ಸ್ವಲ್ಪ ಹಿಂದೆ ನಿಂತಿದ್ದ ಮಾಸ್ತರ ಸಿದ್ದಬಸಯ್ಯನವರು ನುಡಿದರು ಅವರಕಡೆಯೇ ಕಳಿ ಹುಂಚನಗೌಡ ಅಚ್ಚರಿಯ ನಾಯಿತೇನೋ ಎಂದು ನಾಲಿಗೆ ಕಚ್ಚಿಕೊಂಡ

“ ಅಂತೂ ಈ ಊರಲ್ಲಿ ನಾವು ಇತ್ತೀಚಿ ಬಿದ್ರಪಾ ” ಎಂದರು ಸರಕಾರಿ ಹೆಣ್ಣುಮಕ್ಕಳ ಶಾಲೆಯ ಗಂಡು ಹೆಡ್‌ಮಾಸ್ತರ್ ಶ್ಯಾಮ ಸುಂದರರಾಯರು

“ ರಸಿಕ ಕಾಲಿಡಾಕ್ಹತ್ತು ನಿಮಗೂ ಗೊತ್ತು ನೋಡ್ರಿಯಲ್ಲಾ ” ಎಂದ ಶಾಲೆಯ ಡೆಟರ್‌ಮೆಂಟ್ ಕಮಿಟಿಯ ಸದಸ್ಯ ರಾಮ ಶೆಟ್ಟಿ

“ಸಾಲಿ ರಸಿಕರೋ. ಮಾಸ್ತರ ರಸಿಕರೋ?” ಎಂದು ಕೆಂಚ ನುಡಿದ. ಹೆಡ್‌ಮಾಸ್ತರರೊಂದಿಗೆ ರಸಿಕತೆಯಲ್ಲಿ ಸ್ಪರ್ಧೆ ನಡೆಸಿ ಸೋತ ಸೆಕ್ರೆಟರಿ ಬೀರಮಾಸ್ ಬಸಪ್ಪ

ಅಷ್ಟರಲ್ಲಿ ಇಷ್ಟು ಬಾರಿಸುವವರಿಗೂ ಕಾಮೇರಿರಬೇಕು. ತಾಳಗತಿಯ ವೇಗ ಹೆಚ್ಚಿತು ಕುಣಿಯುವವರು ಕೊರಳಲ್ಲಿ ಹಾಕಿದ ಗೆಜ್ಜೆಯ ಘಿಲ್ ಘಿಲ್ ನಾದ ತಾರಕ್ಕೇರಿತು ಸ್ಪಂದನ ವಾಯಿತು ಹೆಜ್ಜೆಗಳ ತುಳಿತಕ್ಕೆ ಸಿಕ್ಕಿ ಏಳ್ತಿದ್ದ ಧೂಳು ದಾರಿ ಹೊರಗೆ ಹೋಗಲು ಅವಕಾಶವಿಲ್ಲದೆ ಕುಣಿತ ನೋಡಲು ಒತ್ತುಗಟ್ಟಿದ್ದ ಗುಂಪಿನ ನಡುವೆ ಸುಳಿದಾಡಿ. ಕೆಲ ಕೂಗುವ ಬಾಯಿಗಳಲ್ಲಿ, ಅಸೆಯುರಕ ಕಣ್ಣುಗಳಲ್ಲಿ ತೂರಿ ಕುಣಿಯುವವರನ್ನು ಕೆರಳಿಸಿ ಅವಾಚ್ಯ ಓಲೆ ಬರೆಯಿತು. ಸರಸಿ ರಂಗಪ್ಪರ ಕುಣಿತಕ್ಕೆ ಮತ್ತಷ್ಟು ರಂಗೇರಿದಾಗ ಚಾವಡಿಯಲ್ಲಿ ಆಗ್ರಾ ದಿನಗಳಲ್ಲಿ ಕುಳಿತ ಪತ್ರಿಕಾಮಾಷನೇರು ಹಾಗೂ ಅವರೊಂದಿಗಿದ್ದ ಸ್ನೇಹಿತರು ಕರತಾಡನ ಮಾಡಿ ಮೆಚ್ಚಿಕೆ ವ್ಯಕ್ತಪಡಿಸಿದರು. “ಕುಣಿತ ಹಳ್ಳಿಯವರದಾ ಎಷ್ಟು ಸಹಜವಾಗಿದೆ ಚೈತನ್ಯಪೂರ್ಣವಾಗಿದೆ ನೋಡಿ” ಎಂದರು ಪತ್ರಿಕಾಮಾಷನರರ ಮಿತ್ರರು

“ಹೌದು ಡಾ. ದೇಶಿಕನ್, ಆ ಹೆಣ್ಣಿನ ಮುಖಭಾವ ನೋಡಿರಿ. ಅದೀಪ್ರದೀಪ ಒಂದು ಸಫಲತೆ ಪಡೆದ ಕೃತಕೃತ್ಯತಾಭಾವ ಅವಳ ಕಣ್ಣಲ್ಲಿ ಮಿನುಗುತ್ತಿದೆ” ಎಂದರು ಡಿ. ಸಿ.

“ಮಧ್ಯವಯಸ್ಕಳಾದರೂ She is full of life. ಜೀವಂತ ವ್ಯಕ್ತಿ, ಜೊತೆಯವರಲ್ಲೆಲ್ಲ ಚೈತನ್ಯ ತುಂಬಿದ್ದಾಳೆ. ನೋಡಿ. ಬಾಳಿನಲ್ಲಿ ಇವರನ್ನು ಮುಂಕರೆನ್ನಲು ಸಾಧ್ಯವೇ ಇಲ್ಲ” ದೇಶಿಕನರ ಉದ್ಗಾರ

‘Full of desire and a devotion to fullfil it. ಇಚ್ಛಾಶಕ್ತಿಗಳು ಅದರ ಪರಿಪೂರ್ಣತೆಗೆ ಬೇಕಾದ ಭಾವುಕತೆ ಸಿಷ್ಟಿಗಳೂ ಇವೆ. ದೇವರ ಹರಕೆಯ ಈ ಒಂದು ಕುಣಿತಕ್ಕಾಗಿ ಈ ವರೆಗೆ ಇಳೆ ಒಂದು ತೆರನಾದ ವ್ರತವನ್ನೇ ಕೈಕೊಂಡಿದ್ದಳಂತೆ ಪೂಜಾರಿ ಹೇಳುತ್ತಿದ್ದನೆ. ಜನಪದ ಸಾಹಿತ್ಯಭ್ಯಾಸಿಗಳಾದ ನಿಮಗೆ ಇದೊಂದು ಅಧ್ಯಯನದ ವಿಷಯವೇ ಆದೀತು” ಎಂದರು ಡಿ. ಸಿ —

“ನನಗೆ ಗೊತ್ತು...ಗೊತ್ತು ಈ ಜನರ ಜಾನಪದಗಳು ಬಹಳ ಅರ್ಥಪೂರ್ಣವಾದವು. ಅಳವಾದವೂ ಆಗಿರುತ್ತವೆ. ನಮ್ಮುದುರಿನ ಕಳೆಯ ಉತ್ಸಾಹ ಹೆಚ್ಚುಮಾಡುತ್ತಿದೆ. ಹಿಂದಿನ ಅಳದ ಗಭೀರತೆ ನಮಗೆ ಇಷ್ಟು ಬೇಗ ಅರ್ಥವಾಗಲಿಕ್ಕಿಲ್ಲ. Appearances are deceptive. ಮರೆತು ಗಮನದ ಕಾಮನ ಹಬ್ಬದ ಬೆನ್ನುಹಿಂದೆಯೇ ಬರುವ ಈ ಊರಿನ ಜಾತ್ರೆ, ಈ ಕುಣಿತಗಳಿಗೆ ವಿಶೇಷ ಸಾಮಾಜಿಕ ಅರ್ಥವಿರಬೇಕು” ಎಂದರು ದೇಶಿಕನ್

“ಇದ್ದೀತು ಈ ಊರಲ್ಲಿ ಕಾಮನ ಹಬ್ಬದ ನಂತರ ಒಂದು ದಿನ ಮುಂಚೆಯೇ ಈ ದೇವರ ಜಾತ್ರಾ ಕಾರ್ಯಕ್ರಮಗಳು ಆರಂಭವಾಗುವ ಕಾರಣ ಈ ಮನರ ಭಕ್ತರೀಯ ಸೂತ್ರದ ಪ್ರದೇಶದಲ್ಲಿ ಕಾಮದಹನವಿಲ್ಲವಂತೆ. ಕುಂಬಾದ್ಯ, ಅವಾಚ್ಯ ಹಾಡುಗಳು ಗೊಂದಲವೂ ಇಲ್ಲವಂತೆ. ಅಂತೆಯೇ ಈ ಕುಣಿತವೂ ಒಂದು ಸಂಸ್ಕೃತಿ ಪರಂಪರೆ ಎನ್ನುವದರಲ್ಲಿ ಸಂದೇಹವಿಲ್ಲ.” ಎಂದರು ಡಿ. ಸಿ.

“ಹೌದಯ್ಯ. ಹೋಳಿಹಬ್ಬದ ನಿಷೇಧದಿಂದ ಬಯಲಾಟದಂತಹ ರಾಜಸಕ್ತಿಕನ್ನದ ಆವಿಷ್ಕಾರಕ್ಕೊಂದು ಅವಕಾಶ ಬೇಕಲ್ಲ? ಅಂತೆಯೇ ಪೂರ್ವಜರು ದೇವರ ಸೇವೆಯ ಹರಕೆಯ ರೂಪದಲ್ಲಿ ಇಂಥ ಪವಿತ್ರ ನೃತ್ಯಕ್ಕೆ ಎಡೆಮಾಡಿಕೊಟ್ಟಿದ್ದಾರೆ ಎನ್ನಿಸುತ್ತದೆ.” ಎಂದರು, ದೇಶಿಕನ್ “ಆದರೆ ಬಹುದು ಇಂಥ ಯಾವ ಹಿನ್ನೆಲೆಯನ್ನೂ ಅರಿಯುವ ಗೋಜಿಗೆ ಹೋಗದೆ ಈ ನೃತ್ಯವೇ ಅತ್ತೀಲವೆಂದು ಬೊಬ್ಬೆಯಿಟ್ಟಿ ಇಷ್ಟುಕಾಲ ಇದನ್ನು ನಡೆಸದಂತೆ ಜನಗಳನ್ನು ತಡೆದು ನಿಲ್ಲಿಸಿದ್ದರಂತೆ. ಇಂದು ಈ ಜನ ನನ್ನನ್ನು ಕಂಡು ಅಷ್ಟೇ ಕೇಳಿ ಪುನಃ ಪ್ರಾರಂಭಿಸಿದ್ದಾರೆ.” ಎಂದರು ಡಿ. ಸಿ.

“ಅದೇನು ಅಶ್ಲೀಲ ಬಂತು? ನ್ಯಾಷ್ಪೋಲೀ, ಪ್ರೀವಮಸ್ ಮತ್ತು ಕೇಬಾಯರ್‌ದಂತ ನೃತ್ಯ

ಕ್ಲಬ್‌ಗಳಲ್ಲಿ ಬತ್ತಲೆ ಡಾನ್ಸ್ ನೋಡಿ ಬರುವ ಸುಧಾರಕರು ಈ ಊರಲ್ಲಿ ಇದ್ದರೂ ಇರಬಹುದು. ಗಣರಾಜ್ಯದಿನದಂದು ನಮ್ಮ ಕಾಡುಜನಾಂಗದವರೂ, ನಾಡವರೂ ಸೇರಿಯೇ ಸಮೂಹ ನೃತ್ಯಪ್ರದರ್ಶನ ಮಾಡುವದಿಲ್ಲವೇ?"

"ಅದೇ ನಾನೂ ಹೇಳಿದ್ದು. ಎಲ್ಲಕ್ಕೂ ಹೆಚ್ಚಾಗಿ ಇಂಥ ಬಸವಿಯರನ್ನು ಬಳಸಿಕೊಳ್ಳುವವರೇ ಹೀಗೆ ನರ್ತಿಸುವದು ಅಶ್ಲೀಲವೆಂದು ವಿರೋಧಿಸುವ ಶೀಲವಂತರು. ನನಗೆ ರೇಗಿಹೋಗಿತ್ತು......ಆತ್ಮವಂಚನೆಗೂ ಒಂದು ಮಿತಿ ಬೇಕಲ್ಲ ಮಿಸ್ಟರ್." ಡಿ. ಸಿ. ಯವರ ಮಾತು ಬಿರುಸಾಗತೊಡಗಿದ್ದವು.

"ಪ್ರಪಂಚವೇ ಹಾಗೆ. ಇಂಥ ಸಂಪ್ರದಾಯಗಳಲ್ಲಿ ಸಲ್ಲದುದು ನುಸುಳಿದ್ದರೆ ಸರಿಪಡಿಸಬಹುದು. ಆದರೆ ಸಂಪ್ರದಾಯವೇ ಬೇಡವೆನ್ನುವುದು ಸರಿಯಲ್ಲ." ಎಂದು ದೇಸಿಕನ್ ಮಾತು ಮುಗಿಸುತ್ತಿರುವಾಗ ಕುಣಿತ ಮುಗಿಸಿ ಬಂದ ರಂಗಪ್ಪ ಮತ್ತು ಸರಸಿ ಮತ್ತು ಅವರ ಹಿಂದೆ ಇತರ ಗೊಲ್ಲರು ಡಿ. ಸಿ. ಯವರಿಗೆ ವಂದನೆ ಸಲ್ಲಿಸಲು ಬಾಗಿದರು. ಡಿ. ಸಿ. ಯವರು ಜೇಬಿನಿಂದ ಐದೈದು ರೂಪಾಯಿಯ ಎರಡು ನೋಟನ್ನು ತೆಗೆದು ಸರಸಿಯ ಮತ್ತು ರಂಗಪ್ಪನ ಕೈಯಲ್ಲಿ ಹಾಕಿ "ದಣಿದಿರುವಿರಿ, ಚಹಾ ಕುಡಿಯಿರಿ" ಎಂದರು. ಎಲ್ಲರೂ ಮತ್ತೊಮ್ಮೆ ಶಿರ ಬಾಗಿದರು.

"ಈ ಬ್ಯಾರೆ ಜಾತ್ರಿ ದಿವಸದಿರಗಿ ಬಿಟ್ಟತ್ರೀ ಧಣೇರ... ದ್ಯಾವರ ಭಕ್ತರ್ನ ದ್ಯಾವರಿಗೆ ಕೂಡಿಸಿದಿರಿ." ಎಂದ ತುಂಬುಹೃದಯದಿಂದ ಕೈ ಮುಗಿಯುತ್ತ ರಂಗಪ್ಪ.

ಕುಣಿಯುವವರ ಗುಂಪು ಡಪ್ಪಿನ ಸಪ್ಪಳದೊಂದಿಗೆ ಮುಂದೆ ಸಾಗಿತ್ತು.

ಆಸನದಿಂದೆದ್ದು ಹೋಟು ನಿಂತ ಡಿ. ಸಿ. ಯವರು ಎತ್ತಲೋ ನೋಡುತ್ತ ತಮ್ಮ ಮಿತ್ರರ ಕೈಜಗ್ಗಿ ಹೇಳಿದರು. "I shall show a character ಇದೊಂದು ಪಾತ್ರ ಪರಿಚಯ. ಅದೋ ನೋಡಿ ಎದುರು ಕಟ್ಟೆಯ ಮೇಲೆ ಮೀಸೆಗೆ ಕಪ್ಪು ಹಚ್ಚಿಕೊಂಡ ಮುದುಕ. ಈ ಊರ ಪಿದೀಮ ಕುಲಕರ್ಣಿ ಗುಣವಂತರಾಯ. ಈ ಹೆಣ್ಣಿನ ಬಾಳಿನ ಸರಸತಮವಾಗಲಿದ್ದ ಹದಿನೈದು ವರ್ಷಗಳನ್ನು ಹಾಳು ಮಾಡಿದ್ದಾನಂತೆ. ಈ ಕುಣಿತ ನಿಲ್ಲಿಸಲಿಕ್ಕೂ ಅವನೇ ಕಾರಣನಂತೆ."

"ಇರಬೇಕು. ಇಂಥವರು ಅಶ್ಲೀಲದ ಪುರಾಣ ಹೇಳದಿದ್ದರೆ ಇನ್ಯಾರು ಹೇಳಬೇಕು" ಎಂದು ನಸುನಕ್ಕ ದೇಶಿಕನ್.

"ಆಸಾಮಿ ಬಹಳ 'ರಂಗೀಲಾ', ಬಹು ಥಳುಕಿನ ಮುದುಕ" ಎಂದು ಡಿ. ಸಿ. ಕಣ್ಣು ಮಿಟುಕಿಸಿದರು.

"ಸಹಜವೇ...ಈ ಊರಲ್ಲಿ ಕಾನು ಸಿಕ್ಕಿಲ್ಲವಲ್ಲ," ಎನ್ನುತ್ತ ದೇಶಿಕನ್ ಮೆಟ್ಟಿಲಿಳಿದು ಕಾರಿನತ್ತ ನಡೆದರು.

× × ×

ಕುಲಕರ್ಣಿ ಗುಣವಂತರಾಯರು ಕಟ್ಟೆಯಿಂದ ಇಳಿದು ಚಂಚಿಯೊಳಗಿನ ಇನ್ನೊಂದು ಎಲೆ ಬೀಡಾ ತೆಗೆದು ಬಾಯಿಗೆ ತುರುಕಿ ಬಣ್ಣದ ಮೀಸೆಯ ಮೇಲೆ ಕೈಯಾಡಿಸುವಾಗ ರಿಟೈರ್ಡ್ ರೆವಿನ್ಯೂ ಇನ್ಸ್‌ಪೆಕ್ಟರ್ ಗುಲಾಮ್ ಹುಸೇನ ಸಾಬರ ಸವಾರಿ ಸಂಧಿಸಿತು. ಗುಲಾಮ ಹುಸೇನರಿಗೂ ಗುಣವಂತರಾಯರಿಗೂ ಮೂವತ್ತು ವರ್ಷದ ಸಮಾನ ವ್ಯವಹಾರದ ಸ್ನೇಹ, ವಿಶ್ವಾಸ ನಡೆದುಕೊಂಡು ಬಂದಿದೆ. ಪರಸ್ಪರರ ಹೊರ ಒಳಗುಗಳನ್ನು ಅರಿತವರು. ಸಾಧ್ಯವಾಗದ ಸರಸಿಯ ಸರಸವೊಂದನ್ನು ಉಳಿದು ಗುಣವಂತರಾಯರ ಎಲ್ಲ ಉದ್ಯಮಗಳಲ್ಲಿಯೂ ಗುಲಾಮಹುಸೇನ ಸಹಕಾರಿ, ಸಹಭಾಗಿ ಆಗುತ್ತ ಬಂದಿದ್ದ. ಈಗಲೂ ಇಬ್ಬರೂ ಕೂಡಿಯೇ ಸಾಯಂಕಾಲ ಹೊರಟು ರಸ್ತೆಗುಂಟ ಬಂದು ಒಬ್ಬ ನಮಾಜಿಗಾಗಿ ಮಸೂದೆಗೆ ಇನ್ನೊಬ್ಬ ಪ್ರಾರ್ಥನೆಗೆಂದು ಗುಡಿಗೂ ಹೋಗಿ ಭಕ್ತಿಯಿಂದ ನಮಾಜು, ಪ್ರಾರ್ಥನೆ ಮುಗಿಸಿ ಮತ್ತೆ ಬರುವಾಗ ಸೇರಿಕೊಂಡೇ ಮರಳುತ್ತಾರೆ. ಇಬ್ಬರೂ ಕೂಡಿ ಮನೆ ತಲುಪುವದರೊಳಗಾಗಿ ಯಾವುದೋ ಹೊಸ ವ್ಯಾಜ್ಯದ ಬೀಜಾರೋಪಣ ವಾಗಿದೆಯೆಂಬುದು ಖಂಡಿತ.

"ಕ್ಯಾ-ರಾವ್ ಸಾಬ್, ನಿಮ್ದು ಜಮೀನ್ ಪಟ್ಟಾ ಚಾರಿಜ್ ಆತಲ್ಲ?" ಎಂದ ಗುಲಾಮ ಹುಸೇನ್.

"ಏನ್ ಸಾಬರ? ಯಾವ ಜಮೀನು? ಏನು ಕಥಿ...ಒಗಟನಾಗ ಮಾತಾಡ್ತೀರಲ್ಲ?" ಎಂದ ಕುಲಕರ್ಣಿ ತಿಳಿಯದವನಂತೆ.

"ಅದೇ, ಸರಕಾರಿ ಗಾಯರಾನ್ ಜಮೀನು...ಊರ ದನಗಳು ಮೇಯಲಿಕ್ಕೆ ಅಂತ ಬಿಟ್ಟಿದ್ದು...ಖಾಲಿ ಇದ್ದ ಜಮೀನೆಲ್ಲ ನನ್ನದೇ ಅಂತ ಹೇಳಿ ಕಾಗದ ಪತ್ರ—ಗೌಡಾ-ಕುಲಕರ್ಣೀ ರದು ನಿನಗ ಯಾರು ಗುಣವಂತರಾಯ ಅಂತ ಹೆಸರಿಟ್ಟರೋ ಏನೋ...ಹಂಗಾತು ನೋಡು ಈಗ" ಎಂದ ಗುಲಾಮಹುಸೇನ.

"ಏನಾಯ್ತೋ ಸಾಬಾ ಈಗ?" ಎಂದು ಕುಲಕರ್ಣಿ ಹುಬ್ಬೇರಿಸಿದ

"ಇನ್ನೇನಾಗ್ಬೇಕು? ಊರದನಗಳಿಗೂ ಮೇಯುಗೂಡಲಿಲ್ಲ. ನೀನು ಸಾಗು ಮಾಡೋದ ಬಗದೆ (ಬೀಳು) ಬಂಜರು ಮಾಡಿಬಿಟ್ಟಿ. ೧೫ ವರ್ಷ ಸರಸವ್ವನಂಥ ಕಸಿ ಭೂಮೀನ 'ಕಾಷ್ಟ' (ಸಾಗು) ಮಾಡದೇ ಬಿಟ್ಟಿ ಎಂಥಾ ಕೈಲಾಗದವ ಅನಬೇಕು ನಿನಗs...ಗಟ್ಟಿಯುಳ್ಳವs...ಹೊಡಕೊಂಡು ಹೊಂಟ ನೋಡು, ಆ ಗೊಲ್ಲರ ರಂಗಪ್ಪ. ಮತ್ತ-ಆತ ಕುಣಿತಾ ನೋಡಾಕ ಬ್ಯಾರೆ ಬಂದಾನ...ಹ್ಯಾವ ಇಲ್ಲದs..." ಎಂದ ಗುಲಾಮಹುಸೇನ.

"ಏ...ಕಾಲನೇ ಬದಲಾಗೇದೋ ಹುಸೇನ್ ಸಾಬಾ...ಹೆಣ್ಣುಗಂಡು ತೆಕ್ಕೆ ಬಡಕೊಂಡು ರಸ್ತೆದಾಗ ಕುಣಿಯೋದೇ ನಮ್ಮ ಸಂಸ್ಕೃತಿ, ಸಂಪ್ರದಾಯ ಅಂಬೋ ಅಧಿಕಾರಿಗಳು ಬಂದಾರಪಾ ಏನ್ ಮಾಡೋದು. ತಾಬೇದಾರಿ ಮಾಡೋ ನಮ್ಮಂಥಾವರು ನೋಡಬೇಕಾಗ್ತದs" ಎಂದು ಉಸಿರ್ಗರೆದ ಕುಲಕರ್ಣಿ.

"ಹೌದ್ರಿ ರಾವ್ ಸಾಬ್......ಹೆಂಗಸರನ್ನ ನಿಮ್ಮೊಬ್ಬರ ತೆಕ್ಕೆಯೊಳಗs ನುಗಿಸಿ ಬಿಟ್ಟದ್ರs ಬೇಕಾಗ್ತಿತ್ತೇನೋ...ಅಲ್ಲ?"

"ಅಲ್ಲೋ? ನೀನೂ ಅವರಂತೇನೇ ಪದಾ ಹಾಡತೀಯಲ್ಲ? ಈ ತರದ ಕುಣಿತಾ ನೋಡಿದ್ರ ಹುಡುಗುರ ಮ್ಯಾಲೆ ಏನು ಪರಿಣಾಮ ಆದೀತು...ತಿಳೀಬಾರದs ಇವರಿಗೆ?"

"ತಿಳೀದ್ರು ಏನು? ಡಿ. ಸಿ. ಯವರು ಕೇಳಿದರ್ರೆ? ನಿಮ್ಮ ನಿಮ್ಮ ಹರಕ ಇದ್ದ ಕುಣಿಯಬಹುದು. ಆದರ ನಿಮ್ಮ ಮಕ್ಕಳೀ ನಿಮ್ಮ ಕುಣಿತಾನ ಕಲಿತು ಕುಣಿದರ ಅದು ನಿಮಗ ಅಸಹ್ಯ ಕಾಣಿಸಬಾರದು, ಹಾಂಗ ಕುಣಿಯಾದಿ ಅಂತ ಹೇಳಿದ್ರಲ್ರಿ...ಸಾಹೇಬ್ರು?"

"ಹೌದೋ.........ಆದರ ಕುಣಿಯೋ ಭರಾಟೆಯೊಳಗ ಅದೆಲ್ಲ ನೆನಪಿರತದೇನಸಾ ಸಾಯುಬಾ?"

"ಇರಬೇಕ್ರೀ ಮತ್ತ. ಎಷ್ಟರ ತಪ್ಪೊ ನಮ್ಮಂದಿಗ ಯಾವ್ರು ಏನು? ಸರಸವ್ವನಂಥಾಕೀನ ೧೫ ವರ್ಷಗಟ್ಟಲೆ ಮನಿವಾಡಿ ಇಟಗೊಂಡು ಇಳಿವಯಸ್ಸಿನಾಗ ರಂಗು ಮಾಡಿದ್ರಿ ಹೆಂಡತಿ. ಮಕ್ಕಳ ಪಾಲ್ಯಾಗೆ ಏನು ಪರಿಣಾಮ ಆದೀತು ಅಂಬೋದು ನಿಮಗ ನೆನಪಿತ್ತೇನ್ರೀ ಕುಲಕರ್ಣೇರ? ಅಲ್ಲಾ ನಿಮ್ಮ ಸುದ್ದಿ ಅಂತ ಮತ್ತೆ ಹಿಟ್ಟಾಗಬ್ಯಾಡಿ ಅಂದ" ಎಂದ ಹುಸೇನಸಾಬ ಮೆತ್ತಗೆ,

"ಹೌದೇಳೋ...ನಿನ್ನ ಹ್ಯದೋಗ ನನಗ ಗೊತ್ತದ. ಸರಸಿ ನಿನಗ ಸಿಗಲಿಲ್ಲ ಅಂಬೋ ಬ್ಯಾಸಿ ನಿನಗ ಇನ್ನೂ ಹೋಗಿಲ್ಲ. ನಾನೇನು ಮಾಡ್ಲಿಸಾ...ನಾನೂ ಹೇಳಿ ನೋಡಿದೆ. ಸರಸಿ ನೀನು ತಿಳದುಕೊಂಡಂಥಾ ತುಡುಗ ದನ ಮೇಯೋ ಗಾಯರ್‌ಛಾಪ್ ಜವೀನು ಆಲ್ಲೋ ಸಾಯ್‌ಬಾ. ಹುರ್ರ ಆಟ ಆಡೋದು ಬಂದ್ ಆದಾಗಿನಿಂದ ಅದೇನು ಅವಳ ಸಂಕಲ್ಪವ್ರೋ ಏನೋ ನನಗೇ ಅವಳು ಪೂರ್ತಿ ಒಲಿದಿಲ್ಲ ಅನಸ್ತದ" ಎಂದ ಕುಲಕರ್ಣಿ.

"ನೀವೇನೂ ಅವಳ ಸರಿಜೋಡಿಯುವರೇನು ಬಿಡ್ರಿ. ೨೦ ವರ್ಷವಾದರೂ ಅವಳಿಗಿಂತ ಹಿರೇರು. ಏನೋ ಆ ವ್ಯಾಳೇ ಹಾಂಗಿತ್ತು. ಮಹಿಮರ ಕುಣಿತಕ್ಕ ಸೇರಿದ ಹೆಣ್ಣು ಗೊಲ್ಲರ ರಂಗನಂಥಾ ಹಂಗಾಮದ ಹುಡುಗರ ಗುರುತಾದರ, ನಿಮಗ ದಕ್ಕಲಿಕ್ಕಿಲ್ಲಾ ಅಂತ ಕುಣಿತಾನೇ ನಿಲ್ಲಿಸಿಬಿಟ್ರಿ. ಅವರ ಅವ್ವನೂ ನಿಮಗೆ ಅನುಕೂಲ ಆಗೇ ಇದ್ದಳು. ಸರಸವ್ವ ನಿಮ್ಮ ಬಲಿಗೆ ಬಿದ್ದಳು" ಎಂದ ಸಾಬ.

"ಆದರೂ ಅವಳ ಮನಸು ಮಾತ್ರ ಆಗಿನಿಂದಲೂ ಬರಾಬರಿ ಇಲ್ಲ ಬಿಡು. ಏನೋ ಕಿರುಕಳ. ಸಂಕೋಚ ನಿನಗೂ ಗೊತ್ತಿದ್ದಾಂಗ ಅಂಥಾದರಾಗ ನಾನು ಎಷ್ಟು ಅನುಭೋಗಸ್ಥ ಮನಿಷ್ಯಾ ಇದ್ದೀನಿ. ಆದರೂ ಈ ಹೆಣ್ಣಿನ ಅಳತೀನು ಸಿಕ್ಕಿಲ್ಲ ಬಿಡು. ಹಾಂಗ ಸ್ವಭಾವ ಒಳ್ಳೇದಾದರೂ ಅಂದು ಚಾಡಿಸಿಕೊಂಡ ಮನಸನ್ನ ತಿರುಗಿ ಅರಳಿಸಿಲ್ಲ ಅನಸ್ತದ ನೋಡು" ಎಂದ ಕುಲಕರ್ಣಿ ಯೋಚನಾಪರನಾಗಿ.

"ಹಿಂಗೇನು...ಅದಕ್ಕ ಕುಲಕರ್ಣೇರ ಹಿತ್ತಲದಾಗಿನ ಮಾವಿನಮರ ಫಲ್ಲೈಸಿದ ಹಾಂಗ ಈ ಚಾವಡಿ ಹಿಂದಲಮರ ಕಾಯಿಬಿಡಲಿಲ್ಲೋ ಏನೋ" ಎಂದ ಗುಲಾಮ್‌ಹುಸೇನ್ ವ್ಯಂಗ್ಯವಾಗಿ.

ಕುಲಕರ್ಣಿ ಬಿಟ್ಟುಸಿರುಬಿಟ್ಟು ಹೇಳಿದ.

"ಇದ್ದೀತು. ಒಂದು ರೀತಿಯಿಂದ ನೋಡಿದರೆ ಗೊಲ್ಲರ ರಂಗ ಅವಳಿಗೆ '[illegible]' ...ನೋಡಬೇಕ...ಈ [illegible] ಸಿಕ್ಕಿಲ್ಲ" ಕುಲಕರ್ಣಿ ಮತ್ತು [illegible] ಜೊತೆ ಮನೆಯತ್ತ ಸಾಗಿತು.

X X X

ಗೊಲ್ಲರ ರಂಗಪ್ಪ ಪ್ರತಿ ವರ್ಷದಂತೆ ಈ ಸಲವೂ ತನ್ನ ಜನರೊಂದಿಗೆ 'ಮಹಿಮ'ನಾಗಿ ಸ್ವಾಮಿಯ ಜಾತ್ರೆಯಲ್ಲಿ ಸೇವೆ ಸಲ್ಲಿಸಲು ಬಂದಿದ್ದ. 'ಹುರ್ರ' ಕುಣಿತವಿಲ್ಲದ ಜಾತ್ರೆ ಪ್ರತಿ ವರ್ಷ ಸಪ್ಪೆ ಎನಿಸುತ್ತಿತ್ತು. ಆದರೆ ಈ ಸಲ ಜಿಲ್ಲಾಧಿಕಾರಿಗಳೇ ಜಾತ್ರೆಗೆ ಬಂದಿದ್ದಾರೆಂದು ತಿಳಿದು ಅವರಲ್ಲಿ ತನ್ನ ಜನರೊಂದಿಗೆ ಹೋಗಿ 'ನಿಂತು ಹೋದ 'ಮಹಿಮ'ರ ಕುಣಿತ ಅಥವಾ ಹುರ್ರ' ಆಡುವ ಪದ್ಧತಿಯ ಬಗೆಗೆ ಹೇಳಿಕೊಂಡಾಗ ಜಿಲ್ಲಾಧಿಕಾರಿಗಳು ದೇವಸ್ಥಾನದ ರಾಜಗುರುಗಳನ್ನೂ, ರಾಜಪುರೋಹಿತರನ್ನೂ ವಿಚಾರಿಸಿ ಅಪ್ಪಣೆ ಕೊಟ್ಟಿದ್ದರು. ಇತರ ಪ್ರತಿಷ್ಠಿತರಲ್ಲಿಯೂ ಅನೇಕರು ಒಪ್ಪಿದ್ದರು. ಈ ಅನಿರೀಕ್ಷಿತ ಭರವಸೆಯಿಂದ ಪುಲಕಿತನಾದ ರಂಗಪ್ಪನಿಗ ತನ್ನ ಜೊತೆಗೆ ಕುಣಿಯುವ ಹೆಣ್ಣು ದೊರಕಿಸುವ ಸಮಸ್ಯೆ ಎದುರಾಯಿತು. ಆಗಲೇ ಅವನಿಗೆ ನೆನಪಾದವಳು ಸರಸಿ. ಸರಸವ್ವ ೧೫ ವರ್ಷಗಳ ಹಿಂದೆ ತನ್ನೊಡನೆ ಕುಣಿದವಳು ಆದರೆ ಈಗ ಕುಲಕರ್ಣಿ ಗುಣವಂತರಾಯನ ಹೆಂಗಸು ಎಂದು ಅನುಮಾನಿಸುತ್ತಿರುವಾಗ ಪೂಜಾರಿ ವೆಂಕಟಾಚಾರ್ರು ಅವನ ಸಹಾಯಕ್ಕೆ ಬಂದಿದ್ದರು.

"ಅದೇನಿಲ್ಲ. ಆಕಿಗೂ, ಕುಲಕರ್ಣಿಗೂ ಮನಸಾ ಹೊಂದಾಣಿಕೆ ಆದ್ಹಾಂಗಿಲ್ಲ. ಶನಿವಾರ ಗುಡಿಗೆ ಬಂದಾಗ ದೇವರಿಗೆ ಅಷ್ಟ ಬಿಡ್ಸಾಕ ಏಳೋದೇ ಇಲ್ಲ" –

'ಏನಬೇ ನಿನ್ನ ಬೇಡಿಕೆ' ಅಂತ ಕೇಳಿದರು...


'ಯಪ್ಪಾ ಕಾಲ ಕಾಲಾಂತರದಿಂದ ನಡಕೊಂಡು ಬಂದಂಥಾ ಮಹಿಮರ ಕುಣಿತಾ ನಿಂತುಹೋತು. ಜಾತ್ರ್ಯಾಗ ಕುಣಿಯೋದು ನಮ್ಮ ಮನೆತನದ ಸೇವಿ...ಅದು ಸುರುವಾಗೋತನಕ ನನಗ ಯಾ ಸುಖಾನೂ ಬ್ಯಾಡ' ಅಂತಾಳ" ಎಂದರು ಪೂಜಾರಿ —

"ಹಂಗಾರ...ಈಗ ನಾನು ಕರೆದರ ಕುಣಿಯಾಕ ಬಂದಾಳೇನ್ರಿ?" ಎಂದ ರಂಗ.

"ಬರಬಹುದು ನೋಡು ಆಕಿ. ಒಳ್ಳೇ ಭಕ್ತಿಯ ಹೆಂಗಸು" ಎಂದರು ಪೂಜಾರರು. ರಂಗನ ಕೆಲಸವಾಯಿತು.

ಯೌವನದ ಇಳಕಲಿನಲ್ಲಿ ಇದ್ದ ಗುಣವಂತರಾಯರ [illegible] ತನ [illegible] ಅನೇಕ ಸಲ [illegible] ಈಗಲೂ [illegible]ಗಿದಿತ್ತು.

"ಸರೇದವನನಗಂಡ [illegible] ಹೋಗಿ." ಎಂದು ಕುಲಕರ್ಣಿ ತನ್ನ ಸಂಕಟ ತೋಡಿಕೊಂಡ.



"ಹಂಗೇ ತಿಳಕೋರಿ...ಸದಾಶಿವನ ಆನೇ ದ್ಯಾನಾ ಅಂತ...ಬಾಳೇವೆಲ್ಲಾ ಹೀಂಗ ಆತು. ಹರಾ ಇಲ್ಲಾ ಶಿವಾ ಇಲ್ಲ. ೧೫ ವರ್ಷ ಮಾಲೀ ಎಣಿಸಿದಿರಿ ನನ್ನನ್ನ ಎದುರಿಗೆ ಕುಂದರಿಸಿಕೊಂಡು ಹರ ಇಲ್ಲ...ಶಿವ...ಇಲ್ಲ...ನಿಮಗೇನು ಗೊತ್ತು? ಅಟಿಕಾಲ ಈ ದೇವರ ಹರಕೆಯ ಫಲವಾಗಿ ಹೇಗ ಕಾದೀನಿ ಅಂಬೋದು. ಈ [illegible] ಏನೋ ದೇವ [illegible]



ಕೊಟ್ಟಿದ್ದ ನನಗ. ಈಗಾದರೂ ಆ ಮಾತು ನನ್ನ ತಲ್ಯಾಗ ಹಾಕಬ್ಯಾಡ್ರಿ" ಎಂದು ಮಟಗುಟ್ಟಿದಳು ಸರಸವ್ವ.

"ಅಂತೂ ನೀ ಹೋಗುವಾಕಿ... ಕುಣಿವಾಕಿ... ಪ್ರಸಂಗ ಬಂದ್ರ ಆ ರಂಗನ ಕೂಡಾ ಇರೋವಾಕಿ ಅಂದ್ಹಾಂಗಾತು...ಹೋಗು ನನ್ನ ಆಸರೆ ಮಾತ್ರ ಇನ್ನಿಲ್ಲ. ತಿಳೀತು?" ಎಂದು ಕುಲಕರ್ಣಿ ಪ್ರತಿಕ್ರಿಯೆಗಾಗಿ ನಿರೀಕ್ಷಿಸಿದ. ತೀವ್ರ ಪ್ರತಿಕ್ರಿಯೆಯೇ ದೊರೆಯಿತು. ಸರಸವ್ವನ ಧ್ವನಿ ಗಡುಸಾಗಿತ್ತು.

"ತಿಳಿದೈತ್ರಿ ರಾಯರೇ. ದೇವರ ಆಸರೆ ಹುಡುಕಿ ಹೊಂಟೇನಿ. ನಿಮ್ಮಂಥೋರು ಏನು ಆಸರೆ ಕೊಟ್ಟೀರಿ. ಕುಣಿಯಾಕ ಹೊಂಟೇನಿ ಆದರ ಜಾತ್ರಿಯ ಓನ ಕುಣಂಗೀದು ನಮ್ಮ ಮನೆತನದ ಹರಿಕೆ ಸ್ವಾಮೀಸೇವೆ ಅಂತ ಕುಣಿಯಾಕ ಹೊಂಟೇನಿ ಅಂತ ನಿಮ್ಮ ಕಸರುಮುಟ್ಟಿದ ಮನಸ್ಸಿಗೆ ಒಮ್ಮೆ ತಿಳಿಸಿರಿ. ನಾನು ಹೆಣ್ಣು. ನಿಮ್ಮಂಥಾ ಗಂಡಸಲ್ಲ. ಯಾರ ಸಂಸಾರದಾಗ ಬೇಕು ಅವರ ಸಂಸಾರದಾಗ ದುಡುಂ ಅಂತ ಹೊಕ್ಕೊಂಡು ಗೊಂದಲ ಮಾಡೋ ಹಂಗಾಮ ನನಗ ಇದ್ದಾಗ್ಯೂ ನೀವು ಪಂಜರದಾಗ ಇಟ್ಟು ನನ್ನ ಜೀವ ಸಣ್ಣ ಮಾಡಿದಿರಿ. ಈಗೇನಾಗಬೇಕಾಗ್ಯತೆ. ಯಾರ ಬಾಳಿವಿಯೊಳಗ ಯಾಕ ಹೊಕ್ಕೊಳ್ಳಿ ರಾಯರ ಅದೆಲ್ಲಾ ನಿಮ್ಮಂಥೋರಿಗೆ ಬಿಟ್ಟ ಕೆಲಸ...ಗುಡೀ ಕಸಾ ಬಳಿದು, ಕೂಲಿಮಾಡಿ ಬದುಕೇನು?" ಎಂದು ಸರಸಿ ಕಟುವಾಗಿ ಹೇಳುವಾಗ ನಿರಾಶೆಯ ಛಾಯೆ ಮೂಡದಿರಲಿಲ್ಲ. ಗುಣವಂತರಾಯರ ಚಟಕ್ಕನೆ ಎದ್ದು ಹೋಗಿಬಿಟ್ಟಿದ್ದ.

× × ×

ರಾಯಚೂರ ಜಿಲ್ಲೆಯ ಆವೂರ ದೇವರ ಜಾತ್ರೆ ಹನ್ನೊಂದು ದಿನಗಳ ವರೆಗೆ ನಡೆಯುತ್ತದೆ. ಹೋಳಿಹುಣ್ಣಿಮೆಯ ಮೊದಲಿನ ಚತುರ್ದಶಿಯ ದಿನವೇ ಜಾತ್ರೆಗಾಗಿ ಧ್ವಜಾರೋಹಣವೆಂಬ ವಿಧಿಯಾಗುತ್ತದೆ. ಅಂದೇ ಆ ದೇವರ ಭಕ್ತರು ಎಲ್ಲೆಲ್ಲಿ ಇರುವರೋ ಅವರೆಲ್ಲ ದೀಕ್ಷಾಬದ್ಧರಾದ ಸೂಚನೆಯೆಂದು ಕ್ಷೌರ ಮಾಡಿಸಿಕೊಂಡು ಮನೆಯಲ್ಲಿ ನಂದಾದೀಪಗಳನ್ನು ಉರಿಸುತ್ತಾರೆ.

ಕೈಗೆ ಕಂಕಣ ಕಟ್ಟಿಕೊಳ್ಳುತ್ತಾರೆ. ಹೊಸ ಬಟ್ಟೆಗಳನ್ನು ಧರಿಸುತ್ತಾರೆ. ಈ ಜಾತ್ರೆಯಲ್ಲಿ ಗೊಲ್ಲರಿಗೂ, ಹರಿಜನರಿಗೂ ವಿಶೇಷ ಮರ್ಯಾದೆಗಳಾಗುತ್ತವೆ. ವರ್ಷಾದ್ಯಂತ ಕುರಿಹಿಂಡುಗಳೊಂದಿಗೆ ಅಡವಿಯಲ್ಲಿಯೇ ಸಂಚರಿಸುವ ಗೊಲ್ಲರು ಬಹು ವರ್ಣಮಯ ಜೀವಿಗಳು. 'ಮುಹಿಮು'ರಾದ ಕೂಡಲೇ ಅಂದರೆ ದೀಕ್ಷಾಬದ್ಧರಾದೊಡನೆ ಹೊಸ ಧೋತರ, ಬಗಲಕಸಿ ಅಂಗಿ ಹಾಗೂ ಮೇಲೆ ಹೊದಿಯುವ ಹಚ್ಚಡಗಳನ್ನು ಗಾಢ ಹಳದೀ ಬಣ್ಣದಲ್ಲಿ ಅದ್ದಿ ಧರಿಸುತ್ತಾರೆ. ವರ್ಷದಲ್ಲೆಲ್ಲ ದೇವರ ಹೆಸರಿನಲ್ಲಿ ಮುಡಿಪಾಗಿ ಕೂಡು ಹಾಕಿದ ತುಪ್ಪ, ದುಡ್ಡು ಮತ್ತು ಹರಕೆಯ ಸಾಮಾನುಗಳನ್ನೆಲ್ಲ ತೆಗೆದುಕೊಂಡು ಈ ಜನ

ನೂರಾರು ಕಟ್ಟೆಯಲ್ಲಿ ರಥೋತ್ಸವಕ್ಕಿಂತ ಮೂರು ದಿನ ಮುಂಚೆ ದೇವಸ್ಥಾನದಲ್ಲಿ ಸೇರುತ್ತಾರೆ. ಪಾಸಕ್ಕೆ ಗೊಲ್ಲರ ಓಣಗಳಲ್ಲಿ ಬಿಡಾರಗಳಿರುತ್ತವೆ. ಈ ದೇವರ ಬಹುಭಾರವಾದ ಉತ್ಸವಮೂರ್ತಿಗಳನ್ನು ಕೂಡಿಸಿ ಊರಲ್ಲಿ ಹೊರಡಿಸುವ ಉತ್ಸವಗಳನ್ನು ಹೊರಲು ನೂರಾರು ಜನ ಬೇಕಾಗುತ್ತಾರೆ. ಬಲಗಡೆಯ ದಿಂಡನ್ನು ಹೊರುವ ಗೌರವ ಗೊಲ್ಲ ಯುವಕರದು. ಅಡವಿಯ ಸ್ವಚ್ಛಂದ ವಾತಾವರಣದಲ್ಲಿ ನಾಗರಿಕ ಕಲಬೆರಕೆಯಿಲ್ಲದ ಹಾಲು ಮೊಸರು ತುಪ್ಪಗಳನ್ನು ತಿಂದು, ವಂಚನೆ, ವಿಕೃತಿಗಳ ಸೋಂಕಿಲ್ಲದೆ ಪುಷ್ಟವಾಗಿ ಬೆಳೆದ ಈ ಗೊಲ್ಲ ಯುವಕರು ತಮ್ಮ ಹಳದೀ ಹಚ್ಚಡಗಳ ರಂಗಿನಲ್ಲಿ ದಪ್ಪ ದಪ್ಪ ಬಂಗಾರದ ಮುರುವುಗಳನ್ನು ಕಿವಿಗಳಲ್ಲಿ ತೂಗಾಡಿಸುತ್ತ ಸಾಲಾಗಿ ಹೊರಟಾಗಿನ ನೋಟ ಯಾರ ಮನಸ್ಸನ್ನಾದರೂ ಸೆಳೆಯುವಂಥದು. ತೇರು ಎಳೆಯುವ ದಿನ ಈ ಗೊಲ್ಲರು 'ಹುರ್ರ' ಆಡುವ ಪದ್ಧತಿ. ಹುರ್ರ—ಎಂಬುದೊಂದು ಅಡವಿ ಜನರ ಸಮೂಹ ನೃತ್ಯ. ಒಬ್ಬೊಬ್ಬ ಬಸವಿಯರನ್ನು ಕುಣಿತಕ್ಕಾಗಿ ಗೊತ್ತುಮಾಡಿಕೊಳ್ಳುತ್ತಾರೆ. ಗೊಲ್ಲರಿಗೆ ಕುಣಿಯುವದು ಹೇಗೆ ಕುಲದಲ್ಲಿ ನಡೆದುಬಂದ ಪದ್ಧತಿಯೋ, ಬಸವಿಯರಿಗೂ ಜಾತ್ರೆಯಲ್ಲಿ ಕುಣಿಯುವದೊಂದು ದೇವರ ಹರಕೆ. ರಥೋತ್ಸವದ ದಿನ ಬೆಳಗಿನಲ್ಲಿ ಈ ರೀತಿ ಗೊತ್ತುಪಡಿಸಿದ ಗಂಡುಹೆಣ್ಣುಗಳೆಲ್ಲ ಸ್ನಾನ ಮಾಡಿ ಶುದ್ಧರಾಗಿ ಹೊಸ ಬಟ್ಟೆಗಳನ್ನು ಉಡುತ್ತಾರೆ. ಹೆಣ್ಣು ಗಂಡುಗಳು ಬಗಿದು ಕುಣಿತಕ್ಕೆ ಅಣಿಯಾಗುತ್ತಾಳೆ. ಗೊಲ್ಲರ ತರುಣರೆಲ್ಲ ಕೊರಳಲ್ಲಿ ಎತ್ತಿಗೆ ಹಾಕುವ ಗೆಜ್ಜೆಯ ಸರಗಳನ್ನು ಹಾಕಿಕೊಂಡು 'ಹಲಗೆ' ಬಾರಿಸುವವರನ್ನು ಮುಂದು ಮಾಡಿಕೊಂಡು ಹೊರಟು ಮೊದಲು ಗುಡಿಯ ಮುಂದೆ ಕುಣಿದು ಆಮೇಲೆ ಬಜಾರದಲ್ಲಿ ಪ್ರಮುಖ ಅಂಗಡಿಗಳ ಮುಂದೆ ಕುಣಿಯುತ್ತಾರ, ಬಹುಮಾನಪಡೆಯುತ್ತಾರೆ. ಕೊನೆಗೆ ಚಾವಡಿಯ ಮುಂದೆ ಗ್ರಾಮಾಧಿಕಾರಿಗಳ ಎದುರಿನಲ್ಲಿ ಕುಣಿಯುತ್ತಾರೆ. ಹಲಗೆಯ ತಾಳಗತ್ತಿನೊಂದಿಗೆ ಕುಣಿತಕ್ಕೆ ರಂಗೇರುತ್ತಿರುತ್ತದೆ. ಮಧ್ಯಾಹ್ನದ ಹೊತ್ತಿಗೆ ಕುಣಿತ ಮುಗಿದಾಗ ಬಸವಿಯರೂ ಗೊಲ್ಲರೊಂದಿಗೆ ಅವರ ಬಿಡಾರ ಸೇರುತ್ತಾರೆ. ಅಲ್ಲಿಯೇ 'ದಾಸೋಗ'ದ ಊಟ ಮಾಡುತ್ತಾರೆ. ಅವರಿಂದ ನಿಗದಿಯಾದ ಹಣ ಮತ್ತು ಸೀರೆ ಕುಪ್ಪಸಗಳ ಉಡುಗೊರೆ ಪಡೆದು 'ಆ ಹೊತ್ತಿಗೆ ಸಿದ್ಧವಾದ ದೇವರ ತೇರು ಎಳೆಯುವದನ್ನು ನೋಡಲು ಎಲ್ಲರೊಂದಿಗೆ ಹೊರಡುತ್ತಾರೆ. ಇದು ಈ ಕುಣಿತದ ಹಿನ್ನೆಲೆ.

× × ×

ಮೂವತ್ತುಮೂರು ವರ್ಷದ ಸರಸವ್ವ, ಅದೇ ವಯಸ್ಸಿನ ರಂಗಪ್ಪನೊಂದಿಗೆ ಕುಣಿದಾಗಲೂ ಕುಣಿತಕ್ಕೆ ಇಷ್ಟು ರಂಗೇರಿ ಡೆಪ್ಯುಟಿಕಮೀಶನರ್ ಅಂಥವರ ಮೆಚ್ಚುಗೆಯನ್ನು ಸೆಳೆದಿತ್ತೆಂದ ಮೇಲೆ ೧೫ ವರ್ಷಗಳ ಹಿಂದೆ ಇವರಿಬ್ಬರೂ ಕುಣಿದಾಗ ಹೇಗಿದ್ದೀತು ?

ಇಬ್ಬರಿಗೂ ಆಗ ತಾರುಣ್ಯದ ಪುಂಜಾವು ಚಿತ್ತಾಕರ್ಷಕವಾದ, ಆದರೆ ನಾಗರಿಕ ಕೃತ್ರಿಮತೆಯ ಸ್ಪರ್ಶವಿಲ್ಲದ ನೈಸರ್ಗಿಕ ರಾಗರಂಜಿತ ಚೆಲುವು. ಇಂದಿನ ರಂಗಪ್ಪ ಆಗ ಇನ್ನೂ ತರುಣ ರಂಗ. ಸರಸವ್ವ—ಆಗ-ಇನ್ನೂ ಸರಸಿ...ರಂಗನ ಮೈಯಮಾಟ ನೋಡಿಯೋ ಏನೋ ಕೇವಲ ಹತ್ತು ರೂಪಾಯಿ ಹಾಗೂ ಸೀರೆ ಕುಪ್ಪಸಗಳ ಉಡುಗೊರೆಗೆ ಒಪ್ಪಿಕೊಳ್ಳಲು ತಾಯಿಗೆ ಬಲವಂತಪಡಿಸಿದ್ದಳು.

"ಕುಣಿಯೋದು ದೇವರ ಸೇವೆ— ನಮ್ಮನಿ ಹರಕಿ ಅಂತೀದೀ— ಮತ್ತೆ ರೂಪಾಯಿಗೆ ಯಾಕ ಅಟ ಅಕೀ ಬೀಳ್ತೀಯಬೇ? " ಎಂದು ತಾಯಿಗೆ ಹೇಳಿದ್ದಳು. ರೂಪಾಯಿಯ ಬೆಲೆಯನ್ನೇ ಇನ್ನೂ ಅರಿಯದ ಸರಸಿ. ಸರಸಿಯ ತಾಯಿಯೂ ಬಸವಿ. ಆ ಹೊತ್ತಿಗಾಗಲೇ ಅವಳಿಗೆ ನಲವತ್ತರ ಪ್ರಾಯವಾದರೂ ಊರಗೌಡ, ಕುಲಕರ್ಣಿ ಮುಂತಾದ ಪ್ರಮುಖರ ಅನುಗ್ರಹಕ್ಕೆ ಪಾತ್ರಳಾಗಿ ನೆಮ್ಮದಿಯಾಗಿಯೇ ಜೀವನ ಸಾಗಿಸುತ್ತ ಬಂದಿದ್ದಳು.

" ಯಾಕವ್ವ— ಮಗಳ ಮೂರ್ತಾ (ಮುಹೂರ್ತ) ಮುಂದಕ ಹಾಕಾಕಹತ್ತೀದಿ? ಹದಿನೆಂಟಾತೇನೂ? " ಎಂದು ಜೋಡಿಯವರು ಕೇಳಿದಾಗ.

" ಹುಡುಗಿಯ ಟೋಕ ಬಲೀಬೇಕೇಳು— ಅದಕs ಬಿಟ್ಟೀನಿ...ಏನು ಅವಸರ? ಆಮ್ಯಾಲೆ ಸಾಯೋಮಟ ಅದೇ ಧಂಧೆ ಐತೆಲ್ಲಾ...ಈಟ್ಯಾಕೆ ...ಸ್ವಾಮಿ ಜಾತ್ರಿ ಮಾಡಿ ಯಾರನ್ನಾರ ನೋಡೋಣ ಅಂತ ಅಂದುಕೊಂಡೀನಿ" ಎಂದಿದ್ದಳು ತಾಯಿ.

ಅಂದಿನ ಕುಣಿತದಲ್ಲಿ ಎಲ್ಲರ ಕಣ್ಣೂ ರಂಗ-ಸರಸಿಯರ ಮೇಲಿತ್ತು. ಹಚ್ಚಡವನ್ನು ಟೊಂಕಕ್ಕೆ ಸುತ್ತಿದುದರಿಂದ ರಂಗನ ಬರಿದಾದ ಎದೆ, ತೋಳುಗಳು ಕುಣಿತದ ಬಾಗು, ಬಳುಕು, ಹೊಳವು, ಸುಳಿವುಗಳಲ್ಲೆಲ್ಲ ಮಿಂಚುತ್ತಿದ್ದವು. ಹಲಿಗೆಯ ಗತ್ತಿಗೆ ಸರಿಯಾಗಿ ಹೆಜ್ಜೆಯಿಟ್ಟಾಗ ಹೆಜ್ಜೆಗೆ ಸರಿಯಾಗಿ ಕುಣಿಯುವ ಅವನ ತೋಳ ಖಂಡಗಳನ್ನು ಸವರಿ ನಾಲ್ಕಾರು ಸಲ ಕಣ್ಣಿಟ್ಟು ನೋಡಿದ್ದಳು. ರಂಗ ಮಾತ್ರ ಕುಣಿತದಲ್ಲಿ ಮೈಮರೆತಂತಿದ್ದ. ಡಪ್ಪಿನ ತಾಳಗತಿಯ ತೀವ್ರತೆಯೊಂದಿಗೆ ರಂಗ ಸರಸಿಯ ಟೊಂಕವನ್ನು ಒಂದು ಕೈಯಿಂದ ಬಳಸಿಕೊಂಡು ಇನ್ನೊಂದು ಕೈಯಿಂದ ಅವಳ ಮುಂಗೈಯೊಂದನ್ನು ಹಿಡಿದು ಕುಣಿಯತೊಡಗಿದಾಗ ಅವನ ತೋಳ ಒತ್ತಡ ಇನ್ನಷ್ಟು ಬೇಕೆನಿಸಿತ್ತು ಸರಸಿಗೆ. ತಾನಾಗಿಯೇ ಇನ್ನಷ್ಟು ಅವನ ಎದೆಯ ಪಕ್ಕಕ್ಕೆ ಹೊಂದಿಕೊಂಡಳೇನೋ.

"ಏನ್ ಹರಕ್ರೊ, ಏನೋ...ದೇವರ ಹೆಸರಿನ ಮ್ಯಾಲೆ ಹೀಂಗ ಹೆಣ್ಣು ಗಂಡು ಬಾಜಾರದಾಗ ಒಬ್ಬರನ್ನೊಬ್ಬರು ಅಪ್ಪಿಕೊಂಡು ಕುಣಿಯೋದು ಛೊಲೋ ಐತ್ರೀ ಅಮೀನಸಾಬ್ರs? " ಎಂದು ಆಗ ಛಾವಟಿಯಲ್ಲಿ ಕುಲಕರ್ಣಿಕಿ ಮಾಡುತ್ತಿದ್ದ ಗುಣವಂತರಾಯ ಪಕ್ಕದಲ್ಲಿ ಕುಳಿತ ಪೋಲೀಸ್ ಸಬ್ ಇನ್ಸಪೆಕ್ಟರರನ್ನು ಕೇಳಿದ್ದ.

"ಸರಿಯಲ್ಲ ಬಿಡ್ರಿ...ಹೀಂಗಾದ್ರs ನಮ್ಮ ಹೆಂಗಸರದೂ ಹುಡುಗರದೂ ತಲೆಕೆಟ್ಟು ಹೋದೀತು" ಎಂದರು ಕುಲಕರ್ಣಿಯ ಇಂಗಿತವನ್ನು ಯಾವಾಗಲೂ ಗ್ರಹಿಸುವ ಅಮೀನ ಸಾಬರು.

"ನಿಮ್ಮಂಥಾ ಜರ್ಬಿನ ಸಾಬರು ಇದ್ದಾಗ ಇಂಥಾದ್ದೆಲ್ಲ ನಡೀಬೇಕೇನ್ರಿ ? "

ಪೋಲೀಸ್ ಸಾಬರ ಅಭಿಮಾನಕ್ಕೆ ಪುಟಕೊಟ್ಟಿದ್ದ ಕುಲಕರ್ಣಿ.

"ಊರವರಿಗೆ ಬೇಕಾಗೇದs ಅಂತ ನಡದದs ...ಇದನ್ನ ಬಂದ್ ಮಾಡೋದು ಎಷ್ಟು ಹೊತ್ತ

ಬಿಡ್ರಿ? ಒಂದೇ ಸಲ ಕೊಟ್ಟು ಬಿಟ್ಟಿರಿ ಅರ್ಜಿ ಕಳಿಸಿರಿ ಇಷ್ಟು ಬೇಗ ಹೇಳಿದ ಕಂಪನಿ ಹಾಗೇ ಹೋಗ್ತ ಅಂತ" ಎಂದರು ಸಾಹೇಬರು.

ಚಾವಡಿಯ ಮುಂದೆ ಕಂಪನಿ ಮುಗಿದ ಕೂಡಲೇ ಅಧೀನಸಾಹೇಬರು ಗೊಲ್ಲರ ಹಿರಿಯನನ್ನು ಕರೆದು ಅಂದು ಕಂಪನಿ ಅಲ್ಲಿಯೇ ಮುಗಿಸಬೇಕೆಂದು ಹೇಳಿಬಿಟ್ಟರು. ಅದೇ ಕೊನೆಯ ಹೊಸದ ಕಂಪನಿತವಾದ ಕಾರಣ ಯಾರಿಗೂ ಅಷ್ಟು ನಿರಾಶೆಯಾಗದಿದ್ದರೂ ಗೊಲ್ಲರ ಹಿರಿಯನಿಗೆ ಮುಂದಿನ ಕಂಪನಿದ ಭವಿಷ್ಯದ ಬಗ್ಗೆಯೇ ಯೋಚನೆಗಿಟ್ಟುಕೊಂಡಿತು.

ಪದ್ಧತಿಯಂತೆ ಸರಸಿ ಗೊಲ್ಲರ ತರುಣರೊಂದಿಗೆ ಅವರ ಬಿಡಾರ ಸೇರಿ ಊಟ ಮಾಡಿದಳು. ಉಡುಗೊರೆ ಪಡೆದು ಮರಳುವಾಗ ಸರಸಿ ರಂಗರ ಕಣ್ಣು ಅದೇನೋ ಮಾತಾಡಿಕೊಂಡವು. ಎಂದಿನಂತೆ ತೇರು ಎಳೆದಾಯಿತು. ಗೊಲ್ಲರು ಕಾಯಿ ಕರ್ಪೂರ ಮಾಡಿಸಿಕೊಂಡು ತಮ್ಮ ಬಿಡಾರ ಸೇರಿದಾಗ ರಾತ್ರಿ ಎಂಟು ಗಂಟೆಯಾಗಿತ್ತು.

ಸರಸಿ ರಾತ್ರಿ ಊಟ ಮುಗಿಸಿದಾಗ ಹೋ ಕೋಣೆಯಲ್ಲಿ ಆಗಂತುಕ ಹಿರಿಯನಾರೋ ತಾಯಿಯೊಂದಿಗೆ ಹರಟುತ್ತಿರುವುದನ್ನು ಗಮನಿಸಿದಳು. ಇಂಥ ಪ್ರಸಂಗಗಳನ್ನು ಆಗಲೇ ಊಹಿಸಿಕೊಂಡಿದ್ದ ಸರಸಿ "ನಾನು ಜಾತ್ರ್ಯಾಗ ನಾಟಕ ನೋಡಿಕೊಂಡು ಬರತೀನಿ ಯವ್ವಾ?" ಎಂದು ಹೇಳಿ ಉತ್ತರಕ್ಕಾಗಿ ಕಾಯದೇ ಹೊರಹೊರಟಳು.

ಊರು ಚಿಕ್ಕದು. ಎಲ್ಲೆಲ್ಲೂ ಜನರೇ ಜನರು. ಕಟ್ಟೆಗಳ ಮೇಲೆ, ರಸ್ತೆಗಳ ಪಕ್ಕದಲ್ಲಿ, ಮಲಗಿದವರೆಷ್ಟೋ, ಕುಳಿತು ಹರಟುವವರೆಷ್ಟೋ. ಇನ್ನೂ ತೆರದಿಟ್ಟ ಅಂಗಡಿಗಳಲ್ಲಿ ಸಣ್ಣ ಪುಟ್ಟ ವ್ಯಾಪಾರವೂ ನಡೆದಿತ್ತು. ಗುಡಿಯ ಮುಂದ ಹಾಯ್ದು ಬಾಜಾರ ಸೇರುವಾಗ ದೇವರಿಗೆ ಸಿರ ಬಾಗಿದಳು ಸರಸಿ. ಅಷ್ಟರಲ್ಲಿ ಯಾರೋ ಭುಜ ಸರಿಸಿ ಹಾಯ್ದು ಹೋದರು. ಆಗಂತುಕ ತಗುಲಿದ ಭುಜದ ಭಾಗವನ್ನು ಕೈಯಿಂದ ಸವರಿಕೊಂಡಳು. ಬೆಳಗಿನ ಕಂಪನಿದಲ್ಲಿ ಆ ಭಾಗದ ಮೇಲೆ ರಂಗನ ತೋಳಿನಿಂದ ಒತ್ತಿತ್ತು. ಪೆಚ್ಚಗೆ ಕಂಪನಿ ಮುಗಿವವರೆಗೆ ಆಗಾಗ ಒತ್ತುತ್ತಲೇ ಇತ್ತು. ನೆನೆದುಕೊಂಡಾಗ ಗಲ್ಲಗಳಿಗೆ ಇನ್ನಷ್ಟು ಕಾವೇರಿದಂತೆನಿಸಿತು. ಬೆಚ್ಚನ್ನ ಚಿಕ್ಕ ಗಾಳಿಯ ಸುಳಿಯೊಂದು ಎಲ್ಲಿಂದಲೋ ಹೊರಟು ಮೈಯೆಲ್ಲ ಸುಳಿದಾಡಿ ಒಂದು ಕ್ಷಣ ಅಲುಗಾಡಿಸಿದಂತೆನಿಸಿತು. ನಾಟಕ ನೋಡಲು ಹೊರಟ ಕಾಲು ತಾನಾಗಿ ಗೊಲ್ಲರ ಬಿಡಾರದತ್ತ ಯಾವ ಮುಂದಾಲೋಚನೆಯೂ ಇಲ್ಲದೆ ಸಾಗಿದ್ದವು.

ಕುರಿಯ ಹಾಲು, ಹುಗ್ಗಿಯ ಊಟ ಮುಗಿಸಿದ್ದ ರಂಗ ಗೊಲ್ಲರ ಓಣಿಯ ಸಂದಿಯಲ್ಲಿ ಶತಪಥ ಹಾಕುತ್ತಲಿದ್ದ. ಮಬ್ಬುಗತ್ತಲೆಯಲ್ಲಿ ಸಮೀಪಿಸುತ್ತಿರುವ ಸೀರೆಯ ಆಕೃತಿಯನ್ನು ಗಮನಿಸಿದ. ಗುರುತಿಸಿದ, ಆಕೃತಿ ಸಮೀಪಿಸಿದಾಗ ಬೀಡಿಗಾಗಿ ದೀಪದ ಕಡ್ಡಿ ಗೀಚಿದ. ಬೆಳಕು ಧೈರ್ಯ ತಂದಿತು.

"ಯಾರು? ಸರಸಿ?...ಏನು ಹುಡುಕ್ತಿ ನಾಗ ಬಂದೀ?" ಅರ್ಥವಿಲ್ಲದ ಪ್ರಶ್ನೆ ಅವನಿಗೂ ಗೊತ್ತಿತ್ತೇನೊ?

"ನಾಟಕಾ ನೋಡಾಕ ಹೊಂಟೆ...ಈ ಕಡೆ ಮನಸು ಹರೀತು ಬಂದೆ" ಎಂದಳು ಸರಸಿ ಸರಳವಾಗಿ.

"ಮುಂದಿನ ವರ್ಷದಿಂದ "ಹುರ್ರ" ಆಟ ಇಲ್ಲಂತ ಆ ಅಧೀನಸಾಬಾ ಹೇಳ್ಯಾನಂತಲ್ಲ" ರಂಗನೆಂದ.

"ಅದೇನಾರ ಆಗ್ಲಿ...ಈಗ ಎಲ್ಲಾ ಹುಡುಗಾರಿಗೆ, ಒತ್ತಟ್ಟಿಗೆ ಹೋಗೋಣ ಬಾ... ಇಲ್ಲಿ ಯಾರಾದರೂ ಬಂದಾರು" ಎಂದಳು ಸರಸಿ ಕಳವಳದಿಂದ ರಂಗನ ಮುಂಗೈ ಹಿಡಿಯುತ್ತ.

"ಹ. ಹ! ಈಗ್ಯಾಕ ಹಾಂಗ ಹಿಂಗ ಏನೂ ಮಾಡಬಾರ್ದಂತ ಹೇಳ್ಯಾನ ನಮ್ಮ ಹಿರಿಯಾ. ನಾನು ಕಂಕಣ ಕಟಗೊಂಡೇನೆಲೆ......" ಎಂದ ರಂಗ ಅಂಜುತ್ತ. ಸರಸಿಯ ಬಿಸಿಯುಸಿರು ಈಗ ರಂಗನ ತೋಳುಗಳಿಗೆ ತಗುಲತೊಡಗಿತ್ತು. "ಹಾಂಗ ಹಿಂಗ ಏನೂ ಇಲ್ಲ...ಹಿಂಗs... ಸುಮ್ಮನೇ ಎಲ್ಲಾದರು ಕುಂತಗೊಂಡು......" ಎಂದು ಸರಸಿ ಅನ್ಯವಾಗ ಯಾರೋ ಹಿರಿಯರು ಕೆಮ್ಮುತ್ತ ಹೋಗಿದ್ದನ್ನು ನೋಡುತ್ತ ಗೊಲ್ಲರ ಬಿಡಾರದಿಂದ ಹೊರಹೊರಟು ಓಣಿ ಸೇರಿ ಸಮೀಪಿಸತೊಡಗಿದರು

ರಂಗನಿಗೆ ಏನೂ ಹೊಳೆಯಲಿಲ್ಲ. ಸರಸಿಯೂ

ಇದ್ದಲ್ಲಿಯೇ ಸ್ವಲ್ಪ ದೂರ ಸರಿದು ನಿಂತಳು. ಹಿರಿಯ ಸಮೀಪಿಸುತ್ತ

"ಯಾರಲೇ...ರಂಗನೇನು?" ಎಂದ.

"ಹೌದು ಹಿರಿಯಾ" ಎಂದ ರಂಗ.

ಹಿರಿಯಾ ಹೆಣ್ಣನ್ನು ಸಾಶಂಕವಾಗಿ ನೋಡಿದ

"ಆಕಿ ಸರಸವ್ವ ಹಿರಿಯಾ......ಮುಂಜಾಲೆ ಹುರ್, ಆಟ ಆಡಿದಳಲ್ಲ! ಆಕಿ...ಏನೋ ಕೇಳಿ ಕೊಂಬಾಕ ಬಂದಾಳಂತೆ......ಈಗ ನಿಮ್ ತಾಕ ಬರತಿದ್ದಳು" ಎಂದ ರಂಗ ತಪ್ಪು ಮುಚ್ಚುವವ ನಂತೆ.

"ಈಟೊತ್ತಿನಾಗ ಅದೇನ ಹೇಳಿಕಿ ಕೇಳಿಕೇಲೇ ಹೆಣ್ಣುಮಕ್ಕಳಿಗೆ?...ಬಾ ತಂಗಿ...ಬಾ...ಬಂಕ ದಾಗ ಹೋಗಾನ ಬಾ" ಎಂದು ಮರಳಿ ಬಿಡಾ ರಕ್ಕೆ ನಡೆದ. ರಂಗ, ಸರಸಿ ಹಿಂಬಾಲಿಸಿದರು.

ಬಿಡಾರದ ಬಂಕದಲ್ಲಿ ಇನ್ನೂ ನಾಲ್ಕು ಜನ ಗೊಲ್ಲರು-ಇಬ್ಬರು ಪ್ರೌಢ ಹೆಂಗಸರು ಇದ್ದರು. ಒಂದು ಮೂಲೆಯಲ್ಲಿ ಸರಸಿ ನಿಂತುಕೊಂಡಳು-ರಂಗ ಇತರರೊಂದಿಗೆ ಕುಳಿತ.

"ಈ ಹುಡುಗುರ್ರು ಎಂಥಾ ಪಾಪ ಮಾಡಿ ಬಿಟ್ಟಿದ್ರೋ ಏನೋ...ಈ ದೇವರು ಅಂದರs ಬೆಂಕಿಯಂಥಾ ದೇವರು..." ಎಂದ ಮುದುಕ.

ರಂಗ ನಡುವೆಯೇ ಬಾಯಿ ಹಾಕಿ...

"ಏ ಇಲ್ಲ ತಾತಾ...ನಾನೂ ಅದನ್ನೇ ಹೇಳ ತ್ತಿದ್ದೆ ಈ ಹುಡುಗೀಗೆ, ನಾ ಕಂಕಣ..." ಎನ್ನು ವಾಗ ಹಿರಿಯ ತಡೆದ.

"ಹೌದೇಳಲೇ!!...ಬಲೇ ಹೇಳೋ ಮಗs ...ಹುಡಿಗೀನ್ನ ಕತ್ತಲದಾಗ ಅವುಚಿಕೊಂಡು ಕುಂದ್ರ್ಯಾಗ ನಿಂತಗೊಂಡು ತಾನೂ ಅದನ್ನs ಹೇಳ್ತಿದ್ನಂತ...ಏಟೊತ್ತು ಅದನ್ನs ಹೇಳ್ತಿದ್ಯೊ ತಿಳೀತಿತ್ತು ನಾನು ನಡುವೆ ಬರದಿದ್ರs..."ಎಂದ ಹಿರಿಯ. ಎಲ್ಲ ಗಂಡಸರೂ ನಕ್ಕರು-ಪ್ರೌಢೆ ಯರು ಮುಗುಳುನಕ್ಕು ಅರ್ಥಪೂರ್ಣವಾಗಿ ಸರಸಿಯನ್ನು ನೋಡಿದರು......ರಂಗ ನಾಚಿಕೆ ಯಿಂದ ತಲೆ ಬಾಗಿಸಿದ. ಹಿರಿಯ ಮುಂದು ವರಿದ,

"ನೋಡವಾ ತಂಗಿ......ನೀನು ಹಂಗಾಮು ದಾಕ- ಇವಾs ಹರೇದಾವs...ನೀನಾಗಿ ಬಂದಿ ದ್ದೀನು ತೆಪ್ಪಲ್ಲ...ಆದರs ನಾವೆಲ್ಲ ದೇವರ ಹೆಸರ ಹೇಳಿ ಕಂಕಣ ಕಟ್ಟಕೊಂಡೀವಿ. ಈ ಜಾತ್ರಿ ಮುಗಿಯೋ ಮಟ ನಾವೆಲ್ಲಾ ಆತನ ಮಕ್ಕಳು, ಮಹಿಮರು...ನೀನು ದೇವರ ಹೆಸರಿನ ಮ್ಯಾಲೆ ಬಿಟ್ಟ ಬಸವಿ, ಹರಕಿಯ ಬಸವಿ... ಇವತ್ತು ನೀನು ನಮಗ ಲಚುಮವ್ವನ (ಲಕ್ಷ್ಮೀ) ಸಮ. ನಿನಗೂಡ ಕುಣಿತದ ಸೇವಿ ಒಂದು ಬಿಟ್ಟು ಬ್ಯಾರೆ ಯುವಹಾರ ಮಾಡಿದರs ನಾವು ಸುಟ್ಟು ಹೋದೇವವ್ವ...ಇದು ನಮ್ಮ ನಂಬಿಕಿ ಅದಕs ಇಂಥಾ ವ್ಯಾಲಿಗಿ ಯೀಚಾರಾ ಮ್ಯಾಡ ಬ್ಯಾಡ್ರಿ" ಎಂದ ಖಂಡತುಂಡವಾಗಿ.

"ಈಗಾಗಲೇ ಏನು ಪಾಪದ ವಿಚಾರ ನಮ್ಮ ನಿಮ್ಮ ಕೈಲೆ ಆಗ್ಯೆತೋ ಏನೋ" ಮುಂದಿನ ವರ್ಷದಿಂದ ಹುರ್ರ್ ಆಟಾನೇ ಬ್ಯಾಡಾ ಅಂತ ಅವೀನಸಾಬರು ಹೇಳ್ಯಾರಂತೆ." ಎಂದ ಇನ್ನೊಬ್ಬ ಗೊಲ್ಲ.

"ಇಕಾ...ಇವತ್ತು...ನೀನು ನಮಗs ತಾಯಿ ಇದ್ದಂಗ ಹುಡುಗೀ......ಹಾಂ! ಇವಗೂ ಮತ್ತs..." ಎಂದು ರಂಗನನ್ನು ತೋರಿಸುತ್ತ ಹಿರಿಯ ತನ್ನ ಟೊಂಕದಿಂದ ಐದು ರೂಪಾ ಯಿಯ ನೋಟನ್ನು ತೆಗೆದು ಸರಸಿಯ ಕೈಯಲ್ಲಿ ಇಟ್ಟು, "ಇಕಾ...ಇದನ್ನು ತಗೊ! ಕುಬಸ ತೊಟಗೊ. ಹೋಗವ್ವ...ತಂಗಿ...ಇವತ್ತ ಎಲ್ಲೂ ಯಾರಿಗೂ ಮೈ ಕೊಡಬ್ಯಾಡ ತಿಳೀತs?"ಎಂದು ಎದ್ದ....ಸರಸಿ ಮೌನವಾಗಿ ಹೊರ ನಡೆದಳು. ಹಿರಿಯನ ಮಾತು ಎದೆಯಲ್ಲಿ ಕೊರೆಯತೊಡಗಿ ದ್ದವು. ಬೆಳಗಿನ ಕುಣಿತದಲ್ಲಿ ತಾನು ರಂಗನಿಗೆ ಹೆಚ್ಚು ಒತ್ತಿಕೊಂಡು ಕುಣಿವಾಗಿನ ತನ್ನ ಭಾವ ನೆಗಳನ್ನು ನೆನೆದಳು....

"ನನ್ನದೇ ಹೊಲಸು ಮನಸು ಹೊಲಸು ಯಿಚಾರ. ರಂಗನ್ನ ನೋಡಿದಾಗಿನಿಂದ ತಲಿ ಕೆಟ್ಟೈತೆ...ದೇವ ನನ್ನ ಪಾಪಕ್ಕ ಸಿಕ್ಷಾ ಕೊಟ್ಟನೋ ಏನೋ" ಎಂಬ ವಿಚಾರ ಬಾಲಿಕ ಮನಸ್ಸಿನಲ್ಲಿ ಅಸ್ಪಷ್ಟವಾಗಿ ಮೂಡುವಾಗ ಮನೆ ಸೇರಿದ್ದಳು.

ಮರುದಿನವೇ ಜಾತ್ರೆ ಮುಗಿಸಿಕೊಂಡು ಗೊಲ್ಲರ ತಂಡ ಮತ್ತೆ ಅಡವಿಯಲ್ಲಿ ತಮ್ಮ ಕುರಿಗಳ ಮಂದೆಯನ್ನು ಕೂಡಿಕೊಳ್ಳಲು ಹೊರಟು ಹೋದರು. ರಂಗನೂ ಹೊರಟು ಹೋಗಿದ್ದ. ಅಂದು ರಾತ್ರಿ ಕುಲಕರ್ಣಿ ಗುಣ ವಂತರಾಯ ಸರಸಿಯೊಂದಿಗೆ ಸರಸದ ಮುಹೂ ರ್ತವನ್ನೂ ಕೊಡುತಗೊಳ್ಳುವ ವಿವರಗಳೊಂ ದಿಗೆ ಗೊತ್ತು ಮಾಡಿಕೊಂಡಿದ್ದ.

೧೫ ವರ್ಷಗಳ ನಂತರ ಕುಲಕರ್ಣಿಯ ಪಂಜ ರದಿಂದ ಹೊರಬಿದ್ದ ಸರಸವ್ವ ಇಂದು ಕುಣಿತಕ್ಕೆ ಸ್ವಲ್ಪ ಸಮಯದ ಮುಂಚೆ ರಂಗಪ್ಪನನ್ನು ಸಂಧಿ ಸಿದಾಗ ಹಿಂದಿನ ಚಿತ್ರದ ಝಳಕು ಅವಳ ಮನಃ ಪಟಲದ ಮುಂದೆ ಮಿಂಚಿ ಹೋಯಿತು... ಈಗ ನುಹದಂತರ ಉಂಟಾಗಿತ್ತು. ತಾನು ಪ್ರೌಢೆ... ರಂಗ......ನಾಲ್ಕು ಮಕ್ಕಳ ತಂದೆ...ಪ್ರತಿಷ್ಠಿತ ಗೊಲ್ಲನಾಯಕ ರಂಗಪ್ಪ...ಅತನೊಂದಿಗೆ ಇಂದಿನ ಕುಣಿತ...ಅದು ದೇವರ ಕರುಣೆಯೇ ಎಂದು ಕೊಂಡಿದ್ದಳು. ಎಂದೋ ನಿಂತುಹೋದ ಪದ್ಧತಿ...ಅದಕ್ಕಾಗಿ ಮಾನಸಿಕ ಯಾತನೆ ಎಂಥದು? ತನಗೆ ಆಗಾಗ ಉಂಟಾಗುವ ಉನ್ಮಾದದಂಥ ರೋಗ...ಮಕ್ಕಳಾಗದ ಸ್ಥಿತಿ ಅಸಮಾನ ವಯಸ್ಸಿನ ಕುಲಕರ್ಣಿಯೊಂದಿಗೆ ಹೆಣಗಾಟ. ಎಲ್ಲಕ್ಕೂ ಈ ಒಂದು ಹರಕೆಯ ಕುಣಿತ ನಿಂತುದೇ ಕಾರಣವೆಂಬಂತಾಯಿತು. ಅದು ನಿಂತುದಕ್ಕೆ ಅಂದು ಕುಣಿವಾಗ ತನ್ನಲ್ಲಿ ಇರಬೇಕಾದಷ್ಟು ಮಾನಸಿಕ ಪಾವಿತ್ರ್ಯವಿರಲಿಲ್ಲ. ವೆಂಬುದೂ ಕಾರಣವೆಂಬ ತಪ್ಪಿತಸ್ಥ ಕಲ್ಪನೆ... ಇವೆಲ್ಲದರಲ್ಲಿ ಕುಲಕರ್ಣಿಯ ಕೊನೆಯ ಮಾತು,

"ಪ್ರಸಂಗ ಬಂದರs. ಆ ರಂಗನ ಕೂಡ ಇರೋವಾಕಿ" ಎಂಬುದು ನೆನಪಾಗಿ ಆಕೆಯಲ್ಲಿ ಮನ ತುಯ್ದಾಡುತ್ತಿತ್ತು. ಕಾಮ ಸತ್ತಿರಲಿಲ್ಲ ಆದರೆ ತಟ್ಟನೆ ದೇವರ ನೆನಪಾಗಿ,

"ಛೀ! ಈ ಕುಣಿತ...ಹರಕೆ ಮಾತ್ರ...ಅಪ್ಪ (ದೇವರು) ಇಷ್ಟು ಕರುಣೆ ತೋರಿಸಿದಾ ಸಾಕು......ಮತ್ತೆ ಹರಕೆ ಸಲ್ಲಿಸೋ ಪುಣ್ಯ ಸಿಕ್ತು...ಸಾಕು. ಬ್ಯಾರೆ ಯಿಚಾರ. ವ್ಯಾಲಿಗಿ ಯಿಚಾರ" ಎಂದು ಅವಳ ಬುದ್ಧಿ ಹರಿಯುವ ಮನಸ್ಸನ್ನು ಹಿಡಿದೆಳೆದು ತರುತ್ತಿತ್ತು.

"ಅಂತೂ ೧೫ ವರ್ಷದ ಮ್ಯಾಲೆ ಆದರೂ ರಂಗಪ್ಪನ ಕೂಡ ಕುಣಿಯೋದನ್ನ ದೇವರು ಕೂಡಿಸಿ ಕೊಟ್ಟನಲ್ಲಾ" ಎಂದು ಅವಳ ಮನಸ್ಸು ಒಮ್ಮೆ ದೇವರನ್ನು ವಂದಿಸಿತು.

"ಹಿಂಗ ಅಂದಕೊಂಬೋದೂ ತಪ್ಪಾಗ್ತೈತೋ ಏನೋ" ಎಂದು ಬುದ್ಧಿ ಸಂಶಯ ಗೊಂಡಿತ್ತು.

ಇಂದಿನ ಕುಣಿತದಲ್ಲೆಲ್ಲ ಡಪ್ಪಿನ ತಾಳಗತಿಯ ಏರು ಇಳುವಿನೊಂದಿಗೆ ಸರಸಿಯ ಮನಸಿನ ತುಯ್ದಾಟವೂ ಸೇರಿಕೊಂಡಿತ್ತು.

❀❀❀❀

ವೃಶ್ಚಿಕ [illegible]

— ಡಾ. ಎಚ್. ಕೆ. ರಂಗನಾಥ್

-: ಪಾತ್ರ ವಿವರ :-

ಗೋವರ್ಧನಯ್ಯ	–	ರಿಟೈರ್ ಆಗುತ್ತಿರುವ ಮಿಸಿ ಮಿಸಿ ಮನುಷ್ಯ
ಕಮಲಮ್ಮ	–	ಹೆಂಡತಿ
ಕಾಮಾಕ್ಷಿ	–	ಮಗಳು
ನರಸಿಂಹ	–	ಅಳಿಯ
ಮುದ್ದೇಶಪ್ಪ	–	ವೃಶ್ಚಿಕ ರಾಶಿಯ ಅಧಿಕಾರಿ

ಗೋವರ್ಧನಯ್ಯ :- (ಸಂಭ್ರಮದಿಂದ ತಮ್ಮ ಬಿಳಿ ಮೀಸೆ ಕುಣಿಸುತ್ತ) ನೋಡಿದೆಯೇನೇ ಈ ವಿಶೇಷ ಸಂಚಿಕೆ ?

ಕಮಲಮ್ಮ :- ವರ್ಷ ಭವಿಷ್ಯ ಓದಿಯಾಯಿತು, ಆಗಲೇ !

ಗೋವರ್ಧನ :- ಅರೆ ! ಒಂದುನಿಮಿಷ ಅತ್ತಲಾಗೆ ಹಬ್ಬದ ಸ್ನಾನ ಮಾಡಿಕೊಂಡು ಬರೋದರೊಳಗೆ, ಮುಚ್ಚಿಟ್ಟಿದ್ದ ಪುಸ್ತಕಾನ ಪತ್ತೆ ಮಾಡಿ, ಪೇಜ್ ತಿರುವಿದೀಯಲ್ಲ ! ನನ್ನ ರಾಶೀನೂ ನೋಡಿ ಬಿಟ್ಟೆಯೇನು ?

ಕಮಲ :- ಯಾವ ರಾಶಿ ನಿಮ್ಮದು ಅಂತ ಈ ವರೆಗಾದರೂ ಹೇಳಿವು ಕೊಟ್ಟಿದ್ದಿರೇನು ? ಎಲ್ಲಾ ರಾಶಿಗಳನ್ನೂ ಓದಿದೆ. ಅಂದಾಜಿನ ಮೇಲೆ ಲೆಕ್ಕಹಾಕಿದೆ,ಇದೇ ನಿಮ್ಮದಿರಬೇಕೂಂತ, ಬರೆದಿರೊ ಒಕ್ಕಣೆ ಮೇಲೆ !

ಗೋವರ್ಧನ :- ಯಾವುದದೂ ?

ಕಮಲ :- ವೃಶ್ಚಿಕ - ನೀವು !

ಗೋವರ್ಧನ :- ಅರೆ ! ಮೂಲಾನೇ ಹಿಡಿದು ಅಲ್ಲಾಡಿಸಿಬಿಟ್ಟಿಯಲ್ಲೇ! ಆದರೆ ನೋಡು ಎಷ್ಟು ಕರೆಕ್ಟ್ ಆಗಿ ಬರೆದಿದ್ದಾನೆ!..."ಈ ವರ್ಷ ನಿಮ್ಮ ಜೀವನದ ಜಾಡೇ ಬದಲಾಯಿಸುವುದಿದೆ ! ಕರಾರುಗಳಿಗೆ ಅಪ್ರಶಸ್ತ. ಹಿತಶತ್ರುಗಳ ಹೇಳಿದಾಟ. ಅಧಿಕಾರಿಗೆ ಅದೃಷ್ಟ.(ಏನು ಹೀಗಂತಾನೇ-! ಆದರೆ ಅಧಿಕಾರಿಯಾಗಿದ್ದೋನಿಗೇ ಆಂತ ಅರ್ಥ ಇರಬೇಕು-! ಕರೆಕ್ಟ್) ಆರು ತಿಂಗಳ ನಂತರ ಸಂಶಯ ಪ್ರಕೃತಿಯ ಶ್ರೀಮತಿಗೆ ಮನೋರೋಗ ತೋರಿಕೊಳ್ಳುವ ಸಂಭವವಿದೆ- (ಅರೆ, ಹುಷಾರಾಗಿರೇ !) ಬ್ರಹ್ಮಚಾರಿಗಳು ಕಷ್ಟಪರಂಪರೆಗಳಿಗೆ ಸಿಕ್ಕಿಕೊಳ್ಳುವ ಸಂಭವ ಹೊಸ ಮಹಿಪಾಟು—ಉದ್ವಮದಿಂದಾಗಿ ನಿದ್ರೆ ನಾಶವಾಗಿ, ನರಗಳು ದುರ್ಬಲಗೊಳ್ಳಬಹುದು. ಎಚ್ಚರ. ಭಜರಂಗಬಲಿಯನ್ನು ಒಂದೇ ಮನಸ್ಸಿನಿಂದ ಧ್ಯಾನಿಸುತ್ತ, ದಿನಕ್ಕೆರಡು ಬಾರಿ ನವಗ್ರಹ ಜಪವನ್ನು ಮಾಡಿದರೆ ಉತ್ತಮ. ಈ ರಾಶಿಯ ಸ್ತ್ರೀಯರು-

ಕಮಲ :- ಸಾಕು ನಿಲ್ಲಿಸಿ. ಈ ರಾಶಿಯ ಪುರುಷರ ಸುದ್ದೀ ಮಾಗೀತಲ್ಲ! ಈ ಭವಿಷ್ಯ-ಭವಿಷ್ಯ-ಅಂತ ವಿಶೇಷ ಸಂಚಿಕೆನೆಲ್ಲ ತಂದು ಗುಡ್ಡೆ ಹಾಕಿಕೊಂಡಿದೀರಿ. ಅವನು ಬರೆಯೊದೋ-ಅಡ್ಡಗೋಡೇ ಮೇಲಿನ ದೀಪ—

ಗೋವರ್ಧನ :- ಗಟ್ಟಿಯಾಗಿ ಅನ್ನಬೇಡ-ಬೇಕಾದರೆ ನಿನಗೆ ನಂಬಿಕೆ ಇಲ್ಲಾ ಅಂತ ಅರಚಿಕೋ-ಶಾಸ್ತ್ರದ ಮೇಲೆ ಧಾಳಿ ಮಾಡಬೇಡ-ಆದಕ್ಕೆ ಅವನು ಬರೆದದ್ದು ಸಂಶಯ ಪ್ರಕೃತಿಯ ಶ್ರೀಮತಿಗೆ—ಅಂತ ! ಅದರಿಂದಲೇ ಗೊತ್ತಾಗುತ್ತೋ ಇಲ್ಲವೋ !

ಕಮಲ :- ಸರಿ ! ಏನು ಅವನು ಬರೆದದ್ದು ! ಹಾಯಾಗಿ ಇನ್ನು ಮೂರು ದಿನಕ್ಕೆ ರಿಟೈರ್ ಆಗ್ತಿದೀರಿ. ಜಬರ್ದಸ್ತಾಗಿ ಯಾತ್ರೆ, ತೀರ್ಥ, ವಿರಾಮ ಅಂತ ನಿಶ್ಚಯ ಮಾಡಿಕೊಂಡಿಲ್ಲವೆ?-"ಕರಾರು-ಹಿತಶತ್ರು—ಹೊಸ ಮಹಿಮಾಟು—ನಿದ್ರೆನಾಶ—" ಏನು ಪುರಾಣ ಇದೆಲ್ಲ !

ಗೋವರ್ಧನ :- ಅಲ್ಲಽ-ಜನರಲ್ ಟ್ರೆಂಡ್ ಬರೀತಾರೇ ಕಣೆ ಅವರು. ಯಾಕೆ, ಕಳೆದವಾರ ಬರೆದದ್ದೆಲ್ಲ ನಿಜ ಆಗಲಿಲ್ಲವೆ? ಅಧಿಕಾರಿಯಿಂದ ವಿಪರೀತ ಸಹಾಯ ಅಂತ ಬರೆದ ಅವನು! ಅಂಥ ಜೆಂಟಿಲ್‌ಮ್ಯಾನ್ ನಮ್ಮ ಆಫೀಸರು ! ಅದೆಷ್ಟು ಹೆಲ್ಪ್ ಮಾಡಿದರು ಕಳೆದವಾರ !

ಕಮಲ :- ಈ ವಾರ ರಿಟೈರ್ ಆಗ್ತೀರೀ ಅಂತ! ವರ್ಷವೆಲ್ಲ ದಿನಾ ದಿನಾ ಹಾಗೆ ಗೋಳು ಹುಯ್ಕೊಂಡಿದ್ದಕ್ಕೆ ಅವನಿಗೇ ಸಂಕಟವಾಗಿ, ಕಡೇವಾರ ಅಂತ ಸ್ವಲ್ಪ ಸಿಹಿಯಾಗಿದ್ದ ಅಷ್ಟೆ !

ಗೋವರ್ಧನ :- ಆದರೂ ಅವರು ಅಷ್ಟು ಮಾಡಿದ್ದಕ್ಕೆ ತಾನೆ, ಇಷ್ಟು

ಜೀಗ ಪ್ರಾವಿಡೆಂಟ್ ಫಂಡು, ಗ್ರಾ ್ಯಚೂಟಿ-ಪೆನ್ ಶನ್ನು-ಎಲ್ಲ ಕಳೆದ ವಾರದ ಭವಿಷ್ಯದಲ್ಲಿ ಬರೆದ ಹಾಗೆ ಆಯಿತು !

ಕಮಲ :- ಭಾಳ ಸಂತೋಷ ! ಕಡೇಗೇನು ಗುರುವಾರ ಹೊರಡೋದು ತಾನೇ ಯಾತ್ರೆ ಸ್ಪೆಷಲ್ ನಲ್ಲಿ! ಇವತ್ತೇ ಹೋಗಿ ಎರಡು ಟಿಕೆಟ್ಟು ಕೊಂಡುಕೊಂಡು ಬನ್ನಿ !

ಗೋವರ್ಧನ :- ಆಗಲಿ-ಆಗಲಿ-ಇವತ್ತು ತಾನೇ ದುಡ್ಡು ಕ್ಯಾಷ್ ಆಗಿ ಬರಬೇಕು! ಇವತ್ತೇ ಆಫೀಸಿನಿಂದ ರಿಲೀವ್ ಆಗೋದು. ಮೊನ್ನೆ ಆ ಪಾರ್ಟೀಲಿ ಅದೆಷ್ಟು ಹೊಗಳಿದರು ಸಾಹೇಬರು ನನ್ನ !

ಕಮಲ :- ಮೂವತ್ತೆರಡು ಸಲ ಆಯಿತು ಆ ಮಾತು !

ಗೋವರ್ಧನ :- ಅಲ್ಲ ಹೇಳಿದೆ, ನಿಜವಾಗಿ ಉದ್ದಕ್ಕೂ ಅಷ್ಟು ತೊಂದರೆ ಕೊಟ್ಟರೂ, ಪಾಪ, ಎಂಥ ದೊಡ್ಡ ಮನುಷ್ಯ-ಅಂತ !

ಕಮಲ :- ಹಾಳಾಯ್ತು. ಈಗೇನು ಯಾತ್ರೆಸ್ಪೇಷಲ್ಗೆ-

ಗೋವರ್ಧನ :— ಅಲ್ಲ ಕಣೇ— ರಿಟೈರ್ ಆದೇಟಗೇ ಯಾಕೆ ಹಾಗೆ ಊರು ಬಿಟ್ಟು ಓಡಬೇಕು?— ನಾಕು ದಿನ ಆಗಲಿ— ಈ ಜಂಜಾಟಾನೆಲ್ಲ ಮರೆತು ಒಂದು ಹದಿನೈದು ದಿನ ಹಾಯಾಗಿದ್ದುಕೊಂಡು— ಆ ಮೇಲೆ ನೀನು ಹೇಳಿದ ಕಡೆ ಹೊರಡೋಣ— ಯಾತ್ರೆ— ತೀರ್ಥ— ಅಂತ!

ಕಮಲ :— ನಿಜವಾಗಿ ಹೇಳ್ತೀನಿ ಊರು ಬಿಟ್ಟರೇ ವಿಶ್ರಾಂತಿ ನಮಗೆ-! ಒಂದು ತಿಂಗಳು ಸುತ್ತಾಡಿಕೊಂಡು ಬರೋಣ- ಆ ಮೇಲೆ, ಹೊಟ್ಟೆ ಮೇಲು ಮಾಡಿಕೊಂಡು ಹಾಯಾಗಿ ಹೊರಳಾಡಿ— ವಿಶ್ರಾಂತೀ— ವಿಶ್ರಾಂತೀ—ಅಂತ!

ಗೋವರ್ಧನ :— ಮನೇ ಕಡೆ—

ಕಮಲ :— ಯಾಕೆ? ಶ್ರೀಧರ ಏನು ಎಳೆ ಹುಡುಗನೆ? ನೋಡಿಕೋ ತಾನೆ! ಕಾಲದ್ದಕ್ಕೆ ಹಾರ್ವತಮ್ಮನೋರಿಗೂ ಹೇಳಿಕಳಿಸಿಲ್ಲವೆ ನಾವು ತೀರ್ಥಯಾತ್ರೆ ಹೋಗಿ ಬರ್ತೀವಿ-ಒಂದು ತಿಂಗಳು ಇಲ್ಲೇ ಇದ್ದು ಮನೆ ನೋಡಿಕೊಳ್ಳಿ ಅಂತ!

ಗೋವರ್ಧನ :— ಏನಂತು ಅಜ್ಜಿ—?

ಕಮಲ :— ಅದೇನೋ ಅಂತೂ! ಇಂಥಾ ಜೊತೆ ನನಗೂ ಸಿಕ್ಕಿರಲಿಲ್ಲ— ನನ್ನೂ ಕರಕೊಂಡು ಹೋಗಿ. ಬಂದ ಮೇಲೆ, ಪ್ರತಿ ತಿಂಗಳೂ ಕಂತಿನ ಮೇಲೆ ಖರ್ಚಿನ ದುಡ್ಡನ್ನೆಲ್ಲ ಮುಟ್ಟಿಸ್ತೀನಿ ಅಂತ-

ಗೋವರ್ಧನ :— ಓ! ನಮಗಿಂತ ಮೊದಲು ಅದೇ ಹೊರಟು ನಿಂತಿದೇ ಅನ್ನು ಯಾತ್ರೀಗೆ!

ಕಮಲ :— ಆದರೆ ಖಡಾ ಖಂಡಿತವಾಗಿ ಹೇಳಿದೆ. "ಈ ಸಲ ಬೇಡ— ಸದ್ಯಕ್ಕೆ ಮನೇಲಿ ಇದ್ದು ನೋಡಿಕೊಳ್ಳಿ. ಮುಂದೆ ಸರಿಯಾದ ಜೊತೆ ಮಾಡಿ - ನಾನೇ ಕಳುಹಿಸಿಕೊಡ್ತೀನಿ-ಅಂತ. ಒತ್ತಾಯ ಮಾಡಿ, ನಾವು ಬರೋವರೆಗೆ ಮನೆ ನೋಡಿಕೊಳ್ಳೋಕೆ ಒಪ್ಪಿಸಿದೀನಿ. ಇವತ್ತೋ - ನಾಳೆಯೋ ಬರುತ್ತೆ ಅದು ಮಡಿ ಪೆಟ್ಟಿಗೆ ಎತ್ತಿಕೊಂಡು- ಅದೋ—ಕುದುರೆ ಗಾಡಿ—ಮನೆ ಮುಂದೇ ನಿಂತಿತಲ್ಲ ! ಮುದುಕೀನೇ ಇರಬೇಕು- ಒಂದು ರೂಪಾಯಿ ಕೊಡಿ—ಪಾಪ. ಅದು ಯಾಕೆ ತನ್ನ ಕೈಯಿಂದ ಗಾಡಿ ಬಾಡಿಗೆ ಕೊಡಬೇಕು !

ಗೋವರ್ಧನ :— [ಹೊರಕ್ಕೆ ಕತ್ತು ಚಾಚಿ ನೋಡಿ] ಅರೆ ಮುದುಕಿ ಅಲ್ಲ ಕಣೆ-! ಕಾಮಾಕ್ಷಿ!! ಇದೇನು ಇದ್ದಕ್ಕಿದ್ದ ಹಾಗೇ ಹೀಗೆ ಬಂದಳು-? ಹಬ್ಬಕ್ಕೆ ಬಾ ಅಂತ ಅಷ್ಟು ಪತ್ರ ಹಾಕಿದರೂ ಉತ್ತರ ಕೊಡದೆ ಇದ್ದವಳು.

ಕಮಲ :— ಆಶ್ಚರ್ಯ! ಕಾಗದವಿಲ್ಲ ಪತ್ರವಿಲ್ಲ! ಒಬ್ಬಳೇ ಬಂದ ಹಾಗಿದೆ? ಮಕ್ಕಳನ್ನ ಕರಕೊಂಡು-! ಅಳಿಯ-?

ಗೋವರ್ಧನ :— ಮೊದಲು ಒಳಕ್ಕೆ ಕರಕೊಂಡು ಬಾ ! (ಸಂಭ್ರಮದಿಂದ ಒಳಗೆ ಹೊರಗೆ ಓಡಿಯಾಡುತ್ತಾ) ಬಾಮ್ಮಾ-! ಇದೇನು ಹೀಗೆ ನಿಂತ ನಿಂತ ಹಾಗೆ ಬಂದೆ—? ಕಾಗದ ಬರೆದಿದ್ದರೆ ಸ್ಟೇಷನ್ನಿಗೆ ಬರ್ತಿದ್ದೆ ನಲ್ಲ-!- ಒಬ್ಬಳೇ ಬಂದೆಯಾ? ನರಸಿಂಹ-? ಬಾ-ಆ ಹಾಸಿಗೆ ಇತ್ತ ಕೊಡು- ಭಾಡಿಗೆ ಎಷ್ಟಮ್ಮ ಗಾಡೀಗೆ.

ಕಾಮಾಕ್ಷಿ :— ಬಂದೂಕಾಲು ಅಣ್ಣ!



ಗೋವರ್ಧನ :— ತಾಳು, ಕೊಟ್ಟು ಬರ್ತೀನಿ-

ಕಮಲ :— ನಿಮ್ಮ ಯಜಮಾನರು ಬರಲಿಲ್ಲವೇನೆ?

ಕಾಮಾಕ್ಷಿ :— ಬಂದರಮ್ಮ. ದಾರೀಲಿ ಯಾರೋ ಸ್ನೇಹಿತರನ್ನ ಕಂಡರು. ಗಾಡಿ ಇಳಿದರು. ನೀ ಮುಂದೆ ಹೋಗು ಮಕ್ಕಳನ್ನ ಕರ ಕೊಂಡು ಈಗ ಬರ್ತೀನಿ ಅಂದ್ರು.



ಕಮಲ :— ಬರುತೀನಿ ಅಂತ ಒಂದು ಕಾಗದ ಹಾಕಬಾರದೆ ಹೇಳು!

ಕಾಮಾಕ್ಷಿ :— (ರೋತೆ ಹಿಡಿದ ಇಬ್ಬರು ಮಕ್ಕಳನ್ನ ಛೇಡಿಸುತ್ತ) ಏ. ಕುಕ್ಕರಿಸೇ! ಶನಿ ಬೆನ್ನು ಹತ್ತಿದ ಹಾಗೆ ಒಂದೇ ರೋತೆ!

ಕಮಲ :— ಪಾಪ ಮಗೂನ ಯಾಕೆ ಹಾಗೆ ಗದರುತೀಯೆ! ಬಾರೆ ನನ್ನಮ್ಮ-! ಬಾರೆ ಚಿನ್ನ ಕಂದ ಬಾಪ್ಪ! [ಒಳಕ್ಕೆ ಕರೆದೊಯ್ಯುತ್ತಾರೆ]

ಗೋವರ್ಧನ : - (ಒಳಗೆ ಬರುತ್ತ) ನರಸಿಂಹ ಬರಲಿಲ್ಲವೇನಮ್ಮ-?

ಕಾಮಾಕ್ಷಿ :— ಬಂದಿದಾರೆ! ಯಾರೋ ಸ್ನೇಹಿತರನ್ನ ಕಂಡು ಗಾಡಿಯಿಂದ ಇಳಿದರು. ನಾ ಮುಂದೆ ಬಂದೆ!

ಗೋವರ್ಧನ :-- ಎಲ್ಲ ಹುಷಾರು ತಾನೆ ಅಮ್ಮ?

ಕಾಮಾಕ್ಷಿ :- ಓ! ಪರವಾಗಿಲ್ಲ-! ಅದೇ,...ಅ...ಇವರಿಗೆ ಕಂಪಲ್ಸರಿ ರಿಟೈರ್ ಆಗೋ ಹಾಗಿದೆಯಲ್ಲ!

ಗೋವರ್ಧನ :-- ಕಂಪಲ್ಸರಿ ರಿಟೈರು!

ಕಮಲ :-- [ಒಳ ಬರುತ್ತ] ಕಂಪಲ್ಸರಿ ರಿಟೈರು!!

ಕಾಮಾಕ್ಷಿ : ಅದೇ ಅಣ್ಣ-ಆಗದೊರದ್ದು ಏನೇನೋ ಮೋಸಿ ಅರ್ಜಿ! ಮೊನ್ನೆ ತಾನೆ ವಿಚಾರಣೆ ಆಯ್ತಲ್ಲ!

ಗೋವರ್ಧನ :— ಅರೆ ರಾಮಾ!

ಕಾಮಾಕ್ಷಿ : - ಅದಕ್ಕೇ ಇವರಿಗೆ ರೋಸಿ ಹೋಗಿದೆ! ಅವರು ಡಿಸ್ ಮಿಸ್ ಮಾಡೋಕೆ ಮುಂಚೆ ತಾವೇ ಕೆಲಸ ಬಿಟ್ರು—ಓ ಆಗೋ ಅವರೇ ಬಂದ್ರಲ್ಲಾ!

ಗೋವರ್ಧನ :— ಶ್ರೀರಾಮ ಶ್ರೀರಾಮ-! ಬಾ...ಬಾಪ್ಪಾ ನರಸಿಂಹ! ಏನು ಹೀಗೆಲ್ಲ-! ಕೆಟ್ಟ ಸಮಾಚಾರ!

ನರಸಿಂಹ :- ಓ ಎಲ್ಲ - ಆಗಲೇ ಹೇಳಿಬಿಟ್ಟಳೋ ಇಲ್ಲವ್ರೋ! ಶುದ್ಧ ಒಡಕು ಬಾಯಿ. ಹೋದೇಟಿಗೇ ಗಾಬರಿ ಮಾಡಬೇಡ, ಎರಡು ದಿನ ಆದ ಮೇಲೆ ನಿಧಾನವಾಗಿ ಎಲ್ಲ ವಿಷಯ ಹೇಳೋಣಂತೆ ಅಂತ ಮೊದಲೇ ಹೇಳಿ ಕೂಡ ಬಂದಿದೇನೆ ನೋಡಿ ಇವಳನ್ನ!

ಕಮಲ :- ಪಾಪ ಒಳನೋವು! ಹೇಗಿದ್ದರೂ ಹೇಳಲೇಬೇಕಲ್ಲ-ಈಗೇನು ಆಗೇನು.

ಕಾಮಾಕ್ಷಿ :- ಮಾತು ಮಾತಿಗೂ ಹೀಗೇ ಇವರದ್ದು- [ಕೆಟ್ಟ ಮುಖ ಮಾಡಿ ರೋದಿಸತೊಡಗುತ್ತಾಳೆ]

ಕಮಲ :- ಬಿಡು-ಬಿಡೆ ಕಾಮಾಕ್ಷಿ! ಕೆಲಸ ಹೋಯ್ತು ಅಂತ ಅವರಿಗೂ ಬೇಜಾರು! ಒಂದು ಮಾತು ಅಂತಾರೆ! ಅದಕ್ಕೆ ಮುಖ ಚಿಕ್ಕದು ಮಾಡಿ ಕೊಂತಾರೆಯೆ?

ನರಸಿಂಹ :- ಆ್ಞಂ! ಕೆಲಸ ಹೋಯ್ತು ಅಂತಲೇ ಹೇಳಿಬಿಟ್ಟಳೇನು? ಅದು ಹ್ಯಾಗ ಹೋಗುತ್ತೆ? ನಾನೇ ಈ ಗವರ್ನಮೆಂಟ್ ಚಾಕರೀನ ಬಿಟ್ಟು ಸರಕಾರದ ಮೇಲೆ ದಾವಾ ಹಾಕುತ್ತೇನೆ! ಏನೂ ಅಂತ ತಿಳಿದಿದಾರೆ ಅವರು? ಅಷ್ಟರಲ್ಲಿ- ಈ ಬಿಸನೆಸ್ಸು ಒಂದು ಶುರು ಮಾಡಿದರೆ ಆಯಿತು.

ಕಮಲ :- ಸದ್ಯ ಮೊದಲು ಸ್ವಲ್ಪ ಕಾಫಿ ತೊಗೊಳೋಣಂತೆ- ಪ್ರಯಾಣ- ಎಷ್ಟು ಆಯಾಸವೋ ಏನೊ-ಮಕ್ಕಳಿಗೆ ಹಾಲು—

ನರಸಿಂಹ :— ಛೆ ಛೆ-ಈಗೇನೂ ಬೇಡ ಬಿಡಿ-ಇನ್ನೇನು ಊಟದ ಹೊತ್ತೇ ಆಯಿತಲ್ಲ! ಶ್ರೀಧರ ಎಲ್ಲಿ?

ಗೋವರ್ಧನ :— ಇನ್ನೇನು ಎಲ್ಲೋ ಅಲೆಯೋಕೆ ಹೋಗಿದಾನೆ— ಅವನಿಗೂ ಈ ಬಿಸಿನೆಸ್ಸಿನ ಹುಚ್ಚು ಹತ್ತಿದೆ-ಮುಂದೆ ಓದೋದಿಲ್ಲಾ ಅಂತಾನೆ ಕೆಲಸ ಎಲ್ಲೂ ಸಿಕ್ಕೋದಿಲ್ಲ.

ಕಮಲ ;- ಅವನದ್ದೇ ಒಂದು ಯೋಚನೆ ಕಣೆ ಕಾಮಾಕ್ಷಿ-! ಇವರಿಗೆ ಬೇರೆ ನಾಳೆಯಿಂದ ರಿಟೈರು!

ನರಸಿಂಹ :- ಅದಕ್ಕೇ-ಈಗಲೇ ನಿಂತ ನಿಂತ ಹಾಗೇ ಹೊರಟುಬಂದಿದ್ದು. ನನ್ನ ಕೇಳಿದರೆ, ಈಗ ನಾನು ಪ್ರಾರಂಭ ಮಾಡೋ ಬಿಸಿನೆಸ್ಸಿಗೇ ಶ್ರೀಧರನೂ ಸೇರಿಕೊಳ್ಳಲಿ. ಏನೀಗ!

ಗೋವರ್ಧನ :- ಅದೂ ಒಂದು ಸರಿಯಾದ ಯೋಚನೆಯೇ-ಅರೆ ಕೂತ್ಕೊಳ್ಳಿ ನಿಂತೇ ಇದೀರಲ್ಲ.

ನರಸಿಂಹ :— ಪರವಾಗಿಲ್ಲ ಇದನ್ನೆಲ್ಲ ನಿರ್ಧರಿಸಿಕೊಂಡು ಮಧ್ಯಾಹ್ನವೇ ಹೊರಟು ಬಿಡಬೇಕು ನಾನು. ಕಾಮು, ಮಕ್ಕಳ ಜೊತೆ ನಾಲ್ಕು ದಿನ ಇಲ್ಲೇ ಇರುತಾಳೆ.

ಕಮಲ :- ಸಧ್ಯ ಒಳ್ಳೆಯದೇ ಆಯಿತು.

ನರಸಿಂಹ :- ಅದೇ ಮಾವ-ಎರಡೆರಡು ಕಡೆ ಬಿಸಿನೆಸ್ಸು ಅಂತ ನೀವು ದುಡ್ಡು ಹಾಕೋ ಬದಲು-ಒಂದೇ ಕಡೆಗೆ ಗಟ್ಟಿಯಾಗಿ ಇಡೋದು ಮೇಲು. ನಾನು ಎಲ್ಲಾ ವಿಚಾರ ಮಾಡಿ, ಸ್ನೇಹಿತರ ಜೊತೆ, ನೆಲ ಸರಿ ಮಾಡಿ ಇಟ್ಟಿದೀನಿ. ಅವರಲ್ಲಿ ಒಬ್ಬನಿಗಂತೂ ವಿಪರೀತ ಇನ್‌ಫ್ಲುಯೆನ್ಸ್ ಅನ್ನಿ!

ಗೋವರ್ಧನ :- ಒಂದೇ ಕಡೆ ಗಟ್ಟಿಯಾಗಿ ಇಡೋದು—!!ಅಂದರೆ!

ನರಸಿಂಹ :— ಅದೇ- ಇನ್ನೇನು ಒಡೆದು ಹೇಳೇಬಿಡ್ತೀನಿ. ಈಗ ನಿಮಗೆ ಬರೋ ಇನ್ಶ್ಯೂರೆನ್ಸು, ಗ್ರಾಚುಟೀಲಿ ಒಂದು ಹತ್ತು ಸಾವಿರ ನನ್ನ ಕೈಗೆ ಕೊಟ್ಟರೆ ಸಾಕು.

ಗೋವರ್ಧನ : ಹತ್ತು ಸಾವಿರ!

ನರಸಿಂಹ :— ಹೌದು. ಸಧ್ಯಕ್ಕೆ ಅಷ್ಟು ಸಾಕು—ನಿಜವಾಗಿ ನಿಮ್ಮ ಅಳಿಯನ್ನ ಉದ್ಧಾರ ಮಾಡೋದಕ್ಕೆ!

ಕಮಲ :- ಅಳಿಯನ ಉದ್ಧಾರ!?

ಕಾಮಾಕ್ಷಿ :— ಹೌದಮ್ಮ. ಅದೊಂದೇ ಆಸರೆ ಅಂತ ನಿಂತ ಹಾಗೆ, ಸಾಲಾ ಮಾಡಿ ಹೊರಟುಬಿಟ್ಟರು, ಇಲ್ಲೀಗೆ [ಅಳುಮುಖ] ಅಣ್ಣನಿಗೆ ಹ್ಯಾಗಿದ್ದರೂ ದುಡ್ಡು ಬಂದಿದೆಯಲ್ಲ ಈಗ! ನೀವೇ ದಡ ಕಾಣಿಸಬೇಕು ನಮಗೆ!

ಕಮಲ :- ದಡ ಕಾಣಿಸಬೇಕು!!

ಗೋವರ್ಧನ :— [ತನಗೆ ತಾನೇ] ಅದಕ್ಕೇ ಹಿತಶತ್ರು ಅಂತ ಬರೆದಿದ್ದು ಭವಿಷ್ಯದಲ್ಲಿ.

ಕಮಲ : ಯಾಕೆ ಹೀಗೆ ಗೋಡೆ ನೋಡ್ತಾ ನಿಂತುಕೊಂಡಿರಿ?

ಗೋವರ್ಧನ :- ಇನ್ನೇನು ನೋಡ್ಲಿ ಹೇಳು! ಅಲ್ಲೀ, ನಮ್ಮ ಮೇಲೆ ದುಡ್ಡಿನ ಮಳೆ ಸುರಿದಿದೇ ಅಂತ ತಿಳಿದಿದಾನಲ್ಲ ನಮ್ಮ ನರಸಿಂಹ!

ನರಸಿಂಹ :- ನೀವು ಏನೇ ಹೇಳಿ ಮಾವಯ್ಯ. ನಿಮ್ಮನ್ನೇ ನಂಬಿ ಬಂದೀನಿ. [ಗದ್ಗದಿಸಿ] ಹಾಲಲ್ಲಾದರೂ ಹಾಕಿ, ನೀರಲ್ಲಾದರೂ ಹಾಕಿ, ನೀವು ಈಗ ಕೊಡೊದಿಲ್ಲಾ ಅಂದರೆ. ನನ್ನ ಈ ಪರಿಸ್ಥಿತೀಲಿ ಪ್ರಾಣ ಕಳಕೊಳ್ಳೋದೊಂದೇ ದಾರಿ ನನಗೆ!

ಗೋವರ್ಧನ: ಛೇ! ಛೆ! ಹಾಗೆಲ್ಲ ಕೆಟ್ಟ ಮಾತು ಆಡಬೇಡಪ್ಪ— ನೋಡು ನಿಜವಾಗಿ ಹೇಳ್ತೀನಿ- ಗ್ರಾಚುಟಿ ದುಡ್ಡು ಬರೋದಾದರೂ ಇನ್ನೂ ಆರು ತಿಂಗಳಾದರೂ ಬೇಕು! ನಮ್ಮ ಆಫೀಸರೋ ಗುರು ಘಾತಕ! ಎಲ್ಲಾದಕ್ಕೂ ಅಡ್ಡ ಒಡ್ತಿದಾನೆ! ಸಾಲದ್ದಕ್ಕೆ ಇನ್ನು ನಾಳೆಯಿಂದ ಪೆನ್ ಷನ್! ಸಂಬಳದಲ್ಲಿ ಮೂರನೆ ಎರಡು ಭಾಗ ಖೋತಾ! ಶ್ರೀಧರನ್ನೂ-ಇನ್ನೂ ಎರಡು ವರ್ಷ ಓದಿಸಬೇಕು. ಜೇರೆ ಕಡೆ ಕೆಲಸ ಹುಡುಕಿ ಮಾಡೋದು ಆಗದ ಮಾತು! ಮೈ–ಮನಸ್ಸು ಎರಡೂ ಸೋತು ಹೋಗಿದೆ. ಇವಳೂ ದುಡಿದೂ ದುಡಿದೂ ಹಣ್ಣಾಗಿದಾಳೆ. ನಿಜವಾಗಿ ದುಡ್ಡು ಬಂದರೆ, ಬಂದ ಮೇಲೆ, ನಾಲ್ಕುಕಾಲ ಯಾತ್ರೆ, ತೀರ್ಥ, ಅಂತ ದೇವರ ಸೇವೆ ಮಾಡಿ, ಆಮೇಲೆ ವಿಶ್ರಾಂತಿ ತೊಗೋಬೇಕು ಅಂತಾಳೆ. ಹೀಗಿರೋವಾಗ, ನಾವು ತಾನೆ ಇನ್ನೆಷ್ಟು ದಿನಾ ಅಂತ. ಯಾರಿಗೆ ಮಾಡೋದು ಹೇಳು. ರಿಟೈರ್ ಆದರೆ ಸಾಕು ಬಂದದ್ದರಲ್ಲಿ ಸರಿ ಮಾಡಿಕೊಂಡು ರಾಮಾ ಕೃಷ್ಣಾ – ಅಂತ –

ನರಸಿಂಹ:- ಇಂಥ ಭಾಷಣ ಮಾಡೋಮಾಡ್ತೀರಿ ಅಂತ ನಾನು ಹೊರಡೋವಾಗಲೇ ಕಾಮೂಗೆ ಹೇಳಿದ್ದೆ ಮಾವಯ್ಯ. "ನೋಡಲೆ. ಮಾತಾಡ್ತಾರೆ ಆ ಮೇಲೆ ಕೊಟ್ಟೇ ಕೊಡ್ತಾರೇಂತ" ನಂಬಿಸಿ ಕರಕೊಂಡು ಬಂದಳು.

ಕಾಮಾಕ್ಷಿ: ನಿಜ ಅಣ್ಣ ಹೇಗಾದರೂ ಮಾಡಿ ಸಧ್ಯಕ್ಕೆ ಕೊಟ್ಬಿಡಿ. ಆ ಮೇಲೆ ತೀರ್ಥ-ಯಾತ್ರೆ ಅಂದರೆ ನಾವೇ ಕಳುಹಿಸಿಕೊಡೋಕಾಗಲ್ವೆ? ವಿಶ್ರಾಂತಿ ಬೇಕೂ ಅಂದರೆ ನಮ್ಮ ಮನೇಲಿ ಬಂದು ಇದ್ಬಿಡಿ. (ಅಳುತ್ತ) ನಾವೇನು ಹೊರಗಿನವರೇ ಹೇಳಿ.

ಕಮಲ: ಹಬ್ಬದ ದಿನ ಕಣ್ಣೀರು ಹಾಕಬೇಡಮ್ಮ. ನೋಡೋಣ— ಕೇಳಿದಷ್ಟು ಕೊಡೋಕೆ ಆಗದಿದ್ದರೂ—ಏನಾದರೂ ಮಾಡೋಣ ನಾನೂ ಹೇಳ್ತಿನಿ ಸಧ್ಯ ಮೊದಲು ಊಟಕ್ಕೇಳಿ-ಮಕ್ಕಳು ಹಸಿದಿವೆ.

ನರಸಿಂಹ: ನಿಮ್ಮ ಮಾತು ಕೇಳಿದರೆ ಸ್ವಲ್ಪ ಹಗುರಾಯ್ತು ಎದೆ. ಆದರೂ ಮಾವಯ್ಯ ಮಾತು ಕೊಡದೇ ಇದ್ದರೆ ಹ್ಯಾಗೆ ಊಟ ಮಾಡಲಿ ಹೇಳಿ.

ಗೋವರ್ಧನ: ಮಾವಯ್ಯನ ಮಾತು!?

ಕಮಲ: ಹೀಗ್ಯಾಕೆ ಮುಂಕು ಹಿಡಿದು ಮಾತಾಡ್ತೀರಿ' ಏನಾದರೂ ಮಾಡಿದರಾಯಿತು. ಮಗಳು-ಅಳಿಯನಿಗಿಂತ ಹೆಚ್ಚೆ ಹೇಳಿ-ಸಧ್ಯ-ಏಳಿ— ಊಟಕ್ಕೆ.



ನರಸಿಂಹ: [ಹೊರಗೆ ಕಾರಿನ ಶಬ್ದ] ಓ ಯಾರೋ ಬಂದರು! ಕಾರಿನಲ್ಲಿ! ನೋಡಿ ಮಾವಯ್ಯ— ಅಂ? ಒಳ್ಳೆ ಸೂಟು-ಬೂಟು!

ಮುದ್ದೇಶ್ವರ :-- [ಹೊರಗಿನಿಂದ] ಗೋವರ್ಧನಯ್ಯನೋರೇ—! ಗೋವರ್ಧನ್!

ಗೋವರ್ಧನ : ಅ್ಹಾಂ! ಅಯ್ಯೊ, ಸಾಹೇಬರು! ಸ್ವಾಮಿ ನಮೊ, ಸಾಹೇಬರು!

ನರಸಿಂಹ: ಅ್ಹಾಂ! ಮಾವಯ್ಯ- ಇವರಿಂದಲೂ ಏನಾದರೂ ಸಹಾಯ ಆಗಬಹುದೆ ನನಗೆ-!

ಗೋವರ್ಧನ: ಅಯ್ಯೋ! ಸ್ವಲ್ಪ ತಾಳಪ್ಪ! [ಸಂಭ್ರಮದಿಂದ ಸ್ವಾಗತಿಸುತ್ತ] ಬರಬೇಕು ಸಾರ್! ಬಡವನ ಮನೆಗೆ ತಾವೇ ಬಂದದ್ದು, ಸ್ವಾಮಿ ದಯ ಮಾಡಿಸಿದಿರಿ—ಸ್ವಲ್ಪ ಹೇಳಿಕಳುಹಿಸಿದ್ದರೆ ನಾನೇ-[ದಪ್ಪ ಧ್ವನಿಯಲ್ಲಿ ಪಿಸುಗುಟ್ಟುತ್ತ] ಏ ಆ ಕುರ್ಚಿ ಸರಿ ಮಾಡೋ ಬೇಗ! ಬಂದೇಬಿಟ್ರು ಒಳಕ್ಕೆ! ಆ...ಹಹಹ...ಹಹ.

ಮುದ್ದೇಶಪ್ಪ : ನಿನು ಹುದ್ದು ಸ್ವಾಮಿ ನಾನು ಬರಬಾರದೇ ನಿಮ್ಮ ಮನೇಗೆ ಗೋವರ್ಧನಯ್ಯ? ಅಹಹಹ ಜೈ ಭಜರಂಗಬಲಿ!

ಗೋವರ್ಧನ: ಭಾಗ್ಯ ಬಂದಹಾಗೆ ಆಯಿತು- ಸಾರ್! ಅದಕೂ—

ಮುದ್ದೇಶಪ್ಪ: ಯಾಕೆ? ನೆನ್ನೇವರೆಗೆ ನಾನು ಆಫೀಸರು ನೀವು ಸಾಹುಕಾರರು ಅಂತ ನಡೆದಿರಬಹುದು ಆದರೆ ಇವತ್ತಿನಿಂದ? you are a free citizen of free India! ಪವರ್ ಆಫ್ ಡೆಮಾಕ್ರಸಿ ಚಲಾಯಿಸೋರು ನೀವು! ಪ್ರಜೆಯೇ ಪ್ರಭು !! ಜೈ ಭಜರಂಗಬಲಿ.

ಗೋವರ್ಧನ: ಏನೋ ದೊಡ್ಡ ಮಾತು ಸಾರ್! ದಯವಿಟ್ಟು ಕೂತು ಕೋಬೇಕು./ಸ್ವಲ್ಪ ಏನಾದರೂ ಸ್ವೀಕಾರ ಮಾಡಬೇಕು- ಕಾಫಿ, ಟೀ, ಓವಲ್ ಟೀನ್?

ಮುದ್ದೇಶಪ್ಪ : ಈಗೇನೂ ಬೇಡ—ಇನ್ನೇನು ಊಟದ ಹೊತ್ತೇ ಆಯಿತಲ್ಲ!

ಗೋವರ್ಧನ : ಹಾಗಿದ್ದರೆ-ಸ್ವಲ್ಪ ಚಿತ್ರಾನ್ನ-ಒಂದೇ ಒಬ್ಬಟ್ಟು-ಬೇಡ ಅನ್ನಬಾರದು ತಾವು-! ಪ್ಲೀ-!

ಮುದ್ದೇಶಪ್ಪ : ಈಗ ಯಾಕಪ್ಪ-! ಹುಂ... (ನರಸಿಂಹನ ಕಡೆಗೆ ತಿರುಗಿ) ಇವರು—?

ಗೋವರ್ಧನ : ನನ್ನ ಅಳಿಯಂದಿರು! ಈಗ ತಾನೆ ಊರಿಗೆ ಬಂದರು.- ಹೆಂಡತಿ ಮಕ್ಕಳನ್ನು ಕರಕೊಂಡು.

ಮುದ್ದೇಶಪ್ಪ : ಮಗಳು-ಮೊಮ್ಮಕ್ಕಳನ್ನ-ಅನ್ನಿ! ಹಬ್ಬ! ಬಹಳ ಸಂತೋಷ. ಏನು ಮಾಡ್ತಿದೀರಿ- ನೀವು-?

ನರಸಿಂಹ : ಬಿಸಿನೆಸ್ ಮಾಡಬೇಕೂಂತ—

ಮುದ್ದೇಶಪ್ಪ : Good! ಈ ಕಾಲದಲ್ಲಿ ಬಿಸಿನೆಸ್ ಬಿಟ್ಟರೆ ಬೇರೆ ಇಲ್ಲ ನೋಡಿ-ಒಳ್ಳೆ ಸ್ಕೋಪು!—ಎಂತೆಂಥಾ ಕೆಲಸದಲ್ಲಿದ್ದೋರೂ ತಮ್ಮ ತಮ್ಮದೇ ರೀತೀಲಿ ಬಿಸಿನೆಸ್ ನೂ ಮಾಡಿದ್ದಾರೆ ಇಚ್ಛೆಗೆ-ಅಂದ ಹಾಗೆ...ನಿಜವಾಗಿ, ಗೋವರ್ಧನಯ್ಯ—ನಿಮ್ಮಿಂದ ಒಂದು ಉಪಕಾರ- ನನಗೆ! ಅಹಹಹ- ಜೈ ಭಜರಂಗಬಲೀ!

ಗೋವರ್ಧನ : (ಕುಂಠಿತ್ ಗುಡುತ್ತ) ಸಾರ್ -ಸಾರ್ -ಅಂಥ ದೊಡ್ಡ ಮಾತು ಆಡಕೂಡದು ತಾವು. ಬಡವನ್ನ ನೋಡಿಕೊಂಡ ಧಣಿ ನೀವು-! ಎಷ್ಟು ಸಹಾಯ ಮಾಡಿದಿರಿ-ಏನು ಕತೆ!

ಮುದ್ದೇಶಪ್ಪ : ಛೇ! ಛೇ! ನಾನೇನು ಮಾಡಿದೆ ಮಹಾ! ಅಲ್ಲ—ಅದು ಸರಿ, ಅವರಿಗೊಂದು ಒತ್ತಾಯದ ಮಾತು ಹಾಕಿ, ತಲೆಮೇಲೆ ಕೂತು ಕೊಂಡಿದ್ದರಿಂದಲೇ ನಿಮಗೆ ಗ್ರ್ಯಾಚುಟಿ ಚೆಕ್ಕು ಬಂದಿದ್ದು!

ನರಸಿಂಹ : ಅ್ಹಾಂ!!

ಗೋವರ್ಧನ : ಹ...ಹ...ಹೌದು ಸಾರ್ ತಮ್ಮ ದಯೆ!

ಮುದ್ದೇಶಪ್ಪ : ಇನ್ನೊ ಒಂದು ವಿಷಯ ಹೇಳೋಣಾ ಅಂತಲೇ ಬಂದೆ. ನಿಮ್ಮ ಇನ್ಶ್ಯೂರೆನ್ಸ್ ಹಣಕ್ಕೂ ಎಲ್ಲ ಏರ್ಪಾಟು ಮಾಡಿಸಿದ್ದೀನಿ. ನಾಳೆ ನೀವು ಪಾಲಿಸಿಗಳನ್ನ ತಂದರೆ, ಇಬ್ಬರೂ ಒಟ್ಟಿಗೆ ನನ್ನ ಕಾರಿನಲ್ಲಿಯೇ

ಹೋಗಿ ಮುಗಿಸಿಬಿಡೋಣ ಆ ಆಫೀಸಿನಲ್ಲಿ ಭಾರಿ ಫ್ರೆಂಡ್ ಇದಾರೆ ನನಗೆ, ನಿಮಗೆ ನಾಳೆ ದುಡ್ಡು ಕೊಡಲೇಬೇಕೂಂತ ತಾಕೀತು ಮಾಡಿದೀನಿ.

ಗೋವರ್ಧನಯ್ಯ: ಓ...ಹಯ್ಯೊ-ಸರ್...ತಮ್ಮ ಸಹಾಯ-ಎಷ್ಟೂಂತ-ಹೇಳಲಿ.

ಮುದ್ದೇಶಪ್ಪ : ಛೆ! ಛೆ! ಏನೂ ಉಪಚಾರ ಹೇಳಬೇಡಿ. ನನ್ನ ಕರ್ತವ್ಯ ಅದು. ಇದರಲ್ಲಿ ಒಂದು ಸ್ವಾರ್ಥವೂ ಇದೆ!

ಗೋವರ್ಧನಯ್ಯ : ಸ್ವಾರ್ಥ—!!

ಮುದ್ದೇಶಪ್ಪ : ಇನ್ನೇನಿಲ್ಲ! ನೋಡಿ, ಒಬ್ಬ ಮನುಷ್ಯ ರಿಟೈರ್ ಆಗಿ ಬಿಟ್ರೆ ಅಂದರೆ, ಅವನಿಗೆ ಹುಚ್ಚುಹಿಡಿದುಬಿಟ್ಟ ಹಾಗೆ ಆಗುತ್ತೆ. ಜನದ ದೃಷ್ಟೀಲಿ ತಾನು ಒಬ್ಬ ಮನುಷ್ಯನೇ ಅಲ್ಲ ಅನ್ನೋ ಭಾವನೆ ಬರುತ್ತೆ ತಾನೊಬ್ಬ ನಿರುಪಯೋಗಿ—ಮೇಲಕ್ಕೆ ಟಿಕೆಟ್ಟು ಸಿಕ್ಕೋ ವರೆಗೂ ಹ್ಯಾಗೆ ಕಾಲಾ ಕಳೆಯೋದು ಅಂತ ಜಿಗುಪ್ಸೆ ಹುಟ್ಟಿಬಿಡುತ್ತೆ. ಹಾಗಾಗಿ ತಾನೇ ನಮ್ಮ ಚಿಕ್ಕಪ್ಪ. ರಿಟೈರು ಆದ ಆರು ತಿಂಗಳಲ್ಲಿ ಹೋಗೇ ಬಿಟ್ಟರು!

ಗೋವರ್ಧನಯ್ಯ : ಅಯ್ಯೊ - ಅಯ್ಯೋ!

ಮುದ್ದೇಶಪ್ಪ : ನಿಮಗೆ ಹಾಗೆ ಆಗಬಾರದು ಅಲ್ಲದೆ, ನೋಡಿ, ಒಂದು ಸ್ಥಿಮಿತದಲ್ಲಿ ಖರ್ಚು ಮಾಡಿಕೊಂಡು ಐವತ್ತೆಂಟು ವರ್ಷ ಕಾಲ ಒಂಟಿ ಎತ್ತಿನ ಹಾಗೆ, ದಾರಿ ಸವೆಸುತ್ತಿದ್ದವನ ಕೈಗೆ—ದಿಢೀರ್ ಅಂತ ಹೀಗೆ ಇಪ್ಪತ್ತೆರಡು ಸಾವಿರ ಕೈಗೆ ಬಿದ್ದರೆ ತಬ್ಬಿಬ್ಬಾಗಿ ಹೋಗುತ್ತೆ. ಹಾಗಾಗಿ ತಾನೆ ಸ್ವತಃ ನಮ್ಮ ತಂದೆ, ಪಾಪ, ಎದೆಯೊಡೆದು—ಅಹಹ ಜೈಭಜರಂಗಬಲೀ!

ಗೋವರ್ಧನಯ್ಯ : ಛೆ! ಛೆ! ರಾಮ ರಾಮಾ-

ಮುದ್ದೇಶಪ್ಪ : ನಿಮಗೆ ಹಾಗೆ ಆಗಕೂಡದು. ಅಲ್ಲದೆ. ನೋಡಿ, ನೋಡಿ, ದಿನಾ ಬೆಳಗಿನಿಂದ ಸಂಜೇ ವರೆಗೆ ಒಂದೇ ಸಮನೆ ಐವತ್ತೆಂಟು ವರ್ಷ ದೇಹ, ಮನಸ್ಸು ದುಡಿಸುತ್ತಿದ್ದವನಿಗೆ ಇದ್ದಕ್ಕಿದ್ದ ಹಾಗೆ ಸಿಕ್ಕಾಪಟ್ಟೆ ವಿಶ್ರಾಂತಿ ಸಿಕ್ಕಬಿಟ್ಟರೆ ದೇಹಕ್ಕೆ ಬಹಳ ಕೆಟ್ಟದು. ಹಾಗಾಗಿ ತಾನೇ, ನಮ್ಮ ಪಕ್ಕದ ಮನೆಯ ತಿಂಗಯ್ಯ ನೋಡು, ರಿಟೈರ್ ಆದ ಏಳು ತಿಂಗಳಿಗೇ. ದಮ್ಮು, ಡಯಬಿಟಿಸ್ಸು ಅಂತ, ಹಾಳ ಹತ್ತಿ ಹೋಗಿಬಿಟ್ಟರು. ಬದುಕಿದ್ದಾಗಲೇ ನರಕ ಕಂಡರು ಪಾಪ!

ಗೋವರ್ಧನಯ್ಯ :— ಅಬ್ಬಬ್ಬ! ಹರೇ ಹರೇ-

ಮುದ್ದೇಶಪ್ಪ :- ಹಾಗೆ ನಿಮಗೆಂದೂ ಆಗಕೂಡದು. ಅದಕ್ಕೇ ನಾನು ಹೇಳೋದು ಇದು ವರೆಗೆ ನಾನು ಮಾಡಿದ್ದು ಉಪಕಾರ ಅಲ್ಲಾ— ಇನ್ನು ಮೇಲೆ ಮಾಡೋದು ಉಪಕಾರ ಅಂತ!

ಗೋವರ್ಧನಯ್ಯ :- [ತಬ್ಬಿಬ್ಬಾಗಿ] ಅಪ್ಪಣೆ ಕೊಡಿಸಬೇಕು.

ಮುದ್ದೇಶಪ್ಪ :- ನೋಡಿ. ನಿಮ್ಮ ದುಡ್ಡು ಸರಿಯಾದ ಕಡೆ ವಿನಿಯೋಗವಾಗಿ-ಆಗಾಗ್ಗೆ ಸ್ವಲ್ಪ ಸ್ವಲ್ಪ ಹಿಂದಕ್ಕೆ ಬರೋಹಾಗೆ ಆಗಬೇಕು.

ಗೋವರ್ಧನಯ್ಯ :- ಆ್ಞಂ?

ಮುದ್ದೇಶಪ್ಪ :- ಹೂಂ! ನೀವು ಕೈಕಾಲಿನಲ್ಲಿ ಶಕ್ತಿ ಇರೋವರೆಗೂ ಒಂದು ಕಡೆ ದುಡಿಯೋ ಹಾಗೆ ಅವಕಾಶವಾಗಬೇಕು.

ಗೋವರ್ಧನಯ್ಯ :— ಆ್ಞಂ!

ಮುದ್ದೇಶಪ್ಪ :— ಹೂಂ ಅಲ್ಲದೆ, ಸಮಾಜಕ್ಕೆ ನಿಮ್ಮಿಂದ ಇನ್ನೂ ಪ್ರಯೋಜನ ಸಿಕ್ಕಬೇಕು ಆದಕ್ಕೋಸ್ಕರ ಎಲ್ಲ ನಿರ್ಮಾಣವೂ ಆಗಲೇ ಮಾಡಿದ್ದೀನಿ. ನನ್ನ ಆಫೀಸ್ ಇನ್‌ಫ್ಲುಅನ್ಸ್ ಉಪಯೋಗಿಸಿ ಲೈಸನ್ಸ್ ಕೂಡ ಪಡೆದುಕೊಂಡಿದೀನಿ. ಮುಂದಿನ ವಾರವೇ, 'ಊರಲ್ಲೆಲ್ಲ ಭಾರಿ' ಅನಿಸೂ ಅಂಥ ಇಡ್ಲಿ ಅಂಗಡಿ ತಗೀತೀನಿ. ಜೈ ಭಜರಂಗಬಲೀ!

ಗೋವರ್ಧನಯ್ಯ :— ಆ್ಞಂ?

ಮುದ್ದೇಶಪ್ಪ :- ಹೌದು-ನಿಮ್ಮ ಬಂಡವಾಳದ ಮೇಲೆ! ಈಗ ಸದ್ಯಕ್ಕೆ ಹದಿನೇಳು ಸಾವಿರ ಅಷ್ಟೆ! ಉಳಿದದ್ದು ನಿಮ್ಮ ಹತ್ತಿರವೇ ಇರಲಿ ಮುಂದೆ ಅಂಥಾ ಅವಶ್ಯಕವಾದಾಗ ನೋಡೋಣ.

ಗೋವರ್ಧನಯ್ಯ :— ಓಹ್!

ಮುದ್ದೇಶಪ್ಪ :— ನೀವೇ ಸ್ವತಃ ಗಡಂಗಿನಲ್ಲಿ ಬೆಳಗಿಂದ ಸಂಜೇವರೆಗೆ ಕೂತು Management ನಡೆಸತಕ್ಕದ್ದು. ಇನ್ನು ಯಾರ ಕೈಗೂ ಆ ಆಡಳಿತ ಕೊಡೋದಿಲ್ಲ. ಬಹಳ ಹೊಣೆಗಾರಿಕೆಯ ಕೆಲಸ ಅದು. ಟೇಬಲ್ ದುಡ್ಡು, ಕಾಸು, ಲೆಕ್ಕ, ರಶೀತಿ, ಪಾವತಿ ಇದನ್ನೆಲ್ಲ ನನ್ನ ಭಾವಮೈದ ನೋಡಿಕೊಳ್ತಾನೆ. ಅವನು ಮಹಾ ಬುದ್ಧಿವಂತ. ಇಂಥ ಕೆಲಸದಲ್ಲಿ ಬೇಕಾದಷ್ಟು ಅನುಭವ ಇದೆ. ನೀವು ಯಾವುದಕ್ಕೂ ಯೋಚನೆ ಮಾಡೋಕಾರಣ ಇಲ್ಲ. - ಆ ಕೆಳಗಿನ ಕೆಲಸ ಎಲ್ಲ ಅವನೇ ನೋಡಿಕೊಳ್ತಾನೆ. ಬೇಕಾದಷ್ಟು ಪಾಲಿಟಿಕ್ಸ್ ಮಾಡುತಾನೆ. ಆದರೆ ಮೇಲ್ವಿಚಾರಣೆ ನೋಡಿಕೊಳ್ಳೋಕೆ ಮಾತ್ರ ನಿಮ್ಮಂತಹ ನಿಷ್ಠರೇ ಬೇಕು. ನಾನೂ ಒಂದೇ ಸಮನೆ ಹುಡುಕಾಡ್ತಾ ಇದ್ದೆ. ಸರಿಯಾದ ಮನುಷ್ಯನ್ನ ಬೇಕಾದಷ್ಟು ರೀತೀಲಿ ನಿಮ್ಮನ್ನ ಪರೀಕ್ಷೆ ಮಾಡಿದೆ. ಕಡೇಗೆ ನೀವೇ ಸರಿ ಅಂತ ನಿರ್ಧಾರಕ್ಕೆ ಬಂದೆ! ಇನ್ನು ಬರ್ತೀನಿ-! ಜೈ ಭಜರಂಗಬಲಿ

ಗೋವರ್ಧನಯ್ಯ : ಅಯ್ಯೊ-! ಛೆ ಛೆ ಅಬ್ಬ ಪುಕ್-ಪ್ಸ್-!

ನರಸಿಂಹ: ಅಲ್ಲ-ಸ್ವಾಮಿ, ಛೆ ಛೆ-ಸಾರ್, ಅಯ್ಯೊ ಸ್ವಾಮಿ. ತಮ್ಮ ಈ ಬಿಸಿನೆಸ್‌ನಲ್ಲಿ ನನಗೂ ಒಂದು ಅವಕಾಶ, ದಯಪಿಟ್ಟು ಕೃಪೆಯಿಟ್ಟು-

ಮುದ್ದೇಶಪ್ಪ: ಆ್ಞಂ? ಆಗಲಿ ನೋಡೋಣ. ಒಂದು ಮೂರು ತಿಂಗಳು ಬಿಸಿನೆಸ್ ಓಡಲಿ. ಆ ವೇಳೆ Certainly we shall consider. ಇನ್ನು ಬರಲೆ ಗೋವರ್ಧನಯ್ಯ- ನಾಳೆ ನಾನೇ ಬರ್ತೀನಿ-ಚೆಕ್ಕು--ಪಾಲಿಸಿ.—

ಗೋವರ್ಧನಯ್ಯ: ಅಯ್ಯೋ ಸಾರ್—ಆದರೆ ನಾವು ಒಬ್ಬಟ್ಟು-ಚಿತ್ರಾನ್ನ-!

ಮುದ್ದೇಶಪ್ಪ: ಅದನ್ನೇನೂ ಯೋಚಿಸಬೇಡಿ- ನಮ್ಮ ಅಂಗಡಿ, ಭಾವ ಪ್ಯದನ ಹೆಸರಲ್ಲಿ ಉದ್ಘಾಟನೆ ಆಗೋದಿನ,-ಕಲ್ಲಿದ್ದಲ ಮಂತ್ರಿಗಳೇ ಬರ್‍ತಾರಲ್ಲ ಆವತ್ತು ಡಬ್ಬಲ್ ಡಬ್ಬಲ್ ಹೊಡೆಯೋಣ-ಈಗ ಅವಸರ! ಬರ್‍ತೀನಿ! Thank you. ಇಷ್ಟು ಸುಲಭವಾಗಿ ಇತರರು ಬಿಡ್ಪೋದಿಲ್ಲ!- ಬರ್‍ತೀನಿ ನಮಸ್ಕಾರ! ಜೈ ಭಜರಂಗ ಬಲೀ!

ಗೋವರ್ಧನಯ್ಯ: ನಮಸ್ಕಾರ ಸಾರ್-! ಹುಶ್ಯಪ್ಪ! ಅಯ್ಯಯ್ಯೋ!. ನೀರು- ನೀರು ಕೊಡೇ! [ತೂರಾಡುತ್ತಾರೆ]

ನರಸಿಂಹ: ಅಯ್ಯಯ್ಯೊ! ಯಾಕೆ ಮಾವಯ್ಯ! ಕಾಮೂ ಕಾಮೂ ಸ್ವಲ್ಪ ನೀರು ತೊಗೊಂಡು ಬಾ- ಮಾವಯ್ಯ ಯಾಕೊ—?

[ಒಳಗಿನಿಂದ ಕಮಲಮ್ಮ-ಕಾಮಾಕ್ಷಿ ಧಾವಿಸುತ್ತಾರೆ.]

ಕಮಲ :— ಯಾಕೇಂದ್ರೆ?...ಏನಾಯ್ತು ? ಹೀಗೇಕೆ ಆಡ್ತೀರಿ?

ಕಾಮಾಕ್ಷಿ :— ಏನಪ್ಪಾ-ಮೈ ಸರಿಯಾಗಿಲ್ಲವೆ-?

ಗೋವರ್ಧನಯ್ಯ:— ಅಯ್ಯೋ-! ವೃಶ್ಚಿಕ ಕಚ್ಚಿತು ಕಣೆ! ವೃಶ್ಚಿಕ. ವಿಷವಿರ್‍ತಾ ಇದೆ!

ಕಮಲ :— ವೃಶ್ಚಿಕ ಕಚ್ಚಿತು!?

ಗೋವರ್ಧನಯ್ಯ:— ಅದೇ ಕಣೆ! ವಿಶೇಷ ಸಂಚಿಕೆ ತೆಗೆದು ನೋಡು! ರಾಶಿ ಭವಿಷ್ಯ ತೆಗೆದು ಮತ್ತೆ ಓದೇ!...ನೋಡು ಅದರಲ್ಲಿ ಇಲ್ಲವೇನೆ ? "ಅಧಿಕಾರಿಗೆ ಅದೃಷ್ಟ" ಅಂತ!

ಕಮಲ :-- [ತೆಗೆದು ನೋಡುತ್ತ]...ಹೂ...ಹೌದು...ಇದೆ!

ಗೋವರ್ಧನಯ್ಯ:— ಅವನೂ ವೃಶ್ಚಿಕಾನೇ ಕಣೇ! ಅವನದ್ದೂ ಅದೇ ರಾಶಿ! ಅವನದ್ದೇ ಅದೃಷ್ಟ.

ಕಮಲ :— ಮತ್ತೆ ಮುಂದೆ ಬರೆದಿದಾನಲ್ಲಾ! ಕಂಟಕಗಳಿಗೆ ಅಪ್ರಶಸ್ತ! ಹಿತಶತ್ರುಗಳ ಸುಳಿದಾಟ.

ಗೋವರ್ಧನಯ್ಯ :-- ಅದು ನನ್ನ ಪಾಲಿಗೆ! ನಾನೂ ವೃಶ್ಚಿಕ ತಾನೇ!

ಕಮಲ :— "ಸಂಶಯ ಪ್ರಕೃತಿಯ ಶ್ರೀಮತಿಗೆ ಮನೋರೋಗ"?

ಗೋವರ್ಧನಯ್ಯ:-- ಅದು ನಿನ್ನ ಪಾಲಿಗೆ! ಅಷ್ಟು ಗೊತ್ತಾಗೋಲ್ಲವೆ?

ಕಮಲ :— "ಬ್ರಹ್ಮಚಾರಿಗಳು ಕಷ್ಟ ಪರಂಪರೆಗೆ ಸಿಕ್ಕಿಕೊಳ್ಳುವ ಸಂಭವ"-?

ಗೋವರ್ಧನಯ್ಯ:- ಇನ್ನು ಮುಂದೆ ನಮ್ಮ ಶ್ರೀಧರನ ಕತೆ ಅದು!

ಕಮಲ :— "ಸಿದ್ರೆ ನಾಶವಾಗಿ ನರಗಳು ದುರ್ಬಲಗೊಳ್ಳುತ್ತವೆ". ಅಂತಾನೆ!

ಗೋವರ್ಧನಯ್ಯ: ನಮ್ಮ ನರಸಿಂಹನ ಹಣೇಬರಹ ಪಾಪ!

ಕಮಲ: "ಭಜರಂಗಬಲಿಯನ್ನು ಒಂದೇ ಮನಸ್ಸಿನಿಂದ ಧ್ಯಾನಿಸುತ್ತ."

ಗೋವರ್ಧನಯ್ಯ: ಮಾತು ಮಾತಿಗೂ ಭಜಿಸುತ್ತಿದ್ದನಲ್ಲೇ—! ಆ ಗುರುಂ ಘಾತಕ!

ಕಮಲ: ಅಯ್ಯೊ-! ನನಗೂ ಯಾಕೋ ತಲೆ ಸುತ್ತಿದ ಹಾಗಾಗ್ತಿದೆ- ಅಂದರೆ-ಇನ್ನೇನು ಗತಿ!

ಕಾಮಾಕ್ಷಿ: ಓ ಯಾರೊ ಬಂದ್ರು-ಅಮ್ಮ-ಮುಡಿಸೆಟ್ಟಗೆ ಎತ್ತಿಕೊಂಡು!

ಕಮಲ: ಓ! ಪಾರ್ವತಮ್ಮನೋರು! ... ಮುಂದೆ ಮನೆ ನೋಡಿಕೊಳ್ಳೋಕೆ!!!

ಜ್ಯೋತಿಷಿ :

ಶ್ರೀ ಕೃಷ್ಣಶಾಸ್ತ್ರಿ ಭಿಡೆ

ಭವಿಷ್ಯಕಥನ ಕಾರ್ಯಾಲಯ,
ಕಪಿಲೇಶ್ವರ ದೇವಾಲಯದ ಹತ್ತಿರ,
ಮುತ್ತಿಕೊಪ್ಪ ಕಟ್ಟಡ, ಬೆಳಗಾವಿ

ವರ್ಷ ಭವಿಷ್ಯ

ಶ್ರೀ ವಿಕ್ರಮ ಸಂವತ್ ೨೦೧೬ ರ ಭವಿಷ್ಯ; ಅರ್ಥಾತ್ ಶ್ರೀಶಕೆ ೧೮೮೧ ಕಾರ್ತಿಕ ಶುದ್ಧ ೧ ಸೋಮವಾರದಿಂದ ೧೮೮೨ ಆಶ್ವಿನ ಬಹುಳ ೩೦ ಶುಕ್ರವಾರದ ವರೆಗೆ; ಅಂದರೆ ೧೦ ನೆಯ ನವೆಂಬರ್ ೧೯೫೯ ರಿಂದ ೩೦ ನೆಯ ಅಕ್ಟೋಬರ್ ೧೯೬೦ ರ ವರೆಗೆ; ಅಂದರೆ ಈ ದೀಪಾವಳಿಯಿಂದ ಮುಂದಿನ ದೀಪಾವಳಿಯ ವರೆಗೆ.

ವಿಶೇಷ ಸೂಚನೆ:— ಈ ವರ್ಷಭವಿಷ್ಯವನ್ನು ಕೇವಲ ಸ್ಥೂಲಮಾನದಿಂದ ಬರೆಯಲಾಗಿದೆ. ಜಾಸ್ತಿ ನಿಖರವಾಗಿ ವ್ಯಕ್ತಿಗತ ಭವಿಷ್ಯವನ್ನು ಆಯಾ ವ್ಯಕ್ತಿಗಳ ಜನ್ಮಕುಂಡಲಿಯ ಮೇಲಿಂದ ಹೇಳಿದರೆ ನೂರಕ್ಕೆ ನೂರರಷ್ಟು ಸರಿ ಬರಬಹುದಾಗಿದೆ. ಇಲ್ಲಿ ಆಯಾ ರಾಶಿಗಳವರ ಭವಿಷ್ಯವನ್ನು ಸ್ಥೂಲಮಾನದಿಂದ ಹೇಳಲಾಗಿದೆಯಾದರೂ ಸಾಮಾನ್ಯವಾಗಿ ಅವರವರಿಗೆ ಈ ವರ್ಷ ದೊರೆಯಬಹುದಾದ ಶುಭಾಶುಭ ಫಲಗಳ ಕಲ್ಪನೆ ಸಿಕ್ಕಿ ಬರುತ್ತದೆ. ಪ್ರತಿ ವ್ಯಕ್ತಿಯ ಭವಿಷ್ಯವನ್ನು ಜನ್ಮರಾಶಿಯಂತೆಯೇ ಜನ್ಮಲಗ್ನದ ಮೇಲಿನಿಂದಲೂ ನೋಡಿದರೆ ಭವಿಷ್ಯವನ್ನು ಹೆಚ್ಚು ಖಚಿತವಾಗಿ ಕಂಡುಕೊಳ್ಳಬಹುದಾಗಿದೆ. ಅದರಂತೆಯೇ ಸ್ತ್ರೀಯರ ವಿಷಯದಲ್ಲಿ ಸಹ ಅವರ ನೈಸರ್ಗಿಕ ದೇಹಧರ್ಮಾನುಸಾರ ಫಲತಾರತಮ್ಯವನ್ನು ಲಕ್ಷಿಸಿ ನೋಡಿದಲ್ಲಿ ಭವಿಷ್ಯದ ಖಚಿತತೆಯು ಅನುಭವಕ್ಕೆ ಬಾರದಿರದು.



ಮೇಷ

ಒಟ್ಟಿನಲ್ಲಿ ಈ ವರ್ಷವು ಈ ರಾಶಿಯವರಿಗೆ ಮಾನಸಿಕ ಸಮಾಧಾನವನ್ನು ಅಷ್ಟಾಗಿ ನೀಡುವಂಥದಾಗಿಲ್ಲವಾದರೂ, ಒಳ್ಳೆಯ ಔದ್ಯೋಗಿಕ ಯಶಸ್ಸು ತರುವಂಥದೂ ಉತ್ತಮ ಸಾಂಪತ್ತಿಕ ಲಾಭವನ್ನು ತರುವಂಥದೂ ಆಗಿದೆಯೆಂಬುದು ನಿಶ್ಚಿತ ಅನುಭವಕ್ಕೆ ಬರದಿರದು.

ವರ್ಷಾರಂಭದಲ್ಲಿ ರಾಶಿಸ್ವಾಮಿಯಾದ ಮಂಗಳನು ಪ್ರಬಲ ಸ್ಥಾನವಾದ ದಶಮದಲ್ಲಿ ಅರ್ಥಾತ್ ಉಚ್ಚರಾಶಿಯಾದ ಮಕರದಲ್ಲಿ ಅತ್ಯಂತ ಬಲಿಷ್ಠನಾಗಿರುವುದರಿಂದ, ಸಾಡೇಸಾತಿಯ ಕರ್ತನಾದ ಶನಿಯು ಈ ರಾಶಿಯಲ್ಲಿಯೆ ನೀಚನಾಗಿದ್ದು ಈ ರಾಶಿಯು ಸಾಡೇಸಾತಿಯಿಂದ ಗ್ರಸ್ತವಾಗಿರುವುದಾದರೂ ಈ ರಾಶಿಯವರ ಆರೋಗ್ಯಕ್ಕೆ ವಿಶೇಷ ತೊಂದರೆಯೇನೂ ಆಗುವ ಸಂಭವವಿಲ್ಲ. ಆದರೆ ಶನಿ ಮಂಗಳರ ಪರಸ್ಪರ ದೃಷ್ಟಿಯೋಗವು ಅನಾರೋಗ್ಯಕ್ಕಿಂತ ಹೆಚ್ಚಾಗಿ ಅಪಘಾತಭಯವನ್ನೇ ಸೂಚಿಸುತ್ತದೆ. ಈ ಭಯ ನವೆಂಬರ್ ೧೫ ರಿಂದ ಡಿಸೆಂಬರ್ ೧೫ ಇಲ್ಲವೆ ಫೆಬ್ರುವರಿ ೨೬ ರಿಂದ ಎಪ್ರಿಲ್ ೮ರ ವರೆಗಿನ ಅವಧಿಯಲ್ಲಿ ವಿಶೇಷವಾಗಿರುವುದರಿಂದ ಈ ಅವಧಿಯಲ್ಲಿ ಸ್ವತಃ ಯಾವುದೇ ವಾಹನವನ್ನು ನಡೆಸುವ ಗೋಜಿಗೆ ಹೋಗಬಾರದು. ಯಾಕೆಂದರೆ ವಾಹನಗಳಿಂದುಳಿದು ಬೇರೆ ರೀತಿಯ ಅಪಘಾತದ ಸಂಭವ ತೀರ ಕಡಿಮೆಯಿದೆ. ಆದರೆ ರಾಶಿಪರತ್ವದಿಂದ ಶನಿ, ಮಂಗಳರ ಅನ್ಯೋನ್ಯಾಶ್ರಯ ಶುಭಯೋಗವಾಗಿರುವುದಲ್ಲದೆ ಶನಿಯು ಅರಿಷ್ಟನಾಶಕನಾದ ಗುರುವಿನ ಪೂರ್ಣದೃಷ್ಟಿಯಲ್ಲಿರುವುದರಿಂದ ಅಪಘಾತವು ಮರಣಾಂತಿಕವೆನಿಸುವ ಭಯ ಎಷ್ಟು ಮಾತ್ರಕ್ಕೂ ಇಲ್ಲ. ಆದರೆ ಮೂಲವ್ಯಾಧಿ, ನೇತ್ರವಿಕಾರ ಹಾಗು ಗಂಟಲು ಬೇನೆಯಿಂದ ತುಸು ತೊಂದರೆಯಾಗುವ ಸಂಭವವಿದೆಯಾದ್ದರಿಂದ ಈ ರೋಗಗಳ ಉಲ್ಬಣಕ್ಕೆ ಕಾರಣವಾಗುವಂತಹ ಪದಾರ್ಥಗಳ ಸೇವನೆಯು ತ್ಯಾಜ್ಯವೆಂದು ತಿಳಿಯಬೇಕು. ಆದರೆ ರಾಶಿಸ್ಥ ಶನಿಯಿಂದಾಗಿ ವಿಸ್ಮರಣ ಹಾಗು ಮುಂಗೋಪಿತನ ಹೆಚ್ಚಾಗಬಹುದು.

ಆದರೆ ರಾಶಿಸ್ವಾಮಿ ಮಂಗಳನು ಉಚ್ಚನಾಗಿ ದಶಮದಲ್ಲಿರುವುದರಿಂದಾಗಿ ದುಸ್ಸಾಧ್ಯವೆನಿಸುವಂತಹ ಅನೇಕ ಕಾರ್ಯಗಳನ್ನು ಮಾಡುವಲ್ಲಿ ಭಾರಿ ಉತ್ಸಾಹವಿರುವುದು. ಈ ರಾಶಿಯಲ್ಲಿರುವ ಶನಿಯು ನೀಚನಾಗಿರುವುದರಿಂದ ಅನೇಕ ಸಲ ಮನಸ್ಸಿನಲ್ಲಿದ್ದುದನ್ನು ಬಾಯಿಬಿಡಲಿಕ್ಕಾಗದೆಯೆ ಮನದಲ್ಲಿಯೆ ಕೊರಗಬೇಕಾದಂತಹ ಅಥವಾ ಅಪ್ರಿಯ ಕಾರ್ಯಗಳನ್ನು ಮಾಡಬೇಕಾದ ಇಲ್ಲವೆ ಸಹಿಸಬೇಕಾದಂತಹ ಪರಿಸ್ಥಿತಿ ತಲೆದೋರಬಹುದು. ಆದರೂ ವರ್ಷವಿಡೀ ಭಾಗ್ಯೇಶ ಗುರುವಿನ ಹಾಗು ವರ್ಷಾರಂಭದಿಂದ ಕೆಲ ಕಾಲ ಧನೇಶ ಮತ್ತು ಸ್ಪರ್ಧೇಶ ಶುಕ್ರನ, ಪರಾಕ್ರಮೇಶ ಬುಧ ಮತ್ತು ಉಪಾಸನೇಶ ರವಿಯ ಪೂರ್ಣದೃಷ್ಟಿಯಿರುವುದರಿಂದ ಕೊನೆಗೆ ಕೆಲವು ವಿಷಯಗಳಲ್ಲಿ ನೂರಕ್ಕೆ ನೂರರಷ್ಟಾದರೆ ಇನ್ನುಳಿದವುಗಳಲ್ಲಿ ನೂರಕ್ಕೆ ೬೦ ೭೦ ರಷ್ಟಾದರೂ ಯಶ ಸಿಕ್ಕೇತೀರುವುದು.

ಗುರು, ಬುಧ, ರವಿ, ಚಂದ್ರರೊಂದಿಗೆ ಭಾರ್ಯೇಶ ಶುಕ್ರನು ಇದೇ ಸ್ಥಾನದಲ್ಲಿರುವುದರಿಂದ ಹೆಂಡತಿಯ ಆರೋಗ್ಯ ಈ ವರ್ಷ ಒಳ್ಳೆಯ ನಿರೋಗಿಯಾಗಿರುವುದು. ಅಲ್ಲದೆ ನಾಲ್ಕೆಂಟು ದಿನಗಳನ್ನುಳಿದರೆ ವರ್ಷವಿಡೀ ಅವಳ ಸಹವಾಸಕ್ಕೂ ವ್ಯತ್ಯಯವುಂಟಾಗುವುದಿಲ್ಲ. ಅದರಂತೆಯೆ ಬಹುತರ ವಿಷಯಗಳಲ್ಲಿ ಪರಸ್ಪರರಲ್ಲಿ ಮತೈಕ್ಯವೂ ಇರುವುದಾದರೂ ಮಕ್ಕಳ ಭಾವಿ ಹಿತದ ದೃಷ್ಟಿಯಿಂದ ಮಾರ್ಗದರ್ಶನವನ್ನೆಂತು ಮಾಡುವುದೆಂಬ ಬಗ್ಗೆ ಮಾತ್ರ ಒಂದೆರಡು ಸಲ ವಾಗ್ವಾದವೇ ಆಗಬಹುದು. ಒಟ್ಟಿನಲ್ಲಿ ಇತರ ವಿಷಯಗಳಲ್ಲಿ ಪ್ರಾಪಂಚಿಕಸುಖ ಮನಸ್ಸಿನಂತೆಯೆ ದೊರೆಯುವುದು. ಅಪ್ರಿಯರಿಗಿಂತ ಪ್ರಿಯಜನರ ಸಹವಾಸವೇ ಹೆಚ್ಚಾಗಿ ದೊರೆಯುವುದು.

ಈ ರಾಶಿಯವರ ವಿವಾಹವು ಈ ಸಲ ಆಗುವುದಿದ್ದಲ್ಲಿ ಅದು ನಿಶ್ಚಿತವಾಗಿಯೂ ಅಲ್ಪಾಯಾಸದಿಂದಲೂ ಆಗುವುದಿದೆ. ವರ ಇಲ್ಲವೆ ವಧು ಅಪೇಕ್ಷೆಗಿಂತ ಕಿಂಚಿತ್ ಕೃಷ್ಣವರ್ಣೀಯನಿದ್ದರೂ ಅತ್ಯಂತ ಬುದ್ಧಿವಂತ, ನೋಡಲಿಕ್ಕೆ ಸುಂದರ, ಸಂಸಾರದಕ್ಷ, ಪರಸ್ಪರ ಏಕನಿಷ್ಠ ಪ್ರೇಮ ಹಾಗು ಪೂರ್ಣ ಆದರಾಭಿಮಾನಗಳನ್ನುಳಿಸಿಕೊಳ್ಳುವಂತಹ ಸ್ವಭಾವಧರ್ಮದವರಿರುವುದು ಕಂಡುಬರುತ್ತದೆ. ಅಲ್ಲದೆ ನಿಶ್ಚಿತಗೊಳಿಸಿದ ಯೋಗ್ಯ ವೇಳೆಗೆ ವಿವಾಹ ನಿರ್ವಿಘ್ನವಾಗಿ ಪೂರೈಯಿಸುತ್ತದೆ. ಹಾಗು ಎದುರು ಪಕ್ಷ ಹೆಚ್ಚು ಸಧನವಾಗಿರುವುದು ಅನುಭವಕ್ಕೆ ಬರುತ್ತದೆ.

ಅದರಂತೆಯೆ, ಈ ರಾಶಿಯವರ ಮಕ್ಕಳಲ್ಲಿ ಯಾರದಾದರೂ ವಿವಾಹವನ್ನು ಈ ವರ್ಷ ಮಾಡುವವರಿದ್ದಲ್ಲಿ ಅವರಿಗೆ ಸಹ ಒಳ್ಳೆಯ ಬಾಳಿಗಬಲವಿದೆ. ಆದರೆ ಸಂತತಿಸ್ಥಾನದಲ್ಲಿ ಈ ಸಲ ಇರುವ ಕೇತುವು ವಿವಾಹ ಹೊಂದುವುದಕ್ಕೆಯೆ ಅನೇಕ ಅಡೆತಡೆಗಳನ್ನು ಒಡ್ಡಬಹುದು. ವರ ಅಥವಾ ವಧು ಪರಸ್ಪರರಿಗೆ ಒಪ್ಪಿತರಿರುವರಾದರೂ ಮನೆಯಲ್ಲಿಯ ಇತರರ ಮನಸ್ಸಿಗೆ ಮಾತ್ರ ಬಂದಿರುವುದಿಲ್ಲ ಹಾಗು ತದ್ವಿರುದ್ಧ ಇತರರಿಗೆ ಒಪ್ಪಿತರಿರುವಲ್ಲಿ ಸ್ವತಃ ಪರಸ್ಪರರಿಗೆ ಒಪ್ಪಿತರಿರುವುದಿಲ್ಲ; ಎಲ್ಲರಿಗೂ ಒಪ್ಪಿತವಿರುವಂತಹ ಪ್ರಸಂಗದಲ್ಲಿ ವರದಕ್ಷಿಣೆ ಮಾನಮರ್ಯಾದೆ ಮುಂತಾದ ವಿಷಯಗಳಲ್ಲಿ ಹೊಂದುವುದಿಲ್ಲ. ಈ ಬಗೆಯ ಪ್ರಸಂಗಗಳಿಂದ ಮೊದಲು ತುಂಬ ಗೊಂದಲಕ್ಕೀಡಬಹುದು. ಹೀಗಾಗಿ ಅನೇಕ ಸ್ಥಳಗಳಲ್ಲಿ ನೋಡಬೇಕಾದ ಪ್ರಸಂಗ ಬರಬಹುದು. ಸೊಸೆ ಅಥವಾ ಅಳಿಯ ಪರಸ್ಪರರಿಗೆ ಪ್ರಿಯರಾದರೂ ಇತರರಿಗೂ ಹಾಗೆಯೇ ಇರಲಿಕ್ಕಿಲ್ಲ.

ಮಕ್ಕಳ ಉತ್ಕರ್ಷಕ್ಕೆ ಈ ವರ್ಷ ಚೆನ್ನಾಗಿರುವುದಾದರೂ ಮೊದಮೊದಲು ಅವರು ಅನೇಕ ಅಡೆತಡೆಗಳನ್ನು ಎದುರಿಸಬೇಕಾಗಬಹುದು. ನಿಮ್ಮ ಮಾತುಗಳು ಹೆಣ್ಣು ಮಕ್ಕಳಿಗೆ ಸಾಧಾರಣ ಹಿಡಿಸಬಹುದಾದರೂ ಗಂಡುಮಕ್ಕಳಿಗೆ ಮಾತ್ರ ಎಷ್ಟೂ ಹಿಡಿಸಲಾರವು. ಅವರಿಗೆ ಸ್ವಕೀಯರಿಗಿಂತ ಪರಕೀಯರೇ ಹತ್ತಿರದವರೆಂದೆನಿಸಬಹುದಾಗಿದೆ. ಅವರ ಉನ್ನತಿಗೆ ಎಪ್ರಿಲ್ ೭ ರಿಂದ ಜುಲೈ ೯ ಹಾಗು ಅಗಸ್ಟ ೨೯ ರಿಂದ ಅಕ್ಟೋಬರ್ ೧೨ ರ ವರೆಗಿನ ಅವಧಿಯು ಅನುಕೂಲವಾಗಿದೆ.

ಈ ವರ್ಷ ಸಾಡೇಸಾತಿಯಿರುವುದಾದರೂ ಉದ್ಯೋಗದಲ್ಲಿ ಭಾರಿ ಯಶಸ್ಸು ದೊರೆಯಲಿದೆ. ಜನ್ಮಸ್ಥ ಶನಿಯು ನಿಯಮದಂತೆ ಕರ್ಮ ಹಾಗು ಲಾಭಸ್ಥಾನಗಳ ಸ್ವಾಮಿಯೂ ಆಗಿರುವನಲ್ಲದೆಯೆ ಈ ವರ್ಷವಿಡೀ ಗುರುವಿನ ಪೂರ್ಣದೃಷ್ಟಿಯಲ್ಲಿರುವುದರಿಂದ ವ್ಯಾಪಾರಿಗಳ ಹಾಗು ಕೃಷಿಕ ಅಥವಾ ಔದ್ಯಿಕ ಉದ್ಯೋಗದಲ್ಲಿರುವವರ ಪತ್ತು-ಪ್ರತಿಷ್ಠೆಗಳು ಕಲ್ಪನಾತೀತವಾಗಿ ಹೆಚ್ಚುವವು, ಪ್ರಗತಿಯಲ್ಲಂತೂ ಲೆಕ್ಕವಿಲ್ಲದಷ್ಟು ಹೆಚ್ಚಳ ಕಂಡುಬರುವುದು ಹಾಗು ಅಂದಾಜಿಗಿಂತ ಎರಡು ಮೂರು ಪಟ್ಟು ಹೆಚ್ಚು ದ್ರವ್ಯಲಾಭವಾಗುವುದು. ಧನೇಶ ಶುಕ್ರ, ಪರಾಕ್ರಮೇಶ ಬುಧ ಹಾಗು ಬುದ್ಧಿಸ್ವಾಮಿ ರವಿ ವರ್ಷಾರಂಭದಲ್ಲಿಯೇ ಗುರುವಿನೊಂದಿಗೆ ಸಪ್ತಮದಲ್ಲಿರುವುದರಿಂದ ಧನ ಹಾಗು ಸ್ಥಾವರ ಎರಡೂ ಬಗೆಯ ಸಂಗ್ರಹವು ಮನಸ್ಸಿನಂತೆಯೆ ಆಗುವುದು. ಆದರೆ ಈ ಕಾರ್ಯದಲ್ಲಿ ಹೆಂಡತಿಯ ಸಲಹೆ ಸೂಚನೆಗಳು ಹೆಚ್ಚು ಯಶೋದಾಯಕವೆನಿಸಲಿವೆ. ನೌಕರದಾರರಿಗೆ ಸಹ ಬಡತಿಯು ನಿಶ್ಚಿತ ಜೋಗೆನಿರುವುದಲ್ಲದೆ ಅದು ಜನವರಿ ೧೬ ರಿಂದ ಮಾರ್ಚ ೪ ಇಲ್ಲವೆ ಎಪ್ರಿಲ್ ೨೨ ರಿಂದ ಜೂನ್ ೧೦ ಅಥವಾ ಜುಲೈ ೩ ರಿಂದ ಅಗಸ್ಟ ೨ ಇಲ್ಲವೆ ಸಪ್ಟೆಂಬರ್ ೧ ರಿಂದ ವರ್ಷಾಂತ್ಯದೊಳಗೆ ಲಭಿಸಬಹುದು. ಯಾರ ಜನ್ಮಕುಂಡಲಿಯಲ್ಲಿ ಮಂಗಳನು ತೃತೀಯ, ಷಷ್ಠ ಅಥವಾ ದಶಮದಲ್ಲಿರುವನೊ ಅಂಥವರಿಗಂತೂ ವಾಸ್ತವಿಕವಾಗಿ ಹಕ್ಕು ಇರದಿದ್ದರೂ ಮೇಲಿನ ಸ್ಥಾನಕ್ಕೆ ನಿಶ್ಚಿತ ಬಡತಿ ದೊರೆಯುವುದು. ನಿಮ್ಮೊಂದಿಗೆ ವರಿಷ್ಠರು ತುಂಬ ಸೌಜನ್ಯದಿಂದ ವರ್ತಿಸುವವರಾದರೂ ಕೈಕೆಳಗಿನವರು ತಿರಸ್ಕಾರದಿಂದ ನಡೆದುಕೊಳ್ಳುವರು. ಬದಲಿಯಾಗುವ ಸಂಭವವೇ ಹೆಚ್ಚಾಗಿದ್ದು ಹೊಸ ಊರು ಕೆಲಸ ಹಾಗು ಗಳಿಕೆಯ ದೃಷ್ಟಿಯಿಂದ ಉತ್ತಮವೆನಿಸಿದರೂ ಪ್ರಾಪಂಚಿಕ ಸೌಕರ್ಯಗಳು ಮಾತ್ರ ಅಷ್ಟಾಗಿ ದೊರೆಯಲಾರವು. ಅನೇಕರಿಗೆ ಹೊಸ ವಾಹನ ಕೊಳ್ಳುವ ಸುಯೋಗವಿದೆ, ಆದರೆ ಅದರಿಂದ ನಿರೀಕ್ಷಿಸಿದ ಸುಖ ಮಾತ್ರ ದೊರೆಯದು. ಆ ವಾಹನದ ದುರಸ್ತಿಗಾಗಿಯೇ ಬಹಳ ಹಣ ವೆಚ್ಚ ಮಾಡಬೇಕಾದೀತು. ಒಳ್ಳೆಯ ಮಿತ್ರಸುಖ ದೊರೆಯುವುದು; ಆದರೆ ನಿಮಗೆ ಪ್ರಿಯರೆನಿಸಿದ ಆಪ್ತರಿಗೆ ಸಹ ನಿಮ್ಮ ಉತ್ಕರ್ಷದ ಬಗ್ಗೆ ದ್ವೇಷ, ಮತ್ಸರಗಳು ಹುಟ್ಟಿರುವುದು ಗಮನಕ್ಕೆ ಬಾರದಿರದು. ಯಾತ್ರಾಯೋಗ ಕಡಿಮೆಯೆ ಇದೆಯಾದರೂ ಇತರ ಪ್ರವಾಸಯೋಗವು ಮಾತ್ರ ಸಾಕಷ್ಟಿದೆ ಹಾಗು ಅವುಗಳಲ್ಲಿಯ ಉದ್ದೇಶವೂ ಚೆನ್ನಾಗಿಯೇ ಸಾಧಿಸುವುದು. ಭೆಟ್ಟಿ ಹಾಗೂ ಲೇಖನ ಕೆಲಸಗಳಲ್ಲಿ ಕುಸು ವಿಲಂಬವಾಗುವುದಾದರೂ ಕೊನೆಗೆ ಹೆಚ್ಚಿನವು ಮನಸ್ಸಿನಂತೆಯೆ ಆಗುವವು. ಆದರೆ ಜನ್ಮಸ್ಥ ಶನಿಯಿಂದಾಗಿ ಇತರ ಉತ್ಕರ್ಷದ ಮಾನದಿಂದ ಮನಶ್ಶಾಂತಿ ಕಡಿಮೆಯೆ. ಹುಚ್ಚುಚ್ಚು ವಿಚಾರಗಳು ಮನಸ್ಸನ್ನು ಮುತ್ತಿರುವವಲ್ಲದೆ ಮನಸ್ಸು ಕುತರ್ಕದಿಂದಾಗಿ ಸದಾಕಾಲ ವ್ಯಥಿತವೂ ಭಯಗ್ರಸ್ತವೂ ಆಗಿರುತ್ತದೆ. ಅಂತೆಯೆ ಶನಿಯ ಸಂಪೂರ್ಣ ೨೩.೦೦೦ ಜಪ ಮಾಡಿದರೆ ಮನಶ್ಶಾಂತಿ ಚೆನ್ನಾಗಿರುವುದು.

ದಾವೆ, ಫಿರ್ಯಾದಿ ಅಥವಾ ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ಹೆಚ್ಚಿನವು ನಿಮ್ಮ ನಿಮ್ಮಲ್ಲಿಯೆ ಒಪ್ಪಂದವಾಗಿ ಮುಗಿಯುವವು. ಆದರೆ ಹಾಗಾಗದಿದ್ದವು ಮಾತ್ರ ಈ ವರ್ಷ ಮುಕ್ತಾಯ ಕಾಣದೆ ಹಾಗೆಯೆ ಉಳಿಯುವವು. ಶತ್ರು ಹಾಗು ವಿರೋಧಿಗಳಲ್ಲಿ ಅನೇಕರ ಉತ್ಕರ್ಷವಾದುದು ಈ ವರ್ಷ ಅನುಭವಕ್ಕೆ ಬರುತ್ತದೆ.

ಈ ರಾಶಿಯ ಗರ್ಭವತಿಯರಲ್ಲಿ ನವೆಂಬರ್ ೧೫ ರ ವರೆಗೆ ಅಥವಾ ಡಿಸೆಂಬರ್ ೧೫ ರಿಂದ ಜನೆವರಿ ೧೪ ಇಲ್ಲವೆ ಮೇ ೧೪ ರಿಂದ ಜುಲೈ ೧೬ ಅಥವಾ ಸಪ್ಟೆಂಬರ್ ೧೭ ರಿಂದ ವರ್ಷಾಂತ್ಯದ ವರೆಗಿನ ಅವಧಿಯಲ್ಲಿ ಪ್ರಸೂತರಾಗುವವರಿಗೆ ವಿಶೇಷ ಕಷ್ಟವೆನಿಸುವುದಿಲ್ಲ ಮಾತ್ರವಲ್ಲ, ಅಂಥವರ ಮಗು ಗಂಡಾಗಿರುವ ಸಂಭವವೇ ವಿಶೇಷವಾಗಿದೆ. ಇತರ ಕಾಲದಲ್ಲಿ ಆದರೆ ಪ್ರಸೂತಿ ಕಷ್ಟ ಹೆಚ್ಚೆನಿಸಿ ಹೆಣ್ಣುಮಗುವಾಗುವ ಸಂಭವವಿದೆ.

ಈ ರಾಶಿಯ ವಿದ್ಯಾರ್ಥಿಗಳಲ್ಲಿ ಬಹುತರರಿಗೆ ನಿಶ್ಚಿತ ಯಶ ದೊರೆಯಲಿದೆ. ಯಾರ ಪರೀಕ್ಷೆ ಡಿಸೆಂಬರ್ ೧೫ ರಿಂದ ಜನೆವರಿ ೧೪, ಫೆಬ್ರುವರಿ ೧೨ ರಿಂದ ಮೇ ೧೪, ಜೂನ್ ೧೫ ರಿಂದ ಜುಲೈ ೧೬, ಅಗಸ್ಟ ೧೭ ರಿಂದ ಸಪ್ಟೆಂಬರ್ ೧೬ ಈ ಅವಧಿಯಲ್ಲಾಗುವದೊ ಅಂಥವರು ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗುವ ಸಂಭವವಿದೆ.



ವೃಷಭ

ಒಟ್ಟಿನಲ್ಲಿ ಈ ವರ್ಷ ಸಾಡೇಸಾತಿಯಿದ್ದರೆ ಆರನೆಯ ಗುರು ಹಾಗು ನಾಲ್ಕನೆಯ ಕೇತು ಈ ಮುಖ್ಯ ಗ್ರಹಗಳು ಪ್ರತಿಕೂಲವಾಗಿರುವುದರಿಂದ ಬಹಳ ದಗದಗಿಯೂ ಅಲ್ಪ ಲಾಭಕರವೂ ಅತಿಶಯ ವೆಚ್ಚದಾಯಕವೂ ಆಗಿರುವುದರಿಂದಲೂ ಈ ರಾಶಿಯವರು ಈ ಮೂರೂ ಗ್ರಹಗಳನ್ನು ಜಪ ಪೂಜಾದಿಗಳ ಮೂಲಕ ಆರಾಧಿಸಬೇಕು. ಅಂದರೆ ಬಹ್ವಂಶ ಅನಿಷ್ಟ ಫಲಗಳು ಉಪಶಮನ ಹೊಂದುವವು ಎಂದು ತಿಳಿಯಬೇಕು.

ಈ ರಾಶಿಗೆ ಇದೀಗ ಅಂದರೆ ಕಳೆದ ಮಾರ್ಚ ತಿಂಗಳಿಂದ ಸಾಡೇಸಾತಿ ಪ್ರಾರಂಭವಾಗಿರುವುದರಿಂದ ಶನಿಯು ೧೨ ನೆಯವನಾಗಿ ವ್ಯಯಸ್ಥಾನದಲ್ಲಿದ್ದಾನೆ.ಆದ್ದರಿಂದ ಚಿಕ್ಕ ದೊಡ್ಡ ಕೆಲಸಗಳಲ್ಲಿ ಎರಡು ಮೂರು ಪಟ್ಟು ವೆಚ್ಚ ಮಾಡಿದರೂ ಅವುಗಳಲ್ಲಿಯ ಉದ್ದೇಶ ಪೂರ್ಣ ಸಾಧಿಸದು ಮಾತ್ರವಲ್ಲ, ಕನಿಷ್ಟ ಅರ್ಧದಷ್ಟಾದರೂ ಮೋಸವಾಗುವುದು. ಕನಸು-ಮನಸ್ಸಿನಲ್ಲಿಯೂ ಇರದಂಥ ವಿಷಯಗಳಿಗಾಗಿ ವೆಚ್ಚ ಮಾಡಬೇಕಾದ ಪ್ರಸಂಗ ಬರಬಹುದು.ಕೈಗೆ ಎಷ್ಟೇ ಹಣ ಬಂದರೂ ವಿಪರೀತ ವೆಚ್ಚವೆದುರು ಅದು ಏನಕ್ಕೂ ಸಾಲದಾಗುತ್ತದೆ. ಶಾರೀರಕ ಕ್ಲೇಶಕ್ಕಿಂತ ದ್ರವ್ಯ ವಿಷಯಕ ಮಾನಸಿಕ ಕಷ್ಟವೇ ಹೆಚ್ಚಾಗುವುದು. ವರ್ಷಾರಂಭದಲ್ಲಿ ರಾಶಿಸ್ವಾಮಿ ಶುಕ್ರನು ರೋಗಸಂಜ್ಞಕ ಸ್ಥಾನವಾದ ಷಷ್ಠದಲ್ಲಿರುವನಾದರೂ ಸ್ವಸ್ಥಾನವಾದ ತುಲಾರಾಶಿಯಲ್ಲಿರುವುದರಿಂದ ದೊಡ್ಡ ಅಸ್ವಾಸ್ಥ್ಯದ ಭಯವಿರುವುದಿಲ್ಲ; ಆದರೆ ಗಂಟಲು, ಕಿವಿ, ಕಣ್ಣು ಮತ್ತು ಕುತ್ತಿಗೆಗಳಿಗೆ ಸಂಬಂಧಿಸಿದಂತೆ ಕಿರುಕುಳ ಅಸ್ವಾಸ್ಥ್ಯದ ಭಯವಿದೆ. ವಿಶೇಷವಾಗಿ ನವೆಂಬರ್ ೨೯ ರ ವರೆಗಿನ ಹಾಗು ನಂತರ ಡಿಸೆಂಬರ್ ೩೦ ರಿಂದ ಜನೆವರಿ ೧೬, ಮಾರ್ಚ ೨೯ ರಿಂದ ಎಪ್ರಿಲ್ ೨೨ ಮತ್ತು ಅನಂತರ ಸಪ್ಟೆಂಬರ್ ೧ ರಿಂದ ವರ್ಷಾಂತ್ಯದ ವರೆಗಿನ ಅವಧಿಯಲ್ಲಿ ಈ ಮೇಲಿನವುಗಳಲ್ಲಿ ಯಾವುದೊಂದು ಬಗೆಯ ಅಸ್ವಾಸ್ಥ್ಯದ ತೊಂದರೆಯಾಗುವ ಸಂಭವವಿದೆ. ಅಲ್ಲದೆ ಸುಖಸ್ಥಾನವಾದ ಚತುರ್ಥದಲ್ಲಿರುವ ಕೇತು, ರಿಪು ಹಾಗು ರೋಗಸ್ಥಾನವಾದ ಷಷ್ಠದಲ್ಲಿರುವ ಗುರು ಮತ್ತು ವರ್ಷಾರಂಭದಲ್ಲಿ ಕುಟುಂಬೇಶನಾದ ಬುಧನು ಗುರುವಿನಿಂದ ಯುಕ್ತನಾಗಿರುವುದರಿಂದ ಸ್ತ್ರೀಸುಖವನ್ನುಳಿದು ಇತರ ಮುಂತರ ವಿಷಯಗಳಲ್ಲಿ ಪ್ರಾಪಂಚಿಕಸುಖ ಅಷ್ಟು ಚೆನ್ನಾಗಿ ದೊರೆಯದು. ಪರಸ್ಪರರಲ್ಲಿ ಮೇಲಿಂದ ಮೇಲೆ ಕಲಹವೂ ಸಂಭವನೀಯ.

ಆದರೆ ವರ್ಷಾರಂಭದಲ್ಲಿ ಭಾರ್ಯೇಶ ಮಂಗಳನು ಶುಭಸ್ಥಾನವಾದ ನವಮದಲ್ಲಿರುವುದಲ್ಲದೆ ಮಕರದಲ್ಲಿ ಉಚ್ಚನಾಗಿರುವುದರಿಂದ ಹೆಂಡತಿಯು ಒಟ್ಟಿನಲ್ಲಿ ನಿರೋಗಿಯಾಗಿರುವಳು. ಅವ

ಳಿಂದ ವೇಳೆ ವೇಳೆಗೆ ದೊಡ್ಡ ಧೈರ್ಯ ದೊರೆಯುತ್ತಿರುವುದಲ್ಲದೆ ಸಮಯೋಚಿತ ಸಲಹೆ ಸೂಚನೆಗಳೂ ಲಭ್ಯವಾಗುವವು. ಸ್ವಗೃಹಿಯಾದ ನಿಮ್ಮ ರಾಶಿಸ್ವಾಮಿ ಶುಕ್ರನೊಂದಿಗೆ ಆಗಿರುವ ಮಂಗಳನ ಚತುರ್ಥ-ದಶಮವೆಂಬ ಅತ್ಯಂತ ಶುಭವಾದ ಕೇಂದ್ರಯೋಗದಿಂದಾಗಿ ಉಭಯತರಲ್ಲಿ ಒಳ್ಳೆಯ ಮತ್ಯೈಕ್ಯವಿದ್ದು ಎಂಥ ಪರೀಕ್ಷೆಯಲ್ಲೂ ದೃಢವಾಗಿ ಉಳಿಯಬಲ್ಲಂಥ ಏಕನಿಷ್ಠೆ ಕಂಡುಬರುವುದು. ಅದರಂತೆಯೆ ಅವಳ ಮಾತು, ಕೃತಿಗಳೆರಡರ ಭಾರಿ ವರ್ಚಸ್ಸು ಇತರರ ಮೇಲೆ ಬೀಳುವುದು.

ಈ ರಾಶಿಯವರ ವಿವಾಹವು ಈ ವರ್ಷ ಆಗುವುದಿದ್ದಲ್ಲಿ ಅದಕ್ಕೆ ಮಾತ್ರ ಗ್ರಹಮಾನ ತೀರ ಪ್ರತಿಕೂಲವಾಗಿದೆ. ಒಂದು ವೇಳೆ ಮದುವೆ ಗೊತ್ತಾದರೂ ಪ್ರತ್ಯಕ್ಷ ಅದು ಕೈಗೂಡುವ ವರೆಗೆ ಅದರ ಬಗ್ಗೆ ಖಾತ್ರಿಯೆನಿಸದಷ್ಟು ಅಡೆತಡೆಗಳು ಬರುತ್ತಲಿರುವವು. ಭಾರಿ ಏಕವಚನಿಯೆನಿಸಿದವರು ಸಹ ಕೊನೆಯ ಗಳಿಗೆಯಲ್ಲಿ ಮದುವೆಯನ್ನು ಮುರಿದುಕೊಳ್ಳಬಹುದು. ಅನೇಕ ಸಲ ವಧು ಅಥವಾ ವರ ಕೊನೆಯ ಕ್ಷಣದಲ್ಲಿ ವಿವಾಹಕ್ಕೆ ಅಸಮ್ಮತಿ ವ್ಯಕ್ತಮಾಡುವುದರಿಂದ ವಿವಾಹ ಕೈಗೂಡಲಿಕ್ಕಿಲ್ಲ. ಆದರೆ ಇಷ್ಟೆಲ್ಲ ಇರುವಾಗಲೂ ಯಾರ ಮದುವೆಯಾಗುವುದೋ ಅವರು ಮಾತ್ರ ಪರಸ್ಪರರ ವಿಷಯದಲ್ಲಿ ಪೂರ್ಣ ಪ್ರೇಮವುಳ್ಳವರಿರುವುದಲ್ಲದೆ ಮುಂದೆಯೂ ಸುಖದಲ್ಲಿ ಲೋಲಾಡುವರು, ಇದ್ದುದರಲ್ಲಿಯೆ ವರ್ಷಾರಂಭದಿಂದ ಜನೆವರಿ ೧೫ ರ ವರೆಗೆ ಹಾಗು ನಂತರ ಮೇ ೧೩ ರಿಂದ ಜುಲೈ ೯ ರ ವರೆಗಿನ ಕಾಲವು ವಿವಾಹಕ್ಕೆ ಸಾಕಷ್ಟು ಅನುಕೂಲವಾಗಿದೆ.

ಈ ರಾಶಿಯವರ ಮಕ್ಕಳ ವಿವಾಹ ಮಾಡುವುದಿದ್ದಲ್ಲಿ ಮಾತ್ರ ಈ ವರ್ಷ ಒಳ್ಳೆಯ ಅನುಕೂಲವಿದೆ. ಇದ್ದುದರಲ್ಲಿಯೆ ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳ ವಿವಾಹವಾಗುವುದಕ್ಕೆ ಹೆಚ್ಚು ಅನುಕೂಲವಿದೆ. ಆದರೆ ಒಮ್ಮೆ ಗೊತ್ತಾದನಂತರ ಒಂದು ಇಷ್ಟು ಪತ್ರಿಯಿಂದಲೇ ಆದರೂ ಎರಡು ಮೂರು ತಿಂಗಳು ವಿಲಂಬವಾಗುವುದು ಅಪರಿಹಾರ್ಯವೆನಿಸಬಹುದು. ಸೊಸೆ ಅಥವಾ ಅಳಿಯ ಅತ್ಯಂತ ಬುದ್ಧಿವಂತ ಹಾಗು ಎಲ್ಲ ವಿಷಯಗಳಲ್ಲೂ ಎಲ್ಲರ ಮನಸ್ಸಿಗೂ ಒಪ್ಪುವಂತಹರಿರುವದಾದರೂ ಸ್ವಭಾವದಿಂದ ಕುಸು ಹಟಮಾರಿ ಅಥವಾ ದುರಾಗ್ರಹಿಯಾಗಿರುವುದು ಅನುಭವಕ್ಕೆ ಬರದಿರದು. ಮಕ್ಕಳ ಉತ್ಕರ್ಷಕ್ಕೆ ಈ ವರ್ಷ ಒಳ್ಳೆಯ ಅನುಕೂಲಕರವಾದದ್ದು. ಡಿಸೆಂಬರ್ ೫ ರ ವರೆಗೆ, ನಂತರ ಡಿಸೆಂಬರ್ ೨೫ ರಿಂದ ಜನೆವರಿ ೧೧, ಫೆಬ್ರುವರಿ ೮ ರಿಂದ ಮಾರ್ಚ್ ೧, ಮಾರ್ಚ್ ೧೮ ರಿಂದ ಎಪ್ರಿಲ್ ೨, ಜೂನ್ ೬ ರಿಂದ ೨೫, ಜುಲೈ ೧೧ ರಿಂದ ೧೮ ಹಾಗು ಅನಂತರ ಅಕ್ಟೋಬರ್ ೨ ರ ಮುಂದಿನ ಅವಧಿಯಲ್ಲಿ ಅನುಭವಕ್ಕೆ ಬರುವುದು. ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳಿಂದಲೇ ಹೆಚ್ಚು ಸುಖ ದೊರೆಯುವ ಯೋಗವಿದೆ.

ಉದ್ಯೋಗಕ್ಕೆ ಮಾತ್ರ ಈ ವರ್ಷ ಅಷ್ಟೊಂದು ಚೆನ್ನಾಗಿಲ್ಲ. ಶನಿಯ ಪೂರ್ಣದೃಷ್ಟಿಯು ನವಮ ಅಂದರೆ ಭಾಗ್ಯಸ್ಥಾನವಾದ ಮಕರದ ಮೇಲಿರುವುದರಿಂದಾಗಿ ಪ್ರತಿಷ್ಠೆ ಅಷ್ಟಕ್ಕಷ್ಟೇಯಾದರೂ ಉಳಿದುಕೊಂಡು ಬರಲು ಸಾಧ್ಯವಾಗುವುದು. ಆದರೆ ಗುರುವು ವರ್ಷವಿಡೀ ಆರನೆಯವನಾಗಿ ಶತ್ರುಕ್ಷೇತ್ರಿಯಾಗಿರುವುದರಿಂದ ಲಾಭವು ತೀರ ಕ್ಷೀಣಿಸುವುದು. ಎಲ್ಲಾದರೂ ಕುಸು ಲಾಭ ದೊರೆಯುವಂತಿದ್ದರೂ ಕೊನೆಯ ಗಳಿಗೆಯಲ್ಲಿ ಹತ್ತಾರು ಬಗೆಯ ಆತಂಕಗಳು ಎದುರಾಗಬಹುದು. ಯಾರಿಂದಾದರೂ ಹಣ ನಿಮಗೆ ಬರಬೇಕಿದ್ದರೆ ಅದು ಬರುವುದಿಲ್ಲವಿಷ್ಟೇ ಅಲ್ಲ, ಅದು ಬರಬಹುದೆಂಬ ಆಶೆಯಿಂದ ಮರಳಿ ನೀವೇ ಅವರಿಗೆ ಸಹಾಯ ಮಾಡಬೇಕಾಗಬಹುದು, ಅಥವಾ ಅದಕ್ಕಾಗಿ ಬೇರೆಯವರಿಗೆ ಜಾಮೀನಾಗಬೇಕಾಗಬಹುದು. ತೀರ ನಂಬಿಗಸ್ಥರೆನಿಸಿದವರಿಗೆ ಸಹ ನಿಮ್ಮ ಸಹಾಯಾರ್ಥ ಕೊಟ್ಟ ಮಾತನ್ನು ಉದ್ದೇಶಪೂರ್ವಕವಾಗಿ ಅಥವಾ ನಿರುಪಾಯವಾಗಿ ನಡೆಸಿಕೊಡಲಿಕ್ಕಾಗಲಿಕ್ಕಿಲ್ಲ. ವ್ಯಾಪಾರಿಗಳು ಹಾಗು ಶ್ರಮಿಕ ಉದ್ಯೋಗಸ್ಥರಿಗಂತೂ ಈ ವರ್ಷ ಬುದ್ಧಿಜೀವಿಗಳಿಗಿಂತಲೂ ಹೆಚ್ಚು ಬಿಕ್ಕಟ್ಟಿನದೆನಿಸುವ ಭಯವಿದೆ, ಆ ಮಾನದಿಂದ ನೌಕರದಾರರಿಗೆ ಅಷ್ಟೊಂದು ಕಷ್ಟವೆನಿಸುವುದಿಲ್ಲ. ಆದರೆ ಬದಲಿಯಾದರೆ ಅದು ತೀರ ಸೌಕರ್ಯಹೀನ ಸ್ಥಳಕ್ಕೆ. ಅಲ್ಲದೆ ಅನೇಕರ ಬಹಳಷ್ಟು

ಹಣ ಕಳೆದು ಅಥವಾ ಕಳವಾಗಿ ಹೋಗುವ ಭಯವೂ ಇದೆ. ಈ ಸಂಭವ ವಿಶೇಷವಾಗಿ ಎಪ್ರಿಲ್ ೨ ರಿಂದ ಜೂನ್ ೬ ಹಾಗು ಜುಲೈ ೧೪ ರಿಂದ ಅಕ್ಟೋಬರ್ ೨೮ ರ ವರೆಗಿನ ಅವಧಿಯಲ್ಲಿದೆ. ಆದರೂ ಕರ್ಮಸ್ಥಾನವಾದ ದಶಮದ ಮೇಲೆ ಮತ್ತು ಕರ್ಮೇಶ ಶನಿಯ ಮೇಲೆ ಗುರುವಿನ ಪೂರ್ಣದೃಷ್ಟಿಯಿರುವುದರಿಂದ ಅತ್ಯಂತ ಸತ್ವ-ಪರೀಕ್ಷೆಯ ಸಮಯವೇ ಪ್ರಾಪ್ತವಾದಾಗ ಕೊನೆಯ ಗಳಿಗೆಯಲ್ಲಿ ದೈವೀ ಚಮತ್ಕಾರದಿಂದಲೊ ಎಂಬಂತೆ ಯಾವುದೋ ಬಗೆಯ ಆಕಸ್ಮಿಕ ಸಹಾಯವೊದಗಿಬಂದು ಮರ್ಯಾದೆ ಉಳಿದೇ ಉಳಿಯುವುದು. ಈ ಸಲ ತೀರ ಹಳೆಯ ಮಿತ್ರರು ಸಹ ಶತ್ರುಗಳಾಗಬಹುದು ಇಲ್ಲವೆ ಪರಸ್ಪರ ವಾಸ್ತವ್ಯದಲ್ಲಿ ಅತಿ ದೂರ ಅಂತರವುಂಟಾಗುವುದರಿಂದ ಅವರ ಉಪಯೋಗವೂ ಆಗುವುದಿಲ್ಲ. ಹೊಸ ಸಂಗ್ರಹದ ಪ್ರಶ್ನೆಯೇ ಇಲ್ಲವಾದರೆ ಹಳೆಯದಿದ್ದುದರಲ್ಲಿಯೆ ಹೆಚ್ಚು ಭಾಗವನ್ನು ವೆಚ್ಚ ಮಾಡಬೇಕಾದ ಪ್ರಸಂಗವೂ ಇದೆ. ನೌಕರದಾರರನ್ನು ಅವರ ವರಿಷ್ಠರು ತುಂಬ ಕಷ್ಟಕ್ಕೀಡುಮಾಡುವರಾದರೆ, ಕೈಕೆಳಗಿನವರು ಅವರನ್ನು ಎತ್ತಿ ಹಿಡಿಯುವರು. ಯಾತ್ರಾದಿ ಯೋಗ ಕಡಿಮೆಯೆ; ಆದರೆ ಇತರ ಕೆಲಸಗಳಿಗಾಗಿ ಒಂದೆರಡು ಸಲ ದೂರದ ಪ್ರವಾಸ ಮಾಡಬೇಕಾಗಬಹುದು ಹಾಗು ಅವುಗಳಲ್ಲಿಯ ಉದ್ದೇಶ ಮುಕ್ಕಾಲು ಭಾಗವಾದರೂ ಈಡೇರಬಹುದು. ಆದರೆ ಪ್ರತ್ಯಕ್ಷ ಅನೇಕ ಕಾರ್ಯಗಳು ಪ್ರತ್ಯೇಕ ಭೆಟ್ಟಿಗಿಂತ ಪರಾವಲಂಬಿತ್ವವನ್ನೇ ಅನುಸರಿಸುವುದರಿಂದ ನಿಷ್ಫಲವಾಗಬಹುದಾಗಿದೆ. ಲೇಖನ ಕೆಲಸಗಳಲ್ಲಿ ದಗದಗಿ ಹಾಗು ವಿಲಂಬ ಹೆಚ್ಚೆನಿದರೂ ಕೊನೆಗೆ ಹೆಚ್ಚಿನವು ಮನಸ್ಸಿನಂತಾಗುವವು. ತಾಯಿ ತಂದೆ ಅಥವಾ ತತ್ಸಮ ವ್ಯಕ್ತಿಗೆ ಡಿಸೆಂಬರ್ ೩ ರಿಂದ ಜನೆವರಿ ೧೫ ಹಾಗು ಅಗಸ್ಟ ೨೫ ರಿಂದ ಅಕ್ಟೋಬರ್ ೧೨ ರ ವರೆಗಿನ ಕಾಲವು ತೀರ ಕ್ಲೇಶಕರವೆನಿಸಬಹುದು. ಮಿತ್ರರಲ್ಲಿ ಸಹ ಅನೇಕರಿಗೆ ಈ ವರ್ಷ ಆರ್ಥಿಕ ಹಾಗು ಶಾರೀರಿಕವಾಗಿ ಕಷ್ಟದ್ದೆನಿಸುವುದು

ದಾವೆ, ಫಿರ್ಯಾದಿ ಅಥವಾ ಇತರ ಸ್ಪರ್ಧೆಯ ಕೆಲಸಗಳಲ್ಲಿ ಸಪ್ತಮೇಶ ಮಂಗಳನು ಉಚ್ಚನಾಗಿರುವುದರಿಂದ ಹೆಚ್ಚಿನವು ಯಶಸ್ವಿಯಾಗುವವಾದರೂ ರಿಪುಸ್ಥಾನವಾದ ಷಷ್ಠದಲ್ಲಿರುವ ರವಿ, ಗುರು, ಬುಧ ಹಾಗು ಶುಕ್ರ ಈ ಪರಸ್ಪರ ವಿರೋಧಿ ಚತುರ್ಗ್ರಹಗಳಿರುವುದರಿಂದ ದೊರೆಯುವ ಯಶಸ್ಸು ತೀರ ಪೊಳ್ಳು ಎನಿಸಬಹುದು. ಇದ್ದುದರಲ್ಲಿಯೆ ನಿರ್ಣಯವು ಜನೆವರಿ ೧೬ ರಿಂದ ಫೆಬ್ರುವರಿ ೮, ಮಾರ್ಚ ೪ ರಿಂದ ೨೯ ಹಾಗು ಜೂನ್ ೧೧ ರಿಂದ ಅಗಸ್ಟ ೨ ರ ವರೆಗಿನ ಅವಧಿಯಲ್ಲಿ ದೊರೆತರೆ ಸಿಗುವ ಯಶಸ್ಸು ಪೊಳ್ಳೆನಿಸಲಾರದು.

ಈ ರಾಶಿಯ ಗರ್ಭವತಿಯರು ಸಶಕ್ತರೇ ಇರಲಿ, ಅಶಕ್ತರೇ ಇರಲಿ, ಪ್ರಸೂತಿ ಕಷ್ಟಕರವಾದರೂ ಆಗತಕ್ಕದ್ದೆ. ಆದರೆ ಬಹುತರರಿಗೆ ಗಂಡುಮಗುವೇ ಆಗಬಹುದಾಗಿದೆ. ಫೆಬ್ರು ೨೫ ರಿಂದ ಎಪ್ರಿಲ್ ೪ ರ ವರೆಗಿನ ಅವಧಿಯಲ್ಲಿ ಹೆರಿಗೆಯಾದರೆ ಮಗುವು ಅಶಕ್ತ ಅಥವಾ ಊನವಿರುವ ಭಯವಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆಯು ನವೆಂಬರ್ ೧೬ ರಿಂದ ಡಿಸೆಂಬರ್ ೫, ಡಿಸೆಂಬರ್ ೨೫ ರಿಂದ ಜನೆವರಿ ೧೧, ಫೆಬ್ರುವರಿ ೮ ರಿಂದ ಮಾರ್ಚ ೧, ಮಾರ್ಚ ೧೮ ರಿಂದ ಎಪ್ರಿಲ್ ೨ ಹಾಗು ಜೂನ್ ೬ ರಿಂದ ಜುಲೈ ೧೧ ರ ವರೆಗಿನ ಅವಧಿಯಲ್ಲಾದರೆ ಉತ್ತೀರ್ಣರಾಗುವಷ್ಟಾದರೂ ಗುಣಗಳು ದೊರೆಯುವ ಸಂಭವವಿದೆ.



ಮಿಥುನ

ಒಟ್ಟಿನಲ್ಲಿ ಈ ವರ್ಷವು ಈ ರಾಶಿಯವರಿಗೆ ಬಹುತರ ವಿಷಯಗಳಲ್ಲಿ ಒಳ್ಳೆಯ ಯಶ ನೀಡುವಂಥದೂ ತುಂಬ ಲಾಭದಾಯಕವೂ ಸುಖವರ್ಧಕವೂ ಆಗಿದೆಯೆಂದು ತಿಳಿಯಬೇಕು.

ಈ ರಾಶಿಯವರಿಗೆ ಈ ವರ್ಷವಿಡೀ ೧೧ ನೆಯ ಶನಿ, ೩ ನೆಯ ಕೇತು, ೫ ನೆಯ ಗುರು ಹಾಗು ೯ ನೆಯ ರಾಹು ಈ ದೊಡ್ಡ ಗ್ರಹಗಳು ಬಹು ಬಲಿಷ್ಠವಾಗಿರುವುದರಿಂದ ಒಳ್ಳೆಯ ಸುಖದ, ಪ್ರಗತಿಯ ಹಾಗು ಯಶಸ್ಸಿನ ಗಾಳಿಯೇ ಬೀಸುವುದು. ಅಲ್ಲದೆ ರಾಶಿಸ್ವಾಮಿ ಬುಧನು ವರ್ಷಾ-ರಂಭದಲ್ಲಿ ದೈವೀ ಸಹಾಯ ನಿರ್ದೇಶಕ ಶುಭತ್ರಿಕೋಣಸ್ಥಾನವಾದ ಪಂಚಮದಲ್ಲಿರುವುದರಿಂದ ಆರೋಗ್ಯವು ಬಹುತರ ಎಲ್ಲ ದಿನಗಳಲ್ಲೂ ಉತ್ತಮವೇ ಇರುವುದು ಮತ್ತು ಮನಸ್ಸು ಸದಾಕಾಲ ಸುವಿಚಾರಗಳಲ್ಲಿ ತೊಡಗಿರುವುದು ಹಾಗು ಪರಕಾರ್ಯಸಹಿಷ್ಣುವಾಗಿರುವುದು. ಪಂಚಮದಲ್ಲಿಯ ಬುಧ, ಗುರು, ಚಂದ್ರ ಹಾಗು ರವಿ ಇವರು ಪಂಚಮಾಧಿಪತಿ ಶುಕ್ರನಿಂದ ಯುಕ್ತರಾಗಿರುವುದರಿಂದ ಅನೇಕ ಕಾರ್ಯಗಳು ಯೋಜಿಸಿದಂತೆಯೆ ಅಲ್ಪಾಯಾಸದಿಂದಲೇ ಕೈಗೂಡುವವು. ಆರೋಗ್ಯ ನಿರೋಗಿಯೆ ಆಗಿರುವುದಾದರೂ ಡಿಸೆಂಬರ್ ೩ ರ ವರೆಗೆ ಹಾಗು ನಂತರ ಜುಲೈ ೯ ರಿಂದ ಅಗಸ್ಟ ೨೯ ರ ವರೆಗಿನ ಕಾಲದಲ್ಲಿ ಮೂಲವ್ಯಾಧಿ, ಮೂತ್ರದೋಷ ಇಲ್ಲವೆ ಮಲಬದ್ಧತೆಯಿಂದಾಗಿ ತುಸು ತೊಂದರೆಯಾಗಬಹುದು. ಆದರೂ ದೇಹಸುಖಕ್ಕೆ ಅನುಕೂಲವಾದಂತಹ ಸಕಲ ವಿಷಯಗಳಲ್ಲೂ ಪೂರ್ಣ ಅನುಕೂಲತೆಯಿರುವುದು. ಧರ್ಮದ ಮೇಲಿನ ಶ್ರದ್ಧೆ ಬೆಳೆದು ದೇವ-ತಾರ್ಚನ, ಉಪಾಸನ ಮತ್ತು ಯೋಗ ಮಾರ್ಗದ ಕಡೆಗೆ ಲಕ್ಷ್ಯ ಹೆಚ್ಚಾಗಿ ಹರಿಯುವುದು.

ಈ ರಾಶಿಯವರ ವಿವಾಹ ಈ ವರ್ಷ ಆಗಬೇಕಿದ್ದರೆ ಅದಕ್ಕೆ ಒಳ್ಳೆಯ ಬಾಸಿಂಗಬಲವಿದೆ. ಎದುರು ಪಕ್ಷದ ವಧು ಅಥವಾ ವರ ಹೆಚ್ಚು ಸುಸ್ಥಿತಿಯುಳ್ಳರುವರು. ಅಲ್ಲದೆ ವಿವಾಹವು ಅಲ್ಪ ಪರಿಚಿತ ಮಿತ್ರನೊಬ್ಬನ ಮೂಲಕ ಹೊಂದುವುದಲ್ಲದೆ ವ್ಯವಸ್ಥಿತ ರೀತಿಯಿಂದ ಹಾಗು ಒಳ್ಳೆಯ ವೈಭವದಿಂದ ಜರುಗುವುದು. ವಧು ಅಥವಾ ವರರು ಪರಸ್ಪರ ಪೂರ್ಣ ಅನುರೂಪರಿರುವರಲ್ಲದೆ ಗುಣ ಹಾಗು ಬುದ್ಧಿಯಿಂದ ಉತ್ತಮರಿರುವರು.

ಈ ರಾಶಿಯವರ ಮಕ್ಕಳ ವಿವಾಹ ಮಾಡುವುದಿದ್ದಲ್ಲಿ ಅದಕ್ಕೂ ಉತ್ತಮ ಬಾಸಿಂಗಬಲವಿದೆ. ಆದ್ದರಿಂದ ವಿವಾಹವು ಅಲ್ಪಾಯಾಸದಿಂದಲೇ ಕೂಡಿಬಂದು ಹದಿನೈದಿಪ್ಪತ್ತು ದಿನಗಳಲ್ಲಿಯೇ ಮನಸ್ಸಿನಂತೆಯೇ ಜರುಗುವುದು. ಆದರೆ ವಿವಾಹಸ್ಥಳವು ಮಾತ್ರ ಬಹು ದೂರವಿರುವ ಸಂಭವವಿದೆ. ಎದುರು ಪಕ್ಷದವರು ಮಾತ್ರ ತೀರ ಜಿಪುಣರಿರುವಂತಿದೆ. ಸೊಸೆ ಅಥವಾ ಅಳಿಯ ರೂಪದಿಂದ ಸಾಮಾನ್ಯರೆನಿಸಿದರೂ ಗುಣ ಹಾಗು ದೈವದಿಂದ ಬಹು ಉತ್ತಮರೆನಿಸುತ್ತಾರೆ.

ಅದರಂತೆಯೇ ಮಕ್ಕಳಲ್ಲಿ ಬಹುತರರಿಗೆ ಈ ವರ್ಷವು ಲೌಕಿಕ ಉತ್ಕರ್ಷದ್ದೆನಿಸಲಿದೆ. ಅದರಲ್ಲಿಯೂ ಹೆಣ್ಣುಮಕ್ಕಳ ವಿಷಯದಲ್ಲಿ ಇದು ಹೆಚ್ಚು ಉತ್ತಮವೆನಿಸಲಿದೆ. ಮಕ್ಕಳಲ್ಲಿ ಒಬ್ಬರಿಗಾದರೂ ದೂರದ ಅಥವಾ ಪರದೇಶ ಪ್ರವಾಸದ ಯೋಗವಿದೆ. ಅಲ್ಲದೆ ಅವರೆಲ್ಲರದೂ ನಿಮ್ಮೊಂದಿಗೆ ವರ್ಷವಿಡೀ ಎಲ್ಲ ವಿಷಯಗಳಲ್ಲೂ ಒಳ್ಳೆಯ ಮತ್ತೈಕ್ಯವಿರುವುದು. ಪ್ರಾಯಶಃ ಅವರ ಉತ್ಕರ್ಷಕ್ಕೆ ವರ್ಷಾರಂಭದಿಂದ ನವೆಂಬರ್ ೨೯ ರ ವರೆಗೆ ಅಥವಾ ಫೆಬ್ರುವರಿ ೮ ರಿಂದ ಮಾರ್ಚ ೪, ಮಾರ್ಚ ೨೯ ರಿಂದ ಎಪ್ರಿಲ್ ೨೨, ಮೇ ೧೬ ರಿಂದ ಜೂನ್ ೭, ಜುಲೈ ೬ ರಿಂದ ಅಗಸ್ಟ ೨ ಹಾಗೂ ಸಪ್ಟೆಂಬರ್ ೧ ರಿಂದ ವರ್ಷಾಂತ್ಯದ ವರೆಗಿನ ಅವಧಿಯು ಉತ್ತಮವೆನಿಸಲಿದೆ.


ಉದ್ಯೋಗಕ್ಕಂತೂ ಈ ವರ್ಷವು ಅತ್ಯಮೂಲ್ಯವೆನಿಸಲಿದೆ. ವ್ಯಾಪಾರಿಗಳು, ಶ್ರಮಜೀವಿಗಳು ಹಾಗು ಬುದ್ಧಿಜೀವಿಗಳಲ್ಲಿ ಯಾವುದೇ ಬಗೆಯ ಉದ್ಯೋಗದಲ್ಲಿ ಇರುವರಿಗೂ ಸಂಸ್ಮರಣೀಯ ಯಶಸ್ಸು ದೊರೆಯುವುದಲ್ಲದೆ ಪತ್ತು ಪ್ರತಿಷ್ಠೆಗಳೂ ಬಹುವಾಗಿ ವೃದ್ಧಿಸುವವು ಹಾಗು ದ್ರವ್ಯಲಾಭವು ಅಂದಾಜಿಗಿಂತ ಹತ್ತುಪಟ್ಟಾದರೂ ಹೆಚ್ಚಾಗುವುದು ನಿಶ್ಚಿತ. ಯೋಜಿಸಿದಂತೆ ಸಹಜವಾಗಿಯೆ ಸಂಗ್ರಹ ಸಾಧ್ಯವಾಗುವುದು. ನೌಕರದಾರರಿಗೆ ಕೆಲಸದ ಭಾರ ಹೆಚ್ಚಾಗಬಹುದಾದರೂ ಬಡತಿ ನಿಶ್ಚಿತ ದೊರೆಯುವುದಲ್ಲದೆ ಬದಲಿಯಾದರೆ ಅದು ಪೂರ್ವಕಲ್ಪನೆಗಿಂತಲೂ ಹೆಚ್ಚು ಸುಖ ಸೌಕರ್ಯಗಳಿದ್ದ ಸ್ಥಳಕ್ಕೆಯೆ. ಅದರಂತೆಯೆ, ವರ್ಷಾರಂಭದಲ್ಲಿ ಅಷ್ಟಮೇಶ ಶನಿಯು ನೀಚನಾಗಿರುವನಾದರೂ ಲಾಭಸ್ಥಾನದಲ್ಲಿರುವುದರಿಂದ, ಹಾಗು ಲಾಭೇಶ ಮಂಗಳನು ಅಷ್ಟಮದಲ್ಲಿ ಉಚ್ಚನಾಗಿದ್ದು ಈ ರೀತಿ ಅನ್ಯೋನ್ಯಾಶ್ರಯವೆಂಬ ಬಲಿಷ್ಠ ಯೋಗವೇರ್ಪಟ್ಟು ಬಹುತರರಿಗೆ ಅವರವರ ಜನ್ಮಕಾಲದ ಗ್ರಹಬಲವನ್ನನುಸರಿಸಿ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಆಕಲ್ಪಿತ ಲಾಭ ನಿಶ್ಚಿತ ದೊರೆಯುವುದು. ಅಂತೆಯೆ ಲಾಟರಿ, ರೇಸ್ ಮುಂತಾದವುಗಳಲ್ಲಿ ಪ್ರಯತ್ನವನ್ನು ಅವಶ್ಯ ಮಾಡಬಹುದು. ವರಿಷ್ಠ

ಅಥವಾ ಆಶ್ರಯದಾತರು ನಿಮ್ಮೊಂದಿಗೆ ತುಂಬ ಸೌಜನ್ಯದಿಂದ ವರ್ತಿಸುವರಾದರೆ ಕೈಕೆಳಗಿನ ಸೇವಕರು ಅಥವಾ ಆಶ್ರಿತರು ತೀರ ಆತ್ಮೀಯತೆಯಿಂದಿರುವರು. ವಿಶೇಷತಃ ಜನವರಿ ೧೫ರ ವರೆಗೆ ಹಾಗು ನಂತರ ಫೆಬ್ರುವರಿ ೨೫ ರಿಂದ ಎಪ್ರಿಲ್ ೮, ಮೇ ೨೩ ರಿಂದ ಜುಲೈ ೯ ಮತ್ತು ಆಗಸ್ಟ್ ೨೫ ರಿಂದ ಅಕ್ಟೋಬರ್ ೧೨ರ ವರೆಗಿನ ಕಾಲವು ಹೆಚ್ಚು ಲಾಭದಾಯಕವೆನಿಸಲಿದೆಯಲ್ಲದೆ ಪ್ರತಿಷ್ಠೆಯೂ ಹೆಚ್ಚುವುದು. ಮಿತ್ರರಲ್ಲಿ ಕೆಲವರಾದರೂ ಹಿತಶತ್ರುಗಳಾಗುವುದು ಕಂಡು ಬರಬಹುದು. ಮನಸ್ಸಿನಲ್ಲೆಳ್ಳಷ್ಟೂ ಇಲ್ಲದಿದ್ದಾಗಲೂ ಎರಡು ಅಥವಾ ಅದಕ್ಕೂ ಹೆಚ್ಚು ಸಲ ಆಕಸ್ಮಾತ್ ಯಾತ್ರಾಯೋಗವಿದೆ. ಬಂಧುಗಳ ಆರೋಗ್ಯ ಈ ವರ್ಷ ಕಿರಿಕಿರಿಯದೇ ಆಗಿರುವುದಲ್ಲದೆ ನಿಮ್ಮೊಂದಿಗೆ ಅಷ್ಟಾಗಿ ಅವರು ಕೂಡಿ ನಡೆಯುವುದೂ ಇಲ್ಲ. ಉತ್ತಮ ವಾಹನಸುಖ ಸಿಕ್ಕುವುದಲ್ಲದೆ ಅನೇಕರು ಸ್ವತಃ ಕೊಂಡುಕೊಳ್ಳುವ ಸಂಭವವೂ ಇದೆ. ಆಪ್ತರಿಂದ ಪ್ರೀತಿ ಕಂಡುಬರುವದು.

ದಾವೆ, ಫಿರ್ಯಾದಿ ಹಾಗು ಇತರ ಸ್ಪರ್ಧೆಯ ಕೆಲಸಗಳಲ್ಲಿ ಹದಿನಾರಾಣೆಗಳಲ್ಲಿ ಕನಿಷ್ಠ ಹತ್ತು ಹನ್ನೆರಡಾದರೂ ಒಳ್ಳೆಯ ಯಶಸ್ವಿಯಾಗುವ ಯೋಗವಿದೆ. ಬಹುಶಃ ಡಿಸೆಂಬರ್ ೩ರಿಂದ ಜನವರಿ ೧೫. ಫೆಬ್ರುವರಿ ೨೫ ರಿಂದ ಎಪ್ರಿಲ್ ೮ ಹಾಗು ಆಗಸ್ಟ್ ೨೫ ರಿಂದ ಅಕ್ಟೋಬರ್ ೧೨ರ ವರೆಗಿನ ಕಾಲವು ಹೆಚ್ಚು ಯಶಸ್ವಿಯೆನಿಸಲಿದೆ.

ಈ ರಾಶಿಯ ಗರ್ಭವತಿಯರಲ್ಲಿ ಬಹುತರರಿಗೆ ಗಂಡುಮಗುವಾಗುವ ಯೋಗವಿದೆ. ನವೆಂಬರ್ ೨೫ಕ್ಕೆ ಮೊದಲು ಅಥವಾ ಫೆಬ್ರುವರಿ ೮ ರಿಂದ ಮಾರ್ಚ್ ೩, ಮಾರ್ಚ್ ೨೯ರಿಂದ ಎಪ್ರಿಲ್ ೨೨, ಮೇ ೧೬ ರಿಂದ ಜುಲೈ ೬ ಹಾಗು ಆಗಸ್ಟ್ ೩೧ರ ನಂತರ ಪ್ರಸೂತರಾದರೆ ಎಷ್ಟೂ ಕಷ್ಟವೆನಿಸುವುದಿಲ್ಲ ಮಾತ್ರವಲ್ಲ, ಜನಿಸುವ ಮಗು ತುಂಬ ದೀರ್ಘಾಯುಷಿಯೂ ಆಗಿರುವುದು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಡಿಸೆಂಬರ್ ೫ ರಿಂದ ೨೫, ಮಾರ್ಚ್ ೨ ರಿಂದ ೧೮ ಹಾಗು ಜೂನ್ ೨೫ ರಿಂದ ಜುಲೈ ೨೮ರ ವರೆಗಿನ ಅವಧಿಯಲ್ಲಾದರೆ ಪ್ರಥಮ ಅಥವಾ ದ್ವಿತೀಯ ಶ್ರೇಣಿ ದೊರೆಯುವುದು ಖಂಡಿತ. ಇತರ ವೇಳೆಯಲ್ಲಾದರೆ ಈ ರಾಶಿಯವರಲ್ಲಿ ಕನಿಷ್ಠ ನೂರಕ್ಕೆ ೬೦ರಷ್ಟಾದರೂ ಉತ್ತೀರ್ಣರಾಗುವರು ಎಂಬಷ್ಟು ಬಲಿಷ್ಠ ಯೋಗವಿದೆ.



ಕರ್ಕ

ಒಟ್ಟಿನಲ್ಲಿ ಈ ರಾಶಿಯವರಿಗೆ ಈ ವರ್ಷವು ಲಾಭಕ್ಕೆ ಹಾಗು ಇಚ್ಛಿತ ಕಾರ್ಯಗಳಲ್ಲಿ ಯಶಸ್ಸಿಗೆ ಸರ್ವಸಾಧಾರಣ ಚೆನ್ನಾಗಿರುವುದಾದರೂ ಇತರ ವಿಷಯಗಳಲ್ಲಿ ತುಂಬ ಕಷ್ಟಕರವೂ ಕೋಪವು ಗಳಿಗೆಯಲ್ಲಿ ಪ್ರಿಯ ವನ್ನುಂಟುಮಾಡುವಂತಹ ಘಟನೆಗಳಿಂದ ಕೂಡಿದ್ದೂ ಆಗಿದೆಯೆಂದು ತಿಳಿಯಬೇಕು.

ವರ್ಷವಿಡೀ ಈ ರಾಶಿಯಲ್ಲಿಯ ಅನೆಯ ರಾಹುವು ಆರೋಗ್ಯಕ್ಕೆ ಅಷ್ಟೊಂದು ಅನುಕೂಲ ನಲ್ಲ. ಅಲ್ಲದೆ ಅವನು ಜಾತ್ಯಾ ವಕ್ರಗತಿಯುಳ್ಳವನೇ ಆಗಿರುವುದರಿಂದ ಅನಾರೋಗ್ಯ ನಿಶ್ಚಿತವಾಗಿಯೂ ಯಾವುದೆಂಬುದನ್ನು ಗುರುತಿಸುವುದು ನಾ ನಾ ಎಂಬುವಂತಹ ಡಾಕ್ಟರರಿಗೆ ಸಹ ಅಷ್ಟೊಂದು ಸರಿಯಾಗಿ ಸಾಧ್ಯವಾಗಲಿಕ್ಕಿಲ್ಲ. ಮುಖ್ಯವಾಗಿ ವಾತಮೂಲವಾದ ಅಸ್ವಾಸ್ಥ್ಯವುಂಟಾಗಬಹುದಲ್ಲದೆ ಆಗೀಗ ಪಿಶಾಚಪೀಡೆಯ ತೊಂದರೆಯೂ ಆಗಬಹುದು. ಅನೇಕ ಅಶುಭ ಸೂಚಕ ಸ್ವಪ್ನಗಳನ್ನು ಕಾಣಬಹುದಾಗಿದೆ. ಆದರೆ ಅಷ್ಟಮೇಶ ಶನಿಯ ಮೇಲೆ ಹಾಗು ಅಸ್ತಾನದಲ್ಲಿರುವ ರಾಹುವಿನ ಮೇಲೆ ಗುರುವಿನ ಶುಭಪ್ರದ ದೃಷ್ಟಿಯಿರುವುದರಿಂದ ಗಂಡಾಂತರದ ಭಯ ಮಾತ್ರ ಎಷ್ಟೂ ಇಲ್ಲ. ಕ್ಲೇಶಪರಿಹಾರಾರ್ಥ ರಾಹುವಿನ ಎರಡುಪಟ್ಟು ಅಂದರೆ ೩೬,೦೦೦ ಜಪ ಮಾಡಬೇಕು ಮತ್ತು ವಿಧುರ ಬ್ರಾಹ್ಮಣರಿಗೆ ಯಥಾಶಕ್ತಿ ಒಳ್ಳೆಯ ದಾನ ಮಾಡಬೇಕು. ಇತರ ವಿಷಯಗಳಲ್ಲಿ ದೇಹಸುಖಕ್ಕೆ ಈ ವರ್ಷವು ಮಧ್ಯಮ ಪ್ರತಿಯದಾಗಿದೆ. ಇದ್ದುದರಲ್ಲಿಯೇ ನವೆಂಬರ್ ೨೯ರ ವರೆಗಿನ ಹಾಗು ನಂತರ ಜನವರಿ ೧೬ ರಿಂದ ಫೆಬ್ರುವರಿ ೮, ಮಾರ್ಚ್ ೨೯ ರಿಂದ ಏಪ್ರಿಲ್ ೨೨, ಜೂನ್ ೧೦ ರಿಂದ ಜುಲೈ ೬ ಹಾಗು ಆಗಸ್ಟ್ ೩೦ ರಿಂದ ಅಕ್ಟೋಬರ್ ೩೦ರ ವರೆಗಿನ ಕಾಲವು ಹೆಚ್ಚು ಸುಖ ಸಮಾಧಾನದ್ದೆನಿಸಲಿದೆ.

ಭಾರ್ಯಾಸ್ಥಾನದಲ್ಲಿ ಉಚ್ಚ ಮಂಗಳನಿರುವುದಲ್ಲದೆ ಸ್ತ್ರೀಸುಖದರ್ಶಕ ಶುಕ್ರನು ಚತುರ್ಥದಲ್ಲಿ ಸ್ವರಾಶಿಯಾದ ತುಲಾದಲ್ಲಿರುವುದರಿಂದ ಹಾಗು ಭಾರ್ಯಾಸ್ಥಾನವು ಸ್ವಸ್ವಾಮಿ ಶನಿಯಿಂದ ದೃಷ್ಟವಿರುವುದರಿಂದ ಅನೇಕ ವಿಷಯಗಳಲ್ಲಿ ಪ್ರಾಪಂಚಿಕಸುಖ ತೊಂದರೆಯೆನಿಸಿದಾಗಲೂ ಉತ್ತಮ ಸ್ತ್ರೀಸುಖ ದೊರೆಯುವುದು. ಆದರೆ ಉಚ್ಚ ಮಂಗಳನ ಪ್ರಭಾವದಿಂದಾಗಿ ಎಲ್ಲ ವಿಷಯಗಳಲ್ಲಿ ಹೆಂಡತಿಯ ವರ್ಚಸ್ಸನ್ನು ಮನ್ನಿಸಲೇಬೇಕಾಗಬಹುದು. ಇದರಿಂದಾಗಿಯೇ ಮನಸ್ಸು ಆಗೀಗ ರುಷ್ಟವೂ ಉದಾಸವೂ ಆಗಿರಬಹುದು.

ಈ ರಾಶಿಯವರ ವಿವಾಹವು ಈ ವರ್ಷ ಆಗುವುದಿದ್ದಲ್ಲಿ ತುಸು ಹೆಚ್ಚು ಪ್ರಯಾಸದಿಂದೆನಿಸಿದರೂ ನಿಶ್ಚಿತ ಆಗುವುದು. ಯಾಕೆಂದರೆ, ಭಾರ್ಯೇಶ ಶನಿಯು ಗುರುವಿನ ಪೂರ್ಣ ದೃಷ್ಟಿಯಲ್ಲಿರುವುದರಿಂದ ಬಾಸಿಂಗಬಲವು ಮಧ್ಯಮವಾಗಿದೆ. ವಧು ಇಲ್ಲವೆ ವರ ರೂಪದಿಂದ ಸಾಮಾನ್ಯರೆನಿಸಿದರೂ ಗುಣ ಹಾಗೂ ಕರ್ತೃತ್ವದ ದೃಷ್ಟಿಯಿಂದ ಚೆನ್ನಾಗಿಯೇ ಇರುವರು. ಆದರೆ ವಿವಾಹ ಪೂರ್ಣ ಮುಗಿಯುವ ವರೆಗೆ ಅನೇಕ ಅನಿರೀಕ್ಷಿತ ಅಡೆತಡೆಗಳು ಸಹ ಬಂದು ಮನಸ್ಸಿನಲ್ಲಿಯೇ ಗೊಂದಲವುಂಟಾಗಿ ನಿರಸವಾಗಬಹುದು. ಆದರೆ ವಿವಾಹವು ಮಾತ್ರ ಪೂರ್ವಯೋಜನೆಯಂತೆಯೇ ವ್ಯವಸ್ಥಿತ ರೀತಿಯಲ್ಲಿ ಜರುಗುವುದು.


ಈ ರಾಶಿಯವರ ಮಕ್ಕಳ ವಿವಾಹ ಮಾಡುವುದಿದ್ದಲ್ಲಿ ಬಹು ಬೇಗನೆ ಹೊಂದುವುದಾದರೂ ಕೆಲವು ನಿರೀಕ್ಷಿತ ಆತಂಕಗಳೇ ಬಂದು ವಾಸ್ತವದಲ್ಲಿ ಬಹಳ ದಿನಗಳ ನಂತರ ನೆರವೇರುವುದು. ಆದರೆ ಈ ಬಗ್ಗೆ ಎರಡೂ ಪಕ್ಷಗಳಲ್ಲಿ ಅಸಮಾಧಾನಕ್ಕೆ ಮಾತ್ರ ಎಡೆಯಿರುವುದಿಲ್ಲ. ಸೊಸೆ ಇಲ್ಲವೆ ಅಳಿಯ ರೂಪದಿಂದ ಸುಂದರರೂ ಒಳ್ಳೆಯ ಬುದ್ಧಿವಂತರೂ ಸುಸಂಸ್ಕೃತರೂ ಆಗಿ

ಕುವುರಾದರೂ ಸ್ವಭಾವದಿಂದ ಮಾತ್ರ ಮೋಸ ಹಿಕರಾಯರಾಗಿರುವ ಸಂಭವವಿದೆ. ಮಕ್ಕಳ ಉನ್ನತಿಗೆ ಈ ವರ್ಷವು ಉತ್ತಮವೇ ಇದ್ದು ಅದು ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳ ಉನ್ನತಿಗೆಯೇ ಹೆಚ್ಚು ಕಾರಕವಾಗಿದೆ. ಅಲ್ಲದೆ ತಿವ್ಯೊಂದಿಗೆ ಸಹ ಹೆಣ್ಣುಮಕ್ಕಳೇ ಹೆಚ್ಚು ಸಹಮತರಾಗಿರುತ್ತಾರೆ.

ಉದ್ಯೋಗದಲ್ಲಿ ಈ ರಾಶಿಯವರಿಗೆ ಈ ವರ್ಷವು ಅತ್ಯಂತ ಲಾಭದಾಯಕವೆನಿಸುವುದಾದರೂ ದ್ವಿತೀಯ ಅಂದರೆ ಧನಸ್ಥಾನದ ಕೇತುವಿನಿಂದಾಗಿ ಅದರಲ್ಲಿಯ ಶತಾಂಶದಷ್ಟು ಸಹ ಸಂಗ್ರಹ ಸಾಧ್ಯವಾಗುವುದಿಲ್ಲ. ಮನಸ್ಸಿನಲ್ಲಿಲ್ಲದಿದ್ದಾಗಲೂ ಯೋಗ್ಯ ಹಾಗೂ ಅಯೋಗ್ಯ ವೆಚ್ಚದ ಅನೇಕ ಪ್ರಸಂಗಗಳು ದೊಡ್ಡ ಪ್ರಮಾಣದಲ್ಲಿಯೇ ಉದ್ಭವಿಸುತ್ತಲಿರುವವು. ಮನೆಯಲ್ಲಿ ಯಾರೊಂದಿಗಿಯೂ ಅಷ್ಟೊಂದು ಕೂಡಿ ನಡೆಯದಿದ್ದಾಗಲೂ ಪ್ರತಿಯೊಬ್ಬರ ಆಶೆ ಆಕಾಂಕ್ಷೆಗಳನ್ನು ಈಡೇರಿಸುವುದಕ್ಕೆಂದು ಹಣ ವೆಚ್ಚ ಮಾಡಲೇಬೇಕಾಗುವುದು. ವರ್ಷವಿಡೀ ಇರುವ ನಾಲ್ಕನೆಯ ಗುರುವಿನಿಂದಾಗಿ ಸಮೀಪದ ಆಪ್ತರಿಗೆ ಛಿಡೆ-ಮುರವತ್ತುಗಳಿಗೊಳಗಾಗಿ ಸಹಾಯ ಮಾಡಬೇಕಾದ ಪ್ರಸಂಗಗಳು ಬರಬಹುದು. ವ್ಯಾಪಾರೀವರ್ಗಕ್ಕೆ ಕೈತುಂಬ ಲಾಭವಾಗುವಂತೆಯೆ ಅವರು ವೆಚ್ಚದೆದುರು ಮಂಡೆಯೂರಬೇಕಾಗುತ್ತದೆ. ಪ್ರಾಮಾಣಿಕರೂ ಕರ್ತವ್ಯತತ್ಪರರೂ ಆದ ನೌಕರರಲ್ಲಿ ಕೆಲವರು ಕ್ಷುಲ್ಲಕ ಕಾರಣಗಳಿಗಾಗಿ ಮನಸ್ಸು ಕಹಿ ಮಾಡಿಕೊಂಡು ಕೊನೆಯ ಗಳಿಗೆಯಲ್ಲಿ ನೌಕರಿ ಬಿಟ್ಟು ಹೋಗಬಹುದು. ಪರಸ್ಪರ ತಪ್ಪು ತಿಳುವಳಿಕೆಗಳಿಂದಾಗಿ ವ್ಯಾಪಾರದ ಕೇಂದ್ರಗಳನ್ನೂ ಬದಲಿಸುವ ಪ್ರಸಂಗ ಬರಬಹುದು. ಮನಸ್ಸಿನಂತೆಯೆ ಬಹುತರ ವಿಷಯಗಳು ಕೈಗೂಡಿದಾಗಲೂ ಮನಸ್ಸಿಗೆ ಆಗಬೇಕಾದಷ್ಟು ಸಮಾಧಾನವಾಗಲಿಕ್ಕಿಲ್ಲ. ಹೊಸ ವಾಹನವೊಂದನ್ನು ಕೊಳ್ಳುವ ಯೋಗವಿದೆಯಾದರೂ ಅದರಿಂದ ಸುಖಕ್ಕೆ ಬದಲು ತೊಂದರೆಯೆ ಹೆಚ್ಚಾಗುವ ಸಂಭವವಿದೆ. ನೌಕರದಾರರಿಗೆ ಮಾತ್ರ ಸ್ವತಂತ್ರ ಉದ್ಯೋಗಸ್ಥರಿಗಿಂತ ತೊಂದರೆ ಕಡಿಮೆಯೆನಿಸುವುದು. ವರಿಷ್ಠರಿಂದ ಕೆಲವೊಮ್ಮೆ ವಿನಾಕಾರಣ ಅನಿಸಿಕೊಳ್ಳಬೇಕಾಗಿ ಬರಬಹುದಾದರೂ ಅದರಿಂದ ಹಾನಿಯೆಷ್ಟೂ ಅಗದೆಯೆ ತದ್ವಿರುದ್ಧ ಭಾವೀ ಪ್ರಗತಿಗೆ ಪೋಷಕವೆನಿಸುವಂತಹ ಶಿಫಾರಸೇ ದೊರೆಯಬಹುದು. ಬಹುಶಃ ಬದಲಿಯಾಗುವುದಲ್ಲದೆ ಅದು ಬಲು ದೂರದ ಊರಿಗೆ ಆಗುವುದರಿಂದ ತುಂಬ ಗೊಂದಲಕ್ಕಿಟ್ಟು ಮನಸ್ಸಿಗೆ ವಿರಸವೆನಿಸಬಹುದು. ಆದರೆ ಆ ಊರಲ್ಲಿ ಎಲ್ಲವೂ ಸುವ್ಯವಸ್ಥಿತವಾಗಿಯೂ ಸುಖದಿಂದಲೂ ನಡೆಯುವುದು. ಬಡತಿ ಸಹ ದೊರೆಯುವುದಿಲ್ಲ, ಒಂದು ವೇಳೆ ದೊರೆತರೂ ಅದು ತಾತ್ಪೂರ್ತಿಕವೆನಿಸಲಿದೆ. ಕೇವಲ ಲಾಭದ ದೃಷ್ಟಿಯಿಂದ ನೋಡಿದರೆ ವರ್ಷಾರಂಭದಿಂದ ಡಿಸೆಂಬರ್ ೨೩ ರ ವರೆಗೆ ಅಥವಾ ಜನೆವರಿ ೧೬ ರಿಂದ ಎಪ್ರಿಲ್ ೨೨ ಇಲ್ಲವೆ ಜೂನ್ ೧೦ ರಿಂದ ಜುಲೈ ೬ ರ ವರೆಗಿನ ಕಾಲವು ಅನುಕೂಲವೆನಿಸಿದೆಯಾದರೂ ಈ ಅವಧಿಯಲ್ಲಿ ಅಷ್ಟರ ಮಟ್ಟಿಗೆ ನಿಮ್ಮ ಮೈತ್ರಿಯನ್ನು ಬೆಳೆಯಿಸುವವರೂ ಬಹಳ. ಯಾವುದೇ ಧಾರ್ಮಿಕ ಕಾರ್ಯದಲ್ಲಿ ಒಂದಿಲ್ಲೊಂದು ಕಾರಣದಿಂದಾಗಿ ಕೊನೆಯ ಗಳಿಗೆಯಲ್ಲಿ ಮನೋಭಂಗವಾಗುತ್ತಲೇ ಇರುವುದು. ಮನಸ್ಸಿನಲ್ಲಿದ್ದರೂ ಯಾವುದೇ ಯಾತ್ರೆ ಅಥವಾ ಅಪೇಕ್ಷಿತ ಪ್ರವಾಸ ಸಾಧ್ಯವಾಗುವುದಿಲ್ಲ. ಆದರೆ ರಾಹು ಮತ್ತು ಗುರು ಇವರ ತ್ರಿಕೋಣಾತ್ಮಕ ಶುಭಯೋಗವಾಗಿರುವುದರಿಂದ ಕನಸು ಮನಸ್ಸಿನಲ್ಲಿಲ್ಲದಿದ್ದಂಥಲ್ಲಿಯೂ ಸಾಧು ಸತ್ಪುರುಷರ ಭೆಟ್ಟಿಯು ಸಂಭವಿಸಬಹುದಾಗಿದೆ. ಅತ್ತೆಯ ಮನೆಯ ಜನರಿಂದ ಬಹಳ ಉಪದ್ರವವಾಗಬಹುದಾಗಿದೆ.

ಈ ರಾಶಿಯ ಗರ್ಭವತಿಯರಲ್ಲಿ ಬಹುತರರಿಗೆ ಹೆಣ್ಣುಮಗುವಾಗುವ ಯೋಗವಿದ್ದರೂ ಪ್ರಸೂತಿ ಅಷ್ಟೇನೂ ಕಷ್ಟಕರವಲ್ಲ. ಆದರೆ ಬಾಣಂತನದಲ್ಲಿ ಒದಗಬೇಕಾದ ಎಲ್ಲ ಸೌಕರ್ಯಗಳೂ ಸರಿಯಾಗಿ ಒದಗದಿರುವುದರಿಂದ ತುಸು ತೊಂದರೆಯೆನಿಸಬಹುದಾಗಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಡಿಸೆಂಬರ್ ೩೧ ರಿಂದ ಫೆಬ್ರುವರಿ ೨೫, ಮಾರ್ಚ ೨೦ ರಿಂದ ಎಪ್ರಿಲ್ ೮ ಹಾಗು ಜುಲೈ ೯ ರಿಂದ ಆಗಸ್ಟ ೨೫ ರ ವರೆಗಿನ ಅವಧಿಯಲ್ಲಾದರೆ ಉತ್ತೀರ್ಣರಾಗುವುದು ನಿಶ್ಚಿತವಾದರೂ ತಪ್ಪಿ ಒಬ್ಬಿಬ್ಬರಿಗೆ ಶ್ರೇಣಿ ದೊರೆಯಬಹುದು. ಈ ಸಲ ಈ ರಾಶಿಯ ಸಿವಿಲ್ ಮತ್ತು ಮೆಕ್ಯಾನಿಕಲ್ ಇಂಜನಿಯರಿಂಗ್ ವಿದ್ಯಾರ್ಥಿಗಳಿಗೆ ಪರೀಕ್ಷೆ ತುಂಬ ಕಠಿಣವೆನಿಸಬಹುದಾಗಿದೆ.



ಸಿಂಹ

ಒಟ್ಟಿನಲ್ಲಿ ಈ ರಾಶಿಯವರಿಗೆ ಈ ವರ್ಷವು ಸ್ತ್ರೀಸುಖಕ್ಕೆ ಅಷ್ಟೊಂದು ಚೆನ್ನಾಗಿಲ್ಲವಾದರೂ ಇತರ ಬಹುತರ ವಿಷಯಗಳಲ್ಲಿ ಒಳ್ಳೆಯ ಯಶೋದಾಯಕವೂ ಸುಖಾವಹವೂ ಆಗಿರುವುದು ನಿಶ್ಚಿತವೆಂದು ತಿಳಿಯಬೇಕು.

ಈ ವರ್ಷವಿಡೀ ಈ ರಾಶಿಯಲ್ಲಿರುವ ಕೇತುವಿನಿಂದಾಗಿ ಆರೋಗ್ಯಕ್ಕೆ ಪಿತ್ಥದಿಂದ, ರಕ್ತದ ಒತ್ತಡದಿಂದ, ಇಲ್ಲವೆ ಭೂತಚೇಷ್ಟೆಯಿಂದ ಅಥವಾ ಅಂಥದೇ ಯಾವುದಾದರೂ ಭಯಾನಕ ದೃಶ್ಯ ನೋಡುವುದರಿಂದ ತುಸು ತೊಂದರೆಯಾಗುವ ಸಂಭವವಿದೆ. ಆದರೆ ರಾಶಿಸ್ವಾಮಿ ರವಿಯು ಗುರುವಿನಿಂದ ಯುಕ್ತನೂ ಬಲಿಷ್ಠವಾದ ತೃತೀಯ ಸ್ಥಾನದಲ್ಲಿಯೂ ಇರುವುದರಿಂದ ಗಂಡಾಂತರದ ಭಯವೆಷ್ಟು ಮಾತ್ರಕ್ಕೂ ಇಲ್ಲ. ವಿಶೇಷತಃ ಜನೆವರಿ ೧೪ ರಿಂದ ಮಾರ್ಚ ೧೪, ಎಪ್ರಿಲ್ ೧೩ ರಿಂದ ಮೇ ೧೪ ಹಾಗು ಅಗಸ್ಟ ೧೭ ರ ವರೆಗಿನ ಅವಧಿಯಲ್ಲಿ ಹೆಚ್ಚು ಕಾಳಜಿಯಿಂದಿರಬೇಕಲ್ಲದೆ ಗ್ರೀಕಪರಿಹಾರ್ಥ ಕೇತುವಿನ ಸಂಖ್ಯೆ ೧೭ ೧೩.೦೦೦ ಜಪ ಮಾಡಬೇಕಲ್ಲದೆ ನಿತ್ಯ ರಾಮರಕ್ಷಾ ಅಥವಾ ಮಹಿಮ್ನಸ್ತೋತ್ರವನ್ನು ಪಠಿಸಬೇಕು. ಇತರ ವಿಷಯಗಳಲ್ಲಿ ಒಳ್ಳೆಯ ಪ್ರಾಸಂಗಿಕಸುಖ ದೊರೆಯುವುದು. ಅಲ್ಲದೆ ವರ್ಷಾರಂಭದಲ್ಲಿ ರಾಶಿಸ್ವಾಮಿ ರವಿಯೊಂದಿಗೆ ಚಂದ್ರ, ಶುಕ್ರ, ಗುರು ಹಾಗು ಬುಧ ಈ ಪಂಚಗ್ರಹಗಳು ತೃತೀಯದಲ್ಲಿರುವುದರಿಂದ ಎಂಥದೇ ಕಠಿಣವೂ ದುಸ್ಸಾಧ್ಯವೂ ಆದಂಥ ಕಾರ್ಯವನ್ನು ನಿಶ್ಚಿತ ಪೂರ್ಣಗೊಳಿಸುವೆನೆಂಬ ಆತ್ಮ-ವಿಶ್ವಾಸ, ಉತ್ಸಾಹ ಮನದಲ್ಲಿರುವವು.

ಈ ವರ್ಷ ಪಾಪಗ್ರಹವಾದ ರಾಹುವು ಭಾರ್ಯಾಸ್ಥಾನವಾದ ಸಪ್ತಮದಲ್ಲಿರುವನಲ್ಲದೆ ಅವನು ವಕ್ರಗತಿಯುಳ್ಳವನಾದ್ದರಿಂದ ಹೆಂಡತಿಯೊಂದಿಗೆ ಮೇಲಿಂದ ಮೇಲೆ ಮತವಿರೋಧವಾಗುವುದಲ್ಲದೆ ಅನೇಕ ಸಲ ಅದು ದೀರ್ಘಕಾಲ ಹೋಗಬಹುದು. ಕೆಲವೊಮ್ಮೆಯಂತೂ ನೀವು ಎಷ್ಟೇ ಪ್ರಯತ್ನಿಸಿದರೂ ನಿಮ್ಮ ಬಗ್ಗೆ ಅವಳಲ್ಲುಂಟಾದ ತಪ್ಪು ಕಲ್ಪನೆಗಳು ದೂರವಾಗುವ ಬದಲು ಹೆಚ್ಚೇ ಆಗುವ ಸಂಭವವಿದೆ. ವಿಶೇಷತಃ ಡಿಸೆಂಬರ್ ೩ ರಿಂದ ಜನೆವರಿ ೧೫, ಫೆಬ್ರುವರಿ ೨೫ ರಿಂದ ಎಪ್ರಿಲ್ ೮ ಹಾಗು ಅಗಸ್ಟ ೨೫ ರಿಂದ ಅಕ್ಟೋಬರ್ ೧೨ ರ ವರೆಗಿನ ಅವಧಿಯಲ್ಲಿ ಈ ತೊಂದರೆ ಹೆಚ್ಚು ಅನುಭವಕ್ಕೆ ಬರಬಹುದು. ಆದರೆ ಭಾರ್ಯೇಶ ಶನಿಯು ನವಮದಲ್ಲಿರುವುದರಿಂದ ಮಹತ್ವದ ಕಾರ್ಯವೊಂದರಲ್ಲಿ ಒಳ್ಳೆಯ ಮತೈಕ್ಯವಿರುವುದಲ್ಲದೆ ಅದು ಚೆನ್ನಾಗಿ ಕೈಗೂಡುವುದು. ಭಾರ್ಯಾಸ್ಥಾನ ಮತ್ತು ಶನಿ ಎರಡೂ ಗುರುವಿನಿಂದ ದೃಷ್ಟವಾಗಿರುವುದರಿಂದ ಹೆಂಡತಿಯಲ್ಲಿ ತಲೆತಿರುಕತನ ಕಂಡುಬಂದರೂ ಅವಳ ಆರೋಗ್ಯ ಸರಿಯಾಗುಳಿಯುವುದು.

ಈ ವರ್ಷ ಈ ರಾಶಿಯವರ ವಿವಾಹವಾಗುವುದಿದ್ದಲ್ಲಿ ಅದಕ್ಕೆ ಉತ್ತಮ ಬಾಸಿಂಗಬಲವಿದ್ದು ಅದು ಆಗುವುದು ನಿಶ್ಚಿತ. ಆದರೆ ಸಪ್ತಮದಲ್ಲಿ ರಾಹು ಹಾಗು ಸಪ್ತಮೇಶ ಶನಿಯು ನವಮದಲ್ಲಿದ್ದರೂ ನೀಚನಾಗಿರುವುದರಿಂದ ವಿವಾಹ ಹೊಂದುವುದಕ್ಕೆ ಅನೇಕ ಅಡ್ಡಿ ಆತಂಕಗಳು ಬರಬಹುದು. ದಂಪತಿಗಳು ಬೇಸರ ಬರುವಷ್ಟರ ಮಟ್ಟಿಗೆ ದೀರ್ಘಕಾಲ ಬೆಳೆಯುವವು. ವಧು ಅಥವಾ ವರ ರೂಪದಿಂದ ಸಾಮಾನ್ಯರೆನಿಸಿದರೂ ಉತ್ತಮ ಆರೋಗ್ಯವಂತರೂ ಬೌದ್ಧಿಕ ಕಾರ್ಯಗಳಿಗಿಂತ ಶ್ರಮದ ಕಾರ್ಯಗಳಲ್ಲಿ ಹೆಚ್ಚು ನಿಪುಣರೂ ಆಗಿರುತ್ತಾರೆ.

ಈ ವರ್ಷ ಈ ರಾಶಿಯವರ ಮಕ್ಕಳ ವಿವಾಹ ಮಾಡುವುದಿದ್ದಲ್ಲಿ ಅದು ಮಾತ್ರ ಅನಾಯಾಸ ಹೊಂದಿ ಶೀಘ್ರವೂ ಸುವ್ಯಸ್ಥಿತ ರೀತಿಯಲ್ಲಿಯೂ ಪೂರ್ಣಗೊಳ್ಳುವುದು. ಅಲ್ಲದೆ ಸಂಬಂಧವು ಆಪ್ತ ಮನೆತನದವರೊಂದಿಗೆಯೇ ಬೆಳೆದು ಬರುವುದು. ಸೊಸೆ ಅಥವಾ ಅಳಿಯ ಮನಸ್ಸಿನಂತೆಯೆ ಇರುವರು. ಅವರು ರೂಪದಿಂದ ಸಾಮಾನ್ಯರೆನಿಸಿದರೂ ಅತ್ಯಂತ ಬುದ್ಧಿವಂತರೂ ಒಳ್ಳೆಯ ಮನೋವೃತ್ತಿಗಳೂ ಇರುವುದು ಅನುಭವಕ್ಕೆ ಬರದಿರದು. ಮಕ್ಕಳ ಉತ್ಕರ್ಷಕ್ಕೆ ಸಹ ಈ ವರ್ಷವು ಉತ್ತಮವಿದ್ದು ಒಬ್ಬಿಬ್ಬರು ಶಿಕ್ಷಣ

ಅಥವಾ ನೌಕರಿಗೆಂದು ವಿದೇಶಕ್ಕೆ ಹೋಗಬೇಕಾದ ನಿಶ್ಚಿತ ಯೋಗವಿದೆ. ಹಾಗು ಇತರ ಮಕ್ಕಳು ಕೂಡ ವಯೋಮಾನಕ್ಕನುಸಾರವಾಗಿ ಉನ್ನತಿ ಮಾರ್ಗದಲ್ಲಿಯೇ ಇರುವರು. ಅವರಲ್ಲಿ ಒಬ್ಬನು ನಿಮ್ಮ ಮನಸ್ಸಿನ ವಿರುದ್ಧ ಕೆಲವು ವಿಷಯಗಳನ್ನು ಮಾಡಬಹುದಾಗಿದೆ. ಆದರೆ ಇನ್ನುಳಿದವರು ಮಾತ್ರ ನಿಮ್ಮ ಮನಸ್ಸಿನಂತೆಯೆ ನಡೆದು ಒಳ್ಳೆಯ ಸುಖ ನೀಡುತ್ತಾರೆ. ವಿಶೇಷವಾಗಿ ವರ್ಷಾರಂಭದಿಂದ ಡಿಸೆಂಬರ್ ೩ ಹಾಗು ನಂತರ ಎಪ್ರಿಲ್ ೮ ರಿಂದ ಮೇ ೨೩ ಹಾಗು ಆಗಸ್ಟ್ ೨೫ ರ ನಂತರ ವರ್ಷಾಂತ್ಯದ ವರೆಗಿನ ಕಾಲವೆಲ್ಲ ಅವರ ಉನ್ನತಿಗೆ ಅನುಕೂಲವಾಗಿದೆ.

ಉದ್ಯೋಗದಲ್ಲಿ ಈ ವರ್ಷ ನವಮದಲ್ಲಿರುವ ಶನಿಯು ನೀಚನಾಗಿರುವುದರಿಂದ ನಿಮ್ಮ ಪ್ರಾಮಾಣಿಕತೆಯ ಬಗ್ಗೆಯೆ ತುಸು ಲೋಕಾಪವಾದ ಬರಬಹುದಾದರೂ ಉತ್ಕರ್ಷ ಹಾಗು ದ್ರವ್ಯಲಾಭ ಬಹಳ ಉತ್ತಮ. ಸ್ಪರ್ಧೆಯಲ್ಲಿ ಪ್ರತಿಪಕ್ಷಿಯು ಪೂರ್ಣ ಮಣ್ಣುಮುಕ್ಕುವನು. ವ್ಯಾಪಾರವೇ ಆಗಿರಲಿ ಅಥವಾ ಬುದ್ಧಿಪ್ರಧಾನ ಇಲ್ಲವೆ ಶ್ರಮಪ್ರಧಾನ ಉದ್ಯೋಗವೇ ಆಗಿರಲಿ ಅದರಲ್ಲಿ ಬಹು ದೊಡ್ಡ ವ್ಯವಹಾರ ನಡೆದು ಸರ್ವತ್ರ ಪ್ರಸಿದ್ಧಿ ದೊರೆಯುವುದು. ನೌಕರದಾರರಿಗೆ ಮೇಲಿನ ದರ್ಜೆ ನಿಶ್ಚಿತ ದೊರೆಯುವುದು; ಆದರೆ ನಿಮಗೆ ಮನಸ್ಸಿಲ್ಲದ ಕೆಲಸ ಮಾಡಬೇಕಾಗುವುದು. ವರಿಷ್ಠರಲ್ಲಿ ಕೆಲವರು ನಿಮ್ಮ ಬಗ್ಗೆ ತುಂಬ ಸಂತುಷ್ಟರಾಗಿದ್ದರೆ ಇನ್ನಿತರರು ಅಷ್ಟೇ ಅಸಂತುಷ್ಟರಾಗಿರುವರು. ಬದಲಿಯಾದರೆ ಅದು ಅತಿ ದೂರದ ಊರಿಗಾಗುವುದು. ಆದರೆ ಅಲ್ಲಿ ಎಲ್ಲ ಸೌಕರ್ಯಗಳಿರುವಾಗಲೂ ಆ ಊರು ನಿಮ್ಮ ಮನಸ್ಸಿಗೆಯೆ ಬಾರದಿರುವುದರಿಂದ ಮನಸ್ಸು ಸದಾಕಾಲವೂ ಉದಾಸ ಹಾಗು ತೊಂದರೆಯಲ್ಲೇ ಇರುವುದು. ಒಂದೆರಡು ಯಾತ್ರೆಗಳು ಜರುಗಬಹುದಲ್ಲದೆ ವಿವಾಹಾದಿ ಮಂಗಲಕಾರ್ಯಗಳು ಆಗಬಹುದು. ಲಾಭಕ್ಕೆ ವಿಶೇಷತಃ ಡಿಸೆಂಬರ್ ೫ ರಿಂದ ೨೫, ಜನೆವರಿ ೧೧ ರಿಂದ ಫೆಬ್ರುವರಿ ೮, ಮಾರ್ಚ್ ೨ ರಿಂದ ೧೮, ಎಪ್ರಿಲ್ ೨ ರಿಂದ ಜೂನ್ ೬, ಜೂನ್ ೨೫ ರಿಂದ ಜುಲೈ ೧೧ ಹಾಗು ಜುಲೈ ೨೮ ರ ನಂತರದ ಕಾಲ ಉತ್ತಮವಾಗಿದೆ. ವಾಹನವಿದ್ದರೂ ಅದರಿಂದ ಮನಸ್ಸಿನಂತೆ ಸುಖ ಸಿಗುವುದಿಲ್ಲ. ನಿಮಗಿಂತಲೂ ಪರಕೀಯರಿಗೆಯೇ ಅದರ ಉಪಯೋಗ ಹೆಚ್ಚಾಗಿ ಆಗಬಹುದಾಗಿದೆ.

ದಾವೆ, ಫಿರ್ಯಾದಿ ಇಲ್ಲವೆ ಇತರ ಸ್ಪರ್ಧೆಯ ಕೆಲಸಗಳಲ್ಲಿ ಸುಮಾರು ರೂಪಾಯಿಯಲ್ಲಿ ೧೪ ಅಣೆಗಳಷ್ಟು ಯಶಸ್ಸು ದೊರೆಯಬಹುದಾಗಿದೆ. ಪ್ರತಿಸ್ಪರ್ಧಿಗಳಲ್ಲಿ ಕೆಲವರಂತೂ ಕಾಯಮವಾಗಿಯೆ ನಿರ್ವಿಣ್ಣರಾಗಿಬಿಡುವ ಯೋಗವಿದೆ.

ಈ ರಾಶಿಯ ಗರ್ಭವತಿಯರಿಗೆ ಪ್ರಸೂತಿ ಕಷ್ಟ ಸ್ವಲ್ಪವೂ ಆಗದೆಯೆ ಗಂಡುಮಗುವೇ ಲಭಿಸುವಂಥ ಬಲವತ್ತರವಾದ ಯೋಗವಿದೆ

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಸಪ್ಟೆಂಬರ್ ೧೬ ರಿಂದ ಡಿಸೆಂಬರ್ ೫, ಫೆಬ್ರುವರಿ ೮ ರಿಂದ ಮಾರ್ಚ್ ೧ ಹಾಗು ಜುಲೈ ೧೧ ರಿಂದ ೨೮ ರ ವರೆಗಿನ ಅವಧಿಯಲ್ಲಾದರೆ ಅವರ ಯಶಸ್ಸು ಅಷ್ಟೊಂದು ನಿಶ್ಚಿತವಲ್ಲ. ಅರ್ಥಾತ್ ಇತರ ಕಾಲದಲ್ಲಾದರೆ ಉತ್ತೀರ್ಣರಾಗುವರು ಮಾತ್ರವಲ್ಲ, ಡಿಸೆಂಬರ್ ೫ ರಿಂದ ೨೫, ಮಾರ್ಚ್ ೨ ರಿಂದ ೧೮ ಹಾಗು ಅಕ್ಟೋಬರ್ ೨ ರ ನಂತರ ಯಾರ ಪರೀಕ್ಷೆಯಾಗುವುದೋ ಅವರು ಉತ್ತಮ ಶ್ರೇಣಿಯಲ್ಲೂ ಉತ್ತೀರ್ಣರಾಗಬಹುದು.



ಕನ್ಯಾ

ಒಟ್ಟಿನಲ್ಲಿ ಈ ರಾಶಿಯವರಿಗೆ ಈ ವರ್ಷವು ಆರೋಗ್ಯ ಹಾಗು ಸ್ತ್ರೀಸುಖಕ್ಕೆ ಸಾಮಾನ್ಯವೆನಿಸಿದರೂ ಇತರ ವಿಷಯಗಳಲ್ಲಿ ಹೆಚ್ಚು ಪ್ರಯತ್ನಾನಂತರ ಹಾಗು ತುಸು ತಡವಾಗಿಯಾದರೂ ಉದ್ದೇಶ ಸಾಧಿಸುವಲ್ಲಿ ಖಂಡಿತ ಯಶ ದೊರೆಯುವುದೆಂದು ತಿಳಿಯಬೇಕು.

ವರ್ಷಾರಂಭದಲ್ಲಿ ರಾಶಿಸ್ವಾಮಿ ಬುಧನು ಆಯುರ್ವರ್ಧಕ ಸ್ಥಾನವಾದ ದ್ವಿತೀಯದಲ್ಲಿ ಹಾಗು ಗುರು, ಚಂದ್ರ, ರವಿ ಮತ್ತು ದ್ವಿತೀಯಾಧಿಪತಿ ಶುಕ್ರ ಈ ಚತುರ್ಗ್ರಹಗಳಿಂದ ಯುಕ್ತನಿರುವದರಿಂದ ೮ ನೆಯ ಶನಿಯು ಆರೋಗ್ಯಕ್ಕೆ ಅಷ್ಟೊಂದು ತೊಂದರೆದಾಯಕನಲ್ಲ. ಒಂದು ವೇಳೆ ಆರೋಗ್ಯ ತುಸು ಕೆಟ್ಟರೂ ೬ ನೆಯ ರಾಹುವಿನಿಂದಾಗಿ ಅಲ್ಪೋಪಚಾರದಿಂದಲೇ ಸುಧಾರಿಸುವುದು. ವಿಶೇಷವಾಗಿ ತಲೆನೋವು, ಉಷ್ಣವಾತಜನ್ಯ ಕ್ಲೇಶ ಹಾಗು ಅಮಶಂಕೆಯ ಬಾಧೆಯಾಗಬಹುದಾದ್ದರಿಂದ ಕ್ಲೇಶಪರಿಹಾರಾರ್ಥ ಶನಿಯ ಸಂಪೂರ್ಣ ೨೩,೦೦೦ ಜಪ ಮಾಡಬೇಕು. ಇತರ ವಿಷಯಗಳಲ್ಲಿ ಆವಶ್ಯಕ ದೇಹಸುಖ ಬಹು ಉತ್ತಮವಾಗಿ ದೊರೆಯುವುದು. ಆದರೆ ಫೆಬ್ರವರಿ ೨೫ ರಿಂದ ಎಪ್ರಿಲ್ ೮ ರ ವರೆಗಿನ ಅವಧಿಯಲ್ಲಿ ಆರೋಗ್ಯದ ಬಗ್ಗೆ ತುಸು ಹೆಚ್ಚು ಎಚ್ಚರಿಕೆ ವಹಿಸಬೇಕು. ಶಕ್ಯವಿದ್ದಷ್ಟು ಅಜೀರ್ಣವಾಗದಂತೆ ಮಿತ ಆಹಾರ ಸೇವಿಸಬೇಕು.

ಭಾರ್ಯೇಶ ಗುರುವು ವರ್ಷವಿಡೀ ಏಕತ್ರ ಕುಟುಂಬ, ಧನಸಂಗ್ರಹ, ಕಣ್ಣು ಹಾಗು ವಾಣಿ ಈ ವಿಷಯಗಳಲ್ಲಿಯ ಫಲದರ್ಶಕವಾದ ದ್ವಿತೀಯ ಸ್ಥಾನದಲ್ಲಿರುವುದರಿಂದ ಅವುಗಳಿಗೆ ಒಳ್ಳೆಯ ಪೋಷಕನಾಗಿದ್ದರೂ ಭಾರ್ಯಾಸ್ಥಾನದಿಂದ ೮ ನೆಯವನಾಗಿರುವುದರಿಂದ ಹಾಗು ಶನಿಯಿಂದ ದೃಷ್ಟನಾಗಿರುವುದರಿಂದ ಹೆಂಡತಿಯ ಆರೋಗ್ಯ ಕುರಿತು ನಿತ್ಯ ಒಂದಿಲ್ಲೊಂದು ಬಗೆಯ ತಕರಾರು ಇದ್ದದ್ದೆ. ಅಲ್ಲದೆ ಭಾರ್ಯಾಸ್ಥಾನವು ತಾತ್ಪೂರ್ತಿಕವಾಗಿ ವಕ್ರಿಯಾಗಿರುವ ಶನಿಯ ಹಾಗು ಸದಾ ವಕ್ರಿಯಾಗಿರುವ ರಾಹುವಿನ ಪ್ರಭಾವದಲ್ಲಿರುವುದರಿಂದಲೂ ಇವೆರಡೂ ಪಾಪಗ್ರಹಗಳೇ ಆಗಿರುವುದರಿಂದಲೂ ಅವಳು ಸದಾಕಾಲವೂ ಸುಳ್ಳೊ ಸರಿಯೊ ಯಾವುದಾದರೊಂದು ಭಯದಿಂದ ಪೀಡಿತಳಾಗಿಯೇ ಇರುವಳು. ಅಂತೆಯೆ, ಪರಿಹಾರಾರ್ಥ ಅವಳು ಸ್ನಾನಾನಂತರ ದತ್ತಾತ್ರೇಯನ ದರ್ಶನ ಮಾಡಬೇಕು ಹಾಗು ಬೃಹಸ್ಪತಿಸ್ತೋತ್ರ ಪಠಿಸಬೇಕು.

ಈ ರಾಶಿಯವರ ವಿವಾಹ ಈ ವರ್ಷ ಆಗಬೇಕಿದ್ದಲ್ಲಿ ಅದು ಸುಲಭದಲ್ಲಿ ಹೊಂದದೆ ಅದಕ್ಕಾಗಿ ತುಂಬ ಪರಿಶ್ರಮಪಡಬೇಕಾಗುವುದು. ಅಲ್ಲದೆ ಪ್ರತ್ಯಕ್ಷ ಅದು ಮುಗಿಯುವಲ್ಲಿ ಕೊನೆಯ ಕ್ಷಣಕ್ಕೆ ಏನಾದರೂ ಅನಿರೀಕ್ಷಿತ ಅಡೆತಡೆಗಳು ಬಂದು ಪೂರ್ವನಿಶ್ಚಿತ ಮುಹೂರ್ತ

ಹೆಸ್ಸಾಗಲಿ ದಿನವನ್ನಾಗಲಿ ಬದಲಿಸಬೇಕಾಗಬಹುದು. ಆದರೆ ವಧೂವರರು ಪರಸ್ಪರರಿಗೆ ಅನುರೂಪರಾಗಿರುವರು, ಹಾಗು ಮುಂದೆ ಒಳ್ಳೆಯ ಪ್ರೇಮದಿಂದಲೂ ಮತ್ತೈಕ್ಯದಿಂದಲೂ ಸಂಸಾರ ಮಾಡುವರು.

ಈ ವರ್ಷ ಈ ರಾಶಿಯವರ ಮಕ್ಕಳ ವಿವಾಹ ಮಾಡುವುದಿದ್ದಲ್ಲಿ ಅದಕ್ಕಾಗಿ ಕೂಡ ತುಸು ಹೆಚ್ಚು ತೊಂದರೆ ಪಡಬೇಕಾಗುವುದಲ್ಲದೆ ಅಂದಾಜಿಗಿಂತ ಹೆಚ್ಚು ವಿಲಂಬವೂ ಆದೀತು. ಸೊಸೆ ಅಥವಾ ಅಳಿಯ ಗುಣದಿಂದ ಉತ್ತಮರಾದರೂ ರೂಪದಿಂದ ಸಾಮಾನ್ಯರೇ ಆಗಿರಬಹುದು. ಮಕ್ಕಳ ಉತ್ಕರ್ಷಕ್ಕೆ ಈ ವರ್ಷದ ಮೊದಲ ಕೆಲ ದಿನಗಳು ಮಂದವಾಗಿದ್ದರೂ ಕೊನೆಕೊನೆಗೆ ಬಹಳ ಉತ್ತಮವೆನಿಸುವವು. ವಿಶೇಷವಾಗಿ ಮೇ ೨೩ ರಿಂದ ಜುಲೈ ೯ ಹಾಗು ಅಕ್ಟೋಬರ್ ೧೨ ರಿಂದ ವರ್ಷಾಂತ್ಯದ ವರೆಗಿನ ಅವಧಿಯಲ್ಲಿ ಮಕ್ಕಳ ಒಳ್ಳೆಯ ಉತ್ಕರ್ಷವಾಗುವುದು ಮಾತ್ರವಲ್ಲ, ಅವರು ನಿಮಗೆ ಸುಖ ನೀಡಲು ಸತತ ಪ್ರಯತ್ನವನ್ನೂ ಮಾಡುವರು.

ಉದ್ಯೋಗದಲ್ಲಿ ಈ ವರ್ಷ ೮ ನೆಯ ಶನಿಯಿಂದಾಗಿ ಕೆಲ ಸಲ ತೀರ ತೊಂದರೆಯ ಹಾಗು ಮನೋಭಂಗದ ಪ್ರಸಂಗಗಳನ್ನೆದುರಿಸಬೇಕಾಗುವುದಾದರೂ ಕೊನೆಯ ೨ ನೆಯ ಗುರು ಹಾಗು ೬ ನೆಯ ರಾಹು ವರ್ಷವಿಡೀ ಇರುವದಲ್ಲದೆ ವರ್ಷಾರಂಭದಲ್ಲಿಯೆ ಭಾಗ್ಯೇಶ ಹಾಗು ಧನೇಶ ಶುಕ್ರ ದೇಹೇಶ ಹಾಗು ಕರ್ಮೇಶ ಬುಧ ಮತ್ತು ಲಾಭೇಶ ಚಂದ್ರರು ಸುಖೇಶನಾದ ಗುರುವಿನೊಂದಿಗೆ ಧನಸ್ಥಾನವಾದ ದ್ವಿತೀಯದಲ್ಲಿರುವುದರಿಂದಲೂ ಪರಾಕ್ರಮೇಶ ಮಂಗಳನು ಬುದ್ಧಿಸ್ಥಾನವಾದ ಪಂಚಮದಲ್ಲಿ ಉಚ್ಚನಾಗಿರುವುದರಿಂದಲೂ ಯೋಜಿತ ಕಾರ್ಯಗಳಲ್ಲಿ ಹೆಚ್ಚಿನವುಗಳಲ್ಲಿ ಮನಸ್ಸಿನಂತೆಯೆ ಯಶಸ್ಸು ದೊರೆಯುವುದು. ಪ್ರಗತಿ, ಪ್ರತಿಷ್ಠೆ, ಲಾಭಗಳೆಲ್ಲವೂ ತುಂಬ. ಸ್ವತಂತ್ರ ಉದ್ಯೋಗಸ್ಥರು ಮತ್ತು ನೌಕರದಾರರಿಬ್ಬರಿಗೂ ಒಂದೇ ಬಗೆಯ ಫಲ ಪ್ರಾಪ್ತವಾಗುತ್ತವೆ. ನೌಕರದಾರರಿಗೆ ಬಹುಶಃ ಬದಲಿಯಾಗುವುದು; ಆದರೆ ಅದು ಒಳ್ಳೆಯ ಸೌಕರ್ಯವುಳ್ಳ ಸ್ಥಳಕ್ಕೆ. ಅಲ್ಲದೆ ಬದಲಿಯಾಗಬೇಕಾದರೆ ಪ್ರಥಮವಲ್ಲದಿದ್ದರೆ ದ್ವಿತೀಯ ದರ್ಜೆಗಾದರೂ ಬಡತಿ ದೊರೆತೇ ತೀರುವುದು. ಲಾಭದ ಮಾನದಿಂದ ಸಂಗ್ರಹವೂ ಚೆನ್ನಾಗಿಯೇ ಆಗುವುದು. ಅಲ್ಪ ಬೆಲೆಯಲ್ಲಿಯೆ ಸಂಗ್ರಾಹ್ಯವಾದ ಒಂದು ಒಳ್ಳೆಯ ವಸ್ತು ಅಥವಾ ಸ್ಥಾವರ ಆಸ್ತಿ ದೊರೆಯುವಂಥ ಪ್ರಸಂಗಗಳು ಅನೇಕ ಸಲ ಒದಗಿಬರುವ ಸಂಭವವಿದೆ. ಒಳ್ಳೆಯ ವಾಹನಸುಖ ದೊರೆಯುವುದು. ೧೨ ನೆಯ ಕೇತುವಿನಿಂದಾಗಿ ಪಾರಮಾರ್ಥಿಕದ ಕಡೆಗೆ ಲಕ್ಷ್ಯ ಹೆಚ್ಚಾಗಬಹುದು. ಹಾಗು ಆ ದಾರಿಯಲ್ಲಿರುವ ಜನರ ಸಹವಾಸ ಅಲ್ಪ ಅಥವಾ ದೀರ್ಘ ಕಾಲ ಲಭಿಸುವ ಯೋಗವೂ ಇದೆ. ಉತ್ಕರ್ಷ ಹಾಗು ಲಾಭದ ದೃಷ್ಟಿಯಿಂದ ವರ್ಷಾರಂಭದಿಂದ ಡಿಸೆಂಬರ್ ೨ ರ ವರೆಗಿನ ಹಾಗು ಅನಂತರ ಜನವರಿ ೧೫ ರಿಂದ ಫೆಬ್ರುವರಿ ೨೫, ಎಪ್ರಿಲ್ ೮ ರಿಂದ ಜುಲೈ ೯ ಹಾಗು ಅಕ್ಟೋಬರ್ ೧೨ ರ ನಂತರದ ಕಾಲ ಹೆಚ್ಚು ಅನುಕೂಲವೆನಿಸುವಂತಿದೆ. ವರಿಷ್ಠರು ಅಥವಾ ಆಶ್ರಯದಾತರೂ ಸದಾ ಸಂತುಷ್ಟರಾಗಿರುವರು, ಆದರೆ ಸೇವಕರು ಅಥವಾ ಕೈಕೆಳಗಿನವರು ಮಾತ್ರ ತುಂಬ ತೊಂದರೆ ಕೊಡುವ ಸಂಭವವಿದೆ. ನಿಮ್ಮಲ್ಲಿ ಕೆಲವೇ ಆದರೂ ಪ್ರಿಯ ಆಪ್ತರಲ್ಲಿ ಅನೇಕ ಧಾರ್ಮಿಕ ಹಾಗು ಮಂಗಲಕಾರ್ಯಗಳು ಜರುಗುವವು. ಅತ್ತೆಯ ಮನೆಯವರಿಗೆ ಮಾತ್ರ ಈ ವರ್ಷವು ಅಷ್ಟೊಂದು ಚೆನ್ನಾಗಿಲ್ಲ. ಕೆಲವರ ವಿರಹ ಅಥವಾ ವಿಯೋಗ ಸಂಭವನೀಯ. ಅದರಂತೆಯೆ ತಾಯಿಯ ಬಳಗದವರಾದ ಅನೇಕರಲ್ಲಿ ವಿತುಷ್ಟಿ. ಮಿತ್ರಸುಖ ಉತ್ತಮ. ಅಲ್ಲದೆ ಮಿತ್ರರ ಉತ್ಕರ್ಷಕ್ಕೂ ಇದು ಉತ್ತಮ ಕಾಲವಿದ್ದು ಕೆಲವರ ಉತ್ಕರ್ಷಕ್ಕೆ ನಿಮ್ಮ ಸಹಾಯವೇ ಕಾರಣೀಭೂತವಾಗಬಹುದು. ಅದರಂತೆಯೆ ಬಂಧುಗಳಲ್ಲಿ ಒಬ್ಬಿಬ್ಬರ ಒಳ್ಳೆಯ ಉತ್ಕರ್ಷವೂ ಆಗಬಹುದಾದರೂ ಅವರೊಂದಿಗೆ ನಿಮಗೆ ಅಷ್ಟಾಗಿ ಕೂಡಿ ನಡೆಯುವುದಿಲ್ಲ.

ದಾವೆ, ಫಿರ್ಯಾದಿ ಇಲ್ಲವೆ ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ೬ ನೆಯ ರಾಹುವಿನಿಂದಾಗಿ ರೂಪಾಯಿಯಲ್ಲಿ ಸುಮಾರು ೧೪ ಆಣೆಗಳಷ್ಟು ಯಶಸ್ಸು ದೊರೆಯಬಹುದು. ಶತ್ರುಗಳಲ್ಲಿ ಕೆಲವರು ವೈರವನ್ನು ತೊರೆದು ಮಿತ್ರರೂ ಆಗಬಹುದು. ಇವುಗಳಲ್ಲಿ ಯಶಸ್ಸಿಗೆ ನವೆಂಬರ್ ೨೯ ರ ವರೆಗಿನ ಹಾಗು ಅನಂತರ ಡಿಸೆಂಬರ್ ೨೩ ರಿಂದ ಜನವರಿ ೧೬, ಮಾರ್ಚ್ ೪ ರಿಂದ ೨೯, ಮೇ ೧೬ ರಿಂದ ಜೂನ್ ೧೦ ಹಾಗು ಸಪ್ಟೆಂಬರ್ ೧ ರ ನಂತರದ ಕಾಲ ಹೆಚ್ಚು ಚೆನ್ನಾಗಿದೆ.

ಈ ರಾಶಿಯ ಗರ್ಭವತಿಯರಲ್ಲಿ ಬಹುತರರಿಗೆ ಹೆಣ್ಣುಮಗುವಾಗುವ ಯೋಗವಿದ್ದು ಪ್ರಸೂತಿ ಕಷ್ಟವೂ ಆಗಬಹುದಾಗಿದೆ. ಆದರೆ ಯಾವುದೇ ಬಗೆಯಲ್ಲಿ ಪ್ರಾಣಭಯ ಮಾತ್ರ ಎಷ್ಟೂ ಇಲ್ಲವೆಂಬುದು ನಿಶ್ಚಿತ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ನವೆಂಬರ್ ೧೬ ರ ವರೆಗೆ ಅಥವಾ ಡಿಸೆಂಬರ್ ೨೫ ರಿಂದ ಜನವರಿ ೧೧, ಫೆಬ್ರುವರಿ ೮ ರಿಂದ ಮಾರ್ಚ್ ೧, ಮಾರ್ಚ್ ೧೮ ರಿಂದ ಎಪ್ರಿಲ್ ೨, ಜೂನ್ ೬ ರಿಂದ ಜುಲೈ ೧೫, ಹಾಗು ಅಕ್ಟೋಬರ್ ೨ ರ ನಂತರದ ಅವಧಿಯಲ್ಲಾದರೆ ನಿಶ್ಚಿತ ಉತ್ತೀರ್ಣರಾಗುವರು. ಆದರೆ ಜನವರಿ ೧೬ ರಿಂದ ಫೆಬ್ರುವರಿ ೮, ಎಪ್ರಿಲ್ ೨೨ ರಿಂದ ಮೇ ೧೬ ಹಾಗು ಸಪ್ಟೆಂಬರ್ ೧ ರ ನಂತರ ಪರೀಕ್ಷೆಯಾದರೆ ಉತ್ತಮ ಶ್ರೇಣಿಯೂ ದೊರೆಯುವುದು.



ತುಲಾ

ಹಿಟ್ಟಿನಲ್ಲಿ ಈ ವರ್ಷ ಮೊದಮೊದಲು ತುಂಬ ಕಷ್ಟ ಹಾಗು ಮನೋಭಂಗವನ್ನೆದುರಿಸಬೇಕಾಗುವುದಾದರೂ ಕೊನೆಗೆ ಪೂರ್ಣ ಯಶಸ್ಸು ನೀಡುವಂತಹದೊ ಭಾಗ್ಯವೃದ್ಧಿಕಾರಕವೂ ಆಗಿದೆಯೆಂದು ತಿಳಿಯಬೇಕು.

ಈ ವರ್ಷ ಈ ರಾಶಿಯ ರಾಜಯೋಗಕರ್ತನೆನಿಸಿದ ಮುಖ್ಯ ಗ್ರಹ ಶನಿಯು ವರ್ಷವಿಡೀ ಸಪ್ತಮದಲ್ಲಿ ಅಂದರೆ ತೃತೀಯ ಕೇಂದ್ರದಲ್ಲಿ ಇರುವನಾದ್ದರಿಂದ ನಾನಾ ಪ್ರಕಾರದ ಉತ್ಕರ್ಷವಾಗಬಹುದಾಗಿದೆ. ಅವನು ತನ್ನ ನೀಚ ರಾಶಿಯಾದ ಮೇಷದಲ್ಲಿರುವುದರಿಂದ ಬುದ್ಧಿ, ಪರಿಶ್ರಮ ಹಾಗೂ ಕರ್ತೃತ್ವಶಕ್ತಿಯನ್ನು ಪರೀಕ್ಷೆಗೆ ಗುರಿಮಾಡುವಂತಹ ಪ್ರಸಂಗಗಳು ಮೇಲಿಂದ ಮೇಲೆ ಬರಬಹುದು. ಆದರೆ ಭಾಗ್ಯಸ್ಥಾನದಲ್ಲಿರುವ ಮಿತ್ರರಾಶಿ ಮಿಥುನದ ಮೇಲೆ, ದೇಹಸ್ಥಾನದಲ್ಲಿ ಉಚ್ಚವಾಗಿರುವ ತುಲಾ ರಾಶಿಯ ಮೇಲೆ ಹಾಗು ಸುಖಸ್ಥಾನದಲ್ಲಿರುವ ಮಕರ ರಾಶಿಯ ಮೇಲೆ ಅವನ ಪೂರ್ಣದೃಷ್ಟಿ ಇರುವುದರಿಂದ ಎಂಥ ಪರೀಕ್ಷೆಯಲ್ಲೂ ಯಶಸ್ಸು ದೊರೆಯುವುದಲ್ಲದೆ ಅದರಿಂದ ನಿಮ್ಮ ವರ್ಚಸ್ಸು ಸಹ ಬಹುವಾಗಿ ಹೆಚ್ಚುವುದು. ಅಲ್ಲದೆ ವರ್ಷವಿಡೀ ಈ ರಾಶಿಯಲ್ಲಿರುವ ಗುರುವು ತೃತೀಯೇಶ ಅಂದರೆ ಪರಾಕ್ರಮಾಧಿಪನಾಗಿರುವುದರಿಂದ ಧೈರ್ಯ, ಸಾಹಸೀಪ್ರವೃತ್ತಿ ಹಾಗೂ ಮಹತ್ವಾಕಾಂಕ್ಷೆಗಳು ಪ್ರಶಂಸನೀಯವೆನಿಸುವಷ್ಟರ ಮಟ್ಟಿಗೆ ಇರುತ್ತವೆ. ಆದರೆ ಅವನೇ ರೋಗಸ್ಥಾನವಾದ ಷಷ್ಠದ ಸ್ವಾಮಿಯೂ ಆಗಿರುವುದರಿಂದ ಗ್ಯಾಸ್ ಅಥವಾ ಮಧುಮೇಹವಿರುವವರಿಗೆ ಮೊದಲಿಗಿಂತ ಹೆಚ್ಚು ತೊಂದರೆಯೆನಿಸಬಹುದಾಗಿದೆಯಾದರೆ ಅನೇಕರಿಗೆ ಈ ವಿಕಾರಗಳು ಹೊಸತಾಗಿ ಪ್ರಾರಂಭವಾಗಲೂಬಹುದು. ವಿಶೇಷತಃ ನವೆಂಬರ್ ೨೯ ರಿಂದ ಡಿಸೆಂಬರ್ ೨೩, ಮಾರ್ಚ್ ೪ ರಿಂದ ೨೯, ಎಪ್ರಿಲ್ ೨೨ ರಿಂದ ಮೇ ೧೬ ಹಾಗು ಆಗಸ್ಟ್ ೨ ರಿಂದ ೩೧ರ ವರೆಗಿನ ಅವಧಿಯಲ್ಲಿ ಆರೋಗ್ಯದ ಬಗ್ಗೆ ಹೆಚ್ಚು ಜಾಗ್ರತೆ ವಹಿಸುವುದು ಉತ್ತಮ. ಶಕ್ಯವಿದ್ದಷ್ಟು ಮಟ್ಟಿಗೆ ಬೆಲ್ಲ, ಸಕ್ಕರೆ ಹಾಗು ಕೊಬ್ಬುಳ್ಳ ಆಹಾರವನ್ನು ಸೇವಿಸದಿರುವುದು ಒಳಿತು. ಕ್ಲೇಶಪರಿಹಾರಾರ್ಥ ಗುರುವಿನ ಸಂಪೂರ್ಣ ೧೯,೦೦೦ ಮತ್ತು ಶುಕ್ರನ ಸಂಪೂರ್ಣ ೧೬,೦೦೦ ಜಪ ಮಾಡಬೇಕು. ವರ್ಷಾರಂಭದಲ್ಲಿಯೇ ಈ ರಾಶಿಯು ಭಾಗ್ಯೇಶ ಬುಧ, ಕರ್ಮೇಶ ಚಂದ್ರ, ಲಾಭೇಶ ರವಿ, ಪರಾಕ್ರಮೇಶ ಗುರು ಹಾಗು ಸ್ವರಾಶಿಸ್ವಾಮಿ ಶುಕ್ರ ಈ ಪಂಚಗ್ರಹಗಳಿಂದ ಯುಕ್ತವಾಗಿರುವುದರಿಂದ ಇತರ ವಿಷಯಗಳಲ್ಲಿ ದೇಹಸುಖಕ್ಕೆ ಅವಶ್ಯಕವಾಗಿರುವಂತಹ ಯಾವುದೇ ವಸ್ತುವಿನ ಅಥವಾ ಸಹಾಯದ ಕೊರತೆಯೆಂದೂ ಬೀಳದೆಯೇ ನಾಲ್ಕು ಜನರ ಕಣ್ಣಲ್ಲಿ ತುಂಬುವಂತಹ ರೀತಿಯಲ್ಲಿ ಜೀವನಮಟ್ಟನೇರುವುದು.

ಜಾಯಾಸ್ಥಾನವಾದ ಸಪ್ತಮದಲ್ಲಿರುವ ಶನಿಯು ವಕ್ರಿಯಾಗಿರುವುದರಿಂದ ಆಗಾಗ ಹೆಂಡತಿಯ ಆರೋಗ್ಯ ಕೆಡಬಹುದು; ಆದರೆ ಜಾಯೇಶ ಮಂಗಳನು ಚತುರ್ಥದಲ್ಲಿ ಉಚ್ಚನಾಗಿದ್ದು ಅವನ ಪೂರ್ಣದೃಷ್ಟಿಯು ಸಪ್ತಮದ ಮೇಲಿರುವುದರಿಂದ ಅದರಿಂದ ಅಷ್ಟೇನೂ ತೊಂದರೆಯಾಗುವದಿಲ್ಲವೆಂಬುದು ಮಾತ್ರ ನಿಶ್ಚಿತ.

ಅಲ್ಲದೆ ರಾಶಿಸ್ವಾಮಿ ಶುಕ್ರ ಹಾಗು ಮಂಗಳರು ಅನುಕ್ರಮವಾಗಿ ಸ್ವ ಹಾಗು ಉಚ್ಚರಿರುವುದರಿಂದ ಉಭಯತರಲ್ಲಿ ಎಲ್ಲ ವಿಷಯಗಳಲ್ಲಿ ಒಳ್ಳೆಯ ಮತ್ತೈಕ್ಯ ಉಳಿಯುವುದು.

ಈ ರಾಶಿಯವರ ವಿವಾಹವು ಈ ವರ್ಷ ಆಗಬೇಕಿದ್ದಲ್ಲಿ ಅದಕ್ಕೆ ಒಳ್ಳೆಯ ಬಾಸಿಂಗಬಲ ನೀಡುವಂಥ ಗುರುವು ಇರುವುದರಿಂದ ಅದು ನಿಶ್ಚಿತ ಆಗುವುದು. ಆದರೆ ವಿವಾಹಕಾರಕ ಸ್ಥಾನವಾದ ಸಪ್ತಮದಲ್ಲಿ ನೀಚ ಶನಿಯಿಂದ ಯುಕ್ತವಿರುವುದರಿಂದ ವಿವಾಹ ಪೂರ್ಣ ಪೂರಯಿಸುವ ವರೆಗೆ ಅತಿಶಯ ದಗದಗಿ ಹಾಗು ದೀರ್ಘ ಮಾತುಕತೆಗಳನ್ನು ಸಹಿಸಬೇಕಾದೀತು. ವಧು ಅಥವಾ ವರರು ರೂಪದಿಂದ ಸಾಮಾನ್ಯರೆನಿಸಿದರೂ ಗುಣದಲ್ಲಿ ಅತ್ಯಂತ ಶ್ರೇಷ್ಠ ಮಟ್ಟದವರಿದ್ದು ಪರಸ್ಪರರಲ್ಲಿ ಒಳ್ಳೆಯ ಸಾಮರಸ್ಯವಿರುವುದು.

ಈ ವರ್ಷ ಈ ರಾಶಿಯವರ ಮಕ್ಕಳ ವಿವಾಹ ಮಾಡುವುದಿದ್ದಲ್ಲಿ ಅದಕ್ಕೂ ಒಳ್ಳೆಯ ಬಾಸಿಂಗ ಬಲವಿದೆ. ಆದರೆ ಸಂತತಿಸ್ಥಾನದಲ್ಲಿರುವ ರಾಹುವಿನಿಂದಾಗಿ ಪ್ರತ್ಯಕ್ಷ ವಿವಾಹ ಮುಗಿಯುವವರೆಗೆ ಅನೇಕ ಅಡೆತಡೆಗಳನ್ನೆದುರಿಬೇಕಾಗಬಹುದು ಹಾಗು ಅದರಿಂದಾಗಿಯೇ ಮೊದಲಿನ ಮನೋತ್ಸಾಹ ಮಾತ್ರ ಉಳಿಯದು. ಕೆಲವು ಸಲ ಕೊನೆಯ ಗಳಿಗೆಯಲ್ಲಿ ವಧು ಇಲ್ಲವೆ ವರ ವಿವಾಹಕ್ಕೆ ಅಸಮ್ಮತಿ ವ್ಯಕ್ತಪಡಿಸಬಹುದಾಗಿದೆ. ಸೊಸೆ ಅಥವಾ ಅಳಿಯ ರೂಪದಿಂದ ತುಂಬ ಸುಂದರರೂ ಬಹುತರ ವಿಷಯಗಳಲ್ಲಿ ಗುಣದಿಂದ ಉತ್ತಮರೂ ಆಗಿರುವರಾದರೂ ಸ್ವಭಾವತಃ ತುಸು ಉದ್ಧಟರಿರಬಹುದಾಗಿದೆ. ಮಕ್ಕಳ ಉತ್ಕರ್ಷಕ್ಕೆ ಈ ವರ್ಷವು ಬಹಳ ಉತ್ತಮವಾಗಿದೆಯಾದರೂ ಅವರ ಅತಿಶಯ ಸ್ವಾರ್ಥ ಇಲ್ಲವೆ ವಿಪರೀತ ಮಹತ್ವಾಕಾಂಕ್ಷೆಯಿಂದಾಗಿ ಕೈಗೆ ಬಂದ ಒಳ್ಳೆಯ ಅವಕಾಶಗಳು ಸಹ ಜಾರಿ ಹೋಗಿಬಿಡುವ ಭಯವಿದೆ. ಮಕ್ಕಳಲ್ಲಿ ಯಾರ ಜನ್ಮರಾಶಿ ಮಿಥುನ, ಕನ್ಯಾ- ಅಥವಾ ಧನು ಇದೆಯೋ ಅವರು ತುಂಬ ಉತ್ಕರ್ಷ ಹೊಂದುವರು. ಅವರಿಗೆ ಹಾಗು ನಿಮಗೆ ಚೆನ್ನಾಗಿ ಕೂಡಿ ನಡೆಯುವುದಾದರೂ ಬಹಳ ವಿಷಯಗಳಲ್ಲಿ ಅವರ ಅಭಿಪ್ರಾಯ ಅಥವಾ ನಿಲುಮೆಯಂತೆಯೇ ನೀವು ವರ್ತಿಸಬೇಕಾಗಬಹುದು. ಅವರಲ್ಲಿ ಕೆಲವರು ಶಿಕ್ಷಣ, ನೌಕರಿ ಅಥವಾ ಉದ್ಯೋಗಾರ್ಥ ಬಹು ದೂರ ಹೋಗಿ ಇರಬೇಕಾಗಬಹುದು.

ಈ ವರ್ಷ ಈ ರಾಶಿಯಲ್ಲಿ ಮೊದಲೇ ಸೂಚಿಸಿದಂತೆ ಇರುವ ಪಂಚಗ್ರಹಗಳಿಂದಾಗಿ ಉದ್ಯೋಗಕ್ಕೆ ತುಂಬ ಹಿತಕರವೂ ಭಾಗ್ಯವರ್ಧಕವೂ ಆಗಿದೆಯೆಂಬುದರಲ್ಲಿ ಸಂದೇಹವಿಲ್ಲ. ವ್ಯಾಪಾರೀ ವರ್ಗಕ್ಕೆ, ವಕೀಲ, ಗ್ರಂಥಕರ್ತ, ಕವಿ ಮುಂತಾದ ಬುದ್ಧಿಜೀವಿಗಳಿಗೆ ಅವರವರ ವ್ಯವಸಾಯಗಳಲ್ಲಿ ಒಳ್ಳೆಯ ವಿಕಾಸವಾಗಿ ತುಂಬ ಲಾಭ ದೊರೆಯುವುದು. ದ್ವಿತೀಯ ಹಾಗೂ ಸಪ್ತಮದ ಸ್ವಾಮಿ ಮಂಗಳನು ಚತುರ್ಥದಲ್ಲಿ ಉಚ್ಚನಾಗಿರುವುದರಿಂದ ಅಲ್ಪಾಯಾಸದಿಂದಲೇ ಸ್ಥಾವರ, ಜಂಗಮ ಆಸ್ತಿ ಸಂಗ್ರಹವಾಗುವ ಯೋಗವಿದೆ. ನೌಕರದಾರರಿಗೆ ವರಿಷ್ಠರಿಂದ ಗುರುತರವಾದ ಕೆಲಸಗಳು ವಹಿಸಿಕೊಡಲ್ಪಡುವುದರಿಂದ ಅವುಗಳನ್ನು ಪೂರ್ಣಗೊಳಿಸುವಲ್ಲಿ ಅತಿಶಯ ಕಷ್ಟಪಡಿಸಬಹುದಾದರೂ ಕೊನೆಯಲ್ಲಿ ಅವು ಉತ್ತಮ ರೀತಿಯಲ್ಲಿ ಪೂರ್ಣಗೊಳ್ಳುವುದರಿಂದ ಅವರ ಮರ್ಜಿ ಚೆನ್ನಾಗಿ ಉಳಿಯುವುದು. ಅದರಿಂದಾಗಿ ಭಾವೀ ಹಿತಕ್ಕೆ ಪೋಷಕವಾಗುವಂಥ ಶಿಫಾರಸು ದೊರೆಯಬಹುದಾಗಿದೆ. ಬದಲಿಯಾದರೆ ಅದು ಬಲು ದೂರದ್ದಾದರೂ ಒಳ್ಳೆಯ ಸುಖ ಸೌಕರ್ಯಗಳುಳ್ಳ ಊರಿಗೆ. ಬದಲಿಯಾದಾಗ ಬಹುಶಃ ಅದು ಬಡತಿಯೊಂದಿಗೆಯೇ. ಲಾಭಕ್ಕೆ ನವೆಂಬರ್ ೧೫ ರಿಂದ ಜನೆವರಿ ೧೬, ಫೆಬ್ರುವರಿ ೧೨ ರಿಂದ ಮಾರ್ಚ್ ೧೪, ಮೇ ೧೪ ರಿಂದ ಜುಲೈ ೧೬ ಹಾಗು ಅಗಸ್ಟ ೧೭ ರಿಂದ ಸಪ್ಟೆಂಬರ್ ೧೭ ಈ ಕಾಲವು ಹೆಚ್ಚು ಉತ್ತಮವಾಗಿದೆ. ಒಳ್ಳೆಯ ವಾಹನಸುಖ ದೊರೆಯುವುದು. ಆದರೆ ಫೆಬ್ರುವರಿ ೨೫ ರಿಂದ ಎಪ್ರಿಲ್ ೮ ರ ವರೆಗಿನ ಅವಧಿಯಲ್ಲಿ ಸಾಯ್ಕಲ್ಲಿನಂತಹ ಸಾದಾ ವಾಹನವನ್ನು ಸಹ ನೀವು ನಡೆಯಿಸಬಾರದು, ಯಾಕೆಂದರೆ ಆಗ ಅಪಘಾತ ಭಯವಿದೆ. ಉತ್ತಮ ಮಿತ್ರ ಸುಖ ದೊರೆಯುವುದಲ್ಲದೆ ಪರಸ್ಪರ ಸಹಾಯ

ವರ್ತನೆಯಿರುವುದು. ಕನಿಷ್ಠ ಎರಡು ಪ್ರಸಿದ್ಧ ಕ್ಷೇತ್ರಗಳ ಯಾತ್ರಾಯೋಗವಿದ್ದು ಧಾರ್ಮಿಕ ಹಾಗು ಮಂಗಲಕಾರ್ಯಗಳು ಸಹ ಸಂಕಷ್ಟು ಜರುಗುವ ಯೋಗವಿದೆ. ಆದರೆ ಧಾರ್ಮಿಕ ಕಾರ್ಯಗಳಲ್ಲಿ ಕೊನೆಯ ಕ್ಷಣದಲ್ಲಿ ಅನಿರೀಕ್ಷಿತ ಕಾರಣದಿಂದಾಗಿ ತುಸುವಾದರೂ ವಿರಸ ಅಥವಾ ಮನೋಭಂಗವಾಗಲಿದೆ. ಅದರಂತೆಯೇ ಮಹತ್ವದ ಕೆಲಸಗಳಲ್ಲಿ ಸಹ ಕೊನೆಯ ಗಳಿಗೆಯಲ್ಲಿ ವಿಸ್ಮರಣವುಂಟಾಗುವ ಭಯವೂ ಇದೆ.

ದಾವೆ, ಫಿರ್ಯಾದಿ ಅಥವಾ ಇತರ ಸ್ಪರ್ಧೆಯ ಕೆಲಸಗಳಲ್ಲಿ ವೆಚ್ಚ ಹಾಗು ತೊಂದರೆಗಳನ್ನು ಅಂದಾಜಿಗಿಂತಲೂ ಹೆಚ್ಚಾಗಿಯೇ ಸಹಿಸಬೇಕಾಗುವುದಾದರೂ ಅವುಗಳಲ್ಲಿ ಹೆಚ್ಚಿನವು ನಿಮಗೆ ಯಶಸ್ಸನ್ನೇ ತರುವವು; ಕನಿಷ್ಠ ಮುಂದಾದರೂ ಅನುಕೂಲವಾಗುವಂತಹ ವಾತಾವರಣವು ಉಳಿಯುವುದು. ಶತ್ರುಗಳಲ್ಲಿ ಕೆಲವರು ನಿಮ್ಮ ಬಂಧುಗಳ ಮಿತ್ರರು ಅಥವಾ ಆಪ್ತರೇ ಆಗಿರಬಹುದು. ಜನೆವರಿ ೧೫ ರಿಂದ ಫೆಬ್ರುವರಿ ೧೫ ಹಾಗು ಅಗಸ್ಟ್ ೨೯ ರಿಂದ ಅಕ್ಟೋಬರ್ ೧೨ರ ವರೆಗಿನ ಕಾಲ ಯಶಸ್ಸಿಗೆ ಹೆಚ್ಚು ಅನುಕೂಲವಾಗಿದೆ.

ಈ ರಾಶಿಯ ಗರ್ಭವತಿಯರಿಗೆ ಪ್ರಸೂತಿ ಕಷ್ಟ ತುಸು ಹೆಚ್ಚಿನಿಸಿದರೂ ಗಂಡುಮಗುವಾದುದರ ಸುಖ ಮಾತ್ರ ನಿಶ್ಚಿತ ದೊರೆಯುವುದು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆಯು ಡಿಸೆಂಬರ್ ೨೫ ರ ವರೆಗೆ ಅಥವಾ ಮಾರ್ಚ್ ೨ ರಿಂದ ೧೮ ಅಥವಾ ಎಪ್ರಿಲ್ ೨ ರಿಂದ ಜೂನ್ ೮ ಇಲ್ಲವೆ ಜೂನ್ ೨೫ ರಿಂದ ಜುಲೈ ೧೧ ಅಥವಾ ಜುಲೈ ೨೮ ರಿಂದ ಅಕ್ಟೋಬರ್ ೨ ಈ ಕಾಲದಲ್ಲಾದರೆ ಅವರು ಉತ್ತೀರ್ಣರಾಗುವುದು ನಿಶ್ಚಿತ. ಅದರಲ್ಲೂ ಮಾರ್ಚ್ ೨ ರಿಂದ ೧೮ ಅಥವಾ ಜೂನ್ ೨೫ ರಿಂದ ಜುಲೈ ೧೧ ರ ವರೆಗಿನ ಅವಧಿಯಲ್ಲಾದರೆ ಒಳ್ಳೆಯ ಶ್ರೇಣಿ ದೊರೆಯುವ ಸಂಭವವೂ ಇದೆ.



ವೃಶ್ಚಿಕ

ಒಟ್ಟಿನಲ್ಲಿ ಈ ವರ್ಷ ಆರೋಗ್ಯ ಚೆನ್ನಾಗಿರುವುದಲ್ಲದೆ ಶತ್ರು ಹಾಗು ಸಂಕಟಗಳ ಮೇಲೆ ವಿಜಯ ದೊರೆಯುವುದು; ಆದರೂ ಹಾಗಾಗುವ ವರೆಗೆ ಅನೇಕ ಪ್ರಕಾರದ ತೊಂದರೆಗಳಿಗೆ ಅಡ್ಡಿ ಆತಂಕಗಳಿಗೆ ಎದೆಗೊಡಬೇಕಾದ ಪ್ರಸಂಗವಿದೆಯೆಂದು ತಿಳಿಯಬೇಕು.

ಈ ವರ್ಷವಿಡೀ ರಾಹು ೪ ನೆಯವನು, ಧನೇಶನೂ ಸುತೇಶನೂ ಅಂದರೆ ದ್ವಿತೀಯ ಹಾಗು ಪಂಚಮಾಧಿಪತಿಯಾದ ಗುರುವು ೧೧ನೆಯವನು, ಅಲ್ಲದೆ ವರ್ಷಾರಂಭದಲ್ಲಿ ಭಾಗ್ಯೇಶ ಚಂದ್ರ, ಕರ್ಮೇಶ ರವಿ, ಲಾಭೇಶ ಬುಧ ಮತ್ತು ವ್ಯಯೇಶ ಶುಕ್ರರು ಸಹ ಹನ್ನೆರಡನೆಯ ಅಂದರೆ ವ್ಯಯಸ್ಥಾನದಲ್ಲಿರುವುದರಿಂದ ಬಹುತರ ವಿಷಯಗಳಲ್ಲಿ ತೊಂದರೆ, ಅಲ್ಪ ಯಶಸ್ಸು, ವಿರೋಧಿಗಳಿಂದ ಕಿರುಕುಳ ಮುಂತಾದವುಗಳನ್ನು ಈ ರಾಶಿಯವರು ಸಹಿಸಬೇಕಾಗುವುದು. ಆದರೆ ರಾಶಿಸ್ವಾಮಿ ಮಂಗಳನು ಬಲವರ್ಧಕ ಸ್ಥಾನವಾದ ತೃತೀಯದಲ್ಲಿ ಮಕರದಲ್ಲಿ ಉಚ್ಚನಾಗಿರುವುದರಿಂದ ತೀರ ಕೊನೆಯ ಕ್ಷಣದಲ್ಲಿ ನಿಮಗೆ ತುಸುವಾದರೂ ಯಶಸ್ಸು ದೊರೆಯದಿರಲಾರದು. ಆರೋಗ್ಯವು ಮೊದಲಿಗಿಂತ ಕನಿಷ್ಠ ಕಳೆದ ವರ್ಷಕ್ಕಿಂತ ಹೆಚ್ಚು ಚೆನ್ನಾಗಿರುವುದು. ದೇಹ ಸುಖಕ್ಕೆ ಅವಶ್ಯವಾದಂಥ ಇತರ ವಿಷಯಗಳಲ್ಲಿ ಕೆಲ ಕೆಲವು ಒಳ್ಳೆಯ ಅನುಕೂಲವಾಗಿದ್ದರೂ ನಿಮಗೆ ಮಾತ್ರ ಅಗತ್ಯವಿರುವ ಸಮಯದಲ್ಲಿ ಅವುಗಳಿಂದ ಉಪಯೋಗವಷ್ಟಾಗಿ ಆಗಲಾರದು. ಅನೇಕ ಸಲ ಮಾನಸಿಕ ತೊಂದರೆಯ ಅನುಭವವೂ ಬರಬಹುದಾಗಿದೆ. ವಿಶೇಷವಾಗಿ ಫೆಬ್ರುವರಿ ೨೫ ರಿಂದ ಎಪ್ರಿಲ್ ೮ ಹಾಗು ಮೇ ೨೪ ರಿಂದ ಜುಲೈ ೯ ರ ವರೆಗಿನ ಅವಧಿಯಲ್ಲಿ ಇದು ಹೆಚ್ಚಾಗಿ ನಿದರ್ಶನಕ್ಕೆ ಬರಬಹುದು.

ಭಾರ್ಯೇಶ ಶುಕ್ರನು ವರ್ಷಾರಂಭದಲ್ಲಿ ೧೨ ನೆಯ ಅಂದರೆ ಲಾಭಸ್ಥಾನದಲ್ಲಿರುವುದರಿಂದ ಅನೇಕ ಸಲ ಹೆಂಡತಿಯ ತಪ್ಪು ಕಲ್ಪನೆಯಿಂದಾಗಿ ಉಭಯತರ ಸಹವಾಸಸುಖಕ್ಕೆ ವ್ಯತ್ಯಯ ಬರುವದಾದರೂ ನಿಮ್ಮ ರಾಶಿಸ್ವಾಮಿ ಮಂಗಳನೂ ಅಷ್ಟೇ ಬಲಿಷ್ಠನಾಗಿರುವುದರಿಂದ ಹಾಗು ಅವನೊಂದಿಗೆ ಶುಕ್ರನ ಚತುರ್ಥ-ನವಮ ಕೇಂದ್ರಯೋಗವು ಶುಭವಿರುವುದರಿಂದ ಅಂತರಂಗದಲ್ಲಿ ಪರಸ್ಪರರ ವಿಷಯದಲ್ಲಿರುವ ಪೂರ್ಣ ನಿಷ್ಠೆ ಹಾಗು ಅಭಿಮಾನಗಳಿಗೆ ಕಿಂಚಿತ್ತಾದರೂ ಕಡಿಮೆಯಾಗುವುದಿಲ್ಲ. ಅವಳ ಆರೋಗ್ಯವೂ ಒಳ್ಳೆಯ ನಿರೋಗಿಯಾಗಿರುವುದು. ಆದರೆ ಒಂದೆರಡು ಸಲ ಕೆಮ್ಮು ಹಾಗು ಮೂತ್ರಕೋಶದ ಉಪದ್ರವ ನಾಲ್ಕಾರು ದಿನಗಳ ಮಟ್ಟಿಗೆ ಆಗಬಹುದಾಗಿದೆ.

ಈ ರಾಶಿಯವರ ವಿವಾಹ ಈ ವರ್ಷ ಆಗುವುದಿದ್ದಲ್ಲಿ ಆ ವಿಚಾರವನ್ನು ಕೈಬಿಡುವುದೇ ಹಿತಕರವೆನಿಸುತ್ತದೆ. ಯಾಕೆಂದರೆ ಎಷ್ಟೇ ಪ್ರಯತ್ನಪಟ್ಟರೂ ಮನಸ್ಸಿಗೊಪ್ಪುವಂತಹ ಸ್ಥಳ ದೊರೆಯಲಾರದು. ಒಂದು ವೇಳೆ ಎಲ್ಲವೂ ಸರಿಯಾಗಿ ಹೊಂದಿ ವಿವಾಹ ನಿಶ್ಚಿತವಾದರೂ ಅದು ಈ ವರ್ಷ ಜರುಗದೆಯೆ ಮುಂದಿನ ವರ್ಷದ ವರೆಗೆ ಮುಂದೆ ಬೀಳುವುದು. ಈ ವಿಷಯದಲ್ಲಿ ಏನಾದರೂ ಅನಿರೀಕ್ಷಿತ ಅಡೆತಡೆಗಳು ಬರುತ್ತಿ ಇರುವವು. ಇಷ್ಟೆಲ್ಲವನ್ನೂ ಮೀರಿ ಒಂದು ವೇಳೆ ವಿವಾಹ ಸಾಧ್ಯವಾದರೂ ಎದುರು ಪಕ್ಷದವರು ತೀರ ಅಸಂತುಷ್ಟರಾಗುಳಿಯುವರು.

ಈ ವರ್ಷ ಈ ರಾಶಿಯವರ ಮಕ್ಕಳ ವಿವಾಹ ಮಾಡುವುದಿದ್ದಲ್ಲಿ ಹಾಗೆ ಮಾಡಲು ಮುಂದಾಗದಿರುವುದೇ ಕ್ಷೇಮವೆನಿಸೀತು. ಯಾಕೆಂದರೆ [illegible] ನಿಮ್ಮ ಆಪ್ತರು [illegible] ಇನ್ನು ಕೆಲವು ಸಲ ವಿವಾಹವಾಗಬೇಕಿರುವ ವಧು ಅಥವಾ ವರ ಕೊನೆಯ ಗಳಿಗೆಯಲ್ಲಿ ಮನಸ್ಸು ಕಹಿ ಮಾಡಿಕೊಂಡು ವಿವಾಹವಾಗುವುದಕ್ಕೆ ನಿರಾಕರಿಸಬಹುದು. ಇಷ್ಟೆಲ್ಲ ಇರುವಾಗಲೂ ಕದಾಚಿತ್ ಮದುವೆಯಾದರೆ ಅವರು ನಿಮ್ಮೊಂದಿಗೆ ಪ್ರೇಮದಿಂದ ವರ್ತಿಸಿದರೂ ಸೊಸೆ ಅಥವಾ ಅಳಿಯ ಮನೆಯಲ್ಲಿ ಇತರರಿಗೆ ಎಷ್ಟೂ ಒಪ್ಪಿತರಿರುವುದಿಲ್ಲ. ಮಕ್ಕಳ ಉನ್ನತಿಯ ದೃಷ್ಟಿಯಿಂದ ಗಂಡುಮಕ್ಕಳಿಗಿಂತ ಹೆಣ್ಣು ಮಕ್ಕಳಿಗೆಯೇ ಇದು ಹೆಚ್ಚು ಅನುಕೂಲ ಕಾಲವಾಗಿದೆ. ಅವರಲ್ಲಿ ಬಹುತರರು ನಿಮ್ಮೊಡನೆ ಒಳ್ಳೆಯ ರೀತಿಯಿಂದಲೂ ವರ್ತಿಸುವರು. ಆದರೆ ಅವರ ವಾಸ್ತವ್ಯ ತೀರ ದೂರದ ಊರಲ್ಲಾಗುವುದರಿಂದ ಮನಸ್ಸಿಗೆ ತುಂಬ ಚಡಪಡಿಕೆಯಾಗುವುದು. ಆದರೆ ಅವರಲ್ಲಿ ಬಹುತರರ ಆರೋಗ್ಯಕ್ಕೆ ತುಸುವಾದರೂ ತೊಂದರೆ ಇದ್ದದ್ದೆ. ಬೌದ್ಧಿಕಕಾರ್ಯಗಳಲ್ಲಿ ಅವರಲ್ಲಿ ಒಬ್ಬಬ್ಬರು ಒಳ್ಳೆಯ ಪ್ರಕಾಶವಮಾನರಾಗುವರು.

ಉದ್ಯೋಗದಲ್ಲಿ ಈ ವರ್ಷ ಈ ರಾಶಿಯವರಿಗೆ ಲಾಭ ತುಸು ಕಠಿಣವೆನಿಸಿದರೂ ಸಾಹಸ ಕಾರ್ಯಗಳು ಜರುಗಿ ಜನರ ಮೇಲೆ ಒಳ್ಳೆಯ ವರ್ಚಸ್ಸು ಬೀಳುವುದು. ಸ್ಥಾವರ ಸಂಗ್ರಹದತ್ತ ಒಲವು ನೀಡುವ ಸ್ಥಾನವಾದ ಚತುರ್ಥದಲ್ಲೇ ರಾಹುವುನಿಂದಾಗಿ ಬಂಧುಗಳೊಂದಿಗೆ ತೀವ್ರ ವಿರಸವುಂಟಾಗುವುದು. ಚತುರ್ಥೇಶ ಶನಿಯು ಷಷ್ಠದಲ್ಲಿ ನೀಚನಾಗಿರುವುದರಿಂದ ವಾರ್ಷಿಕ ಆದಾಯದಲ್ಲಿ ಅತಿವೃಷ್ಟಿ, ಅನಾವೃಷ್ಟಿ ಅಥವಾ ಕಳವಿನಿಂದಾಗಿ ಬಹಳ ಹಾನಿಯಾಗುವ ಸಂಭವವಿದೆ. ವ್ಯಯಸ್ಥಾನದಲ್ಲಿರುವ ಪಂಚಗ್ರಹಿಯಿಂದಾಗಿ ಶುಭಕಾರ್ಯಕ್ಕೆಂದಾಗಿಯೇ ಆದರೂ ಮನಸ್ಸಿಗೆ ಒಪ್ಪಿತವಲ್ಲದ ವೆಚ್ಚಗಳನ್ನು ಸಹಿಸಬೇಕಾದೀತು. ದೊಡ್ಡ ಮನುಷ್ಯರ ಆಹಾರ ವಿಹಾರಕ್ಕಾಗಿಯೂ ಬಹಳ ಹಣ ವ್ಯಯಿಸಬೇಕಾದ ಪ್ರಸಂಗಗಳು ಬರಬಹುದು. ಬೇರೆಯವರಿಂದ ಬರಬೇಕಾದದ್ದು ಒಂದು ವೇಳೆ ಮರಳಿ ಕೈಗೆ ಬಂದರೂ ಆ ಹಣ ಅಥವಾ ವಸ್ತುವು ಒಂದು ಚಮತ್ಕಾರಿಕ ಕಾರಣದಿಂದಾಗಿ ನಡುವೆಯೆ ಸಿಕ್ಕಿಬೀಳಬಹುದು ಅಥವಾ ಯಾರೋ ವಿಪರೀತ ವ್ಯಕ್ತಿಗಳ ಕೈಗೆ ಬೀಳಬಹುದು. ನೌಕರದಾರರಿಗೆ ಒಂದೇ ವರ್ಷ ಎರಡು ಮೂರು ಸ್ಥಳಗಳಿಗೆ ಬದಲಿಯಾದ ಅನುಭವ ಬರುವುದು. ಆದರೆ ವರಿಷ್ಠರ ಕೃಪೆ ಚೆನ್ನಾಗಿರುವುದು ಅದರ ಉಪಯೋಗವೂ ಅಲ್ಪಾವಧಿಯಲ್ಲಿಯೇ ಆಗಬಹುದು. ಪರಾಕ್ರಮೇಶ ಶನಿಯ ಮೇಲೆ ಧನೇಶ ಗುರುವಿನ ಪೂರ್ಣ ದೃಷ್ಟಿಯಿದ್ದುದರಿಂದ ಅತ್ಯಂತ ಬಿಕ್ಕಟ್ಟಿನ ಪ್ರಸಂಗದಲ್ಲಿಯೂ ಮಾನಹಾನಿಯಾಗದೆ ಪ್ರತಿಷ್ಠೆಗಳು ಮೊದಲಿನಂತೆಯೆ ಉಳಿಯುವವು. ಇದ್ದುದರಲ್ಲಿಯೆ ನವೆಂಬರ್ ೧೬ ರಿಂದ ಜನವರಿ ೧೧, ಮಾರ್ಚ್ ೧೮ ರಿಂದ ಎಪ್ರಿಲ್ ೨, ಜೂನ್ ೬ ರಿಂದ ಜುಲೈ ೨೮ ಹಾಗು ಅಕ್ಟೋಬರ್ ೨ ರ ನಂತರದ ಕಾಲ ಹೆಚ್ಚು ಒಳ್ಳೆಯದೆನಿಸಲಿದೆ. ತೀರ ಅಕಸ್ಮಾತ್ತಾಗಿ ಯಾತ್ರೆಯೊಂದು ನಡೆಯಬಹುದಲ್ಲದೆ ದಾನ ಧರ್ಮಾದಿಗಳನ್ನು ಅತ್ಯಂತ ಶ್ರದ್ಧೆಯಿಂದ ಮಾಡಬಹುದಾಗಿದೆ. ಈ ಕಾಲ

ಅಪ್ತರು, ಮಿತ್ರರು, ಬಂಧುಗಳು ಮುಂತಾದವರೆಲ್ಲ ತಮ್ಮ ಕೆಲಸಗಳಾಗುವ ವರೆಗೆ ಮಾತ್ರ ನಿಮ್ಮ ಪ್ರಯೋಜನ ಪಡೆಯಲೆತ್ನಿಸುವರು. ಸಾಹಸಗಳಿಂದ ಸುಖಕ್ಕೆ ಬದಲು ತೊಂದರೆಯೇ ಆಗಬಹುದಾಗಿದೆ.

ದಾವೆ, ಫಿರ್ಯಾದಿ ಹಾಗು ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ೬ ನೆಯ ಶನಿಯಿಂದಾಗಿ ಪ್ರತಿಸ್ಪರ್ಧಿಗೆ ಬಹಳ ಹಾನಿಯಾದರೂ ನಿಮಗೆ ಸಹ, ವ್ಯಯಸ್ಥಾನದಲ್ಲಿಯ ಪಂಚಗ್ರಹಿಯಿಂದಾಗಿ, ದೊರೆಯುವ ಯಶಸ್ಸು ಅಲ್ಪ ಅಥವಾ ಪೊಳ್ಳು ಇರಬಹುದಾಗಿದೆ.

ಈ ರಾಶಿಯ ಗರ್ಭವತಿಯರ ಪ್ರಸೂತಿ ಸುಲಭವಾಗುವುದಾದರೂ ನವೆಂಬರ್ ೧೬ ರಿಂದ ಡಿಸೆಂಬರ್ ೧೫, ಡಿಸೆಂಬರ್ ೨೫ ರಿಂದ ಜನವರಿ ೧೧, ಮಾರ್ಚ್ ೨ ರಿಂದ ಎಪ್ರಿಲ್ ೨, ಜುಲೈ ೧೧ ರಿಂದ ಅಗಸ್ಟ ೨ ಹಾಗು ಅಕ್ಟೋಬರ್ ೮ ನಂತರದ ಕಾಲದಲ್ಲಾದರೆ ಹೆಣ್ಣುಮಗುವಾಗುವ ಹಾಗು ಇತರ ಕಾಲದಲ್ಲಾದರೆ ಗಂಡುಮಗುವಾಗುವ ಸಂಭವ ಹೆಚ್ಚಾಗಿದೆ.

ಈ ರಾಶಿಯ ವಿದ್ಯಾರ್ಥಿಗಳಲ್ಲಿ, ನೂರಕ್ಕೆ ೭೫–೮೦ ರಷ್ಟು ವಿದ್ಯಾರ್ಥಿಗಳು ಈ ವರ್ಷ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಸಂಭವ ಕಡಿಮೆಯೆ. ಆದರೆ ಇದ್ದುದರಲ್ಲಿಯೆ ನವೆಂಬರ್ ೧೬ ರೊಳಗೆಯೆ ಅಥವಾ ಡಿಸೆಂಬರ್ ೫ ರಿಂದ ೨೫, ಮಾರ್ಚ್ ೨ ರಿಂದ ೧೮ ಇಲ್ಲವೆ ಜೂನ್ ೨೫ ರಿಂದ ಜುಲೈ ೧೧ ರ ವರೆಗಿನ ಅವಧಿಯಲ್ಲಿ ಯಾರ ಪರೀಕ್ಷೆಯಾಗುವುದೋ ಅವರು ಬಹುಶಃ ಉತ್ತೀರ್ಣರಾಗುವಷ್ಟಾದರೂ ಗುಣಗಳನ್ನು ಪಡೆಯುವುದು ನಿಶ್ಚಿತವೆಂದು ತಿಳಿಯಬೇಕು.


ಕೆಲವರಿಗಂತೂ ಕುಳಿತಲ್ಲಿಯೆ ಕೈಗೂಡಬಹುದಾಗಿದೆ. ಆರೋಗ್ಯ ಯಾವಾಗಲೂ ನಿರೋಗಿಯಾಗಿಯೆ ಇರುವುದಾದರೂ ತುಸು ನೇತ್ರಪೀಡೆಯಾಗುವ ಸಂಭವವಿದೆ; ಅಥವಾ ಅನೇಕರ ದೃಷ್ಟಿಯು ಕಳೆದ ವರ್ಷಕ್ಕಿಂತ ಹೆಚ್ಚು ಮಂದವಾಗುವ ಸಂಭವವಿದ್ದು ಅದು ಡಿಸೆಂಬರ್ ೩ ರ ವರೆಗೆ ಅಥವಾ ಫೆಬ್ರುವರಿ ೨೫ ರಿಂದ ಎಪ್ರಿಲ್ ೮ ಇಲ್ಲವೆ ಜುಲೈ ೯ ರಿಂದ ಅಗಸ್ಟ ೨೫ ರ ವರೆಗಿನ ಅವಧಿಯಲ್ಲಿ ಅನುಭವಕ್ಕೆ ಬರಬಹುದಾಗಿದೆ. ಇತರ ವಿಷಯಗಳಲ್ಲಿ ಅವಶ್ಯಕ ದೇಹಸುಖ ಚೆನ್ನಾಗಿಯೇ ದೊರೆಯುವುದಾದರೂ ವರ್ಷವಿಡೀ ಬುದ್ಧಿಸ್ಥಾನವಾದ ಪಂಚಮದಲ್ಲಿರುವ ಶನಿಯಿಂದಾಗಿ ಕುಟುಂಬದಲ್ಲಿಯ ಕೆಲವರು ಅತಿ ಮಬುದ್ಧಿನಿಂದಾದರೆ ಮತ್ತೆ ಕೆಲವರು ಬೇಕೆಂದೇ ದ್ವೇಷಬುದ್ಧಿಯಿಂದ ನಿಮ್ಮ ಮನಸ್ಸಿಗೆ ಹೇಸಿಕೆಯೆನಿಸುವಂತಹ ಅಥವಾ ಉದ್ಧಟ ಕೃತಿಗಳನ್ನೆಸಗುವರು. ಇದು ಬಹುಶಃ ನವೆಂಬರ್ ೨೯ ರಿಂದ ಡಿಸೆಂಬರ್ ೨೩ ಅಥವಾ ಮಾರ್ಚ್ ೨೯ ರಿಂದ ಮೇ ೧೬ ಇಲ್ಲವೆ ಜೂನ್ ೧೦ ರಿಂದ ಜುಲೈ ೬ ರ ವರೆಗಿನ ಅವಧಿಯಲ್ಲಿ ಸಂಭವಿಸುವ ಯೋಗವಿದೆ.

ಭಾರ್ಯೇಶ ಬುಧನು ಲಾಭಸ್ಥಾನದಲ್ಲಿ, ದೇಹೇಶ ಗುರು ಹಾಗು ಮುಖ್ಯ ಸ್ತ್ರೀಸುಖದರ್ಶಕ ಗ್ರಹ ಶುಕ್ರನಿಂದ ಯುಕ್ತನಾಗಿರುವುದರಿಂದ ಹೆಂಡತಿಯ ಸಹವಾಸ, ಪ್ರೀತಿ ಹಾಗು ಅವಳೊಂದಿಗೆ ಮತೈಕ್ಯ ಸದಾಕಾಲವೂ ಇರುತ್ತವೆ. ಅವಳೊಂದಿಗಿನ ಸಹವಾಸಕ್ಕೆ ಸಹಸಾ ವ್ಯತ್ಯಯ ಬಾರದು.

ಈ ರಾಶಿಯವರ ವಿವಾಹ ಈ ಸಲ ಆಗಬೇಕಿದ್ದಲ್ಲಿ ಅದಕ್ಕೆ ಅತ್ಯಂತ ಶ್ರೇಷ್ಠ ಬಾಸಿಂಗಬಲವಿರುವುದರಿಂದ ಅದು ಎಷ್ಟೋ ಪ್ರಯಾಸವಿಲ್ಲದೆಯೆ ಹಾಗು ತ್ವರಿತದಲ್ಲಿಯೆ ನಿಶ್ಚಿತಗೊಂಡು ಮುಂದೊಂದು ಒಂದೂವರೆ ತಿಂಗಳಲ್ಲಿಯೆ ಒಳ್ಳೆಯ ವ್ಯವಸ್ಥಿತ ರೀತಿಯಲ್ಲಿ ಜರುಗುವುದು. ಅಲ್ಲದೆ ವಧು ಇಲ್ಲವೆ ವರ ಅತ್ಯಂತ ಬುದ್ಧಿವಂತ, ಸುಂದರ, ಮನೆತನಸ್ಥ ಹಾಗು ಪರಸ್ಪರರನ್ನು ಕೆಲ ಮಟ್ಟಿಗೆ ಮೊದಲಿನಿಂದಲೂ ಪರಿಚಿತರೇ ಆದರೂ ತುಸು ಹಟವಾದಿಗಳಾಗಿರಬಹುದಾಗಿದೆ.

ಈ ರಾಶಿಯವರ ಮಕ್ಕಳ ವಿವಾಹವನ್ನು ಈ ಸಲ ಮಾಡುವುದಿದ್ದಲ್ಲಿ ಅದಕ್ಕೆ ಸಹ ಪೂರ್ಣ ಬಾಸಿಂಗಬಲವಿದೆ. ಆದರೆ ಐದನೆಯ ಅಂದರೆ ಸುತಸ್ಥಾನದಲ್ಲಿಯ ಶನಿಯಿಂದಾಗಿ ಮನಸ್ಸಿಗೆ ಒಪ್ಪಿತವಾಗುವುದಕ್ಕಾಗಿ ಅನೇಕ ಎಡೆಗಳಲ್ಲಿ ನೋಡಬೇಕಾಗಬಹುದು. ಕೊನೆಗೆ ನಿಶ್ಚಿತವಾಗುವುದು ಅಲ್ಲಿ ಆ ವ್ಯಕ್ತಿ ರೂಪದಿಂದ ಅಷ್ಟೊಂದು ಮನಸ್ಸಿಗೆ ಹಿಡಿಸುವಂತಿರದಿರಬಹುದಾಗಿದೆ; ಅಲ್ಲದೆ ಗುಣದಿಂದಲೂ ಸಾಮಾನ್ಯನೇ ಆಗಿದ್ದರೂ ಅತ್ಯುತ್ತಮ ದೈವವುಳ್ಳವನಾಗಿರುವುದು ಖಂಡಿತ. ಸೊಸೆ ಅಥವಾ ಅಳಿಯ ನಿಮ್ಮ ಮನಸ್ಸಿಗೊಪ್ಪಿತರಿರುವರಲ್ಲದೆ ನಿಮಗೆ ಮುಂದೂ ಏಕನಿಷ್ಠರಾಗಿಯೇ ಉಳಿಯುವರು. ಮಕ್ಕಳ ಉನ್ನತಿಗೆ ಸಹ ಈ ವರ್ಷ ಅತ್ಯುತ್ತಮವಾಗಿದೆ; ಆದರೆ ಈ ಸ್ಥಾನದಲ್ಲಿರುವ ಶನಿಯು ನೀಚನೂ ವಕ್ರಿಯೂ ಆಗಿರುವುದರಿಂದ ಅದು ಸಹಜವಾಗಿಯೇ ಆಗದೆಯೆ ಬಹಳ ಪ್ರಯತ್ನದ ಫಲವಾಗಿ, ವಶೀಲಿಯ ಆಧಾರದಿಂದ ಹಾಗು ತುಸು ಅವೇಳೆಯಲ್ಲಿ ಆಗುವ ಸಂಭವವಿದೆ. ಮಕ್ಕಳಲ್ಲಿ ಬಹುತರರ ವಾಸ್ತವ್ಯ ಬಹು ದೂರ ಆಗುವುದರಿಂದ ಮನಸ್ಸು ತುಸು ವ್ಯಥಿತವೂ ನಿರಾಶವೂ ಆಗಬಹುದು. ಅವರಲ್ಲೊಬ್ಬನ ಉನ್ನತಿಯಂತೂ ಜಗತ್ಪ್ರಶಂಸೆಗೆ ಪಾತ್ರವೆನಿಸಬಹುದಾಗಿದೆ.

ಉದ್ಯೋಗಕ್ಕೆ ಈ ವರ್ಷ ಅನುಪಮವಾಗಿದೆ. ಬುದ್ಧಿಜೀವಿಗಳಾದ ಸ್ವತಂತ್ರ ಉದ್ಯೋಗಸ್ಥರಂತೂ ವಿಶೇಷ ಭಾಗ್ಯವಂತರೇ ಆಗಿದ್ದಾರೆನ್ನಬೇಕು. ವ್ಯಾಪಾರಿ ಹಾಗು ಶ್ರಮಜೀವಿಗಳಿಗೆ ಸಹ ಅಂದಾಜಿನ ಹತ್ತು ಪಟ್ಟು ದ್ರವ್ಯಲಾಭ



ಒಟ್ಟಿನಲ್ಲಿ ಈ ವರ್ಷವು ಈ ರಾಶಿಯ ಗರ್ಭವತಿಯರು ಮತ್ತು ವಿದ್ಯಾರ್ಥಿಗಳಿಗೆ ತುಸು ಹೆಚ್ಚು ಕಷ್ಟಕರವಾದದ್ದೆನಿಸಿದರೂ ಉದ್ಯೋಗದಲ್ಲಿ ಲಾಭಕ್ಕೆ, ಪರಾಕ್ರಮದಲ್ಲಿ ಯಶಸ್ಸಿಗೆ ಹಾಗು ಸಂಸಾರದಲ್ಲಿಯ ಬಹುತರ ವಿಷಯಗಳಲ್ಲಿ ಸುಖಕ್ಕೆ ಬಹಳ ಉತ್ತಮವಾಗಿದೆಯೆಂದು ತಿಳಿಯಬೇಕು.

ಈ ರಾಶಿಯವರಿಗೆ ಈ ವರ್ಷವು ಉತ್ಸಾಹದಾಯಕವೆನಿಸಲಿದೆ. ಯಾಕೆಂದರೆ ರಾಶಿಸ್ವಾಮಿ ಗುರುವು ಭಾಗ್ಯೇಶ ರವಿ, ಕರ್ಮೇಶ ಬುಧ, ಲಾಭೇಶ ಶುಕ್ರ ಮತ್ತು ಅಯುಷ್ಯಾಧಿಪತಿ ಚಂದ್ರ ಈ ಪಂಚಗ್ರಹಗಳು ಏಕಾದಶ ಅರ್ಥಾತ್ ಲಾಭಸ್ಥಾನದಲ್ಲಿವೆ. ಅಲ್ಲದೆ ಭೀಮಪರಾಕ್ರಮಿಯಾದ ೩ನೆಯ ರಾಹುವೂ ಇರುವುದರಿಂದ ಮನಸ್ಸಿನಲ್ಲಿ ಏನೇನು ಮಾಡಬೇಕೆಂದೆನಿಸುವುದೊ ಅದೆಲ್ಲವೂ ವಿಶೇಷ ಶ್ರಮವಿಲ್ಲದೆಯೆ ತೀರ ಅಲ್ಪಾವಧಿಯಲ್ಲಿ ಹಾಗು

ದೊರೆತು ಮನೋರಥಗಳಲ್ಲಿ ಹೆಚ್ಚಿನವು ಪೂರ್ಣಗೊಳ್ಳುವವು. ನೌಕರಂದಾರರಿಗೆ ಸಹ ವಿಪುಲ ಲಾಭ ಹಾಗು ಮೇಲಿನ ಹುದ್ದೆ ದೊರೆಯಲಿದ್ದು ಬದಲಿಯಾದರೆ ಅದು ಮಹತ್ವದ ವೇತನಶ್ರೇಣಿಯಲ್ಲಿ ಹಾಗು ಪ್ರಸಿದ್ಧ ಊರಿಗೆ ಆಗುವುದು. ಅಲ್ಲದೆ ಅಲ್ಲಿ ಒಳ್ಳೆಯ ಮರ್ಯಾದೆಯಿಂದಲೂ ತುಂಬ ರಂಜನೀಯವೂ ಆದ ರೀತಿಯಲ್ಲಿ ದಿನಗಳು ಕಳೆಯಬಹುದಾಗಿದೆ. ವರಿಷ್ಠರು ಅಥವಾ ಆಶ್ರಯದಾತರು ತುಂಬ ಸಂತುಷ್ಟರಿರುವರಲ್ಲದೆ ಕೈಕೆಳಗಿನವರ ಉಪದ್ರವ ಕೂಡ ಸಹಸಾ ಆಗಲಾರದು. ಮನಸ್ಸಿನಂತೆಯೆ ಸ್ಥಾವರ ಜಂಗಮ ಸಂಗ್ರಹವಾಗುವ ಅವಕಾಶವೂ ಒದಗುವುದು. ವಾಹನಸುಖ ಹಾಗು ಮಿತ್ರಸುಖ ಉತ್ತಮ. ಅನೇಕರಿಗೆ ಲಾಟರಿಯ ಮೂಲಕ ಅಥವಾ ಭೂಗತ ಲಾಭದಂತಹ ಗುಪ್ತಮಾರ್ಗದ ಮೂಲಕ ಅಕಲ್ಪಿತ ಲಾಭದ ಯೋಗವೂ ಇದೆ. ಕೇವಲ ಲಾಭಕ್ಕೆ ನವೆಂಬರ್ ೨೯ರ ವರೆಗಿನ ಹಾಗು ಅನಂತರ ಡಿಸೆಂಬರ್ ೨೩ರಿಂದ ಜನವರಿ ೧೬, ಮಾರ್ಚ್ ೪ರಿಂದ ಎಪ್ರಿಲ್ ೧, ಮೇ ೧೬ರಿಂದ ಅಗಸ್ಟ್ ೨ ಹಾಗು ಸಪ್ಟೆಂಬರ್ ೧ ರಿಂದ ಅಕ್ಟೋಬರ್ ೨೮ರ ವರೆಗಿನ ಕಾಲವು ಹೆಚ್ಚು ಅನುಕೂಲವಿದೆ. ಪರಾಕ್ರಮಸ್ಥಾನದ 'ಅಂದರೆ ತೃತೀಯ ರಾಹುವಿನಿಂದಾಗಿ ಅತ್ಯಂತ ಸಾಹಸದ ಹಾಗು ಧೈರ್ಯದ ಕಷ್ಟತಮ ಕಾರ್ಯಗಳನ್ನು ನಿರ್ವಹಿಸುವ ಶಕ್ತಿ ವಿಶೇಷವಾಗಿರುವುದಲ್ಲದೆ ಅವುಗಳಲ್ಲಿ ಹೆಚ್ಚಿನವುಗಳಲ್ಲಿ ಭಾರಿ ಯಶಸ್ಸು ದೊರೆಯುವುದು. ಯಾತ್ರಾಯೋಗ ಕಡಿಮೆಯೆ, ಆದರೆ ಇತರ ಶುಭಕಾರ್ಯಗಳ ನಿಮಿತ್ತವಾಗಿ ಸಮೀಪದ ಹಾಗು ದೂರದ ಪ್ರವಾಸವನ್ನು ಅನೇಕ ಸಲ ಕೈಕೊಳ್ಳಬೇಕಾಗಬಹುದು. ಬಂಧುಗಳೊಂದಿಗೆ ಅಷ್ಟೊಂದು ಹೊಂದಲಾರದಾದರೂ ಇತರ ಆಪ್ತರೊಂದಿಗೆ ಒಳ್ಳೆಯ ಸಖ್ಯವಿರುವುದು. ಧರ್ಮಶ್ರದ್ಧೆ ಬಹಳ ಕಡಿಮೆಯಾಗಿರುವುದು ಮಾತ್ರ, ಕೃತಿಗಳೆರಡರಲ್ಲೂ ಕಂಡುಬರಬಹುದು.

ದಾವೆ, ಫಿರ್ಯಾದಿ ಅಥವಾ ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ರೂಪಾಯಿಯಲ್ಲಿ ೧೨–೧೩ ಆಣೆಗಳಷ್ಟಾದರೂ ಯಶಸ್ವಿಯಾಗುವವು. ಅಲ್ಲದೆ ಶತ್ರುಗಳಲ್ಲಿ ಕೆಲವರು ಮಿತ್ರರೂ ಆಗಬಲ್ಲಂತಹ ವಿಜಯ ದೊರೆಯಬಹುದಾಗಿದೆ. ಆದರೆ ಮಿತ್ರರಲ್ಲಿ ಕನಿಷ್ಟ ಇಬ್ಬರು ದ್ವೇಷ ಅಥವಾ ಹಿತಶತ್ರುತ್ವ ಸಾಧಿಸಲೆತ್ನಿಸುತ್ತಿರುವುದು ಸಹ ಅನುಭವಕ್ಕೆ ಬರದಿರದು.

ಈ ರಾಶಿಯ ಗರ್ಭವತಿಯರಲ್ಲಿ ಬಹುತರರಿಗ ಪ್ರಸೂತಿ ಕಷ್ಟ ಅನುಭವಕ್ಕೆ ಬರುವುದಲ್ಲದೆ ಮಗುವು ಮೊದಲ ವರ್ಷಾರು ತಿಂಗಳು ತೀರ ಅಶಕ್ತವಿರುವ ಸಂಭವವಿದೆ. ಆದರೆ ಬಹುತರರ ಅಂಥ ಮಗು ದೀರ್ಘಾಯುಷಿಯೂ ಆಗಿರುವುದು. ಡಿಸೆಂಬರ್ ೩ರಿಂದ ಜನವರಿ ೧೫, ಮೇ ೨೩ರಿಂದ ಜುಲೈ ೯ ಹಾಗು ಅಗಸ್ಟ್ ೨೫ರಿಂದ ಅಕ್ಟೋಬರ್ ೧೨ ರ ವರೆಗಿನ ಅವಧಿಯಲ್ಲಿ ಪ್ರಸೂತರಾದವರ ಮಗು ಗಂಡಾಗಿರುವ ಸಂಭವವೇ ಹೆಚ್ಚು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ವರ್ಷಾರಂಭದಿಂದ ಜನವರಿ ೧೫ ಅಥವಾ ಫೆಬ್ರುವರಿ ೨೫ ರಿಂದ ಎಪ್ರಿಲ್ ೮ ಇಲ್ಲವೆ ಮೇ ೨೩ ರಿಂದ ಜುಲೈ ೯ರ ವರೆಗಿನ ಅವಧಿಯಲ್ಲಿ ಅಥವಾ ಅಗಸ್ಟ್ ೨೫ ರ ನಂತರದ ಕಾಲದಲ್ಲಿ ಆಗುವುದಾದರೆ ಅವರು ಕೇವಲ ಉತ್ತೀರ್ಣರಾಗುವುದು ನಿಶ್ಚಿತ; ಅಲ್ಲದೆ ಮೇ ೨೩ರಿಂದ ಜುಲೈ ೯ ಹಾಗು ಅಗಸ್ಟ್ ೨೯ ರಿಂದ ಅಕ್ಟೋಬರ್ ೧೨ರೊಳಗಿನ ಅವಧಿಯಲ್ಲಾದರೆ ಪ್ರಥಮ ಅಥವಾ ದ್ವಿತೀಯ ಶ್ರೇಣಿಯನ್ನೂ ಪಡೆಯಬಹುದಾಗಿದೆ.

ಮಕರ

ಒಟ್ಟಿನಲ್ಲಿ ಈ ರಾಶಿಯವರಿಗೆ ಈ ವರ್ಷ ಪ್ರಾಪಂಚಿಕ ದೃಷ್ಟಿಯಿಂದ ತುಂಬ ತೊಂದರೆದಾಯಕವೂ ಮನೋಭಂಗವುಂಟುಮಾಡುವಂಥದೂ ಅನಿಸಿದರೂ ಔದ್ಯೋಗಿಕ ಯಶಸ್ಸು, ಪ್ರತಿಷ್ಠೆ ಹಾಗು ಲಾಭಕ್ಕೆ ಬಹಳ ಉತ್ತಮವಾಗಿದೆಯೆಂಬುದು ನಿಶ್ಚಿತವೆಂದು ತಿಳಿಯಬೇಕು.

ರಾಶಿಸ್ವಾಮಿ ಶನಿಯು ನಾಲ್ಕನೆಯವನಾಗಿರುವುದರಿಂದ ಬಹಳ ವಿಷಯಗಳಲ್ಲಿ ಮನಸ್ಸಿನ ವಿರುದ್ಧ ವರ್ತಿಸಬೇಕಾಗಬಹುದು; ಆದರೆ ಅವನ ದೃಷ್ಟಿಯು ದೇಹಸ್ಥಾನದ ಮೇಲಿರುವುದರಿಂದ ಆರೋಗ್ಯ ಒಟ್ಟನಲ್ಲಿ ಸರಿಯಾಗಿರುವುದು. ಆದರೆ ಈ ಶನಿಯು ತನ್ನ ನೀಚರಾಶಿಯಾದ ಮೇಷದಲ್ಲಿ ಹಾಗು ವರ್ಷಾರಂಭದಲ್ಲಿ ವಕ್ರಿಯಾಗಿರುವುದರಿಂದ ರೂಢಿ ಮತ್ತು ಜನಮತದ ವಿರುದ್ಧವೂ ಕೆಲ ಕೆಲಸಗಳನ್ನು ಮಾಡುತ್ತಲೇ ಮನಸ್ಸು ಒಡಬಹುದಲ್ಲದೆ ನಿಮ್ಮ ವರ್ತನೆ ಪರೋಪದ್ರವಕಾರಿಯೂ ಎನಿಸಬಹುದು. ಅದರಂತೆಯೆ ಕುಟುಂಬಸ್ಥಾನವಾದ ದ್ವಿತೀಯದಲ್ಲಿ ವರ್ಷವಿಡೀ ರಾಹುವಿರುವುದರಿಂದಾಗಿ ಕುಟುಂಬದಲ್ಲಿಯ ಇತರರೊಂದಿಗೆ ಮೇಲಿಂದ ಮೇಲೆ ಕಲಹ ಹಾಗು ವಿರಸದ ಪ್ರಸಂಗಗಳು ಉದ್ಭವಿಸಬಹುದು. ಇದರಿಂದಾಗಿ ಪ್ರತಿಯೊಬ್ಬರೂ ಮನಬಂದಂತೆ ವರ್ತಿಸಬಹುದು ಹಾಗು ಹಿಕ್ಕಾಪಟ್ಟೆ ವೆಚ್ಚ ಮಾಡಲೂ ಬಹುದು. ಆದರೆ ಈ ರಾಶಿಯಲ್ಲಿ ಮಂಗಳನು ಉಚ್ಚನಾಗಿರುವುದರಿಂದ ನಿಮ್ಮ ವರ್ತನೆಯಲ್ಲಿ ಒಂದು ಬಗೆಯ ಈರ್ಷೆ, ಬಿಗುವು ಹಾಗು ಯಾವ ಕೆಲಸವನ್ನೂ ಪೂರಯಿಸಿಬಿಡುವ ಶಕ್ತಿಯಿರುವುದು. ಇತರ ಆವಶ್ಯಕ ವಿಷಯಗಳಲ್ಲಿ ದೇಹಸುಖಕ್ಕೆ ಈ ವರ್ಷವು ಹತ್ತನೆಯ ಗುರುವಿನಿಂದಾಗಿ ಅನುಕೂಲವೇ ಆಗಿದೆ; ಆದರೆ ಬೇಕೆಂದೇ ಹಟದಿಂದ ಅದರ ಉಪಯೋಗ ಹಾಗು ಉಪಭೋಗ ಮಾಡದಿರುವ ಸಂಭವವೂ ಸಾಕಷ್ಟಿದೆ.

ಈ ವರ್ಷ ಹೆಂಡತಿಯ ಆರೋಗ್ಯ ಸರಿಯಿರದೆಯೆ ಮೇಲಿಂದ ಮೇಲೆ ಕೆಡಬಹುದಾಗಿದೆ. ಭಯಾನಕ ಸ್ವಪ್ನಗಳನ್ನು ಆಗೀಗ ಕಾಣುವುದರಿಂದ ಅವಳು ಅಸ್ವಸ್ಥಳಾಗಬಹುದಾಗಿದೆ. ಅಲ್ಲದೆ ಅತಿಸಾರ, ಹೊಟ್ಟೆನೋವು. ನೆಗಡಿಯಿಂದ ಅವಳಿಗೆ ತೀವ್ರ ತೊಂದರೆಯಾಗಬಹುದಾಗಿದೆ. ವಿಶೇಷತಃ ಡಿಸೆಂಬರ್ ೩ರ ವರೆಗಿನ ಹಾಗು ನಂತರ ಮೇ ೨೩ರಿಂದ ಅಗಸ್ಟ್ ೨೫ರ ವರೆಗಿನ ಕಾಲವು ಹೆಚ್ಚು ಕ್ಲೇಶಕರವಾಗಿದೆ. ಅಂತೆಯೆ ಪರಿಹಾರಾರ್ಥ ಕೇತುವಿನ ಸಂಪೂರ್ಣ ೧೬,೦೦೦ ಹಾಗು ಮಹಾಮೃತ್ಯುಂಜಯನ ೧೧,೦೦೦ ಜಪ ಮಾಡಬೇಕು; ಮತ್ತು ಸಂನ್ಯಾಸಿಗೆ ಅನ್ನವಸ್ತ್ರದಾನ ಮಾಡಬೇಕು. ಅಲ್ಲದೆ ಹೆಂಡತಿಯೊಂದಿಗೆ ನಿಮಗೂ ಅಷ್ಟಾಗಿ ಕೂಡಿ ನಡೆಯುವುದಿಲ್ಲ; ಆದರೆ ಅದರಲ್ಲಿ ನಿಮ್ಮ ತಪ್ಪೇ ಹೆಚ್ಚಾಗಿರುವುದು.

ಈ ರಾಶಿಯವರ ವಿವಾಹ ಈ ಸಲ ಆಗುವುದಿದ್ದಲ್ಲಿ ಅದಕ್ಕೆ ಮಧ್ಯಮ ಬಾಸಿಂಗಬಲವಿದೆ. ಆದರಿಂದಾಗಿ ಮೊದಲು ಮದುವೆ ಹೊಂದುವುದೇ ಕಷ್ಟಕರವಾಗಿ ಪರಿಣಮಿಸುತ್ತದೆ. ಒಂದು ವೇಳೆ ಹೊಂದಿದ ನಂತರವೂ ಉಭಯಪಕ್ಷಗಳೂ ಸಕಾರಣವೊ ನಿಷ್ಕಾರಣವೊ ಅದನ್ನು ಮುರಿದೂಡಲು ಪ್ರಯತ್ನಿಸುತ್ತವೆ. ಅಲ್ಲದೆ ಪ್ರತ್ಯಕ್ಷ ವಿವಾಹ ಸಮಾರಂಭವು ಮನಸ್ಸಿಗೆ ತೀರ ಅಪ್ರಿಯವೆನಿಸುವ ಸಂಭವವಿದೆ. ಆದರೆ ವಧು ಅಥವಾ ವರ ರೂಪ ಹಾಗು ಗುಣಗಳಿಂದ ಪರಸ್ಪರರಿಗೆ ಅನುರೂಪರೇ ಇರುತ್ತಾರೆ. ಇದ್ದುದರಲ್ಲಿಯೆ ವಿವಾಹ ಹೊಂದುವುದಕ್ಕೆ ಜನವರಿ ೧೫ ರಿಂದ ಫೆಬ್ರುವರಿ ೨೫, ಎಪ್ರಿಲ್ ೮ ರಿಂದ ಮೇ ೨೩ ಹಾಗು ಅಕ್ಟೋಬರ್ ೧೨ ರಿಂದ ೩೦ರ ವರೆಗಿನ ಕಾಲವು ಅನುಕೂಲವಾಗಿದೆ. ವಧು ಅಥವಾ ವರ ಬಹು ದೂರದ ಊರಿನವರಿರಬಹುದಾಗಿದೆ.

ಈ ರಾಶಿಯವರ ಮಕ್ಕಳ ವಿವಾಹ ಮಾಡುವುದಿದ್ದಲ್ಲಿ ಅದಕ್ಕೆ ಸಹ ಈ ವರ್ಷ ಅನುಕೂಲ ಬಾಸಿಂಗಬಲವಿಲ್ಲವಾದ್ದರಿಂದ ಮನಸ್ಸಿಗೊಪ್ಪಿತವಾಗುವಂತಹ ವರ ಇಲ್ಲವೆ ವಧುವನ್ನು ಹುಡುಕಲೆಂದೇ ಅನೇಕ ಸ್ಥಳಗಳಿಗೆ ಅಲೆದಾಡಬೇಕಾಗಬಹುದು. ಆದರೆ ಸಂತೇಶ ಶುಕ್ರನು ತನ್ನ ರಾಶಿಯಾದ ತುಲಾದಲ್ಲಿ ಹಾಗು ಬಲಿಷ್ಠವಾದ ದಶಮದಲ್ಲಿರುವುದರಿಂದಾಗಿ ಕೊನೆಗೆ ಅಪೇಕ್ಷೆಯಂತೆಯೆ ವರ ಅಥವಾ ವಧು ದೊರೆಯುವುದು ನಿಶ್ಚಿತ. ಮೊದಲು ನಿಶ್ಚಯಿಸಿದ ಮುಹೂರ್ತವನ್ನು ಬದಲಿಸಬೇಕಾದರೂ ಕೊನೆಗೆ ವಿವಾಹ ಸಮಾರಂಭವು ಒಳ್ಳೆಯ ಸಡಗರದಿಂದಲೇ ಜರುಗುವುದು. ಅದರಂತೆಯೆ ಮಕ್ಕಳ ಉನ್ನತಿಗೆ ಈ ವರ್ಷ ಮೊದಮೊದಲು ಬಹಳ ಕಷ್ಟವಾಗುವುದಲ್ಲದೆ ವಶೀಲಿಗಾಗಿ ವೆಚ್ಚ ಹಾಗು ಪ್ರಯತ್ನ ಬಹಳ ಮಾಡಬೇಕಾಗಬಹುದು; ಆದರೂ ಕೊನೆಗೆ ಮನಸ್ಸಿನಂತೆಯೆ ಆಗುವುದು ನಿಶ್ಚಿತ. ಅದಕ್ಕಾಗಿ ನವೆಂಬರ್ ೨೯ ರಿಂದ ಡಿಸೆಂಬರ್ ೨೩, ಜನವರಿ ೧೬ ರಿಂದ ಫೆಬ್ರುವರಿ ೮, ಮಾರ್ಚ್ ೪ ರಿಂದ ಎಪ್ರಿಲ್ ೧, ಎಪ್ರಿಲ್ ೨೨ ರಿಂದ ಮೇ ೧೬ ಹಾಗು ಜೂನ್ ೧೦ ರಿಂದ ಜುಲೈ ೬ರ ವರೆಗಿನ ಕಾಲವು ಸಾಕಷ್ಟು ಅನುಕೂಲವಾಗಿದೆ. ಮಕ್ಕಳಲ್ಲಿ ಹೆಣ್ಣುಮಕ್ಕಳಿಂದಲೇ ಹೆಚ್ಚು ಸುಖ ದೊರೆಯುವುದು, ಆದರೆ ಅವರಿಗಿಂತ ಗಂಡುಮಕ್ಕಳ ಉತ್ಕರ್ಷವೇ ಹೆಚ್ಚಾಗಿ ಆಗುವುದು.


ಉದ್ಯೋಗದಲ್ಲಿ ಮಾತ್ರ ಪರಿಸ್ಥಿತಿ ಈ ವರ್ಷ ಪ್ರಾಪಂಚಿಕ ತೊಂದರೆಯ ತದ್ವಿರುದ್ಧವಿದೆ,

ಅರ್ಥಾತ್ ಬಹು ಸುಖಪ್ರದವಾಗಿದೆ. ಕರ್ಮಸ್ಥಾನವಾದ ದಶಮದಲ್ಲಿ ವರ್ಷಾರಂಭದಲ್ಲಿ ದಶಮೇಶ ಶುಕ್ರನೊಂದಿಗಿರುವ ಪಂಚಗ್ರಹಯಿಂದಾಗಿ ಭಾರಿ ಪ್ರಸಿದ್ಧಿ ಹಾಗು ವೈಭವವೇ ದೊರೆಯಲಿವೆ. ಮುಂದಾಳುಗಳು, ವಿದ್ವಾಂಸರು ಹಾಗು ಹೆಸರಾಂತ ಕಾರ್ಯಕರ್ತರ ಭೆಟ್ಟಿ, ಸಹವಾಸ ಹಾಗು ಕೃಪಾದೃಷ್ಟಿ ಮೇಲಿಂದ ಮೇಲೆ ಪ್ರಾಪ್ತವಾಗಿ ನಿಮ್ಮ ಮಹತ್ವ ಹಾಗು ವ್ಯಕ್ತಿತ್ವ ವಿಪುಲವಾಗಿ ಬೆಳೆಯುವುದಕ್ಕೆ ಸಹಾಯವಾಗುವವು. ಲಾಭೇಶ ಮಂಗಳನು ಸಹ ಉಚ್ಚನಾಗಿರುವುದರಿಂದ ನಿಮ್ಮ ಕೃತಿಯ ಮಾನದಿಂದ ನಿಮಗಾಗುವ ದ್ರವ್ಯಲಾಭ ನೂರು ಪಟ್ಟು ಹೆಚ್ಚೆನ್ನಬಹುದು. ಅನೇಕರಿಗೆ ಅವರವರ ಪೂರ್ವಸುಕೃತದ ಬೆಂಬಲವನ್ನನುಸರಿಸಿ ಲಾಟರಿ, ವಾರಸಾ ಮುಂತಾದವುಗಳಿಂದಲೂ ಸಾಕಷ್ಟು ಲಾಭವಾಗುವ ಸಂಭವವಿದೆ. ಬುದ್ಧಿಜೀವಿ, ಶ್ರಮಜೀವಿ ಹಾಗು ವ್ಯಾಪಾರಿಗಳಿಗೆ ಈ ವರ್ಷ ಪ್ರಗತಿಪರವಿರುವಂತೆಯೆ ನೌಕರದಾರಿಗೆಯೂ ಇದೆ. ಬಹುತರರಿಗೆ ಬಡತಿಯು ಇಲ್ಲವಾದರೆ ಕನಿಷ್ಟ ಹೆಚ್ಚಿನ ಸಂಬಳವಾದರೂ ದೊರೆಯುವ ಯೋಗವಿದೆ. ಬದಲಿಯಾದರೆ ಹೊಸ ಊರು ತುಸು ಸೌಕರ್ಯರಹಿತವೆನಿಸಿದರೂ ಕೆಲಸದ ದೃಷ್ಟಿಯಿಂದ ಒಳ್ಳೆಯ ಸುಖಕರ ಸ್ಥಳವೆನಿಸಲಿದೆ. ಲಾಭಕ್ಕೆ ವಿಶೇಷವಾಗಿ ವರ್ಷಾರಂಭದಿಂದ ಡಿಸೆಂಬರ್ ೩ರ ವರೆಗೆ ಹಾಗು ನಂತರ ಜನೆವರಿ ೧೫ರಿಂದ ಫೆಬ್ರುವರಿ ೨೫, ಎಪ್ರಿಲ್ ೮ರಿಂದ ಮೇ ೨೩ ಹಾಗು ಅಗಸ್ಟ ೨೫ ರಿಂದ ಅಕ್ಟೋಬರ್ ೩೦ರ ವರೆಗಿನ ಅವಧಿಯು ಹೆಚ್ಚು ಅನುಕೂಲದ್ದಾಗಿದೆ. ದೊಡ್ಡಸ್ತನ ಅಥವಾ ಲೋಕಪ್ರಸಿದ್ಧಿಗಾಗಿ ಬಹಳ ವೆಚ್ಚವಾಗಬಹುದು. ಯಾತ್ರೆ ಅಥವಾ ಮಂಗಲಕಾರ್ಯಗಳ ಯೋಗ ಕಡಿಮೆಯೇ ಇದೆ. ಆದರೆ ಜನರ ಕಣ್ಣಿಗೆ ಒಡೆದು ಕಾಣುವಂತಹ ಒಂದು ಧಾರ್ಮಿಕ ಕಾರ್ಯ ನಡೆಯಬಹುದು ಅಥವಾ ಲೋಕಹಿತದ ಸಂಸ್ಥೆಯೊಂದಕ್ಕೆ ದಾನ ನೀಡುವುದಕ್ಕಾಗಿ ಬಹಳ ಹಣ ವ್ಯಯವಾಗಬಹುದು. ಬಹಳ ಸ್ವಪ್ನಗಳನ್ನು ಕಾಣುವಿರಿ ಮಾತ್ರವಲ್ಲ, ಅವುಗಳಲ್ಲಿ ನಿಮ್ಮ ಪೂರ್ವಜರನ್ನೇ ಹೆಚ್ಚಾಗಿ ಕಾಣುವಿರಿ. ಮಿತ್ರಸುಖ ಉತ್ತಮ. ನಿಮ್ಮ ಕರ್ತೃತ್ವಶಕ್ತಿಯೆದುರು ವಿರೋಧಿಗಳು ಸಹ ಸಾಕಷ್ಟು ಮಿತ್ರರಾಗುವರು. ವಾಹನಸುಖ ಬಹಳ ಸಲ ದೊರೆಯುತ್ತದೆಯಾದರೂ ಅದರಿಂದ ಸುಖಕ್ಕಿಂತ ಹೆಚ್ಚಾಗಿ ತೊಂದರೆಯೇ ಆಗುತ್ತದೆ. ಹಿಂದಿನಿಂದಲೂ ಬಂದ ಸ್ಥಾವರ ಆಸ್ತಿಯಲ್ಲಿ ಕೆಲಭಾಗವನ್ನು ಮಾರಾಟಮಾಡಬಹುದಾದರೆ ಹೊಸತನ್ನು ಕೊಳ್ಳಲೂಬಹುದು. ಪ್ರತಿಯೊಂದು ವಿಷಯದಲ್ಲಿ ನಿಮ್ಮ ಅಹಂಕಾರ ಬಹುವಾಗಿ ಪ್ರದರ್ಶಿತವಾಗಬಹುದಾಗಿದೆ.

ದಾವೆ, ಫಿರ್ಯಾದಿ ಇಲ್ಲವೆ ಸ್ಪರ್ಧೆಯ ಕೆಲಸಗಳಲ್ಲಿ ರೂಪಾಯಿಯಲ್ಲಿ ಐದಾರಾಣೆಗಳಷ್ಟಾದರೂ ಪರಸ್ಪರ ರಾಜಿಯಿಂದಲೇ ಬಗೆಹರಿದು ನಿಮಗೆ ಬಹುವಾದ ಯಶಸ್ಸು ದೊರೆಯುವುದು. ಇನ್ನುಳಿದವುಗಳಲ್ಲಿ ಮೂರು ನಾಲ್ಕಾಣೆಗಳಷ್ಟು ಶತ್ರುವಿಗೆ ಅನುಕೂಲವಾದರೆ ಉಳಿದವುಗಳಲ್ಲಿ ಅರ್ಧದಲ್ಲಿಯಷ್ಟಾದರೂ ನಿಮಗೆ ಯಶಸ್ಸು ದೊರೆತರೆ ಇನ್ನರ್ಧ ಅನಿರ್ಣೀತವಾಗಿ ಮುಂದೆ ಬೀಳುವವು.

ಈ ರಾಶಿಯ ಗರ್ಭವತಿಯರಲ್ಲಿ ಬಹುತರರಿಗೆ ಗಂಡುಮಗುವಾಗುವ ಸಂಭವವಿದ್ದು ನವೆಂಬರ್ ೨೯ ರಿಂದ ಡಿಸೆಂಬರ್ ೨೩, ಮಾರ್ಚ್ ೪ ರಿಂದ ಎಪ್ರಿಲ್ ೧, ಎಪ್ರಿಲ್ ೨೨ ರಿಂದ ಮೇ ೧೬ ಹಾಗು ಜೂನ್ ೧೦ ರಿಂದ ಜುಲೈ ೬ರ ವರೆಗಿನ ಅವಧಿಯಲ್ಲಿ ಪ್ರಸೂತರಾದರೆ ಹರಿಗೆ ಅತ್ಯಂತ ಸುಲಭವೆನಿಸುವುದು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಡಿಸೆಂಬರ್ ೨೫ ರಿಂದ ಜನೆವರಿ ೧೧, ಫೆಬ್ರುವರಿ ೮ ರಿಂದ ಮಾರ್ಚ್ ೧, ಮಾರ್ಚ್ ೧೮ ರಿಂದ ಎಪ್ರಿಲ್ ೨, ಜೂನ್ ೬ ರಿಂದ ೨೫ ಹಾಗು ಅಕ್ಟೋಬರ್ ೨ ರಿಂದ ೩೦ ರ ವರೆಗಿನ ಅವಧಿಯಲ್ಲಾದರೆ ಅವರು ಉತ್ತೀರ್ಣರಾಗುವುದು ನಿಶ್ಚಿತ; ಅಲ್ಲದೆ ಮಾರ್ಚ್ ೪ ರಿಂದ ಎಪ್ರಿಲ್ ೧ ಅಥವಾ ಎಪ್ರಿಲ್ ೨೨ ರಿಂದ ಮೇ ೧೬ರ ವರೆಗಾದರೆ ಒಳ್ಳೆಯ ಶ್ರೇಣಿಯೂ ದೊರೆಯಬಹುದು.



ಕುಂಭ

ಒಟ್ಟಿನಲ್ಲಿ ಈ ರಾಶಿಯವರಿಗೆ ಈ ವರ್ಷವು ಸ್ವಭಾವ ಹಾಗು ಪ್ರಾಪಂಚಿಕ ವಿಷಯದಲ್ಲಿ ಸಮಾಧಾನದ ದೃಷ್ಟಿಯಿಂದ ತೀರ ಗೌಣವೆನಿದರೂ ಔದ್ಯೋಗಿಕ ಲಾಭಕ್ಕೆ ಉತ್ತಮವಿದ್ದು ಬಹು ಭಾಗ್ಯವರ್ಧಕವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ.

ಈ ರಾಶಿಯು ಇದೀಗ ಅಂದರೆ ಕಳೆದ ಮಾರ್ಚ್ ತಿಂಗಳಿಂದ ಸಾಡೇಸಾತಿಯಿಂದ ಮುಕ್ತವಾಗಿದ್ದು ನಂತರ ಬಂದ ಮೂರನೆಯ ಶನಿಯೇ ಇದರ ಸ್ವಾಮಿಯಾಗಿರುವುದರಿಂದ ಅನೇಕ ವಿಷಯಗಳಲ್ಲಿ ನಿಮ್ಮ ಮಹತ್ವಾಕಾಂಕ್ಷೆ ಒಡೆದು ಕಾಣತೊಡಗುವುದಲ್ಲದೆ ಯಾವದೇ ಸಣ್ಣ ದೊಡ್ಡ ಕೆಲಸವನ್ನು ಧೈರ್ಯದಿಂದ ಮಾಡುವೆನೆಂಬ ಹುಮ್ಮಸ್ಸು ಹೆಚ್ಚುವುದು. ಆದರೆ ಶನಿಯು ಈಗ ಇರುವ ಮೇಷವು ಅವನ ನೀಚ ರಾಶಿಯಾಗಿರುವುದರಿಂದ ನಿಮ್ಮ ವರ್ತನೆಯಲ್ಲಿ ಪರೋತ್ಕರ್ಷದ ಮತ್ಸರ ಹಾಗು ಆ ಬಗ್ಗೆ ನಿಮ್ಮ ವಿರುದ್ಧ ಸುಳ್ಳು ಸುದ್ದಿಗಳು ಹುಟ್ಟಿಕೊಳ್ಳುವುದೂ ಕಂಡುಬರಬಹುದು. ಅಲ್ಲದೆ ಮಾತು ಮತ್ತು ಕೃತಿಗಳಲ್ಲಿ ತಾಳಮೇಳವಿರಲಾರದು. ಒಟ್ಟಿನಲ್ಲಿ ಹೇಳುವುದಾದರೆ ಈ ವರ್ಷ ನಿಮ್ಮ ಮನೋವೃತ್ತಿಯು ತೀರ ಸಂಕುಚಿತವೂ ಹೀನವೂ ಆಗಿ ಪರಿಣಮಿಸಬಹುದು. ಆರೋಗ್ಯ ಸಾಮಾನ್ಯವಾಗಿ ನಿರೋಗಿಯಾಗಿರುವುದಾದರೂ ಈ ರಾಶಿಯಲ್ಲಿರುವ ರಾಹುವಿನಿಂದಾಗಿ ಆಗೀಗ ಪಿಶಾಚಬಾಧೆಯಿಂದ ಅಥವಾ ಪಿಶಾಚವನ್ನು ಎಲ್ಲಿಯೋ ಕಂಡಂತೆ ಮನಸ್ಸಿಗೆ ಭಯ ಹುಟ್ಟುವಂತಹ ಪ್ರಸಂಗಗಳು ಬರಬಹುದು. ಪರಿಹಾರಾರ್ಥ ಮಹಿಮ್ನಸ್ತೋತ್ರವನ್ನು 'ನಿತ್ಯ ಪಠಿಸಬೇಕು. ಇತರ ಆವಶ್ಯಕ ವಿಷಯಗಳಲ್ಲಿ ಬಹು ಉತ್ತಮ ದೇಹಸುಖ ದೊರೆಯುವುದು.

ಭಾರ್ಯಾಸ್ಥಾನವಾದ ಸಪ್ತಮದಲ್ಲಿ ವರ್ಷವಿಡೀ ಪಾಪ ಹಾಗು ನಿತ್ಯ ವಕ್ರೀ ಗ್ರಹವಾದ ಕೇತುವು ಇರುವುದರಿಂದ ಹೆಂಡತಿ ಮತ್ತು ನಿಮ್ಮ ನಡುವೆ ಪರಸ್ಪರ ವಿಷಯದಲ್ಲಿ ತಪ್ಪು ಕಲ್ಪನೆ ಸಂಶಯ ಬಹಳವಾಗಿರುವುದರಿಂದ ಆಗೀಗ ದೊಡ್ಡ ವಾಗ್ಯುದ್ಧವೇ ಘಟಿಸಬಹುದು. ಆದರೆ ಭಾರ್ಯೇಶ ರವಿಯು ನವಮದಲ್ಲಿರುವುದರಿಂದ ಅವಳ ಆರೋಗ್ಯವು ಒಟ್ಟಿನಲ್ಲಿ ಚೆನ್ನಾಗಿಯೇ ಇರುವುದು. ಆದರೆ ನಿಮ್ಮ ರಾಶಿಸ್ವಾಮಿಯಂತೆಯೇ ಭಾರ್ಯೇಶ ರವಿಯೂ ನೀಚನ

ಆಗಿರುವುದರಿಂದ ಅವಳ ಸ್ವಭಾವದಲ್ಲಿ ಕ್ಷುದ್ರ ವಿಚಾರಗಳೇ ಹೆಚ್ಚಾಗಿ ಕಂಡುಬರಬಹುದಾಗಿದೆ. ಅವಳ ಆರೋಗ್ಯ ಸರಿಯಿರುವಾಗಲೂ ಆಗಾಗ ಪಾದಗಳಲ್ಲಿ, ಮೊಳಕಾಲುಗಳಲ್ಲಿ ನೋವುಂಟಾಗಿ ಅವಳಿಗೆ ತೊಂದರೆಯಾಗುವ ಸಂಭವವಿದೆ.

ಈ ರಾಶಿಯವರ ವಿವಾಹವು ಈ ವರ್ಷ ಆಗುವುದಿದ್ದಲ್ಲಿ ಅದಕ್ಕೆ ಮಾತ್ರ ಬಾಸಿಂಗಬಲ ಅತ್ಯುತ್ತಮವಾಗಿದೆ. ಸಪ್ತಮದಲ್ಲಿಯ ಕೇತುವಿನಿಂದಾಗಿ ಒಂದೆರಡು ಕಡೆಗಳಲ್ಲಿ ಗೊತ್ತಾದಂತಾದರೂ ಮುಂದೆ ಕ್ಷುಲ್ಲಕ ಕಾರಣಗಳಿಂದ ಅವು ಬಿಟ್ಟುಹೋಗುವವು. ಆದರೂ ಮುಂದೆ ಅಲ್ಪಾವಧಿಯಲ್ಲಿಯೆ ಬೇರೆ ಕಡೆಗೆ ಗೊತ್ತಾಗಿ ಎರಡು ಮೂರು ವಾರಗಳಲ್ಲಿಯೇ ವಿವಾಹವೂ ಆಗಿಹೋಗುವುದು. ವಧು ಅಥವಾ ವರ ರೂಪದಿಂದ ಸುಂದರರಿದ್ದು ಸುದೈವಿಗಳೂ ಆಗಿರುವುದು ಒಂದೆರಡು ವರ್ಷಗಳಲ್ಲಿಯೇ ಅನುಭವಕ್ಕೆ ಬರುವುದು. ಆದರೆ ಸ್ವಭಾವದಿಂದ ಮಾತ್ರ ಗರ್ವಿಷ್ಠ ಹಾಗು ಇತರರನ್ನು ಹೀಗಳೆದು ಮಾತಾಡುವಂಥ ಮತ್ತು ಸ್ವಂತ ಬುದ್ಧಿವಂತಿಕೆಯ ಬಗೆಗೆ ಅತಿಶಯ ಹೆಮ್ಮೆಯಿರುವಂತಹ ಅವಗುಣವುಳ್ಳವರಾಗಿರಬಹುದು. ಅಲ್ಲದೆ ಪರಸ್ಪರರಲ್ಲಿ ವಿರೋಧ ಸಾಕಷ್ಟಿರುವುದು.

ಈ ರಾಶಿಯವರ ಮಕ್ಕಳ ವಿವಾಹವನ್ನು ಈ ಸಲ ಮಾಡುವುದಿದ್ದಲ್ಲಿ ಅದಕ್ಕೆ ಉತ್ತಮ ಬಾಸಿಂಗಬಲವಿರುವುದರಿಂದ ಅದು ಅಪೇಕ್ಷೆಗಿಂತಲೂ ಹೆಚ್ಚು ಉತ್ತಮ ಸ್ಥಳದಲ್ಲಿ ಅಲ್ಪಾಯಾಸದಿಂದಲೇ ಹೊಂದಿ ನಿಶ್ಚಿತ ಮುಹೂರ್ತಕ್ಕೆಯೆ ನಿರ್ವಿಘ್ನವಾಗಿ ನೆರವೇರುವುದು. ಅಳಿಯ ಅಥವಾ ಸೊಸೆ ರೂಪ ಗುಣಗಳೆರಡರಲ್ಲೂ ಮನಸ್ಸಿಗೆ ಅತ್ಯಂತ ಮೆಚ್ಚಿಕೆಯಾಗುವಂತಿರುತ್ತಾರೆ. ಅವರಂತೆಯೆ ಮಕ್ಕಳಿಗೆ ಇದು ಅತ್ಯುನ್ನತಕಾರಕ ವರ್ಷವೂ ಆಗಿದೆ. ವಿದ್ಯೆ ಅಥವಾ ಉದ್ಯೋಗದಲ್ಲಿ ಅವರು ಅತ್ಯುಚ್ಚ ಶ್ರೇಣಿಯನ್ನೇ ಸಂಪಾದಿಸುವರು. ಅನೇಕರು ವಿದೇಶಗಳಿಗೆ ಸಹ ಹೋಗಬಹುದಾದರೆ ಕೆಲವರಿಂದ ಲೋಕೋತ್ತರ ಸಾಹಸ ಕಾರ್ಯ ಘಟಿಸಬಹುದು. ನಿಮ್ಮ ಮತ್ತು ಅವರ ನಡುವೆ ಒಳ್ಳೆಯ ಮೈತ್ರಿಕ್ಯವುಳಿಯುವುದಲ್ಲದೆ ಅನೇಕ ವಿಷಯಗಳಲ್ಲಿ ಏಕಾಭಿಪ್ರಾಯವುಳ್ಳವರೂ ಆಗಿರಬಹುದು.

ಈ ರಾಶಿಯ ಧನೇಶ ಹಾಗು ಲಾಭೇಶ ಗುರು ವರ್ಷವಿಡೀ ೯ ನೆಯ ಅಂದರೆ ಭಾಗ್ಯಸ್ಥಾನದಲ್ಲಿರುವುದರಿಂದಲೂ ಭಾಗ್ಯಾಧಿಪತಿ ಶುಕ್ರನು ಇಲ್ಲಿಯೇ ಇರುವುದರಿಂದಲೂ ಈ ವರ್ಷವು ಉದ್ಯೋಗದಲ್ಲಿ ಒಳ್ಳೆಯ ಭಾಗ್ಯವನ್ನು ತರುವುದೆಂಬುದರಲ್ಲಿ ಅಣುಮಾತ್ರವೂ ಸಂಶಯವಿಲ್ಲ. ಅಲ್ಲದೆ ಕ್ರಯ ವಿಕ್ರಯಾಧಿಪತಿ ಸಪ್ತಮೇಶ ರವಿ ಬುದ್ಧಿಸ್ಥಾನದ ಸ್ವಾಮಿ ಪಂಚಮ ಬುಧ ಹಾಗು ರಿಪುಸ್ಥಾನದ ಷಷ್ಠ ಚಂದ್ರರು ವರ್ಷಾರಂಭದಲ್ಲಿಯೇ ಇದೇ ಸ್ಥಾನದಲ್ಲಿರುವುದರಿಂದ ವ್ಯವಹಾರದಲ್ಲಾಗುವ [illegible] ಗಳಿಂದ ಸಹ ಹಾನಿಯುಂಟಾಗದೆಯೇ ಲಾಭ ಅಥವಾ ಯಶಸ್ಸೇ ದೊರೆಯಬಹುದಾಗಿದೆ ಮಾಡಬೇಕೆಂದಿದ್ದೆಲ್ಲವೂ ಎಷ್ಟೇ ಕಠಿಣವಿದ್ದರೂ ಕೊನೆಗೆ ಯಶಸ್ವಿಯೇ ಆಗುವವು. ಅದರಂ-ತೆಯೇ ಕರ್ಮಸ್ಥಾನವಾದ ದಶಮದ ಸ್ವಾಮಿ ಮಂಗಳನು ವ್ಯಯಸ್ಥಾನದಲ್ಲಿ ೧೨ನೆಯವನಾಗಿರುವಾಗಲೇ ವರ್ಷಾರಂಭವಾಗಿರುವುದಾದರೂ ಅವನು ಮಕರದಲ್ಲಿ ಉಚ್ಚನಾಗಿರುವುದರಿಂದ ವೆಚ್ಚ ಎಷ್ಟು ಹೆಚ್ಚಾಗುವುದೋ ಲಾಭವೂ ಅಷ್ಟೇ ಹೆಚ್ಚಾಗಲಿದೆ. ವರ್ಷವಿಡೀ ರಾಹುವು ೧ ನೆಯವನೂ ಶನಿಯು ೩ ನೆಯವನೂ ಸ್ಥಾನಬಲಿಷ್ಠನೂ ಆಗಿರುವುದರಿಂದ ಸಣ್ಣಪುಟ್ಟ ಕೆಲಸಗಳಿಗಿಂತ ದೊಡ್ಡ ಅಗಾಧವಾದ ಕೆಲಸಗಳನ್ನು ಮಾಡುವುದರಲ್ಲಿಯೇ ಭಾರಿ ಯಶಸ್ಸು ಹಾಗು ಕಲ್ಪನಾತೀತ ಲಾಭ ದೊರೆಯಲಿದೆ. ವ್ಯಾಪಾರವೇ ಇರಲಿ ಶ್ರಮಪ್ರಧಾನ ಅಥವಾ ಬುದ್ಧಿಪ್ರಧಾನ ಉದ್ಯೋಗವೇ ಇರಲಿ ಅದರಲ್ಲಿ ತುಂಬ ಪ್ರಗತಿ, ದೊಡ್ಡ ಪ್ರಸಿದ್ಧಿ ಹಾಗು ಎಣಿಕೆಯಿಲ್ಲದಷ್ಟು ಹಣ ದೊರೆಯುವುದು ನಿಶ್ಚಿತ. ನೌಕರದಾರರಿಗೆ ಬದಲಿಯಾದರೆ ಬಲು ದೂರದ ಸ್ಥಳಕ್ಕಾದರೂ ಬಢತಿ ದೊರೆಯುವುದಲ್ಲದೆ ಹೊಸ ಊರು ಉತ್ತಮ ಸುಖ ಸೌಕರ್ಯಗಳುಳ್ಳದ್ದಾಗಿರುತ್ತದೆ. ಆದರೆ ಹೆಂಡತಿಗೆ ಮಾತ್ರ ಆ ಊರು ಅಷ್ಟಾಗಿ ಸೇರಲಿಕ್ಕಿಲ್ಲ. ವಿಶೇಷತಃ ವರ್ಷಾರಂಭದಿಂದ ಜನೆವರಿ ೧೬ ರ ವರೆಗೆ ಹಾಗು ನಂತರ ಮಾರ್ಚ ೪ ರಿಂದ ಜೂನ್ ೧೦, ಜುಲೈ ೬ ರಿಂದ ಅಗಸ್ಟ ೨ ಹಾಗು ಸಪ್ಟೆಂಬರ್ ೧ ರಿಂದ ವರ್ಷಾಂತ್ಯದ ವರೆಗಿನ ಕಾಲವು ಲಾಭಕ್ಕೆ, ಯಶಸ್ಸಿಗೆ ಮತ್ತು ಪ್ರಸಿದ್ಧಿಗೆ ಅನುಕೂಲವಾಗಿದೆ. ಒಳ್ಳೆಯ ವಾಹನಸುಖ ಲಭಿಸುವುದು, ಆದರೆ ಈ ವಾಹನದ ದುರಸ್ತಿಗಾಗಿ ಮಾತ್ರ ಮೇಲಿಂದ ಮೇಲೆ ವೆಚ್ಚ ಮಾಡುವ ಪ್ರಸಂಗ ಬರಬಹುದು. ಹತ್ತು ಪ್ರತಿಷ್ಠೆಗಳು ಉತ್ತಮವಾಗಿರುವವಾದರೂ ವ್ಯಯಸ್ಥಾನದಲ್ಲಿಯ ಮಂಗಳನಿಂದಾಗಿ ಸುಳ್ಳು ಸಾಕ್ಷಿ ಹೇಳಿದ ಇಲ್ಲವೆ ಮೋಸದ ಕೃತ್ಯವೊಂದಕ್ಕೆ ನೆರವಾದ ಆರೋಪ ಬರುವ ಭಯವಿರುವುದರಿಂದ ಅಂಥ ವಿಷಯಗಳಿಂದ ಮೊದಲೇ ಎಚ್ಚರ ವಹಿಸುವುದು ಉತ್ತಮ. ಒಂದು ಅಥವಾ ಎರಡು ಪ್ರಸಿದ್ಧ ಕ್ಷೇತ್ರಗಳ ಯಾತ್ರಾಯೋಗವು ಆಕಸ್ಮಿಕವಾಗಿ ಒದಗಿಬರಬಹುದಾಗಿದೆ. ಒಳ್ಳೆಯ ಮಿತ್ರಸುಖ ಲಭಿಸುವುದು; ಆದರೆ ನಿಕಟ ಆಪ್ತರು ಮಾತ್ರ ನಿಮಗೆ ವಿರುದ್ಧವಾಗಿ ವರ್ತಿಸುವರಲ್ಲದೆ ನಾನಾ ಪ್ರಕಾರದ ಕುತ್ಸಿತ ಟೀಕೆಗಳನ್ನು ಮಾಡುವರು, ಆದರೆ ಹೊಸ ಸಂಗ್ರಹ ಸಾಕಷ್ಟು ಸಾಧ್ಯವಾಗುವುದು. ಆದರೆ ಅದರಲ್ಲಿ ಸ್ಥಾವರ ಅಥವಾ ಜಂಗಮ ವಸ್ತುವೊಂದನ್ನು ಕೇವಲ ಈರ್ಷೆಯಿಂದಲೇ ಹೆಚ್ಚು ಬೆಲೆ ಕೊಟ್ಟು ಪಡೆಯುವಿರಿ. ಬಂಧುಗಳೊಂದಿಗೆ ಮೇಲಿಂದ ಮೇಲೆ ತಂಟೆಯ ಪ್ರಸಂಗಗಳು ಬರಬಹುದು. ಅದರಂತೆಯೇ ಹೆಂಡತಿಯ ಬಂಧುಗಳೊಂದಿಗೂ ವಿರೋಧ ಬರಬಹುದು.

ದಾನ, ಥಿಯೆಟ್ರಾದಿ ಅಥವಾ ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ಹೆಚ್ಚಿನವು ಯಶಸ್ವಿಯಾಗುವವು. ಆದರೆ ಅವುಗಳಿಗಾಗುವ ವೆಚ್ಚ ಮಾತ್ರ ವಿಪರೀತವಾಗುವುದರಿಂದ ದೊರೆಯುವ ಯಶಸ್ಸಿನ ಪ್ರಮಾಣವನ್ನು ಅದು ಮೀರಬಹುದು.

ಈ ರಾಶಿಯ ಗರ್ಭವತಿಯರಿಗೆ ಗಂಡುಮಗುವಾಗುವ ಯೋಗ ನಿಶ್ಚಿತವಿದೆ. ಆದರೆ ಪ್ರಸೂತಿಯ ದಿನ ಮಾತ್ರ ಅಂದಾಜಿಗಿಂತ ಬಹಳ ಹಿಂದುಮುಂದಾಗಬಹುದು. ಪ್ರಸೂತಿಯು ಸುಲಭವೆನಿಸಿದರೂ ಮಗುವು ಮಾತ್ರ ಒಂದೆರಡು ವರ್ಷ ತೀರ ಅಶಕ್ತವಿರಬಹುದಾಗಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ವರ್ಷಾರಂಭದಿಂದ ನವೆಂಬರ್ ೧೩, ಇಲ್ಲವೆ ಡಿಸೆಂಬರ್ ೫ ರಿಂದ ೨೫, ಅಥವಾ ಜನೆವರಿ ೧೧ ರಿಂದ ಫೆಬ್ರುವರಿ ೮, ಇಲ್ಲವೆ ಮಾರ್ಚ ೨ ರಿಂದ ೧೫, ಅಥವಾ ಎಪ್ರಿಲ್ ೨ ರಿಂದ ಜೂನ್ ೬, ಇಲ್ಲವೆ ಜೂನ್ ೨೫ ರಿಂದ ಜುಲೈ ೧೧, ಅಥವಾ ಜುಲೈ ೨೮ ರಿಂದ ಅಕ್ಟೋಬರ್ ೨೮ ವರೆಗಿನ ಅವಧಿಯಲ್ಲಾದರೆ ನಿಶ್ಚಿತ ಉತ್ತೀರ್ಣರಾಗುವರು; ಅಲ್ಲದೆ ಜನೆವರಿ ೧೧ ರಿಂದ ಫೆಬ್ರುವರಿ ೮, ಮಾರ್ಚ ೨ ರಿಂದ ೧೫, ಜೂನ್ ೨೫ ರಿಂದ ಜುಲೈ ೧೧ ರ ವರೆಗಿನ ಕಾಲದಲ್ಲಾದರೆ ಉಚ್ಚ ಶ್ರೇಣಿಯನ್ನು ಪಡೆಯುವುದೂ ನಿಶ್ಚಿತ.



ಮೀನ

ಒಟ್ಟಿನಲ್ಲಿ ಈ ರಾಶಿಯವರಿಗೆ ಈ ವರ್ಷವು ಗುರು, ಶನಿ ಹಾಗು ರಾಹು ತೀರ ಪ್ರತಿಕೂಲರಾಗಿರುವುದರಿಂದ ದಗದಗಿಯದೂ ಪ್ರಾಪಂಚಿಕಸುಖವನ್ನು ಕೆಡಿಸುವಂಥದೂ ಮಾನಸಿಕ ಕಷ್ಟದ್ದೂ ಆಗಿದೆಯಾದರೂ ಉದ್ಯೋಗದ ದೃಷ್ಟಿಯಿಂದ ತುಂಬ ಸಮಾಧಾನಕರವಾಗಿದೆಯೆಂಬುದು ನಿಶ್ಚಿತವೆಂದು ತಿಳಿಯಬೇಕು.

ಕಳೆದ ಐದು ಐದೂವರೆ ವರ್ಷಗಳಿಂದ ಇರುವ ಸಾಡೇಸಾತಿಯನ್ನು ಇನ್ನೂ ಸುಮಾರು ಒಂದೂವರೆ ವರ್ಷ ಕಾಲ ಈ ರಾಶಿಯವರು ಅನುಭೋಗಿಸಬೇಕಿದೆ. ಅದರ ಕರ್ತನಾದ ಶನಿಯು ದ್ವಿತೀಯದಲ್ಲಿ ನೀಚನಾಗಿರುವುದರಿಂದ ಹಾಗು ವರ್ಷಾರಂಭದಲ್ಲಿ ವಕ್ರಿಯಾಗಿರುವುದರಿಂದ ಗೃಹಕಲಹ ವಿಪರೀತಕ್ಕೇರುವುದು. ಎಷ್ಟೇ ಕೈ ಬಿಗಿಹಿಡಿದು ವೆಚ್ಚ ಮಾಡಿದರೂ ಸಂಗ್ರಹದಲ್ಲಿ ಕೂಡಿಬೀಳುವುದಕ್ಕೆ ಬದಲು ಹಿಂದಿನ ಸಂಗ್ರಹವಿದ್ದರೆ ಅದರೊಳಗಿನಿಂದಲೇ ತೆಗೆದು ವೆಚ್ಚ ಮಾಡಬೇಕಾದ ಪ್ರಸಂಗಗಳು ಬರಬಹುದು. ಆದರೆ ಶನಿಯ ಮೇಲೆ ಗುರು, ಶುಕ್ರ ಹಾಗು ಬುಧರ ದೃಷ್ಟಿಯಿರುವುದರಿಂದ ಈ ವೆಚ್ಚ ಅಪಾತ್ರದಲ್ಲಾಗುವುದಕ್ಕೆ ಬದಲು ಶುಭಕಾರ್ಯಗಳಿಗಾಗಿಯೇ ಆಗುವುದು. ಕಣ್ಣಿನ ದೃಷ್ಟಿಯು ಹಿಂದಿಗಿಂತಲೂ ಮಂದವಾಗಬಹುದು. ಗಂಟಲು ಮೇಲಿಂದ ಮೇಲೆ ಒಣಗಬಹುದು. ರಾಶಿಸ್ವಾಮಿ ಗುರುವು ವರ್ಷವಿಡೀ ೮ ನೆಯವನಾಗಿರುವುದರಿಂದ ಆರೋಗ್ಯಕ್ಕೆ ದೊಡ್ಡ ಅಪಾಯದ ಭಯವಿಲ್ಲವಾದರೂ ಕಿರುಕುಳ ತೊಂದರೆಗಳು ಆಗಾಗಲೂ ಇದ್ದದ್ದೇ.

ಆಮಶಂಕೆ ಅಥವಾ ಯಕೃತ್ ದೋಷದಿಂದ ತುಸು ಕ್ಲೇಶವುಂಟಾಗುವ ಸಂಭವವಿರುವುದಾದರೂ ಅಷ್ಟಮೇಶ ಶುಕ್ರನೊಂದಿಗೆ ರಾಶಿಸ್ವಾಮಿ ಗುರುವು ಅಷ್ಟಮದಲ್ಲಿರುವುದರಿಂದ ಗಂಡಾಂತರದ ಭಯ ಮಾತ್ರವೇನೂ ಇಲ್ಲ. ಆದರೂ ಕ್ಲೇಶಪರಿಹಾರಾರ್ಥ ಗುರುವಿನ ಸಂಪೂರ್ಣ ೧೯,೦೦೦ ಹಾಗು ಶನಿಯ ಸಂಪೂರ್ಣ ೨೩,೦೦೦ ಜಪ ಮಾಡಬೇಕು. ಅಂದರೆ ಕ್ಲೇಶದ ತೀವ್ರತೆ ಸೌಮ್ಯಗೊಳ್ಳುವುದು. ಇತರ ವಿಷಯಗಳಲ್ಲಿ ದೇಹಸುಖ ಸರ್ವಸಾಧಾರಣವ.

ಭಾರ್ಯಾಸ್ಥಾನವಾದ ಸಪ್ತಮದಲ್ಲಿ ಶುಭಗ್ರಹವಾದ ನೆಪ್ಚ್ಯೂನ್ ತನ್ನ ಶುಭರಾಶಿಯಾದ ಕನ್ಯೆಯಲ್ಲಿ ವರ್ಷಾರಂಭದಲ್ಲಿರುವುದಲ್ಲದೆ ತತ್ಸ್ವಾಮಿ ಬುಧನು ಅಷ್ಟಮದಲ್ಲಿ ಮಿತ್ರಕ್ಷೇತ್ರಿಯಾಗಿ ನಿಮ್ಮ ರಾಶಿಸ್ವಾಮಿ ಗುರುವಿನಿಂದ ಯುಕ್ತನಾಗಿರುವುದರಿಂದ ಹೆಂಡತಿಯ ಆರೋಗ್ಯ ಒಟ್ಟಿನಲ್ಲಿ ಸರಿಯಾಗಿರುವುದು. ಅಲ್ಲದೆ ನಿಮ್ಮ ನಿಮ್ಮಲ್ಲಿ ಒಳ್ಳೆಯ ಮೈತ್ರೈಕ್ಯವೂ ಇರುವುದು. ಆದರೆ ಅಷ್ಟಮ ಸ್ಥಾನದೋಷದಿಂದಾಗಿ ಪ್ರತಿಯೊಬ್ಬರ ವರ್ತನೆಯಲ್ಲಿಯೂ ಒಂದು ಬಗೆಯ ಔದಾಸೀನ್ಯ ತೋರಿಬರುವುದು. ಅವಳ ಆರೋಗ್ಯಕ್ಕೆ ಫೆಬ್ರುವರಿ ೨೫ ರಿಂದ ಎಪ್ರಿಲ್ ೮ ರ ವರೆಗಿನ ಕಾಲವು ತಲೆನೋವು ಅಥವಾ ಬೆನ್ನುನೋವಿನಿಂದಾಗಿ ತುಸು ತೊಂದರೆದಾಯಕವೆನಿಸಬಹುದು.

ಈ ರಾಶಿಯ ಅವಿವಾಹಿತರ ವಿವಾಹ ಈ ವರ್ಷ ಆಗುವುದಿದ್ದಲ್ಲಿ ವರ್ಷವಿಡೀ ಗುರುವು ಎಂಟನೆಯವನಾಗಿರುವುದರಿಂದ ಬಾಸಿಂಗಬಲ ಏನೂ ಇಲ್ಲ. ಒಂದು ವೇಳೆ ಮದುವೆಯಾದರೂ ಅದಕ್ಕಾಗಿ ವಿಪರೀತ ಪ್ರಯತ್ನ ಅವಶ್ಯವೆನಿಸುವುದಲ್ಲದೆ ಅಪಮಾನವನ್ನು ಸಹ ಸಹಿಸಬೇಕಾದೀತು; ಶಕ್ತಿ ಮೀರಿದ ವೆಚ್ಚವನ್ನೆ ಮಾಡಬೇಕಾದೀತಲ್ಲದೆ ಅನಿರೀಕ್ಷಿತವಾದ ಅನೇಕ ಅಡ್ಡಿ ಆತಂಕಗಳನ್ನು ಎದುರಿಸಬೇಕಾದೀತು. ಇಷ್ಟೆಲ್ಲ ಆದ ನಂತರವೇ ಮದುವೆ ಹಾಗೂ ಹೀಗೂ ಮುಗಿಯಬಹುದಾಗಿದೆ. ವಧು ಇಲ್ಲವೆ ವರ ಕಿಂಚಿತ್ ಕೃಷ್ಣವರ್ಣಿಯೆನಿಸಬಹುದಲ್ಲದೆ ಅಪೇಕ್ಷೆಗಿಂತ ಕಡಿಮೆ ಎತ್ತರವೂ ಇರಬಹುದು. ಆದರೆ ರೂಪದಿಂದ ಸಾಕಷ್ಟು ಉತ್ತಮರಿರುವರು. ಉಭಯತರಲ್ಲೂ ಒಳ್ಳೆಯ ಮೈತ್ರೈಕ್ಯ ಹಾಗು ಪ್ರೇಮವಿರುವುದು. ವಿವಾಹ ಹೊಂದುವುದಕ್ಕೆ ನವೆಂಬರ್ ೧೦ ರಿಂದ ಡಿಸೆಂಬರ್ ೫, ಫೆಬ್ರುವರಿ ೮ ರಿಂದ ಮಾರ್ಚ್ ೧, ಮಾರ್ಚ್ ೧೮ ರಿಂದ ಎಪ್ರಿಲ್ ೨ ಹಾಗು ಜೂನ್ ೨೫ ರಿಂದ ಜುಲೈ ೧೧ ರ ವರೆಗಿನ ಅವಧಿಯು ತುಂಬ ಅನುಕೂಲವಿದೆ.

ಈ ವರ್ಷ ಈ ರಾಶಿಯವರ ಮಕ್ಕಳ ವಿವಾಹ ಮಾಡುವುದಿದ್ದಲ್ಲಿ ಮೊದಲು ಅದು ಹೊಂದುವುದು ಹಾಗು ಒಂದು ವೇಳೆ ಹೊಂದಿದರೆ ಪ್ರತ್ಯಕ್ಷ ವಿವಾಹ ಪೂರ್ಣವಾಗುವುದು ಕಠಿಣವೆಂಬಂತಹ ನಿರ್ಬಲ ಬಾಸಿಂಗಬಲವಿದೆ. ಅನೇಕರ ವಿವಾಹ ಗೊತ್ತಾದ ನಂತರವೂ ಚಿಕ್ಕ ದೊಡ್ಡ ಕಾರಣವೊಂದರಿಂದಾಗಿ ಅದು ಮುರಿದು ಹೋಗುವ ಪ್ರಸಂಗವೂ ಬರಬಹುದು. ಆದರೂ ವಿವಾಹ ಹೊಂದುವುದಕ್ಕೆ ನವೆಂಬರ್ ೨೯ ರಿಂದ ಡಿಸೆಂಬರ್ ೨೩, ಜನವರಿ ೧೭ ರಿಂದ ಫೆಬ್ರುವರಿ ೮, ಮಾರ್ಚ್ ೨೯ ರಿಂದ ಎಪ್ರಿಲ್ ೨೨ ಹಾಗು ಜೂನ್ ೧೦ ರಿಂದ ಜುಲೈ ೬ ರ ವರೆಗಿನ ಕಾಲವು ಇದ್ದುದರಲ್ಲಿಯೆ ಅನುಕೂಲವಾಗಿದೆ. ಸೊಸೆ ಅಥವಾ ಅಳಿಯ ರೂಪವಂತರೂ ಸುದ್ಗುಣಿಗಳೂ ಸತ್ಯಪ್ರಿಯರೂ ಆಗಿರುವರಾದರೂ ಸ್ವಭಾವತಃ ತೀರ ತಾಮಸಿಯಾಗಿರಬಹುದಾಗಿದೆ. ಮಕ್ಕಳ ಉನ್ನತಿಗೆ ಈ ವರ್ಷ ಮಧ್ಯಮಪ್ರತಿಯದೆನಿಸಿದೆ. ಇದ್ದುದರಲ್ಲಿಯೆ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳಿಗೆಯೆ ಹೆಚ್ಚು ಉನ್ನತಿಕಾರಕವಿದ್ದು ಅವರೇ ನಿಮ್ಮೊಂದಿಗೆ ಹೆಚ್ಚು ಒಲವಿನಿಂದ ವರ್ತಿಸುವರು.

ಸಾಡೇಸಾತಿಯಿದ್ದು ಶನಿಯು ದ್ವಿತೀಯ ಅಂದರೆ ಧನಸ್ಥಾನದಲ್ಲಿ, ರಾಹು ಹನ್ನೆರಡನೆಯವನು ಅಂದರೆ ವ್ಯಯಸ್ಥಾನದಲ್ಲಿ ಹಾಗು ಗುರುವು ಎಂಟನೆಯವನು ಈ ರೀತಿ ಪ್ರತಿಗಾಮಿ ಗ್ರಹಮಾನವಿದ್ದರೂ ಈ ರಾಶಿಯ ಭಾಗ್ಯೇಶ ಮತ್ತು ಧನೇಶನಾದ ಮಂಗಳನು ವರ್ಷಾರಂಭದಲ್ಲಿಯೆ ಲಾಭಸ್ಥಾನವಾದ ಏಕಾದಶದಲ್ಲಿ ಉಚ್ಚನಾಗಿರುವುದರಿಂದ ಅರ್ಥಾತ್ ಮಕರದಲ್ಲಿರುವುದರಿಂದ, ಹಾಗು ಲಾಭೇಶ ಶನಿಯು ಧನಸ್ಥಾನದಲ್ಲಿರುವುದರಿಂದ, ಮತ್ತು ಅವರಿಬ್ಬರೂ ಪರಸ್ಪರರ ರಾಶಿಗಳಲ್ಲಿ ಇರುವುದರಿಂದ ಅವರಲ್ಲಿ ಅನ್ಯೋನ್ಯಾಶ್ರಯ ಶುಭಯೋಗವಾಗಿದೆ. ಅಲ್ಲದೆಯೆ ದಶಮೇಶ ಗುರುವು ಅಷ್ಟಮದಲ್ಲಿದ್ದರೂ ಅಲ್ಲಿಂದ ಅವನ ಪೂರ್ಣದೃಷ್ಟಿಯು ಲಾಭೇಶ ಶನಿಯ ಮೇಲಿರುವುದು. ಈ ಕಾರಣಗಳಿಂದಾಗಿ ಬಹಳ ಕಷ್ಟ ಸಹಿಸಬೇಕಾಗಿ ಬಂದರೂ ದ್ರವ್ಯಲಾಭವು ಅಂದಾಜಿನಂತೆ ಆಗಿಯೇ ತೀರುವುದೆಂಬುದರಲ್ಲಿ ಸಂದೇಹವಿಲ್ಲ. ಅಲ್ಲದೆ ಸ್ವಸ್ವಾಮಿ ಶುಕ್ರನು ರವಿ, ಚಂದ್ರ, ಬುಧ, ಗುರು ಈ ಗ್ರಹಗಳಿಂದ ಯುಕ್ತನಾಗಿ ವರ್ಷಾರಂಭದಲ್ಲಿ ಗುಪ್ತ ಅಥವಾ ಆಕಸ್ಮಿಕ ಲಾಭದರ್ಶಕ ಸ್ಥಾನವಾದ ಅಷ್ಟಮದಲ್ಲಿರುವುದರಿಂದ ನೂರಕ್ಕೆ ೬೦-೬೫ ರಷ್ಟು ಜನರಿಗೆ ಆಕಸ್ಮಿಕ ಲಾಭ ಚಿಕ್ಕ ದೊಡ್ಡ ಪ್ರಮಾಣದಲ್ಲಿ ಆಗುವುದು ಮಾತ್ರ ನಿಶ್ಚಿತ. ಉದ್ಯೋಗಸ್ಥರಿಗಿಂತ ನೌಕರದಾರರಿಗೆ ಈ ವರ್ಷ ಹೆಚ್ಚು ಅನುಕೂಲವಾದುದಾಗಿದೆ. ಬದಲಿಯಾದರೆ ಅದು ಹತ್ತಿರದ ಊರಿಗೆಯೆ. ಆದರೆ ಆ ಊರಲ್ಲಿ ಸುಖ ಸೌಕರ್ಯಗಳು ಮಾತ್ರ ಲಭ್ಯವಾಗುವಂತಿಲ್ಲ. ಕೆಲಸದ ತೊಂದರೆ ಹಾಗು ಹೊಣೆಗಾರಿಕೆಗಳೆರಡೂ ಹೆಚ್ಚುವವು. ಬಡತಿಯ ಯೋಗವಿಲ್ಲವಾದರೂ ಪರಿಸ್ಥಿತಿ ಮರ್ಜಿ ಮಾತ್ರ ಚೆನ್ನಾಗಿಯೇ ಉಳಿಯುವುದು. ಕೈಕೆಳಗಿನವರಲ್ಲಿ ಆತ್ಮೀಯರು ಅಥವಾ ಸ್ವಧರ್ಮೀಯರೆನಿಸಿದವರಿಗಿಂತ ಅನ್ಯಧರ್ಮೀಯರೇ ನಿಮ್ಮೊಂದಿಗೆ ಹೆಚ್ಚು ಚೆನ್ನಾಗಿ ವರ್ತಿಸುವರು. ವಿಶೇಷವಾಗಿ ನವೆಂಬರ್ ೧೦ ರಿಂದ ಡಿಸೆಂಬರ್ ೩, ಜನವರಿ ೧೫ ರಿಂದ ಫೆಬ್ರುವರಿ ೨೫, ಎಪ್ರಿಲ್ ೮ ರಿಂದ ಮೇ ೨೩ ಹಾಗು ಅಕ್ಟೋಬರ್ ೧೨ ರಿಂದ ೩೦ ರ ವರೆಗಿನ ಕಾಲವು ಹೆಚ್ಚು ಉತ್ತಮವಾಗಿದೆ. ಹೊಸ ಸಂಗ್ರಹದ ಯೋಗವಿಲ್ಲವಾದರೂ ಹೆಚ್ಚು ಸಾಲವಾಗುವ ಸಂಭವವೂ ಇಲ್ಲ. ಮಿತ್ರರಲ್ಲಿ ಅನೇಕರು ಮುಕ್ತ ಮನಸ್ಸಿನಿಂದ ವರ್ತಿಸದೆಯೇ ತೀರ ಸಂಕೋಚ ಹಾಗು ಸಂಶಯಿತ ವೃತ್ತಿಯವರಾಗಿರುವರು. ಯಾತ್ರೆಯ ಯೋಗವಿಲ್ಲದಿದ್ದರೂ ಕೆಲ ವೇಳೆ ಸಂತರು ಅಥವಾ ಪಾರಮಾರ್ಥಿಕ ವ್ಯಕ್ತಿಗಳ ಸಹವಾಸ ಯೋಗವಿದೆ. ಅನೇಕ ಶುಭ ಹಾಗು ಭವಿಷ್ಯಸೂಚಕ ಸ್ವಪ್ನಗಳನ್ನು ಕಾಣುವಿರಿ. ಅತ್ತೆಯ ಮನೆಯವರಿಗೆ ಈ ವರ್ಷವು ಹೆಚ್ಚು ಉತ್ತಮವಾಗಿದೆ. ವಾಹನ ಸುಖ ಕಡಿಮೆಯೆ.

ದಾವೆ, ಫಿರ್ಯಾದಿ ಅಥವಾ ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ಕನಿಷ್ಠ ಅರ್ಧದಷ್ಟಾದರೂ ಯಶಸ್ವಿಯಾಗುವವು. ಆದರೆ ಶತ್ರುವು ನಮ್ರನಾಗದೇ ಬಿಗುವಿನಲ್ಲಿಯೇ ಉಳಿಯಬಹುದಾಗಿದೆ. ವಿಶೇಷತಃ ನವೆಂಬರ್ ೧೦ ರಿಂದ ಡಿಸೆಂಬರ್ ೩, ಎಪ್ರಿಲ್ ೮ ರಿಂದ ಮೇ ೨೩ ಹಾಗು ಅಗಸ್ಟ ೨೫ ರಿಂದ ಅಕ್ಟೋಬರ್ ೧೨ ರ ವರೆಗಿನ ಅವಧಿಯು ಯಶಸ್ಸಿಗೆ ತುಂಬ ಅನುಕೂಲವಾಗಿದೆ.

ಈ ರಾಶಿಯ ಗರ್ಭವತಿಯರಲ್ಲಿ ಬಹುತರರಿಗೆ ಹೆಣ್ಣು ಮಗುವಾಗುವ ಯೋಗವಿದ್ದು ವಿಶೇಷವಾಗಿ ನವೆಂಬರ್ ೧ ರಿಂದ ಡಿಸೆಂಬರ್ ೩, ಫೆಬ್ರುವರಿ ೨೫ ರಿಂದ ಎಪ್ರಿಲ್ ೮ ಹಾಗು ಜುಲೈ ೯ ರಿಂದ ಅಗಸ್ಟ ೨೫ ರ ವರೆಗಿನ ಅವಧಿಯಲ್ಲಿ ಪ್ರಸೂತರಾದರೆ ತುಸುವಾದರೂ ಪ್ರಸೂತಿಕಷ್ಟವೆನಿಸುವ ಸಂಭವವಿದೆಯಾದರೂ ಪ್ರಾಣಭಯವೇನೂ ಇಲ್ಲ; ಮಗುವೂ ಸಶಕ್ತವಾಗಿರುವುದು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ನವೆಂಬರ್ ೧೬ ರಿಂದ ಡಿಸೆಂಬರ್ ೫, ಮಾರ್ಚ್ ೧೮ ರಿಂದ ಎಪ್ರಿಲ್ ೨, ಜೂನ್ ೧ ರಿಂದ ೨೫ ಹಾಗು ಅಕ್ಟೋಬರ್ ೨ ರಿಂದ ೩೦ ರ ವರೆಗಿನ ಅವಧಿಯಲ್ಲಾದರೆ ಅವರು ನಾಮ್ನಾತ್ಮಕ್ಯದಿಂ ಉತ್ತೀರ್ಣರಾಗುವುದು ನಿಶ್ಚಿತ.

ಶುಭಂಭವತು





ನನ್ನ ಮಕ್ಕಳು

— ಎಂ. ಕೆ. ಇಂದಿರಾ



"ಡಾಕ್ಟರೇ, ಡಾಕ್ಟರೇ......"

ಎಂದು ತನ್ನ ಹಿಂದೆ ಓಡಿಬರುತ್ತಿದ್ದ ಹುಡುಗಿಯನ್ನು ಒಂದು ಗಳಿಗೆ ನಿಂತು ನೋಡಿದರು ಡಾಕ್ಟರ್ ಕುಮುದಾ. ಗೋಗರೆವ ದೃಷ್ಟಿಯಿಂದ ನೋಡಿದಳು ಹುಡುಗಿ. ಆದರೂ ಚಟುವಟಿಕೆಯ ಮನೋಸ್ಥೈರ್ಯದ ಹುಡುಗಿಯವಳು ಎನ್ನಿಸಿತು ಡಾಕ್ಟರಿಗೆ.

ದಿನವೂ ಸಾವಿರಾರು ಜನರು ಬಂದು ಹೋಗುವ ಹೆರಿಗೆಯ ಆಸ್ಪತ್ರೆಯದು. ಡಾಕ್ಟರು ಒಂದು ಗಳಿಗೆಯಲ್ಲಿ ಊಹಿಸಿದರು.

ಈ ಹುಡುಗಿಯ ತಾಯಿಗೋ, ಅಕ್ಕನಿಗೋ ಹೆರಿಗೆಯಾಗಿರಬಹುದು. ಈಗ ಒಳಗೆ ಬಿಡುವುದಿಲ್ಲ ಎಂದಿರಬೇಕು ನರ್ಸ್. ಆದಕ್ಕಾಗಿ ನನ್ನನ್ನು ಕೇಳಲು ಬಂದಿರಬಹುದು

ಅವರು ವಾರ್ಡುಗಳಿಗೆ ರೌಂಡ್ ಹೋಗಲು ಹೊರಟಿದ್ದಾರೆ. ನಿಧಾನವಾಗಿ ನಿಂತು ಮಾತನಾಡುವ ಸಮಯವೂ ಅಲ್ಲ, ಅವಸರದಲ್ಲೇ ಕೇಳಿದರು.

"ಏನಮ್ಮ? ಏನಾಗಬೇಕು ನಿನಗೆ?"

"ನಮ್ಮ ತಾಯಿ ಹೆರಿಗೆಗೆ ಬಂದಿದಾರೆ ಡಾಕ್ಟ್ರೇ"

ಡಾಕ್ಟರರಿಗೆ ನಗು ಬಂದಿತು—

"ಬಂದಿದ್ದರೆ ಆಗುತ್ತೆ. ಹೆರಿಗೆ ವಾರ್ಡಿನಲ್ಲಿ ಇದಾರಾ?"

"ಹೌದು ಡಾಕ್ಟ್ರೇ. ಎಂಟನೇ ಹೆರಿಗೆ. ನಿನ್ನೆ ರಾತ್ರಿ ಬಂದ್ರು. ಇನ್ನೂ ಹೆರಿಗೆ ಆಗಿಲ್ಲ ಅಂತಂದ್ರು. ಈಗ ನೀವು ಬಂದ್ರಲ್ಲ ಅದೇ ವಾರ್ಡಿನಲ್ಲಿದ್ದಾರೆ."

ಡಾಕ್ಟರು ಒಂದು ಗಳಿಗೆ ಸುಮ್ಮನೆ ನಿಂತರು. ಆದೇ ಆಗ ಅವರು ಲೇಬರ್ ವಾರ್ಡಿನಿಂದ ಹೊರಬಂದಿದ್ದರು. ಅಲ್ಲಿ ಮೂರು ನಾಲ್ಕು ಕೇಸುಗಳು ನೋವು ತಿನ್ನುತ್ತಿವೆ. ಅವುಗಳಲ್ಲಿ ಯಾರು ಇರಬಹುದು? ಅದೇ ತಾನೇ ರಿಜಿಸ್ಟರ್ ನೋಡಿ ಬಂದಿದ್ದು ನೆನಪಾಯಿತು.

ಹೌದು ಎಂಟನೇ ಹೆರಿಗೆ ಒಂದು ಕೇಸು! ಲೇಬರ್ ವಾರ್ಡಿನಲ್ಲಿ ಇನ್ನಿಬ್ಬರು ಹೌಸ್ ಸರ್ಜನ್ನರು, ಮೂರು ನಾಲ್ಕು ಜನ ನರ್ಸುಗಳೂ ಇದ್ದಾರೆ. ತಾವು ಅಲ್ಲಿರಬೇಕಾದ ಪ್ರಮೇಯ ಇಂದೇನೂ ಇರಲಿಲ್ಲ. ಸೀರಿಯಸ್ ಕೇಸು ಯಾವುದೂ ಇಲ್ಲ-ಎಂದುಕೊಂಡು ವಾರ್ಡು ಸುತ್ತಿ ಬರಲು ಹೊರಟಿದ್ದಾರೆ.

ಅವರು ಹುಡುಗಿಯನ್ನು ಕೇಳಿದರು—

"ಈಗ ನೀನು ನಿಮ್ಮ ತಾಯಿನಾನ ನೋಡೋಕೆ ಆಗೋದಿಲ್ಲಮ್ಮ. ಏನಾದರೂ ಹೇಳಿಕಳಿಸಬೇಕಾ, ನಿಮ್ಮ ತಾಯಿಗೆ?"

ಹುಡುಗಿಗೆ ಮತ್ತಷ್ಟು ಧೈರ್ಯ ಬಂದಂತೆ ಕಂಡಿತು, ಸರಳವಾಗಿ ಮಾತಾಡಿದಳು—

"ಏನಿಲ್ಲ ಡಾಕ್ಟ್ರೆ. ಈ ಸರ್ತಿ ನಮ್ಮ ತಾಯಿಗೆ ಇನ್ನು ಮೇಲೆ ಮಕ್ಕಳಾಗದ ಹಾಗೆ ಆಪ್ರೇಷನ್ ಮಾಡಿಬಿಡಿ. ನಾವು ಐದು ಜನ ಮಕ್ಕಳು ಇದೀವಿ ಈಗ..."

ಡಾಕ್ಟರಿಗೆ ಆಶ್ಚರ್ಯವಾಯಿತು. ಅವರು ಕಣ್ಣರಳಿಸಿ ಹುಡುಗಿಯನ್ನು ನೋಡಿದರು.

ಹೆಚ್ಚೆಂದರೆ ಹದಿನಾಲ್ಕು ವರ್ಷವಿರಬಹುದು ಹುಡುಗಿಗೆ. ಕಂಕುಳಲ್ಲಿ ಗೊಬ್ಬದ್ರ ಮುಖದ, ರೋಗದ ಒಂದು ವರ್ಷದ ಹೆಣ್ಣು ಮಗು ಒಂದನ್ನ ಎತ್ತಿಕೊಂಡಿದ್ದಾಳೆ, ಬಲಗೈಲಿ ತಾಯಿಗಾಗಿ ಒಂದು ಕೈಲು ತಂಬಿಗೆಯಲ್ಲಿ ಕಾಫಿಯೋ ಏನೊ ತಂದಿರಬಹುದು. ತೀರಾ ಸಾಮಾನ್ಯವಾದ ಹರಕಲು ಬಟ್ಟೆ ತೊಟ್ಟಿದ್ದಾಳೆ. ಆದರೆ ಮುಖದಲ್ಲಿ ಕಣ್ಣುಗಳಲ್ಲಿ ಹಿಡಿದ ಕೆಲಸ ಗೆಲ್ಲುವೆನೆಂದ ದಿಟ್ಟತನ ಮಾತ್ರ ಇದೆ. ಡಾಕ್ಟರು ಹುಡುಗಿಯನ್ನು ಬದಿಗೆ ಕರೆದು ಹೇಳಿದರು,

"ನೀನು ಸ್ವಲ್ಪ ಹೊತ್ತು ಈ ಬೆಂಚಿನ ಮೇಲೆ ಕೂತಿರು ಮಗು, ನಾನು ವಾರ್ಡಿಗೆ ಹೋಗಿ ಬರ್ತೀನಿ. ಆ ಮೇಲೆ ಮಾತಾಡೋದು."

ಡಾಕ್ಟರು ತನ್ನ ಮಾತಿಗೆ ಉತ್ತರ ಕೊಟ್ಟದ್ದೇ ಹುಡುಗಿಗೆ ಬಹಳ ಸಂತೋಷವಾದಂತೆ ಕಂಡಿತು.

"ಹಾಗೇ ಆಗಲಿ ಡಾಕ್ಟ್ರೇ. ನಾನು ಇಲ್ಲೇ ಕೂತಿರ್ತೀನಿ. ನೀವು ಬರೋತನಕ"

ಎಂದಳು ಸಂಭ್ರಮದಿಂದ. ಅದೇ ವೇಳೆಗೆ ಎದುರಿನಿಂದ ಇನ್ನಿಬ್ಬರು ಡಾಕ್ಟರುಗಳು ಬಂದು ಆರ್. ಎಂ. ಓ. ಗೆ ಸುಪ್ರಭಾತ ಹೇಳಿ ಅವರ ಜೊತೆಯಲ್ಲೇ ವಾರ್ಡಿಗೆ ಹೋದರು.

ಆರ್. ಎಂ. ಓ ವಾರ್ಡುಗಳನ್ನು ಸುತ್ತಿ ಬರುವುದಕ್ಕೆ ಸುಮಾರು ಒಂದು ಗಂಟೆಯೇ ಹಿಡಿದಿರಬಹುದು. ಅವರು ವಾರ್ಡುಗಳಲ್ಲಿ ಬಾಣಂತಿಯರನ್ನು ನೋಡುತ್ತಿರುವಾಗಲೂ ಹುಡುಗಿಯ ವಿಲಕ್ಷಣ ಮಾತೇ ಅವರ ಮನದಲ್ಲಿ ತಾಕಲಾಡುತ್ತಿರಬಹುದು. ಅವರು ಯಾರಿಗೂ ಐಬು ತೋರದಂತೆ ಮತ್ತಿಬ್ಬರು ಡಾಕ್ಟರುಗಳೊಂದಿಗೆ ನಡೆದು ಬಂದರೂ ಅವರ ಕಣ್ಣುಗಳು ಹುಡುಗಿ ಎಲ್ಲಿ ಕುಳಿತಿದ್ದಾಳೆಂದು ಹುಡುಕಿತು. ಅಷ್ಟರಲ್ಲೇ ಹುಡುಗಿ ಎದ್ದು ನಿಂತು—

ಡಾಕ್ಟರು ತನ್ನ ವಿಷಯ ಮರೆತು ಬಿಟ್ಟರೇ ಎನ್ನುವಂತೆ ಅವರ ಮುಖವನ್ನೇ ನೋಡಿದಳು. ಅವರು ತಟ್ಟನೆ ನಿಂತು ಇಂಗ್ಲೀಷಿನಲ್ಲಿ ಅವರೊಂದಿಗೆ ಏನೋ ಹೇಳಿ—

"ಇಲ್ಲಿ ಬಾ ಮಗು"

ಎಂದು ಪಕ್ಕದಲ್ಲಿಯೇ ಇದ್ದ ತಮ್ಮ ಆಫೀಸಿಗೆ ಕರೆದೊಯ್ದರು. ಹುಡುಗಿ ಧೈರ್ಯವಾಗಿಯೇ ಅವರ ಹಿಂದೆ ಹೋದಳು. ಅಲ್ಲಿ ಒಬ್ಬಿಬ್ಬರಲ್ಲ ಆರೆಂಟು ಜನ ಡಾಕ್ಟರುಗಳು ಸೇರಿ ಏನೇನೋ ಚರ್ಚೆಯಲ್ಲಿ ಮುಳುಗಿದ್ದರು. ಡಾ|| ಕುಮುದಾ ಅವರನ್ನು ಕಂಡೊಡನೆ ಅವರೆಲ್ಲ ಇತ್ತ ತಿರುಗಿದರು. ಕುಮುದಾ ಶಾಂತವಾದ ದನಿಯಲ್ಲಿ ಇಂಗ್ಲೀಷಿನಲ್ಲಿ ಅವರೆಲ್ಲರಿಗೆ ಏನೇನೋ ಹೇಳಿದರು. ಹುಡುಗಿ ಸುಮ್ಮನೆ ಅವರೆಲ್ಲರ ಮುಖ ನೋಡುತ್ತಾ ನಿಂತಿದ್ದಳು. ಡಾಕ್ಟರು ಹೇಳಿದ್ದು ಸುಮಾರಾಗಿ ಹುಡುಗಿಗೆ ಅರ್ಥವಾಯಿತು. ನಂತರ ಡಾಕ್ಟರು ಹುಡುಗಿಯನ್ನು ಬೆಂಚಿನ ಮೇಲೆ ಕೂರಹೇಳಿ ಒಂದೊಂದೇ ಪ್ರಶ್ನೆ ಕೇಳಿದರು. ಉಳಿದ ಡಾಕ್ಟರುಗಳೆಲ್ಲ ತುಟಿ ಬಿಚ್ಚದೆ ಕೇಳುತ್ತ ಕುಳಿತಿದ್ದರು.

"ಯಾಕಮ್ಮ, ನಿಮ್ಮ ತಾಯಿಗೆ ಆಪ್ರೇಷನ್ ಮಾಡಬೇಕು ಅಂದೆ?"

"ನಮ್ಮ ತಾಯಿಗೆ ಇದು ಎಂಟನೇ ಹೆರಿಗೆ ಡಾಕ್ಟರೆ. ನಾವು ಐದು ಜನ ಹೆಣ್ಣುಮಕ್ಕಳು ಇದೀವಿ. ಎರಡು ಹೆಣ್ಣು ಸತ್ತುಹೋಯ್ತು. ನಮ್ಮ ತಾಯಿ ಬಾಣಂತಿ ಆದರೆ ನನಗೆ ತುಂಬಾ ಕೆಲಸ. ಓದೋಕೇ ಆಗೋಲ್ಲ. ಅದಕ್ಕೆ ಹೇಳ್ದೆ."

ಅವರೆಲ್ಲ ಕೌತುಕದಿಂದ ಒಬ್ಬರ ಮುಖ ಮತ್ತೊಬ್ಬರು ನೋಡಿಕೊಂಡರು.

"ನೀನು ಏನು ಓದುತ್ತಾ ಇದೀಯಮ್ಮ?"

"ನಾನು ಈ ಸರ್ತಿ ಎಸ್. ಎಸ್. ಎಲ್. ಸಿ. ಕಟ್ಟೀದೀನಿ ಡಾಕ್ಟ್ರೇ. ಪರೀಕ್ಷೆ ಇನ್ನು ಹದಿನೈದು ದಿನಾನೂ ಇಲ್ಲ. ನನಗೆ ಈ ಮನೆಕೆಲಸದಿಂದ ಓದೋಕೆ ಒಂದು ಗಳಿಗೇನೂ ಟೈಂ ಸಿಗೋದೇ ಇಲ್ಲ. ಈಗ್ಲೇ ಈ ಬಾಣಂತನಾನೂ ಬಂದಿದೆ."

"ಮನೇಲಿ ಬೇರೆ ಯಾರೂ ಇಲ್ವೇನಮ್ಮ?"

"ಇಲ್ಲ ಡಾಕ್ಟ್ರೇ. ಎಲ್ಲ ನನ್ನ ತಂಗೀರೇ ನಾಲ್ಕು ಜನಾನೂ. ನಮ್ಮ ತಂದೆ ಬೆಳಗ್ಗೆ ಅಂಗಡೀಗೆ ಹೋದರೆ ರಾತ್ರೀನೇ ಮನೆಗೆ ಬರೋದು. ಎಲ್ಲ ಕೆಲಸ ನಾನೇ ಮಾಡಬೇಕು."

"ಯಾಕೆ ನಿನ್ನ ತಂಗೀರು ಏನೂ ಮಾಡೋದಿಲ್ವೋ?"

"ಇಲ್ಲ ಡಾಕ್ಟ್ರೇ ಒಬ್ಬಳಿಗೆ ಎರಡು ಕಾಲೂ ಇಲ್ಲ. ಇನ್ನೊಬ್ಬಳಿಗೆ ಯಾವಾಗಲೂ ವಾಂತಿ, ಭೇದಿ ಆಗ್ತಾನೇ ಇರುತ್ತೆ. ಇನ್ನೊಬ್ಬಳು ಇನ್ನು ಎಂಡೂವರೆವರ್ಷದವಳು. ಇದಕ್ಕೂ ಅಷ್ಟೇ, ದಿನ ಬೆಳಗಾದರೆ ಒಂದಲ್ಲಾ ಒಂದು ಕಾಹಿಲೆ ಇದ್ದೇ ಇರುತ್ತೆ."

"ಯಾಕೆ ಯಾರಿಗೂ ಔಷಧಿ ಕೊಡಸ್ತಾ ಇಲ್ವೆ?"

ಹುಡುಗಿ ಒಂದು ಗಳಿಗೆ ತಡೆದು ಹೇಳಿದಳು-

"ಷಾಪಿನಲ್ಲಿ ಕೊಡಿಸೋಕೆ ನಮ್ಮ ತಂದೆ ದುಡ್ಡು ಕೊಡೋದಿಲ್ಲ. ಬೇರೆ ಇನ್ನು ಯಾವ ಆಸ್ಪತ್ರೆಗೆ ಹೋದರೂ ನಾನೇ ಹೋಗಿ ಕ್ಯೂ ನಿಂತುಕೋಬೇಕು. ಆ ಔಷಧಿ ಕೊಟ್ರು ಅದೇಕೋ ಕಾಹಿಲೆ ವಾಸಿನೇ ಆಗೋಲ್ಲ."

ಎಲ್ಲರಿಗೂ ಪಕ್ಕನೆ ನಗು ಬಂದಿತು. ತಡೆ

ಯಲು ಯಾರೂ ಪ್ರಯತ್ನಿಸದೆ ಸ್ವಚ್ಛಂದವಾಗಿ ನಕ್ಕರು. ಹುಡುಗಿ ಎಲ್ಲರ ಮುಖವನ್ನೂ ನೋಡಿದಳು.

"ನಿನ್ನ ತಂಗಿ ಕಾಲು ಏನಾಗಿದೆ?"

"ಅದೇನಾಗಿದೆಯೋ ನಂಗೆ ಗೊತ್ತಿಲ್ಲ ಡಾಕ್ಟ್ರೇ. ಅವಳು ಹುಟ್ಟಿದ ಲಾಗಾಯ್ತು ಎರಡು ಕಾಲೂ ಸಣ್ಣಕ್ಕೆ ಕಡ್ಡಿ ಹಾಗಿದೆ. ಕೂತಲ್ಲಿಂದ ಅಲುಗಾಡೋಕ್ಕೇ ಆಗಲ್ಲ ಅವಳಿಗೆ."

"ನಿಮ್ಮ ತಂದೆ ಎಂಥ ಅಂಗಡಿ ಇಟ್ಟಿದಾರಮ್ಮ?"

ಪ್ಲಾನಿಂಗ್ ಜಾಹೀರಾತು ಹಾಕ್ತಾ ಇದಾರಲ್ಲ ಡಾಕ್ಟರೆ. ರೇಡಿಯೋದಲ್ಲಿ ದಿನಾ ಬರ್‍ತಾ ಇರುತ್ತೆ. ಇನ್ನೂ ಏನೇನೋ ಇದೆಯಂತೆ ನನಗೊತ್ತಿಲ್ಲ. ಯಾಕೋ ನಮ್ಮಮ್ಮ ಒಂದೂ ಔಷಧ ತಗೊಳ್ಳೊಲ್ಲ."

ಎಲ್ಲ ಡಾಕ್ಟರುಗಳೂ ಕುಲುಕುಲು ನಕ್ಕರು. ಡಾ. ಕುಮುದಾ ಗಂಭೀರವಾಗಿ ಕೇಳಿದರು —



"ಎಂತಾ ಅಂಗಡೀನೂ ಇಲ್ಲ ಡಾಕ್ಟ್ರೆ. ಅವರಿಗೆ ಬೋರ್ಡ್ ಬರೆಯೋ ಕೆಲಸ. ಯಾವಾಗಲೂ ಅವರು ಅಂಗಡೀಲೇ ಬೋರ್ಡ್ ಬರೆಯೋದು."

"ಎಲ್ಲಿದೆ ನಿಮ್ಮ ತಂದೆ ಅಂಗಡಿ?"

"ಮಸ್ತಾನ್ ಸಾಬಿ ಗುಡಿ ಬೀದೀಲಿ."

"ಮನೆ?"

"ಎನ್. ಆರ್. ಕಾಲೋನಿ."

ಈಗ ಡಾಕ್ಟರು ಒಂದೊಂದೇ ಅಕ್ಷರವನ್ನು ಬಿಡಿಬಿಡಿಯಾಗಿ ಆಡಿದರು—

"ಈಗ ನಿಮ್ಮ ತಾಯಿಗೆ ಅಪ್ರೇಷನ್ ಮಾಡೋ ವಿಷಯ ನಿಮ್ಮ ತಾಯಿ ತಂದೆ ಇಬ್ಬರೂ ಹೇಳಿಲ್ಲ. ನೀನು ಇನ್ನೂ ಹುಡುಗಿ. ನೀನು ಹೇಳ್ತಾ ಇದ್ದೀಯಲ್ಲ."

ಈಗಲೂ ಹುಡುಗಿ ನಿಜವನ್ನೇ ಹೇಳಿದಳು-

"ಹೌದು ಡಾಕ್ಟ್ರೇ ನಮ್ಮ ತಾಯಿಗೆ ಗಂಡು ಮಕ್ಕಳಾಗಬೇಕೂ ಅಂತ ಆಸೆ; ಅದಕ್ಕೆ ಅವರು ಇಲ್ಲೀತನಕ ಏನೂ ಮಾಡಿಕೊಂಡಿಲ್ಲ. ನಮ್ಮ ತಂದೇಗೆ ಇದನ್ನೆಲ್ಲಾ ಹೇಳಿದರೆ ಬೈದುಬಿಡ್ತಾರೆ. ಅದಕ್ಕೇ ನಾನೇ ಹೇಳ್ದೆ"

ಡಾಕ್ಟರು ಸಾವಧಾನವಾಗಿ ಅಂದರು—

"ನಿಮ್ಮ ತಾಯಿ—ತಂದೆ ಒಪ್ಪದೆ ಅಪ್ರೇಷನ್ ಮಾಡೋ ಹಾಗೇ ಇಲ್ಲವಲ್ಲಮ್ಮ."

ಹುಡುಗಿಯ ಉತ್ತರ ಸಿದ್ಧವಿತ್ತು—

"ನೀವೇ ನಮ್ಮ ತಾಯಿಗೆ ಹೇಳಿ ಡಾಕ್ಟ್ರೆ. ನೀವು ಹೇಳಿದರೆ ಕೇಳ್ತಾರೆ"

"ನಿಮ್ಮ ತಂದೇನ ಕರಕೊಂಡು ಬಾ ಹಾಗಾದರೆ. ನಿಮ್ಮ ತಾಯಿಗೆ ನಾನು ಹೇಳ್ತೀನಿ."

ಹುಡುಗಿ ಮುಖ ಸಪ್ಪೆಯಾಯಿತು—

"ನಮ್ಮ ತಂದೆ ಬರೋದಿಲ್ಲ ಡಾಕ್ಟ್ರೆ. ಅಂಗಡೀಗೆ ಕರಿಯೋಕೆ ಹೋದರೆ ಬೈತಾರೆ."

ಡಾಕ್ಟರು ಕನಿಕರದಿಂದ ಹೇಳಿದರು—

"ನಿಮ್ಮ ತಂದೆ ಒಪ್ಪಿಗೆ ಇಲ್ಲದೆ ಇದು ಆಗೋದಿಲ್ಲವಲ್ಲಮ್ಮ. ನಿನಗೆ ಯಾರು ಹೇಳಿದರು ಅಪೇಷನ್ ಮಾಡಿಸಿದರೆ ಮಕ್ಕಳಾಗೋಲ್ಲ ಅಂತ?"

ಮುಲಾಜಿಲ್ಲದೆಯೇ ಮರು ನುಡಿದಳು ಹುಡುಗಿ. "ಎಲ್ಲಾ ಕಡೇನೂ ಫ್ಯಾಮಿಲಿ

"ನೀನು ಇದುವರೆಗೂ ಯಾಕೆ ನಿಮ್ಮ ತಾಯಿಗೆ ಹೇಳಲಿಲ್ಲ?"

"ಅವರು ನನ್ನ ಬೈತಾರೆ. ಗಂಡು ಮಕ್ಕಳಿಲ್ಲ ಹೋದರೆ ನೀನೇನು ನಮಗೆಲ್ಲ ಸಂಪಾದನೆ ಮಾಡಿ ಹಾಕ್ತೀಯಾ?— ಅಂತಾರೆ."

"ರೇಡಿಯೋದಲ್ಲಿ ಬರೋದನ್ನ ಅವರು ಕೇಳೋದಿಲ್ವೆ?"

"ನಮ್ಮನೇಲಿ ರೇಡಿಯೋ ಇಲ್ಲ. ನಮ್ಮ ಅಕ್ಕ ಪಕ್ಕದ ಮನೇಲಿ ಇದೆ. ನಮ್ಮ ತಾಯಿ ಕೇಳೋದಿಲ್ಲ."

ಅವರು ಹುಡುಗಿಯ ಮುಖವನ್ನೇ ನೋಡುತ್ತಾ ಅಂದರು.

"ಅವರು ಹೇಳಿದ್ದು ನಿಜ, ಅಲ್ಲವೇ? ಇನ್ನು ಸ್ವಲ್ಪ ದಿನಕ್ಕೆ ನೀನು ಮದುವೆ ಆಗಿ ನಿನ್ನ ಮನೆಗೆ ಹೊರಟುಹೋಗುತ್ತಿ. ಆವಾಗ ಅವ

ರನ್ನ ನೋಡೋರು ಯಾರು? ಅದಕ್ಕೇ ಗಂಡು ಮಗು ಆಗುತ್ತೇನೋ ಅಂತ ಅವರು ಕಾಯ್ತಾ ಇದ್ದಾರೆ."

ಡಾಕ್ಟರು ತನ್ನನ್ನು ಪರೀಕ್ಷಿಸಲು ವ್ಯಂಗ್ಯವಾಗಿ ಹೇಳುತ್ತಿದ್ದಾರೆ ಎಂಬುದು ಹುಡುಗಿಗೆ ಅರ್ಥವಾಯಿತು. ಆದರೂ ಹುಡುಗಿ ಅಳುಕಲಿಲ್ಲ.

"ಇಲ್ಲ ಡಾಕ್ಟ್ರೇ, ನಾನು ಎಸ್. ಎಸ್. ಎಲ್. ಸಿ. ಆದ ಮೇಲೆ ಎಲ್ಲಾದರೂ ಕೆಲಸಕ್ಕೆ ಸೇರ್ಕೋತೀನಿ. ನನಗೆ ಮದುವೆ ಮಾಡಬೇಡ ಅಂತ ಹೇಳ್ದೆ ನಮ್ಮಮ್ಮಂಗೆ. ಹಾಗಂದ್ರೆ ಸ್ಕೂಲಿಗೇ ಹೋಗಬೇಡ ಅಂತಾರೆ ನಮ್ಮಮ್ಮ."

"ಯಾಕೆ ನೀನು ಓದೋದು ಅವರಿಗೆ ಇಷ್ಟ ಇಲ್ವೆ?"

"ಅದೇನೋ ಯಾರಿಗ್ಗೊತ್ತು. ಯಾವಾಗಲೂ ಮನೇಲಿರು. ಕೆಲಸ ಮಾಡು ಅಂತಾರೆ. ನಾನು ಮನೆಕೆಲಸ ಎಲ್ಲ ಮಾಡಿ ಸ್ಕೂಲಿಗೆ ಹೋಗ್ತೀನಿ"

"ಹಾಗಾದರೆ ನಿನಗೆ ಓದೋದು ಬಹಳ ಇಷ್ಟ ಅಲ್ವೆ?"

ಹುಡುಗಿಯ ಕಣ್ಣುಗಳು ಅರಳಿದವು—

"ಹೌದು ಡಾಕ್ಟ್ರೇ. ನನಗೆ ಕಾಲೇಜಿಗೆ ಹೋಗಬೇಕು ಅಂತಾ ತುಂಬಾ ಇಷ್ಟ. ಆದರೆ ನಮ್ಮಪ್ಪ-ಅಮ್ಮ ಇಬ್ಬರೂ ಬಯ್ತಾರೆ. ದುಡ್ಡು ಕೊಡೋದಿಲ್ಲ."

"ನಿನಗೆ ಏನು ಓದಬೇಕೂ ಅಂತ ಇಷ್ಟ ಇದೆ?"

ಹುಡುಗಿ ಅನುಮಾನಿಸಿದಳು—

"ಇನ್ನು ನನಗೆ ಓದೋಕೆ ಆಗೋಲ್ಲ. ಡಾಕ್ಟ್ರೇ ಎಸ್. ಎಸ್. ಎಲ್. ಸಿ. ಪಾಸಾದ್ರೆ ಎಲ್ಲಾದರೂ ಕೆಲಸಕ್ಕೆ ಸೇರ್ಕೋತೀನಿ. ನಮ್ಮಪ್ಪ ಕೊಡೋದುಡ್ಡು ಸಾಕಾಗೋಲ್ಲ ಮನೆ ಖರ್ಚಿಗೆ."

ಒಂದುಗಳಿಗೆ ಗದ್ದಕ್ಕೆ ಕೈ ಊರಿಗೊಟ್ಟು ಯೋಚಿಸಿ ಅಂದರು, ಡಾಕ್ಟರು-

"ಎಸ್. ಎಸ್. ಎಲ್. ಸಿ ಪಾಸಾದರೆ ಪಿ. ಯು. ಸಿ. ಗೆ ಯಾಕೆ ಸೇರಬಾರದು ನೀನು?"

"ಅದೇ ಹೇಳಿದೆನಲ್ಲ ಡಾಕ್ಟರೆ. ನಮ್ಮಪ್ಪ ದುಡ್ಡು ಕೊಡೋದಿಲ್ಲ."

"ಒಂದು ಪಕ್ಷ ಯಾರಾದರೂ ದುಡ್ಡು ಕೊಟ್ಟು ಓದಿಸಿದರೆ ಮೆಡಿಕಲ್ ಓದುತ್ತೀಯಾ?"

ಅವಳ ಸೊಂಟದ ಮಗು ಕುಸುಕುಸು ಎನ್ನುತ್ತಿತ್ತು. ಅದನ್ನು ಹೆಗಲಿಗೆ ಹಾಕಿ ತಟ್ಟುತ್ತಾ ಅಲ್ಲಿದ್ದ ಲೇಡಿ ಡಾಕ್ಟರುಗಳನ್ನೆಲ್ಲಾ ನೋಡಿ ನಿಧಾನವಾಗಿ ಅಂದಳು ಹುಡುಗಿ-

"ಅದೆಲ್ಲಾ ನಮಗೆ ಆಗೋಲ್ಲ ಡಾಕ್ಟರೆ. ನಾನು ಇಷ್ಟು ಓದಿದ್ದೆ ಹೆಚ್ಚು. ಸದ್ಯ ನಮಗೆ ಸಾವಿರಾರು ರೂಪಾಯಿ ಕೊಡೋರು ಯಾರಿದ್ದಾರೆ."

"ಹೂಂ. ಇರಲಿ, ನಿನ್ನ ಹೆಸರೇನಮ್ಮ?"

"ಜಯಲಕ್ಷ್ಮಿ."

ಡಾಕ್ಟರು ಕುರ್ಚಿಯಿಂದ ಏಳುತ್ತಾ ಅಂದರು-

"ಈಗ ನಿನ್ನ ತಾಯಿಗೆ ಆಪರೇಷನ್ ಆಗಬೇಕೂ ಅಂತಿದ್ದೆ, ಈಗಲೇ ಹೋಗಿ ನಿಮ್ಮ ತಂದೇನ ಕರಕೊಂಡು ಬಾ. ನಾವು ಅವರಿಗೆ ಹೇಳಿ ಪ್ರಯತ್ನಿಸುತ್ತೇವೆ."

ಹುಡುಗಿ ಹಿಗ್ಗಿದಳು—

"ಹಾಗೇ ಆಗಲಿ ಡಾಕ್ಟ್ರೇ. ಈಗಲೇ ಅಂಗಡೀಗೆ ಹೋಗಿ ಕರೀತೀನಿ."

"ಹ್ಯಾಗೆ ಹೋಗ್ತಿ, ಅಂಗಡೀಗೆ?"

"ನಡಕೊಂಡೇ ಹೋಗ್ತೀನಿ"

"ಈ ಮಗೂನ ಎತ್ಕೊಂಡು ಹೇಗೆ ಹೋಗ್ತಿ?"

"ನನಗೆ ಅಭ್ಯಾಸ ಇದೆ ಡಾಕ್ಟ್ರೇ. ದಿನಾ ಸ್ಕೂಲಿಗೆ ಹೋಗ್ತೀನಲ್ಲ. ಈಗ್ಲೂ ನಾನು ಮನೆಯಿಂದ ನಡಕೊಂಡೇ ಬಂದೆ."

"ಈಗ ಯಾರಿದ್ದಾರೆ ನಿಮ್ಮನೇಲಿ?"

"ಯಾರೂ ಇಲ್ಲ. ನನ್ನ ತಂಗೀರನ್ನ ಪಕ್ಕದ ಮನೇಲಿ ಕೂರಿಸಿ ಬಂದಿದೀನಿ."

"ಹಾಗಾದರೆ ಬೇಗ ಹೋಗಿ ಬಾ ನೋಡೋಣ."

ಹುಡುಗಿ ಸರಸರನೆ ಹೊರಟೇ ಬಿಟ್ಟಳು. ಅವಳ ಧೈರ್ಯ ಸ್ಥೈರ್ಯ ಕಂಡು ಡಾಕ್ಟರುಗಳು ಬೆರಗಾಗಿಬಿಟ್ಟರು. ಕೇವಲ ಹದಿನಾರು ವರ್ಷದ ಹುಡುಗಿಗೆ ಅದೆಷ್ಟೊಂದು ತಿಳುವಳಿಕೆ. ಬಹಳ ಹೊತ್ತಿನ ವರೆಗೆ ಅವರೆಲ್ಲಾ ಅದೇ ವಿಷಯ ಮಾತಾಡಿದರು. ಮತ್ತೆ ಒಂದು ಗಂಟೆಯೊಳಗಾಗಿ ಹುಡುಗಿ ತಂದೆಯನ್ನು ಕರೆದುಕೊಂಡು ಬಂದು ಡಾಕ್ಟರ ಮುಂದೆ ನಿಲ್ಲಿಸಿದಳು. ಡಾ|| ಕುಮುದಾ ಅತನನ್ನು ಒಂದೇ ನೋಟದಿಂದ ಅಳೆದು ಬಿಡಬಲ್ಲವರು.

ಮೃಗತ್ವವನ್ನೇ ಪಡೆದ ಮುಖ. ಯಾವದೋ ಮೇಲೆ ಹಿಟ್ಟು ತುಂಬಿಕೊಂಡ ಕೂದಲುಗಳು. ಕೈಕಾಲು ಬೆಟ್ಟುಗಳಿಗೆ ಬಣ್ಣ ಮೆತ್ತಿಕೊಂಡು ಹಾಗೆಯೇ ಬಂದಿದ್ದ ಆ ಮನುಷ್ಯನ. ಡಾಕ್ಟರು ಅತನೊಡನೆ ವಿಶೇಷ ಮಾತು ಬೆಳಸದೆ ಎರಡೇ ಮಾತಾಡಿದರು-

"ನಿಮ್ಮ ಹೆಂಡತಿಗೆ ಇನ್ನೊಂದು ಮಗುವಾದರೆ ಆಕೆ ಬದುಕಿ ಉಳಿಯುವುದಿಲ್ಲ. ಅದಕ್ಕೆ ಈಗಲೇ ಆಪರೇಷನ್ ಆಗಬೇಕು. ಅದಕ್ಕೆ ನಿಮ್ಮ ಒಪ್ಪಿಗೆ ಕೊಟ್ಟರೆ ಆಪರೇಷನ್ ಮಾಡ್ತೇವೆ. ಇಲ್ಲದಿದ್ದರೆ ಇಲ್ಲ. ಒಪ್ಪಿಗೆ ಇದ್ದರೆ ಈ ಫಾರಮ್ಮಿಗೆ ಸಹಿ ಹಾಕಿ."

ಗಂಡುಮಕ್ಕಳಾಗಬೇಕೆಂಬ ಆಸೆ ಹೆಂಡತಿಗಿದ್ದಂತೆ ಅತನಿಗೇನೂ ಇರಲಿಲ್ಲ. ಇದೊಂದು ಕಾಟವೆನಿಸಿರಬಹುದು ಅತನಿಗೆ. ಡಾಕ್ಟರ ಮಾತಿಗೆ ಒಂದೂ ಉತ್ತರ ಕೊಡದೆ ಅವರು ತೋರಿಸಿದಲ್ಲಿ ಸಹಿ ಹಾಕಿ ಒಂದು ದೊಡ್ಡ ನಮಸ್ಕಾರ ಹೊಡೆದು ಹೊರಡುವ ಸುದ್ದಿಯನ್ನು ಎತ್ತದೆ ಸರಸರ ನಡೆದನಾತ.

ಡಾಕ್ಟರು ಅವನು ಹಾಕಿದ ಸಹಿಯನ್ನೇ ನೋಡಿದರು. ಆ ಬೋರ್ಡ್ ಬರೆಯುವಾತನ ಸಹಿ ಕೆಟ್ಟಕೆಟ್ಟದಾಗಿಯೇ ಇತ್ತು. ಅದರಲ್ಲಿ [illegible] ಜಯಲಕ್ಷ್ಮಿ.

ಅವಳ ತಾಯಿಗೆ [illegible]. ಮನ್ನೆ [illegible]

[illegible] ದಿನ ಆಪರೇಷನ್ನು ಆಯ್ತು. [illegible]

[illegible] ಜಯಲಕ್ಷ್ಮಿಯ [illegible]

ತಾಯಿಯನ್ನು ಮನೆಗೆ [illegible] ಜಯಲಕ್ಷ್ಮಿ. [illegible]

"[illegible] ಎಸ್. ಎಸ್. ಎಲ್. ಸಿ. [illegible]"

ಹುಡುಗಿ ಹಲ್ಲು ಕಿರಿದಳು—

"ಖಂಡಿತಾ ಬಂದು ಹೇಳ್ತೀನಿ ಡಾಕ್ಟ್ರೇ."

ಡಾಕ್ಟರು ಮುಗುಳ್ನಕ್ಕರು

"ನನಗೆ ಖಂಡಿತಾ ಪಾಸಾಗ್ತೀನಿ [illegible]

[illegible]

"[illegible] ಡಾಕ್ಟ್ರೇ"

[illegible]

"ಮುಂದೇನು ಮಾಡ್ತೀ?"

[illegible]

"ಹಾಗಾದರೆ [illegible]"

[illegible]

"ಇವತ್ತು ರಾತ್ರಿ ನನ್ನ ಮನೆಗೆ ಬಾ ಹೇಳ್ತೀನಿ."

ಅವರು ತಮ್ಮ ಮನೆಯ ವಿಳಾಸ ಗುರುತು ಹಾಕಿಕೊಟ್ಟರು. ಹುಡುಗಿ ವಂದಿಸಿ ಹೊರಟು ಹೋದಳು.

ಹುಡುಗಿಯ ಕೃತಜ್ಞತೆಯನ್ನು ಕಂಡು ಬೆರಗಾದ ಅವಿವಾಹಿತ ಡಾ. ಕುಮುದಾ ಅವಳಿಗೆ ಮುಂದೆ ಓದಲು ನೆರವು ನೀಡಿಕೊಟ್ಟರು. ಅವರ ನೆರವನ್ನು ಹುಸಿಗೊಳಿಸಲಿಲ್ಲ ಜಯಲಕ್ಷ್ಮಿ.
ಮುಂದಿನ ವರ್ಷ ದಾವಣಿಯ ಹೆಣ್ಣಾಗಿ ಮುತ್ತು ಹೆಚ್ಚಿನ ಅನುಭವ ಪಡೆದ ಜಯಲಕ್ಷ್ಮಿ, ತನ್ನ ಪರೀಕ್ಷೆಯ ಫಲಿತಾಂಶ ತಿಳಿಸಲು ಡಾಕ್ಟರ ಮನೆಗೇ ಬಂದಳು.

ಅಕ್ಷರಜ್ಞಾನವೇ ಇಲ್ಲದ, ಸಂಸ್ಕೃತಿಯ ಗಂಧವನ್ನೇ ಅರಿಯದ ತಂದೆ-ತಾಯಿಯರಿಂದ ಜನಿಸಿದ ಹುಡುಗಿ ಈ ಬಾರಿಯೂ ಮೊದಲನೆಯ ರ್‍ಯಾಂಕ್ ಪಡೆದಿದ್ದಾಳೆ.

ಡಾಕ್ಟರು ಅಭಿಮಾನದಿಂದ ಅವಳ ಬೆನ್ನು ತಟ್ಟಿ ಹೇಳಿದರು,

"ಈಗಲೂ ನಾನು ಹೇಳಿದಹಾಗೆ ಕೇಳ್ತೀ ತಾನೇ ಜಯಾ?"

ಸ್ವಲ್ಪ ಅಸಮಾಧಾನದ ಭಾವದಲ್ಲೇ ಉತ್ತರ ಕೊಟ್ಟಳು ಜಯಾ—

"ಆಗಲಿ ಡಾಕ್ಟರೇ."

"ಈಗ ಅಸಮಾಧಾನ ಮಾಡಬೇಡ ಜಯಾ, ನಿನ್ನನ್ನೋದಿಸುವ ಪೂರ್ಣ ಜವಾಬ್ದಾರಿ ನನ್ನದು. ನಾನೇ ಬಂದು ನಿನ್ನ ತಂದೆ-ತಾಯಿಗೆ ಹೇಳ್ತೀನಿ ನೀನು ಮೆಡಿಕಲ್‌ಗೆ ಸೇರ್ತೀಯಾ?"

ದಿಗ್ಭ್ರಮೆಯಿಂದ ಅವರ ಮುಖ ನೋಡಿದಳು ಹುಡುಗಿ—

"ಐದು ವರ್ಷ ಆಗುತ್ತಲ್ಲ ಡಾಕ್ಟ್ರೆ. ಎಷ್ಟೊಂದು ಖರ್ಚು!"

ನಕ್ಕರು ಡಾಕ್ಟರು—

"ನಾನು ಮೆಡಿಕಲ್ ಓದಿದವಳು ನನಗೆ ಗೊತ್ತಿಲ್ಲವೆ? ಅದೆಲ್ಲಾ ನಿನಗೇಕೆ? ಓದುತ್ತೀ ತಾನೆ?"

ಕೃತಜ್ಞತೆಯಿಂದ ನಕ್ಕಳು ಜಯಲಕ್ಷ್ಮಿ. ಅಭಿಮಾನದಿಂದ ಹುಡುಗಿಯ ಕಣ್ಣು ತುಂಬಿತ್ತು. ಅವಳ ಅಂತರಂಗದ ಮಹದಾಸೆ ಗುರಿಯು ಮುಟ್ಟಿ ನಿರಾಳವಾಗಿತ್ತು. ಡಾಕ್ಟರ್ ಕುಮುದಾ ಅವಳ ಮುಖದ ಭಾವವನ್ನು ತೂಗಿ ನೋಡುತ್ತಿದ್ದಾರೆ.

ಅಂದು ಹರಕಲು ಬಟ್ಟೆ ತೊಟ್ಟು ತನ್ನ ಹಿಂದೆ ಓಡಿಬಂದ ಜಯಲಕ್ಷ್ಮಿ! ಇಂದು ಡಾಕ್ಟರಾಗಿ ಸಂತಸ ತುಂಬಿತ್ತಾದ ಭಾರವನ್ನು ಹೆಗಲಿಗೆ ಹಾಕಿ ದಿಟ್ಟ ಹೆಜ್ಜೆ ಇಕ್ಕುವ ಧೀರ ಹುಡುಗಿ ಜಯಲಕ್ಷ್ಮಿ! ಎರಡೂ ಬಿಂಬಗಳು ಅವರ ಅಂತರಂಗದಲ್ಲಿ ಒಂದು ಕ್ಷಣ ಅಭಿಮಾನಗಳ ತೂಗುಯ್ಯಾಲೆಯಲ್ಲಿ ಜೋಕಾಲಿಯಾಡಿದವು. ಡಾ. ಕುಮುದಾ ಹಾಗೇ ಹುಡುಗಿಯ ಕೈಹಿಡಿದು ಕೊಠಡಿಯಲ್ಲಿ ಕರೆದು ಜೋಡಿಸಿದ್ದ ಹಾಲು ಜೇನಾದ ಬಟ್ಟಲನ್ನು ತೆಗೆದು ಅವಳ ಮುಂದೆ ಹಿಡಿದು ಹೇಳಿದರು—

"ತಗೋ ಜಯಾ; ಇದೂ ಬಾಯಿಗೆ ಹಾಕಿ ಸಂಕಲ್ಪ ಮಾಡಿಕೋ. ನಿನ್ನ ತಂದೆ ತಾಯಿಗೆ ನಾನೇ ಗಂಡು ಮಗನಾಗುತ್ತೇನೆ" ಎಂದು.

ಅವರ ಮಾತಿನ ಮರ್ಮಾರ್ಥ ತಿಳಿದ ಕೂಡಲೇ ಅವಳು ಹಾಲುಜೇನ ತೆಗೆದು ಬಾಯಿಗಿಟ್ಟು ಹೇಳಿದಳು.

"ಹೌದು ಡಾಕ್ಟ್ರೇ ನಾನೂ ಮನಸ್ಸಲ್ಲಿ ಹಾಗೇ ಅಂದುಕೊಂಡಿದ್ದೆ. ನಮ್ಮ ಮನೆಗೆ ಹೆಣ್ಣು ನಾನೇ, ಗಂಡೂ ನಾನೇ ಆಗ್ತೀನಿ"

ಭರವಸೆಯ ನಗೆ ಡಾಕ್ಟರ ಮುಖದ ಮೇಲೆ ನಲಿದಾಡುತ್ತಿತ್ತು.

—ವನಮಾಲಾ ಆಚಾರಿ

ಮಧ್ಯಾಹ್ನ ಎರಡು ಗಂಟೆಯ ಬಿಸಿಲು ರಣ, ಗುಡುತ್ತಿತ್ತು.

ತನ್ನ ಹಿಂದೆ ಕಾರು ಬರುತ್ತದೆ. ಬಂದೇ ಬರುತ್ತದೆ ಎಂದರಿಯಲು ರಾಗಿಣಿಗೆ ಹೆಚ್ಚು ಯೋಚಿಸಬೇಕಾಗಿರಲಿಲ್ಲ. ಕಾರು ಬಂತೋ ಇಲ್ಲವೋ ಎಂದರಿಯಲು ಬೆನ್ನಿನಲ್ಲಿ ಕಣ್ಣಿರುವ ಅವಶ್ಯಕತೆಯೂ ಇರಲಿಲ್ಲ. ತನಗರಿಯದಂತೆಯೇ ಎರಡು ಸಲ ಹೊರಳಿ ನೋಡಿದಾಗ ತನಗೇ ಆಶ್ಚರ್ಯವಾಗಿತ್ತು; ತನ್ನ ಬಗೆಗೇ ಜುಗುಪ್ಸೆ ಬಂದಿತ್ತು.

ತಾನೇಕೆ ಹೊರಳಿ ನೋಡಿದೆ? ಪ್ರೊ. ಶಂಕರ್ ಕುಡರೆ ನಿಜವಾಗಿಯೂ ತನಗೆ ಮೋಹವುಂಟಾಗಿದೆಯೆ? ತಾನು ಜಾರಿ ಬೀಳುತ್ತಿದ್ದೇನೆಯೆ?

ಇನ್ನೊಂದು ಸಲ ಬೇಕೆಂದೇ ಹಿಂದಿರುಗಿ ನೋಡಿದಳು. ಶಂಕರ್ ಕಾರು ಕಾಣಲಿಲ್ಲ. ಒಳ್ಳೆಯದೇ ಆಯಿತು. ಹಲವಾರು ಸಲ ಶಂಕರನ ಮೂರ್ತಿ ಮನದೆದುರು ಬಂದು ಹೋದುದುಂಟು. ಆದರೆ ಒಂದು ಸಲವೂ ಆ ನೆನಹು ಮುತ್ತಿ ಬಂದು ಕಚಕುಳಿಯಿಟ್ಟು ವಿಚಲಿತಳನ್ನಾಗಿ ಮಾಡಿರಲಿಲ್ಲ. ಅವನ ನೆನಹು ಬಂದಾಗ ಬುದ್ಧಿವಂತನಾದ ಸಹೋದ್ಯೋಗಿಯೊಬ್ಬನ ನೆನಪಿನ ಹೊರತು ಇನ್ನಾವ ಭಾವನೆಯೂ ಅಲ್ಲಿ ನುಸುಳಿರಲಿಲ್ಲ.

ಮಾತನಾಡಿದರೂ ಅವರೊಪ್ಪದೆ ತನಗೇ ಆ ಅವಕಾಶಕೊಟ್ಟಿದ್ದರು.

"ನಿಜವಾಗಲೂ ನನಗೆ ಬೇಡಿ ಸಾರ್ ಈ ಕೆಲಸ; ಮಿಸ್ ಡಿಸೋಜಾಗೇ ಕೊಡಿ. ಕಾಲೇಜ್ ಕ್ವಾಟರ್ಸ್‌ಗೂ ಯುನಿವರ್ಸಿಟಿಗೂ ತುಂಬಾ ದೂರ. ಅಲ್ಲದೇ. M. A. ಕ್ಲಾಸಿಗೆ ತುಂಬಾ prepare ಮಾಡಬೇಕು" ಎಂದು ಹೇಳಿದಾಗ,

"ನಿಮಗೆ ಅದೇನು ಮಹಾ ಪ್ರಯಾಸದ ಕೆಲಸ ಅಲ್ಲ ಮಿಸೆಸ್ ರಾವ್. ಈ ಸಲದ ಹಾಗೇ ಮುಂದಿನ ವರುಷ ಮತ್ತಿಬ್ಬರು ರೀಡರ್ಸ್ States ಗೆ ಹೋಗುತ್ತಾರೆ. ಆಗ ನಿಮ್ಮನ್ನ-ಪ್ರೊ. ಶಂಕರನ ಇಲ್ಲೇ ಮೊದಲಿಂದ appoint ಮಾಡೋ ಯೋಚನೆ ಇದೆ ಅಲ್ಲ. ಈ extra ಕೆಲಸಕ್ಕೋಸ್ಕರ ೧೫೦ ರೂ. ಹೆಚ್ಚಿಗೆ ಸಿಗೋದರಿಂದ ಜನ ಕಾಯ್ದುಕೊಂಡಿರೋವಾಗ ನೀವು ಬೇಡಾ ಅನ್ನಬಾರದಲ್ಲ?" ಎಂದು ರಜಿಸ್ಟ್ರಾರ್ ಹೇಳಿದ್ದರು. ಅವರಿಗೆ ತನ್ನ ಹತ್ತಿರ ಆತ್ಮೀಯತೆ ಹೆಚ್ಚು. ತಾನು ಇಂಟರ್‌ಗೆ ಓದುತ್ತಾ ಇರೋವಾಗ ಅವರು ಕಾಲೇಜಿನಲ್ಲಿ ಇಂಗ್ಲಿಷ್ ಲೆಕ್ಚರರ್ ಆಗಿದ್ದರು

"ನನಗೆ ಆ ನೂರೈವತ್ತರ ಮೇಲೆ ಖಂಡಿತ ಆಶೆ ಇಲ್ಲ ಸಾರ್ ಈ ಹೊಸ ಜವಾಬ್ದಾರಿ ಬೇಡ" ಎಂದು ಹೇಳಿದಾಗ ತನ್ನ ಧ್ವನಿಯಲ್ಲಿ ಸೋಗಿನ ನಿರ್ಲಿಪ್ತತೆ ಇರಲಿಲ್ಲ.

ಆದರೆ, ಇಂದು ಕ್ಲಾಸಿನಲ್ಲಿ ನಡೆದ ಘಟನೆಯ ನಂತರ ತನ್ನಲ್ಲಿ ತನಗೇ ಆತ್ಮವಿಶ್ವಾಸ ಕಡಿಮೆಯಾಗಿ ಒಮ್ಮೆ ತನ್ನ ಅಂತರಂಗವನ್ನು ಅಳೆದು ನೋಡುವ ಮನಸ್ಸಾಯಿತು ರಾಗಿಣಿಗೆ.

ತನ್ನದು ಹುರುಳಿಲ್ಲದ ತರ್ಕ ಎನಿಸಿತು. ದ್ವಂದ್ವಕ್ಕೆ ಎಡೆ ಏಕಿರಬೇಕು? ಪ್ರತಿನಿತ್ಯ ಯುನಿವರ್ಸಿಟಿಗೆ ಅವರ ಕಾರಿನಲ್ಲಿ ಹೋದ ತಕ್ಷಣ ಶಂಕರನಲ್ಲಿ ಅನುರಕ್ತಳಾಗುವಷ್ಟು ದುರ್ಬಲ ಹೃದಯ ತನಗಿದೆಯೆ? ಆರು ತಿಂಗಳಿಂದ ಒಟ್ಟಿಗೇ ಅವರೊಡನೆ ಯುನಿವರ್ಸಿಟಿಗೆ ಹೋಗುವಷ್ಟು ನಿಕಟ ಸಂಬಂಧ-ಅವಕಾಶ ಬಂದಿದ್ದರೂ ಒಂದರೆಗಳಿಗೆ ಕೂಡ ಶಂಕರ್ ಸಾಮೀಪ್ಯ ಮೋಹಪರವಶತೆ ತಂದಿರಲಿಲ್ಲ.

ಯಾರಿಗೆ ಬೇಕಿತ್ತು ಯುನಿವರ್ಸಿಟಿಯಲ್ಲಿ ಪಾಠ ಹೇಳುವ ಕೆಲಸ...ಮಿಸ್ ಡಿಸೋಜಾ ಈ ಕೆಲಸಕ್ಕೋಸ್ಕರ ಭಗೀರಥ ಪ್ರಯತ್ನ ಮಾಡಿದಳು. ಸ್ವತಃ ರಜಿಸ್ಟ್ರಾರ್ ಹತ್ತಿರ ಹೋಗಿ

"ನಿಮಗೆ ಅವಶ್ಯಕತೆ ಇಲ್ಲದಿದ್ದರೂ ನಮ್ಮ ಹುಡುಗರಿಗೆ ನಿಮ್ಮ ಬುದ್ಧಿಮತ್ತೆಯ ಅವಶ್ಯಕತೆ ಇದೆ. ನೀವು ಒಪ್ಪಿಕೊಳ್ಳಲೇಬೇಕು" ಎಂದು ರಜಿಸ್ಟ್ರಾರ್ ಬಲವಂತದಿಂದ ಒಪ್ಪಿಸಿದ್ದರು.

ಶಂಕರ್, ತಾನು ಈಗ ವಾರದಲ್ಲಿ ನಾಲ್ಕು ಮಧ್ಯಾಹ್ನ ಯುನಿವರ್ಸಿಟಿಯಲ್ಲಿ ಎಮ್. ಎ.ಗೆ ಪಾಠ ಹೇಳಬೇಕಾಗಿತ್ತು. ಪಾಠದ ಸಮಯ ಒಂದೇ ಎಂದು ಅಕ್ಕಪಕ್ಕದ ಕ್ವಾರ್ಟರ್ಸಿನಲ್ಲಿರುವ ತಾನು ಬಸ್ಸಿನಿಂದ ಹೋಗದೆ ಶಂಕರ್ ಕಾರಿನಲ್ಲಿ ದಿನನಿತ್ಯ ಹೋಗಲು ಏರ್ಪಾಡು ಮಾಡಿಯಾಗಿತ್ತು.



ಇತ್ತೀಚೆ ತನ್ನನ್ನೂ ಶಂಕರರನ್ನೂ ವಿದ್ಯಾರ್ಥಿಗಳು ನೋಡುವ ರೀತಿಯೇ ಬೇರೆಯಾಗಿತ್ತು.

ತಮ್ಮ ಒಡನಾಟಕ್ಕೆ ಪ್ರೇಮದ ಬಣ್ಣಬಣ್ಣದ ವರ್ಣರಂಜಿತ ಗೆರೆಯೆಳೆದು ಹೆಸರು ಕೆಡಿಸತೊಡಗಿದ್ದರು.

ಅವರು ಆರೋಪಿಸುವ ಭಾವೋದ್ವೇಗ ತನಗೆ ಎಂದಾದರೂ ಆಗಿದೆಯೆ? ಭಾವೋದ್ವೇಗದ ಅನುಭವ ಸಾಹಿತ್ಯದಲ್ಲಷ್ಟೇ ಸಾಧ್ಯವೆ ಎಂದು ಹಲವಾರು ಸಲ ತಾನೇ ಶಂಕಿಸಿದ್ದುಂಟು. ಕ್ಲಾಸಿನಲ್ಲಿ ಪಾಠ ಹೇಳುವಾಗ ಪ್ರತಿಯೊಂದು ಪ್ರಣಯ ಸನ್ನಿವೇಶವನ್ನೂ sex complex ನ್ನೂ ಎಳೆಎಳೆಯಾಗಿ ಬಿಡಿಸಿ ಚರ್ಚಿಸದೆ ಇಲ್ಲ. ಆದರೂ, ತನ್ನ ನಿಜಜೀವನದಲ್ಲಿ ಎಂದಾದರೂ ಅಂತಹ ಉದ್ರೇಕದ ಅನುಭವವಾಗಿದೆಯೆ? ಗಂಡನ ಅಪ್ಪುಗೆ ಕೂಡ ಒಂದೊಂದು ಸಲ ಶಿಲವಂತ ಮಾಘಸ್ನಾನವೆನಿಸಿ am I sexually dead? ಅಂದುಕೊಂಡ ಗಳಿಗೆಗಳೆಷ್ಟೊ!

ನಿಂದಲೂ ಹುಡುಗುತನದೀಚಲೇ ಬೆಳೆದುಬಂದು ತನ್ನನ್ನೇ ಕೀಟಲೆಮಾಡಿ, "ನನ್ನಕ್ಕ ಹದಿನೆಂಟನೇ ಶತಮಾನದವಳು. ಅವಳು ಜೊತೇಲಿದ್ದಾಗ ತುಂಬಾ ಗಾಂಭೀರ್ಯದಿಂದ ಇರಬೇಕರೀ" ಎಂದು ಗಂಡನಿಗೆ ಹೇಳಿ ಕುಲುಕುಲು ನಕ್ಕುಬಿಡುತ್ತಿದ್ದಳು.

ಸದ್ಯ ತನ್ನ ಪತಿಯೇನಾದರೂ ಗಿರೀಶನಂತೆ ರಸಿಕನಾಗಿದ್ದು ತನ್ನಿಂದ ಅದೇ ಪ್ರತಿಕ್ರಿಯೆ ಅಪೇಕ್ಷಿಸಿದ್ದರೆ...

ರಾವ್ ಬುದ್ಧಿಜೀವಿ. ಹಾಗೆಂದ ಮಾತ್ರಕ್ಕೆ ಗಿರೀಶ್ ಬುದ್ಧಿಜೀವಿಯಲ್ಲವೆಂದಲ್ಲ; ಇಲ್ಲದಿದ್ದರೆ ಬ್ರಿಟಿಶ್ ಕೌನ್ಸಿಲ್ ಸ್ಕಾಲರಶಿಪ್ ಪಡೆದು ಮುಂದಿನ ತಿಂಗಳು ಇಂಗ್ಲೆಂಡಿಗೆ ಪ್ರಯಾಣ ಹೊರಡುವದು ಸಾಧ್ಯವಿತ್ತೆ? ಆದರೆ, ಅವನ ಪ್ರವೃತ್ತಿಯೇ ಬೇರೆ. ತನ್ನ ಗಂಡನ ರೀತಿಯೇ ಬೇರೆ. ಅವರಿಗೆ ವಯಸ್ಸಿಗೆ ಮೀರಿದ ಗಾಂಭೀರ್ಯ; ಮಾತು ಕಡಿಮೆ. ತಾವಿಬ್ಬರೂ ಒಂದೊಂದು ಸಲ

ಹೊಂದಬಾರದು ಎನ್ನುವ ಭಾವನೆಯೂ ಇಲ್ಲ. ತನಗೇಕೆ ಶಂಕರ್ ಕಂಡರೆ ಮೋಹವಿಲ್ಲ...

ತನ್ನಂತರಂಗದ ಯಾವ ಮೂಲೆಯಲ್ಲಿಯೂ ಕಾಣಿಸಿಗದ ಭಾವನೆಯನ್ನು ಬಣ್ಣ ಬಡಿದು ಸತ್ಯವೆಂದು ಉಳಿದವರು ಸಾರತೊಡಗಿದ್ದು ವಿಚಿತ್ರವೆನಿಸಿತು.

ಹಲವಾರು ದಿನಗಳಿಂದ ಹುಡುಗರ ವ್ಯಂಗ್ಯ ನೋಟ ಅಸ್ಪಷ್ಟ ಟೀಕೆ ಕೇಳಿದಾಗ ಮೊದಮೊದಲು ಏನೂ ಅರ್ಥವಾಗಿರಲಿಲ್ಲ. ಮೊನ್ನೆ ತಾನು Guinevere ಕಲಿಸುವಾಗ ಸೀನಿಯರ್ ಎಮ್. ಎ. ವಿದ್ಯಾರ್ಥಿನಿ ಸುಶೀಲಾ,

"Madam, don't you think these men writers over-do the infidelity of women? I would worship an unworldly lord like king Arthur if I were in Guinevere's position..." (ನಾನೇನಾದರೂ ಜೆನಿವಿಯರ್‌ಳ ಸ್ಥಳದಲ್ಲಿದ್ದರೆ



ತಂಗಿ ಶಾಲಿನಿಯು ಹಾಗೆ ಪ್ರೇಮದ ಇನಿವಕ್ಕಿ ಗರಿಗೆದರಿ ಕುಣಿದಂತೆ ಚೆಲ್ಲುಚೆಲ್ಲಾಗಿ ಕುಣಿಯುವದು ತನಗೆ ಕನಸಿನಲ್ಲೂ ಸಾಧ್ಯವಿಲ್ಲ ಎಂದುಕೊಂಡಳು ರಾಗಿಣಿ. ಗಿರೀಶ—ಶಾಲಿನಿಯರ ಪ್ರೇಮದ ಹುಚ್ಚಾಟ. ರಸಿಕತನ ಒಂದೊಂದು ಸಲ ಅತಿ ಎನಿಸಿ ಜುಗುಪ್ಸೆ ತಂದಿತ್ತು. ಎಲ್ಲಿ ಹೋದರೂ ಶಾಲಿನಿಯನ್ನು ಒಂದರೆಗಳಿಗೆ ಬಿಟ್ಟಿರುತ್ತಿರಲಿಲ್ಲ ಗಿರೀಶ. ಪೇಟೆಗೆ ಹೋದಾಗ ಕೂಡ ಅವಳ ನಡುವನ್ನು ಬಳಸಿ ಹಿಡಿದು ನಡೆಯದಿದ್ದರೆ ಅವನಿಗೆ ಸಮಾಧಾನವೇ ಇರುತ್ತಿರಲಿಲ್ಲ. ಮುಂಬೈಯಲ್ಲಿ ಅವನಿಗದು ದಿನನಿತ್ಯದ ನೋಟ; ತನಗೆ ಅದೇನೋ ಮುಜುಗರ. ಶಾಲಿನಿಗೂ ಅಂತಹದೇ ತುಂಟ ಚೇಷ್ಟೆ ಇಷ್ಟವಿರಬೇಕು. ಮೊದಲಿ

ಸ್ವಲ್ಪವೂ ನಿಕಟತೆ ಇಲ್ಲದೆ ಅಪರಿಚಿತರಂತೆ ವರ್ತಿಸುತ್ತೇವೆಯಲ್ಲವೆ ಎಂದೆನಿಸಿದುದೂ ಉಂಟು.

ಪ್ರೊ. ಶಂಕರ್ ವ್ಯಕ್ತಿತ್ವ ಆಕರ್ಷಣೀಯವಾದುದು. ಆತ ಸೊಗಸಾದ ಮಾತುಗಾರ, ಸ್ಫುರದ್ರೂಪಿ, ಬುದ್ಧಿವಂತ. ಆದರೂ, ಈ ಆರು ತಿಂಗಳಿಂದ ಅವರ ಜೊತೆ ದಿನನಿತ್ಯ ಓಡಾಡಿದರೂ ತಾನು ಅವರಲ್ಲಿ ಅನುರಕ್ತಳಾಗಿದ್ದೇನೆ ಎಂದೆನಿಸುವ ಭಾವನೆ ಒಮ್ಮೆಯೂ ಬರಲಿಲ್ಲ. ತಾನೇನು ಕಟ್ಟಿಕೊಂಡ ಮಾಂಗಲ್ಯಕ್ಕೆ ಎರಡು ಬಗೆಯಬಾರದು ಎನ್ನುವ ಗೌರಮ್ಮನ ಮುಗ್ಧ ಸಂಪ್ರದಾಯಕ್ಕೆ ಸೇರಿದವಳಲ್ಲ. ಶಂಕರ್ ಪರಪುರುಷ, ಅವರಿಗೂ ಹೆಂಡತಿ ಮಗು ಇದ್ದಾರೆ. ಅವರ ಅನ್ಯೂತನುಯ ಜೀವನದಲ್ಲಿ ತಾನು ಹುಳಿ

ಆರ್ಥರ್ ದೊರೆಯನ್ನು ಪೂಜಿಸುತ್ತಿದ್ದೆ) ಎಂದು ಹೇಳುತ್ತಿದ್ದಾಗಲೇ ವಿದ್ಯಾರ್ಥಿಯೊಬ್ಬ ನಡುವೆಯೇ ಬಾಯಿ ಹಾಕಿ "The question is not so much if you were in her position but someone is already in her position" (ನೀವು ಅವಳ ಜಾಗದಲ್ಲಿರುವದು ಮುಖ್ಯವಲ್ಲ, ಈಗ ಒಬ್ಬರಿದ್ದಾರೆ ಹಾಗೆ) ಎಂದಾಗ ಇಡೀ ಕ್ಲಾಸೇ ಗೊಳ್ಳೆಂದು ನಕ್ಕುಬಿಟ್ಟಿತು. ಒಂದರೆಕ್ಷಣ ಏನೂ ತೋಚಿರಲಿಲ್ಲ. ಅದೇ ಗಳಿಗೆ ಗಂಟೆಯಾದ್ದರಿಂದ ಹೊರಬಂದು ಮರ್ಯಾದೆ ಉಳಿದಿತ್ತು

ಇಂದು ಜ್ಯೂನಿಯರ್ ಎಮ್ ಎ. ಕ್ಲಾಸಿಗೆ "Flight of the Queen" ನಾಟಕ ಕಲಿಸು

ಹಾಗೆ ವಿದ್ಯಾರ್ಥಿಗಳ ವರ್ತನೆ... ... ... ಅಬ್ಬಾ......

"ರಾಗಿಣಿ..." ರಾಗಿಣಿಯ ಯೋಚನೆಯ ಲಹರಿ ತುಂಡಾಗಿತ್ತು. ಶಂಕರ್ ಕಾರಿಗೆ ಬ್ರೇಕ್ ಹಾಕಿ ನಿಲ್ಲಿಸಿ 'ರಾಗಿಣಿ' ಎಂದು ಕರೆದಿದ್ದ. ಮೊದಲೇ ಜರ್ಜರಿತಳಾದ ರಾಗಿಣಿಯೀಗ ತೀರ ನಿರ್ವಿಣ್ಣಳಾದಳು. ಎಂದೂ ಮಿಸೆಸ್ ರಾವ್ ಎನ್ನದೆ ಬಾಯಿ ತೆರೆಯದ ಶಂಕರ್ ಇಂದೇಕೆ ವಿಚಿತ್ರವಾಗಿ ರಾಗಿಣಿ ಎಂದು ಹೆಸರುಗೊಂಡು ಕರೆದರು...? —

"ಬನ್ನಿ ಮಿಸೆಸ್ ರಾವ್. ಏನು ನಿಮ್ಮ ಚೆನ್ನಾಗಿರಲಿಲ್ಲವೆ? ಮಧ್ಯಾಹ್ನ ಪೀರಿಯಡ್ ಕ್ಯಾನ್ಸಲ್ ಮಾಡಿದಿರಂತೆ– ನಾನು engage ಮಾಡಬೇಕೊಂತ ಹೇಳಿದರು; ಏನ್ಸಮಾಚಾರ?" ಎನ್ನುತ್ತ ಶಂಕರ್ ಪಕ್ಕದ ಸೀಟಿನ ಬಾಗಿಲು ತೆಗೆದಾಗ ಒಳಗಡೆ ಕುಳ್ಳಿರದೆ ಗತಿಯಿರಲಿಲ್ಲ ರಾಗಿಣಿಗೆ.

"ಏನು ಸತ್ಯಾಗ್ರಹ? ನಡೆದುಕೊಂಡು ಹೊರಟಿದ್ದೇಕೆ? ಒಂದು ಮಾತು ಹೊರಡೋ ಮೊದಲು ನನಗೆ ಹೇಳಿದ್ದರೆ?"

"ನಾನು ಯಾರ ಜೊತೇನೂ ಮಾತಾಡೋ ಸ್ಥಿತೀಲಿರಲಿಲ್ಲ. ಅದಕ್ಕೇ ಹೊರಟು ಬಿಟ್ಟೆ. ನೀವು ನನಗೋಸ್ಕರ ಈಗ ಬರೋ ಕಾರಣ ಇರಲಿಲ್ಲವಲ್ಲ... ಯಾಕೆ ಹೀಗೆ ಕಾರು ನಿಲ್ಲಿಸಿದಿರಿ ಒಮ್ಮಿಂದೊಮ್ಮೆಲೆ...?" ಹೊರಟಿದ್ದ ಕಾರು ಮತ್ತೆ ನಿಂತಾಗ ರಾಗಿಣಿ ಕೇಳಿದಳು.

"ರೇಲ್ವೆ ಗೇಟು ಮುಚ್ಚಿದ್ದಾರಲ್ಲ ಮ್ಯಾಡಂ. ಮುಚ್ಚಿದ ಗೇಟೂ ಕಾಣದಷ್ಟು ಅದೇನು ಯೋಚನೆ? ರಾವ್ ಜೊತೆ ಕುರುಕ್ಷೇತ್ರ ಕಾದಾಡಿದೀರಾ? ಅವರಿಗೂ ಜಗಳ ಆಡೋದಕ್ಕೆ ಬರತದೆಯೋನು?" ತುಂಬ ಚೇಷ್ಟೆ ಮಾಡೋಣ ಎಂದಿದ್ದ ಶಂಕರ್ ಅವಳ ಕಣ್ಣಂಚಿನಲ್ಲಿದ್ದ ಮಿಂಚು ನೋಡಿ ಗಂಭೀರನಾದ.

"ಏನಾಯಿತು ಮಿಸೆಸ್ ರಾವ್? ಹುಡುಗರೇನಾದರೂ ತೊಂದರೆ ಕೊಟ್ಟರೇನು?"

ಒಂದು ಗಳಿಗೆ ಕ್ಲಾಸಿನಲ್ಲಿ ನಡೆದ ಸಂಗತಿ ರಾಗಿಣಿಗೆ ಮಿಳ್ಳಿನಂತೆ ಚುಚ್ಚಿತು.

The flight of the Queen ನಾಟಕ ಕಲಿಸುವಾಗ ಅದಕ್ಕೆ ಹಿನ್ನಲೆಯಾಗಿ ಜೇನು ನೊಣಗಳ ಜೀವನದ ಸ್ವಾರಸ್ಯವನ್ನು ವಿವರಿಸಬೇಕಾಗಿತ್ತು.

"ಪ್ರಜೋತ್ಪತ್ತಿಯ ಕಾಲಕ್ಕೆ ರಾಣಿ ನೊಣ ರಮಣೀಯವಾಗಿ ಗಾಂಭೀರ್ಯದಿಂದ ಮೇಲೆ ಮೇಲೆ ಹಾರಿ ಹೋಗುತ್ತಾಳೆ ಅವಳಿಗೆ ಹಲವಾರು ಜನ ಪ್ರೇಮಿಗಳು. ರಾಣಿ ಕರ್ತೃತ್ವಶಾಲಿನಿ ಅವಳ ಸಮಾಗಮ ಹೊಂದುವ ಗಂಡು ಅವಳಿಗೆ ತಕ್ಕ ಬಲಶಾಲಿಯಾಗಿರಬೇಕು. ದುರ್ಬಲ ಪ್ರೇಮಿ ನಡುದಾರಿಯಲ್ಲಿಯೇ ಸೋತು ಬಸವಳಿದು ಲಭ್ಯವಿಲ್ಲದ ಸಮಾಗಮದ ಆಶೆ ತೊರೆದು ಅಸು ನೀಗುತ್ತಾರೆ ಇಲ್ಲವೆ ಗೂಡಿಗೆ ಮರಳುತ್ತಾರೆ. ವಿಜಯೀವೀರ ಪುರುಷೋತ್ತಮ ಪ್ರೇಮಮಾರ್ಗದಲ್ಲಿ ರಾಣಿಯ ಹಿಂದೆ ಸಾಗಿ ಅಪ್ರತಿಮ ಮಧುರ ಗಳಿಗೆಯ ರಸಾಸ್ವಾದನ ಅನುಭವಿಸಿ ಆ ಮಧುಮಧುರ ಅನುಭವದ ಮಾಧುರ್ಯ ಮುಗಿಸುವ ಮೊದಲೇ ಅಸು ನೀಗುತ್ತಾನೆ. ರಾಣಿ ತನ್ನ ಗೂಡಿಗೆ ಮರಳಿದಾಗ ಅಲ್ಲಿ ಅವಳಿಗೆ ಕೆಲಸಗಾರ ನೊಣಗಳಿಂದ ಸಂಭ್ರಮದ ಸ್ವಾಗತ ಕಾದಿರುತ್ತದೆ. ಗೂಡಿಗೆ ಮರಳಿ ಸಂತಾನೋತ್ಪತ್ತಿಯ ಕಾರ್ಯದಲ್ಲಿ ರಾಣಿ ನಿರತಳಾಗುತ್ತಾಳೆ..."

ಅಷ್ಟೊಂದು ಭಾವನಾಪೂರ್ಣಳಾಗಿ ತಾನು ತಲ್ಲೀನಳಾಗಿ ವರ್ಣಿಸುತ್ತಿದ್ದಾಗ ಅಧಿಕಪ್ರಸಂಗಿಯೊಬ್ಬ ನಡುವೇ ಬಾಯಿ ಹಾಕಿ,

"ಹಾಗೆ ಹಾರೋದಕ್ಕೆ ಪ್ರಯಾಸ ಅಲ್ಲವೆ ಮೇಡಂ? ಅದರ ಬದಲಾಗಿ ಆ ಪ್ರೇಮಿಗೆ sky-blue ಫಿಯೆಟ್ ಕಾರು ಇದ್ದರೆ ಒಳ್ಳೇದಲ್ಲವೆ?" ಎಂದು ರಸಾಭಾಸ ಮಾಡಿ ಹದಗೆಡಿಸಿದ್ದ. ಮುಖಹೀನಳಾಗಿ ಹೊರಬಂದು ಮಧ್ಯಾಹ್ನದ ಕ್ಲಾಸ್ ಕ್ಯಾನ್ಸಲ್ ಮಾಡಿ ಹೊರಬಂದು ಮನೆಗೆ ಹೊರಟಿದ್ದಳು

ಇದೆಲ್ಲವನ್ನೂ ಕೇಳಿದಾಗ ಶಂಕರ್ ಈಗ ನಿಜವಾಗಿಯೂ ಗಂಭೀರನಾದ.

ಬುದ್ಧಿಜೀವಿಯಾಗಿ ತನ್ನ ಕಾಲ ಮೇಲೆ ತಾನು ನಿಲ್ಲುವ ಹೆಂಗಸಿಗೆ ಸಮಾಜ ಕೊಡುವ ಲಕ್ಷಣವಾದ ಮರ್ಯಾದೆ ಇದು.

ರಾಗಿಣಿಯ ಮುಖ ಉದ್ವೇಗದಿಂದ ಕೆಂಪಾಗಿತ್ತು. ತನ್ನ ದುಗುಡ ಶಂಕರ್‌ಗೆ ಗೊತ್ತಾಗದಿರಲಿ ಎಂದು ಆಕೆ ಆ ಕಡೆಗೆ ಮುಖ ತಿರುವಿದಾಗ ಶಂಕರ್ ರಾಗಿಣಿಯನ್ನು ದಿಟ್ಟಿಸಿದ

ಮಿಸೆಸ್ ರಾವ್ ಬುದ್ಧಿವಂತೆ, ಸುಂದರಿ. ಆದರೆ, ಆ ಸೌಂದರ್ಯದಲ್ಲಿ ಗಂಡಸಿನ ತಲೆ ಕೆಡಿಸುವ ಮಾದಕತೆಯಿಲ್ಲ, ಚಂಚಲತೆಯಿಲ್ಲ. ಅಲ್ಲಿ ಪ್ರಶಾಂತ ಗಾಂಭೀರ್ಯವಿದೆ, ಸತ್ವಶೀಲ ತೇಜಸ್ಸಿದೆ. ಅವರನ್ನು ನೋಡಿದಾಗ ಗೌರವದ ಹೊರತು ಬೇರಾವ ಭಾವನೆಯೂ ಬಾರದು. ಒಂದರೆಗಳಿಗೆಯ ಹಿಂದೆ ಮಾತ್ರ ಅವಳನ್ನು ತಬ್ಬಿ ಕಣ್ಣೀರೊರೆಸಿ ಸಂತೈಸಲೇ ಎಂದು ಅನುಕಂಪ ಹುಟ್ಟಿತು ನಿಜ. ಆದರೆ, ಈ ಭಾವನೆ ಹಿಂದೆಂದೂ ಖಂಡಿತವಾಗಿಯೂ ಬಂದಿರಲಿಲ್ಲ. ತಾನೇನಾದರೂ ಜನರ ಕಣ್ಣಿಗೆ ಕಾಣುವಂತೆ ಅಜಾಗರೂಕತೆಯಿಂದ ವರ್ತಿಸಿದ್ದೇನೆಯೆ? ಇಲ್ಲವಲ್ಲ

ಅವಳ ಪತಿಗೇ ಅವಳ ಶೀಲದ ಮೇಲೆ ಕಿಂಚಿತ್ತು ಸಂಶಯ ಬಾರದಿದ್ದಾಗ ಉಳಿದವರಿಗೇಕೆ ಈ ಕಿತಾಪತಿ? ರಾವ್ ದಂಪತಿಗಳನ್ನು ಮೂರು ವರುಷಗಳಿಂದ ನೋಡುತ್ತಿದ್ದೇನೆ. ಅಂತಹ ಪ್ರಾಂಜಲ ಮನಸ್ಸಿನವರನ್ನು ಬೇರೆ ನೋಡಲಿಲ್ಲ.

ಅಬ್ಬ, ಸದ್ಯ ಮಿಸ್ ಡಿಸೋಜಾನ್ನ ಇಲ್ಲಿ ಪಾಠ ಹೇಳೋದಕ್ಕೆ ಕಳಿಸಿದ್ದರೆ ಈ ಆರು ತಿಂಗಳಲ್ಲಿ ಆ ಮಹರಾಯಿತಿ ಏನು ಆಟ ಆಡಿಸುತ್ತಿದ್ದಳೋ.

ತನಗೂ ರಾವ್ ಹೆಂಡತಿಗೂ ಅನೈತಿಕ ಸಂಬಂಧ ಕಲ್ಪಿಸುವ ಕಾಲೇಜು ವಿದ್ಯಾರ್ಥಿಗಳ ಕ್ಷುಲ್ಲಕತನಕ್ಕೆ ಹೇಸಿಗೆ ಬಂತು ಶಂಕರ್‌ಗೆ. ಇವರೇ ನಾಳೆ ಪ್ರಾಧ್ಯಾಪಕರಾಗುವವರು. ಇಂಥವರ ಕೈಯಲ್ಲಿ ನಾಳಿನ ವಿದ್ಯಾರ್ಥಿಗಳು ಉದ್ಧಾರವಾದ ಹಾಗೇ. ಡಿಪಾರ್ಟಮೆಂಟಿನ ಹತ್ತಿರ ತಮ್ಮಿಬ್ಬರ ಹೆಸರನ್ನು ಅಶ್ಲೀಲವಾಗಿ ಬರೆದುದನ್ನು ತಾನೇ ಅಳಿಸಿದ್ದ. ಆದರೆ ಅವಳಿಗೆ ನೇರವಾಗಿ ಅವಮಾನ ಮಾಡುವಷ್ಟು ಮುಂದೆ ಹೋದಾರೆಂದು ಬಗೆದಿರಲಿಲ್ಲ.

ಒಂದೇ ಕಾಂಪೌಂಡಿನಲ್ಲಿ ಮನೆಯಿರುವವರು ಒಟ್ಟಿಗೆ ಹೋಗದೆ ಇನ್ನೇನು ಮಾಡಬೇಕಂತೆ?

ರಾಗಿಣಿಯ ಮುಖದಲ್ಲಿ ನೋವು ಒಡಮೂಡಿತ್ತು. ಎಂದಿನಂತೆ ಇಬ್ಬರಿಗೂ ನೇರವಾಗಿ ಮಾತಾಡುವ ಮನಸ್ಸಿರಲಿಲ್ಲ. ಇಬ್ಬರ ನಡುವೆ ಯಾವುದೋ ಅಡ್ಡಗೋಡೆ ಬಂದಂತಿತ್ತು. ತಾವು ತಪ್ಪಿತಸ್ಥರಲ್ಲದಿದ್ದರೂ ಇದೇಕೆ ಹೀಗೆ ಗಾಸಿಯಾಗುತ್ತಿದ್ದೇವೆ? ರಾಗಿಣಿಯ ಕೋಮಲ ಮನಸ್ಸು ಜನರ ವರ್ತನೆಯಿಂದಾಗಿ ಗಾಸಿಗೊಂಡಿತ್ತು.

ಅವಳ ಮನೆಯಲ್ಲಿಯ ವಾತಾವರಣವೂ ಜನರಿಂದಾಗಿ ಹದಗೆಟ್ಟದಿಯೊ ಎಂದು ಯೋಚಿಸಿದ ಶಂಕರ್.

ಜನರ ನುಡಿಯಿಂದ ಪ್ರಭಾವಿತನಾಗಿ ರಾವ್ ಸಹ ಸಂಶಯಿತನಾಗಿಲ್ಲವಷ್ಟೇ? ತನ್ನೊಡನೆ ಅವರ ವರ್ತನೆ ಎಂದಿನ ಹಾಗೇ ಇದೆ, ಅಥವಾ ಸೌಜನ್ಯಕ್ಕೋಸ್ಕರ ಹಾಗೆ ವರ್ತಿಸುತ್ತಿಲ್ಲವಷ್ಟೇ? ಮನಸ್ಸಿನಲ್ಲಿದ್ದುದನ್ನು ಕೇಳಿಯೇ ಬಿಟ್ಟ:

ಕಾಲೇಜ್ ವಿದ್ಯಾರ್ಥಿ



ಹುಡಿಗೆಯರ ಕುಡಿನೋಟ ತಿರು ನಗೆಯ ಸಾಕು!
ಕಾಲೇಜು ಹುಡುಗರಿಗೆ ಇನ್ನೇನು ಬೇಕು!
ಭರ್ಜರಿಯ ಪೋಷಾಕು ನೂರೆಂಟು ಶೋಕಿ
ಎಲ್ಲ ಅಂಗಡಿಗಳಲಿ ಮಾಡಿಹರು ಬಾಕಿ

—ಎಂ. ಗೋವಿಂದ

"ಅಂದ ಹಾಗೆ ಮಿಸೆಸ್ ರಾವ್, ಉಳಿದ ಜರ ಮಾತು ಕಟ್ಟಿಕೊಂಡು ರಾವ್ ಸಹ ನಾವು flirt ಮಾಡತಾ ಇದ್ದೇವೆ ಅಂತಾ ತಿಳಿದಿಲ್ಲ ತಾನೆ? Excuse me, ತುಂಬಾ ಕಟುವಾಗಿ ಕೇಳಿದೆ. ರಾವ್ ಸ್ವಭಾವ ನನಗೆ ಗೊತ್ತು... ಆದರೂ..."

ಹೌದು. ತನಗೂ ಗೊತ್ತು ಎಂದುಕೊಂಡಳು ರಾಗಿಣಿ. ನೂರರಲ್ಲೊಬ್ಬರಂತಿದ್ದಾರೆ ಅವರು.

ಮೊನ್ನೆ ಕಾಲೇಜಿನ ಸಡಿಲುಬಾಯಿಯ ಹಿತ ಶತ್ರುಗಳೊಬ್ಬರು, "ಭಾರ್ಯಾ ರೂಪವತೀ ಶತ್ರು: ಮಿ. ರಾವ್. ಸ್ವಲ್ಪ ಜಾಗರೂಕರಾಗಿ ರೀಪ್ಪ; ಶಂಕರ್ ವಿಷಯದಲ್ಲಿ ನಿಮ್ಮ ಹೆಂಡತೀ ವಿಷಯದಲ್ಲಿ ಯುನಿವರ್ಸಿಟಿ ಹುಡುಗರು ಹೇಳೋದನ್ನ ಕೇಳಿದ್ದೀರಾ?" ಎಂದು ಕುತ್ಸಿತ ರಾಗವೆಳೆದಾಗ "Mind your own business" ಎಂದು ಬಾಯಿ ಮುಚ್ಚಿಸಿದ್ದರಂತೆ.

ಅವರು ಹಾಗೆ ಹೇಳಿದಾಗ,

"ನಾಳೆಯಿಂದ ನಾನು ಯುನಿವರ್ಸಿಟಿಗೆ ಹೋಗೋದಿಲ್ಲ. ರಜಿಸ್ಟ್ರಾರ್‌ರಿಗೆ ಹೇಳತೀನಿ" ಎಂದಾಗ,

"Don't be silly dear. ಇದಕ್ಕೆಲ್ಲ ನೀನು ಯೋಚಿಸತಾ ಕೂತರೆ ಮುಗಿದೇ ಹೋಯಿತು, ಏಳು cheer up" ಎಂದು ಗಲ್ಲ ತಟ್ಟಿ ರಾವ್ ಸಮಾಧಾನ ಮಾಡಿದ್ದರು.

ಈಗ ತಾಯಿಯ ಮಾತು—ಪ್ರತಿಯೊಂದು ಮಾತೂ ಎಷ್ಟು ಅರ್ಥಪೂರ್ಣ, ಅನೆಂಥ ಅನುಭವದ ಸಾರದಿಂದ ಬಂದ ಆಣಿಮುತ್ತುಗಳು ಎಂದೆನಿಸತೊಡಗಿತು.

ಎಮ್. ಎ. ನಂತರ ಒಂದು ವರುಷ ತಾಯಿ ನವಕರಿಗೆ ಅಪ್ಪಣೆ ಕೊಡಲಿಲ್ಲ. ಅವರದು ಒಂದೇ ಹಟ-ಮಗಳು ಬೇರೆ ಊರಿಗೆ ಹೋಗಿ ಒಬ್ಬಳೇ ಇದ್ದು ನವಕರಿ ಮಾಡುವದು ಬೇಡ ಎಂದು. ತಂದೆ ತನ್ನ ಪರವಾಗಿ ಎಷ್ಟೇ ವಾದಿಸಿದರೂ ತಾಯಿ ಜಗ್ಗಲಿಲ್ಲ. ರಾಗಿಣಿಯ ಸತ್ಯಾಗ್ರಹಕ್ಕೂ ಅವರು ಜಪ್ಪೆನ್ನಲಿಲ್ಲ.

ತನ್ನ ತಾಯಿ ಓದಿದವರು. ಅದರೂ ಇಷ್ಟೇಕೆ ಸಂಕುಚಿತ ಮನಸ್ಸಿನಿಂದ ಹಟಮಾರಿತನದಿಂದ ವರ್ತಿಸುತ್ತಾರೆ ಎಂದು ಅಸಮಾಧಾನವಾಗಿತ್ತು. ತಾಯಿಯ ಮೇಲೆ ಕೋಪ ಬಂದಿತ್ತು.

"ನಿನಗೆ ಗೊತ್ತಾಗೊದಿಲ್ಲ ರಾಗಿಣಿ, ಓದಬೇಕು ಅನ್ನೊ ಅಪೇಕ್ಷೆ ಇತ್ತು, ಓದಿದ್ದು ಸಾಕು. ಬೇರೆ ಊರಿಗೆ ಹೋಗಿ ನೀನು ದುಡಿದು ತರೋ ಅವಶ್ಯಕತೆ ಇಲ್ಲ. ನಾನು ನಿನ್ನ ವೈರಿ ಅಂತಾ ಬೇಕಾದರೆ ತಿಳಿದುಕೋ ಪರವಾಗಿಲ್ಲ. ನಾನು ಮಾತ್ರ ಸುತರಾಂ ಒಪ್ಪಿಗೆ ಕೊಡೋದಿಲ್ಲ. ಒಂಟಿ ಹೆಂಗಸಿಗೆ ಈ ಜಗತ್ತಿನಲ್ಲಿ ಮರ್ಯಾದೆಯಿಂದ ನೆಮ್ಮದಿಯಿಂದ ಬಾಳೋಕೆ ಸಾಧ್ಯ ಇಲ್ಲ..."

ಅವರದು ಒಂದೇ ಹಟ.

"ಬೆಂಗಳೂರು ಎಷ್ಟು ದೂರ ಇದೆಯಮ್ಮ? ಇಲ್ಲಿ ಕಾಲೇಜಿನಲ್ಲಿ ಈಗ ಜಾಗ ಇಲ್ಲ. ಒಂದು ವರುಷ ಆದರೂ ಬೆಂಗಳೂರಿನಲ್ಲಿ ಕೆಲಸ ಮಾಡೋದಕ್ಕೆ ಕೊಡು."

ತಾಯಿಯ ಹಟದ ಮೂಲ ಕಾರಣ ರಾಗಿಣಿಗೆ ಗೊತ್ತು. ರಾಗಿಣಿಯ ಗೆಳತಿ ಶಾಂತಾ ಮುಂಬಯಿಯಲ್ಲಿ ಯಾರೋ ಕ್ರಿಶ್ಚಿಯನ್ನನನ್ನು ಮದುವೆಯಾಗಿದ್ದಾಳೆ ಎಂದು ಜನ ಸುಳ್ಳು ಸುದ್ದಿ ಹಬ್ಬಿಸಿದಂದಿನಿಂದ ತಾಯಿ ತನಗೆ ಅಡ್ಡಿ ಮಾಡುತ್ತಿದ್ದಾರೆ.

"ನನ್ನ ಮೇಲೆ ನಿನಗೆ ನಂಬಿಕೆ ಇಲ್ಲವೇನಮ್ಮ ?"

"ಚಿಕ್ಕ ಮಗೂ ತರಹ ಮಾತನಾಡತಿಯಲ್ಲೆ ರಾಗಿಣಿ. ಹೆಸರಿಗೆ ಕಲಂಕ ಹಚ್ಚೋ ಜನ, ನಿನ್ನ ಕೇಳಿ ಹಚ್ಚತಾರೇನು? ನೀನು ಮದುವೆ ಮಾಡಿಕೊಂಡು ನಿನ್ನ ಗಂಡ ಒಪ್ಪಿದರೆ ನವಕರಿ ಮಾಡು. ಹೆಣ್ಣಿಗೆ ಮಾಂಗಲ್ಯ ರಕ್ಷಣೆ ಇದ್ದಂತೆ."

"ಅಂದರೆ ತಾಳಿ ಕಟ್ಟಿಕೊಂಡು ಅದರ ಮುಸುಕಿನಲ್ಲಿ ಏನು ಬೇಕಾದರೂ ಅಡ್ಡ ಹಾದಿ ತುಳೀಬಹುದಾ?"

"ನಿನ್ನ ತಲೆ.ಸಮಾಜದ ನೋಟವೇ ಹಾಗಿದೆ. ಒಟ್ಟಿನಲ್ಲಿ ಹೆಂಗಸು ಹೇಗೆ ಇದ್ದರೂ ಜನ ಹೆಸರಿಡತಾರೆ. ಆದರೂ ಮದುವೆಯಾಗದ ಹೆಂಗಸು ಒಂದೊಂದು ಸಲ ಕಿಂಚಿತ್ತು ಅಡ್ಡಹಾದಿ ತುಳಿದರೂ ಕಲ್ಪನೆಯ ರಂಜಕ ಕತೆ ಕಟ್ಟಿ ಜನ ಅವಳ ಹೆಸರು ಕೆಡಿಸತಾರೆ. ಮದುವೆಯಾದ ಹೆಂಗಸು ನಿಜವಾಗಿ ಕಾಲು ಜಾರಿದರೂ ಅದನ್ನ ಜನ ಬೇಗ ಗಮನಕ್ಕೆ ತೆಗೆದುಕೊಳ್ಳೋದಿಲ್ಲ; ಇದೆಲ್ಲ ವಾದ ಬೇಡ. ಬೆಂಗಳೂರಿನ ಯೋಚನೆ ಬಿಟ್ಟು ಹಾಯಾಗಿರು. ಇನ್ನು ಈ ವಿಷಯದಲ್ಲಿ ಚರ್ಚೆ ಬೇಡ" ಎಂದು ಖಡಾಖಂಡಿತವಾಗಿ ತಾಯಿ ಹೇಳಿ ಬಾಯಿ ಮುಚ್ಚಿಸಿದ್ದರು.

ತಾಯಿಯ ಹಟದೆದುರು ರಾಗಿಣಿ ಅಸಹಾಯಳಾಗಿದ್ದಳು. ಮರುಕ್ಷಣವೇ ಮದುವೆ. ನಂತರ ರಾವ್ ತಾವೇ ಬೆಂಬಲ ನೀಡಿ ಕಾಲೇಜಿನಲ್ಲಿ ಕೆಲಸ ಕೊಡಿಸಿದ್ದರು.

ಆದರೆ ತಾಯಿಯ ಮಾತು ಪೂರ್ತಿ ಸತ್ಯವೆ? ತನಗೆ ಮಾಂಗಲ್ಯದ ಮುಸುಕಿನ ರಕ್ಷೆ ಏಕಿಲ್ಲ? ತಾನು ತಪ್ಪು ಹೆಜ್ಜೆ ಇಡದಿದ್ದರೂ ಇಂಥ ಅಪವಾದಕ್ಕೆ ತಾನೇಕೆ ಗುರಿಯಾಗಿ ಕೊರಗಬೇಕು?

ಕಾರಿನಲ್ಲಿಯ ಮೌನ ಇಬ್ಬರಿಗೂ ಮುಜುಗರವೆನಿಸತೊಡಗಿತು. ಇಬ್ಬರಿಗೂ ಮಾತಾಡಲು ಆತಂಕ. ಅವರವರ ವಿಚಾರದಲ್ಲೇ ಇಬ್ಬರೂ ತಲ್ಲೀನರಾಗಿದ್ದರು. ಇಬ್ಬರೂ ಯೋಚಿಸುತ್ತಿದ್ದುದು ಒಂದೇ.

ರೇಲ್ವೆ ಗೇಟು ಇನ್ನೂ ತೆಗೆದಿರಲಿಲ್ಲ. ಅದೊಂದು ಕೇಡು. ವಾಚ್‌ಮನ್ ಗಾಡಿ ಬರುವದಕ್ಕೆ ಇಪ್ಪತ್ತು ನಿಮಿಷ ಮೊದಲೇ ಮುಚ್ಚಿಬಿಡುತ್ತಾನೆ. ಅವನೊಬ್ಬ ವಿಕ್ಷಿಪ್ತ.

ವಿದ್ಯಾರ್ಥಿಗಳ ಎರಡು ಗುಂಪು ಹರಟುತ್ತ ತಮ್ಮನ್ನು ನೋಡಿ ನೋಡಿ ಮುಂದೆ ಸಾಗಿದವು. ಅವರೇನು ಮಾತಾಡಿದರೋ ತಮ್ಮನ್ನು ಕುರಿತೇ ಚರ್ಚಿಸುತ್ತಿದ್ದಾರೆ ಎನ್ನುವ ಭಾವನೆ ಬಲವಾಗಿ ಬೇರೂರಿ ರಾಗಿಣಿಗೆ ತುಂಬ ಬೇಜಾರಾಯಿತು.

ಅಬ್ಬಾ, ಸದ್ಯ ಕೊನೆಗೊಮ್ಮೆ ವಾಚ್‌ಮನ್ ಗೇಟು ತೆಗೆದ. ಗಾಡಿ ತುಂಬಾ ಲೇಟಾಗಿರಬೇಕು.

ಒಮ್ಮೆಲೆ ರಾಗಿಣಿಗೆ ನೆನಪಾಗಿ ಕೇಳಿದಳು:

"ಅಂದಹಾಗೆ ಪ್ರೊ. ಶಂಕರ್ ನಿಮ್ಮ ಮನೇಲಿ ರಾಧ್ಧಾಂತ ಇಲ್ಲ ತಾನೆ?

ಶಂಕರ್ ಉತ್ತರಿಸದೆ ನಕ್ಕ. ಕಾರು ಸ್ಟಾರ್ಟ್ ಮಾಡುವ ನೆಪದಲ್ಲಿ ಅವಳ ಪ್ರಶ್ನೆಯಿಂದ ತಪ್ಪಿಸಿಕೊಂಡ.

ತನ್ನ ಮನೆಯಲ್ಲಿ ರಾದ್ಧಾಂತವಿಲ್ಲವೆ?

ಪ್ರಭಾ ಎಂಟು ದಿನದಿಂದ ವಿಚಿತ್ರವಾಗಿ ವರ್ತಿಸುತ್ತಿದ್ದಾಳೆ. ಮನೆಯಲ್ಲಿ ಸ್ಮಶಾನ ಮೌನ. ಇದಕ್ಕೆ ಮಿಸ್ ಡಿಸೋಜಾ ಕಾರಣವಿರಬೇಕು. ತಾನೇ ಮೇಲೆ ಬಿದ್ದು ಬಂದರೂ ನಾನು ಗಮನ ಕೊಟ್ಟಿರಲಿಲ್ಲ. ಅಲ್ಲದೆ ಯುನಿವರ್ಸಿಟಿಯಲ್ಲಿ ತನಗೆ ಚಾನ್ಸ್ ಸಿಕ್ಕಲಿಲ್ಲ ಎಂದು ಪಾಪ ರಾಗಿಣಿಯ ಮೇಲೆ ವಿಷ ಕಾರುತ್ತಿದ್ದಾಳೆ. ಪ್ರಭಾಳದು ಹಿತ್ತಾಳೆಯ ಕಿವಿ, ಅವಳು ಹೇಳಿದ್ದನ್ನೆಲ್ಲ ನಂಬಿ ವಿಚಿತ್ರವಾಗಿ ವರ್ತಿಸುತ್ತಿದ್ದಾಳೆ.

ಮೊನ್ನೆ ಯುನಿವರ್ಸಿಟಿಯಲ್ಲಿ ಎಮ್. ಎ. ವಿದ್ಯಾರ್ಥಿಗಳಿಗಾಗಿ ಅಥೆಲೋ ನಾಟಕದ ರೆಕಾರ್ಡ್ಸ್‌ನ play back ಮಾಡಬೇಕಾಗಿತ್ತು. ಆ ಕಾರ್ಯಕ್ರಮ ಮೊದಲೇ ನಿಯೋಜಿತವಿರಲಿಲ್ಲ. ಕಾರ್ಯಕ್ರಮ ಮುಗಿದಾಗ ಏಳು ಗಂಟೆ. ಬಸ್ಸುಗಳ ಅವಧಿ ಮೀರಿ ಹೋಗಿತ್ತು. ಕೆಲ ವಿದ್ಯಾರ್ಥಿನಿಯರನ್ನು ಮನೆಗೆ ಮುಟ್ಟಿಸಿ ತಾನು ರಾಗಿಣಿ ಮನೆಗೆ ಬರುವ ಹೊತ್ತಿಗೆ ಎಂಟು ಗಂಟೆ. ಫೋನ್ ಮಾಡಿ ಪ್ರಭಾಗೆ ಸಂದೇಶ ಕಳಿಸಿದ್ದರೂ ಅವಳು ಅಂದು ಚಂಡಿಯ ಅವತಾರ ತಾಳಿದ್ದಳು.

ಮೊದಲೇ ಮತ್ಸರ ತುಂಬ ಕೇಡಿನ ದುರಂತ ನಾಟಕದ ಗುಂಗು ತಲೆಯಲ್ಲಿ ಒಥೆಲೋನ ಅಸಂಸ್ಕೃತ ನಡತೆಯ ಬಗೆಗೆ ತಿರಸ್ಕಾರ, ಡೆಸ್ಡೆಮೋನಾಳ ಬಗೆಗೆ ಅನುಕಂಪ, ಅಯಾಗೋನ motiveless malignityಯ ಕುರಿತು ಯೋಚಿಸುತ್ತ ಮನೆಗೆ ಬಂದಾಗ,

"ಆಕೆ ಜೊತೆ ನೀವು ಕಾರ್ನಲ್ಲಿ ಮೆರವಣಿಗೆ ಹೊರಟು ಚೆಲ್ಲಾಟ ಆಡ್ತಾ ಇಷ್ಟು ಲೇಟಾಗಿ ಮನೆಗೆ ಬರೋದಾದರೆ ನನ್ನ ಊರಿಗೆ ಕಳಿಸಿಬಿಡಿ" ಎಂದಾಗ "Shut up ಪ್ರಭಾ" ಎಂದಿದ್ದ ತಾನು ಸಹನೆ ಮೀರಿ. ಪ್ರಭಾ ಇಷ್ಟು ಅಸಂಸ್ಕೃತೆ ಹೇಗಾದಳು ?

ಅಲ್ಲಿಂದ ಎರಡು ದಿನ ಮಾತಿರಲಿಲ್ಲ.

ಪ್ರಭಾಗೆ ಏಕಿಷ್ಟು ಮತ್ಸರ ? ತಾನವಳ ಸ್ವಾತಂತ್ರ್ಯಕ್ಕೆ ಸ್ವಲ್ಪವೂ ಅಡ್ಡಿ ಬಂದಿರಲಿಲ್ಲ. ಒಟ್ಟಿಗೆ ಕುಳಿತು ಹರಟೆ ಹೊಡೆಯುತ್ತಿದ್ದಾಗ ರಾವ್ ಜೊತೆ ಅವಳ ಮಾತು ಸ್ವಲ್ಪ ಅತಿ ಎನಿಸಿದರೂ ತಾನು ಒಂದು ಸಲವೂ ಅಡ್ಡಿ ಬಂದಿರಲಿಲ್ಲ. ರಾವ್ ಅವಳ ಪ್ರಾಧ್ಯಾಪಕರಾಗಿದ್ದರು. ತಮ್ಮ ಹಾಗೇ ನಮ್ಮ ಸ್ನೇಹವೂ ನಿರ್ಮಲವಾದುದ್ದು ಎನ್ನುವ ದೊಡ್ಡ ಮನಸ್ಸು ಬೇಡವೆ ಪ್ರಭಾಗೆ?

ಶಂಕರ್ ತನ್ನ ಪ್ರಶ್ನೆಗೆ ಉತ್ತರಿಸಲಿಲ್ಲ.

ಆತ ನಕ್ಕಾಗ ಆ ನಗುವಿನ ಹಿಂದಿದ್ದ ನೋವಿನ ತೆರೆ ರಾಗಿಣಿಯ ಕಣ್ಣಿನಿಂದ ಮರೆಮಾಚಲಿಲ್ಲ. ನಡೆದ ಸಂಗತಿ ಊಹಿಸಲು ತಡ ಹಿಡಿಯಲಿಲ್ಲ.

ಈಗ ಕೆಲ ದಿನದಿಂದ ಪ್ರಭಾ ಸರಿಯಾಗಿ ಮುಖಕೊಟ್ಟು ಮಾತಾಡುತ್ತಿರಲಿಲ್ಲ. ತನ್ನ ಮೇಲೆ ವಿಶ್ವಾಸವಿಲ್ಲದವರ ಹತ್ತಿರ ಹೆಚ್ಚು ಮಾತು ಬೇಡ ಎಂದು ತಾನೂ ಮೇಲುಬಿದ್ದು ಅವಳನ್ನು ಮಾತಾಡಿಸಲು ಪ್ರಯತ್ನಿಸಿಲಿಲ್ಲ.

ಶಂಕರ್ ಗಕ್ಕನೆ ಕಾರು ನಿಲ್ಲಿಸಿದ.

ತಮ್ಮ ಮನೆಯ ಹತ್ತಿರ ರೋಡ್ ರಿಪೇರಿಗೋಸ್ಕರ ಹಳ್ಳ ತೋಡಿದ್ದರು. ಅದನ್ನ ರಿಪೇರಿ ಮಾಡಿ ಮುಗಿಸೋದಕ್ಕೆ ಇನ್ನೂ ಮೂರು ದಿನಗಳಾದರೂ ಬೇಕೇನೊ. ಸುತ್ತು ಹಾಕಿ ತಮ್ಮ ಮನೆಗೆ ಬರಬೇಕಾಗಿತ್ತು ಇನ್ನೊಂದು ರಸ್ತೆಯಿಂದ. ಅದನ್ನು ಮರೆತು ಶಂಕರ್ ಹಳ್ಳದ ಹತ್ತಿರ ಕಾರು ತಂದು ಬಿಟ್ಟಿದ್ದ.

"ಮಿಸೆಸ್ ರಾವ್ ಒಂದು ಕೆಲಸ ಮಾಡಿ. ಇಲ್ಲಿಂದ ಕಾರು ಇಳಿದು ನಡೆದುಕೊಂಡು ಹೋಗಿ. ಈ ರಿಪೇರಿ ವಿಷಯ ಮರೆತು ಇಲ್ಲಿ ತಂದುಬಿಟ್ಟೆ ಕಾರನ್ನ. ಇಲ್ಲದಿದ್ದರೆ ಅಲ್ಲಿಂದಲೇ turn ತೆಗೆದು ಕೋಬಹುದಿತ್ತು." ಎನ್ನುತ್ತ ಶಂಕರ್ ಬಾಗಿಲು ತೆರೆದ.

"ಅದಕ್ಕೇನಂತೆ ಪರವಾಗಿಲ್ಲ. ಅಂದಹಾಗೇ ಪೀರಿಯಡ್‌ಗೆ ಲೇಟ್ ಆಗತಾ ಬಂತು ಹೊರಡಿ" ಎನ್ನುತ್ತ ರಾಗಿಣಿ ಇಳಿದು, "ಪಾಪ ಮನೇವರೆಗೆ ಕಾರು ನಡೆಸೋದಕ್ಕೆ ಶಂಕರ್‌ಗೂ ಹೆಂಡತಿಯ ಭಯ" ಎಂದುಕೊಂಡು ಹೊರಟಳು ರಾಗಿಣಿ.

ಮನೆಗೆ ಬಂದಾಗ ಮನೆಗೆ ಬೀಗವಿತ್ತು.

ಎಂದಿಲ್ಲದೆ ಅಂದು ರಾಗಿಣಿ ಅಕಸ್ಮಾತ್ತಾಗಿ ಬೇಗ ಮನೆಗೆ ಬಂದಿದ್ದಳು. ಪ್ರತಿದಿನ ರಾವ್ ನಾಲ್ಕೂವರೆಗೇ ಮನೆಗೆ ಬಂದಿರುತ್ತಿದ್ದರು. ತಾನು ಯುನಿವರ್ಸಿಟಿಯಿಂದ ಬರುವ ಹೊತ್ತಿಗೆ ಐದೂವರೆ. ಒಂದು ಕೀಲಿಯು ಕೈ ಅವರ ಹತ್ತಿರ ಇನ್ನೊಂದು ಕೆಲಸದ ಹುಡುಗಿ ಶಾಂತಾ ಹತ್ತಿರ.

ಕಾಲೇಜ್ ಇಲೆಕ್ಶನ್‌ಗೋಸ್ಕರ ಮಧ್ಯಾಹ್ನ ಕ್ಲಾಸಿರಲಿಲ್ಲ. ರಾವ್ ಏಕೆ ಇನ್ನೂ ಬಂದಿರಲಿಲ್ಲವೋ.

ಕೆಲಸದ ಹುಡುಗಿ ಶಾಂತಾ ಗುರುವಾರ ಮಾತ್ರ ಮಧ್ಯಾಹ್ನ ಮೂರು ಗಂಟೆಗೇ ಹೊರಟು ಹೋಗಿರುತ್ತಾಳೆ. ಅವಳಿಗೆ ಅದೇನೋ ಚಿಟ್ ಫಂಡ್ ಕೆಲಸ.

ಇನ್ನು ಪ್ರಭಾ ಹತ್ತಿರ ಬೀಗದ ಕೈ ಕೊಟ್ಟಿರುತ್ತಾಳೇನೋ ಇಸಿದುಕೋಬೇಕು. ಅಲ್ಲಿ ಹೋಗದೆ ಗತ್ಯಂತರವಿಲ್ಲ.

ಪಕ್ಕದ ಮನೆಗೆ ಹೋಗಿ ಕರೆಗಂಟೆ ಒತ್ತಿದರೆ ಗಂಟೆ ಬಾರಿಸಲಿಲ್ಲ. ಕರೆಂಟ್ ಹೋಗಿರಬೇಕು. ಬಾಗಿಲು ತೆರೆದೇ ಇತ್ತು. ಹೋಗಿ ಸೋಫಾದ ಮೇಲೆ ಕುಳಿತುಕೊಳ್ಳಲು ರಾಗಿಣಿ ಹವಣಿಸಿದಾಗ ಒಳಗಿನ ಕೋಣೆಯ ವಾರ್ಡ್‌ರೋಬಿನ ಕಡೆಗೆ ಲಕ್ಷ್ಯ ತಾನೇ ತಾನಾಗಿ ಹೋಯಿತು. ಅದರ ಕನ್ನಡಿಯಲ್ಲಿ ಮಂಚದ ಮೇಲೆ ನಡೆಯುತ್ತಿದ್ದ ನಾಟಕವೆಲ್ಲ ಪ್ರತಿಬಿಂಬಿಸಲ್ಪಟ್ಟಿತ್ತು. ರಾಗಿಣಿಯ ತಲೆ ಸುತ್ತಿಬಂದಂತಾಗಿ ಸೋಫಾದ ಮೇಲೆ ಕುಸಿದಳು.

ತನ್ನ ಗಂಡನ ತೋಳ ತೆಕ್ಕೆಯಲ್ಲಿ...
ಮಿಸೆಸ್ ಶಂಕರ್ !!

"ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ
ಕಶ್ಚನ,
ನ ಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯ
ಪಾಶ್ರಯಃ ।
ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮಂ
ಸಮಾಚಾರ
ಅಸಕ್ತೋ ಹ್ಯಾಚರನ್ಕರ್ಮ ಪರಮಾ
ಪ್ನೋತಿ ಪುರುಷಃ ।"

ನೆರೆಹೊರೆ ನೆರವು!

ಟಿ. ಸುನಂದಮ್ಮ

– ನಮ್ಮವರು, ದೊಡ್ಡ ದನಿಯಲ್ಲಿ ಗೀತಾ ಪಠಣ ಮಾಡುತ್ತಿದ್ದರು. ಒಂದಕ್ಷರವೂ ಅರ್ಥವಾಗದಿದ್ದರೂ, ಅವರು ದೊಡ್ಡ ದನಿಯಲ್ಲೇ ವಾಚನ ಮಾಡುವುದು,—ನೆರೆಹೊರೆಯವರಿಗೆ ತಮ್ಮ ಸನಾತನತ್ವ ಅರಿವಾಗಲೆಂದು; ಅಕ್ಕದ ಅನಂತಯ್ಯ ಕಛೇರಿಗೆ ಹೊರಡುವಾಗ, "ಆಯ್ತೇ ರಾಯ್ರೇ ಪ್ರಾತಃಸಂಧ್ಯಾವಂದನ, ಪಾರಾಯಣ?" ಎಂದು ಕೇಳಲೆಂದು; ಪಕ್ಕದ ಪರಮೇಶ್ವರಪ್ಪ, ಇವರ ಹಣೆಯ ಮೇಲಿನ ರೈಲ್ವೇಹಳಿಯಂತಹ ಥಾಳಿನ ವಿಭೂತಿಪಟ್ಟೆ ಕಂಡು, ಡೊಂಕು ಪ್ರಣಾಮ ಹಾಕಲೆಂದು !

"ಕೆಳಗಡೆ, ಶ್ಲೋಕದ ಅರ್ಥ ಬರೆದಿದೆ ನೋಡು - ಯಾವ ಆಶೆಯೂ ಇಲ್ಲದೆ, ನಿನ್ನ ಕರ್ತವ್ಯ ಮಾಡು. ಆಗ ನಿನಗೆ ಉನ್ನತಿ ಸಿಕ್ಕುತ್ತದೆ- ಎಂದು ಅದಕ್ಕೇ ನೀನೂ..."

ಸಮಯಕ್ಕನುಸಾರವಾಗಿ, ಯಾವದೋ ಶ್ಲೋಕದ ಅರ್ಥವನ್ನು ಮತ್ತಾವುದಕ್ಕೋ ಜೋಡಿಸುವುದೂ ಉಂಟು, ಇವರು ! ಅದರಿಂದಾಗಿ, ಅನಾಸಕ್ತಿಯಿಂದಲೇ ಕೇಳಿದೆ,

–"ಅಂದರೆ, ನನ್ನನ್ನೇನು ಮಾಡೂಂತೀರಿ ?"

"ಆಳುಕಾಳುಗಳನ್ನು, ಬಂದು ಹೋದವರನ್ನ, ನೆರೆಹೊರೆಯವರನ್ನ, ಪ್ರೀತಿಯಿಂದ ಮಾತಾಡಿಸು; ನೆರವಾಗಲು ಯತ್ನಿಸು; ನಿನ್ನ ಬೇಜಾರು ಪರಿಹಾರವಾದೀತು !"

ಇವರಿಗೆ ಕ್ವಾರ್ಟರ್ಸ್ ಸಿಕ್ಕಿ, ಇಲ್ಲಿಗೆ ನಾವು ಬಂದ ತಿಂಗಳಿಂದ, ನನಗೆ ಬಹು ಬೇಸರ. ಹೊಸ ವಾತಾವರಣ, ಪರಿಚಯವಿಲ್ಲದ ನೆರೆಹೊರೆ, ಬೇರು ಕಿತ್ತ ಮರದಂತಾಗಿದ್ದೆ !......ಅದಕ್ಕೆಂದೇ ನಮ್ಮವರ ಸದ್ಬೋಧನೆ !

ಮೊದಲ ಪ್ರಯೋಗವಾಗಿ, ಮಡಿಬಟ್ಟೆ ಹೊತ್ತು ತಂದ ಧೋಬಿಯನ್ನು ನಗನಗುತ್ತ ಸ್ವಾಗತಿಸಿದೆ; ದೊಡ್ಡದಾಗಿ ಚಾಪೆ ಹಾಸಿದೆ, ಬಟ್ಟೆಗೆಂದು. ನನ್ನ ಹಸನ್ಮುಖದ ಮೋಡಿಗೆ ಮರುಳಾದ ಆ ಮಡಿವಾಳ, ತಾನೇ ಚಾಪೆಯ ಮೇಲೆ ಕೂತ ! ಬಟ್ಟೆಯನ್ನು ನೆಲದ ಮೇಲೇ ಜೋಡಿಸಿದ !

ಪೋಸ್ಟಿನವರೂ, ಪೋಲೀಸರೂ, ರೈಲಿನವರೂ, 'ವಿನಯವಾರ' ಆಚರಿಸುತ್ತಾರೆ, ವರ್ಷದಲ್ಲೊಮ್ಮೆ; ಆ ಒಂದು ಅವಧಿಯಲ್ಲಿ ಅವರು ಸಿಟ್ಟಿಗೇಳುವುದೇ ಇಲ್ಲ! ಕೋಳಿ ಕದ್ದ ಕಳ್ಳನ ಬೆನ್ನಿಗೆ ಬೆಲ್ಟು ಬೀಳುವುದೇ ಇಲ್ಲ; ಅವನ ಬೆನ್ನು ತಟ್ಟಿ, ಮೊಟ್ಟೆ ಸಹಿತ ಕೋಳಿಯನ್ನೂ ಅವನ ಕೈಗೇ ಇಳಿಸಿ ಕಳಿಸಿಕೊಡುತ್ತಾರೆ; ಹತ್ತು ಪೈಸೇದಂಡ ತಾವೇ ತೆತ್ತು, ಕಾಗದಕ್ಕೆ ಸ್ಟಾಂಪು ಹಚ್ಚದವರನ್ನೂ ಕೈ ಹಿಡಿದು ಕುಲುಕುತ್ತಾರೆ! ಟಿಕೆಟ್ ತೆಗೆಯದ ಪ್ರಯಾಣಿಕನನ್ನು ಪ್ರಥಮ ದರ್ಜೆ ಡಬ್ಬಿಯಲ್ಲೇ ಕೂರಿಸುತ್ತಾರೆ!

—ಅಂತೆಯೇ, ನಯವಿನಯದ ವ್ರತ ಹೊತ್ತ ನಾನು, ಆತನಿಗೇನೂ ಅನ್ನಲಿಲ್ಲ; ಬದಲಿಗೆ, ಆತನ ಸಂತಾನ ಸೌಭಾಗ್ಯದ, ಗೃಹಕೃತ್ಯ ಸಮಾಚಾರದ, ವೃತ್ತಿವ್ಯವಹಾರದ, ಸಹಾನುಭೂತಿಕ ವಿಚಾರಣೆ ನಡೆಸಿದೆ! ವಿವರಗಳನ್ನು ನೀಡಿದ ಆ ಅಗಸ, 'ಅಮ್ಮ'ನವರ ಸಹೃದಯತೆಗೆ ಅರಳಿ, ಹೇಳಿದ-

-"ಹೀಗಿದೆ ತಾಯೀ ನನ್ನ ಕಷ್ಟಕಾರ್ಪಣ್ಯ; ಅದಕ್ಕೆ...ಹಿಹಿ... ಮುಂದಿನ ಒಗೆಯಿಂದ,



ರೇಟ್ ಜಾಸ್ತಿ ಮಾಡ್ತೀನಿ;...ಹಿಹಿ... ಬಟ್ಟೆಗೆ ಹದಿನೈದು ಪೈಸೇಯಿಂದ ಇಪ್ಪತ್ತು ಪೈಸೇಗೆ..."

"!!!!!!"

ನಮ್ಮ ನೆರೆಹೊರೆಯವು, ಕಾಸ್ಮೋಪಾಲಿಟನ್ ಕುಟುಂಬಗಳು;- ಸಿಂಧಿ, ಗುಜರಾತಿ, ಮಲೆಯಾಳಿ, ಆಂಧ್ರ, ಯೂಪಿ, ತಮಿಳು-ಎಲ್ಲ ಪ್ರಾಂತದ ಸಂಸಾರಿಗಳೂ ಅಲ್ಲಿದ್ದರು.

ಆ ದಿನ, ನನ್ನ ನವನಿರ್ಧಾರದ ಪ್ರಕಾರ, ಊಟವಾದ ನಂತರ ಹೊರಬಾಗಿಲಲ್ಲಿ ನಿಂತೆ ನನ್ನಂತೆಯೇ ಕೆಲಸ ಮುಗಿದು, ಉಂಡು ತಾಂಬೂಲ ಮೆಲ್ಲುತ್ತ ಹೊರ ಬಾಗಿಲಲ್ಲಿ ನಿಂತಿದ್ದ ಗೃಹಿಣಿಯರಿಗೆಲ್ಲ- ದಂತಕಣಕದ ('ಟೂತ್ ಪೇಸ್ಟಿ"ನ ನಿಘಂಟು ಅನುವಾದ!) ಜಾಹೀರಾತಿನಂತಹ ಒಂದೊಂದು ವಿಶಾಲ ಮುಗುಳು ನಗೆ ಹಂಚಿದೆ; ಇರುವೆಗೆ ಸಕ್ಕರೆ ಎರಚಿದಂತಾಯ್ತು; ಮಹಿಳಾಮಣಿಗಳು ಮಂತ್ರಮುಗ್ಧರಂತೆ ಬಳಿ ಸಾರಿದರು; ಹಲವು ಹನ್ನೆರಡು ಭಾಷೆಗಳಲ್ಲಿ ಚಿಲಿಪಿಲಿಗುಟ್ಟುತ್ತ, ಒಂದು ಗಂಟೆಯ ಕಾಲದೊಳಗೆ- ನನ್ನವರ ಸಂಬಳ, ಮೇಲೆ ಸಿಕ್ಕಬಹುದಾದ ಗಿಂಬಳ, ಮಕ್ಕಳು ಮರಿ, ಮುಸುರೆಯವಳ ಮಾಸಾಶನ, ನನ್ನ ಬಳಿ ಇರುವ ಒಡವೆ ವಸ್ತ್ರ, ಸೀರೆ ತೆಗೆಯುವ ಜವಳಿ ಅಂಗಡಿ, ಬೆಣ್ಣೆ ತರಿಸುವ "ಬಟರ್ ಸ್ಟೋರ್ಸು"- ಎಲ್ಲದರ ಕೂಲಂಕಷ ತಪಶೀಲನ್ನು ತೆಗೆದಿರಿಸಿಬಿಟ್ಟರು!

ನಿಜಕ್ಕೂ ನೆರೆಹೊರೆಯವರೊಂದಿಗೆ ಬಹು ಸಮೀಪ ಬಾಂಧವ್ಯವೇ ಬೆಳೆಯಿತು; ನಮ್ಮ ನಮ್ಮಲ್ಲಿ—(ಅವರಿಗೆ ನನ್ನಲ್ಲಿ!) – ಯಾವ ಭೇದ ಭಾವವೂ ಉಳಿಯಲಿಲ್ಲ. ನಮ್ಮ ಮನೆಯ ಸಾಮಾನು ಸರಂಜಾಮುಗಳು, ಎಂದೂ ಅವರ ಸೇವೆಗೆ ಸಿದ್ಧವಾಗಿದ್ದುವು; ಅವರಿಗೆ ಕಾಲ ಕಾಲಕ್ಕೆ ಅವಶ್ಯಬಿದ್ದ ಕಾಫೀಪುಡಿ, ಅಕ್ಕಿ, ಸಕ್ಕರೆ, ನಿಂಬೆಹಣ್ಣು, ಗೋಂದುಸೀಸೆ, ಮಸಿ ಕುಡಿಕೆ,- ಇಸ್ತ್ರಿಪೆಟ್ಟಿಗೆ, ಪ್ಲಾಸ್ಟಿಕ್ ಡಬ್ಬಿ, ಗೋಡ್ರೆಜ್ ಬೀಗ—ಎಲ್ಲವನ್ನೂ ನನ್ನಿಂದಲೇ ತೆಗೆದೊಯ್ಯುತ್ತಿದ್ದುದು;... ಮತ್ತು ಹಿಂದಿರುಗಿಸುವ ಅಲ್ಪತನಕ್ಕೆ ಸೋಲದೇ ಇದ್ದುದೂ ಸಹ!

ಮೊದಲಿಗೆ, ಆಗೊಮ್ಮೆ ಈಗೊಮ್ಮೆ ತಮ್ಮ ಕೂಸುಗಳನ್ನು ಚಿಕ್ಕಮಕ್ಕಳ ತಾಪತ್ರಯವಿಲ್ಲದ ನನ್ನ ಕೈಗಿರಿಸಿ ತರಕಾರಿಗೆ, ರೇಷನಿಗೆ, ಮಿಲ್ಲಿಗೆ, ಹೋಗುತ್ತಿದ್ದರು ನನ್ನ ಗೆಳತಿಯರು. ನಾನೂ 'ಹಲವು ಲಾಲಿ' ಹಾಡಿ, 'ದೂರಿ ದೂರಿ' ಮಾಡಿ, ಕಂದಗಳನ್ನು ಮಲಗಿಸುತ್ತಿದ್ದೆ. ಕ್ರಮೇಣ, ಸಿಂಧೀ ಮೋಹನ್‌ಲಾಲನ ಹದಿನಾರು ಪೌಂಡಿನ ಕೈಮಗು, ಯೂಪಿಯ ತಿವಾರೀತನಯ, ಮರಕತಂಳ ಮಾಣಿಕ್ಯ, ಕೇರಳದ ಕರುತ್ತಮ್ಮನ ಕುವರಿ, ಅರವಿಂದಾಬೆಹನಳ ಬೇಟ-ಎಲ್ಲ ಕಿರಿಯರಿಗೂ ನನ್ನ ಮನೆ ಕ್ರೀಡಾಂಗಣವಾಯ್ತು. ದಿನದಲ್ಲಿ ಆರು ತಾಸು ನನ್ನ 'ಬೇಬಿ ಸಿಟ್ಟಿಂಗ್' ನಡೆಯತೊಡಗಿತು. ತಿಂಗಳಿಗೆ ಆರು ಪ್ಯಾಕೆಟ್ ಬಿಸ್ಕತ್ತು, ಒಂದು ಕಿಲೋ ಪೆಪ್ಪರ್‌ಮಿಂಟು, ಅರೆ ಕಿಲೋ ಚಾಕಲೇಟು, ನಾಲ್ಕು ಡಜನ್



ಬಲೂನು- ಇವರ ಮನೋರಂಜನೆಗಾಗಿ ಒದಗಿಸುವ ಪರಿಸ್ಥಿತಿಯಾಯ್ತು !

ಅಂದು ಬಂದ ಮರಕತಂ ಅಂದಳು,

"ವಾಂಗೋ ಮಾಮಿ; ನಿಮ್ಮಂಗಡೀಗೆ ಕರಗೊಂಡು ಹೋಗಿ. ದೀಪಾವಳೀ ಪೊಡವೇ ಪರ್ಚೇಸ್ ಮಾಟ್ಬೇಕು..."

ನೆರೆಗೆ ನೆರವಾಗುವ ಪಣತೊಟ್ಟ ನಾನು, ಮರಕತಂಳನ್ನು ರಂಗಶೆಟ್ರ ಜವಳೀ ಅಂಗಡಿಗೆ ಕರೆದೊಯ್ದೆ, (ಬೆಲೆ ಬಾಳುವ ಸೀರೆ ತೆಗೆಯುವ ಸಿರಿವಂತ ಗಿರಾಕಿಯನ್ನೇ ತಂದಿರುವೆನೆನ್ನುವ ಹೆಮ್ಮೆ ಬೇರೆ !)

ಅಂಗಡಿ ಬೀರುಗಳಿಗೆಲ್ಲ ದ್ರೌಪದೀವಸ್ತ್ರಾಪಹರಣವಾದುವು; ......ಶೆಟ್ಟರ ಸಿಟ್ಟಿನ ನೋಟ ಸಹಿಸಲಾರದೆ, ಅರವತ್ತು ರೂಪಾಯಿನದೊಂದು ಮಧುರೆ ಸೀರೆ ತೆಗದುಕೊಂಡವಳು- ನಾನು!... "ಸೀರೆ ಒಣ್ಣೂ ಚೆನ್ನಾಗಿಲ್ಲ ಮಾಮಿ; ಅಪ್ಪ, ಕಾಂಜೀವರಂಲೇ ತೆಗೆದು ಕಳಿಸ್ತಾರೆ"- ಮೂಗಿನ ಎರಡು ಬದಿಯ ವಜ್ರದ ಬೇಸರಿಗಳನ್ನು ಎಗರಿಸುತ್ತ ನುಡಿದವಳು, ಮರಕತಂ !

ಪರಮೇಶ್ವರಪ್ಪನವರ ಧರ್ಮಪತ್ನಿ ಪಾರ್ವತಮ್ಮ ಧುಮುಗುಟ್ಟುತ್ತ ಬಂದರು; ನಿಟ್ಟುಸಿರಿಟ್ಟರು, ಕೈ ಮುಗಿದರು, "ನೀವೇ ಗತಿ ನರ್ಮದಮ್ಮ !" ಎಂದು ಆರ್ತನಾದ ತೆಗೆದರು ! ಕಾರಣ, ಮೂರನೇ ದಿನ ರಾತ್ರಿಗೆ ಹತ್ತು ಮಂದಿಯನ್ನು ಅವರ ಯಜಮಾನರು 'ಡಿನ್ನರಿ'ಗೆ ಕರೆದು ಬಿಟ್ಟಿದ್ದರಂತೆ.

"ನಿಮಗಾದರೆ ಒಳ್ಳೇ ಅಡಿಗೆಯೋರು ಗೊತ್ತಿರ್ತಾರೆ; ಲಡ್ಡು, ಶಾವಿಗೆ ಕೀರು, ಬಿಸಿಬೇಳೆ ಆಗಬೇಕು;......ಯಾರನ್ನಾದರೂ ಕರೆಸಿಕೊಡ್ತೀರಾ ?"—ಅಂಗಲಾಚಿದ ಆಕೆಯ ಸಂಕಟಕ್ಕೆ, ಸಂಕಪ್ಪಯ್ಯನವರನ್ನು ಕೂಗದೇ ಇನ್ನೇನು ಮಾಡಲಿ ?

ಗುಜರಾತೀ ಗೋಲ್ ಗುಲಾಬ್‌ವಾಲಳ ಮನೆಯಿಂದ 'ಬೋಲಾಜಿ ಭವನ'ಕ್ಕೆ ಫೋನ್ ಮಾಡಿದೆ; ದೂರವಾಣಿಯನ್ನೆತ್ತಿದ ಸ್ವಯಂ ಪ್ರೊಪ್ರೈಟರ್ ಸಂಕಪ್ಪಯ್ಯನವರೇ ನಮ್ರವಾಣಿಯಲ್ಲಿ ಆಶ್ವಾಸನವಿತ್ತರು—

"ಶೀನಾಚಾರೀ (ಅವರ ಸೆಟ್ಟಿನ ಹೆಡ್ ಕುಕ್) ನೇ ಕಳಿಸ್ಕೊಡ್ತೀನಿ ಅಮ್ಮ; ಭರ್ಜರೀ ಮಾಡಿಕೊಳ್ತಿ ಏನೇನು ಬೇಕೋ ಎಲ್ಲ..."

ಮಾರನೇ ದಿನ, ಕಂಡ ಕಂಡವರಿಗೆ ನಾವು ಲಡ್ಡು ಪೊಟ್ಟ ಹಂಚಿದಾಗ, ಕೇಳಿದರು- "ಯಜಮಾನ್ರಿಗೆ ಪ್ರಮೋಷನ್ ಆಯ್ತೇ?"... "ಹುಡುಗನಿಗೆ ರ‍್ಯಾಂಕ್ ಬಂತೇ?"... "ಕೇರಳಾ ಲಾಟರೀಲೇನೋ ಗಿಟ್ಟಿತೂಂತ ಕಾಣತೆ?..."

ಕರೆದ ತಪ್ಪಿಗೆರಡು ಸೇರು ಕಡಲೇ ಹಿಟ್ಟಿನ ಲಡ್ಡು ಕಟ್ಟಿಸಿಕೊಂಡೆನಲ್ಲ ಸೀನಾಚಾರೀ ಕೈಲಿ, ಹಂಚದೇ ಇನ್ನೇನು ಮಾಡಲಿ?...ಪರಮೇಶ್ವರಪ್ಪ, ಪಾಕನಿಪುಣರಿಗೆ ಪೈಸೇ ಕೊಡಲು ತಯಾರಿರಲಿಲ್ಲವಂತೆ; ಪಾರ್ವತಮ್ಮ, ಆಕೆ, ತಂಗಿ ಸೇರಿ, ಹೂರಣದ ಹೋಳಿಗೆ ಗಸಗಸೆ ಪಾಯಸ ಮಾಡಿದ್ದರಂತೆ-'ಡಿನ್ನರಿ'ಗೆ!

ನನಗೆ, ಎದುರುಮನೆ ಯಶೋದಾಬಾಯಿಯ ಪರಿಚಯ ಮಾತ್ರ ಆಗಿರಲೇ ಇಲ್ಲ. ಆಕೆಯದು ಬಿಗಿಯಾದ ವ್ಯಕ್ತಿತ್ವ, ಬಹುಮುಖದ ಚಟುವಟಿಕೆ. ಆಕೆ, ಸಚ್ಚಾ ಸಮಾಜಸೇವಿಕೆ, ಸಂಘಗಳ ಸ್ವಯಂಸೇವಿಕೆ, ರಾಜಕೀಯ ಧುರೀಣೆ ಮತ್ತನ್ನೇನೇನೋ!......ದಿನವಿಡೀ ಓಡಾಟ, ರಾತ್ರಿಯಿಡೀ ಭಾಷಣದ ತಯಾರಿ.

ಎರಡು ಮೀಟಿಂಗುಗಳ ಮಧ್ಯಂತರದಲ್ಲಿ ಇದ್ದಕ್ಕಿದ್ದಂತೆ ಅಂದು ನಮ್ಮ ಮೆಟ್ಟಿಲೇರಿದ ಯಶೋದಾಬಾಯಿ.

"ಚೆನ್ನಾಗಿದ್ದೀರಾ?"- ಬೆನ್ನಲ್ಲಿ ಬಿದ್ದ ತಂಗಿಯಂತೆ ಜೇನ್ದನಿಯಾಡಿದಾಗ, ನಿಜಕ್ಕೂ ಧನ್ಯೆಯೆಂದುಕೊಂಡೆ! ಸೋಫದಲ್ಲಿ ಕೂರಿಸಿದ್ದೆ, ಕೂಲ್ ಡ್ರಿಂಕ್ ತಂದಾಕೆಯ ಕೈಗಿರಿಸಿದೆ, ರಾಮಭಕ್ತಹನುಮಂತನಂತೆ ಕೈಕಟ್ಟಿ ಎದುರು ನಿಂತೆ!

"ನೀವು, ಲಿಟರೇಚರ್ ಆನರ್ಸ್ ಅಂತೆ?"- ಹನ್ನೆರಡು ವರ್ಷದ ಹಿಂದೆ ಹೊಂದಿದ್ದ, (ನಾನೇ ಮರೆತಿದ್ದ!) ಬಿರುದನ್ನು ನೆನಪಿಸಿದರು.

"ಹೆಹೆ...ಹೌದು...ಹೆಹೆ..."


"...ಈ ಭಾಷಣ ಕೊಂಚ...ಕರೆಕ್ಟ್ ಮಾಡಿಕೊಡ್ತೀರಾ?...ಹಿಹಿ... ಅತುರದಲ್ಲಿ ಬರೆದದ್ದು!...ಹಿಹಿ..."

ದೊಡ್ಡ ಖಾದೀ ಕೈಚೀಲದಿಂದ ಪುಟ್ಟದೊಂದು ಕಾಗದದ ಕಟ್ಟು ತೆಗೆದು ನನ್ನ ಕೈಗಿರಿಸಿ, ಕೈಗಡಿಯಾರದತ್ತ ನೋಡುತ್ತ, ಕಾಂಗ್ರೆಸ್ ಮಹಿಳಾಮಂಡಳಿಯ ಮೀಟಿಂಗಿಗೆ ತಡವಾಯ್ತೆಂದು ಓಡಿದರು ಯಶೋದಾಬಾಯಿ!

"ಕರೆಕ್ಟ್ ಮಾಡಿಕೊಡ್ತೀರಾ?" ದಿಂದ ಪ್ರಾರಂಭವಾದದ್ದು, "ಪಾಯಿಂಟ್ಸ್ ಹಾಕಿದೀನಿ, ಭಾಷಣ ಬರೆದ್ಬಿಡ್ತೀರಾ?"ಕ್ಕೆ ಮುಟ್ಟಿ, "ಈ...ವಿಷಯದ್ದೊಂದು ಲೇಖನ ನಾಳೆ ಹೊತ್ಗೆ ತಯಾರಿಸ್ಬಿಡಿ ನರ್ಮದಮ್ಮ"- ಎನ್ನುವ ಹಂತ ಮುಟ್ಟಿತು.

-ನೆರವಿನ ನಿರ್ಧಾರ ಮರೆಯಲಾರದೆ, ಕಂತೆ ಕಂತೆ ಭಾಷಣ ಬರೆಯುತ್ತಿದ್ದೇನೆ!... ಆದರಾಗ, "ಮಿತಸಂತಾನ ಪ್ರಚಾರ ಅತಿಯಾಯ್ತೇ"—ಚರ್ಚಾಗೋಷ್ಠಿಯಲ್ಲಿ, ನಾನೇ ಬರೆದ ಭಾಷಣ ಓದಿ, ನಾನು ಮಾತನಾಡಿಸಿದಾಗ ಅಪರಿಚಿತಳನ್ನು ಕಂಡಂತೆ ದುರುಗುಟ್ಟಬಾರದಾಗಿತ್ತೆನಿಸಿತು!

ಅಂದಹಾಗೆ, ಇನ್ನೊಂದೆರಡು ದಿನ ನಮಗೆ ಬಿಡುವಿಲ್ಲ; ಮನೆ ಬದಲಾಯಿಸಬೇಕಾಗಿದೆ. ನೆರೆಗೆ ನೆರವಾಗುವ ನಮ್ಮ ಗುರಿಸಾಧನೆಯಲ್ಲಿ, ನಮ್ಮ ಮನೆಯ ಹಾರೆ, ಮಂದರಿ, ಬಕೆಟ್ಟು, ಬೀಸುವ ಕಲ್ಲು; ಹೋಲಿಗೆ ಮಿಷನ್ನು, ಬೆತ್ತದ ಕುರ್ಚಿ, ಮರದ ಸ್ಟೂಲು, ಕಾಫೀಗ್ರೈಂಡರು, ಉಪ್ಪೇರಿಮಣೆ, ಬ್ರೆಡ್ ಟೋಸ್ಟರು, ಲಟ್ಟಣಿಗೆ,



ಯಜಮಾನರ ಯಕ್ಕಡ, ನನ್ನ ಚೌರಿ ಎಲ್ಲ ಅನಂತಯ್ಯನ ಮನೆ ಸೇರಿವೆ. ಯಜಮಾನರು ಯಥಾ ಪ್ರಕಾರ,

'ವಾಸಾಂಸಿ ಜೀರ್ಣಾನಿ ಯಥಾ ವಿಹಾಯ

ನವಾನಿ ಗೃಹ್ಣಾತಿ ನರೋಽಪರಾಣಿ'

ಎಂದು ಗೀತೆಯನ್ನು ಉದ್ಗರಿಸುತ್ತಿದ್ದಾರೆ ! ಅದು, ಸಂದರ್ಭಕ್ಕೆ ಎಷ್ಟರಮಟ್ಟಿಗೆ ಅನುಗುಣವಾಗಿದೆಯೋ ತಿಳಿಯದು; ...ಅಂತೂ, ಅಷ್ಟು ಪದಾರ್ಥಗಳನ್ನೂ ಹಿಂದಕ್ಕೆ ತರುವ ತೊಂದರೆ ತೆಗೆದುಕೊಳ್ಳುವ ಬದಲಿಗೆ, ನಾವೇ ಅನಂತಯ್ಯ ಇರುವ ಮನೆಗೆ ಬದಲಾಯಿಸಿಕೊಂಡು ಬಿಡುವುದೆಂದು ನಿರ್ಧರಿಸಿದ್ದೇವೆ !

ಗುರುಪಾದಪ್ಪ ತಿಮ್ಮನನ್ನು ಭೆಟ್ಟಿಯಾದಾಗ

* ರಾವಬಹದ್ದೂರ

ಗಾಂಧೀ ಶತಮಾನೋತ್ಸವ ಕಾರ್ಯಕ್ರಮ ಮಾರ್ಗದರ್ಶನ ಸಮಿತಿಯ ಅಧ್ಯಕ್ಷನಾಗಿ ನೇಮಕ ಹೊಂದಿದ ಗುರುಪಾದಪ್ಪನಿಗೆ ಸಮಿತಿಯ ಕಾರ್ಯದರ್ಶಿಯನ್ನು ಹುಡುಕಿಕೊಂಡು ಹೋಗುವ ಪ್ರಸಂಗ ಅನಿವಾರ್ಯವಾಯಿತು. ಸಮಿತಿಯನ್ನು ನೇಮಿಸಿ ತಿಂಗಳುಗಳುರುಳಿದರೂ ಸಮಿತಿಯ ಪ್ರಥಮ ಸಭೆಯೇ ಸೇರದ್ದು ಅಧ್ಯಕ್ಷಪದಕ್ಕೊಂದು ಕಳಂಕವೆಂದು ಗುರುಪಾದಪ್ಪ ತಳಮಳಿಸತೊಡಗಿದನು.

ಸಮಿತಿಯ ಕಾರ್ಯದರ್ಶಿಯಾಗಿ ನೇಮಕ ಹೊಂದಿದ ತಿಮ್ಮನನ್ನು ಕರೆಯಿಸಿ ಸಮಿತಿಯ ಸಭೆ ಕರೆಯಲು ಹೇಳಬೇಕೆಂದು ಗುರುಪಾದಪ್ಪ ನಿರ್ಧರಿಸಿದ. ತಿಮ್ಮನ ಪತ್ತೆ ಗೊತ್ತುಮಾಡಿಕೊಳ್ಳದೆ ವಿಧಿ ಇಲ್ಲ ಎಂದು ಸರಕಾರೀ ಮುಖ್ಯ ಕಾರ್ಯದರ್ಶಿಗೆ ಫೋನ್ ಮಾಡಿದ. "ತಿಮ್ಮನ ತಲೆ ಓದಿಲ್ಲವೇ ಸ್ವಾಮಿ? ಅದೇ ತಿಮ್ಮನ ತಲೆ ಓದಿದ ಮುಖ್ಯಮಂತ್ರಿಗಳು ಈ ಸಮಿತಿಗೆ ತಿಮ್ಮನೇ ಕಾರ್ಯದರ್ಶಿಯಾಗಲು ಯೋಗ್ಯ ಎಂದು ಹೇಳಿಬಿಟ್ಟರು. ಸಮಿತಿಯ ಕಾರ್ಯದರ್ಶಿ ತಿಮ್ಮನ ಹೆಸರು ಗ್ಯಾಜಟನಲ್ಲಿ ಪ್ರಕಟ ಮಾಡಿದ್ದಾಗಿದೆ. ಆ ತಿಮ್ಮನು ಎಲ್ಲರಿಗೂ ಪರಿಚಿತ. ಅವನನ್ನು ಎಲ್ಲರೂ ಬಲ್ಲರು. ಅವನ ವಿಳಾಸ ನಿಮಗೆ ಎಷ್ಟು ಗೊತ್ತೋ ಅಷ್ಟೇ ನನಗೂ ಗೊತ್ತು," ಎಂದ ಚೀಫ್ ಸೆಕ್ರೇಟರಿಯ ಉತ್ತರ ಕೇಳಿ ಗುರುಪಾದಪ್ಪನಿಗೆ ಹೆಚ್ಚು ಮಾತನಾಡುವ ಮನಸ್ಸಾಗಲಿಲ್ಲ. ಎಲ್ಲರಿಗೂ ಪರಿಚಿತನಾದ ತಿಮ್ಮನ ಪರಿಚಯ ತನಗಿಲ್ಲವೆಂದು ಹೇಳಿ ತನ್ನ ಅಜ್ಞಾನ ಪ್ರದರ್ಶನ ಮಾಡುವದು ಬೇಕಿರಲಿಲ್ಲ.

ಅಂದಿನಿಂದ ತನ್ನನ್ನು ಭೆಟ್ಟಿಯಾಗಲು ಬಂದವರೊಡನೆ ತಿಮ್ಮನ ಸಂಬಂಧವಾಗಿ ಮಾತನಾಡುವನು. ಅವರು "ತಿಮ್ಮನ ತಲೆ ತೆನ್ನಾಲಿ ರಾಮಕೃಷ್ಣನನ್ನು ಮೀರಿಸುವ ತಲೆ" ಎಂದು ಪ್ರಶಂಸೋದ್ಗಾರ ತೆಗೆಯುತ್ತಿದ್ದರೇ ಹೊರತು ಅವನ ವಿಳಾಸ ತಿಳಿಸಲು ತಾವು ಅಸಮರ್ಥರೆಂದು ಒಪ್ಪಿಕೊಳ್ಳುತ್ತಿದ್ದರು. ಕೊನೆಗೆ ಗುರುಪಾದಪ್ಪನ ಸ್ನೇಹಿತನೊಬ್ಬ "ತಿಮ್ಮನ ಪತ್ತೆ ತಿಳಿದುಕೊಳ್ಳಲು, 'ಜೂಪಿಟರ್ ಬಾರ್'ನಲ್ಲಿಯ ಕ್ಯಾಶರನಿಗೆ ಗೊತ್ತು. ಅವನಿಗೆ ಫೋನ್ ಮಾಡಿ" ಎಂದು ಸಲಹೆ ಮಾಡಿದನು. ಗುರುಪಾದಪ್ಪನು ಫೋನ್ ಮಾಡಿದಾಗ 'ಸಾಕ್ಷಾತ್' ತಿಮ್ಮನೇ ಈಗ ನಿಮ್ಮೊಡನೆ ಮಾತನಾಡುವನು ಎಂದು ಬಾರ್‌ನಲ್ಲಿಯ ಪರಿಚಾರಕನು ಹೇಳಿ ತಿಮ್ಮನ ಕೈಗೆ ಫೋನ್ ಕೊಟ್ಟನು. 'ಹಲೋ' ಎಂಬ ಧ್ವನಿ ಕಿವಿಗೆ ಬೀಳುತ್ತಲೇ ಗುರುಪಾದಪ್ಪ ಗಡಸು ಧ್ವನಿಯಲ್ಲಿ "ಯಾರು ನೀವು?" ಎಂದು ಕೇಳಿದ.

"ನಾನು ಎಲ್ಲರಿಗೂ ಪರಿಚಿತ ತಿಮ್ಮ" ಎಂಬ ಉತ್ತರ ಬಂತು.

"ಬಹಳ ಸಂತೋಷ. ನಿಮ್ಮನ್ನು ಬಹಳ ಅರ್ಜೆಂಟಾಗಿ ಕಾಣಬೇಕಾಗಿತ್ತಲ್ಲ. ನೀವಿರುವ ಮನೆ ವಿಳಾಸವನ್ನು ದಯವಿಟ್ಟು ತಿಳಿಸುವಿರಾ?" ಎಂದು ಗುರುಪಾದಪ್ಪ ಕೇಳಿದ.

"ಈಗ ನಾನಿರುವದು ಜ್ಯೂಪಿಟರ್ 'ಬಾರ್‌ನಲ್ಲಿ! ನನ್ನ ವಿಳಾಸ ಸದ್ಯಕ್ಕೆ ಇದೇ ಎಂದು ತಿಳಿಯಬಹುದು. ಇನ್ನೊಂದು ತಾಸಿಗೆ ಎಲ್ಲಿರುವೆನೆಂಬುದು ನನಗೇ ತಿಳಿಯದಿರುವಾಗ, ನಿಮಗೆಂತು ಹೇಳಲಿ?" ಎಂದು ತಿಮ್ಮ ಫೋನ್ ಕೆಳಗಿಟ್ಟನು.

'ಇವನೊಳ್ಳೇ ವಿಚಿತ್ರ ಮನುಷ್ಯ. ಅವನನ್ನು ಅಲ್ಲಿಗೇ ಹೋಗಿ ಹಿಡಿದು ಚೆನ್ನಾಗಿ ಮಾತನಾಡಿಸಬೇಕು' ಎಂದು ಮನದಲ್ಲಿ ನಿರ್ಧರಿಸಿ ಗುರುಪಾದಪ್ಪ ಜ್ಯೂಪಿಟರ್ ಬಾರಿನ ದಾರಿ ಹಿಡಿದ.

ಗುರುಪಾದಪ್ಪ ಬಾರಿನಲ್ಲಿ ನುಸುಳಿ ಅತ್ತಿತ್ತ ತಿಮ್ಮನನ್ನು ಕಾಣಲು ದೃಷ್ಟಿ ಹಾಯಿಸಿದನು. ಒಂದು ಮೂಲೆಯಲ್ಲಿ ಕುಳಿತ ನಡುವಯಸ್ಸಿನ ನೆರೆತ ತಲೆಯ ವ್ಯಕ್ತಿ.

"ಬರ್ರೀ ಗಣಪ್ಪನವರೇ, ಸ್ವಾಗತವು ಸ್ವಾಗತವು ಗಾಂಧೀ ತಾತನ ಮರಿಗೆ! ಸ್ವಾಗತವು ಸರ್ವಸೇವಾನಿರತ ಲೋಕನಾಯಕರಿಗೆ!" ಎಂದು ಆವ್ಹಾನಿಸಿತು.

"ನೀವು ಯಾರು? ತಿಮ್ಮನು ಇಲ್ಲಿಗೆ ಬಂದಿದ್ದನೇ?" ಎಂದು ಗುರುಪಾದಪ್ಪ ಆ ವ್ಯಕ್ತಿಯ ಬಳಿಗೆ ಹೋಗಿ ವಿಚಾರಿಸಿದನು.

"ತಿಮ್ಮನ ಹುಡುಕುವರೇನೋ ತಮ್ಮಾ!
ಸುಮ್ಮನೆ ಬಂದು ಕೂತರೆ ಸಾಕು!
ಬೆಲ್ಲಕೆ ನೊಣ ತಾನಾಗಿಯೇ ಬಾರದೇ?
ಬಾಟ್ಲಿಯ ಸದ್ದಿಗೆ ತಿಮ್ಮನು ಬಾರನೆ?"

ಎಂದು ಬೇರಾಗದಲ್ಲಿ ಆ ವ್ಯಕ್ತಿಯು ಹಾಡಿದನು.

ಅವನ ಮುಖಭಾವ, ಅವನ ಹಾಡಿನ ಠೀವಿ, ಇದನ್ನೆಲ್ಲಾ ನೋಡಿ ಗುರುಪಾದಪ್ಪನಿಗೆ ತಿಮ್ಮನು ಸಿಗದಿದ್ದರೂ ಅವನ ಪಕ್ಕಾ ಪರಿಚಯವಿದ್ದ 'ಇಸಮು' ಸಿಕ್ಕಂತಾಯಿತೆಂದು ಅಲ್ಲಿಯೇ ಒಂದು ಖುರ್ಚಿಯ ಮೇಲೆ ಕುಳಿತುಕೊಂಡನು.

"ತಿಮ್ಮ ಈಗ ಬರಬಹುದೇ?" ಎಂದು ಕೇಳಿದನು.

"ತಿಮ್ಮನ ಕಾಣಲು ಬಂದಿಹ ಭೂಪಾ।
ಅಮ್ಮನ ಕಾಣಿಕೆ ಸಲ್ಲಿಸು ಗಣಪಾ॥
ತಿಮ್ಮನು ಕುಣಿಯುತ ಬರುವನು ಆಗ।
ಕಮ್ಮಗೆ ಕುಡಿದು ತಣಿಯುವಾ ಈಗ॥"

ಎಂದು ಆ ವ್ಯಕ್ತಿ ರಾಗದಲ್ಲಿಯೇ ಉತ್ತರಿಸಿತು.

ವೇಟರನು ಬಂದು ಸಲಾಂ ಹೊಡೆದು ನಿಂತನು. "ತಿಮ್ಮನು ಬರಲಿ; ಆ ಮೇಲೆ ಬಾ" ಎಂದು ಗುರುಪಾದಪ್ಪ ವೇಟರಿಗೆ ಹೇಳಿದಾಗ, ಆ ವ್ಯಕ್ತಿಯು "ಕಣ್ಣಿದ್ದು ಕುರುಡಪ್ಪಾ, ತಿಮ್ಮನ್ನ ಕಾಣಪ್ಪಾ, ಭಾರಿ ಬೆಲೆಯ ಬಾಟ್ಲ ಬರಸಪ್ಪಾ, ಕಿಸೆಯ ಭಾರ ಇಳಿಸಿ ನಡೆಯಪ್ಪಾ" ಎಂದು ನುಡಿದು ಗಹಗಹಿಸಿ ನಗಹತ್ತಿತು.

"ನೀನೇ ತಿಮ್ಮನೋ? ಮಾತಾಡು ಮಹರಾಯಾ!" ಎಂದು ಗುರುಪಾದಪ್ಪ ಅವನನ್ನುದ್ದೇಶಿಸಿ ನುಡಿದನು. "ತಿಮ್ಮನು ಬಾಯಿ ಬಿಡಬೇಕಾದರೆ ಬಾಟ್ಲ ಬಾಯಿ ತೆರೆಯಬೇಕು. ಕಿಕ್ ಕೊಡದೇ ತಿಮ್ಮನ ತಲೆ ಸ್ಟಾರ್ಟ ಆಗೋದೇ ಇಲ್ಲ. ಮನ್ಯಾಗ ಹೇಣ್ತೀ ಕಿಕ್ಕು, ಆಫೀಸಿನ್ಯಾಗ ಸಾಹೇಬನ ಕಿಕ್ಕು, ತಿಮ್ಮನ ತಲೆ ಸ್ಟಾರ್ಟರ್ ಇದ್ದಾಂಗ. ದೇವಿಯ ಆರಾಧಕ ತಿಮ್ಮನು ದೇವಿಯ ಈ ಮಂದಿರಕ್ಕೆ ಬಂದಾಗ 'ಅಮೃತ ಕುಡಿ, ಕಿಕ್ಕಿನ ಮ್ಯಾಲೆ ಕಿಕ್ಕು ಪಡಿ' ಅಂತ ಆಗ್ರಹ ಮಾಡಿ ಮಾಡಿ ಕುಡಿಸಿ ಸಮಾಧಿ ಸ್ಥಿತಿ ಹೊಂದುವಂತೆ ಮಾಡುವದು ಅವನ ಅಭಿಮಾನಿಗಳ, ಸ್ನೇಹಿತರ ಕರ್ತವ್ಯ. ಇಂದು ಈ ಭಾಗ್ಯ ನಿಮ್ಮದಾಗಲಿ. ಗಣಪ್ಪನ ಭೆಟ್ಟಿ ನೆನಪು ತಿಮ್ಮನಿಗೆ ಚಿರಕಾಲ ಉಳಿಯುವಂಥ ಕಿಕ್ಕಿನ ವ್ಯವಸ್ಥೆ ಆಗಲಿ" ಎಂದು ತಿಮ್ಮ ಗುರುಪಾದನತ್ತ ನೋಡಿದನು.

ತಿಮ್ಮನ ಮಾತು ಕೇಳಿ ಗುರುಪಾದಪ್ಪನಿಗೆ ಏನು ಮಾತಾಡಬೇಕೆಂಬುದು ತೋಚದೇ ಮೌನನಾಗಿ ಕುಳಿತದ್ದು ನೋಡಿ ತಿಮ್ಮನು ಅವನ ರಟ್ಟೆಯನ್ನು ಹಿಡಿದು, "ಏನು ಮೂಕ ದೆವ್ವ ಬಡಿದ್ಹಾಂಗ ಕೂತಬಿಟ್ಟೆಲ್ಲೊ ಮಹಾರಾಯ, ಮೂಕರನ್ನು ಮಾತಾಡಿಸಲಿಕ್ಕೆ ಹಚ್ಚುವ ಜಾಗ್ರತ ದೇವರ ಸನ್ನಿಧಿಯಲ್ಲಿ ಬಂದು ಬಾಯಿಗೆ ಬೀಗ ಹಾಕಿದವರಂಗ ಕೂತರೇನು ತಿಳಿಕೋಬೇಕು. ವೇಟರ್ ನಿಮ್ಮ ಆರ್ಡರಿಗಾಗಿ ಅದೆಷ್ಟು ಹೊತ್ತು ದಾರಿ ಕಾಯುತ್ತ ನಿಲ್ಲಬೇಕು? ಬಾಯಿ ಬಿಟ್ಟು ಹೇಳಿಬಿಡು. ಇಲ್ಲಿ ಉದ್ರಿಗೆ ಅವಕಾಶವಿಲ್ಲ. ಕಿಸೆ ಖಾಲಿ ಆಗದೆ ಒಳಗೆ ಬಂದವರು ಹೊರಗೆ ಹೋಗುವ ಸಂಪ್ರದಾಯವಿಲ್ಲ. ಕಿಸೆಯಲ್ಲಿದ್ದುದ

ನ್ನೆಲ್ಲಾ ದೇವಿಯ ಮುಂದಃಸೆಂದು ತೆಗೆದು ಇಡು" ಎಂದು ತಿಮ್ಮ ಅವಸರ ಪಡಿಸಿದನು.

ತಿಮ್ಮನ ಮಾತು ಗುರುಪಾದಪ್ಪನಿಗೆ ಅರ್ಥವಾಗಿತ್ತು. ಬರುವಾಗ ನೆಹರೂಶರ್ಟಿನ ಕಿಸೆಯಲ್ಲಿದ್ದ ಹಣದ ಪಾಕೀಟು ದಾರಿಯಲ್ಲಿ ಕಿಸೆ ಕತ್ತರಿಸುವವರ ಕೈವಶವಾದದ್ದು ಅವನಿಗೆ ಈಗ ಖಾಲಿ ಕಿಸೆಯಲ್ಲಿ ಕೈ ಹಾಕಿದಾಗ ಹೊಳೆದಿತ್ತು. ತಾನು ಅಸರ್ಥ ದೆಸೆಯಲ್ಲಿರುವದನ್ನು ಅಡಿ ತೋರಿಸುವದು ತನ್ನ ಘನತೆ—ಗೌರವಗಳಿಗೆ ಕುಂದು ಎಂದು ಅವನು ಮನದಲ್ಲಿಯೇ ಲೆಕ್ಕ ಹಾಕಿ, "ತಿಮ್ಮಾ, ನಿನ್ನ ತಲೆ ಚುರುಕು, ನರಿಯನ್ನೂ ನಾಚಿಸುವ ಬುದ್ಧಿಯುಳ್ಳವ, ನಿನ್ನ ಭೆಟ್ಟಿಯಾದವರ ಕಿಸೆ ಖಾಲಿ ಮಾಡಿಸಿ ಕಳಿಸಲು ಬಲ್ಲಿದ. ಈ ನಿನ್ನ ಕೀರ್ತಿ ನನಗೆ ಗೊತ್ತು. ಆದರೆ ನಿನ್ನ ಬುದ್ಧಿವಂತಿಕೆಯ ಆಟ ನನ್ನ ಮುಂದೆ ನಡೆಯುವದಿಲ್ಲವೆಂದು ನಿನಗೆ ತೋರಿಸಿಕೊಡಬೇಕಾಗಿದೆ. ಸ್ವಂತ ಕಿಸೆಯಿಂದ ನನ್ನ ಸಲುವಾಗಿಯೇ ಆಗಲಿ, ಸ್ನೇಹಿತನ ಸಲುವಾಗಿಯೇ ಆಗಲಿ ಬಿಡಿಕಾಸನ್ನೂ ವೆಚ್ಚ ಮಾಡಕೂಡದೆಂದು ನನಗೆ ನನ್ನ ಗುರು ದೇ.ಭು ಕಟ್ಟಪ್ಪಣೆ ಮಾಡಿದ್ದಾನೆ. ತನ್ನ ಚಟ ತೀರಿಸಲು ಇನ್ನೊಬ್ಬರ ಕಿಸೆ ಖಾಲಿಯಾಗಬೇಕು. ಇದು ದೇ.ಭ.ಸ ವ್ರತ. ನಾನು ಅವನ ಶಿಷ್ಯತ್ವ ವಹಿಸಿರುವದರಿಂದ ಈ ವ್ರತವನ್ನೂ ನಿಷ್ಠೆಯಿಂದ ಪಾಲಿಸಿಕೊಂಡು ಬಂದಿದ್ದೇನೆ. ಇಂದು ನಿನ್ನ ಕಿಸೆಯ ಭಾಗ್ಯ ತೆರೆಯುವ ಕಾಲ ಬಂಧಾಂಗ ಕಾಣಸ್ತದ. ನೀನೇನು ಕುಡಿಸಿಬಿಡಬೇಕು ಅಂತ ನಿನ್ನ ಮನಸ್ಸಿಗೆ ಅನಸ್ತದೋ ಅದನ್ನೆಲ್ಲಾ ಕುಡಿಸಿಬಿಡು," ಎಂದು ಹೇಳಿ ಗುರುಪಾದಪ್ಪ ತಿಮ್ಮನತ್ತ ನೆಟ್ಟ ನೋಟ ಬೀರಿ ತನ್ನ ಕಿಸೆಯಲ್ಲಿ ಕೈ ಹಾಕಿದನು "ಯಾಕೆ ಕಿಸೆಯಲ್ಲಿ ಕೈ ಹಾಕತೀಬಿಡೋ ಮಹಾರಾಯ; ನಿನ್ನ ತಲೆಯಂತೆ ನಿನ್ನ ಕಿಸೆಯೂ ಯಾವಾಗಲೂ ಖಾಲಿ" ಎಂದು ತಿಮ್ಮನು ಮೂದಲಿಸಿ ನುಡಿದದ್ದು ಕೇಳಿ ಗುರುಪಾದಪ್ಪನು ಕನಲಿ "ಕಿಸೆ ಎಂದೂ ಖಾಲಿ ಆಗದಂಥ ವ್ಯಕ್ತಿಯಾಗಿದ್ದವ ನಾನು, ಯಾವಾಗಲೂ ಕಿಸೆ ಖಾಲಿ ಇರುವದೆಂದು ಹೇಳಿ ನನ್ನ ವ್ಯಕ್ತಿಯ ಅಪಮಾನ ಮಾಡುವಿಯಾ!" ಎಂದು ಗದ್ದರಿಸಿದನು.

"ಛೇ, ಹೊಟ್ಟೆಯನ್ನೇ ಟ್ರೆಝುರಿಯನ್ನಾಗಿಸಿದವರು ನೀವು ಎಂದು ಹೇಳುವ ಉದ್ದೇಶದಿಂದ ಯಾವಾಗಲೂ ನಿಮ್ಮ ಕಿಸೆ ಖಾಲಿ ಅಂದೆ. ನನ್ನ ಮಾತಿಗೆ ಗಣಪ್ಪನಿಗಿರುವಂಥ ಈ ಡೊಳ್ಳು ಹೊಟ್ಟೆಯೇ ಸಾಕ್ಷಿ. ಗಣಪ್ಪನವರಿಗೆ ಸ್ವಾಗತವು ಎಂದು ನಾನು ಹೇಳಿದ್ದು ಹುಡುಗಾಟಕ್ಕಾಗಿ ಅಲ್ಲ. ನಿಮ್ಮ ವ್ಯಕ್ತಿಯ ಗೌರವಕ್ಕಾಗಿ ಎಂದು ನಿಮಗೆ ಹೊಳೆಯಬಾರದೇ?" ಎಂದು ತಿಮ್ಮ ಗಹಗಹಿಸಿ ನಗಹತ್ತಿದನು.

"ನಗಲಿಕ್ಕೇನಾಗೇದ ಈಗ, ಬ್ಯಾಂಕ್ ರಾಷ್ಟ್ರೀಕರಣವನ್ನು ವಿರೋಧಿಸುವ ಕಾಂಗ್ರೆಸ್ಸಿಗರು ತಮ್ಮ ಹಣವನ್ನು ಬ್ಯಾಂಕಿನಲ್ಲಿಡಲು ಹೆದರಿ ತಮ್ಮ ಹೊಟ್ಟೆಯನ್ನೇ ತಮ್ಮ ಹಣದ ತಿಜೋರಿಯನ್ನಾಗಿ ಮಾಡಿಕೊಂಡಿರಬಹುದು. ನಾನು ಶುದ್ಧ ಸಮತಾವಾದಿ. ಬ್ಯಾಂಕ್ ರಾಷ್ಟ್ರೀಕರಣದ ಬೆಂಬಲಿಗ. ಕೂಡಲೇ ಎ.ಆಯ್.ಸಿ.ಸಿ. ಸಭೆ ಸೇರಬೇಕೆಂದು ಪ್ರತಿಪಾದಿಸುವವರಲ್ಲಿ ನಾನೂ ಒಬ್ಬ"

ತಿಮ್ಮನು ಗುರುಪಾದಪ್ಪನಿಗೆ ಮುಂದೆ ಮಾತನಾಡಗೊಡದೆ "ಈ ಪವಿತ್ರಸ್ಥಾನದಲ್ಲಿ ಯಾಕೆ ಆ ನಿನ್ನ ಎ. ಆಯ್. ಸಿ. ಸಿ. ಹೆಸರು ಉಚ್ಚರಿಸತೀಯೋ ಮಹಾರಾಯಾ. ಈ ಪವಿತ್ರ ಸ್ಥಾನ ಅಗೌರವಪಡಿಸುವ ಉದ್ಧಟತನಕ್ಕಾಗಿ ಎ. ಆಯ್. ಡಿ. ಎ. (A. I. D. A.) ಯವರು ನಿನ್ನ ಮೇಲೆ ಶಿಸ್ತುಭಂಗ ಕ್ರಮ ಕೈಕೊಳ್ಳಲು ಅವಕಾಶ ಕೊಡಬ್ಯಾಡ" ಎಂದು ಎಚ್ಚರಿಸಿದನು.

"ಎ. ಆಯ್. ಸಿ. ಸಿ. ಎಂದರೆ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಅಂತ ನಿನ್ನ ತಲೆಯೊಳಗ ಸೇರಿದ ಭ್ರಮಾ ಮೊದಲು ತೆಗೆದು ಹಾಕು. ಅದರ ಕಥೆಯನ್ನು ನಾವು ರಾಷ್ಟ್ರಪತಿ ಚುನಾವಣೆಯ ಕಾಲಕ್ಕೆ ಮುಗಿಸಿ ಅದರ ಬದಲು All India Conscience Committee ಅಂತ ಹೊಸಾದೊಂದು ಸಂಸ್ಥೆಯನ್ನೇ ಅಸ್ತಿತ್ವದಲ್ಲಿ ತಂದದ್ದು ನಿನಗೆ ಗೊತ್ತಿಲ್ಲ ಕಾಣಸ್ತದ. ನಾನು ಆಲ್ ಇಂಡಿಯಾ ಕಾನ್‌ಶಿಯನ್ಸ್ ಕಮಿಟಿಯ ಪ್ರಮುಖ ಸದಸ್ಯನಾಗಿರುವದರಿಂದಲೇ ಗಾಂಧೀ ಶತಮಾನೋತ್ಸವ ಕಾರ್ಯಕ್ರಮ ಮಾರ್ಗದರ್ಶನ ಸಮಿತಿಯ ಅಧ್ಯಕ್ಷಸ್ಥಾನಕ್ಕೆ ನೇಮಕ ಹೊಂದಿರುವೆನು. ನೀನು ಈ ಸಮಿತಿಯ ಕಾರ್ಯದರ್ಶಿಯಾಗಿ ನೇಮಕ ಹೊಂದಿರುವದರಿಂದ ನೀನೂ ಆಲ್ ಇಂಡಿಯಾ ಕಾನ್‌ಶಿಯನ್ಸ್ ಕಮಿಟಿಯ ವರ್ಚಸ್ವೀ ಸದಸ್ಯನಾಗಿರುವಿ ಎಂದು ನನ್ನ ತರ್ಕ."

"ಸುಟ್ಟಿತು ನಿನ್ನ ತರ್ಕ. ದೇವಿಯ ಮಂದಿರದಂಥ ಪವಿತ್ರ ಸ್ಥಾನಕ್ಕೆ ಬರುವವರು ಅಪವಿತ್ರವೆನಿಸುವ ಚಪ್ಪಲಿಗಳನ್ನು ಹೊರಗೆ ಬಿಟ್ಟು ಬರಿಗಾಲಿನಿಂದ ಮಂದಿರ ಪ್ರವೇಶ ಮಾಡಬೇಕು. ಇದು ತಲೆ ಇಲ್ಲದವರಿಗೂ ತಿಳಿಯುವ ವಿಚಾರ. ಕಾನ್‌ಶಿಯನ್ಸ್ ಇದ್ದವರು ಅದನ್ನು ಮನೆಯಲ್ಲಿ ಬಿಟ್ಟು ಈ ಪವಿತ್ರಸ್ಥಾನಕ್ಕೆ ಬರಬೇಕೆಂಬ ಸಾದಾ ವಿಚಾರ ಸುದ್ಧಾ ನಿನಗೆ ಬರಬಾರದೇ? ನಿನಗೆ ಕಾನ್‌ಶಿಯನ್ಸ್ ಇದೆ ಎಂದು ನಾನು ನಂಬಲಾರೆ. ಗುಡಿ-ಗುಂಡಾರ-ಮಠ-ಮಸೀದೆ-ಚರ್ಚ್-ಗುರುದ್ವಾರ ಇಂಥ ಸ್ಥಳಗಳಿಗೆ ಹೋದಾಗ ಕಾನ್‌ಶಿಯನ್ಸ್ ಇದ್ದವರೆಂದು ಹೇಳಿಕೊಂಡರೆ ಯಾರಾದರೂ ನಂಬಬಹುದು. ವೇಶ್ಯೆಯ ಮನೆಯಲ್ಲಿ ಭೆಟ್ಟಿಯಾದವನು ತಾನು ಬ್ರಹ್ಮಚಾರಿ ಎಂದೂ, ಗಡಂಗದಲ್ಲಿ ಭೆಟ್ಟಿಯಾದವನು ಜಿತೇಂದ್ರಿಯನೆಂದೂ, ರಾಜಕಾರಣದಲ್ಲಿರುವವನು ತಾನು ಕಾನ್‌ಶಿಯನ್ಸ್ ಇದ್ದು ಅದರ ಆದೇಶದಂತೆ ನಡೆಯುವವನೆಂದೂ ಹೇಳಿಕೊಂಡರೆ ಕೇಳಿದವರು ನಕ್ಕಾರು. ಈ ಜ್ಯೂಪಿಟರ್-ಬಾರ್ ನಮ್ಮ ಎ. ಆಯ್. ಡಿ. ಸಿ. ಯ ಕೇಂದ್ರಕಛೇರಿ. ಎ. ಆಯ್. ಡಿ. ಸಿ. ಎಂದರೆ ಅ. ಭಾ ಕುಡುಕರ ಕಮಿಟಿ. ಸದಸ್ಯತ್ವ ಪಡೆದವರಲ್ಲಿ ಕಾನ್ಶಿಯನ್ಸ್ ಇದ್ದವರೆಂದು ಸಂಶಯ ಬಂದರೆ ಅವರನ್ನು ನಮ್ಮ ಸಂಘದಿಂದ ಹೊರದೂಡಲು ಈಗಾಗಲೇ ನಮ್ಮ ಎ. ಆಯ್. ಡಿ. ಎ. ಕಾರ್ಯಸಮಿತಿ ನಿರ್ಧರಿಸಿದೆ.

"ನೀನು ನಿನ್ನ ಎ. ಆಯ್. ಸಿ. ಸಿ. ಸದಸ್ಯನಾಗಿರಬಯಸುತ್ತಿದ್ದರೆ ನಮ್ಮ ಎ. ಆಯ್. ಸಿ. ಸಿ. ಗೆ ಮರ್ಯಾದೆಯಿಂದ ಶರಣು ಹೊಡೆದು ನಿನ್ನ ದಾರಿ ಹಿಡಿ" ಎಂದು ತಿಮ್ಮ ಗುರುಪಾದಪ್ಪನತ್ತ ಗಂಭೀರವದನನಾಗಿ ನೋಡತೊಡಗಿದನು.

ಅಷ್ಟರಲ್ಲಿ ಅವರು ಕುಳಿತಲ್ಲಿಗೆ ಓರ್ವನು ಬಂದು "ಹಲ್ಲೋ ತಿಮ್ಮ, ನಿನ್ನೊಡನೆ ಅರ್ಜಂಟಾಗಿ ಮಾತನಾಡಬೇಕಿತ್ತು," ಎಂದು ನುಡಿದು ಗುರುಪಾದಪ್ಪನತ್ತ ನೋಡಿ "ನಿಮ್ಮ ಮಾತಿನಲ್ಲಿ ವ್ಯತ್ಯಯ ತಂದುದಕ್ಕೆ ಕ್ಷಮಿಸಿ" ಎಂದು ವಿನಯದಿಂದ ಹೇಳಿ ಒಂದು ಕುರ್ಚಿಯನ್ನು ಎಳೆದು ಗುರುಪಾದಪ್ಪನ ಬದಿಯಲ್ಲಿ ಆಸೀನನಾದನು.

ಅವನ ಮುಖವನ್ನು ಗುರುಪಾದಪ್ಪ ನೋಡಿಯೂ ನೋಡದವನಂತೆ ಕುಳಿತಿದ್ದು ಕಂಡು ತಿಮ್ಮನು "ಇವರು ನಮ್ಮ ಸಂಘದ ಪ್ರಚಾರ ಕಾರ್ಯದರ್ಶಿಗಳು. 'ಹಜಾಮತ' ಪತ್ರಿಕೆಯ ವಿಶೇಷ ವರದಿಗಾರರು. ಇವರು 'ನೋಪೇನ್' ಎಂಬ ಹೆಸರಿನಿಂದ ಪ್ರಸಿದ್ಧರಾದ ಲೇಖಕರು" ಎಂದು ಗುರುಪಾದಪ್ಪನಿಗೆ ಅವನ ಪರಿಚಯ ಮಾಡಿಕೊಟ್ಟನು.

ಗುರುಪಾದಪ್ಪ ಅವನತ್ತ ದುರುಗುಟ್ಟಿ ನೋಡಿ "ನೀನೇ ಅಲ್ಲ ಮೊನ್ನೆ ನನ್ನ ಬಗ್ಗ ನಿನ್ನ ಹಜಾಮತ ಪತ್ರಿಕೆಯಲ್ಲಿ ಲೇಖನ ಬರೆದವನು. 'ರಾಜಕಾರಣಿಗೆ ಕಾಶಿನ ಯನ್ಸ್ ಅಂಬುವದೊಂದು ಇದೆ ಎಂಬ ಅದ್ಭುತ ಸಂಶೋಧನೆ ಮಾಡಿದ ಗುರುಪಾದಪ್ಪನವರಿಗೆ ನೋಬೆಲ್ ಪಾರಿತೋಷಕ ದೊರೆಯದಿರುವದು ಭಾರತದ ದುರ್ದೈವ' ಎಂದು ಕುತ್ಸಿತ ಟೀಕೆ ಮಾಡಲು ನಿನಗೆ ಯಾರು ಪ್ರೇರೇಪಿಸಿದವರು? ಅದನ್ನು ಹೇಳದೆ ನಾನು ಬಿಟ್ಟೆಪ್ಪನಲ್ಲ" ಎಂದು ಅವನ ಕೈಯಲ್ಲಿದ್ದ ತೊಗಲಿನ ಚೀಲವನ್ನು ಕಿತ್ತುಕೊಳ್ಳಲು ಕೈಚಾಚಿದನು.

"ಖಬರದಾರ್, ಇನ್ನೊಬ್ಬರ ಒಡೆತನಕ್ಕೆ ಸೇರಿದ್ದನ್ನು ಕಿತ್ತುಕೊಳ್ಳುವ ನಿಮ್ಮ ಕಾನ್‌ಶಿಯನ್ಸದ ಬಣ್ಣ ತಿಳಿಯಿತು ಬಿಡಿ" ಎಂದು ಗುರುಪಾದಪ್ಪನ ಕೈಯನ್ನು ಬದಿಗೆ ಸರಿಸಿದನು.

ತಿಮ್ಮನು ನಡುವೆ ಬಾಯಿಹಾಕಿ, "ಮಿ. ನೋಪೇನ್ ಗುರುಪಾದಪ್ಪನ ಕಾಶಿನ್‌ಯನ್ಸದ ಬಣ್ಣ ತಿಳಿಯಿತು ಅಂದಿರಲ್ಲಾ. ಆದರ ಬಣ್ಣ ಯಾವದು? ಅವರ ಹೃದಯದ ಹತ್ತಿರ ಇದ್ದರೆ ರಕ್ತವರ್ಣದ್ದಾಗಿರಬೇಕು! ಹೆರವರ ಹಣ ತಿಂದು ಗಣಪ್ಪನ ಹೊಟ್ಟೆಯಂತೆ ಉಬ್ಬಿದ ಹೊಟ್ಟೆಯಲ್ಲಿ ಅದು ಇದ್ದುದಾಗಿದ್ದರೆ ಪಿತ್ತಕೋಶದ ಪ್ರಭಾವದಿಂದ ಅದು ಹಳದಿ ಬಣ್ಣದ್ದಾಗಿರಬೇಕು; ಬ್ಲ್ಯಾಕ ಮಾರ್ಕೆಟ್ ಮಾಡಿ ಮಾಡಿ ಅವರ ಕಾನ್‌ಶಿಯನ್ಸ್ ಕಪ್ಪುವರ್ಣದ್ದಾಗಿರುವ ಸಂಭವವೂ ಉಂಟು. ಇದು ನನ್ನ ಅಭಿಪ್ರಾಯ" ಎಂದು ತಿಮ್ಮ ಹಲ್ಲು ಕಿರಿದನು.

ಗುರುಪಾದಪ್ಪನಿಗೆ ತಿಮ್ಮನ ಮಾತುಗಳು ಅಸಹನೀಯವೆನಿಸಿದವು. ಅವನು ತಟ್ಟನೇ ಎದ್ದು, "ತಿಮ್ಮಾ, ನಿನ್ನ ತರ್ಕ, ಬುದ್ಧಿ ಎಲ್ಲಾ ಈ ಬಾರಿನ ಮಾರಾಟ ಮಾಡಿಕೋ ಬ್ಯಾಡಾ. ದೇವರು ನಿನ್ನ ಕಣ್ಣಿಗೇನೂ 'ತ್ರ'



ಕಿರಣ ಶಕ್ತಿಯನ್ನು ಕೊಟ್ಟಿಲ್ಲ. ಇಲ್ಲಿ ನನ್ನನ್ನು ನೋಡು ಶುಭ್ರವಾದ ಖಾದಿ ಬಟ್ಟೆಯಿಂದ ಕಂಗೊಳಿಸುವ ನಾನು ನಖ—ಶಿಖಾಂತ—ತಲೆಯ ಮೇಲಿನ ಕೂದಲು ಮೊದಲುಗೊಂಡು ಶುಭ್ರವರ್ಣದವನಾಗಿರುವೆನು. ನನ್ನ ಗಾಂಧೀ ಟೊಪ್ಪಿಗೆಯೇ ಇದಕ್ಕೆ ಸಾಕ್ಷಿ. ಕಣ್ಣಿದ್ದೂ ಕುರುಡನಂತೆ ನೀನು ಮಾತಾಡಲು ಈ ಜಾಗಾದ ಮಹಿಮೆಯೇ ಕಾರಣವಾಗಿರಬೇಕು" ಎಂದು ನಡುವೆ ಬಾಯಿಬಿಟ್ಟನು.

ತಿಮ್ಮನು ಗುರುಪಾದಪ್ಪನ ಮಾತಿಗೆ ತಲೆದೂಗಿ "ಜನ್ಮದಲ್ಲಿ ಇದೊಂದು ಸತ್ಯ ಮಾತನ್ನಾಡಿದಿರಿ. ಒಂದು ಸ್ಥಿತಿಗೆ ಒಬ್ಬೊಬ್ಬರನ್ನು ಒಯ್ಯುವದಕ್ಕೆ ಒಂದೊಂದು ಜಾಗೆಯ ಮಹಿಮೆಯೇ ಕಾರಣ. ನಾನು ಸ್ವಾನುಭವದಿಂದ ಈ ಮಾತನ್ನು ಹೇಳುವೆ ಮನೆಯಲ್ಲಿದ್ದಾಗ ನಾನು ಜಿಪುಣಾಗ್ರೇಸರ. ಪಲ್ಯಾಕಾಯಿ ಬೆಲೆ ಏರಿದೆ, ಅದನ್ನು ಕೊಳ್ಳಲೇಕೂಡದೆಂದು ಸುಗ್ರೀವಾಜ್ಞೆ ಹೊರಡಿಸುವೆನು. ಕಚೇರಿಯಲ್ಲಿದ್ದಾಗ ಯಾವದೇ ಬಕರಾನ ಖರ್ಚಿನಿಂದ ತಿಂಡಿ-ತೀರ್ಥ ಸಾಧ್ಯ ಎಂದು ತಿಳಿದಾಗ ಸಾದಾ ಚಹಾ—ಚೂಡಾ ನನಗೆ ಹಿಡಿಸುವದಿಲ್ಲ 'ಆಮಲೇಟ್—ಕಟಲೆಟ್, ವಿದೇಶಿಮದ್ಯ, ಆದಷ್ಟು ಹೆಚ್ಚಿನ ಬೆಲೆಗೆ ಸಿಗುವುದೇ ಬೇಕೆನಿಸುವದು.

ಇಲ್ಲಿಗೆ ಬಂದಾಗ ನಾನು—ನನ್ನದು—ಇನ್ನಿತರರದು ಈ ದ್ವಂದ್ವ ಭಾವಾತೀತ ಸ್ಥಿತಿಯಲ್ಲಿರುವೆ. ನಿಮ್ಮ ಸ್ಥಿತಿಯೂ ಅಷ್ಟೇ. ಹಳ್ಳಿಯ ಗೌಡನಾಗಿದ್ದಾಗ ಎಲ್ಲರ ಕಾಲಕಸವೆಂದುಕೊಂಡಿದ್ದಿರಿ, ದೇ. ಭ. ನ ಕೃಪೆಯಿಂದ ಎಂ. ಎಲ್. ಎ. ಪದವಿಗೇರಿದಿರಿ. ಆ ಸ್ಥಾನದ ಮಹಿಮೆಯಿಂದ ಎಲ್ಲರ ಕಲ್ಯಾಣ ಮಾಡುವ ಶಕ್ತಿಸಂಪನ್ನ ದೇವಸಮಾನನೆಂದು ಭಾವಿಸಿಕೊಂಡಿರಿ. ದೇವನನ್ನು ಪ್ರಸನ್ನಗೊಳಿಸಲು ಭಕ್ತನು ಕಾಯಿಕರ್ಪೂರ ನೈವೇದ್ಯ ಸಮರ್ಪಿಸದೇ ವಿಧಿ ಇಲ್ಲ ಎಂಬ ಸಿದ್ಧಾಂತ ನಿಮ್ಮದಾಯಿತು. ಎಂ. ಪಿ. ಪದವಿಗೇರಿದಿರಿ. ಸರಕಾರದ ಅಳಿವು-ಉಳಿವಿನ ನಿರ್ಣಯದ ಅಧಿದೇವನೆಂದುಕೊಂಡಿರಿ. ಅಧಿಕಾರದ ಗದ್ದುಗೆಗೇರಿಸಿದವರ ಗೋರಿ ಕಟ್ಟಲು ಕಾನ್ಶಿಯನ್ಸದ ಅಸ್ತ್ರ ಹಿರಿದಿರಿ. ಜನರ ವಶೀಕರಣದ ತಂತ್ರ ಪ್ರಯೋಗಕ್ಕಾಗಿ ಗಾಂಧೀ ಶತಮಾನೋತ್ಸವದ ಕಾರ್ಯಕ್ರಮದ ಮಾರ್ಗದರ್ಶನ ಸಮಿತಿಯ ಪುಂಗಿಯನ್ನು ಎತ್ತಿರುವಿರಿ. ನಾನು ಇದ್ದ ಸ್ಥಿತಿ ಇದ್ದಂತೆ ಹೇಳುವವನು. ನಿಮ್ಮ ಹಾಗೆ ಒಳಗೊಂದು-ಹೊರಗೊಂದು, ಆಡುವದೊಂದು-ಮಾಡುವದೊಂದು, ಹೇಳುವದೊಂದು-ಆಗುವದೊಂದು, ನನ್ನ ರಕ್ತ ಪರೀಕ್ಷೆ ಮಾಡಿಸಿದರೆ ಅದರಲ್ಲಿ ನೀರಿನ ಬದಲು ಅಲ್ಕೋಹಾಲ್ ಸಿಕ್ಕೀತೇ ಹೊರತು ಬೇರೇನೂ ಸಿಗಲಿಕ್ಕಿಲ್ಲ"

ತಿಮ್ಮನಿಗೆ ಮುಂದೆ ಮಾತನಾಡಗೊಡದೆ ಗುರುಪಾದಪ್ಪ "ಗೊಡ್ಡು ಹರಟೆ ಸಾಕು. ಈಗೇನಾದರೂ ಗಂಟಲು ಬಿಸಿಯಾಗುವ ಏರ್ಪಾಟು ಮಾಡುವಿಯೋ ಇಲ್ಲವೇ ತಲೆಹರಟೆಯಿಂದ ತಲೆ ಎಬ್ಬಿಸಿ ಅಟ್ಟುವಿಯೋ?" ಎಂದು ಕೇಳಿದನು.

"ಗುರುಪಾದಪ್ಪನವರೇ, ನಮ್ಮ ಸಂಘದ ಮುಖ್ಯಕಚೇರಿಗೆ ಸಂದರ್ಶನವಿತ್ತ ಗಣ್ಯ ಅತಿಥಿಗಳು ನೀವು. ನಿಮಗೆ ತಿಂಡಿ ತೀರ್ಥೋಪಚಾರವಿಲ್ಲದೆ ಕಳಿಸುವದು ಅತಿಥಿಸತ್ಕಾರದ ನಮ್ಮ ಪರಂಪರೆಗೆ ದ್ರೋಹ ಬಗೆದಂತೆ. ಇಂದಿನ ವೆಚ್ಚ ನನ್ನ ಪಾಲಿಗಿರಲಿ. ಕುಡಿದು ಆಡುವ ಮಾತಿಗೊಂದು ಕಳೆ ಬಂದೀತು" ಎಂದು ನಿಂ. ನೋಪೇನ್ ಇವರು ತೀರ್ಥಪ್ರಾಶನದ ಏರ್ಪಾಡಿಗೆ ಆರ್ಡರ್ ಕೊಟ್ಟರು.

ತೀರ್ಥಪ್ರಾಶನ ಮಾಡುವ ಮೊದಲು ಗುರುಪಾದಪ್ಪ ಅತ್ತಿತ್ತ ನೋಡಿ,

"ಅಲ್ಲೋ ತಿಮ್ಮ, ನಾವಿಬ್ಬರೂ ಕೂಡಿ ಇಲ್ಲಿ ಕೂತು ಕುಡಿಯುವದನ್ನು ಈ ನೋಪೇನ್ ಮಹಾಶಯ ನಾಳೆ ಹಜಾಮತ ಪತ್ರಿಕೆಯಲ್ಲಿ ಪ್ರಕಟಿಸಿದರೆ ನಾವು ಗಾಂಧೀ ಶತಮಾನೋತ್ಸವದ ಮಾರ್ಗದರ್ಶನ ಸಮಿತಿಯಲ್ಲಿರಲು ಅನರ್ಹರೆಂದು ಜನರು ಭಾವಿಸಲಿಕ್ಕಿಲ್ಲವೆ; ಹೀಗೆ ಬಹಿರಂಗವಾಗಿ ಕುಡಿಯುವದು ನನ್ನ ಕಾನ್ಶಿಯನ್ಸಿಗೆ ಒಗ್ಗದ ಮಾತು. ಈ ಬಾಟ್ಲಗಳನ್ನು ನಮ್ಮ ನಿವಾಸ ಸ್ಥಾನಕ್ಕೆ ಒಯ್ದು ಅಲ್ಲಿಯೇ ಕುಡಿದರೆ ನೆಟ್ಟಗಲ್ಲವೇ?" ಎಂದು ಕೇಳಿದನು.

ತಿಮ್ಮನು ಅದಕ್ಕೆ ಥಟ್ಟನೇ ಉತ್ತರ ಕೊಡುತ್ತ "ಕುಡಿಯಲು ನಿಮ್ಮ ಕಾನ್ಶಿಯನ್ಸದ ಆಕ್ಷೇಪವಿಲ್ಲ ಆದರೆ ಅದು ಬಹಿರಂಗವಾಗಿ ನಡೆದರೆ ಜನರಲ್ಲಿ ಮರ್ಯಾದೆ ಉಳಿಯದೆಂಬ ಒಂದೇ ಕಾರಣವಿದ್ದರೆ ನೀವೇನೂ ಹೆದರಬೇಕಿಲ್ಲ. ಇಂದು ಕುಡಿಯದವನಿಗೆ ಯಾರೂ ಒಂದು ಕವಡೆಯ ಬೆಲೆಯನ್ನು ಕೊಡುವದಿಲ್ಲ. ರಾಷ್ಟ್ರದ ಅಭಿವೃದ್ಧಿ ಯೋಜನೆಗೆ ಹಣ ಒದಗಿ

ಯುವವರು ನಾವು. ನಮ್ಮ ಅ. ಭಾ. ಕುಡುಕರ ಸಂಘಕ್ಕೆ ರಾಜ್ಯ ವಿಧಾನಸಭೆಯಲ್ಲಿ ಸ್ಥಳಗಳನ್ನು ಕಾದಿರಿಸಬೇಕು. ನಮ್ಮ ಸಂಘದ ಸದಸ್ಯನಿರುವವನಿಗೆ ಅಬಕಾರಿ ಖಾತೆಯ ಮಂತ್ರಿಪದ ಕೊಡತಕ್ಕದ್ದು. ಎಲ್ಲರಿಗಿಂತ ಹೆಚ್ಚಿಗೆ ಕುಡಿದೂ ಎಚ್ಚರತಪ್ಪಿ ಬೀಳದವನಿಗೆ ಮಂತ್ರಿಪದ ಕೊಡಬೇಕು. ಎಮ್. ಎಲ್. ಎ ತಿಕೀಟು ಕೊಡುವಾಗ ಕುಡಿಯುವ ಅರ್ಹತೆಯನ್ನು ರಾಜಕೀಯ ಪಕ್ಷಗಳು ದುರ್ಲಕ್ಷಿಸಲಾಗದು. ಕುಡಿತದ ಚಟವಿದ್ದವರಿಗೆ ಎಲ್ಲ ರಾಜಕೀಯ ಪಕ್ಷಗಳು ತಿಕೀಟು ಕೊಟ್ಟರೆ ಮತದಾರರಿಗೆ ಮದ್ಯಪಾನದ ಸಮಾರಾಧನೆಯ ಅವಕಾಶ ಸಿಗುವದು. ಪಾನಪ್ರತಿಬಂಧವು ಕನಸಿನ ಮಾತಾಗುವದು. ರಾಜ್ಯದ ಅಬಕಾರಿ ಆದಾಯವು ಶತಗುಣವಾಗಿ ಹೆಚ್ಚುವದು. ಅದರಿಂದ ಕರಭಾರ ಹೆಚ್ಚಿಸದೇ ಆರ್ಥಿಕ ಅಭಿವೃದ್ಧಿ ಯೋಜನೆಗಳಿಗೆ ಹಣ ಒದಗಿಸುವದು ಸರಕಾರಕ್ಕೆ ಸಾಧ್ಯವಾಗುವದು. ದರಿದ್ರ ನಾರಾಯಣನ ಸೇವೆಯೇ ಗಾಂಧೀಜಿಯವರ ಜೀವನದ ಉಸಿರಾಗಿತ್ತು. ದರಿದ್ರನಾರಾಯಣನ ಸಂಖ್ಯೆ ಹೆಚ್ಚಿದಷ್ಟೂ ಅವರ ಸೇವೆಯ ಅವಕಾಶಲಭ್ಯವಾಗುವದು. ಗಾಂಧೀಜಿಯವರ ಬಗ್ಗೆ ನಮ್ಮೆಲ್ಲರಲ್ಲೇನಾದರೂ ಪೂಜ್ಯಭಾವನೆ ಇದ್ದರೆ, ಅವರ ನೆನಪು ನಮ್ಮಲ್ಲಿ ಚಿರಕಾಲ ಉಳಿಯಬೇಕಾಗಿದ್ದರೆ, ದರಿದ್ರ ನಾರಾಯಣನ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುವಂತೆ ನೋಡಿಕೊಳ್ಳುವದು ಸರಕಾರದ ಹೊಣೆ.

"ಒಂದೆಡೆ ಜನರ ಆರ್ಥಿಕ ಅಭಿವೃದ್ಧಿ ಯೋಜನೆಗಳಿಗೆ ಅವಶ್ಯವಿದ್ದ ಹಣ ಸಂಗ್ರಹದ ಕಾರ್ಯ ಇನ್ನೊಂದೆಡೆಗೆ ದರಿದ್ರನಾರಾಯಣರ ಸಂಖ್ಯೆಯ ಹೆಚ್ಚಳ, ಇವೆರಡೂ ಗುರಿ ಒಂದೇ ಕಾಲಕ್ಕೆ ಸಾಧಿಸುವಂಥ ನೀತಿ ಸರಕಾರದ್ದಾಗಬೇಕು. ಪಾನಪ್ರತಿಬಂಧದ ಉಚ್ಚಾಟಣೆ, ಶಾಲೆ, ಕಾಲೇಜುಗಳಲ್ಲಿ ಕಡ್ಡಾಯವಾಗಿ ನಮ್ಮ ಭಾವೀ ನಾಗರಿಕರಿಗೆ ಕುಡಿತದ ಅಭ್ಯಾಸ ಮಾಡಿಕೊಡಲು ಪುಕ್ಕಟಿ ಪಾನಸತ್ರದ ಯೋಜನೆ, ಹಳ್ಳಿ-ಹಳ್ಳಿಗೆ ಸಿಂದಿ-ಶೆರೆ-ಅಂಗಡಿಗಳನ್ನು ಸರಕಾರವೇ ನಡೆಸುವದು, ಇವೆಲ್ಲ ಗಾಂಧೀ ಶತಮಾನೋತ್ಸವ ಕಾರ್ಯಗಳಲ್ಲಿ ಪ್ರಾಮುಖ್ಯವಾಗಿ ಸ್ಥಾನ ಪಡೆಯಬೇಕೆಂದು ನಾವು ನಮ್ಮ ಸಮಿತಿಯ ಮೂಲಕ ಸರಕಾರದ ಮೇಲೆ ಒತ್ತಾಯ ತರಬೇಕು."

"ಗಾಂಧೀ ವಾರಸುದಾರರು ತಾವು ಎಂದು ಹೇಳಿಕೊಳ್ಳುವ ಕೆಲ ಲಂಡ ಪುಂಜಿಯ ಬೆಳೆದ ಗಡ್ಡದ ಜನರು ಪಾನಪ್ರತಿಬಂಧ ತೆಗೆದುಹಾಕಿ ಕುಡಿತದ ಬಗ್ಗೆ ದೇಶದಾದ್ಯಂತ ಸಂಘಟಿತ ಪ್ರಯತ್ನ ಮಾಡಲು ಸರಕಾರವು ಈ ಲಂಡ ಪುಂಜೆಯ ಜನರಿರುವ ವರೆಗೆ ಮುಂದೆ ಬರಲಿಕ್ಕೆ ಸಾಧ್ಯವಾದೀತೆ?"

ಬಿ. ನೋಪೇನ್ ನಡುವೆ ಬಾಯಿ ಹಾಕಿ "ಸಾಧ್ಯವಾಗಲೇಬೇಕು. ಗಾಂಧೀವಾದ ಸಮಾಜವಾದದ ಕಡುವೈರಿ. ರಾಷ್ಟ್ರೀಕರಣಕ್ಕೆ ಗಾಂಧೀಜಿ ವಿರೋಧಿಯಾಗಿದ್ದರು. ಯಾಂತ್ರಿಕ ಔದ್ಯೋಗಿಕರಣಕ್ಕೆ ಅವರು ಕಡು ವೈರಿಗಳಾಗಿದ್ದರು. ಪಾನಪ್ರತಿಬಂಧ, ಖಾದಿ, ಔದ್ಯೋಗಿಕ ವಿಕೇಂದ್ರೀಕರಣ, ಗ್ರಾಮಸ್ವರಾಜ್ಯ, ಇವೆಲ್ಲಾ ಗಾಂಧೀ ವಿಚಾರಗಳು ಜನರಿಗೆ ಹಿಡಿಸದಂಥ ಮಾತುಗಳು. ನಾವು ಪಾಶ್ಚಿಮಾತ್ಯ ಮಾದರಿಯ ಔದ್ಯೋಗೀಕರಣದ ಭದ್ರ ಬುನಾದಿಯನ್ನು ಹಾಕಿದ್ದೇವೆ. ರಾಜ್ಯಕೀಯ ಕೇಂದ್ರೀಕರಣವನ್ನು ಸಾಧಿಸಿದ್ದೇವೆ. ಪಾನಪ್ರತಿಬಂಧವು ಯಶಸ್ವಿಯಾಗಲಿಲ್ಲವೆಂಬ ಸತ್ಯವನ್ನು ಕಂಡುಕೊಂಡಿದ್ದೇವೆ. ಗಾಂಧೀವಿಚಾರಗಳು ಅವರೊಂದಿಗೇ ಹೋದ ಹಳೆಯ ವಿಚಾರಗಳು. ಪಾಶ್ಚಾತ್ಯ ರಾಷ್ಟ್ರಗಳಂತೆ ನಾವೂ ನೀರಿನ ಬದಲು ಬೀರು ಕುಡಿಯುವ ಜನಾಂಗದವರಾದರೆ ಪ್ರಗತಿಶೀಲ ರಾಷ್ಟ್ರಗಳ ಮಾಲಿಕೆಯಲ್ಲಿ ನಮ್ಮ ರಾಷ್ಟ್ರದ ಹೆಸರು ಬಂದೀತು. ಈಗ ಕಾಲು ಶತಮಾನದಷ್ಟು ವೇಳೆಯನ್ನು ನಿಷ್ಕ್ರಿಯರಾಗಿ ಹಾಳು ಮಾಡಿದ್ದೇ ಸಾಕು. ಈಗ ನಾವು ಪಂಚವಾರ್ಷಿಕ ಯೋಜನೆಯಲ್ಲಿ ಕುಡಿತದ ಪ್ರಸಾರಕ್ಕಾಗಿ ದೊಡ್ಡ ಮೊತ್ತವನ್ನು ತೆಗೆದಿಡಬೇಕು. ಅದಕ್ಕಾಗಿ ಲಾಟರಿಗಳ ಮೂಲಕ ಹಣ ಸಂಗ್ರಹಿಸಬೇಕು. ಈ ಸೂಚನೆಗಳನ್ನು ನಿಮ್ಮ ಸಮಿತಿಯು ಅಂಗೀಕರಿಸುವದು ಇಷ್ಟವೆಂದು ನನ್ನ ಅಭಿಪ್ರಾಯ" ಎಂದು ಹೇಳಿದನು.

"ಕೇಳಿದೇನಪ್ಪಾ ತಿಮ್ಮ, ಪಾನಪ್ರಚಾರ ಕಾರ್ಯಕ್ರಮದ ಅಗತ್ಯವಿದೆ ಎಂದು ಇವರು ಹೇಳುವರು. ಗಾಂಧೀಶತಮಾನೋತ್ಸವ ಕಾರ್ಯಕ್ರಮದ ಮಾರ್ಗದರ್ಶನ ಸಮಿತಿಯು ಈ ಸೂಚನೆಯನ್ನು ಮಾಡಲಿಕ್ಕಾದೀತೆ?" ಎಂದು ಗುರುಪಾದಪ್ಪ ಕೇಳಿದನು "ಯಾಕೆ ಮಾಡಲಿಕ್ಕಾಗದು? ಗಾಂಧೀಜಿ ಮಹಾತ್ಮನೆನಿಸಿದ್ದು ನಮ್ಮ ಪುಣ್ಯ. ನಾವು ಕುಡುಕರೆಲ್ಲ ಅವರ ಮಾತು ಕೇಳಿ ಕುಡಿಯುವದನ್ನು ನಿಲ್ಲಿಸಿ ಬಿಟ್ಟಿದ್ದರೆ ಗಾಂಧೀಜಿಯ ಮದ್ಯಪಾನ ನಿಷೇಧ, ಹೆಂಡದಂಗಡಿ ಪಿಕೆಟಿಂಗ್, ಈ ಕಾರ್ಯಕ್ರಮಗಳಿಗೆ ಅವಕಾಶವೇ ಸಿಗುತ್ತಿರಲಿಲ್ಲ. ನಾವು ಇದ್ದವೆಂದು ಗಾಂಧೀಜಿ ದೊಡ್ಡವರಾದರು. ಮದ್ಯದ ಅಂಗಡಿ ಮುಂದೆ ಪಿಕೆಟಿಂಗ್ ಮಾಡಿ ಜೇಲಿಗೆ ಹೋದವರು ದೇಶಭಕ್ತರೆಂದು ರಾಜಕೀಯ ಸಂತ್ರಸ್ತರೆಂದು ನಮ್ಮ ಮುಂದೆ ಮೂಗು ಮೇಲೆ ಮಾಡಿ ಮೆರೆಯುವದನ್ನು ನೋಡಿದಾಗ ನಮಗೆ ಅವರ ಬಗ್ಗೆ ಕನಿಕರವೆನಿಸುವದು" ಎಂದು ತಿಮ್ಮ ಉತ್ತರ ಕೊಟ್ಟನು.

"ಇದೇನು ಹೇಳುವಿ? ಅವರು ಜೇಲಿಗೆ ಹೋಗಿ ರಾಜಕೀಯ ಸಂತ್ರಸ್ತರಾದದ್ದು ಸುಳ್ಳೇ?" ಗುರುಪಾದಪ್ಪ ಕೇಳಿದ.

ತಿಮ್ಮ ಹೇಳಿದ: "ಅವರದೆಂಥ ತ್ಯಾಗ? ನಾವು ನಮ್ಮ ಮನೆ, ಮಾರು, ಹೆಂಡಂದಿರ ಕೊರಳಲ್ಲಿಯ ಮಂಗಳಸೂತ್ರ ಮೊದಲು ಮಾಡಿ ಸರ್ವಸ್ವವನ್ನೂ ತ್ಯಾಗ ಮಾಡಿದ ಬಹದ್ದೂರರು. ಸ್ವರಾಜ್ಯ ಪ್ರಾಪ್ತಿಯ ಶ್ರೇಯಸ್ಸು ನಮಗೆ ಸಲ್ಲಬೇಕು, ಕೃತಘ್ನ ಜನ. ನಮಗೆ ೨೦ ವರ್ಷಗಳ ವನವಾಸವನ್ನು ಅನುಭವಿಸಲು ಹಚ್ಚಿತು. ಕೊನೆಗೆ ತಾನು ಮಾಡಿದ ತಪ್ಪಿನ ಅರಿವು ಸರಕಾರಕ್ಕೆ ಆಯಿತು. ಅಭಿವೃದ್ಧಿ ಯೋಜನೆಗಳು ತಲೆ ಕೆಳಗಾದವು. ಸರಕಾರವು ಕೊನೆಗೆ ನಮಗೇ ಶರಣು ಬರಬೇಕಾಯಿತು. ದೇಶಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡುವ ನಾವು ಸರಕಾರದ ಅಸಹಾಯಸ್ಥಿತಿ ಕಂಡು ಅವರ ನೆರವಿಗೆ ಧಾವಿಸಿ ಬಂದೆವು. ಕೆಲವೇ ತಿಂಗಳಿನಲ್ಲಿ ಅನೇಕ ಕೋಟಿ ರೂಪಾಯಿಗಳನ್ನು ಸರಕಾರದ ಬೊಕ್ಕಸಕ್ಕೆ ಸೇರಿಸಿ ಕೃತಾರ್ಥರಾದೆವು. ನಾವು ಸಂಘಟಿತರಾಗಿಲ್ಲದಿರುವದರಿಂದ ನಮ್ಮನ್ನು ಕೀಳುಗಳೆಯುವರೆಂಬ ಕಲ್ಪನೆ ಈಗ ನಮ್ಮಲ್ಲಿ ಜಾಗೃತವಾಗಿದೆ. ಪ್ರಜಾಪ್ರಭುತ್ವದಲ್ಲಿ ಸಂಖ್ಯಾಬಲವೇ ನಿರ್ಣಾಯಕವಾದದ್ದು. No representation, no taxes ಇದು ಪ್ರಜಾಪ್ರಭುತ್ವದ ನ್ಯಾಯವಾದ ಸಿದ್ಧಾಂತ. ರಾಜ್ಯದ ಆದಾಯದಲ್ಲಿ ಅಬಕಾರಿ ಉತ್ಪನ್ನದ ಪ್ರಮಾಣದಲ್ಲಿ ಸ್ಥಾನಗಳನ್ನು ನಮ್ಮ ಅ. ಭಾ. ಕುಡುಕರ ಸಂಘಕ್ಕೆ ಮೀಸಲಾಗಿಡಿಸಬೇಕೆಂದು ನಾವು ನಮ್ಮ ಎ. ಆಯ್. ಸಿ. ಸಿ. ಮೂಲಕ ಬೇಡಿಕೆಯನ್ನು ಮಂಡಿಸಬೇಕು. ಅ. ಭಾ. ಕುಡುಕರ ಸಂಘಕ್ಕೆ ಮನ್ನಣೆ ಕೊಡಬೇಕು. ಈ ಬಗ್ಗೆ ನಮ್ಮ ಹೋರಾಟ ಪ್ರಾರಂಭವಾಗಬೇಕು. ದಲಿತರಲ್ಲಿ ಅತ್ಯಂತ ದಲಿತರೂ, ದೀನರಲ್ಲಿ ದೀನರೂ, ಶೋಷಿತವರ್ಗದಲ್ಲಿ ಅತ್ಯಂತ ಶೋಷಣೆಗಳಿಗೊಳಗಾದವರೂ ಆದ ನಮ್ಮ ಕುಡುಕ ಬಾಂಧವರ ಹಕ್ಕುಬಾಧ್ಯತೆಗಳನ್ನು ಕುಡುಕರಲ್ಲದವರು ರಕ್ಷಿಸಲಾರರು. ದೀನದಲಿತರ ಉದ್ಧಾರಕರೆಂದು ಗಾಂಧೀಜಿಯವರು ಭಾರತದ ಇತಿಹಾಸದಲ್ಲಿ ಚಿರಕಾಲ ಉಳಿಯುವ ಮಹಾತ್ಮರು. ಅವರ ಶತಮಾನೋತ್ಸವವನ್ನು ಕುಡುಕರ ರಾಜಕೀಯ, ಸಾಮಾಜಿಕ ಸ್ಥಾನಮಾನಗಳನ್ನು ಪಡೆಯಲು ಉದ್ದೇಶ ಸಾಧನೆಗಾಗಿ ಬಳಸಿಕೊಳ್ಳಲೇಬೇಕು. ಇದರಷ್ಟು ಔಚಿತ್ಯಪೂರ್ಣವಾದ ಕಾರ್ಯಕ್ರಮ ಬೇರೊಂದು ಇರಲಾರದು. ನಾಳೆ ನೀವು ಗಾಂಧೀ ಶತಮಾನೋತ್ಸವ ಕಾರ್ಯಕ್ರಮ ಮಾರ್ಗದರ್ಶನ ಸಮಿತಿಯ ಸಭೆ ಕರೆದು ನನ್ನ ಈ ವಿಚಾರಗಳನ್ನು ಸಮರ್ಥಿಸಿ ನಿರ್ಣಯ ಸ್ವೀಕರಿಸುತ್ತಿದ್ದರೆ ನಾನು ಕಾರ್ಯದರ್ಶಿಯಾಗಿ ದುಡಿಯಲು ಸಿದ್ಧ. ಇಲ್ಲವಾದರೆ ನಾವು ಎ. ಆಯ್. ಸಿ.ಸಿ. ಬದಲು 'All India Drunkards' Committee ಎಂಬ ಪ್ರತ್ಯೇಕ ರಾಜಕೀಯ ಪಕ್ಷವನ್ನು ಕಟ್ಟಿಕೊಂಡು ರಾಜಕೀಯ ಪಕ್ಷವಾಗಿ ಅಧಿಕಾರಕ್ಕಾಗಿ ಚುನಾವಣೆ ಕಣಕ್ಕಿಳಿಯಬೇಕಾಗುವದು."

"ಈಗಾಗಲೇ ಕಾಂಗ್ರೆಸ್ಸಿನಲ್ಲಿ ಕಾನ್ ಶಿಯನ್ಸ್ ಇದ್ದವರು ಕಾನ್ ಶಿಯನ್ಸನ್ನು ಹತ್ತಿಕ್ಕಿ ಶಿಸ್ತಿನ ಗುಲಾಮರು ಹೀಗೆ ಇಬ್ಬಣವಾಗಿರುವಾಗ ನಿಮ್ಮದೊಂದು ಹೊಸ ರಾಜಕೀಯ ಪಕ್ಷ ಕಟ್ಟಿದರೆ ಕಾಂಗ್ರೆಸ್ಸು ನಾಮಶೇಷವಾದೀತು. ನಿನ್ನ ಮಾತು ನನಗೆ ತತ್ತ್ವತಃ ಸಮ್ಮತ. ಸಮಿತಿಯ ಸಭೆ ಬರುವ ರವಿವಾರ ಕರೆದುಬಿಡು!" ಎಂದು ಗುರುಪಾದಪ್ಪ ಹೇಳಿ ಯಥೇಚ್ಛ ಕುಡಿದು ಟಾವೆರ್ನಲ್ಲೇ ವಿಶ್ರಾಂತಿ ಹೊಂದಿದ.



everest/767/RON.KN

ನೆಮ್ಮದಿ

* ಶೇಷನಾರಾಯಣ

ಹೊನ್ನಪ್ಪ ಜಗಲಿಕಟ್ಟೆಯ ಮೇಲೆ ಕುಳಿತಿದ್ದಂತೆಯೇ ನಿಟ್ಟುಸಿರನ್ನು ಬಿಟ್ಟ. ಹಾಯ್ ಎಂದು ಆಕಳಿಸಿದ. ಏನು ಗ್ರಹಚಾರ! ಎಂಥ ಶನಿಕಾಟ ತನಗೆ! ಕೆಲವರು ಮುಟ್ಟಿದ್ದೆಲ್ಲ ಬಂಗಾರವಾಗುತ್ತದಂತೆ. ಪುಣ್ಯವಂತರು. ಆದರೆ ತಾನು ಮುಟ್ಟಿದ್ದು ಮಾತ್ರ ಎಲ್ಲವೂ ಹುಡಿ ಮಣ್ಣಾಗಿ ಹೋಗುತ್ತಿದೆ.

ಹತ್ತು ವರ್ಷಗಳ ಹಿಂದೆ ಹೊನ್ನಪ್ಪನ ಬಾಳು ಬಂಗಾರವಾಗಿಯೇ ಇದ್ದಿತು. ಗ್ರಾಮದಲ್ಲಿ ಎಲ್ಲರಿಗೂ ಇರುವಂತೆ ಆತನಿಗೂ ನಾಲ್ಕು ಎಕರೆ ಭೂಮಿ, ಮನೆ-ಹೀಗೆ ಪಿತ್ರಾರ್ಜಿತವಾದ ಆಸ್ತಿ ಇದ್ದಿತು.

ಹೊನ್ನಪ್ಪನಿಗೆ ಆಗ ಇಪ್ಪತ್ತಾರು- ಇಪ್ಪತ್ತೆಂಟರ ಹರೆಯ ಪ್ರಾಯ. ಕಲ್ಲನ್ನು ಗುದ್ದಿ ಪುಡಿಪುಡಿ ಮಾಡುವಂಥ ಜಟ್ಟಿ ದೇಹ. ಜತೆಗೆ ರೂಪ ಬೇರೆ ಒಳ್ಳೆ ವರ್ಚಸ್ವೀ ಯುವಕ

ಇಂಥ ಹುಡುಗನಿಗೆ ಹೆಣ್ಣನ್ನು ಕೊಡಲು ಯಾರು ಮುಂದೆ ಬರುವುದಿಲ್ಲ? ಮದುವೆ ಆಯಿತು. ಹೊನ್ನಪ್ಪನ ಕೈಹಿಡಿದು ಶಾಂತಮಲ್ಲಿ ಮನೆಯನ್ನು ಬೆಳಗಿದಳು

ಆದರೆ ಅದು ಸಂಪ್ರದಾಯವಾಗಿ ಹೇಳುವ ಮಾತಾಯಿತು ಅಷ್ಟೆ; 'ಮನೆಯನ್ನು ಬೆಳಗಿದಳು' ಎಂದು

ಮನೆಗೆಬಂದ ಹೆಣ್ಣು, ಕೋರಿ, ಶಾಂತಮಲ್ಲಿ. ಮನೆಯನ್ನು ಬೆಳಗಲಿಲ್ಲ. ಬದಲು ಥೋ ಎನ್ನುವಂತೆ ಗವಿಗತ್ತಲು ಮಾಡಿಬಿಟ್ಟಳು.

ಮನೆಯಲ್ಲಿ ಎಲ್ಲ ಅನುಕೂಲವಿದೆ. ತುಂಬು ರೂಪವಂತನಾದ ಪತಿ ಇದ್ದಾನೆ. ಎಮ್ಮೆ, ದನ ಕರು. ಕುರಿಮರಿ ಸರ್ವಸ್ವವೂ ಇದೆ. ಅಚ್ಚುಕಟ್ಟಾದ ಹೊಲಮನೆ ಇದೆ. ಮನೆಯಲ್ಲಿ ಆಕೆಗೆ ಕಿರುಕುಳವೂ ಇಲ್ಲ ಇರುವವರು ಮೂವರೇ: ಹೊನ್ನಪ್ಪನ ತಾಯಿ. ಅವನು ಅವಳು -ಅಷ್ಟೇ.

ಅತ್ತೆ ಸಿದ್ದಮ್ಮ ಶಾಂತ ಸ್ವಭಾವದವಳು. ಒಂದು ದಿನವೂ ಸೊಸೆಯನ್ನು ಅಳೆ ಸಿಡಿಪಡಿ ಎಂದವಳಲ್ಲ. ಗದರಿಸಿ ಹೆದರಿಸಿ ಮಾತಾಡಿದವಳಲ್ಲ.

ಆದರೆ ಎಲ್ಲ ಅನುಕೂಲವಿದ್ದಾ ಕ್ಷಣಕ್ಕೆ ಬಾಳು ಹಸನಾಗಿರುತ್ತದೆ ಎಂದು ಹೇಳಿದವರು ಯಾರು? ಅನುಕೂಲದ ಜತೆಗೆ ದೈವಬಲವೂ ಬೇಕೇ ಬೇಕು ಆಗಷ್ಟೇ ಬಾಳು ಬಂಗಾರವಾಗುತ್ತದೆ.

ಈ ಮಾತು ಶಾಂತಮಲ್ಲಿಗೆ ತೀರಾ ಅನ್ವಯವಾಗುವಂತಿತ್ತು.

ಮದುವೆಗೆ ಮೊದಲೇ ಶಾಂತಮಲ್ಲಿ ಆ ಹಾದಿಯಲ್ಲಿ ನಡೆದಿದ್ದಳು. ಮದುವೆಯಾದ ಮೇಲೆ ಹಿಂದೆ ಆದದ್ದು ಆಯಿತು ಎಂದು, ಹಿಂದೆ ನಡೆದದ್ದನ್ನು ಮರೆತು, ಪಶ್ಚಾತ್ತಾಪ ಪಟ್ಟು ಶುದ್ಧಿ ಮಾಡಿಕೊಂಡವನ ಹಾಗೆ ಹೊಸ ಬಾಳಿಗೆ ಪ್ರವೇಶಿಸಬೇಕಾಗಿತ್ತು. ಬುದ್ಧಿವಂತೆಯಾಗಬೇಕಾಗಿತ್ತು.

ಆದರೆ ಶಾಂತಮಲ್ಲಿ ಬುದ್ಧಿವಂತೆಯಾಗಲಿಲ್ಲ. ಜಾಣೆಯಾಗಲಿಲ್ಲ

ಚೆಲ್ಲು ಎಲ್ಲವನ್ನೂ ಮರೆಯಿಸಿಬಿಟ್ಟಿತು: ರಂಗು ಎಲ್ಲವನ್ನೂ ತೋಯಿಸಿಬಿಟ್ಟಿತು

ಹೆಣ್ಣಿನ ಶೀಲವನ್ನೂ ನಡತೆಯನ್ನೂ ಬಟ್ಟಬಯಲು ಮಾಡಿ ತೋರಿಸುವ ಹಾಗಾದರೆ ಗಂಡನ ಸ್ಥಿತಿ ಚಿಂತಾಜನಕ. ಅಷ್ಟೇ ಭಯಂಕರ. ಆಗ ಜೀವನ ಬರೀ ಮುಳ್ಳು; ಬರೀ ಪಾಪಾಸು

ಒಂದು ದಿನ ಹೊನ್ನಪ್ಪನ ಬಾಳಿನಲ್ಲಿ ಬಿರುಗಾಳಿ ಬೀಸಿತು. ನಾವೆ ತಲೆಕೆಳಗಾಯಿತು. ಬೆಂಕಿ ಕಾಣಿಸಿಕೊಂಡ ಮೇಲೆ ಜ್ವಾಲೆ ಏಳದೆ ಇರುವುದು ಸಾಧ್ಯವುಂಟೆ?

ಗ್ರಹಚಾರ ಕಾಡಿದ ಒಂದು ದಿನ ಶಾಂತಮಲ್ಲಿಗೆ ಮೂಳೆ ಮೂಳೆಗಳೂ ಪುಡಿಪುಡಿಯಾಗುವ ಹಾಗೆ ಹೊಡೆತಬಿದ್ದಿತು. ಗಟ್ಟಿ ಹೆಂಗಸು. ಅವೊತ್ತು ಅವಳು ಬದುಕಿಕೊಂಡದ್ದೇ ಪುಣ್ಯ ಅಂದು ಅವಳು ಸತ್ತೇ ಹೋಗುತ್ತಾಳೆ ಎಂದು ಊರವರು ತೀರ್ಮಾನಿಸಿದ್ದರು. ಅಷ್ಟು ಹೊಡೆತ ಮೈಮುರಿಯ ಬಡಿತ.

ಶಾಂತಮಲ್ಲಿಯನ್ನು ಅವಳ ತಂದೆಯ ಮನೆಯವರು ಆಸ್ಪತ್ರೆಗೆ ಸಾಗಿಸಿದರು. ಅವಳು ಈ ಗಂಡಾಂತರದಿಂದ ಪಾರಾಗಬೇಕಾದರೆ ಮೂರು ತಿಂಗಳುಗಳೇ ಬೇಕಾದುವು.

ಅವಳನ್ನು ಹಾಗೆ ಬಡಿದ ಹೊನ್ನಪ್ಪ ಮಾತ್ರ ಸುಖವನ್ನು ಕಂಡನೇ? ಹುಚ್ಚು. ಹುಚ್ಚು. ಶಾಂತಮಲ್ಲಿಯ ಸೋದರರಿಗೂ ಇವನಿಗೂ ಕೈ ಕೈ ಆಯಿತು. ಅವರು ಇವನ ಮೇಲೆ ಪೋಲೀಸರಿಗೆ ದೂರುಕೊಟ್ಟರು. ಪೋಲೀಸರು ಇವನನ್ನು ಸ್ಟೇಷನ್ನಿಗೆ ಎಳೆದೊಯ್ದರು. ಅಲ್ಲಿ ಹೊನ್ನಪ್ಪನನ್ನು ಕೂಡಿಹಾಕಿ ದುಬು ದುಬು ಬಡಿದರು

ಪೋಲೀಸರಿಂದ ಬಿಡಿಸಿಕೊಂಡು ಬರಬೇಕಾದರೆ ಹೊನ್ನಪ್ಪ ಸಾವಿರಾರು ರೂಪಾಯಿಗಳನ್ನು ವ್ಯಯಮಾಡಬೇಕಾಯಿತು. ಅದೇನು? ಪೋಲೀಸ್ ಸ್ಟೇಶನಿಗೆ ಹೋಗುವುದೂ ಕಟುಕರ ಅಂಗಡಿಗೆ ಹೋಗುವುದೂ ಎರಡೂ ಒಂದೇ. ಸದ್ಯ ಹೊನ್ನಪ್ಪನ ಕೇಸು ರಿಜಿಸ್ಟರುಗಳಲ್ಲಿ ದಾಖಲೆ ಆಗಲಿಲ್ಲ. ಹಾಗಾಗದಿರಲು ಅವನು ಅಲ್ಲಿನ ಕಂಭ ಕಂಭಗಳನ್ನೂ ಶಾಖವಾಡಬೇಕಾಯಿತು.

ಶಾಂತಮಲ್ಲಿ ಆಸ್ಪತ್ರೆಯಿಂದ ಹಿಂದಿರುಗಿದ ಮೇಲೆ "ಥೂ. ನನ್ನಕ್ಕಾ, ಇರಿ ಇರಿ ಮಾಡೊಕ್ಕಾದ ತಿನ್ನಿ" ಎಂದು ಈ ಮನೆಗೆ ಉಗುಳಿ ತನ್ನ ತವರ ಮನೆಗೇ ನಡೆದುಬಿಟ್ಟಳು

ಮಧ್ಯೆ, ಯಾರೋ ಪುಣ್ಯಾತ್ಮರು ಈ ಮನೆಯ ಬಾಳು ಈ ಮನೆಯ ಚಿಗುರು ಹೀಗೆಯೆ ಬಾಡಿ ಹೋಗುವುದು ಬೇಡ ಎಂದು ಇಬ್ಬರಿಗೂ ರಾಜಿ ಮಾಡಲು ಪ್ರಯತ್ನಿಸಿದರು

ಆ ಕಡೆ ಈ ಕಡೆ ಓಡಾಡಿದರು. ಶಾನುಭೋಗರು ಪಟೇಲರ ಮನೆಗೆ ಅವರು ಇವರ ರಾಯಭಾರ.

ಈ ರಾಯಭಾರ ನಡೆಯುತ್ತಿರುವಾಗಲೇ, ಒಂದು ದಿನ, ಶಾಂತಮಲ್ಲಿ ಮಂಗಮಾಯ.

ಹುಸೇನ್ ಸಾಹೇಬರೂ ದೇಖೋ ದೇಖೋ. ಅಲ್ಲಿಗೆ ಈ ಪ್ರಕರಣ ಈ ಹಗರಣ ಎಲ್ಲ ಮುಗಿದು ಹೋಯಿತು.

× × ×

ಬಾಳಿನಲ್ಲಿ ಚಿಗುರು ಚಿಗುರುತ್ತದೆ ಎನ್ನುವಾಗ, ಈ ಸಂಭವದಿಂದ, ಹೊನ್ನಪ್ಪನಿಗೆ ಜೀವನದಲ್ಲಿ ತುಂಬ ನಿರಾಸೆಯಾಗಿ ಹೋಯಿತು. ಸಾಲದುದಕ್ಕೆ, ಶಾಂತಮಲ್ಲಿ ಅವನಿಂದ ಬೇರೆಯಾಗಿ ಹಿಡಿದು ಒಂದು ವರ್ಷದ ಅವಧಿಯಲ್ಲಿಯೇ ಅವನ ತಾಯಿ ಸಿದ್ದಮ್ಮನೂ ತೀರಿಕೊಂಡಳು

ಈ ಎಲ್ಲ ಆಘಾತಗಳಿಂದ ಹೊನ್ನಪ್ಪ ಹುಚ್ಚನಂತಾದ. ಅವನಿಗೆ ಹುಚ್ಚು ತಗಲದೇ ಇದ್ದುದು ಒಂದು ವಿಶೇಷ. ಮೇಲಿಂದ ಮೇಲೆ ವಿಪತ್ತುಗಳು ಒದಗಿಬಂದದ್ದರಿಂದ ಅವನು ತುಂಬ ಸಾಲ ಮಾಡಬೇಕಾಯಿತು. ಸಾಲಗಾರನಾ

ಸಾಲದವರ ಸಂಕೋಲೆ ದಿನದಿನಕ್ಕೆ ಬೀಳುತ್ತ ಬೀಳುತ್ತ ಅವನು ಇದ್ದ ತನ್ನ ಭೂಮಿಯನ್ನೂ ಮಾರಿಬಿಟ್ಟ. ಋಣವನ್ನು ತೀರಿಸಿ ಕೈತೊಳೆದುಕೊಂಡ.

ಆ ಬಳಿಕ ಅವನಿಗೆ ಆ ಊರಲ್ಲಿರುವುದಕ್ಕೇ ಮನಸ್ಸಿಲ್ಲವಾಯಿತು. ಅನುಕೂಲವಾಗಿದ್ದ ತಾನು ಈ ಸ್ಥಿತಿಗೆ ಬಂದಿರುವಾಗ ಊರವರಿಗೆ ಹೇಗೆ ಮುಖವನ್ನು ತೋರಿಸಿ ಅಡ್ಡಾಡುವುದು?

ಮನೆಯಲ್ಲಿ ಇದ್ದುದನ್ನೆಲ್ಲ ಹೊನ್ನಪ್ಪ ಮಾರಿಹಾಕಿದ. ಒಂದಿಷ್ಟು ದುಡ್ಡು ಮಾಡಿಕೊಂಡ. ಮನೆಗೆ ಬೀಗ ಹಾಕಿದವನೇ ಊರನ್ನು ಬಿಟ್ಟ.

ಮುಂದೇನು? ಭಾರೀ ಪ್ರಶ್ನೆ.

ಅಲ್ಲಿಗೆ ಹೋದ. ಇಲ್ಲಿಗೆ ಹೋದ. ತಿರುಪತಿಗೆ ಹೋದ. ಕಂಚಿಗೆ ಹೋದ. ಎಲ್ಲೆಲ್ಲಿಯೊ ಅಡ್ಡಾಡಿ ಮತ್ತೆ ಬೆಂಗಳೂರಿಗೇ ಮರಳಿ ಬಂದ.

ಈಗ ಅವನ ಕೈಯಲ್ಲಿ ಬಿಡಿಗಾಸೂ ಇಲ್ಲವಾಗಿತ್ತು. ಬೆಂಗಳೂರಿನ ಬೀದಿ ಬೀದಿಗಳಲ್ಲಿ ಭಿಕಾರಿಯಂತೆ ಅವನು ಸುತ್ತಾಡಿದ.

ಹಾಗೆ ಅವನು ಹೊಡೆಮರಳುವಾಗ ಒಂದು ಮರದ ಡಿಪೋ ಅವನ ಕಣ್ಣಿಗೆ ಬಿದ್ದಿತು. ಅಲ್ಲಿ ಕೆಲಸ ಕೇಳಿದ, ಸಿಕ್ಕಿತು.

ಸದ್ಯ. ಈ ಕೆಲಸವನ್ನು ಅವನು ಕಲಿತದ್ದು ವ್ಯರ್ಥವಾಗಲಿಲ್ಲ. ಹೊನ್ನಪ್ಪ ಊರಿನಲ್ಲಿದ್ದಾಗ ಮುಲೆಯಾಳಿಗಳ ಕೂಡ ಸೇರಿಕೊಂಡು ಮರ ಕುಯ್ಯುವುದನ್ನು ಕಲಿತಿದ್ದ. ಮರಗೆಲಸದಲ್ಲಿ ಚಾಕಚಕ್ಯತೆಯನ್ನು ಗಳಿಸಿದ್ದ.

ದಿನಗೂಲಿಯಾಗಿ ಈ ಡಿಪೋದಲ್ಲಿ ಹೊನ್ನಪ್ಪ ಹತ್ತಿಪ್ಪತ್ತು ದಿನಗಳು ಮಾತ್ರ ಇದ್ದ. ಅಷ್ಟೇ ದಿನದ ಸಂಬಳ ನಾಲ್ಕೊ ನಾಲ್ಕೂವರೆಯೋ ರೂಪಾಯಿಗಳು.

ಆಗ ಮಂಡ್ಯದ ಒಬ್ಬ ಸಾಹುಕಾರ, ಕಂಟ್ರಾಕ್ಟುದಾರನ ದೃಷ್ಟಿ, ಹೊನ್ನಪ್ಪನ ಮೇಲೆ ಬಿದ್ದಿತು. ಅವನು ಸಹ ಭಾರೀ ಮರದ ಡಿಪೋ ಸಾಹುಕಾರನೇ.

ಸರಿ, ಏನೋ ಹೆಚ್ಚಿಗೆ ಆಸೆ ಹುಟ್ಟಿಸುತ್ತಲೆ ಹೊನ್ನಪ್ಪ ಮಂಡ್ಯಕ್ಕೆ ಕಾಲುಕಿತ್ತ; ಆ ಸಾಹುಕಾರನ ಮನೆಗೆ ಸೇರಿಕೊಂಡ ಊಟ ತಿಂಡಿ ಎಲ್ಲ ಅವನಿಗೆ ಮನೆಯಲ್ಲಿಯೇ. ಕೇಳಿದಾಗ ಖರ್ಚಿಗೆ ದುಡ್ಡು ಸಹ ಸಿಗುತ್ತಿದೆ. ಬೀಡಿಗೆ ಆಯಿತು. ಬೊಂಕಬೆಟ್ಟಿಗೆಗೆ ಆಯಿತು

ಮತ್ತೇನು ಬೇಕು, ಹೊನ್ನಪ್ಪನಿಗೆ?

× × ×

ಹೊನ್ನಪ್ಪನಿಗೆ ಮತ್ತೇನು ಬೇಕಾಗಿದೆ? ಬೇಕಾಗಿರುವುದು ಸಿಕ್ಕಿಯೆ ಬಿಟ್ಟಿತಲ್ಲ.

ಅಲ್ಲ, ಏನು ಮಾಯೆ? ಏನು ಮಾಯೆ? ಮಾಯೆಗೆ ಮರುಳಾಗದವರು ಯಾರಾದರೂ ಇದ್ದಾರೆಯೆ? ಇರುವುದು ಸಾಧ್ಯವುಂಟೆ?

ಶಾಂತವಲ್ಲಿ ತನಗೆ ಮೋಸ ಮಾಡಿ ಹೊರಟು ಹೋದ ಮೇಲೆ ಇಡೀ ಹೆಣ್ಣುಜಾತಿಯನ್ನೇ ಹೊನ್ನಪ್ಪ ಉರಿಗಣ್ಣಿನಿಂದ ನೋಡತೊಡಗಿದ್ದ. ಕಲ್ಲು ಬಂಡೆಗಳನ್ನಾದರೂ ನಂಬಬಹುದು, ಹೆಣ್ಣು ಜಾತಿಯನ್ನು ಮಾತ್ರ ನಂಬುವುದು ಸಾಧ್ಯವಿಲ್ಲ. ಇದು ಅವನ ಸಿದ್ಧಾಂತ.

ಈ ಸಿದ್ಧಾಂತವನ್ನು ಈಗ ತಲೆ ಕೆಳಗು ಮಾಡಿದವಳು, ಬೀರವ್ವ; ರಾಮೇಗೌಡನ ಮಗಳು.

ಬೀರವ್ವನೂ ಅದೇ ಸಾಹುಕಾರರ ಮನೆಯಲ್ಲಿ ಕೆಲಸಕ್ಕಿದ್ದಳು, ತಾಯಿಯಿಲ್ಲ, ತಂದೆಯೊಂದಿಗೆ. ಆಕೆಗೆ ಒಳ್ಳೇ ಪ್ರಾಯ. ರೂಪವತಿಯೇ.

ಹೊನ್ನಪ್ಪನೊಂದಿಗೆ ಬೀರವ್ವ ಅನೇಕ ಕೆಲಸ ಕಾರ್ಯಗಳಲ್ಲಿ ಕೂಡಿ ಮಾಡಬೇಕಾಗಿದ್ದಿತು. ಈ ಸಲಿಗೆ ದಿನ ದಿನಕ್ಕೆ ಬೆಳೆಯಿತು. ಬೆಸುಗೆಗೆ ಕಾರಣವಾಯಿತು.

ಎಂಥೆಂಥ ಋಷಿಗಳೂ ದೇವತೆಗಳೂ ಹೆಣ್ಣಿಗೆ ಮರುಳಾಗಿರುವಾಗ, ಸದಾ ತನ್ನೊಂದಿಗೆ ಕೆಲಸ ಕಾರ್ಯಗಳಲ್ಲಿ ಭಾಗಿಯಾಗಿರುವ ಬೀರವ್ವನೊಂದಿಗೆ ಹೊನ್ನಪ್ಪ ಸ್ನೇಹ ಬೆಳೆಸದಿರಲು ಸಾಧ್ಯವಾದೀತೆ? ಅಷ್ಟಲ್ಲದೆ ಅವಳಿಗೇ ಆಸೆತುಂಬಿ ಹೊನ್ನಪ್ಪನನ್ನು ಒಪ್ಪಿಕೊಂಡ ಮೇಲೆ.

ಆಯಿತು. ಅವರು ಪ್ರಣಯಿಗಳಾಗಿ ಹೋದರು.





ಮುಂದಿನ ಪ್ರಶ್ನೆ? ಅದೇ ತೊಡಕಿನದು.

ಈ ಹಾಳಾದ ಸಮಸ್ಯೆಗಳೆಲ್ಲ, ಪ್ರಣಯದ್ದು, ಪ್ರೇಮಿಗಳಾಗುವುದಕ್ಕೆ ಮೊದಲು ತಲೆದೋರುವುದಿಲ್ಲ. ಎಲ್ಲ ಬಿಕ್ಕಟ್ಟುಗಳು ಉಂಟಾಗುವುದೂ ಆಕಾಶ ಕಳಚಿ ತಲೆಯ ಮೇಲೆ ಬೀಳುವುದೂ ಪ್ರೇಮಿಗಳಾದ ಮೇಲೆಯೇ

ಎಲ್ಲರಿಗೂ ಆಗುವಂತೆ ಹೊನ್ನಪ್ಪನಿಗೂ ಈಗ ಅಗ್ನಿಪರೀಕ್ಷೆ.

ಬೀರವ್ವನನ್ನು ಹೊನ್ನಪ್ಪ ಮದುವೆಯಾಗುವಂತಿಲ್ಲ. ಯಾಕೆಂದರೆ ಅವಳ ತಂದೆ ಅವಳಿಗೊಂದು ಗಂಡನ್ನು ಗೊತ್ತುಮಾಡಿ ಇನ್ನೆರಡು ತಿಂಗಳಲ್ಲಿ ಅವರ ಮದುವೆ ಎಂದು ನಿಷ್ಕರ್ಷಿಸಿಬಿಟ್ಟಿದ್ದಾನೆ. ಹೋಗಲಿ ಎಂದು ಕಾಡಿ ಬೇಡಿ ಅವನನ್ನು ಒಪ್ಪಿಸಲೂ ಸಾಧ್ಯವಿಲ್ಲವಾಗಿದೆ.

ಕಾರಣ ಹೊನ್ನಪ್ಪ-ಬೀರವ್ವ ಬೇರೆ ಬೇರೆ ಜಾತಿಯವರು. ಬೀರವ್ವ ಹೊನ್ನಪ್ಪನಿಗಿಂತ ಕೊಂಚ ಮೇಲು ಜಾತಿ. ತಂದೆ ಒಪ್ಪುತ್ತಾನೆ? ಬಂಧುಗಳು ಸುಮ್ಮನಿರುತ್ತಾರೆಯೆ?

ಯೋಚಿಸಿ ಯೋಚಿಸಿ ಬೀರವ್ವನೂ ಹೊನ್ನಪ್ಪನೂ ಕಂಗಾಲಾದರು. ಏನು ಮಾಡುವುದು? ಹೇಗೆ ಮಾಡುವುದು? ಬಗೆಹರಿಯದ ಸಮಸ್ಯೆ.

ಬೀರವ್ವನ ಬಳಗದವರು ಬಲಿಷ್ಠ ಜನ. ಇವರು ಹೀಗೆ ಎಂದು ಗೊತ್ತಾದರೆ ಹೊನ್ನಪ್ಪನನ್ನು ಅವರು ಬಾಳೆಪಟಿ ಸೀಳುವಂತೆ ಸಿಗಿದ ಹಾಕಿಯಾರು

ಆದರೆ ಎಷ್ಟು ದಿನಗಳು ಇಂಥ ಸಮಾಚಾರ ರಹಸ್ಯವಾಗಿರಲು ಸಾಧ್ಯ? ಅದರಲ್ಲೂ ಈ ಪ್ರಣಯದ್ದು ಸಂಪಿಗೆ ಹೂವಿನ ಹಾಗೆ. ಬೇಗ ನರುಮಣ ವ್ಯಾಪಿಸಿಕೊಂಡು ಬಿಡುತ್ತದೆ. ಸುದ್ದಿ ಎಲ್ಲ ಕೇಂದ್ರಗಳಲ್ಲಿ ಪ್ರಸಾರವಾಗಿ ಬಿಡುತ್ತದೆ.

ಅವರಿಗೆ ಹೊಳೆದುದು ಒಂದೇ ಉಪಾಯ. ಅದೂ ಎಲ್ಲರೂ ಮಾಡುವಂಥದೇ. ತಮ್ಮ ಸುದ್ದಿ ಪ್ರಸಾರ ಆಗುವುದಕ್ಕೆ ಮೊದಲೇ ತಾವು ಈ ಊರನ್ನು ಬಿಡಬೇಕು. ಬಿಟ್ಟು. ಬೇರೆ ಕಡೆಗೆ ಹೋಗಿ ತಾವು ಮದುವೆ ಮಾಡಿಕೊಳ್ಳಬೇಕು. ಮದುವೆ ಎಂಥಾದ್ದು! ಈಗಲೇ ಎಲ್ಲ ಮುಗಿದು ಹೋಗಿದೆಯಲ್ಲ.

ಅನಂತರದ ಪ್ರಶ್ನೆ ಎಲ್ಲಿಗೆ ಹೋಗುವುದು? ಎಂದು.

ದೀರ್ಘವಾಗಿ ಯೋಚಿಸಿದ ಮೇಲೆ ಹೊನ್ನಪ್ಪ ತನ್ನ ಊರಿಗೇ ಹಿಂದಿರುಗುವುದು ಎಂದು ತೀರ್ಮಾನಿಸಿದ. ಅಲ್ಲಾದರೆ ತನಗೆ ಸ್ವಂತ ಮನೆ ಇದೆ. ಹುಟ್ಟಿದ ಸ್ಥಳ ಹೇಗಾದರೂ ನಿಭಾಯಿಸಿಕೊಳ್ಳಬಹುದು.

ಮಂಡ್ಯದಿಂದ ಅವನ ಹಳ್ಳಿಗೆ ಮುನ್ನೂರು ಮೈಲುಗಳಿಗೂ ಮೇಲಾಗುತ್ತದೆ. ಸದ್ಯ ತನ್ನ ಪೂರ್ವಸ್ಥಿತಿಯನ್ನು ಅವನು ಯಾರೊಂದಿಗೂ ಹೇಳಿಲ್ಲ. ತನ್ನ ನೆಲೆ ಯಾರಿಗೂ ತಿಳಿದಿಲ್ಲ. ಈಗಲೇ ಬೀರವ್ವನ ಕಡೆಯವರು ತಮ್ಮನ್ನು ಬೆನ್ನಟ್ಟುವ ಹಾಗಿಲ್ಲ. ನಾಲ್ಕಾರು ವರ್ಷಗಳು ಕಳೆದ ಮೇಲೆ ತಿಳಿದರೆ ತಿಳಿಯಲಿ. ಅಷ್ಟರಲ್ಲಿ ತಮಗೆ ಒಂದೆರಡು ಮಕ್ಕಳೇ ಆಗಿರುತ್ತವೆ. ಮುಂದೇನು ಮಾಡಿಯಾರು?

ಸರಿ, ಒಂದು ರಾತ್ರಿ ಗಂಟು ಮೂಟೆ ಕಟ್ಟಿದವರೇ ಅವರು ಕಳ್ಳಪ್ರಯಾಣ ಹೊರಟುಬಿಟ್ಟರು.

× × ×

ಶಾಂತವ್ಮಲ್ಲಿಯನ್ನು ಆ ಕಡೆ ಕಳಿಸಿ, ಬೀರವ್ವನನ್ನು ಈ ಕಡೆಯಿಂದ ಕರೆದುಕೊಂಡು ಬಂದು, ಹೊನ್ನಪ್ಪ ಮತ್ತೆ ತನ್ನ ಹಳ್ಳಿಗೆ ಬಂದು ಸೇರಿಬಿಟ್ಟ.

ಆತ ಊರಿಗೆ ಬಂದು ಸೇರಿದಾಗ, ಅವನ ಮನೆಯ ಹಂಚು ಗಳುಗಳೆಲ್ಲ ಕಿತ್ತು ಹರಿದು ಹೋಗಿದ್ದುವು ಅಷ್ಟು ದುರಸ್ತಿ, ರಿಪೇರಿ ಮಾಡಿಕೊಂಡವನೇ ಆತ ಹೊಸ ಬಾಳಿಗೆ ಪ್ರವೇಶಿಸಿದ.

ಮುಂದೆ ನಾಲ್ಕಾರು ವರ್ಷಗಳ ಕಾಲ ಹೊನ್ನಪ್ಪ ಸುಖಿ. ಬೀರವ್ವ ಅವನಿಗೆ ತುಂಬ ಸುಖವನ್ನು ಕೊಟ್ಟಳು.

ಹೊನ್ನಪ್ಪನ ಜೀವನ ಈ ಅವಧಿಯಲ್ಲಿ ಸುಖವಾಗಿ ಸಾಗಿತು. ಮನೆಯಲ್ಲಿ ಇಬ್ಬರೇ ಆದುದರಿಂದ ಹೊಲ ಇಲ್ಲದಿದ್ದರೂ ಜೀವನ ಸಮಸ್ಯೆ ಅವನನ್ನು ಕಾಡಲಿಲ್ಲ. ಅವನು ಚೆನ್ನಾಗಿ ದುಡಿಯುತ್ತಿದ್ದ, ದುಡಿಮೆಗಾರನಷ್ಟೆ. ಜತೆಗೆ ಮರಗೆಲಸವನ್ನೂ ಅವನು ಚೆನ್ನಾಗಿ ಕಲಿತಿದ್ದಾನೆ. ಆ ಊರಿನಲ್ಲಿ ಮಾತ್ರವಲ್ಲ, ಸುತ್ತಮುತ್ತಣ ಹಳ್ಳಿಗಳಲ್ಲಿಯೂ ಅವನಷ್ಟು ಚೆನ್ನಾಗಿ ನೇಗಿಲನ್ನು ಕೆತ್ತಿ ಹದಮಾಡುವವರು ಯಾರೂ ಇರಲಿಲ್ಲ.

ಜತೆಗೆ ಬೀರವ್ವನು ಒಳ್ಳೆಯ ದುಡಿಮೆಗಾತಿಯು. ಬಾಲ್ಯದಿಂದಲೂ ಅವಳೂ ದುಡಿದೇ ಬೆಳೆದು ಬಂದವಳಾದುದರಿಂದ ಪತಿಯೊಂದಿಗೆ ಕೆಲಸ ಕಾರ್ಯಗಳಲ್ಲಿ ಆಕೆ ನೆರವಾಗುತ್ತಿದ್ದಳು. ತಾನೂ ಕೂಲಿ-ನಾಲಿ ಮಾಡುತ್ತಿದ್ದಳು.

ಮತ್ತೆ ಅವನ ಸಂಸಾರದಲ್ಲಿ ಹಾಲು ಜೇನು ಹರಿಯುತ್ತಿದ್ದಾಗ ಕೊರಗಿನ ಒಂದು ಸಣ್ಣ ಕಿಡಿ, ಕ್ರಮೇಣ ಅದು ದೊಡ್ಡದಾಗಿ ಬೆಂಕಿ.

ಈ ಕಿಡಿ, ಈ ಬೆಂಕಿ, ತಾವು ಸತಿಪತಿಗಳಾಗಿ ನಾಲ್ಕಾರು ವರ್ಷ ಕಳೆದರೂ ತಮಗೆ ಮಕ್ಕಳಾಗಲಿಲ್ಲ ಎನ್ನುವುದು.

ಹೊನ್ನಪ್ಪ ದೇವರಿಗೆ ಹರಕೆ ಹೊತ್ತ. ಮಗುವಾದರೆ ಬೀರವ್ವನನ್ನು ಕರೆದುಕೊಂಡು ತಿರುಪತಿಗೆ ಬರುತ್ತೇನೆ ಎಂದು ಕಾಣಿಕೆ ಕಟ್ಟಿದ. ಔಷಧವೂ ಆಯಿತು. ಏನು ಮಾಡಿದರೂ ಊಹೂಂ.

ಮತ್ತೆ ಹೊನ್ನಪ್ಪನ ಜೀವನದಲ್ಲಿ ಬಿರುಗಾಳಿ; ಬಿರುಹಬೆ.

ಬೀರವ್ವ ಇದ್ದಕ್ಕಿದ್ದಂತೆ ಒಂದು ಅವಧಿಯಲ್ಲಿ ಕೆಮ್ಮಲು ಪ್ರಾರಂಭಿಸಿದಳು. ಎದೆ ನೋವು ಕಾಣಿಸಿಕೊಂಡಿತು.

ಹೊನ್ನಪ್ಪ ಚಿಕಿತ್ಸೆ ಮಾಡಿಸಿದ. ವ್ಯಾಧಿ ದಿನ ದಿನಕ್ಕೆ ಕ್ಷೀಣಿಸುವ ಬದಲು ವೃದ್ಧಿಯಾಗುತ್ತ ಹೋಯಿತು.

ಅವನು ಅವಳನ್ನು ಕರೆದುಕೊಂಡು ಮೈಸೂರಿಗೂ ಹೋದ. ಅಲ್ಲಿನ ದೊಡ್ಡ ಡಾಕ್ಟರು ಬೀರವ್ವನಿಗೆ ಅಸ್ತಮಾ ಎಂದರು.

ಅಲ್ಲಿಂದ ಮುಂದೆ ಬೀರವ್ವ ಸರಿಹೋಗಲಿಲ್ಲ. ಅವಳಿಗೆ ಮಕ್ಕಳೂ ಆಗಲಿಲ್ಲ. ಆಕೆ ನಿತ್ಯರೋಗಿಯಾದಳು. ದಿನದಿನಕ್ಕೆ ವ್ಯಾಧಿ ಉಲ್ಬಣಿಸಿತು. ಕೆಲವು ಸಲ ನೋವು ವಿಪರೀತವಾಗಿ ಆಕೆ ಚೀರಿಕೊಳ್ಳುತ್ತಿದ್ದಳು; ಸಂಕಟಪಡುತ್ತಿದ್ದಳು.

ಹೊನ್ನಪ್ಪನಿಗೆ ಒಂದೊಂದು ಸಲ ಆಕೆಯನ್ನು ನೋಡಿ ತುಂಬ ಪರಿತಾಪವಾಗುವುದು. ಎಲ್ಲವನ್ನೂ ಎಲ್ಲರನ್ನೂ ತೊರೆದು ಸೀತೆಯಂತೆ ಅವಳು ತನ್ನೊಂದಿಗೆ ಬಂದವಳಲ್ಲವೇ ಎಂದು. ಮಗುದೊಮ್ಮೆ ಬೇಸರ, ಛೆ, ತನ್ನ ಬಾಳು ಉದ್ದಕ್ಕೂ ಹೀಗೆಯೇ ಆಯಿತಲ್ಲ. ಬೆಲ್ಲ ಇಲ್ಲವೇ ಇಲ್ಲ; ಉದ್ದಕ್ಕೂ ಬೇವು.

ಪುಣ್ಯಾತ್ಮರ ಕೈಸೋಕಿದುದೆಲ್ಲ ಚಿನ್ನ. ತಾನು ಮುಟ್ಟಿದ್ದೆಲ್ಲವೂ ಹುಡಿಮಣ್ಣು.

× × ×

ಹೊನ್ನಪ್ಪನನ್ನು ಈಗ ಮೊದಲಿನ ಹೊನ್ನಪ್ಪ ಎಂದು ಗುರುತಿಸುವುದು ಸಾಧ್ಯವಿಲ್ಲವಾಗಿದೆ. ಅವನಿಗೆ ಈಗ ವಯಸ್ಸು ಐವತ್ತಕ್ಕೆ ಸಮೀಪಿಸಿದ್ದರೂ ಆ ವಯಸ್ಸಿಗೆ ತೀರಾ ಹಣ್ಣು ಎಂದು ಹೇಳುವಂತಿಲ್ಲವಾದರೂ ಅವನು ಮಾತ್ರ ನಿಜಕ್ಕೂ ಹಣ್ಣಾಗಿಯೇ ಹೋಗಿದ್ದಾನೆ. ಹತ್ತು ವರ್ಷಗಳ ಹಿಂದೆ ಹೊನ್ನಪ್ಪನನ್ನು ನೋಡಿದ್ದವರು. ಈಗ ನೋಡಿದರೆ, ಇವನು ಆ ಹೊನ್ನಪ್ಪನೇ ಎಂದು ಕೇಳುವಂತಾಗಿದೆ

ಬೀರವ್ವನ ಸ್ಥಿತಿ ಚಿಂತಾಜನಕ. ಅತ್ತ ಸಾಯಲೂ ಆರಳು, ಇತ್ತ ಬದುಕಿಯೂ ಉಳಿದಿರಲಾರಳು.

ಒಮ್ಮೊಮ್ಮೆ ಅವಳು ಸತ್ತೇ ಹೋಗುತ್ತಾಳೇನೊ ಎನ್ನುವ ಸ್ಥಿತಿಗೆ ಬಂದಾಗ ಹೊನ್ನಪ್ಪ ಕಂಗಾಲು; ತಬ್ಬಿಬ್ಬು.

ಇತ್ತೀಚೆಗೆ ಹೊನ್ನಪ್ಪನಿಗೆ ಜೀವನದಲ್ಲಿ ತುಂಬ ನಿರಾಶೆಯಾಗಿ ಹೋಗಿದೆ. ಏನು? ಇತ್ತ ಸಂಪಾದಿಸುವುದೇ? ಅತ್ತ ಹೆಂಡತಿಯನ್ನು ನೋಡಿಕೊಳ್ಳುವುದೇ?

ತಾನು ಸಂಪಾದಿಸುವುದು ಜೀವನಕ್ಕೆ ಸಾಕಾಗುವಂತಿದ್ದರೂ ಖಾಯಿಲೆಗೆ ಸಾಕಾಗುವಂತಿಲ್ಲ. ಎಷ್ಟು ದುಡ್ಡನ್ನು ಮದ್ದಿಗೆ ಸುರಿಯಲು ಸಾಧ್ಯ! ಅದೂ ಗುಣವಾಗದ ರೋಗ.

ಮನಸ್ಸು ಯಾವಾಗ ದುರ್ಬಲಗೊಂಡಿತೋ ಆಗ ಜೀವನದಲ್ಲಿ ಎಲ್ಲಿಲ್ಲದ ನಿರುತ್ಸಾಹ.

ಇತ್ತೀಚೆಗೆ ಹೊನ್ನಪ್ಪನ ಸಂಪಾದನೆಗೂ ಪೆಟ್ಟು ಬೀಳುತ್ತಿದೆ. ಅವನಿಗೆ ಸರಿಯಾಗಿ ಮರಗೆಲಸ ಸಿಗುತ್ತಿಲ್ಲ. ಈ ಫಾರೆಸ್ಟ್ ಇಲಾಖೆಯವರ ಹಿಂಸೆ ಅಗಾಧವಾಗುತ್ತಿದೆ. ಒಂದು ನೇಗಿಲನ್ನು ಕೆತ್ತುತ್ತಿದ್ದರೆ ಸಾಕು, ಫಾರೆಸ್ಟ್ ಗಾರ್ಡ್ ಬಂದು ಹಿಡಿದುಕೊಳ್ಳುತ್ತಾನೆ, 'ಮರ ಎಲ್ಲಿಂದ ತಂದಿದ್ದೀಯ. ಕಾಡಿನಿಂದ ಕಡಿದು, ಕದ್ದು ತಂದಿದ್ದೀಯ' ಎನ್ನುತ್ತಾನೆ. ಲೈಸೆನ್ಸ್ ತೆಗೆದುಕೊಂಡು ವ್ಯವಹಾರ ಮಾಡಬೇಕಾದರೆ ತುಂಬ ಬಂಡವಾಳ ಬೇಕು. ಇಲ್ಲದಿದ್ದರೆ ಈ ಕೋಟಲೆ.

ಇದು ಬಿಟ್ಟರೆ ಮೂರನೆಯ ಮಾರ್ಗ ಲಂಚ. ಇಲಾಖೆಯವರಿಗೆಲ್ಲ ಆಗಾಗ್ಗೆ ಕೈ ಬೆಚ್ಚಗೆ ಮಾಡಲು ಹೊರಟರೆ ತನಗೆ ಏನೇನೂ ಸಿಗುವುದಿಲ್ಲ: ವೃಥಾ ಶ್ರಮ. ಶ್ರಮದ ಬದುಕು.

ಹೋಗಲಿ, ಇಂಥ ಬದುಕಿನೊಂದಿಗೇ ಹೋರಾಟ ನಡೆಸೋಣವೆಂದರೆ ಜೀವನದಲ್ಲಿ ಹೇಳತೀರದಷ್ಟು ಜಿಗುಪ್ಸೆ.

ಮಕ್ಕಳಿಲ್ಲ, ಮರಿಯಿಲ್ಲ, ಬೀರವ್ವ ಎಂದು ಸಾಯುವಳೊ? ಮುಂದೆ ತನ್ನ ಭವಿಷ್ಯವೇನು? ಮುಪ್ಪು ತನ್ನನ್ನು ಆವರಿಸಿಕೊಳ್ಳುವಾಗ ಹಿಡಿ ಉಪ್ಪನ್ನು ತನ್ನ ಮೇಲೆ ಎರಚಲು, ತನಗೆ ಒಂದು ತಿಥಿ ಮಾಡಲು ಸಹ ಯಾರೂ ಇಲ್ಲವಲ್ಲ.

ಮುಂದೆ ತನ್ನ ಗತಿಯೇನು? ಗುರಿ ಏನು?

× × ×

ಮುಂದಿನ ಗತಿ, ಮುಂದಿನ ಗುರಿ, ಯೋಚಿಸುವ ಹಾಗಿಲ್ಲ ನಾಳೆಯ ಪಾಡು ನಾಳೆಗೆ. ಇಂದಿನ ಪಥ ಸಾಗಬೇಕು. ಇವೊತ್ತು ಒಲೆ ಉರಿಯಬೇಕು. ಅದಕ್ಕಾಗಿ ದುಡಿಯಬೇಕು. ಹೌದು, ಇದೇ ಸೃಷ್ಟಿ ನಿಯಮ; ಚಲನೆ.

ಆ ಚಲನೆಯಲ್ಲೇ ಹೊನ್ನಪ್ಪ ಊರಿಂದ ಪಶ್ಚಿಮಕ್ಕಿರುವ ಹೇರಡವಿಯತ್ತ ಹೆಜ್ಜೆ ಹಾಕತೊಡಗಿದ್ದ.

ಇದ್ದಕ್ಕಿದ್ದಂತೆ ಅವನಿಗೆ ಈಗ ಮೂರು ನೇಗಿಲುಗಳಿಗೆ ಬೇಡಿಕೆ ಬಂದಿದೆ. ಎಲ್ಲವನ್ನೂ ಎಂಟು ದಿನಗಳೊಳಗೆ ಮಾಡಿಕೊಡಬೇಕಾಗಿದೆ.

ಫಾರೆಸ್ಟ್ ಗಾರ್ಡ್ ಊರಲ್ಲಿಲ್ಲ, ಕೊಯಮತ್ತೂರಿಗೆ ಹೋಗಿದ್ದಾನೆ ಎಂದು ತಿಳಿದ ಹೊನ್ನಪ್ಪ, ಅವನು ಬರುವುದರೊಳಗಾಗಿ ಈ ಕೆಲಸವನ್ನು ಮುಗಿಸಿಕೊಳ್ಳಬೇಕು ಎಂದು ತೀರ್ಮಾನಿಸಿದ್ದ.

ಗಾರ್ಡ್ ಇಲ್ಲದಿದ್ದರೂ ವಾಚ್ ಮೆನ್ ಸುತ್ತಾಡಿಕೊಂಡೇ ಇದ್ದಾನೆ. ಗಾರ್ಡಿಗಿಂತ ಈತನಿಗೇ ಆಸೆ ಜಾಸ್ತಿ; ದರ್ಪದ ಮುದ್ದೆ.

ಅದಕ್ಕೇ ಹೊನ್ನಪ್ಪ ಈಗ ಸಿದ್ಧತೆ ಮಾಡಿಕೊಂಡಿದ್ದ. ಇಂದು ಕಾಡಿನಲ್ಲಿ ತೀರಾ ಒಳಭಾಗಕ್ಕೆ ಹೊರಟು ಹೋಗಬೇಕು. ಅಲ್ಲಿಯೇ ನೇಗಿಲನ್ನು ಕೆತ್ತಬೇಕು. ಕೆಲಸ ಮುಗಿದ ಮೇಲೆ ಊರ ಸಮೀಪದ ಹಳ್ಳಕ್ಕೆ ತಂದು ಬಚ್ಚಿಡಬೇಕು. ಕತ್ತಲಾದ ಮೇಲೆ ಅವುಗಳನ್ನು ಅವರವರ ಮನೆಗೆ ಸಾಗಿಸಬೇಕು.

ಇದು ಒಂದೇ ದಿನದಲ್ಲಿ ಮುಗಿಯುವ ಕೆಲಸ ಅಲ್ಲ. ನಾಲ್ಕಾರು ದಿನಗಳು ತೆಗೆದುಕೊಳ್ಳುತ್ತದೆ.

ಹೊನ್ನಪ್ಪ ಲಗುಬಗೆಯಿಂದ ಕಾಡಿನ ದಾರಿಯಲ್ಲಿ ಸಾಗುತ್ತಿದ್ದ. ಅವನ ಹೆಗಲಮೇಲೆ ಒಂದು ಕೊಡಲಿ. ನಡುವಿನಲ್ಲಿ ಒಂದು ಒಂದೂವರೆ ಅಡಿ ಉದ್ದದ ಒಂದು ಬಾಕು. ಈ ಬಾಕುವನ್ನು ಅವನು ಯಾವಾಗಲೂ ನಡುವಿಗೆ ಸಿಕ್ಕಿಸಿಕೊಂಡು ತೂಗಬಿಟ್ಟಿರುತ್ತಾನೆ. ಒಂದು ಕೈಚೀಲದಲ್ಲಿ ನಾಲ್ಕಾರು ರೊಟ್ಟಿ-ಚಟ್ನಿ.

ಇವೊತ್ತು ಹೊತ್ತಿಗೆ ಮುಂಚೆಯೇ ಅವನು ಎದ್ದು ಬೀರವ್ವನಿಗೆ ಗಂಜಿ ಮಾಡಿಕೊಟ್ಟು ರೊಟ್ಟಿ ಮಾಡಿ, ನಾಲ್ಕಾರು ತಾನು ತಿಂದದ್ದಲ್ಲದೆ ಕಾಡಿಗೂ ಅಷ್ಟು ತೆಗೆದುಕೊಂಡಿದ್ದಾನೆ. ಪಕ್ಕದ ಮನೆ ಕುನ್ನಮ್ಮನಿಗೆ ಮಧ್ಯಾಹ್ನ ಬೀರವ್ವನಿಗೆ ಸ್ವಲ್ಪ ಗಂಜಿ ಕಾಯಿಸಿಕೊಡಬೇಕು ಎಂದು ಹೇಳಿದ್ದಾನೆ. ತಾನು ಇಂಥ ಊರಿಗೆ ಹೋಗಬೇಕು, ಬರುವುದು ಸಂಜೆಯಾಗುತ್ತದೆ ಎಂದಿದ್ದಾನೆ ಆದರೆ ಬೀರವ್ವನ ಕೂಡ ಮಾತ್ರ ಗುಟ್ಟಾಗಿ ನಿಜ ಸಂಗತಿಯನ್ನು ತಿಳಿಸಿದ್ದಾನೆ.

ಬೀರವ್ವನಿಗೆ ನಿನ್ನೆ ಸಂಜೆ ತೀರಾ ಜಾಸ್ತಿಯಾಗಿ ಹೋಗಿತ್ತು. ಇವೊತ್ತು ಬೆಳಗ್ಗೆ ಆಕೆ ಶಾಂತವಾಗಿ ಮಲಗಿದ್ದಾಳೆ. ಏನು ಸುಡುಗಾಡು ರೋಗವೋ? ಇದ್ದಕ್ಕಿದ್ದಂತೆ ಮರುಕಳಿಸಿದರೆ ಇನ್ನೇನು ಮುಗಿದೇ ಹೋಗುತ್ತದೆ ಎನ್ನುವ ಹಾಗಾಗುತ್ತದೆ. ಆ ಗೊರಗೊರ ಶಬ್ದ ಆ ಚೀರಾಟ ಅಯ್ಯೋ ದೇವರೆ 'ಏನು ಪಾಪ ಮಾಡಿ ಈ ನರ ಮನುಷ್ಯರು ಜನ್ಮವೆತ್ತುತಾರೆಯೋ. ಅದಕ್ಕೆ ಈ ಜನ್ಮದಲ್ಲಿ ಇಂಥ ಶಿಕ್ಷೆ' ಎಂದುಕೊಳ್ಳುತ್ತ ನಿಟ್ಟುಸಿರುಬಿಡುತ್ತ ಆತ ಹೆಜ್ಜೆ ಹಾಕುತ್ತಿದ್ದ.

ಸೂರ್ಯೋದಯಕ್ಕೆ ಮೊದಲೇ ಹೊನ್ನಪ್ಪ ಊರನ್ನು ಬಿಟ್ಟಿದ್ದ. ಈಗ ಹೊತ್ತು ಎರಡು ತೆಂಗಿನ ಮರದೆತ್ತರಕ್ಕೆ ಬಂದಿರುವಾಗ, ಅವನು ದಟ್ಟವಾದ ಅಡವಿಯೊಳಗೆ ಪ್ರವೇಶಿಸಿಬಿಟ್ಟಿದ್ದಾನೆ.

ಕಾಡು ಗಾಢ ಎನ್ನಿಸುತ್ತಿದೆ. ಭಯಂಕರವಾಗಿದೆ. ದೆವ್ವ ಭೂತಗಳೂ ಕಾಲಿಡಲು ಹೆದರುವ ಅಂಥ ಸನ್ನಿವೇಶ; ಜಾಗ. ಈ ಜಾಗಗಳಲ್ಲಿ ಹೊಟ್ಟೆಯ ಪಾಡಿಗಾಗಿ ತಾನು ಇಂಥ ಅಪಾಯಕಾರಿಯಾದ ಕೆಲಸಗಳಲ್ಲಿ ತೊಡಗಬೇಕಾಗಿದೆ. ಯಾವೊತ್ತಿಗೆ ಏನೋ.

ಯಾವೊತ್ತಿಗೇ ಏನೋ ಎನ್ನುವಾಗ ಮಧ್ಯದಲ್ಲಿ ನಡೆದ ಒಂದು ಸಂಭವ ಥಟ್ಟನೆ ಹೊನ್ನಪ್ಪನ ಸ್ಮೃತಿಯಲ್ಲಿ ಮಿಂಚುತ್ತದೆ.

ತಾವು ಅಲ್ಲಿ ಕೆಲಸ ಮಾಡುತ್ತಿದ್ದಾಗ, ಒಂದು ದಿನ, ರಸ್ತೆಯ ಬದಿಯಲ್ಲಿ, ವಿದ್ಯುಚ್ಛಕ್ತಿ ಇಲಾಖೆಯವರು ತಮ್ಮ ಗಾಡಿಯನ್ನು ತಳ್ಳಿಕೊಂಡು ಬಂದರು. ರಸ್ತೆಯ ಬದಿಯ ಕಂಭಕ್ಕೆ ಏಣಿಯನ್ನು ಹಾಕಿದರು.

ಅವರಲ್ಲೊಬ್ಬ ಕಂಭವನ್ನು ಹತ್ತಿದ. ಏನು ರಿಪೇರಿಯಾಗಬೇಕಾಗಿತ್ತೋ ಏನೋ. ಕೆಲವು ನಿಮಿಷಗಳೇ ಕಳೆದಿರಬಹುದು. ಮೇಲೆ ಅವನು ರಿಪೇರಿ ಮಾಡುತ್ತಲೇ ಇದ್ದನೆ. ಆಗ ಏನೋ ಸಿಡಿದ ಹಾಗಾಯಿತು, ಪಟಪಟ ಎಂದ ಹಾಗಾಯಿತು, ಅಯ್ಯೋ ಎಂದ ಹಾಗಾಯಿತು.

ಅಷ್ಟೇ, ಮೇಲಿದ್ದವನು ಹಾಗೆಯೇ ಒರಗಿ ಕೆಳಗೆ ಬೀಳದಂತೆ ತಂತಿಗಳಿಂದ ಒಂದೆರಡು ನಿಮಿಷಗಳು ತಡೆಹಿಡಿದು, ಬಳಿಕ ದೊಪ್ಪೆಂದು ಕೆಳಗೆ ಬಿದ್ದಿದ್ದಾನೆ. ಅವನ ಜೀವ ಆಗಲೇ ತಣ್ಣಗಾಗಿ ಹೋಗಿದೆ.

ಆಗ ತಾವು ಮಾತಾಡಿಕೊಂಡದ್ದುಂಟು. ಇವರ ಕೆಲಸ ಯಾವೊತ್ತಿದ್ದರೂ ಪ್ರಾಣ ಒಪ್ಪಿಸುವ ಕೆಲಸ ಎಂದು.

ಆದರೆ ತನ್ನ ಕೆಲಸವೋ? ಅದಕ್ಕಿಂತ ಹೆಚ್ಚಿನ ಪ್ರಾಣಾಪಾಯದ ಕೆಲಸ. ಊರಲ್ಲಾದರೆ ನಾಲ್ಕು ಜನವಾದರೂ ಇರುತ್ತಾರೆ, ಹೆಣವನ್ನು ಹೊತ್ತು ಸಾಗಿಸಲಿಕ್ಕೆ. ಇಲ್ಲಿ ತಾನು ಆನೆಯ ತುಳಿತಕ್ಕೋ ಹುಲಿಯ ಬಾಯಿಗೋ ಈಡಾದರೆ ಸುದ್ದಿ ಸಹ ಯಾರಿಗೂ ತಿಳಿಯುವ ಹಾಗಿಲ್ಲವಲ್ಲ. ಹೀಗೆಯೇ ಎಷ್ಟು ದಿನಗಳು ಇಂಥ ಗಂಡಾಂತರದ ಕೆಲಸಗಳನ್ನು ಮಾಡುತ್ತ ಜೀವಿಸಬೇಕಾಗಿದೆಯೋ ಏನೋ.

ಹೊನ್ನಪ್ಪ ಈಗ ಕಾಡಿನೊಳಗೆ ಬಹಳ ದೂರ ಬಂದುಬಿಟ್ಟಿದ್ದ. ಐದಾರು ಮೈಲುಗಳೇ ಕಾಡಿನೊಳಗೆ ಪ್ರವೇಶಿಸಿ ಬಿಟ್ಟಿದ್ದಾನೋ ಹೇಗೆ ತಿಳಿಯುವ ಹಾಗಿಲ್ಲ. ಜೀರುಂಡೆ ಹುಳಗಳು ಕಿವಿ ಕೊರೆದು ಹೋಗುವ ಹಾಗೆ ಸುತ್ತಮುತ್ತ ಜೀರೋ ಎಂದು ಶಬ್ದ ಮಾಡುತ್ತಿವೆ. ಜೇನ್ನೊಣಗಳ ಮರ್ಮರ; ಜಿಟ್ಟೆ ದುಂಬಿಗಳ ಝೇಂಕಾರ; ಹಕ್ಕಿ-ಪಕ್ಷಿಗಳ ಹೂಂಕಾರ.

ಈಗ ಆತ ಹಳ್ಳದ ತಗ್ಗಿನಲ್ಲಿ ನಿಂತವನೇ ತನ್ನ ಕೆಲಸವನ್ನು ಪೂರೈಸಿಕೊಳ್ಳಲು ಸ್ಥಳವನ್ನು ಆಯ್ಕೆ ಮಾಡಿಕೊಂಡ. ಎರಡು ಮೂರು ಕೊಂಬೆಗಳೇ ಉಳ್ಳ ಒಂದು ಹೊನ್ನೆಮರಕ್ಕೆ, ಅದರ ಬುಡಕ್ಕೆ, ಈಗ ಆತ ಕೊಡಲಿಯನ್ನು ಹಾಕಿದ.

ಅವನು ಆರಿಸಿದ ಮರ ಗಂಟು ಗೋಟು ಇಲ್ಲದೆ ಹಸನಾಗಿದೆ. ನಳನಳಿಸಿ ಕಂಗೊಳಿಸುತ್ತ,

ನಿಂತಿದೆ. ನೋಡಲನೆಯೇ ಕೆಂಬು ಕವಲೊಡೆದಿರುವ ವರೆಗೆ ನಾಲ್ಕು ಸೀಗಿಲುಗಳಿಗೆ ಆಗುವಷ್ಟು ತುಂಡು ಒದಗುತ್ತದೆ. ಅಷ್ಟು ಚೆನ್ನಾಗಿದೆ ಈ ಮರ. ಇಲ್ಲಿಯೇ ಇದನ್ನು ನಾಲ್ಕು ಭಾಗಗಳನ್ನಾಗಿ ಮಾಡಿ ಹಂಬಿನಿಂದ ಕಟ್ಟಿ ಬಿಗಿದು ಸಾಗಿಸಬೇಕು.

ಹೊನ್ನಪ್ಪ ಆ ಮರವನ್ನು ಪ್ರದಕ್ಷಿಣೆ ಮಾಡುವವನಂತೆ ಸುತ್ತು ಏಟು ಹಾಕಿದ. ಸುತ್ತಲೂ ಮರದ ಚೆಕ್ಕೆಗಳು ಉದುರಿದವು ಈಗ ಆ ಮರದ ಕೆಳಭಾಗ ಬುಗುರಿಯಾಕಾರಕ್ಕೆ ಕಾಣತೊಡಗಿತು. ಏಟು ಬೀಳುತ್ತ ಬೀಳುತ್ತ ಕೊಂಬೆ ಚಾಚಿರುವ ಕಡೆ ಮರ ವಾಲತೊಡಗಿತು. ಮತ್ತೆ ಕೆಲವು, ನಿಮಿಷಗಳಲ್ಲಿ ಧಡಾರ್ ಎಂದು ಒರಗಿತು.



ಉಸ್ ಎಂದು ಹೊನ್ನಪ್ಪ ಹಣೆಯ ಮೇಲೂ ಕೆನ್ನೆಯ ಮೇಲೂ ಚಿಮ್ಮಿದ್ದ ಬೆವರನ್ನು ಒತ್ತಿಕೊಂಡ. ಇನ್ನು ಅಷ್ಟು ರೊಟ್ಟಿ ತಿಂದು ಮರವನ್ನು ಭಾಗಗಳನ್ನಾಗಿ ಮಾಡೋಣ ಎಂದುಕೊಂಡ ಹೊಟ್ಟೆ ಈಗ ಅವನಿಗೆ ಪೂರಾ ತಾಳ ಹಾಕುತ್ತಿತ್ತು.

ಬುತ್ತಿಯ ಗಂಟನ್ನು ಕೈಯಲ್ಲಿ ಹಿಡಿದು ಹೊನ್ನಪ್ಪ ಹಳ್ಳದೊಳಗೆ ಇಳಿದ. ಹಳ್ಳದಲ್ಲಿ ನೀರು ಇರಲಿಲ್ಲ. ಉದ್ದಕ್ಕೂ ಹಾಗೆಯೇ ನಡೆದ. ಆಗ ಒಂದು ಕಡೆ ಹಳ್ಳದಲ್ಲಿಯೆ ಗುಂಡಿ ಆಗಿದ್ದು ನೀರಿನಿಂದ ತುಂಬಿತ್ತು. ನೀರು ಸ್ವಚ್ಛವಾಗಿರಲಿಲ್ಲ. ಮರಗಿಡಗಳ ಕೊಂಬೆಗಳು ಮುಚ್ಚಿ ಹೋಗಿ ನೀರಿಗೆ ಬಿಸಿಲು ಬೀಳದೆ ವಾಸನೆ ಬಂದುಬಿಟ್ಟಿತ್ತು.

ಹೊನ್ನಪ್ಪ ಈಗ ಬುತ್ತಿಯ ಗಂಟನ್ನು ಬಿಚ್ಚಿದ. ನಿಧಾನವಾಗಿ ರೊಟ್ಟಿಯನ್ನು ತಿಂದ ಅವನ ಕಣ್ಣುಗಳು ಹನಿಗೂಡಿದವು. ಪಾಪ, ಬೀರವ್ವ ಮನೆಯಲ್ಲಿ ನರಳುತ್ತ ಮಲಗಿದ್ದಾಳೆ.

ಕುನ್ನವು, ಗಂಜಿಯನ್ನು ಕಾಯಿಸಿಕೊಟ್ಟಿದ್ದಾಳೊ ಇಲ್ಲವೊ? ಮಾಡಿಕೊಟ್ಟಿರಬೇಕು. ಮಾಡದೆ ಇರುತ್ತಾಳೆಯೆ?

ಉಸ್ ಎನ್ನುತ್ತ ಎದ್ದವನೇ ಹೊನ್ನಪ್ಪ ಕೈತೊಳೆದ. ಒಂದು ಬೊಗಸೆ ನೀರು ಕುಡಿದ. ಇನ್ನೂ ಅವನಿಗೆ ನೀರು ಬೇಕಾಗಿತ್ತು. ಇದು ಕುಡಿಯುವುದಕ್ಕೆ ಸಾಧ್ಯವಿಲ್ಲ, ತುಂಬ ವಾಸನೆ, ಬೇರೆ ಕಡೆ ನೋಡೋಣ, ಎಂದುಕೊಂಡವನೆ ಹಿಂದಿರುಗಿದ.

ಯಾಕೋ ಇವೊತ್ತು ಅತನಿಗೆ ತುಂಬ ಸುಸ್ತಾಗಿ ಹೋಗಿದೆ. ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಬೇಕು ಎನ್ನುತ್ತ ಪೊದರಾಗಿ ಬೆಳೆದಿರುವ ಒಂದು ಗುತ್ತಿಯ ಮುಂದೆ ಹಳ್ಳದ ಬದಿಯಲ್ಲಿಯೆ ಕುಳಿತ, ಎಲೆ ಅಡಿಕೆ ಹಾಕಿಕೊಂಡ.

ಬೆನ್ನು ಯಾಕೋ ತುಂಬ ನೋಯುತ್ತ ಇದೆ. ಸ್ವಲ್ಪವಾದರೂ ಮಲಗಿದರೆ ಉತ್ತಮ ಎಂದ

ಹನೇ ಹೊನ್ನಪ್ಪ ಕಾಲುಗಳನ್ನು ಮುಂದೆ ಚಾಚಿದ.

ಅವನು ತಲೆಕೊಟ್ಟ ಜಾಗದಲ್ಲಿ ಒಂದು ದಪ್ಪ ಬೇರು ಗುಹೆಯೊಳಗಿಂದ ಸ್ವಲ್ಪ ಮುಂದೆ ಹಾದು ಒಂದು ವರ್ತುಲಾಕಾರಕ್ಕೆ ತಿರುಗಿ ಮತ್ತೆ ಗುಹೆಯೊಳಗೇ ಹೊರಟು ಹೋಗಿದೆ. ಯಾವ ಮರದ ಬೇರೊ? ಎಲ್ಲಿಂದ ಹಾದು ಬಂದಿದೆಯೊ? ಇಷ್ಟು ದಪ್ಪಕ್ಕೆ ತೂಗಾಡುವ ಹಾಗಿದೆ. ಒಂದು ಬಣ್ಣದ ಬೇರು.

ಹೊನ್ನಪ್ಪ ಆ ಬೇರಿನ ಮೇಲೆ ತಲೆಯಿಟ್ಟ. ಒಳ್ಳೆಯ ತಲೆದಿಂಬು. ಕಣ್ಣುಗಳು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿವೆ. ಆದರೆ ಈ ಕಾಡಿನಲ್ಲಿ ನಿದ್ದೆಯೇ? ತಾನು ಬಂದಿರುವ ಜಾಗ ಎಂಥಾದ್ದು; ಯಾವಾಗಲೂ ಇದು ಆನೆ, ಹುಲಿ, ಕಿರುಬ ಇತ್ಯಾದಿಗಳ ನಡೆಮುಡಿಯ ಜಾಗ. ಒಬ್ಬರೇ ಬರತಕ್ಕ ಸ್ಥಳಗಳಲ್ಲ. ಆದರೆ ತಾನು ಗೇಣುಹೊಟ್ಟೆಯ ಪಾಡಿಗಾಗಿ ಇಂಥ ಕಳ್ಳ ಕೆಲಸ ಮಾಡಲು ಈ ಬಿದಿರ ಕೋಟೆಯಲ್ಲಿ ಅಡ್ಡಾಡಬೇಕಾಗಿದೆ.

ಚೆನ್ನಾಯಿತು. ಈ ನಿದ್ದೆಯು ಮಜಬೂತು ಯಮನ ಗುಹೆಯೊಳಗೆ ಇದರ ಕಣ್ಣು ಮುಚ್ಚಾಲೆಯೆ? ಉಯ್ಯಾಲೆಯಾಟವೆ?

× × ×

ನಿಜ. ನಡೆದಿದೆ. ಯಮನ ಗುಹೆಯೊಳಗೆಯೆ? ಉಯ್ಯಾಲೆಯಾಟ ನಡೆದಿದೆ.

ಹೊನ್ನಪ್ಪ ಕಣ್ಣುಮುಚ್ಚುತ್ತಿದ್ದಾನೆ, ತೆರೆಯುತ್ತಿದ್ದಾನೆ ನಿದ್ದೆಯೊಂದಿಗೆ ಸೆಣಸುತ್ತಿದ್ದಾನೆ

ಇವನನ್ನು ಬಿಡುವುದಿಲ್ಲವೆಂದು, ಬಲವಾಗಿ ಅಪ್ಪಿಕೊಳ್ಳುತ್ತೇನೆಂದು, ನಿದ್ದೆ. ತನ್ನ ಕಾರ್ಯದಲ್ಲಿ ಯಶಸ್ವಿಯಾದಾಗ ಹೊನ್ನಪ್ಪ ಮೆಲ್ಲ ಮೆಲ್ಲಗೆ ಕಣ್ಣು ಮುಚ್ಚಿದ.

ಆದರೆ ಅವನು ಕಣ್ಮುಚ್ಚಿ ನಾಲ್ಕಾರು ನಿಮಿಷಗಳು ಮಾತ್ರ ಕಳೆದಿರಬಹುದು ಅಷ್ಟೆ. ಆಗ ಅವನು ತಲೆಕೊಟ್ಟಿದ್ದ ಬೇರು ಅಲ್ಲಾಡಿದ ಹಾಗಾಯಿತು, ಹಾಗಾಯಿತು ಏನು ಅಲ್ಲಾಡಿತು. ಹೊನ್ನಪ್ಪನಿಗೆ ನಿದ್ದೆ ಎಂದರೆ ನಿದ್ದೆ ಅಲ್ಲ, ಎಚ್ಚರ ಎಂದರೆ ಎಚ್ಚರ ಅಲ್ಲ, ಅಂಥ ಸ್ಥಿತಿ.

ಆಗ ಹಠಾತ್ತನೆ ಆ ಬೇರು ಹಿಂದಕ್ಕೆ ಸರಿದಂತಾಗಿ ಅವನ ತಲೆ ಕೆಳಗೆ ಬಿದ್ದಿತು. ಅವನು ತಿಳಿಯುತ್ತಬೇಕು, ಅಷ್ಟರಲ್ಲಿ ಅವನ ತಲೆಯನ್ನು ಏನೋ ಬಂ ಎಂದು ಹಿಡಿದುಬಿಟ್ಟಿದೆ

ಹೌದು, ಅವನ ತಲೆಯನ್ನು ಹಿಡಿದದ್ದು ಭೂತ ಪ್ರೇತ ಎಂಥಾದ್ದೂ ಅಲ್ಲ. ಅದು ಒಂದು ಹೆಬ್ಬಾವು.

ಎಂಥ ಅಚಾತುರ್ಯ ನಡೆದು ಹೋಗಿದೆ! ಯಾವುದನ್ನು ಬೇರು ಎಂದು ಹೊನ್ನಪ್ಪ ತಲೆಕೊಟ್ಟು ಮಲಗಿದನೋ ಅದು ಹೆಬ್ಬಾವಿನ ದೇಹವಾಗಿದೆ. ತಿಳಿಯದೆ ಹೊನ್ನಪ್ಪ ಮೃತ್ಯುವಿನ ಮೇಲೆಯೆ ತಲೆ ಇಟ್ಟಿದ್ದಾನೆ

ಕರುಣಾಜನಕವಾಗಿಯೂ ಭೀಭತ್ಸವಾಗಿಯೂ ಇತ್ತು ಹೊನ್ನಪ್ಪನ ಸ್ಥಿತಿ ಅತ ಒಂದು ಸಲ ಕೂಗಿಕೊಂಡ. ಎರಡನೆ ಸಲ ಕೂಗಿಕೊಳ್ಳಲು ಸಾಧ್ಯವಾಗಲಿಲ್ಲ. ಯಾಕೆಂದರೆ ಹೆಬ್ಬಾವು ಅವನ ಬಾಯಿಯ ವರೆಗ ಅವನನ್ನು ಸೆಳೆದ ಕೊಂಡು ಬಿಟ್ಟಿತ್ತು.

ಒಂದೆರಡು ಸಲ ಹೊನ್ನಪ್ಪ, ಕಾಲುಗಳನ್ನು ಒದರಾಡಿದ ನೆನಪು. ಅತ್ತಿತ್ತ ಅಲುಗದಂತೆ ಯಾವಾಗ ಹಾವು ಅವನ ತಲೆಯನ್ನು ಹಿಡಿದು ಬಿಟ್ಟಿತೊ ಆಗಲೆ ಅವನಿಗೆ ಅಂಧಕಾರ ಕವಿಯಿತು.

ಮರಣದ ಬಾಯೊಳಗೆ ಹೊನ್ನಪ್ಪ ಇಳಿ ಇಳಿಯುತ್ತಾ ಇದ್ದಾನೆ. ಹೆಬ್ಬಾವು ಅಂಗುಲ ಅಂಗುಲವಾಗಿ ಅವನನ್ನು ತನ್ನ ದೇಹದೊಳಗೆ ಸೆಳೆದುಕೊಳ್ಳುತ್ತ ಇದೆ.

× × ×


ಅರಣ್ಯ ಇಲಾಖೆಯ ವಾಚಮನ್ ಗಂಗಪ್ಪ ಸುದ್ದಿಯನ್ನು ಕೇಳಿ 'ಇಲಿ ಆ ಬಿದ್ದೀ ಹೈದನ್ನ ಇಂದು ಹಿಡಿದೇ ಬಿಡ್ತೇನೆ!' ಎಂದು ಮೀಸೆಯ ಮೇಲೆ ಕೈ ಹಾಕಿದ.

ಹೊನ್ನಪ್ಪ ಕಾಡಿನಿಂದ ಮರಗಳನ್ನು ಕದ್ದು ತರುತ್ತಿರುವುದು ಗಂಗಪ್ಪನಿಗೆ ತಿಳಿದ ವಿಚಾರವೇ. ತಮಗೆ ಮಾಮೂಲಿಯನ್ನೂ ಕೊಡದೆ ಅವನು ಉದ್ಧಟತನ ಮಾಡುತ್ತಿದ್ದಾನೆ. ಈಗ ಗಾರ್ಡ ಇಲ್ಲದಿರುವುದನ್ನು ನೋಡಿಕೊಂಡು ಕಾಡಿನೊಳಗೆ ಪ್ರವೇಶಿಸಿದ್ದಾನೆ.

ಎರಡು ತಿಂಗಳುಗಳಿಂದ ಅವನನ್ನು ಹಿಡಿಯಬೇಕು ಎಂದು ಪ್ರಯತ್ನಿಸುತ್ತಿದ್ದರೂ ಸಾಧ್ಯವಿಲ್ಲವಾಗಿದೆ. ಈ ನನ್ನ ಮಗ ತಪ್ಪಿಸಿಕೊಳ್ಳುತ್ತಿದ್ದಾನೆ. ಅವನನ್ನು ಇವತ್ತು ಹಿಡಿಯದಿದ್ದ ಮೇಲೆ ತಾನು ಇಲಾಖೆಯಲ್ಲಿ ಇಪ್ಪತ್ತು ವರ್ಷ ಸರ್ವೀಸ್ ಮಾಡಿ ಏನು ಕೀರ್ತಿ ಬಂತು!

ಊರಲ್ಲಿ ಪತ್ತಿಮುತ್ತಿರುವ ಒಂದು ಕಾಲೆ ಹೊಲದಲ್ಲಿ, ಗುಡಿಸಿಲಿನಲ್ಲಿ. ಕಾವಲು ಕಾಯುತ್ತ ಕುಳಿತುಕೊಂಡಿರುತ್ತ ಹೊನ್ನಪ್ಪ ನಾಡುತ್ತಿರುವುದನ್ನು ನಸುಕಿನಲ್ಲಿಯೆ ಗಮನಿಸಿದ. ಅವನಿಗೂ ಹೊನ್ನಪ್ಪನಿಗೂ ಆಗುತ್ತಿರಲಿಲ್ಲ. ಇವನೇ ನಮ್ಮಯ ನೆಂದು ಊರಿಗೆ ದಾರಿ ಹಿಡಿದು ವಾಚ್ ಮನ್ ಗಂಗಪ್ಪನಿಗೆ ಅವನು ಸುದ್ದಿಯನ್ನು ತಿಳಿಸಿದ್ದಾನೆ.

ಸ್ವರ್ಗದಲಿ ತಾತ



ಸ್ವರ್ಗದಲಿ ಮೂಗು ಮುಚ್ಚಿಹ ಗಾಂಧಿ ತಾತ।
ಕಡೆಯುದಲಿ ಹಬ್ಬುವ ಈ ಕ್ರಾಂತಿ ನಾತ।
ಧೋಲಿ ತೊಡೆಯುವ ತನ್ನ ಮಕ್ಕಳನೆ ಕಂಡು।
ರಾಮರಾಜ್ಯದ ಕನಸಿನಾ ಹಸಿಯ ಉಂಡು।

— ಎಂ. ಗೋವಿಂದ

ಗಂಗಪ್ಪ ಈಗ ತನ್ನ ಜತೆಗೆ ಇಬ್ಬರು ಬೋವರನ್ನು ಕರೆದುಕೊಂಡ. ಯಾಕೆಂದರೆ ಈಗ ಒಂದು ತಿಂಗಳ ಹಿಂದೆ ಈ ಕಾಡಿನಲ್ಲಿ ಹುಲಿ ಹಾವಳಿ ಜಾಸ್ತಿಯಾಗಿತ್ತು. ಆಗ ಫಾರೆಸ್ಟ್ ದೊಡ್ಡ ಸಾಹೇಬರೆ, ಈ ಕಾಡಿನಲ್ಲಿ ಬಂದು ಸುತ್ತು ಹಾಕಿದ್ದರು. ಗುಂಡು ಹಾರಿಸಲು ಅನುಮತಿ ನೀಡಿದ್ದರು.

ತನ್ನ ಸಂಗಡಿಗರೊಂದಿಗೆ ಗಂಗಪ್ಪ ಈಗ ಅಡವಿಯೊಳಗೆ ಪ್ರವೇಶಿಸಿದ. ಸಾಮಾನ್ಯವಾಗಿ ಕಳ್ಳ ಕೆಲಸ ಮಾಡುವವರು ಊರಿಗೆ ಸಮೀಪವಾಗಿ ಮಾಡುವುದಿಲ್ಲ. ಕಾಡಿನ ಒಳಭಾಗಕ್ಕೇ ಹೋಗುತ್ತಾರೆ. ತುಂಬ ದೂರ ಹೋಗುತ್ತಾರೆ. ಇದು ಗಂಗಪ್ಪನಿಗೆ ತಿಳಿಯದ ಸಂಗತಿ ಏನಲ್ಲವಲ್ಲ.

ಅವರು ಎಷ್ಟೋ ದೂರ ಕಾಡಿನೊಳಗೆ ಅಡ್ಡಾಡಿದ್ದರೂ ಏನೊಂದೂ ಸುಳಿವಿಲ್ಲ. ಅದೆಷ್ಟೋ ಸಮಯ ಅವರು ಹಾಗೆ ಸುತ್ತಾಡಿ ಕಳೆದು ಹೋಗಿದೆ.

ಆಗ ಚಕಾಚಕ್ ಚಕಾ ಚಕ್ ಎನ್ನುವ ಶಬ್ದ ಎಲ್ಲಿಂದಲೋ ಕೇಳಿ ಬಂತು. ಅರಣ್ಯ ಪರಿಚಯವಿರುವವರಿಗೆ ಯಾವ ಯಾವ ಶಬ್ದ ಎಂಥಾದ್ದು ಅದರ ಮೂಲ ಹೇಗೆ ಎಂದು ತಿಳಿದು ಹೋಗುತ್ತದೆ. ಪ್ರಾಣಿಗಳು ಕೂಗುವ ಕೂಗು, ವಾಸನೆ, ಬೇರೇನೊ ಸದ್ದು ಮತ್ತೇನೊ ಸಣ್ಣ ಸುಳಿವು–ಇಂಥವನ್ನೆಲ್ಲ ಇದು ಹೀಗೆ ಹೀಗೆಯೇ ಎಂದು ಅವರು ಭರವಸೆಯಾಗಿ ಹೇಳಬಲ್ಲರು.

ಇದು ಖಚಿತವಾಗಿ ಮರ ಕಡಿಯುತ್ತಿರುವುದರ ಶಬ್ದವೇ. ಆದರೆ ಕಾಡಿನಲ್ಲಿ ಶಬ್ದವನ್ನು ಯಾವ ದಿಕ್ಕಿನಿಂದ ಆಗುತ್ತಿದೆ ಎನ್ನುವುದನ್ನು ಕಂಡು ಹಿಡಿಯಲು ಸ್ವಲ್ಪ ಕಠಿಣ. ಅರಣ್ಯದ ರಹಸ್ಯವನ್ನು ತಿಳಿದವರು ಮಾತ್ರ ಇಂಥವನ್ನೆಲ್ಲ ಪತ್ತೆ ಹಚ್ಚಲು ಸಾಧ್ಯನಿದೆ.

ಗಂಗಪ್ಪನೂ ಅವನ ಸಂಗಡಿಗರೂ ಕಾಡಿನಲ್ಲಿ ಪಶ್ಚಿಮಕ್ಕೆ ಉದ್ದಕ್ಕೆ ನಡೆದರು. ಮಧ್ಯಾಹ್ನದ ವರೆಗೂ ಸುತ್ತಾಡಿದರು. ಏನೂ ಸುಳಿವಿಲ್ಲ. ಈ ಶಬ್ದ ಕೂಡ ನಿಂತು ಹೋಗಿದೆ.

ಇನ್ನು ಹಿಂತಿರುಗಬೇಕು. ಆಗ ಆ ತಗ್ಗಿನಲ್ಲಿ ಇಳಿದರು. ಆ ಬೋರೆ ಹತ್ತಿದರು. ಮತ್ತೆ ಆ ಬೋರೆಯನ್ನು ಇಳಿದು ಹಳ್ಳದ ಉದ್ದಕ್ಕೂ ನಡೆದರು.

ಆಗ ಅಲ್ಲಿ ಅವರು ಕಂಡ ನೋಟ ಅವರನ್ನು ಚಕಿತಗೊಳಿಸುವಂತಿತ್ತು.

ಹೊನ್ನಪ್ಪ ಅಲ್ಲಿ ಮರಳ ಮೇಲೆ ಬಿದ್ದುಕೊಂಡಿದ್ದಾನೆ. ಅವನು ಸತ್ತಿದ್ದಾನೊ ಪ್ರಜ್ಞೆ ತಪ್ಪಿದ್ದಾನೊ ಒಂದೂ ತಿಳಿಯುವಂತಿಲ್ಲ. ಅವನ ನಡುವಿನ ವರೆಗೂ ಏನೋ ಲೋಳೆ ಲೋಳೆಯಾಗಿ ಹರಿದಿದೆ. ಮೈಮೇಲೆ ರಕ್ತದ ಬಿಂದುಗಳೂ ಅಲ್ಲಲ್ಲಿ ಚಿಮ್ಮಿದೆ. ಏನೋ ಅಲ್ಲಿ ನಡೆದಿದೆ. ಆದರೆ ಏನು ಎಂದು ತಿಳಿಯುವ ಹಾಗಿಲ್ಲ.

ಅಲ್ಲಿ ಚರ್ಚೆ ಮಾಡುತ್ತ ಸಂಶೋಧನೆ ಮಾಡುವ ಸ್ಥಳ ಅಲ್ಲ ಅದು. ಕಳೆದ ತಿಂಗಳು ಇಲ್ಲಿಯೇ ಹುಲಿಯ ಮೇಲೆ ಗುಂಡು ಹಾರಿಸಿದ್ದು. ಗುರಿ ತಪ್ಪಿ ಅದು ತಪ್ಪಿಸಿಕೊಂಡು ಓಡಿ ಹೋದದ್ದು.

ಒಡನೆ ಗಂಗಪ್ಪನೂ ಅವನ ಸಂಗಡಿಗರೂ ನಾಲ್ಕು ಸಣ್ಣ ಕೊಂಬೆಗಳನ್ನು ಕಡಿದರು. ಅದಕ್ಕೆ ಅಡ್ಡಲಾಗಿ ನಾಲ್ಕು ನಾಲ್ಕು ಬಿದಿರುಗಳುವನ್ನು ಹಂಬಿನಿಂದ ಹಾಕಿ ಸುತ್ತಿದರು. ಹೊನ್ನಪ್ಪನನ್ನು ಎತ್ತಿ ಅದರ ಮೇಲೆ ಮಲಗಿಸಿಕೊಂಡವರೇ ಊರಿಗಭಿಮುಖವಾಗಿ ಹೆಜ್ಜೆ ಹಾಕಿದರು.

× × ×

ಹೊನ್ನಪ್ಪನ ಸುತ್ತ ಹಿಂಡು ಜನ.

ಒಬ್ಬೊಬ್ಬರದು ಒಂದೊಂದು ಬಗೆಯಾಗಿ ಮಾತು; ಒಂದೊಂದು ಬಗೆಯಾಗಿ ವಿಮರ್ಶೆ.

ಆದರೆ ಅಲ್ಲಿ, ಸ್ಥಳದಲ್ಲಿ. ಕಾಡಿನಲ್ಲಿ, ನಡೆದದ್ದೇನು? ಹೆಬ್ಬಾವು ಹೊನ್ನಪ್ಪನನ್ನು ಯಾಕೆ ಸೆಳೆದುಕೊಳ್ಳಲಿಲ್ಲ? ಈ ರಹಸ್ಯ ಯಾರಿಗೂ ತಿಳಿಯುವಂತಿಲ್ಲ. ಸ್ವತಃ ಹೊನ್ನಪ್ಪನಿಗೇ ಈ ಸಮಸ್ಯೆ ಅರ್ಥವಾಗದು. ಅವನನ್ನು ಏನಾಯಿತು ಎಂದು ಕೇಳಿದರೆ ಒಂದೊಂದು ಗಳಿಗೆ ಒಂದೊಂದು ಬಗೆಯಾಗಿ ಉತ್ತರ ಕೊಡುತ್ತಿದ್ದಾನೆ.

ಈಗ ಹೊನ್ನಪ್ಪ ತೀರಾ ಗಾಬರಿಯಾಗಿದ್ದಾನೆ. ವೈದ್ಯರೇನೊ ತಕ್ಕ ಹಾವು ಮೂಲಿಕೆಗಳನ್ನು ನೀಡಿ ಅವನಿಗೆ ಪ್ರಾಣದಾನ ಮಾಡಿದ್ದಾರೆ ನಿಜ. ಆದರೆ ಅವನು ಈಗ ತೀರಾ ಹೆದರಿ



ಕೊಂಡಿದ್ದಾನೆ ನೋಡುತ್ತಿದ್ದರೆ "ಹೆಬ್ಬಾವು ಹೆಬ್ಬಾವು" ಎಂದು ಚೀರಿಕೊಳ್ಳುತ್ತಿದ್ದಾನೆ.

ಅದು ಸರಿ, ಹೊನ್ನಪ್ಪ ಹೇಗೆ ಈ ಕುತ್ತಿನಿಂದ ಪಾರಾದ! ಇದು ಹೀಗೆ ನಡೆದಿರಬೇಕು!

ಅವನು ನಡುವಿನಲ್ಲಿ ಯಾವಾಗಲೂ ಚಾಕುವನ್ನು ತೂಗಬಿಟ್ಟುಕೊಳ್ಳುವುದು ಸರಿಯಷ್ಟೆ. ಆವೊತ್ತು ಅವನು ಹೆಬ್ಬಾವಿನ ದೇಹವನ್ನು ಬೇರು ಎಂದು ಬಗೆದು ಅದರ ಮೇಲೆ ತಲೆಯಿಟ್ಟಾಗ ಸೆಕೆಯಾಗುತ್ತದೆಂದು ಅಂಗಿಯನ್ನು ಕಳಚಿದ. ಚಾಕುವನ್ನೂ ನಡುವಿನಿಂದ ಬಿಚ್ಚಿದವನೇ ಅಂಗಿಯ ಮೇಲಿಟ್ಟ.

ಆಗ ಹಠಾತ್ತನೆ ಹೆಬ್ಬಾವು ಅವನ ಮೇಲೆ ಎರಗಿದಾಗ, ಅವನ ತಲೆಯನ್ನು ಹಿಡಿದುಕೊಂಡಾಗ, ಪಕ್ಕದಲ್ಲಿದ್ದ ಅಂಗಿಯನ್ನೂ ಸೇರಿಸಿ ಅದು ಸೆಳೆದುಕೊಂಡಿರಬೇಕು. ಯಾಕೆಂದರೆ ಅಂಗಿಯನ್ನು ಅವನು ತಲೆಯ ಬಳಿ ಇಟ್ಟುಕೊಂಡಿದ್ದನಷ್ಟೆ. ಆಗ ಅದರ ಮೇಲಿದ್ದ ಚಾಕುವೂ ಹಾವಿನ ಬಾಯೊಳಗೆ ಹೊರಟು ಹೋಗಿದೆ.

ಈ ಪ್ರಾಣಾಪಾಯದ ಸ್ಥಿತಿಯಲ್ಲಿ ಹೋರಾಟದಲ್ಲಿ ಹೊನ್ನಪ್ಪನ ಒದರಾಟದಲ್ಲಿ ಅಥವಾ ಅಂಗಿಯನ್ನು ಸೇರಿಸಿಯೇ ಹೊನ್ನಪ್ಪನ ತಲೆಯನ್ನು ಸೆಳೆದುಕೊಳ್ಳುವಾಗ, ಚಾಕು ನೆಟ್ಟಗ ನಿಂತಿರಬೇಕು. ಅದು ಹಾವಿನ ಬಾಯನ್ನು ಸೀಳಿರಬೇಕು ಅಥವಾ ಬಲವಾಗಿ ಚುಚ್ಚಿರಬೇಕು.

ಹೆಬ್ಬಾವು ಆಗ ಬೆಚ್ಚಿದೆ. ಥಕ್ಕನೆ ಅವನನ್ನು ಬಿಟ್ಟು ಬಿಟ್ಟಿದೆ. ಮತ್ತೆ ಅದು ಅವನ ಮೇಲೆ ಆಕ್ರಮಣ ಮಾಡಲಿಲ್ಲ.

ಸಾಮಾನ್ಯವಾಗಿ ಪ್ರಾಣಿಗಳೊ ಹಾವು ಹಲ್ಲಿಗಳೊ ಬಲವಾಗಿ ಒಂದು ಸಲ ಆಘಾತವಾದರೆ ಬೆಚ್ಚಿಬೀಳುತ್ತವೆ ಪಲಾಯನ ಸೂತ್ರ ಪಠಿಸುತ್ತವೆ. ಕೆಲವು ಪ್ರಾಣಿಗಳು ಮಾತ್ರ ಈ ವಿಧಿಯಿಂದ ಪ್ರತ್ಯೇಕ.

ಈಗಲೂ ಹಾಗೆಯೆ ಆಗಿರಬೇಕು. ಯಾವಾಗ ಅದರ ಬಾಯಿ ಸೀಳಿಹೋಯಿತೊ ಅದು ತುಂಬ ಹೆದರಿ ಅವನನ್ನು ಬಿಟ್ಟಿದೆ. ಅದರಿಂದಲೇ ರಕ್ತದ ಕಲೆಗಳು ಅವನ ಮೈಮೇಲೆಲ್ಲ ಚಿಮ್ಮಿದೆ.

ಹಾವಿನ ಬಾಯೊಳಗೆ ಹೊನ್ನಪ್ಪನ ತಲೆ ಹೊರಟು ಹೋದ ವೇಳೆ ಉಸಿರು ಕಟ್ಟಿದೆ. ಪ್ರಜ್ಞೆ ತಪ್ಪಿ ಹೋಗಿದೆ. ಮುಂದೇನಾಯಿತು ಏನು ಸಂಗತಿಯೂ ಅವನಿಗೆ ತಿಳಿಯುವ ಹಾಗಿಲ್ಲ. ಮರಣವೇ ಬಾರುಕೋಲು ಬೀಸಿದ ಮೇಲೆ ಏನು ತಿಳಿಯಲು ಸಾಧ್ಯವಿದೆ?

ಹೊನ್ನಪ್ಪನ ಜಾಯಮಾನ. ಹೆಚ್ಚು ಹೊತ್ತು ಅವನ ತಲೆ ಹಾವಿನ ಬಾಯೊಳಗೆ ಇರಲಿಲ್ಲ. ಚಾಕು ಅವನಿಗೆ ರಕ್ಷಣೆ ನೀಡಿದೆ. ಅವನನ್ನು ಬಿಡಿಸಲು ಸಹಾಯಕವಾಗಿದೆ.

ಅದು ಸರಿ ಆ ಹೆಬ್ಬಾವಿಗೆ ಏನಾಯಿತು? ಬಲವಾಗಿ ಅದರ ಬಾಯಿ ಸೀಳಿಹೋಯಿತೆ? ಅದಕ್ಕೆ ಪ್ರಾಣಾಪಾಯವಾಯಿತೆ? ಕತ್ತಿ ಅದರ ದೇಹದೊಳಗೆ ಹೊರಟು ಹೋಯಿತೆ ಹೇಗೆ! ಈ ಸಂಗತಿಯೆಲ್ಲ ಯಾರಿಗೆ ತಿಳಿಯಬೇಕು? ಅಂತೂ ಅವನನ್ನು ಬಿಟ್ಟು ಆ ಜಾಗದಿಂದ ಅದು ಕದಲಿದೆ ಅಷ್ಟೆ.

ಅವನನ್ನು ಬಿಟ್ಟು ಸರಿಯಾಗಿ ಗಂಗಪ್ಪನೂ ಅವನ ಸಂಗಡಿಗರೂ ಅಲ್ಲಿಗೆ ಹೋದದ್ದರಿಂದ ಹೊನ್ನಪ್ಪ ಉಳಿದುಕೊಂಡ. ಅವರು ಅವನನ್ನು ಹೊತ್ತು ಊರಿಗೆ ಸಾಗಿದರು.

ಹೊನ್ನಪ್ಪನಿಗೆ ಈಗ ಅದೇ ಪ್ರಶ್ನೆ. ಬದುಕು ಅವನಿಗೆ ಈಗ ಬೇಡವಾಗಿರುವಾಗ, ಮರಣವೂ ದೂರವಾಗುತ್ತಿದೆಯಲ್ಲ. ಸಾವು ಸಹ ನಮಗೆ ಬೇಕು ಎಂದರೆ ಬೇಕು, ಬೇಡ ಎಂದರೆ ಬೇಡ ಎನ್ನುವ ಹಾಗಿಲ್ಲ. ಅದಕ್ಕೂ ತನ್ನದಾದ ಒಂದು ಕ್ರಮ ಇರಬೇಕು ಎಂದು ಕಾಣುತ್ತದೆ

ಈ ಪ್ರಶ್ನೆಗಳಿಗೆಲ್ಲ ಅವನಿಂದ ಉತ್ತರವಿಲ್ಲ. ಅವನು ಮಾತ್ರವೇನು? ಯಾರಿಗೂ ಇದು ಬಗೆಹರಿಯದ ಸಮಸ್ಯೆ.

ಬಗೆಹರಿಯದ ಸಮಸ್ಯೆಯಲ್ಲಿ ನೂರೆಂಟು ಯೋಚನೆಗಳನ್ನು ತಲೆಯಲ್ಲಿ ಹೊತ್ತು ಮಲಗಿದ್ದಂತೆಯೆ ಹೊನ್ನಪ್ಪ ದೀರ್ಘವಾದ ನಿಟ್ಟುಸಿರನ್ನು ಬಿಡುತ್ತಿದ್ದಾನೆ.



ನೆನಪಿನ ಚಿತ್ರ

ನೆನಪಿದೆಯೆ ನಿನಗೆ?– ನೀನಂದು
ನಿನ್ನ ಹುಟ್ಟಿದ ಹಬ್ಬದಿರುಳಿನಲ್ಲಿ
ಚಿತ್ರ–ಮಂದಿರದಿಂದ ಹಿಂದಿರುಗುವಾಗ,

ನೂರಡಿಯ ಮಾರ್ಗದಲಿ
ಬೀದಿ ದೀಪಗಳಿದ್ದು ಬೆಳ್ದಿಂಗಳೂ ಇದ್ದು
ಈ ಮಿಣುಕುದೀಪಕ್ಕೆ ಬೆಲೆಯಿಲ್ಲವೆಂದು
ಸೈಕಲಿನ ದೀಪವನು ನೀನೆ ಆರಿಸಿ,

ಕೈಯೆತ್ತಿ ಪೆಡಲೊತ್ತಿ ಝುಮ್ಮೆಂದು ಬರುವಾಗ,
ಮನಸ್ಸು ತಡೆಯದೆ, ನಿನ್ನನವರು ತಡೆದದ್ದು;
ಅಂಗುಷ್ಠದಿಂದ ನೆತ್ತಿಯವರೆಗೆ ನೋಡಿದ್ದು!
"ದೀಪ ಗಾಳಿಗೆ ಈಗ ತಾನೆ ಆರಿತು ಎಂದ
ನಿನ್ನ ಸಮಯಸ್ಫೂರ್ತಿಗಭಿನಂದಿಸದೆ, ನಿನ್ನ
ದೀಪವನು ಮುಟ್ಟಿ ನಿನ್ನನು ಹೀಗೆ–ನೋಡಿದ್ದು!

ನಿನ್ನ ಹೆಸರು ವಿಳಾಸ ಪುರಾಣ ಬರೆಕೊಂಡದ್ದು;
"ನಾಳೆ ಅಲ್ಲಿಗೆ ನೀವು ತಪ್ಪದೆಯೆ ಬರಬೇಕೆಂ"ದು
ಸಾಕಷ್ಟು ದೃಢವಾಗಿ ನಯವಾಗಿ ನುಡಿದದ್ದು;
"ನಾಳೆ ಗೆಳತಿಯ ಮದುವೆ; ಹೋಗಬೇಕೆಂ"ದಾಗ ಸುಮ್ಮನಿದ್ದದ್ದು,

ಬೀಳ್ಕೊಡುವ ಸಮಯದಲಿ ನಿನ್ನ ದೀಪವ ಹಚ್ಚಿ
ಕೈಕುಲುಕಿ ನಿನ್ನ ದಾರಿಯ ಬೆಳಕು ಮಾಡಿದ್ದು,
"ಕರ್ತವ್ಯವಷ್ಟೆ; ಹಗೆಯಿಲ್ಲ ಮನದೊಳಗೆಂ"ದು ಬೆನ್ನ ತಟ್ಟಿದ್ದು.

— ಕೆ. ಎಸ್. ನರಸಿಂಹಸ್ವಾಮಿ

ಹಣತೆ




ಅಣು ಕಣಗಳ ವಿಭಜಿಸಿ, ವಿಶ್ಲೇಷಿಸಿ ನೋಡುವ
  ಕನ್ನಡಿ: ಈ ಕ್ಷಣ; ಅನುದಿನವೂ ಅನುಮಾನದ
  ಅವಶೇಷ; ದ್ವೇಷ-ವೇಷ-ಕ್ಲೇಶ ಸಂಕೀರ್ಣದ
ಮದ್ದಿನ ಕುಡಿಕೆಗೆ ಒಳಗೇ ಕೊಳ್ಳಿಯನಿಡುವ-
ಹಾರಿವೆ ಕಿಡಿವೂಗಳು, ಬಿದ್ದಿದೆ ಬರಿ ಬೂದಿ.

  ಎತ್ತುವ, ಬಿತ್ತುವ, ತುತ್ತುವ ಕೈಗಳಿಗೆ ಸಿಗದು
  ಕೀಲಿಯ ಕೈ. ಗಾಳಿಗೆ ಗೋಣಾಡಿಸಿ ನಿಲ್ಲದು
ಒಂದೆಡೆ; ಒಂದೇ ಸಮ ಹುಡುಕುತ್ತಿದೆ ಹೊಸ ಹಾದಿ,
ಚಕ್ರದಿ ಬೆನ್ನಟ್ಟಿದೆ ಅದೆ ಅದೇ ಮತ್ತೊಂದು.

  ಹಗಲಿರುಳು, ಋತುಮಾನವು: ಶತಮಾನದ ಬಿಂದು.
  ಈ ಕ್ಷಣದಲಿ ತೂಗಿದೆ ತತ್ತರಿಸಿದೆ 'ಇಂದು'
ಒಳಗೇ ಕತ್ತರಿಯಾಡಿಸಿ ಎಳೆಯುತ್ತಿದೆ 'ಮುಂದು'
  ಎರಿಳಯಲು ಕಾದಿವೆ ಗಿರಿ-ಕಂದರ: ಅದರಾಚೆ
  ಕ್ಷಿತಿಜದ ಗೆರೆಯೆ? ಬೆಳಕಿನ ತೊರೆಯೆ? ಬರಿ ಮಿಂಚೆ?

— ಚೆನ್ನವೀರ ಕಣವಿ

ನೀನು ವೀಣೆ ನುಡಿಸುವಾಗ!



ನೀನು ವೀಣೆ ನುಡಿಸುವಾಗ ಎದೆಯೊಳೇನೊ ಮಿಡಿವುದು
ಮೇಳದೊಡಲನಪ್ಪಿದಾಗ ನನ್ನ ತೋಳು ಕುದಿವುದು!

  ಬೆರಳ ಚಿಗುರು ಚಲಿಸಲೊಡನೆ ಮಿಂಚು ಪಸರಗೊಳುವುದು
  ಮೀಟು ತಂತಿ ಒಳಗ ಮೀಟಿ ಏನೊ ಕಾಟಕೊಡುವುದು!


ತಾನ ತಾನ ಸ್ತನ್ಯಪಾನ-ಅಯ್ಯೋ-ಎನುವುದೆನ್ನ ಮನ
ಕಂಪಿನಿಂಪಿನುಸಿರ ಸೂಸೆ ಬಯಸಿ ಬಿರಿವುದಾಸನ!

  ಸಪ್ತ ಸ್ವರದ ಸುಪ್ತರಾಗ ಮುಟಿಯೆ ತುಟಿಯು ಕುಣಿವುದು
  ನಾದಮೋದದಲ್ಲಿ ಬೆರೆದು ನನ್ನ ಮೈಯಿ ಮರೆವುದು!

ಓಂಕಾರದ ಝೇಂಕೃತಿಯೊಳು ಅಹಂಕಾರವಳಿವುದು
ನಾನು ಇಲ್ಲ ನೀನು ಇಲ್ಲ ಅದೊಂದೆ ಎಲ್ಲೂ ಅಲೆವುದು!

ನೀನು ವೀಣೆ ನುಡಿಸುವಾಗ...

— ಸಾ. ಶಿ. ಮರುಳಯ್ಯ



'ಕರುಣಾಳು ಬಾ ಬೆಳಕೆ'
... ...
ಬಂದಾಳೆ?
ಎಂದಾನು ಅನುದಿನವು ಕಾಯ್ದಿಹೆನು!
ವಂದಿ-ಮಾಗಧರ ಚಿಲಿಪಿಲಿ ಪರಾಕನು ಕೇಳಿ
ಮುಸುಕನ್ನು ಹರಿಹಾಯ್ದು, ಕಿಟಕಿ ಬಾಗಿಲು ತೆರೆದು
ಕಂಬಿಗಳಿಗೆದೆಯೊತ್ತಿ,
ದಿಟ್ಟಿ ಬೀಹನು ಅಟ್ಟಿ,
ಎಂದಿನಿಂದೀ ವರೆಗೆಕಾಯ್ದಿಹೆನು;
ಬಂದಾಳೆಯೇ,
ಈ ತಮದ ಕೂಪದಲಿ ಬೆಳಕಿನಮೃತವಲ್ಲಿ
ದಾಂಗುಡಿಯನಿಡುವಂತೆ-ಮಾಡಿಯಾಳೇ?

'ಅದೊ ಅಲ್ಲಿ,' 'ಅದೊ ಅಲ್ಲಿ' ಎಂದೆಂಬ
ಹಕ್ಕಿದಳ ಸಂಭ್ರಮಕೆ
ಎದೆ ತುಡಿದು
ರಸವರತ ನಾಲಗೆಯು ಸುಕ್ಕು ತುಟಿ ಸವರಿತ್ತು!
ಎಲ್ಲಿ?
ಇಲ್ಲೇ... ಇ...ಲ್... ಎ...?...!
ಮುತ್ತು ರಾಸಿಯ ಮೇಲೆ ಮೃದುಪದ ವಿಲಾಸದಲಿ
ಮುಂದೆ ಸಾಗಿದಳೇನೊ,
ಮುತ್ತಿನಲಿ ಮಾರ್ಪೊಳೆದ ಅವಳ ಪದದಲತಿಗೆಯ
ಕೆಂಪೊಂದೆ ಕಾಣುತಿದೆ!
ಇರುಳ ಪಹರೆಯ ಮುರಿದು ಹೊರಗೆ ನಾ ಬರಲಾರೆ,
ಅವಳ ಕಾಣುವ ತವಕ ಹಿಡಿದಿರಿಸಲಾರೆ.
ಆದರೂ ಕಾಯ್ದಿಹೆನು,
ಸಂಜೆಯಲಿ ಮನೆಕರಗಿ ಇತ್ತ ಸಾರುವಳೆಂದು,

(೨)

ಹೊನ್ನಿ ಕಣ್ಣನು ಹೊಡೆದು ಪೊದೆಯ ಬಳಿ ಕರೆದಿಹಳು
ತಮದ ಕೂಪದಾ ಮರೆಗೆ,
ಕಿವಿಯಲ್ಲಿ ಉಲಿದಿಹಳು-
"ಕತ್ತಲೆಯನಳೆಯುವಾ ಮಧುರ ಮುತ್ತುಗಳಿಂದ-
ನಾಳೆ ವರೆಗಿನ್ನಿಲ್ಲ ಬೆಳಗ-ಬೆಡಗಿಯ ಛಂದ"
ಛತ್.
ಏನನೋ ಗಳಪಿದಳು,
ನಾಳೆ ವರೆಗೆ?
ನಾ......ಳೆ...
ಅಹ.

ಈ ಎರಡು ಅಕ್ಕರದ ನಡುವೇನು ಗಹನವೊ,
ತಿಳಿಯದಿದೆ;
ತಿಳಿವಿನಮೃತ ಕಲಶ ಹೊತ್ತವಳೆ ದೂರವಿರೆ
ಎಂತಾನು ತಿಳಿದೇನು?

(೩)

ಶರ ಪಂಜರದಿ ಮಲಗಿ ಭೀಷ್ಮ ಬಾಯ್ಬಿಡುತಿಹೆನು
ಅರ್ಜುನನು ಬಂದಾನೆ?
ಗಂಗೆಯನು ತಂದಾನೆ?
ದಾಹದಳ್ಳುರಿ ಹೊತ್ತಿ ಎದೆ ಖಾಂಡವವ ಹೊತ್ತಿ
ಸೀಕರಂಗೊಳ್ಳುತಿದೆ
ಬಾಣ ಬಣಬೆಯ ಗೂಡಿನಲಿ ಪವಡಿಸಿಹ ಮರಿಹಕ್ಕಿ
ಕೃಷ್ಣಸರ್ಪನ ಸೀಳು ನಾಲಗೆಯ ಕೂರಸಿಯ,
ರಕ್ತದಾಹಕೆ ಬೆದರಿ ಪಡಫಡಿಸಿದೆ.
ಹಾರಲೋ,
ಕೊಕ್ಕು ಮಸೆದಿಹ ಗಿಡುಗ ಸುತ್ತುತಿದೆ ತಲೆಮೇಲೆ;
(ಓ, ಇರುವೆ, ಎಲ್ಲಿರುವೆ?)


(೪)

'ಇಳಿದು ಬಾತಾಯಿ ಇಳಿದು ಬಾರಮ್ಮ,'
'ಶಿವನ ಜಡೆಯಿಂದ ಇಳಿದು ಬಾ'
ನೀ ನಡೆದು ಬಾರದಿರೆ
ಜರೆಯಿಂದ ಬಿರಿಯುತಿಹ ಸರಳ-ಕಂಬಿಯ ಕಿತ್ತು
ನಾನೇನೆ ನಿನ್ನೆಡೆಗೆ ಓಡಿಬರುವೆ.

ಒಂದಿನಿತು ನೀ ತಳುವು
ಬಯಕೆ ರೆಕ್ಕೆಯನೇರಿ ನಾಹಾರಿ ಬರುವೆ.
ಆ ಹೊನ್ನಿಯಾ ಹೊನ್ನ ಕೋಲ್ಮಿಂಚ ಸೆಳಕೆನ್ನ
ತಳುಕುಗೊಳ್ಳದ ಮುನ್ನ
ಸರ್ಪನಿಗೊ ಗಿಡುಗಕ್ಕೊ ಕವಳವಾಗದ ಮುನ್ನ,
ಎತ್ತಿಕೋ ನೀನೆನ್ನ!
ನಿನ್ನ ಆ ತಂಗದಿರ ನವಪಲ್ಲವದ ಸ್ಪರ್ಶ
ದಾಹದುರಿಯನು ತಣಿಸಿ,
'ಎಂದಿಗೂ ಮಲತಾಯಿ-ಎಡಗಾಲು ದೂಡದಾ'
ಅಳುಕಿರದ ಮಿಡುಕಿರದ
ನಿನ್ನ ರಾಜ್ಯದ ಶಾಂತಿಯೋಂಕಾರ ತೇಜದಲಿ
ಕರಗಿಪುದು ನನ್ನನ್ನು.
ಪಂಚಭೂತಗಳ ದೆವ್ವ ಹಿಡಿತವ ಬಿಡಿಸಿ!!

ಅದಕಾಗೆ ಕಾಯ್ದಿಹೆನು ನೀ ಬರುವೆಯೆಂದು!
ನೀ ಬರುವೆ ಎಂದು ?

— [illegible] ರೆಡ್ಡಿ



ಕಾದರೆ ಬರುವಳೆ?

ಬಾಗಿ ಕೆನ್ನೆಗೆ ಮುತ್ತನೊತ್ತಲು
ಅಳಿಸಿತ್ತು ಬ್ಯೂಟಿ ಸ್ಪಾಟು
ನನ್ನ ತುಟಿ ಪಡೆದ ಅಧರ ಸಿಹಿಯಂತು
ನಿನ್ನ ಲಿಪ್‌ಸ್ಟಿಕ್ಕಿನಚ್ಚು!

ಮಾರುದ್ದ ನಿನ್ನ ನಾಗರ ಜಡೆಯಲ್ಲಿ
ನನ್ನ ಬೆರಳಾಡಿಸಿರಲು
ಒಂದಿದ್ದ ಹೆರಳು ಬಾಯ್‌ಟು (ತ್ತಿ) ಆಗಿ
ಟಪ್ ಎಂದು ಕೆಳಬೀಳಲು


ಬೆಚ್ಚಿ ಸ್ನೋ ನುಣುಪಿನ ಮುಖದಿ ಮುಖ
ಇಟ್ಟು ನಿನ್ನ ಅಪ್ಪಿರಲು
ನಿನ್ನವಲ್ಲದ ದಂತಪಕ್ತಿಯು ಡಾಳಿಂಬ-
ಸೆಟ್ಟು ಸಡಲಿ ಕಳಚಿರಲು

*ಥಟ್-ಟಾಕ್ ಪೆಣ್ಣು-ರೋಮಾಣ್ಣು-ಎನುತ
ಕೆರಳಿ ಹೊರಟು ಹೋದವಳು
ಪೇಕಪ್ಪಿನಲಿ ಮತ್ತೆ ಬರುವಳು-ಎಂದು
ನಂಬಿ ಕಾದಿರುವೆ ನಾನು

ಗಾಳಿಮಳೆಗೆ ಮೊಳೆಮ್ಯ ತೆರೆದು
ನೆನೆದು ಅಪೋಚು ರೋಡು
ದಾರಿಬದಿ- ಆಘು ಮಾಡಿಟ್ಟ ಪ್ರೀತಿಯ
ಜೀಪು-ನನಗೆ ಜೋಡು!

— ಇಟಗಿ ರಾಘವೇಂದ್ರ

* ಥಿಕ್ ನಾನ್ ಪೆನ್ನು ರೋಮಾನ್ಸು—



ಬೆಳಕಿನ ಹೆಪ್ಪು

ಪಡುವಣ ದಿಕ್ಕೆಲ್ಲ ರಂಗುಗುಲಾಲು
ಕಿರಣ ಕುಂಕುಮದ ಓಕಳಿಯಾಡಿ!
ದಿಶೆದಿಶೆಯಿಂದಲೂ ಒತ್ತಿ ಬರುತಿದೆ
ಮುಗಿಲ ತುಂಬೂ ಮೋಡ ಹರಿದಾಡಿ।
ಈ ನೆಲದ ಮಣ್ಣೋ ಕೇಸರಿ
ಗಂಧ, ಸೋಮಸುಗಂಧ!
ಹದಿನಾರರ ಹೊಸ್ತಿಲಲಿ ನಿಂತ ವಧು
ಮುಸುಗಿನ ಮರೆಯಲಿದ್ದಂತೆ ನಾಚಿ
ಪಡುವಣದ ಕನ್ಯೆಗೆ ಲಜ್ಜೆ
ಕೆಂಪೇರಿದೆ ಗಲ್ಲ!

× × × ×

ಸಂಧ್ಯಾ ಸಮಯದಲಿ
ಪಕ್ಷಿಗಳು ತಮ್ಮ ತಮ್ಮ ಗೂಡಿಗೆ
ಹಾರುತಲಿವೆ ಗುಂಪು ಗುಂಪು!
ಪಡುವಣ ಸೂರ್ಯನ ಕೆಂಪು
ಬಣ್ಣವ ಹೊದ್ದ ಸಾಗರದ ಮೇಲೆ
ಹುಚ್ಚೆದ್ದು ಕುಣಿದಾವು
ಪಕ್ಷಿಗಿಕ್ಷಿ!

× × × ×

ರಾತ್ರಿಯ ಅಪ್ಸರೆಯು
ಹಾಡುತಿಹಳು ಇಲ್ಲಿ
ಕತ್ತಲೆಂಬ ಮಡಕೆಯಲಿ
ಬೆಳಕಿನ ಹೆಪ್ಪುಹಾಕಿ!

— ಪಂಚಾಕ್ಷರಿ ಹಿರೇಮಠ

ಸ್ವಾತಂತ್ರ್ಯೋತ್ತರ ಭಾರತೀಯ ಸಾಹಿತ್ಯಗಳಲ್ಲಿ ನವ್ಯ ಪ್ರವೃತ್ತಿಗಳು



ಸ್ವಾತಂತ್ರ್ಯೋತ್ತರ ಭಾರತೀಯ ಸಾಹಿತ್ಯಗಳಲ್ಲಿ ಹೊಸ ಪ್ರಯೋಗಗಳು ಪ್ರಾರಂಭವಾಗಿವೆ; ಕಾವ್ಯ, ಕಥೆ, ಕಾದಂಬರಿ, ವಿಮರ್ಶೆ, ಚಿಂತನಪರ ಸಾಹಿತ್ಯಗಳಲ್ಲಿ ಹೊಸ ರೀತಿ-ನೀತಿಗಳು ಸೇರಿಕೊಂಡಿವೆ. ಲಲಿತ ಸಾಹಿತ್ಯದಲ್ಲಂತೂ ಈ ಹೊಸ ಪ್ರವೃತ್ತಿಗಳು ತುಂಬಾ ಕಂಡುಬರುತ್ತಿವೆ. ಆದರೆ ಎಲ್ಲ ಪ್ರವೃತ್ತಿಗಳು ಈ ಸಾಹಿತ್ಯಗಳಿಗೆ ಒಳ್ಳೆಯದನ್ನು ಮಾಡಿವೆ ಎಂದೇನೂ ಇಲ್ಲ. ಐದು ಭಾಷೆಗಳಲ್ಲಿ — ಇಂಗ್ಲೀಷ್, ಮರಾಠಿ ಗುಜರಾತಿ, ತೆಲುಗು ಹಾಗೂ ಕನ್ನಡ — ನಡೆದ ಈ ಪ್ರಯೋಗಗಳ ಬಗೆಗೆ ಆಯಾ ಭಾಷೆಗಳ ವಿದ್ವಾಂಸರು ಇಲ್ಲಿ ವಿವೇಚಿಸಿದ್ದಾರೆ. ಈ ವಿವೇಚನೆ ಸಾಹಿತ್ಯ ಅಭ್ಯಾಸಿಗಳಿಗೆ ತುಂಬ ಪ್ರಯೋಜನಕಾರಿಯಾಗುವದೆಂಬಲ್ಲಿ ಸಂದೇಹವಿಲ್ಲ. . . . .

ಸ್ವಾತಂತ್ರ್ಯೋತ್ತರ ಆಂಗ್ಲ-ಭಾರತೀಯ ಸಾಹಿತ್ಯ

— ಶಂಕರ ಮೊಕಾಶಿ ಪುಣೇಕರ

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಆಂಗ್ಲ-ಭಾರತೀಯ ಸಾಹಿತ್ಯಕ್ಕೆ ಭವಿತವ್ಯ ಇದೆಯೆ? ಆಂಗ್ಲ-ಭಾರತೀಯ ಲೇಖಕರು ತಮ್ಮ ಲೇಖನಿಯಲ್ಲಿ ಭಾರತೀಯತ್ವವನ್ನು ಉಳಿಸಿಕೊಂಡಾಗ ಮಾತ್ರ ಇದು ಸಾಧ್ಯ ಎನ್ನುತ್ತಾರೆ ಲೇಖಕರು.

ಆಂಗ್ಲ ಭಾರತೀಯ (ಇಂಡೋ ಆಂಗ್ಲಿಯನ್) ಸಾಹಿತ್ಯವು ಇತ್ತೀಚೆಗೆ ಹಲವು ವಿಶಿಷ್ಟ ದಿಶೆಗಳಲ್ಲಿ ಬೆಳೆಯತೊಡಗಿದೆ. ಸ್ವಾತಂತ್ರ್ಯಪೂರ್ವ ಯುಗದಲ್ಲಿ ಭಾರತೀಯರು ಇಂಗ್ಲೀಷಿನಲ್ಲಿ ಬರೆಯಬೇಕೋ ಬೇಡವೋ ಎಂಬ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ಏಕೆಂದರೆ ಇಂಗ್ಲೀಷಿನಲ್ಲಿ ಆಗ ಬರೆಯುತ್ತಿದ್ದ ಲೇಖಕರು ರಾಷ್ಟ್ರೀಯ ಕಾರ್ಯದಲ್ಲಿ ತೊಡಗಿದ್ದರು. ಅಖಿಲ ಭಾರತೀಯ ಭೂಮಿಕೆಯ ಮೇಲೆ ಮಾತಾಡಲಿಕ್ಕೆ ಆಗ ಒಂದೇ ವೇದಿಕೆ ಇತ್ತು— ಇಂಗ್ಲೀಷ್ ಭಾಷೆ. ಇಂಗ್ಲೀಷರಿಗೆ ಮೆಚ್ಚುವಂತೆ ಬರೆಯಲಿಕ್ಕೆ ಇಂಗ್ಲೀಷೆ ಒಳ್ಳೆಯ ಅಸ್ತ್ರವಾಗಿತ್ತು. ಇಂಗ್ಲೀಷಿನಲ್ಲಿ ಕಲಾಪ್ರಧಾನವಾಗಿ ಬರೆದ ಸಾಹಿತ್ಯವಾದರೂ ಆಗಿನ ವಿಮರ್ಶಾತ್ಮಕ ಪರಿಸ್ಥಿತಿಯ ಮೂಲಕ ಹಿಂಸ್ರ ಟೀಕೆಗೆ ಗುರಿಯಾಗುತ್ತಿರಲಿಲ್ಲ, ಅಭಿಮಾನದ ವಿಷಯವಾಗುತ್ತಿತ್ತು. ಟಾಗೋರರ ಇಂಗ್ಲೀಷ್ ಪುಸ್ತಕಗಳ ಇಂಗ್ಲೀಷು ಚೆನ್ನಾಗಿದೆಯೋ ಇಲ್ಲವೋ, ಅರವಿಂದರ ಶೈಲಿ ಚಂದ ಹೌದೋ ಅಲ್ಲವೋ, ಸರೋಜಿನಿ ನಾಯ್ಡು ಬರೆದ ಕಾವ್ಯದ ದೋಷವಾವುದು, ಇಂಥ ಸಮಸ್ಯೆಗಳು ಸ್ವಾತಂತ್ರ್ಯಪೂರ್ವ ಯುಗದಲ್ಲಿ ಭಾರತದಲ್ಲಿ ಏಳಲಿಲ್ಲ ಏಕೆಂದರೆ ಸಾಹಿತ್ಯವನ್ನು ಸಾಹಿತ್ಯಿಕ ಅಳತೆಗೋಲುಗಳಿಂದಲೇ ನಿರ್ಣಯಿಸುವ ಹವ್ಯಾಸವನ್ನು ಆಗಿನ ಕಾಲದ ಜನರು ಮಾಡಲಿಲ್ಲ ಆಗಿನ ಕಾಲದ ಇಂಗ್ಲೀಷ್ ಪ್ರೊಫೆಸರರು ತಮ್ಮ ಅಭ್ಯಾಸವನ್ನು ವರ್ಡ್ಸ್‌ವರ್ಥ್ ಟೆನಿಸನ್‌ರಿಗಾಗಿಯೂ ತಮ್ಮ ಅಭಿಮಾನವನ್ನು ಟಾಗೋರ ಅರವಿಂದ ಸರೋಜಿನಿಯರಿಗಾಗಿಯೂ ಮೀಸಲಾಗಿ ಇಟ್ಟುಬಿಟ್ಟಿದ್ದರು.

ಸಾಹಿತ್ಯಿಕ ಅಳತೆಗೋಲು

ಸ್ವಾತಂತ್ರ್ಯೋತ್ತರ ಯುಗದಲ್ಲಿ ಈ ಪರಿಸ್ಥಿತಿ ಒಮ್ಮೆಲೆ ಬದಲಾಯಿತೆಂದು ಹೇಳುವದು ಶಕ್ಯವಿಲ್ಲ. ಆದರೆ ಮೊದಲ ಹತ್ತಾರು ವರ್ಷಗಳಲ್ಲಿ ಸಾಹಿತ್ಯವನ್ನು ಸಾಹಿತ್ಯಿಕ ಅಳತೆಗೋಲುಗಳಿಂದ ಅಳೆಯುವ ಹವ್ಯಾಸ ಹೆಚ್ಚಾಗತೊಡಗಿತು. ೧೯೫೧ ರಲ್ಲಿ ಧಾರವಾಡದಲ್ಲಿ ಜರುಗಿದ ಅಖಿಲ ಭಾರತೀಯ ಇಂಗ್ಲೀಷ್ ಸಮ್ಮೇಲನದಲ್ಲಿ ಮಿಸ್ ಏಮಿ ಸ್ಟಾಕ್ ಎಂಬ ಆಂಗ್ಲ ಮಹಿಳಾ ಶಿಕ್ಷಕಿ "ಟಾಗೋರರು ಬರೆದದ್ದು ಕವಿತೆಯೇ ಅಲ್ಲ; ಅವರಿಗೆ ಇಂಗ್ಲೀಷ್ ಸರಿ ಬರುತ್ತಿರಲಿಲ್ಲ," ಎಂದು ಸುಲಭವಾಗಿ ಅಡಿಬಿಟ್ಟ ಮಾತನ್ನು ಇವರ ಇಂಗ್ಲೀಷ್ ಶಿಕ್ಷಕರು ನಿರಾತಂಕವಾಗಿ ಕೇಳಿ ಅದ್ಭುತ ಹೊಸ ತತ್ತ್ವ ಕೇಳುತ್ತಿದ್ದೇನೆಂಬ ಮೋಹದಲ್ಲಿದ್ದಾಗ, ಪ್ರೊಫೆಸರ್ ಗೋಕಾಕರು ಎದ್ದು ನಿಂತು, "ಇಂಗ್ಲೀಷರಿಗೆ ಶೆಲಿ, ಬ್ಲೇಕ್, ಯೇಟ್ಸ್, ಮುಂತಾದ ತಮ್ಮ ಕವಿಗಳನ್ನೇ ತಿಳಿದುಕೊಳ್ಳುವ ಸಾಮರ್ಥ್ಯವಿಲ್ಲ ನಮ್ಮ ಕವಿಗಳನ್ನು ತಿಳಿದುಕೊಂಡು ಅವರ ಮೇಲೆ ಧೀಮಂತ ವಿಮರ್ಶೆ ಮಾಡುವದಂತೂ ದೂರ ಉಳಿಯಿತು!" ಎಂದು ನಿರ್ಭರ್ತ್ಸಿಸಿದ ಅಮೋಘ ಸಂದರ್ಭವನ್ನು ನಾನು ಕಣ್ಣಾರೆ ಕಂಡಿದ್ದೇನೆ. ದುರ್ದೈವದಿಂದ ಈ ಧೈರ್ಯ ನಿಷ್ಠೆಗಳು ಪ್ರೊ. ಗೋಕಾಕರ ವೈಯಕ್ತಿಕ ಗುಣಗಳಾಗಿ ಉಳಿದು, ಒಂದು ವಿಮರ್ಶಾ ಸಂಪ್ರದಾಯವಾಗಿ ಬೆಳೆದುಬರಲಿಲ್ಲವೆಂಬುದು ನಿಜ. ಈ ನಿಷ್ಠೆ-ಧೈರ್ಯಗಳು ಭಾರತದ ಶ್ರೇಷ್ಠತಮ ವಿಮರ್ಶಕರಾದ ಆನಂದಕುಮಾರಸ್ವಾಮಿ, ರಾಧಾಕೃಷ್ಣನ್, ಟಾಗೋರ, ಸಿ. ಪಿ. ರಾಮಸ್ವಾಮಿ ಅಯ್ಯರ್, ಕುನ್ಹನ್ ರಾಜಾ, ಇಂಥವರಲ್ಲಿ ಎಲ್ಲರಲ್ಲಿಯೂ ಕಾಣುತ್ತದೆ. ಈ ಪರಂಪರೆಯ ಸಾಹಿತ್ಯಿಕ ಶಸ್ತ್ರವಾಗಿ ಪ್ರೊ. ಗೋಕಾಕರು ಕೆಲಸ ಮಾಡಬಹುದಾಗಿತ್ತು. ದುರ್ದೈವದಿಂದ ಅವರು ಇಂಗ್ಲೀಷಿನಲ್ಲಿ ವಿಮರ್ಶೆಯನ್ನು ಹೆಚ್ಚಾಗಿ ಬರೆಯಲಿಲ್ಲ ಇದೇ ಧೈರ್ಯ ಮತ್ತು ವಿದ್ವತ್ತೆಗಳುಳ್ಳ ಪ್ರೊಫೆಸರ್ ಮೆನೇಜಿಸ್ ಅವರಾದರೂ ಶಿಕ್ಷಣದಲ್ಲಿ ತೊಡಗಿದರೇ ಹೊರತು ವಿಮರ್ಶೆಯನ್ನು ಬರೆಯಲಿಲ್ಲ.

ತದ್ವಿರುದ್ಧವಾಗಿ ಇಂಗ್ಲೀಷಿನಲ್ಲಿ ಬರೆದ ಭಾರತೀಯ ಸಾಹಿತ್ಯದ ವಿಮರ್ಶೆಯು ಪ್ರೊ. ಭೂಷಣ, ಪ್ರೊ. ಶ್ರೀನಿವಾಸ್ ಅಯ್ಯಂಗಾರ ಇಂಥವರ ಮಧ್ಯಮಾರ್ಗಗಾಮಿಯಾದ ವಿಸ್ತಾರ ದರ್ಶನ(Survey)ಗಳ ಶೈಲಿಯಲ್ಲಿ ವ್ಯಕ್ತಗೊಳ್ಳಬೇಕಾಯಿತು. ಇಂಡೊ-ಆಂಗ್ಲಿಯನ್ ಎಂಬ ಶಬ್ದವಾದರೂ ಶ್ರೀನಿವಾಸ್ ಅಯ್ಯಂಗಾರರು ಹುಟ್ಟಿಸಿದ್ದೇ. ಈ ಶಬ್ದದ ಬಗ್ಗೆ ಸಾಕಷ್ಟು ಚರ್ಚೆಯಾಗಿದ್ದು ಅದರ ಬಗ್ಗೆ ಇಲ್ಲಿ ನಾನು ಬರೆಯಲು ಇಚ್ಛಿಸುವದಿಲ್ಲ. ಅದೇನೇ ಇದ್ದರೂ ಕರ್ನಾಟಕವು ಮೊದಲಿನಿಂದ ಈ ಎಲ್ಲರ ಸಂಪರ್ಕದಲ್ಲಿ ಬಂದಿಲ್ಲ ಒಂದು ರೀತಿಯಿಂದ ಇದ್ದುದರ ಬಗ್ಗೆ ಅಭಿಮಾನ ಪಡಬಹುದು.

ಸ್ವಾತಂತ್ರ್ಯೋತ್ತರ ಹತ್ತು ವರ್ಷಗಳಲ್ಲಿ ಇಂಥ ವಿಸ್ತಾರ ಸಾಹಿತ್ಯ ವಿಮರ್ಶೆಯಲ್ಲೂ ಶಿಕ್ಷಣಕ್ಷೇತ್ರದಲ್ಲಿ ಇಂಗ್ಲೀಷಿನ ಮಹತ್ವ ಕಡಿಮೆ ಮಾಡಬಾರದೆಂಬ ಹೋರಾಟದಲ್ಲಿಯೂ ಭಾರತದ ಇಂಗ್ಲೀಷ್ ಬುದ್ಧಿವಂತರು ಸಾಕಷ್ಟು ದಣಿದರು. ಮಧ್ಯಮಾರ್ಗದ ವಿಮರ್ಶೆ ಪಳಗಿದರೂ ಅದರ ಬೆಳೆ ಅದರ ಮಟ್ಟಿಗೆ ಮಾತ್ರವೇ ಹೊರತು ಅದರಿಂದ ಸೃಜನಶೀಲತೆಗೆ ಬೆಂಬಲ ಸಿಕ್ಕುವದು ಅಸಂಭವ. ಇಂತು ಹುಟ್ಟಿದ ನಿರ್ವಾತ ಪ್ರದೇಶವನ್ನು ಇನ್ನೊಂದು ಬಗೆಯ ನವ್ಯ ವಿಮರ್ಶೆ ತುಂಬಿಕೊಂಡಿತು.

ನವ್ಯ ವಿಮರ್ಶೆ

ನವ್ಯವಿಮರ್ಶೆ ಇಂಥಲ್ಲಿಂದಲೇ ಹುಟ್ಟಿತೆಂದು ಹೇಳಲು ಕಠಿಣ. ಮೈಸೂರಿನ ಪ್ರೊ. ಸಿ. ಡಿ. ನರಸಿಂಹಯ್ಯನವರ 'The Literary Crite-

ಗೆಂಡ್‌ಷಿಪ್ ಎಂಬ ವಿಮರ್ಶಾತ್ಮಕ ಪತ್ರಿಕೆಯು ಭಾರತೀಯರಿಂದ ಬರೆಯಲ್ಪಟ್ಟ ಸಾಹಿತ್ಯಿಕ ವಿಮರ್ಶೆಯನ್ನು ಪ್ರಕಟಿಸತೊಡಗಿತು. ಪ್ರತ್ಯಕ್ಷ ನರಸಿಂಹಯ್ಯನವರು ಇಲಿಯಟ್ - ಭಕ್ತರೂ ರಿಚರ್ಡ್ಸ್-ಲೀವಿಸ್ ಸಂಪ್ರದಾಯವಾದಿಗಳೂ ಎಂದು ಹೆಸರಾದವರು. ಈ ಕೃತಿನಿಷ್ಠ ಸಂಪ್ರದಾಯದ ಸಾಹಿತ್ಯಿಕ ನಿಕೃಷ್ಟಕ್ಕೆ ಭಾರತೀಯ ಕವಿಗಳು ಯಾರೂ ಹತ್ತದ್ದರಿಂದ ಭಾರತೀಯ ಕವಿಗಳ ಬಗ್ಗೆ ಆಗೊಮ್ಮೆ ಈಗೊಮ್ಮೆ ತಿರಸ್ಕಾರದ ಮಾತನ್ನು ಆಡಿ, ಮುಖ್ಯವಾಗಿ ಪಾಶ್ಚಾತ್ಯ ಕವಿ-ಲೇಖಕರ ಮೇಲೆ ಉತ್ತಮ ಲೇಖನಗಳನ್ನು ಬರೆಯುವದು ಈ ಗರಡಿಯಲ್ಲಿ ಬೆಳೆದ ಲೇಖಕರ ಚಟವಾಯಿತು. ಆದರೆ ಸುದೈವದಿಂದ ೧೯೬೦ ರ ನಂತರದ ಕಾಲದಲ್ಲಿ ಪ್ರೊ. ನರಸಿಂಹಯ್ಯನವರು ಸ್ವತಃ ಭಾರತೀಯ ಲೇಖಕರನ್ನು ಅಭ್ಯಾಸ ಮಾಡಿ ಬೆನ್ನುಗಟ್ಟುವ ಹೊಸ ಹವ್ಯಾಸವನ್ನು ಬೆಳೆಸಿಕೊಂಡ ಮೂಲಕ ಈ ಪತ್ರಿಕೆಯಿಂದ ಒಳ್ಳೆಯ ಕೆಲಸ ಆಗುತ್ತಿದೆಯೆಂಬುದು ಸಂತಸದ ಮಾತು. ಆದರೆ ಮೊದಲನೆಯ ಹಲವು ವರ್ಷಗಳಲ್ಲಿ ಈ ಪತ್ರಿಕೆ ತೀಕ್ಷ್ಣ ನವ್ಯವಿಮರ್ಶಕರನ್ನು ಪಳಗಿಸುವ ಕೆಲಸದಲ್ಲಿಯೇ ತೊಡಗಿತ್ತೆಂಬುದು ನೋಡತಕ್ಕ ಮಾತಾಗಿದೆ. ಇದರಲ್ಲಿ ಬೆಳೆದ ಹಲವರಂತೂ ಭಾರತೀಯರು ಇಂಗ್ಲೀಷಿನಲ್ಲಿ ಸೃಜನಶೀಲತೆಗೆ ಅಸಮರ್ಥರು, ವಿಮರ್ಶೆಗೆ ಮಾತ್ರ ಸಮರ್ಥರು, ಎಂದು ನಂಬಿದ್ದರು. ಬೇರೆ ಕಾರಣಕ್ಕಾಗಿ ಕಲಕತ್ತೆಯಲ್ಲೂ ಇದೇ ಆಯಿತು. ಅಲ್ಲಿ ಟಾಗೋರರ ಅತಿಮಾನವ ಕೀರ್ತಿಯನ್ನು ಕುಗ್ಗಿಸಿ ಮಾನವೀಕರಣಗೊಳಿಸುವ ಹವ್ಯಾಸದಲ್ಲಿ ಹೊಸ ಪೀಳಿಗೆಗೂ ಹಳಬರಿಗೂ ಹತ್ತಿದ ಲಗ್ಗೆಬಗ್ಗೆ ಜಗಳಾಟದಲ್ಲಿ ಟಾಗೋರರಷ್ಟೇ ಏಕೆ, ಇತರ ಕವಿ-ಲೇಖಕರ ವೈಶಾಲ್ಯಕ್ಕೂ ಧಕ್ಕೆ ತಾಗಿತು. ಸೃಜನಶೀಲತೆಯ ದೃಷ್ಟಿಯಿಂದ ಮುಂಬಯಿ ಎಂದಿಗಾದರೂ ಕುಸು ನಿಷ್ಫಲವಾದಾಗ್ಯೂ, ಅಲ್ಲಿಯ 'ಇಲಸ್ಟ್ರೇಟೆಡ್ ವೀಕ್ಲಿ'ಯಂಥ ಜನಪ್ರಿಯ ಪತ್ರಿಕೆಯು ನವಂಾಸ್ತಿಕತೆಗೆ ತನ್ನನ್ನು ಒಗ್ಗಿಸಿಕೊಳ್ಳುವದಕ್ಕಾಗಿ ಭಾರತೀಯ ಕವಿಗಳನ್ನು ಹೆಕ್ಕಿ ಹೆಕ್ಕಿ ತೆಗೆದು ಅವರ ಇಂಗ್ಲೀಷ್ ಕವನಗಳನ್ನು ಪ್ರಕಟಗೊಳಿಸಿತು. ಅದರ ಐರಿಶ್ ಸಂಪಾದಕ ಸಿ. ಆರ್. ಮ್ಯಾಂಡಿ ಮಾಡಿದ ಕೆಲಸಕ್ಕೆ ಹಲವಾರು ಹೊಸ ಕವಿಗಳು ಅವರಿಗೆ ಉಪಕೃತರಾಗುವಂತಾಯಿತು. ಇಂಥವರಲ್ಲಿ ಡಾಮ್ ಮಾರಾಯಸ್, ನಿಸ್ಸಿಮ್ ಇಝೆಕಿಯಲ್, ಪಿ. ಲಾಲ್, ರಾಮಾನುಜನ್, ರಾಘವೇಂದ್ರರಾವ್, ಇವರು ಪ್ರಮುಖರು. ಇವರಲ್ಲದೆ ಆಗೊಮ್ಮೆ ಈಗೊಮ್ಮೆ ತ್ರಿಪಾದಿ, ಲೀಲಾ ಧರ್ಮರಾಜ, ಇಂಥವರನ್ನು ಪರಿಗಣಿಸಬಹುದು. ೧೯೫೪ ರಲ್ಲಿ ಸ್ಟೀಫನ್ ಸ್ಪೆಂಡರರು ಭಾರತಕ್ಕೆ ತಮ್ಮ 'ಎನ್‌ಕೌಂಟರ್' ಪತ್ರಿಕೆಯ ಪ್ರಚಾರಕ್ಕಾಗಿ ಬಂದಾಗ ಅವರೊಡನೆ ಅನೇಕ ಭಾರತೀಯ ಕವಿಗಳ ಪರಿಚಯವಾದದ್ದು ಇನ್ನೊಂದು ವಿಶೇಷ ಸಂಗತಿ. ಅಂತೂ ೧೯೬೦ ರ ಸುಮಾರಿಗೆ ಹೊಸ ಬಗೆಯ ಭಾರತೀಯ ಕಾವ್ಯವೊಂದು ಹುಟ್ಟಿಕೊಂಡಿದೆ ಎನ್ನುವಷ್ಟರ ಮಟ್ಟಿಗೆ ಅಲ್ಲಲ್ಲಿ ಕವಿಗಳು ಕಂಗೊಳಿಸತೊಡಗಿದರು. ೧೯೫೮ ರಲ್ಲಿ ಪಿ. ಲಾಲ್ ಮತ್ತು ರಾಘವೇಂದ್ರರಾವ್ ಕೂಡಿ ಸಂಪಾದಿಸಿದ 'Modern Indo-Anglian Poetry' ಎಂಬ ಸಂಗ್ರಹವಂತೂ ಈ ನೂತನ ಕಾವ್ಯದ ದಿಕ್ಕು ದೆಸೆಗಳ ಬಗ್ಗೆ ಪ್ರಭುತ್ವದಿಂದ ಇದಮಿತ್ಥಂ ಎಂದು ಹೇಳುವ ಧೈರ್ಯವನ್ನು ತಂದುಕೊಂಡು, ಟಾಗೋರ-ಅರವಿಂದರಿಂದ ಇದು ಭಿನ್ನವೆಂಬುದನ್ನೇ ಮುಖ್ಯ ಲಕ್ಷಣವನ್ನಾಗಿ ಮಾಡಿಕೊಂಡು ನಿಂತಿತು. ಆ ನಂತರ ಬಂದ ಕಾವ್ಯದ ದಿಕ್ಕು-ದೆಸೆಗಳು ಬದಲಾದದ್ದು ಸ್ವಾಭಾವಿಕ.

ಅರವಿಂದರಂತೆ ಬರೆಯಬಾರದು ಟಾಗೋರರಂತೆ ಬರೆಯಬಾರದು, ಇಂಥ ನೇತಿ-ನೇತಿ ಪ್ರಮಾಣದ ಮೇಲೆ ಕಾವ್ಯ ಬದುಕಬಲ್ಲದೆ, ಎಂಬ ಸಮಸ್ಯೆ ಎತ್ತಬಾರದು. ಅರವಿಂದರಂತೆ ಬರೆಯಬಲ್ಲವರು ನಾನು ಹಾಗೆ ಬರೆಯಲೊಲ್ಲೆ ಎಂದು ಹೇಳಿದರೆ ಬೆಲೆ ಉಂಟು. ಅಂಥ ಘನ ಮನಸ್ಸನ್ನೇ ಕಳಕೊಂಡ ಸ್ವಾತಂತ್ರ್ಯೋತ್ತರ ಪುಡಿಯಾಳುಗಳು ತಮ್ಮ ಚಿಕ್ಕ ಚಿತ್ತವೃತ್ತಿಗಳ ಅಭಿವ್ಯಕ್ತಿಗಾಗಿ ಇನ್ನೊಂದು ಶೈಲಿ ಹುಡುಕುವದರಲ್ಲಿ ಮಗ್ನರಾದಾಗ ನೀವು ಅರವಿಂದರಂತೆ ಏಕೆ ಬರೆಯುವದಿಲ್ಲವೆಂದು ಕೇಳಿ ಹಾಕುವ ಹುಲುಮನುಜರಿಗೆ ಕೊಟ್ಟ ಉತ್ತರವದು. ಈ ನೇತಿವಾದದ ಮೂಲಕ ಭಾರತೀಯ ಕಾವ್ಯದ ಏಕಪ್ರವಾಹಕ್ಕೆ ಭಂಗ ಬಂದೀತೆಂಬ ಖಬರು ಲಾಲ—ರಾಘವೇಂದ್ರರಲ್ಲಿ ಇರಲಿಲ್ಲವೆಂಬುದು ದುರ್ದೈವವಾದರೂ ಆ ಪರಿಸ್ಥಿತಿಯಲ್ಲಿ ಅದು ಕ್ಷಮ್ಯ ಕಂಡಿತು. ಇದೇ ಸೂರಿಗೆ ಮೇಳೈಸಲಿಕ್ಕೆಂದು ಹತ್ತು ವರ್ಷದ ವಿಮರ್ಶಾತ್ಮಕ ಗರಡಿಯಲ್ಲಿ ಬೆಳೆದ ನವ್ಯವಿಮರ್ಶಕರು ಓಡಿಬಂದು ಟಾಗೋರ-ಅರವಿಂದರ ವಿರುದ್ಧ ಬೈಗುಳ ಸಿಡಿಸುವ ಕಾರ್ಯಕ್ಕೆ ಉದ್ಯುಕ್ತರಾದ ಮೂಲಕ ೫—೬ ವರ್ಷಗಳ ವರೆಗೆ ಈ ಪ್ರತಿಗಾಮಿ ಧೋರಣೆಯೇ ಖಾಯಂ ಆಗುವ ಸಂಭವ ತೋರಿದರೂ ಇತ್ತೀಚೆಗೆ ವಾತಾವರಣ ಬಹಳಷ್ಟು ಬದಲಾಗಿದೆ. ಇದಕ್ಕೆ ಪರಿಸ್ಥಿತಿಯೇ ಕಾರಣ.

ನವ್ಯ ಇಂಡೋ—ಆ್ಯಂಗ್ಲಿಯನ್ ಪಂಥದ ಸಮರ್ಥನೀಯ ಅಂಶವೆಂದರೆ ಭಾಷೆಗೆ ಕೊಟ್ಟ ಬೆಲೆ. ಇಂಗ್ಲೀಷಿನಲ್ಲಿ ಬರೆಯಬಯಸುವ ಭಾರತೀಯರು ಇಂಗ್ಲೀಷ್ ಭಾಷೆಯ ಸೃಜನಶೀಲ ಬಳಕೆಗೆ ಬೇಕಾಗುವ ಹದಗಾರಿಕೆಯನ್ನು ಅರಿತವರಾಗಿರಬೇಕು; ಹಾಗು ಇಂಡೋ-ಆ್ಯಂಗ್ಲಿಯನ್ ಕಾವ್ಯವು ಇಂಗ್ಲೀಷ್ ವಿಮರ್ಶಾಪದ್ಧತಿಯ ಪರೀಕ್ಷೆಗೆ ಹೇಗೆ ಗುರಿಪಡಿಸಿದರೂ ತೇರ್ಗಡೆ ಹೊಂದುವಂತಾಗಿರಬೇಕು. ಇಂಥ ನಿಷ್ಠುರ ನಿಯಮಕ್ಕೆ ಒಳಪಟ್ಟ ಮೂಲಕ ಚಿಲ್ಲರೆ ಕವಿಗಳು ಈ ಕ್ಷೇತ್ರದಲ್ಲಿ ಕಾಲಿಡುವದು ಕಠಿಣವಾಯಿತು. ತದ್ವಿರುದ್ಧವಾಗಿ, ಅನೇಕ ಸಂದರ್ಭದಲ್ಲಿ ಯಾರು ಒಳ್ಳೆಯ ಪತ್ರಿಕಾಕರ್ತರಾಗಲು ಯೋಗ್ಯರಿದ್ದರೋ ಅಂಥವರು ಇಂಗ್ಲೀಷ್ ಕವಿಗಳೆಂದೂ ದಾಟಿಹೋಗುವ ಸಂದರ್ಭವೂ ಬಂದಿತು. ಭಾಷಾಶುದ್ಧಿ, ಭಾಷಾಪ್ರಭುತ್ವಕ್ಕೆ ಅವಾಸ್ತವ ಬೆಲೆ ಬಂದರೆ ಆಗುವ ಹಣೆಬರಹವೇ ಇದು.

ರೈಟರ್ಸ್ ವರ್ಕ್‌ಶಾಪ್

೧೯೬೦ ರಲ್ಲಿ ಇನ್ನೊಂದು ಮಹತ್ವದ ಘಟನೆ ಜರುಗಿತು. ಕಲಕತ್ತೆಯಲ್ಲಿ ಪಿ. ಲಾಲರು Writers' Workshop ಎಂಬ ಸಂಸ್ಥೆಯನ್ನು ಸ್ಥಾಪಿಸಿ ಪರಸ್ಪರ ಚರ್ಚೆಯ ಮುಖಾಂತರ ಸಾಹಿತ್ಯಿಕ ವಾತಾವರಣವನ್ನು ಕಲ್ಪಿಸುವ, ಪ್ರಕಟಿಸುವ, ಸೃಜನಶೀಲ ಕಾರ್ಯಕ್ರಮ ಕೈಕೊಂಡರು. ಈ ಸಂಸ್ಥೆಯ ಮುಖಾಂತರ ಈ ವರೆಗೆ ಗುಪ್ತವಾಗಿ ಹರಿಯುತ್ತಿದ್ದ ಸೃಜನಶೀಲತೆ ಪ್ರಕಟವಾಗತೊಡಗಿತು. ಈ ವರೆಗೆ ಈ ಸಂಸ್ಥೆಯು ಸುಮಾರು ನೂರರಷ್ಟು ಪುಸ್ತಕಗಳನ್ನು, ೬೦೦ಕ್ಕೂ, ೩೦೦ಕ್ಕಿಂತ ಹೆಚ್ಚು ಕವಿಗಳನ್ನು

ಓದುಗರ ಎದುರಿಗೆ ಇಡಲು ಸಹಾಯಮಾಡಿದೆ. ಉತ್ತಮ ಕಾವ್ಯದ ಜೊತೆಗೆ ಉತ್ತಮ ವಿಮರ್ಶೆಯನ್ನೂ ನೀಡಿದೆ. ಇದರ ಶ್ರೇಯಸ್ಸು ಪಿ. ಲಾಲ ಮತ್ತು ಅವರ ಸಂಗಡಿಗರಿಗೆ ಹೋಗಬೇಕು. ಇವರ ಮುಖಾಂತರ ಪ್ರದೀಪ ಸೇನ್, ಪ್ರೀತೀಶ ನಂದಿ, ಮೋನಿಕಾ ವರ್ಮಾ, ಸಾಂತಿ, ಚ್ಯಾಂಟಲ್ ಮನ್, ಇಂಥ ಒಳ್ಳೆಯ ಕವಿಗಳು ಓದುಗರ ಎದುರು ಬರುವಂತಾಯಿತು. ಬೇರೆ ರೀತಿಯಿಂದ ಮೊದಲೇ ಕೀರ್ತಿ ಪಡೆದ ಇತರ ಕವಿಗಳೂ ರೈಟರ್ಸ್ ವರ್ಕ್‌ಶಾಪಿನ ಪ್ರಕಟನಾ ಸಂಘಟನೆಯ ಮುಖಾಂತರ ತಮ್ಮ ಕೆಲಸವನ್ನು ಮುಂದುವರಿಸಿದ್ದಾರೆ.

ಆಂಧ್ರಪ್ರದೇಶದಲ್ಲಿ ಶ್ರೀನಿವಾಸ್ ರಾಮ ಪ್ರೋಳ ಮುಂತಾದವರ ಕೆಲಸದ ಮುಖಾಂತರ ಹಲವಾರು ಕವಿಗಳು ಮುಂದೆ ಬಂದಿದ್ದಾರೆ.

ಮುಂಬಯಿಯಲ್ಲಿ ಮೂರು ನಾಲ್ಕು ವರ್ಷಗಳ ಕೆಳಗೆ ನಿಸ್ಸಿಮ್ ಇಝೇಕಿಯಲರು ಸ್ವತಂತ್ರವಾಗಿ 'Poetry India' ಎಂಬ ಪ್ರಕಟನೆಯನ್ನು ಶುರು ಮಾಡಿ ಹಲವಾರು ಕವಿಗಳನ್ನು ಮುಂದೆ ತಂದರು. ಇವರಲ್ಲಿ ಪ್ರಮುಖರು ಪಾರ್ಥಸಾರಥಿ, ಜೀವ ಪಟೇಲ, ಆದಿಲ್ ಜಸಾವಾಲಾ, ದಾರುವಾಲಾ, ಕಾತ್ರಕ, ಇವರನ್ನು ನೆನೆಯಬಹುದು. ಈ ಕವಿಗಳು ಮುಂಬಯಿಯ 'Opinion' ಎಂಬ ಪತ್ರಿಕೆಯಲ್ಲಿ ಓದ ಸಿಗುತ್ತಾರೆ. ಪೋಯಿಟ್ರಿ ಇಂಡಿಯಾ ಈಗ ಮುಳುಗಿದೆ.

ದಿಲ್ಲಿಯಲ್ಲಿ ಸ್ವತಂತ್ರವಾಗಿ ಕಮಲಾ ದಾಸ್ ಎಂಬ ಕವಿಯಿತ್ರಿ ತನ್ನ ಉಚ್ಛೃಂಖಲ ಕಾವ್ಯದಿಂದ ಹೆಸರಾಗಿದ್ದಾರೆ. ಇವರಿಗೆ ವರ್ಕ್‌ಶಾಪ್ ಸಂಬಂಧ ಬಂದಿದೆ.

ಧಾರವಾಡ, ಮೈಸೂರು, ಜೈಪೂರ, ಕಲಕತ್ತಾ. (ರಾಜನ್ ಇರುವವರೆಗೆ) ದಿಲ್ಲಿ, ಪಾಟ್ನಾ, ಇವು ಅಭ್ಯಾಸೀ ವಿಮರ್ಶೆಗೆ ಒಳ್ಳೆಯ ಕೇಂದ್ರಗಳಾಗಿವೆ.

ಕೆಲವು ಕವಿಗಳು

ಒಟ್ಟಿನ ಮೇಲೆ ಸದ್ಯಕ್ಕೆ ಭಾರತೀಯ ಇಂಗ್ಲೀಷ್ ಕಾವ್ಯದಲ್ಲಿ ಎರಡು ಪ್ರವಾಹಗಳು ಪ್ರಮುಖವಾಗಿ ಕಂಡುಬರುತ್ತವೆ. ಒಂದೆಡೆಗೆ ಭಾಷಾಪ್ರಧಾನ ಕಾವ್ಯ, ಭಾಷಾಪ್ರಧಾನ ವಿಮರ್ಶೆ; ಇನ್ನೊಂದೆಡೆಗೆ ಸಂಸ್ಕೃತಿಪ್ರಧಾನ ಕಾವ್ಯ, ಸಂಸ್ಕೃತಿಪ್ರಧಾನ ವಿಮರ್ಶೆ. ಸಾಧಾರಣತಃ ಮುಂಬಯಿಯಿಂದ ಪ್ರಕಟಗೊಂಡ ಕವಿಗಳು ಮೊದಲನೆಯ ತರಗತಿಯವರು. ವರ್ಕ್‌ಶಾಪ್‌ನಿಂದ ಪ್ರಕಟಗೊಂಡವರು ಇನ್ನೊಂದು ತರಗತಿಯವರು. ಆದರೆ ಈ ವಿಂಗಡಣೆ ಎಲ್ಲ ಕವಿಗಳಿಗೂ ಅನ್ವಯಿಸುವದಿಲ್ಲವೆಂಬುದನ್ನು ನೆನೆಯಬೇಕು. ಕೆಲವು ಪ್ರಮುಖ ಕವಿಗಳ ಲಕ್ಷಣಗಳನ್ನು ವಿವೇಚಿಸುವಾ:

ಡಾಮ್ ಮೊರಾಯಸ್

ಇವನನ್ನು ಭಾರತೀಯ ಆಂಗ್ಲರಲ್ಲಿ ಏಕೆ ಎಣಿಸಬೇಕೋ ತಿಳಿಯದು. ಗೋವಾದವರು. ಗೋವಾ ಭಾರತದಲ್ಲಿ ಸೇರ್ಪಡೆಯಾದೊಡನೆ, ಭಾರತವನ್ನು ಶಪಿಸಿ ಇಂಗ್ಲಂಡಿನ ನಾಗರಿಕನಾಗಿದ್ದಾರೆ. ಇವನಲ್ಲಿ ಭಾರತೀಯತ್ವದ ಅಂಶವೂ ಕಡಿಮೆ. ಆದರೆ ಭಾರತದಲ್ಲಿ ಹುಟ್ಟಿ ಇಂಗ್ಲೀಷ್ ಕವಿಗಳಲ್ಲಿ ಪರಿಗಣಿಸಲ್ಪಟ್ಟಿರುವದು ನಮಗೆ ಅಭಿಮಾನಾಸ್ಪದವಾದ್ದರಿಂದ ಅವನು ಒಪ್ಪಲಿ ಬಿಡಲಿ, ನಾವು ಅವರನ್ನು ಭಾರತೀಯ ಆಂಗ್ಲರಲ್ಲಿ ಪರಿಗಣಿಸುತ್ತೇವೆ. ಇವರು ೧೯೩೮ ರಲ್ಲಿ ಜನಿಸಿದರು. ಹನ್ನೆರಡನೆಯ ವರ್ಷದಲ್ಲಿಯೇ ಇಂಗ್ಲೀಷಿನಲ್ಲಿ ಕವನಗಳನ್ನು ರಚಿಸಿದರು. ಇವನು ಫ್ರಾಂಕ್ ಮೊರಾಯಸ್‌ರ (ಇಂಡಿಯನ್ ಎಕ್ಸಪ್ರೆಸ್ ಪತ್ರಿಕೆಯ ಪ್ರಧಾನ ಸಂಪಾದಕ) ಮಗ. A Beginning ಎಂಬ ಪ್ರಥಮ ಸಂಕಲನ ಇಂಗ್ಲಂಡಿನಲ್ಲಿ ೧೯೫೫ ರಲ್ಲಿ ಪ್ರಕಟವಾಯಿತು. ನಂತರ ಬಂದ Poems ಎಂಬ ಸಂಕಲನ ಇವರಿಗೆ ಬಹಳ ಕೀರ್ತಿ ತಂದಿತು. John Nobody ಎಂಬ ತೃತೀಯ ಸಂಕಲನ ಈ ಕೀರ್ತಿಯನ್ನು ಹೆಚ್ಚಿಸದಿದ್ದರೂ ಆಂಗ್ಲಾಂಬಳ ಅಚ್ಚೆಯ ಮಗನ ಮುರುಕ-ಮುನಿಸುಗಳಂತೆ ಸ್ವೀಕೃತವಾದವು. Gone Away ಎಂಬ ಗದ್ಯ ಪ್ರವಾಸಕಥನದಲ್ಲಿ ನೆಹರೂರ ಬಗ್ಗೆ, ನೇಪಾಳದ ಬಗ್ಗೆ ಆಡಿದ ಬೇಜವಾಬದಾರಿ ಮಾತುಗಳು ಚರ್ಚೆಗೆ ವಿಷಯಗಳಾದವು. ಇವರ ಸೃಜನಶೀಲತೆ ಸದ್ಯಕ್ಕೆ ಚಂದ್ರಗ್ರಹಣಾವಸ್ಥೆಗೆ ಬಂದಿದೆ. ಜೀವನದ ಕಹಿಗಳ ಪರಿಚಯವೇ ಇಲ್ಲದೆ ಬೌದ್ಧಿಕ ಕಹಿಗಳನ್ನು ತಾನಾಗಿಯೇ ನಿರ್ಮಿಸಿಕೊಂಡು ಕೂದಲು ಕಿತ್ತು ಮುಖ ಹೇಗಾಯಿತೆಂಬುದನ್ನು ನೋಡಿಕೊಳ್ಳುವ ಆತ್ಮರತ ದುರಂತದಲ್ಲಿ ಈ ಕವಿ ತನ್ನ ಈ ಹತ್ತು ವರ್ಷಗಳನ್ನು ಕಳೆದಿದ್ದಾನೆ. ಇತ್ತೀಚೆಗೆ ಇಂಗ್ಲಂಡಿನಲ್ಲಿ ಆದ ವರ್ಣದ್ವೇಷದ ಬಿಸಿ ತುಸು ಇವರಿಗೆ ತಾಕಿದ್ದರೂ ಇನ್ನೂ ಇಂಗ್ಲಂಡಿನ ಬಗ್ಗೆ ಅಭಿಮಾನ ಕಡಿಮೆಯಾಗಿಲ್ಲ. ಸೃಜನಶೀಲತೆಯ ಎರಡನೆಯ ಘಟ್ಟವನ್ನು ಇವರು ಇನ್ನೂ ಮುಟ್ಟದಿದ್ದದ್ದು ಓದುಗರ ಅಸಮಾಧಾನಕ್ಕೆ ಕಾರಣವಾಗಿದೆ. ವಿಷಾದ, ಆತ್ಮಪ್ರೌಢಿ ಇವುಗಳ ಅಂಶಗಳನ್ನೊಳಗೊಂಡ ಅವರ ಕಾವ್ಯಕ್ಕೆ ಒಂದು ವಿಷಣ್ಣ ಬಗರು ಇದ್ದು ಇದೇ ಇವನ ಲೋಕಪ್ರಿಯತೆಗೂ ವಿಶಿಷ್ಟ ಧ್ವನಿಗೂ ಕಾರಣವಾಗಿದೆ. ಆತ್ಮಚರಿತ್ರಾತ್ಮಕವಾದ ಈ ಕವನದಲ್ಲಿ ಈ ಅರ್ಥ ಸ್ಪಷ್ಟವಾಗುವದು :

I sold my wild ants
Before I was twenty
Drunkards and turncoats
I knew in plenty.
My friends betraved me
Each new affair



Further delayed me.
I didn't care.

ಇದರಲ್ಲಿ ಕೊನೆಯ ಸಾಲೇ ಅವರ ಆತ್ಮಪ್ರತೀತಿಯ ಅಭಿವ್ಯಕ್ತಿ. Don't care ಕಾವ್ಯವು ದೊಡ್ಡವನಾದ ಮೇಲೂ ಬದುಕೀತೇ ಎಂಬುದೇ ಸಮಸ್ಯೆ.

ನೀಸ್ಸಿಮ್ ಇಝೆಕಿಯಲ್

ಇಂಗ್ಲೀಷಿನಲ್ಲಿ ಹಲವಾರು ಉತ್ತಮ ಕವನಗಳನ್ನು ರಚಿಸಿದ ಇವರ ಜನನವು ೧೯೨೪ ರಲ್ಲಿ ಒಂದು ಭಾರತೀಯ ಯಹೂದಿ ಕುಟುಂಬದಲ್ಲಿ ಆಯಿತು. ೧೯೫೨ರಲ್ಲಿ ಇವರ ಪ್ರಥಮ ಸಂಕಲನ A Time To Change ಪ್ರಕಟವಾಗಿ ಇವರ ಬಗ್ಗೆ ಅನೇಕ ಆಸೆಗಳನ್ನು ಹುಟ್ಟಿಸಿತು. ಬಹು ಬೇಗ ೧೯೫೩ರಲ್ಲಿ ಇವರ ಎರಡನೆಯ ಸಂಕಲನ Sixty Poems ಪ್ರಕಟವಾಯಿತು. ಇದರಲ್ಲಿ ಇಝೆಕಿಯಲರಲ್ಲಿ ಕವಿಶಕ್ತಿ ಆಗಲೇ ಪಳಗಿದುದು ಕಂಡುಬರುತ್ತದೆ. ಜೊತೆಗೆ ತುಸು ಥಿಯಾಸಾಫಿಯ ಸಂಪರ್ಕದಿಂದಾಗಿ ಆಳದ ಅನುಭವವೂ ಆಗುತ್ತದೆ. ಆ ನಂತರ ಬಂದ The Unfinished Man ಎಂಬ ಸಂಗ್ರಹವು ಆತ್ಮಿಕತೆಯನ್ನು ಕಳಕೊಂಡಿದೆ. ಆತ್ಮಪ್ರತೀತಿಯತ್ತ ಹೊರಳುತ್ತದೆ. ತಾತ್ತ್ವಿಕ ವಿಷಯಗಳನ್ನು ಬಿಟ್ಟುಕೊಟ್ಟ ಕೇವಲ ಕನಿಷ್ಠವಾದ ಕವನಗಳನ್ನು ಈ ಸಂಗ್ರಹದಲ್ಲಿ ನೋಡುತ್ತೇವೆ. ಇಝೆಕಿಯಲರ ಮುಖ್ಯವಾಣಿ ಅರಳಿ ಬರುವದು ವಿಫಲತೆ-ವಿಷಣ್ಣತೆಗಳಲ್ಲಿ ಈ ಭಾವವು ಕೆಲವು ಬಾರಿ ಕಾವ್ಯದ, ಕೆಲವು ಬಾರಿ ಜೀವನ ಸಂದರ್ಭದ, ಕೆಲವು ಬಾರಿ ಸಾಮಾಜಿಕ ಶಕ್ತಿಗಳ ಪರಿಣಾಮವಾಗಿ ಹುಟ್ಟಿದ ವಿಫಲತೆ. ಇಂಥ ವಿಫಲತೆಗೆ ತಾತ್ತ್ವಿಕ ಬೆನ್ನೆಲವು ಒಂದು ಇದ್ದರೆ ಕಾವ್ಯ ಗಂಭೀರತೆಯನ್ನು ಪಡೆಯುತ್ತದೆ. ಜೀವನದಲ್ಲಿ ತನ್ನ ದೌರ್ಬಲ್ಯಗಳ ಮೂಲಕ ವಿಫಲನಾದ ಓರ್ವ ಕತೆಗಾರನಿಗೆ ಕವಿ ಕೊಟ್ಟ ಉಪದೇಶ:

"The pattern will remain,
unless you break
It with a sudden jerk; but
use your head......
Not all who fail are counted
with the take."

ಇಂಥ ಸುಂದರ ಪಂಕ್ತಿಗಳು ಇಝೆಕಿಯಲರಲ್ಲಿ ಆಗಾಗ್ಗೆ ಬಂದು ಅವರ ಕಾವ್ಯಕ್ಕೆ ಸೊಬಗು ತರುತ್ತವೆ. ಇತ್ತೀಚೆಗಿನ ಕವನಗಳಲ್ಲಿ ಅವರ ಕಲಾನಿಷ್ಠತೆ ಅತಿರೇಕಕ್ಕೆ ಮುಟ್ಟಿದಂತೆ ತೋರುತ್ತದೆ. ಶಬ್ದ-ಪ್ರತೀಕ-ಪ್ರತಿಮೆಗಳ ತಾಕಲಾಟದಿಂದಲೇ ಇತ್ತೀಚೆಗೆ ಹಲವಾರು ಕವನಗಳನ್ನು ಹುಟ್ಟಿಸಿದ್ದಾರೆ. ಅವುಗಳ ರಚನೆಯನ್ನು ಮೆಚ್ಚಬಹುದಾದರೂ ಓದುಗನ ಮೆಚ್ಚಿಗೆಯೇ ಹೆಚ್ಚಾಗಿ ರಸಾನುಭವ ಕಡಿಮೆಯಾಗುವ ಚಿತ್ರ ಕತೆ ಹೆಚ್ಚುತ್ತಿರುವದು ನನ್ನಂಥವರಿಗೆ ಕಳವಳವನ್ನುಂಟುಮಾಡಿದೆ. ಅವರನ್ನು ಮೆಚ್ಚಿದವರು ಮಾತ್ರ, ಇದು ಅವರ ಕಾವ್ಯದ ಮೇಲಿನ ಘಟ್ಟವೆಂದು ಹೇಳುತ್ತಾರೆ. ಇರಲಿ. ೧೯೬೫ ರಲ್ಲಿ ಪ್ರಕಟತವಾದ The Exact Name ಎಂಬ ಇನ್ನೊಂದು ಸಂಗ್ರಹದಲ್ಲಿ ಇದು ಇನ್ನೂ ಹೆಚ್ಚು ಸ್ಫುಟವಾಗಿ ಕಾಣಿಸುತ್ತದೆ. ನರಸಿಂಹಯ್ಯನವರ ಗರಡಿಯಲ್ಲಿ ಪಳಗಿದ ರಾಜೀವ ತಾರಾನಾಥ ಹಾಗೂ ಮೀನಾ ಬೆಳ್ಳಿಯಪ್ಪ ಅವರು Nissim Ezekiel's Poetry ಎಂಬ ಹೊತ್ತಿಗೆಯನ್ನು ಇವರ ಮೇಲೆ ಬರೆದಿರುವರು. ಇದು ವರ್ಕ್‌ಶಾಪ್ ನಿಂದ ಪ್ರಕಟವಾಗಿದೆ ಇಝೆಕಿಯಲರ ಯೋಗ್ಯತೆಗೆ ತಕ್ಕಂಥ ಮನ್ನಣೆ ಇನ್ನೂ ಇಂಗ್ಲೆಂಡ್-ಅಮೇರಿಕೆಗಳಲ್ಲಿ ದೊರಕದಿದ್ದುದು ಈ ದೇಶಗಳ ಸಂಕುಚಿತವೃತ್ತಿ ಇನ್ನೂ ಕಡಿಮೆಯಾಗಿಲ್ಲವೆಂಬುದಕ್ಕೆ ನಿದರ್ಶನ. ಹಾಗೆ ಡಾಮ್ ಮೊರಾಯಸರಿಗಿಂತ ಇವರ ಯೋಗ್ಯತೆ ಕಡಿಮೆಯಲ್ಲ.

ಪಿ. ಲಾಲ್

ಅನೇಕ ಕಾರಣಕ್ಕಾಗಿ ಮೇಲಿನ ಇಬ್ಬರು ಕವಿಗಳಿಗಿಂತ ನಾನು ಲಾಲರಿಗೆ ಹೆಚ್ಚು ಬೆಲೆ ಕೊಡುತ್ತೇನೆ. ಮೇಲಿನ ಕವಿಗಳು ಚೊಕ್ಕಟ ಕವನಗಳ ರಚಯಿತೃರೆಂದು ಎಲ್ಲರೂ ಒಪ್ಪಬೇಕು. ಆದರೆ ಕೊನೆಗೆ ನಿಲ್ಲುವದು ಕವಿಯ ಏಕಸೂತ್ರತೆ, ಮಾನಸ ಸ್ವಾಸ್ಥ್ಯ, ಸ್ವಂತದ ವಾಣಿ, ಸ್ವಾನುಭವ, ಅವಲೋಕನಶಕ್ತಿ, ಅವಲೋಕಿತ ವಿಷಯಗಳನ್ನು ಒಂದು ಗ್ರಥನವಾಗಿ ಮಾಡುವ ಶಕ್ತಿ. ರಚನಾಶಕ್ತಿಗಿಂತ ವಾಣಿ ಹೆಚ್ಚಿನದೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಲಾಲರಲ್ಲಿ ಅದು ಉಂಟು. ಅವರು ಬರೆದ ಪ್ರಥಮ ಕವನದಿಂದ ಕೊನೆಯ ಕವನದ ವರೆಗೆ ಓದುಗರೂ ಕೆಲವು ಸ್ವಂತದ ಮರ್ಯಾದೆಗಳನ್ನು ಮೀರದೆ ಒಂದು ಧ್ವನಿಯಲ್ಲಿ ಬರೆದದ್ದು ಕಾಣುತ್ತದೆ. ಇದು ಆರೋಗ್ಯದ ಧ್ವನಿ. ಜೀವನವನ್ನು ಪಾಕಗೊಳಿಸುವ ಚಿರಂತನ ಹವ್ಯಾಸ ಇವರಲ್ಲಿ ಇದೆ. ಇವರಲ್ಲಿರುವ ಸ್ವ ಮತ್ತು ಪರ ವಿಮರ್ಶಾಶಕ್ತಿ ಮೇಲ್ಕಂಡ ಇಬ್ಬರಲ್ಲಿಯೂ ಇಲ್ಲ. ಈ ಮೊದಲು ಪ್ರೊ. ಗೋಕಾಕರಲ್ಲಿ ಬಣ್ಣಿಸಿದ ಸ್ವತಂತ್ರವೃತ್ತಿ ಮತ್ತು ಎದೆಗಾರಿಕೆಗಳನ್ನು ತರುಣ ಜನಾಂಗದಲ್ಲಿ ಲಾಲರಲ್ಲಿ ಮಾತ್ರ ನೋಡಬಹುದು. ಉಳಿದವರು ಪರಪ್ರತ್ಯಯ ನೇಯರೆಂದೇ ಹೇಳಬೇಕು. (ಇಝೆಕಿಯಲರಿಗೂ ಸ್ವತಂತ್ರ ವಿಚಾರ ಕಡಿಮೆ.) ಲಾಲರು ಸಂಪಾದಿಸಿದ Homage To T. S. Eliot ಎಂಬ ವಿಮರ್ಶಾಗ್ರಂಥದಲ್ಲಿ ಭಾರತದ ಹಲವಾರು ಕವಿ-ವಿಮರ್ಶಕರು ಲೇಖನ ಬರೆದಿದ್ದಾರೆ, ಆದರೆ ಸ್ವತಂತ್ರಬುದ್ಧಿಯು ಸ್ಪಷ್ಟವಾಗಿ ಕಾಣುವದು ಲಾಲರಲ್ಲಿಯೇ. ಕಳೆದ ಹತ್ತೀ ವರುಷಗಳಲ್ಲಿ ಲಾಲರಲ್ಲಿ ಆದಷ್ಟು ಬದಲಾವಣೆ ಇತರರಲ್ಲಿ ಇಪ್ಪತ್ತು ವರ್ಷಗಳಲ್ಲಿಯೂ ಆಗಿಲ್ಲವೆಂಬುದು ಗಮನಿಸುವ ಮಾತಾಗಿದೆ.

ಲಾಲರು ಕಪೂರಥಾಲಾ(ಪಂಜಾಬ)ದಲ್ಲಿ ಜನಿಸಿದರು. ಕಲಕತ್ತೆಯ ನಿವಾಸಿಗಳಾದರು. ಇದೀಗ ಅವರಿಗೆ ೪೦ ವರ್ಷ. ಭಾರತಕ್ಕೆ ಸ್ವಾತಂತ್ರ್ಯ ಬರುವ ವರುಷವೇ ಅವರು ಕಾಲೇಜಿನಲ್ಲಿ ಕವಿಗಳ ಚಿಕ್ಕ ಗುಂಪನ್ನು ಕಟ್ಟಿಕೊಂಡು ಕಾವ್ಯವ್ಯಾಸಂಗಕ್ಕೆ ಮೊದಲು ಮಾಡಿದವರು. 'ಇಲಸ್ಟ್ರೇಟೆಡ್ ವೀಕ್ಲಿ' ಮುಖಾಂತರ ಭಾರತಕ್ಕೆ ಪರಿಚಿತರಾಗಿ ರೈಟರ್ಸ್ ವರ್ಕ್‌ಶಾಪ್ ಸುರುವು ಮಾಡಿದುದನ್ನು ಈಗಲೇ ಬರೆದಾಗಿದೆ. ಇವರ ಪ್ರಥಮ ಸಂಕಲನ The Parrot's Death ೧೯೬೦ ರಲ್ಲಿ ಪ್ರಕಟವಾಯಿತು. Love's The First ಎಂಬ ಅವರ ಶ್ರೇಷ್ಠ ಸಂಕಲನ ೧೯೬೨ ರಲ್ಲಿಯೂ, "Change", They Said, ೧೯೬೬ ರಲ್ಲಿಯೂ, Draupadi and Jayadratha ೬೬ ರಲ್ಲಿಯೂ ಪ್ರಕಟವಾದವು. ಇವು

ಗಳಲ್ಲಿ ಲಾಲರು ಹೇಗೆ ರಾಷ್ಟ್ರೀಕತೆಯತ್ತ (Native inspiration) ನಾಗಾಲೋಟದಿಂದ ಹೋಗುತ್ತಿದ್ದಾರೆಯೆಂಬುದನ್ನು ನೋಡಬಹುದು. Love's The First ದ ಒಂದು ಉದಾಹರಣೆ.

From Dushyanta to Casanova
The ways of Love remain
uncanny!
Some seek technique in Vita
Nuova,
Others preferring Keats's
Fanny.
Poets remain losing lovers,
Sublimating lust in art
The curious among them soon
discovers
Posterity fattening on his heart.

(ಇದೇ ವಿಷಯದ ಮೇಲೆ ನರಸಿಂಹಸ್ವಾಮಿಗಳು ಇಷ್ಟೇ ಚೊಕ್ಕಟವಾಗಿ ಬರೆದ 'ನವ್ಯ ಕವಿ'ಯೆಂಬ ಪ್ರಕಟವಾದ ಕವಿತೆಯನ್ನು ನೆನೆಯಬಹುದು. ಅದರಲ್ಲಿ ಉರುಳುತ್ತಿದ್ದ ಭೂಮಿ ಕವಿಗೆ ಕೀರ್ತಿಯ ಸಜವನ್ನು ಕೊಟ್ಟು ಉರುಳಿಯೇ ಉರುಳಿತೆಂದು ಹೇಳಿದೆ. ಇದರಲ್ಲಿ ಕವಿ ತನ್ನ ನೋವಿನಿಂದ ಕಾವ್ಯ ರಚಿಸಿ ಹಣ ಸಂಪಾದಿಸಿ ಹೃಷ್ಟಪುಷ್ಟ ಪ್ರಹೃಷ್ಟನಾಗುವದನ್ನು ವ್ಯಂಗ್ಯವಾಗಿ ವರ್ಣಿಸಿದೆ). ಆದರೆ ಇಂಥ ಚಂದ ಚೊಕ್ಕಟ ಕವನಗಳಲ್ಲಿ ದುಷ್ಯಂತ ಮುಂತಾದ ಹೆಸರು ಬಿಟ್ಟರೆ ಹೆಚ್ಚಿನ ಭಾರತೀಯತ್ವವಿಲ್ಲ. "Change," They Said ಎಂಬ ಸಂಗ್ರಹದಲ್ಲಿ ರಾಷ್ಟ್ರೀಯ ನ ರ ಳಿ ಕೆ ಯ ವಿಷಯಗಳು ಬಂದಿದ್ದು, ನಂತರದ ಸಂಗ್ರಹದಲ್ಲಿ ಪೌರಾಣಿಕ ವಿಷಯವೊಂದರ ಮೇಲೆ ಕೈಲಾಸಂರ Purpose ಅಥವಾ Karna ದಂತೆ ಸಂಭಾಷಣಾರೂಪವಾದ ಕಾವ್ಯ ಬಂದಿದೆ. ಲಾಲರು ಗೀತೆಯನ್ನು, ವೇದದ ಕೆಲವು ಸೂಕ್ತಗಳನ್ನು, ಧಮ್ಮಪದವನ್ನು, ಸಂಸ್ಕೃತ ಸುಭಾಷಿತಗಳನ್ನು, ಪಂಜಾಬೀ ಪ್ರಾರ್ಥನೆಗಳನ್ನು ಇಂಗ್ಲೀಷಿಗೆ ಅನುವಾದಿಸಿದ್ದಾರೆ. ಇತ್ತೀಚೆಗೆ ಮಹಾಭಾರತದ ಸಂಪೂರ್ಣ ಅನುವಾದದ ಕೆಲಸದಲ್ಲಿ ಅವರು ತೊಡಗಿದ್ದು, ಈಗಾಗಲೇ ಆದಿಪರ್ವದ ಪ್ರಥಮ ಅಧ್ಯಾಯದ ೬ ಹೊತ್ತಿಗೆಗಳು ಪ್ರಕಟವಾಗಿವೆ. ಈ ಭಾರತೀಯ ಸಂಸ್ಕಾರದ ಮೂಲಕ ಲಾಲರ ಇಂಗ್ಲೀಷ್ ಭಾಷೆಯ ಬಳಕೆಗೆ ಹೊಸ ಹೊಸ ಅವ್ಹಾನಗಳು ಅವಕಾಶಗಳು ಒದಗುತ್ತಿದ್ದು, ತದನುಸಾರವಾಗಿ ಭಾಷೆಯ ಬಳಕೆಯಲ್ಲಿ ಅವರು ಅನೇಕ ಪ್ರಯೋಗಗಳನ್ನು ಮಾಡಬೇಕಾಗಿದೆ. ಆದಿಪರ್ವದ ೬ನೇ ಅಧ್ಯಾಯದಲ್ಲಿ ಬರುವ ಒಂದು ಶ್ಲೋಕವಿದು :

The great sky-ranging bird darkened the worlds with dust-storms whipped up by his wings till the awed gods overcome with swirling dust fainted,

ಈ ಗರುಡನ ಪರಾಕ್ರಮದ ವರ್ಣನೆಯಲ್ಲಿ ಬ್ರಿಟಿಶ್, ಅಮೇರಿಕನ್, ಪ್ರಾಚೀನ, ಅರ್ವಾಚೀನ ಶಬ್ದಗಳ ಸರಿಬೆರಕೆ ಇದ್ದು, ಒಟ್ಟಂದರ ಉದ್ದೇಶ ಮಾತ್ರ ಭಾರತೀಯತ್ವದ ವಾಣಿಯನ್ನು ಹುಟ್ಟಿಸುವದರಲ್ಲಿ ಸಫಲಗೊಂಡಿದೆ. ಇಂಥವರ ಕಾರ್ಯಕ್ಕಿದ್ದ ಬೆಲೆ ಬರಿಯ ಆತ್ಮಾವಿಷ್ಕಾರದಲ್ಲಿ ತೊಡಗಿದ ಕವಿಗಳಿಗೆ ಬಾರದು. ಲಾಲರ ಇತ್ತೀಚೆಗಿನ ನಂಬುಗೆಗಳೂ ಸಾಕಷ್ಟು ಬದಲಾಗಿದ್ದು ಇದರ ಅತ್ಯಂತ ಸುಂದರ ಆವಿಷ್ಕಾರವನ್ನು ಅವರ ಇತ್ತೀಚೆಗಿನ A Concept of Indian Literature ಎಂಬ ಚಿಕ್ಕ ವಿಮರ್ಶಾತ್ಮಕ ಗ್ರಂಥದಲ್ಲಿ ನೋಡಬಹುದು. ಇಂಗ್ಲೀಷಿನಲ್ಲಿ ಬರೆಯುವ ಭಾರತೀಯರೆಲ್ಲರೂ ಬೇರಿಲ್ಲದ ಎಲೆಯಿಲ್ಲದ ಗೊಡ್ಡುಗಳೆಂದು ಭಾವಿಸುವ ಮೂಢರಿಗೆ ಲಾಲರ ಕಾವ್ಯ ಹಾಗೂ ವಿಮರ್ಶೆಗಳು ಒಳ್ಳೆಯ ಉತ್ತರ ಕೊಡಬಲ್ಲವು. ಜೊತೆಗೆ ತಮ್ಮ ಕಾವ್ಯದಲ್ಲಿಯೇ ಅವರು ಭಾರತೀಯತ್ವವನ್ನು ಉಳಿಸಿಕೊಂಡದ್ದು ಅನೇಕ ಕವಿಗಳಿಗೆ ಹೊಸ ಸ್ಫೂರ್ತಿಯ ಬುಗ್ಗೆಯನ್ನು ಒದಗಿಸಿದಂತಾಗಿದೆ. ಲಾಲರ ಕಾವ್ಯದ ಮೇಲೆ

ಪ್ರಸ್ತುತ ಲೇಖಕರು P. Lal-An Appreciation ಎಂಬ ಹೊತ್ತಿಗೆಯನ್ನು ಬರೆದಿದ್ದು ಇದು ವರ್ಕ್‌ಶಾಪಿನಿಂದ ಮುದ್ರಿತವಾಗಿದೆ. Modern Indo-Anglian poetry ಯನ್ನು ಸಂಪಾದಿಸಿದ ೧೯೫೯ರ ಲಾಲರಿಗೂ ಮಹಾಭಾರತದ ೧೯೬೯ರ ಲಾಲರಿಗೂ ಅಜಗಜಾಂತರ ಎಂಬುದು ನೋಡತಕ್ಕ ಮಾತಾಗಿದೆ. ಅರವಿಂದರ ಬಗ್ಗೆ ಇವರ ಅಭಿಪ್ರಾಯಗಳೂ ಇತ್ತಿತ್ತ ಬದಲಾದಂತೆ ತೋರುತ್ತದೆ.

ಎ. ಕೆ. ರಾಮಾನುಜನ್

ಇವರು ಬೆಂಗಳೂರಿನವರು. ಅಮೇರಿಕೆಯಲ್ಲಿ ಚಿಕಾಗೋ ಯುನಿವರ್ಸಿಟಿಯಲ್ಲಿ ಭಾಷಾಶಾಸ್ತ್ರದ ಅಧ್ಯಾಪಕರು. ಇವರ The Striders ಎಂಬ ಸಂಕಲನವು ಇಂಗ್ಲಂಡಿನಲ್ಲಿ ಮನ್ನಣೆಯನ್ನು ಪಡೆದಿದೆ. ಭಾಷೆಯ ಮೇಲಿನ ಪ್ರಭುತ್ವ; ಚೊಕ್ಕಟ ವಿಚಾರಗಳಿಂದ ಚಿತ್ರಿತವಾದ ಇವರ ಕಾವ್ಯ ಸಮ ಯಶಸ್ಸನ್ನು ಪಡೆದಿದೆ. ಇವರು ಕನ್ನಡದಲ್ಲಿಯೂ ಸಫಲ ಕಾವ್ಯ ರಚಿಸಿದ್ದಾರೆ. ಕನ್ನಡ-ತಮಿಳು ಕಾವ್ಯ ಇಂಗ್ಲೀಷಿಗೆ ಅನುವಾದಿಸಿದ್ದಾರೆ. ಭಾಷಾಂತರದಲ್ಲಿ ಅಷ್ಟೊಂದು ಯಶಸ್ಸನ್ನು ಪಡೆದಿದ್ದಾರೆಂದು ಹೇಳಲಾರೆ.

ಜೀವ ಪಟೇಲ

ರಾಮಾನುಜರಂತೆ ಇವರಿಗೂ ಭಾಷೆಯ ಮೇಲಿನ ಪ್ರಭುತ್ವ ಸಾಕಷ್ಟು ಇದೆ. ಇವರು ಡಾಕ್ಟರರು, ಚಿತ್ರಕಾರರು (ಸಾಧಾರಣ ಪ್ರತಿಯ) ತಮ್ಮ ವೃತ್ತಿ ಜೀವನದ ಬಗ್ಗೆ ಹಲವಾರು ಸಮರ್ಥ ಕವನ ಬರೆದಿದ್ದಾರೆ. ಆದರೆ ಸಂಸ್ಮರಣೀಯತೆ (memorability) ಇವರಲ್ಲಿ ಇಲ್ಲವೆಂದು ತೋರುತ್ತದೆ.

ಲಾರೆನ್ಸ್ ಬ್ಯಾಂಟೆಲ್‌ಮನ್

ಇವರು ಆಂಗ್ಲೋ-ಇಂಡಿಯನ್ ಕುಟುಂಬದಲ್ಲಿ ಜನಿಸಿದರು. ಬಹು ವಿಚಾರವಂತರು. ತಮ್ಮ ವಿಚಾರಗಳನ್ನು ಹಾಸ್ಯದ ಚೊಕ್ಕಟ ಹಳಕುಗಳಲ್ಲಿ ಭಟ್ಟಿ ಇಳಿಸುವ ಕೆಲಸದಲ್ಲಿ ಇವರು ಇಝೆಕಿಯಲರಿಗಿಂತ ಒಂದು ಕೈ ಮುಂದೆಯೇ ಎನ್ನಬಹುದು. ಇಝೆಕಿಯಲರ ಎಲ್ಲ ಕವನಗಳನ್ನೂ ಕೆಲವು ವಿಷಯಗಳ ಅನುಸಾರವಾಗಿ ವಿಂಗಡಿಸಬಹುದು. ಆದರೆ ಬ್ಯಾಂಟೆಲ್‌ಮನ್ನರ ಒಂದೊಂದು ಕವನವೂ ಒಂದೊಂದು ಹೊಸ ರೂಪ ಹೊಸ ವಿಚಾರ ತೋರಿಸುತ್ತದೆ. ಈ un-predictabiliy (ಅನಿರೀಕ್ಷಿತತೆ) ಬ್ಯಾಂಟೆಲ್‌ಮನ್ನರ ಕಾವ್ಯದ ಶ್ರೇಷ್ಠತಮ ಗುಣ. ಅವರು ಯಾವ ವಿಷಯದ ಮೇಲೆ ಕವಿತೆ ಬರೆದಿದ್ದಾರೆಂಬುದು ಅವರ ಕವಿತೆಯನ್ನು ಪೂರ್ತಿ ಓದಿ ಮುಗಿಸಿದ ಮೇಲೆಯೇ ತಿಳಿಯುತ್ತದೆ. ಇದಕ್ಕೆ ಒಂದು ಅತಿ ಶ್ರೇಷ್ಠ ಉದಾಹರಣೆ ಇಲ್ಲಿ ಕೊಡುತ್ತೇನೆ :

One a. m-

Listen to Time
Old eater at his fruit
Spitting seeds, the brute
Who has no brain or rhyme
How artfully he moves
Cat pawing thru a clock
And never stops to talk
But purringly he proves
With so much sound-no more
Than if you strain an ear
At one a. m you hear—
The shutting of his jaw.

ಕಾವ್ಯದ ಈ ಅಂತರ್ ಭೇದ್ಯತೆ ಇಝೆಕಿಯಲರಲ್ಲಿ ಕಾಣಸಿಗುವದಿಲ್ಲ. ಇದು ಹಾಸ್ಯವನ್ನು ಮೀರಿದ ಗಂಭೀರತೆ. ಕೇವಲ ಒಂದು ಮುಕ್ತಕ ಕವನ ಅಥವಾ ಒಂದು ಚಮತ್ಕಾರವೆಂದು ಕಾಣುವ ಈ ಕವನದ ಭಯಾನಕತೆಯನ್ನು ತಿಳಿಯಬೇಕಾದರೆ ಒಂದು ಗಂಟೆಗೆ ಹುಟ್ಟುವ ಮನುಷ್ಯನ ಸ್ಮಶಾನವೈರಾಗ್ಯವನ್ನು ನೆನೆಯಬೇಕು. ಬ್ಯಾಂಟೆಲ್‌ಮನ್ನರ Graffiti (1964) ಎಂಬ ಪ್ರಥಮ ಸಂಕಲನದಲ್ಲಿ ಬಂದ ಕವಿತೆ ಇದು. ಇತ್ತೀಚೆಗೆ ಹೆಚ್ಚು ವಿಸ್ತೃತ ಅನುಭವದ Man's Fall and Woman's Fall-out (1966), Kanchenjunga (1967) ದಂಥ ಕವನಗಳನ್ನು ಬರೆದಿದ್ದಾರೆಯಾದರೂ, ಅವರ ಈ ಮೊದಲಿನ ಕವನಗಳನ್ನು ನಾನು ಬಹುವಾಗಿ ಮೆಚ್ಚಿದ್ದೇನೆ. ದುರ್ದೈವದಿಂದ ಇವರ ಮೇಲೆ ಸಮರ್ಥ ವಿಮರ್ಶೆಯನ್ನು ಯಾರೂ ಬರೆದಿಲ್ಲ. ಇಂದಲ್ಲ ನಾಳೆ ಇವರ ಯೋಗ್ಯತೆಯನ್ನು ನಾಡು ಅರಿಯಬೇಕಾದೀತು. ಇವರ ಬಗ್ಗೆ ನನಗೆ ಹೆಚ್ಚಿನ ಮಾಹಿತಿಯಿಲ್ಲವೆಂದು ವಿಷಾದದಿಂದ ಹೇಳಬೇಕು.

ಕಮಲಾ ದಾಸ್

ಈ ಕವಯಿತ್ರಿ ದಿಲ್ಲಿಯಲ್ಲಿ ಇರುತ್ತಾರೆಂದು ಕೇಳಿದ್ದೇನೆ. ಇವರ Summer in Calcutta ಎಂಬ ಪ್ರಥಮ ಸಂಕಲನವೇ ಇವರಿಗೆ ಕೀರ್ತಿ ತಂದಿತು. ಇತ್ತೀಚೆಗೆ Descendants ಎಂಬ ಸಂಕಲನ ಪ್ರಕಟವಾಗಿದೆ. ಲೈಂಗಿಕ ಜೀವನದ ನಿರಾತಂಕ ತೋಕದಲ್ಲಿ ಹೊಸ ಹೊಸ ವಿನ್ಯಾಸಗಳನ್ನು ಹುಟ್ಟಿಸಬಲ್ಲ ಈ ಕವಯಿತ್ರಿ ತನ್ನ ಇಂಗ್ಲೀಷನ್ನು ಭಾರತೀಯವೆಂದು ಕರೆದಿರುವಳು. ಇವಳ ಕಾವ್ಯದ ಮುಖ್ಯ ಲಕ್ಷಣವೆಂದರೆ ಉತ್ಕಟತೆ. ಆದರೆ ಈ ಏಕಮುಖಿ ಉತ್ಕಟತೆಯೊಳಗಿಂದ ಪಾರಾಗಿ ವೈವಿಧ್ಯವನ್ನು ಹೇಗೆ ಪಡೆದಾಳೆಂಬುದನ್ನು ನೋಡಬೇಕಾಗಿದೆ. ಇವಳ ಮೇಲೆ ದೇವೇಂದ್ರ ಕೋಹಿಲಿ Virgin Whiteness ಎಂಬ ವಿಮರ್ಶಾತ್ಮಕ ಪ್ರಬಂಧ ಬರೆದಿರುವರು.

ಎಸ್. ಶಾಂತಿ

ಇವರು ತೀರ ಇತ್ತೀಚೆಗಿನವರು. ವ್ಯಂಗ, ಹಾಸ್ಯ, ಕ್ಷಾತ್ರ, ಇವುಗಳ ಸಂಭವನೀಲವ ಇವರ ಕಾವ್ಯದಲ್ಲಿ ಸಿಕ್ಕುತ್ತದೆ. Lamplight and the Sun ಎಂಬ ಸಂಗ್ರಹವು ಅವರಿಗೆ ಕೀರ್ತಿ ತರುವುದರಲ್ಲಿ ಸಂದೇಹವಿಲ್ಲ.

ಇವರಲ್ಲದೆ ಪ್ರದೀಪ ಸೇನ, ಪಾರ್ಥಸಾರಥಿ, ಲೀಲಾ ಧರ್ಮರಾಜ, ಆದಿಲ್ ಜಸಾವಾಲಾ, ಕೆಡಿ, ಕಾತ್ರಕ, ರಾಘವೇಂದ್ರರಾವ್, ಶ್ರೀಶ ನಂದಿ, ಇಂಥವರಲ್ಲಿ ಹೊಸ ಹೊಸ ಒಲವುಗಳು ಕಾಣಿಸುತ್ತಿದ್ದು ಇವರ ಬೆಳವಣಿಗೆಯನ್ನು ಇನ್ನೂ ನೋಡಬೇಕಾಗಿದೆ. ಇವರಲ್ಲಿ ಕೆಲವರು ಭಾಷಾಪ್ರಭುತ್ವವುಳ್ಳವರು; ಕವನ ರಚನೆಯ ಸಾಮರ್ಥ್ಯಕ್ಕಿಂತ ಇನ್ನೇನಾದರೂ ಇವರಲ್ಲಿ ಉಂಟೊ, ನೋಡಬೇಕಾಗಿದೆ. ಸೇನ್, ನಂದಿ, ಕಾತ್ರಕ, ರಾಘವೇಂದ್ರರಾಯರು ಈ ವಿಷಯಕ್ಕೆ ಹೆಚ್ಚು ವಿಶ್ವಾಸ ಹುಟ್ಟಿಸಿದ್ದಾರೆ ಉಳಿದವರು ಓದಿ ಬೆಳವಣಿಗೆಯಲ್ಲಿದ್ದಾರೆ. ಪಾರ್ಥಸಾರಥಿ

ಯುವಕರ ಬೆಳವಣಿಗೆಗೆ ತುಸು ಒಣಗಿದಂತಾಗಿದೆ ಯೆಂಬುದು ದೌರ್ಭಾಗ್ಯ. ಅವರ ವೀಕ್ಲಿಯಲ್ಲಿ ಪ್ರಕಟವಾದ ಹಳೆಯ ಕವನಗಳ ಒಗರು ಇತ್ತೀಚೆಗೆ ಬತ್ತಿದಂತೆ ತೋರುತ್ತದೆ. ಜೀವ ಪಟೇಲರಂತೆ ಜಸಾವಾಲಾ ಅಷ್ಟಿಷ್ಟಕ್ಕೆ ಕಂಬನಿ ಮಿಡಿಯುವ ಚಟವುಳ್ಳವರು. ಪ್ರೀತೀಶ ನಂದಿಯವರ ಬುದ್ಧಿಪ್ರಧಾನತೆ ರಸಾಸ್ವಾದನೆಗೆ ತುಸು ಅಡ್ಡವಾಗುತ್ತದೆ.

ಪ್ರಸ್ತುತ ಲೇಖಕನು ಇಂಗ್ಲೀಷಿನಲ್ಲಿ ಕಾವ್ಯ ರಚಿಸಿದ್ದರೂ ಈ ಯಾವ ಗುಂಪಿನಲ್ಲಿಯೂ ಹೊಂದಿಕೆಯಾಗುವ ಇಚ್ಛೆ ಅವನಲ್ಲಿ ಇಲ್ಲವು. ತಾನು Indian ಕವಿಯೇ ಹೊರತು Indo-Anglian ಅಲ್ಲವೆಂದು ಅವನ ಅರಿಕೆ ಯಾದ್ದರಿಂದ ಇಲ್ಲಿ ಅವನಿಗೆ ಸ್ಥಾನವಿಲ್ಲ. ಇದನ್ನು ವಿಷಯವೆಂದು ಯಾರೂ ತಿಳಿದುಕೊಳ್ಳಬಾರದೆಂದು ಅರಿಕೆ. ಪ್ರೊ. ಮೆನೇಝಿಸರ ಗರಡಿಯಲ್ಲಿ ಬೆಳೆದವನಿವನು.

ಕೆಲವು ಸಮಸ್ಯೆಗಳು

ಟಾಗೋರ, ಅರವಿಂದ, ಸರೋಜಿನಿ ಇವರ ಹಾಗೂ ನೂತನ ಕವಿಗಳ ಮಧ್ಯದಲ್ಲಿ ಹುಟ್ಟಿದ ಉತ್ತಮ ಕಾವ್ಯಕ್ಕೆ ಯೋಗ್ಯ ವಿಮರ್ಶಕರು ಇಲ್ಲದ ಮೂಲಕ ತಕ್ಕ ವಿವೇಚನೆ ದೊರಕಿಲ್ಲ ಎಂದು ಹೇಳಬೇಕು. ಕೇ. ಡಿ. ಸೇಠ್ನಾ, ಅರ್ಮಾಂಡೊ ಮೆನೇಝಿಸ್, ಗೋಕಾಕ, ಹರೀಂದ್ರನಾಥ ಚಟ್ಟೋಪಾಧ್ಯಾಯ, ಅಂಥವರ ಬಗ್ಗೆ ನವ ವಿಮರ್ಶಕರು ಹೆಚ್ಚು ಬರೆದಿಲ್ಲ. ಸ್ವಾತಂತ್ರ್ಯೋತ್ತರ ಸಮಯದಲ್ಲಿ ಇವರಿಂದ ಉತ್ತಮ ಕಾವ್ಯ ಬರೆಯಲ್ಪಟ್ಟಿದೆ. ಅದಕ್ಕೆ ತಕ್ಕ ವಿಮರ್ಶೆ ಇನ್ನೂ ಹುಟ್ಟಬೇಕಾಗಿದೆ. ಆದರೆ ಕನ್ನಡದಲ್ಲಿ ಹುಟ್ಟಿದ ಪರಿಸ್ಥಿತಿ ಇಲ್ಲಿಯೂ ಉಂಟು. ಹೇಗೆ ನವ್ಯರ ಮೇಲೆಯೇ [ಅವರ ಸೃಜನಶೀಲ ಕೃತಿಗಳು ಹೆಚ್ಚು ಇರದಿದ್ದರು ಕೂಡ] ವಿಮರ್ಶೆಯು ಕನ್ನಡದಲ್ಲಿ ಹೆಚ್ಚಾಗಿದೆಯೋ ಹಾಗೆಯೇ ಇಂಗ್ಲೀಷಿನಲ್ಲಿ ಹೆಚ್ಚು ಪ್ರಮಾಣದ ಮೇಲೆ ಆಗಿದೆ. ಭಾರತಿ ಸಾರಾಭಾಯಿಯವರ ಗೀತನಾಟಕಗಳ ಬಗ್ಗೆ ಇತ್ತೀಚೆಗೆ ಅಭ್ಯಾಸ ನಡೆಯುತ್ತಿದ್ದುದು ಸಂತೋಷದ ಮಾತು.

ಇತರ ರೂಪಗಳು

ಕಾದಂಬರಿ ರೂಪದಲ್ಲಿ ಕೆಲವು ಭಾರತೀಯರು ಗಣನೀಯ ಯಶಸ್ಸು ಪಡೆದಿದ್ದಾರೆ. ಹಾಸನ ರಾಜಾರಾಯರ The Serpent and the Rope ಹಾಗೂ Cat and Shakespeare ಈ ಕಾದಂಬರಿಗಳು ಭಾರತೀಯತ್ವದಿಂದ ಓತಪ್ರೋತ ತುಂಬಿ ತುಳುಕುತ್ತಿದ್ದುದು ಅವರ ನಿರೂಪಣ ರೀತಿಯ ಬಗ್ಗೆ ಆದರ ವ್ಯಕ್ತವಾಗಲ್ಪಟ್ಟಿದೆ. ಅರ್ಥರ್ ಲಾಲರ House at Adampur ಎಂಬ ಕಾದಂಬರಿ ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ಚಂದವಾಗಿ ಬರೆಯಲ್ಪಟ್ಟಿದೆ. ಖುಶವಂತಸಿಂಗರ Train To Pakistan ಕಾದಂಬರಿ ವಿಭಜನೆಯ ಕಟು ದಿನಗಳ ಚಿತ್ರಣ. ಇವರೆಲ್ಲರಿಗಿಂತ ಜನಪ್ರಿಯರಾಗಿ ರಾಷ್ಟ್ರೀಯ-ಅಂತಾರಾಷ್ಟ್ರೀಯ ಕೀರ್ತಿ ಪಡೆದವರು ಮನೋಹರ ಮಾಳಗಾಂವಕರ. ಅವರ Princes ಕಾದಂಬರಿಯನ್ನು ಶಂಕರ ಪಾಟೀಲರು ಕನ್ನಡಕ್ಕೆ ಅನುವಾದಿಸಿರುವರು. ಅಲ್ಲದೆ A Bend in the Ganges, ಮುಂತಾದ ಅವರ ಕಾದಂಬರಿಗಳು ಪ್ರಭಾವಶಾಲಿಯಾಗಿವೆ. ಬಿ. ರಾಜನ್ ಬರೆದ The Dark Dancer ಕಾದಂಬರಿಯಲ್ಲಿ ತುಸು ಮಟ್ಟಿಗೆ ಕಥನಶೈಲಿಯಲ್ಲಿ ಗುಣಗಳು ಕಂಡರೂ ಅವೆಲ್ಲ ಎರಡನೆಯ Too long in the West ದಲ್ಲಿ ಮರೆಯಾಗಿವೆ. ನಿರೂಪಣಶೈಲಿಯಲ್ಲಿ ಸ್ವಾತಂತ್ರ್ಯವನ್ನು ಪಡೆದು ಯಶಸ್ವಿ ಪ್ರಯೋಗಶೀಲತೆಯನ್ನು ತೋರಿದವರು ಜಿ. ವಿ. ದೇಸಾನಿ. All About H. Hatterr ಎಂಬ ಕಾದಂಬರಿಯ ನಂತರ ಅಷ್ಟೊಂದು ದೊಡ್ಡ ಕೆಲಸ ಇವರಿಂದ ಆಗಿಲ್ಲವೆಂದೇ ಹೇಳಬೇಕು. ಎಲ್ಲಕ್ಕೂ ಯಶಸ್ವಿ ಕಾದಂಬರೀಕರ್ತರೆಂದರೆ ಶಾಂತಾ ರಾಮರಾವ್. ಇವರು ರಚಿಸಿದ Remember the House ಅನ್ನು modern classic (ಸಿದ್ಧ ಕೃತಿ) ಎಂದು ಪರಿಗಣಿಸಬೇಕೆಂದು ನನ್ನ ವೈಯಕ್ತಿಕ ಅಭಿಪ್ರಾಯ. ಆದರೆ ಇದಕ್ಕೆ ಸದ್ಯಕ್ಕೆ ಹೆಚ್ಚಿನ ಬೆಂಬಲವಿಲ್ಲ. ಕಮಲಾ ಮಾರ್ಕಾಂಡೇಯ ಎಂಬ ಲೇಖಕಿಯ ಕಾದಂಬರಿಗಳು ಭಾರತದ ಬಡತನದ ಬಗ್ಗೆ ಅಯಥಾರ್ಥ ಉಗ್ರ ಚಿತ್ರಗಳನ್ನು ಕೊಡುವದರಿಂದ ಪಾಶ್ಚಾತ್ಯರಲ್ಲಿ ಕೀರ್ತಿ ಪಡೆದಿವೆ. Nectar In the Sieve ಎಂಬ ಕಾದಂಬರಿ ಇಂಥ ಹೆಸರು ಪಡೆದಿದೆ. ಪ್ರಾವರ್ ಝಬ್ವಾಲಾರ ಕಾದಂಬರಿಗಳೂ ಸ್ವಾತಂತ್ರ್ಯೋತ್ತರ ಬಿಳಿ ಕಾಲರ್ ಜೀವನ ಚಿತ್ರಿಸುತ್ತವೆಯಾದ್ದರಿಂದ ಕೀರ್ತಿ ಪಡೆದಿವೆ [ಈ ಮಹಿಳೆ ಜನ್ಮತಃ ಭಾರತೀಯಳಲ್ಲ]. ಆದರೆ ಈ ವಿಷಯದಲ್ಲಿ "ರಂಗನಾಯಕಿ"ಯಂಥ ಕಾದಂಬರಿಯನ್ನು ಓದಿದ ಕನ್ನಡಿಗರಿಗೆ ಹೆಚ್ಚಿನ ಗುಣ ದೊರಕುವಂತಿಲ್ಲ. ಮುಲ್ಕರಾಜ ಆನಂದರೂ ಆರ್. ಕೆ. ನಾರಾಯಣರೂ ಬರೆಯುತ್ತಲೇ ಇದ್ದಾರೆ. ಇದರಲ್ಲಿ ಹೆಚ್ಚಿನ ಬದಲಾವಣೆ ತೋರುವದಿಲ್ಲ. ಸಮಯಶಸ್ಸು ಕಾಣಬಹುದು. ಭವಾನಿ ಭಟ್ಟಾಚಾರ್ಯರು ಕಮಲಾ ಮಾರ್ಕಾಂಡೇಯರ ರೀತಿಯಲ್ಲೇ ತುಸು ಕಮ್ಯೂನಿಸ್ಟ್ ರೀತಿಯ ಕತೆಗಳನ್ನು ಬರೆದಿರುವರು. ಮಧ್ಯಮವರ್ಗೀಯ ಬಂಗಾಲೀ ಜೀವನ ಚಿತ್ರಿಸುವ ಅನಿತಾ ದೇಸಾಯಿ (Crv, the Peacoak) ಹಾಗೂ ಮುಸಲ್ಮಾನ ಮಧ್ಯಮವರ್ಗೀಯ ಜೀವನ ಚಿತ್ರಿಸುವ ಅತಿಯಾ ಹುಸೇನ (Sunlight On A Broken Column) ಇತ್ತೀಚೆಗೆ ಹೆಸರು ಪಡೆದಿರುವರು. ಡಾ. ನಾರಾಯಣ ಮೆನನ್ ಭಾಷಾಂತರಿಸಿದ Chemmeen ಎಂಬ ಮಲೆಯಾಳಿ ಕತೆಯ ಭಾಷಾಂತರ ಹಾಗು ಕೆಲವು ಬಂಗಾಲೀ ಭಾಷಾಂತರಗಳು ಈ ಕಲೆಯ ಶ್ರೇಷ್ಠ ಉದಾಹರಣೆಗಳಾಗಿವೆ.

ವಿಮರ್ಶೆ

ವಿಮರ್ಶೆಯ ವಿಷಯದಲ್ಲಿ ಆಂಗ್ಲ ಭಾರತೀಯನ ಹುಕ್ಕಲುತನ ಇನ್ನೂ ಹೋಗಿಲ್ಲ. ಭಾರತೀಯ ವಿಮರ್ಶಕರು ಪ್ರಮುಖವಾಗಿ ಪಾಶ್ಚಾತ್ಯ ದ್ವಿತೀಯ ಶ್ರೇಣಿಯ ಲೇಖಕರ ಮೇಲೆ ಬಾಯಿ ಚಪ್ಪರಿಸುತ್ತ ವಿಮರ್ಶೆ ಬರೆಯುವದೇ ಹೆಚ್ಚು. ಆದರೆ ಇತ್ತೀಚೆಗೆ ಸ್ವತಂತ್ರ ವಿಚಾರದ ಹಲವಾರು ವಿಮರ್ಶಕರು ಮುಂದೆ ಬಂದಿರುವರು. ಶಿಶಿರಕುಮಾರ ಘೋಷ, ಪಿ. ಲಾಲ, ಸಿ. ಡಿ. ನರಸಿಂಹಯ್ಯ, ಇವರು ಈ ವಿಷಯದಲ್ಲಿ ಪ್ರಮುಖರು. ಇದಲ್ಲದೆ ಇನ್ನೂ ಹಲವಾರು ವಿಮರ್ಶಕರು ಉತ್ತಮ ವಿಮರ್ಶೆ ರಚಿಸಿರುವರು. ಆದರೆ ಬಹ್ವಂಶದಲ್ಲಿ ವಿಮರ್ಶೆಯಲ್ಲಿ ಭಾರತೀಯತ್ವ

ವಿಲ್ಲ. ಪರಕೀಯರು ಅಳತೆಗೋಲುಗಳನ್ನೇ ಆಧಾರವಾಗಿಟ್ಟುಕೊಂಡು ಕೆಲವು ವಿಮರ್ಶೆ ಬರೆಯಲ್ಪಟ್ಟಿದೆ. ಅರವಿಂದರ ವಿಮರ್ಶೆಯು ಮಟ್ಟ ಇನ್ನೂ ಬಂದಿಲ್ಲ. ಆದರೆ ವಿಶ್ವವಿದ್ಯಾಲಯಗಳಲ್ಲಿ ಇತ್ತೀಚೆಗೆ ಆಂಗ್ಲ ಭಾರತೀಯ ಸಾಹಿತ್ಯವನ್ನು ಪಠ್ಯವಾಗಿ ಮಾಡಿದ್ದರಿಂದ ಅಭ್ಯಾಸೀ ವಿಮರ್ಶೆ ವಿಪುಲವಾಗಿ ಬರತೊಡಗಿದ್ದು, ಈ ಮಾರ್ಗದಲ್ಲಿ ಪ್ರೊ. ಎಂ. ಕೆ. ನಾಯಿಕ್. ಪ್ರೊ. ದಾಮೋದರ ಠಾಕೂರ, ಪ್ರೊ. ಕಂಟಕ್, ಪ್ರೊ. ಮೈನಿ, ಅಲ್ಲದೆ ತರುಣ ವಿಮರ್ಶಕರಾದ ತಾರಾನಾಥ, ಕೃಷ್ಣಮೂರ್ತಿ, ಇಂಥವರನ್ನೂ ನೆನೆಯಬಹುದು. ಆದರೆ ಯಾರಲ್ಲಿಯೂ ಸ್ವಾತಂತ್ರ್ಯಪೂರ್ವ ಪೀಳಿಗೆಯ ಧೈರ್ಯ ಸಾಹಸಗಳಿಲ್ಲವು. ದಿಲ್ಲಿಯ ಕೃಷ್ಣಚೈತನ್ಯ (ಕೆ. ಕೆ. ನಾಯರ್) ಇವರೊಬ್ಬರನ್ನು ಮಾತ್ರ ಸ್ವಾತಂತ್ರ್ಯೋತ್ತರ ವಿಮರ್ಶಕರಲ್ಲಿ ನಾವು ಅಭಿಮಾನದಿಂದ ಎತ್ತಿತೋರಿಸಬಹುದು. ದುರ್ದೈವದಿಂದ ಇವರಿಗೆ ಆಂಗ್ಲ-ಭಾರತೀಯ ಸಾಹಿತ್ಯದ ಬಗ್ಗೆ ಆದರ ಹೆಚ್ಚು ಇಲ್ಲ. ಮಹಾರಾಷ್ಟ್ರದ ನವ್ಯಕವಿ ಮರ್ಢೇಕರರು ಸೌಂದರ್ಯಶಾಸ್ತ್ರಕ್ಕೆ ಹೊಸ ಕೊಡುಗೆ ಕೊಟ್ಟಿರುವರೆಂದು ಹೇಳಲಾಗಿದೆ. ಆದರೆ ನಾನಿನ್ನೂ ಅವರ ಗದ್ಯ ಗ್ರಂಥಗಳನ್ನು ಓದಿಲ್ಲ. ಡಾ. ಶ್ರೀನಿವಾಸ ಅಯ್ಯಂಗಾರ್. ಶ್ರೀಮತಿ ಪ್ರೇಮಾ ನಂದಕುಮಾರ್ (ಅವರ ಮಗಳು) ಆಂಗ್ಲ ಭಾರತೀಯ ಸಾಹಿತ್ಯದ ಮೇಲ್ವಿಚಾರಕರಾಗಿ ಪ್ರೀತಿಯಿಂದ ಸಲುಹುತ್ತಿರುವರು. ಪ್ರೊ. ಅರ್ಮಾಂಡೋ ಮೆನೇಝಿಸ್ ಎಷ್ಟು ಉತ್ತಮ ವಿಮರ್ಶಕರೆಂಬುದು ಅವರ ಇತ್ತೀಚೆಗಿನ ಫ್ರೆಂಚ್ ಕವಿ ಬಾದಲೇರನ ಅಭ್ಯಾಸದಿಂದ ಗೊತ್ತಾಗುತ್ತದೆ. ಆದರೆ ಇಂಥವರ ವಿಮರ್ಶಾ ಕೃತಿಗಳು ಪುಸ್ತಕರೂಪವಾಗಿ ಬಾರದ್ದು ದೊಡ್ಡ ಹಾನಿ. ನೀರದ ಚೌಧುರಿಯವರ ಅತಿ ಬುದ್ಧಿಮಂತಿಕೆಯನ್ನು ದೂರದಿಂದ ಮೆಚ್ಚಬಹುದೇ ಹೊರತು ಅವರ ಮನಸ್ಸನ್ನು ಅಳೆಯುವದು ಆಗದ ಮಾತು.

ಅಧ್ಯಾತ್ಮ ಸಾಹಿತ್ಯ

ಈ ವಿಷಯದಲ್ಲಿ ಭಾರತೀಯರು ಕೊಟ್ಟ ಕೊಡುಗೆಯೇ ಕೊನೆವರೆಗೆ ನಿಲ್ಲುವಂಥದು. ಆದರೆ ಇದರ ಕಡೆಗೆ ವಿಮರ್ಶಕರು ಲಕ್ಷ್ಯ ಹಾಕಿಲ್ಲ. ಹಾಗೆಯೇ ಗಾಂಧೀಸಾಹಿತ್ಯವನ್ನು ಆಧುನಿಕ ಮನಸ್ಸಿಗೆ ಒಪ್ಪಿಗೆಯಾಗುವಂತೆ ಚರ್ಚಿಸುವ ಕೆಲಸವನ್ನೂ ಬಹಳ ಕಡಿಮೆ ಜನರು ಮಾಡಿರುವರು.

ಉಪಸಂಹಾರ


ಆಂಗ್ಲ ಭಾರತೀಯ ಸಾಹಿತ್ಯಕ್ಕೆ ಭವಿಷ್ಯವಿದೆಯೇ?— ಇದೆ. ಆದರೆ ಅದರ ಮೊದಲ ಹೆಜ್ಜೆಯೇ ತಪ್ಪು ಬಿದ್ದಿದೆ. ಅದಕ್ಕಾಗಿ ತಡವರಿಸುತ್ತಿದೆ. ಹೆಚ್ಚು ಜನರು ಇನ್ನು ಮೇಲೆ ತಮ್ಮ ತಮ್ಮ ಭಾಷೆಗಳಲ್ಲಿ ಬರೆಯತೊಡಗುವರು. ಬೇರಿಲ್ಲದ ಮೂಲಂಗಿಗಳು ಇಂಗ್ಲೀಷಿನಲ್ಲಿ ಬರೆಯುವ ಹವ್ಯಾಸಕ್ಕೆ ಬೀಳುವವು. ಒಂದು ಕಾಲಕ್ಕೆ ಭಾರತದ ನೆಲದ ಗುಣವುಳ್ಳವರೇ ಇಂಗ್ಲೀಷಿಗೆ ಕೈ ಹಾಕುತ್ತಿದ್ದರು. ಆದರೆ ಇದೀಗ ಭಾಷಾಭಿಮಾನ



ಸರಕಾರಿ ಆಸ್ಪತ್ರೆಯಲಿ ಹಾಲು ಕಿತ್ತಿ
ನರಸಮ್ಮಗಾಗುವದು ಮಧ್ಯಾಹ್ನ ಬುತ್ತಿ
ಬೆಳ್ಗೆ ಬ್ರೆಡ್ಡು ಹಣ್ಣು ಸಂಜೆಗೆ ಭರ್ತಿ ಒಂದು
ಗೊರಕೆ ಹೊಡೆವಳು ಡ್ಯೂಟಿ ವೇಳೆಯಲಿ ಬಂದು
— ಎಂ. ಗೋವಿಂದ

ಹೆಚ್ಚಾಗಿ ಅಭಿಮಾನಕ್ಕಾಗಿ ಬರೆಯುವವರು ಹೆಚ್ಚಾಗಿದ್ದಾರೆ. ಇವೆಲ್ಲವೂ ಆಂಗ್ಲ-ಭಾರತೀಯ ಸಾಹಿತ್ಯಕ್ಕೆ ಕುಂದು ತರಬಹುದು ಆದಾಗ್ಯೂ ಈ ಸಾಹಿತ್ಯದ ಭವಿಷ್ಯದ ಬಗ್ಗೆ ಸಂದೇಹವಿಲ್ಲ. ಕನ್ನಡದಲ್ಲಿ ನವ್ಯಸಾಹಿತ್ಯದಲ್ಲಿ ಆದ ಅನಾಹುತವೇ ಆಂಗ್ಲ-ಭಾರತೀಯ ಸಾಹಿತ್ಯದಲ್ಲೂ ಆಗಿದೆ. ಒಂದು ಪುಸ್ತಕ ಹುಟ್ಟುವಷ್ಟರಲ್ಲಿ ಅದರ ಮೇಲೆ ಐವತ್ತು ವಿಮರ್ಶೆ ಬರುತ್ತವೆ. ಚರ್ಚೆಯಾಗುತ್ತದೆ. ಇದರಿಂದ ಕಲೆಗಾರನ ಸಹಜ ಬೆಳವಣಿಗೆಗೆ ಅಡ್ಡವಾಗುತ್ತದೆ. ಆದಾಗ್ಯೂ, ಆಂಗ್ಲ ಭಾಷೆಯಲ್ಲಿ ಭಾರತೀಯರು ಬರೆಯುವದು ಸ್ವಾಭಾವಿಕ. ಹೆಚ್ಚು ಪ್ರಮಾಣದ ಮೇಲೆ ಸೃಜನಶೀಲತೆಯಲ್ಲಿ ದ್ವಿಭಾಷಿತ್ವ—ತ್ರಿಭಾಷಿತ್ವಗಳು ಬರುವ ಸಂಭವವೂ ಹೆಚ್ಚಾಗಿದೆ. ಹಲವು ಇಂಡೊ—ಆಂಗ್ಲಿಯನ್‌ರು ದ್ವಿಭಾಷಿತ್ವವನ್ನು ಒಪ್ಪಿಕೊಳ್ಳುವದಿಲ್ಲ (ಅಂದರೆ ಯಾವುದಾದರೂ ಒಂದೇ ಭಾಷೆಯಲ್ಲಿ ಕಲಾವಿದ ತನ್ನ ಸೃಜನಶೀಲತೆಯ ಪೂರ್ಣ ಅಭಿವ್ಯಕ್ತಿ ಪಡೆಯಬಲ್ಲನೆಂದೂ ತನಗೆ ಬೇಕಾದ ಒಂದು ಭಾಷೆಯನ್ನು ಆರಿಸಿಕೊಳ್ಳಲು ಅವನಿಗೆ ಸ್ವಾತಂತ್ರ್ಯವಿರಬೇಕೆಂದೂ ಇವರು ವಾದಿಸುತ್ತಾರೆ). ಆದರೆ ಇದು ತಪ್ಪು. ಕೆಲವು ಸ್ಫೂರ್ತಿರೂಪಗಳು ತಮ್ಮ ಉದಯದ ಜೊತೆಗೆ ತಮ್ಮ ಭಾಷೆಯನ್ನೂ ತರುತ್ತವೆ. ಒಂದು ವಿಚಾರ ಮಾತೃಭಾಷೆಯಲ್ಲಿ ಮೈದಳೆದು ಬಂದರೆ ಇನ್ನೊಂದು ಆಂಗ್ಲ ಭಾಷೆಯಲ್ಲಿ ಮೈದಳೆದು ಬರಬಹುದು. ಇನ್ನೊಂದು ಪ್ರೇಮಮಯ ಸನ್ನಿವೇಶ ಒಂದು ಗಝಲ್ ರೂಪವಾಗಿ ಹೊಳೆಯಬಹುದು. ಭಾರತೀಯಾಂಗ್ಲತ್ವವು ಯಾರ ಏಕಸ್ವಾಮ್ಯವಲ್ಲ, ಯಾರ ಮಾತೃಭಾಷಾಭಿಮಾನಜನ್ಯವಲ್ಲ; ಒಂದನ್ನು ಆರಿಸಿದ ಮೇಲೆ ಅದರಲ್ಲಿಯೇ ಎಲ್ಲ ವಿಚಾರ ಬರೆಯಬೇಕೆಂಬ ನಿಯಮವಿಲ್ಲ. ಎಲ್ಲವೂ ಸಮಾಂತರವಾಗಿ ಬೆಳೆಯಬಹುದು. ಇಂತು ಮಾತೃಭಾಷೆಯಲ್ಲಿ ಹೆಸರಾದ ಲೇಖಕರು ಭಾರತೀಯಾಂಗ್ಲ ಭಾಷೆಯಲ್ಲಿ ಹೆಸರಾದ್ದನ್ನೂ ನಾವು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ನೋಡುವ ಪ್ರಸಂಗ ಬರಬಹುದು.

ಭಾರತೀಯರು ಆಂಗ್ಲಭಾಷೆಯಲ್ಲಿ ಚೆನ್ನಾಗಿ ಅಭಿವ್ಯಕ್ತಿ ಪಡೆಯಬಲ್ಲರೆ? ಇದು ದಡ್ಡತನದ ಸಮಸ್ಯೆ. ಇಂದಿಲ್ಲ ನಾಳೆ ಭಾರತದ ತುಂಬೆಲ್ಲ Literary Agencyಗಳು ಹುಟ್ಟಿಕೊಂಡು ಭಾರತೀಯರು ಬರೆದ ಆಂಗ್ಲ ಕೃತಿಗಳಲ್ಲಿ ಒಳ್ಳೆಯವನ್ನು ಒಳ್ಳೆಯ ಭಾಷೆಯಲ್ಲಿ ತಿದ್ದಿ ತಿದ್ದಿ ಜಾಗತಿಕ ಓದುಗರ ಎದುರಿಗೆ ಚಂದರೂಪದಲ್ಲಿ ಇಡುವ ಕೆಲಸ ಶುರುವಾಗಿಯೇ ಆಗುತ್ತದೆ. ಇದಾದೊಡನೆ ಈ ಸಮಸ್ಯೆ ಎಷ್ಟು ಅನಾವಶ್ಯವೆಂಬುದರ ಅರಿಕೆಯೂ ಆಗುತ್ತದೆ. ಕಾವ್ಯದಲ್ಲಿ ಕದಾಚಿತ್ ಇದು ಶಕ್ಯವಾಗಲಿಕ್ಕಿಲ್ಲ. ಆದರೆ ಕಾದಂಬರಿ ಮುಂತಾದ ರೂಪದಲ್ಲಿ ಇಂದಿಲ್ಲ ನಾಳೆ ಈ ವ್ಯಾವಹಾರಿಕ ಸಂಸ್ಥೆಗಳು ತಮ್ಮ ವ್ಯಾವಹಾರಿಕ ಉದ್ದೇಶಗಳಿಗಾಗಿಯೇ ಕೆಲಸ ಮಾಡಿ ಇಂಥ ಚಿಲ್ಲರೆ ಸಮಸ್ಯೆಗಳಿಗೆ ಉತ್ತರ ಕೊಡಬಹುದು. ಇದರಲ್ಲಿ ನನಗಂತೂ ಯಾವ ಸಂದೇಹವಿಲ್ಲ.



೧೯೪೭ರ ನಂತರದ ಮರಾಠಿ ಸಾಹಿತ್ಯ ಕೆಲ ಪ್ರವೃತ್ತಿಗಳು

— ಡಾ. ಸದಾ ಕರ್ಹಾಡೆ

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮರಾಠಿ ಸಾಹಿತ್ಯ ಬೆಳೆದುಬಂದ ಬಗೆಯನ್ನು ಲೇಖಕರಿಲ್ಲಿ ನಿರೂಪಿಸಿದ್ದಾರೆ. ನವ್ಯತೆ ಮರಾಠಿ ಸಾಹಿತ್ಯದಲ್ಲಿ ಅನಿವಾರ್ಯ ಆವಶ್ಯಕತೆಯಾಗಿ ಬರದೆಯೆ ಪಾಶ್ಚಾತ್ಯರ ಅನುಕರಣ ಮೂಲದಿಂದ ಬಂತು; ಮಣ್ಣಿನ ಸಂಬಂಧವನ್ನೇ ಕಾಣದೆಯೆ ಅದು ಜನಮನವನ್ನು ತಲುಪದಾಗಿದೆ ಎನ್ನುತ್ತಾರೆ ಲೇಖಕರು.

ಅರ್ವಾಚೀನ ಮರಾಠಿ ವಾಙ್ಮಯದ ಮೊದಲನೇ ಪರ್ವವು ೧೮೭೪ ರಿಂದ ಪ್ರಾರಂಭವಾಯಿತೆನ್ನಬಹುದು. ಸುಮಾರು ಅದೇ ಕಾಲಕ್ಕೆ ಕೈ. ವಿಷ್ಣುಶಾಸ್ತ್ರಿ ಚಿಪಳೂಣಕರರು 'ನಿಬಂಧಮಾಲಾ' ಪ್ರಾರಂಭಿಸಿದರು. ಸ್ವದೇಶ, ಸ್ವಧರ್ಮ, ಸ್ವಭಾಷೆಗಳ ಬಗೆಗೆ ಸ್ವಾಭಿಮಾನವನ್ನು ಜಾಗ್ರತಗೊಳಿಸುವದೇ ಈ 'ನಿಬಂಧಮಾಲೆ'ಯ ಹಿರಿಯ ಗುರಿಯಾಗಿತ್ತು. ಆಗರಕರರ 'ಸುಧಾರಣಾವಾದ'ವೂ ಇದೇ ಕಾಲದ್ದು. ರೂಢಿ ಪರಂಪರೆಗಳ ದಾಸ್ಯತ್ವವನ್ನು ಕಿತ್ತಿ ಹಾಕಬೇಕು, ಅಂದರೇನೆ ಸಮಾಜಪುರುಷನ ವಿಕಾಸಕ್ಕೆ ದಾರಿ ಕಂಡೀತು; ಸಮತೆ, ಸ್ವಾತಂತ್ರ್ಯ, ವಿಶ್ವಬಂಧುತ್ವಗಳ ವಿಚಾರಪ್ರಣಾಲಿಯ ಪರಿಚಯ ಇವೆಲ್ಲ ಈ ಕಾಲದಲ್ಲಿಯೇ.

ಚಿಪಳೂಣಕರರ 'ನಿಬಂಧಮಾಲಾ', ಆಗರಕರರ 'ಸುಧಾರಣಾವಾದ' ಮತ್ತು ಈ ನವೀನ ವಿಚಾರಪ್ರಣಾಲಿ ಇವುಗಳ ಪ್ರೇರಣೆಯಿಂದಲೇ ೧೮೭೪ ರಲ್ಲಿ ಮಹಾರಾಷ್ಟ್ರದಲ್ಲಿ ವೈಚಾರಿಕ ಉತ್ಕ್ರಾಂತಿ ಪ್ರಾರಂಭವಾಯಿತು. ವೈಚಾರಿಕರಿಗೆ ಹಾಗೂ ಸಾಹಿತಿಗಳಿಗೆ ಹೊಸ ದೃಷ್ಟಿ ಪ್ರಾಪ್ತವಾಯಿತು. ಇಷ್ಟೇ ಅಲ್ಲ, ಪಾಶ್ಚಾತ್ಯ ಹಾಗೂ ಸಾಂಸ್ಕೃತ ವಾಙ್ಮಯಗಳ ಅಭ್ಯಾಸದಿಂದಲೂ ನವೀನ ದೃಷ್ಟಿ ಲಾಭವಾಯಿತು. ಅರ್ವಾಚೀನ ಮರಾಠಿ ಸಾಹಿತ್ಯದ ಪ್ರಥಮ ಪರ್ವ ಪ್ರಾರಂಭವಾಯಿತು. ನವೀನ ಜೀವನದೃಷ್ಟಿ ಮತ್ತು ನವೀನ ವಾಙ್ಮಯೀನ ದೃಷ್ಟಿಗಳು ಇದಕ್ಕೆ ಪ್ರೇರಕವಾದವು. ಆದ್ದರಿಂದ ಅರ್ವಾಚೀನ ಮರಾಠಿ ಸಾಹಿತ್ಯದ ಸ್ವರೂಪವು ಪ್ರಾಚೀನ ಸಂತ-ಕವಿಗಳ, ಪಂಡಿತ ಕವಿಗಳ, ಲಾವಣಿಕಾರ(ಶಾಹೀರ)ರ ಸಾಹಿತ್ಯಕ್ಕಿಂತ ಸಂಪೂರ್ಣ ಬೇರೆಯಾಗಿತ್ತು. ಮುಂದೆ ಜೀವನದೃಷ್ಟಿ-ಸಾಹಿತ್ಯದೃಷ್ಟಿಗಳಲ್ಲಿ ಮಾರ್ಪಾಡು ಕಂಡುಬಂದಂತೆಲ್ಲ ವಾಙ್ಮಯದ ಸ್ವರೂಪದಲ್ಲಿ ಪ್ರತ್ಯೇಕತೆ ಕಂಡುಬರಹತ್ತಿತು. ಅಂದರೆ ವೈಚಾರಿಕ ಉತ್ಕ್ರಾಂತಿಯ ಪ್ರಾರಂಭದ ಕಾಲದಲ್ಲಿ ಸಾಹಿತ್ಯವು ಸಮಾಜಪ್ರಬೋಧನ ಹಾಗೂ ಲೋಕಜಾಗ್ರತಿಯ ಕಾರ್ಯದಲ್ಲಿ ಪ್ರಭಾವಿ ಸಾಧನವೆಂದು ಭಾವಿಸಲಾಗುತ್ತಿತ್ತು. 'ವಿಧಿಯು ನಮಗೆ ಕೊಟ್ಟಿರುವ ಶಬ್ದಶಕ್ತಿಯ ಪ್ರಭಾವದಿಂದ ನಾವು ಜನಜಾಗ್ರತಿ ಮಾಡಿ ಜಗತ್ತನ್ನೇ ಬದಲಿಸಬಲ್ಲೆವು' ಎಂದು ಕೇಶವಸುತರು ಹಾಡಿದ್ದರಿಂದ ಶಬ್ದಶಕ್ತಿಯ ಬಗೆಗೆ ಜನತೆಯಲ್ಲಿ ತಿಳುವಳಿಕೆ ಅಧಿಕವಾಯಿತು.

ಅಧ್ಯಾತ್ಮ ಭಕ್ತಿರಸ

ಪ್ರಾಚೀನ ಸಾಹಿತ್ಯದಲ್ಲಿ ಅಧ್ಯಾತ್ಮಕ್ಕೆ, ತದನುಷಂಗಿಕವಾಗಿ ಬರುವ ಭಕ್ತಿರಸದ ಪರಿಪೋಷಣೆಗೆ ಪ್ರಾಧಾನ್ಯ ಹೆಚ್ಚು. ಅಧ್ಯಾತ್ಮ-ಭಕ್ತಿಗಳ ಅಧಿಷ್ಠಾನ ಪರಮೇಶ್ವರ. ಆದರೆ ವೈಚಾರಿಕ ಉತ್ಕ್ರಾಂತಿಯ ಕಾಲದಲ್ಲಿ ಆಧ್ಯಾತ್ಮ ವಿಕಾಸಕ್ಕಿಂತ ಭೌತಿಕ ವಿಕಾಸಕ್ಕೆ ಹೆಚ್ಚು ಪ್ರಾಧಾನ್ಯ ದೊರೆಯುತ್ತ ಹೋಯಿತು. ಪರಮೇಶ್ವರನಿಗಿಂತ ದೇಶ, ರಾಷ್ಟ್ರ, ಸಮಾಜ ಇವುಗಳಿಗೆ ಪ್ರಾಧಾನ್ಯ ಉಂಟಾಯಿತು

ಪ್ರಾಚೀನ ಕವಿಗಳು ಭಕ್ತಿ-ಮುಕ್ತಿ ಸಾಧನೆಗಾಗಿ ಕಾವ್ಯ ರಚಿಸಿದರೆ ವೈಚಾರಿಕ ಉತ್ಕ್ರಾಂತಿಯ ಕಾಲದಲ್ಲಿ ಸಾಹಿತ್ಯವು ಸಮಾಜೋನ್ನತಿ ಸಮಾಜಮುಕ್ತಿಗೆ ಒಂದು ಸಾಧನವೆಂದು ಬಗೆಯಲಾಗಿತ್ತು.

'ನಾವೇ ನಮ್ಮ ಕೃತಿಗಳಲ್ಲಿ ಸುಧೆಯನ್ನು ನೀಡಿ ಈ ಪೃಥ್ವಿಯನ್ನು ಸ್ವರ್ಗತುಲ್ಯನಾಗಿಸಲು ಹೆಣಗುತ್ತಿದ್ದೇವೆ' ಎಂದು ಕೇಶವಸುತರು ಆತ್ಮವಿಶ್ವಾಸ ಮೆರೆದರು. ಭೂಮಿಯನ್ನು ಸ್ವರ್ಗತುಲ್ಯವಾಗಿಸಲು ಬೇಕಾಗುವ ಸಾಮರ್ಥ್ಯವು ಸಾಹಿತ್ಯದಲ್ಲಿದೆ ಎಂಬ ಆ ಕಾಲದ ಭಾವನೆ ಗಮನಾರ್ಹ. ಅಂದಿನ ನಿಬಂಧ ವಾಙ್ಮಯವು ಲೋಕಜಾಗ್ರತಿ ಮೂಡಿಸಿತು; ಸಾಮಾಜಿಕ ರಾಜಕೀಯ ಜಾಗ್ರತಿಯನ್ನೂ ಸಾಧಿಸಿತು. ಹರಿಭಾವು ಆಪ್ಟೆಯವರ ಸಂಪ್ರದಾಯದಲ್ಲಿ ಬೆಳೆದು ಬಂದ ಕಾದಂಬರಿಕಾರರು ಈ ಕಾರ್ಯವನ್ನು ಮಾಡಿದರು. ಕೇಶವಸುತರ ಸಂಪ್ರದಾಯದ ಕವಿಗಳು ಅಂದಿನ ಸಮಾಜದ ಆಶೆ ಆಕಾಂಕ್ಷೆಗಳನ್ನು ಹಾಡಿದರು. ಪೌರಾಣಿಕ ಕಥೆಗಳ ಆಧಾರದಿಂದ ದೇಶದ ರಾಜಕೀಯ ಪರಿಸ್ಥಿತಿ ಚಿತ್ರಿಸುವ ನಾಟಕಗಳು ರಂಗಭೂಮಿಯ ಮೇಲೆ ಬಂದವು. ಸಾಹಿತಿಗಳು ಗತೇತಿಹಾಸದಿಂದ ಸ್ಫೂರ್ತಿ ಪಡೆದು ರಾಜಕೀಯ ಜಾಗ್ರತಿಯನ್ನುಂಟು ಮಾಡಿದರು. ಐತಿಹಾಸಿಕ ಕಾವ್ಯ, ನಾಟಕ ಕಾದಂಬರಿಗಳ ನಿರ್ಮಾಣವಾಯಿತು.

ಸಾಹಿತ್ಯವು ಕೆಲ ಅಂಶಗಳಲ್ಲಿ ಆ ಆ ಕಾಲದ ಪ್ರತಿಬಿಂಬ ಎಂದು ಹೇಳಬಹುದು. ಆದ್ದರಿಂದಲೇ 'ಸಾಹಿತ್ಯ ಜೀವನಕ್ಕೆ ಹಿಡಿದ ಕನ್ನಡಿ' ಎಂದೂ ಹೇಳುವುದುಂಟು. ವೈಚಾರಿಕ ಉತ್ಕ್ರಾಂತಿಯ ಕಾಲದಲ್ಲಿ ಇಂಥ ವಿಚಾರಗಳು ರೂಢವಾಗಿದ್ದವು

ಜೀವನಕ್ಕಾಗಿ ಕಲೆ

೧೯೪೭ ರ ನಂತರದ ಸಾಹಿತ್ಯದ ಒಲವು-ನಿಲುವುಗಳನ್ನು ಇಲ್ಲಿ ನಿರೂಪಿಸಲಾಗುವುದು. ಇದಕ್ಕೆ ಆವಶ್ಯಕ ಹಿನ್ನೆಲೆಯನ್ನು ಅರಿತುಕೊಂಡಿರಬೇಕಾಗುತ್ತದೆ. ಸಾಹಿತ್ಯವು ಸಮಾಜಪ್ರಬೋಧನ ಹಾಗೂ ಜನಜಾಗ್ರತಿ ಸಾಧನವಾಗಿತ್ತೆಂಬುದನ್ನು ಲಕ್ಷಿಸಬೇಕಾಗುತ್ತದೆ. ಸಾಹಿತ್ಯ ಸಮಾಜಗಳಲ್ಲಿಯ ಅಂದಿನ ಸಂಬಂಧವನ್ನೂ ಗಮನಿಸಬೇಕು. ಅಂತೇ ಜೀವನದರ್ಶನ, ಪ್ರಬೋಧನ, ಆನಂದನಿರ್ಮಿತಿ ಹೀಗೆ ತ್ರಿವಿಧ ಗುರಿ ಸಾಹಿತ್ಯಕ್ಕಿತ್ತು ಎಂದು ನಂಬ

ಲಾಗಿದೆ. ದೃಷ್ಟಿ ಬದಲಿಸಿದಂತೆ ಸಾಹಿತ್ಯವೂ ಬದಲಾಗುತ್ತ ಹೋಯಿತು ಎಂದು ಹೇಳಿದ್ದಾಗಿದೆ. ಜೀವನಜಾಗ್ರತಿಗಾಗಿ ಸಾಹಿತ್ಯ ಎಂದಿದ್ದ ವಿಚಾರವು 'ಜೀವನಕ್ಕಾಗಿ ಕಲೆ' ಎಂದು ಮಾರ್ಪಟ್ಟಿತು. ಆಗ ಕೂಡ ಸಾಹಿತ್ಯದ ತ್ರಿವಿಧ ಉದ್ದೇಶಗಳಲ್ಲಿ ಬದಲಾವಣೆ ಆಗಲಿಲ್ಲ. ನಂತರ 'ಕಲೆಗಾಗಿ ಕಲೆ' ಎಂಬ ವಿಚಾರಸರಣಿ ಪ್ರಾರಂಭವಾದನಂತರ ಸಾಹಿತ್ಯದ ತ್ರಿವಿಧ ಉದ್ದೇಶಗಳು ಹಿಂದೆ ಬಿದ್ದು 'ಆನಂದನಿರ್ಮಾಣವೇ ಲಲಿತ ಸಾಹಿತ್ಯದ ಹೆಗ್ಗುರಿ'ಯಾಯಿತು, ಆಗ ಕಲಾತ್ಮಕ ದೃಷ್ಟಿಯಿಂದಲೇ ವಾಙ್ಮಯ ಸ್ವರೂಪದ ಬಗ್ಗೆ ವಿಚಾರ ಪ್ರಾರಂಭವಾಯಿತು. ಸಾಹಿತ್ಯದ ತಂತ್ರಗಳ ಬಗೆಗೆ ಅಭ್ಯಾಸ ಅಗತ್ಯವಾಯಿತು. ಕೇಶವಸುತರ ಕಾಲದಲ್ಲಿ ನವೀನ ಕಾವ್ಯಪ್ರಕಾರ ರೂಢವಾಯಿತು. ಮುಂದೆ ರವಿಕಿರಣ ಮಂಡಳಿಯ ಕವಿಗಳು ಇದಕ್ಕೆ ವ್ಯವಸ್ಥಿತ ರೂಪವನ್ನಿತ್ತರು. ಹರಿಭಾವು ಅವರ ಕಾಲದಲ್ಲಿ ಮರಾಠಿ ಕಥೆ ಕಾದಂಬರಿಗಳಿಗೆ ತಂತ್ರ ಇರಲಿಲ್ಲ. ಫಡಕೆ, ಖಾಂಡೇಕರರ ಕಾಲದಲ್ಲಿ ಕಥೆ ಕಾದಂಬರಿಗಳಿಗೆ ತಂತ್ರ ಹುಟ್ಟಿತು. ನಾಟಕರಂಗದಲ್ಲಿ ಶೇಕ್ಸ್‌ಪೀಯರ್ ಪದ್ಧತಿಯು ಹಿಂದೆ ಬಿದ್ದು ಇಬ್ಸೆನ್ ಪ್ರಭಾವ ಕಂಡುಬರಹತ್ತಿತು.

ಪಾಶ್ಚಾತ್ಯರಿಂದ ಜೀವನಕ್ಕೆ ಹೊಸ ದೃಷ್ಟಿ ಲಭಿಸಹತ್ತಿತು. ಸಾಹಿತ್ಯದಲ್ಲಿಯೂ ಅವರ ಪ್ರಭಾವ ಕಂಡುಬರದಿರಲಿಲ್ಲ. ಹೊಸ ವಿಚಾರದೊಂದಿಗೆ ಸಾಹಿತ್ಯದ ಸ್ವರೂಪವೂ ಬದಲಾಗುತ್ತಿತ್ತು. ಸಮಾಜದ ಆಶೆ ಆಕಾಂಕ್ಷೆಗಳಿಗೆ ಅನುಗುಣವಾಗಿ ಸುಧಾರಣಾವಾದ, ಪುರೋಗಾಮಿವಾದ ಮತ್ತು ನಂತರ ಮಾರ್ಕ್ಸವಾದ ಬಂದವು! ಪಾಶ್ಚಾತ್ಯರ ವಾಙ್ಮಯ ತಂತ್ರಗಳ ಹೆಜ್ಜೆಗಳಲ್ಲಿಯೆ ಮರಾಠಿ ಸಾಹಿತ್ಯ ಬೆಳೆಯುತ್ತ ನಡೆಯಿತು. ಸಾಹಿತ್ಯದೊಂದಿಗೆ ಸಾಹಿತ್ಯ ವಿಮರ್ಶೆಯೂ ವಿಕಾಸ ಹೊಂದಿತು. ಇಲ್ಲಿ ಕೂಡ ಪಾಶ್ಚಾತ್ಯರ ಸಮೀಕ್ಷಾ [ವಿಮರ್ಶೆ] ತತ್ತ್ವಗಳನ್ನೇ ಅನುಸರಿಸಿದ್ದಾಯಿತು. ಇದರ ದೂರಗಾಮಿ ಪರಿಣಾಮಗಳನ್ನು ಇಂದಿನ ಸಾಹಿತ್ಯದಲ್ಲಿ ಕಾಣಬಹುದು.

ಅತ್ಯಾಧುನಿಕ ನವಸಾಹಿತ್ಯ

ಅರ್ವಾಚೀನ ಮರಾಠಿ ವಾಙ್ಮಯದ ಪ್ರಥಮ ಪರ್ವವು ೧೯೪೫ರಲ್ಲಿ ಕೊನೆಗೊಂಡಿತು. ನಂತರ ಅತ್ಯಾಧುನಿಕ ನವಸಾಹಿತ್ಯದ ದ್ವಿತೀಯ ಪರ್ವ.

ನವಸಾಹಿತ್ಯದ ಪರ್ವ ಪ್ರಾರಂಭವಾಗುವ ಕಾಲಕ್ಕೆ ಒಂದು ಜಾಗತಿಕ ಮಹತ್ವದ, ಇನ್ನೊಂದು ಭಾರತೀಯ ಮಹತ್ವದ ಘಟನೆ ಸಂಭವಿಸಿದವು. ಹಿರೋಶಿಮಾ-ನಾಗಾಸಾಕಿಗಳ ಮೇಲೆ ಅಣುಬಾಂಬು ಬಿದ್ದದ್ದು ಜಾಗತಿಕ ಘಟನೆಯಾದರೆ, ೧೯೪೭ ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತುದು ಎರಡನೇ ಘಟನೆ.

ಹಿರೋಶಿಮಾ-ನಾಗಾಸಾಕಿಯ ಪ್ರತಿಕ್ರಿಯೆ ಏನು? ಈ ವೈಜ್ಞಾನಿಕ ಕಟು ಸತ್ಯದ ತೀವ್ರ ಪರಿಣಾಮ ಜಗತ್ತಿನ ಎಲ್ಲ ವೈಚಾರಿಕರ ಮೇಲೆ ಆಗದಿರಲಿಲ್ಲ. ಮಾನವತೆಯ ಉದ್ಧಾರಕ್ಕಾಗಿ ವಿಜ್ಞಾನದ ಬೆನ್ನು ಹತ್ತಿದರೆ ಅದು ವಿಧ್ವಂಸಕ ಅಸ್ತ್ರವನ್ನು ನೀಡಿತು ಎಂಬ ಕೊರಗು ಎಲ್ಲರಿಗೆ. ವಿಜ್ಞಾನದ ಈ ಸಂಹಾರಶಕ್ತಿಯೆದುರು ಮಾನವೀ ಜೀವನ, ಅದರ ಶಾಶ್ವತ ಮೌಲ್ಯಗಳು ನಷ್ಟಪ್ರಾಯವಾದವು. ಸತ್ಯ ಶಿವ ಸುಂದರ ಈ ತ್ರಿಮೂರ್ತಿಗಳೂ ಈ ಕಟು ಸತ್ಯದಿಂದ ನಷ್ಟವಾದವು. ಅಂದಮೇಲೆ ಮಾನವನಿಗೆ ಉಳಿದುದಾದರೂ ಏನು? ದಾರುಣ ನೈರಾಶ್ಯ, ಆತ್ಯಂತಿಕ ವಿಫಲತೆ, ಪರಮ ನಿಸ್ಸಹಾಯತೆ ಇಷ್ಟೆ ತಾನೆ! ಇವನ್ನು ಬಣ್ಣಿಸಲಿಕ್ಕೆ ನಮ್ಮ ಸಾಹಿತ್ಯದಲ್ಲಿ ಶಬ್ದ, ಉಪಮೆ, ರೂಪಕಗಳು ದೊರೆಯದಂತಾದವು. ಇದಕ್ಕಾಗಿ ಪಾಶ್ಚಾತ್ಯರಲ್ಲಿ ನವೀನ ಸಾಹಿತ್ಯ ಮೊದಲಿಗೆ ಹುಟ್ಟಿಕೊಂಡಿತು. ಮರಾಠಿಯಲ್ಲಿಯೂ ಅದು ಅನುವಾದ ಹೊಂದಿತು. ಬಾ. ಸೀ. ಮರ್ಢೇಕರರು ಪ್ರಾರಂಭಿಸಿದ ನವ್ಯಕಾವ್ಯದಲ್ಲಿ "ನೈರಾಶ್ಯ, ಅಸಹಾಯಕತೆಯ, ವೈಫಲ್ಯದ ಆರ್ತ, ಉಪರೋಧದ ದನಿ" ಕಂಡುಬರುತ್ತದೆ. ಅದರ ಪ್ರತಿಧ್ವನಿ ಇಂದಿನ ಕವಿತೆಗಳಲ್ಲಿ ಕೂಡ ಕಂಡುಬರುತ್ತದೆ.

ಇತ್ತ ಭೂಕಂಪದ ಆಘಾತ, ಅತ್ತ ಯುದ್ಧದ ಕಹಳೆ, ಎಲ್ಲ ಕಡೆಗೂ ಒಂದೇ ಕೂಗು. ಹಳೆ ಶವದ ಮೇಲೆ ಹೊಸ ಕೆಂಡ ಎಂದು ಮರ್ಢೇಕರರ ಪಂಕ್ತಿಗಳಲ್ಲಿ ವಿಫಲತೆಯ ಹೊಸ ಸ್ವರೂಪವನ್ನು ಕಾಣುತ್ತೇವೆ.

"ಮಾನವತೆ ಸಣಿಸಿ ಹೋಗುತ್ತದೆ। ಕ್ಷಯದಿಂದ ದೇಹ ಹಾಳಾಗುತ್ತದೆ। ಸೌಂದರ್ಯ ಸುಟ್ಟು ಕುರೂಪ ಬರುತ್ತದೆ। ಮೈಲಿ ಎದ್ದು ಕಟ್ಟ ಮುಖದ ಹಾಗೆ" ಎಂಬ ಶರಚ್ಚಂದ್ರ ಮುಕ್ತಿಬೋಧರ ಪಂಕ್ತಿಗಳೂ ವಿಫಲ ಭಾವನೆಯನ್ನೇ ಸಾರಿ ಹೇಳುತ್ತವೆ. 'ಯಂತ್ರಯುಗದಲ್ಲಿ ಮನುಷ್ಯನೂ ಯಂತ್ರವಾಗಿದ್ದಾನೆ'ಂಬ ಜ್ಞಾನ ಭಯಂಕರವಾಗಿತ್ತು. ಈ ಹೊಸ ತಿಳಿವಳಿಕೆಯಿಂದ ಮಾನವನ ಜೀವನದಲ್ಲಿಯ ಚೈತನ್ಯವೆಲ್ಲ ನಷ್ಟವಾದಂತೆ ಅನಿಸಿತ್ತು.

'ಮನುಷ್ಯನು ಕತ್ತೆಯಂತಿದ್ದಾನೆ' ಎಂಬ ತಿಳಿವಳಿಕೆ ಕೂಡ ಮನುಷ್ಯ ಕುಂಬಾರನ ಹೊರೆಯನ್ನು ಹೊರುವದಕ್ಕೆ ಹುಟ್ಟಿದ್ದಾನೆ, ಅದನ್ನು ಬಿಟ್ಟರೆ ತಿಪ್ಪೆಯಲ್ಲಿ ಹೊರಳಾಡುವದೇ ಆತನ ಕೆಲಸ ಎಂಬ ಭಾವನೆಯನ್ನು ಉಂಟುಮಾಡಿತು. ಯಂತ್ರಯುಗದಲ್ಲಿ, ವಿಜ್ಞಾನಯುಗದಲ್ಲಿ, ಅಣುಯುಗದಲ್ಲಿ ಮಾನವ ನಿರುಪಯೋಗಿ, ಅರ್ಥಶೂನ್ಯ. ಆತನ ಅಸ್ತಿತ್ವ ತಿಪ್ಪೆಯಲ್ಲಿಯ ಕ್ರಿಮಿಕೀಟದಂತೆ. ಧ್ಯೇಯವಾದ ಆದರ್ಶವಾದ, ಮಾನವತಾವಾದಗಳು ಕೆಲಕಾಲ ದಿಕ್ಕೆಟ್ಟಂತಾದವು. ಉಳಿದದ್ದೆಂದರೆ 'ಜಂತುವಾದ'. ಇದರಿಂದ ಸಿನಿಸಿಜಂ ಹುಟ್ಟಿತು.

ನವ್ಯಕಾವ್ಯ

ಮರಾಠಿ ನವ್ಯಕಾವ್ಯದಲ್ಲಿ ವೈಫಲ್ಯ, ಅಶ್ಲೀಲತೆ, ಬೀಭತ್ಸತೆ ಎಲ್ಲವೂ ಇವೆ ಎಂದು ಆಕ್ಷೇಪಿಸಲಾಗುತ್ತಿದೆ. ವಿಜ್ಞಾನಯುಗದಲ್ಲಿ ಮೈದೋರಿದ ಸತ್ಯದ ಪರಿಣಾಮವಾಗಿ ಮರಾಠಿ ನವ್ಯಕಾವ್ಯ ಹೀಗಾಗಿದೆ ಎನ್ನಬೇಕು. ಮಾನವನಲ್ಲಿಯ ಮಾನವತೆಯೇ ನಷ್ಟವಾಗಿದೆ. ಅದರ ದಿವಾಳಿ ಎದ್ದಿದೆ,

ಮರಾಠಿ ಕಾವ್ಯದಲ್ಲಿ ಹೀಗೇಕಾಯಿತು ಎಂಬ ಪ್ರಶ್ನೆ ಉದ್ಭೂತವಾಗುತ್ತದೆ. ಯುದ್ಧದ ವಿಧ್ವಂಸಕತೆಯು ಬೇಗೆ ಪಾಶ್ಚಾತ್ಯ ರಾಷ್ಟ್ರಗಳಿಗೆ ತಟ್ಟಿದ್ದಷ್ಟು ಮಹಾರಾಷ್ಟ್ರಕ್ಕೆ ತಟ್ಟಿರಲಿಲ್ಲ. ಅಂದಮೇಲೆ ಈ ಹೊಸ ಅನುಭವ, ಹೊಸ ತಿಳಿವಳಿಕೆ ಬಂದದ್ದಾದರೂ ಹೇಗೆ? ಪಾಶ್ಚಾತ್ಯ ವಾಙ್ಮಯದಿಂದಲೆ ಇವೆಲ್ಲ ಬಂದದ್ದು.

ಹಾಗೆ ನೋಡಿದರೆ, ದ್ವಿತೀಯ ಮಹಾಯುದ್ಧ ಮುಗಿದ ಕೂಡಲೆ ಭಾರತದಲ್ಲಿ ಸ್ವಾತಂತ್ರ್ಯಪ್ರಾಪ್ತಿಯ ಚಕ್ರಗಳು ಉರುಳಹತ್ತಿ ಸ್ವಾತಂತ್ರ್ಯವೂ ಲಭಿಸಿತು. ಭಾರತೀಯರಿಗೆ ಇದು ಸಂಭ್ರಮದ ಕಾಲ, ಉತ್ಸಾಹದ

ಹುಟ್ಟಿಸಬೇಕಾದಂಥ, ಉಜ್ವಲ ಭವಿತವ್ಯ ಎತ್ತಿ ತೋರಿಸುವಂಥ ಕಾಲ.

ಮಹಾಯುದ್ಧದ ನಂತರ ಪಾಶ್ಚಾತ್ಯರ ಜೀವನಾನುಭವದಲ್ಲಿ ಉಂಟಾದ ಸ್ಥಿತಿ[ಮೂಡ್]ಗಿಂತ ಭಿನ್ನವಾದ ಸ್ಥಿತಿಯು ಭಾರತೀಯರಲ್ಲಿ ಉಂಟಾಗಿತ್ತು. ಆದರೂ ಮರಾಠಿ ಕವಿಗಳೂ ಕಥಾಲೇಖಕರೂ ಪಾಶ್ಚಾತ್ಯರ ಸ್ಥಿತಿಯನ್ನೇ ತಮ್ಮದಾಗಿಸಿಕೊಂಡು ಲೇಖನಕಾರ್ಯ ನಡೆಸಿದ್ದರು. ಹೊಸ ಪ್ರವೃತ್ತಿಗಳ ಪ್ರಭಾವ ಹೀಗೆ ಒಮ್ಮೆಲೆ ಏಕೆ ಉಂಟಾಯಿತು? ನನಗೆ ಹೀಗೆ ಅನಿಸುತ್ತದೆ. ನಮಗೆ ಸ್ವಾತಂತ್ರ್ಯ ದೊರೆತ ಕೂಡಲೆ, ನಮ್ಮ ರಾಜಕೀಯ, ಸಾಮಾಜಿಕ, ರಾಷ್ಟ್ರೀಯ ಆಶೆ-ಆಕಾಂಕ್ಷೆಗಳೆಲ್ಲ ಈಡೇರಿಬಿಟ್ಟವು ಎಂದು ನಮಗೆ ಅನಿಸಿತು. ಸ್ವಾತಂತ್ರ್ಯಕ್ಕಿಂತ ಪ್ರಿಯವಾದುದು ಶ್ರೇಯಸ್ಕರವಾದುದು ಇನ್ನೇನು? ಇದರಿಂದಾಗಿ ನಮ್ಮಲ್ಲಿ ಮಾನಸಿಕ ಶೈಥಿಲ್ಯ ಉಂಟಾಯಿತು. ಇಂಥ ಶೈಥಿಲ್ಯವನ್ನು ನೀಗಿಸುವದಕ್ಕಾಗಿ ಮನಸ್ಸು ಹೊಸದರ ಅನ್ವೇಷಣೆಯಲ್ಲಿ ತೊಡಗುತ್ತದೆ. ರಾಷ್ಟ್ರೀಯ ಜೀವನದಲ್ಲಿಯ ಅನುಭವಗಳಿಗಿಂತ ಪಾಶ್ಚಾತ್ಯ ವಾಙ್ಮಯದಲ್ಲಿಯ ನವೀನ ಪ್ರವೃತ್ತಿಗಳ ಆಕರ್ಷಣೆ ಹೆಚ್ಚಿತು. ಈ ಪ್ರತಿ ಆಕರ್ಷಣೆಯಿಂದಾಗಿ ಹಳೆ ಹೊಸದರ ಸಮನ್ವಯದಿಂದ ಮತ್ತೊಂದು ಬೇರೆ ಪ್ರವೃತ್ತಿಯೆ ಜನ್ಮ ತಾಳುತ್ತದೆ. ಆಗ ಸಾಹಿತ್ಯದಲ್ಲಿಯೂ ಅದರ ಪ್ರಭಾವ ಕಂಡುಬರುತ್ತದೆ.

ಮರಾಠಿಯಲ್ಲಿ ನವ್ಯಕಾವ್ಯ ಹೊರಬರಹತ್ತಿತು. ಅದರಲ್ಲಿ ಕೂಡ ಪ್ರಾರಂಭದಿಂದಲೂ ಎರಡು ವಿಚಾರಗಳು ಸ್ಪಷ್ಟವಾಗಿ ವ್ಯಕ್ತವಾಗುತ್ತವೆ. ಮಹಾಯುದ್ಧದ ವೈಫಲ್ಯವನ್ನು ಚಿತ್ರಿಸುವ ವಿಚಾರಧಾರೆ ಒಂದಾದರೆ, ವಿನಾಶದಲ್ಲಿಯೂ ಉಜ್ವಲ ಭವಿಷ್ಯದ ಆಶಾವಾದದ ಸೂರ್ಯೋದಯದತ್ತ ಸಾಗಿದ ನವಸಮಾಜವಾದದ ವಿಚಾರಧಾರೆ ಇನ್ನೊಂದಾಗಿತ್ತು. ವಿಂದಾ ಕರಂದಿಕರ, ಶರಚ್ಚಂದ್ರ ಮುಕ್ತಿಬೋಧ ಇವರ ಕವಿತೆಗಳು ಮರ್ಢೇಕರರ ಕವಿತೆಗಳಿಗಿಂತ ಭಿನ್ನವಾಗಿ ಕಾಣುತ್ತಿರುವದು ಈ ಕಾರಣಕ್ಕಾಗಿ. ಆ ಕಾಲದಲ್ಲಿ ಮುಕ್ತಿಬೋಧರ 'ರಕ್ತಾಚ್ಯಾ ಲಾಲಸದ್ಯಾತಚ' ಕವಿತೆ ಹಾಗೂ ವಿಂದಾ ಕರಂದಿಕರರ 'ಹಿ ಜನತಾ ಅಮರ ಆಹೆ' ಎಂಬ ಕವಿತೆ ಬಹಳಷ್ಟು ಪ್ರಸಿದ್ಧಿ ಪಡೆದವು. ಏಕೆಂದರೆ ಮರ್ಢೇಕರರ ಕವಿತೆಗಳಲ್ಲಿ ಎಲ್ಲ ಪ್ರವೃತ್ತಿಗಳೂ ಅಪರಿಚಿತವೇ. ಮರಾಠಿ ವಾಚಕರು ದಿಕ್ಕೆಟ್ಟು ಹೋಗಿದ್ದರು. ಆದರೆ ಕರಂದಿಕರ, ಮುಕ್ತಿಬೋಧ, ಬಾಪಟ, ಪಾಡಗಾಂವಕರ ಇವರ ಕಾವ್ಯ ಪುನಃ ಜನತೆಯನ್ನು ಆಕರ್ಷಿಸಿತು. ಇವರ ಕಾವ್ಯದಲ್ಲಿ ಕೂಡ ಪ್ರತಿಮೆ, ರೂಪಕಗಳು, ಆವಿಷ್ಕಾರ ಹೊಸದೇ ಇದ್ದರೂ ಇವರ ಕವಿತೆಗಳಲ್ಲಿ ಇಲ್ಲಿಯ ಮಣ್ಣಿನ ಗುಣ ಕಂಡುಬಂದದ್ದರಿಂದ ಜನಪ್ರಿಯವಾದವು. ಈ ಮಣ್ಣಿನ ಗುಣವನ್ನು ಕಾಪಾಡಿಕೊಂಡಿರುವವರೆಗೆ ನವ್ಯಕಾವ್ಯವು ಸಮಾಜಕ್ಕೆ ಇಷ್ಟವಾಗುತ್ತದೆ. ಇದಿಲ್ಲದೆ ಹೋದರೆ ಕಾವ್ಯ ಪರಕೀಯವಾಗುತ್ತದೆ. ದಿಲೀಪ ಚಿತ್ರೆ ಇವರ ಹಾಗೂ ಅವರ ಸಮಕಾಲೀನ ಅತಿನವ್ಯ ಕವಿಗಳ ಕಾವ್ಯ ಸಮಾಜಕ್ಕೆ ಪರಕೀಯವೆನಿಸುತ್ತಿದೆ.

ಪ್ರಾಚೀನ ವಾಙ್ಮಯದಲ್ಲಿ ಸಾಂಕೇತಿಕ ಪ್ರವೃತ್ತಿ ಹೆಚ್ಚಿದಂತೆಲ್ಲ ಸಾಹಿತ್ಯಕ ಮೌಲ್ಯ ಕಡಿಮೆಯಾಗುತ್ತದೆ ಹೊಸ ಪ್ರವೃತ್ತಿಗಳ ಅವಶ್ಯಕತೆ ಉಂಟಾಗುತ್ತದೆ. ಮರಾಠಿ ಕಾವ್ಯದಲ್ಲಿ ಇಂಥ ಸಾಂಕೇತಿಕತೆ ನಿರ್ಮಾಣವಾಯಿತು. ಮರ್ಢೇಕರರು ಅದನ್ನು ಕಾವ್ಯದಲ್ಲಿ ತುಂಬಿದರು. ಹೊಸದಾಗಿ ಬಂದ ಈ ಪ್ರವೃತ್ತಿಗಳು ರೂಢವಾಗುವದರೊಳಗಾಗಿ ಹೊಸ ಪ್ರಯೋಗಗಳ ಪರಿಣಾಮವಾಗಿ ಅವುಗಳಲ್ಲಿ ಬದಲಾವಣೆ ಆಗುತ್ತ ನಡೆಯಿತು. ಅದು ಸಹ ಪಾಶ್ಚಾತ್ಯರ 'ಸ್ಥಿತಿ'ಯನ್ನು ಅವಲಂಬಿಸಿಯೆ. ಹೀಗಾಗಿ ಇಂದಿನ ಕವಿತೆಗಳಲ್ಲಿ ಇಲ್ಲಿಯ ಮಣ್ಣಿನ ಗುಣ ಮಾಯವಾಗಿದೆ. ವಾಚಕರಿಗೆ ಇಂದಿನ ಕಾವ್ಯ ಪರಕೀಯವೆನಿಸಲು ಕಾರಣವೇನು ಎಂಬುದನ್ನು ಶೋಧಿಸಲು ಈ ಪ್ರವೃತ್ತಿಗಳ ಕುರಿತು ಅಧಿಕ ವಿಚಾರ ನಡೆಸಬೇಕು.

ಮರಾಠಿ ನವ್ಯಕಾವ್ಯದಲ್ಲಿ ಕಂಡುಬಂದ ಪ್ರವೃತ್ತಿಗಳೇ ಮರಾಠಿ ನವ್ಯಕಥೆಯಲ್ಲಿಯೂ ತುಸು ಹೆಚ್ಚು ಕಡಿಮೆಯಾಗಿ ಕಂಡುಬಂದವು. ಕಥೆಯು ಅನುಭೂತಿಯ ಅಭಿವ್ಯಕ್ತಿಯನ್ನು

ಮಾಡುವಂಥದು ಎಂದು ನವ್ಯಕಥೆಯ ಪುರಸ್ಕರ್ತರಾದ ಶ್ರೀ ಗಂಗಾಧರ ಗಾಡಗೀಳರು ಉದ್ಘೋಷಿಸಿದ್ದಾರೆ. ಹೀಗಾಗಿ ಪ್ರತಿಮೆಗಳ ನಾವೀನ್ಯ ಕಥೆಯಲ್ಲಿಯೂ ಕಂಡುಬರಹತ್ತಿತು.

ಕಥೆ-ಕಾದಂಬರಿಗಳಲ್ಲಿ ಪರಿವರ್ತನೆ

ಮರಾಠಿ ಕಥೆ ಕಾದಂಬರಿಗಳಲ್ಲಿ ಆದ ಪರಿವರ್ತನೆಯನ್ನು ಸ್ಥೂಲರೂಪದಲ್ಲಿ ಹೀಗೆ ಹೇಳಬಹುದು. ಘಟನಾಪ್ರಧಾನ ಕಥೆ, ವ್ಯಕ್ತಿಪ್ರಧಾನ ಕಥೆ, ಮನೋವಿಶ್ಲೇಷಣಾತ್ಮಕ ಕಥೆ, ಸಂಜ್ಞಾಪ್ರವಾಹವನ್ನು ಆಧರಿಸಿದ ಕಥೆ ಎಂದು ಗಮನಿಸಬೇಕು.

ಮನುಷ್ಯನಲ್ಲಿಯ ಮನುಷ್ಯತ್ವವೇ ಇಲ್ಲದಂತಾದ ಮೇಲೆ ಆತನ ವ್ಯಕ್ತಿತ್ವವನ್ನು ಎಲ್ಲಿ ಹುಡುಕಬೇಕು? ವ್ಯಕ್ತಿಯ ನಡೆನುಡಿಗಳಲ್ಲಿ ಆತನ ವ್ಯಕ್ತಿತ್ವ, ವ್ಯಕ್ತಿ ಮಹತ್ವ ಕಂಡುಬರುತ್ತದೆ. ಆತನ ನಡೆನುಡಿಗಳಿಗೆ ಆತನ ಮನಸ್ಸು ಬುನಾದಿಯಾಗಿರುತ್ತದೆ. ಆತನ ಮನಸ್ಸಿನಲ್ಲಿ ಜ್ಞಾನಾತ್ಮಕ, ಕ್ರಿಯಾತ್ಮಕ, ಭಾವನಾತ್ಮಕ ಪ್ರೇರಣೆಗಳಿರುತ್ತವೆ. ಆದರೆ ಈ ಮನಸ್ಸಿನ ಒಳಗಿರುವ ಅಂತರ್ಮನಸ್ಸಿನ ಶೋಧವೇ ಯುದ್ಧೋತ್ತರ ಕಾಲದಲ್ಲಿ ಸಾಹಿತ್ಯದ ದೃಷ್ಟಿಯಿಂದ ಹೊಸದೆನಿಸಿತು. ನಿಜವಾಗಿಯೂ ಮನುಷ್ಯನ ವ್ಯಕ್ತಿಮಟ್ಟದ ಶೋಧವನ್ನು ಅಂತರ್ಮನದಲ್ಲಿಯೆ ಕಂಡುಹಿಡಿಯಬಹುದಾಗಿದೆಂಬ ಶ್ರದ್ಧೆ ಹೆಚ್ಚಿ ಮನುಷ್ಯನ ನಡೆನುಡಿಗಳ ಸಂಬಂಧವನ್ನು ಆತನ ಅಂತರ್ಮನಕ್ಕೆ ಜೋಡಿಸುವ ಪ್ರಯತ್ನ ನಡೆದವು. ನವ್ಯಕಥೆಯಲ್ಲಿ ಅಂತರ್ಮನವು ಪ್ರವೇಶಿಸಹತ್ತಿತು. ಈ ಅಂತರ್ಮನದ ವಿಕೃತಿ, ವಿಸಂಗತಿ, ಜಟಿಲತೆಗಳು ನವ್ಯಕಥೆಯ ರೂಪದಲ್ಲಿ ಪ್ರಕಟವಾಗಹತ್ತಿದವು. ಮರಾಠಿ ಕಥೆಯಲ್ಲಿಯೂ ಅಶ್ಲೀಲ, ಬೀಭತ್ಸ, ವಿಕೃತ, ಅಸಭ್ಯ, ಅಸಹ್ಯ ಪ್ರವೃತ್ತಿಗಳು ಬಂದುದನ್ನು ಕಂಡು ಮರಾಠಿ ವಾಚಕರಿಗೆ ಆಘಾತವಾಯಿತು. ಶ್ಲೀಲ-ಅಶ್ಲೀಲ, ಮಂಗಲ ಅಮಂಗಲ, ಸುಂದರ ಅಸುಂದರ ಇವುಗಳ ನಡುವಿನ ಸೀಮಾರೇಷೆ ಇಲ್ಲದಂತಾಯಿತು. ಅಂತರ್ಮನಕ್ಕೆ ಹೊಳೆದದ್ದೇ ಸತ್ಯ ಎಂಬ ಪ್ರಚಾರ ಪ್ರಾರಂಭವಾಯಿತು. ನವ್ಯ ಕತೆಗಾರರ ಹಾಗೂ ನವ್ಯಕವಿಗಳ ಈ ಪ್ರತಿಭೆಯನ್ನು ಕವಿ ಅನಿಲರು 'ಅವ್ಯವಸ್ಥಿತ ಪ್ರಜ್ಞೆ' ಎಂದು ಹೆಸರಿಸಿದ್ದಾರೆ. ಪ್ರಾ. ಗಂಗಾಧರ ಗಾಡಗೀಳರು ನವ್ಯಕಥೆಯ ಸಮರ್ಥನೆ ಮಾಡುತ್ತ ಈ ವ್ಯಾಖ್ಯೆಯನ್ನು ಪ್ರತಿಭಟಿಸಿದರು. ಆದರೆ ಸಾಹಿತ್ಯದಲ್ಲಿ ಈ ಹೊಸ ಪ್ರವೃತ್ತಿಗಳಿಗೆ ಮಹತ್ವ ದೊರೆತಂತೆಲ್ಲ ವಾಙ್ಮಯದಲ್ಲಿ ಪಾರಂಪರಿಕವಾಗಿ ಅಂತರ್ಗತವಾಗಿದ್ದ 'ಸುವ್ಯವಸ್ಥೆ' ಇಲ್ಲದಂತಾಯಿತು ಎಂಬುದು ಸತ್ಯ.

ನವ್ಯವಿಮರ್ಶೆ

ನವ್ಯಸಾಹಿತ್ಯ ಹುಟ್ಟಿದಂತೆ ಅದಕ್ಕೆ ಬೇಕಾದ ನವ್ಯವಿಮರ್ಶೆಯೂ ಹುಟ್ಟಿಕೊಂಡಿತು. ಇದರಿಂದಾಗಿ ನವ್ಯಸಾಹಿತ್ಯದ ಸಮರ್ಥನೆ, ಹಳೆ ಸಾಹಿತ್ಯದ ಭರ್ತ್ಸನೆ ಪ್ರಾರಂಭವಾದವು. ಆದರೆ ಇದು ಅನಿವಾರ್ಯವಾಗಿತ್ತು. ಹಳೆಯುದರಲ್ಲಿಯ ದೋಷಗಳನ್ನು ಎತ್ತಿ ತೋರಿಸದೆ ಹೊಸದನ್ನು ಪ್ರಸ್ಥಾಪಿಸಲು ಬರುವಂತಿರಲಿಲ್ಲ. ಉದಾಹರಣೆಗೆಂದು ಅತಿನವ್ಯ ಸಾಹಿತ್ಯದ ಪುರಸ್ಕರ್ತರಾದ ಅಶೋಕ ಶಹಾಣೆ ಅವರು "ಮರಾಠಿ ಸಾಹಿತ್ಯದ ಮೇಲೆ ಕ್ಷ ಕಿರಣ" ಎಂಬದೊಂದು ಲೇಖನ ಬರೆದು, ಅದರಲ್ಲಿ "ಕೇಶವಸುತ ಕವಿಯೇ ಅಲ್ಲ. ಟಿಳಕ, ಅಗರಕರರು ಲೇಖಕರೇ ಅಲ್ಲ, ಫಡಕೇ, ಖಾಂಡೇಕರರು ನಿಜವಾದ ಅರ್ಥದಲ್ಲಿ ಸಾಹಿತಿಗಳೇ ಅಲ್ಲ, ಗಂಗಾಧರ ಗಾಡಗೀಳರು ಕೇವಲ ಮಾನಸಶಾಸ್ತ್ರಜ್ಞ ಚಿಕಿತ್ಸಕ" ಎಂದು ಮುಂತಾಗಿ ಪ್ರತಿಪಾದಿಸಿದ್ಧಾರೆ. ಈ ಪ್ರತಿಪಾದನೆ ಸರ್ವಮಾನ್ಯವಾಗಲಿಲ್ಲ. ಆದರೆ ನವ್ಯಸಾಹಿತಿಗಳು ಹಳೆಯುದರತ್ತ, ಅತಿನವ್ಯವು ನವ್ಯದತ್ತ ನೋಡುವ ದೃಷ್ಟಿ ಹೇಗಿದೆಂಬುದನ್ನು ಇದು ತೋರಿಸುತ್ತದೆ. ಇಂಥ ವೃತ್ತಿಯಿಂದ ಸಾಹಿತ್ಯ ಕ್ಷೇತ್ರದಲ್ಲಿ ಅವ್ಯವಸ್ಥೆ ನಿರ್ಮಾಣವಾಗುತ್ತದೆ. ಇಂಥ ಕಾಲದಲ್ಲಿ ನವೀನ ಅನುಭವಗಳು, ನವ್ಯ ಪ್ರವೃತ್ತಿಗಳನ್ನು ಆಧರಿಸಿಯೆ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವ ಪ್ರಯತ್ನ ಅಪರಿಹಾರ್ಯವೂ ಆವಶ್ಯಕವೂ ಆಗುತ್ತದೆ. ಅಂಥ ಪ್ರಯತ್ನ ಮರಾಠಿಯಲ್ಲಿಯೂ ನಡೆಯಿತು.

ಸಂಗೀತಚತುರೆ



ಹತ್ತಾರು ಸಲ ಕೆಮ್ಮಿ ಗಂಟಲವ ಸರಿ ಮಾಡಿ।
ಈ ಸಂಗೀತಚತುರೆ ಹಾಡುವ ರೀತಿ ನೋಡಿ।
ಬಾಯಿ ತೆರೆದರೆ ಸಾಕು ಬ್ರಹ್ಮಾಂಡ ನಾದ।
ಇದಿರು ಕುಳಿತವ ಉಗುಳಿನಲಿ ತೇಲಿ ಹೋದ॥

— ಎಂ. ಗೋವಿಂದ


ಗಾಡಗೀಳ-ಗೋಖಲೆಯವರು ನವ್ಯಕಥೆಗಳನ್ನು ಬರೆಯುತ್ತಿದ್ದಂತೆ ಪ್ರ. ಭಾ. ಭಾವೆ ಅವರು ಸನಾತನ ಶಾಶ್ವತ ಮೌಲ್ಯಗಳನ್ನು, ತಮ್ಮ ಕಥೆಗಳಲ್ಲಿ, ಅತ್ಯಂತ ಸಮರ್ಥ ರೀತಿಯಿಂದ ಎತ್ತಿ ಹಿಡಿಯುತ್ತಿದ್ದರು. ವೆಂಕಟೇಶ ಮಾಡಗೂಳಕರ, ಹ. ಮಾ. ಮಿರಾಸದಾರ, ಶಂಕರ ಪಾಟೀಲ ಮುಂತಾದವರು ಪ್ರಾದೇಶಿಕ ಕಥಾಪರಂಪರೆಯನ್ನು ಸಮೃದ್ಧವಾಗಿಸುತ್ತಿದ್ದರು.

೧೯೪೫ ರ ನಂತರದ ಪ್ರಾದೇಶಿಕ ಕಥೆ ಕಾದಂಬರಿಗಳಿಗೆ ವಿಶೇಷ ಮಹತ್ವ ಪ್ರಾಪ್ತವಾಯಿತು. ಗಾಡಗೀಳರ ನವ್ಯಕಥೆಗಳಿಗಿಂತ ಪ್ರಾದೇಶಿಕ ಕಥೆಗಳು ಹೆಚ್ಚು ಲೋಕಪ್ರಿಯವಾದವು. ಪ್ರಾದೇಶಿಕ ಕಥೆ ಕಾದಂಬರಿಗಳು ಹೊಸ ಅನುಭವ, ಹೊಸ ಪ್ರವೃತ್ತಿ, ಹೊಸ ಪ್ರತಿಭೆಗಳನ್ನು ಅಂಗೀಕರಿಸಿಯೂ, ಇಲ್ಲಿಯ ಮಣ್ಣಿನ ಗುಣವನ್ನು ಕಾಪಾಡಿಕೊಂಡು ಬರುವದಕ್ಕೆ ಹೆಣಗಿದವು. ಮಾಡಗೂಳಕರ, ಮಿರಾಸದಾರ, ಪಾಟೀಲ ಇವರ ಪ್ರಾದೇಶಿಕ ಕಥೆಗಳು ಜನಪ್ರಿಯವಾದಂತೆ ಶ್ರೀ. ನಾ. ಪೇಂಡಸೆ, ಗೋ. ನಿ. ದಾಂಡೇಕರ, ರಣಜಿತ ದೇಸಾಯಿ ಇವರ ಪ್ರಾದೇಶಿಕ ಕಾದಂಬರಿಗಳೂ ಲೋಕಪ್ರಿಯವಾದವು. ಆದರೆ ಈ ಲೋಕಪ್ರಿಯತೆಯನ್ನು ವಾಙ್ಮಯೀನ ಮೂಲ್ಯವೆಂದು ತಿಳಿಯುವದಿಲ್ಲ ಎಂಬುದನ್ನು ಮರೆಯಬಾರದು. ಆದರೆ ಸಹಾನುಭವದ ರುಚಿಯನ್ನು ಬೀರಬಲ್ಲ ಸಾಹಿತ್ಯವೇ ಜನಪ್ರಿಯವಾಗುತ್ತದೆ ಎಂಬುದೂ ನಿಜ.

ಪ್ರಾದೇಶಿಕ ಸಾಹಿತ್ಯ

ಇಲ್ಲಿಯ ಮಣ್ಣಿನ ಗುಣವನ್ನು ಹೊಂದಿದ ಪ್ರಾದೇಶಿಕ ಸಾಹಿತ್ಯವು ಸಮೃದ್ಧವಾಗುತ್ತಿದ್ದಂತೆ, ದಲಿತ ಸಮಾಜದಿಂದ ಪ್ರತ್ಯಕ್ಷ ಪ್ರಾದೇಶಿಕ ಜೀವನ ನಡೆಸಿದಂಥ ಹೊಸ ಲೇಖಕ ವರ್ಗವು, ತಮ್ಮ ಹೊಸ ಅನುಭವಗಳೊಂದಿಗೆ ಉದಯಕ್ಕೆ ಬಂದಿತು. ಸಾಮಾಜಿಕ ಅನ್ಯಾಯದ ಕಿಚ್ಚು ಇವರಿಗೆ ಅಸಹನೀಯವಾಗಿದ್ದರಿಂದ ದಲಿತ ಸಮಾಜೋದ್ಧಾರದ ಗುರಿಯನ್ನೇ ಇವರು ಎತ್ತಿಹಿಡಿದರು. ಶಂಕರರಾವ ಖರಾತ, ಅಣ್ಣಾಭಾವು ಸಾಠೆ, ಬಾಬೂರಾವ ಬಾಗೂಳ ಇವರು ಹೊಸ ಹುರುಪಿನಿಂದ ಸಾಹಿತ್ಯನಿರ್ಮಾಣದಲ್ಲಿ ತೊಡಗಿದರು. ಆದರೆ ಇವರನ್ನು ವಿಮರ್ಶಕರು ಉಚ್ಚ ಸಾಹಿತಿಗಳ ಪಂಕ್ತಿಗೆ ಸೇರಿಸಲೇ ಇಲ್ಲ.

ನವ್ಯಸಾಹಿತ್ಯದ ಕಾವ್ಯದಲ್ಲಿ, ಅಂತರ್ಮನಸ್ಸಿಗೆ ಪ್ರಾಧಾನ್ಯ ದೊರೆಯಿತು. ಧ್ಯೇಯವಾದ, ಆದರ್ಶವಾದ, ಸಮಾಜವಾದ, ಮಾನವತಾವಾದಗಳೆಲ್ಲ ಅರ್ಥಶೂನ್ಯವಾಗಿಬಿಟ್ಟವು. ಸೌಂದರ್ಯಶೋಧ, ಆನಂದಬೋಧೆಗಳು ನಿಕರಗಳಾಗಿ ಬಿಟ್ಟವು. ಸಂವೇದನಾಜನ್ಯ ಅನುಭೂತಿಯೆ ಮೂಲ ಅತ್ಯ, ಶುದ್ಧ ಹಾಗೂ ಏಕಮೇವ ಎಂದು ನಂಬಲಾಯಿತು. ಇದರ ಲಯಬದ್ಧ ಆವಿಷ್ಕಾರವೇ ಕಲಾತ್ಮಕ ಎಂದೂ ಹೇಳಲಾಯಿತು. ಹೀಗಾಗಿ ಮಾನವನ ಜೀವನದಲ್ಲಿಯ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸಂದರ್ಭಗಳನ್ನೆಲ್ಲ ಅವಾಙ್ಮಯೀನ ಎಂದು ಪರಿಗಣಿಸಲಾಯಿತು. ಸಾಹಿತ್ಯದ ವಿಚಾರ ಮತ್ತು ನಿರ್ಮಿತಿಯು ಜೀವನದ ದೃಷ್ಟಿಯಿಂದ ನಡೆಯದೆ ಕಲಾನಿರ್ಮಿತಿಯ ದೃಷ್ಟಿಯಿಂದ ಆಗುತ್ತ ಹೋಯಿತು. ಸೌಂದರ್ಯಶಾಸ್ತ್ರಕ್ಕೆ



ಸ್ಕೂಟರ್ ಸವಾರಿ

ಗಂಡ ಹೆಂಡತಿ ಮಗ ಮೊಮ್ಮಗಳು ಗೌರಿ।
ಆಯಿತದು ಹೊರಟಿತು ಸ್ಕೂಟರ್ ಸವಾರಿ।
ಗಾಳಿಯಲಿ ವೇಗದಲಿ ಎಂಥ ಆನಂದ।
ದಾರಿ ಬೀಳಲು ಮೈಗೆ ತೀಡಿದರು ಗಂಧ।

—ಎಂ. ಗೋವಿಂದ

ಸ್ಥಿತಿಯಲ್ಲಿ, ಈ ಉಳಿದ ಲೇಖಕರು ಒಂದು ರೀತಿಯ ಪಲಾಯನವಾದವನ್ನು ಅಂಗೀಕರಿಸಿದರು. ಪ್ರಚಲಿತ ಜೀವನ ಬಿಟ್ಟು ಇತಿಹಾಸದ ಕಡೆಗೆ ತಿರುಗಿದರು. ರಣಜಿತ ದೇಸಾಯಿ, ಇನಾಮದಾರ ಇವರು ಮತ್ತೆ ಐತಿಹಾಸಿಕ ಕಾದಂಬರಿಗಳನ್ನು ಬರೆಯಲಾರಂಭಿಸಿದರು. ಶಿವಾಜಿ ಸಾವಂತ, ಆನಂದ ಸಾಧಲೆ ಇವರು ಮಹಾಭಾರತದಲ್ಲಿಯ ಕರ್ಣನ ಜೀವನವನ್ನು ತಮ್ಮ ಕಾದಂಬರಿ ವಸ್ತುವನ್ನಾಗಿಸಿಕೊಂಡರು. ವಸಂತ ಕಾನೇಟಕರರು ಐತಿಹಾಸಿಕ ನಾಟಕಗಳನ್ನು ಹೊಸ ದೃಷ್ಟಿಯಿಂದ ಬರೆಯತೊಡಗಿದರು. ರಣಜಿತ ದೇಸಾಯರ 'ಸ್ವಾಮಿ' ಕಾದಂಬರಿಯು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಐತಿಹಾಸಿಕ ಕಾದಂಬರಿಗಳ ಹೊಸ ಸಂಪ್ರದಾಯವನ್ನು ಪ್ರಾರಂಭಿಸಿತು. ಕಾನೇಟಕರರ 'ರಾಯಗಡಾಲಾ ಜಾಗ ಆಲಿ' ನಾಟಕವು ಐತಿಹಾಸಿಕ ನಾಟಕಗಳ ಹೊಸ ಪರಂಪರೆಯನ್ನು ಪ್ರಾರಂಭಿಸಿತು.

ಅನಾಸ್ತನ ಮಹತ್ವ ಪ್ರಾಪ್ತವಾಯಿತು. ಪ್ರಾಪ್ತ ಪರಿಸ್ಥಿತಿಯಲ್ಲಿಯ ಸಾಮಾಜಿಕ ಜೀವನ, ಜೀವನದಲ್ಲಿಯ ಅಪರಿಹಾರ್ಯ ಸಂಘರ್ಷ, ಜೀವನದಲ್ಲಿಯ ಅಂತಿಮ ಶ್ರೇಯಸ್ಸು ಪ್ರೇಯಸ್ಸು ಇವುಗಳ ಪ್ರವಾಹ ಲುಪ್ತವಾಯಿತು.

ಇದರ ಪ್ರತಿಕ್ರಿಯೆ ಮಾತ್ರ ವಿಲಕ್ಷಣ ರೀತಿಯಲ್ಲಿ ಕಂಡುಬಂದಿತು. ನವ್ಯಕಲಾ ವಿಮರ್ಶಕರ ಒಂದು ಸಂಪ್ರದಾಯವೇ ನಿರ್ಮಾಣವಾಯಿತು. ಈ ವಿಮರ್ಶಕರ ಸ್ತುತಿ ಗೌರವಗಳಿಗೆ ಪಾತ್ರರಾಗಬೇಕೆಂದು ಸಾಹಿತಿಗಳು ಅಭಿವ್ಯಕ್ತಿಯ ಹೊಸ ಹೊಸ ಪ್ರಯೋಗಗಳನ್ನು ನಡೆಸಿದರು. ಇಲ್ಲಿ ಒಂದು ಉದಾಹರಣೆ ರ. ಕೃ. ಜೋಶಿ ಇವರು ಶಬ್ದಗಳಿಂದ ವ್ಯಕ್ತವಾಗುವ ಭಾವನೆಗಳಿಗೆ ದೃಶ್ಯರೂಪವನ್ನು ನೀಡಲು ಪ್ರಯತ್ನಿಸಿದರು. ಅಂದರೆ ಶಬ್ದದ ಅಕ್ಷರಗಳನ್ನು ಅರ್ಥಾನುಸಾರವಾಗಿ ಚಿಕ್ಕ ದೊಡ್ಡದಾಗಿ ಬರೆಯುವದು. [ಪ್ರಾಚೀನ ಚಿತ್ರಕಾವ್ಯವನ್ನು ಇದು ಸ್ವಲ್ಪ ಮಟ್ಟಿಗೆ ಹೋಲುತ್ತದೆ] ಇದಕ್ಕೂ ವಿಲಕ್ಷಣವೆಂದರೆ ಟೈಪರೈಟರ್‌ನಲ್ಲಿರುವ ಬೇರೀಜು-ವಜಾಬಾಕಿಯ ಚಿಹ್ನಗಳು, ಕಂಸ ಚಿಹ್ನ ಮುಂತಾದವನ್ನು ಉಪಯೋಗಿಸಿ ಸಂವೇದನಾಜನ್ಯ ಅನುಭೂತಿಯ ಆಕೃತಿಬಂಧವೊಂದನ್ನು ಇವರು ತಯಾರಿಸಿದರು. ಇಂಥ ಪ್ರಯೋಗ ಆಗಿರಲಿಕ್ಕಿಲ್ಲ. ಅಭಿವ್ಯಕ್ತಿಯ ಹೊಸ ಪ್ರಯೋಗದ ಪ್ರವೃತ್ತಿ ಹೆಚ್ಚಿದ್ದು ಮಹತ್ವದ್ದು. ಸಾಹಿತ್ಯವು ಜೀವನವನ್ನು ಸಮೃದ್ಧಗೊಳಿಸುತ್ತದೆ, ಮುನ್ನಡೆಸುತ್ತದೆ, ವಾಚಕರ ತಿಳುವಳಿಕೆಯನ್ನು ಹೆಚ್ಚಿಸುತ್ತದೆ ಎಂದು ಮುಂತಾಗಿ ಇರುವ ಕಲ್ಪನೆಗಳು ಮರಾಠಿ ಸಾಹಿತ್ಯದಲ್ಲಿ ಇಂದು ದುರ್ಬಲವಾಗಿವೆ.

ನವ್ಯವಿಮರ್ಶಕರು ಕಲಾಸ್ವಾತಂತ್ರ್ಯವನ್ನು ಪುರಸ್ಕರಿಸಿದರು, ಕಲಾವಂತರು ಸಮಾಜದ ಬಂಧನಗಳನ್ನು ಕಿತ್ತಿ ಎಸೆದರು. ನವ್ಯ ಕಲಾತ್ಮಕ ಸಾಹಿತ್ಯವು ಬಹುಜನ ಸಮಾಜದಿಂದ ದೂರ ಸರಿಯಹತ್ತಿತು.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಸಮಾಜದಲ್ಲಿ ಎಷ್ಟೊಂದು ಆಲ್ಲೋಲಕಲ್ಲೋಲ ನಡೆದಿದೆ, ಎಷ್ಟೊಂದು ಸಮಸ್ಯೆಗಳು ಹುಟ್ಟಿಕೊಂಡಿವೆ, ಎಷ್ಟೊಂದು ಸಂಘರ್ಷ ನಡೆದಿದೆ. ಸಾಮಾಜಿಕ ಜೀವನ ಶೃಂಖಲಾಬದ್ಧವಾಗಿದೆ. ಈ ಸಂಕೋಲೆಗಳನ್ನು ಕಡಿದೊಗೆಯಲು ನವ್ಯಸಾಹಿತ್ಯ ಅಸಮರ್ಥವಿದೆ. ಸಮಾಜಕ್ಕಾಗಿ ಸಾಹಿತ್ಯವು ಸೇವೆ ಸಲ್ಲಿಸಬೇಕು ಎಂಬ ಭಾವನೆಯೆ ಇಲ್ಲದಂತಾಗಿದೆ.

ಕಲಾವಾದಿ ಸಂಪ್ರದಾಯದ ಸ್ಥಿತಿ ಇದು. ಇನ್ನುಳಿದ ಲೇಖಕರು ಎಲ್ಲಿದ್ದಾರೆ? ನವ್ಯಸಾಹಿತ್ಯದ ಈ ಪ್ರತ್ಯೇಕತಾವಾದ ತಮಗೆ ಒಪ್ಪಿತವಿಲ್ಲ ಎಂದು ಬಹಿರಂಗವಾಗಿ ಹೇಳುವ ನೀತಿ, ಧೈರ್ಯ ಈ ಲೇಖಕರಿಗಿಲ್ಲ. ಅದನ್ನು ಅರಗಿಸಿಕೊಳ್ಳಲೂ ಆಗುವದಿಲ್ಲ. ಕಲಾವಿಮರ್ಶಕರ ಅನುಗ್ರಹವನ್ನು ಕಳೆದುಕೊಳ್ಳುವಂತಿಲ್ಲ. ಆದರೂ ಸಾಹಿತ್ಯ ನಿರ್ಮಾಣವಾಗಲೇಬೇಕು. ಇಂಥ ಪರಿ

ಐತಿಹಾಸಿಕ ವಾಙ್ಮಯ

ಪಾರತಂತ್ರ್ಯದಲ್ಲಿದ್ದಾಗ ಐತಿಹಾಸಿಕ ವಾಙ್ಮಯಕ್ಕೊಂದು ನಿಶ್ಚಿತ ಉದ್ದೇಶವಿರುತ್ತದೆ. ಸ್ವಾತಂತ್ರ್ಯ ದೊರೆತ ನಂತರವೂ ಆ ವಾಙ್ಮಯದ ಮೋಹ ಏಕೆ?

ಐತಿಹಾಸಿಕ ವ್ಯಕ್ತಿಗಳನ್ನು ಸಾಮಾಜಿಕ ದೃಷ್ಟಿಕೋನದಿಂದ ನೋಡಿ ಅವರೂ ಮನುಷ್ಯರೇ ಎಂದು ದರ್ಶನ ಮಾಡಿಸುವದು ಸ್ತುತ್ಯವಾದರೂ ಐತಿಹಾಸಿಕ ಪೌರಾಣಿಕ ವ್ಯಕ್ತಿಗಳ ಸ್ವರೂಪ, ಆ ಆ ಸಂದರ್ಭಗಳಲ್ಲಿಯ ಜನಮನ

ದಲ್ಲಿ ಸುಪ್ರತಿಷ್ಠಿತವಾಗಿರುವದರಿಂದ, ಅದನ್ನು ಭಂಗಿಸಿದಂತಾಗುತ್ತದೆ.

'ಜಯ ನಾವಾಚಾ ಇತಿಹಾಸ,' 'ಯುಗಾಂತ,' 'ಮಹಾ ಭಾರತಾತೀಲ ವ್ಯಕ್ತಿ' ಮುಂತಾದ ಕೃತಿಗಳನ್ನು ಕಾದಂಬರಿಗಳೆಂದು ಕರೆಯಲಾಗುವದಿಲ್ಲ. ಆದರೆ ಇವುಗಳಲ್ಲಿ ಪೌರಾಣಿಕ ವ್ಯಕ್ತಿಗಳಿಗೆ, ಅವರ ಜೀವನಕ್ಕೆ ಹೊಸ ಅರ್ಥ ಕಲ್ಪಿಸುವ ಪ್ರವೃತ್ತಿ ಹೊಸದೆನಿಸುತ್ತದೆ. ಇಂಥ ಪ್ರಯತ್ನ ನಡೆಯಬಾರದು ಎಂದಲ್ಲ. ಆದರೆ ಪ್ರಚಲಿತ ಜೀವನದ ಸಂದರ್ಭದಲ್ಲಿ ಇಂಥ ಪ್ರಯತ್ನ ನಡೆದರೆ ಅದು ಪ್ರಚಲಿತ ಜೀವನವಿಕಾಸಕ್ಕೆ ಪ್ರಯೋಜನಕಾರಿಯಾದೀತು. ಶ್ರುತಿ, ಸ್ಮೃತಿ, ಪುರಾಣೋಕ್ತ ಜೀವನ ತತ್ತ್ವಜ್ಞಾನವು ಶಾಶ್ವತ ಸ್ವರೂಪದ್ದು. ಆದ್ದರಿಂದ ಪ್ರತಿಯೊಂದು ಯುಗದಲ್ಲಿ ಆ ಕಾಲಕ್ಕನುಗುಣವಾಗಿ ಅನ್ವಯಾರ್ಥವನ್ನು ವಿವರಿಸಬೇಕಾಗುತ್ತದೆ. ಆದರೆ ಐತಿಹಾಸಿಕ, ಪೌರಾಣಿಕ ಕೃತಿಗಳನ್ನು ಬರೆಯುವವರ ಪ್ರವೃತ್ತಿ ಹೀಗಿರುವಂತೆ ತೋರುವದಿಲ್ಲ. ಕೇವಲ ಕಲೆಗಾಗಿ, ಕೇವಲ ಆನಂದಕ್ಕಾಗಿ ವಾಸ್ತವ ಜೀವನಕ್ಕೆ ವಿಮುಖರಾದರು. ಕೇವಲ ವಾದ(ನವ್ಯ)ವು ರುಚಿಸದಿದ್ದವರು ಪಲಾಯನವಾದವನ್ನು ಸ್ವೀಕರಿಸಿದರು. ಪುರಾಣೇತಿಹಾಸಗಳಲ್ಲಿ ರಮಮಾಣರಾದರು. ಇವೆರಡೂ ಸೇರದವರು ತಮ್ಮ ಸಾಂಪ್ರದಾಯಿಕ ದಾರಿಯಲ್ಲಿಯೆ ನಡೆದರು. ನವ್ಯಸಾಹಿತ್ಯದ ಕೇವಲವಾದ ತನ್ನದಲ್ಲ ಎಂದು ಭಾವಿಸಿದ ಸರ್ವಸಾಮಾನ್ಯ ವಾಚಕನು ಪಾರಂಪರಿಕ ವಾಙ್ಮಯದಿಂದಲೇ ತನ್ನ ಹಸಿವನ್ನು ಹಿಂಗಿಸಿಕೊಳ್ಳಹತ್ತಿದ. ಅಂತೆಯೆ ಚಂದ್ರಕಾಂತ ಕಾಕೋಡಕರ, ಮಾಧವ ಕಾನಿಟಕರರಂಥ ಸಾಮಾನ್ಯ ಕಾದಂಬರಿಕಾರರೂ ವಿಶೇಷ ಲೋಕಪ್ರಿಯತೆಯನ್ನು ಸಂಪಾದಿಸಿದರು.

ನವ್ಯಸಾಹಿತ್ಯ, ನವ್ಯವಾಙ್ಮಯೀನ ಪ್ರವೃತ್ತಿಗಳು ಸಂಪೂರ್ಣ ಗುಣಪರಿಪೂರ್ಣವಾಗಿದ್ದರೆ ಸರ್ವಸಾಮಾನ್ಯ ರಸಿಕರ ವರೆಗೂ ಅವು ಹೋಗಿ ಮುಟ್ಟಬೇಕು. ಆದರೆ ಹಾಗೆ ಆಗಿಲ್ಲ. ನವ್ಯಸಾಹಿತ್ಯವು ಆತ್ಮಕೇಂದ್ರೀಭೂತವಾದದ್ದೇ ಇದಕ್ಕೆ ಕಾರಣ. ಸರ್ವಸಾಮಾನ್ಯ ವಾಚಕನನ್ನು ಅವರು ವಿಶ್ವಾಸದಿಂದ ಸ್ವಾಗತಿಸಲಿಲ್ಲ.

'ಅಹೋ ಅರ್ಜುನಾಚಿಯೆ ಪಾಂತೀ। ಪರಿಸರಣಿ ಚಿಯೋಗ್ಯ ಹೋತಿ' ಎಂದು ಜ್ಞಾನೇಶ್ವರರಂಥ ಸಂತ ಕವಿಗಳು ಶ್ರೋತೃವೃಂದವನ್ನು ವಿಶ್ವಾಸದಿಂದ ಸ್ವಾಗತಿಸುತ್ತಿದ್ದರು. ಇದ್ದುದೆಲ್ಲ ನಿಮಗಾಗಿ ಎಂಬ ಪ್ರವೃತ್ತಿ ಪ್ರಾಚೀನರದು.

ಸ್ವಾಂತಃಸುಖಾಯ

ಏತದ್ವಿರುದ್ಧವಾಗಿದ್ದಾರೆ ಅತ್ಯಾಧುನಿಕರು. ನಾವು ಬರೆಯುವದೆಲ್ಲ ನಮ್ಮ ಆತ್ಮಾವಿಷ್ಕಾರಕ್ಕಾಗಿ, 'ಸ್ವಾಂತಃಸುಖಾಯ' ಎನ್ನುತ್ತಾರಿವರು. ಇಂದಿನ ಮರಾಠಿ ಸಾಹಿತ್ಯದಲ್ಲಿ ಈ ಸ್ವಾಂತಃಸುಖಾಯ ಎಂಬ ಪ್ರವೃತ್ತಿ ಪ್ರಬಲವಾಗಿದೆ.

ಇಂದಿನ ನಾಟಕಗಳ ಕುರಿತು ನಾಲ್ಕುಮಾತು. ನವ್ಯ ಕಾವ್ಯ ಕಥೆಗಳಂತೆಯೆ ನವ್ಯ ನಾಟಕವೂ ಕೆಲವು ಹೊಸ ಪ್ರವೃತ್ತಿಗಳನ್ನು ಕರೆತಂದಿವೆ. ಈ ನಾಟಕಗಳು ಇಬ್ಸೆನ್ನನ ಅಂಧಾನುಕರಣಗಳಾಗಿರುತ್ತವೆ. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಹೊಸ ಪ್ರಕಾರಗಳೂ ಬಂದು ಸೇರಿಕೊಂಡಿವೆ. Absurd Theatreನಂತೆ ನ-ನಾಟ್ಯ ಪ್ರಯೋಗಗಳಾದವು; ನ—ನಾಟ್ಯ ಕೃತಿಗಳೂ ಬಂದವು. ವ್ಯಕ್ತಿಜೀವನದಲ್ಲಿಯ ವೈಫಲ್ಯ, ಅರ್ಥಶೂನ್ಯತೆ, ನೈರಾಶ್ಯ, ಟೊಳ್ಳುತನ ಇವೆಲ್ಲವನ್ನೂ ಶಬ್ದ ಮತ್ತು ಅಭಿನಯದ ಸಹಾಯದಿಂದ ವ್ಯಕ್ತಪಡಿಸುವ ಪ್ರಯತ್ನವನ್ನು ಚಿಂ. ತ್ರ್ಯಂ. ಖಾನೋಲಕರ, ವಿಜಯ ತೆಂಡೂಲಕರ ಮುಂತಾದ ನವ್ಯ ನಾಟಕಕಾರರು ಮಾಡಿದ್ದಾರೆ. 'ರಂಗಾಯನ'ದಂಥ ಹೊಸ ಪ್ರಯೋಗ ರಂಗಭೂಮಿಯ ಮೇಲೆ ನಡೆದರೂ ಅದಕ್ಕೆ 'ಹೊಸ ಪ್ರಯೋಗ' ಎಂಬುದಕ್ಕಿಂತ ಹೆಚ್ಚಿನ ಯಶಸ್ಸು ಸಿಗಲಿಲ್ಲ.

ರಂಗಭೂಮಿಗೆ ವೈಭವದ ಕಾಲ

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮರಾಠಿ ರಂಗಭೂಮಿಗೆ ವೈಭವದ ಕಾಲ ಪ್ರಾಪ್ತವಾಗಿದೆ. ಹೊಸ ನಾಟಕಕಾರರು, ಹೊಸ ನಾಟಕ ಸಂಸ್ಥೆಗಳು ಬೆಳಕಿಗೆ ಬರಹತ್ತಿದ್ದಾರೆ. ಮುಂಬೈ ಮರಾಠಿ ಸಾಹಿತ್ಯ ಸಂಘವು ನಾಟ್ಯೋತ್ಸವ ಸಂಪ್ರದಾಯ ಪ್ರಾರಂಭಿಸಿತು. ಹಳೆ-ಹೊಸ ನಾಟಕಗಳು ನಾಟ್ಯೋತ್ಸವದಲ್ಲಿ ಪ್ರಸಿದ್ಧಿ ಪಡೆದವು. ಈ ನಾಟ್ಯೋತ್ಸವದ ಪ್ರೋತ್ಸಾಹದಿಂದಲೇ ಪು. ಲ. ದೇಶಪಾಂಡೆ, ವಿ. ವಾ. ಶಿರವಾಡಕರರಂಥ ನಾಟಕಕಾರರು ಮುಂದೆ ಬಂದರು. ಸಾಹಿತ್ಯ ಸಂಘದ ನಾಟ್ಯಶಾಖೆಯು ಹೊಸ ಪ್ರಾಯೋಗಿಕ ನಾಟಕಗಳನ್ನೂ ಪ್ರದರ್ಶಿಸಿತು.

ಈಗಂತೂ ಮಹಾರಾಷ್ಟ್ರ ಸರಕಾರದ ಪರವಾಗಿಯೆ ನಾಟ್ಯಮಹೋತ್ಸವ ಸ್ಪರ್ಧೆ ನಡೆಯುತ್ತಿದೆ. ಮರಾಠಿ ನಾಟಕಕ್ಕೆ ಲೋಕಾಶ್ರಯದಂತೆ ರಾಜಾಶ್ರಯವೂ ಲಭಿಸಿದೆ ಎಂಬುದು ಗಮನಾರ್ಹ.

'ಏಕಪಾತ್ರಾಭಿನಯ' ಎಂಬ ಹೊಸಪ್ರಕಾರವೂ ಇದೇ ಕಾಲದಲ್ಲಿ ಬೆಳಕಿಗೆ ಬಂದಿತು. ಸುಹಾಸಿನಿ ಮುಳಗಾಂವಕರರು 'ಸೌಭದ್ರ'ದಂಥ ಹಳೆಯ ನಾಟಕವನ್ನು ಒಬ್ಬರೇ ಅಭಿನಯಿಸಿ ತೋರಿಸಿದರು. 'ಬಟಾಟ್ಯಾಚಿ ಚಾಳ' ಇದು ನಾಟ್ಯಕೃತಿ ಅಲ್ಲ. ಆದರೆ ಪು. ಲ. ದೇಶಪಾಂಡೆ ಅವರು ತಮ್ಮ ಕಥೆಗಳನ್ನು ನಾಟಕ ರೂಪದಲ್ಲಿ ನಿವೇದಿಸಿದರು. ಈ ಹೊಸ ಸಂಪ್ರದಾಯವು ಬೇರೆ ಬೇರೆ ರೂಪಧಾರಣ ಮಾಡುತ್ತಿದೆ. ಸದಾನಂದ ಜೋಶಿ ಅವರು ರಂಗಭೂಮಿಯ ಮೇಲೆ ಅತ್ರೆ ಅವರ ಜೀವನ ಚರಿತ್ರೆಯನ್ನು, ಕೇವಲ ಅಭಿನಯದಿಂದ ಪ್ರಯೋಗಿಸಿದರು.

ಮರಾಠಿ ಸಂಗೀತ ನಾಟಕಗಳ ಪರಂಪರೆ ನಡುವೆ ಕುಗ್ಗಿತ್ತು. ವಿದ್ಯಾಧರ ಗೋಖಲೆ ಅವರು ಸಂಗೀತ ನಾಟಕಗಳನ್ನು ಬರೆದು, ಈ ಪರಂಪರೆಯನ್ನು ಪುನಃ ಪ್ರಾರಂಭಿಸಿದರು. ಸಾಹಿತ್ಯದ ದೃಷ್ಟಿಯಿಂದ ಆಚಾರ್ಯ ಅತ್ರೆಯವರ ನಾಟಕಯುಗ ಸ್ವಾತಂತ್ರ್ಯಪೂರ್ವದ್ದು.

ಆದರೆ ಅವರು ಅತ್ರೆ ಥಿಯೆಟರ್ಸ ಮುಖಾಂತರ ರಂಗಭೂಮಿಗೆ ತಂದ 'ತೋ ಮಿ ನವ್ಹೇಚ' ಮತ್ತು 'ಡಾ. ಲಾಗು' ಪ್ರಸಿದ್ಧಿ ಪಡೆದವು. ಸಮಾಜದಲ್ಲಿ ನಡೆದ ದುರ್ಘಟನೆಗಳನ್ನು ವಿಡಂಬನ-ಹಾಸ್ಯಗಳ ಸಹಾಯದಿಂದ ಈ ನಾಟಕಗಳಲ್ಲಿ ಚಿತ್ರಿಸಿದ್ದಾರೆ.

ಆಚಾರ್ಯ ಅತ್ರೆ ಅವರು ಮತ್ತೆ ನಾಟಕಗಳನ್ನು ಬರೆಯಬೇಕೆಂದು ನಿರ್ಧರಿಸಿದ್ದರು. ಆದರೆ ಕಾಲವಶರಾದರು. ಇಲ್ಲದಿದ್ದರೆ ಅವರು

ತಮ್ಮ ನಾಟಕಗಳಿಂದ ಮಾತ್ರ ರಂಗಭೂಮಿಯ ಇತಿಹಾಸವನ್ನು ರೂಪಿಸುತ್ತಿದ್ದರು.

ಹಳೆಯ ನಾಟಕಗಳಿಗೆ ಮೆಚ್ಚುಗೆ

ಸರ್ವಸಾಮಾನ್ಯ ಪ್ರೇಕ್ಷಕನು ಇಂದಿಗೂ ಕೂಡ ಹಳೆಯ ನಾಟಕಗಳನ್ನೇ ಮೆಚ್ಚುತ್ತಾನೆ. ಕೌಟುಂಬಿಕ ನಾಟಕಗಳೂ 'ಮೆಲೊಡ್ರಾಮಾ'ಗಳೂ ಆತನಿಗೆ ರುಚಿಸುತ್ತವೆ. ಇವುಗಳಲ್ಲಿ ಆತನಿಗೆ ಸಹಾನುಭವದ ಪ್ರತ್ಯಯ ಉಂಟಾಗುವದೇ ಕಾರಣ. ಹೊಸ ಪ್ರವೃತ್ತಿಗಳನ್ನು ಪ್ರೇಕ್ಷಕನು ಅರಿತಿಲ್ಲನೆಂದಲ್ಲ. ಆದರೆ ಹೊಸ ಪ್ರವೃತ್ತಿಯಲ್ಲಿ ಸಹಾನುಭೂತಿಯನ್ನು ನೀಡುವ ಸಾಮರ್ಥ್ಯವಿಲ್ಲ.

ಪಾಶ್ಚಾತ್ಯ ನಾಟಕಗಳ ಭಾಷಾಂತರ, ರೂಪಾಂತರ, ಅನುವಾದ ರೂಪದಲ್ಲಿ ಹೊಸ ನಾಟಕಗಳು ಬರುತ್ತಿವೆ. ಅವುಗಳಲ್ಲಿ ಸಾಹಿತ್ಯಕ ಮೌಲ್ಯಕ್ಕಿಂತ ಪ್ರಾಯೋಗಿಕ ಮೌಲ್ಯಕ್ಕೆ ಪ್ರಾಶಸ್ತ್ಯ ಹೆಚ್ಚಿರುತ್ತದೆ. ಸದ್ಯಕ್ಕಂತೂ ಮರಾಠಿ ರಂಗಭೂಮಿಗೆ ಉತ್ಕರ್ಷದ ಕಾಲ. ನಾಟ್ಯಸಂಸ್ಥೆಗಳೂ ಅನೇಕ.

ಆದರೆ ಪ್ರೇಕ್ಷಕನು ರಂಗಭೂಮಿಯತ್ತ ಹೀಗೆ ಹಠಾತ್ತಾಗಿ ತಿರುಗಿದ್ದೇಕೆ? ನನಗೆ ತಿಳಿದಮಟ್ಟಿಗೆ ಇದಕ್ಕೊಂದು ಕಾರಣವಿದೆ. ನವ್ಯಕಾವ್ಯ, ನವ್ಯಕಥೆ, ನವ್ಯ ಕಾದಂಬರಿಗಳು ವಾಚಕರಿಗೆ ಸಹಾನುಭವದ ಆನಂದ ನೀಡುವದಿಲ್ಲ. ನಾಟಕದಲ್ಲಿ ಕನಿಷ್ಠ ಮೂರು ಗಂಟೆ ಕಾಲ ಮನೋರಂಜನೆ ದೊರೆಯುತ್ತದೆ. ಸುತ್ತ ಕಣ್ಣಿಗೆ, ಕಿವಿಗೆ ಸಾಕಷ್ಟು ಆನಂದಾನುಭವವಾಗುತ್ತದೆ.

ಕಾವ್ಯಸಂಕಲನದ ಮೊದಲ ಮುದ್ರಣದ ಪ್ರತಿಗಳು (ವರ್ಷಗಳುರುಳಿದರೂ ಮಾರಾಟವಾಗುವದಿಲ್ಲ. ನವ್ಯಕಥಾಸಂಕಲನಗಳ ಪ್ರತಿಗಳೂ ಪ್ರಕಾಶಕರಲ್ಲಿ ಹಾಗೇ ಬಿದ್ದುಕೊಂಡಿರುತ್ತವೆ. ಆದರೆ ಯಾವುದೊಂದು ಕೌಟುಂಬಿಕ ನಾಟಕದ ಪ್ರಯೋಗಗಳ ಸಂಖ್ಯೆ ವರ್ಷ ತುಂಬುವದರೊಳಗೆ ಐನೂರನ್ನೂ ಮೀರುತ್ತದೆ. ಇದರ ಗುಟ್ಟೇನು?

ಸಾಹಿತ್ಯದಲ್ಲಿಯ ಹೊಸ ಪ್ರವೃತ್ತಿಗಳು ಸರ್ವಸಾಮಾನ್ಯರ ಮನಸ್ಸಿನಲ್ಲಿ ಬೇರೂರುವದಿಲ್ಲ. ಇದಕ್ಕೇನು ಕಾರಣ?

ಪ್ರತಿಯೊಂದು ನೆಲದ ಗುಣವೂ ಬೇರೆ, ಅಲ್ಲಿಯ ಜೀವನವೂ ಹಾಗೆ ಬೇರೆ ಬೇರೆಯಾಗಿರುತ್ತದೆ. ಅಲ್ಲಲ್ಲಿಯ ಸಂಸ್ಕೃತಿ, ಇತಿಹಾಸ, ಪರಂಪರೆಗಳು ಅಲ್ಲಲ್ಲಿಯ ಜೀವನ ರೂಪಿಸುವಲ್ಲಿ ತಮ್ಮ ಪ್ರಭಾವ ಬೀರಿರುತ್ತವೆ. ಮಾನವ ಸ್ವಭಾವದ ಮೂಲತತ್ತ್ವ, ಮೂಲಭಾವನೆಗಳು ಒಂದೇ ಆಗಿದ್ದರೂ ಮಾನವನು ತಾನು ಹುಟ್ಟಿದ ನಾಡಿನ ಜೀವನದ ಗುಣಧರ್ಮಗಳನ್ನೂ ಅಳವಡಿಸಿಕೊಳ್ಳಬೇಕಾಗುತ್ತದೆ. ಕೆಲ ಉಪಾಧಿಗಳೂ ಅಂಟಿಕೊಳ್ಳುತ್ತವೆ. ಮನುಷ್ಯನು ಯಾವ ಸಮಾಜದಲ್ಲಿಯೆ ಹುಟ್ಟಿಬಂದರೂ ಆತ ನಿರುಪಾಧಿಕನಾಗಿ ಉಳಿಯಲಾರ. ಮನುಷ್ಯನ ಹಾಗೂ ಸಮಾಜದ ವೃತ್ತಿ-ಪ್ರವೃತ್ತಿಗಳಲ್ಲಿ ಮಾರ್ಪಾಡು ನಡೆಯುತ್ತದೆ. ಇಂಥ ಮಾರ್ಪಾಡು ಸ್ವಾಭಾವಿಕವಾಗಿರಬೇಕು. ಅಂದರೆ ಹೊಸ ಪ್ರವೃತ್ತಿಗಳು ಅಲ್ಲಿಯ ಮಣ್ಣಿನ ಗುಣವನ್ನು ಹೊತ್ತು ಬರಬೇಕು. ಅಥವಾ ಹೊರಗಿನಿಂದ ಬರುವ ಪ್ರವೃತ್ತಿಗಳು ಇಲ್ಲಿಯ ಸ್ವಭಾವಕ್ಕೆ ಹೊಂದಿಕೊಳ್ಳಬೇಕು.

ಪಾಶ್ಚಿಮಾತ್ಯರಿಂದ ಬಂದುವು

ವಾಙ್ಮಯದಲ್ಲಿಯ ಹೊಸ ಪ್ರವೃತ್ತಿಗಳು ಹೀಗೆ ಸ್ವಭಾವದಿಂದ ಉದ್ಭವವಾಗಿಲ್ಲ. ಪಾಶ್ಚಿಮಾತ್ಯರಿಂದ ಅವು ಬಂದಿವೆ. ಪಾಶ್ಚಾತ್ಯರಿಂದ ಬಂದಂಥ ಆದರೆ ನಮ್ಮ ಸ್ವಭಾವಕ್ಕೆ ಸು... ವಾದಂಥ ಪ್ರವೃತ್ತಿಗಳು ಕಾಲಕ್ರಮೇಣ ನಮ... ಪರಂಪರೆಯಲ್ಲಿ ಒಂದಾಗಿ ಹೋದವು. ಆದ... ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮಹಾಯುದ್ಧೋತ್ತ... ಕಾಲದಲ್ಲಿ ನಿರ್ಮಾಣವಾದಂಥ ಪ್ರವೃತ್ತಿಗಳನ್ನು ಅವರ ಸಾಹಿತ್ಯದಲ್ಲಿ ಪ್ರಕಟವಾದ ಪ್ರವೃ... ಗಳನ್ನು, ಅವು ಹೊಸವೆಂದ ಮಾತ್ರಕ್ಕೆ, ನಮ... ಜೀವನದಲ್ಲಿ, ನಮ್ಮ ಅನುಭವಗಳಲ್ಲಿ, ... ಗಳನ್ನು ಪ್ರಕಟಿಸುವ ಸಾಹಿತ್ಯದಲ್ಲಿ, ... ತುಂಬಿಕೊಳ್ಳಬೇಕೆ ಎಂಬುದು ಮಹತ್ವ... ಪ್ರಶ್ನೆ.

ಮಹಾಯುದ್ಧದ ನಂತರ ಪಾಶ್ಚಾತ್ಯರ ಜೀ... ನದಲ್ಲಿ ವೈಫಲ್ಯ ಉಂಟಾಯಿತು. ಅಮೇರಿ... ಯಂಥ ಅತಿ ಸಮೃದ್ಧ ರಾಷ್ಟ್ರದಲ್ಲಿ ಆ ಕಾರ... ದಿಂದಲೇ ವೈಫಲ್ಯ ಕಂಡುಬಂದಿತು. ನಮ್ಮ ದೇ... ದಲ್ಲಿಯೂ ಸ್ವಾತಂತ್ರ್ಯೋತ್ತರ ಕಾಲದ... ವೈಫಲ್ಯ ಕಂಡುಬಂದಿತು. ಈ ಮೂ... ವೈಫಲ್ಯಗಳ ಸ್ವರೂಪ ಬೇರೆ ಬೇರೆ. ಈ ವೈಫ... ವು ನವ್ಯಸಾಹಿತ್ಯದ ಪ್ರವೃತ್ತಿ ಎಂದಾ... ನಮ್ಮ ಸಾಹಿತ್ಯದಲ್ಲಿ ನಮ್ಮ ವೈಫಲ್ಯದ ದರ... ವಾಗಲಿಕ್ಕೇ ಬೇಕು. ಹೊಸ ಪ್ರವೃತ್ತಿಯ... ಪಾಶ್ಚಾತ್ಯರ ವೈಫಲ್ಯದ ಅನುವಾದ ಮಾಡುವ... ಯೋಗ್ಯವಲ್ಲ.

ತಾವು ಷಂಡರು ಎಂಬ ಅರಿವು ಪಾಶ್ಚಾತ್ಯ... ಆಯಿತು. ಅವರಿಗಾದದ್ದು ನಮಗೂ ಆಗಬೇ... ಅಂಥ ಅನುಭವ ನೀಡುವಂಥ ಘಟನೆ ನ... ಜೀವನದಲ್ಲಿ ಸಂಬಂಧಿಸಿದ್ದಾದರೂ ಏನು?

ದಾರುಣ ವೈಫಲ್ಯ, ನಿರ್ಗತಿಕತೆ, ... ಶೂನ್ಯತೆ, ಅಸಹಾಯಕತೆಗಳ ಮೂಲಕ ಪಾ... ತ್ಯರಿಗೆ ಮನುಷ್ಯನ ಅಸ್ತಿತ್ವದ ಬಗೆಗೇ ಸಂಶ... ಉಂಟಾದರೆ ನಮಗೂ ಹಾಗೇ ಆಗಬೇಕೆ?

ಇಂದಿನ ಮರಾಠಿ ಸಾಹಿತ್ಯದಲ್ಲಿ ಅ... ವಾದದ ಹೊಸ ಪ್ರವಾಹ ಪ್ರಾರಂಭವಾ... ಆದರೆ ಫ್ರೆಂಚ್ ಸಾಹಿತ್ಯದಲ್ಲಿ ಅಸ್ತಿತ್ವ... ಪ್ರಾರಂಭವಾಗಬೇಕಾದ ಕಾಲಕ್ಕೆ ಇದ್ದ ಪ... ನಮ್ಮ ಜೀವನದಲ್ಲಿ ಇನ್ನೂ ಉಂಟಾಗಿಯ...

ಇಂದು ಮರಾಠಿ ಸಾಹಿತ್ಯದಲ್ಲಿ ಕಂಡುಬ... ಪರಿಸ್ಥಿತಿ ಹೀಗಿದೆ :— ಪಾಶ್ಚಾತ್ಯ ಸಾಹಿ... ಹೊಸದೆಂದು ಕಂಡುಬಂದದ್ದನ್ನೆಲ್ಲ ತಂದು ಸ್ವಭಾವಕ್ಕೆ ಸುಸಂಗತವಾಗಿರಲಿ ಬಿಡಲಿ ಅ... ಮರಾಠಿ ಸಾಹಿತ್ಯಕ್ಕೆ ಕಸಿ ಮಾಡುವದು ... ಮರಾಠಿ ಸಾಹಿತ್ಯದಲ್ಲಿ ಸಮಾಜಜೀವನದ ನೆಳಲೂ ಇಲ್ಲ, ಸ್ವದೇಶಿಯ ಗುರುತೂ ಇಲ್ಲ ಸಾಮಾನ್ಯ ಮರಾಠಿ ವಾಚಕನಿಗೆ ಮರಾಠಿ ಸಾಹಿತ್ಯವು ಅನೇಕ ರೀತಿಯಿಂದ ಪರಕೀಯ... ಸುತ್ತದೆ. ಹೀಗಾಗಿ ಸರ್ವಸಾಮಾನ್ಯ ವಾ... ಪಾರಂಪರಿಕ ಸಾಹಿತ್ಯದಿಂದಲೇ ತನ್ನ ... ಯನ್ನು ನಿವಾರಿಸಿಕೊಳ್ಳುತ್ತಾನೆ.


ದೀಪಾವಳಿಯ ಶುಭಾಶಯಗಳು
ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಲಿಮ್.
ಬೆಂಗಳೂರು
Communication is our business

ಗುಜರಾತಿ ಸಾಹಿತ್ಯ ನಡೆದ ದಾರಿ

—ಡಾ. ಪ್ರಮೋದಕುಮಾರ ಪಟೇಲ

ಗುಜರಾತಿ ಸಾಹಿತ್ಯವಿಂದು ಕವಲು ದಾರಿಯಲ್ಲಿದೆ; ನವ್ಯಧ್ವನಿಯನ್ನು ಬಳಸಿಕೊಂಡು ಶ್ರೇಷ್ಠ ಸಾಹಿತ್ಯ ನಿರ್ಮಿಸಬಲ್ಲ ಪ್ರತಿಭಾವಂತನಿನ್ನೂ ಅಲ್ಲಿ ಬರಬೇಕಿದೆ ಎನ್ನುತ್ತಾರೆ ಲೇಖಕರು.

ಕಳೆದ ಶತಮಾನದ ಮಧ್ಯದಲ್ಲಿ ಭಾರತೀಯ ಪುನರುಜ್ಜೀವನದೊಂದಿಗೆಯೆ ಗುಜರಾತಿ ಸಾಹಿತ್ಯದಲ್ಲಿ ಆಧುನಿಕಯುಗ ಆರಂಭವಾಯಿತೆಂದು ಸಾಮಾನ್ಯವಾಗಿ ವಿದ್ವಾಂಸರು ನಂಬುತ್ತಾರೆ. ಗುಜರಾತದಲ್ಲಿಯೂ ಅದು ಸಾಮಾಜಿಕ ಸುಧಾರಣೆಗಳ ಕಾಲವಾಗಿತ್ತು. ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ, ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಯುವಕರು ಮುಂದಾಗಿ ದುಡಿಯತೊಡಗಿದರು. ಸಾಹಿತ್ಯ ಅವರ ಪ್ರಚಾರ ಮಾಧ್ಯಮವಾಗಿ ಪರಿಣಮಿಸಿತು. ಅದಕ್ಕಾಗಿ ಸಾಹಿತ್ಯದ ವಿವಿಧ ರೂಪಗಳನ್ನು ಅವರು ಬಳಸಿಕೊಳ್ಳಲು ತೊಡಗಿದರು. ಪದ್ಯ ಬಹು ಸುಲಭ ಲಭ್ಯ ರೂಪವಾಗಿದ್ದರಿಂದ ಅದರ ಬಳಕೆ ವ್ಯಾಪಕ ಪ್ರಮಾಣದಲ್ಲಿ ನಡೆಯಿತು. ಇತರ ಭಾರತೀಯ ಸಾಹಿತ್ಯಗಳಲ್ಲಿಯಂತೆಯೆ ಮಧ್ಯಯುಗೀನ ಗುಜರಾತಿ ಕಾವ್ಯವು ಸಹ ಧಾರ್ಮಿಕ ದೃಷ್ಟಿಕೋನಕ್ಕೆ ಸೀಮಿತವಾಗಿತ್ತು. ಆದರೆ ಆಧುನಿಕ ಕಾವ್ಯ ಆ ಸಂಕುಚಿತ ಪರಿಮಿತಿಯನ್ನು ಮೀರಿ ನಿತ್ಯ ಜನಜೀವನದ ಸಮಸ್ಯೆಗಳನ್ನು ತನ್ನ ವಸ್ತುವಾಗಿ ಸ್ವೀಕರಿಸಿ ವಾಸ್ತವ ಜಗತ್ತಿಗಿಳಿಯಿತು.

ಪ್ರಾರಂಭಕಾಲ

ಆಧುನಿಕ ಗುಜರಾತಿ ಸಾಹಿತ್ಯದ ಪ್ರಾರಂಭ ಕಾಲದಲ್ಲಿ [೧೮೫೦ ರಿಂದ ೧೮೮೫] ಕವಿ ದಲಪತರಾಮ ಮತ್ತು ನರ್ಮದ ಆ ಯುಗದ ಪ್ರಾತಿನಿಧಿಕ ಕವಿಗಳೆನಿಸಿದರು. ಅವರಿಬ್ಬರೂ ಭಿನ್ನ ಪ್ರಕೃತಿಯವರೂ ಕಾವ್ಯದ ಬಗೆಗೆಯೆ ಭಿನ್ನ ಕಲ್ಪನೆಯುಳ್ಳವರೂ ಆಗಿದ್ದರೆಂಬ ಮಾತು ಬೇರೆ. ಕವಿ ದಲಪತರಾಮರ ಕಾವ್ಯವಸ್ತು ಆಧುನಿಕವೇ ಆಗಿರುತ್ತಿತ್ತಾದರೂ ಅವರು ಮುಖ್ಯವಾಗಿ ವ್ರಜ ಕಾವ್ಯದ ಲಕ್ಷಣಗಳನ್ನು ಹೊಂದಿದ ಸಾಂಪ್ರದಾಯಿಕ ರೂಪದಲ್ಲಿಯೆ ಬರೆದರು. ಆದರೆ ನರ್ಮದರಲ್ಲಿ ಮಾತ್ರ ಹೊಸ ಯುಗದ ಭಾವೋತ್ಕಟತೆ ಪ್ರತಿಸ್ಪಂದಿಸುತ್ತಿತ್ತು. ಅಂತೆಯೆ ಅವರು ಸಾಹಿತ್ಯದ, ಜ್ಞಾನದ ಹಲವಾರು ಅಂಗಗಳಲ್ಲಿ ಏಕೈಕ ವೀರರಾಗಿ ಕಾರ್ಯ ಮಾಡಿದರು. ಕಾವ್ಯ, ನಿಬಂಧ, ವಿಮರ್ಶೆ, ಆತ್ಮವೃತ್ತ, ನಾಟಕ ಇತಿಹಾಸ, ಅರ್ಥಶಾಸ್ತ್ರ, ಶಬ್ದಕೋಶ, ಮುಂತಾದ ಎಲ್ಲ ಅಂಗಗಳಲ್ಲೂ ಅವರು ಕೃಷಿ ಮಾಡಿರುವರು. ಅವರದು ಹೊಸದಕ್ಕಾಗಿ ಹಾತೊರೆಯುವ ಅವಿಶ್ರಾಂತ ಆತ್ಮ. ಅಂತೆಯೆ ಅವರು ತಮ್ಮೆಲ್ಲ ವೈಯಕ್ತಿಕ ಭಾವನೆಗಳನ್ನೂ ಕಾವ್ಯದ ಚೌಕಟ್ಟಿನಲ್ಲಿ ಸೆರೆಹಿಡಿಯಲೆತ್ನಿಸಿದರು. ಇದೇ ಕಾರಣಕ್ಕಾಗಿ ಅವರನ್ನು ಗುಜರಾತಿನಲ್ಲಿ ವ್ಯಕ್ತಿನಿಷ್ಠ ಭಾವಗೀತದ ಜನಕನೆಂದು ಗುರುತಿಸಲಾಗುತ್ತದೆ. ಇಂಗ್ಲೀಷ್ ರಮ್ಯ ಕಾವ್ಯದ ಪ್ರಭಾವ ಅವರ ಮೇಲೆ ವಿಶೇಷವಾಗಿತ್ತು. ಈ ಕಾಲದಲ್ಲಿಯೆ ನವಲರಾಮರು ವಿಮರ್ಶಾ ಕ್ಷೇತ್ರಕ್ಕೆ ವಿಪುಲ ಕೊಡುಗೆಯನ್ನು ಸಲ್ಲಿಸಿದರಾದರೆ ನಂದಾಶಂಕರರ ಲೇಖನಿಯಿಂದ ಗುಜರಾತಿಯ ಪ್ರಪ್ರಥಮ ಕಾದಂಬರಿ-ಇದು ಐತಿಹಾಸಿಕ—'ಕರನ ಘೇಲೆ' ಮೂಡಿಬಂತು. ಇಂತು ಆಧುನಿಕ ಸಾಹಿತ್ಯದ ವಿಪುಲ ಕೃಷಿಗಾಗಿ ಭೂಮಿಯನ್ನು ಉತ್ತು ಹದಗೊಳಿಸುವ ಕಾರ್ಯ ಈ ಕಾಲದಲ್ಲಾಯಿಂತು.

ಎರಡನೆಯ ಅವಸ್ಥೆ


೧೮೮೫—೯೫ ರ ಸುಮಾರಿಗೆ ಗುಜರಾತಿ ಸಾಹಿತ್ಯ ಎರಡನೆಯ ಅವಸ್ಥೆಯನ್ನು ಪ್ರವೇಶಿಸುತ್ತದೆ. ಮುಂಬಯಿ ವಿಶ್ವವಿದ್ಯಾಲಯದ ಅನೇಕ ಗುಜರಾತಿ ವಿದ್ವಾಂಸರು ಧರ್ಮ, ತತ್ತ್ವಜ್ಞಾನ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಸಾಹಿತ್ಯ ರಚನೆಗೆ ಆರಂಭಿಸಿದರು. ಲಲಿತ ಸಾಹಿತ್ಯಕ್ಕೂ ಇವರ ಕಾಣಿಕೆ ಸಾಕಷ್ಟಾಯಿತಾದರೂ ಇವರ ದೃಷ್ಟಿಕೋನ ಮುಖ್ಯವಾಗಿ ವೈಚಾರಿಕವಾದುದಾಗಿತ್ತು. ಹಿಂದು ಧರ್ಮದ ಪಾರಂಪರಿಕ ಕಲ್ಪನೆಗಳನ್ನು, ಹಿಂದು ಸಮಾಜದ ರೂಪರಚನೆಯನ್ನು ಇವರು ಹೊಸ ಜ್ಞಾನದ ಬೆಳಕಿನಲ್ಲಿ ನೋಡಿ ಅರ್ಥವಿಸತೊಡಗಿದರು. ಮಣಿಲಾಲ ದ್ವಿವೇದಿ, ಗೋವರ್ಧನರಾಮ ಮತ್ತು ಆಚಾರ್ಯ ಆನಂದಶಂಕರರು ಅದ್ವೈತ ಸಿದ್ಧಾಂತದಲ್ಲಿ ಅನನ್ಯ ಶ್ರದ್ಧೆಯುಳ್ಳವರಾಗಿದ್ದರಾದ್ದರಿಂದ ಅವರ ವಿಚಾರಸರಣಿಯು ಮುಖ್ಯವಾಗಿ ಅದ್ವೈತ ಸಿದ್ಧಾಂತದ ತತ್ತ್ವಗಳನ್ನೇ ಆಧರಿಸಿದೆ. ಅಂದಿನ ಗುಜರಾತಿ ಲೇಖಕರನ್ನು ಈ ವೈಚಾರಿಕತೆ ಎಷ್ಟೊಂದು ಗಾಢವಾಗಿ ಆವರಿಸಿತೆಂಬುದಕ್ಕೆ ಒಂದು ಉದಾಹರಣೆಯನ್ನು ನೋಡಬಹುದು. ಗೋವರ್ಧನರಾಮ ತ್ರಿಪಾಠಿಯವರು ತಮ್ಮ ಪ್ರಸಿದ್ಧ ಬೃಹತ್ಕಾದಂಬರಿ 'ಸರಸ್ವತೀಚಂದ್ರ'(ನಾಲ್ಕು ಭಾಗಗಳಲ್ಲಿ ಪ್ರಕಟವಾಯಿತು) ವನ್ನು ರಚಿಸಿದುದರ ಮುಖ್ಯ ಉದ್ದೇಶವೇ ತಮ್ಮ ಕಾಲದ ಸಾಮಾಜಿಕ, ರಾಜಕೀಯ, ನೈತಿಕ ಹಾಗು ಸಾಂಸ್ಕೃತಿಕ ಸಮಸ್ಯೆಗಳ ಬಗೆಗಿನ ತಮ್ಮ ವಿಚಾರಗಳನ್ನು ಪ್ರತಿಪಾದಿಸುವುದಾಗಿತ್ತು. ಕೆಲವು ವಿಚಾರಗಳ ನಿರೂಪಣೆಗೆಂದು ಅವರು ಉದ್ದೇಶಪೂರ್ವಕವಾಗಿಯೆ ಈ ಕೃತಿಯ ಕಲಾತ್ಮಕತೆಯನ್ನು ಕಡೆಗಣಿಸಿದರು. ಅದರಿಂದಾಗಿ ಗುಜರಾತಿ ಸಾಹಿತ್ಯದಲ್ಲಿ ಇದಕ್ಕೊಂದು ಅಪೂರ್ವ ವಿಶಿಷ್ಟ ಸ್ಥಾನವಿದೆ.

ಈ ಕಾಲದಲ್ಲಿಯೆ ಗುಜರಾತಿ ಕಾವ್ಯ ಹೊಸ ಕಾವ್ಯಗುಣದಿಂದ ಸಮೃದ್ಧವಾಯಿತು. ಈ ಕಾಲದ ಕವಿಗಳು ಸಂಸ್ಕೃತ ಮಹಾಕಾವ್ಯದ ಅಭ್ಯಾಸದೊಂದಿಗೆ ಇಂಗ್ಲೀಷ್ ಸಾಹಿತ್ಯ, ಕಾವ್ಯ ಹಾಗು ಕಾವ್ಯ ವಿಮರ್ಶೆಗಳಲ್ಲೂ ಒಳ್ಳೆಯ ಅಭಿರುಚಿಯನ್ನು ಬೆಳೆಸಿಕೊಂಡು ಬಂದರು. ಇವೆರಡರ ಅಭ್ಯಾಸವೂ ಆಗ ಒಳ್ಳೆಯ ಭರದಿಂದಲೇ ನಡೆಯಿತು. ನರಸಿಂಹ ದಿವೇಟಿಯಾ ಅನೇಕ ಸುಂದರ ಭಾವಗೀತಗಳನ್ನು ರಚಿಸಿದರು. ನಿಸರ್ಗದ 'ಅದ್ಭುತರಮ್ಯತೆಯನ್ನು ಇಂಗ್ಲೀಷ್ ಭಾವಗೀತಕಾರರ ಮಾದರಿಯಲ್ಲಿಯೇ ತಮ್ಮ ಕವನಗಳ ಮೂಲಕ ವ್ಯಕ್ತಗೊಳಿಸಲು ಅವರು ಯತ್ನಿಸಿದರು. ಅವರ ಬರವಿನಿಂದಾಗಿ ಗುಜರಾತಿ ಕಾವ್ಯಕ್ಷೇತ್ರದ ವಸ್ತು ವಿಷಯದಲ್ಲಿ ಸಂಕುಚಿತಗೊಂಡಿತೆಂದು ಹೇಳಬೇಕು. ಅವರಿಗಿಂತ ಮೊದಲಿನ ಕವಿಗಳಿಗೆ ನಿತ್ಯ ಜೀವನದಿಂದಾಯ್ದುಕೊಂಡ ಯಾವುದೇ ವಿಷಯವು ಕಾವ್ಯವಸ್ತುವಾಗುತ್ತದಾದರೆ ನರಸಿಂಹರಾಯರ ಕಾವ್ಯ ನಿರ್ಮಿತಿ ಮಾತ್ರ ಕೆಲವೇ ಮೂಲಗಳಿಂದ ಸೌಂದರ್ಯವನ್ನಾಯ್ದುಕೊಳ್ಳುವುದಕ್ಕೆ ಸೀಮಿತವಾಗಿತ್ತು. ಅವರ ಸಮಕಾಲೀನರಲ್ಲಿ ಬಾಲಶಂಕರ ಕಂಥಾರಿಯಾ, ಕಾಂತ ಮತ್ತು ಕಲಾಪಿ ಈ ಮೂವರು ಹೆಸರಾಂತ ಕವಿಗಳು.

ಅವರಲ್ಲಿ ಕವಿ ಕಾಂತರ ವಿಶೇಷ ಸಾಧನೆ ಖಂಡ ಕಾವ್ಯ ಪ್ರಕಾರದಲ್ಲಿ. ಅವರು ತಮ್ಮದೇ ಆದ ವೈಶಿಷ್ಟ್ಯವನ್ನು ಈ ಪ್ರಕಾರದಲ್ಲಿ ಮೆರೆದರು. ಅವರ 'ವಸಂತವಿಜಯ' ಈ ಕ್ಷೇತ್ರದಲ್ಲಿ ಅದ್ವಿತೀಯ ಕೃತಿಯೆನಿಸಿದೆ. ಜೀವನದ ಸಮಸ್ಯೆಗಳ ಆಳದಲ್ಲಿ ಅಡಗಿದ ಸಂಘರ್ಷಕ್ಕೆ ಅಭಿವ್ಯಕ್ತಿಯನ್ನೀಯಲು ಇದು ಕವಿಯ ಅನಿವಾರ್ಯ ಮಾಧ್ಯಮವಾಗಿ ಪರಿಣಮಿಸಿತೆಂದು ವಿಮರ್ಶಕರು ಅಭಿಪ್ರಾಯಪಡುತ್ತಾರೆ. ಕವಿ ಬಾಲಶಂಕರರು ಭಾವಗೀತಗಳಂತೆಯೆ ಗಝಲುಗಳನ್ನೂ ಬರೆದರು. ಅವುಗಳಲ್ಲಿ ಕೆಲವುಗಳ ಮೇಲೆ ಸೂಫಿಪಂಥದ ವರ್ಚಸ್ಸು ಕಂಡುಬರುತ್ತದೆ. ಕಲಾಪಿ ಚೊಕ್ಕಟವಾದ ಸುಂದರ ಪ್ರೇಮಗೀತಗಳನ್ನು ರಚಿಸಿದರು.

ನ್ಹಾನಾಲಾಲರ ಪ್ರಭಾವ

ಇಪ್ಪತ್ತನೆಯ ಶತಮಾನದ ಉದಯ ಕಾಲದಲ್ಲಿ ಕವಿ ನ್ಹಾನಾಲಾಲ ಮತ್ತು ಬಳವಂತರಾಯ ಠಾಕೋರರು ಗುಜರಾತಿ ಸಾಹಿತ್ಯಕ್ಷೇತ್ರದ ಮುಂದಾಳುಗಳಾಗಿದ್ದರು. ಅವರಿಬ್ಬರೂ ಸ್ವಭಾವತಃ ಪರಸ್ಪರ ವಿರುದ್ಧವೆನ್ನುವಷ್ಟು ಭಿನ್ನರಾಗಿದ್ದರು. ನ್ಹಾನಾಲಾಲರು ನೈಜ ರಮ್ಯ ಕವಿಯಾಗಿದ್ದರು. ಕನಸಿನ ಆದರ್ಶ ಜಗತ್ತಿನಲ್ಲೇ ಅವರು ಸದಾ ವಿಹರಿಸುತ್ತಿದ್ದರು. ಶ್ರೇಷ್ಠತಮ ಭಾವಗೀತಗಳನ್ನವರು ನಿರ್ಮಿಸಿದರು. ಕಲ್ಪನಾ ವೈಖರಿ, ಮಧುರ ಸಂಗೀತಮಯ ಶೈಲಿ, ಸೂಕ್ಷ್ಮತಮ ಭಾವನೆಗಳು ಹಾಗು ಸಾಂಕೇತಿಕತೆ ಅವರ ಕಾವ್ಯದ ಪ್ರಮುಖ ಲಕ್ಷಣಗಳು. ಗುಜರಾತಿ ಕಾವ್ಯ ತನ್ನ ಮೊದಲ ನಾಲ್ಕು ದಶಕಗಳಲ್ಲಿ ನ್ಹಾನಾಲಾಲರ ಪ್ರಭಾವದಲ್ಲಿಯೇ ಬೆಳೆಯಿತು. ಬಳವಂತರಾಯ ಠಾಕೋರರ ಕಾವ್ಯದ ಕಲ್ಪನೆ ತೀರ ಭಿನ್ನವಾದುದಾಗಿತ್ತು. ಪ್ರಾರಂಭ ಕಾಲದಲ್ಲಿಯ ಗೀತಕಾರರಲ್ಲಿ ಕಂಡುಬರುವ ಭಾವನಾಪ್ರಾಧಾನ್ಯವನ್ನೂ ನ್ಹಾನಾಲಾಲರ ಕಲ್ಪನೆಯ ಆದರ್ಶವಾದವನ್ನೂ ಅವರು ವಿರೋಧಿಸಿದರು. ಕಾವ್ಯವು ನಿರ್ದಿಷ್ಟವೂ ಚಿಂತನಶೀಲವೂ ಆಗಿರಬೇಕೆಂಬ ವಿಚಾರವನ್ನು ಮೊದಲು ಮಂಡಿಸಿ ಕೃತಿಗಿಳಿಸಿದವರು ಅವರು. ವೈಯಕ್ತಿಕತೆಯನ್ನು ಮೀರಿ ಜೀವನದತ್ತ ನೋಡುವ ಕಾವ್ಯದೃಷ್ಟಿ ಕವಿಯದಾಗಬೇಕೆಂದು ಅವರು ಪ್ರತಿಪಾದಿಸಿದರು. ಸರಳಂಗಳೆಯಂತಹ ಹೊಸ ಕಾವ್ಯಮಾಧ್ಯಮವನ್ನು ರೂಪಿಸಲು ಅವರು ಸಾಂಪ್ರದಾಯಿಕ ಪದ್ಯರೂಪಗಳನ್ನು ಬಳಸಿಕೊಂಡರು. ಈ ರೀತಿಯಿಂದ ಗುಜರಾತಿ ಕಾವ್ಯದ ದಿಸೆಯನ್ನು ರೂಪಿಸಿದ ಶ್ರೇಯಸ್ಸು ಬಳವಂತರಾಯರಿಗೂ ಸಲ್ಲುವುದು. ಆದರೆ ಅವರ ವಿಚಾರಗಳ ಪರಿಣಾಮ ಮಾತ್ರ ಬಹಳ ಹಿಂದುಗಡೆ- ಈ ಶತಮಾನದ ಮೂರನೆಯ ದಶಕದಲ್ಲಿ ಕಂಡುಬರತೊಡಗಿತು. ಕವಿ ಬಳವಂತರಾಯರು ಅನೇಕ ಸುಂದರ ಸುನೀತಗಳನ್ನೂ ಕಿರು ಭಾವಗೀತಗಳನ್ನೂ ರಚಿಸಿದ್ದಾರೆ. ಶಾಬ್ದಿಕ ಸಂಗೀತಕ್ಕೆ ಅವಕಾಶವಿಲ್ಲದಂತಹ ಶೈಲಿಯೊಂದನ್ನು ತಮ್ಮ ಅಭಿವ್ಯಕ್ತಿಗೆ ಮಾಧ್ಯಮವಾಗಿ ಬಳಸಲು ಅವರು ಯತ್ನಿಸಿದರು. ಇಂದು



"ಪೆದರಿಕೆ ಅಜ್ಜಾ !?..."

ಪ್ರಚಲಿತವಿರುವ ನವ್ಯಮಾರ್ಗದ ಬೀಜ ಮೊಳಕೆಯೊಡೆದುದು ಅವರ ಈ ಪ್ರಯತ್ನದಲ್ಲಿಯೇ ಎಂದು ಹೇಳಬೇಕು.

ಕ್ರಾಂತಿಕಾರಿ ಅವಸ್ಥೆ

ಈ ಶತಮಾನದ ಎರಡನೆಯ ದಶಕದಲ್ಲಿ ಗುಜರಾತಿ ಸಾಹಿತ್ಯ ಕ್ರಾಂತಿಕಾರಿ ಅವಸ್ಥೆಯನ್ನು ಪ್ರವೇಶಿಸುತ್ತದೆ. ಕಾದಂಬರಿ, ಸಣ್ಣಕತೆ, ಏಕಾಂಕ ಮುಂತಾದ ಕ್ಷೇತ್ರಗಳಲ್ಲಿಯಂತೂ ಇದು ಹೆಚ್ಚು ಸ್ಫುಟವಾಗಿ ಒಡೆದು ಕಾಣಿಸುವಂತಿದೆ. ಈ ಹೊಸ ಅವಸ್ಥೆಯ ಹಿನ್ನೆಲೆಯಲ್ಲಿರುವ ಐತಿಹಾಸಿಕ ಬೆಳವಣಿಗೆಗೆ ತುಂಬ ಮಹತ್ವವಿದೆ. ಈ ಹೊತ್ತಿಗಾಗಲೆ ಮಹಾತ್ಮಾ ಗಾಂಧಿಯವರು ಭಾರತೀಯ ರಾಜಕೀಯ ರಂಗವನ್ನು ಪ್ರವೇಶಿಸಿದ್ದರು. ದೇಶದ ದೀನ ದಲಿತರ ಬಗ್ಗೆ ಅವರಲ್ಲಿ ಅಪಾರ ಅನುಕಂಪವಿತ್ತು. ವಿಶ್ವಬಂಧುತ್ವ, ಪ್ರೇಮ, ಅಹಿಂಸೆಗಳ ಸಂದೇಶವು ಜನಸಾಮಾನ್ಯವನ್ನೂ ತಲುಪಬೇಕು ಎಂಬುದು ಅವರ ಗುರಿಯಾಗಿತ್ತು. ಅದಕ್ಕನುಗುಣವಾಗಿ ಅತ್ಯಂತ ಸರಳವೂ ನೇರವೂ ಆದರೂ ಗಾಂಭೀರ್ಯಕ್ಕೆ ಚ್ಯುತಿ ಬರದಂತಹ ಒಂದು ಬಗೆಯ ತಿಳಿಯಾದ ಗದ್ಯ ಶೈಲಿಯನ್ನು ಅವರು ರೂಢಿಗೆ ತಂದರು. ಅಂತೆಯೆ ಗಾಂಧೀಜಿಯ ವಿಚಾರ ಹಾಗು ಶೈಲಿ ಗುಜರಾತಿ ಲೇಖಕರಿಗೆ ಸ್ಫೂರ್ತಿಯ ಬಹು ದೊಡ್ಡ ಸೆಲೆಗಳಾಗಿ ಪರಿಣಮಿಸಿದುವು. ಇದೇ ಕಾಲದಲ್ಲಿ ಜಗತ್ತು ಇನ್ನೆರಡು ಮಹತ್ತರವಾದ ಘಟನೆಗಳನ್ನು ಅನುಭವಿಸಿತ್ತು. ಪ್ರಥಮ ಜಾಗತಿಕ ಮಹಾಯುದ್ಧ ಹಾಗು ರಶಿಯನ್ ಕ್ರಾಂತಿ ಜಗತ್ತನ್ನೇ ಅಲ್ಲಾಡಿಸಿದ್ದುವು. ಮಾರ್ಕ್ಸ್‌ವಾದದ ಪ್ರತಿಧ್ವನಿ ಗುಜರಾತದ ಕೆಲವೆಡೆಗಳಲ್ಲೂ ಕೇಳಿಬರತೊಡಗಿತ್ತು. ಇದಲ್ಲದೆ ಸ್ಫೂರ್ತಿಗಾಗಿ ರವೀಂದ್ರನಾಥ ಟಾಗೋರರೆಡೆ ನೋಡುವ ಯುವಕ ಲೇಖಕರ ಒಂದು ತಂಡವೇ ನಿರ್ಮಾಣವಾಗಿತ್ತು. ಇಂತು ಈ ಕಾಲದಲ್ಲಿ ಹಲವಾರು ಬಗೆಯ ಶಕ್ತಿಗಳು ನೇರವಾಗಿಯೊ ಪರ್ಯಾಯವಾಗಿಯೊ ತಮ್ಮ ಪ್ರಭಾವ ಬೀರಿ ಗುಜರಾತಿ ಸಾಹಿತ್ಯದ ದಿಕ್ಕು ದಸೆಗಳನ್ನು ರೂಪಿಸಿದುವು. ಸಾಮಾನ್ಯವಾಗಿ ಹೇಳುವುದಾದರೆ ಈ ಕಾಲದ ಗುಜರಾತಿ ಸಾಹಿತ್ಯದಲ್ಲಿ ಎರಡು ಮುಖ್ಯ ಪ್ರವಾಹಗಳನ್ನು ಗುರುತಿಸಬಹುದು. ಮೊದಲನೆಯದು ನ್ಹಾನಾಲಾಲರ ಕೃತಿಗಳಲ್ಲಿ, ಮುನ್ಷಿಯವರ ಐತಿಹಾಸಿಕ ಕಾದಂಬರಿಗಳಲ್ಲಿ. ಧೂಮಕೇತು ಮತ್ತು ಮೇಘಾಣಿಯವರ ಕತೆಗಳಲ್ಲಿ ಕಂಡುಬಂದಿರುವ ರಮ್ಯತೆ; ಹಾಗು ಎರಡನೆಯದು ರಾಮನಾರಾಯಣ ಪಾಠಕ, ಉಮಾಶಂಕರ ಜೋಶಿ, ಸುಂದರಮ ಮುಂತಾದವರಲ್ಲಿ ಕಂಡುಬರುವ ವಾಸ್ತವತೆ-ವಸ್ತುನಿಷ್ಠತೆ. ಮುನ್ಷಿಯವರು ಗುಜರಾತಿಯಲ್ಲಿ ಕಾದಂಬರೀ ಸಾಹಿತ್ಯದ ಬೆಳವಣಿಗೆಗೆ ಒಹು ಮಟ್ಟಿಗೆ ಕಾರಣರಾದರೆಂಬುದನ್ನು ನೆನೆಯಬೇಕು. ವಾಸ್ತವವಾದ ಪಾತ್ರ ನಿರ್ಮಿಸಿ ಹಾಗು ನಾಟಕೀಯ ಸನ್ನಿವೇಶಗಳ ನಿರೂಪಣೆಯೊಂದಿಗೆ ಅವರು ನವೀನ ಶೈಲಿಯನ್ನೇ ಸೃಷ್ಟಿಸಿದರು. ಧೂಮಕೇತು ಮತ್ತು ರಾಮನಾರಾಯಣ ಪಾಠಕರು ಪ್ರಪ್ರಥಮವಾಗಿ ಸಣ್ಣ ಕತೆಗೆ ಕಲಾತ್ಮಕತೆಯ ಉಡುಗೆ ತೊಡಿಸಿದರು. ಧೂಮಕೇತು ಅವರಲ್ಲಿ ಭಾವನಾಪ್ರಾಧಾನ್ಯ ಕಂಡುಬರುತ್ತಿದ್ದರೆ ಪಾಠಕರ ಕತೆಗಳಲ್ಲಿ ಆ ಕಾಲದ ಮಧ್ಯಮವರ್ಗೀಯ ಸಮಾಜ ಜೀವನದ ನೈಜ ಚಿತ್ರಣ ದೊರೆಯುತ್ತದೆ. ಈ ಕಾಲದ ಇನ್ನೊಬ್ಬ ನಾಮವಂತ ಲೇಖಕ ರಮಣಲಾಲ ದೇಸಾಯಿಯವರು, ಆಗಿನ ಸಾಮಾಜಿಕ, ರಾಜಕೀಯ ಹಿನ್ನೆಲೆಯ ಸನ್ನಿವೇಶಗಳನ್ನು ಅಳವಡಿಸಿಕೊಂಡು ಹಲವಾರು ಸಾಮಾಜಿಕ ಕಾದಂಬರಿಗಳನ್ನು ಬರೆದರು. ಝವೇರಚಂದ ಮೇಘಾಣಿಯವರು ತಮ್ಮ ಕತೆಗಳಿಗಾಗಿ ಜಾನಪದ ಕತೆಗಳಲ್ಲಿಯ ಅಂಶಗಳನ್ನು ಧಾರಾಳವಾಗಿ ಬಳಸಿಕೊಂಡರು.

ಗಾಂಧೀಯುಗ

ಯುವಕ ಕವಿ ಉಮಾಶಂಕರ ಜೋಶಿ ತಮ್ಮ ಪ್ರಪ್ರಥಮ ಕೃತಿ— ಕಥನಕಾವ್ಯ ರೂಪದಲ್ಲಿಯ 'ವಿಶ್ವಶಾಂತಿ'ಯನ್ನು ೧೯೩೧ ರಲ್ಲಿ ಪ್ರಕಟಿಸಿದರು. ಈ ಕೃತಿಯಲ್ಲಿ ಗಾಂಧೀಜಿಯ ಹಾಗೂ ಅವರ ವಿಚಾರ ಸರಣಿಯ ಪ್ರಭಾವವನ್ನು ಬಹು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಈ ಹೊತ್ತಿಗಾಗಲೇ ಬಹ್ವಂಶ ಕವಿಗಳು ಗಾಂಧೀವಿಚಾರಗಳಿಂದ ಆಕರ್ಷಿತರಾಗಿದ್ದರು. ೧೯೩೦ ರಿಂದ ೪೦ ರ ವರೆಗಿನ ಕಾಲವನ್ನು ಗುಜರಾತಿ ಸಾಹಿತ್ಯದ ಗಾಂಧೀಯುಗವೆಂದು ತಿಳಿಯಲಾಗುತ್ತಿದೆ. ಉಮಾಶಂಕರರಲ್ಲದೆ ಸುಂದರಾಮ, ಸ್ನೇಹರಶ್ಮಿ, ಶ್ರೀಧರಾನಿ, ಸುಂದರಜಿ ಬೇತಾಯಿ, ಮನಸುಖಲಾಲ ಝವೇರಿ ಮತ್ತು ಇನ್ನೂ ಅನೇಕ ಕವಿಗಳು ಇದೇ ಪ್ರಭಾವದಡಿಯಲ್ಲಿಯೇ ಬರೆದರು. ಬಹುಶಃ ಉಮಾಶಂಕರ ಹಾಗೂ ಸುಂದರಾಮರು ಈ ಯುಗದ ಪ್ರಾತಿನಿಧಿಕ ಕವಿಗಳೆನ್ನಬಹುದು. ಉಳಿದೆಲ್ಲ ಕವಿಗಳ ವಾಣಿಯೂ ಈ ಇಬ್ಬರ ವಾಣಿಯಲ್ಲಿ ಬೆರೆತು ಒಂದಾಗಿ ಬಿಡುತ್ತದೆ. ಈ ಕಾಲದಲ್ಲಿಯ ಕವಿಗಳ ಕಾವ್ಯವಸ್ತು ಮುಖ್ಯವಾಗಿ ವಿಶ್ವಪ್ರೇಮ, ಶಾಂತಿ, ದೀನ ದಲಿತರಿಗಾಗಿ ಅನುಕಂಪ, ಸೇವೆ, ಅರ್ಪಣ ಬುದ್ಧಿ ದಾಸ್ಯವಿಮೋಚನೆಗಾಗಿ ಕಾತರ, ಮುಂತಾದ ಆದರ್ಶಗಳೇ ಆಗಿದ್ದುವು. ಕೆಲವೊಮ್ಮೆ ಈ ಕವಿಗಳು ಸಹ ತಮ್ಮ ವೈಯಕ್ತಿಕ ಭಾವನೆಗಳಿಗೆ, ರಾಗ ವ್ಯಾಪಾರಗಳಿಗೆ ಕಾವ್ಯದ ಹೊರವನ್ನು ತೋರಿಸಿರುವುದು ನಿಜವಾದರೂ ಸಾಮಾನ್ಯವಾಗಿ ಅವರ ಕಾವ್ಯದಲ್ಲಿ ಪ್ರತಿಧ್ವನಿತವಾಗುವುದು ಗಾಂಧೀಜಿ ಆದರ್ಶವೆಂದು ಭಾವಿಸಿದ್ದ ಮೌಲ್ಯಗಳೇ. ವೈಯಕ್ತಿಕತೆಯನ್ನು ಮೀರಿದ ಸಮಾಜ ಹಿತದಲ್ಲಿಯೇ ತಮ್ಮ ಕಾವ್ಯ ಸಫಲತೆ ಪಡೆಯಬೇಕೆಂದೇ ಇವರು ನಂಬಿರುವಂತಿತ್ತು. ಈ ಒಂದು ಮಹಾಪ್ರವಾಹದಲ್ಲಿಯೂ ತನ್ನತನವನ್ನು ಕಾವ್ಯದಲ್ಲಿ ಮೂಡಿಸಬೇಕೆಂಬ ವಿಚಾರವೇ ಯಾರಿಗೂ ಈ ಕಾಲದಲ್ಲಿ ಬಂದಂತೆ ತೋರುವುದಿಲ್ಲ. ಅಂತೆಯೇ, ಈ ಕಾಲದ ಗುಜರಾತಿ ಕಾವ್ಯ ವೈವಿಧ್ಯಹೀನವೂ ಬೇಸರ ತರಿಸುವಂಥದೂ ಅನಿಸಿದರೆ ಆಶ್ಚರ್ಯವಿಲ್ಲ.

ಕತೆ ಕಾದಂಬರಿಗಳು

ಗಾಂಧೀಜಿಯ ಹೆಜ್ಜೆಯಲ್ಲಿಯೇ ಹೆಜ್ಜೆಯಿರಿಸಿ ಈ ಕಾಲದ ಲೇಖಕರು ಸಾಹಿತ್ಯವನ್ನು ಬಡಬಗ್ಗರ ವರೆಗೂ ತಲುಪಿಸುವಲ್ಲಿ ಸಫಲರಾದರು. ಈ ಲೇಖಕರ ಮೇಲೆ ಮಾರ್ಕ್ಸ್‌ವಾದದ ಪರಿಣಾಮವೂ ಕೆಲ ಮಟ್ಟಿಗೆ ಆಯಿತು. ಇದರ ಪರಿಣಾಮವೆಂದರೆ ಇವರ ಸಾಹಿತ್ಯದಲ್ಲಿ ನೈಜ ಸಮಾಜ ಚಿತ್ರಣಕ್ಕೆ ತುಸು ಮಹತ್ವದ ಸ್ಥಾನ ದೊರೆಯಿತು. ಹಳ್ಳಿಗರ ದಾರುಣ ಪರಿಸ್ಥಿತಿಯು ಕತೆ ಕಾದಂಬರಿಗಳಂತೆಯೇ ಕವನಗಳಿಗೂ ವಸ್ತುವನ್ನೊದಗಿಸಿತು. ಭಿಕ್ಷುಕರ, ಕಾರ್ಮಿಕರ ಜೀವನದಲ್ಲಿಂದ ಲಲಿತ ಸಾಹಿತ್ಯ ವಸ್ತುವನ್ನಾಯ್ದುಕೊಳ್ಳುವುದೇ ಪ್ರಚಲಿತ ಪದ್ಧತಿಯೆನಿಸಿತು. ಉಮಾಶಂಕರ ಜೋಶಿ ಮತ್ತು ಸುಂದರಾಮರ ಸಣ್ಣ ಕತೆಗಳ ರೀತಿ ಬೇರೆಯಾದೇ ಆದರೂ ಸಾಮಾಜಿಕ ವಾಸ್ತವತೆಯ ಪ್ರಜ್ಞೆ ಅವರಲ್ಲಿ ಜಾಗೃತವಿರುವುದು ಅವುಗಳಲ್ಲಿ ಬಹು ಮಾರ್ಮಿಕವಾಗಿ ವ್ಯಕ್ತವಾಗಿದೆ. ಉಮಾಶಂಕರರ ಏಕಾಂಕ ಸಂಗ್ರಹವಾದ 'ಸ್ವಪ್ನಭಾವ'ದಲ್ಲಿ ಪ್ರತಿಯೊಂದು ನಾಟಕವೂ ಗ್ರಾಮಜೀವನದ ಹೃದಯಭೇದಕ ದಾರಿದ್ರ್ಯವನ್ನೇ ವಸ್ತುವಾಗಿಸಿಕೊಂಡಿದೆ. ಇದೇ ಕಾಲದಲ್ಲಿ ಗುಲಾಬದಾಸ ಬ್ರೋಕರ್ ಹೊಸ ದಾರಿಯನ್ನು ತುಳಿದರು ಮನುಷ್ಯನ ಮನಸ್ಸನ್ನು ಬಗೆದು ವಿಶಿಷ್ಟ ಮಾನಸಿಕ ಪರಿಣಾಮಗಳನ್ನು ಹುಟ್ಟಿಸುವಂತಹ ಕತೆಗಳನ್ನು ಬರೆಯಲು ಅವರು ಯತ್ನಿಸಿದರಾದರೂ ಅವರಿಗೆ ದೊರೆತ ಯಶಸ್ಸು ಮಾತ್ರ ಅಲ್ಪ ಗಣ್ಯವೆನಿಸಿತು. ಪನ್ನಾಲಾಲ ಮತ್ತು ಈಶ್ವರ ಪೆಟ್ಲೀಕರ ಅವರು ಗ್ರಾಮೀಣ ಜನಜೀವನವನ್ನೇ ತಮ್ಮ ಕತೆ ಕಾದಂಬರಿಗಳಿಗೆ ಅಳವಡಿಸಿಕೊಂಡರು ಮಾತ್ರವಲ್ಲ, ಹಳ್ಳಿಯ ಜೀವನದ ನೈಜ ಚಿತ್ರಣವನ್ನು ನೀಡಿದರು. ಇವರಿಬ್ಬರಲ್ಲಿ ಪನ್ನಾಲಾಲ ಮನುಷ್ಯ ಮನಸ್ಸಿನ ಆಳದಲ್ಲಿರುವ ಸಂಘರ್ಷವನ್ನು ಕಲ್ಪನೆಯ ಕುಂಚದಿಂದ ಚಿತ್ರಿಸುವಲ್ಲಿ ಸಫಲರಾಗಿದ್ದಾರೆ. ಆದುದರಿಂದಲೇ ಇಂದಿಗೆ ಕೂಡ ಅವರು ಗುಜರಾತಿ ಕಾದಂಬರೀಕ್ಷೇತ್ರದಲ್ಲಿ ನಾಯಕ ಸ್ಥಾನದಲ್ಲಿಯೇ ಉಳಿದಿದ್ದಾರೆ. 'ಮಾನವಿ ಭಾವೈ' ಎಂಬ ಅವರ ಕಾದಂಬರಿ ಅತ್ಯುತ್ಕೃಷ್ಟವಾದುದೆಂದು ಸರ್ವಮಾನ್ಯತೆ ಪಡೆದಿದೆ. ಮೇಘಾನಿ ಮತ್ತು ಚುನಿಲಾಲ ಮಡ್ರಿಯಾ ಸೌರಾಷ್ಟ್ರದ ಗ್ರಾಮಜೀವನ ಚಿತ್ರಗಳನ್ನು ತಮ್ಮ ಕತೆಗಳಲ್ಲಿ ಪರಿಣಾಮಕಾರಿಯಾದ ರೀತಿಯಲ್ಲಿ ನೀಡಿದ್ದಾರೆ. ಜಯಂತಿ ದಲಾಲರ ಕತೆಗಳು ನಗರಗಳಲ್ಲಿಯ ಮಧ್ಯಮ ವರ್ಗೀಯ ಜೀವನವನ್ನು ಚಿತ್ರಿಸುತ್ತವೆ. ಅವರ ನಿರೂಪಣೆಯಲ್ಲಿ ವ್ಯಂಗ್ಯ ಬಹು ಪರಿಣಾಮಕಾರಿಯಾಗಿ ಕಂಡುಬರುತ್ತದೆ.

೧೯೪೦—೪೧ ರ ಹೊತ್ತಿಗೆ ಗಾಂಧೀಜಿಯ ಪ್ರಭಾವ ಕೆಲಮಟ್ಟಿಗೆ ಕಡಿಮೆಯಾಗತೊಡಗಿದ ಚಿನ್ಹಗಳು ತೋರಿಬಂದವು. ಈ ಕಾಲದಲ್ಲಿ ಗುಜರಾತಿ ಸಾಹಿತ್ಯದಲ್ಲಿ ಹೊಸ ಪ್ರಭಾವಗಳು ದಾರಿ ಮಾಡಿಕೊಳ್ಳುತ್ತಿರುವುದನ್ನು ಕಾಣುತ್ತೇವೆ. ರಾಜೇಂದ್ರ ಶಹಾ, ಪ್ರಹ್ಲಾದ ಪರೇಖ ಮತ್ತು ಹರಿಶ್ಚಂದ್ರ ಭಟ್ಟರು ಹಿಂದಿನವರಿಗಿಂತ ತೀರ ಭಿನ್ನವಾದ ಕಾವ್ಯರಚನೆಗೆ ತೊಡಗಿದರು. ಇವರು ಸಮಕಾಲೀನ ಜೀವನದ ಪ್ರಭಾವಗಳಿಗೊಳಗಾಗದೆಯೆ ವಿಶುದ್ಧ ಸೌಂದರ್ಯಾನುಭೂತಿಯನ್ನೇ ತಮ್ಮ ಕಾವ್ಯದಲ್ಲಿ ಮೂಡಿಸಿದರು. ಕಾವ್ಯವನ್ನು ಅದರ ನಿಜವಾದ ಅರ್ಥದಲ್ಲಿ ಕಂಡು ನಿರ್ಮಿಸಬೇಕೆಂದು ಈ ಮೂವರು ಪಣತೊಟ್ಟಂತಿದೆ. ಇವರಲ್ಲಿ ರಾಜೇಂದ್ರ ಶಹಾ ತಮ್ಮದೇ ಆದ ಶೈಲಿಯನ್ನು ರೂಪಿಸಿಕೊಂಡಿದ್ದಾರೆ. ಕಾವ್ಯವು ಶಬ್ದರೂಪದಲ್ಲಿ ಮೈದಳೆಯುವ ಶುದ್ಧ ಸಂಗೀತವೆಂದೇ ಇವರ ನಂಬುಗೆ. ಅಂತೆಯೆ ಅವರ ಕಾವ್ಯ ಉನ್ನತ ಮಟ್ಟದಲ್ಲಿ ಮೆರೆಯುತ್ತಿದೆ. ಪ್ರಹ್ಲಾದ ಪರೇಖ ಮತ್ತು ಹರಿಶ್ಚಂದ್ರ ಭಟ್ಟರು ಸಹ ಇದೇ ನಿಷ್ಠೆಯಿಂದಲೇ ಉತ್ತಮ ಭಾವಗೀತಗಳನೇಕವನ್ನು ನೀಡಿದ್ದಾರೆ.

ಹೊಸ ಪ್ರವೃತ್ತಿ

ಈ ಕಾಲದಲ್ಲಿ ಕತೆ ಕಾದಂಬರೀಕ್ಷೇತ್ರದಲ್ಲಿ ಸಹ ಸಮಕಾಲೀನ ಜೀವನದಿಂದ ಪ್ರಭಾವಿತವಾಗದಂತಹ ಹೊಸ ಪ್ರವೃತ್ತಿ ಕಂಡುಬರುತ್ತದೆ. ಬಕುಲೇಶ ಮತ್ತು ಜಯಂತಿ ಖತ್ರಿ ಉಚ್ಚ ಕಲಾತ್ಮಕ ಮೌಲ್ಯವುಳ್ಳ ಅನೇಕ ಕತೆಗಳನ್ನು ರಚಿಸಿದರು. ಜಯಂತಿ ಖತ್ರಿಯವರ ಕತೆಗಳಲ್ಲಿ ಕಾವ್ಯದ ಸಂಕೀರ್ಣತೆಯನ್ನೂ ಪ್ರತಿಮಾವಿಧಾನವನ್ನೂ ಕಾಣಬಹುದಾಗಿದೆ.

ಇಂತು ಸ್ವಾತಂತ್ರ್ಯಪೂರ್ವದಲ್ಲಿ ಗುಜರಾತಿ ಸಾಹಿತ್ಯದ ಎಲ್ಲ ಅಂಗಗಳಲ್ಲೂ ಸಮೃದ್ಧ ಕೃಷಿಯನ್ನು ಕಾಣುತ್ತೇವೆ. ಜಯಂತಿ ದಲಾಲ ಮತ್ತು ಮಡಿಯಾ ಅವರು ಒಳ್ಳೆಯ ಏಕಾಂಕಗಳನ್ನು ಬರೆದರಾದರೆ ಚಂದ್ರಶೇಖರ ಮೆಹತಾರ ಲೇಖನಿಯಿಂದ ಅನೇಕ ಸಾಮಾಜಿಕ ನಾಟಕಗಳು ಮೂಡಿಬಂದವು ಮಹಾತ್ಮರ ಆತ್ಮವೃತ್ತ ಮತ್ತು ಮಹಾದೇವ ದೇಸಾಯಿಯವರ ದಿನಚರಿಗಳು ಆ ಕ್ಷೇತ್ರದಲ್ಲಿ ಅಪೂರ್ವವೆನಿಸಿವೆ. ಅದರಂತೆಯೆ ಕಾಕಾಸಾಹೇಬ ಕಾಲೇಲಕರರ, ಪ್ರಬಂಧಗಳಿಗೆ ಗುಜರಾತಿ ಸಾಹಿತ್ಯದಲ್ಲಿ ವಿಶಿಷ್ಟವೂ ಶ್ರೇಷ್ಠವೂ ಆದ ಸ್ಥಾನವಿದೆ. ವಿಮರ್ಶಾ ಕ್ಷೇತ್ರದಲ್ಲಿ ಆಚಾರ್ಯ ಆನಂದ ಶಂಕರ ಧ್ರುವ, ಬಳವಂತರಾಯ ಠಾಕೂರ, ರಾಮನಾರಾಯಣ ಪಾಠಕ, ವಿಜಯರಾಯ ವೈದ್ಯ, ವಿಶ್ವನಾಥ ಭಟ್ಟ, ದೋಲಾರ್‍ರಾಯ ಮಂಕಡ, ವಿಷ್ಣುಪ್ರಸಾದ ತ್ರಿವೇದಿ, ಉಮಾಶಂಕರ ಜೋಶಿ ಹಾಗು ಇನ್ನಿತರರು ಉತ್ತಮ ಕಾರ್ಯ ನಿರ್ವಹಿಸಿದ್ದಾರೆ. ಸಂಶೋಧನಾತ್ಮಕ ಹಾಗು ಇತರ ವೈಚಾರಿಕ ಸಾಹಿತ್ಯದಲ್ಲೂ ಸಾಕಷ್ಟು ಕಾರ್ಯ ನಡೆದಿದೆ.

೧೯೪೭ ರಲ್ಲಿ ಸುದೀರ್ಘ ಹೋರಾಟದ ನಂತರ ಭಾರತಕ್ಕೆ ಸ್ವಾತಂತ್ರ್ಯ ಬಂತು. ಜಾಗತಿಕ ರಂಗದಲ್ಲೂ ಮಹತ್ತರ ಸ್ಥಿತ್ಯಂತರಗಳು ನಡೆದವು. ಹಿರೋಶಿಮಾ-ನಾಗಾಸಾಕಿಗಳ ಮೇಲೆ ಅಣುಬಾಂಬುಗಳನ್ನೆಸೆಯುವುದರೊಂದಿಗೆ ದ್ವಿತೀಯ ಜಾಗತಿಕ ಮಹಾಯುದ್ಧ ಕೊನೆಗೊಂಡಿತ್ತು. ಈ ಯುದ್ಧದಲ್ಲಿ ನಿಷ್ಪಾಪಿಗಳಾದ ಲಕ್ಷಾವಧಿ ಜನರನ್ನು ನಾಶಗೊಳಿಸಲಾಗಿದ್ದನ್ನು ಕಂಡು ಜಗತ್ತೇ ತಲ್ಲಣಗೊಂಡಿತ್ತು. ದೇಶವಿಭಜನೆ ಹಾಗು ಜಾತೀಯ ಗಲಭೆಗಳು ಮತ್ತು ಸತತ ಮೂರು ವರ್ಷ ಕಾಲ ಅನಾವೃಷ್ಟಿ ಭಾರತೀಯರನ್ನು ಕಂಗೆಡಿಸಿದ್ದುವು. ಜನಸಾಮಾನ್ಯದ ನೈತಿಕತೆ ಕುಗ್ಗತೊಡಗಿತ್ತು. ಈ ಬಗೆಯ ಅಲ್ಲೋಲಕಲ್ಲೋಲ ಪರಿಸರದಲ್ಲಿ ಸ್ವಾತಂತ್ರ್ಯೋತ್ತರ ಗುಜರಾತಿ ಸಾಹಿತ್ಯ ಜನ್ಮ ತಳೆಯಿತು.

ಪ್ರಯೋಗಶೀಲತೆ

ಈಗಲೂ ಸ್ವಾತಂತ್ರ್ಯಪೂರ್ವದ ಲೇಖಕರನೇಕರು ತಮ್ಮ ಲೇಖನಿಯನ್ನು ಮುಂದುವರಿಸಿರುವರು ಮಾತ್ರವಲ್ಲ, ಅನೇಕರು ಇಂದಿಗೂ ಬರೆಯುತ್ತಿದ್ದಾರೆ. ಈ ಅವಧಿಯಲ್ಲಿ ಹೊಸ ಒಘದಿಂದ ಪ್ರಭಾವಿತರಾಗಿ ಇವರಲ್ಲಿ ಕೆಲವರು ಹೊಸ ಬಗೆಯ ಸಾಹಿತ್ಯ ನಿರ್ಮಿತಿಯನ್ನಾರಂಭಿಸಿದರಾದರೂ ಹೆಚ್ಚಿನವರು ಹಳೆಯ ತಮ್ಮ ಶೈಲಿಯನ್ನೇ ಮುಂದರಿಸಿಕೊಂಡು ಬಂದರು. ಉಮಾಶಂಕರ ಜೋಶಿ ಮತ್ತು ಸುಂದರಂ ಅವರು ತಮ್ಮದೇ ಆದ ದಾರಿಯಲ್ಲಿ ಮುನ್ನಡೆದರಾದರೂ ಉಮಾಶಂಕರರು ಬದಲಾದ ಪರಿಸ್ಥಿತಿಗೆ ಅನುಗುಣವಾದ ರೀತಿಯನ್ನು ಬೆಳೆಸಿಕೊಳ್ಳಲು ಹವಣಿಸಿದರು. ರಾಜೇಂದ್ರ ಶಹಾ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಕಾವ್ಯರಚನೆಯನ್ನು ಮುಂದರಿಸಿದರಾದರೂ ಲಯ ಮತ್ತು ರೂಪಗಳಲ್ಲಿ ಅನೇಕ ಪ್ರಯೋಗಗಳನ್ನೂ ನಡೆಸಿದರು. ಪ್ರಿಯಕಾಂತ ಮಣಿಯಾರ, ವೇಣೀಭಾಯಿ ಪುರೋಹಿತ, ಬಾಲಮುಕುಂದ ದವೆ, ಹರೀಂದ್ರ ದವೆ, ಸುರೇಶ ದಲಾಲ ಮುಂತಾದ ಕವಿಗಳು ಸಾಂಪ್ರದಾಯಿಕ ಶೈಲಿಯಲ್ಲೇ ಹಲವಾರು ಸುಂದರ ಭಾವಗೀತಗಳನ್ನು ನೀಡಿದರು. ಹಳೆಯ ಪೀಳಿಗೆಯ ಹೆಸರಾಂತ ಕವಿ ಶ್ರೀಧರಾನಿ ಹೊಸ ಬಗೆಯ ಕಾವ್ಯನಿರ್ಮಿತಿಗೆ ಯತ್ನಿಸಿದರಾದರೆ ಇನ್ನೊಬ್ಬ ಕವಿ ಸ್ನೇಹರಶ್ಮಿ 'ಹೈಕು'ಗಳನ್ನು ರಚಿಸಲೆತ್ನಿಸಿದರು. ಕತೆ, ಕಾದಂಬರೀಕ್ಷೇತ್ರದಲ್ಲಿ ಪನ್ನಾಲಾಲ, ಪೇಟ್ಲೀಕರ, ಜಯಂತಿ ದಲಾಲ, ಗುಲಾಬದಾಸ ಬ್ರೋಕರ್, ಚುನೀಲಾಲ ಮಡಿಯಾ ತಮ್ಮ ಹಿಂದಿನ ರೀತಿಯಲ್ಲಿಯೇ ಬರವಣಿಗೆಯನ್ನು ಮುಂದರಿಸಿದರು. ಆದರೆ ಹಳೆಯ ಪೀಳಿಗೆಯ ಈ ಲೇಖಕರಿಂದ ಈಗಲೂ ವಿಪುಲ ಸಾಹಿತ್ಯ ರಚನೆಯಾಯಿತಾದರೂ ಅದರಲ್ಲಿ ತಾವು ಹಿಂದೆ ಬರೆದುದರ ಅನುಕರಣವೇ ಹೆಚ್ಚಾಗಿ ಅವರು ತಮ್ಮ ಪ್ರಗತಿಯ ಕೊನೆಯ ನಿಲ್ದಾಣವನ್ನು ತಲುಪಿರುವುದರ ಚಿಹ್ನೆಗಳೇ ಕಂಡುಬರತೊಡಗಿರುವವು. ಸಮಕಾಲೀನ ಪ್ರಜ್ಞೆ ಅವರಿಂದ ದೂರ ಉಳಿದಿರುವುದೇ ಇದಕ್ಕೆ ಕಾರಣವಾಗಿರಬಹುದು.

ಬಗೆ ಬಗೆಯ ಪ್ರಭಾವಗಳು

ಈ ಕಾಲದ ಹೊಸ ಪೀಳಿಗೆಯ ಬರಹಗಾರರಲ್ಲಿ ಕಂಡುಬರುವ ಒಂದು ವೈಶಿಷ್ಟ್ಯವೆಂದರೆ ಅವರು ತಮ್ಮ ಸ್ಫೂರ್ತಿಗಾಗಿ ಪಶ್ಚಿಮದತ್ತ ಹೊರಳಿದ್ದು. ಕಲೆ ಮತ್ತು ಸಾಹಿತ್ಯದಲ್ಲಿ ಹೊಸ ಮೌಲ್ಯಗಳಿಗಾಗಿ ಹಂಬಲಿಸಿದ ಇವರು ಬದಲಾದ ಪರಿಸರಗಳಿಗೆ ಹೊಂದಿಕೊಳ್ಳಲಾಗದೆಯೆ ಪಶ್ಚಿಮದಲ್ಲಿರುವ ನಿರಾಶಾವಾದಿ ಸಾಹಿತ್ಯದತ್ತ ಆಕರ್ಷಿತರಾದರು. ಪ್ರಥಮ ಮಹಾಯುದ್ಧದ ನಂತರ ವಿಪುಲ ಪ್ರಮಾಣದಲ್ಲಿ ಬಂದ ನಿರಾಶಾವಾದಿ ಸಾಹಿತ್ಯದಿಂದ-ವಿಶೇಷತಃ ಕ್ಯಾಮುಸ್ ಮತ್ತು ಸಾರ್ತ್ರರಂತಹ ಮಹಾನ್ ಲೇಖಕರ ಕೃತಿಗಳಿಂದ ಇವರು ಪ್ರಭಾವಿತರಾದರು. ಇಂತ ಅಸ್ತಿತ್ವವಾದ (Existentialism) ಈ ನವ ಬರಹಗಾರರ ಕೃತಿಗಳಿಗೆ ಅಸ್ತಿಭಾರವನ್ನೊದಗಿಸಿತು. ಆದರೆ ನವೀನ ಸಾಹಿತ್ಯದ ಮೇಲೆ ಪ್ರಭಾವ ಬೀರಿದ ಅಂಶ ಇದೊಂದೇ ಅಲ್ಲ. ಬಗೆ ಬಗೆಯ ಪ್ರಭಾವಗಳು ಏಕಕಾಲಕ್ಕೆ ಉಂಟಾದುದನ್ನು ನಾವಿಲ್ಲಿ ಕಾಣುತ್ತೇವೆ. ಇಲಿಯಟ್, ಎಜ್ರಾ ಪೌಂಡ್, ವ್ಯಾಲರಿ, ಬಾದಲೇರ್, ರಿಲ್ಕೆ ಮುಂತಾದ ಹೆಸರಾಂತ ಲೇಖಕರ ಕೃತಿಗಳ ಅಭ್ಯಾಸ ಹಾಗು ಅನುಕರಣ ನಡೆಯಿತು. ಗುಜರಾತಿ ನವ್ಯಕಾವ್ಯದಲ್ಲಿ ಈ ಪಾಶ್ಚಾತ್ಯ ಸಾಹಿತಿಗಳ ಭಿನ್ನ ಭಿನ್ನ ದೃಷ್ಟಿಕೋನಗಳೆಲ್ಲವೂ ಕಂಡುಬರತೊಡಗಿದವು. ಇವುಗಳೆಲ್ಲದರಲೇ ಪ್ರತಿಮಾವಿಧಾನವೇ ಪ್ರಧಾನವಾದ ಒಂದು ಬಗೆಯ ಕಾವ್ಯಮಾರ್ಗ ಜನ್ಮ ತಳೆಯಿತು. ಸಾಂಪ್ರದಾಯಿಕ ಕಾವ್ಯಮಾರ್ಗವನ್ನು ಸಂಪೂರ್ಣ ಕಡೆಗಣಿಸಿ ಗದ್ಯದ ಗಡಿಯಲ್ಲಿ ಬಂದು ನಿಲ್ಲುವಂತಹ ಕಾವ್ಯವು ರೂಪುಗೊಳ್ಳತೊಡಗಿತು. ಬಹುಶಃ ಪಶ್ಚಿಮವು ಬೀರಿದ ಮಹತ್ವಪೂರ್ಣ ಪ್ರಭಾವವೆಂದರೆ ಜೀವನವನ್ನು ನೋಡುವ ದೃಷ್ಟಿಕೋನದ ಮೇಲಿಯೆ ಎಂದು ಹೇಳಬೇಕು. ಇದೀಗ ಕಲಾವಿದನು ಮನುಷ್ಯ ಮನಸ್ಸಿನ ಕರಾಳ ಕ್ಷೇತ್ರವನ್ನೆ ತನ್ನ ಕೃತಿಗಳಲ್ಲಿ ಮೂಡಿಸಲೆತ್ನಿಸತೊಡಗಿದನು. ಈ ಪ್ರಯತ್ನದಲ್ಲಿ ಕಲಾವಿದ ತನ್ನ ಶಿಥಿಲ ಮನಸ್ಸಿನ ಚಿತ್ರಣವನ್ನೇ ನೀಡಲಾರಂಭಿಸಿದ. ಹೊಸ ಪ್ರತಿಮೆಯೊಂದಿಗೆಯೆ ಹೊಸ ಕಾವ್ಯಭಾಷೆಯೇ ನಿರ್ಮಾಣಗೊಂಡಿತು. ಈ ಸಂದರ್ಭದಲ್ಲಿ ಗಾಂಧಿಯುಗದ ಕಾವ್ಯದ ಬಗ್ಗೆ ಒಂದು ಮಾತು ಹೇಳಬಹುದು. ಈ ಯುಗದ ಕವಿಗಳ ಕವನಗಳಲ್ಲಿ ಆದರ್ಶಭಾವವೊಂದು ಕಾವ್ಯವಸ್ತುವಾಗಿರುತ್ತಿತ್ತಾದರೂ ಅದರಲ್ಲಿ ಸಂಕೀರ್ಣತೆಯ, ಪ್ರತಿಮೆಗಳ ಅಭಾವವಿರುತ್ತಿತ್ತಲ್ಲದೆ ಅನೇಕ ಸಲ ಅಸ್ಪಷ್ಟತೆಯೆ ಹೆಚ್ಚಾಗಿರುತ್ತಿತ್ತು. ಆದರೆ ನವ್ಯಕಾವ್ಯ

ದಲ್ಲಿ ಸ್ಪಷ್ಟ ಪ್ರತಿಮೆಗಳು ಹಾಗು ಐಂದ್ರಿಯ ಸಂವೇದನೆಗಳು ವಿಶೇಷವಾಗಿ ಗೋಚರಿಸತೊಡಗಿದವು. ಕತೆ, ಕಾದಂಬರಿಗಳಲ್ಲಿಯೂ ಈ ಹೊಸ ಮಾರ್ಗ ತನ್ನ ಪ್ರಭಾವ ಬೀರಿತು. ವಿಶೇಷತಃ ಸಣ್ಣ ಕತೆಗಳಲ್ಲಿ ಹೊರಗಿನ ಘಟನೆಗಳಿಗಿಂತ ಮಾನಸಿಕ ಕ್ರಿಯೆಗೇ ಪ್ರಾಮುಖ್ಯ ಪ್ರಾಪ್ತವಾಗಿ ಅನೇಕ ಹಂತಗಳಲ್ಲಿ ಸಾಂಕೇತಿಕತೆ ಹಾಗು ಪ್ರತಿಮಾವಿಧಾನಕ್ಕೆ ಮಹತ್ವ ದೊರೆಯಿತು. ಇಂತು ಕಾವ್ಯ ಮತ್ತು ಸಣ್ಣ ಕತೆಗಳಲ್ಲಿ ಮಹತ್ವಪೂರ್ಣ ಬದಲಾವಣೆಯು ಸಂಭವಿಸಿದೆ.

ಆಳದ ಅಭಾವ

ನಮ್ಮ ಬರೆಹಗಾರರ ಸಾಹಿತ್ಯಿಕ ಚಟುವಟಿಕೆಯಲ್ಲಿ ಕಂಡುಬರುವ ಒಂದು ಲಕ್ಷಣವೆಂದರೆ ನಿತ್ಯ ಪ್ರಯೋಗಶೀಲತೆ. ಇದರಿಂದಾಗಿ ಅನೇಕ ಬಾರಿ ಅವರ ಸಾಹಿತ್ಯ ಆಂತರಿಕ ಆವಶ್ಯಕತೆಯಾಗಿ ಬಾರದೆಯೆ ತಮ್ಮ ಸಾಹಿತ್ಯಿಕ ಅಭಿಪ್ರಾಯಗಳನ್ನು ದೃಢೀಕರಿಸುವುದಕ್ಕೋಸುಗವೇ ಅವರು ಬರೆಯುತ್ತಿದ್ದಾರೆಂಬ ಭಾವನೆಯುಂಟಾಗುತ್ತದೆ. ಸಾಹಿತ್ಯ ನಿರ್ಮಿತಿಯ ವಿಧಾನ ಹಾಗು ಅಭಿವ್ಯಕ್ತಿಯ ತಂತ್ರದ ಬಗೆಗಿನ ಅವರ ಪ್ರಜ್ಞೆ ತುಸು ಅತಿಯಾಗಿದೆಯೆಂದೆನಿಸಿ ಬಹಳ ಸಲ ಅವರ ಕೃತಿಗಳು ಹೊಮ್ಮೆಯನ್ನು ಪಡೆಚಿಕೊಳ್ಳುತ್ತಿರುವಂತೆ ತೋರಿ ಅವುಗಳಲ್ಲಿ ಆಳದ ಅಭಾವವಿರುವಂತೆನಿಸುತ್ತದೆ. ಹೀಗಾಗಿ ಕೆಲವೇ ಪ್ರತಿಮೆಗಳು ಈ ನವ್ಯ ಲೇಖಕರ ಬತ್ತಳಿಕೆಯೊಳಗಿನ ಬಾಣಗಳಾಗಿ ಪರಿಣಮಿಸಿವೆ. ಸಾಂಪ್ರದಾಯಿಕ ರೂಪಗಳ ವಿರುದ್ಧ ಬಂಡೆದ್ದು ಇವರು ಹೊಸ ರೂಪಗಳಲ್ಲಿ ಪ್ರಯೋಗ ನಡೆಸಿಯೇ ತೀರುವ ಪಣತೊಟ್ಟಂತಿದೆ. ಬಹುಶಃ ಈ ಪ್ರಯೋಗಶೀಲತೆಯ ಅನಿವಾರ್ಯತೆಯು ದೃಷ್ಟಿಕೋನವೇ ಯಶಸ್ವೀ ಕೃತಿಯ ನಿರ್ಮಾಣದ ದಾರಿಯಲ್ಲಿ ಅಡ್ಡಗಲ್ಲಾಗಿರುವಂತೆನಿಸುತ್ತದೆ.

ಇಂತು ಸ್ವಾತಂತ್ರ್ಯೋತ್ತರ ಗುಜರಾತಿ ಸಾಹಿತ್ಯದ ಕಲ್ಪನೆಯಲ್ಲಿ ನಿಶ್ಚಿತ ಸ್ಥಿತ್ಯಂತರ ಕಂಡುಬರುತ್ತಿದೆ. ರಸಶಾಸ್ತ್ರದ ಅಭ್ಯಾಸವು ಸಾಹಿತ್ಯಿಕ ಚಟುವಟಿಕೆಗಳ ಮೇಲೆ ಪರಿಣಾಮ ಬೀರಿದೆ. ಅದರಿಂದಾಗಿ ಸಾಹಿತ್ಯದಲ್ಲಿ ಸ್ವ-ಪ್ರಜ್ಞೆ ವಿಶೇಷವಾಗಿ ಕಂಡುಬರುತ್ತಿದೆ. ಈ ಹೊಸ ಆಂದೋಲನದ ನಾಯಕ ಸ್ಥಾನದಲ್ಲಿ ಸುರೇಶ ಜೋಶಿ ಇದ್ದಾರೆ. ಕಾವ್ಯ, ಸಣ್ಣಕತೆ, ಕಾದಂಬರಿ ಪ್ರಬಂಧ ಮುಂತಾದ ಎಲ್ಲ ಕ್ಷೇತ್ರಗಳಲ್ಲಿ ಅವರು ತಮ್ಮ ಕೊಡುಗೆಯನ್ನು ಸಲ್ಲಿಸಿದ್ದಾರೆಯಾದರೂ ನಿತ್ಯ ಪ್ರಯೋಗಶೀಲತೆಗೆ ಅವರು ಅನಿವಾರ್ಯವಾಗಿಯೇ ಅಂಟಿಕೊಂಡಂತಾಗಿದೆ. ಅವರ ಮಟ್ಟಿಗೆ ಅಜ್ಞಾತದಲ್ಲಿ ಸದಾ ಶೋಧ, ಸಾಹಸ ನಡೆಸುವುದೇ ಕಲೆಯ ಗುರಿಯೆನಿಸಿದೆ; ನೈಜ ಕಲಾವಿದ ಎಂದೆಂದಿಗೂ ಹಿಂದೆ ಮಾಡಿದ್ದನ್ನೇ ಮಾಡದೆಯೆ ಹೊಸ ದಾರಿಯಲ್ಲಿಯೆ ಮುನ್ನಡೆಯುತ್ತಿರುತ್ತಾನೆ. ತಮ್ಮ ಪ್ರಥಮ ಕಥಾಸಂಗ್ರಹ 'ಗೃಹಪ್ರವೇಶ'ದ ಮುನ್ನುಡಿಯಲ್ಲಿ ಅವರು ಕಲೆಯ ಹೊಸ ವ್ಯಾಖ್ಯೆ ನೀಡಲು ಪ್ರಯತ್ನಿಸಿದ್ದಾರೆ. ಹೊಸ ಬಗೆಯ ಕಥಾವಿಧಾನವನ್ನು ರೂಪಿಸಲೋಸುಗ ತಾವು ಘಟನೆಗಳಿಗೆ ಹಾಗು ಮನುಷ್ಯನ ಭಾವನೆಗಳಿಗೆ ಮಹತ್ವವನ್ನು ಕಡಿಮೆಗೊಳಿಸಿರುವುದಾಗಿ ಹೇಳಿದ್ದಾರೆ. ಪ್ರತಿಮೆ ಹಾಗು ಸಂಕೇತಗಳ ಮೂಲಕ ವಿವಿಧ ಮಟ್ಟಗಳಲ್ಲಿ ಧ್ವನ್ಯರ್ಥವನ್ನು ನಿರ್ಮಿಸಲು ಅವರು ಯತ್ನಿಸಿದರು. ತಮ್ಮ ಅನಂತರದ ಕತೆಗಳಲ್ಲಿ ಅವರು ಜಾನಪದ ಹಾಗು ರಮ್ಯ ಕತೆಗಳ ಅಂಶಗಳನ್ನು ಬಳಸಿಕೊಂಡು ಹೊಸ ಹೊಸ ಪರಿಣಾಮಗಳನ್ನುಂಟುಮಾಡಲು ಯತ್ನಿಸಿದರು ಆದರೆ ಅವರೆಂದೂ ಒಂದೇ ವಿಶಿಷ್ಟ ಶೈಲಿಗೆ ಅಂಟಿಕೊಳ್ಳಲಿಲ್ಲ. ಇಂತು ಅವರು ಹೊಸ ಪೀಳಿಗೆಯ ಪ್ರಾತಿನಿಧಿಕ ಶಕ್ತಿಯೆನಿಸಿದ್ದಾರೆ.

ನವ್ಯ ಸಾಹಿತ್ಯದ ಬಗ್ಗೆ ಹೇಳುವಾಗ ಗಾಂಧೀಯುಗದ ಶ್ರೇಷ್ಠ ಕವಿ ಉಮಾಶಂಕರರ ಕಾವ್ಯದಲ್ಲಾದ ಬದಲಾವಣೆಯನ್ನೂ ಗಮನಿಸದಿರಲಾಗುವುದಿಲ್ಲ. ಅವರು ಸಂವೇದನಾಶೀಲ ಕವಿಯಾದ್ದರಿಂದ ಹೊಸ ಪರಿಸ್ಥಿತಿಯಲ್ಲಿ ಮೌನವಾಗಿರಲು ಅವರಿಗಾಗಲಿಲ್ಲ. ೧೯೪೮ರಲ್ಲಿ ತಮ್ಮ 'ಜೀರ್ಣ ಜಗತ್' ಎಂಬ ಕವನದಲ್ಲಿ ತಮ್ಮ ಮನಸ್ಸಿಗೆ ಕನ್ನಡಿ ಹಿಡಿದಿದ್ದಾರವರು. ಸಾರ್ವಜನಿಕ ಜೀವನದ ಅವನತಿಯನ್ನವರಿಲ್ಲಿ ಚಿತ್ರಿಸಿದ್ದಾರೆ. ಆಗಿನಿಂದ ಅವರು ಹೊಸ ಮನೋಭಾವದ ಅನೇಕ ಕವನಗಳನ್ನು ಕೊಟ್ಟಿದ್ದಾರೆ. ಒಮ್ಮೆ ಗಾಂಧೀವಾದಿ ಕವಿಯಾಗಿದ್ದ ಅವರು ಈಗ ಬದಲಾದ ಪರಿಸ್ಥಿತಿಯಲ್ಲಿ ಹೊಂದಿಕೊಳ್ಳಲಾರದವರಾಗಿದ್ದಾರೆ. ಅಂತರ್ಮುಖಿ ಕವಿಯಾದ ಅವರು ಅನೇಕ ಕವನಗಳಲ್ಲಿ 'ತನ್ನತನ'ವನ್ನು ಕಂಡುಕೊಳ್ಳಲು ಹವಣಿಸುತ್ತಿರುವುದು ಅವರ 'ಛಿನ್ನ ಭಿನ್ನ ಛುಂ' (ನಾನು ಛಿನ್ನ ಭಿನ್ನನಾಗಿದ್ದೇನೆ) ಮತ್ತು 'ಶೋಧ' ಎಂಬ ಕವನಗಳಲ್ಲಿ ಸ್ಪಷ್ಟ ವೇದ್ಯವಾಗುತ್ತಿದೆ.

ಸಾಂಪ್ರದಾಯಿಕ ಶೈಲಿ

ಉಮಾಶಂಕರರ ಇತ್ತೀಚಿನ ಕವನಗಳ ಶೈಲಿ ಅವರ ಮೊದಲಿನ ಶೈಲಿಯಿಂದ ತೀರ ಭಿನ್ನವಾಗಿದೆ. ಗಾಂಧೀಯುಗದಲ್ಲಿಯ ಕವಿಗಳು ಸಾಂಪ್ರದಾಯಿಕ ಶೈಲಿಯನ್ನೇ ಅನುಸರಿಸಿ ಭಾವಗೀತಗಳನ್ನೂ, ಸಂಗೀತ ಮುಂತಾದುದನ್ನು ರಚಿಸಿದರಲ್ಲದೆ ಛಂದಶ್ಶಾಸ್ತ್ರದ ನಿಯಮಗಳನ್ನು ಅನೂಚಾನವಾಗಿ ಅನುಸರಿಸಿದರು. ಉದಾತ್ತ ಭಾವನೆಗಳನ್ನು ವ್ಯಕ್ತಪಡಿಸಲು ಅಕ್ಷರಮೇಳ ವೃತ್ತಗಳನ್ನವರು ಬಳಸಿಕೊಂಡರು. ಆದರೆ ಈ ಅಕ್ಷರಮೇಳ ವೃತ್ತದ ಬಂಧದಿಂದ ಬಿಡುಗಡೆ ಹೊಂದುವುದೇ ಇಂದಿನ ಕವಿಗಳ ಮುಖ್ಯ ಪ್ರವೃತ್ತಿಯೆನಿಸಿದೆ. ಕೆಲ ಕಾಲ ಪಾರಂಪರಿಕ ಮಾತ್ರಾಮೇಳ ಛಂದಸ್ಸನ್ನು ಬಳಸಲಾಯಿತಾದರೂ ಇಂದು ಯಾವುದೇ ಛಂದಸ್ಸಿನಿಂದ ಮುಕ್ತವಾಗಿರುವುದೇ ಮುಖ್ಯ ಲಕ್ಷಣವಾಗಿ ಪರಿಣಮಿಸುತ್ತಿದೆ. ಉಮಾಶಂಕರರ ಹೊಸ ಕವನಗಳು ಕೂಡ ಸಾಂಪ್ರದಾಯಿಕ ಕಾವ್ಯ ರೂಪವನ್ನು ನಿರಾಕರಿಸಿದೆ. ಅವರ 'ಶೋಧ'ವು ಗದ್ಯ–ಪದ್ಯಗಳ ಗಡಿನಾಡಿನಲ್ಲಿಯೇ ನಿಂತಿದೆ ಅಂತೆಯೇ ಹೊಸ ಕಾವ್ಯ ಲಕ್ಷಣದ ನಾಂದಿಯನ್ನು ಹಾಕಿತೆನ್ನಬಹುದು.

ಹೀಗಿದ್ದರೂ ಉಮಾಶಂಕರ ಜೋಶಿಯವರನ್ನು ಗುಜರಾತಿ ಸಾಹಿತ್ಯದಲ್ಲಿಯ ನವ್ಯ ಆಂದೋಲನದ ನೈಜ ಪ್ರತಿನಿಧಿಯೆಂದು ಹೇಳಲಿಕ್ಕಾಗದು. ಅವರು ಹೊಸ ಭಾವನೆಗಳು, ವಿಚಾರಗಳು ಹಾಗು ಪ್ರವೃತ್ತಿಗಳನ್ನು ತಮ್ಮ ಕಾವ್ಯದಲ್ಲಿ ಮೂಡಿಸಲೆತ್ನಿಸಿದರಾದರೂ ಅದು ಹೊಸ ಓಘದಲ್ಲಿ ಸಮ್ಮಿಳಿತವಾಗಲು ಸಮರ್ಥವಾಗಲಿಲ್ಲವೆಂದಾಗ ನವ್ಯ ಆಂದೋಲನದ ಚೈತನ್ಯ ಶಕ್ತಿಯಾಗಿ ಪರಿಣಮಿಸುವುದಂತೂ ದೂರವೇ ಉಳಿಯಿತು. ಹೊಸ ಯುಗದ ಪ್ರಾತಿನಿಧಿಕ

ಧ್ವನಿ ನಿಜವಾಗಿ ಕೇಳಿ ಬರುವುದು ನಿರಂಜನ ಭಗತರ ಕಾವ್ಯದಲ್ಲಿ. ಅವರು ಸಾಹಿತ್ಯ ಕ್ಷೇತ್ರದಲ್ಲಿ ೧೯೪೭ ಕ್ಕೆ ತುಸು ಮೊದಲೇ ಕಾಲಿರಿಸಿದ್ದರೂ ಅವರ ನೈಜ ಕಾವ್ಯಧ್ವನಿ ಕೇಳಿ ಬರುವುದು ೧೯೫೦-೫೧ ರ ಸುಮಾರಿಗೆ ನಿರ್ಮಾಣಗೊಂಡ ಕಾವ್ಯದಲ್ಲಿಯೆ 'ಪ್ರವಾಲದ್ವೀಪ' ಎಂಬ ಅವರ ಸಂಗ್ರಹದಲ್ಲಿನ ಕವನಗಳಲ್ಲಿ ಅವರು ಆಧುನಿಕ ನಗರ ಜೀವನದ ಹೃದಯಶೂನ್ಯತೆ, ಭಯಾನಕತೆ, ಬರಡುತನ, ಮೌಢ್ಯಗಳಿಗೆ ಕನ್ನಡಿ ಹಿಡಿದಿದ್ದಾರೆ. 'ಫೌಂಟನನಾ ಬಸ್ ಸ್ಟಾಪ್ ಪರ' ಎಂಬ ತಮ್ಮ ಕವನದಲ್ಲಿ ಅವರು ನಗರಗಳಲ್ಲಿಯ ಮುಖವಿಹೀನ ಮನುಷ್ಯ ಪ್ರಾಣಿಯ ಹಾಗು ಉದ್ದೇಶರಹಿತ ಜನ ಸಂಚಾರದ ಸಾಂಕೇತಿಕ ಚಿತ್ರಣ ನೀಡಿದ್ದಾರೆ. ಸ್ಪಷ್ಟ ಪ್ರತಿಮಾವಿಧಾನ ಹಾಗು ಭಾಷೆಯ ಬಳಕೆಯಲ್ಲಿಯ ವಿನೂತನತೆ ಅವರ ಈ ಕವನದಲ್ಲಿ ವ್ಯಕ್ತವಾಗುತ್ತದೆ ಅವರ 'ಪಾತ್ರೊ' ಎಂಬ ಕವನದಲ್ಲಿ ಕವಿ. ಬೀದಿ ಮಾರಾಟಗಾರ. ಭಿಕ್ಷುಕ, ಕುರುಡ, ಸೂಳೆ, ಮುಂತಾದ ಪಾತ್ರಗಳ ಪರಿಣಾಮಕಾರಿ ವಾಸ್ತವ ಚಿತ್ರವಿದೆ.

ಯುವಕ ನವ್ಯಕವಿಗಳ ಹೊಸ ಹಾದಿ

ಆದರೆ ಯುವಕ ನವ್ಯಕವಿಗಳು ಉಮಾಶಂಕರ ಅಥವಾ ನಿರಂಜನ ಭಗತರಿಬ್ಬರನ್ನೂ ಅನುಸರಿಸಲು ನಿರಾಕರಿಸಿದರು. ಅವರು ಅಜ್ಞಾತ, ಅನಿಶ್ಚಿತ ಜಗತ್ತಿನ ಶೋಧಕ್ಕೆ ನಡೆದಂತಿದೆ. ಈ ಹೊಸ ಕವಿಗಳಲ್ಲಿ ವಾಚಕ ವರ್ಗದ ಗಮನ ಸೆಳೆದವರೆಂದರೆ ಸುರೇಶ ಜೋಶಿ, ಹಸಮುಖ ಪಾಠಕ, ನಲಿನ ರಾವಳ. ಗುಲಾಮಮಹಮ್ಮದ ಶೇಖ, ಲಭಶಂಕರ ಠಕ್ಕರ, ಚಿನು ಮೋದಿ, ರಾಧೇಶ್ಯಾಮ ಶರ್ಮಾ, ದಿಲೀಪ ಝವೇರಿ ಮತ್ತು ಮಣಿಲಾಲ ದೇಸಾಯಿಯವರು. ಅವರ ಕಾವ್ಯ ಹೆಚ್ಚಾಗಿ ಆತ್ಮನಿಷ್ಠವಾದುದು. ಅವರು ತಮ ತಮ್ಮದೇ ಆದ ಶೈಲಿಯನ್ನು ದೃಷ್ಟಿಕೋನವನ್ನು ಬೆಳೆಸಿಕೊಂಡಿರುವರಾದರೂ ಸಾಮಾನ್ಯವಾಗಿ ಅವರೆಲ್ಲರಲ್ಲಿ ಸಮಾನ ಅಂಶಗಳೇ ಹೆಚ್ಚು. ಅವರೆಲ್ಲರೂ ಆತ್ಮದ ಛಿನ್ನ ವಿಛಿನ್ನತೆಯ ಭಾವ, ಮನಸ್ಸಿನ ಬರಡು ಕತ್ತಲು, ಅಸ್ತಿತ್ವದ ಅರ್ಥಶೂನ್ಯತೆ ಮುಂತಾದವುಗಳನ್ನು ಒಂದೇ ಧಾಟಿಯಲ್ಲಿ ವ್ಯಕ್ತಗೊಳಿಸಿದ್ದಾರೆ ಸಿತಾಂಶು ಮಹತಾರ ಕವನಗಳಲ್ಲಿ ವಾಸ್ತವತೆ ತಾನೇ ತಾನಾಗಿದೆಯಾದರೆ ಗುಲಾಮಮಹಮ್ಮದ ಶೇಖರ ಕವನಗಳಲ್ಲಿ ಚಿತ್ರವತ್ತತೆ ಕಂಡುಬರುತ್ತದೆ. ಈ ನವ್ಯಕವಿಗಳು ಅನೇಕ ಉತ್ತಮ ಕಾವ್ಯಗಳನ್ನು ನಿರ್ಮಿಸಿದ್ದಾರೆಯಾದರೂ ಪ್ರತಿಯೊಬ್ಬ ಕವಿಯೂ ತನ್ನ ವ್ಯಕ್ತಿತ್ವವನ್ನಿನ್ನೂ ಸ್ಥಾಪಿಸಬೇಕಿದೆ. ಇತ್ತೀಚೆ ಪ್ರಕಟವಾದ ಲಾಭಶಂಕರರ ದೀರ್ಘ ಕವನ 'ಮಾಣಸನಿ ವಾತ' ಎಂಬುದು ಹೊಸ ಆಸೆಯನ್ನು ಹುಟ್ಟಿಸುತ್ತದೆ

ಆದರೆ ದುರ್ದೈವದಿಂದ ಈ ಹೊಸ ಪೀಳಿಗೆಯ ಕಾವ್ಯದ ಪರಿಮಿತಿ ಆಗಲೆ ವ್ಯಕ್ತವಾಗತೊಡಗಿದೆ. ಈ ಕವಿಗಳು ಆತ್ಮನಿಷ್ಠ ಜಗತ್ತಿಗೆಯೇ ತಮ್ಮನ್ನು ತಾವು ಕಟ್ಟಿಹಾಕಿಕೊಂಡಿರುವುದರಿಂದ ಎಷ್ಟೋ ಸಲ ಎಂಥ ಓದುಗರನ್ನೂ ಅವು ತಲುಪದೇ ಹೋಗಬಹುದಾಗಿದೆ. ಗೂಗೆ, ಹಾವು, ಇರುವೆ, ಎಲಬು, ಕೀವು ಮುಂತಾದ ಪ್ರತಿಮೆಗಳನ್ನೇ ಪುನಃ ಪುನಃ ಎಲ್ಲರೂ ಬಳಸುತ್ತಿರುವುದರಿಂದ ಅವು ತಮ್ಮ ಪರಿಣಾಮಕಾರಿತ್ವಕ್ಕೆ ಎರವಾಗಿವೆಯಲ್ಲದೆ ಅನೇಕ ಸಲ ಈ ನವ್ಯ ಕೃತಿಗಳ ಯಥಾರ್ಥತೆಯ ಬಗೆಗೆಯೇ ಸಂಶಯ ಹುಟ್ಟುತ್ತದೆ. ಕೆಲವರಂತೂ ಸಂವೇದನಾಶೀಲ ಓದುಗರ ಮನಸ್ಸಿಗೆ ಆಘಾತವನ್ನು ಉಂಟುಮಾಡುವಂತೆ ವಿಕಾರವೂ ಅಸಹ್ಯವೂ ಆದುದನ್ನೇ ತಮ್ಮ ಕೃತಿಗಳಲ್ಲಿಳಿಸುವುದಕ್ಕೆ ನೋಡುತ್ತಾರೆ. ಇದರಿಂದ ನಿಜವಾದ ರಸಗ್ರಹಣ ಸಾಧ್ಯವೇ ಆಗದೆ ಒಂದು ಬಗೆಯ ಜಡತ್ವ ಅನುಭವಕ್ಕೆ ಬರುತ್ತದೆ. ಇನ್ನು ಕೆಲವರು ಶಬ್ದಗಳನ್ನು ವಿಶಿಷ್ಟ ರೀತಿಯಲ್ಲಿ ಜೋಡಿಸುವುದರ ಮೂಲಕವೇ ಕವನ ರಚಿಸುವ ಕೃತಕಯತ್ನ ಮಾಡಿದ್ದಾರೆ. ಒಂದು ಶಿಖರದ ಮೇಲೆ ಧ್ವಜ ಏರಿಸಿರುವ ಚಿತ್ರ ಬರುವಂತೆ ಶಬ್ದಗಳನ್ನು ಇಟ್ಟಿರುವ ಒಂದು ಕವನವೂ ಬಂದಿದೆ. ಆದರ ಇಂಥ ಯತ್ನಗಳಿಗೆ ಕಾವ್ಯಮೌಲ್ಯವೇನಾದರೂ ಇದ್ದರೆ ಆಶ್ಚರ್ಯ. ಕಾವ್ಯದ ನಿಜವಾದ ಭವಿತವ್ಯವಿರುವುದು ಭಾಷಾ ಮಾಧ್ಯಮದಲ್ಲಿಯೆ ಹೊರತು ಇತರ ರೂಪಗಳಲ್ಲಲ್ಲ.

ಕತೆಗಳಲ್ಲಿ ನವೀನ ಪ್ರತಿಮಾವಿಧಾನ

ಕಥೆ, ಕಾದಂಬರಿ ಕ್ಷೇತ್ರದಲ್ಲಿ ಸುರೇಶ ಜೋಶಿಯವರಿಂದ ಆರಂಭವಾದ ಪ್ರಯೋಗಶೀಲತೆ ಚಂದ್ರಕಾಂತ ಬಕ್ಷಿ. ಮಧು ರಾಯಿ, ಜ್ಯೋತೀಷ ಜಾನಿ, ಭಗವತೀಕುಮಾರ ಶರ್ಮಾ, ಶಿವಕುಮಾರ ಜೋಶಿ, ರಾಧೇಶ್ಯಾಮ ಶರ್ಮಾ. ಈವಾ ಡೆ, ಸರೋಜ ಪಾಠಕ, ಧಿರೂಬೇನ್ ಪಟೇಲ, ರಘುವೀರ ಚೌಧರಿ ಮತ್ತು ಇನ್ನೂ ಅನೇಕರಿಂದ ಮುಂದುವರಿದಿದೆ. ಇಲ್ಲಿ ವಿಪುಲ ಕೃಷಿಯೂ ಆಗಿದೆ. ಪ್ರತಿಯೊಬ್ಬರೂ ತಮ್ಮ ತಮ್ಮದೇ ಆದ ಶೈಲಿಯನ್ನೂ ಬೆಳೆಸಿಕೊಂಡಿದ್ದಾರೆ. ಸಣ್ಣ ಕತೆ ಈ ಕಾಲದಲ್ಲಿ ನಿಜಕ್ಕೂ ಒಳ್ಳೆಯ ರಸಗುಣವನ್ನು ಬೆಳೆಸಿಕೊಂಡಿದೆಯೆಂದೇ ಹೇಳಬೇಕು. ನವೀನ ಪ್ರತಿಮಾವಿಧಾನವಿಲ್ಲಿ ನವ್ಯಕಾವ್ಯದಲ್ಲಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಬೆಳೆದು ಬಂದಿದೆ. ಚಂದ್ರಕಾಂತ ಬಕ್ಷಿ ಕೆಲವು ಉತ್ತಮ ನವ್ಯ ಕಾದಂಬರಿಗಳನ್ನು ಬರೆದಿದ್ದಾರೆ. ಅವರ ಶೈಲಿಯೂ ಆಕರ್ಷಕವೆನಿಸಿದೆ. ರಘುವೀರ ಚೌಧರಿ, ಮಹಮ್ಮದ ಮಂಕದ, ಧಿರೂಬೇನ್ ಪಟೇಲ. ಭಗವತಿಕುಮಾರ ಶರ್ಮಾ ಮೊದಲಾದವರು ಸಹ ಕಾದಂಬರಿಯಲ್ಲಿ ಕೈಯಾಡಿಸಿದ್ದಾರೆ. ಕೆಲವು ನವ್ಯ ಲೇಖಕರು ನಾಟಕದಲ್ಲೂ ಹೊಸ ಪ್ರಯೋಗಗಳನ್ನು ನಡೆಸಿದ್ದಾರೆ

ಗುಜರಾತಿ ಸಾಹಿತ್ಯವಿಂದು ಒಂದು ಬಗೆಯಲ್ಲಿ ಕದಡಿದ ಸರೋವರದಂತಿದೆ. ನವ್ಯ ಲೇಖಕರು ತಮ್ಮ ಸ್ಪಷ್ಟ ಮಾರ್ಗವನ್ನಿನ್ನೂ ರೂಪಿಸಬೇಕಿದೆ. ಹೊಸ ದಾರಿಯ ಬಾಗಿಲು ತೆರೆದಿದೆಯಾದರೂ ಹೊಸ ಮೌಲ್ಯಗಳನ್ನು ಪ್ರತಿನಿಧಿಸುವ ಉಚ್ಚ ಸಾಹಿತ್ಯ ನಿರ್ಮಿಸಬಲ್ಲ ಶ್ರೇಷ್ಠ ಪ್ರತಿಭಾವಂತ ಇನ್ನೂ ಅರಳಬೇಕಿದೆ. ಇಂದು ಗುಜರಾತಿ ಸಾಹಿತ್ಯ ಕವಲು ದಾರಿಯಲ್ಲಿರುವುದರಿಂದ ಅದರ ಭವಿತವ್ಯದ ಬಗ್ಗೆ ಇದಮಿತ್ಥಂ ಎಂದು ಹೇಳಲು ಈಗಂತೂ ಸಾಧ್ಯವಿಲ್ಲ.

ತೆಲುಗು ಸಾಹಿತ್ಯದಲ್ಲಿ ನವಸೃಷ್ಟಿ

— ತಾಳ್ಳೂರು ನಾಗೇಶ್ವರರಾವ್

★

ಸಾಮಾನ್ಯವಾಗಿ ಎಲ್ಲ ಭಾರತೀಯ ಭಾಷೆಗಳಲ್ಲಿಯಂತೆ ತೆಲುಗಿನಲ್ಲೂ ಸಾಮಾನ್ಯ ವಾಚಕರ ಅಭಿ-ರುಚಿಯಂತೆ ಕಾದಂಬರಿಯೇ ಸಾಹಿತ್ಯದ ಇತರ ರೂಪಗಳಿಗಿಂತ ಹೆಚ್ಚು ಜನಪ್ರಿಯವಾಗುತ್ತಿದೆ ಎನ್ನುತ್ತಾರೆ ಲೇಖಕರು.

★

ಯಾವ ಭಾಷೆಯೇ ಆಗಲಿ, ಆಗು ಹೋಗುಗಳನ್ನು ಪರಿಶೀಲಿಸುವಾಗ ಸಮಕಾಲೀನ ಸಾಹಿತ್ಯದೊಂದಿಗೆ ಹೋಲಿಸಿ ನೋಡಿದಾಗ ಮಹತ್ತರವಾದ ಬದಲಾವಣೆಯೇ ಕಂಡುಬರುತ್ತದೆ. ಈ ಬದಲಾವಣೆ ಬಳಕೆಯ ಭಾಷೆ ವಸ್ತುವನ್ನು ಆರಿಸುವುದು, ಉಪಯೋಗಿಸುವ ಶೈಲಿಯಲ್ಲಿ ಗೋಚರಿಸುತ್ತದೆ. ಹಾಗೆಯೇ ತೆಲುಗು ಸಾಹಿತ್ಯದಲ್ಲಿಯೂ ಸಹಜವಾಗಿ ಅನೇಕ ಬದಲಾವಣೆಗಳು ಬೆಳೆದುಬಂದಿವೆ. ಬದಲಾವಣೆಗೆ ಮುಖ್ಯ ಕಾರಣ ದೇಶ-ಕಾಲ-ವರ್ತಮಾನಗಳು, ಸಾಮಾಜಿಕ ಪರಿವರ್ತನೆ, ಉದ್ಯಮಗಳು, ವೈಜ್ಞಾನಿಕ ಪರಿಶೋಧನೆಯ ಪ್ರಗತಿ-ಮುಂತಾದವು.

ಸಾಧಾರಣವಾಗಿ, ಕಳೆದ ಅರ್ಧ ಶತಮಾನದ ತೆಲುಗು ಸಾಹಿತ್ಯಲೋಕದತ್ತ ಸಿಂಹಾವಲೋಕನ ಮಾಡಿದರೆ-ಕಾದಂಬರಿ, ಕಥಾಸಾಹಿತ್ಯಗಳು ಶರವೇಗದಲ್ಲಿ ಮುನ್ನುಗ್ಗುತ್ತಿವೆ ಎಂಬುದೂ, ಪುರಾಣ, ಪ್ರಬಂಧ, ಕವಿತೆಗಳು ಕೊಂಚ ಹಿಮ್ಮೆಟ್ಟಿರುವುದೂ ತಿಳಿದುಬರುತ್ತದೆ. ಇಂದಿನ ಓದುಗರ ದೃಷ್ಟಿ ನೂರಕ್ಕೆ ಎಪ್ಪತ್ತರಷ್ಟು ಕಥೆ, ಕಾದಂಬರಿಗಳತ್ತ ಹೊರಳಿದೆ

ತೆಲುಗು ಕಾದಂಬರಿ ನಿರ್ಮಾಣದಲ್ಲಿ ಗಮನೀಯವಾದ ಪರಿಣಾಮ ಉಂಟಾಗಿದೆ. ಈ ಪರಿಣಾಮ ಕಾದಂಬರಿಯ ಬೆಳವಣಿಗೆಯನ್ನೂ ಅದರ ಭವಿತವ್ಯವನ್ನೂ ವ್ಯಕ್ತಪಡಿಸುತ್ತದೆ.

ಶ್ರೀ ವೀರೇಶಲಿಂಗಂರವರು ತೆಲುಗಿನಲ್ಲಿ ಮೊತ್ತಮೊದಲಬಾರಿಗೆ ಕಾದಂಬರಿಯ ಸೃಷ್ಟಿಗೆ ಬುನಾದಿ ಹಾಕಿದರು. ಮೊದಲು ನಿರ್ಮಿತವಾದ ಕಾದಂಬರಿ 'ಶ್ರೀ ರಾಜಶೇಖರ ಚರಿತ್ರ'. ಅಂದಿನಿಂದ ಇಂದಿನ ವರೆಗೂ ಕಾದಂಬರಿ ಸೃಷ್ಟಿಯಲ್ಲಿ ಅನೇಕ ಉದ್ಯಮ ಪ್ರಭಾವಗಳು, ಸಾಂಪ್ರದಾಯಿಕ ಭಾವಗಳು, ನೂತನ ಲೇಖನ ನಿರ್ಮಾಣದ ಪ್ರಭಾವಗಳು ಬಂದಿವೆ. ಚಿಲಕಮರ್ತಿ ಲಕ್ಷ್ಮೀನರಸಿಂಹ ಶಾಸ್ತ್ರಿಯವರ ಕಾದಂಬರಿಗಳಲ್ಲಿ ವೀರೇಶಲಿಂಗಂರವರ ಪ್ರಭಾವ ಕಂಡುಬರುತ್ತದೆ. ವೇಂಕಟಪಾರ್ವತೀಶರ ಕಾದಂಬರಿಗಳಲ್ಲಿ ಕಾಲ್ಪನಿಕೋದ್ಯಮದ ಛಾಯೆ ಪ್ರತಿಫಲಿಸುತ್ತದೆ. ಉನ್ನವ ಲಕ್ಷ್ಮೀನಾರಾಯಣರವರ 'ಮಾಲಪಲ್ಲಿ'-ಕಾದಂಬರಿಯಲ್ಲಿನ ಕಥಾವಸ್ತು, ಗಾಂಧೀತತ್ತ್ವ-ಅಸ್ಪೃಶ್ಯತೆ. ಹಿಂದೂ ಸಂಪ್ರದಾಯದಲ್ಲಿನ ವಿಶಿಷ್ಟತೆಯನ್ನು ವಿಶ್ವನಾಥ ಸತ್ಯನಾರಾಯಣರವರ ಕಾದಂಬರಿಗಳಲ್ಲಿ ಕಾಣಬಹುದು. ಅಡವಿ ಬಾಪಿರಾಜೂರವರ ಕಾದಂಬರಿಗಳಲ್ಲಿ ಶಿಲ್ಪಕಲೆಗೂ, ಸೌಂದರ್ಯ ವಿವರಣೆಗೂ ಪ್ರಾಧಾನ್ಯ ದೊರೆತಿದೆ. ಬದುಕಿಗೆ ಆನಂದ, ಹೆಣ್ಣಿಗೆ ಸ್ವೇಚ್ಛೆ, 'ಸೆಕ್ಸ್'ನಲ್ಲಿಯೂ ಸ್ವೇಚ್ಛೆ ಇರಬೇಕೆಂದು ವಾದಿಸಿ, 'ಚಲಂ'ರವರು ಕಾದಂಬರಿಗಳನ್ನು ಹೆಣೆದಿದ್ದಾರೆ. ಸಂಪ್ರದಾಯದಲ್ಲಿ ಸತ್ಯಾಸತ್ಯತೆಯ ಸ್ವರೂಪವನ್ನು ವಿವೇಚಿಸಿ, ಹೇತುವಾದಕ್ಕೆ, ಅಸ್ತಿತ್ವವಾದಕ್ಕೆ, ಸಾಹಿತ್ಯದಲ್ಲಿ ಸ್ಥಾನವನ್ನು ಕಲ್ಪಿಸಿ 'ಗೋಪೀಚಂದ'ರವರು ಕಾದಂಬರಿಗಳನ್ನು ರಚಿಸಿದರು.

ಕಾದಂಬರಿ ರಂಗದಲ್ಲಿ ಹೊಸ ಅಧ್ಯಾಯ

ಮಧ್ಯಮ ವರ್ಗದವರ ಸಮಸ್ಯೆಗಳನ್ನು ಮನಸ್ತತ್ತ್ವಗಳನ್ನು ಕಥಾವಸ್ತುಗಳನ್ನಾಗಿ ಆರಿಸಿಕೊಂಡು ಕೊಡವಟಿಗಂಟಿ ಕುಟುಂಬರಾಯರು ಕಾದಂಬರಿಗಳನ್ನು ರಚಿಸಿದರು. ಸಾಮಾಜಿಕ ಸ್ಥಿತಿಗತಿಗಳನ್ನು ಪಾತ್ರಗಳು ಹೇಗೆ ಪ್ರತಿಬಿಂಬಿಸುತ್ತವೆ ಎಂಬುದನ್ನು ಜಿ. ವಿ. ಕೃಷ್ಣರಾಯರ "ಕೀಲುಬೊಮ್ಮಲು" ಕಾದಂಬರಿಯಲ್ಲಿ ಕಾಣಬಹುದು. ಸಾಮಾಜಿಕ ವಾತಾವರಣವನ್ನು ಚೈತನ್ಯ ಸ್ರವಯಿಯಾಗಿ, 'ಸ್ಟ್ರೀಮ್ ಆಫ್ ಕಾನ್ಷಸ್‌ನೆಸ್' ತಂತ್ರದಿಂದೊಡಮೂಡಿದ 'ಅಲ್ಪ ಜೀವಿ' ಕಾದಂಬರಿಯ ಬಗ್ಗೆ ತೆಲಗು ಕಾದಂಬರೀ ಕ್ಷೇತ್ರದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಿದ ಕೀರ್ತಿ ಶ್ರೀ ರಾಚಕೊಂಡ ವಿಶ್ವನಾಥ ಶಾಸ್ತ್ರಿಯವರಿಗೆ ಸಲ್ಲುತ್ತದೆ.

ತೆಲುಗು ಕಾದಂಬರಿಯ ಸ್ಥಾನವನ್ನು ವಸ್ತುವಿನಲ್ಲಿ, ವಾತಾವರಣದಲ್ಲಿ, ಪಾತ್ರ-ಚಿತ್ರಣದಲ್ಲಿ, ರಚನಾವಿಧಾನದಲ್ಲಿ ಉನ್ನತ ಮಟ್ಟಕ್ಕೇರಿಸಿದ ಇನ್ನೊಂದು ಕಾದಂಬರಿ, ಬುಚ್ಚಿಬಾಬುರವರ 'ಚಿವರಕು ಮಿಗಿಲೇದಿ'

ಕಾದಂಬರಿಯ ಸೃಷ್ಟಿ ಸುಮಾರು ತೊಂಭತ್ತು ವರ್ಷ ವಯಸ್ಸಿನದಾದರೂ-ಮೊದಲು ಹೊರಬಂದ ಕಾದಂಬರಿಗಳಲ್ಲಿ ಬಹುತೇಕವಾಗಿ ಅನುವಾದ, ಅನುಕರಣೆಗಳು, ಅಷ್ಟೇ ಅಲ್ಲದೆ ವ್ಯಾವಹಾರಿಕ ಭಾಷೆಗೆ ಬದಲಾಗಿ ಗ್ರಾಂಥಿಕ ಭಾಷೆಯಲ್ಲಿರುವುವು, ಕಥಾವಸ್ತುಗಳು ಕಾಲ್ಪನಿಕ ಜಗತ್ತಿಗೂ ಚಾರಿತ್ರಿಕ ಪ್ರಣಯಗಳಿಗೂ ಸಂಬಂಧಿಸಿದಂತಿರುತ್ತಿದ್ದವು

ಈಗ ತೆಲುಗು ಕಾದಂಬರಿ ಭಾಷೆ, ಕಥಾವಸ್ತು, ಶಿಲ್ಪರಚನಾವಿನ್ಯಾಸದಲ್ಲೂ, ನವಪಂಥ ಹಿಡಿದಿದೆ ಇಂದಿನ ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆಗಳು, ಮಧ್ಯಮ ವರ್ಗದವರ ಮನೋಪ್ರವೃತ್ತಿ ಮಾನಸಿಕ ತುಮುಲ ವ್ಯಕ್ತಿಗಳ ಮೇಲೆ ಸಮಾಜ ಉಂಟುಮಾಡುವ ಪ್ರಭಾವಗಳ ಫಲಿತಾಂಶಗಳ, ಪರಿಶೀಲನೆ- ಆರ್ಥಿಕ, ರಾಜಕೀಯ ಬದಲಾವಣೆಗಳು, ಸಮಾಜದಲ್ಲಿ ಅನುದಿನವೂ ಬೆಳೆದು ಹೆಮ್ಮರವಾಗುತ್ತಿರುವ ಸೋಮಾರಿತನ, ಹಸಿವೆ, ಅನೀತಿ, ಅತ್ಯಾಚಾರ, ಲಂಚಗುಳಿತನ, ನಿರುದ್ಯೋಗ, ಸ್ತ್ರೀ ಸಮಸ್ಯೆಗಳು, ಭಾವ ಸಂಘರ್ಷಣೆಗಳೇ ಕಥಾವಸ್ತುಗಳಾಗಿ ಕಂಡುಬರುತ್ತವೆ.

ತೆಲುಗು ಸಾಹಿತ್ಯದಲ್ಲಿ ಈಗ ಕಾದಂಬರಿಗಳ

ಗಿರುವಷ್ಟು ಪ್ರಾಧಾನ್ಯ, ಆದರ, ಸ್ಥಾನ ಇನ್ನಾವ ಬಗೆಯ ಸಾಹಿತ್ಯಸೃಷ್ಟಿಗೂ ಇಲ್ಲವೆನ್ನಬಹುದು. ಅದಕ್ಕೆ ಮುಖ್ಯ ಕಾರಣವೆಂದರೆ ಕಾದಂಬರಿ ಓದುಗರಲ್ಲಿ ವಿಶೇಷ ಅಭಿರುಚಿಯನ್ನುಂಟುಮಾಡಿರುವುದು. ಭಾರತೀಯ ಸಾಹಿತ್ಯಗಳಲ್ಲಿ ಯಾವ ಸಾಹಿತ್ಯಕ್ಕೂ ಹಿಂದಾಗದ ತೆಲುಗು ಸಾಹಿತ್ಯ ಪುರೋಗಮಿಸಿದೆ. ತೆಲುಗು ಕಾದಂಬರಿಗೆ ಶ್ರೀ ವೀರೇಶಲಿಂಗಂ, ಒಲಕಮರ್ತಿ, ಅಡವಿ ಬಾಪಿರಾಜು, ವಿಶ್ವನಾಥ, ಸತ್ಯನಾರಾಯಣ, ನೋರಿ ನರಸಿಂಹಶಾಸ್ತ್ರಿ, ಗೋಪೀಚಂದ, ಚಲಂ, ಬುಚ್ಚಿಬಾಬು. ಧನಿಕೊಂಡ ಹನುಮಂತರಾವ್, ಕೊಡವಟಿಗಂಟಿ ಕುಟುಂಬರಾವ್, ಜಿ. ವಿ. ಕೃಷ್ಣರಾವ್ ಮುಂತಾದವರು ವ್ಯವಸ್ಥಾಪಕರಾದರೆ, ಅದನ್ನು ಅಭಿವೃದ್ಧಿಗೆ ತಂದವರು ರಾಚಕೊಂಡ ವಿಶ್ವನಾಥ ಶಾಸ್ತ್ರಿ, ಹಿತಶ್ರೀ ಪುರಾಣಂ, ಕೊಮ್ಮೂರಿ ವೇಣುಗೋಪಾಲರಾವ್, ಗೊಲ್ಲಪೂಡಿ ಮಾರುತಿರಾವ್, ಶೀಲಾ ವೀರ್ರಾಜು, ಪಿಲಕಂ ಗಣಪತಿಶಾಸ್ತ್ರಿ, ಮಂಜುಶ್ರೀ, ರಾವೂರಿ ಭಾರದ್ವಾಜ, ಪಾಲಂಕಿ ದಕ್ಷಿಣಾಮೂರ್ತಿ, ಪಾಲಗುಮ್ಮಿ ಪದ್ಮರಾಜು, ಶಾರ್ವರಿ. ಪನ್ಯಾಲ ಗೌರೀಪು ಶಾಸ್ತ್ರಿ, ವಿಶ್ವಪ್ರಸಾದ್, ಪಾಲುಪ್ರಗಡ ಸತ್ಯನಾರಾಯಣ ಮುಂತಾದವರು.

ಕಾದಂಬರಿ ಕ್ಷೇತ್ರದಲ್ಲಿ ಗಮನೀಯವಾದ ಬದಲಾವಣೆ ಎಂದರೆ ಮಹಿಳೆಯರು ಕಾದಂಬರಿಗಳನ್ನು ಸೃಷ್ಟಿಸುತ್ತಿರುವುದು. ಅವುಗಳಿಗೆ ಅಪೂರ್ವ ಆದರ ದೊರೆಯುತ್ತಿರುವುದೂ, ಮಹಿಳಾ ಕಾದಂಬರಿಗಾರ್ತಿಯರಲ್ಲಿ ಅಗ್ರಗಣ್ಯರು ಶ್ರೀಮತಿ ಮುಪ್ಪಾಳ ರಂಗನಾಯಕಮ್ಮ ಅವರ 'ಬಲಿಪೀಠ', 'ರಚಯಿತ್ರಿ', 'ಪೇಕಮೇಡಲು', 'ಸ್ತ್ರೀ', ಅನೇಕ ಮುದ್ರಣಗಳನ್ನು ಕಂಡುದಲ್ಲದೆ ಕನ್ನಡಕ್ಕೂ ಅನುವಾದಗೊಂಡು ಕನ್ನಡದ ಲೇಖಕರ ಮೆಚ್ಚಿಕೆಯನ್ನೂ ಆದರಣೆಯನ್ನೂ ಗಳಿಸಿರುವುದು ವಿಶೇಷವೇ.

ಇನ್ನಿತರ ಮಹಿಳಾ ಲೇಖಕರು, ಕೌಸಲ್ಯಾದೇವಿ, ಯುದ್ಧನಪುಡಿ ಸುಲೋಚನಾರಾಣಿ, ದ್ವಿವೇದುಲ ವಿಶಾಲಾಕ್ಷಿ, ಲತ, ರಾಮಲಕ್ಷ್ಮೀ, ಮಾಲತೀ ಚಂದೂರ್. ಆನಂದರಾಮಂ, ವಾಸಿರೆಡ್ಡಿ ಸೀತಾದೇವಿ, ಉನ್ನವ ವಿಜಯಲಕ್ಷ್ಮೀ, ವಾಚಸ್ಪತಿ ಮುಂತಾದವರು ಉತ್ತಮ ಕಾದಂಬರಿಗಳನ್ನು ಸೃಷ್ಟಿಸಿ ಓದುಗ ಬಳಗವನ್ನು ಮತ್ತೂ ಬೆಳೆಸಿದ್ದಾರೆ.

ಸಣ್ಣ ಕಥೆಗಳು

ತೆಲುಗು ಸಾಹಿತ್ಯದಲ್ಲಿ ಸಣ್ಣ ಕಥೆ, ಕಾದಂಬರಿಗಳು ಅತಿಶೀಘ್ರವಾದ ಅಭಿವೃದ್ಧಿಗೆ ಬರಲು ಅನೇಕ ಪತ್ರಿಕೆಗಳೂ, ಪ್ರಕಾಶನ ಸಂಸ್ಥೆಗಳೂ ಬಹಳವಾಗಿ ಇಂಬುಗೊಟ್ಟವೆ ಎಂಬುದು ನಿರ್ವಿವಾದಾಂಶ. ಆಂಧ್ರಪ್ರಭ, ಆಂಧ್ರ ಸಚಿತ್ರವಾರ ಪತ್ರಿಕೆಗಳು ಕಥೆ, ಕಾದಂಬರಿಗಳಿಗೆ ಸ್ಪರ್ಧೆಗಳನ್ನೇರ್ಪಡಿಸಿ ಸಾವಿರಾರು ರೂಪಾಯಿಗಳ ಬಹುಮಾನಗಳನ್ನಿತ್ತು, ಲೇಖನ ಶಕ್ತಿಗೆ ನೀರೆರೆದು ಬೆಳೆಸುತ್ತಿದ್ದಾರೆ. ಪ್ರಾಯಶಃ ಇಂತಹ ದೋಹದ ಇತರ ಭಾಷೆಗಳಲ್ಲಿ ಅತ್ಯಲ್ಪ.

ಮತ್ತೊಂದು ಮಹತ್ತರವಾದ ಬೆಳವಣಿಗೆ ಎಂದರ ಶ್ರೀ ಎಂ. ಎನ್. ರಾವ್‌ರವರ ನೇತೃತ್ವದಲ್ಲಿ ಎಂ. ಶೇಷಾಚಲಂ ಅ್ಯಂಡ್ ಕಂಪನಿಯವರು 'ಕಿಸೆಹೊತ್ತಿಗೆ'ಯ ಪ್ರಕಾಶನದ ಯೋಜನೆಯನ್ನು ರೂಪಿಸಿ ಪ್ರತಿಯೊಬ್ಬರಿಗೂ ಲಭ್ಯವಾಗುವ ರೀತಿಯ ಅಗ್ಗದ ಬೆಲೆಯಿರಿಸಿ ತಿಂಗಳಿಗೆ ನಾಲು ಪುಸ್ತಕಗಳಷ್ಟು ಪ್ರಕಟಿಸುತ್ತಿದ್ದಾರೆ. ಸಾಹಿತ್ಯಕ್ಕೆ ಈ ಸಂಸ್ಥೆಯ ಸಹಕಾರ ಸೇವೆ ಅತ್ಯಮೂಲ್ಯವಾದುದು,

ತೆಲುಗಿನಲ್ಲಿ ಸಣ್ಣ ಕಥೆಗಳನ್ನು ಮೊದಲು ಸೃಷ್ಟಿಸಿದ ಖ್ಯಾತಿ ಶ್ರೀ ಗುರುಜಾಡಲು ಅಪ್ಪಾರಾಯರದು. ನಂತರದಲ್ಲಿ ಅದನ್ನು ವಿಸ್ತೃತಗೊಳಿಸಿ ನವರೂಪ ಕಲ್ಪನೆ ಮಾಡಿದವರು, ಚಿಂತಾ ದೀಕ್ಷಿತುಲು, ಶ್ರೀಪಾದ ಸುಬ್ರಹ್ಮಣ್ಯ ಶಾಸ್ತ್ರಿಗಳ್, ಚಲಂ, ಗೋಪೀಚಂದ್, ಮಲ್ಲಾದಿ ರಾಮಕೃಷ್ಣಶಾಸ್ತ್ರಿ, ಕೊಡವಟಗಂಟಿ ಕುಟುಂಬರಾವ್ ಬುಚ್ಚಿಬಾಬು ಮುಂತಾದವರು.

ತೆಲುಗಿನಲ್ಲಿ ಸಣ್ಣ ಕಥೆಗಳೂ ಉತ್ತಮ ಅಭಿವೃದ್ಧಿಗೆ ಬಂದು ಭಾರತೀಯ ಸಾಹಿತ್ಯದಲ್ಲಿ ಉನ್ನತ ಸ್ಥಾನವನ್ನು ಗಳಿಸಿವೆ ಎಂಬುದಕ್ಕೆ ಅನೇಕ ನಿದರ್ಶನಗಳಿವೆ. ತೆಲುಗು ಕಥೆಗೆ ಅಂತರ್ದೇಶೀಯ ಖ್ಯಾತಿಯನ್ನು ತಂದವರು ಪಾಲುಗುಮ್ಮಿ ಪದ್ಮರಾಜು. ಅವರು ಬರೆದ 'ಗಾಲಿವಾನ್' ಕಥೆಗೆ ವಿಶ್ವಕಥಾಸ್ಪರ್ಧೆಯಲ್ಲಿ ದ್ವಿತೀಯಬಹುಮಾನ ಲಭಿಸಿತು. ಚೊಮ್ಮಿರೆಡ್ಡಿ ಪಲ್ಲಿ ಸೂರ್ಯರಾಯರ 'ದೊಂಗಲುನ್ನಾರು ಜಾಗ್ರತ' ಕಥೆಯೂ ವಿಶ್ವಕಥಾಸ್ಪರ್ಧೆಯಲ್ಲಿ ಪಾಲ್ಗೊಂಡಿತ್ತು. ಅಷ್ಟೇ ಅಲ್ಲದೆ ತೆಲುಗು ಕಥೆಗಳು ಅನೇಕ ಭಾಷೆಗಳಿಗೂ ಭಾಷಾಂತರಗೊಂಡಿವೆ.

ಕಥೆ ಬರೆಯುವುದರಲ್ಲಿ ಸಿದ್ಧಹಸ್ತರೆಂದು ಹೆಸರಾದವರು ಕೊಡವಟಗಂಟಿ ಕುಟುಂಬರಾವ್ ಧನಿಕೊಂಡ, ಗೋಪೀಚಂದ್, ಬುಚ್ಚಿಬಾಬು, ಕರುಣಾಕುಮಾರ್, ರಾಜಕೊಂಡ ವಿಶ್ವನಾಥಶಾಸ್ತ್ರಿ, ಮುಳ್ಳಪೂಡಿ ವೆಂಕಟರಮಣ, ಸಿ. ರಾಮಚಂದ್ರರಾವ್, ಶೂಲಿಕಾಭೂಷಣ್, ಬೀನಾದೇವಿ, ಜಾಗುಂಟ ಸೋಮಯಾಜುಲ್, ಮಧುರಾಂತಕಂ ರಾಜಾರಾಂ, ವನಶೀ, ಹಿತಶ್ರೀ ತಿಲಕ್ ಮುಂತಾದವರು. ಇವರುಗಳ ಕಥೆಗಳಲ್ಲಿ ಒಂದು ಪ್ರತ್ಯೇಕವಾದ ಶೈಲಿ, ಬೋಧನಾಮಯವಾದ ಪಾತ್ರಚಿತ್ರಣಗಳೂ ಕಂಡುಬರುತ್ತವೆ.

ಕಥೆಗಳಲ್ಲಿ ಹಾಸ್ಯದ ಹೊನಲು ಹರಿಸಿದವರು ಮುಕ್ಕಪಾಟ, ಭಮಿಡಿಪಾಟಿ, ಮುನಿಮಾಣಿಕ್ಯಂ, ಭಾನುಮತಿ ರಾಮಕೃಷ್ಣ ಮುಂತಾದವರು.

ಪತ್ತೇದಾರಿ ಕಥೆಗಳನ್ನು ಬರೆಯುವುದರಲ್ಲಿ ಸಿದ್ಧಹಸ್ತರಾದವರು ಟೆಂಪೋರಾವ್, ಜಿ. ವಿ. ಜಿ. ಕೃಷ್ಣ, ಕೊಮ್ಮೂರಿ ಸಾಂಬಶಿವರಾವ್ ಹೆಸರಾದವರು.

ಕಥಾ—ಸಾಹಿತ್ಯದಲ್ಲಿ ತೆಲುಗು ಬಹಳವಾಗಿ ಮುಂದಡಿ ಇರಿಸಿದೆ ಎಂದು ಹೇಳಬಹುದು. ನೂರಾರು ಮಂದಿ ಲೇಖಕರು ಸಾವಿರಾರು ಕಥೆಗಳನ್ನು ಉತ್ಪತ್ತಿ ಮಾಡುತ್ತಿದ್ದಾರೆ. ಆ ಉತ್ಪತ್ತಿಯನ್ನು ಎಲ್ಲರಿಗೂ ಸರಬರಾಜು ಮಾಡುವ ಸಾಧನಗಳು ವಾರ, ಮಾಸಪತ್ರಿಕೆಗಳು. ಕಥೆಗಳಲ್ಲಿ ವಸ್ತುವೈವಿಧ್ಯ, ಶಿಲ್ಪ, ಸಾಮಾಜಿಕ ಅವ್ಯವಸ್ಥೆ ಮೇಲೆ ವ್ಯಾಖ್ಯಾನಗಳನ್ನೂ ಮನೋವಿಶ್ಲೇಷಣೆ, ದೌರ್ಬಲ್ಯ, ಎಲ್ಲ ತರಗತಿಗಳ ಜನಜೀವನ ವಿಧಾನ, ಗ್ರಾಮ—ಪಟ್ಟಣದ ಬಾಳುವೆಯನ್ನು ಚಿತ್ರಿಸಿ ದೇಶ ಕಾಲ ಪಾತ್ರೋಚಿತ್ಯವನ್ನೂ ಪ್ರತಿಬಿಂಬಿಸುತ್ತದೆ.

ಒಟ್ಟಿನಲ್ಲಿ ಆಧುನಿಕ ಸಣ್ಣಕಥೆ, ಕಾದಂಬರಿಗಳಿಗೆ ಉಜ್ವಲವಾದ ಭವಿಷ್ಯವಿದೆ.

ಸಾಹಿತ್ಯದ ಪ್ರವೃತ್ತಿಗಳು ಹೇಗೇ ಬರಲಿ ಹೋಗಲಿ, ಶಾಶ್ವತವಾಗಿ ನಿಲ್ಲುವುದು. ಸಾಹಿತ್ಯ ಒಂದೇ; ಅದರ ಮೌಲ್ಯಗಳು ಮಾತ್ರ. ಹೀಗೆ ನಿಲ್ಲಬಲ್ಲ ಸಾಹಿತ್ಯ ಸೃಷ್ಟಿಯಾಗುತ್ತಿದ್ದರೆ, ಸಮಕಾಲೀನ ಶಂಕು ಜಾಗಟೆ ಕೊಂಬು ಕಹಳೆಗಳಿಗೆ ಯಾರೂ ತಲೆ ಕೆಡಿಸಿಕೊಳ್ಳಬೇಕಾದುದಿಲ್ಲ ಎನ್ನುತ್ತಾರೆ ಲೇಖಕರು.



— ಡಾ. ಹಾ. ಮಾ. ನಾಯಕ

ನಮ್ಮ ಸಾಹಿತ್ಯದ ಆಧುನಿಕ ಒಲವುಗಳನ್ನು ಕುರಿತು ವಿಚಾರ ಮಾಡುವಾಗ, ಆಧುನಿಕತೆಯ ಸ್ವರೂಪವನ್ನು ಸ್ವಲ್ಪ ಮಟ್ಟಿಗೆ ಪರಿಚಯ ಮಾಡಿಕೊಳ್ಳುವುದು ಅಗತ್ಯವಾಗಬಹುದು.

ಬೇರೆ ಬೇರೆಯ ಕ್ಷೇತ್ರಗಳಲ್ಲಿ ಆಧುನಿಕತೆ ತಾಂತ್ರಿಕವಾಗಿ ಬಳಕೆಯಲ್ಲಿರಬಹುದು. ಆದ್ದರಿಂದಲೇ ಅದರ ಬಗೆಗೆ ಬೇಕಾದಷ್ಟು ಚರ್ಚೆ ನಡೆದಿದೆ. ತಾತ್ತ್ವಿಕವಾಗಿ ಕಾಲಪ್ರವಾಹದಲ್ಲಿ ಭೂತ ಭವಿಷ್ಯಗಳ ನಡುವಣ ಬಿಂದುವಾಗಿದೆ - ಆಧುನಿಕತೆ. ಒಂದು ದೃಷ್ಟಿಯಲ್ಲಿ ಅದು ವರ್ತಮಾನ. ಸಾಹಿತ್ಯದಲ್ಲಿ ಸಾಮಾನ್ಯವಾಗಿ ಸಮಕಾಲೀನ ಆಲೋಚನೆ ಮತ್ತು ಅಭಿವ್ಯಕ್ತಿಗಳನ್ನು ಆಧುನಿಕವೆಂದು ಪರಿಗಣಿಸಲಾಗುತ್ತದೆ. ಆದರೆ ಆಧುನಿಕತೆ ಸಮಕಾಲೀನತೆಯಿಂದ ಒಂದು ಮಹತ್ವದ ದೃಷ್ಟಿಯಲ್ಲಿ ಭಿನ್ನವಾಗಿದೆಯೆಂಬುದನ್ನು ಅನೇಕ ಸಂದರ್ಭಗಳಲ್ಲಿ ಗಮನಿಸುವುದಿಲ್ಲ. ಸಮಕಾಲೀನತೆ ಸ್ವಸಂಪೂರ್ಣವಾದುದು; ನಿರಪೇಕ್ಷವಾದುದು. ಆಧುನಿಕತೆಯಾದರೋ, ಸಾಪೇಕ್ಷವಾದುದು; ಹಿಂದಿನದರೊಂದಿಗಿನ ತೌಲನಿಕತೆಯಲ್ಲಿಯೇ ಅದರ ಅಸ್ತಿತ್ವವಿರುವುದು. ಸಮಕಾಲೀನವಾದ ಅನೇಕ ಗುಣಲಕ್ಷಣಗಳನ್ನು ಹಿಂದಿನದರೊಡನೆ ಹೋಲಿಸಿ ನೋಡಿದಾಗಲೇ ಆಧುನಿಕತೆಯ ಅರಿವಾಗುವುದು.

ಇದರೊಂದಿಗೆ ಇನ್ನೂ ಒಂದು ಅಂಶವನ್ನು ಗಮನಿಸಬಹುದು. ಅದು ಆಧುನಿಕತೆಯಲ್ಲಿ ಅಂತರ್ಗತವಾಗಿರುವ ಸಮಕಾಲೀನತೆ. ಆಧುನಿಕತೆ ಯಾವಾಗಲೂ ಆಧುನಿಕವಾಗಿ ಉಳಿಯುವುದು ಸಾಧ್ಯವಾಗುವುದಿಲ್ಲ. ಈಗ ನಾವು ಯಾವುದನ್ನು ಹಳೆಯದು ಎಂದು ಹೇಳುತ್ತೇವೆಯೋ ಅದು ತನ್ನ ಕಾಲದಲ್ಲಿ ಆಧುನಿಕವಾಗಿತ್ತು. ಈಗ ಆಧುನಿಕವೆನ್ನಿಸಿಕೊಂಡಿರುವುದು ನಾಳೆ ಹಳೆಯದಾಗಿ ಹೋಗುತ್ತದೆ. ಹೊಚ್ಚ ಹೊಸದಾಗಿರುವ ನಾಳೆಯೂ ನಾಡಿದ್ದಿನ ಹೊತ್ತಿಗೆ ತನ್ನ ಆಧುನಿಕತೆಯನ್ನು ಕಳೆದುಕೊಳ್ಳುತ್ತದೆ. ಸತತವಾಗಿ ಬದಲಾಗುತ್ತಿರುವ ಬದುಕಿನಲ್ಲಿ ಇದು ಸಹಜ, ಅನಿವಾರ್ಯ.

ಬಗೆ ಬಗೆಯ ವಿಭಜನೆ

ನಮ್ಮ ಸಾಹಿತ್ಯವನ್ನು ಇತಿಹಾಸದಲ್ಲಿ ಬಗೆಬಗೆಯಾಗಿ ವಿಭಜಿಸುವ ಕ್ರಮಗಳುಂಟು. ಅವುಗಳಲ್ಲಿ ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ಒಂದು ವರ್ಗೀಕರಣ ಪ್ರಸಿದ್ಧವಾದ ಇದು ಮುಖ್ಯವಾಗಿ ಭಾಷೆಯ ಇತಿಹಾಸವನ್ನು ಗಮನಿಸಿ ಮಾಡಿದ ವರ್ಗೀಕರಣವಾಗಿದೆ. ನಡುಗನ್ನಡ ಎನ್ನುವ ಸಾಹಿತ್ಯ ಹಳೆಗನ್ನಡದ ದೃಷ್ಟಿಯಿಂದ ಆಧುನಿಕವಾದುದು; ಹೊಸಗನ್ನಡದ ಎದುರಿಗೆ ನಡುಗನ್ನಡ ಹಳೆಯದಾಗಿದೆ. ಪ್ರತಿಯೊಂದು ಅವಧಿಯಲ್ಲಿಯೂ ಸೃಷ್ಟಿಯಾಗುವ ಸತ್ವಪೂರ್ಣ ಸಾಹಿತ್ಯ ತನ್ನ ಕಾಲದ ಬದುಕನ್ನು, ಜೀವಿಯನ್ನು, ಅವನ ಸುಖದುಃಖಗಳನ್ನು, ಆಸೆ ಹತಾಶೆಗಳನ್ನು ಪ್ರತಿಬಿಂಬಿಸುತ್ತದೆ! ಆ ಅವಧಿಯ ಹೋರಾಟಕ್ಕೆ ಅದು ದನಿಗೂಡಿಸುತ್ತದೆ; ಆ ಕಾಲದ ಸಮಸ್ಯೆಗಳಿಗೆ ಅರ್ಥ ಹುಡುಕುತ್ತದೆ. ಆದ್ದರಿಂದ ಅದು ಕಾಲ ಕಳೆದ ಹಾಗೆಲ್ಲ ಹಿಂದಕ್ಕೆ ಸರಿಯುವುದು ಸ್ವಾಭಾವಿಕವಾಗುತ್ತದೆ.

× × ×

ಸಾಹಿತ್ಯ ಚರಿತ್ರೆಯಲ್ಲಿ ಬೇರೆಬೇರೆ ಗಡುಗಳನ್ನು ಗೊತ್ತುಮಾಡುವುದು ಕೇವಲ ಭಾವನಾತ್ಮಕವಾದರೂ, ಆಧುನಿಕ ಕನ್ನಡ ಸಾಹಿತ್ಯ ಕಳೆದ ಶತಮಾನದ ಮಧ್ಯಭಾಗದಲ್ಲಿ ಹೊಳವು ದೋರಿತೆಂದು ಇಟ್ಟುಕೊಂಡರೆ ತಪ್ಪಾಗಲಾರದು. ಆದರೆ ಇದು ಹರಳುಗೊಂಡದ್ದು ಇಪ್ಪತ್ತನೆಯ ಶತಮಾನದಲ್ಲಿಯೇ ಎಂಬುದನ್ನು ನಾವು ಮರೆಯಬಾರದು.

ಈ ಅವಧಿಯನ್ನು ಆಧುನಿಕ ಎನ್ನುವಾಗ ಆ ಪದಕ್ಕೆ ಈಗಿನ ಬಳಕೆಯಷ್ಟು ಸೀಮಿತವಾದ ಅರ್ಥವಿಲ್ಲವೆಂಬುದನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಏಕೆಂದರೆ, ಸಾಹಿತ್ಯ ಚರಿತ್ರೆಯ ಈ ದೀರ್ಘವಾದ ಅವಧಿಯಲ್ಲಿ ಅನೇಕ ಬಗೆಯ ಪ್ರವೃತ್ತಿಗಳು [illegible]; [illegible]ಗುತ್ತವೆ. ಇವುಗಳಲ್ಲಿ ತೀರ ಈಚಿನದಾಗಿರುವುದು ತನ್ನ ಹಿಂದಿನದನ್ನು ತನ್ನ ಸಮನೆಂದು ಒಪ್ಪಿಕೊಳ್ಳಲು ಸಿದ್ಧವಾಗಿರುವುದಿಲ್ಲ!

ನಿಧಾನವಾದ ಬೆಳವಣಿಗೆ

ಇಂದು ನಾವು ಸಾಮಾನ್ಯವಾಗಿ ಗುರುತಿಸುತ್ತಿರುವ ಆಧುನಿಕ ಸಾಹಿತ್ಯ, ಸಮಗ್ರ ಭಾರತಕ್ಕೇ ಅನ್ವಯವಾದಂತೆ, ಪಾಶ್ಚಾತ್ಯ ವಿದ್ಯಾಭ್ಯಾಸ, ಸಂಸ್ಕೃತಿ ಸಂಪರ್ಕ, ವಿಚಾರಧಾರೆ ಇವುಗಳ ಫಲ. ನಮ್ಮ ಸಾಹಿತ್ಯಕ್ಕೆ ದೀರ್ಘವಾದ ಇತಿಹಾಸ, ಸತ್ವಯುತವಾದ ಪರಂಪರೆ ಇದ್ದುದರಿಂದ ಒಂದೇ ಸಲಕ್ಕೆ ಆಧುನಿಕತೆ ಅರಳಲಿಲ್ಲ. ಅದು ನಿಧಾನವಾಗಿ ಬೆರೆಯತೊಡಗಿತು; ಬೆಳೆಯತೊಡಗಿತು. ಕಾಲದ ನೆರವಿನಿಂದ ಪರಿಚಯ ಸಖ್ಯವಾಯಿತು, ಸಂಬಂಧವಾಯಿತು. ಆದ್ದರಿಂದ ಆಧುನಿಕತೆ ಕಾಣದ ವೇಷವಾಗಿ ಬರದೆ, ಸಹಜವಾದ ಆವೇಶದ ರೂಪು ತಾಳಿತು. ಹತ್ತೊಂಬತ್ತನೆಯ ಶತಮಾನದ ಮೂರು ನಾಲ್ಕನೆಯ ದಶಕಗಳಲ್ಲಿಯೇ ಕಂಡುಬಂದ ಹೊಸತನ ಪಕ್ವಫಲವೀಯಲು ಇಪ್ಪತ್ತನೆಯ ಶತಮಾನದ ಎರಡು ಮೂರನೆ ದಶಕಗಳ ವರೆಗೆ ಕಾಯಬೇಕಾಯಿತೆಂಬುದು ಗಮನಾರ್ಹವಾದ ವಿಚಾರವಾಗಿದೆ. ಹತ್ತಿರ ಹತ್ತಿರ ಒಂದು ಶತಮಾನದ ಈ ದೀರ್ಘ ಅವಧಿಯಲ್ಲಿ ಹೊಸ ಕಾಲದ ಪವಾಡಕ್ಕೆ ಅಗತ್ಯವಾಗಿದ್ದ ಸಿದ್ಧತೆ ನಡೆದಿದೆ.


ಧರ್ಮಪ್ರಚಾರಕ್ಕಾಗಿ ಭಾಷೆಯನ್ನು ಸಮರ್ಥವಾಗಿ ಬಳಸಿಕೊಳ್ಳುವ ಒಂದು ಪ್ರಯತ್ನದ ಫಲವಾಗಿ ಅನೇಕ ಹೊಸ ಸಾಧ್ಯತೆಗಳುಂಟಾದವು. ನಮ್ಮ ಭಾಷೆ, ಸಾಹಿತ್ಯಗಳನ್ನು ಅದು ವರೆಗೆ ಕಾಣದಿದ್ದ ರೀತಿಯಲ್ಲಿ ಅಧ್ಯಯನ ಮಾಡಲು ಅವಕಾಶಗಳು ತೆರೆದವು. ಅದು-ಮಾತು ಸಾಹಿತ್ಯ ಭಾಷೆಗೆ ಹತ್ತಿರವಾಯಿತು. ಪಾಶ್ಚಾತ್ಯ ಸಾಹಿತ್ಯವನ್ನು ಇದ್ದಕ್ಕಿದ್ದ ಹಾಗೆಯೋ ಕಸಿಮಾಡಿಯೋ ಸ್ವೀಕರಿಸುವ ಪ್ರಯತ್ನಗಳಾದವು ಅನುಕರಣೆಗಳು ಹುಟ್ಟಿದವು. ಎಲ್ಲ ಬಗೆಯ ವೈವಿಧ್ಯಗಳು ತಲೆದೋರಿದವು. ಪ್ರಯೋಗಗಳು ಅಡೆತಡೆಯಿಲ್ಲದೆ ಸಾಗಿದವು. ಎಲ್ಲಿಯೂ ಅವಸರವಿರಲಿಲ್ಲ; ಹಿಂದಿನದನ್ನು ಒದೆಯುವ ಧೋರಣೆಯಿರಲಿಲ್ಲ; ತಾವು ಕ್ರಾಂತಿಕಾರಿಗಳೆಂದು ಈ ಕೆಲಸ ಮಾಡಿದ ಯಾರೂ ಘೋಷಿಸಿಕೊಳ್ಳಲಿಲ್ಲ. ಅದು ಕಾಯಕ, ಕೇವಲ ಕಾಯಕ. ಈ ತಪೋಸದೃಶ ದುಡಿಮೆ, ಮನೋಭಾವಗಳು ನಮ್ಮಲ್ಲಿ ಆಧುನಿಕತೆಯನ್ನು ಬೇರಿಳಿಸಿ ನಿಲ್ಲಿಸಿದವು.

ಹಳತು ಹೊಸತು ಮಿಶ್ರವಾದ, ಆದರೆ ಹೊಸ ಮಾದಿಕಟ್ಟಿನ ಕಡೆಗೆ ಒಲವುದೋರಿದ ಕೆಂಪು ನಾರಾಯಣನ "ಮುದ್ರಾಮಂಜೂಷ" (೧೮೨೩) ವನ್ನು ಹೊಸ ಸಾಹಿತ್ಯದ ಕೈಗಂಬವೆಂದು ನಿರ್ದೇಶಿಸಬಹುದಾಗಿದೆ ಹತ್ತೊಂಬತ್ತು ಇಪ್ಪತ್ತನೆ ಶತಮಾನದ ಸಂಧಿಕಾಲದವನಾದ ಮುದ್ದಣನನ್ನು (೧೮೭೦—೧೯೦೧) ಹಳಗನ್ನಡದ ಲೇಖಕನಾದರೂ, ಹೊಸ ಸಂವೇದನೆಗಳನ್ನು ಅರ್ಥ ಮಾಡಿಕೊಂಡವನೆಂದು ಗುರುತಿಸಬಹುದು. ಪುರಾಣವಸ್ತುವನ್ನೇ ಆಯ್ದುಕೊಂಡರೂ ಅದನ್ನು ನೋಡಿದ ದೃಷ್ಟಿ, ನಿರೂಪಿಸಿದ ತಂತ್ರ ಗದ್ಯದ ಮೇಲುಗೈಯನ್ನು ಉದ್ಘೋಷಿಸಿದ ವಿಧಾನ ಇವುಗಳಿಂದ ಮುದ್ದಣನು ಹೊಸ ಕಾಲದ ಹರಿಕಾರನಾಗಿದ್ದಾನೆಂಬುದು ಸ್ಪಷ್ಟ. ನಾಟಕಗಳನ್ನೇ ಕಾಣದಿದ್ದ (ಒಂದರ ವಿನಾ) ನವ್ಯ ಸಾಹಿತ್ಯದಲ್ಲಿ ನಾಟಕಗಳ ಮಹಾಪೂರವನ್ನು ಹರಿಸಿದ್ದು, ಸಿಂಹಾಸನಾರೂಢವಾದ ಪದ್ಯವನ್ನು ಅಲ್ಲಿಂದ ಇಳಿಸಿ ಅಲ್ಲಿಗೆ ಗದ್ಯವನ್ನೇರಿಸುವ ಸಾಹಸ ಮಾಡಿದ್ದು, ಪದ್ಯದ ರೂಪ-ಸ್ವರೂಪಗಳನ್ನು ಕ್ರಾಂತಿಕಾರಕವಾಗಿ ಬದಲಾಯಿಸಿದ್ದು—ಆಧುನಿಕತೆಯ ಆರಂಭಕಾಲದಲ್ಲಿ ನಡೆದ ಕೆಲಸಗಳು. ಪಾಶ್ಚಾತ್ಯ ಸಾಹಿತ್ಯ ಈ ವೇಳೆಗೆ ನೇರವಾಗಿಯೂ, ಬಂಗಾಳಿ ಮರಾಠೀ ಭಾಷೆಗಳ ಮೂಲಕವಾಗಿಯೂ ಹಲ ಬಗೆಯ ಪ್ರೇರಣೆಗಳನ್ನೊದಗಿಸಿತು.

× × ×

ಹೀಗೆ ಅಲ್ಲಿ ನಡೆಯುತ್ತಿದ್ದ ಹೊಸತನದ ಚಟುವಟಿಕೆಗಳನ್ನು ಯಾವುದಾದರೂ ರೀತಿಯಲ್ಲಿ ಒಂದುಗೂಡಿಸುವ, ಇಲ್ಲವೆ ಅವುಗಳಿಗೆ ಪರಿಣಾಮಕಾರೀ ತಿರುವು ಕೊಡುವ ಪ್ರಭಾವವೊಂದರ ಅಗತ್ಯ ಹಾಗೂ ಸಂಪ್ರದಾಯವನ್ನು ಧಿಕ್ಕರಿಸದೆ ಹೊಸತನ್ನು ಸ್ವೀಕರಿಸುವ ಮನೋವೃತ್ತಿ ಅಂದಿನ ದಿನಗಳಿಗೆ ಸಹಜವಾದುದಾಗಿತ್ತು. ಈ ಸಂದರ್ಭದಲ್ಲಿ ಸರಿಯಾದ ನಾಯಕತ್ವ ದೊರಕಿದ್ದು ನಮ್ಮ ಸಾಹಿತ್ಯದ ಪುಣ್ಯ ವಿಶೇಷಗಳಲ್ಲಿ ಒಂದು.

ಪ್ರಜಾಪ್ರಭುತ್ವದ ರೇಸು



ಪ್ರಜಾಪ್ರಭುತ್ವದ ನಾಮದಲ್ಲಿ "ರೇಸು" ಭರ್ರ ನಡೆದಿರುವವರ ಕುದುರೆ ಕಾಗೆ ಬ್ಬ "ಜಾತಿ" ನಾ-ನೀ ಎಂದು ಏಗ್ಗ ಮುಂದಾಳು ಜನ ಜಂಗುಳಿಯ ಕಣ್ಗೆ ತುಂಬ ಧೂಳು.

– ಶ್ರೀ ದೇವದತ್ತ

ಆಧುನಿಕತೆಯ ಜಯಘೋಷ

ವ್ಯಾಪಕವೂ ಸಮರ್ಥವೂ ಆದ ಹಿನ್ನೆಲೆಯನ್ನಿಟ್ಟುಕೊಂಡು ಆಧುನಿಕತೆಯ ಜಯಘೋಷ ಮಾಡಿದ್ದು ಬಿ ಎಂ ಶ್ರೀಕಂಠಯ್ಯನವರ "ಇಂಗ್ಲೀಷ್ ಗೀತಗಳು" (೧೯೨೧) ಸಂಕಲನ. ಪ್ರಧಾನವಾಗಿ ಅನುವಾದಗಳ ಸಂಗ್ರಹವಾಗಿರುವ ಇದು ಹೊಸ ಛಂದಸ್ಸಿನ ಲಯಗಳನ್ನು ಯಶಸ್ವಿಯಾಗಿ ತೋರಿಸಿಕೊಟ್ಟಿತು. ಅನುವಾದಗೊಂಡಿರುವ ಕವನಗಳೆಲ್ಲ ಸಾಮಾನ್ಯವಾಗಿ ಇಂಗ್ಲಿಷ್ ಸಾಹಿತ್ಯದಲ್ಲಿ ರೋಮ್ಯಾಂಟಿಕ್ ಕವಿಗಳೆಂದು ಪ್ರಖ್ಯಾತರಾದ ಷೆಲ್ಲಿ, ವರ್ಡ್ಸ್‌ವರ್ತ್, ಬ್ರೌನಿಂಗ್ ಮೊದಲಾದವರವು. ಅಂದಿನ ಇಂಗ್ಲಿಷ್ ಪಾಂಡಿತ್ಯ ಪರಿಚಯಗಳು ನಮ್ಮ ದೇಶದಲ್ಲಿ ಈ ಕವಿ ಕೃತಿಗಳಿಗೆ ಸೀಮಿತವಾಗಿದ್ದುದರಿಂದ ಹಾಗಾಗುವುದು ಅನಿವಾರ್ಯವಾಗಿತ್ತು.

ಇಂದು ನಾವು ಭಾವಗೀತೆ ಎಂದು ಕರೆಯುವ ಸಾಹಿತ್ಯ ಪ್ರಕಾರಕ್ಕೆ ಶ್ರೀಕಂಠಯ್ಯನವರ ಕೃತಿ ಪ್ರಧಾನವಾದ ಪ್ರೇರಣೆಯನ್ನೊದಗಿತು. ಅವರ ಶಿಷ್ಯರೂ ಮಿತ್ರರೂ ಬಹುಸಂಖ್ಯೆಯಲ್ಲಿ ಅವರ ಮಾರ್ಗವನ್ನನುಸರಿಸಿದರು. ಈ ಕವಿಗಡಣಕ್ಕೆ ಚಿರಪರಿಚಿತರಾದವರೂ ಷೆಲ್ಲಿ, ವರ್ಡ್ಸ್‌ವರ್ತ್ ಗುಂಪಿನವರೇ. ಇದರಿಂದ ನಮ್ಮ ಹೊಸ ಕಾಲದ ಕವಿಗಳಿಗೆ ಸತತವಾದ ಪೋಷಣೆ ದೊರೆಯಿತು. ಉತ್ತರ ಕರ್ನಾಟಕ ಭಾಗದಲ್ಲುಂಟಾದ 'ಜಾನಪದ ದರ್ಶನ'ದ ಫಲವಾಗಿ ಈ ಪೋಷಣೆಗೆ ಒಂದು ಹೊಸ ಶಕ್ತಿ ಕೂಡಿಕೊಂಡಿತು. ಒಂದು ರೀತಿಯಿಂದ ಇದು ಐರ್ಲೆಂಡಿನಲ್ಲಿ ನಡೆದ ಕೆಲಸಕ್ಕೆ ಮರುದನಿ ಎನ್ನಬಹುದೇನೋ.

ನಮ್ಮ ನವೋದಯ ಕವಿಗಳಿಗೆ ಮೂಲತಃ ರೊಮ್ಯಾಂಟಿಕ್ ಪಂಥದ ಪ್ರೇರಣೆಯಿದ್ದರೂ, ಅವರ ಕ್ಷೇತ್ರ ವಿಶಾಲತರವಾಗಿದ್ದು, ಜವಾಬ್ದಾರಿ ಬೇರೆ ಬಗೆಯದಾಗಿತ್ತು. ಭಾರತದ ಸ್ವಾತಂತ್ರ್ಯ ದಾಹ, ಗಾಂಧೀಜಿಯವರ ಮಾಂತ್ರಿಕ ವ್ಯಕ್ತಿತ್ವದ ಗಾಢ ಪ್ರಭಾವ, ಕನ್ನಡ ನಾಡು ಒಂದಾಗಬೇಕೆಂಬ ಕಾತರ, ಹೊಸ ಸಮಾಜದ ನಿರ್ಮಾಣ ಹಂಬಲ ಇವು ನಮ್ಮ ಕವಿಗಳ ಸೃಷ್ಟಿಗೆ ಒಂದು ಹೊಸ ತಿರುವನ್ನು ಜೋಡಿಸಿದ್ದವು; ದೃಷ್ಟಿಗೆ ಒಂದು ಹೊಸ ನೋಟವನ್ನು ಕಲ್ಪಿಸಿದ್ದವು. ಈ ಕವಿಗಳನ್ನು ಬಯ್ಯುವುದಕ್ಕಾಗಿ ಇಂದಿನ ಪರಿಭಾಷೆಯಲ್ಲಿ ರೊಮ್ಯಾಂಟಿಕ್ ಕವಿಗಳೆಂದು ಕರೆಯಲಾಗುತ್ತಿದ್ದರೂ, ಅವರು ನಿಜವಾಗಿ ನವೋದಯ ಕವಿಗಳು, ಆಧುನಿಕತೆಯನ್ನು ಬಿತ್ತಿದ ಕೃಷಿಕರು. ಅವರು ನಡೆಯದಿದ್ದರೆ ಇಂದಿನ ಮಾರ್ಗವಿರುತ್ತಿರಲಿಲ್ಲ; ಅವರು ಪುಟ ತೆರೆಯದಿದ್ದಿದ್ದರೆ ಇಂದಿನ ಹೊಸ ಅಧ್ಯಾಯವನ್ನು ಬರೆಯಲಾಗುತ್ತಿರಲಿಲ್ಲ.

ಕಾವ್ಯದ ಜೊತೆಗೆ ಗದ್ಯದ ವಿವಿಧ ಬರವಣಿಗೆಯೂ ಸಮೃದ್ಧವಾಯಿತು. ಸಣ್ಣ ಕಥೆ, ಕಾದಂಬರಿಗಳ ವಿಪುಲ ಸೃಷ್ಟಿಯಾಯಿತು. ನಾಟಕದಲ್ಲಿ ತೀರ ಕುತೂಹಲಕಾರಿಯಾದ ಪ್ರಯೋಗಗಳು ನಡೆದವು ಅದುಮಾತು ತನ್ನ ನಿಜವಾದ ವಿಕೃತ ಸ್ಥಿತಿಯಲ್ಲಿ ರಂಗದ ಮೇಲೆ ಬಂತು. ನನ್ನ ಮನೆಯ ರಹಸ್ಯ ಬೀದಿಗೆ ಬಂತು ಎನ್ನುವ ಬೋಳು ವಾಸ್ತವಿಕತೆ ತಲೆದೋರಿತು. ಕಥೆ ಕಾದಂಬರಿಗಳಲ್ಲಿ ಪ್ರಾದೇಶಿಕ ಜೀವನದ ಸೊಗಡು ಕಾಣಿಸಿಕೊಳ್ಳಲು ಆರಂಭವಾಯಿತು.

ಪರಂಪರೆ- ಹೊಸ ಪಂಗಡ ಸಮನ್ವಯ

ಈ ಎಲ್ಲ ಪ್ರಯೋಗ-ಪ್ರಯತ್ನಗಳಲ್ಲಿಯೂ ಗಮನಾರ್ಹವಾದ ಮಾತೆಂದರೆ ಆಧುನಿಕ ದರ್ಶನ ತನಗೆ ಅನುಗುಣವಾದ ಅಭಿವ್ಯಕ್ತಿಯನ್ನು ಗಳಿಸಿಕೊಂಡದ್ದು ಒಂದು; ಪರಂಪರೆಯ ಕಡೆ ಬೆನ್ನು ತಿರುಗಿಸದ ಅದನ್ನು ಹೊಸತರೊಂದಿಗೆ ಸಮನ್ವಯಿಸಿದ್ದು ಇನ್ನೊಂದು. ಇದು ನಮ್ಮ ನವೋದಯ ಲೇಖಕರ ದೊಡ್ಡ ಸಾಧನೆ

ನಿಜವಾದ ಅರ್ಥದಲ್ಲಿ ನಮ್ಮ ಸಾಹಿತ್ಯದ ಆಧುನಿಕತೆಯ ಕಥೆಯೆಲ್ಲ ಕಳೆದ ಐವತ್ತು ವರ್ಷಗಳದ್ದು. ಶ್ರೀಕಂಠಯ್ಯನವರ "ಇಂಗ್ಲಿಷ್ ಗೀತಗಳು" ಪ್ರಕಟಣೆಯ ಮುಂದಿನ ದಶಕಗಳದ್ದು. ಈ ಹರವಿನಲ್ಲಿ ಮೊದಲ ಎರಡು ದಶಕಗಳು ಸಂಪೂರ್ಣವಾಗಿ ನವೋದಯ ಲೇಖಕರ ಕಾಲ. ಅವರ ಸಾಧನೆ ಸಿದ್ಧಿಗಳು ಅನನ್ಯಾದೃಶವಾಗಿ ಗರಿಗಟ್ಟಿದ ಅವಧಿ. ಇದನ್ನು ನಮ್ಮ ಸಾಹಿತ್ಯದ ಆಧುನಿಕತೆಯ ಮೊದಲ ಮಜಲೆಂದೂ ವರ್ಣಿಸಬಹುದು.

× × ×

ಮುಂದಿನ ದಶಕ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಕಾಲ; ಇದನ್ನು ನಮ್ಮ ಆಧುನಿಕತೆಯ ಎರಡನೆಯ ಮಜಲೆಂದು ಇಟ್ಟುಕೊಳ್ಳಬಹುದು. ಇದರ ಚಟುವಟಿಕೆಗಳೆಲ್ಲ ಮುಖ್ಯವಾಗಿ ಗದ್ಯಕ್ಕೆ ಅದರಲ್ಲೂ ಕಥೆ ಕಾದಂಬರಿ ಮತ್ತು ವಿಮರ್ಶೆಗಳಿಗೆ ಸಂಬಂಧಿಸಿದವು ಕಾವ್ಯ ಕ್ಷೇತ್ರದಲ್ಲಿ ನವೋದಯ ಕವಿಗಳದು ಇನ್ನೂ ಬಲವಾದ ದನಿಯಾಗಿಯೇ ಇತ್ತು. ಆದರೂ ಗದ್ಯ ಹೆಚ್ಚಿನ ಜನಪ್ರಿಯತೆಯನ್ನು ಗಳಿಸಲಾರಂಭಿಸಿತು. "ಹೂಬಳ್ಳಿಗಳ ವರ್ಣನೆ, ಅಪಕ್ವ ಶೃಂಗಾರ ವಿಲಾಸ, ಕನ್ನಡದ ಬಗ್ಗೆ ಕೊರಗು" ಇವು ಹಿಂದಿನ ದಶಕಗಳ ಕಾವ್ಯದಲ್ಲಿ ಅತಿಯಾದದ್ದೇ ಇದಕ್ಕೆ ಕಾರಣವೆಂದು ಪ್ರಗತಿಶೀಲರು ಸಾರಿದರು. ಬದುಕಿಗೆ ಒಂದು ಉಚ್ಚ ಆದರ್ಶವನ್ನೂ, ಹಿರಿಯ ಗುರಿಯನ್ನೂ ಇಟ್ಟು ಜನತೆಯನ್ನು ಅತ್ತ ಒಯ್ಯಲು ಬೇಕಾದ ಮನೋಭಾವ ಧೀಶಕ್ತಿಗಳು ಇಲ್ಲವೆಂದು ಅವರು ದೂರಿದರು. "ಸಾವಿರಾರು ವರ್ಷಗಳಿಂದ ಬೆಳೆದು ಬಂದಿದ್ದ ವೃಕ್ಷ ಈಗ ನಶಿಸುವ" ಅಪಾಯವನ್ನು ಅವರು ಕಂಡುಕೊಂಡರು. ಕನ್ನಡ ಸಾಹಿತ್ಯಕ್ಕೆ ಹೊಸ ಮುಖವನ್ನು ಜೋಡಿಸಲು ಮುಂದಾದರು

ಈ ನೆವದಲ್ಲಿ ಕಾರ್ಲ್ ಮಾರ್ಕ್ಸ್ ಹಾಗೂ ಸಿಗ್ಮಂಡ್ ಫ್ರಾಯ್ಡ್ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದರು. ಇವರಿಬ್ಬರೂ ಈ ಶತಮಾನದ ವಿಚಾರಧಾರೆಯ ಸ್ವರೂಪವನ್ನೇ ಬದಲಾಯಿಸಿದ ಮಹಾನುಭಾವರೆಂಬುದರಲ್ಲಿ ಸಂದೇಹವಿಲ್ಲ ಆದರೆ ಅವರನ್ನು ಸಾಹಿತ್ಯದಲ್ಲಿ ತಂದ ವಿಧಾನ ಕಲೆಗಾರಿಕೆಯಿಂದ ದೂರಾದದ್ದು; ಒರಟಾದದ್ದು ವರ್ಗಕಲಹವನ್ನು ಪೋಷಿಸುವುದಕ್ಕೂ, ಅಸಹ್ಯ ವಾಸ್ತವಿಕತೆಯನ್ನು ಮೆರೆಯುವುದಕ್ಕೂ ಅವರನ್ನು [illegible]ವಾಗಿ ಬಳಸಿಕೊಳ್ಳಲಾಯಿತು

ಘೋಷಣಾ ಸಾಹಿತ್ಯ

"ಹಸಿದವನಿಗೆ ದೇವರಿಲ್ಲ" ಎಂಬ ಘೋಷಣೆಯನ್ನು ಎತ್ತಿ ಹಿಡಿದು. ಇರುವವರ ಹಾಗೂ ಇಲ್ಲದವರ ಎರಡು ಬಣಗಳನ್ನು ವಿಶೇಷವಾಗಿ ನಿರ್ಮಿಸಲಾಯಿತು. ಇರುವವರನ್ನು ಪರಮಾವಧಿಯ ಕೆಟ್ಟವರನ್ನಾಗಿಯೂ, ಇಲ್ಲದವರನ್ನು ಸದ್ಗುಣಗಳ ಗಣಿಗಳನ್ನಾಗಿಯೂ ಚಿತ್ರಿಸಲಾಯಿತು. ಇರುವವರು ಇಲ್ಲದವರನ್ನು ಯಾವಾಗಲೂ ಶೋಷಿಸುತ್ತಿರುವ ದುರಂತ ಕಥೆಗೆ ಬಣ್ಣ ಹಾಕಲಾಯಿತು. ಶೋಷಣೆಗೆ ಒಳಗಾದ ಸಾಮಾನ್ಯ ಜನತೆಗೆ ತಮ್ಮ ಸಾಹಿತ್ಯ ಆತ್ಮಬಲವನ್ನೂ, ಧೈರ್ಯ ಕೆಚ್ಚುಗಳನ್ನೂ ನೀಡುವುದೆಂದು ಪ್ರಗತಿಶೀಲರು ನಂಬಿದರು.



"ನನಗೆ ಎರಡನೇ ಭಾವನೇ ಪ್ರೀತಿ... ಯಾವಾಗ್ಲೂ ಆನೆ ಪತಾಕೀನೇ ಕೊಡಿಸ್ತಾರೆ!"

ಹೆಣ್ಣು-ಗಂಡಿನ ಸಂಬಂಧವನ್ನು ಬೇಕಾದ ಹಾಗೆ ಬರೆಯಲು ಫ್ರಾಯ್ಡನ ಹೆಸರಿನಲ್ಲಿ ಪರವಾನಿಗೆಯನ್ನು ಪಡೆಯಲು ಅವರು ಮುಂದಾದರು. ಫ್ರಾಯ್ಡನ ಮಾನಸಿಕ ಅವಸ್ಥೆಗಳನ್ನು ಪ್ರಗತಿಶೀಲರು ದೈಹಿಕ ವಿವರಗಳಲ್ಲಿ ಮುಗಿಸಿದರು. ಧ್ವನಿಪೂರ್ಣ ಶೃಂಗಾರ ಚಿತ್ರಣ ಆರಾಮ ಕುರ್ಚಿಯ ಸಾಹಿತ್ಯವೆಂದು ಪರಿಗಣಿಸಲ್ಪಟ್ಟು, ಕಾಮ ಪ್ರಚೋದನೆಯ ಬಗೆಗೆ ದೊಡ್ಡ ಗಂಟಲಿನಿಂದ ವಾದ ನಡೆಯಿತು.

ನಿಜವಾದ ಸಮಸ್ಯೆಗಳ ಆಳಕ್ಕೆ ಇಳಿಯದೆ, ಸಾಹಿತ್ಯಸೃಷ್ಟಿಯನ್ನು ಒಂದು ಚಳುವಳಿಗೆ ಸಾಧನವನ್ನಾಗಿ ಬಳಸಿಕೊಂಡಿದ್ದು ಪ್ರಗತಿಶೀಲರ ದೊಡ್ಡ ಸೋಲು. ರಾಜಕೀಯದಲ್ಲಿ ಸಾಮಾನ್ಯವಾಗಿ ಎಡ ಒಲವಿನವರಾದ ಇವರ ಚಟುವಟಿಕೆಗಳೆಲ್ಲ ಬಹು ಬೇಗನೆ ಸ್ತಬ್ಧವಾಗಿ ಹೋದದ್ದು, ಇವರಲ್ಲಿ ಯಾರೊಬ್ಬರೂ ಅರ್ಥಪೂರ್ಣವಾದ ಕೃತಿಗಳನ್ನು ರಚಿಸದೆ ಹೋದದ್ದೂ, ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಒಂದು ವಿಪರ್ಯಾಸದ ಅಧ್ಯಾಯ.

ದೇಶಕ್ಕೆ ಸ್ವಾತಂತ್ರ್ಯ ಗಳಿಸಲು ನಡೆದ ಚಳುವಳಿಯ ಉತ್ಕಟತೆಯಾಗಲಿ, ಸ್ವಾತಂತ್ರ್ಯ ಇನ್ನೇನು ಬಂತು ಎಂಬ ಉದ್ವೇಗವಾಗಲಿ, ಸ್ವಾತಂತ್ರ್ಯವನ್ನು ಗಳಿಸಿದ ಹರ್ಷದ ಸ್ಥಿತಿಯಾಗಲಿ, ಸ್ವಾತಂತ್ರ್ಯದೊಡನೆ ಕೂಡಿಕೊಂಡು ಬಂದ ವಿಪತ್ತಿನ ಪರಂಪರೆಗಳಾಗಲಿ ಈ ಕಾಲದ ಸಾಹಿತ್ಯದ ಮೇಲೆ ಯಾವ ಪ್ರಮಾಣದ ಪ್ರಭಾವ ಬೀರಬೇಕಾಗಿತ್ತೊ ಬೀರಲಿಲ್ಲ. ಪ್ರಗತಿಶೀಲರೇನೂ ಅತ್ತ ಗಮನ ಹರಿಸಲಿಲ್ಲ. ಘೋಷಣೆಗಳಿಂದ ಸಾಹಿತ್ಯ ನಿರ್ಮಿತಿ ಸಾಧ್ಯವಿಲ್ಲವೆಂಬುದಕ್ಕೆ, ಮುಂದಿನ ದಶಕದಲ್ಲಿಯೇ ಹೇಳಹೆಸರಿಲ್ಲದೆ ಹೋದ ಈ ಚಳವಳಿ ಒಂದು ಉದಾಹರಣೆ.

× × ×

ನಮ್ಮ ಆಧುನಿಕತೆಯ ಮೂರನೆಯ ಮಜಲಾದ ನವ್ಯ ಸಾಹಿತ್ಯ ಈ ಹದಿನೈದು ವರ್ಷಗಳ ಬೆಳವಣಿಗೆ. ಅದರ ಉಗಮ ಕಾವ್ಯದಲ್ಲಿ. ನವ್ಯಕಾವ್ಯವೆಂದು ಅದು ಕುಡಿಯೊಡೆಯಿತು. ಇದು ಸಂಪೂರ್ಣವಾಗಿ ಎಲಿಯಟ್, ಎಜ್ರಾಪೌಂಡರ ಪ್ರಸಾದ. ಪ್ರಭಾವ. ಭಾರತದ ಅನೇಕ ಸಾಹಿತ್ಯಗಳಲ್ಲಿ ಇದು ಹೀಗೇ ಇದೆ. ಈ ಪ್ರವೃತ್ತಿ ನಮ್ಮಲ್ಲಿಗಿಂತ ಮೊದಲೇ ಬಂಗಾಳಿಗೆ ಬಂದಿತ್ತು. ಅದನ್ನು ತಂದವರು ತುಂಬ ಪ್ರಸಿದ್ಧರಾದ ಜೀಬನನಂದ ದಾಸ್. ಅವರ ಬಗ್ಗೆ ಬರೆಯುತ್ತಾ ಡಾ. ಸುಕುಮಾರ ಸೆನ್ ಹೇಳುತ್ತಾರೆ : "ನವ್ಯಕಾವ್ಯಕ್ಕೆ ದಾಸ್ ಇದ್ದಕ್ಕಿದ್ದ ಹಾಗೆ ಬದಲಾದುದರ ಕಾರಣ ತಿಳಿಯದು. ಆದರೆ ಇಂಗ್ಲಿಷ್ ಲೋಕದಲ್ಲಿ ಆಗಷ್ಟೆ ಪ್ರಚುರಕ್ಕೆ ಬಂದಿದ್ದ ಎಲಿಯೆಟ್, ಎಜ್ರಾಪೌಂಡರ ಕಾವ್ಯವೇ ಪ್ರಚೋದನೆಯೆಂದು ಧಾರಾಳವಾಗಿ ಊಹಿಸಬಹುದು." "ಎಲಿಯೆಟ್, ಎಜ್ರಾಪೌಂಡರನ್ನು ಅನುಕರಿಸಿ ಒರಿಯಾದ ಆಧುನಿಕ ಕಾವ್ಯ ಜನಿಸಿತೆಂದು" ಸುರೇಂದ್ರ ಮೋಹಂತೆ ಅಭಿಪ್ರಾಯಪಡುತ್ತಾರೆ. "ಆಧುನಿಕ ಅಸ್ಸಾಮಿ ಕಾವ್ಯದಲ್ಲಿ ಎಲಿಯೆಟ್ಟನ ಭ್ರಮಾನಿರಸನ ಲಕ್ಷಣವೂ ನುಸುಳಿಕೊಂಡಿದೆ" ಎಂದು ದಿವಂಗತ ಬಿರಿಂಚಿಕುಮಾರ ಬರುವಾ ಬರೆದಿದ್ದಾರೆ. ಕನ್ನಡದಲ್ಲಿಯೂ ನವ್ಯಕಾವ್ಯ ಪ್ರವರ್ತಕರ ಕೃತಿಗಳಲ್ಲಿ ಎಲಿಯೆಟ್, ಎಜ್ರಾ-ಪೌಂಡ್ ಪ್ರಭೃತಿಗಳನ್ನು ಸೋಸಿ ತೆಗೆಯುವುದು ಕಷ್ಟವಲ್ಲ.

ನವ್ಯಕಾವ್ಯ ಒಂದು ಚಿತ್ರಶಾಲೆ

ಈ ನವ್ಯಕಾವ್ಯ ಒಂದು ಚಿತ್ರಶಾಲೆ, ಅದರ ತುಂಬ ಬಗೆ ಬಗೆಯ ಸಂಕೇತಗಳು, ಪ್ರತಿಮೆಗಳು. ಕವಿ ತನ್ನ ಅನುಭವಗಳಿಗೆ ಮಾತ್ರ ಇವುಗಳ ಮೂಲಕ ರೂಪಕೊಡುತ್ತಾನೆ. ಹಾಗೆ ಮಾಡುವಲ್ಲಿ ಅವನು ನಾನಾ ಚಮತ್ಕಾರಗಳನ್ನೆಸಗುತ್ತಾನೆ. ಯಾವ ಕಾಲ. ಯಾವ ದೇಶ, ಯಾವ ವಿಷಯವಾದರೂ ಅವನ ಬಳಕೆಗೆ ಬರುತ್ತದೆ ಗಣಿತಶಾಸ್ತ್ರದ ಚಿಹ್ನೆಗಳು. ಪದ್ಯದ ಸಾಲುಗಳಾಗುತ್ತವೆ. ಕಮಾನು ಎಂಬ ಪದ ಬಂದರೆ, ಮಧ್ಯದ ಅಕ್ಷರ 'ಮಾ' ಉಳಿದೆರಡು ಅಕ್ಷರಗಳಿಗಿಂತ ಮೇಲೆ ಹೋಗಿ ಕಮಾನಿನಾಕಾರದಲ್ಲಿಯೆ ಅಚ್ಚಾಗುತ್ತದೆ. ಇದನ್ನೆಲ್ಲ ಮಾಡುವಾಗ

ಕವಿಯ ಆದ್ಯ ಗಮನ ಅಭಿವ್ಯಕ್ತಿಯತ್ತ; ಸಂವಹನೆಯನ್ನು ಗಮನಿಸುವುದೇ ಇಲ್ಲ. ಒಟ್ಟಿನಲ್ಲಿ ಇದು ಎಲ್ಲರಿಗೂ ಅರ್ಥವಾಗದ. ಅನೇಕ ಸಂದರ್ಭಗಳಲ್ಲಿ ಬರೆದವರಿಗೆ ಮಾತ್ರ (?) ಅರ್ಥವಾಗಬಹುದಾದ ಕಾವ್ಯ. "ಇಂಗ್ಲೆಂಡಿನಲ್ಲಿ ಈಗ ಬರುತ್ತಿರುವ ಕಾವ್ಯ ಸರಳವಾಗುತ್ತದೆ. ನಮ್ಮ ಹಾಗೆ ಅವರು ಸಂಕೀರ್ಣತೆಯನ್ನು ತೋರುತ್ತಿಲ್ಲ" ಎಂದು ನಮ್ಮ ನವ್ಯಕವಿಯೊಬ್ಬರು ಈಚೆಗೆ ಹೇಳಿದರು! ಈ ಕಾವ್ಯ ಬಹು ಬೇಲಿಗಳಲ್ಲಿ ಬಂಧಿತವಾಗಿರುವ ಕಾವ್ಯ.

ಸಮರ್ಥರು ಈ ಕಾವ್ಯ ವಿಧಾನವನ್ನೂ ಯಶಸ್ವಿಯಾಗಿಸಬಲ್ಲರೆಂಬುದಕ್ಕೆ, ಇದು ಈಗ ನಮ್ಮ ಸಾಹಿತ್ಯದಲ್ಲಿ ದೃಢಗೊಳ್ಳುತ್ತಿರುವುದೇ ಸಾಕ್ಷಿ. ಕೆಲವು ರಚನೆಗಳು ಯಾವುದೇ ಸಾಹಿತ್ಯಕ್ಕಾದರೂ ಗೌರವ ತರುವಂಥವಾಗಿವೆ. ಆದರೆ ಇದು ಕೇವಲ ಫ್ಯಾಷನ್ ಆದಾಗ ಎಷ್ಟು ನಿರರ್ಥಕವಾಗುತ್ತದೆಂಬುದಕ್ಕೆ ನಮ್ಮಲ್ಲಿ ಬೇಕಾದಷ್ಟು ಉದಾಹರಣೆಗಳಿವೆ. 'ಇದೂ ಒಂದು ಕವನ' ಎಂದು ಕವನಕ್ಕೆ ಹೆಸರಿಡಲಾಗುತ್ತದೆ. "ಹೇಳದಿದ್ದರೆ ತಿಳಿಯಲಾರದೆಂಬ ಆಧುನಿಕ ಶಂಕೆಯಿಂದ ಹೇಳಿಬಿಟ್ಟಿದ್ದೇನೆ, ಕ್ಷಮಿಸಿ" ಎಂದು ಅದಕ್ಕೆ ಟಿಪ್ಪಣಿ ಜೋಡಿಸಲಾಗುತ್ತದೆ! ಅನೇಕ ಸಂದರ್ಭಗಳಲ್ಲಿ ಕಾವ್ಯ ಕೆಟ್ಟ ಗದ್ಯಕ್ಕೂ ಕಡೆಯಾಗುತ್ತದೆ.

ನವ್ಯಕಾವ್ಯವನ್ನನುಸರಿಸಿ ನವ್ಯ ಕಥೆ ನವ್ಯ ಕಾದಂಬರಿ ನವ್ಯ ನಾಟಕಗಳೂ ಬರುತ್ತಿವೆ. ಇವೂ ಹಳೆಯದೆನ್ನಿಸಿಕೊಂಡವಕ್ಕೆ ಪ್ರತಿಯಾಗಿ ನಿಲ್ಲುತ್ತವೆ. ಸಾಮಾಜಿಕ ಮುಖವನ್ನು ತ್ಯಜಿಸಿ, ವೈಯಕ್ತಿಕತೆಯತ್ತ ಧಾವಿಸುವುದು; ಬದುಕಿನ ನಿರರ್ಥಕತೆಯನ್ನು ಭೂತಗನ್ನಡಿಯಲ್ಲಿ ತೋರಿಸುವುದು; ಅಸ್ತವ್ಯಸ್ತತೆಯಲ್ಲಿ ಕ್ರಮಬದ್ಧತೆಯನ್ನು ಹುದುಗಿಸಿರಿಸುವುದು; ಬಾಹ್ಯ ಘಟನೆಗಳಿಗಿಂತ ಅಂತರಂಗದ ತುಮುಲಗಳಿಗೇ ಪ್ರಾಶಸ್ತ್ಯ ನೀಯುವುದು; ಬದುಕಿಗೊಂದು ಅರ್ಥವನ್ನು ಶೋಧಿಸುವುದು; ಮೌಲ್ಯಗಳನ್ನು ವಿವೇಚಿಸುವುದು; ಪ್ರಯೋಗಗಳನ್ನು ನಡೆಸುವುದು; ಭಾಷೆಯ ಸಾಧ್ಯತೆಗಳನ್ನೆಲ್ಲ ಅರಸುವುದು; ಸಾಂಕೇತಿಕತೆಯಲ್ಲಿ ಧ್ವನಿಯ ಪರಮಾವಧಿಯನ್ನು ತುಂಬುವುದು; ಹೊಸ ಸಂವೇದನೆಗಳನ್ನು ಸ್ಪಂದಿಸುವುದು ವಿಸಂಗತವನ್ನು ಕಲೆಯನ್ನಾಗಿ ಮಾರ್ಪಡಿಸುವುದು-ಇವೇ ಮುಂತಾದ ಅಂಶಗಳನ್ನು ನವ್ಯಸಾಹಿತ್ಯದ ಲಕ್ಷಣಗಳನ್ನಾಗಿ ಹೇಳಲಾಗುತ್ತದೆ.

ನವ್ಯ ವಿಮರ್ಶೆ

ಕಾವ್ಯವನ್ನು ಬಿಟ್ಟರೆ ಕಥೆಯ ಬೆಳವಣಿಗೆಯೂ ತಕ್ಕಷ್ಟಿದೆ. ಆದರೆ ಕಾದಂಬರಿ ನಾಟಕಗಳಲ್ಲಿ ಇನ್ನೂ ನವ್ಯ ಪ್ರಕಾರವೊಂದರ ಪ್ರತ್ಯೇಕ ಸೃಷ್ಟಿಯಾಗಿಲ್ಲವೆಂದು ಹೇಳಬಹುದು. ನವ್ಯ ವಿಮರ್ಶೆ ಎಂಬ ಪ್ರಕಾರವನ್ನು ಇದು ವರೆಗೂ ಯಾರೂ ನಮ್ಮಲ್ಲಿ ಬಳಸಿದಂತಿಲ್ಲ- ಆದರೆ ನವ್ಯರೆನ್ನಿಸಿಕೊಂಡ ಕೆಲವರ ವಿಮರ್ಶೆಯ ಲೇಖನಗಳಿವೆ. ಅವು ಅವರ ಪದ್ಯಗಳಿಗಿಂತಲೂ ಕ್ಲಿಷ್ಟ; ಆಭಾಸ. ಪದ್ಯವನ್ನು ಅರ್ಥಮಾಡಿಕೊಳ್ಳಲು ನಾನಾ ಸ್ತರಗಳಾದರೂ ಇವೆ; ವಿಮರ್ಶೆಯನ್ನು ಓದಲು ಆ ಅವಕಾಶ ಇಲ್ಲದಿರುವುದು ಎಂಥ ದುರ್ದೈವದ ಮಾತು! ಈಚೆಗೆ ಪ್ರಕಟವಾದ ನಾಟಕ ಸಾಹಿತ್ಯವನ್ನು ಕುರಿತ ಒಂದು ವಿಮರ್ಶೆಯ ಗ್ರಂಥ ಈ ರೀತಿಯ ಶಬ್ದಾರಣ್ಯ ಮಹಾಜಾಲಕ್ಕೆ ಒಂದು ಉಜ್ವಲ ಉದಾಹರಣೆ.

× × ×

ಸಮಕಾಲೀನ ಸಾಹಿತ್ಯ ಪ್ರವೃತ್ತಿಗಳನ್ನು ಗಮನಿಸಿದಾಗ ಕೇವೊಂದು ಅಂಶಗಳು ಗಮನಕ್ಕೆ ಬರದೆ ಹೋಗುವುದಿಲ್ಲ ಇಂದಿನ ಸಾಹಿತ್ಯದಲ್ಲಿ ಒಂದು ಹೊಸ ಜಾತಿಯು ನಿರ್ಮಾಣವಾಗಿದೆ. ಯುರೋಪಿನ ಸಾಹಿತ್ಯದಲ್ಲಿ Avant-Garde ಎಂದು ಗುರುತಾದ ಈ ಜಾತಿ, ಆಧುನಿಕತೆಯ ಬಗ್ಗೆ ಪೀರ ನಿಷ್ಠೆಯನ್ನು ಹೊಂದಿದೆ. ಇದಕ್ಕೆ ಸಾಮಾನ್ಯ ಓದುಗನಲ್ಲಿ ತಿರಸ್ಕಾರ; ತನಗೇ ವಿಶೇಷ ಓದುಗರು ಬೇಕೆಂದು ಹಠ; ಹಳಬರೆನ್ನಿಸಿಕೊಂಡವರನ್ನು ದೂಷಿಸುವುದರಲ್ಲಿ ಸಂತೋಷ; ಸಂಪ್ರದಾಯದಲ್ಲಿ ಅಪನಂಬುಗೆ ಇದು ತನ್ನದು ಎನ್ನುವುದನ್ನು ಒಂದು ವ್ರತವಾಗಿ ಪಾಲಿಸುತ್ತದೆ.

ಈ ಮನೋಭಾವ ಎಷ್ಟೊಂದು ಅಪಾಯಕಾರಿ ಎಂದರೆ ನವ್ಯಾರಾಧನೆಯಲ್ಲಿ ನಿಜವಾದ ಸಾಹಿತ್ಯಕ್ಕೂ ಕುರುಡರಾಗಿ ಹೋಗಬಹುದು. ಈಚೆಗೆ ಪ್ರಸಿದ್ಧ ನವ್ಯರೊಬ್ಬರ ನಾಟಕವೊಂದನ್ನು ರಂಗದ ಮೇಲೆ ತರಲಾಯಿತು. ನಾಟಕ ತುಂಬ ಚೆನ್ನಾಗಿದೆಯೆಂದು ಬಹು ಕಡೆಯಿಂದ ಮೆಚ್ಚುಗೆ ಬಂತು. ಆದರೆ ಕಟ್ಟಾ ನವ್ಯ ವಿಮರ್ಶಕರೊಬ್ಬರು ಅದನ್ನು ಕುರಿತು ಬರೆಯುತ್ತಾ ಒಂದು ಕಡೆ ಪ್ರಶಂಸಿಸಿ ಇನ್ನೊಂದು ಕಡೆ "ಇದು ನವ್ಯವಾಗಿಲ್ಲವಲ್ಲಾ" ಎಂದಿದ್ದರು. ಈ ಮನೋಭಾವಕ್ಕೂ "ಅಯ್ಯೋ, ಈ ಮನುಷ್ಯ ತುಂಬ ಒಳ್ಳೆಯವನು ಆದರೆ ನಮ್ಮ ಜಾತಿಯವನಲ್ಲವಲ್ಲಾ" ಎಂಬ ಮನೋಭಾವಕ್ಕೂ ವ್ಯತ್ಯಾಸವಿಲ್ಲ!

ಸಾಹಿತ್ಯದ ಪ್ರವೃತ್ತಿಗಳು ಹೇಗೆ ಬರಲಿ, ಹೋಗಲಿ ಶಾಶ್ವತವಾಗಿ ನಿಲ್ಲುವುದು ಸಾಹಿತ್ಯ ಒಂದೆ; ಅದರ ಮೌಲ್ಯಗಳು ಮಾತ್ರ. ಹೀಗೆ ನಿಲ್ಲಬಲ್ಲ ಸಾಹಿತ್ಯ ಸೃಷ್ಟಿಯಾಗುತ್ತಿದ್ದರೆ, ಸಮಕಾಲೀನ ಶಂಕು ಜಾಗಟೆ ಕೊಂಬು ಕಹಳೆಗಳಿಗೆ ಯಾರೂ ತಲೆಕೆಡಿಸಿಕೊಳ್ಳಬೇಕಾದುದಿಲ್ಲ. ಏಕೆಂದರೆ ಅವು ತಾತ್ಕಾಲಿಕವಾದವು ನವ್ಯ ಎನ್ನಿಸಿದ್ದೂ ನಾಳೆ ಸಂಪ್ರದಾಯವಾಗಿ ಹೋಗುತ್ತದೆ. ಜೆ. ವಿ. ಕನ್ನಿಂಗ್ ಹ್ಯಾಂ ಎಂಬ ವಿಮರ್ಶಕನ ಈ ಮಾತುಗಳು ಎಷ್ಟು ಸತ್ಯ—

"The new is parasitic upon the old But when the new has itself become the old, it has lost its quality of newness and modernity and must shift for itself."



ಕವಿ-ಕವಯಿತ್ರಿಯರೆಂದಂತೆ ಮನೆಯೆಂದರೆ ಮಡದಿ

— ಶ್ರೀ ಪ್ರ. ಲಕ್ಷ್ಮೀನಾರಾಯಣ

ಗೃಹಿಣೀ ಗೃಹಮುಚ್ಯತೇ ಮತ್ತು ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ ಎಂದು ಮನು ಮಹರ್ಷಿ ಹೇಳಿದನು. ಗೃಹಸ್ಥಾಶ್ರಮಿಗಳಿಗೆ ಇದು ಪೂಜ್ಯವಾದುದು.

ಚಾಗದ ಭೋಗದ - ಅಕ್ಕರದ - ಗೇಯದ ಗೊಟ್ಟಿಯ-ಅಲಂಪಿನ ಇಂಪುಗಳಿಗೆ ಭಂಡಾರ ದಾಗಿರುವವರೇ ಮನುಷ್ಯರು, ಕನ್ನಡ ನಾಡಿನಲ್ಲಿ ಇಂತಹವರಿಗೆ ಕಡಿಮೆಯಿಲ್ಲವೆಂದು ಪಂಪ ಕವಿ ಹೇಳಿದ್ದಾನೆ. ಅಲ್ಲದೆ ಪುರುಷಾರ್ಥ ಚತುಷ್ಟಯ ಗಳ ಪೈಕಿ ಧರ್ಮಾರ್ಥಿಗಳಾದ ಗೃಹಸ್ಥರಿಗೆ ಕಾಮವು ರಸಸ್ವರೂಪವೆಂದು ಆತನ ಅಭಿಪ್ರಾಯ. ಇದಕ್ಕೆ ಸರಿಯಾದ ಕ್ಷೇತ್ರ ಮನೆ.

ಬೆಚ್ಚನೆಯ ಮನೆಯಾಗೆ,ವೆಚ್ಚಕ್ಕೆ ಹೊನ್ನಾಗೆ ಇಚ್ಛೆಯನು ಅರಿವ ಸತಿಯಾಗೆ-ಸ್ವರ್ಗಕ್ಕೆ ಕಿಚ್ಚು ಹಚ್ಚೆಂದವನು ಸರ್ವಜ್ಞ ಕವಿ. ಅಷ್ಟೇ ಅಲ್ಲ, ಸತಿ ಪತಿಯರ ಒಲವು ಸಂಸಾರದ ಸುಖಕ್ಕೆ ಬಹು ಮುಖ್ಯ. ಪತಿಯನ್ನು ಬಲ್ಲ ನಲ್ಲೆಯ ಒಡನಾಟ ಪುರುಷನ ಭಾಗ್ಯವೆನಿಸುತ್ತದೆ. ಪತಿಯು ಸಹ ಅವಳ ತೃಪ್ತಿಯನ್ನು ಪುರಸ್ಕರಿಸುವವನಾದಾಗಲೇ— ನಾರಿ ಸ್ವರ್ಗಕ್ಕೆ ದಾರಿ ಎಂಬ ಮಾತು ಸಾರ್ಥಕ. ಪತಿಯನ್ನು ಒಲಿದು ಒಲಿಸಿಕೊಂಡ ಅರುಂಧತಿ- ಅನುಸೂಯೆಯಂತಹ ಸಾಧ್ವಿಯರು ಪತಿಯರೊಡನೆ ನಕ್ಷತ್ರ ಮಂಡಲದಲ್ಲಿ ಸ್ಥಾನ ಪಡೆದರೆಂದೂ, ಸತಿಯನ್ನು ಒಲಿದು ಒಲಿಸಿಕೊಂಡ ಜಲಂಧರ, ಸತ್ಯವಂತರಂತಹವರು ತಮ್ಮ ಸತಿಯರಾದ ವೃಂದಾ, ಸಾವಿತ್ರಿಯರಿಂದಲೇ ಶಂಕರ-ಯಮರಲ್ಲಿ ಕೃಪಾಪಾತ್ರರಾದರೆಂದು ಹೇಳುವ ಪುರಾಣ ಕಥೆಗಳು ದಾಂಪತ್ಯದ ಒಲವನ್ನೇ ಸಾರುತ್ತವೆ.

ಕಾರ್ಯೇಷು ದಾಸೀ- ಮುಂತಾಗಿ ಆರು ಗುಣಗಳನ್ನು ಕುಲಸತಿಗೆ ಹೇಳಲಾಗಿದೆ. ಸತಿಯ ಜನ್ಮದ ಸಾರ್ಥಕ್ಯಕ್ಕೆ ಅವೇ ಮೆಟ್ಟಿಲುಗಳನ್ನು ಭಾರತೀಯ ಸಂಸ್ಕೃತಿ ಪುರಸ್ಕರಿಸುತ್ತದೆ. ಮೋಕ್ಷ ಸಾಧನೆಗೆ ಇರುವ ಸುಲಭ ಮಾರ್ಗಗಳಲ್ಲಿ ಪತಿ ಭಕ್ತಿ ಮೊದಲನೆಯದಾದರೆ ಶ್ರೀಪತಿ ಭಕ್ತಿ ಎರಡನೆಯದು; ಈ ಮಾಧವ ಭಕ್ತಿಗಾದರೂ ಹಲವು ಮತಭೇದಗಳುಂಟು. ಆದರೆ ಪತಿಭಕ್ತಿ ಇಡೀ ಮಹಿಳಾ ಕೋಟಿಗೆ ಭೇದರಹಿತವಾದ ಸಾಧನವೆಂದು ಹೊನ್ನಮ್ಮನ ಅಭಿಮತ. ಮನೆಯೇ ಧರ್ಮಾಶ್ರಮ, ಮನೆಯ ವಾರ್ತೆಯೇ ಧರ್ಮ, ಇನಿಯನ ಊಳಿಗವೇ ದೇವಪೂಜೆ, ಮನದನ್ನನೊಳು ಮಾಧವನ ಭಾವಿಸೆ ಮೋಕ್ಷ ಎಂದಳಾಕೆ. ಇದೇ ವಿವಾಹ ಬಂಧದ ಧಾರ್ಮಿಕ ಸಂಕೇತ. ಜೀವ-ಪರಮಾತ್ಮರ ಐಕ್ಯವನ್ನು ಸಾಧಿಸಲು ಗೃಹಸ್ಥರಿಗೆ ಒಲವಿನ ದಾಂಪತ್ಯ ಅಡಿಗಲ್ಲಾಗಿದೆಯೆನ್ನಬಹುದು. ಅಂತಹ ಸತಿಯನ್ನು ಒಲಿಸಿ ಸೌಖ್ಯಪಡುವ ಪುರುಷನಿಗೆ ಸ್ವರ್ಗದ ಸಿರಿ ಸಂಪತ್ತುಗಳೂ ತುಚ್ಛ.

ಆದರೆ ಹೃದಯದ ಧರ್ಮ ಪ್ರವೃತ್ತಿಗಳಂತೆ ಶರೀರ ಧರ್ಮದ ಪ್ರವೃತ್ತಿಗಳೂ ಇವೆಯಲ್ಲ? ಯೌವನನಂತರಾದದ್ದು ಮೊದಲುಗೊಂಡು ಕೊನೆಯುಸಿರಿನ ವರೆಗೆ ಒಂದೆಡೆ ಬಾಳುವ ಸತಿ ಪತಿಯರಲ್ಲಿ ಶರೀರಧರ್ಮದ ಸಾಮ್ಯವು ಕೂಡಿಬರದಿದ್ದರೆ ಮನಃಕ್ಲೇಶಕ್ಕೆ ಎಡೆಯಾಗಿ ಸುಖ-ಶಾಂತಿಗಳಿಗೆ ಭಂಗವುಂಟಾಗುತ್ತದೆ. ಅಂದರೆ ಸತಿ ಪತಿಯರು ಪರಸ್ಪರ ಇಂಗಿತವನ್ನರಿತವರಾಗಿ ನಕ್ಕು ನಲಿಯುತ್ತಾ ಬಾಳು ಸಾಗಿಸುವಾಗ ಮಾತ್ರವೇ ಶರೀರಧರ್ಮವೂ ಒಲವಿನ ಧರ್ಮವೂ ಏಕಾಕಾರವಾಗಲು ಸಾಧ್ಯ.

ಸರಸ-ಸಲ್ಲಾಪ

ಪತಿಯು ಧರ್ಮದ ಗುಡಿ ಸತಿ. ಪೂಜಾವ್ರತಗಳಿಗೆ ಸಪತ್ನೀಕನು ಶ್ರೇಷ್ಠ. ಹಿರಿಯರ ಮತ್ತು ಅತಿಥಿಗಳ ಉಪಚಾರಕ್ಕೂ ಸತಿಯ ನೆರವು ಬೇಕು. ಸಂತಾನ ಧರ್ಮದಿಂದ ಕುಲಕೋಟಿಯನ್ನು ಉದ್ಧರಿಸುವುದಕ್ಕೂ ಅವಳೇ ಮೂಲ, ಸಂಸಾರದ ಎಡರು ತೊಡರುಗಳನ್ನು ತೊಡೆದು ನೇರವಾದ ಮಾರ್ಗದಲ್ಲಿ ಬಾಳರಥವನ್ನು ನಡೆಸಲು ಪುರುಷನಷ್ಟೇ ಅವಳೂ ಮಹತ್ವದವಳು. ಇದೆಲ್ಲಾ ಗೃಹಸ್ಥರ ಸುಖಜೀವನದ ಸದಂಶಗಳು. ಸತಿಪತಿಯರ ಪರಸ್ಪರ ಸಾರ್ಥಕ್ಯದ ದೃಷ್ಟಿಯಿಂದ ಒಲವು ಅತಿ ಮುಖ್ಯ. ಒಲವುಳ್ಳ ಸಂಸಾರದಲ್ಲಿ ಸತಿಪತಿಯರ ಸರಸ ಸಲ್ಲಾಪಗಳೇ ಕಾವ್ಯವೆನಿಸಿತು, ಮಧುರ ಸಂಗೀತವೆನಿಸಿತು.

ಮದುವೆಯಾದ ಹೊಸತು, ಎಳೆಯಳಾದ ಚದುರೆಯ ಕೈಯನ್ನು ಹಿಡಿದು ಹೆಮ್ಮೆಗೊಂಡಿದ್ದಾಗಿದೆ. ಆದರೆ ಅವಳು ಗಡಸುಗಾತಿ, ಅಪಾರವಾದ ನಾಚಿಕೆ, ಹತ್ತಿರಕ್ಕೆ ಸುಳಿಯುವ ಪತಿಯನ್ನು ದಿಟ್ಟಿಸಿ ನೋಡದ ಓರೆ ಕೋರೆ ನೋಟ ಬೀರುತ್ತಾಳೆ. ಮುಟ್ಟಿದರೆ ಜಡಿದು ಬಿಡಿಸಿಕೊಳ್ಳುತ್ತಾಳೆ ಕುಣಿಯುವ ಹುಬ್ಬು, ಕೊಂಕಾದ ಬಳುಕಿನ ನಡೆ, ಗಿಳಿಯಂತೆ ಪುಟ್ಟ ಮಾತುಗಳು— ಈ ಮೊದಲಾದುವುಗಳಿದ್ದರೂ ಗಡಸುತನ ಬೀರುವಳೆಂದು ಪತಿಯು ಹಗೆತನ ಸಾಧಿಸಬಹುದೇ? ಅದು ಸರಿಯಲ್ಲ; ಹೂವನ್ನು ಹಿಂಡಿ ರಸ ತೆಗೆಯಬಾರದು, ಸಿರಿ ಮುಡಿಗೆ ಮುಡಿಸಬೇಕು; ವೀಣೆಯನ್ನು ಒನಕೆಯಿಂದ ನುಡಿಸಬಾರದು, ಉಗುರಿನಿಂದ ಮೀಟಬೇಕು. ಎಳೆಯಳನ್ನು ಮುದ್ದಿಸಿ, ಸರಸವಾಡಿ, ಮೆಲ್ಲನೆ ನಾಚಿಕೆ ಸರಿದಂತೆ ಸೋಂಕಬೇಕು. ಅಂತಹ ಚದುರೆಯ ಕಲ್ಲೆದೆಯನ್ನೂ ಮೆಲ್ಲೆದೆಯೆನಿಸಿಕೊಂಡು, ಆಗಾಗ ಹೊಗಳುತ್ತಾ, ನೆಮ್ಮನವಿರೆಬ್ಬಿಸುತ್ತಾ, ಪುಳಕಿಸುವಂತಹ ವಿನೋದದ ಮಾತುಗಳಿಂದ ತೃಪ್ತಿಪಡಿಸುತ್ತಾ ಸುಖಿಸುವುದೇ ಬಲ್ಲನಾದ ನಲ್ಲನ ಒಳ್ಳೆಯ ಚಲ್ಲಾಟ.

ಸರಸ ಸಲ್ಲಾಪಗಳನ್ನು ಬಲ್ಲ ಜಾಣ ದಂಪತಿಗಳಿಗೆ ಎಂದೆಂದಿಗೂ ಮೋಡರ ಪ್ರಾಯ, ಅವರ ಶರೀರಗಳು ಮುದುಡಿ ಹೋಗುತ್ತಿದ್ದರೂ ದಾಂಪತ್ಯದ ಒಲವಿಗೆ ಮುದಿತನವಿಲ್ಲ. ಕಬ್ಬಿಗಿತಿ ಹೊನ್ನಮ್ಮನ ಹದಿಬದೆಯ ಧರ್ಮವು ನಿರೂಪಿಸಿದ ಬಾಳುವೆಯು ಧರ್ಮವಿದು.

ಚಕ್ರಿಯ ಚೆಲುವಿನ ಚಲ್ಲಾಟಗಳು

ಪಮಾಜದ ಕನ್ನಡಿ ಸಾಹಿತ್ಯವಷ್ಟೆ? ಕಸ್ತೂರಿಯಂತಹ ಕನ್ನಡ ಸಾಹಿತ್ಯದಲ್ಲಿ ದಾಂಪತ್ಯದ ಒಲವನ್ನು ಪ್ರತಿಪಾದಿಸಿದ ಪ್ರಾಚೀನ ಪದ್ಯ ಕಾವ್ಯಗಳು ವಿರಳವೆಂದರೂ ತಪ್ಪಲ್ಲ. ಆದರಲ್ಲೂ ಬಹು ಪವಿತ್ರವನ್ನು ಪುರಸ್ಕರಿಸುವ ಕಾವ್ಯವೂ ಒಂದಿಲ್ಲವೆ? ಅಂತಹ ಸಂದರ್ಭಗಳಲ್ಲಿ ಸತಿಪತಿಯರ ಒಲವಿನ ಶೃಂಗಾರಚಿತ್ರಗಳು ಸ್ವಲ್ಪ

ವೈಭವದ ಘಟಾಟೋಪಗಳನ್ನೂ ಒಳಗೊಂಡಿರು ವುದು ಸಹಜ. ಅಲ್ಲಿನ ಚೆಲ್ಲಾಟದ ಸಲ್ಲಾಪಗಳೂ ಸಹ ಸಿರಿತನದ್ದೇ ಆಗಿದ್ದರೆ ಸಾಮಾನ್ಯರ ಕೈ ಸೋಂಕಿನಿಂದ ದೂರವೆನಿಸಿತು. ಆದರೆ ಇಂತಹ ಒಲವಿನ ಚೆಲ್ಲಾಟದ ಸೊಗಸನ್ನು ಸಿರಿತನ ಬಡತನಗಳ ಭೇದವಿಲ್ಲದೆ ಒದಗಿಸಿಕೊಟ್ಟ ಕಬ್ಬಿಗರೂ ಇದ್ದಾರೆ. ರತ್ನಾಕರನ ಭರತೇಶ ವೈಭವ ಇದಕ್ಕೆ ಸಾಕ್ಷಿ.

ತ್ಯಾಗವನ್ನು ಬಲ್ಲ ಭೋಗಚಕ್ರಿಯಾದ ಭರತನು ಹಲವಾರು ಸತಿಯರನ್ನು ಹೊಂದಿದ ಗೃಹಸ್ಥನಾದರೂ ಸತಿಯನ್ನು ಒಲಿಸುವ ಕಲೆ ಅವನಿಗೆ ಬೇಸರವಲ್ಲ. ಅವನ ಚೆಲ್ಲಾಟ 'ನವೋ ನವೋ ಭವತಿ'-ಎನ್ನುವಂತಹುದು. ಮುಂದೆ ಸತಿಯಾಗಲಿರುವ ಎಳೆಯ ಗಡಸುಗಾತಿಯೊಡನೆ ಸರಸ, ಆದರಿಸಿ ಅನ್ನವಿಟ್ಟು ನರುದಂಬುಲವನ್ನೀಯುತ್ತಾ ಕಾಲೊತ್ತುವ ಚದುರೆಯಾದ ನಲ್ಲೆಯೊಡನೆ ನಗವಾತು, ಹುಸಿಮುನಿಸಿನಿಂದ ದೂರ ನಿಂತವಳೊಡನೆ ಅವನ ಸವಿಯಾದ ಸೆಣಸಾಟ, ತಾನೇ ಹುಸಿ ಮುನಿಸು ತೋರಿ ನಲ್ಲೆಯ ಕಾತುರತೆಯನ್ನು ಹೆಚ್ಚಿಸಿ ಪುಳಕಿಸುವ ಸಜ್ಜೆಯೊಳಗಿನ ಜಾಣ್ಮೆ ಈ ಎಲ್ಲವೂ ಮನೆಯನ್ನು ಸೌಖ್ಯದ ನಂದನವನವನ್ನಾಗಿಸಲು ಬಯಸುವ ಸತಿಪತಿಯರು ಮೆಚ್ಚುವಂತಹರು.

ನಲ್ಲೆಯು ರಚಿಸಿದ ಕಾವ್ಯ

ಬಲ್ಲವರು ಮಾತ್ರವೇ ತಮ್ಮ ನಲ್ಲೆಯರ ಮೆಚ್ಚುಗೆಗೆ ಪಾತ್ರರಾದಾರು. ನಲ್ಲೆಯು ಮೆಚ್ಚ ಒಂದು ಮಾತನ್ನಾಡಿದರೆ ಎಂತಹ ಅರಸಿಕನೂ ಹುಚ್ಚನಾಗಬಹುದು. ಆದರೆ ಅಷ್ಟಕ್ಕೆ ಉಬ್ಬಿ ಹೋಗಿ ಗಂಭೀರದ ಖಜಾಂಚಿಯಾಗಿರುವುದೇ? ಸಮಯವನ್ನರಿತು ನಲ್ಲೇ ಸಹ ತೃಪ್ತಿಪಡು ವಂತೆ ಒಂದು ಮೆಚ್ಚಿನ ಮಾತನ್ನಾಡುವವನೇ ಜಾಣ.

ಹೆಂಡತಿ ಚೆಲುವೆ, ಕಲಾವಿದೆ. ಪತಿಯನ್ನು ಮೆಚ್ಚಿಸಲೆಂದು ಸಜ್ಜೆಯ ಕಿರುಮನೆಯಲ್ಲಿ ಕುಳಿತು ಅವನ ಎದುರಿಗೆ ವೀಣೆಯನ್ನು ನುಡಿಸುತ್ತಾ ಹಾಡುತ್ತಿರುತ್ತಾಳೆ. ಆಗ ಪತಿಯಾದವನು ಅಲ್ಲಿರುವ ಹಾಲು ಹಣ್ಣುಗಳನ್ನು ಮುಕ್ಕಿ ಸುಪ್ಪತ್ತಿಗೆಯ ಮೇಲೆ ಗೊರಕೆ ಹೊಡೆಯಬಾರದು. ತನಗೆ ಸಂಗೀತ ಗೊತ್ತಿಲ್ಲದಿದ್ದರೂ ಸರಿ; "ನಲ್ಲೆ ಹಾಡು ಹಾಡು. ಇನ್ನೊಂದನ್ನು ಹಾಡು. ಅಬ್ಬ, ಎಂತಹ ಕಂಠ! ಎಂತಹ ಮಧುರ ಗಾಯನ! ಎಲ್ಲಿ ಕಲಿತೆ? ಯಾವಾಗ ಕಲಿತೆ?"-ಎನ್ನುತ್ತಾ ಹತ್ತಿರ ಸಾರಿ ತಕ್ಕೈಸಿ ಮುಂಡಾಡಬೇಕು. ನಲ್ಲೆಯ ಆಗಿನ ಉಬ್ಬುವಿಕೆ, ಸಂತೋಷಗಳು ಎಷ್ಟು ಚೆಂದ! ಕೊನೆಯಲ್ಲಿ ಅವಳು ಹೇಗೆ ತೊಡೆಯ ಮೇಲೆ ವೀಣೆಯನ್ನು ಅಂತು ನುಡಿಸಿದಳೋ ಹಾಗೆಯೇ ಅವಳ ತೊಡೆಯಾಂತು ದಾಂಪತ್ಯದೊಲವಿನ ವೀಣೆಯನ್ನು ಮಿಡಿಯಬೇಕು.

ಆದರಿಸಿ ತಾಂಬೂಲವನ್ನು ಕೊಡಲು ಮಂಚವನ್ನು ಸಾರಿದವಳೊಡನೆ ಒಂದು ಚೆಲ್ಲಾಟದ ಸಲ್ಲಾಪ-ಬೇಕಾಗಿ ಮುಸುಕಿಕ್ಕಿ ಜೂಟಿನ ನುಡಿಗೆ ಪ್ರಾರಂಭಿಸುತ್ತಾನೆ ಇನಿಯ—



"ಎಲಾ, ಇಲ್ಲಿಗೆ ಇವಳೇಕೆ ಬಂದಳು? ಮುಖ ನೋಡಿದರೆ ಯಾವುದೋ ಜಗಳಕ್ಕೆ ಬಂದಂತೆ ಅನ್ನಿಸುತ್ತದೆ"

"ಜಗಳಕ್ಕಲ್ಲ ನಸುನಗುತ್ತಾ ಬರುವ ರೀತಿ ಕಳು ನಲ್ಲನಲ್ಲಿ ಏನೋ ರಹಸ್ಯದ ಪ್ರಯೋಜನ ಯೋಚಿಸಲು ಬಂದಿದ್ದಾಳೆ"

"ಒಹೋ ಹಾಗೋ? ಅಂತಹ ವಿಷಯವೇನಂತೆ?"

"ಅವಳು ಹೇಳುವುದಿಲ್ಲ ಮೂಢರಿಗಾದರೆ ಹೇಳಬೇಕು, ಪ್ರೌಢರು ತಾವೇ ತಿಳಿಯುತ್ತಾರೆ" ಎನ್ನುತ್ತಿದ್ದಾಳೆ!

—ಇಂತಹ ಜಾಣೆಯನ್ನು ಮೆಚ್ಚಿಸುವ ನಲ್ಲನ ಬಗ್ಗೆ ಸತಿಯು ಎಷ್ಟು ತೃಪ್ತಿಪಡಲಾರಳು, ತನ್ನ ಪತಿಯನ್ನು ಕುರಿತು ಅವಳು ಯೋಚಿಸುವ, ಹೆಣೆಯುವ ಸ್ವರವು, ಭಾವನೆಗಳು ರಸಾತ್ಮಕ ಕಾವ್ಯಕ್ಕಿಂತಲೂ ಕಡಿಮೆಯೆ? ಇಲ್ಲಿ ಕುಸುಮಾಜಿಯ ಭಾವನೆಗಳೇ ಕಾವ್ಯವಾದ ಸಂದರ್ಭವಿದೆ.

ಆ ಚದುರೆಯು ಏಕಾಂತವಾಗಿ ತನ್ನ ಗೆಳತಿಯೊಡನೆ ನಲ್ಲನ ಚೆಲುವನ್ನು ವರ್ಣಿಸಿದಾಗ ಗೆಳತಿಯೆಂದಿತು—

"ಅಕ್ಕಯ್ಯ, ನಿನ್ನ ಹೊಗಳಿಕೆ ಸತ್ಯವಾದುದು. ಪತಿ ಹೊಲ್ಲ, ಸತಿ ಲೇಸು ಎನುವಂತಿರಬಾರದು ದಾಂಪತ್ಯ. ನೀವು ಇಬ್ಬರೂ ಲೇಸು. ಇನ್ನು ಪತಿಯನ್ನು ಹೊಗಳುವುದರಲ್ಲಿ ತಪ್ಪೇನಿದೆ? ಜಾಣೆಗೆ ಜಾಣನು ಕೂಡಿದರೆ ವೀಣೆಗೆ ತಂತಿ ಕೂಡಿದಂತೆ; ಹೆಡ್ಡನು ಕೂಡಿದರೆ ಅದು ತಂತಿಯಲ್ಲ, ನೇಣು."

"ಅದನ್ನೇ ನೆನೆದು ಹೇಳುತ್ತಿದ್ದೇನೆ ನೋಡು. ಸಾಧಾರಣವಾಗಿ ಚುಂಬನಕ್ಕೆ ತುಟಿಯೇ ಸಿಹಿಯೆನ್ನುತ್ತಾರೆ. ನನಗಂತೂ ಅವನ ಮೈಯಲ್ಲಿ ಎಲ್ಲಿ ಚುಂಬಿಸಿದರೂ ಸಿಹಿಯೇ! ಹಿ ಹ್ಹಿ ಹ್ಹಿ... ಅ...ಬ್ಬ ಮರೆಯೇಕೆ? ಇಲ್ಲಿ ಕೇಳು. ಒಮ್ಮೆ ನಾನು ಆತನನ್ನು ಸೋಂಕಿ ಕುಳಿತಿದ್ದೆ. ಆತನ ಚಿತ್ರಲಾದ ಎದೆ-ಹೊಟ್ಟೆಗಳನ್ನು ಮುಟ್ಟಲು ನನಗೇನೋ ಆನಂದ. ಆತನ ಬಸಿರಮೇಲೆ ನನಗೆ ಇರುವೆಯ ಸಾಲು ಕಾಣಿಸಿದಂತಾಯಿತು

ಥಟ್ಟನೆ ನಾನು ಕೈಯಿಟ್ಟು ಸವರಿದೆ. ಆದರೆ... ನನಗೇ ನಾಚಿಕೆ. ಅದು ಇರುವೆಯು ಸಾಲಲ್ಲ. ಮನಮೋಹಕವಾಗಿ ಬೆಳೆದ ಚಿಗುರುಗೂದಲು! ಅತನು ನಕ್ಕು ಬಿಟ್ಟ."

— ಆ ಚೆಲುವೆಗೆ ಈ ಸಂದರ್ಭವನ್ನು ಮರೆಯಲು ಇಷ್ಟವಿಲ್ಲ. ಅದನ್ನೆಲ್ಲಾ ಕಾವ್ಯವಾಗಿ ಬರೆದಳು. ಆದರೆ ಗುಪ್ತವಾಗಿದ್ದ ಆ ಕಾವ್ಯ ಹೇಗೋ ಪತ್ತೆಯಾಯಿತು. ಸಹಪತ್ನಿಯರು ಒಮ್ಮೆ ಗಂಡನ ಸಮ್ಮುಖಕ್ಕೆ ಅದನ್ನು ತಂದು ಬಿಟ್ಟರು. ಆಗ ಇವಳಿಗೆ ಎಷ್ಟು ನಾಚಿಕೆಯಾಗಬೇಡ! ಜಾಗಬಿಟ್ಟು ಹೋಗಲು ಅವಳು ಉಪಾಯ ಮಾಡಿ ಎದ್ದಳು-"ನಾನು ಇನ್ನೂ ಈ ದಿನ ಹಬ್ಬದ ವ್ರತವನ್ನೇ ಮಾಡಲಿಲ್ಲ. ಮಾತುಗಳಲ್ಲಿ ಮರೆತಿದ್ದೆ. ಹೋಗಿ ಬರುತ್ತೇನೆ"

"ಹೌದೇನೆ?"- ಗಂಡನು ಆಕೆಯೊಡನೆ ಹೇಳಿದನು-"ಹಾಗಾದರೆ ವ್ರತಕ್ಕೆ ಈ ಸುವರ್ಣದ ಕಂಕಣ ಬೇಡವೇ? ಕೇಳದೆ ಸುಮ್ಮನೆ ಹೋಗುತ್ತೀಯಲ್ಲ. ಕೋ, ಹಿಡಿ"

ನಿಜವಲ್ಲವೇ? ವ್ರತಮಾಡುವ ಹೆಣ್ಣಿಗೆ ಪತಿಯು ಕರದ ಕಂಕಣವಿತ್ತು ಅಪ್ಪಣೆ ನೀಡಬೇಕಾದುದು ಸನಾತನಧರ್ಮ. ಹತ್ತಿರಕ್ಕೆ ಬಂದು ಕಂಕಣಕ್ಕೆ ಕೈ ನೀಡಿದಳಾಕೆ. ಆದರೆ ಆ ಚೆಲುವನೇನು ಕಾಂತೆಯರ ಒಳಗನ್ನರಿಯದ ಹೆಡ್ಡನಲ್ಲ. ಕೂಡಲೇ ಅವಳ ಕೈ ಹಿಡಿದು ಎಳೆದುಕೊಂಡ-

"ಚೆಂಡಿನಂತೆ ಲಂಘಿಸಿ ಹೋಗಲಿದ್ದೆಯಾ ಠಕ್ಕಿ! ಯಾರ ಹತ್ತಿರ ನಿನ್ನ ಠಕ್ಕು? ನನಗೆ ಗೊತ್ತಿಲ್ಲದೆ ನಿನಗೆ ವ್ರತವೇ? ಸಾಕು ಕುಳಿತುಕೋ, ಎದ್ದರೆ ನನ್ನಾಣೆ!"

ಪಾಪ, ಲಜ್ಜೆಯ ಮುದ್ದೆಯಾಗಿ ತೆಪ್ಪಗೆ ಕುಳಿತಳವಳು.

"ಓಹೋ, ಇವಳಿಗೆ ಮುನಿಸು ಮೊಗವಾಗಿದೆಯೋ? ಹಾಗಾದರೆ ತಾಳು ಹೀಗೆ ಮಾಡುತ್ತೇನೆ. ಎಲ್ಲೆ, ಅದೇನೆಂದು ನಿಮ್ಮ ಕಿವಿಗಳಲ್ಲಿ ಹೇಳುತ್ತೇನೆ ಬನ್ನಿ ಇಲ್ಲಿ—"

ಉಳಿದ ಚದುರೆಯರಿಗೆ ಅದೊಂದು ಉತ್ಸಾಹ, ಬಂದು ಆತನ ಎರಡೂ ಪಕ್ಕಗಳಲ್ಲಿ ನಿಂತು ಕಿವಿ ನೀಡಿದರು. ಚೆಲುವನು ಕಿವಿಗಳಲ್ಲಿ ರಹಸ್ಯ ಹೇಳುವಂತೆ ಬಾಗಿ ಪಕ್ಕಗಳಲ್ಲಿದ್ದ ಇಬ್ಬರನ್ನೂ ಬಾಚಿ ತಬ್ಬಿಕೊಂಡನು. 'ನಿಮಗೆ ಹಾಗಾಗಬೇಕಾದುದೇ ಸರಿ'- ಎಂದಳು ಅದುವರೆವಿಗೂ ಮೋರೆ ತಿರುವಿಕೊಂಡಿದ್ದ ಮುನಿಸಿನ ಚೆನ್ನೆ. ಇದರಿಂದ ಆ ಚದುರನಿಗೂ ಸಂತೋಷ- ಅವಳನ್ನು ನಗಿಸಿದೆನೆಂದು! ಇದಲ್ಲವೆ ಮನ್ನಣೆಯ ಸಂಧಿ!



ತನ್ನವಳಾದ ಎಳೆಯಳೊಡನೆ

ಅಬ್ಬ! ಇವಳೆಷ್ಟು ಗಟ್ಟಾಣೆಯಪ್ಪ! ಸಾಕೇಳು, ನನಗೂ ನಿನಗೂ ಏನು ಸಂಬಂಧ?- ಎಂದು ಕೊಂಕು ಮಾತುಗಳಿಂದಲೇ ಆಕರ್ಷಣೆ ಮಾಡುತ್ತಿದ್ದಾಳಲ್ಲ! ಈಗಲೇ ಎಷ್ಟು ಕಾತರ!

ಓಹೋ, ಸಾಕು ಸುಮ್ಮನಿರು. ಕಾತರಗೀತರದ ಥಳುಕೂ ಬೆಳುಕೂ ತಳ್ಳಿ ಬಳ್ಳಿಗಳೂ ನಮಗೆ ಗೊತ್ತಿಲ್ಲ-ಎಂದು ಹೇಳಿದ ಈ ಠಕ್ಕು ಗಾತಿಯು ಗಿಣಿಗೆ ಕಲಿಸಿ- ಭಾವ. ಸುಪ್ರಭಾವ, ಸುಗುಣ ಸ್ವಭಾವ, ಮಹಾನುಭಾವ- ಎಂದು ಹೊಗಳಿಸುತ್ತಿದ್ದಾಳೆ!

"ಎಷ್ಟು ಚೆನ್ನಾಗಿ ಮಾತನಾಡುತ್ತಿದೆ ಈ ಗಿಳಿ! ಹುಡುಗೀ, ಅದನ್ನು ಇಲ್ಲಿ ತೆಗೆದುಕೊಂಡು ಬಾ!"

ಅವಳು ಗಿಣಿಯೆನ್ನೇನೋ ತಂದಳು. ಆದರೆ ಅವನಿಗೆ ಬೇಕಾಗಿದ್ದದ್ದು ಆ ಗಿಳಿಯೇ? ಅವಳನ್ನು ಹಿಡಿದು ತಬ್ಬಿಕೊಂಡನು. ಅವಳು ಇಷ್ಟವಿದ್ದರೂ ಇಲ್ಲದಂತೆ ಮೈಯನ್ನು ಮಿಸುಕಾಡಿದಳು-

ಅತ್ತಿತ್ತ ಮೈಯನೊಲೆದಲಾಕೆ ಮಿಸುಕದಂ
ತೆತ್ತಿ ತಾನವುರ್ದಪ್ಪಿಕೊಂಡು
ಮುತ್ತ ಕೊಟ್ಟನು. ಕೊರಳಿಗೆ ಕಂಠ ಮಾಲೆಯ
ಸುತ್ತಿ –ನಂಚ್ಚಿದನೆಂದು ಬಿಟ್ಟ.

ಪಾಪ, ಆ ಮುಗ್ಧೆಗೆ ಅಳು ಬಂದು ಬಿಟ್ಟಿತು. ಅತ್ತುಕೊಂಡೇ ಒದರತೊಡಗಿದಳು—

"ನಾನು ನಮ್ಮೂರಿಗೆ ಹೊರಟು ಹೋಗುತ್ತೇನೆ. ಮತ್ತೆ ಈ ದಿಕ್ಕನ್ನು ನೋಡಿದರೂ ನಾನು ಹೆಣ್ಣಲ್ಲ ಚೀ ಕುಟಿಲ, ಹೆಮ್ಮೆಯಿಂದ ಆನೆಯ ಹಾಗೆ ಮೇಲೆ ಬಿದ್ದು ಹಬ್ಬುವ ಬಳ್ಳಿಯ ಹಾಗೆ ಹೆಣ್ಣುಗಳನ್ನು ಅಪ್ಪಿಕೊಂಡು ಬಿಟ್ಟರೆ ದೊಡ್ಡ ಮನುಷ್ಯನೇನೋ! ಧೂರ್ತ, ನಿನಗೆ ಎಷ್ಟು ಹೆಂಡತಿಯರಿದ್ದರೂ ಸಾಲದೇ? ನಿನ್ನನ್ನು ಕಂಡರೆ ನನಗಾಗದು. ನೀನು ಗುಡಾಟದ ಭಂಡ......"

"ಸಾಕು ಬಾಯಿ ಮುಚ್ಚು ತಂಗಿ! ಅಪ್ಪಿಕೊಂಡು ಆನಂದಪಟ್ಟದ್ದಕ್ಕೆ ಹೀಗೇನೇ ಗೌರವಿಸಬೇಕಾದುದು?" — ಎಂದಳು ಅವಳ ಅಕ್ಕ.

"ಹೌದು ಹೌದು ನನ್ನದೇ ತಪ್ಪೇನೋ! ಇವನು ಮಾಡುವ ಚೆಲ್ಲಾಟ ಸರಿಯೋ?"



"ಎಲಾ ಎಲಾ, ಇನ್ನೂ ಚಿಗುರುತ್ತಿರುವ ಜವ್ವನಿಯಿವಳು ಎಳವ ಮೊಳೆಯೊಳೆ ಕೊಂದು ಕೂಗುವಳೀವಳು, ಎಳೆಲೆವೋದವೇಳೆ ಎನ್ನನು ಬಾಳಲೀವಳೆ? ಎಲೆ ಧೂರ್ತೆ. ನಿನಗೆ ಮನ್ನಣೆ ಈವೆನೆಂದರೆ ಎನ್ನನು ಹಳಿವುದೇಕೆ?

"ಅರೆ ಅವಳು ಅಳುತ್ತಿದ್ದಾಳೆ! ಹೌದೇ? ಕಣ್ಣೀರಿಲ್ಲವಲ್ಲ? ತಾಳು ತಾಳು, ಛೀ ಕಳ್ಳಿ, ಕಣ್ಣಿನ ಎವೆಯನ್ನು ಬೇಕಾಗಿ ಕಿತ್ತು ಕಣ್ಣೀರು ತಂದುಕೊಳ್ಳುತ್ತಿರುವೆಯಾ? ನೀನು ಕಣ್ಣು ಕಿತ್ತಿದ ಮಾತ್ರಕ್ಕೆ ಏನಾಯಿತು? ಈ ಚದುರನ ಮುಂದೆ ಹೆಣ್ಣುಗಳ ಕಣ್ಣುಗಳಲ್ಲಿ ಮೂಡುವುದು ಹರ್ಷಾಶ್ರುವೇ ಹೊರತು ಶೋಕಾಶ್ರುಗಳಲ್ಲ!"

"ಧೂರ್ತ! ಹೋಗು. ನಿನ್ನ ಮನ್ನಣೆ ನಿನಗೇ ಇರಲಿ!"

"ಧೂರ್ತ! ನಾನು ಧೂರ್ತ, ನೀನು ಧೂರ್ತೆ, ಓಹ್, ಅರ್ಥವಾಯಿತು. ಧೂರ್ತನು ಧೂರ್ತೆಗೆ ಗಂಟು ಬೀಳಬೇಕೆಂದು ನಿನ್ನ ಅಭಿಪ್ರಾಯವೋ? ಹೋಗಲಿ, ಅದು ಹತ್ತಿರದಲ್ಲೇ ಆಗಬೇಕೆಂದು ಆಸೆಯೋ?"

—ಪಾಪ, ಅವಳಿಂದ ನಗೆಯನ್ನು ತಡೆಯಲಾಗಲಿಲ್ಲ

"ಅಂದರೆ, ಇದೋ ಸಮಾಚಾರ? ತಾಳು, ನಿನಗೆ ಹೀಗಲ್ಲ. ನಾಳೆ ನಿಮ್ಮಪ್ಪನನ್ನು ಕರೆಸಿ ನಿನ್ನ ಕೈಯನ್ನು ಈ ನಿನ್ನ ಪ್ರಿಯನಿಗೆ ಹಿಡಿಸಿಕೊಡದಿದ್ದರೆ ಆವಾಗ ಕೇಳುವೆಯಂತೆ!"

—ಇದು ಮಕರಂದರಾಜಿಯ ಸುಗಂಧಿಯಾದ ಸರಸ ಸಂಧಿ.

ನೋಡಿಕಾರನ ಹುಸಿ ಮುನಿಸು

ಆಹಾ? ಇವನೇ ಭೋಗಿ, ಯೋಗಿಯಂತಿರುವ ಭೋಗಿ.

ಏಕೆಂದರೆ ಏಕಪತ್ನೀವ್ರತಸ್ಥರು ಸಹ ಹೆಂಗಳ ಇಂಗಿತವನ್ನು ಅರಿತು ಸರಸದಿಂದ ತೃಪ್ತಿಪಡಿಸುವುದು ಕಷ್ಟ. ಕೆಲವು ಮಂದಿ ಹೆಂಡತಿಯರಿದ್ದರೂ ಈತನು ಎಷ್ಟು ಲೀಲಾಜಾಲವಾಗಿ ತೃಪ್ತಿಪಡಿಸಬಲ್ಲ ಜಾಣ! ಸುಳಿದ ಸುರುಳಿಗೂದಲಿನ ನಾರಿ ಮತ್ತೆ ಹಿಂದಿರುಗದೆ ಇವನ ಬಳಿಯೇ ಸುಳಿದಾಡಲು ಇದೇ ಕಾರಣವಿರಬೇಕು! ಅವನು ಅವಳ ಕಡೆ ನೋಡಿ ನಸುನಗೆ ಬೀರಿದರೆ ಸಾಕು! ಕರಣಗಳನ್ನು ಜುಮ್ಮೆನ್ನುವಂತೆ ಒಸರಿಸುತ್ತಾನೆ. ಸಿಕ್ಕಾಪಟ್ಟೆ ಸರಸವಾಡಿದನೆಂದರೆ ಅಂಗನೆಯರು ಪರವಶರಾಗಲೇಬೇಕು. ರತಿಸುಖದಲ್ಲಿ ಸಿಕ್ಕಿದಂತೆಯೋ, ಸೊಕ್ಕಿಬಿದ್ದ ಹಕ್ಕಿನಂತೆಯೋ ಇರುತ್ತಾನೆ. ಅದರೆ-ಊಹುಂ ಅದೇ ಆತನ ವೈಶಿಷ್ಟ್ಯ!

ಆ ನೋಡಿಕಾರನು ಅದೋ, ಈಗ ಶಯ್ಯಾಗೃಹಕ್ಕೆ ಹೊರಟಿದ್ದಾನೆ. ನಲ್ಲೆಯ ನಡುವನ್ನು ಎಡಗೈಯಿಂದ ಅಪ್ಪಿಕೊಂಡು ಮೆಲ್ಲಮೆಲ್ಲನೆ ಜೊತೆಗೂಡಿ ಒಳಕ್ಕೆ ಪ್ರವೇಶಿಸಿದ್ದಾನೆ. ಈಗ ಅವನಿಗೆ ನಲ್ಲೆಯರ ಬಾಯಿಂದ ತಾಂಬೂಲದ ಗುಟುಕು ದೊರೆಯುತ್ತದೆ.

ನಲ್ಲೆಯರು ಏನು ಲೋಭಿಗಳು! ತಾಂಬೂಲದ ಗುಟುಕು ಆತನಿಗೆ ಪೂರ್ಣವಾಗಿ ಕೊಟ್ಟುಬಿಡಬಾರದೇ? ಇವರಲ್ಲಿ ತ್ಯಾಗಬುದ್ಧಿಯೆಂಬುದೇ ಬೇಡವೆ?

"ಪ್ರಿಯತಮ. ಕೋಪ ಮಾಡಿಕೊಳ್ಳಬೇಡ. ನಾವು ತಾಂಬೂಲವನ್ನು ಅರ್ಧ ಬಾಯೊಳಕ್ಕೆ ವಾಪಸು ಪಡೆದಿದ್ದು ಲುಬ್ಧತ್ವವೆ?

ನಲ್ಲ ಕೇಳದಕಲ್ಲ ನಿನ್ನ ಬಾಯ್ದೆರೆ ಸೋಂಕಿ।
ನಲ್ಲಿ ಬಂದೆಲೆಯು ಭಾಗವದು॥
ಬೆಲ್ಲ ಸಕ್ಕರೆಯು ಸೋಲಿಸುತದೆ ಸವಿಯಿಂದ।
ಕೆಲ್ಲಿ ಬಂದುದೊಯೆಂಬರವರು॥

"ಒಟ್ಟಿನಲ್ಲಿ ನಾವು ಲೋಭಿಗಳೆಂದು ತಾನೇ ನಿನ್ನ ಆಕ್ಷೇಪಣೆ? ಹಾಗಾದರೆ ಹೀಗೆ ಮಾಡು. ನಮ್ಮ ಬಾಯಿಂದ ಬೇಕಾದರೆ ನೂರು ತಾಂಬೂಲದ ಘುಳಿಗೆಗಳನ್ನು ಕೊಡುತ್ತೇವೆ ಆ ನೂರಕ್ಕೆ ನಿನ್ನ ಬಾಯಿಂದ ನಮಗೆ ಆರು ಘುಳಿಗೆ ಕೊಡು-ಸಾಕು. ಈ ವ್ಯಾಪಾರದಲ್ಲಿ ನಿನಗೆ ಲಾಭವಿರುವಾಗ ಏಕೆ ಒಪ್ಪಿಕೊಳ್ಳಬಾರದು?"

"ಎಲಾ ಕಡು ಪಂಥಗಾತಿ! ನೀನು ನನಗೆ ತಾಂಬೂಲ ಕೊಡಬೇಡ."

"ಅಯ್ಯೋ ಇನ್ನು ಸಾಕು, ಸುಮ್ಮನೆ ಹಿಡಿಯಿರಿ ನೋಡಿದೀನಿ"

"ಬಿರಿನುಡಿಗಳನ್ನೇ ಆಡುತ್ತೀಯಲ್ಲೇ ಪದ್ಮಿ. ನಯವಾದ ಒಂದು ಮಾತಾದರೂ ಬೇಡವೇ? ಮೃದು ವಚನವನ್ನು ಮರೆತೇ ಬಿಟ್ಟೆಯೋ?"

"ಬಿರಿಸೇನು ಬಂತು? ನೀವು ತಾವೆಂದು ಛಾಂದಸಿಕೆ ಮೆರೆಸಬೇಕೇ?"

"ಅಕ್ಕಟಕ್ಕಟ! ಇಷ್ಟು ಉದಾಸೀನವೆ? ನಾನು ನಿನ್ನ ಕಣ್ಣಿಗೆ ಯಾರಂತೆ ಕಾಣುತ್ತಿದ್ದೇನೋ?"

"ಸಾಕು, ದೇವರ ಹಾಗೆ ಕಾಣುತ್ತಿದ್ದೀರಿ; ಮನಕ್ಕೆ ನೀವೇ ಸಂಜೀವನ!"

"ಆಹಾಹಾಹಾ! ಸಾಕು ಈ ವೈಶಿಕದಾಟ."

ಅವನು ಮುಖವನ್ನು ತಿರುಗಿಸಿಕೊಂಡೇ ಬಿಟ್ಟನು. ಪಾಪ, ಅವಳಿಗೆ ಈಗ ಬಂದಿತು ಪೇಚಾಟ. ಅವನ ಮುಂಗೊರಳನ್ನು ಎಡದ ತೋಳಿಂದ ಅಪ್ಪಿ ತನ್ನ ಕಡೆ ತಿರುಗಿಸಿಕೊಳ್ಳಲು

ಎಷ್ಟೋ ಪ್ರಯತ್ನಿಸುತ್ತಿದ್ದಾಳೆ. "ಪ್ರಾಣದೊಡೆಯಾ, ಎನ್ನ ಸಿರಿಯೆ, ಮಾತನಾಡು" ಎಂದು ಕೇಳಿಕೊಳ್ಳುತ್ತಾಳೆ; ಗಿಳಿಯಂತೆ ನುಡಿದು ಲತೆಯಂತೆ ಅವನನ್ನು ತಬ್ಬಿಕೊಂಡು ತೂಗಾಡುತ್ತಾಳೆ: ಹರಿವ ಹೊಳೆಯಂತೆ ಗಳರವ ತೋರಿ ಕಣ್ಣು ತೆರೆಯುವಂತೆ ಎಷ್ಟೋ ಕೇಳಿಕೊಳ್ಳುತ್ತಾಳೆ.

ಅಬ್ಬಾ ಇವನ ಬಿಂಕವೇ! ಆ ನೀರೆ ಮಾಡುವ ಕಲೆಗೆ ಅಂತಿಂತಹ ಗಂಡರಾಗಿದ್ದರೆ ಅಲ್ಲೇ ಕುಸಿದು ಬೀಳುತ್ತಿದ್ದರೋ ಏನೋ. ಆದರೆ ಇವನು ಬೊಂಬೆಯ ಹಾಗೆ ಸ್ವಲ್ಪ ಮಿಸುಕದೆ ಇದ್ದಾನೆ! ಕೊನೆಗೆ ಅವಳು ದೀನಳಾಗಲೇ ಬೇಕಾಯಿತು.

ತವಕದೊಳವಳು ಕೈಕಿಸಲಾರದವನ ಪಾ।
ದವ ಕಟ್ಟಿಕೊಂಡು ನೀನೆನ್ನ॥
ಸವಿಯೊಳೋಲಾಡಿಸು, ಕಣ್ದೆರೆಯೆಂದು ದೈ।
ನ್ಯವ ತೋರಿ ನುಡಿದಳರ್ತಿಯೊಳು॥

"ಓಹೋ, ಈಗಲೂ ಕಣ್ದೆರೆಯುವುದಿಲ್ಲವೆ? ಇದೋ, ಚಿದಂಬರ ಪುರುಷನ ಮೇಲೆ ಆಣೆ!

"ಎಲಾ ಗಡಸುಗಾತಿ, ಕೊನೆಗೂ ಗದ್ದೇ ಬಿಟ್ಟೆಯೋ!" ಆ ಕೂಡಲೇ ಅವನು ಕಣ್ಣು ತೆರೆದು—

ಕಣ್ದೆರೆದಾಕ್ಷಣ ಬರಸೆಳೆದಾ ತೊಂಡೆ।
ವಣ್ಣುಟಿಯಬಲೆಯನಪ್ಪಿ॥
ನಾಣ್ಮಾಣೆ ಜುಮ್ಮನೆ ಚುಂಬಿಸಿ ಲಲನೆಗೆ।
ಗೇಣ್ಮೇರಿದನು ಸ್ವರ್ಗ ಸುಖವ॥

(ಶಯ್ಯಾಗೃಹಸಂಧಿ)

ಸುಖೀ-ಸಂಸಾರ

ಇಷ್ಟು ಹೇಳದ ಉದ್ದೇಶ, ಸತಿ ಪತಿಯರ ಒಲವು ಅಗತ್ಯವೆಂದೂ, ಅದನ್ನು ಸಾಧಿಸುವದರಲ್ಲಿ ಸ್ತ್ರೀ ಪುರುಷರಿಬ್ಬರ ಹೊಣೆಯೂ ಇದೆಯೆಂದೂ. ಅಂತಹ ಒಲವಿನ ಶಾಂತವಾತಾವರಣದಲ್ಲಿ ಚೆಲುವು ಮತ್ತು ಪವಿತ್ರತೆಗಳೆರಡೂ ಬಾಳುತ್ತವೆಯೆಂದು ಒಪ್ಪುವುದೇ ಆಗಿದೆ. ಹಗಲಿರುಳೂ ಕಾದಾಟಗಳಿಲ್ಲದೆ, ನಿರ್ಮಲ ಹೃದಯಗಳ ಪ್ರತಿಭೆಯನಿಸುವ ಸರಸ—ವಿನೋದಗಳ ಕಲರವಗಳುಳ್ಳ ಮನೆಯಲ್ಲವೇ ಮನೆ? ಆ ಮನೆಯಲ್ಲೇ ಸ್ವರ್ಗದ ನಂದನ? ಮಡದಿಯೇ ಮನೆಯೆಂಬ ಆದರ್ಶಕ್ಕಾಗಿಯೇ ಬ್ರಹ್ಮನು ನಾಲಿಗೆಯಲ್ಲೂ, ವಿಷ್ಣು ಎದೆಯಲ್ಲೂ, ಈಶ್ವರನು ತೊಡೆಯಲ್ಲೂ ಮಡದಿಯನ್ನು ಇರಿಸಿಕೊಂಡು ಅವರನ್ನು ಜಗನ್ಮಾತೆಯರೆಂದು ಕರೆದು. ಜಗತ್ತೆಂಬ ಮನೆಯನ್ನು ನಿರ್ಮಿಸಿರಬಹುದಲ್ಲವೇ?

ಗೊಮ್ಮಟನ ಕಾಲಡಿಯಲ್ಲಿ



೧

ಗೊಮ್ಮಟನ ಕಾಲಿನಡಿಯಲ್ಲಿ
ಕೆತ್ತಿರುವ ಸಾಲುಗಳು:
"ಶ್ರೀ ಚಾವುಂಡರಾಯೆ ಕರವಿಯಲೆ"
"ಶ್ರೀ ಗಂಗರಾಜೆ ಸುತ್ತಾಲೆ ಕರವಿಯಲೆ"
ಮರಾಠಿ-ಗದ್ಯ ದಟ್ಟಡಿಯಿಟ್ಟು
ತೊದಲಿಸಿದ ಪಙ್ತಿಗಳಿವು.
ಜ್ಞಾನೇಶ್ವರನೆಂದ:
"ದೇವ ಕಾನಡೆ ವಿಠ್ಠಲ ಕಾನಡೆ"
ಮರಾಠಿಯಲಿ ಕಾನಡಿಯು ಗೂಢವಾದದ್ದು
ಕನ್ನಡದಿ ಕನ್ನಡಿಯು ಮುಖವ ತೋರಿದ್ದು!
ತುಕಾರಾಮನೆಂದ:
"ಮರಾಠೀನೆ ಕೇಲಾ ಕಾನಡೀ ಭ್ರತಾರ
ಏಕಾಚಾ ತೋ ಬೋಲ ಏಕಾ ಕಳೇನಾ";
ಮರಾಠಿ-ಹೆಂಡತಿಗೆ ಗಂಡ ಕನ್ನಡದವನು
ಒಬ್ಬರೊಬ್ಬರ ಮಾತು ತಿಳಿಯದಲ್ಲ.
ದೇವ-ಪತಿಯಾ ಭಾಷೆ ಭಕ್ತ-ಸತಿತಿಳಿಯದಿರೆ
ಎಂತು ಮುನ್ನಡೆ ಎಂದು ಗೋಳಿಟ್ಟನೇ!
ಇಂದಿಗೂ ಒಬ್ಬರೊಬ್ಬರ ಭಾಷೆ ತಿಳಿವುದಿಲ್ಲ!!

೨

ನಿರ್ಗುಣ, ನಿರಾಕಾರ ಭಗವಂತನ ಪಡೆವಲ್ಲಿ
ಸಗುಣ, ಸಾಕಾರ ಪೂಜೆಯುದೆ ಸೋಪಾನವು.
ಮೂರ್ತಿಪೂಜೆಯ ಧಿಕ್ಕರಿಸಿದ ಬುದ್ಧನನ್ನೇ
ಬೌದ್ಧರು ಮೂರ್ತಿಸಿ ವಿಹಾರಗಳ ಕಡೆದರು.
ಮಹಾಯಾನ-ಹೀನಯಾನ ಬಿಸಿಲೊಡೆದವು.
ಮೂರ್ತಿ ಪೂಜಿಸದ ಕ್ರಿಸ್ತರಿಗೆ, ಶಿಲುಬೆಯ ಗುರುತು ಬೇಕು;
ಭಂಗಿಸಿದ ಮಹಮ್ಮದೀಯರಿಗೆ, ದೇವರ 'ಕೈ' ಬೇಕು;
ಸಂಸಾರಸಾಗರದಿ ಈಸಬಹುದಾದರೂ
ಹುಲಿಬೆಂಡು ಬೇಕು
ಕುಂಬಳಕಾಯಿ ಬೇಕು
ಬೆಂಡು—ಬರಡಲ್ಲ
ಕುಂಬಳ-ಟೊಳ್ಳಲ್ಲ
ಇದ್ದರೂ-ಪರವಾಯಿಲ್ಲ!
ಬ್ರಹ್ಮನ ಅಂಡ ಕೂಡ!
ಎರಡು ಹೋಳಾಗಿಹುದು
ಮೇಲಿನದು ಅಂಬರ
ಕೆಳಗಿನದು ಸೃಷ್ಟಿ
ನಡುವಿನದು ಟೊಳ್ಳು, ಟೊಳ್ಳು, ನಿರ್ವಯಲು!!

೩

ಪ್ರಥಮ ತೀರ್ಥಂಕರನ ಮಗ ನೀನು ಬಾಹುಬಲಿ
ನಿನ್ನಣ್ಣ ಭರತೇಶ ಚಕ್ರವರ್ತಿ
ಭುಜಬಲದಿ ಅಣ್ಣನನು ನೀನು ಸೋಲಿಸಿದೆಯೋ?
ಮಾತಿನಲಿ ಭರತೇಶ ನಿನ್ನ ಸೋಲಿಸಿದನೋ?
ಕತೆಯು ಏನೇ ಇರಲಿ,
ನೀ ವಿರಕ್ತನು ಆದಿ
ಘೋರ ತಪವನು ಗೈದಿ
ಮನದ ಬತ್ತಲೆಗೆ ಬೆಳಕು ಹೊದಿಸಿದ್ದಿ
ತನುವಿನ ಬತ್ತಲೆಗೆ ದಿಕ್ಕನ್ನೇ ತೊಡಿಸಿದ್ದಿ
'ಬೇಕು'-ಎಂಬ ಪರ್ವತದಾಸೆಗಿಂತ
'ಬೇಡ'-ಎಂಬ ಅಣುವಿನಾಸೆಯೆ ಮೇಲು
ಅದರ ಅದ್ಭುತ ಶಕ್ತಿ ತೋರಿಸಿದ್ದಿ.
ನಿರ್ವಿಕಾರ ನಿರ್ವೇದ ನಿನ್ನ ಸ್ಮಾರಕ-ಶಿಲ್ಪ
ನಿನ್ನೆದುರು ನಿಂತಾಗ ನಾವೆಂಥ ಅಲ್ಪ!
ನಿನ್ನಂತೆ ಬತ್ತಲೆ ಇರುವ
ಧೈರ್ಯವಿದೆಯೋ ನಮಗೆ?
ದೇಹ-ಬತ್ತಲೆ ಬೇಡ
ಮನದ ಬತ್ತಲೆ ಇಹುದೆ?
ಪಂಡೋರನ ಡಬ್ಬಿಯಂತೆ
ಮಿಡಾಸ ದೊರೆಯ ವರಗಳಂತೆ
ನಮ್ಮ ನಿತ್ಯ ಜೀವನ
ಆಸೆಯಲ್ಲಿ ಹೇಸಿಯಾಗಿ
ಮುಳುಗಿ ಎದ್ದು, ಮತ್ತೆ ಮುಳುಗಿ
ಬಾಳುತಿಹುದು, ಜೀವಿಸಿಹುದು
ಹೆಸರಿಗೆ,—
ಸಾಯುತಿಹುದು, ಸವೆಯುತಿಹುದು
ಉಸಿರಿಗೆ.

—ಜಿ. ವಿ. ಕುಲಕರ್ಣಿ.

ಸಾಮಾಜಿಕ ಕಾದಂಬರಿ

ಬುದ್ಧಿಮಾನ

ನವಗಿರಿನಂದ



೧

ಈಜಲು ಬಾರದವನನ್ನು ನೀರಿಗೆ ದೂಡುವವರಿದ್ದಾರೆಯೇ? ಅದರಲ್ಲಿಯೂ ಹತ್ತು ತಿಂಗಳು ಹೊತ್ತು ಹೆತ್ತು ಸಾಕಿ ಸಲಹಿದ ತಾಯಿಯೇ ಮಗನನ್ನು ದೂಡುವುದೆಂದರೆ ಹೇಗಿರಬೇಡ? ಹೀಗೂ ನಡೆಯುವುದುಂಟೆ?

ಯಾಕಿಲ್ಲ? ಬಡತನವು ಮಾಡಿಸುವ ಘೋರ ಕಾರ್ಯಗಳು ಇದಕ್ಕಿಂತಲೂ ದಾರುಣವನ್ನಿ. ಹಾಗಿರುವಾಗ ತಿಮ್ಮನನ್ನು, ಕೇವಲ ಹನ್ನೊಂದು ವಯಸ್ಸಿನ ಹುಡುಗನಾಗಿರುವಾಗಲೇ ತಾಯಿ, ತನ್ನ ಪುತ್ರವಾತ್ಸಲ್ಯವನ್ನೆಲ್ಲಾ ಹತ್ತೊತ್ತಿಕೊಂಡು, ಈಜು ಬಾರದವನನ್ನು ನೀರಿಗೆ ಬಿಟ್ಟ ಹಾಗೆಯೇ ಈ ಪ್ರಪಂಚದಲ್ಲಿ ತೇಲಬಿಟ್ಟಳೆಂದರೆ ಏನೂ ಆಶ್ಚರ್ಯಪಡಬೇಕಾಗಿಲ್ಲ.

ಹಾಗೆ ದಿಕ್ಕಿಲ್ಲದ ಸಮುದ್ರದಲ್ಲೇನೂ ಬಿಟ್ಟಿಲ್ಲ; ಅವನ ಅಣ್ಣ ಶ್ರೀಮದ್ರಾಮಾಯಣನ ಆಧಾರದ ಒಂದು ನಂಬುಗೆಯ ಮೇಲೆಯೇ ಬಿಟ್ಟಿದ್ದಳು— ಸಾಧಿಸಿದರೆ ತಳ ಸಿಕ್ಕುವ ಈ ಜೀವನ ಪ್ರಪಂಚದಲ್ಲಿ.

ತಂದೆ ಸತ್ತುಹೋಗಿ ಇನ್ನೂ ವರ್ಷ ಪೂರ್ತಿಯಾಗಿಲ್ಲ. ತಿಮ್ಮನ ಅರ್ಧಂಗೆಟ್ಟ ಮೂರನೇ ತರಗತಿಯೂ ಅಲ್ಲಿಗೇ ಅವನ ಕೈಬಿಟ್ಟಿತ್ತು. ಅಷ್ಟರೊಳಗೇ ಬಡತನದ ಭೂತವು ತನ್ನ ಭೀಕರ ಬಕನ ಬಾಯನ್ನು ಆ ಎಂದು ತೆರೆದುಕೊಂಡು ಜಲಜಮ್ಮನನ್ನು ನುಂಗಬಂದಿತ್ತು. ಹರಕು ಮುರುಕಾದ ಮನೆ; ಅದರ ದುರಸ್ತಿಗೆ ದುಡ್ಡು ಬೇಕು. ಇರುವ ಮೂಲವನ್ನು ಕೂಡಾ ಕಬಳಿಸಲು ಸಿದ್ಧವಾಗಿರುವ ಸಾಲ; ಏರಿ ಬರುವ ನೆರೆಯಂತಹ ಅದರ ಬಡ್ಡಿ. ಇವೆರಡೇ ಸಾಕಾದುವು ಅಬಲೆ ಜಲಜಮ್ಮನನ್ನು ಧೃತಿಗೆಡಿಸಲು. ಮೊದಲೇ ಗಂಡ ಸತ್ತ ದುಃಖದಿಂದ ಕೈಕಾಲು ಗೆಟ್ಟ ಹೆಂಗುಸು. ನಾಲ್ಕು ಮಕ್ಕಳನ್ನು ಮಣೆ



ಯಲ್ಲಿಟ್ಟುಕೊಂಡು ಪೋಷಣೆ ಮಾಡುವುದು ಹೇಗೆ? ಇರುವ ಕೊಂಪೆಯೂ ಸಾಲದವರ ಪಾಲಿಗೆ ಹೋಗಿಬಿಟ್ಟರೆ ತಾನು ಸಾಕ್ಷಾತ್ ಭಿಕ್ಷುಕಳಾಗಲೇಬೇಕು. ಭಿಕ್ಷುಕರಿಗಾದರೂ ಬೀದಿಯಿದೆ, ಮಂದಡಿಗಳಿವೆ, ಛತ್ರವಿದೆ, ಚಾವಡಿಯಿದೆ; ಜಲಜಮ್ಮನಿಗೆ ಅದಾವುದೂ ಸಿಗಲಾರದು. ಏಕೆಂದರೆ ಅವಳು ಮರ್ಯಾದೆಯಿಂದ ಬಾಳಿದವಳು. ಪ್ರಸಿದ್ಧರಾದ ನಿಲಂಬೂರು ಶ್ಯಾನುಭೋಗರ ಮಗಳು. ಕಟ್ಟೀಟಿಟ್ಟ ಮನೆತನಕ್ಕೆ ಸೇರಿದವಳು. ಅಂತಹಳು ಏನೋ ಕಾಲಗತಿಯಿಂದ ಭಿಕ್ಷುಕಳಾದರೂ, ಗೌರವದಿಂದಿರುವ ಆ ಮನೆತನಗಳ ಇತರರಿಗೆ ಕಳಂಕ ತರುವಂತೆ ಬೀದಿಬೀದಿ ಬೇಡುತ್ತಾ ತಿರುಗಾಡುವವಳು ಜಲಜಮ್ಮನಲ್ಲ. ಅಸಲು ಯಾರನ್ನೂ ಒಂದಾಣೆ ಕೇಳಿ ಗೊತ್ತಿಲ್ಲದವಳು.

ಸಾಲ ಕೊಟ್ಟದ್ದ ಶ್ರೀಮಂತರಾದ ಊರ ಪ್ರಮುಖರಿಬ್ಬರು ಹನ್ನೆರಡರ ಬಡ್ಡಿ-ಬಡ್ಡಿಗೆ ಬಡ್ಡಿಯಾಗಿ ತುಂಬಿಬಂದ ಸೆರೆಯಲ್ಲಿ ಸ್ವಲ್ಪವಾದರೂ ಬಿಟ್ಟುಕೊಡುವ ಹೊಲಬು ತೋರಿಸಲಿಲ್ಲ.

"ಪಾಪ, ಜಲಜಮ್ಮ. ನೀನು ಈ ಸಾಲವನ್ನೆಲ್ಲಾ ಹೇಗೆ ತೀರಿಸಬಲ್ಲೆ? ಏನು ಸಂಪಾದನೆಯು ಆಧಾರವಿದೆ? ಇರುವ ಸಣ್ಣ ಆಸ್ತಿಯನ್ನೆ ಬಿಟ್ಟುಕೊಟ್ಟು ಬಿಡುವದು ಒಳ್ಳೆಯದಲ್ಲವೆ? ಮುಂದೆ ಮಕ್ಕಳ ಕಾಲಕ್ಕೆ ಬೇಕಾದರೆ ಸಂಪಾದಿಸಿಕೊಂಡಾವು. ಯೋಚನೆ ಮಾಡು" ಎಂದು ಸಲಹೆ ಹೇಳಿದರವರು.

ಏನು ಮಾಡಬೇಕೆಂದು ಜಲಜಮ್ಮನಿಗೆ ಗೊತ್ತಾಗಲಿಲ್ಲ. ಶ್ರೀಮುದ್ರಾಮಾಯಣನ ಹತ್ತಿರ ಆಲೋಚನೆ ಕೇಳಿದಳು. ಅವನು ತಾನೇ ತೀರಾ ಹತ್ತಿರದ ಆಪದ್ಬಾಂಧವ? ಅವನೆಂದ: "ನಿನ್ನ ನಗನಟ್ಟುಗಳನ್ನೆಲ್ಲಾ ಮಾರಿ ಬಡ್ಡಿ ತೀರಿಸಿಬಿಡುವ. ದೂರದಲ್ಲಿರುವ ಕುಮೇರಿ (ಮುಳಿಹುಲ್ಲು ಬೆಳೆಯುವ ಸ್ಥಳ)ಯನ್ನು ಮಾರಿ ಬಿಡು. ಆ ತುಂಡನ್ನು ಇಟ್ಟುಕೊಂಡು ನಿನಗೆ ಯಾವ ಪ್ರಯೋಜನವೂ ಇಲ್ಲ. ಅದರಲ್ಲಿ ಸಿಕ್ಕುವ ಮಾವಿನಕಾಯಿ ಮುಳಿಹುಲ್ಲು ಎಲ್ಲ ಯಾರು ಯಾರೋ ಕದ್ದುಕೊಂಡು ಹೋಗುವುದು ತಾನೆ? ಆ ಮೇಲೆ ತಿಮ್ಮನನ್ನು ನನ್ನ ಜತೆಯಲ್ಲಿ ಕಳಿಸಿಕೊಡು. ಅವನನ್ನು ಕೆಲಸಕ್ಕೆ ಇಟ್ಟುಕೊಳ್ಳುವುದಾಗಿ ಜಾಂಬಳೆ ಅರಸುಗಳು ಕಾಗದ ಬರೆಸಿದ್ದಾರೆ. ಸುಮ್ಮನೆ ಕಲಿತು ಏನು ಉದ್ಧಾರವಾಗುತ್ತದೆ ಹೇಳು? ಅರಸುಗಳು ಕೇಳಿದರೆ ಒಂದು ವರ್ಷದ ಸಂಬಳ ಮುಂದಾಗಿಯೂ ಕೊಟ್ಟಾರು. ಸಾಲ ಬಡ್ಡಿಗಳಿಗೆ ಇದಿಷ್ಟು ಸಾಕು. ಹೀಗೆ ಹಿರೀರ ಆಸ್ತಿಯನ್ನು ಉಳಿಸಿಕೊಂಡು ಬಿಟ್ಟರೆ ಗಂಜಿಯೋ ತಿಳಿ(ಅಂಬಲಿ)ಯೋ ನೆಮ್ಮದಿಯಿಂದ ಕುಡಿದು ಕೊಂಡಿರಬಹುದು."

ಅವನು ಹೇಳಿದ ಯೋಚನೆ ಈ ರೀತಿಯಾಗಿ ಮುಂದುವರಿದುದನ್ನು ನೋಡಿ ಜಲಜಮ್ಮ ಚಿಂತೆಗೀಡಾದಳು. "ಆದರೆ ಮುದ್ರಾಮಾ, ನನಗೇನೋ ಇದು ಸರಿಯಲ್ಲಾ ಅನಿಸುತ್ತಪ್ಪ. ತಿಮ್ಮನನ್ನು ಶಾಲೆ ಬಿಡಿಸಿದರೆ ಪರಲೋಕದಲ್ಲಿರುವವರಿಗೆ ಏನು ಕಾಣುತ್ತೊ? ಅವರಿರುವಾಗ ತಿಮ್ಮನಿಗೆ ಚೆನ್ನಾಗಿ ಕಲಿಸಬೇಕು; ಅವನಿಗೆ ಚಿತ್ರದಲ್ಲಿಯೂ, ಕವಿತಾ ಮಾಡೋದರಲ್ಲಿಯೂ ಬಹಳ ತಲೆಯಿದೆ. ಅದರಲ್ಲೆಲ್ಲಾ ಗಟ್ಟಿಗನಾಗುವ ಹಾಗೆ ಅವನನ್ನು ತಯಾರು ಮಾಡಬೇಕು ಅಂತ ಅವರು ಹೇಳುತ್ತಾ ಇದ್ದರು," ಎಂದು ವಿಚಾರ ವ್ಯಕ್ತ ಪಡಿಸಿದಳು.

"ಅಂಥ ಭ್ರಮೆಯನ್ನೆಲ್ಲ ಬಿಟ್ಟುಬಿಡು ಚಿಕ್ಕಮ್ಮ. ಹಾಗೆ ಅವನಿಗೆ ತಲೆಯಿದ್ದರೆ ಅರಸುಗಳ ಹತ್ತಿರ ಹೇಳಿ ತಕ್ಕ ಏರ್ಪಾಡು ಮಾಡುವ. ಅವರಿಗೆ ಸಂತೋಷ ಆಗುವ ಹಾಗೆ ಇವನು ಇದ್ದುಬಿಟ್ಟ ಅಂದರೆ, ಇವನಿಗಾಗಿ ಅವರು ಏನೂ ಮಾಡಿಯಾರು."

"ಆದರೆ ಇನ್ನೂ ಹನ್ನೊಂದು ವರ್ಷದ ಹುಡುಗ. ಕೋಮಣ ಕೂಡಾ ಸರಿಯಾಗಿ ಕಟ್ಟಿಕೊಳ್ಳಲಿಕ್ಕೆ ಗೊತ್ತಿಲ್ಲ. ಏನು ತಾನೇ ಕೆಲಸ ಮಾಡಿಯಾನು? ಹೇಗೆ ಮಾಡಿಯಾನು? ಏನಾದೀತು ಇವನಿಂದ?"

"ಅದೆಲ್ಲಾ ನಾನು ನೋಡಿಕೊಳ್ಳುತ್ತೇನಲ್ಲ. ಅವರ ಮಗನ ಹಾಗೆ ನೋಡಿಕೊಳ್ಳುತ್ತಾರೆ ಸಾಕೋ? ನೀನು ಧೈರ್ಯವಾಗಿ ಕಳಿಸಿಕೊಡು ಚಿಕ್ಕಮ್ಮ. ರೈಲು ಖರ್ಚು ನಾನೇ ಹಾಕಿಕೊಳ್ಳುತ್ತೇನೆ."

ಆಗಲೇ ದಫ್ತರ ಸಂಚಿ ಹಿಡಿದುಕೊಂಡು ತಿಮ್ಮ ಓಡುತ್ತೋಡುತ್ತ ಶಾಲೆಯಿಂದ ಬಂದ. ಅವನು ತೋಟದಲ್ಲಿ ಬರುವಾಗ ಶ್ರೀಮುದ್ರಾಮಣ್ಣ ಮನೆಯಲ್ಲಿರುವುದನ್ನು ನೋಡಿ, ತನ್ನ ಸುದ್ದಿ ಏನು ಮಾತಾಡುತ್ತಾನೋ ಎಂಬ ಕುತೂಹಲದಿಂದ ಹಾಗೆ ಓಡಿ ಬಂದ. ಅವನನ್ನು ನೋಡಿದ ಕೂಡಲೆ ಶ್ರೀಮುದ್ರಾಮಾಯಣನು:- "ಲೋ, ಬರ್ತಿಯೇನೋ ನನ್ನೊಟ್ಟಿಗೆ ಅರಸುಗಳ ಮನೆಗೆ? ಹೋಗೋಣವ?" ಎಂದು ಕೇಳಿದ.

ತಿಮ್ಮ ಆಶ್ಚರ್ಯದಿಂದ ಓಳಿಓಳಿ ದೊಡ್ಡಣ್ಣನ ಮುಖ ನೋಡಿದ. ತನ್ನನ್ನು ಅಣ್ಣನ ಜತೆಯಲ್ಲಿ ಪರವೂರಿಗೆ ಕಳುಹಿಸುವ ಮಾತು ಈ ಮೊದಲೇ ಬಂದಿತ್ತು. ಅದೇನೋ ತಮಾಷೆಯೆಂದುಕೊಂಡಿದ್ದ. ಅಣ್ಣನೆಲ್ಲಿ, ತಾನೆಲ್ಲಿ? ಅವನ ಸಂಗೀತ ವಿದ್ವತ್ತೆಲ್ಲಿ? ತನ್ನ ದಡ್ಡತನವೆಲ್ಲಿ? ಅರಸುಗಳ ಮನೆಯೆಂಬುದು ಅಣ್ಣನಿಗೆ ಸರ್ವಸಾಧಾರಣದ ಮಾತು. ತಾನು ಓದಿದ ಕಥೆಗಳಲ್ಲಿ ಅರಸುಗಳ ಅರಮನೆಗಳನ್ನು ಊಹಿಸಿಕೊಂಡಿದ್ದಾನೆ. ಅಂತಹ ಒಂದು ಅರಮನೆಗೆ ಭುಕು ಭುಕು ರೈಲಿನಲ್ಲಿ ಹತ್ತಿಕೊಂಡು ಹೋಗಬೇಕಂತೆ. ಅಂತಹ ದೊಡ್ಡಸ್ತಿಕೆಗೆ ಹೋಗುವ

ಭಾಗ್ಯ ತನಗೆ ಈ ಜನ್ಮದಲ್ಲಿ ಬರುವುದುಂಟೆ? ಶ್ರೀಮುದ್ರಾಮಣ್ಣ ಊರಿಗೆ ಬಂದಾಗ ರೈಲನ್ನು ಕುರಿತು ಏನೇನೋ ಹೇಳುತ್ತಾನೆ. ಅದರೊಳಗೆ ಕಾಲು ಚಾಚಿ ಸ್ವಸ್ಥ ಮಲಗಿ ಬಿಡುತ್ತಾನಂತೆ. ಗಡಗಡಾ ಭುಕುಭುಕೂ ಸೋಸೋ ಶಬ್ದಗಳೆಲ್ಲ ಭಾರಿ ದೊಡ್ಡ ಸಂಗೀತ ಕಛೇರಿಯ ಹಾಗೆ ಕೇಳಿಸುತ್ತಾ, ನಿದ್ದೆ ಬಂದ ಮೇಲೆ ಕೂಡಾ ಕೇಳಿಸಿಕೊಂಡೇ ಇರುತ್ತದಂತೆ. ಕಿಟಕಿಯಿಂದ ನೋಡಿದಾಗ ಮರಗಳೂ ಮನೆಗಳೂ ಹಿಂದಕ್ಕೆ ಓಡುತ್ತವಂತೆ. ಆಕಾಶವೂ ಬೆಟ್ಟಗಳೂ ಸುತ್ತಿ ಸುತ್ತಿ ಬರುತ್ತವಂತೆ. ಸಮೀಪದಲ್ಲಿದ್ದದ್ದು ಜೋರು ಜೋರಾಗಿ ಓಡಿದರೆ ದೂರದಲ್ಲಿದ್ದದ್ದೆಲ್ಲ ಮೆಲ್ಲನೆ ಪ್ರದಕ್ಷಿಣೆಯಾಗಿ ಓಡುತ್ತವಂತೆ! ಇಂತಹ ವರ್ಣನೆಗಳನ್ನೆಲ್ಲ ಕೇಳಿ ರೈಲನ್ನು ಕುರಿತು ಹೇಗೇ ಹೇಗೋ ಚಿತ್ರಿಸಿಕೊಂಡಿದ್ದನು. ಅಂತಹ ರೈಲು ನಿಜವಾಗಿಯು ತನ್ನನ್ನು ಏರಿಸಿಕೊಳ್ಳುತ್ತದೆಯೆ?

"ಏನು ನೋಡುತ್ತಿಯೇ ಪಿಳಿಪಿಳಿ? ಬರುತ್ತೀಯಾ ಅಂದೆ" ಎಂದ ದೊಡ್ಡಣ್ಣ.

"ಸುಮ್ಮನೆ ಹೇಳ್ತೀರಿ" ಎಂದು ತಿಮ್ಮು ತಾಯಿಯ ಮುಖ ನೋಡಿದ.

"ಹೌದು ಮುದ್ದೋ ಅಣ್ಣ ನೀನು ಕಲ್ತದ್ದು ಸಾಕು ಅಂತ ಅಭಿಪ್ರಾಯ ಪಡ್ತಾನೆ. ಸಂಪಾದನೆಗೆ ಕರಕೊಂಡು ಹೋಗುತ್ತಾನಂತೆ ಅಣ್ಣ. ಹೋಗ್ತೀಯಾ? ಪರಚಾಕರಿ ಮಾಡಲು ಸಾಧ್ಯವೇ ನಿನ್ನಿಂದ?" ಕೇಳಿದಳು ತಾಯಿ.

ತಿಮ್ಮನ ಬಾಯಿಯಿಂದ ಏನೂ ಮಾತು ಹೋಡಲಿಲ್ಲ. ಶಾಲೆ ಬಿಡಬೇಕೆಂಬ ಮಾತನ್ನು ಕೇಳಿದ ಕೂಡಲೇ ಅವನಿಗಾದದ್ದು ಒಂದು ಬಗೆಯ ಸಂತೋಷ. ಶಾಲೆಯಲ್ಲಿ ಆ ಲೆಕ್ಕ ಪಾಠ ಅವನಿಗೆಷ್ಟು ಕಠಿನ! ಅದಕ್ಕಾಗಿ ಮಾಸ್ತರ ಕೈಯಿಂದ ಅವನು ತಿಂದ ಪೆಟ್ಟೆಷ್ಟು. ಅನುಭವಿಸಿದ ಅವಮಾನವೆಷ್ಟು! ಈ ನರಕ ಪಾಠವನ್ನು ಇನ್ನೆಷ್ಟು ಕಾಲ ಅನುಭವಿಸಬೇಕೋ? ಮೇಲೆ ಮೇಲೆ ಪಾಸಾದ ಹಾಗೆ ಇನ್ನಿಷ್ಟು ಕಷ್ಟವಾದ ಲೆಕ್ಕಗಳೇ ಬಂದರೆ ಏನು ಗತಿ! ಅಬ್ಬ! ಈ ಪೀಡೆ ಇನ್ನು ಮೇಲೆ ಇಲ್ಲವೇ ಹಾಗಾದರೆ?

ಹೀಗೆ ತಿಮ್ಮನ ಹೃದಯದಲ್ಲಿ ಮೊದಲು ಒಂದು ಸಂತೋಷದ ಅಲೆಯೆದ್ದಿತು. ಅದರ ಹಿಂದೆಯೇ ದುಃಖದ ಅಲೆಗಳೂ ಎದ್ದುವು. ಆ ಕನ್ನಡ ಪಾಠ, ಡ್ರಾಯಿಂಗ್ ಪಾಠ! ಈ ಎರಡು ವಿಷಯಗಳೆಂದರೆ ಅದೆಷ್ಟು ಉತ್ಸಾಹ! ಲೆಕ್ಕ ಪಾಠದ ಮಹಾ ಸಂಕಟವನ್ನೂ ಮರೆಸಿಬಿಡುವಂತಹ ಬಹು ಸಂತೋಷದ ಪಾಠಗಳವು ಆ ಎರಡು ಪಾಠಗಳಲ್ಲಿ ತಾನೆಷ್ಟು ಮುಂದು! ಮಾಸ್ತರು ಎಷ್ಟು ಮೆಚ್ಚಿಕೊಂಡಿದ್ದಾರೆ! ಹೇಗೆ ಬೆನ್ನು ತಟ್ಟುತ್ತಾರೆ!

ಗೆಳೆಯ ಹುಡುಗರು. ಇನ್ನು ಅವರೊಂದಿಗೆ ಆಟವಾಡುವ ಸಂದರ್ಭವಿಲ್ಲ. ಶಾಲೆಯಲ್ಲಿರುವ ಅರೆ ಘಂಟೆ ಹೊತ್ತಿನಲ್ಲಿ ಲೆಕ್ಕದ ಪೀರಿಯಡು ಒಂದು. ಗಂಟೆ ಬಿಟ್ಟರೆ, ಉಳಿದ ಹೊತ್ತೆಲ್ಲ ಆನಂದದ ಹೊತ್ತುಗಳೇ. ಅದನ್ನೆಲ್ಲ ಬಿಟ್ಟು ಹೋಗಬೇಕೆ? ತಿಮ್ಮನಿಗೆ ಮನಸ್ಸೇ ಬಾರದು. ಏನು ಹೇಳುವುದವನು?

"ಸರಿಸರಿ. ಇವನಿಗೇನು ಗೊತ್ತಿದೆ ಮಣ್ಣು? ಒಮ್ಮೆ ನನ್ನೊಟ್ಟಿಗೆ ಬಂದರೆ ಮತ್ತೆ ಇವನಿಗೇ ತಿಳಿಯುತ್ತೆ," ಎಂದ ದೊಡ್ಡಣ್ಣ.

"ಹೋಗು. ಕೈಕಾಲು ತೊಳೆದುಕೊಂಡು ಬಾ. ಹಪ್ಪಳ ಸುಟ್ಟಿಟ್ಟಿದ್ದೇನೆ ಒಲೆದಂಡೆಯಲ್ಲಿ. ತಿನ್ನು" ಎಂದಳು ಜಲಜಮ್ಮ.

ತಿಮ್ಮು ಯೋಚಿಸಿಕೊಂಡೇ ಬಾವಿಕಟ್ಟೆಗೆ ಹೋಗಿ ಕೈಕಾಲು ತೊಳೆದುಕೊಂಡು ಒಳಗಿನಿಂದ ಹಪ್ಪಳವನ್ನೆತ್ತಿಕೊಂಡು ಬಂದ. ಜಗಲಿಯ ಮೂಲೆಯಲ್ಲಿ ಕುಳಿತು ತಿನ್ನತೊಡಗಿದ. ಆಗ ಜಲಜಮ್ಮ ಅವನ ಪಕ್ಕದಲ್ಲಿ ಕುಳಿತು, ಅವನ ತಲೆಕೂದಲನ್ನು ಸವರುತ್ತ, "ಹೋಗುತ್ತಿಯೇನೊ? ಕೆಲಸ ಮಾಡಲಿಕ್ಕೆ ನಿನ್ನಿಂದಾದೀತೇನೋ?" ಎಂದು ಕೇಳಿದಳು.

"ಎಂಥಾ ಕೆಲಸ ಅಮ್ಮ?"

"ಏನೋ, ನಿನ್ನಿಂದಾಗುವ ಕೆಲಸವೇ ಹೇಳ್ತಾರು. ಮಕ್ಕಳು ಮರಿ ಇದ್ದವರು ನಿನ್ನ ಶಕ್ತಿಗೆ ಮೀರಿದ ಕೆಲಸ ಹೇಳಲಿಕ್ಕಿಲ್ಲಪ್ಪ. ನೀರು ತಾ, ಎಂಜಲು ತೆಗಿ, ಅಚೆಗಿಡು, ಈಚೆಗೆ ತಾ ಇಂಥಾದ್ದೇ. ನಮ್ಮನೇಲಿ ಮಾಡೋದಿಲ್ಲವೆ? ಮೊನ್ನೆ ನೀನು ಮೂಡ್ಲಾಕಾಡಿಂದ ಕಟ್ಟಿಗೆ ಹೊರೆ ಹೊತ್ತು ತಂದೆಯಲ್ಲಾ? ಹಾಗೇ ಸ್ವಲ್ಪ ಕಷ್ಟಪಟ್ಟು ಕೆಲ್ಸ ಮಾಡಬೇಕಾದೀತು. ಕೆಲಸ ಮಾಡಿದರೆ ಮೈ ಸವೆಯೋದಿಲ್ಲ, ಬದಲಾಗಿ ಬಲ ಬರುತ್ತೆ. ಒಳ್ಳೇ ಹಸಿವೆಯಾಗುತ್ತೆ. ಅದಕ್ಕೆ ತಕ್ಕ ಹಾಗೆ ಅಲ್ಲಿ ಉಣ್ಣಲಿಕ್ಕೂ ತಿನ್ನಲಿಕ್ಕೂ ಇರುತ್ತೆ. ಇಲ್ಲಿ ಏನುಂಟು ಮಗೂ ತಿನ್ನಲಿಕ್ಕೆ? ಈ ಒಣಕಲು ಗೆಣಸಿನ ಹಪ್ಪಳ...ಅಯ್ಯೋ ದೇವ್ರೆ! ತೆಂಗಿನೆಣ್ಣೆ ಹಚ್ಚಿಲ್ಲವಲ್ಲೋ ಈ ಹಪ್ಪಳಕ್ಕೆ! ಹಾಗೇ ತಿನ್ತಾ ಇದ್ಯಲ್ಲಾ? ತಡಿತಡಿ"

ತಾಯಿ ಬೇಗ ಬೇಗನೆ ಎಣ್ಣೆ ಕಂಚಿ ತಂದು ಅವನು ತಿನ್ನುತ್ತಿರುವ ಹಪ್ಪಳಕ್ಕೆ ಎಣ್ಣೆ ಹಚ್ಚಿ ಕೊಟ್ಟಳು. ಎಣ್ಣೆ ಹಚ್ಚದ ಹಪ್ಪಳ ಮುಟ್ಟುವವನಲ್ಲ ತಿಮ್ಮನು. ಈ ದಿನ ಪರಧ್ಯಾನದಲ್ಲಿ ಮುಳುಗಿ ಹೋಗಿದ್ದಾನೆ ಪಾಪ

ಅಂತೂ ತಿಮ್ಮು ಜಾಂಬಳೆ ಅರಸುಗಳಲ್ಲಿಗೆ ಹೋಗುವುದು ನಿಶ್ಚಯವೇ ಆಯಿತು. ರಜೆ ಮುಗಿದು ದೊಡ್ಡಣ್ಣ ಹೊರಟು ಹೋಗುವಾಗ ತಿಮ್ಮನೂ ಅವನೊಂದಿಗೆ ಹೋಗುವನು. ಹೊರಡುವ ದಿನ ಸಮೀಪಿಸುತ್ತಾ ಇದೆ. ಜಲಜಮ್ಮ, ತೋಟದಲ್ಲಿ ಇನ್ನೂ ಸ್ವಲ್ಪ ಬೆಳೆಯಲೆಂದು ಬಿಟ್ಟ ಗುಳ್ಳಗಳನ್ನು ಕೊಯ್ದು ತಂದು ತಿಮ್ಮನಿಗೆ ಪ್ರೀತಿಯ ಪಲ್ಯವನ್ನು ಮಾಡಿದಳು. ಇನ್ನೊಂದು ದಿನ ತಾಯಿ ಸುಖಿನುಂಡೆ ಮಾಡಿ ತಿನಿಸಿದಳು. ಅವನು ಪೇಟೆಗೆ ಹೋಗುತ್ತಾನೆಂದು ಕೇಳಿ ಅವನ ಮಾವ ಬಂದು "ಎರಡು ದಿನ ನಮ್ಮಲ್ಲಿರಲಿ" ಎಂದು ಕರೆದುಕೊಂಡು ಹೋದರು. ಅಲ್ಲಿ ಒಂದು ದಿನ ಕಡುಬುಕಾಯಿ ಹಾಲು, ಇನ್ನೊಂದು ದಿನ ಪತ್ರಡೆಯೂ ಮಾಡಿದರಂತೆ. ಅಲ್ಲಿಂದ ಪಣಂಬೂರು ದೊಡ್ಡಮ್ಮನ ಮನೆಯಲ್ಲಿ ಪರವೂರಿಗೆ ಹೊರಡಲು ಸಿದ್ಧನಾದ ತಿಮ್ಮನಿಗೆ ಬೇಳೆಮಣಿ ಪರಮಾನ್ನ ಮಾಡಿ ಹಾಕಿದರಂತೆ. ಹೋಡುವ ಮುಂಚಿನ ದಿನ ಮಧ್ಯಾಹ್ನ ಮುದ್ರಾಮಣ್ಣನ ಮನೆಯಲ್ಲಿಯೇ ತಿಮ್ಮನಿಗ ಊಟ. ಅದೇ ದಿನ ರಾತ್ರಿ ಜಲಜಮ್ಮ ಪತ್ರಡೆಕಾಯಿ ಹುಳಿ ಮಾಡಿ ಮುದ್ರಾಮನನ್ನೇ ತನ್ನ ಮನೆಗೆ ಕರೆದಳು. ಎರಡು ಮನೆಯ ಭಕ್ಷ್ಯಗಳೂ ಪರಸ್ಪರ ವಿನಿಮಯವಾದುವು. ಇಬ್ಬರೂ ಪತ್ರಡೆ ಕಾಯಿ ಹುಳಿಯನ್ನೇ ಹೆಚ್ಚಾಗಿ ತಿಂದರು. ಆ ದಿನ ಜಲಜಮ್ಮ ನೆರೆಮನೆಯಿಂದ ಶ್ಯಾವಿಗೆಮಣೆ ತರಿಸಿ ಅದು ಬೇರೆ ಮಾಡಿದ್ದಳು. ಶ್ಯಾವಿಗೆ ಮರುದಿನಕ್ಕೂ ರುಚಿಯಾಗಿರುವುದರಿಂದ



ಮುದ್ರಾಮಣ್ಣ ಅದನ್ನು ರೈಲು ಪ್ರಯಾಣಕ್ಕೆ ಕಟ್ಟಿಸಿಕೊಂಡ.

ಹತ್ತು ಮೈಲು ಪ್ರಯಾಣ ಮಾಡಿ ಮಂಗಳೂರು ರೈಲು ಸ್ಟೇಶನ್ನನ್ನು ತಕ್ಕ ಸಮಯಕ್ಕೆ ಮುಟ್ಟಲು ಮುಂಜಾನೆ ಮೂರು ಗಂಟೆಗೇ ಮನೆಯಿಂದ ಹೊರಡಬೇಕು. ತಿಮ್ಮ ತನ್ನ ಬಟ್ಟೆಯ ಪುಟ್ಟ ಸೂಟ್‌ಕೇಸನ್ನು ಎತ್ತಿಕೊಂಡು ದೇವರಿಗೆ ನಮಸ್ಕಾರ ಮಾಡಿ ತಾಯಿಯ ಪಾದಕ್ಕೆ ಹಣೆ ಹಚ್ಚಿ ಎದ್ದ.

“ದೊಡ್ಡವರಿಗಾಗುವ ಹಾಗೆ ಇರು. ಮನಸ್ಸು ಕೊಟ್ಟು ಕೆಲಸ ಮಾಡು. ದೇವರು ಮೈ ಕೈ ಗಟ್ಟಿಯಾಗಿರಿಸಲಿ” ಎಂದು ಗದ್ಗದ ಸ್ವರದಿಂದ ಹೇಳುತ್ತ ಆಶೀರ್ವದಿಸಿದಳು ಜಲಜಮ್ಮ. ಇನ್ನೂ ಆಟದ ಬುದ್ಧಿಯಲ್ಲಿರುವ ಆ ಹುಡುಗನನ್ನು ಈ ಪ್ರಪಂಚದ ಮಧ್ಯಕ್ಕೆ ಧಾರೆಯೆರೆದು ಸಮರ್ಪಣೆ ಮಾಡಿಬಿಟ್ಟಳವಳು. ತನ್ನೊಂದಿಗಿದ್ದ ಗಂಜಿ ನೀರು ಕುಡಿದು ಅಕ್ಕಳಿಯಂತೆ ಬೆಳೆಯುವ ಬದಲಿಗೆ ಶ್ರೀಮಂತರ ಮನೆಗೆ ಹೋಗಿ ಪುಷ್ಕಳವಾಗಿ ತಿಂದುಂಡು ಗಟ್ಟಿಮುಟ್ಟಾದಾನು ಮಗ ಎಂಬ ಭ್ರಾಂತಿಯೇ ಮುಗ್ಧ ಜಲಜಮ್ಮನಿಗಿರುವ ಸಮಾಧಾನ. ಬಡತನದ ಭೂತವು ಆ ತಾಯಿಯಿಂದ ಮಾಡಬಾರದ ತ್ಯಾಗವನ್ನು ಮಾಡಿಸಿಬಿಟ್ಟಿತು.

೨

ಕಣ್ಣಿನಿಂದ ಎಂದೂ ನೋಡಿರದ ಆ ರೈಲಿನಲ್ಲಿ ಮೊತ್ತ ಮೊದಲು ಪ್ರಯಾಣ ಮಾಡಿದಾಗ ತಿಮ್ಮನಿಗಾದ ಆನಂದ ಹೇಳಲಳವಲ್ಲ. ದೊಡ್ಡಣ್ಣನಿಗೆ ಅದೇನೂ ವಿಶೇಷವೆನಿಸದಿರುವುದನ್ನು ನೋಡಿ ತಿಮ್ಮನಿಗೆ ಆಶ್ಚರ್ಯವಾಯಿತು. ಕಣ್ಣಿಗೆ ಕಾಣುವ ಅದ್ಭುತ ದೃಶ್ಯಗಳನ್ನೆಲ್ಲಾ ವ್ಯರ್ಥವಾಗಿ ಬಿಟ್ಟು, ಕಾಲು ಚಾಚಿ ರೈಲಿನ ಸೀಟಿನಲ್ಲಿ ನಿದ್ದೆ ಮಾಡಿ ಬಿಟ್ಟಿದ್ದಾನೆ ದೊಡ್ಡಣ್ಣ. ತಿಮ್ಮನಿಗೆ ರೈಲಿನ ಕಿಟಕಿಯಲ್ಲಿ ಹೊರಗೆ ನೋಡಿದಷ್ಟೂ ಸಾಲದು. ಸುಮಾರು ಎಂಟು ಗಂಟೆ ಹೊತ್ತು ದೀರ್ಘವಾದ ಆ ಪ್ರಯಾಣವು ಅವನಿಗೆ ಸ್ವಲ್ಪ ಕೂಡ ಸಾಕಾಗಲಿಲ್ಲ. ರೈಲಿನಿಂದ ಇಳಿದಾಗ ಅವನು ಕಾಲಿಟ್ಟ ಆ ಪ್ರದೇಶವೆಲ್ಲಾ ಹೊಸ ದೇಶ, ಮಲೆಯಾಳ. ಗಂಡಸರ ಹಾಗೆಯೇ ಬಟ್ಟೆ ಹಾಕಿಕೊಂಡಿರುವ ಹೆಂಗುಸರನ್ನು ನೋಡಿ ಅವನಿಗೆ ಹೇಗೆ ಹೇಗೋ ಅನಿಸಿತು.

ದೊಡ್ಡಣ್ಣನೊಂದಿಗೆ ರೈಲಿಳಿದು ಗದ್ದೆ ಹುಣಿಗಳಲ್ಲಿ ನಡೆದು ಹೊಳೆ ದಾಟಿ ತೆಂಗಿನ ಮರಗಳ ತೋಟದ ಮಧ್ಯದಲ್ಲಿರುವ ಅರಮನೆಯೊಳಗೆ ತಿಮ್ಮನ ಪ್ರವೇಶವಾಯಿತು.

ಅರಸುಗಳೆಂದರೆ ಭಾರಿ ಕಿರೀಟ ಗಿರೀಟ ಇಟ್ಟುಕೊಂಡು ಜರತಾರೀ ವೇಷಭೂಷಣಗಳಿಂದ ಸಿಂಹಾಸನದಂತಹ ಎತ್ತರವಾದ ಕುರ್ಚಿಯ ಮೇಲೆ ಠೀವಿಯಿಂದ ತುಂಬಿದ ಗಂಭೀರ ಮುಖಮುದ್ರೆಯಲ್ಲಿ ಇರುತ್ತಾರೆಂದು ತಿಮ್ಮ ಊಹಿಸಿ

ಕೊಂಡಿದ್ದರೆ, ಅರಸುಗಳು ಸಾಮಾನ್ಯರಂತೆ, ತಿಮ್ಮನ ದೊಡ್ಡಪ್ಪನ ಹಾಗೇ ಕಾಣಿಸಿದರು. ಮೀಸೆಯು ಇಲ್ಲ ಮಣ್ಣೂ ಇಲ್ಲ. ನೆರೆತ ಸ್ವಲ್ಪ ತಲೆ ಕೂದಲನ್ನು ಹಣೆಯ ಮುಂದಕ್ಕೆ ಗಂಟು ಹಾಕಿ ಕೊಂಡಿದ್ದಾರೆ. ಬಿಳೀ ತುಂಡರುವ ಉಟ್ಟು ಕೊಂಡು, ಹೆಗಲಲ್ಲೊಂದು ಬೈರಾಸು ನೇತಾಡಿಸಿ ಹೊಟ್ಟೆ ಕಾಣಿಸಿಕೊಂಡು ಜನಿವಾರ ತೀಡಿಕೊಳ್ಳುತ್ತ ನಗುನಗುತ್ತ ತಿಮ್ಮನನ್ನು ಮಾತಾಡಿಸಿದರು.

ಅರಸುಗಳ ಹಾವಭಾವಗಳೆಲ್ಲ ತಿಮ್ಮನಿಗೆ ಹಿಡಿಸಿದುವು. ಅವರು ಬಹಳ ಒಳ್ಳೆಯವರೆನಿಸಿದರು. ಅವರಿಗೆ ಹರಕುಬುರುಕು ಕನ್ನಡ ಗೊತ್ತಿತ್ತು. ಜಾಂಬಳೆ ಎಂಬ ಕನ್ನಡನಾಡಿನ ಅರಸುಗಳು ಅವರು. ಆದರೆ ಅಲ್ಲಿರುವ ಉಳಿದವರಾರಿಗೂ ಕನ್ನಡ ಬಾರದು. ಅರಸುಗಳ ಹೆಂಡತಿ ಮಕ್ಕಳು ಮೊದಲಾದವರೆಲ್ಲಾ ಮಲೆಯಾಳಿಗಳು.

ದೊಡ್ಡಣ್ಣ ಅರಸುಗಳ ಹೆಂಡತಿಯನ್ನು "ಮೂಪಮ್ಮ" ಎಂದು ಕರೆಯುತ್ತಿದ್ದ. ಮೂಪಮ್ಮಯೊಡನೆ ಅರಸುಗಳೊಡನೆ ದೊಡ್ಡಣ್ಣ, ತಿಮ್ಮನ ಕರುಣ ಕಥೆಯನ್ನು ಹೇಳಿದಾಗ, ಸುತ್ತಲೂ ಕೇಳಿಕೊಂಡಿದ್ದ ಅರಸುಗಳ ಕುಟುಂಬ ಪರಿವಾರದವರೆಲ್ಲರಿಗೂ ತಿಮ್ಮನ ಮೇಲೆ ತುಂಬ ಸಹಾನುಭೂತಿಯುಂಟಾಯಿತು. ಆಗ ಅಲ್ಲಿಯೇ ಇದ್ದ ತಿಮ್ಮನು ತನ್ನೊಳಗೇ ಅಸಹ್ಯವಾದ ವೇದನೆಯನ್ನು ಅನುಭವಿಸಿಕೊಂಡನು. ಅಣ್ಣ ಎರಡು ದಿನಗಳ ವರೆಗಷ್ಟೇ ಅಲ್ಲಿರುತ್ತಾನೆ. ಅನಂತರ ಇರುವವರೆಲ್ಲ ಹೊಸಬರು. ಹಾಗೆ ಹುಡುಗನಿಗೆ ಅಪರಿಚಿತತೆಯ ವೇದನೆಯಾಗಬಾರದೆಂದು ಮೂಪಮ್ಮಯೂ ಇತರರೂ ತಿಮ್ಮನನ್ನು ಕರೆದು ಕರೆದು ಮಾತಾಡಿಸಿ ನಗಿಸಲು ಪ್ರಯತ್ನಿಸುತ್ತಿದ್ದರು. ಆದರೂ ಎರಡು ದಿನ ಅಣ್ಣನ ಬೆಂಬಿಡದೆಯೇ ಇದ್ದನವನು. ಅಲ್ಲಿ ಮಾಡಬೇಕಾದ ಕೆಲಸ ಏನು ಹೇಗೆ ಎಂಬುದನ್ನೆಲ್ಲ ಅಣ್ಣನು ಸಾಧ್ಯವಾದಷ್ಟು ಅವನಿಗೆ ತಿಳಿಸಿದ. "ಇದು ನಿಮ್ಮ ಸ್ವಂತ ಮನೆ ಮಾಣೀ. ನೀವು ನನ್ನ ಸ್ವಂತ ಮಗ. ನನ್ನ ಮಗ ಕುಟ್ಟಿಪ್ಪೆಯ ಹಾಗೇ ನೀವೂ ನನ್ನ ಮಗ" ಎಂದಳು ಮೂಪಮ್ಮ, ತಿಮ್ಮನ ಬೆನ್ನು ತಟ್ಟಿ.

ಎರಡು ದಿನಗಳ ಮೇಲೆ ಶ್ರೀಮುದ್ರಾಮಾಯಣ್ಣ ಮುಳಂಪಾಡಿಗೆ ಹೊರಟುಹೋದನು. ಮುದ್ರಾಮಣ್ಣನಿಗೆ ಅಲ್ಲಿಯೇ ಕೆಲಸ. ಮೊದಲು ಅವನು ಅರಸುಗಳ ಮನೆಯಲ್ಲಿಯೇ ಇದ್ದು ಅವರ ಮಗಳಂದಿರನ್ನು ಸಂಗೀತ ವಿದುಷಿಯರನ್ನಾಗಿ ಮಾಡಿದ್ದನು. ಅವರಲ್ಲೊಬ್ಬಳ ಸಂಗೀತ ಮಾಧುರ್ಯಕ್ಕೆ ಮಾರು ಹೋದ ಎಡಂಗಳೂರು ಚಿರುತಂಬಿರಾನನು ಅವಳನ್ನು ವಿವಾಹ ಮಾಡಿಕೊಂಡನು. ಈ ವಿವಾಹಕ್ಕೆ ಕಾರಣ ಶ್ರೀಮುದ್ರಾಮಾಯಣ್ಣ ಭಾಗವತರ ಸಂಗೀತ ಗುರುತ್ವವೆಂದೇ ಅರಸುಗಳ ಮನೆಯವರ ವಿಶ್ವಾಸ. ಹಾಗೆ ಅರಸುಗಳ ಮನೆಯಿಂದ ಒಳ್ಳೆ ಪ್ರಚಾರವೂ ಅವನಿಗೆ ಸಿಕ್ಕಿತು. ಮುಳಂಪಾಡೀ ನಗರದಲ್ಲಿ ಅನೇಕ ಮಂದಿ ಶಿಷ್ಯರು ಕೂಡಿದರು. ಅರಸುಗಳ ಮನೆಯಲ್ಲಿ ಕಲಿಯಬೇಕಾದವರು ಕಲಿತಾಗಿತ್ತು. ಅಂತೆಯೇ ಶ್ರೀಮುದ್ರಾಮಾಯಣ್ಣನು ೨೦ ಮೈಲು ದೂರದಲ್ಲಿರುವ ಮುಳಂಪಾಡಿ ನಗರದಲ್ಲಿ ಸಂಗೀತ ಶಾಲೆಯನ್ನು ಏರ್ಪಡಿಸಿಕೊಂಡು ಜಮ್ಮಂತ ಇರತೊಡಗಿದ್ದನು. ಆದರೂ ತಿಂಗಳೆರಡು ತಿಂಗಳಿಗೊಮ್ಮೆ ಅರಸುಗಳ ಮನೆಗೆ ಬಂದು ಒಂದೆರಡು ದಿನ ಇದ್ದು ಹೋಗುವನು. ಅವನ ಮೇಲೆ ಪ್ರತ್ಯೇಕ ಗೌರವಾಭಿಮಾನಗಳಿಟ್ಟಿರುವ ಮೂಪಮ್ಮ, ಅವನು ಬಂದಾಗ ಅವನ ಊಟಕ್ಕೆ ಪ್ರತ್ಯೇಕ ನೊಸರು ಕೊಟ್ಟು ಕಳುಹಿಸುವಳು. ಅಂತಹ ಅಣ್ಣನ ಶಿಫಾರಸಿನ ಮೇಲೆ ಬಂದ ತಿಮ್ಮನ ಮೇಲೆಯೂ ಎಲ್ಲರಿಗೂ ಒಂದು ವಿಶೇಷ ಅಕ್ಕರೆಯುಂಟಾಗಿತ್ತು.

ಅಣ್ಣ ಹೊರಟು ಹೋದ ಮೇಲೆ ತಿಮ್ಮನಿಗೆ ಅಲ್ಲಿ ತನ್ನವರು ಯಾರೂ ಇಲ್ಲವೆನಿಸಿತು. ತಿಮ್ಮ ಮೂಲೆಯಲ್ಲಿ ಕುಳಿತು ಕಣ್ಣೀರು ಸುರಿಸುತ್ತಾ ಮೂಕರೋದನ ಮಾಡುತ್ತಿದ್ದ. "ಅಯ್ಯೋ ಪಾಪ! ತಂದೆಯನ್ನು ನೆನೆದುಕೊಂಡು ಅಳುತ್ತಿದ್ದಾರೆ ಮಾಣಿ!" ಎಂದು ಅಲ್ಲಿಯ ಹುಡುಗ ಹುಡುಗಿಯರೆಲ್ಲಾ ನಾನಾವಿಧವಾಗಿ ತಿಮ್ಮನನ್ನು



ರಂಜಿಸಲು ಪ್ರಯತ್ನ ಮಾಡುತ್ತಿದ್ದಳು. ಮಲೆಯಾಳದೊಂದಿಗೆ ತಮ್ಮ ತಮಗೆ ನೆನಪಾದ ಒಂದೊಂದು ಕನ್ನಡ ಶಬ್ದವನ್ನು ತೂರಿಸಿ ತೂರಿಸಿ ಮಾತಾಡಿಸತೊಡಗುವರು. ಆಗ ಮೂಕಮ್ಮ ಮಾಳಿಗೆಯಲ್ಲಿರುವ ಅರಸುಗಳಿಗೆ ಸುದ್ದಿ ಕಳುಹಿಸುವಳು. ಅರಸುಗಳು ಉಪ್ಪರಿಗೆಯ ಅರ್ಧ ಮೆಟ್ಟಿಲಲ್ಲಿ ನಿಂತು "ಇಲ್ಲಿ ಬಾ ಮಾಣೀ, ನಂಗೊಂದು ಕೆಲಸ ಮಾಡು" ಎಂದು ಅವನನ್ನು ಕರೆದುಕೊಂಡು ಹೋಗಿ ತಮ್ಮ ಜತೆಯಲ್ಲಿ ಕೂಡಿಸಿಕೊಂಡು ಏನೇನೋ ಮಾತಾಡಿಸುವರು. ಆಗ ಅವನ ದುಃಖವು ಶಮನವಾಗುತ್ತಿತ್ತು. ಕನ್ನಡ ಬರುವ ಅರಸುಗಳೇ ಅವನ ಸ್ವಂತದವರ ಹಾಗಾದರು. ಅವನೂ ಅವರ ಸ್ವಂತ ಸೆಕ್ರೆಟರಿಯ ಹಾಗೆ ಆಗಿ ಬಿಟ್ಟ. ಅರಸುಗಳು ಮತ್ತು ಮೂಕಮ್ಮಯರೊಳಗೆ ಮಾಣಿಯಿಂದಲೇ ದೌತ್ಯ ನಡೆಯಲಾರಂಭಿಸಿ, ಮೂಕಮ್ಮಯೂ ಅವನಿಗೆ ಸ್ವಂತ ತಾಯಿಯಂತಾದಳು. ಎಂಟು ಹತ್ತು ದಿನಗಳ ವರೆಗೆ ತಿಮ್ಮನಿಗೆ ನಿಯಮಿತವಾದ ಕೆಲಸವಾವುದೂ ಇರಲಿಲ್ಲ. ಊಟಕ್ಕೆ ಕೂಡ ಅರಸುಗಳೇ ಒತ್ತಾಯದಿಂದ ಕರೆದುಕೊಂಡು ಹೋಗುತ್ತಿದ್ದರು. ಕ್ರಮೇಣ ಮನೆಯವರೆಲ್ಲರೂ ಅವನಿಗೆ ಸುಪರಿಚಿತರಾದರು. ಕೆಲಸಗಳ ಕ್ರಮಣಿಕೆಯೂ ಹತ್ತಿಕೊಂಡಿತು.

ಬೆಳಗ್ಗೆ ಎದ್ದ ಕೂಡಲೇ ತನ್ನ ಪ್ರಾತಃ ಕೃತ್ಯಗಳನ್ನು ಮುಗಿಸಿಕೊಳ್ಳುವುದು, ಅಮ್ಮನವರು ಕೊಟ್ಟ ಹಾಲವಲಕ್ಕಿಗೆ ಸಕ್ಕರೆ ಹಾಕಿಕೊಂಡು ತಿನ್ನುವುದು; ಹಾಲು ಕಾಯಿಸುವಾಗ ಬೆಂಕಿ ಉರಿಸುವುದು, ಅರಸುಗಳಿಗೆ ಬಿಸಿನೀರು ಕೊಡುವುದು, ಅರಸುಗಳು ಸ್ನಾನಕ್ಕೆ ಹೋಗುವಾಗ ಅವರ ಹಿಂದೆ ಮಡಿಬಟ್ಟೆಗಳನ್ನು ಹಿಡಿದುಕೊಂಡು ಹೋಗುವುದು, ಅರಸುಗಳ ಸಂಧ್ಯಾವಂದನೆಗೆ ಬೆಳ್ಳಿ ಮುದ್ರೆಗಳ ಕೂಡುಮಣೆ ಒರಗು ಮಣೆಗಳನ್ನಿಡುವುದು, ಇವೇ ಮೊದಲಾದ ಅರಸುಗಳ ಸ್ವಂತ ಕೆಲಸಗಳು ತಿಮ್ಮನಿಗೆ ನಿಯಮಿತವಾಗುತ್ತ ಬಂದುವು. ಅಡಿಗೆ ಮಠದಲ್ಲಿ ಬ್ರಾಹ್ಮಣನು ಅಡಿಗೆ ಮಾಡುತ್ತಾನೆ. ಅರಸುಗಳಿಗೆ ಮಾತ್ರ ಬಡಿಸುವುದು ತಿಮ್ಮನ ಕೆಲಸ.

ಇಲ್ಲಿ "ಅರಸುಗಳು" ಎಂಬುದು ಜಾಂಬಳೇ ಪ್ರಜೆಗಳಾದ ಕನ್ನಡಿಗರಿಂದ ಬಹುಗೌರವ ಸೂಚಕವಾಗಿ ಬಂದ ಮಾತು. "ಅರಸರು" ಎಂದರೆ ರಾಜಾಧಿಕಾರವುಳ್ಳವರೆಂದಾಗುತ್ತದೆ. ಇವರಿಗೆ ಅಂತಹ ಅಧಿಕಾರವಾವುದೂ ಇರಲಿಲ್ಲ. ಆದರೆ ಪೂರ್ವದಲ್ಲಿ ಅಧಿಕಾರ ಮಾಡಿದ ಅರಸುಗಳ ಪರಂಪರೆಯಲ್ಲಿ ಬಂದವರು ಅಷ್ಟೇ. ಅಂತೆಯೇ ಅರಸುಗಳು ವಾಸಮಾಡುವ ಉಪ್ಪರಿಗೆಯ ಮೇಲೆ ಪೂರ್ವಕಾಲದ ಅರಸುಗಳ ಕುರುಹು ಸಾಧನಗಳು ಸಾಕಷ್ಟಿದ್ದುವು. ತುಕ್ಕು ಹಿಡಿದು ಅಟ್ಟದೆಡೆಯಲ್ಲಿ ತೂರಿಸಲ್ಪಟ್ಟಿರುವ ಉದ್ದುದ್ದದ ಖಡ್ಗಗಳು, ಢಾಲುಗಳು, ಬಿಲ್ಲುಗಳು, ಮನುಷ್ಯನಷ್ಟೆತ್ತರ ಜಾಡಿಗಳು, ದೇವತೆಗಳ ಶಿಲ್ಪಗಳು, ನಿಲುವುಗನ್ನಡಿಗಳು, ಭಾರಿ ಚಿತ್ರ ಕೆಲಸ ಮಾಡಲ್ಪಟ್ಟ ಮಂಟಪ ಕಂಬಗಳು ಇದನ್ನೆಲ್ಲ ನೋಡಿದಾಗ ತಿಮ್ಮನಿಗೆ ಶಾಲೆಯಲ್ಲಿ ಪುಸ್ತಕದಲ್ಲಿ ಓದಿದ ಚರಿತ್ರೆಯ ಪಾಠಗಳು ನೆನಪಿಗೆ ಬರುತ್ತಿದ್ದುವು.

೩

ಇಂತಹ ಅರಸುಗಳ ಮುಖ್ಯ ಬಂಟ ತಾನು ಎಂಬ ಒಂದು ಬಗೆಯ ಹೆಮ್ಮೆಯುಂಟಾಯಿತು ತಿಮ್ಮನಿಗೆ. ಬೆಳಗ್ಗೆ ಅರಸುಗಳು ಎದ್ದ ಕೂಡಲೇ "ಅರಸುಗಳು ಎದ್ದರು ಎಂದು ಚಂಗಲಾಟದ ವಾಲ್ಯಕ್ಕಾರನಿಗೆ ಸೂಚನೆ ಕೊಡುವವನು ತಿಮ್ಮ. ಅವನು ತಿಮ್ಮನ ಮುಖನೋಡಿ "ತಂಬ್ರಾಕಪಳ್ಳಿ ಎಳುನ್ನಿಚ್ಚೊ?" ಎಂದು ಪಿಸುದನಿಯಿಂದ ಕೇಳುವನು. (ಅಂದರೆ "ಅರಸುಗಳು ಉಪ್ಪವಡಿಸಿದರೊ" ಅಂತ. ವಾಲ್ಯಕ್ಕಾರನೆಂದರೆ ಮುಖ್ಯಸೇವಕ. ಚಂಗಲಾಟವೆಂದರೆ, ಅದೊಂದು ಹಿತ್ತಾಳೆಯ ದೀಪಪಾತ್ರೆ; ಕಲಾ ಕೆಲಸ ಮಾಡಲ್ಪಟ್ಟಿದ್ದು. ಅದರ ಹೊಟ್ಟೆಯಲ್ಲಿ ಎಣ್ಣೆಯಿರುತ್ತದೆ. ಅದರಿಂದ ಹೊರಟ ದಪ್ಪದ ಬತ್ತಿಗೆ ದೀಪ ಹಚ್ಚಬೇಕು. ಇಂತಹ ಚಂಗಲಾಟ ದೀಪಕ್ಕೆ ಒಂದು ಹಿಡಿಕೆಯೂ, ನಾಲ್ಕು ಕಾಲುಗಳೂ ಇರುತ್ತವೆ. ಚಿನ್ನದಂತೆ ಜಳಜಳ ತಿಕ್ಕಿ ಸಿದ್ಧಮಾಡಿಟ್ಟ ಚಂಗಲಾಟವನ್ನು ಅರಸುಗಳು ಎದ್ದ ಕೂಡಲೇ ಬೆಳಗಿಸಿ ತಂದು ಅರಸುಗಳ ಮುಂದೆ ನಿಲ್ಲುತ್ತಾನೆ ವಾಲ್ಯಕ್ಕಾರ. ಅರಸುಗಳು ಚಂಗಲಾಟದ ಜ್ಯೋತಿಗೆ ನಮಸ್ಕಾರ ಮಾಡಿ, ಹಾವುಗೆ ಮೆಟ್ಟಿಕೊಂಡು ಕೆಳಗೆ ಹೊರಡುವಾಗ, ಚಂಗಲಾಟದವನು ಮುಂದೆ ನಡೆಯುವನು. ಹೀಗೆ ಬಚ್ಚಲು ಮನೆಯ ವರೆಗೆ ಹೋಗುವರು. ಅಲ್ಲಿಂದ ಚಂಗಲಾಟದವನು ಹಿಂದಿರುಗಿ ದೀಪವನ್ನು ನಂದಿಸಿಕೊಳ್ಳುತ್ತಾನೆ. ಅರಸುಗಳ ಹಿಂದೆಯೇ ತೋರ್ತ ಬಟ್ಟೆ (ಬೈರಾಸು) ಹಿಡಿದಿದ್ದ ತಿಮ್ಮ ಅರಸುಗಳೊಂದಿಗೇ ಬಚ್ಚಲು ಮನೆಯೊಳಗೆ ಹೋಗಬೇಕು. ಅನಂತರ ಅಲ್ಲಿಂದ ಅರಸುಗಳ ಹಿಂದೆ ತಂಬಿಗೆ ಹಿಡಿದುಕೊಂಡು ತೋಟಕ್ಕೂ ಅವನು ಹೋಗಬೇಕು.

ರಾಜಕೀಯ ಕೋಳಿ



ಜಾತೀಯ ದಂಗೆ ವಿದ್ಯಾರ್ಥಿ ಪಂಗೆ
ಗಿಡದ ತುಂಬಾ ಸುರಿದು ತೋರಿಸುವ ಟೊಂಗೆ
ರಾಜಕೀಯದ ಕೋಳಿ ಕೂಗದಲೆ ಹಂಗೆ
ಕುಂಟುತ ನಿಂತು ಸಾರಥಿ ಹೇಳು ಹೆಂಗೆ

— ಶ್ರೀ ದೇವದತ್ತ

ಇದೆಲ್ಲ ಪ್ರಾತಃಕೃತ್ಯಗಳಾಗುವಷ್ಟರಲ್ಲಿ ಅತ್ತ ಮೂಕಮ್ಮ ಅರಸುಗಳಿಗಾಗಿ ಹಾಲು ಹಾಕಿದ ಸಬ್ಬಕ್ಕಿ ಗಂಜಿಯನ್ನು ತಯಾರಿಸಿಟ್ಟಿರುತ್ತಾಳೆ. ಹೆಂಡತಿಯು ಕೈ ಮುಟ್ಟಿದ ಅನ್ನದ ಹೊರತು ಹಾಲು ಹಾಕಿದ ಇತರ ತಿಂಡಿ ತೀರ್ಥಗಳನ್ನೆಲ್ಲ ಅರಸುಗಳು ಸ್ವೀಕರಿಸುವರು. ಆ ಸಬ್ಬಕ್ಕಿಯ ಗಂಜಿಯನ್ನು ತಿಮ್ಮನೇ ಉಪ್ಪರಿಗೆಯ ಮೇಲೆ ಒಯ್ದು ಅರಸುಗಳಿಗೆ ಕೊಡಬೇಕು. "ನೀನೂ ಸ್ವಲ್ಪ ಕುಡಿ ಮಾಣೀ" ಎಂದು ಅವನಿಗೂ ಸ್ವಲ್ಪ ಕೊಡುವರು. ಅವರಿದಿರೇ ಅವನೂ ಕುಡಿಯಬೇಕಾಗಿತ್ತು.

ಆ ವೇಳೆ ಸಾಯಂಕಾಲದ ಹೊತ್ತಿನಲ್ಲಿಯೂ ಅರಸುಗಳಿಗೆ ಚಂಗಲಾಟದ ಸೇವೆಯುಂಟು. ಮುಚ್ಚಂಜೆಯಾದ ಕೂಡಲೇ ವಾಲ್ಯಕ್ಕಾರನು ಚಂಗಲಾಟ ದೀಪವನ್ನು ಬೆಳಗಿಸಿಕೊಂಡು ಮಾಳಿಗೆಯ ಮೇಲೆ ಬರುತ್ತಾನೆ ಅದರೊಂದಿಗೆ ಅರಸುಗಳು ಕೆಳಗೆ ಬಂದು ವಿಶಾಲವಾದ ಅಂಗಳದಲ್ಲಿ ಹಾಕಲ್ಪಟ್ಟ ರಾಜಕುರ್ಚಿಯಲ್ಲಿ ಅರ್ಧಶಾಯಿತರಾಗಿ ಕುಳಿತು, ಇದಿರು ಕಾಣುವ ವಿಸ್ತಾರವಾದ ಬಯಲುಗದ್ದೆಯನ್ನು, ಆಕಾಶದಲ್ಲಿ ಮರಗಳ ಕಡೆಗೆ ಹಾರಾಡುವ ಪಕ್ಷಿಗಳನ್ನೂ ನೋಡುವರು. ಆಗ ಅವರ ಹತ್ತಿರ ಮೂಕಮ್ಮಯೂ ಬಂದು ಇನ್ನೊಂದು ಕುರ್ಚಿಯಲ್ಲಿ ಕೂಡುವಳು. ಮಕ್ಕಳೂ ನೆಲದಲ್ಲಿ ಕುಳಿತುಕೊಳ್ಳುವರು. ಆಗ ಎಷ್ಟೋ ಬಗೆಯ ಸುಖದುಃಖ ಹಾಸ್ಯ, ಗಂಭೀರ ವಿಷಯಗಳ ಮೇಲೆ ಮಾತುಕತೆ ವಿಚಾರವಿನಿಮಯ ಹರಟೆ ಎಲ್ಲವೂ ನಡೆಯುತ್ತದೆ. ತಂದೆ ತಾಯಿ ಮಕ್ಕಳೊಳಗೆ ಎಷ್ಟೊಂದು ಸಾಮರಸ್ಯವಿದೆಯೆಂಬುದು ಆಗ ತಿಳಿಯುತ್ತದೆ. ಎಲ್ಲರೂ ಅರಸುಗಳ ಮೇಲೆ ಎಷ್ಟು ಗೌರವವಿಟ್ಟಿದ್ದಾರೆಂಬುದನ್ನೂ ಆಗ ಕಾಣಬಹುದು. ವಿವಿಧ ರಸಗಳ ಕಲಸು ಮೇಲೋಗರದ ವೇಳೆಯದು. ಆಗ ಹೊತ್ತು ಹೋಗುವುದೇ ತಿಳಿಯದಿರುವಾಗ, ಹೊತ್ತು ಮೀರದಂತೆ ಕಾಯುತ್ತಿರುವ ಚಂಗಲಾಟದ ವಾಲ್ಯಕ್ಕಾರ ಮತ್ತೆ ಚಂಗಲಾಟ ಬೆಳಗಿಸಿ ತರುವಾಗ, "ಓ! ಹೊತ್ತಾಯಿತು" ಎನ್ನುತ್ತ ಎಲ್ಲರೂ ಏಳುತ್ತಾರೆ ಅರಸುಗಳು ದೀಪದ ಹಿಂದೆ ಹಾವುಗೆ ಕಟಕಟ ಸಪ್ಪಳಿಸುತ್ತಾ "ಮಠ"ಕ್ಕೆ ಹೊರಡುತ್ತಾರೆ. ಅವರ ಹಿಂದೆಯೇ ಮಾಣಿಯೂ ಇರುವನು. ಹೀಗೆ ಅರಸುಗಳಿಗೆ ನಡೆಯುವ ಚಂಗಲಾಟದ ಉಪಚಾರವು ತನಗೂ ನಡೆಯುವ ಹಾಗೆ ಅನಿಸುತ್ತಿತ್ತು ತಿಮ್ಮನಿಗೆ.

ದಿನಹೋದಂತೆ ಅಲ್ಲಿ ಬ್ರಾಹ್ಮಣ ಅಡಿಗೆಯವರು ಖಾಯಂ ನಿಲ್ಲುವುದಿಲ್ಲವೆಂಬ ಸಂಗತಿ ತಿಮ್ಮನಿಗೆ ತಿಳಿಯಿತು. ಏನೋ ಜಗಳ ಮಾಡಿ ಹೊರಟು ಹೋಗಿಬಿಡುತ್ತಾರೆ. ಅಸಲು ತಿಮ್ಮನನ್ನು ಅರಸುಗಳ ಅಡಿಗೆಗಾಗಿಯೇ ಬರಮಾಡಿಕೊಂಡಿದ್ದರು. ಚಿಕ್ಕ ಹುಡುಗನಾದರೆ ಜಗಳ ಮಾಡದೆ ಕೆಲ ಕಾಲ ನಿಲ್ಲುವನೆಂಬುದು ಅವರ ಉದ್ದೇಶ. ಅರಸುಗಳಿಗೆ ಬ್ರಾಹ್ಮಣರ ಕೈಯ

ಗಿಯೇ ಆಗಬೇಕಾಗಿತ್ತು. ಅವರ ಹೆಂಡತಿ ಅಡಿಗೆ ಮಾಡಿದರೂ ಅವರು ಉಣ್ಣುವಂತಿಲ್ಲ-ಉಣ್ಣಬಾರದು. ಕಾರಣ 'ಮೂಪಮ್ಮ' ನಾಯರ ಜಾತಿಯವಳು. ಮಕ್ಕಳೆಲ್ಲರೂ ಆ ಜಾತಿಯವರೇ ಆಗುತ್ತಾರಂತೆ. ಅರಸುಗಳು ಮಾತ್ರ ಶುದ್ಧ ಕ್ಷತ್ರಿಯರಂತೆ ಅವರ ಧರ್ಮಪತ್ನಿ ಶುದ್ಧ ಕ್ಷತ್ರಿಣಿಯು ಮಗ ತನ್ನ ತಾಯಿಯೊಂದಿಗೆ ಜಾಂಬಳೆಯಲ್ಲಿದ್ದಾನಂತೆ.

ಸಮಯಬಂದರೆ ಸ್ವತಃ ಅರಸುಗಳೇ ತಮ್ಮ ಅಡಿಗೆಯನ್ನು ತಾವೇ ಮಾಡಿಕೊಳ್ಳುವರಂತೆ. ಅಡಿಗೆ ಕೆಲಸದಲ್ಲಿ ಬಲು ನಿಪುಣರಾದ ಅವರು ತಿಮ್ಮನಿಗೂ ಅಡಿಗೆ ಮಾಡಲು ಕಲಿಸಿಬಿಟ್ಟರು. ತಿಮ್ಮ ಈ ಮೊದಲು ಅವನ ತಾಯಿಯಿಂದ ಕಲಿತ ಅಡಿಗೇ ಕ್ರಮ ಯಾವುದೂ ಇಲ್ಲಿ ಉಪಯೋಗಕ್ಕೆ ಬರಲಿಲ್ಲ. ಊರಿನಲ್ಲಿ ಅವನು ಮಾಡಿದ್ದ ಅಡಿಗೆಯಾದರೂ ಎಂಥದು? ಶಾಲೆಗೆ ಹೋಗಿಬರುವ ಆಟಪಾಟದ ಹುಡುಗ. ತಾಯಿ ಹೊರಗಾದಾಗ ಅವನಿಂದ ಅಡಿಗೇ ಮಾಡಿಸಿದ್ದುಂಟು. ತಾಯಿ ಕಿಟಕಿಯ ಹೊರಗೆ ನಿಂತು ಕೊಂಡು ತಿಮ್ಮನನ್ನು ಬಹಳವಾಗಿ ಮಂಗಾಡಿಸಿ ಒತ್ತಾಯಿಸುತ್ತ ಅವನಿಂದ ಅಡಿಗೇ ಮಾಡಿಸಬೇಕಿತ್ತು. ಹೀಗೆ ಕಟ್ಟಿಗೆ ಇಡು, ಹೀಗೆ ಬೆಂಕಿ ಊದು, ಹೀಗೆ ಮುಗುಚು, ಹೀಗೆ ಕಿವಿಚು, ಹೀಗೆ ತೊಳೆ ಹೀಗೆ ಪ್ರತಿಯೊಂದೂ ತಾಯಿ ಹೇಳುವಾಗ ತಿಮ್ಮ ಪ್ರತಿಯೊಂದಕ್ಕೂ ರುಸರುಸ ಮಾಡುತ್ತಿದ್ದ. "ನನ್ನಿಂದಾಗದು, ಶಾಲೆಗೆ ಹೊತ್ತಾಯಿತು." ಎಂದು ಎಷ್ಟೋ ಹಟಮಾಡಿ ಆ ಮೂರು ದಿನವೂ ತಾಯಿಯ ನಿಷ್ಪಡತೆಗೆಯುತ್ತಿದ್ದ. ಇಷ್ಟವಿಲ್ಲದ ಅದೇ ಅಡಿಗೇ ಕೆಲಸ ಇಲ್ಲಿ ಅರಸುಗಳ ಸನ್ನಿಧಾನದಲ್ಲಿ ತಪ್ಪದ ವಿಧಿಯಾಯಿತು.

ಅರಸುಗಳು ಬಹಳ ಹಾಸ್ಯಗಾರರಾದುದರಿಂದ ಅವರ ಗುರುತ್ವದಲ್ಲಿ ಅಡಿಗೇ ಕೆಲಸ ಕಲಿಯಲು ಅವನಿಗೇನೂ ಕಷ್ಟವಾಗಲಿಲ್ಲ. ಅರಸುಗಳಿಗೂ ತನಗೂ ಮಾತ್ರವೇ ಮಾಡಿಕೊಳ್ಳುತ್ತಿದ್ದ ಅಡಿಗೆ. ಉಳಿದವರಿಗೆಲ್ಲಾ ಭೂರಿ ಅಡಿಗೆ ಅವರ ಮಕ್ಕಳೇ ಸೇರಿಕೊಂಡು ಮಾಡಿಕೊಳ್ಳುತ್ತಿದ್ದರು. ಅರಸುಗಳ ಮಗಳೊಬ್ಬಳು ಅಡಿಗೆ ಕೋಣೆಯ ಬಾಗಿಲ್ಲಿ ಕುಳಿತು ಹೀಗೆ ಹೀಗೆ ಮಾಡೆಂದು ತಿಮ್ಮನಿಗೂ ಹೇಳಿ ಕೊಡುತ್ತಿದ್ದಳು. ಹಾಗೂ ಹೀಗೂ ತಿಮ್ಮ ಬಹು ಬೇಗನೆ ಅಡಿಗೆಯನ್ನು ಕಲಿತುಕೊಂಡು ಬಿಟ್ಟನು.

ಅರಸುಗಳೂ ತಿಮ್ಮನೂ ಊಟಮಾಡಿ ಮುಗಿಸಿದ ಮೇಲೆ ಉಳಿದ ಮೇಲೋಗರಗಳನ್ನು ಮೂಪಮ್ಮಯೂ ಇತರರು ಬಹಳ ಅಕ್ಕರೆಯಿಂದ ಪ್ರಸಾದದ ಹಾಗೆ ನೆಕ್ಕಿ ತಿಂದು ನೋಡಿ "ವಳರೆ ನನ್ನಾಯಿಟ್ಟುಂಡಲ್ಲೋ ಮಾಣಿಯನ್ ವೆಪ್ಪ!" (ಬಹಳ ಚೆನ್ನಾಗಿದೆಯಲ್ಲ ಮಾಣಿಯ ಅಡಿಗೆ) ಎಂದು ಮೆಚ್ಚಿಕೊಳ್ಳುತ್ತಿದ್ದರು. ಅದನ್ನು ಕೇಳಿದಾಗ ತಿಮ್ಮ ಉಬ್ಬಿ ಹೋಗುತ್ತಿದ್ದ. "ಇನ್ನೆರಡು ವರ್ಷ ಹೋಗಿಬಿಟ್ಟರೆ ದೊಡ್ಡ ದೇಹಣ್ಣಿಕ್ಕಾರರಾಗಿ ಬಿಡುತ್ತಾರೆ ಮಾಣಿ" ಎನ್ನುತ್ತಿದ್ದಳು ಮೂಪಮ್ಮ. (ದೇಹಣ್ಣಿಕ್ಕಾರರೆಂದರೆ ಹಬ್ಬದ ಭಾರಿ ಅಡಿಗೆಯವರು) ಅವರ ಉದ್ದೇಶವನ್ನು ಅರಿತುಕೊಳ್ಳಲಾರದ ಬಡ

ತಾಯಿ ತಿಮ್ಮ ಅವರ ಹೊಗಳಿಕೆಗಳಿಂದ ಪ್ರೋತ್ಸಾಹಿತನಾಗಿ ಮಲೆಯಾಳೀ ಅಡಿಗೇ ವಿಧಾನಗಳನ್ನೆಲ್ಲ ಒಂದೊಂದಾಗಿ ಕಲಿಯತೊಡಗಿದ.

ಅಂತೆಯೇ ಕೆಲಸವಿಲ್ಲದಿರುವಾಗ ಹುಡುಗ ತಿಮ್ಮ ಹಿಡಿದಿಟ್ಟವನ ಹಾಗೆ ಸುಮ್ಮನೆ ಕುಳಿತಿರುತ್ತಾನೆ. ಬಾವಿಕಟ್ಟೆಯಲ್ಲಿ, ಕೆರೆಯ ದಂಡೆಯಲ್ಲಿ, ಮಾವಿನ ಮರದ ಬುಡದಲ್ಲಿ ಇದಿರು ಕಾಣುವ ಹಚ್ಚನೆಯ ಚಪ್ಪರ ಕಾಲುಗಳಂತಿಹ ನೇಂದ್ರ ಬಾಳೆಯ ಗದ್ದೆಯನ್ನೋ, ಅದರಾಚೆಗೆ ಕಾಣುವ ಬತ್ತದ ಬಯಲನ್ನೋ, ಬಯಲಿನಾಚೆಗಿನ ತೆಂಗಿನ ಮರಗಳ ಕಾಡನ್ನೋ, ಎಲ್ಲಕ್ಕೂ ಮೇಲಿನ ಬಣ್ಣ ಬದಲಾಗುತ್ತಿರುವ ಆಕಾಶವನ್ನೋ ನೋಡುವನು. ಹೊರಗಣ್ಣು ಹಾಗೆ ನೋಡುತ್ತಿದ್ದರೂ ಒಳಗಣ್ಣು ಊರಿನ ಮನೆಯನ್ನೂ, ಶಾಲೆಯನ್ನೂ ನೋಡುತ್ತಿರುವುದು. ಗೆಳೆಯರೊಂದಿಗೆ ಆಟ, ತಮಾಷೆ, ಜೋಡುಬಳೆ ವೆಂಕಟರಾಯ ಮಾಸ್ತರ ಮೆಚ್ಚಿಕೆ, ಅಭಿಮಾನ ತನ್ನ ಮೇಲಿನ ಅವರ ಪ್ರೀತಿ, ಮತ್ತು ಕನ್ನಡ ಮಾಸ್ತರು ವಿವರಿಸಿ ಹೇಳುವ ಕನ್ನಡ ಪದ್ಯಗಳು, ಅರ್ಥಗಳು ಕಥೆಗಳು! ಆಹಾ! ಏನು ಸೊಗಸಿನ ಜೀವನವದು? ಹಾಳಾದ್ದು ಲೆಕ್ಕದ ಪೀರಿಯಡು ಒಂದು ಗಂಟೆ ಬಿಟ್ಟರೆ ಉಳಿದ ಶಾಲಾ ಸಮಯಗಳೆಲ್ಲ ಅವನಿಗೆ ಅಮೃತ ಸಮಯಗಳೇ ಇಲ್ಲಿಲ್ಲದ ಆ ಜೀವನ?

ಈ ಬಗೆಯ ನೆನಕೆಗಳಿಂದ ಅವನ ಮುಖ ಬಾಡಿದ ಹಾಗಾಗಿ ಕಣ್ಣೀರು ಸಹ ತುಂಬಿ ಅವನಿಗರಿಯದಂತೆಯೇ ಕೆಳಗಿಳಿಯುತಿತ್ತು.

ಆಗ ಅರಸುಗಳ ಹೆಣ್ಣುಮಕ್ಕಳು ಮತ್ತು ತಿಮ್ಮನಿಗಿಂತ ಮೂರು ವಯಸ್ಸಿಗೆ ದೊಡ್ಡವನಾದ ಅರಸುಗಳ ಕಿರಿಯ ಮಗ ಕುಟ್ಟಿಯಪ್ಪ

ಅವನ ಹತ್ತಿರ ಬಂದು ತಮಾಷೆಯಾಗಿ ಮಾತಾಡಿಸಲಾರಂಭಿಸುವರು. "ಕಳಿಕ್ಕಾನ್ ವರೀ ಮಾಣೀ!" (ಆಟಕ್ಕೆ ಬನ್ನಿ ಮಾಣೀ) ಎಂದು ಕುಟ್ಟಿಯಪ್ಪ ಕರೆಯುವನು "ಮಾಣಿ ಇವಿಡೆ ಎಂದಾಚೆಯ್ಯುನ್ನೂ? ಮಲೆಯಾಳಂ ಆಲೋಚಿಕ್ಕುನ್ನೋ?" ಎಂದು ಕುನ್ನೋಮೆಯೊಬ್ಬಳು ಕೇಳುವಳು. ಮಾಣಿಗೆ ಮಲೆಯಾಳ ಹೇಳಿಕೊಡಬೇಕೆಂದೂ, ಬದಲಾಗಿ ಮಾಣಿ ಅವರಿಗೆಲ್ಲ ಕನ್ನಡ ಕಲಿಸಿ ಕೊಡಬೇಕೆಂದೂ ಮೂಪಮ್ಮ ಆಜ್ಞಾಪಿಸಿದ್ದಳು ಹಾಗೆಯೇ ಕುನ್ನೋಮೆಗಳು ತಿಮ್ಮನಿಗೆ ಮಲೆಯಾಳ ಭಾಷೆ ಹೇಳಿ ಕೊಡುವಾಗ, ಅವನಿಂದ ಕನ್ನಡ ಪದಗಳನ್ನೂ ಹೇಳಿಸಿ ಅದನ್ನು ತಪ್ಪುತಪ್ಪಾಗಿ ಉಚ್ಚರಿಸಿ ಅವನನ್ನು ನಗಿಸುವರು. ಅವನ ಮಲೆಯಾಳ ಉಚ್ಚಾರ ಕೇಳಿ ತಾವೂ ಸಾಕಷ್ಟು ನಗುವರು. ಇದರಿಂದ ತಿಮ್ಮನಿಗೆ ಮಲೆಯಾಳ ಭಾಷೆಯನ್ನು ಕಲಿಯಬೇಕೆಂಬ ಕುತೂಹಲ ತನ್ನಂತೆ ಉಂಟಾಗಿ, ಅನೇಕ ವಸ್ತುಗಳಿಗೆ ಮಲೆಯಾಳೀ ಹೆಸರುಗಳನ್ನು ಕೇಳಿ ಕೇಳಿ, ಕನ್ನಡದಲ್ಲಿ ಬರೆದುಕೊಂಡು ಓದಿ ಉರುವು ಹಾಕಿಕೊಂಡನು. ಇದಿ ಇಡಿಯ ವಾಕ್ಯಗಳನ್ನೇ ಕನ್ನಡದಲ್ಲಿ ಬರೆದು ಪಾಠ ಮಾಡಿಕೊಂಡು ಮಲೆಯಾಳದಲ್ಲೇ ಉತ್ತರ ಕೊಡಲಿಕ್ಕೂ ಸುರು ಮಾಡಿದ. ಮೊದಮೊದಲು ಅವನು ಮಾತಾಡುತ್ತಿದ್ದ ಮಲೆಯಾಳ ಭಾಷೆ ಎಲ್ಲರಿಗೂ ಒಂದೇ ನಗುಬರಿಸುವಂತಹುದಾಗಿತ್ತು. ಅಲ್ಲಿ ನಗುವಿನ ಅಲೆಗಳು ಏಳುತ್ತಿವೆಯೆಂದರೆ, ಅಲ್ಲಿ ತಿಮ್ಮನಿದ್ದಾನೆಂದೇ ಅರ್ಥ.

❦

ಒಂದು ಸಾರಿ ಮೂಪಮ್ಮ ತಿಮ್ಮನ ಹತ್ತಿರ

ಒಂದು ಪೌಟನ್ನು ಕೊಟ್ಟು ಬಚ್ಚಲೊಲೆಯಿಂದ ಕೆಂಡ ತರಲು ಹೇಳಿದಳು. ತಿಮ್ಮ ಬೆಂಕಿ ಕೆಂಡವನ್ನು ತೆಂಗಿನ ಚಿಪ್ಪಿನಲ್ಲಿ ತೆಗೆದುಕೊಂಡು ಬಂದು, ಪೌಟನ್ನು ಬಚ್ಚಲೊಲೆಯ ಹತ್ತಿರವೇ ಬಿಟ್ಟುಬಿಟ್ಟ. ಮಧ್ಯಾಹ್ನದ ವೇಳೆ ಮೂಪಮ್ಮಗೆ ಪೌಟಿನ ನೆನಪಾಗಿ "ಕರಂಡಿ ಎವಿಡೆವೆಂಡು ಮಾಣೀ?" ಎಂದು ಕೇಳಿದಳು. ಕೂಡಲೇ ತಿಮ್ಮ ಮಲೆಯಾಳದಲ್ಲೇ "ವೆಳಗ್ಗಲ್ ಅಡುಪ್ಪಿಲ್ ಕೆಡನ್ನೊರಂಗವ್ವಚ್ಚಿಟ್ಟುಂಡಲ್ಲೋ ಞಾನ್, ಕೊಂಡ್ರಾನ್ ಕೋಡ್ರಾನ್ ಎಡುತ್ತ್" ಎಂದ ಕೂಡಲೇ ಎಲ್ಲರಿಗೂ ನಗೆ ಬಂತು. ಅದರ ಅರ್ಥ "ಬೆಳಗ್ಗೆ (ವೆಳಗ್ಗಲ್ = ಕನ್ನಡವನ್ನೇ ಮಲೆಯಾಳದ ಹಾಗೆ ಮಾಡಿಕೊಂಡ ಶಬ್ದ) ಒಲೆಯಲ್ಲಿ ಮಲಗಿಸಿಟ್ಟಿದ್ದೇನೆ. ತಂದೆತಂದ ತೆಗೆದು" ಎಂದಾಗಿತ್ತು. "ಒಲೆಯ ಹತ್ತಿರ ಮರೆತುಬಿಟ್ಟೆ, ತರುತ್ತೇನೆ" ಎಂದು ಹೇಳುವುದಕ್ಕೇ ಹಾಗೆ ಹೇಳಿದ್ದ. ತನಗೆ ಬರುವ ಕೆಲವೇ ಮಲೆಯಾಳೀ ಶಬ್ದಗಳನ್ನು, ಕಲ್ಪನಾಶಕ್ತಿಯಿಂದ ವಾಕ್ಯ ಪೂರ್ತಿ ಮಾಡಿಕೊಂಡ ಅವನ ಭಾವನೆಯನ್ನು ಅರ್ಥ ಮಾಡಿಕೊಂಡ ಮೂಪಮ್ಮ "ಮಾಣ ವೆಲಿಯ ಕವಿಯಾಣಲ್ಲೋ!" (ಮಾಣಿ ದೊಡ್ಡ ಕವಿಯಾಗಿದ್ದಾನಲ್ಲ!), ಎಂದು ಉದ್ಗರಿಸಿಕೊಂಡಳು.

ಹಾಗೇ ಇನ್ನೊಮ್ಮೆ ಇಡ್ಲಿ ಹೊಯ್ಯಲು ಬಟ್ಟೆ ಬೇಕು ಎಂದು ಕೇಳುವುದಕ್ಕೆ "ಇಡ್ಲಿ ಕಿಡಕ್ಕಾನ್ ಚೀರಕೊಡುಕ್ಕೀನ್" ಎಂದು ಕೇಳಿದ. ಇದರ ಅರ್ಥ "ಇಡ್ಲಿ ಮಲಗಲು ಶೀರೆಕೊಡಿ" ಎಂದಾಗುತ್ತೆ. ಮೂಪಮ್ಮಯೂ, ಅರಸುಗಳು ಇದನ್ನು ಹೇಳಿಕೊಂಡು ಎಷ್ಟೋ ದಿನಗಳ ವರೆಗೆ ನಗುತ್ತಿದ್ದರು.

ಎಲ್ಲರಿಗೂ ಮಾಣಿಯನ್ನು ಮಾತಾಡಿಸಿ ಹೊತ್ತು ಕಳೆಯುವುದೊಂದು ಚಟವಾಗಿ ಹೋಯಿತು. ಎಲ್ಲರೂ ಎಂದರೆ ಅರಸುಗಳ ಕುಟುಂಬದವರೇ ಬಹಳ ಮಂದಿ ಇದ್ದರು. ಅರಸುಗಳಿಗೂ ಮೂಪಮ್ಮಗೂ ಸಧ್ಯ ವೃದ್ಧಾಪ್ಯವಾಗಿದ್ದರೂ, ಅವರಿಗೆ ನಾಲ್ಕು ಮಂದಿ ಹೆಣ್ಣು ಮಕ್ಕಳೂ ಇಬ್ಬರು ಗಂಡು ಮಕ್ಕಳೂ ಇದ್ದಾರೆ. ಹಿರಿಯ ಮಗ ಕುನ್ನಿಕೃಷ್ಣನ್ನಾಯರ್ ದೊಡ್ಡ ಕಾರುಭಾರಿ; ಇಂಗ್ಲಿಷ್ ಕಲಿತವನು; ಕ್ರಾಪು ಮಾಡಿಸಿಕೊಂಡಿದ್ದ. ಉಳಿದ ಹೆಣ್ಣು ಮಕ್ಕಳಲ್ಲಿ ಇಬ್ಬರಿಗೆ ಮದುವೆಯಾಗಿತ್ತು. ಉಳಿದವರಿಗೆ ಆಗಿಲ್ಲ.

ಹಿರೀಮಗ ಕುನ್ನಿಕೃಷ್ಣನ್ನಾಯರ್ ಮಳಂಪಾಡೀ ನಗರದಲ್ಲಿರುವ ಅವನ ಹೆಂಡತಿಯ ಮನೆಯಲ್ಲಿಯೂ, ಇಲ್ಲಿಯೂ ಆಗಾಗ ಬರುತ್ತಾ ಹೋಗುತ್ತಾ ಇರುವವನು.

ಇವರಲ್ಲದೆ ಮೂಪಮ್ಮಯ ತಂಗಿಯರಿಬ್ಬರೂ, ತಮ್ಮನೊಬ್ಬನೂ ಆ ಅರಮನೆಯ ತಮ್ಮ ತಮ್ಮ ವಿಭಾಗದಲ್ಲಿದ್ದಾರೆ. ಇನ್ನು ಆಳುಕಾಳುಗಳೂ ಸಾಕಷ್ಟಿದ್ದಾರೆ.

ಅರಸುಗಳ ಹಿರೀ ಮಗಳು ಕುನ್ನಿಕುಟ್ಟಿಮ್ಮ ಗಂಡನನ್ನು ಕಳೆದುಕೊಂಡ ವಿಧವೆ. ಅವಳು ಯಾವಾಗಲೂ ತನ್ನ ಕೋಣೆಯ ಇದಿರು, ಜಗಲಿಯ ಕಂಬದ ಬುಡದಲ್ಲಿ ಕುಳಿತು "ಕಂಬರಾಮಾಯಣ"ವನ್ನು ಓದುತ್ತಾ ಇರುತ್ತಾಳೆ.

ಉದ್ದವಾಗಿ ಇಕ್ಕೋಣದ ಕೋಟೆಯ ಹಾಗಿರುವ ಆ ಅರಮನೆಯಲ್ಲಿ ಪ್ರತಿಯೊಬ್ಬರಿಗೂ ದೊಡ್ಡ ದೊಡ್ಡ ಎರಡು ಕೊಠಡಿಗಳಿದ್ದುವು ಇನ್ನೂ ಕೆಲವು ಖಾಲಿ ಕೊಠಡಿಗಳೂ ಇದ್ದುವು. ಕೆಳಗೆ ಭಾರಿ ದೊಡ್ಡ ಬತ್ತತುಂಬಿದ ಮರದ ಕಣಜವೂ, ಬತ್ತಕುಟ್ಟುವ ಒರಳುಗುಳಿಗಳುಳ್ಳ, ವಿಸ್ತಾರವಾದ ಪಡಸಾಲೆಯೂ, ಇವೆ. ಆ ಪಡಸಾಲೆ ಯಾವಾಗಲೂ ಬತ್ತಕುಟ್ಟುವ ಸ್ತ್ರೀಯರ ಒನಕೆಗಳ ನಾಟ್ಯದಿಂದಲೂ, ಅಕ್ಕಿಗೇರುವವರ ಕಲಕಲಾಟದಿಂದಲೂ ಕಳಕಳಿಸಿಕೊಂಡಿರುತ್ತಿತ್ತು. ಆ ಸ್ತ್ರೀಯರು ಅಕ್ಕಿ ಮಾಡಿಯುವಾಗ ತೌಡನ್ನು ಆಗಾಗ ಬಾಯಿಗೆಸೆದುಕೊಳ್ಳುವ ಚಂದವನ್ನು, ಅರಸುಗಳು ಮಾಳಿಗೆಯ ಮೇಲಿಂದ ನೋಡುತ್ತಾ ತಮ್ಮೊಳಗೇ ನಗುತ್ತಿರುವರು. ಅವರೊಂದಿಗೆ ತಿಮ್ಮನು ನಗುವನು! ಆಗೊಮ್ಮೆ ಅರಸುಗಳು ತಿಮ್ಮನಿಗೊಂದು ಕಥೆ ಕೂಡ ಹೇಳಿದ್ದರು. ಹಿಂದೊಮ್ಮೆ ಒಬ್ಬ ತಂಬ್ರಾನ್ ಅರಸು ಬತ್ತ ಕುಟ್ಟುತ್ತಾ ಹೆಂಗಸರು ತೌಡು ಬಾಯಿಗೆ ಹಾಕುವುದನ್ನು ನೋಡಿ ಅವರಿಗೂ ಅದರ ರುಚಿ ನೋಡಲು ಆಸೆಯಾಗಿ, ತಮ್ಮ ಮಾಣಿಯ ಮೂಲಕ ಗುಟ್ಟಾಗಿ ಬತ್ತ ಕುಟ್ಟುವ ಮುದುಕಿಯೊಬ್ಬಳ ಕೈಯಿಂದ ಒಂದು ಮುಷ್ಟಿ ತೌಡು ತರಿಸಿ ತಿಂದು ರುಚಿ ನೋಡಿದರಂತೆ. ತಂಬ್ರಾನ್ ತೌಡು ತಿಂದರೆಂದು ಯಾರಿಗೂ ಹೇಳಬಾರದೆಂದು ಆ ಮುದುಕಿಗೆ ಎಚ್ಚರಿಕೆ ಕೊಡಿಸಿದ್ದರು. ಆದರೆ ಆ ಮುದುಕಿ ತಾಳಲಾರದೆ ಹಳೆಯ ಹಲಸಿನ ಮರದ ಪೊಟರೆಗೆ ಬಾಯಿ ಹಾಕಿ "ತಂಬ್ರಾನ್ ತೌಡು ತಿನ್ನುನ್ನು" ಎಂದಳಂತೆ. ಅನಂತರ ಆ ಹಲಸಿನ ಬೊಡ್ಡೆಯನ್ನು ಕಡಿದು ಒಂದು ಮದ್ದಳೆ ಮಾಡಿಸಲಾಯಿತಂತೆ. ಅದನ್ನು ಹೇಗೆ ಹೇಗೆ ಬಾರಿಸಿದರೂ "ತಂಬ್ರಾನ್ ತೌಡು ತಿನ್ನುನ್ನು" ಎಂತಲೇ ಧ್ವನಿಹೊರಟು ಅರಸು ತೌಡು ತಿಂದ ವಾರ್ತೆ ಜನಜನಿತವಾಯಿತಂತೆ. ಈ ಕತೆ ಬತ್ತಕುಟ್ಟುವ ಧ್ವನಿ ಕೇಳಿದಕೂಡಲೇ ಅರಸುಗಳಿಗೂ ಮಾಣಿಗೂ ನೆನಪಾಗಿ ನಗು ಬರುತ್ತಿತ್ತು.

ಸಾಮಾನ್ಯವಾಗಿ ಮಾಳಿಗೆಯ ಅರ್ಧ ಭಾಗವು ಅರಸುಗಳ ಸ್ವಂತದ್ದಾಗಿತ್ತು. ಅವರ ಹೊರತು ಬೇರೆ ಯಾರೂ ಅನವಶ್ಯಕವಾಗಿ ಅಲ್ಲಿ ಸುಳಿಯುವುದಿಲ್ಲ. ಆ ಮಾಳಿಗೆಗೆ ಮೂರು ಕಡೆಯಿಂದ ಮೆಟ್ಟಲುಗಳಿದ್ದುವು. ಮಧ್ಯಮೆಟ್ಟಲಿನ ಬುಡದಲ್ಲಿಯೇ ಮೂಪಮ್ಮಯ ಕೋಣೆ. ಅಲ್ಲಿಗೆ ಅರಸುಗಳು ಕೆಳಗಿಳಿದು ಬರುವುದುಂಟು. ಆದರೆ ಮೂಪಮ್ಮ ಮಾಳಿಗಿಯ ಮೇಲೆ ಹತ್ತುವುದೇ ಇಲ್ಲ. ಕಾರಣ ಅವಳದು ತುಸು ಸ್ಥೂಲಕಾಯ.

ಅರಸುಗಳು ಮೂಪಮ್ಮಯ ಕೋಣೆಗೆ ಬರುವುದಾದರೆ ಸಾವಕಾಶವಾಗಿ ಕೆಳಗಿಳಿಯುತ್ತ, ಸಣ್ಣಗೆ ಕೆಮ್ಮುತ್ತಾರೆ. ಆ ಶಬ್ದ ಕೇಳಿದ್ದೇ ತಡ, ಕೆಳಗೆ ಕಲಕಲವೆಂದು ಮಾತಾಡುತ್ತಿದ್ದವರೆಲ್ಲ ಗಪ್ಪುಚಿಪ್ಪಾಗಿ ತಂತಮ್ಮ ಕೋಣೆಗಳಿಗೆ ನುಸುಳಿಕೊಳ್ಳುತ್ತಾರೆ. ಮೂಪಮ್ಮಯೊಡನೆ ಮಾತಾಡುತ್ತಿದ್ದವರೂ ಸುಳಿವರಿತು ಎದ್ದೇ ಹೋಗಿಬಿಡುತ್ತಾರೆ. ಅರಸುಗಳು ಮೂಪಮ್ಮಯ ಕೋಣೆಗೆ ಹೊಕ್ಕರೆ, ಮೂಪಮ್ಮ ತಾನು ಕುಳಿತಿದ್ದ ಭಾರಿ ಮಂಚದಿಂದ ಎದ್ದು ನಿಲ್ಲುತ್ತಾಳೆ. ಅರಸುಗಳು ಆ ಮಂಚದ ಮೇಲೆ ಅರ್ಧಶಾಯಿತರಾಗುತ್ತಾರೆ. ಅಥವಾ ಕಾಲು ಕೆಳಗೆ ಹಾಕಿ ಎರಡು ಕೈಗಳನ್ನೂ ಹಾಸಿಗೆಯ ಮೇಲೆ ಊರಿಕೊಂಡು ಕುಳಿತುಕೊಳ್ಳುತ್ತಾರೆ.

ಮತ್ತೆ ಮೂಪಮ್ಮೆಯೂ ಅದೇ ಮಂಚದ ಮೇಲೆ ಕುಳಿತುಕೊಳ್ಳುವುದುಂಟು. ಅರಸುಗಳು ಹೆಂಡತಿಯ ಹತ್ತಿರ ಏನೊ ವ್ಯವಹಾರದ ಮಾತುಗಳನ್ನಾಡಿ ಮತ್ತೆ ಮಾಳಿಗೆಯ ಮೇಲೆ ಹೋಗಿಬಿಡುತ್ತಾರೆ. ಅದು ವರೆಗೆ ಗಪ್ ಚಿಪ್ಪಾಗಿದ್ದ ಕೆಳಭಾಗವು ಮತ್ತೆ ಹೆಂಗಸರ ಗಂಡುಸರ ಕಲಕಲ ರವದಿಂದ ತುಂಬಿ ಹೋಗುತ್ತದೆ.

ಹೀಗೆ ಕೆಳಗೆ ನಡೆಯುವ ಶಾವು ಶಿಕಾಣಯಿಲ್ಲದಂತಹ ಗಲಾಟೆ ಮಾಳಿಗೆಯ ಮೇಲಕ್ಕೆ ಕೇಳಿಸುವುದಿಲ್ಲವೆಂದೇನಿಲ್ಲ. ಅರಸುಗಳಿಗೆ ಚೆನ್ನಾಗಿಯೇ ಕೇಳಿಸುತ್ತದೆ. ಅವರೂ ಅದನ್ನು ಲಕ್ಷ್ಯಗೊಟ್ಟೇ ಕೇಳುತ್ತ ತಮ್ಮ ಸಮಯ ಹೋಗಲಾಡಿಸಿಕೊಳ್ಳುತ್ತಾರೆ. ಹಾಗೊಂದು ವೇಳೆ ವಿಪರೀತ ಗಲಾಟೆಯಾಗಿ ಅವರಿಗೆ ಹರಟೆಯೆನಿಸಿದರೆ "ಸ್ವಲ್ಪ ಮೆಲ್ಲ ಕೂಗೂಂತ ಹೇಳು ಮಾಣಿ" ಎಂದು ತಿಮ್ಮನನ್ನು ಕೆಳಗೆ ಕಳುಹಿಸುತ್ತಾರೆ. ಅಥವಾ ಮಾಳಿಗಿಯ ಮೆಟ್ಟಿಲ ಹತ್ತಿರ ಬಾಗಿ ಕೆನೆಯುತ್ತಾರೆ. ಹಾಗೆಯೇ ಉಪ್ಪರಿಗೆಯ ಕಿಟಕಿಯ ಹತ್ತಿರ ಕುಳಿತರೆ ಅಂಗಳದಲ್ಲಿಯೂ ಜಗಲಿಯಲ್ಲಿಯೂ ನಡೆಯುವುದೆಲ್ಲ ಅವರಿಗೆ ಕಾಣಸುತ್ತದೆ. ಅದು ಎಲ್ಲರಿಗೂ ಗೊತ್ತಿದೆಯಾದರೂ, ಅವರು ಕೆಳಗೆ ಬಂದಾಗ ಮಾತ್ರ ಮೌನಸ್ತಬ್ಧತೆಗಳನ್ನು ತೋರಿಸುವುದು ಅವರಿಗೆ ತೋರಿಸುವ ಗೌರವ- ಅಷ್ಟೇ.

ಆ ಅರಸುಗಳಿಗೆ ಸರಕಾರದೊಂದಿಗೆ ಏನೋ ವ್ಯಾಜ್ಯವಿತ್ತು. ಅದನ್ನೆಲ್ಲ ಅವರ ಮಗ ಕುನ್ನಿಕೃಷ್ಣನ್ನಾಯರ್ ನೋಡಿಕೊಳ್ಳುತ್ತಿದ್ದ. ಆಗಾಗ ಏನೋ ಕಾಗದಗಳನ್ನು ತಂದು ಅರಸುಗಳಿಗೆ ತೋರಿಸಿ ಅವರ ರುಜು ಪಡೆದುಕೊಂಡು ಹೋಗುತ್ತಿದ್ದ. ಅದು ಮಳಂಪಾಡೀ ಕೋಡಿದಿ (ಕೋರ್ಟು)ಯಲ್ಲಿ ಎಷ್ಟೋ ವರ್ಷಗಳಿಂದ ನಡೆಯುತ್ತಿರುವ ವ್ಯವಹಾರವಂತೆ. ಈ ವ್ಯವಹಾರಕ್ಕಾಗಿಯೇ ಅವರು ತಮ್ಮ ಜಾಂಬಳೇ ಅರಮನೆಯಿಂದ ಮಲೆಯಾಳಿಯಲ್ಲಿರುವ ತಮ್ಮ ಹೆಂಡತಿ ಮೂಪಮ್ಮೆಯ ಮನೆಯಲ್ಲಿ ಬಂದು ಕುಳಿತಿರುವರಂತೆ. ಅವರೊಂದಿಗೆ ಅವರ ವಂಶಪರಂಪರೆಯಾದ ಛತ್ರ, ಚಾಮರ, ಪಾಲಕಿ, ಚಂಗಲಾಟೆ, ಮೊದಲಾದ ಬಿರುದು ಸೇವಾಚಿಹ್ನೆಗಳೂ ಬಂದಿದ್ದುವು. ಅವರ ಪೂರ್ಣ ಹೆಸರು ಬಹು ಗಂಭೀರವಾದುದು. ಅವರಿಗೆ ಬಂದ ಒಂದು ಪತ್ರದಲ್ಲಿ ಅವರ ಹೆಸರು ಹೀಗಿದ್ದುದನ್ನು ತಿಮ್ಮ ತಿಳಿದು ಆಶ್ಚರ್ಯಪಟ್ಟ. "ಶ್ರೀಮುಜ್ಞಾಂಬಳೇ ಜನ ರಕ್ಷಕ ಮಹಾರಾಜಶ್ರೀ ಗುಣವರ್ಧನ ವರ್ಮ ತಂಬಿರಾನ್!"

ಅವರ ನಾಯರ ಪತ್ನಿಯಾದ ಮೂಪಮ್ಮ ತನ್ನ ಈ "ಸಂಬಂಧಂ" (ಮದುವೆ) ಆದಂದಿನಿಂದಲೂ ಮೀನುಕೋಳಿ ಮುಂತಾದ ಮಾಂಸಾಹಾರವನ್ನು ಪೂರ್ಣ ಬಿಟ್ಟಿದ್ದಳು. ಮಕ್ಕಳೂ ಅಷ್ಟೇ. ಮಾತ್ರವಲ್ಲ ಆ ನಾಯರ ಕುಟುಂಬಿಕರ ವ್ರತ ಉಪವಾಸ, ಪೂಜೆ ನಮಸ್ಕಾರ ಮೊದಲಾದ ಆಚಾರ ಪದ್ಧತಿಗಳನ್ನು ನೋಡಿದರೆ ಬ್ರಾಹ್ಮಣರು ನಾಚಿಕೊಳ್ಳಬೇಕಿತ್ತು. ಅಲ್ಲಿ ಬ್ರಾಹ್ಮಣನೆಂದರೆ, ಅವನು ಎಂಥವನೇ ಇರಲಿ- ಎಲ್ಲರಿಗೂ ತುಂಬ ಗೌರವ-ಅಂತೆಯೇ ಅರಸುಗಳ ಹೊರತು ಮೂಪಮ್ಮ ಮೊದಲಾಗಿ ಎಲ್ಲರೂ ಹುಡುಗ ತಿಮ್ಮನೊಡನೆ ಬಹುವಚನದಿಂದಲೇ ಮಾತಾಡುತ್ತಿದ್ದರು. ಹುಡುಗನಾದರೂ "ಅಡೋ ಬಡೋ" (ಲೋ. ರೋ) ಎನ್ನರು.

ಅರಸುಗಳ ಅಡಿಗೆಗಾಗಿ 'ಬ್ರಾಹ್ಮಣ ಮಠ' ಎಂಬ ಒಂದು ಕಟ್ಟೋಣ, ಅರಮನೆಯ ಬದಿಯಲ್ಲಿ, ತುಸು ಎತ್ತರದಲ್ಲಿರುವ ತೋಟದ ನಡುವೆಯಿತ್ತು. ಅಲ್ಲಿ ಪೂಜೆಕೋಣೆ, ಸಾಮಾನು ಕೋಣೆ, ಅಡಿಗೇ ಕೋಣೆ, ಅಡಿಗೆ ಮನೆಯಿಂದಲೇ ನೀರು ಸೇದಲಾಗುವ ಬಾವಿ ಎಲ್ಲ ಇದ್ದವು. ಮಠದ ಇದಿರಿನಲ್ಲಿ ದೊಡ್ಡ ಕೆರೆಯೂ ಇದೆ. ಓಣಂ, ನ್ಯಯುಮ್ಮತದಾ ಕನ್ನಿ ಮೊದಲಾದ ವಿಶೇಷ ಹಬ್ಬಗಳಲ್ಲಿ ದೊಡ್ಡ ದೊಡ್ಡ ಬ್ರಾಹ್ಮಣ ದೇಹಣ್ಣಕ್ಕಾರರನ್ನು ಕರೆಯಿಸಿ ಭೂರಿ ಅಡಿಗೆ ಮಾಡಿಸುವುದೆಲ್ಲ ಈ ಮಠದಲ್ಲಿಯೇ. ಪ್ರಸ್ತುತ ತಿಮ್ಮ ಮಾಣಿ ಅರಸುಗಳಿಗೆ ಮಾತ್ರ ಅಡಿಗೇ ಮನೆಯಲ್ಲಿ ಅಡಿಗೆ ಮಾಡಿದರೆ, ಮೂಪಮ್ಮಯ ತಂಗಿ ಮೊದಲಾದವರು ವಿಸ್ತಾರವಾದ ಜಗಲಿಯಲ್ಲಿ ಉಳಿದವರಿಗೆಲ್ಲ ಅಡಿಗೆ ಮಾಡುತ್ತಿರುತ್ತಾರೆ.

ಅರಸುಗಳಿಗೆ ಪ್ರಿಯವಾದ ಅಡಿಗೆ ಯಾವುದು ಏನೆಂಬುದೆಲ್ಲ ಮೂಪಮ್ಮಗೂ ಚೆನ್ನಾಗಿ ಗೊತ್ತಿತ್ತು. ಆದರೆ ಅವಳು ಮಾಡಿದ ಅಡಿಗೆ ಅರಸುಗಳು ಉಣ್ಣುವಂತಿಲ್ಲವಷ್ಟೆ? ತಿಮ್ಮನಿಗೆ ಇದೊಂದು ಆಶ್ಚರ್ಯದ ಒಗಟು. ಹೆಂಡತಿ ಮಕ್ಕಳು ಮಾಡಿದ್ದನ್ನು ಮುಟ್ಟಿದ್ದನ್ನು ಯಜಮಾನರು ತಿನ್ನಬಾರದೆಂದರೆ?...

೫

ಅಲ್ಲಿ ಅವನಿಗೆ ಇನ್ನೂ ಅನೇಕ ಆಶ್ಚರ್ಯಗಳಿದ್ದುವು ಅವನು ತನ್ನ ಸ್ವಂತ ಊರಿನಲ್ಲಿ ನೋಡಿದಂತಹ ಅರೆಂಟು ಮೊಳಗಳ ವಿವಿಧ ಬಣ್ಣಗಳ ಸೀರೆಗಳನ್ನುಟ್ಟ ಹೆಣ್ಣು ಜಾತಿಯನ್ನೇ ಅವನಿಲ್ಲಿ ನೋಡಿಲ್ಲ. ಮೂಪಮ್ಮೆಯೂ ಇತರ ಹೆಣ್ಣು ಮಕ್ಕಳೂ ಗಂಡುಸರ ಹಾಗೆ ಬೆಳ್ಳಂಬಿಳಿಯ ವಸ್ತ್ರವನ್ನೇ ಉಟ್ಟುಕೊಂಡಿರುವರು. ಮೂಪಮ್ಮೆಯ ಕಿವಿಗಳು ಹೆಗಲತನಕ ಜೋಲಾಡುತ್ತ, ಅಚ್ಚಬಂಗಾರದ ದೊಡ್ಡ ದೊಡ್ಡ "ತಕ್ಕ" ಎಂಬ ಆಭರಣ (ಓಲೆ)ಗಳನ್ನು ಉಯ್ಯಾಲೆಯಾಡಿಸುತ್ತ ಜ್ವಲಿಸುತ್ತಿದ್ದವು. ಆ ತಕ್ಕಾಭರಣಗಳಿಂದಲೇ ಮೂಪಮ್ಮಯ ಮುಖಕ್ಕೆ ಅಧಿಕಾರದರ್ಪ ಗಾಂಭೀರ್ಯ ಎಲ್ಲ ಬಂದಹಾಗಿತ್ತು. ಆ ತಕ್ಕೋಲೆಗಳೇ ಅವಳ ಮೂಪಮ್ಮತ್ವಕ್ಕೆ ಗುರುತುಗಳು. ಇತರ ಚಿಕ್ಕ ದೊಡ್ಡ ಸ್ತ್ರೀಯರಾರಿಗೂ ಅಷ್ಟು ದೊಡ್ಡ ರಂಧ್ರಗಳಿಂದ ಜೋಲಾಡುವ ಕಿವಿಗಳೂ ಇಲ್ಲ. ಅಂಥ ಭಾರಿಯ ತಕ್ಕಾಭರಣಗಳೂ ಇಲ್ಲ. ಆದರೂ ಎಲ್ಲರೂ ದೊಡ್ಡ ದೊಡ್ಡ ಬಂಗಾರದ ಗಟ್ಟಿಗಳಂತಹ ಬೆಂಡೋಲೆಗಳನ್ನೇ ಧರಿಸಿಕೊಳ್ಳುತ್ತಾರೆ. ಮನೆಗೆ ಹಿರಿಯಳಾದವಳು ವಯಸ್ಸು ಏರಿದಂತೆ ತಕ್ಕಗಳ ಗಾತ್ರವನ್ನೂ ದೊಡ್ಡದು ಮಾಡಿಸುತ್ತಾ ಹೋದಾಗ ಕಿವಿಗಳೂ ಜೋಲಾಡುತ್ತವಂತೆ

ಅರಸುಗಳ ಹತ್ತಿರ ಪೆಟ್ಟಿಗೆಯಲ್ಲಿ ಎಷ್ಟೋ ಚಿನ್ನವಿರುವುದನ್ನು ತಿಮ್ಮ ನೋಡಿದ್ದ. ಪವನುಗಳೂ, ಹಳೆಯ ಕಾಲದ ರಾಮಟೆಂಕಿಗಳೂ ಹೇರಳವಾಗಿದ್ದವು. ಮನೆಗೇ ಅಕ್ಕಸಾಲಿಗನನ್ನು ಕರೆಸಿ, ಆ ನಾಣ್ಯಗಳನ್ನೂ ಚಿನ್ನದ ಗಟ್ಟಿಗಳನ್ನೂ ಕರಗಿಸಿ ಹೊಸ ಹೊಸ ಆಭರಣಗಳನ್ನು ಮಾಡಿಸುತ್ತಿದ್ದರು. ಇದೆಲ್ಲ ತಿಮ್ಮನಿಗೆ ಅಪೂರ್ವ ದೃಶ್ಯಗಳು.

ಅಲ್ಲಿರುವ ಕೂಲಿನಾಲಿ ಕೆಲಸದ ಹೆಣ್ಣಾಳುಗಳು. ಯುವತಿಯಿರಲಿ. ಮುದುಕಿಯಿರಲಿ

ರವಿಕೆ ಹಾಕಿಕೊಳ್ಳುತ್ತಿದ್ದಿಲ್ಲ. ಅದರ ಬದಲಿಗೆ ಸಣ್ಣ ಟೈರಾಸನ್ನ ಎದೆಗೆ ಮುಚ್ಚಿಕೊಳ್ಳುವರು. ಉಟ್ಟ ಮೇಲಿನ ಬಿಳಿ ವಸ್ತ್ರ ಕೂಡ ಕಾಲು ಗಂಟಿನ ವರೆಗಷ್ಟೇ ಇರುವುದೂ ಉಂಟು. ಕೆಲ ಸರಿಗೆ. ವಯಸ್ಸಾದ ಮುದುಕಿ ಕೂಲಿ ಹೆಂಗಸರು ಎದೆಯಲ್ಲಿ ಏನೂ ಇಲ್ಲದೆಯೇ ಕೆಲಸ ಮಾಡುತ್ತಿರುವರು.

ಶ್ರೀಮಂತ ಯುವತಿಯರೆಲ್ಲ ನೆಲಕಾಲು ಮುಟ್ಟುವ ಬಿಳಿ ವಸ್ತ್ರದಿಂದಲೂ ರವಿಕೆಯಿಂದಲೂ, ಅದರ ಮೇಲೊಂದು ಶುಭ್ರ ಟೈರಾಸಿನಿಂದಲೂ ರಾಜಿಸುತ್ತಿರುವರು. ಮನೆಗೆ ಯಜಮಾನಿಯಾದವಳು ರವಿಕೆಯಿಲ್ಲದೆ ಜೋಲಾಡುವ ತನ್ನ ದೊಡ್ಡ ದಪ್ಪದ ಎದೆಯ ಮೇಲೆ ಬಿಳಿ ಟೈರಾಸನ್ನು ಸುತ್ತಿಕೊಂಡು, ಅಧಿಕಾರ ವಾಣಿಯನ್ನು ಮುಖದಿಂದ ಚಲಾಯಿಸುತ್ತ, ಎದೆಯ ವಸ್ತ್ರವನ್ನು ಬಿಚ್ಚಿ ಬಿಚ್ಚಿ ಸಿಕ್ಕಿಸಿಕೊಳ್ಳುವ ಮೋಡಿಯೇ ಅವಳ ದೊಡ್ಡಸ್ತಿಕೆಯ ನಿಶಾನೆಯಂತೆ ಕಾಣಿಸುತ್ತದೆ. ಕೋಪ ಬಂದಾಗ ಎದೆ ವಸ್ತ್ರ ಬಿಚ್ಚಿ ಕಟ್ಟಿಕೊಳ್ಳುವುದು ಒಳ್ಳೇ ರಭಸದಿಂದ ಸಾಗುತ್ತದೆ. ಮೂಪಮ್ಮ ಕೆಲವು ಸಾರಿ ಅವಳ ತಂಗಿಯೊಂದಿಗೆ ಜಗಳಾಡುವಾಗ ಬಾಯಿಯಿಂದುದುರುವ ತೀಕ್ಷ್ಣ ಮಾತುಗಳೊಂದಿಗೆ ತೆಕ್ಕಾಭರಣಗಳುಯ್ಯಾಲೆಯೂ, ಎದೆ ವಸ್ತ್ರದ ತಾಂಡವೂ ಹಾರಾಡುತ್ತಿರುತ್ತವೆ. ಮಧ್ಯೆ ಮಧ್ಯೆ ಕೈಯೂ ಎದೆ ಮಟ್ಟದ ಆಕಾಶವನ್ನು ತಿವಿಯುತ್ತಿರುತ್ತದೆ.

ಮೊದ ಮೊದಲು ತಿಮ್ಮನಿಗೆ ತುಸು ದೂರದಲ್ಲಿ ಗಂಡು ಹೆಣ್ಣುಗಳ ವ್ಯತ್ಯಾಸ ಕಂಡು ಹಿಡಿಯಲು ಒಂದು ನಿಮಿಷ ಬೇಕಾಗುತ್ತಿತ್ತು. ಕಾರಣ ಗಂಡಸರು ಕೂಡಾ ಶುಭ್ರವಾದ ಬಿಳಿ ಪಂಚೆಯನ್ನೇ ಉಟ್ಟುಕೊಂಡು ಚಿಕ್ಕ ಟೈರಾಸನ್ನು ಹೆಗಲಲ್ಲಿ ಹಾಕಿಕೊಂಡಿರುತ್ತಾರೆ. ತಲೆಯ ಕೂದಲನ್ನು ಮುಂಬದಿಗೆ ಹಣೆಯ ಮೇಲೆ ಗಂಟು ಹಾಕಿಕೊಳ್ಳುತ್ತಾರೆ. ಕೆಲವು ಬಾರಿ ಹೆಂಗಸರು ಕೂಡ ಹೀಗೆಯೇ ಗಂಟು ಹಾಕಿಕೊಳ್ಳುವುದುಂಟು. ಆದರೂ ಹೆಂಗಸರಿಗೆ ಗಂಡಸರಿಗಿಂತ ಹೆಚ್ಚು ದಟ್ಟವಾದ ತಲೆ ಕೂದಲ ರಾಶಿಯಿದೆ. ತಲೆಕೂದಲೂ, ಎದೆಯೂ, ಕಿವಿಯ ತೂತುಗಳೂ, ಗಂಡು ಹೆಣ್ಣುಗಳೊಳಗಿನ ವ್ಯತ್ಯಾಸದ ಗುರುತುಗಳೆನ್ನಬಹುದು. ದೂರದಲ್ಲಿ ಗದ್ದೆ ಹೊಲಗಳಲ್ಲಿ ಕೆಲಸ ಮಾಡುತ್ತಿರುವ ತೊಡೆಮಟ್ಟದ ಬಟ್ಟೆಯುಟ್ಟ ಕಪ್ಪಾಳುಗಳನ್ನು ನೋಡಿದರೆ ಗಂಡೋ ಹೆಣ್ಣೋ ಹೇಳಲಿಕ್ಕಾಗದು.

೬

ಇದೆಲ್ಲಾ ತಿಮ್ಮನಿಗೆ ಕೆಲವೇ ದಿನಗಳಲ್ಲಿ ಮೈ ಹಿಡಿಸಿ ಹೋಯಿತು. ಅದರೊಂದಿಗೆ ಕೆಲಸಗಳೂ ಮೈಹಿಡಿಸಿದುವು. ಹೊಗಳಿಕೆಗೆ ಉಬ್ಬಿ ಹೋಗುವಂತಹ ಎಳೆ ವಯಸ್ಸಿನ ಹೊಲಬನ್ನರಿತ ಆ ಮನೆಯವರು ಹೊಗಳಿ ಹೊಗಳಿ ಅವನಿಗೇ ಸ್ವತಃ ಹುರುಪು ಬರುವ ಹಾಗೆ ಮಾಡಿಬಿಟ್ಟರೆಂಬುದೇ ಸರಿಯಾದುದು. ತನ್ನ ನಿರ್ದಿಷ್ಟ ಕೆಲಸವಾವುದು, ಅದಕ್ಕೆ ಸಿಕ್ಕುವ ಸಂಬಳವೆಷ್ಟು, ಹೆಚ್ಚು ಕೆಲಸ ಮಾಡಿದರೆ ಅದಕ್ಕೆ ತಕ್ಕ ಹೆಚ್ಚು ಪ್ರತಿಫಲವೂ ಉಂಟೆ? ಇದೊಂದೂ ತಿಮ್ಮನಿಗೆ ತಿಳಿಯದು, ಅದೆಲ್ಲ ಅವನ ಅಣ್ಣನಿಗೆ ಗೊತ್ತು, ತಾಯಿಗೆ ಗೊತ್ತು. ಅವನಿಗೆ ಎಣ್ಣೆ, ಅನ್ನ, ಬಟ್ಟೆ, ಕ್ಷೌರಗಳನ್ನು ಕೊಟ್ಟು, ತಿಂಗಳಿಗೆ ಐದು ರೂಪಾಯಿ ಸಂಬಳದಂತೆ ಒಂದು ವರ್ಷದ ಮೊತ್ತವನ್ನು ಮುಂಗಡ ಪಡೆಯಲಾಗಿತ್ತೆಂಬ ವ್ಯವಹಾರದ ಅರ್ಥ ಅವನಿಗಾಗಿರಲಿಲ್ಲ. ಅದು ಅವನಿಗೇನೂ ಸಂಬಂಧವಿಲ್ಲದ ವಿಷಯ. ಮೊದಲಬಾರಿ ಒಂದು ಜತೆ ಮೂರ್ಮೊಳದ ವೇಷ್ಟಿ, ಮತ್ತು ಒಂದು ಜತೆ ಕೋರ್ತುಮುಂಡ [ಟೈರಾಸು] ಅವನು ಅಲ್ಲಿಗೆ ಸೇರಿದಾಗಲೇ ಅವನಿಗೆ ಸಿಕ್ಕಿತ್ತು. ಅದು ಅರಸುಗಳು ಅವನಿಗೆ ಕೊಟ್ಟ ಬಹುಮಾನವೆಂದು ದೊಡ್ಡಣ್ಣ ಹೇಳಿದ್ದ. ಅಲ್ಲಿ ನಿತ್ಯ ಕೆಲಸ ಮಾಡುವಾಗ ಉಟ್ಟುಕೊಂಡಿರಲಿಕ್ಕೆ ಆ ಕೋರ್ತುಗಳು. ಎಲ್ಲಿಗಾದರೂ ದೂರ ಹೋಗುವಾಗ-ಅಂತಹ ಪ್ರಸಂಗ ಬಂದುಗಿಂದರೆ ಅಥವಾ ಮುಂದೆ ಯಾವಾಗಾದರೂ ಊರಿಗೆ ಹೋಗುವಾಗ ಉಟ್ಟುಕೊಳ್ಳಲಿಕ್ಕೆ ಆ ಮೂರ್ಮೊಳದ ವೇಷ್ಟಿಗಳು. ಆ ಹೊಸ ವೇಷ್ಟಿಗಳನ್ನು ಅವನು ಊರಿಂದ ಬರುವಾಗ ಹಾಕಿಕೊಂಡು ಬಂದ ತನ್ನ ಅಂಗಿಯೊಂದಿಗೆ ಮಡಚಿ ತನ್ನ ಪೆಟ್ಟಿಗೆಯಲ್ಲಿಟ್ಟುಕೊಂಡಿದ್ದ. ಅದನ್ನು ಉಟ್ಟುಕೊಳ್ಳುವಂತಹ ದೂರ ಪ್ರಯಾಣದ ಸಂದರ್ಭವೇ ಅವನಿಗೆ ಬರಲಿಲ್ಲ.

ಯಾವಾಗಲಾದರೂ ಹುಣ್ಣಿಮೆ—ಅಮಾವಾಸ್ಯೆಗಳಿಗೆ ತುಸು ದೂರದಲ್ಲಿದ್ದ ಅಂಬಲ [ದೇವಾಲಯ]ದಲ್ಲಿ ಅರಸುಗಳ ಮನೆಯವರು ಪೂಜೆ ಮಾಡಿಸುವರು. ಅರಸುಗಳ ಕುಮಾರಿಯರು ಮಿಂದು ಶುಭ್ರರಾಗಿ ಡೋಲಿಯಲ್ಲಿ "ಓಂ. ಓಂ" ಎಂಬ ಡೋಲಿಕಾರರ ನಾದದೊಂದಿಗೆ ಅಂಬಲಕ್ಕೆ ಹೋಗುವಾಗ ಅವರೊಂದಿಗೆ ತಿಮ್ಮನೂ ನಡೆಯುತ್ತಾ ಹೋಗಬೇಕು-ಹಣ್ಣುಕಾಯಿಗಳನ್ನು ಹಿಡಿದುಕೊಂಡು. ಆಗ ಪೆಟ್ಟಿಗೆಯಿಂದ ವೇಷ್ಟಿಯನ್ನು ತೆಗೆದು ಉಟ್ಟುಕೊಂಡು, ತೋರ್ತನ್ನು ಸೊಂಟಕ್ಕೆ ಸುತ್ತಿ ಕಟ್ಟಿಕೊಳ್ಳುತ್ತಾನೆ. ಹಾಗೆ ಕಟ್ಟಿಕೊಂಡು, ಮೈಗೆ ವಿಭೂತಿ ಹಚ್ಚಿಕೊಂಡು ಹಣೆಯಲ್ಲಿ ಚಂದನವಿಟ್ಟುಕೊಂಡರೇನೇ ದೇವಸ್ಥಾನಕ್ಕೆ ಹೋಗುವ ಮಡಿಯವನೆನಿಸುವನು. ತಿಮ್ಮನು ಮಧ್ವಮತಸ್ಥನಾಗಿ, ಗೋಪೀಚಂದನ ಹಚ್ಚಿಕೊಳ್ಳುವವನಾದರೂ, ಅಲ್ಲಿ ಎಲ್ಲರೂ ಪಟ್ಟೆಪಟ್ಟೆ ವಿಭೂತಿಯನ್ನೇ ಹಚ್ಚಿಕೊಂಡು ಶಿವಶಿವಾ ಎನ್ನುವವರಾದುದರಿಂದ ಅವನೂ ಹಾಗೆಯೇ ಹಚ್ಚಿಕೊಳ್ಳುತ್ತಿದ್ದನು. ಹಾಗೆ ತಿಮ್ಮ ಶುದ್ಧನಾಗಿ ಕಾಣಿಸಿದರೆಂದರೆ ಇತರರಾರೂ ಅವನನ್ನು ಮುಟ್ಟರು, ಅವನು ಅರಸುಗಳ ಶುದ್ಧ ಪರಿಚಾರಿಕನಾದನೆಂದು ಅರ್ಥ.

ಹಾಗೆ ತಿಮ್ಮ ಡೋಲಿಯ ಹಿಂದೆ ದೇವಾಲಯಕ್ಕೆ ಹೋಗಬೇಕಾದ ಅಗತ್ಯವೇಕೆಂದರೆ, ಅರಸುಗಳಿಗೆ ಅಲ್ಲಿಂದ ಪ್ರಸಾದ ತರಬೇಕಲ್ಲ? ನಾಯರುಗಳಾದ ಆ ಕುಮಾರಿಯರು ಮುಟ್ಟಿದ್ದನ್ನು ಅರಸುಗಳು ಸ್ವೀಕರಿಸಿಕೊಳ್ಳಲಾರರಷ್ಟೆ?

ಅಂಬಲದ ಅರ್ಚಕನು ಗಮಗಮಿಸುವ ಪಾಲ್ಪಾಯಸವನ್ನು ದೇವರಿಗೆ ನೈವೇದ್ಯ ಮಾಡುತ್ತಾನೆ. ಆಗ ದೇವರ ತೀರ ಹತ್ತಿರದಲ್ಲಿ ನಿಂತು ಪೂಜೆ ನೋಡುವ ಹಕ್ಕು ತಿಮ್ಮನದೇ. ಕುಮಾರಿಯರು ಹೊರಗೇ ನಿಂತು ಬಗ್ಗಿ ನೋಡಬೇಕು.

ಎಲ್ಲಾ ಆದ ಮೇಲೆ ತಿಮ್ಮ ಪಾಲ್ಪಾಯಸದ ಉರುಳಿಯನ್ನು ಹೊತ್ತುಕೊಂಡು ಡೋಲಿಯ ಹಿಂದಿನಿಂದ ಗದ್ದೆ ಹುಣಿ, ಕೆರೆಯ ಏರಿ, ತೋಟ ಬಾಳೆ ಹೊಲಗಳ ದಾರಿಯಲ್ಲಿ ಮೂರು ಮೈಲು ನಡೆದು ಅರಮನೆಗೆ ಒಂದು ಮುಖವನ್ನು ಪ್ರವೇಶಿಸುತ್ತಾನೆ.

ಹೀಗೆ ಬಂದ ಅಂಬಲದ ಪಾಲ್ಪಾಯಸವನ್ನು ಅರಸುಗಳು ತಿಮ್ಮನೂ ಸ್ವೀಕರಿಸಿಕೊಂಡ ಅನಂತರ, ಉಳಿದುದನ್ನು ಚೂರು ಚೂರು ಎಲ್ಲರಿಗೂ ಬಡಿಸಬೇಕು ತಿಮ್ಮನೆ. ಆದರೆ ಆ ದಿನ ಎಲ್ಲರಿಗೂ ಅವರ ಅಡಿಗೆ ಮನೆಯಲ್ಲಿ ತಯಾರಾದ ಮಾಮೂಲ ಪಾಯಸಬೇಕಾದಷ್ಟಿರುತ್ತೆ. ಅದನ್ನೆಲ್ಲ ಅವರ ಜನವೇ ಬಡಿಸಿಕೊಳ್ಳುವುದು. ಅವರೆಲ್ಲ ಸುರಿಸುರಿದುಕೊಂಡು ಆ ಪಾಯಸವನ್ನು ಸವಿಯುತ್ತಿರುವಾಗ ಅದರ ಸುವಾಸನೆ ತಿಮ್ಮನವರೆಗೂ ಹೊಡೆಯುತ್ತಿರುತ್ತೆ. "ಆಹಾ! ಇಂಥಾ ಪಾಯಸ ನಮ್ಮ ಮಾಣಿಗೆ ತಿನ್ನಲಿಕ್ಕಿಲ್ಲವಲ್ಲ! ತಿಂತೀರಾ ಮಾಣೀ, ಜನಿವಾರ ತೆಗೆದು ದೂರ ಇಟ್ಟು ತಿಂದು ಮತ್ತೆ ಸ್ನಾನ ಮಾಡಿ ಜನಿವಾರ ಹಾಕಿಕೊಳ್ಳಬಹುದು" ಎಂದು ಒಬ್ಬರು ಹೇಳಿದಾಗ ಎಲ್ಲರೂ ನಗುವರು. ತಿಮ್ಮನೂ ನಗುವನು. "ವೇಂಡೇ, ಅಂಗನೆ ಪರಯರುದೇ" ಬೇಡ, ಹಾಗೆ ಹೇಳಬಾರದು! ಎಂದು ಮೂಪಮ್ಮ ಗದರಿಸಿ "ಅಂಬಲಂಪಾಯಸ ಬಡಿಸಿ ಮಾಣೀ" ಎನ್ನುವಳು.

ತಿಮ್ಮಣ್ಣ ಮೊದಲು ಮೂಪಮ್ಮಗೆ ಬಡಿಸುವನು. ಮೂಪಮ್ಮ ಉರುಳಿಯನ್ನು ನೋಡಿ, "ಇಷ್ಟು ಪಾಯಸ ಇದೆಯಲ್ಲಾ, ನೀವು ಬೇಕಷ್ಟು ತಿಂದಿಲ್ಲವೇ ಮಾಣೀ?" ಎನ್ನುವಳು.

"ಓ ತಿಂದನಲ್ಲಾ" ಎನ್ನುವನು ತಿಮ್ಮ.

"ಇನ್ನೂ ಸ್ವಲ್ಪ ತಿನ್ನಬೇಕು ನೀವು ಮಾಣೀ." ಎಂದು ಒತ್ತಾಯಿಸುವಳು ಮೂಪಮ್ಮ. ಅಂತೆಯೇ ಉಳಿದವರು ಕೂಡಾ, ತಿಮ್ಮನಿಂದ ಚೂರು ಚೂರೇ ಹಾಕಿಸಿಕೊಂಡು ಉರುಳಿಯಲ್ಲಿ ಸ್ವಲ್ಪ ಉಳಿಯುವಂತೆ ನೋಡಿಕೊಳ್ಳುವರು. ಕೊನೆಗೆ ತಿಮ್ಮ ಅಡಿಗೆ ಮನೆಯಲ್ಲಿ ಕುಳಿತು ಉರುಳಿಯಲ್ಲಿದ್ದುದನ್ನೆಲ್ಲ ಒರೆಸಿ ಹಾಕಿಕೊಂಡು ತಿಂದು ಮುಗಿಸುವುದನ್ನು ನೋಡಿಯೇ ಅವರೆಲ್ಲ ಹೋಗುವರು. ನಿಜಕ್ಕೂ ತಿಮ್ಮನಿಗೆ ಪಾಯಸವೆಂದರೆ ಬಹಳ ಇಷ್ಟ. ಅದರಲ್ಲೂ ಅಂಬಲದ ಪಾಲ್ಪಾಯಸಕ್ಕೆ ವಿಶೇಷ ರುಚಿಯಿರುತ್ತದೆ. ಉರುಳಿಯಲ್ಲಿದ್ದಷ್ಟನ್ನೂ ತಿಂದುಬಿಡಬೇಕೆಂಬಷ್ಟು ಆಶೆಯಿದ್ದರೂ ಅದನ್ನು ತೋರಿಸಿಕೊಳ್ಳುವುದಿಲ್ಲ. ಅದನ್ನೆಲ್ಲ ಗ್ರಹಿಸಿಕೊಂಡಿದ್ದಳು ಮೂಪಮ್ಮ. ಮಾಣಿಯ ಆಸೆಗೆ ತೃಪ್ತಿಯಾಗದಿದ್ದರೆ ಉಳಿದವರಿಗೆಲ್ಲ ಹೊಟ್ಟೆನೋವು ಶುರುವಾದೀತೆಂದು ಅವರಿಗೆಲ್ಲ ಸಂಶಯ. ಭಯ. ಹೀಗಾಗಿ ಮೂಪಮ್ಮ ತಿಮ್ಮನ ಪಾಲಿಗೆ ಹಡೆದ ತಾಯಿಗಿಂತಲೂ ಹೆಚ್ಚಿನವರೆನಿಸಿದಳು.

ಕೆಲಸವಿಲ್ಲದಾಗ ತಿಮ್ಮ ಸುಮ್ಮನೆ ಮೂಲೆ ಮೂಡುಕುಗಳಲ್ಲಿ ಕುಳಿತು ದುಃಖಿಸುವುದನ್ನು ಮರೆತನು. ಹೊಸ ವಾತಾವರಣ ಚೆನ್ನಾಗಿ ಹಿಡಿಸಿಕೊಂಡಿತು. ಊರ ಮನೆಯಲ್ಲಿ ಸುಟ್ಟ ಗೇಣುದ್ದದ ಹಪ್ಪಳ ತಿಂದವನಿಗೆ ನೇಂದ್ರ ಬಾಳೇಹಣ್ಣುಗಳೂ, ಮರುವಲುಗಳೂ, ಹುರಿ ಬಾಳೇಕಾಯಿ, ಮೊಸರಿನೊಂದಿಗೆ ರುಚಿಯಾದ ರಾಜಭೋಜನವೂ ಸಿಕ್ಕಿದುವು. ಕಳೆಗಟ್ಟಿತು ತಿಮ್ಮನ ಮೈ.

ಅಲ್ಲಿ ತಿಮ್ಮನಿಗೆ ಪ್ರವೇಶಕ್ಕೆ ತಡೆಯುಳ್ಳ ಸ್ಥಳ ಯಾವುದೂ ಇರಲಿಲ್ಲ. ಅರಮನೆಯೊಳಗೆ ಎಲ್ಲಿ



ಹಚ್ಚು ದೀಪವನು

ಹಚ್ಚು ದೀಪವನು ಮನದ ಅಂಗಳದಿ
ಅರಿವಿನರಣಿಯನುಜ್ಜಿ.
ಹೆಜ್ಜೆ ಹೆಜ್ಜೆಗು ತಮದ ತಿಮಿರದಲಿ
ನುಚ್ಚು ನೂರಾಗಬೇಡ.

ಕಾಳಕೈತವದೊಳಗೆ ಬೆಳಕು ಸೆರೆಯಾಗಿ
ಬಿದ್ದಿಹುದು ಮೂಲೆಯಲ್ಲಿ.
ಕುನಸುಗರ್ಭದ ಒಳಗೆ ಜಾತಿಭೂತದ ಭ್ರೂಣ
ಬೆಳೆಯುತಿದೆ ಮತ್ತೆ ಮತ್ತೆ.

ತಾಯ್ನುಡಿಯ ಹೆಸರಿನಲಿ ಅಡಿಗಡಿಗೆ
ಮುಳ್ಳುಬೇಲಿಯ ಕಿಚ್ಚು
ಎಲ್ಲಿ ಹತ್ತಿ ಇನ್ನೆಲ್ಲಿ ಜಾಚುವುದೊ
ಹುಚ್ಚು ನಾಯಿಗಳ ರೊಚ್ಚು.

* * *

ಎಲ್ಲಿಹೋದ ವಾಲ್ಮೀಕಿ ಬೆಳಗಿಸಿದ
ರಾಮನೆದೆ ಬೆಳಕು?
ಬುದ್ಧ ಬಂದು ಕನಿಕರಿಸಿ ಕೇಳಿದರೆ
ಏನೆಂದು ಹೇಳಬೇಕು?

ಗಾಂಧಿಮೋಹನ ಕೊಟ್ಟ ಬತ್ತಳಿಕೆ
ಬರಿದು ಆಯಿತೆ ಇಷ್ಟು ಬೇಗ!
ಬೆಳಕು ಕಾಣದೆ ಎಲ್ಲೂ ಬಂದಿಹೆನಾ
ತಂದೆ, ನಾ ನಿನ್ನ ಬಳಿಗೆ.

– ರಾಘವೇಂದ್ರ



ಬೇಕಾದರೂ ಹೋಗಬಹುದಾಗಿತ್ತು. ಕುನ್ಹೀನು (ಕುಮಾರಿ) ಗಳೊಂದಿಗೆ ಮಂಚದಲ್ಲಿ ಮಲಗಿಯೂ ಕುಳಿತೂ. ಅವರು ಹೇಳುವ ಅದ್ಭುತ ರಾಜ ಕುಮಾರರ ಕಥೆಗಳನ್ನು ಕೇಳುವುದೆಂದರೆ ತಿಮ್ಮ ನಿಗೆ ಬಹಳ ಇಷ್ಟ. ತಿಮ್ಮನೂ ತನಗೆ ಗೊತ್ತಿರುವ ಕಥೆಗಳನ್ನೆಲ್ಲ ಅವರಿಗೂ ಹೇಳುತ್ತಾನೆ. ಸಣ್ಣ ಕುನ್ಹೀನು ಹಾರ್ಮೋನಿಯಂ ಬಾರಿಸುವಾಗ ತಿಮ್ಮ ತಾಳ ಹಾಕುತ್ತಾನೆ. ತಿಮ್ಮನೂ ತನಗೆ ಗೊತ್ತಿರುವ ಪುರಂದರದಾಸರ ಕೀರ್ತನೆಗಳನ್ನು ಹಾಡುವಾಗ ಅವಳು ಅದಕ್ಕೆ ತಕ್ಕ ಹಾಗೆ ಹಾರ್ಮೋನಿಯಂ ಬಾರಿಸುತ್ತಾಳೆ.

ಇದಲ್ಲದೆ ತಿನ್ನುಣ್ಣುವ ವಿಷಯದಲ್ಲಿ ಕೂಡಾ ತಿಮ್ಮನೇನೂ ಮುಚ್ಚು ಮರೆಮಾಡಬೇಕಾಗಿರಲಿಲ್ಲ ಅವನಿಗೆ ಬೇಕಾದುದನ್ನು ಎಲ್ಲರೆದುರಿಗೇ ತೆಗೆದು ತಿನ್ನಬಹುದಾಗಿತ್ತು. ಕೆಲವು ಬಾರಿ ಮೂಪಮ್ಮ ಸುಮ್ಮಸುಮ್ಮನೆ ಅವನನ್ನು ನೋಡಿ "ಏನು ಮಾಣೀ ಒಂದು ಥರಾ ಇದೀರಿ? ಹಸಿವಾಗುತ್ತೋ? ಅವಲಕ್ಕಿ ಹಾಲು ಕೊಡಲೇ?" ಎನ್ನುತ್ತ ತಿಮ್ಮ "ಬೇಡ" ಎಂದರೂ ಕೇಳದೆ ಮಂಚದಡಿಯ ಜಾಡಿಯಿಂದ ಅವಲಕ್ಕಿ ತೆಗೆಯುವರು. "ನನಗೊತ್ತು ಮಾಣೀ. ನಿಮಗೀಗ ಹಸಿವಾದೀತು. ಆಗುತ್ತೆ, ಇದನ್ನು ನೋಡುವಾಗ ಖಂಡಿತಾ ಆಗುತ್ತೆ. ತಿನ್ನಲೇಬೇಕು." ಎಂದು ಅವಲಕ್ಕಿಗೆ ಹಾಲು ಸಕ್ಕರೆ ಹಾಕಿ ಅವನ ಮುಂದಿಟ್ಟು ತಿನ್ನಿಸುವರು. ಅದೂ ಬಹಳ ರುಚಿ.

ಕೆಲವು ಬಾರಿ ಅರಸುಗಳಿಗಾಗಿ ನೇಂದ್ರಬಾಳೆ ಹಣ್ಣಿನಿಂದಲೋ, ಸಬ್ಬಕ್ಕಿಯದೋ ವಿವಿಧ ಪಾಕ ವಿಶೇಷಗಳನ್ನು, ಮೂಪಮ್ಮ ಹತ್ತಿರ ಕುಳಿತು ತಿಮ್ಮನಿಂದ ಮಡಿಯಾಗಿ ಮಾಡಿಸುವುದುಂಟು-ಅರಸುಗಳಿಗಾಗಿ. ಆಗ ಒಮ್ಮೊಮ್ಮೆ ಅರಸುಗಳೂ ಹತ್ತಿರ ಬಂದು ಕುಳಿತುಕೊಳ್ಳುವುದುಂಟು. ಅರಸುಗಳೂ ತಿಮ್ಮನೂ ಸ್ವೀಕರಿಸಿಕೊಂಡ ಮೇಲೆ ಉಳಿದುದನ್ನು ಚೂರು ಚೂರು ಎಲ್ಲರೂ ರುಚಿ ನೋಡಿ "ನಮ್ಮ ಮಾಣಿಯು ಕೈಮುಟ್ಟಿದರೆ ವಿಷವೂ ಅಮೃತವಾಗುತ್ತೆ" ಅನ್ನುವರು.

"ಸಾಮಾನ್ಯ ಪಟ್ಟನ್ಮಾರುಗಳೆಲ್ಲ ನಮ್ಮ ಮಾಣಿಯ ಅಡಿಗೆಯ ಮುಂದೆ ನಾಚಿಕೊಳ್ಳಬೇಕು. ಎಂದಾ (ಏನು) ಮಾಣೀ, ನೀವು ದೇಹಣ್ಣಕ್ಕಾರರಾಗುವಿರೋ ಶಾಂತಿ (ಪೂಜೆ) ಮಾಡುವಿರೋ?" ಎಂದು ಒಂದು ಸಾರಿ ತಿಮ್ಮನನ್ನು ಕೇಳಿದಳು ಮೂಪಮ್ಮ.

ತಿಮ್ಮ ನಗುತ್ತ, "ದೇಹಣ್ಣಕ್ಕಾರನಾವಾನ್" (ಭಾರಿ ಅಡಿಗೆಯವನಾಗುವೆನು), ಎಂದ.

ಆ ಪ್ರಾಂತದಲ್ಲಿ ವಿಶೇಷ ಅಡಿಗೆಗೆ ಬರುವ ದೇಹಣ್ಣಕ್ಕಾರ ಬ್ರಾಹ್ಮಣರಿಗೆ "ಪಟ್ಟನ್ಮಾರ್" ಅನ್ನುತ್ತಾರೆ. ಪಟ್ಟನ್ಮಾರ್ ಅಂದರೆ ಸರ್ವಸಾಮಾನ್ಯ ಬ್ರಾಹ್ಮಣರು ಆದರೆ ತಿಮ್ಮನ ಹಾಗೆ ಕನ್ನಡ ಪ್ರಾಂತದಿಂದ ಮಲೆಯಾಳ ದೇಶಕ್ಕೆ ಹೋದವರೆಲ್ಲಾ "ಶಾಂತಿ" ಮಾಡುತ್ತ ದೇವಸ್ಥಾನದ ಸೇವೆಯಲ್ಲಿರುವವರೇ. ಅಂಥವರಿಗೆಲ್ಲ "ಎಂಬ್ರಾಂದ್ರಿಗಳು" ಎಂಬ ಗೌರವದ ಹೆಸರುಂಟು. ಅಂತಹವರನ್ನು ಪಟ್ಟನ್ಮಾರುಗಳಿಗಿಂತ ಹೆಚ್ಚಿನ ಬ್ರಾಹ್ಮಣರೆಂದು ತಿಳಿಯುತ್ತಾರೆ. ಅಂತೆಯೇ ಮೂಪಮ್ಮ ತಿಮ್ಮನನ್ನು ಕುರಿತು ಹೊಸಬರಿಗೆ ಪರಿಚಯಿಸುವಾಗ "ಇವರ ಹೆಸರು ತಿಮ್ಮನೆಂಬ್ರಾಂದ್ರಿ" ಎನ್ನುವಳು. ಹಾಗೆಯೇ ಕೆಲವರು ತಿಮ್ಮನನ್ನು "ಎಂಬ್ರಾಂದ್ರಿ ಮಾಣೀ" ಎಂದು ಕರೆಯುವರು.

ತಿಮ್ಮ ತಾನು ವಿಶೇಷ ದೇಹಣ್ಣಕ್ಕಾರನಾಗುವುದನ್ನೇ ಶ್ರೇಷ್ಠವೆಂದು ತಿಳಿದು ಉತ್ತರ ಹೇಳಿದ್ದನ್ನು ಕೇಳಿ ಮೂಪಮ್ಮ "ಹೌದು. ಕನ್ನಡ ನಾಡಿನವರೆಲ್ಲ ಇಲ್ಲಿಗೆ ಬಂದು ಶಾಂತಿಯನ್ನೇ ಮಾಡಬೇಕೆಂದೇನೂ ಇಲ್ಲವಲ್ಲ. ನಿಮ್ಮಣ್ಣ ರಾಮಾಯಣಂ ಭಾಗವತರು ನಮ್ಮಲ್ಲಿದ್ದು ಶಾಂತಿಯೇ ಮಾಡಿದ್ದು? ಸಂಗೀತದಲ್ಲಿ ಭಾಗವತರೂ ಅಂತ ಪ್ರಸಿದ್ಧರಾಗಲಿಲ್ಲವೆ?" ಎಂದಳು.

ಇದನ್ನು ತಿಳಿದುಕೊಂಡ ಹೊಸಬರು— "ಏನು! ಈ ಮಾಣಿ ಎಂಬ್ರಾಂದ್ರಿ ಭಾಗವತರ ಅನುಜ (ತಮ್ಮ) ನೋ!" ಎಂದು ಅಶ್ಚರ್ಯ ವ್ಯಕ್ತಪಡಿಸುವಾಗ ತಿಮ್ಮನ ಹೃದಯ ಅರಳಿ ನಿಲ್ಲುತ್ತಿತ್ತು– ತನ್ನ ಮಹತ್ವ ದೊರೆತಿದೆ ಎಂಬ ಹೆಮ್ಮೆಯಿಂದ.

೭

ಮನಸ್ಸಿನಲ್ಲೇನೋ ತಾನು ದೊಡ್ಡ ದೇಹಣ್ಣ ಕ್ಕಾರನಾಗಬೇಕೆಂದಿದ್ದರೂ ದೇಹಾವಯವಗಳೆಲ್ಲ ಹುಡುಗನದೇ ತಾನೆ? ಅದಕ್ಕೆ ತಕ್ಕಂತೆ ಆಟದ ಬುದ್ಧಿಯೂ ಜೋರಾಗಿತ್ತು ತಿಮ್ಮನಲ್ಲಿ. ಅವನ ಕೆಲಸ ಮುಗಿದ ಕೂಡಲೇ ಅಂಗಡಿಗಳ ಕಿರಿ ಮಗ ಕುಟ್ಟಪ್ಪೆಯೊಂದಿಗೆ ಆಟಕ್ಕೆ ಹೋಗಿಬಿಡು ತ್ತಿದ್ದ. ಇಬ್ಬರೂ ಸೇರಿಕೊಂಡು ತೋಟದ ಮರ ಗಳಿಗೆ ಹತ್ತಿ ಲಾಗಹಾಕುವುದೂ, ಅಡಗಿ ಕುಳಿತು ಓಡಿ ಹಿಡಿಯುವುದೂ ಅವರ ಮುಖ್ಯ ಆಟಗಳು. ಒಮ್ಮೆ ಹಾಗೆ ಓಡುವಾಗ ತಿಮ್ಮ ಜಾರಿಬಿದ್ದು, ಒಂದು ಕಲ್ಲು ಅವನ ಹಣೆಯಲ್ಲಿ ಚುಚ್ಚಿ ತೂತಾಗಿ ರಕ್ತಹರಿದು ಅವನ ಬೋಧವೂ ತಪ್ಪಿತು. ಮೂಪನ್ಮೆ ಮೊದಲಾದವರೆಲ್ಲ ಬಹಳ ಗಾಬರಿಯಾದರು. ಕೂಡಲೇ ಆಳನ್ನು ಓಡಿಸಿ ಚೆಂಬರವೈದ್ಯರನ್ನು ಕರೆಸಿ ಮದ್ದು ಹಚ್ಚಿಸಿ, ಕ್ರಮೇಣ ಗುಣಪಡಿಸಿದರೆನ್ನಿ. ಆ ಗಾಯದ ಪುಟ್ಟ ಗುಳ್ಳಿ ಮಾತ್ರ ತಿಮ್ಮನ ಹಣೆಯ ಮೇಲೆ ಶಾಶ್ವತವಾಗಿ ಉಳಿದುಹೋಗಿದೆ.

ತಿಮ್ಮ ಹಾಗೆ ಬಿದ್ದು ಗಾಯಮಾಡಿಕೊಂಡರೆ, ಅದಕ್ಕಾಗಿ ಮೂಪನ್ಮೆಯಿಂದ ಹೊಟ್ಟೆ ತುಂಬ ಬಯ್ಗಳು ತಿಂದವನು ಅವರಮಗ ಕುಟ್ಟಪ್ಪೆಯೇ. ತಿಮ್ಮನಿಗಿಂತ ಮೂರು ವರ್ಷ ದೊಡ್ಡವನಾದ ಅವನು ಹಾಗೇಕೆ ತಿಮ್ಮನನ್ನು ಓಡಿಸಿದ್ದು ಅಂತ. ಆದರೆ ಕುಟ್ಟಪ್ಪೆ ಕೇಳುತ್ತಾನೆಯೇ? ಮೂಪನ್ಮೆಯ ಕೊಂಡಾಟದ ಕಿರಿಮಗನವನು. ಅವನಲ್ಲಿ ಬೇಕಾದಷ್ಟು ತುಂಟಾಟಗಳೆಲ್ಲ ಮನೆಮಾಡಿ ಕೊಂಡಿದ್ದುವು ಅವನಿಗೆ ಯಾರೆಷ್ಟು ಬಯ್ದರೂ ಎಲ್ಲರ ಮೇಲೂ ಬಹಳ ಸಲಿಗೆಯೇ, ಸಸಾರವೇ.

ಈಜಾಡುವುದೆಂದರೆ ಕುಟ್ಟಪ್ಪೆಗೆ ಬಲು ಇಷ್ಟ. ಎಷ್ಟು ಹೊತ್ತು ಬೇಕಾದರೂ ನೀರಿನಲ್ಲಿ ಸರ್ಕಸ್ ಮಾಡಬಲ್ಲವನವನು. ಈಜಾಡುವುದು ದೊಡ್ಡವ ರಿಂದಲೇ ಸಾಧ್ಯವೆಂದು ನಂಬಿದ್ದ ತಿಮ್ಮನಿಗೆ ಅವನ ಈಜಾಟ ನೋಡಿದರೆ ಆಶ್ಚರ್ಯವಾಗು ತಿತ್ತು. ಅವನು ತಿಮ್ಮನನ್ನು ಸಹ ಈಜಾಟದ ಪಂಥಕ್ಕೆ ಕರೆಯದಿರಲಿಲ್ಲ. ಆಗ ಅವನ ಅಕ್ಕಂದಿರು "ಬೇಡವೋ, ಮಾಣಿನ ಕರೀಬೇಡ. ಅವರಿಗೆ ಶೀತವಾಗಿ ಜ್ವರ ಬಂದೀತು" ಎಂದು ತಡೆಹಾಕಿ ತಿಮ್ಮನಿಗೂ ನೀರಿನಲ್ಲಿ ಆಡಕೂಡ ದೆಂದು ಹೇಳಿಬಿಟ್ಟಿದ್ದರು. ಆ ಪ್ರಾಂತದಲ್ಲಿ ಐದಾರು ವರ್ಷ ಪ್ರಾಯದ ಹುಡುಗ ಹುಡುಗಿಯ ರಲ್ಲ ಈಜಾಡುವುದು ತೀರ ಸಹಜವಾಗಿತ್ತು. ಅಂತೆಯೇ ತಿಮ್ಮನಿಗೂ ಈಜು ಬರುವುದೆಂದೇ ಅವರೆಲ್ಲರ ನಂಬಿಗೆ. "ಅಸಲು ಈಜು ಬರು ತ್ತೆಯೇ?" ಎಂದು ಯಾರೂ ಕೇಳಲೂ ಇಲ್ಲ; ತನಗೆ ಈಜು ಗೊತ್ತಿಲ್ಲವೆಂದು ತಿಮ್ಮ ಹೇಳಲೂ ಇಲ್ಲ. ಕನ್ನೇಮಗಳೂ ಕುಟ್ಟಪ್ಪೆಯೂ ಕೆರೆ ಯಲ್ಲಿ ಧಾಂಧೂಂ ಅಂತ ಭಾರೀ ಭಾರೀ ಈಜಾ ಟದ ಪ್ರತಾಪಗಳನ್ನು ತೋರಿಸುವಾಗ ತಿಮ್ಮ ಉತ್ಸಾಹದ ಪ್ರೇಕ್ಷಕನಾಗಿ ದಂಡೆಯಲ್ಲಿ ನಿಂತು "ಹಾ ಹೋ" ಎನ್ನುತ್ತ ಚಪ್ಪಾಳೆ ತಟ್ಟುವನು.

ಹೇಗಾದರೂ ತಾನೂ ಈಜು ಕಲಿತುಬಿಡ ಬೇಕೆಂದೇ ಇತ್ತು ಅವನಿಗೆ ಧೈರ್ಯವಿಲ್ಲ, ತಾನು ಈಜು ಬಾರದವನೆಂದು ಎಲ್ಲರಿಗೂ ತಿಳಿದ್ಹೋಗುತ್ತದಲ್ಲಾ ಅಂತ ಭಯ

ಒಂದು ಸಲ ಏನಾಯಿತೆಂದರೆ, ಕುಟ್ಟಪ್ಪೆ ಉರುಟಾದ ದೊಡ್ಡದೊಂದು ಮರದ ಮರಿಗೆ ಕೆರೆಯ ಬದಿಯಲ್ಲಿ ತೊಳೆಯಲಿಕ್ಕಿಟ್ಟಿರುವುದನ್ನು ನೋಡಿದ. ಅವನು ಅದನ್ನು ನೀರಿಗೆ ಎಳೆದು ಕೊಂಡು, ಅದರೊಳಗೆ ಕುಳಿತು, ಒಂದು ಕೊತ್ತಳಿಗೆ (ತೆಂಗಿನ ಮಡಲಿನ ಕೈ) ಯಿಂದ ಹುಟ್ಟು ಹಾಕುತ್ತ ಕೆರೆಯ ಸುತ್ತಲೂ ತಿರುಗಲಾರಂಭಿಸಿ ದನು. ಆಗ ಅವನು ದಂಡೆಯಲ್ಲಿದ್ದ ತಿಮ್ಮನನ್ನು ನೋಡಿ "ವಟ್ಟ ದೋಣೀ! ವಟ್ಟ ದೋಣೀ! ಬನ್ನಿ ಮಾಣೀ!" ಎಂದು ಕರೆದ. ತಿಮ್ಮನೂ ದುಡುದುಡನೆ ಕೇಗಿಳಿದ.

"ಈಜಿಕೊಂಡು ಬಂದು ಇದರ ಅಂಚು ಹಿಡಿದು ಒಳಗೆ ಹತ್ತಿ ನೋಡುವಾ!" ಎಂದ ಕುಟ್ಟಪ್ಪೆ.

ಆಗ ತಿಮ್ಮ ಹಿಂದೆಮುಂದೆ ನೋಡುವುದನ್ನು ಗಮನಿಸಿ ಮೂಪನ್ಮೆಯ ತಮ್ಮ ಕುಸ್ಸಂಬ್ಬಾಯರು ಎಂಬವನು, "ಹೇಂದಾಡೋ ಕುಟ್ಟಪ್ಪೇ ಮಾಣಿಗೆ ಈಜು ಬರುತ್ತೋ ಇಲ್ವೋ" ಎಂದ.

"ಈ ಮಾಣಿಗೋ ಈಜು ಬರೋದಿಲ್ಲಾ ಅಂತೀರಿ? ಇಷ್ಟು ದೊಡ್ಡೋರಿಗೆ ಈಜು ಬರೋ ದಿಲ್ಲಾ ಅಂದರೆ ಯಾರಾದರೂ ನಕ್ಕಾರು ಚಿಕ್ಕಪ್ಪಾ!" ಎಂದ ಕುಟ್ಟಪ್ಪೆ.



ಅಷ್ಟರಲ್ಲಿ ತೊಡೆಮಟ್ಟ ನೀರಿನಲ್ಲಿ ನಿಂತಿದ್ದ ತಿಮ್ಮ "ಈಜು ಬರಲು ಅದನ್ನು ಹತ್ತುವುದು ಹ್ಯಾಗೋ? ಹತ್ರ ತಾರಪ್ಪ" ಎಂದ

"ಹ್ಯಾಗೆಂದರೆ ಹೀಗೆ" ಎಂದು ಕುಟ್ಟಪ್ಪೆ ಮರಿಗೆಯಿಂದ ನೀರಿಗೆ ಹಾರಿ ಈಜಿ ಹೋಗಿ ಮತ್ತೆ ಅದರಲ್ಲಿ ಏರಿಕೊಂಡ ಅಷ್ಟರಲ್ಲಿ ಮರಿಗೆ ತಿರುಗುತ್ತಾ ತಿಮ್ಮನ ಹತ್ತಿರಕ್ಕೇ ಬಂತು. ಕುಟ್ಟಪ್ಪೆ ತಿಮ್ಮನ ಕೈಹಿಡಿದು ಮುಂದಕ್ಕೆಳೆದು ಬಿಟ್ಟ. ತಿಮ್ಮ ಮುಮ್ಮಗಚಿಕೊಂಡು ನೀರಿಗೆ ಬಿದ್ದ. ಕಾಲು ತಪ್ಪಿತು.

"ಈಗ ಬನ್ನಿ ನೋಡುವಾ" ಎಂದು ಕುಟ್ಟಪ್ಪೆ ಮರಿಗೆಗೆ ಹುಟ್ಟು ಹಾಕುತ್ತ ದೂರ ತೆಗೆದು ಕೊಂಡು ಹೋದ.

ತಿಮ್ಮ ಗುಂಡಿಯಲ್ಲಿ ಸಿಕ್ಕಿ ವಿಕಾರ ಧ್ವನಿ ತೆಗೆಯುತ್ತ ಮುಳುಗುತ್ತ ಏಳಲಾಗದೆ ತತ್ತಳಿಸುವುದನ್ನು ನೋಡಿ, ಅವನು ಬೇಕಂತ ಆಟ ತೋರಿಸುವನೆಂದೇ ಕುಟ್ಟಪ್ಪೆ ನಗುತ್ತಿರಲಾಗ, ದಡದಿಂದ ಕುನ್ಹಂಬ್ಬಾಯಿಯು "ಹಾ! ಹಾ! ಮಾಣೀನ್ ತೂಕ್ಕ್ಯಡಾ! ಕುರ್ತಕ್ಕೇಡುಕ್ಕೆ ಟ್ಟ್ಯೀನೇ!" ಎಂದು ಕೂಗುತ್ತ ನೀರಿಗೆ ಹಾರಿ ತಿಮ್ಮನನ್ನು ದಡಿಗೆಳೆದು ಹಾಕಿದರು. ಗುಂಪು ಗೂಡಿತು. ಸ್ವಲ್ಪ ಹೊತ್ತು ಉಸಿರು ಬಿಡಲಿಲ್ಲ ತಿಮ್ಮ. ಮತ್ತೆ ವಿಚಾರಿಸಿದಾಗ ಪತ್ತೆ ಸಂಗತಿ ಎಲ್ಲರಿಗೂ ತಿಳಿದು ಆಶ್ಚರ್ಯವಾಯಿತು.

ಮರುದಿನ ಅರಸುಗಳ ಹಿರಿಕುಮಾರಿ ಕುನ್ನಿ ಪ್ರೊಣ್ಣ ಕುನ್ಹೀವೇ, ಎರಡು ಪೊಳ್ಳು ತೆಂಗಿನ ಕಾಯಿಗಳ ನಾರು ತೆಗೆದು ಒಂದಕ್ಕೊಂದು ಜೋಡಿಸಿ ಕಟ್ಟಿ, ತಿಮ್ಮನನ್ನು ಕರೆಗಿಳಿಸಿ, ತೆಂಗಿನ ಕಾಯಿಗಳು ಜಾರಿ ಹೋಗದ ಹಾಗೆ ಅವನ ಎದೆಯ ಸುತ್ತಲೂ ಬೈರಾಸಿನಿಂದ ಕಟ್ಟಿ ಅವನನ್ನು ಕೆರೆಯಲ್ಲಿ ಬೀಳಿಸಿದಳು. ಮುಳುಗುವೆನೆಂಬ ಭಯವಿರಲಿಲ್ಲ. ಅವಳು ಹೇಳಿದ ಹಾಗೆ ಕೈಕಾಲಾಡಿಸಿದ ಮೊಂದೆ ಎರಡೇ ದಿನಗಳಲ್ಲಿ ಆ ಪೊಳ್ಳು ಕಾಯಿಗಳ ಸಹಾಯವಿಲ್ಲದೆಯೇ ಈಜಾಡಲು ಬಂದುಬಿಟ್ಟಿತು. ಅನಂತರ ಕುಟ್ಟಪ್ಪೆಯ ಹಾಗೆಯೇ ತಿಮ್ಮನೂ ನೀರಿನಲ್ಲಿ ಯಾವ ಬಗೆಯ ಅಂತಲಾಗವನ್ನಾದರೂ ಹೊಡೆಯಲು ಕಲಿತುಬಿಟ್ಟನು.

೮

ಹಾಗಿರುವಾಗ ಅವನು ಇಚ್ಛಾನುಸಾರದಾಗಿ ಕುಟ್ಟಪ್ಪೆಯೊಂದಿಗೆ ಆಟವಾಡುವುದಕ್ಕೆ ಮುಖ್ಯವಾದ ನಿರ್ಬಂಧವೊಂದು ಬಂತು. ಅರಸುಗಳ ಹಿರಿಯಮಗಳು ಕುನ್ನಿ ಕುಟ್ಟಿ ಒಂದು ದಿನ ತಿಮ್ಮನನ್ನು "ಇವಿಡೆವರೀ, ಎಂಟ್ರಾಂಬ್ರಿ ಮಾಣಿ" ಎಂದು ತಿಮ್ಮನನ್ನು ತನ್ನ ಬಳಿಗೆ ಕರೆದಳು.

ಅವಳು ಅವನನ್ನು ಹಾಗೆ ಕರೆದದ್ದು ಅದೇ ಮೊದಲು. ಗಂಡನನ್ನು ಕಳೆದುಕೊಂಡಿದ್ದ ಅವಳು ಯಾವಾಗಲೂ ಗಂಭೀರ ಚಿಂತನೆಯುಳ್ಳವಳಾಗಿ ಹಣೆಯಲ್ಲಿ ವಿಭೂತಿಪಟ್ಟೆ ಹಚ್ಚಿಕೊಂಡು ಕರುಬದ ಬುಡದಲ್ಲಿ ಕುಳಿತುಕೊಂಡು "ಕಂಬರಾಮಾಯಣ" ಪಠನ ಮಾಡುತ್ತ ಇರುವಳು. ಉಳಿದ ಅಷ್ಟೂ ಮಂದಿ ಒಂದು ರೀತಿಯಾದರೆ ಅವಳದು ಮಾತ್ರ ಇನ್ನೊಂದು ರೀತಿ. ಅವಳು ಹರಟೆಯಾಡಿದ್ದನ್ನಾಗಲೀ, ನಕ್ಕದ್ದನ್ನಾಗಲೀ, ಹುಡುಗಾಟವಾಡಿದ್ದನ್ನಾಗಲೀ ತಿಮ್ಮ ಕಂಡಿರಲಿಲ್ಲ. ಅವಳ ತಾಯಿ ಮೂಕಮ್ಮಗಿರುವ ನಗೆಚಾಟಿಕೆಯ ಹತ್ತರಲ್ಲೊಂದು ಪಾಲು ಕೂಡಾ ಅವಳಿಗಿರಲಿಲ್ಲ. ಅವಳ ಹಾಡಿಗೆ ಅವಳು ಧ್ಯಾನ ಪಾರಾಯಣಗಳಲ್ಲಿರುವಳು. ಪಕ್ಕದಲ್ಲೇ ಯಾರೆಷ್ಟು ಗಲಾಟೆ ಮಾಡಿದರೂ ಅವಳೇನೂ ಹಚ್ಚಿಕೊಳ್ಳುತ್ತಿರಲಿಲ್ಲ.

ಅಂತಹವಳು ತಿಮ್ಮನನ್ನು ಹತ್ತಿರ ಕರೆದು, "ನಾಳೆಯಿಂದ ಸ್ವಲ್ಪ ಮಡಿಯಾಗಿರಬೇಕು ಮಾಣೀ ನೀವು ಕುಟ್ಟಪ್ಪೆಯೊಡನೆ ಆಗಲೀ ಬೇರೆ ಯಾರೊಡನೆ ಆಗಲೀ ಆಡಬಾರದು. ಅವರನ್ನೆಲ್ಲ ಮುಟ್ಟಿ ಮೈಲಿಗೆ ಮಾಡಿಕೊಳ್ಳಬಾರದು. ನಂಬೂದರಿ ಬರುತ್ತಾರೆ. ಬಹಳ ಶುದ್ಧವಾಗಿರಬೇಕು, ಗೊತ್ತಾಯ್ತೆ?" ಎಂದಳು.

"ಆಯಿತು" ಎಂದ ತಿಮ್ಮಣ್ಣ.

ಅವಳೇಕೆ ಹಾಗೆಂದಳೋ? ಅದಾವ ನಂಬೂದರಿಯೋ? ಕುನ್ನಿ ಕುಟ್ಟಿ ಕುನ್ಹೀಮೆಯೊಡನೆ ಅದನ್ನೆಲ್ಲ ಕೇಳಲು ಅವನಿಗೆ ಧೈರ್ಯಬಾರದೆ, ಅವನು ಕೂಪಮ್ಮೆಯ ಹತ್ತಿರ ಹೋಗಿ "ಪರಿಯ ಕುನ್ಹೆಮೆ" [ಹಿರಿಯ ಕುಮಾರಿ] ತನ್ನ ಹತ್ತಿರ ಹೇಳಿದ್ದನ್ನು ಹೇಳಿ, "ಅದೇಕೆ ಹಾಗೆಂದರು? ಯಾರು ಆ ನಂಬೂದರಿ ಅಂದರೆ?" ಎಂದು ವಿವರಣೆ ಕೇಳಿದ.

"ಹೌದಲ್ಲ ಮಾಣೀ. ಅವಳಿಗೆ ನಾಳೆ ನಂಬೂದರಿಯೊಂದಿಗೆ ಸಂಬಂಧಂ ನಡೆಯುತ್ತದೆ. ನಂಬೂದರಿ ಬರುವಾಗ ನೀವು ಶುದ್ಧರಾಗಿ ಬಹಳ ಜಾಗ್ರತೆಯಿಂದ ಅವರಿಗೆ ಬಡಿಸಬೇಕು ಅದಲ್ಲಾ ನಿನಗೆ ಹೇಳಿಕೊಡುತ್ತೇನಲ್ಲ. ನಿಮ್ಮ ಅದಿಗೇ ಉಂಡರೆ ಮತ್ತೆ ಎಂದೂ ಮರೆಯಬಾರದು. ತಂಬ್ರಾನ್‌ಗೂ ನಂಬೂದರಿಗೂ ಮಾತ್ರ ನೀವು ಅಡಿಗೆ ಮಾಡಿದರೆ ಸಾಕು, ಮಾಡ್ತೀರಿ ತಾನೇ ಜೋರಾಗಿ?"

"ಓ ಮಾಡ್ತೇನೆ"

"ನಲ್ಲ ಮಾಣಿಯಾಣಲ್ಲೋ!" ಎಂದು ಮಾಣಿಯ ಬೆನ್ನು ತಟ್ಟಿದಳು ಮೂಪಮ್ಮ.

"ಸಂಬಂಧಂ ಎಂದರೆ ಏನು ಮೂಪಮ್ಮ?" ಕುತೂಹಲದಿಂದ ಕೇಳಿದ ತಿಮ್ಮ.

"ಅದೆಲ್ಲಾ ನೀವು ದೊಡ್ಡೋರಾದಾಗ ನಿಮಗೆ ಗೊತ್ತಾಗುತ್ತೆ. ನಿಮಗೂ ಒಂದು ಚೆಲೋ ಕುಟ್ಟೀನ ಹಿಡಿದು ಸಂಬಂಧಂ ಮಾಡಿಸಿ ಬಿಡ್ತೇನೆ. ಆಗ ಸ್ಪಷ್ಟ ಗೊತ್ತಾಗಿಬಿಡುತ್ತೆ" ಎಂದಳು ನೆಗಾಡುತ್ತಾ ಮೂಪಮ್ಮ.

ಇದೊಂದು ದೊಡ್ಡ ಕುತೂಹಲದ ವಿಷಯವಾಯಿತು ತಿಮ್ಮನಿಗೆ ಸಂಬಂಧವೆಂದರೇನೆಂದು ಇತರ ಕುನ್ನೇಮೆಗಳನ್ನು ಕೇಳಿದನು. ಆಗ ಎಳೆಯ ಕುನ್ನೇಮೆ ಗುಟ್ಟಾಗಿ ಅವನ ಹತ್ತಿರ- "ಹಾಗೆಲ್ಲಾ ಕೇಳಬಾರದು ಮಾಣೀ? ಅಕ್ಕನ ಕಿವಿಗೆ ಬಿದ್ದರೆ ಅವಳಿಗೆ ಸಿಟ್ಟು ಬಂದೀತು. ಮತ್ತೆ ಅವಳು ನಂಬೂದರಿ ಹತ್ತಿರ ಹೇಳಿ ನಿಮ್ಮ ಈ ಉದ್ದದ ಜುಟ್ಟನ್ನು ಕತ್ತರಿಸಿ ಹಾಕಿಸಿಯಾಳು." ಎಂದಳು.

ಕೊನೆಗೆ ಕುಟ್ಟಿಪ್ಪೆ ಗುಟ್ಟಾಗಿ ತಿಮ್ಮನ ಕಿವಿಯಲ್ಲಿ ಹೇಳಿದ: "ಸಂಬಂಧಂ ಎಂದರೆ ದೊಡ್ಡಕ್ಕನಿಗೆ ನಂಬೂದರಿ ಗಂಡ ಬರೋದು— ಮದುವೆ!"

ಮರುದಿನ ಬೆಳಿಗ್ಗೆ ಅರಸುಗಳೇ ಅಡಿಗೆ ಮನೆಯಲ್ಲಿ ಕುಳಿತು ಸ್ವತಃ ಮಗುಚುತ್ತ, ಊದುತ್ತ, ಕಲಸುತ್ತ, ತಿಮ್ಮಣ್ಣನಿಂದಲೂ ಅದೂ ಇದೂ ಮಾಡಿಸುತ್ತ ಎಲಿಚ್ಚೇರಿ, ಪುಳಿಚೇರಿ, ಉಪ್ಪೇರಿ, ಮೊಳ್ಕೊಶ್ಯ, ಪಪ್ಪಡಂ, ಪ್ರಥಮನ್ ಮೊದಲಾದುದೆಲ್ಲವನ್ನೂ ಮಾಡಿಸಿದರು. ಮತ್ತೆ ತಿಮ್ಮನನ್ನು ತಮ್ಮ ಹಿಂದೆಯೇ ಕರೆದುಕೊಂಡು ಅರಮನೆಗೆ ಹೋದರು.

ಅಂದು ಪೆರಿಯ ಕುನ್ನೇಮೆ ಕುನ್ನಿಕುಟ್ಟಿ ಎಂದಿನಂತಿರಲಿಲ್ಲ: ಯಾರೋ ಹೊಸಬಳಂತೆ ದೇವಲೋಕದಿಂದ ಕೆಳಗಿಳಿದ ಶುಭ್ರ ಅಪ್ಸರೆಯಂತೆ ತೋರಿದಳು. ಬಹಳ ನಯವಾದ ಬೆಳ್ಳಂಬೆಳ್ಳಗಿನ ವಸ್ತ್ರಗಳನ್ನುಟ್ಟು, ಅಂಥದೇ ಬಿಳೀ ವಸ್ತ್ರವನ್ನು ಸೆರಗಿನ ಹಾಗೆ ಹಾಕಿಕೊಂಡಿದ್ದಾಳೆ. ಅದುವರೆಗೆ ರವಿಕೆಯೇ ಹಾಕಿಕೊಳ್ಳದಿದ್ದವಳು ನಸು ರೋಜಾಬಣ್ಣದ ರವಕೆಯನ್ನು ಹಾಕಿಕೊಂಡಿದ್ದಳು. ವಿಸ್ತಾರವಾದ ತಲೆಕೂದಲ ರಾಶಿಯನ್ನು ಸುಂದರವಾಗಿ ಮುಡಿ ಹಾಕಿಕೊಂಡಿದ್ದಳು. ಹಣೆಯಲ್ಲಿ ವಿಭೂತಿಗೆ ಬದಲು ಸಿಂಧೂರದ ತಿಲಕ. ಹೆಡೆಮುಡಿಗೆಯಲ್ಲಿ ಮಲ್ಲಿಗೆಯ ದಂಡೆ. ಕಿವಿ, ಕೊರಳು, ಕೈಗಳಲ್ಲಿ ಆಭರಣಗಳು. ಒಟ್ಟಿನಲ್ಲಿ ಸರಳ ಶುದ್ಧ ಶೃಂಗಾರ.

ಹೀಗೆ ಸಿಂಗರಿಸಿಕೊಂಡಿರುವ ಕುನ್ನಿಕುಟ್ಟಿ ತನ್ನ ಕೋಣೆಯಲ್ಲಿ ಆಚೆಗೂ ಈಚೆಗೂ ಓಡಾಡುತ್ತ ಕೆಲಸದವಳಿಂದ ಬಹಳ ಕೆಲಸ ಮಾಡಿಸುತ್ತಿದ್ದಳು. ಆಗಾಗ ಮೂಪಮ್ಮೆಯೂ ಅಲ್ಲಿಗೆ ಹೋಗಿ, "ಅದನ್ನು ಅಲ್ಲಿಡು, ಇದನ್ನ ಇಲ್ಲಿಡು; ಅಡೋ ಕಣಾರ! ಕೇದಿಗೆ ಸೇವಂತಿಗೆ ಮಲ್ಲಿಗೆಗಳನ್ನು ಸಾಯಂಕಾಲದ ಹೊತ್ತಿಗೆ ತರಬೇಕು. ನೋಡೋ ತಡಮಾಡಬಾರದು" ಎಂದು ಆಜ್ಞೆ ಮಾಡುತ್ತಿದ್ದಳು. ಕುನ್ನಿಕುಟ್ಟಿಯ ಕೋಣೆಯಲ್ಲಿರುವ ಮಂಚವೂ ಬಹಳ ಜೋರಾಗಿ ಶೃಂಗಾರವಾಗುತ್ತಿತ್ತು.

ಅರಸುಗಳು ತಿಮ್ಮನಿಗೂ ವಿಭೂತಿ ಚಂದನ ಬೊಟ್ಟುಗಳನ್ನು ಹಚ್ಚಿಕೊಳ್ಳಲಿಕ್ಕೆ ಹೇಳಿ, ಅವನ ಪೆಟ್ಟಿಗೆಯೊಳಗಿರುವ ದೊಡ್ಡ ಪಂಚೆಯನ್ನುಟ್ಟು, ಬೈರಾಸನ್ನು ಸೊಂಟಕ್ಕೆ ಸುತ್ತಿಕೊಂಡಿರಲು ಹೇಳಿದರು. ಹಾಗೆ ಸೊಂಟಕ್ಕೆ ಬಟ್ಟೆ ಸುತ್ತಿಕೊಂಡು ಕೈಕಟ್ಟಿಕೊಂಡು ಸುಸುಬಾಗಿದ ಹಾಗೆ ನಿಲ್ಲುವುದೇ ವಿಧೇಯ ಸೇವಕನ ಲಕ್ಷಣವಂತೆ; ಏನು ಹೇಳಿದರೂ ಮಾಡಲು ಸೊಂಟ ಕಟ್ಟಿ ನಿಂತ ಹಾಗೆ. ಸೇವಾಭಾವ, ಪ್ರಭುಭಕ್ತಿ ಗೌರವಗಳಿಗೆ ಅದೇ ಸೂಚನೆ. ದೇವಾಲಯಗಳಲ್ಲಿಯೂ ರಾಜರ ಇದಿರಿನಲ್ಲಿಯೂ ಹಾಗೆ ಕೈಕಟ್ಟಿ, ಅಥವಾ ಕೈಮುಗಿದು ನಿಲ್ಲಬೇಕಂತೆ. ಆ ದಿನ ಬರಲಿರುವ ನಂಬೂದರಿ ದೇವರಿಗೂ ರಾಜನಿಗೂ ಸಮಾನನಾದವನಂತೆ. ಅರಸುಗಳು ಕೂಡಾ ಯಾವಾಗಲೂ ಉಡುವುದಕ್ಕಿಂತ ಹೆಚ್ಚಿನದಾದ ಜರಿಯ ಮುಂಡಿ ಬಟ್ಟೆಯನ್ನು ಪಾದ ಮುಟ್ಟುವ ವರೆಗೆ ಉಟ್ಟುಕೊಂಡು ಒಂದು ಶಲ್ಲೆಯನ್ನ ಹೆಗಲಿನ ಮೇಲೆ ಹಾಕಿಕೊಂಡು ಸಿದ್ಧರಾದರು.

ಉಳಿದ ಸಾಮಾನು ಸರಂಜಾಮು ಸ್ಥಳ ವ್ಯವಸ್ಥೆಗಳನ್ನೆಲ್ಲ ಸೇವಕರು ಸಿದ್ಧಗೊಳಿಸಿಟ್ಟಿದ್ದರು ಆಗಲೇ. ಉಳಿದ ಕುನ್ನೇಮೆಗಳೂ ಇತರರೂ ತಮ್ಮ ತಮ್ಮ ಆಟಪಾಟಗಳನ್ನು ಬಿಟ್ಟು, ಒಳ್ಳೊಳ್ಳೆಯ ಬಟ್ಟೆಗಳನ್ನುಟ್ಟುಕೊಂಡು ಗಂಭೀರಭಾವದಿಂದ ತಿರುಗಾಡುತ್ತಿದ್ದರು. ಕೆಲವರು ಅವರ ಅಡಿಗೆಮನೆಯಲ್ಲಿ ವಿಶೇಷದ ಅಡಿಗೆಯನ್ನು ಮಾಡುತ್ತಿದ್ದರು. ಈ ಮಧ್ಯಾಹ್ನದ ಅಡಿಗೆ ಸಾಮಾನ್ಯದ್ದೇ. ಮದುವೆಯ ನಿಜವಾದ ಸಮಾರಂಭದ ಅಡಿಗೆಯೆಲ್ಲ ರಾತ್ರಿಗಿದೆ.

೬

"ಬರುತ್ತಾರೆ! ಬರುತ್ತಾರೆ!" ಎಂಬ ಧ್ವನಿ ಎದ್ದಿತು.

ಎಲ್ಲರೂ ಅಂಗಳದಲ್ಲಿ ನಿಂತು ದೂರದೃಷ್ಟಿ ಹಾಯಿಸಿದರು. ದೂರ ಮರಗಳ ಗುಂಪಿನೊಳಗಿನಿಂದ ಸಾಲಂಕೃತ ಪಲ್ಲಕ್ಕಿಯೊಂದು ಗದ್ದೆಯ ಹುಣಿಗಿಳಿದು ಬರುತ್ತಿರುವ ಚೆಂದ ಕಾಣಿಸಿತು. ಅದು ಸಮೀಪಿಸಿದಂತೆ "ಓಂ—ಓಂ—" ಎಂಬ ಬೋಯಿಗಳ ವಿರುತಾನದ ಸಮಧ್ವನಿ ಗಾಳಿಯಲ್ಲಿ ಮಂದವಾಗಿ ಕೇಳಿಬರತೊಡಗಿತು... ಬಂತೆ, ಬಂದೇ ಬಿಟ್ಟಿತು. ಅರಮನೆಯ ಇದಿರಿನಲ್ಲಿರುವ ವಿಸ್ತಾರವಾದ ಅಂಗಳದ ಬದಿಯ ಎತ್ತರವಾದ ಮೆಟ್ಟಲನ್ನೇರಿ ಪಲ್ಲಕ್ಕಿ ಮೇಲೆ ಬಂದು ಕೆಳಗಿಳಿಯಿತು.

ಆಗ ಮಧ್ಯಾಹ್ನದ ಮುಂದೆ ಏರುಹೊತ್ತಿನ ವೇಳೆಯಾಗಿದ್ದರೂ, ವಾಲ್ಯಕ್ಕಾರನು ಚಂಗಲಾಟದ ಶುಭ ದೀಪವನ್ನು ತೋರಿಸುತ್ತಿರಲು, ಇನ್ನಿಬ್ಬರು ಚಾಮರ ಬೀಸುತ್ತಿರಲು, ಅರಸುಗಳು ಹಾವುಗೆಗಳ ಟಕ್ಕಟಕ್ಕ ಟಬೊಡಿಗೆ ಪಲ್ಲಕ್ಕಿಯ ಬಳಿಗೆ ಹೋಗಿ ಬಾಗಿದಾಗ ಅದರೊಳಗಿನಿಂದ ಮೊದಲು ಒಂದು ಜತೆ ಹಾವುಗೆಗಳು ಕೆಳಗಿಳಿದುವು. ಹಿಂದೆಯೇ ಅವುಗಳ ಮೇಲೆ ಪಾದಗಳನ್ನಿಟ್ಟು ಯುವಕ ನಂಬೂದರಿ ಕೆಳಗಿಳಿದು ನಿಂತ. ಉಂಗುರಗಳಿಂದೊಪ್ಪುವ ಅವನ ಕೈಬೆರಳುಗಳನ್ನು ಅರಸುಗಳು ಹಿಡಿದು "ಶುಭಾಗಮನಂ ನಂಬೂದರಿ ತಂಬಿರಾನ್ ವರೇಣ್ಯಾ" ಎಂದು ಸುಸ್ವಾಗತ ಹೇಳಿದರು

ಅಷ್ಟರಲ್ಲಿ ಮೂಪಮ್ಮ ತಿಮ್ಮನ ಕೈಯಲ್ಲಿ ಕೊಟ್ಟು ಕಳುಹಿಸಿದ ಬೆಳ್ಳಿತಂಬಿಗೆಯನ್ನು ಅರಸುಗಳು ತೆಗೆದುಕೊಂಡು, ಅದರಲ್ಲಿಯ ನೀರನ್ನು ನಂಬೂದರಿಯ ಪಾದಕ್ಕೆ ಹೊಯ್ಯಲಿರುವಾಗ, ನಂಬೂದರಿಯೇ ತಂಬಿಗೆಯನ್ನು ತೆಗೆದುಕೊಂಡು ತನ್ನ ಕಾಲಿಗೆ ಸುರಿದುಕೊಂಡ. ಮರುನಿಮಿಷ ತಿಮ್ಮ ಸಿದ್ಧವಾಗಿ ಹಿಡಿದಿದ್ದ ತೋರ್ಪನ್ನು ಅರಸುಗಳು ತೆಗೆಯುತ್ತಲೇ, ನಂಬೂದರಿ ಅವರ ಕೈಯಿಂದ ತೆಗೆದುಕೊಂಡು ತನ್ನ ಕಾಲುಗಳನ್ನು ಒರೆಸಿ ತೋರ್ಪನ್ನು ತಿಮ್ಮನ ಕೈಗೆ ಕೊಟ್ಟ. ಬಾಗಿಲ ಹತ್ತಿರ





ನಿಂತಿದ್ದ ಮೂಪನ್ ಸನ್ನೆ ಮಾಡಿ ತಿಮ್ಮನನ್ನು ಕರೆದಳು. ತಾಯಿಯು ಮನೆಯಲ್ಲಿ ಸಾಲಂಕೃತಳಾದ ಕುಞ್ಞಿಕುಟ್ಟಿಯೂ ನಿಂತಿದ್ದಳು, ಮುಗುಳು ನಗುವಿನೊಂದಿಗೆ.

ಚಂಗಲಾಟದವನು ಮುಂದೆ ನಡೆಯುತ್ತಿರಲು, ಉಭಯಪಾರ್ಶ್ವಗಳಲ್ಲಿ ಚಾಮರದವರು ಕೈಯಾಡಿಸುತ್ತಿರಲು, ಅರಸುಗಳು ನಂಬೂದರಿಯೊಡನೆ ಕುಶಲ ಸಂಭಾಷಣೆಗಳನ್ನು ಮಾಡುತ್ತ, ಮಾಳಿಗೆಗೆ ಕರೆದೊಯ್ದರು. ಮೊದಲೇ ತಿಮ್ಮನಿಂದ ಮಣೆಗಳನ್ನು ಹಾಕಿಸಿ ಬೆಳ್ಳಿಯ ತಟ್ಟೆಗಳನ್ನಿಟ್ಟು ಸಿದ್ಧಗೊಳಿಸಲ್ಪಟ್ಟ ಕೋಣೆಯಲ್ಲಿ ಅರಸುಗಳು ತಮ್ಮ ಅಳಿಯನನ್ನು ಒಂದು ಮಣೆಯಲ್ಲಿ ಕೂಡಿಸಿ ತಾವೂ ಇನ್ನೊಂದು ಮಣೆಯಲ್ಲಿ ಕುಳಿತರು.

ಮೂಪನ್ ತಿಮ್ಮನ ಕೈಯಿಂದಲೇ ಮುದ್ದಾಗಿ ಮಾಡಿಸಿದ ದೋಸೆ ಮತ್ತು ಎಲೆಯಪ್ಪಗಳನ್ನು ತಿಮ್ಮನೇ ಇಬ್ಬರಿಗೂ ಬಡಿಸಿದನು. ಇಬ್ಬರಿಗೂ ಸುಟ್ಟು ಸಿಪ್ಪೆ ತೆಗೆದ ನೇಂದ್ರಬಾಳೇಹಣ್ಣು, ಹಾಲುಗಳನ್ನು ತಂದಿಟ್ಟನು. ಅವರಿಬ್ಬರೂ ಆರೋಗಣೆ ಮಾಡುತ್ತಿದ್ದಾಗ, ಕೈಕಟ್ಟಿಕೊಂಡು ಸೇವಾಸಿದ್ಧತೆಯಿಂದ ಭಸ್ಮ,

ಚರ್ಚಿತಾಂಗ ಯಜ್ಞೋಪವೀತಧಾರಿಯಾದ ತಿಮ್ಮನನ್ನು ನಂಬೂದರಿ ದಿಟ್ಟಿಸಿ ನೋಡಿದಾಗ "ನಲ್ಲ ಎಂಬ್ರಾಂದ್ರಿಯಾಣೆಯಾಣ" (ಒಳ್ಳೆಯ ಎಂಬ್ರಾಂದ್ರಿ ಹುಡುಗ) ಎಂದು ಅರಸುಗಳು ಅವನ ಸಂದೇಹವನ್ನು ಪರಿಹರಿಸಿದರು.

"ಇವುಗಳನ್ನೆಲ್ಲ ಇವನೇ ಮಾಡಿದ್ದು. ಬಹಳ ಗಟ್ಟಿಗ. ಹಾಳು ಹರಟೆ ಆಡುವವನಲ್ಲ. ಸುಮ್ಮನಿರುವಾಗ ಚಿತ್ರ ಬರೆಯುತ್ತಾನೆ ಕನ್ನಡದಲ್ಲಿ ಪದ್ಯ ಕಟ್ಟುತ್ತಾನೆ. ಅಂದ ಹಾಗೆ ನಮ್ಮ ಎಂಬ್ರಾಂದ್ರಿ ಭಾಗವತರಿಲ್ಲವೇ, ಅವರ ತಮ್ಮ ಇವ. ಪಾಪ, ತಂದೆ ತೀರಿ ಹೋಗಿ ಈ ಕಷ್ಟ ಬಂತು..." ಎಂದು ಮುಂತಾಗಿ ತಿಮ್ಮನ ಪರಿಚಯವನ್ನು ಕ್ಲುಪ್ತವಾಗಿ ಅಳಿಯನಿಗೆ ಮಾಡಿಸಿದರು ಅರಸುಗಳು.

ನಂಬೂದರಿ ತಿಮ್ಮನನ್ನು ಮೆಚ್ಚು ನೋಟದಿಂದ ನೋಡುತ್ತ "ಹೌದೆ? ನನ್ನನ್ನು ನೋಡಿ ಹಾಗೆಯೇ ಬರೆಯಬಲ್ಲೆಯಾ?" ಎಂದು ಕೇಳಿದ.

"ನೋಡುತ್ತೇನೆ" ಎಂದ ತಿಮ್ಮ.

ಅಲ್ಲಿ ತಿಮ್ಮನನ್ನು ಏಕವಚನದಲ್ಲಿ ಸಂಬೋಧಿಸುವವರು ಅದುವರೆಗೆ ಅರಸುಗಳು ಮಾತ್ರವೇ. ಈಗ ನಂಬೂದರಿ ಎರಡನೆಯವನಾದ. ಅರಸುಗಳು ಕ್ಷತ್ರಿಯರಾದುದರಿಂದ ಬ್ರಾಹ್ಮಣರನ್ನು ಬಹುವಚನದಿಂದಲೇ "ಮಾಣೀ, ಇವಿಡೆ ಬಾರೊ...ಅಕ್ಕೊಂದು ಅಂಬ್ರಪ್ಪ (ಅವಸರ) ಮಾಡಬೇಂಡಡೋ" ಎಂಬ ರೀತಿಯಲ್ಲಿ ಕನ್ನಡ ಮಲೆಯಾಳ ಮಿಶ್ರಿತ ಅವರ ಮಾತು.

ಇನ್ನು ಬ್ರಾಹ್ಮಣಜಾತಿಯ ಶ್ರೇಷ್ಠನಾದ ನಂಬೂದರಿ ತಿಮ್ಮನನ್ನು ಏಕವಚನದಲ್ಲಿ ಕರೆಯುವುದು ಸಹಜವೇ.

ಆ ದಿನ ರಾತ್ರಿ ನಂಬೂದರಿ ಸಂಬಂಧದ ಔತಣದ ಭಾರಿ ಅಡಿಗೆ ದೇಹಣ್ಣಕ್ಕಾರಿಂದ ಮಠದಲ್ಲಿ ನಡೆಯುತ್ತಿತ್ತು. ಆದುದರಿಂದ ರಾತ್ರಿಯಲ್ಲಿ ತಿಮ್ಮನಿಗೆ ಅಡಿಗೆ ಕೆಲಸವೇನೂ ಇರಲಿಲ್ಲ. ಎಲ್ಲರಿಗೂ ಸೇರಿ ಮಠದಲ್ಲೇ ಬ್ರಾಹ್ಮಣರ ಅಡಿಗೆ. ಕಾಳನ, ಜಲನ, ಅವಿಯಲ್, ಎಲಿಚೇರಿ ಪುಳಿಚೇರಿ. ವೆಲ್ಲ ಪಪ್ಪಡಂ, ಚೆಯುನ ಪಪ್ಪಡಂ, ವರ್ಕ್ಕಪ್ಪೇರಿ, ಚಕ್ಕರ ಉಪ್ಪೇರಿ, ಪಳಪ್ರಥಮನ್ ಮುಂತಾದ ಭರಭರಾಟೆಯ ಮದುವೆಯ ಅಡಿಗೆಯದು. ದೇಹಣ್ಣಕ್ಕಾರರು

ನೀರಗರ್ಜನೆ ಹಾಕುತ್ತ, ಮಗುಚುತ್ತಾ. ಕೆಲಸ ಮಾಡುತ್ತಿದ್ದರು. ತಿಮ್ಮ ಸಮಾನುಕೂಲೆಯ ಅಧಿಕಾರಿಯಾದ ಕೊಟ್ವಾರಿ ಹುಡುಗನ ಹಾಗೆ ಅಡಿಗೆಯವರಿಗೆ ಬೇಕಾದ್ದನು ಈಚೆಗೆ ಹೇಳುವುದು ಮೂಪನ್ನ ಹೇಳಿದ್ದನ್ನು ಅಡಿಗೆಯವರಿಗೆ ಹೇಳುವುದು ಹೀಗೆ ಓಡಾಡಿಕೊಂಡಿದ್ದ. ಅದರ ಮೇಲೆ ನಂಬೂದರಿಯ ಪ್ರತ್ಯೇಕ ಸೇವೆಗಳೂ ಅವನದೇ. ಅವನು ಮೈಲಿಗೆಯಾಗಬಾರದೆಂದು ಯಾರೂ ಅವನನ್ನು ಮುಟ್ಟಿ ಮಾತಾಡರು. ಮೂಪನ್ನ ಅರ್ಧ ಅಡಿ ದೂರದಿಂದಲೇ ಅವನಿಂದ ಕೆಲಸ ಮಾಡಿಸುತ್ತಿದ್ದಳು.

ಸಂಜೆಯಲ್ಲಿಯೇ ಅಂಬಲದ ಎಂಬ್ರಾಂದ್ರಿಯೂ ಮಂತ್ರ ಹೇಳುವ ಪುರೋಹಿತ ಪಟ್ಟರ್ ಅವರುಗಳೂ ಬಂದಿದ್ದರು. ಭಾರಿ ಭೋಜನ ಸಮಾರಂಭ ನಡೆಯಿತು. ಮೊದಲು ಅರಸುಗಳೊಂದಿಗೆ ನಂಬೂದರಿಯ ಊಟವಾಯಿತು. ಮುಖ್ಯ ಮುಖ್ಯ ಪದಾರ್ಥಗಳನ್ನೆಲ್ಲ ತಿಮ್ಮನೇ ಓಡಿಯಾಡಿ ಬಡಿಸಿದ. ಏಕೆಂದರೆ ತಿಮ್ಮ ಬಡಿಸಿದ್ದು ಶ್ರೇಷ್ಠ. ಬ್ರಾಹ್ಮಣಕೆಯದು ಎಂದು ಅರ್ಥ- ಅಡಿಗೇ ಮಾಡಿದ ದೇಹಣ್ಣಕ್ಕಾರರಲ್ಲ ಸಾಮಾನ್ಯ ಬ್ರಾಹ್ಮಣರಾದ ಪಟ್ಟನ್ಮಾರುಗಳಂತೆ. ಎಂಬ್ರಾಂದ್ರಿಗಳು ಅವರಿಗಿಂತ ಶ್ರೇಷ್ಠ ಶುದ್ಧರಂತೆ. ನಂಬೂದರಿಯಂತೂ ಉಚ್ಚ ಬ್ರಾಹ್ಮಣ ವರ್ಗದ ಶ್ರೇಷ್ಠಾತಿಶ್ರೇಷ್ಠನು; ರಾಜಗೌರವಕ್ಕೆ ಪಾತ್ರನು. ನಂಬೂದರಿಗಳಲ್ಲಿ ಹಿರಿಯಣ್ಣನು ಮಾತ್ರ ತನ್ನ ಜಾತಿಯವಳನ್ನು ಶಾಸ್ತ್ರೀತ್ಯಾ ಮದುವೆಯಾಗಲು ಅರ್ಹನು. ಉಳಿದ ತಮ್ಮಂದಿರಿಗೆಲ್ಲಾ ಅಂತಹ ವಿವಾಹಕ್ಕೆ ಅಧಿಕಾರವಿಲ್ಲವಂತೆ. ಅವರು ನಾಯರ್ ಮೊದಲಾದ ಸ್ತ್ರೀಯರನ್ನು "ಸಂಬಂಧ" ಮಾಡಿಕೊಳ್ಳುವರು. ಇಂತಹ ನಂಬೂದರಿಯ ಸಂಬಂಧವು ಸಿಕ್ಕುವುದು ಮಹಾಭಾಗ್ಯವೆಂದು ಎಲ್ಲರೂ ಭಾವಿಸುವರು. ಈ ಬಗೆಯ ಸಂಬಂಧಗಳಲ್ಲಿ ಗಂಡನ ಮನೆಗೆ ಹೆಣ್ಣು ಹೋಗುವ ಪರಿಪಾಠವಿಲ್ಲ. ಹೆಣ್ಣಿನ ಮನೆಗೇ ನಂಬೂದರಿಯು ಆಗಮನವಾಗುತ್ತಿರುತ್ತದೆ. ಅವನು ತನ್ನ ಗೌರವಕ್ಕೆ ತಕ್ಕಂತೆ ಕಾಣಿಕೆಗಳೊಂದಿಗೆ ಹೆಣ್ಣಿನ ಮನೆಗೆ ಬರುತ್ತಾನೆ. ಅದರಂತೆ ನಂಬೂದರಿಯನ್ನು ಕರೆತರಲು ಅರಸುಗಳೇ ಪಲ್ಲಕ್ಕಿಯನ್ನು ಕಳುಹಿಸಿ ಕೊಟ್ಟಿದ್ದರು.

ಊಟವಾದ ಮೇಲೆ ಆ ಮನೆಯಲ್ಲಿ ಸಂಬಂಧದ ಶುಭಕಾರ್ಯಗಳು ನಡೆದುವು. ನಂಬೂದರಿಯು ಕೈಯಲ್ಲಿದ್ದ ಒಂದು ಅರಿಶಿನ ದಾರ ಕಟ್ಟಿದ ತಾಯತ್ತು ಮತ್ತು ಚಿನ್ನದ ಓಲೆ [ತಕ್ಕ]ಗಳನ್ನು ಪಟ್ಟರ್‌ಗಳೂ ಎಂಬ್ರಾಂದ್ರಿಯೂ ಮಂತ್ರಪೂತವಾದಿ ನಂಬೂದರಿಯ ಕೈಗೆ ಕೊಟ್ಟರು. ಅನಂತರ ನಂಬೂದರಿಯ ಕೈಯಿಂದ ಕೊಡಲ್ಪಟ್ಟ ಅವುಗಳನ್ನು ಮೂಪನ್ನ ನೇತೃತ್ವದಲ್ಲಿ ಇತರ ಸ್ತ್ರೀಯರು ಕುನ್ನಿಕುಟ್ಟಿ ಕುನ್ನೇಮ್‌ಗೆ ತೊಡಿಸಿದರು. ಅವಳು ನಂಬೂದರಿಯ ಪಾದಕ್ಕೆ ಎರಗಿ ಬಿದ್ದದ್ದ ಮೇಲೆ ಗಂಡಹೆಂಡಿರು ಕೈಕೈಕೋರ್ತು ಕಲಶಕ್ಕೆ ಪ್ರದಕ್ಷಿಣೆ ಮಾಡಿದರು. ಅನಂತರ ಮುದುಮಗಳು ಗಂಡನನ್ನು ಅಲಂಕೃತ ಶಯ್ಯಾಗೃಹಕ್ಕೆ ಕರೆದೊಯ್ದು ಮೇಲೆ ಇತರ ಸ್ತ್ರೀಯರು ಬಾಗಿಲು ಮುಚ್ಚಿದರು.

೧೦

ಮುಂದೆ ಎಂಟು ದಿನಗಳ ವರೆಗೆ ಅರಸುಗಳ ಅಳಿಯ ನಂಬೂದರಿ ಅಲ್ಲಿಯೇ ಇದ್ದನು. ಕುನ್ನೇಮ್‌ಗೆ ತಿಮ್ಮ ಬಹಳ ಸಮೀಪದವನಾದ. ಅರಸುಗಳೂ ತಿಮ್ಮನನ್ನು ಮಗಳು ಅಳಿಯಂದಿರಿಗೇ ಕೊಟ್ಟುಬಿಟ್ಟ ಹಾಗೆ ವರ್ತಿಸುತ್ತಿದ್ದರು. "ಇದನ್ನು ನಂಬೂದರಿಗಳಿಗೆ ಕೊಟ್ಟು ಬಾ" "ಅವರಿಗೆ ಕುಡಿಯಲು ಹಾಲು ಬೇಕೇ ಕೇಳು" [ಆ ಕಾಲದಲ್ಲಿ ಕಾಫಿ ಟೀಗಳ ಪ್ರಚಾರವಿದ್ದಿಲ್ಲ; ಒಂದೊಂದು ಸಾರಿ ಕೊತ್ತಂಬರಿ ಶುಂಠಿಗಳ ಪಾನಕ ಮಾಡುವುದಿತ್ತು] ಎಂದು ಕುನ್ನಿಕುಟ್ಟಿ ಆಗಾಗ ತಿಮ್ಮನನ್ನು ನಂಬೂದರಿಯ ಬಳಿಗೆ ಕಳುಹಿಸುವಳು. ನಂಬೂದರಿಯೂ ಹೆಂಡತಿಯ ಹತ್ತಿರ ಅದೂ ಇದೂ ಎಂಬ ದೌತ್ಯಗಳಿಗೆಲ್ಲ ತಿಮ್ಮ ಮಾಣಿಯನ್ನೇ ಕಳುಹಿಸುವನು.

ನಂಬೂದರಿಯ ವೇಷ ಭಾಷೆ ಮಾತಾಡುವ ಮೋಡಿ ರೀತಿಗಳೆಲ್ಲ ತಿಮ್ಮನಿಗೆ ಬಹಳ ಕೌತುಕವೆನಿಸಿತು. ಅವನು ತಲೆಯ ಕೂದಲನ್ನು ಗಂಟು ಹಾಕಿಕೊಂಡು ಆ ಗಂಟು ಎಡಹಣೆಯ ಮೇಲೆ ಬೀಳುವಂತೆ ಮಾಡಿಕೊಳ್ಳುವನು. ನೀರುಳ್ಳಿಯ ಸಿಪ್ಪೆಯ ಬಣ್ಣದ ದೇಹವು, ಸ್ವಲ್ಪ ಮಾತ್ರ ಹೊಟ್ಟೆ ಬಂದ ಹಾಗೆ ಕಾಣುವಂತೆ ತುಸು ಸ್ಥೂಲವೇ ಆಗಿತ್ತು. ಹಗಲಲ್ಲಿ ಮಡಿಕೆ ಮುರಿಯುದ ವಲ್ಲಿ ಇಳಿಬಿದ್ದಿರುತ್ತದೆ. ಬೆರಳುಗಳಲ್ಲಿ ಹರಳುಗಳು ಸೇರಿದ ಬಂಗಾರದುಂಗುರಗಳು. ಅವನು ಎಲ್ಲಿ ಕುಳಿತರೂ ಅಲ್ಲಿ ಪಕ್ಕದಲ್ಲಿ ಬೆಳ್ಳಿಯ "ಚಲ್ಲ ಪೆಟ್ಟಿಗೆ", ವೀಳದ ಪೆಟ್ಟಿಗೆ; ಅದರಲ್ಲಿ ತಾಂಬೂಲ ಜಿನಸುಗಳು.

ಅವನು ಹಗಲು ಹೊತ್ತಿನಲ್ಲಿ ಯಾವಾಗಲೂ ಹೆಂಡತಿಯ ಪಕ್ಕದಲ್ಲಿ ಕುಳಿತುಕೊಂಡು ಚಕ್ಕಂದವಾಡುತ್ತಿರುವುದಿಲ್ಲ. ಅಂಗಳದ ಬದಿಯ ಜಿಡುಚಾವಡಿಯಲ್ಲಿ ಕುರ್ಚಿಯ ಮೇಲೆ ಗಂಭೀರ ಭಾವದಲ್ಲಿ ಕುಳಿತಿರುತ್ತಾನೆ. ಅನೇಕ ಕಣ್ಣುಗಳು ಅವನ ಭಾವಗಳನ್ನು ಪರೀಕ್ಷಿಸುತ್ತಾ ಮರೆಯಾಗಿರುತ್ತವೆ. ಅವನು ಅಲ್ಲಿಂದೆದ್ದು ಇನ್ನೊಂದು ಬದಿಯ ಕುರ್ಚಿಯಲ್ಲಿ ಕುಳಿತರೆ ವಾಲ್ಯಕ್ಕಾರನೊಬ್ಬ ಓಡಿ ಬಂದು ಚಲ್ಲಪೆಟ್ಟಿಗೆಯನ್ನ ಅವನ ಹತ್ತಿರ ಇಟ್ಟುಹೋಗುತ್ತಾನೆ. ವೀಳ್ಯ ತಿಂದು ಬಾಯಿ ಮುಕ್ಕಳಿಸಬೇಕೆಂದು ಅವನು ಮುಖ ತಿರುಗಿಸುವುದೇ ತಡ, ಯಾರೋ ಒಬ್ಬರು ಅವನಿಗೆ ನೀರು ಹಿಡಿದು ಸಿದ್ಧರಾಗುತ್ತಾರೆ ಸಾಮಾನ್ಯವಾಗಿ ಶ್ರೀಮಂತ ನಾಯರ್ ಮುಂತಾದವರು ವೀಳ್ಯ ಹಾಕುತ್ತಾ ಪೀಕದಾನಿಯಲ್ಲಿ ಉಗುಳುವ ಪದ್ಧತಿಯಿದ್ದರೆ, ನಂಬೂದರಿ ಹಾಗೆ ಪೀಕದಾನಿಯಲ್ಲಿ ಉಗುಳುವುದಿಲ್ಲ ಅದು ಎಂಜಲೆನಿಸಿ ವಾತಾವರಣವು ಅಶುದ್ಧವಾಗುವದೆಂಬ ಭಾವನೆ ಅಂತೆಯೇ ನಂಬೂದರಿ ಆಗಾಗ ಜಗಲಿಯ ಬದಿಗೆ ಹೋಗಿ ತೆಂಗಿನ ಮರದ ಬುಡಕ್ಕೇ ಉಗುಳಿ ಬರುತ್ತಾನೆ.

ನಂಬೂದರಿ ಬಟ್ಟೆ ಉಟ್ಟುಕೊಳ್ಳುವುದೂ ಸೊಂಟದಲ್ಲಿ ಅಲ್ಲ, ಎದೆಯ ಮೇಲೆ ಶುಭ್ರವಾದ ನಾಲ್ಕು ಮೊಳದ ಪಾದ ಮುಟ್ಟುವ ಪಂಚೆಯನ್ನು ಎದೆಯ ಬುಡದಲ್ಲಿ ಕಟ್ಟಿಕೊಳ್ಳುತ್ತಿದ್ದನು. ಅದರಿಂದಲೇ ನಂಬೂದರಿಯ ಗಾಂಭೀರ್ಯಕ್ಕೆ ಕಳೆಬರುತ್ತಿತ್ತು. ಅಂತೆಯೇ ಯಾರಾದರೂ ಎದೆಯ ಮೇಲೆ ಬಟ್ಟೆ ಸುತ್ತಿಕೊಂಡು ತಿರುಗಾಡಿದರೆ "ದೊಡ್ಡ ನಂಬೂದರಿಯ ಹಾಗೆ ಜಂಬ ಮಾಡ್ತಾನೆ" ಅನ್ನುತ್ತಾರೆ.

ನಂಬೂದರಿಯಲ್ಲಿ ಎಲ್ಲಕ್ಕಿಂತಲೂ ವಿಚಿತ್ರವಾಗಿ ತೋರುವ ವಿಶೇಷವೊಂದುಂಟು, ಮಾತಾಡುವಾಗ ಒಂದು ಬಗೆಯ ರಾಗದಲ್ಲಿ, ಸಾವಧಾನವಾಗಿ, ಬಹಳ ವಿಚಾರ ಮಾಡಿ ಹೇಳಿದಂತೆ, ಎಡದ ಕೈಯನ್ನು ಹೊಟ್ಟೆಯ ಮಟ್ಟದಲ್ಲಿಟ್ಟುಕೊಂಡು, ನಡುಬೆರಳನ್ನು ಹೆಬ್ಬೆರಳಿಗೆ ಜೋಡಿಸಿಕೊಂಡು (ಉಪದೇಶ ಮುದ್ರೆ), ಉಂಗುರದಿಂದ ಲಕಲಕಿಸುವ ಕಿರಿಬೆರಳನ್ನು ಅಸ್ಪೃಶ್ಯದ ಹಾಗೆ ದೂರ ಎತ್ತಿಕೊಂಡು, ನಾಭಿಯಿಂದ ಎದೆಯವರೆಗೂ ಸಣ್ಣ ಸಣ್ಣ ಚಕ್ರಾಕಾರಗಳನ್ನಾಗಿ ಸುತ್ತುತ್ತಿರುತ್ತಾನೆ. ಆಗ ಬೆರಳುಗಳ ಉಂಗುರಗಳ ಹರಳಕಾಂತಿ ಅವನ ಮಾತಿಗೂ ದೇಹಕ್ಕೂ ಹೊಳಪು ಕೊಡುವ ಹಾಗಿರುತ್ತೆ. ಒಂದು ವಾಕ್ಯ ಮುಗಿಯುವುದರೊಳಗೆ ಎರಡು ಮೂರು ಬಾರಿ "ಎಂಗಿಲುಂ" (ಆದರೂ) "ಎನ್ನುಚ್ಚಾಲ್" (ಅಂದರೆ) ಎಂಬ ಪದಗಳನ್ನು ಬೆರಸಿ ಬೆರಸಿ ಎಡಗೈಯಿಂದ ಚಕ್ರಾಕಾರ ಮಾಡು ಮಾಡುತ್ತ ಎಳೆದೆಳೆದು ಮಾತಾಡುವನು.

೧೧

ಕುನ್ನಂಬುವಾಯರು ತಿಮ್ಮನನ್ನು ಅನೇಕ ಬಾರಿ ತನ್ನ ಬಳಿಗೆ ಕರೆಯುವುದುಂಟು. ಅವನನ್ನು ತನ್ನ ಕೋಣೆಗೆ ಕರೆದುಕೊಂಡು ಹೋಗಿ ಅವನನ್ನು ಚಟ್ಟೆಮೆಟ್ಟಿಗೆ ಹಾಕಿ ಕುಳ್ಳಿರಿಸಿಕೊಳ್ಳಲು ಹೇಳುವನು. ಪುರಾಣ ಕಥೆಗಳ ಪ್ರಶ್ನೆಗಳನ್ನು ತಿಮ್ಮನ ಹತ್ತಿರ ಕೇಳುವನು. ತಿಮ್ಮನಿಗೆ ಅದರ ಕಥೆ ಗೊತ್ತಿಲ್ಲದಿದ್ದರೆ ತಾನು ತಿಮ್ಮನಿಗೆ ಆ ಕಥೆಗಳನ್ನು ಹೇಳುವನು. ತಿಮ್ಮ ತಾನು ದೊಡ್ಡಮ್ಮನ ಬಾಯಿಯಿಂದಲೂ, ಅಜ್ಜಿಯ ಮುಖದಿಂದಲೂ ಕೇಳಿದ ಕೆಲವಾರು ಕಥೆಗಳನ್ನು ಕುನ್ನಂಬುವಾಯರಿಗೆ ಹೇಳುವನು. ಅವುಗಳಲ್ಲಿ ತಪ್ಪುಗಳಿದ್ದರೆ ಹಾಗಲ್ಲ ಹೀಗೆ ಎಂದು ಸರಿ ಮಾಡಿ ತಿಳಿಸುವನು ಕುನ್ನಂಬುವಾಯರು.

ಆ ಇಡಿಯ ಮನೆಯಲ್ಲಿ ಕುನ್ನಂಬುವಾಯರಿಗೆ ಗೊತ್ತಿದ್ದಷ್ಟು ಪುರಾಣ ಕಥೆಗಳು ಬೇರೆ ಯಾರಿಗೂ ಗೊತ್ತಿರಲಿಲ್ಲ. ಅವನಿಗೆ ದೇವತೆಗಳ ಚಿತ್ರಪಟಗಳ ಮೇಲೂ ಬಹಳ ಇಷ್ಟವಿತ್ತು. ಅವನ ಕೋಣೆಯ ಗೋಡೆಯಲ್ಲಿದ್ದ ಒಂದು ದೇವಿಯ ಚಿತ್ರವು ತಿಮ್ಮನಿಗೆ ತುಂಬ ಹಿಡಿಸಿತು. ಅವನು ಅಲ್ಲೇ ಕುಳಿತು ಒಂದು ಕಾಗದದಲ್ಲಿ ಆ ಚಿತ್ರವನ್ನು ಹಾಗೇ ಬಿಡಿಸಿಟ್ಟನು. ಅದನ್ನು ನೋಡಿ ಕುನ್ನಂಬುವಾಯರು ಸಂತೋಷಾಶ್ಚರ್ಯ

ದೀಪ ಕಣ್ಣು ಕಳಿಸಿ "ಈ ಚಿತ್ರ ನನಗೆ ಕೊಡಿ ಮಾಣಿ. ಪೂಜೆಗೆ ಇಟ್ಟುಕೊಳ್ಳೋಣ" ಎಂದ.

"ಅಯ್ಯೋ! ಇದೇಂಥಾ ಚಿತ್ರ? ಅಷ್ಟು ಒಳ್ಳೆಯ ಚಿತ್ರ ನಿಮ್ಮ ಹತ್ತಿರವಿರುವಾಗ?"

"ಅದೆಲ್ಲ ಹೌದು ಮಾಣಿ. ಬಣ್ಣಗಿಣ್ಣ ಎಲ್ಲ ಜೋರಾಗಿದ್ದರೂ ಅದು ಅಚ್ಚು ಮಾಡಿದ ಅಪವಿತ್ರ ಚಿತ್ರ. ಪೂಜೆಗೆ ಕೈಯಿಂದ ಬರೆದ ನಿಮ್ಮ ಚಿತ್ರವೇ ಶ್ರೇಷ್ಠವಾದದ್ದು" ಎಂದು ಹೇಳಿ ಕುನ್ನಂಬುವಾಯರು ತಿಮ್ಮನ ಪೆನ್ಸಿಲ್ ಚಿತ್ರಕ್ಕೆ ಫ್ರೇಮು ಹಾಕಿಸಿ, ಕುಂಕುಮ ಹಚ್ಚಿ ಹೂವಮಾಲೆ ಹಾಕಿ, ಅದಕ್ಕೇ ಪೂಜೆ ಮಾಡ ಲಾರಂಭಿಸಿದನು.

ಕುನ್ನಂಬುವಾಯರು ದೇವೀಭಕ್ತ. ಹಣೆಯಲ್ಲಿ ಯಾವಾಗಲೂ ಚಂದನದ ಬೊಟ್ಟನ್ನೂ, ಅದರ ನಡುವೆ ಕುಂಕುಮವನ್ನೂ ಇಟ್ಟುಕೊಂಡಿರು ವವನು. ವಿಭೂತಿಪಟ್ಟೆಗಳೂ ಯಥಾ ಯಥಾ ಸ್ಥಾನಗಳಲ್ಲಿ ಇದ್ದೇ ಇರುತ್ತವೆ. ಸ್ನಾನ ಮಾಡಿದ ಮೇಲೆ ಬಹಳ ಹೊತ್ತಿನ ವರೆಗೆ ಕಣ್ಣು ಮುಚ್ಚಿ ಕೈ ಮುಗಿದು ಜಪ ಮಾಡುತ್ತ ಕುಳಿತುಕೊಂಡಿರು ವವನು. ತಿಮ್ಮನ ಹತ್ತಿರ ಅವನು ಹಾಳು ಹರಟೆ ಗಳನ್ನೋ ನಗೆ ಚಾಟಿಗೆಗಳನ್ನೋ ಮಾಡುವ ವನಲ್ಲ. ಆದರೆ ತಿಮ್ಮನಿಗೆ ಮಾತ್ರ ನಗು ಬರುವ ಹಾಗೆ ಮಾತಾಡಿ ತಾನು ಸಣ್ಣದೊಂದು ಮುಗುಳುನಗು ಮಾತ್ರ ಮಿಂಚಿಸಿದ ಹಾಗೆ ಮಾಡುವನು. ಯಾರ ಹತ್ತಿರವೂ ಕುನ್ನಂಬು ವಾಯರು ದೊಡ್ಡದಾಗಿ ನಕ್ಕು ಮಾತಾಡುತ್ತಿರ ಲಿಲ್ಲ. ಹೆಚ್ಚಾಗಿ ಯಾವಾಗಲೂ ದೊಡ್ಡ ದೊಡ್ಡ ಗ್ರಂಥಗಳನ್ನು ಓದುತ್ತಾ ಇರುವನು.

ತಿಮ್ಮನು ಒಳ್ಳೆಯ ಚಿತ್ರ ಬರೆಯುತ್ತಾ ನೆಂದು ಮೂಪಮ್ಮಗೆ ಕುನ್ನಂಬುವಾಯರೇ ಹೇಳಿ ದನು. ಇದಕ್ಕೆ ಪ್ರೋತ್ಸಾಹ ಕೊಡುವ ರೀತಿ ಯಲ್ಲಿ ಮೂಪಮ್ಮ ತಿಮ್ಮನಿಗೆ ಕಾಗದ ಪೆನ್ಸಿಲು ಡಬ್ಬಿಗಳನ್ನು ಕೊಡಿಸಿದಳು. ಅರಸುಗಳೇ ಸ್ವತಃ ತಿಮ್ಮನ ಹತ್ತಿರ ತಮ್ಮ ಚಿತ್ರ ಬರೆಯಲು ಹೇಳಿ ತಾವು ಬೊಂಬೆಯ ಹಾಗೆ ಕುಳಿತರು. ಅವನು ಬರೆದ ಆ ಚಿತ್ರದಲ್ಲಿ ಎಲ್ಲರೂ ಅರಸುಗಳ ರೂಪವನ್ನು ಹೋಲಿಸಿಕೊಂಡು "ಭೇಷ್ ಭೇಷ್" ಎಂದರು. ಮತ್ತೆ ಮೂಪ ಮ್ಮಳು ಚಿತ್ರವನ್ನೂ ಬಿಡಿಸಿದ ತಿಮ್ಮ. ಅದನ್ನು ನೋಡಿ ಮೂಪಮ್ಮ— "ಇದೇಂಥಾ? ನನ್ನ ಕಿವಿಯ ತೂತು ಇಷ್ಟು ದೊಡ್ಡದೇ ಆನೆ ಮುಸುಡಿನ ಹಾಗೆ!" ಎಂದಳು. ತಿಮ್ಮ ಅದ ನ್ನುಜ್ಜಿ ತೂತು ತುಸು ಚಿಕ್ಕದು ಮಾಡಿ ಅವ ಳಿಂದ "ಸೈ" ಎನ್ನಿಸಿದ.

ಆದರೂ ಅವನು ಬರೆದ ಚಿತ್ರಗಳಲ್ಲಿ ಅರಸು ಗಳದೇ ತುಂಬ ಸರಿಯಾಗಿ ಬಂದ ಚಿತ್ರವೆಂದು ಎಲ್ಲರೂ ನಿರ್ಣಯಿಸಿದರು. ಕನ್ನಿಕುಟ್ಟಿ ಕುನ್ನೇಮು ತನ್ನ ಗಂಡ ನಂಬೂದರಿಯ ಹತ್ತಿರ ತಿಮ್ಮನ ಕರಾಮತ್ತಿಯನ್ನು ಹೇಳುತ್ತ ಅವನು ಬರೆದ ಅರಸುಗಳ ಚಿತ್ರವನ್ನೂ ತೋರಿಸಿದಳು. ಮರುದಿನ ನಂಬೂದರಿ ಕಿಡುಬೆದಳಿನ ಸನ್ನೆಯಿಂದ ತಿಮ್ಮನನ್ನು ತನ್ನ ಹತ್ತಿರ ಕರೆದು "ನನ್ನ ಚಿತ್ರ ಬರಿ ನೋಡುವಾ" ಎಂದು ಗಂಭೀರನಾಗಿ ಕುಳಿತ.

ತಿಮ್ಮ ಅವನ ಮುಂದೆ ಕುಳಿತು ಚಿತ್ರವನ್ನು ಬರೆಯುತ್ತ ಎರಡುಗಂಟೆ ಹೊತ್ತಿನಲ್ಲಿ ಮುಗಿ ಸಿದ. ನಂಬೂದರಿ ಅದನ್ನು ನೋಡಿ ತಲೆಯಾ ಡಿಸುತ್ತ, "ಪರವಾಯಿಲ್ಲಲ್ಲೊ! ನೀನು ಆರ್ಟ್ ಕಾಲೇಜಿಗೆ ಸೇರಿ ಕಲಿಯಬೇಕಾದವ" ಎಂದು ಬೆನ್ನು ತಟ್ಟಿದ.

ನಂಬೂದರಿ ಅರಸುಗಳ ಬಿತ್ತಾಯದಿಂದ ಒಂದು ವಾರದ ವರೆಗೆ ಅಲ್ಲಿಯೇ ಇದ್ದನು. ಸಂಬಂಧಂ ನಡೆದ ಆ ಒಂದು ದಿನ ರಾತ್ರಿ ಮಾತ್ರ ದೇಹಣ್ಣು ಕ್ಕಾರದ ಅಡಿಗೆಯಾಗಿತ್ತು. ಅನಂತರ ತಿಮ್ಮನದೇ ಅಡಿಗೆ. ಆದರೆ ಅರಸುಗಳೂ ನಂಬೂದರಿಯೂ ಒಟ್ಟಿಗೇ ಕುಳಿತು ಊಟ ಮಾಡುವುದಿಲ್ಲ; ಕೋಣೆಯ ಅಡೆಯ ಬದಿ ಯಲ್ಲಿ ಅರಸುಗಳಾದರೆ ಈಚೆಯ ಬದಿಯಲ್ಲಿ ನಂಬೂದರಿ ಒಂದೇ ವೇಳೆಗೆ ಊಟಕ್ಕೆ ಕೂಡು ವರು, ಶ್ರೇಷ್ಠ ಬ್ರಾಹ್ಮಣನಾದ ನಂಬೂದರಿ ಕ್ಷತ್ರಿಯರೊಟ್ಟಿಗೆ ಕುಳಿತುಕೊಂಡು ಊಟ ಮಾಡುವುದು ನಿಷೇಧವಂತೆ.

ಊಟ ಮಾಡುವಾಗಲೂ ನಂಬೂದರಿ ಮೌನ ನಾಗಿರುತ್ತಾನೆ. "ಹುಂ," "ಊ ಹುಂ" "ಸಾಕು" "ಸ್ವಲ್ಪ" ಎಂದು ಸನ್ನೆಗೆ ಹೇಳು ವನು. ಆಗ ಅರಸುಗಳೂ ಕೂಡ ಬೇಕಂತ ಮೌನ ತಂದುಕೊಂಡು ಊಟ ಮಾಡುತ್ತಿರು ವರು. ನಿಜವಾಗಿಯೂ ಅರಸುಗಳಿಗೆ ಮೌನ ಗಂಭೀರದ ಊಟವು ಹಿಡಿಸುವದಿಲ್ಲ. ಸ್ವಮಾಲೆ ಯಾಗಿ ತಿಮ್ಮನ ಹತ್ತಿರ ಮಾತಾಡುತ್ತ ಊಟ ಮಾಡುವುದು ಅವರ ಗುಣ. ಆದರೆ ನಂಬೂದ ರಿಯ ಇದಿರಿನಲ್ಲಿ ಹಾಗೆಲ್ಲ ಮಾತಾಡುವುದು ಅಸಂಭಾವ್ಯವೆಂದುಕೊಂಡು ತಾವೂ ಮೌನವನ್ನು ಹಿಡಿದಿಟ್ಟುಕೊಳ್ಳುವರು. ಆಗ ಅವರು ತಿಮ್ಮನ ಹತ್ತಿರ ಸನ್ನೆಯಿಂದ ನಂಬೂದರಿಗೆ ಅದನ್ನು ಕೇಳು, ಇದನ್ನು ಇನ್ನೊಮ್ಮೆ ಬಡಿಸು ಎನ್ನು ವರು. "ನಂಬೂದರಿಕ್ಕು ಮೊಳಿಕದಲ್ಲಿ ಉಪ್ಪು ಕಡಿಮೆಯೋ?" ಎಂದು ಅಲ್ಲಿಂದಲೇ ಪ್ರಶ್ನಿಸು ವರು. "ಹಾಗೇನಿಲ್ಲ. ಎಂಬ್ರಾಂದ್ರಿ ಮಾಣಿ ಚಿಕ್ಕವನಾದರೂ ತುಂಬ ಚೆನ್ನಾಗಿ ಮಾಡಿದ್ದಾ ನಲ್ಲಾ" ಎನ್ನುವನು ನಂಬೂದರಿ. "ಆದರೂ ಚೂರು ಉಪ್ಪು ಬಿದ್ದರೆ ಇನ್ನೂ ರುಚಿ ಬಂದೀತು" ಎಂದು ಮತ್ತೆ ಹೇಳುವನು.

ಒಟ್ಟಿನಲ್ಲಿ ನಂಬೂದರಿಯ ಮುಖದಿಂದ ತಿಮ್ಮನ ಮೇಲೆ ಒಳ್ಳೆಯ ಪ್ರಶಂಸೆಯೇ ಬಂದಿತ್ತು. ಅರಸುಗಳಿಗಿಂತಲೂ ಹೆಚ್ಚಿನವನಿಂದ ಬಂದ ಶಿಫಾರಸು ಸಾಮಾನ್ಯವಲ್ಲವಷ್ಟೆ? ಇಷ್ಟಕ್ಕೂ ನಂಬೂದರಿಯೆಂದರೆ ಅಷ್ಟು ದೊಡ್ಡ ಗೌರವವೇಕೆಂಬುದೇ ತಿಮ್ಮನಿಗೆ ಬಗೆಹರಿಯದ ಸಮಸ್ಯೆಯಾಗಿತ್ತು.

೧೨

ನಂಬೂದರಿಯ ಮಹಿಮೆಯಿಂದ, ಅವನು ಅರಸುಗಳ ಮನೆಯಲ್ಲಿದ್ದ ಒಂದು ವಾರ ದಿನ ಗಳಲ್ಲಿ ಏನೋ ಒಂದು ವಿಶೇಷ ಗೌಜಿ ಇದ್ದೇ ಇದ್ದಿತು. ಒಂದು ದಿನ ಅರಮನೆಯ ವಿಸ್ತಾರ ವಾದ ಅಂಗಳದಲ್ಲಿ "ತುಳ್ಳಂ ಕಳಿ" ಮೇಳದವ ರಿಟ್ಟೆ ನಡೆಯಿತು. ಅರಸುಗಳು ನಂಬೂದರಿಯೂ ಮಾಳಿಗೆಯ ಮೇಲೆಯೇ ಇದ್ದು, ಕಿಟಕಿಯಿಂದ ಅದನ್ನು ನೋಡುತ್ತಿದ್ದರು. ಉಳಿದವರೆಲ್ಲ ಜಗಲಿಯಲ್ಲಿ ಸುತ್ತೂ ಕುಳಿತೂ ನಿಂತೂ ಇದ್ದರು. ಊರವರೂ ಬಹಳ ಮಂದಿ ನೆರೆ ದಿದ್ದರು.

ನಳಚರಿತ್ರೆಯ ಕಥೆ. ಅದು ತಿಮ್ಮನಿಗೆ ಗೊತ್ತಿರುವ ಕಥೆಯಾದುದರಿಂದ ಆಸಕ್ತಿಯಿಂದ ಕೇಳುತ್ತಿದ್ದ. ಒಬ್ಬನು ಹಾಡು ಹೇಳುತ್ತಾ ಇರು ವಾಗ ಅದಕ್ಕೆ ತಕ್ಕ ತಾಳಮೇಳಗಳೊಂದಿಗೆ ಚಿಕ್ಕ ಹುಡುಗನೊಬ್ಬ ಹಾರಿಹಾರಿ ಕುಣಿ ಯುತ್ತಾ ಅಭಿನಯ ತೋರಿಸುವುದು ಬಹಳ ಮೋಜೆನಿಸಿತು. ಗುಂಪಿನಲ್ಲಿ ಯಾರಾದರೂ ಸಳನ ಹಾಗೋ, ದಮಯಂತಿಯ ಹಾಗೋ ಇರುವರೆಂಬ ಹಾಗೆ ಅವರ ಕಡೆಗೆ ಬೆರಳು ತೋರಿಸಿ ತೋರಿಸಿ ಕುಣಿಯುವನು ಆ ಹುಡುಗ.

"ಈ ನಳ ಮಹಾರಾಜ ಇಲ್ಲಿದ್ದಾನೆ ನೋಡಿ ದಿರಾ? ಇವನು ಮಹಾಪಾಕಶಾಸ್ತ್ರಿ. ಆ ಮಹಾ ರಾಜನು ಅಡಿಗೇಮನೆಗೆ ಹೊಕ್ಕುಕೂಡಲೇ-" ಹೀಗೆ ಒಬ್ಬನು ವಚನ ಹೇಳುತ್ತಿದ್ದಾಗ, ಹುಡುಗ ತಿಮ್ಮನನ್ನೆ ತೋರಿಸಿ ಅಭಿನಯಿಸುತ್ತಿ ರಲು

"ಉಪ್ಪುಂವೇಂಡಾ ಮುಳಗುಂವೇಂಡಾ
ಮೆಕ್ಕಾನುಂಬರುವಪ್ಪುಂ ವೇಂಡಾ
ನಿರುವಿಕ್ಕುಂಬೋಳ್ ಚೋರುಂ ಕರಿಯುಂ
ಎಲೆಯುಂ ಪಚ್ಚುವೆಳಂಬ್ಯುಕೊಡುಕಾಹಾವ್"

(ಅಂದರೆ, ಉಪ್ಪು, ಮೆಣಸು ಮೊದಲಾದ ಯಾವ ವಸ್ತುಗಳೂ ಬೇಡ, ನೆನೆಸಿದ ಕೂಡಲೇ ಅನ್ನಪಲ್ಯ ಮೊದಲಾದುವೆಲ್ಲಾ ಸಿದ್ಧವಾಗಿ ಎಲೆ ಹಾಕಿ ಬಡಿಸಿದ್ದೂ ಆಯಿತು) ಎಂದು ಹಾಡು ಗಾರ ಕೊರಳೆತ್ತಿ ಹಾಡಿದನು. ತಿಮ್ಮನೇ ನಳ ಮಹಾರಾಜನೆಂಬಂತೆ ಎಲ್ಲರೂ ಮುಸಿ ಮುಸಿ ನಕ್ಕರು.

ತುಳ್ಳಂಕಳಿಯಲ್ಲಿ ಹಾಸ್ಯ ವಿಡಂಬನೆಗಳೂ ಉಂಟು. ಬ್ರಾಹ್ಮಣರು ಭೋಜನಪ್ರಿಯರೆಂಬು ದನ್ನು "ಪಟ್ಟನ್ಮಾರುಡೆ ಅಪ್ಪಕನ್ನಾಶ್ ಕಿಟ್ಟುಂಭಕ್ಷಣ ಸಂತೋಷ ಪಕ್ಷಂ. ನಾಯನ್ಮಾ ರುಡೆ ಊಣು ಕಳಿನ್ನಾಲ್ ಪಿನ್ನೆ ತಿಕ್ಕಿಂ ಕೋನೆ ತ್ತೋನೆ" (ಅಂದರೆ ಬ್ರಾಹ್ಮಣರಿಗೆ ಊಟವಾದರೆ ಉಳಿದವರಿಗೆ ಇದ್ದರುಂಟು. ಇಲ್ಲ ದಿದ್ದರಿಲ್ಲ. ಆದರೆ ನಾಯಿನ್ಮಾರು ಊಟವಾಗಿ ಬಿಟ್ಟರೆ ಉಳಿದ ಸಾಮಾನ್ಯರಿಗೆಲ್ಲ ಬೇಕಾದಷ್ಟು ಹಾಗೆ ಹಾಗೇ ಉಳಿದಿರುತ್ತದೆ.)

ಈ ಪದ್ಯ ಹೇಳುವಾಗಲೂ ಆ ಕುಣಿಯುವ ಹುಡುಗ ತಿಮ್ಮನ ಕಡೆಗೆ ಬೆರಳು ತೋರಿಸುತ್ತಾ ಅಭಿನಯಿಸಿದ. ಈ ಸಾರಿ ಎಲ್ಲರೂ ತಿಮ್ಮನನ್ನು ನೋಡಿ ನಕ್ಕಾಗ ತಿಮ್ಮನ ಮುಖ ಇಷ್ಟು ಸಣ್ಣ ದಾಯಿತು. ಆಗ ಮೂಪಮ್ಮ, "ನೀವು ಬಂತೆ ಮಾಡಬೇಡಿ ಮಾಣೀ. ದೊಡ್ಡ ಬ್ರಾಹ್ಮಣ ರಾರೂ ಇಲ್ಲದ್ದರಿಂದ ನಿಮ್ಮನ್ನು ತೋರಿಸಿದ ಅಷ್ಟೇ. ಹಾಗೆ ಯಾರನ್ನಾದರೂ ತೋರಿಸಿ ರಹೇಳುವುದ, ತುಳ್ಳಂಕಳಿಯ ಪದ್ಧತಿ ...ನೇನೂ


It's AMAZING!
the instant-killing vapour in
NEW MULTI-POWERED FLIT
On spraying, the instant-killing invisible vapour of new FLIT spreads out... to kill insects in every part of the room. Even hidden insects can't escape! For best results, close doors and windows. Spray upwards. Open room after a few minutes. Because of its new power, new FLIT kills more insects spray for spray. New FLIT also gives longer residual protection. Each tin lasts longer! Get new Multi-Powered FLIT today.
NEW MULTI-POWERED
FLIT
KILLS FLIES & MOSQUITOES FAST
Esso
MULTI-POWERED
FLIT
today's most powerful insect killer!
CMER-19-203

ಸಿಂದಿ ಶ್ರೋತ ಬ್ರಾಹ್ಮಣ ಅಲ್ಲವೆಂದು ನನಗೆ ಗೊತ್ತಿಲ್ಲವೇ?" ಎಂದು ತಿಮ್ಮನಿಗೆ ಸಮಾಧಾನ ಹೇಳಿದಳು.

ಆಗ ಎಳೆಯ ಕುನ್ನೇವೆ ನಗುತ್ತ "ಹಾಗೆ ನೋಡಿದರೆ ಭೋಜನಪ್ರಿಯನಲ್ಲದವನು ಬ್ರಾಹ್ಮಣನೇ ಅಲ್ಲ ಗೊತ್ತೇ? ಬ್ರಾಹ್ಮಣರ ಅಷ್ಟು ಹೊಟ್ಟೆತುಂಬ ಊಟ! ಕೊನೆದು ಅಲ್ಪಸ್ವಲ್ಪ ಉಳಿಯಬೇಕಾದ್ದೇ ಬ್ರಾಹ್ಮಣಿಕೆಯ ಲಕ್ಷಣ. ಬೇಕಾದರೆ ಕುನ್ನಂಬುವಾಯುರವರ್ನ್ನ ಕೇಳಿ ನೋಡಿ ನಮ್ಮ ಮಾಣಿ ಕೂಡಾ ದೊಡ್ಡ ಅಷ್ಟು ಕಳಿಕ್ಕನ್ನ (ಊಟ ಹೊಡೆಯುವ) ಬ್ರಾಹ್ಮಣನೇ ಆದಾನು ಮುಂದೆ" ಎಂದಳು.

ಮೂಕನ್ನು ಅವಳನ್ನು ಗದರಿಸಿ ಸುಮ್ಮನಾಗಿಸಿದಳು.

ಹಾಗೆಯೇ ಮತ್ತೊಂದು ದಿನ "ಒಟ್ಟಂತುಳ್ಳಲ್" ಆಟ ನಡೆಯಿತು. ಹಿಂದೆಯೂ ಮುಂದೆಯೂ ಆಚೆಗೂ ಈಚೆಗೂ ಓಡುತ್ತಾ, ಕಥೆಯ ಹಾಡನ್ನು ಹೇಳುತ್ತ ಕುಣಿಯುತ್ತ ನೆರೆಯುತ್ತದೆ ಒಟ್ಟಂತುಳ್ಳಲ್ ಬಹಳ ತಮಾಷೆಯಾದ ಆಟ

ಮತ್ತೊಂದು ನಿರ್ದಿಷ್ಟ ದಿನ ರಾತ್ರಿ ಸುಂದರ ಕಾಂಡದ ಕಥಕ್ಕಳಿಯನ್ನು ದೊಡ್ಡ ಮೇಳದವರಿಂದ ಆಡಿಸಲಾಯಿತು. ಕುನ್ನಿಕುನ್ನೇವೆಯ ಸೌಭಾಗ್ಯ ಬೆಳಗಿದರೆ ಆಡಿಸುವುದಾಗಿ ಹೇಳಿಕೊಂಡ ಹರಕೆಯ ಆಟವಾಗಿತ್ತು ಅದು. ಕನ್ನಡ ನಾಡಿನಲ್ಲಿ ಯಕ್ಷಗಾನ ಬಯಲಾಟಕ್ಕೆ ಹಾಕುವ ಹಾಗೆಯೇ ಅರಮನೆಯ ಇದಿರಿನ ಗದ್ದೆಯಲ್ಲಿ ಚಪ್ಪರ ಹಾಕಿ ರಂಗಸ್ಥಳ ನಿರ್ಮಿಸಲಾಯಿತು ರಾತ್ರಿ ಊರವರೆಲ್ಲ ನಾಲ್ಕು ಸುತ್ತಲೂ ನೆರೆದರು ಸೂಟೆ ದೊಂದಿ. ಹಿಲಾಲುಗಳ ಬೆಳಕಿನಲ್ಲಿ ನಡೆಯಿತು ಕಥಕ್ಕಳಿ ಶಾಸ್ತ್ರೀಯವಾದ ವರ್ಣವೇಷಗಳಿಂದ ಕಥಕ್ಕಳಿ ಭವ್ಯವಾಗಿತ್ತು. ಭಾಗವತನು ದೀರ್ಘರಾಗದಿಂದ ಒಂದು ಕಿವಿ ಮುಚ್ಚಿಕೊಂಡು ಬಾಯಿ ತೆರೆದು, ತಲೆಯೆತ್ತಿ, ಉಸಿರು ಬಿಗಿದು ಗಟ್ಟಿಯಾಗಿ ಹಾಡುತ್ತಾನೆ ತಾಳಮೇಳ ಚಂಡೆಗಳು ಧ್ವನಿಸುತ್ತವೆ. ವೇಷಗಳು ರಂಗಸ್ಥಳದಲ್ಲಿ ಹಾಡಿನ ಭಾವಕ್ಕೆ ತಕ್ಕ ಹಾಗೆ, ಮೌನವಾಗಿ ಮುದ್ರೆಗಳ ವಿವಿಧ ಭಂಗಿಯ ಅಭಿನಯಗಳನ್ನು ತೋರಿಸುತ್ತವೆ. ಆದರೆ ತಿಮ್ಮನಿಗೆ ಈ ಕಥಕ್ಕಳಿ ಒಂದಿಷ್ಟೂ ರುಚಿಸಲಿಲ್ಲ ಅದರಲ್ಲಿಯ ಚಂಡೆಯ ಧ್ವನಿಯೂ, ಹನುಮಂತನ ವೇಷವೂ ಅವನಿಗಿಷ್ಟು ಹಿಡಿಸಿದುವು. ಉಳಿದುದೆಲ್ಲ ಬರೀ ಸಪ್ಪೆಯೆನಿಸಿ ನಿದ್ದೆ ಬಂದಿತು ಅದಕ್ಕಿಂತ ಅವನ ಊರಿನಲ್ಲಿ ನಡೆಯುವ ಯಕ್ಷಗಾನದ ಆಟ ಎಷ್ಟೋ ಚೆನ್ನಾಗಿರುತ್ತೆ ಕಥೆಯೂ ಚೆನ್ನಾಗಿ ಅರ್ಥವಾಗುತ್ತೆ.

ಆದರೆ ಮರುದಿನ ಹಿರಿಯರೆಲ್ಲ "ಕಥಕ್ಕಳಿ ಬಹಳ ಅದ್ಭುತವಾಗಿತ್ತು ಸ್ವಲ್ಪ ಕೂಡ ಮುದ್ರೆ ತಪ್ಪಿಲ್ಲ" ಎಂದು ಹೊಗಳಿದ್ದೇ ಹೊಗಳಿದ್ದು ಅದರಲ್ಲಿಯು ಹನುಮಂತ ವೇಷಧಾರಿಗೆ ಕೆಲವರು ಕರ್ಪೂರಾರತಿ ಬೆಳಗಿ ಪೂಜೆ ಕೂಡಾ ಮಾಡಿದ್ದರು ಏಕೆಂದರೆ ಆ ಹನುಮಂತ ಹಾಕಿದವನು ಸಾಮಾನ್ಯ ಆಸಾಮಿಯಲ್ಲವಂತೆ ಅವನ ವಿಷಯದಲ್ಲಿ ಅನೇಕ ದಂತಕಥೆಗಳು ಪ್ರಚಾರದಲ್ಲಿದ್ದುವು ಅವನಿಗೆ ಹನುಮಂತನ ವರಪ್ರಸಾದವೇ ಇದೆಯಂತೆ. ಅವನು ವೇಷ ಹಾಕಿ ಸಿದ್ಧನಾಗುವಾಗ ನಿಜವಾದ ಹನುಮಂತನೇ ಅವನ ದೇಹದಲ್ಲಿ ಆವಾಹಿಸಿಕೊಳ್ಳುವನಂತೆ ಹಿಂದೊಮ್ಮೆ ಚೆರಿಯಂಬ ಕ್ಷೇತ್ರದಲ್ಲಿ ಕಥಕ್ಕಳಿ ನಡೆಸಿದಾಗ ವೇಷದ ಕೋಣೆಯಿಂದ ಅವನು ರಂಗಸ್ಥಳಕ್ಕೆ ಬರಲು ಸಿದ್ಧನಾದನಂತೆ. ಅಲ್ಲಿಂದ ಒಂದೇ ಹೆಜ್ಜೆಗೆ ಕುಳಿತಿರುವ ಅಷ್ಟೂ ಜನರ ಗುಂಪುಗಳ ಮೇಲಿಂದಾಗಿ ಹಾರಿ ರಂಗಸ್ಥಳದಲ್ಲಿ ನಿಂತು ಆ ಹನುಮಂತ ಒಂದೇ ಸಾರಿ "ರಾಮಾ" ಎಂದು ಕಿರುಚಿದ್ದೇ ತಡ. ಗುಂಪಿನಲ್ಲಿದ್ದ ಹಲವರು ಮೂರ್ಛೆಬಿದ್ದರಂತೆ; ಗರ್ಭಿಣಿಯೊಬ್ಬಳಿಗೆ ಆಕಸ್ಮಿಕ ಪ್ರಸವವಾಗಿ ಆ ಶಿಶುವಿಗೆ 'ರಾಮ' ಎಂದೇ ಹೆಸರಿಟ್ಟರಂತೆ ವಿಚಿತ್ರವೇನೆಂದರೆ ಯಾರಿಗೂ ಕೇಡಾಗಲಿಲ್ಲ; ಎಲ್ಲರೂ ಕ್ಷೇಮವೇ.

೧೩

ನಂಬೂದರಿ ತನ್ನೂರಿಗೆ ಹೊರಟು ಹೋಗುವಾಗ ತಿಮ್ಮನೂ ಎರಡು ದಿನಗಳ ಮಟ್ಟಿಗೆ ನಂಬೂದರಿಯ ಮನೆಗೆ ಹೋಗಬೇಕಾದ ಅಗತ್ಯ ಬಂತು. ಕಾರಣವೇನೆಂದರೆ, ತಿಮ್ಮನು ಮಾಡುವ "ಮೊಳ್ಕೆಶ್ಯ" ಎಂಬ ಬಳ್ಳಿ ಮೆಣಸಿನ ಹುಳಿ ನಂಬೂದರಿಗೆ ಚೆನ್ನಾಗಿ ಹಿಡಿಸಿತು. ಹೇಗೆ ಹಿಡಿಸಿತೆಂದರೆ ಅರಸುಗಳು ತಿಮ್ಮನ ಮೊಳ್ಕೆಶ್ಯವನ್ನು ನಂಬೂದರಿಯ ಮುಂದೆ ಬಹಳ ಜೋರಾಗಿ ಹೊಗಳುವಾಗ ನಂಬೂದರಿ "ಹೌದು ಹೌದು. ಇಂಥ ಮೊಳ್ಕೆಶ್ಯ ನಾನೀವರೆಗೆ ತಿಂದಿಲ್ಲ" ಎಂದುಬಿಟ್ಟ. ನಂಬೂದರಿಯ ಮನೆಯಲ್ಲಿರುವ ಅಡಿಗೆಯ ಪಟ್ಟರ್‌ರಿಗೆ ಸರಿಯಾದ ಮೊಳ್ಕೆಶ್ಯ ಮಾಡಲಿಕ್ಕೆ ಬರುವುದಿಲ್ಲವಂತೆ. ಅದಕ್ಕೆ ಬೀಳುವ ವಸ್ತುಗಳು ಸರಿಯಾದ ತೂಕದಲ್ಲಿ ಬಿದ್ದು, ಸರಿಯಾದ ಒಲೆಯುರಿಯಲ್ಲಿ ಅದು ಕುದಿದು ಪಕ್ವವಾದರೇನೇ ಸರಿಯಾದ ಮೊಳ್ಕೆಶ್ಯವಾಗುತ್ತದೆ ಅದನ್ನು ಆ ಅಡಿಗೇ ಪಟ್ಟರ್‌ರಿಗೆ ಹೇಳಿ ತೋರಿಸಿಕೊಡಲು "ನಮ್ಮ ಮಾಣಿಯನ್ನು ಕಳುಹಿಸುವೆನು" ಎಂದು ಕುನ್ನಿಕುಟ್ಟಿ ಗಂಡನಿಗೆ ಹೇಳಿ, ಮೂಪಮ್ಮೆಯನ್ನು ಕೇಳಿ ಅರಸುಗಳ ಹತ್ತಿರ ಅನುಜ್ಞೆ ಪಡೆದು ತಿಮ್ಮನನ್ನು ಎರಡು ದಿನಗಳ ಮಟ್ಟಿಗೆ ಕಳುಹಿಸುವುದೆಂದು ನಿರ್ಧರಿಸಲಾಯಿತು.

ಹಾಗೆಯೇ ತಿಮ್ಮ ಪೆಟ್ಟಿಗೆಯಲ್ಲಿದ್ದ ತನ್ನ ಅಂಗಿಯನ್ನು ಹಾಕಿಕೊಂಡು ನಂಬೂದರಿಯ ಪಲ್ಲಕ್ಕಿಯ ಹಿಂದೆ ಹತ್ತು ಮೈಲು ದೂರ ನಡೆದು ಅವನ ಮನೆ ಮುಟ್ಟಿದ. ಅಲ್ಲಿ ಹೋಗುವಷ್ಟರಲ್ಲಿ ನಂಬೂದರಿಯ ರೀತಿಯೇ ಬದಲಾಗಿ ಹೋಗಿತ್ತು. ದೊಡ್ಡ ಮನೆ. ಅಲ್ಲಿ ಅವನ 'ಅಣ್ಣಂದಿರು ತಮ್ಮಂದಿರು, ಹುಡುಗರು ಅಂತ ಬಹಳ ಮಂದಿ ಇದ್ದರು. ಅವರೊಂದಿಗೆ ಅರಸುಗಳ ಅಳಿಯ ನಂಬೂದರಿ ಸರ್ವಸಾಮಾನ್ಯನಾಗಿ ಹೋಗಿ ನಗುತ್ತ ಕೆಲೆಯುತ್ತ ಸ್ವಾಭಾವಿಕನಾಗಿದ್ದ. ಅರಸುಗಳ ಮನೆಯಲ್ಲಿ ಮಿತಭಾಷಿಯೂ, ಗಂಭೀರ ಭಾವಿಯೂ, ಚಮತ್ಕಾರದ ಹಸನ್ಮುಖಿ ನಯಶೀಲನೂ ಆದ ಆ ನಂಬೂದರಿ ಇವನಲ್ಲವೆನಿಸಿತು. ಅವನು ತಿಮ್ಮನನ್ನು ಮನೆಯವರಿಗೆ ಪರಿಚಯ ಮಾಡಿಸುತ್ತ, "ಎಂಬ್ರಾಂದಿ ಹುಡುಗ ಒಳ್ಳೇ ಚಿತ್ರ ಬರೆಯುತ್ತಾನೆ. ಎರಡು ದಿನಕ್ಕೆ ಸುಮ್ಮನೆ ಕರೆದುಕೊಂಡು ಬಂದೆ" ಎಂದ.

ಅಲ್ಲಿಯ ಹುಡುಗ ಹುಡುಗಿಯರೆಲ್ಲ ತಿಮ್ಮನನ್ನು ಮುತ್ತಿಕೊಂಡರು. ಹಾಯಿಯ ಚಿತ್ರ ಬರಿ. ಬೆಕ್ಕಿನ ಚಿತ್ರ ಬರಿ, ಆನೆ ಬರಿ, ದನ ಬರಿ— ಅಂತ ಒಬ್ಬೊಬ್ಬರು, ಎರಡು ದಿನಗಳಲ್ಲೂ ಎಡೆಬಿಡದೆ ತಿಮ್ಮನನ್ನು ಮುತ್ತಿಕೊಂಡುಬಿಟ್ಟರು. ಆಟ ಗೀಚಾಟಗಳಿಂದ ಎರಡು ದಿನ ಕಳೆದದ್ದೇ ತಿಮ್ಮನಿಗೆ ತಿಳಿಯಲಿಲ್ಲ. ಅಡಿಗೆಯನ್ನು ಕುರುತಾಗಲಿ. ಮೊಳ್ಕೆಶ್ಯದ ವಿಷಯವಾಗಲೀ ಅವನ ಹತ್ತಿರ ಯಾರೂ ಕೇಳಲೇ ಇಲ್ಲ. ಅಸಲು ಅಡಿಗೆ ಮನೆಗೇ ಕಾಲಿಡಲಿಲ್ಲ, ತಿಮ್ಮ. ಎಲ್ಲರೊಂದಿಗೆ ಅವನೂ ಊಟಕ್ಕೆ ಕುಳಿತುಕೊಳ್ಳುತ್ತಿದ್ದ. ಅಡಿಗೆ ಪಟ್ಟರ್ ಎಲ್ಲರಿಗೂ ಬಡಿಸಿದಂತೆ ತಿಮ್ಮನಿಗೂ ಬಡಿಸುತ್ತಿದ್ದ. ಅಲ್ಲಿಯ ಅಡಿಗೆ ತಾನು ಮಾಡುವ ಪುಟ್ಟ ರೀತಿಯ ಅಡಿಗೆಗಿಂತಲೂ ಎಷ್ಟೋ ರುಚಿಯಾಗಿರುವುದೆಂದೂ, ಈ ಪಟ್ಟರ್ ಹತ್ತಿರ ತಾನೇ ತುಂಬ ಕೇಳಿ ಕಲಿತುಕೊಳ್ಳತಕ್ಕದ್ದು ಇದೆಯೆಂದೂ ತಿಮ್ಮನಿಗೆ ತೋರಿತು. ಆದರೆ ಅದಕ್ಕೆ ಸಂದರ್ಭವೇ ಬರಲಿಲ್ಲ ಹುಡುಗರೊಂದಿಗೆ ಬಹಳ ಉತ್ಸಾಹದಿಂದ ಸಮಯ ಕಳೆಯಿತು ತಿಮ್ಮನಿಗೆ

ಅರಸುಗಳ ಅಳಿಯನಾದ ನಂಬೂದರಿಗೆ. ಅವನ ಸ್ವಂತ ಮನೆಯಲ್ಲಿ ಪ್ರತ್ಯೇಕ ಗೌರವವಿರುವುದೂ ತಿಮ್ಮನಿಗೆ ಗೊತ್ತಾಗಲಿಲ್ಲ. ಅಲ್ಲಿ ಅರಸುಗಳ ಹಾಗೆಯೇ ಚಂಗಲಾಟ. ಚಾಮರ ಸೇವೆಗಳನ್ನು ಪಡೆಯುತ್ತ, ಬೆಳ್ಳಿಯ ಕಲಾತ್ಮಕವಾದ ಒರಗುಮಣೆ ಕೂಡುಮಣೆಗಳಲ್ಲಿ ಕುಳಿತು ಊಟಮಾಡುವ ಹಾಗೆ ಇಲ್ಲೇನೂ ಇರಲಿಲ್ಲ. ಎಲ್ಲರಂತೆ ನೆಲದ ಮೇಲೆಯೇ ಕುಳಿತು ಊಟ ಮಾಡುತ್ತಾನೆ! ಅಲ್ಲಿ ಮಾಡುತ್ತಿದ್ದಷ್ಟು ಹೊತ್ತು ಜಪ ಧ್ಯಾನಗಳೂ ಇಲ್ಲಿಲ್ಲ. ಅಸಲು ಜಪ ಸಂಧ್ಯಾವಂದನಗಳನ್ನೆಲ್ಲ ಬಹಳ ಚಟುಕಿ ಹಾರಿಸಿ ಹಾರಿಸಿ ಓಡಿ ಬರುವ ಈ ನಂಬೂದರಿಯೆಲ್ಲಿ? ಅರಸುಗಳ ಮನೆಯಲ್ಲಿ ಭಾರಿ ಸಂಧ್ಯಾವಂದನೆ ಮಾಡುವ ಅಳಿಯ ನಂಬೂದರಿಯೆಲ್ಲಿ? ಎಲ್ಲಾ ಪರರ ಮನೆಯಲ್ಲಿ ತೋರಿಸುವ ಹೊರವೇಷ ಅಷ್ಟೇ!

ತಿಮ್ಮ ಅಲ್ಲಿಂದ ಅರಸುಗಳ ಮನೆಗೆ ಹಿಂದಿರುಗುವಾಗ ನಂಬೂದರಿ ಅವನನ್ನು ಕರೆದು, "ಅಲ್ಲಿ ಕೇಳಿದರೆ ಮೊಳ್ಕೆಶ್ಯ ಹೇಳಿಕೊಟ್ಟೆ ಅಂತ ಹೇಳಿಬಿಡು, ತಿಳೀತೆ? ಅಸಲು ಇಲ್ಲಿ ಯಾರಿಗೂ ಮೊಳ್ಕೆಶ್ಯ ಗೀಳ್ಕೆಶ್ಯ ಎಲ್ಲಾ ಹಿಡಿಯೋದಿಲ್ಲ ಅದು ಜ್ವರ ಬಂದಾಗ ಮಾಡುವಂಥ ಪಥ್ಯದ ಹುಳಿ. ಚೆನ್ನಾಗಿ ಕಲಿಸಿ ಕೊಟ್ಟೆ ಅಂತ ಹೇಳು" ಎಂದು ಬೋಧಿಸಿದ ನಗುತ್ತ "ಆಗಲಿ" ಎಂದು ತಿಮ್ಮನೂ ನಗುತ್ತ ಹೇಳಿ ಅಲ್ಲಿಂದ ಹೊರಟ ಒಬ್ಬನೇ ಹಿಂದಿರುಗಿ ಹೋಗಲು ದಾರಿ ಗೊತ್ತಿತ್ತು ಅವನಿಗೆ

ದಾರಿಯುದ್ದಕ್ಕೂ ತಿಮ್ಮನಿಗೆ, ಆ ನಂಬೂದರಿಯನ್ನು ನೆನೆನನೆದು ನಗು ಬರುತ್ತಿತ್ತು. ಅರಸುಗಳ ಮನೆಯಲ್ಲಿ, ಔಷಧದದಾಗಿನ ಮೊಳ್ಕೆಶ್ಯವನ್ನೂ ಬೇಕಂತ ಹೂಗಳಿಕೊಂಡು ತಿನ್ನುವಾಗ ಎಷ್ಟು ಕಷ್ಟಪಟ್ಟನೋ!

ಆದರೆ ನಂಬೂದರಿಯ ನಿಜಸ್ಥಿತಿಯನ್ನು ಅರಸುಗಳ ಮನೆಯಲ್ಲಿ ಅವನು ಬಯಲು ಮಾಡಲೇ ಇಲ್ಲ. "ಮೊಳ್ಕೆಶ್ಯ ಮಾಡುವ ಕ್ರಮವನ್ನು ಅಲ್ಲಿಯ ಪಟ್ಟರ್ರಿಗೆ ಹೇಳಿಕೊಟ್ಟೆ" ಎಂದು ಸುಳ್ಳು ಹೇಳಿದ. ಅಲ್ಲಿ ಎಲ್ಲರೂ ತನ್ನಿಂದಲೇ ಮೊಳ್ಕೆಶ್ಯ ಸಾರುಗಳನ್ನು ಮಾಡಿಸಿ ತಿಂದರೆಂದೂ, ತನಗೆ ರಾಜೋಪಚಾರ ಮಾಡಿದರೆಂದೂ ಸುಳ್ಳು ಸುಳ್ಳೇ ಜಂಬ ಕೊಚ್ಚಿಕೊಂಡ.

೧೪

ಆ ವೇಳೆ ತಿಮ್ಮ ಅರಸುಗಳಿಗೆ ಮಾಡುವ ಅಡಿಗೆ ಮೊದಲಿನಷ್ಟು ರುಚಿಯಾಗಿಲ್ಲವೆಂಬ ಅಭಿಪ್ರಾಯವುಂಟಾಯಿತು ರಸ, (ಸಾರು) ಸಾಂಬಾರ್, ಉಪ್ಪೇರಿ, ಎಲಿಚೇರಿ ಮೊದಲಾದುವು ಮೊದಲಿನಷ್ಟು ರುಚಿಯಾಗಿಲ್ಲವೆಂದು ಅರಸುಗಳು ಕೂಡ ಹೇಳಿದರು. ತಿಮ್ಮನು 'ಪುಳುಕ್ಕು' (ಒಂದು ಬಗೆಯ ಕೂಟ್ಟು) ಮೇಲೋಗರ ಮಾಡಿದರೆ ಅದಕ್ಕೊಂದು ಪ್ರತ್ಯೇಕ ರುಚಿ ಇರುತ್ತಿತ್ತಂತೆ. ಈಗ ಅದಕ್ಕೆ ಬೇಕುವ ವಸ್ತುಗಳು ಸರಿಯಾಗಿ ಬಿದ್ದು ಕೂಡ 'ಪುಳುಕ್ಕು' ಅರುಚಿಯಾಗಿ ಹೋಗಿದೆ. ಇದನ್ನೆಲ್ಲ ಪರೀಕ್ಷೆ ಮಾಡಿದ ಮೇಲೆ ಮೂಪಮ್ಮ ಹೀಗೆಂದಳು: "ಮೊದಲು ನಮ್ಮ ಮಾಣಿ ಮುಟ್ಟಿದ ಅಡಿಗೆಯೆಲ್ಲ ಅಮೃತಕ್ಕೆ ಸಮಾನವಾಗಿದದ್ದು, ಈಗ ಹೀಗಾಗಬೇಕಾದರೆ, ಮತ್ತೇನೂ ಅಲ್ಲ; ನನಗೆ ಮೊದಲೇ ಸಂಶಯ ಬಂದಿತ್ತು. ಮಾಣಿಯನ್ನು ನಂಬೂದರಿಯ ಮನೆಗೆ ಕಳಿಸಿದರೆ, ಯಾರದಾದರೂ ದೃಷ್ಟಿಯಾದೀತೂ ಅಂತ. ಹಾಗೇ ಆಯಿತು. ಮಾಣಿಯ ಅಡಿಗೆಗೆ ಖಂಡಿತ ದೃಷ್ಟಿ ತಾಗಿದೆ. ಬಹುಶಃ ಅಲ್ಲಿಯ ಅಡಿಗೇ ಪಟ್ಟರನ ದೃಷ್ಟಿಯೇ ತಾಗಿರಬೇಕು."

ಈ ಮಾತನ್ನು ಕೇಳಿದ ವಾಲ್ಯಕ್ಕಾರಕಣಾರ, "ಇದ್ದೀತಮ್ಮ, ಅದು ಅಲ್ಲಿಯ ಪಟ್ಟರ್ರ ದೃಷ್ಟಿಯಾಗಿರಲಿಕ್ಕಿಲ್ಲ. ಆ ದೃಷ್ಟಿಚೋರ ಕಣ್ಣನ್ ಈಗ ನಂಬೂದರಿಯ ಮನೆಯಲ್ಲಿ ತೋಟದ ಕೆಲಸ ಮಾಡ್ತಾನೆ ಅವನೇನಾದರೂ ನೆಕ್ಕಿ ನೋಡಿರಬಹುದು ನಮ್ಮ ಮಾಣಿಯವರ ಅಡಿಗೇನ" ಎಂದ.

"ಶ್ಶೆ! ಮತ್ತೇನಿದೆ? ಕಣ್ಣನ್ನ ದೃಷ್ಟಿ ಬೆಂಕಿ! ಮಹಾ ಬೆಂಕಿ!" ಎಂದರು ಮೂಪಮ್ಮ. ಕುಸ್ನೇಮೆಂಗಳೆಲ್ಲರೂ ಒಂದೇ ಬಾಯಿಗೆ.

ಆ ಕಣ್ಣನ್ 'ತೀಯ' (ಪಂಚಮ) ಜಾತಿಯವನು. ಅವನು ಹಿಂದೊಮ್ಮೆ ಅರಸುಗಳ ಮನೆಗೆ ಕೂಲಿ ಕೆಲಸಕ್ಕೆ ಬಂದಿದ್ದ. ಅವನು ಒಂದು ಸಾರಿ ಕುನ್ನಂಬುವಾಯರ ಮಗುವನ್ನು ನೋಡಿ, "ಅಹಾ ಎಷ್ಟು ಕೆಂಪಗಿದೆ ಮಗು!" ಎಂದನಂತೆ. ಮರು ದಿನ ಆ ಮಗುವಿಗೆ ಬೆಂಕಿಯ ಗುಳ್ಳೆಗಳಾಗಿ ಬಹಳ ಫಜೀತಿಯಿಟ್ಟುಕೊಂಡು, ಕೊನೆಗೆ ಆ ಮಗುವಿನ ಅಂದಗೆಟ್ಟು ಹೋಯಿತಂತೆ ಪಾಪ! ಅದೇ ಕಣ್ಣನ್ ಕೋಪಿನ್ನಾಯರ್ ಎಂಬವರ ನೇಂದ್ರ ಗದ್ದೆಯನ್ನು ನೋಡಿ "ಅಬ್ಬ! ಏನು ಬಾಳೇಗಿಡಗಳಪ್ಪ! ಏನು ಕಾಯಿಗಳು!" ಎಂದು ಉದ್ಗರಿಸಿಕೊಂಡನಂತೆ. ಮರುದಿನ ಬೆಳಿಗ್ಗೆ ನೋಡಿದಾಗ, ಎಲ್ಲಾ ಬಾಳೇಗಿಡಗಳೂ ಇಡಿಯ ನೇಂದ್ರಗದ್ದೆಯೇ ಬಾಡಿ ಒಣಗಿ ಸುಟ್ಟು ಹೋದಹಾಗಾಯಿತಂತೆ.

ಕಣ್ಣನ್ನ ದೃಷ್ಟಿಗೆ ದೃಷ್ಟಿ ಬೊಂಬೆಗಳೂ ಈಡಲ್ಲ. ಆತೆಯೇ ಅವನು "ತೀಕಣ್ಣನ್" [ಬೆಂಕಿಯ ಕಣ್ಣನವ] ಎಂದು ಪ್ರಸಿದ್ಧನಾಗಿದ್ದನು.

ತಿಮ್ಮನ ಅಡಿಗೆಗೆ ಅವನ ದೃಷ್ಟಿಯೇ ತಾಗಿದೆಯೆಂದು ನಿಶ್ಚಯಿಸಲಾಯಿತು. ಮಂತ್ರವಾದಿ ಮುದುಕಿಯನ್ನು ಕರೆಯಿಸಿ, ಅವನ ಮುಂದೆ ಹಳೆಯ ಕಸಪರಿಕೆಯನ್ನೂ, ಉಪ್ಪು, ಮೆಣಸು ಸಾಸುವೆಕಾಳನ್ನೂ ನಿವಾಳಿಸಿ ಬೆಂಕಿಗೆ ಹಾಕಿದರು. ಮಂತ್ರಿಸಿದ ಕರಿಯ ದಾರವನ್ನು ಅವನ ಕೈಗೆ ಕಟ್ಟಿದರು.

ತನಗೆ ಇಷ್ಟೆಲ್ಲಾ ಕ್ರಿಯಾ ಕರ್ಮಗಳು ನಡೆಯುವುದನ್ನು ನೋಡುವಾಗ, ತನ್ನ ಅಡಿಗೆಗೆ ಆ ಕಣ್ಣನ್ನ ದೃಷ್ಟಿ ತಾಗಿದ್ದು ನಿಜವೆಂದೇ ತಿಮ್ಮನಿಗೆ ತೋರಿತು. ಆದರೆ ನಂಬೂದರಿಯ ಮನೆಯಲ್ಲಿ ಅವನು ಅಡಿಗೆಯನ್ನೇ ಮಾಡದ್ದರಿಂದ ಅಲ್ಲಿ ದೃಷ್ಟಿತಾಗುವುದು ಸಾಧ್ಯವಿಲ್ಲ. ಹಿಂದೆ ಅರಸುಗಳ ಮನೆಯಲ್ಲಿ ಆ ತೀಯಕ್ಕಣ್ಣನ್ ಕೂಲಿ ಕೆಲಸಕ್ಕೆ ಬಂದಿದ್ದಾಗ, ಅರಸುಗಳು ಉಂಡ ತಟ್ಟೆಯಲ್ಲಿ ಮಿಕ್ಕ ಎಂಜಲನ್ನು ಎಲೆಯಲ್ಲಿ ಹಾಕಿ ತೆಂಗಿನ ಕಟ್ಟೆಯಲ್ಲಿಡುವುದು ಪದ್ಧತಿ. ನಾಯಿಯೋ ಕಾಗೆಯೋ ತಿನ್ನಲೀ ಅಂತ. ಅದನ್ನು ಆ ತೀಯಕಣ್ಣನ್ ತಿಂದು ತನ್ನ ಅಡಿಗೆಗೆ ದೃಷ್ಟಿ ಹಾಕಿರಬೇಕು ಎಂದು ತಿಮ್ಮನಿಗೆ ತೋರಿತು.

ಈ ಮಂತ್ರಗಳ ತಂತ್ರಗಳಾದ ಮೇಲೆ ತಿಮ್ಮನ ಅಡಿಗೆಗೆ ಮೊದಲಿನ ರುಚಿ ಪರಿಮಳಗಳು ಬರಲಾರಂಭವಾದುವೆಂದು ಎಲ್ಲರೂ ಅನುಭವಪೂರ್ವಕವಾಗಿ ಹೇಳತೊಡಗಿದರು. ಆದರೆ ಆ ತೀಯಕ್ಕಣ್ಣನ ದೃಷ್ಟಿ ಈ ಮಂತ್ರಗಳಿಗೆಲ್ಲಾ ಜಗ್ಗುವಂಥಾದ್ದಲ್ಲವೆಂದು ಇನ್ನೊಂದು ದುರ್ಘಟನೆ ಸಿದ್ಧಪಡಿಸಿತು.

ಒಂದು ದಿನ ತಿಮ್ಮನು ಅಡಿಗೇಮನೆಯಲ್ಲಿ ಅನ್ನಬಸಿಯಲಿಕ್ಕಾಗಿ ಚರಿಗೆಯನ್ನು ಒಲೆಯಿಂದ ಎತ್ತಿದಾಗ ಕೈ ಜಾರಿತು; ಕುದಿಕುದಿ ಅನ್ನವೂ ಗಂಜಿಯೂ ಅವನ ಕಾಲ ಬುಡದಲ್ಲಿಯೇ ಬಿತ್ತು. ಕಾಲು ಜಾರಿತು. ತಿಮ್ಮ ಧಡಾಲನೆ ಬಿದ್ದು ಇಳಿಜಾರಾದ ನೆಲದಲ್ಲಿ ಕುದಿ ಗಂಜಿಯ ಮೇಲೆ ಹೊರಳಾಡಿದ ಸದ್ದು ಕೇಳಿ ಎಲ್ಲರೂ ಓಡಿ ಬಂದರು. ಉರಿಯನ್ನು ತಾಳದೆ ಹುಳ್ಳುತ್ತಾ ಕೂಗುತ್ತಿರುವ ತಿಮ್ಮನ ಅವಸ್ಥೆಯನ್ನು ನೋಡಲಾರದೆ, ಬಾವಿಯಿಂದ ತಣ್ಣೀರನ್ನು ತೆಗೆತೆಗೆದು ತಿಮ್ಮನ ಮೇಲೆ ಸುರಿದರು ಆ ಮೇಲೆ ವೈದ್ಯರು ಬಂದು ಮದ್ದುಗಿದ್ದು ಚಿಕಿತ್ಸೆ ಮಾಡಿದರನ್ನಿ. ಕಣ್ಣೀರು ಸುರಿದುದರಿಂದ ಮೈತುಂಬಾ ಗುಳ್ಳೆಗಳೆದ್ದುವು ಅದನ್ನು ನೋಡಿ ಮೂಪಮ್ಮ ತುಂಬ ಹೆದರಿಕೊಂಡು, "ಮಾಣಿ ಸುರಕ್ಷಿತನಾದರೆ, ಪೂರ್ಣ ಆರೋಗ್ಯ ಪಡೆದರೆ ಕುರ್ಚಿಪ್ಪಳ್ಳದ ಉತ್ಸವಕ್ಕೆ ಇವನನ್ನು ಕರೆದುಕೊಂಡು ಬಂದು ಸೇವೆ ಮಾಡಿಸುತ್ತೇನೆ" ಎಂದು ಹರಕೆ ಹೇಳಿಕೊಂಡಳು.

ಕುರ್ಚಿಪ್ಪಳ್ಳವೆಂಬುದು ದೈವಭೂತಗಣಗಳ ಬೀಡು. ತಿಮ್ಮನಿಗೆ ಬಂದ ಈ ಗಂಡಾಂತರವು ತೀಕಣ್ಣನ್ನ ದೃಷ್ಟಿಯಿಂದಲೇ ಎಂದು ಅವರ ಸಿದ್ಧಾಂತ ಹಾಗೆ ದೃಷ್ಟಿ ಪ್ರಭಾವವುಳ್ಳವರಿಗೆಲ್ಲ ಮನ್ಮಥನನ್ನು ಭಸ್ಮಮಾಡಿದ ಶಿವನ ಹಣೆಗಣ್ಣಿನ ಕಿಡಿಶಕ್ತಿಯಿದೆಯೆಂದೂ, ಅದಕ್ಕಾಗಿ ಶಿವಗಣಗಳಾದ ಭೂತ ಪ್ರೇತಗಳ ಹೆಸರಿನಲ್ಲಿ ಹರಕೆ ಹೇಳಿಕೊಂಡರೆ ಅವುಗಳ ದಯದಿಂದ ಗುಣವಾಗಿ ಹೋಗುವುದೆಂದೂ ಅನುಭವದ ಮಾತು. ಕುನ್ನಂಬುವಾಯರ ಮಗುವಿಗೂ ಅಂತಹ ಹರಕೆ ಹೇಳಿಕೊಂಡ ಮೇಲೆಯೇ ಮುಗು ನೋಡುವಂತಾಯಿತಂತೆ.

ತಿಮ್ಮನಿಗೂ ಗುಣವಾಯಿತು. ಅವನು ಪೂರ್ಣ ಗುಣಮುಖನಾಗುವವರೆಗೆ, ಸುಮಾರು ಒಂದು ತಿಂಗಳವರೆಗೆ, ಅರಸುಗಳ ಅಡಿಗೆಗೆ ಬೇರೊಬ್ಬ ಪಟ್ಟರ್ ಬಂದಿದ್ದ. ತಿಮ್ಮ ಹುಶಾರಾದ ಮೇಲೆ ಅವನನ್ನು ಕಳುಹಿಸಿ ಕೊಡಲಾಯಿತು.

೧೫

ಆದರೆ ಕುರ್ಚಿಪ್ಪಳ್ಳವೆಂಬ ಭೂತಗಳ ನೆಲೆವೀಡು ಸಮೀಪದಲ್ಲಿರಲಿಲ್ಲ. ಅಲ್ಲಿಗೆ ಹೋಗುವ ದಾರಿಯೂ ಬಹಳ ಕಷ್ಟದ್ದು. ಅದು ಸಮುದ್ರದ ಒಳಭಾಗಕ್ಕೆ ಚಾಚಿಕೊಂಡಿರುವ ಭೂಶಿರಗ್ರಾಮ. ಅಲ್ಲಿಗೆ ಸಮುದ್ರ ಮಾರ್ಗವಾಗಿ ಹೋಗುವುದೇ ಸುಲಭವಾಗಿತ್ತು. ಆಗ ದೋಣಿಯಲ್ಲಿ ತಲೆ ತಿರುಗುವುದೂ, ವಾಂತಿಯಾಗುವುದೂ, ಮೂರ್ಛೆ ಬರುವುದೂ ಉಂಟು.

ಉತ್ಸವಕ್ಕೆ ಉಳಿದಿರುವುದು ಎರಡೇ ತಿಂಗಳು. ತಿಮ್ಮನಾದರೋ ತುಂಬ ಸೊರಗಿ ಹೋಗಿದ್ದಾನೆ. ಅಲ್ಲಿ ಬ್ರಾಹ್ಮಣರಾರೂ ಇಲ್ಲದುದರಿಂದ ತಿಮ್ಮನಿಗೆ ಊಟವೇ ಸಿಗಲಾರದು. ಇದನ್ನೆಲ್ಲ ಆಲೋಚನೆ ಮಾಡಿ ಮೂಪಮ್ಮ ಮುಂದಿನ ವರ್ಷದ ಉತ್ಸವಕ್ಕೆ ತಿಮ್ಮನನ್ನು ಕರೆದೊಯ್ಯುವುದೆಂದು ನಿಶ್ಚಯಿಸಿಕೊಂಡಳು. "ಈ ವರ್ಷದ ಉತ್ಸವಕ್ಕೆ" ಎಂದು ಸ್ಪಷ್ಟವಾಗಿ ಹೇಳಿಕೊಂಡಿರಲಿಲ್ಲವಷ್ಟೆ?

ಆದರೆ ಹಾಗೆ ತಡ ಮಾಡುವುದು ಸರಿಯಲ್ಲ, ಮನಸ್ಸಾಕ್ಷಿಗೆ ವಿರೋಧ, ಎಂಬುದಕ್ಕೆ ಕೂಡಲೇ ಒಂದು ಉದಾಹರಣೆಯಾಯಿತು. ಒಂದು ದಿನ ಬೆಳಗ್ಗೆ ಎದ್ದು ಎಂದಿನಂತೆಯೇ ತಿಮ್ಮ ಮಠದ ಮುಂದಿರುವ ಒಂದು ಮಾವಿನ ಮರದ ಬುಡದಲ್ಲಿ ಬಿದ್ದ ಹಲ್ಲೆಲೆಯನ್ನು ಹೆಕ್ಕಿ, ಅದರಿಂದ ಹಲ್ಲುಜ್ಜುತ್ತಾ ಇದ್ದ. ಹಾಗೆ ಹಲ್ಲುಜ್ಜಿ ಎಲೆಯ ನಡುವಿನ ನಾರಿನಿಂದ ನಾಲಗೆಯ ಅಗ್ರ ಕೆರೆಸಿ

ಕೊಂಡು ಕೆರೆಗಿಳಿದು ಬಾಯಿ ಮುಕ್ಕಳಿಸಿ ಮುಖ ತೊಳೆದುಕೊಳ್ಳುವುದು ಆವನ ಪದ್ಧತಿ.

ಹಾಗೆ ಅವನು ಹಲ್ಲುಜ್ಜುತ್ತಿದ್ದಾಗ ಬ್ರಹ್ಮಾಂಡ ಪಂಕಹ ಎರಡು ಕಾಲುಗಳು ತಿಮ್ಮನನ್ನು ಮೆಟ್ಟಿಕೊಂಡು ಹೋದವು. ತಿಮ್ಮ ಹೆದರಿ ಕಣ್ಣು ಬಿಡಿಸಿ ಬಾಯಿ ತೆರೆದು ತಲೆಯೆತ್ತಿ ನೋಡಿದಾಗ ರೋಮಮಯವಾದ ಕಾಲುಗಳೇ ಕಂಡುಬಂದವು. ದೇಹವು ಆಕಾಶದಲ್ಲೆಲ್ಲೋ ವ್ಯಾಪ್ತವಾದ ಹಾಗೆ ತೋರಿತು. ತಿಮ್ಮ ತೆರೆದ ಬಾಯಿಯಿಂದ ಹಾಗೇ ಮರಗಟ್ಟಿ ನಿಂತುಬಿಟ್ಟ. ನಡುಗಿ ಕುಳಿತು ಹಾಗೆಯೇ ಮೂರ್ಛೆಗೊಂಡ.

"ಮಾಣಿಕ್ಕ್ ಎಂದೋ ಆಯಿ!" (ಮಾಣಿಗೆ ಏನೋ ಆಯ್ತು) ಎಂದು ಕೂಗುತ್ತ ಮಠದ ಜಗಲಿಯಲ್ಲಿ ಕಸ ಗುಡಿಸುತ್ತಿದ್ದ ಕಣಾರ ಓಡಿಬಂದು ಅವನನ್ನು ಎತ್ತಿಕೊಂಡು ಹೋಗಿ ಜಗಲಿಯಲ್ಲಿ ಮಲಗಿಸಿದ. ಎಲ್ಲರೂ ಕೂಡಿದರು. ಸ್ವಲ್ಪ ಹೊತ್ತಿಗೆ ತಿಮ್ಮ ಸ್ವಸ್ಥವಾಗಿ ತಾನು ನೋಡಿದ್ದನ್ನು ಹೇಳಿದ.

ಈ ಮಾತು ದೊಡ್ಡವರಿಗೆಲ್ಲ ವಿಚಾರ ಹಿಡಿಸಿತು. ಬಲ್ಲಿಮೊಗಾರ ದೈವಜ್ಞನನ್ನು ಕರೆಯಿಸಿ, ಎಲ್ಲವನ್ನೂ ಹೇಳಿ ಅದೇನೆಂದು ಕೇಳಲಾಯಿತು.

"ವರ್ಣನೆ ಕೇಳುವಾಗ ಅದು ಗುಳಿಗ ದೈವವೆಂದು ಕಾಣುತ್ತೆ" ಎಂದು ಹೇಳಿ, ಬಲ್ಲಿಮೊಗಾರ ಕಳಬರೆದು, ಮಂತ್ರಪೂರ್ವಕ ಕ್ರಿಯೆ ಮಾಡಿ ಅಂಜನ ಹಾಕಿ ನೋಡಿ, "ಹೌದು ಅವನು ಗುಳಿಗ ದೈವ. ಈ ದಾರಿಯಿಂದ ಪಶ್ಚಿಮ ದಿಕ್ಕಿಗೆ ಹೋಗಿದ್ದಾನೆ. ಅವನು ಹಾಗೆಲ್ಲಾ ಕಾಣಿಸುವವನಲ್ಲ. ಯಾಕೋ ನಿಮ್ಮ ಎಂಬ್ರಾಂದ್ರಿ ಮಾಣಿಗೆ ಕಾಣಿಸಿದ್ದಾನೆ ಅವನ ಕೈಯಿಂದ ಒಂದು ಪೂಜೆ ಕೊಡಿಸಿ" ಎಂದನು.

ಆಗ ಮೂಪಮ್ಮ ತಿಮ್ಮನ ಬಗ್ಗೆ ತಾನು ಹೇಳಿಕೊಂಡ ಹರಕೆಯನ್ನು ತಿಳಿಸಿದಳು. ಆಗ ಬಲ್ಲಿಮೊಗಾರ, "ಆ! ಹಾಗೆ ಹೇಳಿ ಮತ್ತೆ. ಉತ್ಸವಕ್ಕೆ ಬರುತ್ತಿ ತಾನೇ ಎಂದು ಎಚ್ಚರಿಸಲಿಕ್ಕೇ ಮಾಣಿಗೆ ಕಾಣಿಸಿದ್ದಾನೆ. ಗುಳಿಗ ದೈವವೆಂದರೆ ಮಾನವರ ಮನಸ್ಸನ್ನರಿಯುವವನಾಯಿತಲ್ಲ!" ಎಂದ ಬಲ್ಲಿಮೊಗಾರ.

"ಎಲ್ಲಾ ಗುಳಿಗನ ಭಾರ. ಈ ಸಲದ ಉತ್ಸವಕ್ಕೇ ಮಾಣಿಯನ್ನು ಕರಕೊಂಡು ಬರುತ್ತೇವೆ. ಮುಂದಿನ ವರ್ಷವೆಂದು ಆಲೋಚಿಸಿದ್ದಕ್ಕೆ ಕ್ಷಮಿಸಿ ರಕ್ಷಿಸಪ್ಪಾ ಗುಳಿಗಾ!" ಎಂದು ಬೇಡಿಕೊಂಡಳು ಮೂಪಮ್ಮ.


ಕುರ್ಚಿಪ್ಪಳ್ಳದ ಉತ್ಸವದ ದಿನ ಸಮೀಪಿಸುವಾಗ ಉಣ್ಣಿಕೃಷ್ಣ ನಾಯರ್ ಎರಡು ಭಾರಿ ದೋಣಿಗಳ ಏರ್ಪಾಡು ಮಾಡಿಕೊಂಡು ಬಂದನು.

೧೬

ಮಧ್ಯಾಹ್ನದ ವೇಳೆ ಕುರ್ಚಿಪ್ಪಳ್ಳ ಸಮೀಪಿಸಿತು. ದೋಣಿ ದಡ ಸೇರುವಾಗ ಸುತ್ತ ಹಿಂದೆ ಮುಂದೆ ತೆರೆಗಳೊಂದಿಗೆ ಉರುಳಾಡಿ ಮಳಲಿನ ದಡಕ್ಕೆ ಮುಟ್ಟಿತು. ಬೆಂಬಡವರು ಕೆಳಗೆ ಹಾರಿ ದೋಣಿಗಳನ್ನೆಳೆದು ದಡಕ್ಕೆ ತಂದು ನಿಲ್ಲಿಸಿದರು. ಇಳಿಜಾರು ಹಲಗೆಯ ಮೂಲಕ ಎಲ್ಲರೂ ಕೆಳಗಿಳಿದುದಾಯಿತು.

ಕುರ್ಚಿಪ್ಪಳ್ಳ ದೇವಾಲಯಗಳ ಉತ್ಸವದ ಧ್ವನಿ ಮಂದವಾಗಿ ಅಲ್ಲಿಗೆ ಕೇಳಿಸುತ್ತಿತ್ತು. ಒಡಬಡಿಸುವ ಚಂಡೆಗಳೂ ಕೊಂಬುಕಹಳೆಗಳೂ ದೂರದೂರದವರನ್ನು ಆಕರ್ಷಿಸುತ್ತಿದ್ದುವು. ಬಹು ದೂರ ದೂರದ ಹಳ್ಳಿಹಳ್ಳಿಗಳಿಂದೆಲ್ಲ ಬಹು ಜನರು ಅಲ್ಲಿಗೆ ಬಂದಿದ್ದರು. ದೊಡ್ಡ ದೊಡ್ಡವರು ಬಂದಾಗ ಉಳಕೊಳ್ಳಲಿಕ್ಕಾಗಿ ಗುಡಿಗಳ ಪಕ್ಕದಲ್ಲಿ ಉದ್ದವಾದ ಮಾಳಿಗೆಯ ಕಟ್ಟಡವೊಂದಿತ್ತು. ಅದರಲ್ಲೇ ಅರಸುಗಳ ಮನೆಯ ಪರಿವಾರವಿಳಿಯಿತು.

ಅಲ್ಲಿ ತಿಮ್ಮನಿಗೆ ಬಂದ ಮುಖ್ಯ ಅಡಚಣೆಯೆಂದರೆ ಅವನಿಗೆ ಅನ್ನ ಸಿಗಲಿಲ್ಲ. ಅರಸುಗಳ ಮನೆಯ ನಾಯರ್ ಮಂದಿಗಾಗಿ ಶಾಕಾಹಾರದ ಅಡಿಗೆಯೇ ತಯಾರಾಗುವುದಾದರೂ ಅದನ್ನು ಬ್ರಾಹ್ಮಣ ತಿಮ್ಮ ಮುಟ್ಟಬಾರದು. ಅಲ್ಲಿಯೂ ಬ್ರಾಹ್ಮಣರ ಒಕ್ಕಲೆಯೇ ಇರಲಿಲ್ಲ.



ಹೆಲಿ-ಬಾಂಬ್!...
(ಹೆಲಿಕಾಪ್ಟರ್ ಬಾಂಬ್)

ಸುತ್ತಮುತ್ತ ಎಲ್ಲಿ ನೋಡಿದರೂ ಬಲಿ ಪ್ರಾಣಿಗಳೂ ರಕ್ತ ಮಾಂಸಗಳೂ ಕಾಣಿಸುತ್ತಿದ್ದುವು. ಆ ವಾತಾವರಣದ ವಾಸನೆಯನ್ನು ಸಹಿಸಿಕೊಳ್ಳುವುದೇ ತಿಮ್ಮನಿಗಾಗಲಿಲ್ಲ. ಇನ್ನು ಕೈಯಡಿಗೆಯಾದರೂ ಮಾಡಿಕೊಂಡು ಕುಳಿತು ಊಟ ಮಾಡಲು ತಕ್ಕ ಸ್ಥಳವಾದರೂ ಎಲ್ಲಿದೆ?

ಇದೇನೂ ಆಕಸ್ಮಿಕವಲ್ಲ. ಅಲ್ಲಿ ಬ್ರಾಹ್ಮಣರಿಗೆ ಊಟಕ್ಕೆ ಅವಕಾಶವಿಲ್ಲವೆಂದು ಮೊದಲೇ ಗೊತ್ತಿತ್ತು. ನಾಲ್ಕು ದಿನ ತನಗೆ ಊಟವೇ ಬೇಡವೆಂದೂ ಅವಲಕ್ಕಿ, ಬೊಂಡ [ಸೀಯಾಳ], ಬಾಳೇ ಹಣ್ಣುಗಳೇ ಸಾಕೆಂದೂ ಹೇಳಿಬಿಟ್ಟಿದ್ದವನು. ಬೊಂಡದೊಳಗಿನ ಬನ್ನಂಗಾಯಿ [ಎಳೇ ತಿರುಳು] ಗೆ ಅವಲಕ್ಕಿ ಬೆರೆಸಿ ಬಾಳೇ ಹಣ್ಣುಗಳೊಂದಿಗೆ ತಿನ್ನುವುದೆಂದರೆ ಅವನಿಗೆ ಬಹಳ ಇಷ್ಟ. ಹಾಗೆಯೇ ಎರಡು ದಿನಗಳನ್ನು ಕಳೆದುಬಿಟ್ಟ. ಭೂತಗಳ ಉತ್ಸವ ಬಹಳ ಕೋಲಾಹಲವಾಗಿ ನಡೆಯಿತು. ಹಳ್ಳಿಹಳ್ಳಿಗಳಿಂದ ಆಡು ಕೋಳಿಗಳ ಹರಕೆಯ ಬಲಿಗಳು ನಡೆಯುತ್ತಾ ಇದ್ದುವು. ಮೂಪಮ್ಮ ತಿಮ್ಮನ ಹೆಸರಿನಲ್ಲಿ ಕೋಳಿಯ ಬಲಿ ಅರ್ಪಿಸಿದಳು. ಗುಳಿಗನ ಗುಡಿಗೆ ತಿಮ್ಮ ಸಾಷ್ಟಾಂಗ ಅಡ್ಡಬಿದ್ದ.

ಅವನು ತನ್ನ ಊರಿನಲ್ಲಿ ನಡೆಯುವ ಇಂತಹುದೇ "ಕೋಲ" ಎಂಬ ಉತ್ಸವವನ್ನು ನೋಡಿದ್ದಾನೆ. ಅದೆಲ್ಲಿ ಇದೆಲ್ಲಿ? ಇಲ್ಲಿ ಅನೇಕ ದೈವಗಳ ಉತ್ಸವ ಪರ್ವವೇ ನಡೆಯುತ್ತಿತ್ತು. ಒಂದೊಂದು ದೈವಕ್ಕೆ ಒಂದೊಂದು ಹೆಸರು: ಚಂಡನ್, ಕುಟ್ಟಿಚ್ಚಾತನ್, ಕೊಳ್ಳಿಕ್ಕಣ್ಣನ್, ಚೂಟ್ಟೆ, ಚುದುಟ್ಟನ್, ಕುರ್ಕನ್ ವಿಳಚ್ಚನ್ ಇತ್ಯಾದಿ ಅನೇಕ ದೈವಗಳು. ಕೊಳ್ಳಿಕ್ಕಣ್ಣನ ವೇಷಧಾರಿಕೆಯೂ, ಕುಣಿತವೂ, ಓಟವೂ ರಭಸವೂ ಅತ್ಯದ್ಭುತ. ಚೂಟ್ಟೆ ಚುದುಟ್ಟನ್ ಸೊಂಟದ ಸುತ್ತಲೂ ಕೊಳ್ಳಿಗಳನ್ನು ಕಟ್ಟಿಕೊಂಡು, ಕೈಯಲ್ಲೆರಡು ದೊಂದಿಗಳನ್ನು ಹಿಡಿದುಕೊಂಡು ಚಂಡೆ-ಹಳೆಗಳ ಮೇಳಕ್ಕೆ ತಕ್ಕಂತೆ ಹಾರುತ್ತ, ಕುಣಿಯುತ್ತ, ಗುಡಿ ಪ್ರದಕ್ಷಿಣೆಯಾಗಿ ಸಾಗುವಾಗ ಕೊನೆ ಕೊನೆ ಅತಿರಭಸದ ಆವೇಶಕ್ಕೆ ಒಳಗಾಗಿ ಚಕ್ರಾಕಾರವಾಗಿ ತಿರುಗುತ್ತಿರಲು, ಬೆಂಕಿಯ ನಡುವಿನ ತಿರುಗುವವನ ಹಾಗೆ ಕಾಣಿಸುತ್ತಾನೆ. ಬಾಯಿಯಿಂದ ಭಿಗಿಲಿನಂತೆ ಕರ್ಕಶ ಶಬ್ದಗಳನ್ನು ಹೊರಡಿಸುತ್ತಾನೆ. ಮತ್ತೊಂದು ದೈವದ ವೇ... ಎರಡು ಎಳನೀರುಗಳನ್ನು ಎಡ ಕೈಗಳಲ್ಲಿ ಏರಿಸಿ ಏರಿಸಿ ಆಕಾಶಕ್ಕೆ ಸದೆಸೆದು ...ಯುತ್ತಾ ಓಡುವನು, ಕುಣಿಯುವನು, ಹಾ...ವನು. ತೂತು ಮಾಡಲ್ಪಟ್ಟ ಆ ಎಳನೀ... ಕೆಳಗೂ ಬೀಳದು, ಒಂದು ಚಿಕ್ಕೆಯೂ ಚೇ... ದ... ಅನಂತರ ಆ ಎರಡು ಎಳನೀರುಗಳನ್ನೂ ...ಗಳ ಕುಡಿದು ಖಾಲಿ ಬೊಂಡವನ್ನು ದೂರ ...ಯುತ್ತಾನೆ. ಇನ್ನೊಂದು ದೈವ ... ಕೋಳಿಯ ಕತ್ತನ್ನು ಕೈಯಿಂದಲೇ ಮುರಿದು ತಲೆಯನ್ನು ಬಿಸುಟು, ರಕ್ತ ಹೀರುತ್ತಾ ಒ... ಪ್ರದಕ್ಷಿಣೆ ಬರುತ್ತದೆ. ಇಷ್ಟು ಹೊತ್ತಿನ ತನ... ತಲೆಯಿಲ್ಲದ ಮುಂಡ ಕೆಕ್ಕ ಬಡಿಯುತ್ತಾ ...ತ್ತದೆ. ಆಶ್ಚರ್ಯ-ಅದ್ಭುತಗಳೆಂದರೆ ಯಾ...


ಹಬ್ಬಕ್ಕೆ ಯೋಗ್ಯವಾದ ಮಾದರಿಗಳು
ಬಾಟಾರವರು ಉತ್ತಮ ಮತ್ತು ಮೃದುವಾದ ಕಚ್ಚಾವಸ್ತುಗಳಿಂದ ಹಗುರವಾಗಿರುವಂತೆಯೇ ನಿರ್ಮಿಸಿದ ಈ ಷೂಗಳನ್ನು ಮೆಚ್ಚುವಿರಿ. ಕಾರಣ, ಆರಾಮವನ್ನೂ ಮತ್ತು ಮಿತ್ರರಿಂದ ಅನೇಕ ಅಭಿನಂದನೆಗಳನ್ನೂ ಪಡೆಯುವಿರಿ. ತ್ವರೆಮಾಡಿರಿ. ನಿಮ್ಮ ಮೆಚ್ಚಿನ ಬಾಟಾ ಸ್ಟೋರನ್ನು ಸಂದರ್ಶಿಸಿ ಇವುಗಳೊಡನೆ ಇನ್ನೂ ಹೆಚ್ಚು ಮಾದರಿಗಳನ್ನೂ ನೋಡಿರಿ.
ಸನ್‌ಸ್ಟೆಪ್ 47 12.95
ಓರಿಯಂಟಾ 75 11.95
ತಂಡ್ರಾ 13.50
ಓರಿಯಂಟಾ 77 11.95
Bata
ಅನೂ 14.50
ಸನ್‌ಸ್ಟೆಪ್ 14 15.95

ದೆವ್ವಗಳಿಗ್ಗೆ ಬೆಂಕಿ ಎಂದರೆ ಒಂದು ಲೆಕ್ಕವೇ ಅಲ್ಲ. ನೀರನ್ನು ಆಡುವ ಹಾಗೆ ಬೆಂಕಿಯೊಂದಿಗೆ ಆಡುತ್ತವೆ. ಆಗಾಗ ಸೂಟಿಯು ಧಗಧಗಿಸುವ ಉರಿಯನ್ನು ತಮ್ಮ ಮೈಗೆ ತಾಗಿಸಿಕೊಳ್ಳುತ್ತವೆ.

ನಾಲ್ಕನೇ ದಿನದ ರಾತ್ರಿಯಲ್ಲಿ ಅತ್ಯದ್ಭುತವಾದ ದೈವಗಳಾಟ ನಡೆಯಿತು. ನಾಲ್ಕು ದೆವ್ವಗಳು ಗುಡಿಯ ಹತ್ತಿರ ಮಾಡುವ ಮಾಟ, ಆಡುವ ಆಟಗಳನ್ನೆಲ್ಲ ಮುಗಿಸಿಕೊಂಡು, ಸ್ವಲ್ಪ ದೂರದಲ್ಲಿ ಮೈದಾನದಂತೆ ಮಾಡಲ್ಪಟ್ಟ ಸ್ಥಳಕ್ಕೆ ಓಡಿದುವು. ಹಾಗೆ ಓಡುವಾಗ ಅವುಗಳ ಕಾಲ್ಗಗ್ಗರಗಳ ಧ್ವನಿ ಬಹು ಭಯಂಕರವಾಯಿತು. ಅವುಗಳ ಹಿಂದೆಯೇ ಮೇಳವಾದ್ಯ, ಕೊಂಬು ಕಹಳೆಗಳೂ, ಪ್ರೇಕ್ಷಕರೂ ಓಡಿದರು.

ಅಲ್ಲಿ ದೊಡ್ಡ ಮಂಚವನ್ನೇ ಸೀಳಿ ಸಿಗಿದು ಕಟ್ಟಿಗೆ ಮಾಡಿ ಸುಟ್ಟು ನಿಗಿನಿಗಿ ಕೆಂಡದ ರಾಶಿಯನ್ನು ಒಟ್ಟು ಸೇರಿಸಿ ಒಂದು ಮೇಜಿಯ ಹಾಗೆ ಕಟ್ಟೆ ಮಾಡಿಡಲಾಗಿತ್ತು. ಯಾರಿಗೂ ಅದರ ಹತ್ತಿರ ಹೋಗಲು ಸಾಧ್ಯವಿಲ್ಲದಷ್ಟು ಬಿಸಿ.

ಅದರ ಹತ್ತಿರ ಓಡುತ್ತಾ ಬಂದ ನಾಲ್ಕು ದೈವಾವೇಶಿತ ವೇಷದ ಮನುಷ್ಯರು, ಕಾಲಿನ ಗಗ್ಗರಗಳ ದನಿಯೊಂದಿಗೆ ಸರ್ವಾಂಗ ಕಂಪಿಸುತ್ತಾ ಇರಲು, ಒಂದು ದೆವ್ವವು ಆ ಕೆಂಡದ ರಾಶಿಯ ಮೇಲೆ, ಕಾಲು ಮೇಲೆ ಕಾಲು ಹಾಕಿಕೊಂಡು ಮಹಾರಾಜನ ಹಾಗೆ ಕುಳಿತಿತು. ಎರಡು ದೆವ್ವಗಳು ಆತನ ದೇಹಕ್ಕೆ ಬೆಂಕಿಯ ಚಾಮರ ಬೀಸಿದುವು. ಅನಂತರ ಸೂಟಿ ನೃತ್ಯ, ಖಡ್ಗ ನೃತ್ಯ, ಕಲಶ ನೃತ್ಯಗಳು ಆ ಕೆಂಡದ ರಾಶಿಯ ಸುತ್ತಲೂ ನಡೆದುವು. ತರುವಾಯ ಮತ್ತೊಂದು ಹೊಸ ದೆವ್ವ ಜಗಳಕ್ಕೆ ಬಂದ ಹಾಗೆ ಓಡಿಬರಲು, ಭಯಂಕರ ಯುದ್ಧ ನಾಟ್ಯ ತೊಡಗಿತು. ಕೊಂಬು ಚಂಡೆ ಕಹಳೆ ವಾದ್ಯ ಧ್ವನಿಗಳು ತುಟ್ಟತುದಿಯನ್ನು ಮುಟ್ಟಿದುವು. ಪ್ರೇಕ್ಷಕರು ದೂರದೂರಕ್ಕೆ ಹಿಂಜರಿದು ರಂಗಸ್ಥಳವನ್ನು ವಿಸ್ತಾರಗೊಳಿಸಿದರು. ಆಗ ಮೊಳಗಿದ ಭೂತವಾದ್ಯಗಳ ಪ್ರಸಾರ ಶಕ್ತಿಯಿಂದ ಪ್ರೇಕ್ಷಕರಲ್ಲಿ ಕೆಲವರಿಗೆ ಕೂಡ ಪೂನಿಕ ಬಂದು ಆವೇಶಗೊಂಡು ಹೂಂಕರಿಸುತ್ತ ಥರಥರನೆ ನಡುಗಿಕೊಂಡು ಕೂಗಾಡತೊಡಗಿದರು. ಉತ್ತೇಜಿತ ಧ್ವನಿಯುಬ್ಬಿಸುವ ಮೇಳದವರಿಗೂ ಪೂನಿಕೆ ಬಂದಿತು.

ಸ್ವಲ್ಪ ಹೊತ್ತಿಗೆ ದೆವ್ವಗಳು ಕೆಂಡದ ರಾಶಿಯನ್ನು ಕೆದರಿ, ಬಾಚಿ, ಗೋರಿ, ಒಬ್ಬರ ಮೇಲೊಬ್ಬರು ಎಸೆದು ಚೆಲ್ಲಿ, ಅದಕ್ಕೆ ತಕ್ಕಂತೆಯೇ ವಾದ್ಯಗಳೂ ಚಂಡೆಗಳೂ ಎಗಡಾದಿಗಡಾ ಧ್ವನಿ ಮಾಡುತ್ತಿರಲು, ಸ್ವಲ್ಪ ಹೊತ್ತಿಗೆ ಅಷ್ಟೂ ಕೆಂಡವನ್ನು ಚೆಲ್ಲಾಚೆದರಾಗಿ ನೆಲಮಟ್ಟ ಮಾಡಿ ನಂದಿಸಿಗೊಳಿಸಿಬಿಟ್ಟುವು.

ಅನಂತರ ವಾದ್ಯ ಧ್ವನಿಗಳು ಶಾಂತವಾಗುತ್ತಾಗುತ್ತ ಬಂದ ಹಾಗೆ, ದೆವ್ವಗಳ ಆವೇಶವೂ ಇಳಿದು ಹೋಗಿ ವೇಷಧಾರಿಗಳು ಸಂಗಂಚಿಬಿಸ್ಸಿದರು. ಅವರ ಮೇಲೆ ನೀರು ಸುರಿದು ತಾಳೇಯೋಲೆಯ ಬೀಸಣಿಗೆಗಳಿಂದ ದೆವ್ವದ ಹೊಡೆಗಳನ್ನು ರೋಗದಿಂದ ಹಾಡುತ್ತಾ ಗಾಳಿ ಬೀಸುವರು.

೧೭

ಇದರೆಡೆಯಲ್ಲಿ ತಿಮ್ಮನಿಗೊಂದು ಅನ್ನಯೋಗವೂ ಬಂದಿತ್ತು. ಕುರ್ಚಿಪ್ಪಳ್ಳಿಕ್ಕೆ ಬಂದಮೇಲೆ ಮೂರು ದಿನಗಳ ವರೆಗೆ ಅನ್ನದ ಅಗುಳಿನ ಸಂಪರ್ಕವಿಲ್ಲದೆಯೇ ಕಳೆದಿತ್ತಷ್ಟೆ? ನಾಲ್ಕನೇ ದಿನ ಅವಲಕ್ಕಿ ಬಾಳೆಹಣ್ಣುಗಳು ಬೇಸರವೆನಿಸಿ, ಅವನು ಬೇಕೋ ಬೇಡವೋ ಎಂಬ ಹಾಗೆ ತಿನ್ನುವುದನ್ನು ನೋಡಿ ಮೂಪಮ್ಮ, "ಪಾಪ, ಮಾಣಿಗೆ ಈ ದಿನ ಅನ್ನದ ಅಗಳು ಬೀಳಲೇಬೇಕು. ಇಲ್ಲದಿದ್ದರೆ ಫಜೀತಿಟ್ಟುಕೊಂಡೀತು. ಅವಲಕ್ಕಿ ಬಾಳೇಹಣ್ಣುಗಳೆಲ್ಲ ಎಷ್ಟು ರುಚೀ ಅಂತ ಕಂಡರೂ ಅದು ಎರಡೇ ದಿನಾ ಅಂತ ನನಗ್ಗೊತ್ತು. ಯಾವ ಪಂಚಭಕ್ಷ್ಯವಾದರೂ ಅನ್ನಕ್ಕೆ ಸಮಾನವಾದೀತೆ? ಅದಕ್ಕೇ ನಾನು ನಿನ್ನೆಯೇ ಅಂಬಲಕ್ಕೆ ಸುದ್ದಿ ಕಳಿಸಿದ್ದೇನೆ. ಅಲ್ಲಿ ನೈವೇದ್ಯದ ಅನ್ನ ಇರುತ್ತೆ. ಅದನ್ನು ಅಲ್ಲೇ ಇಟ್ಟಿರುವುದಕ್ಕೆ ಹೇಳಿಕಳಿಸಿದ್ದೇನೆ. ಕುಟ್ಯಪ್ಪೆ ಜತೇಲಿ ಹೋಗಿ ಆ ನೈವೇದ್ಯದ ಅನ್ನ ಉಂಡು ಬನ್ನಿ ಮಾಣೀ" ಎಂದಳು ಮೂಪಮ್ಮ.

ತಿಮ್ಮನಿಗೂ ಅನ್ನ ಸಿಕ್ಕಿದರೆ ಒಳ್ಳೇಯದೆನಿಸಿತ್ತು. ಕುಟ್ಯಪ್ಪೆಯ ಜತೆಯಲ್ಲಿ ಎಲ್ಲೋ ಇರುವ ಅಂಬಲದ ಕಡೆಗೆ ಹೊರಟ. ಸುಮಾರು ಒಂದೂವರೆ ಮೈಲು ದೂರದಲ್ಲಿ ಸಮುದ್ರದ ಬದಿಯಲ್ಲೇ ಸಾಗಿ ಆ ಅಂಬಲಂ ಮುಟ್ಟಿದರು.

ವೀರಭದ್ರನ ಪುಟ್ಟ ಗುಡಿಯದು, ಬೆಳಿಗ್ಗೆ ಒಳ ಹಳ್ಳಿಯಿಂದ ಎಂಬ್ರಾಂದ್ರಿ ಬಂದು, ಅನ್ನ ಬೇಯಿಸಿ ದೇವರಿಗೆ ನೈವೇದ್ಯ ಮಾಡಿ, ಪೂಜೆ ಮುಗಿಸಿ, ನೈವೇದ್ಯದ ಉರುಳಿಯನ್ನು ಹಾಗೆಯೇ ಕೆಲಸದವಳಿಗೆ ಕೊಟ್ಟು ಹೋಗಿಬಿಡುತ್ತಾನೆ. ಕೆಲಸದವಳು ಅದನ್ನು ತನ್ನ ಮನೆಗೆ ಒಯ್ದು ಬಳಸಿಕೊಂಡು, ಉರುಳಿಯನ್ನು ತೊಳೆದು ದೇವಸ್ಥಾನದಲ್ಲಿ ತಂದಿಡುತ್ತಾಳೆ.

ತಿಮ್ಮ ಕುಟ್ಯಪ್ಪೆಗಳು ಅಲ್ಲಿಗೆ ಹೋದಾಗ, ಮೂಪಮ್ಮ ಮೊದಲೇ ಹೇಳಿಕಳುಹಿಸಿದ್ದಂತೆ ಕೆಲಸದವಳು ಆ ನೈವೇದ್ಯದುರುಳಿಯನ್ನು ಮುಟ್ಟಿಲ್ಲ. ಅವಳು ತಿಮ್ಮನಿಗೆ ಗುಡಿಯ ಒಂದು ಕೋಣೆಯನ್ನು ತೋರಿಸಿ, "ಅದರೊಳಗೆ ನೈವೇದ್ಯವಿದೆ, ಇಲ್ಲಿ ಹಗ್ಗವಿದೆ. ಬಿಂದಿಗೆಯಿದೆ" ಎಂದೆಲ್ಲ ಹೇಳಿದಳು.

ಅದು ತಣ್ಣಗಾದ ಇಂಗ್ಲನ್ನ. ಮೂಪಮ್ಮ ಹೇಳಿದಂತೆ ತಿಮ್ಮ ಎರಡು ಎಳೆ ಮೆಣಸಿನ ಕಾಯನ್ನೂ ಉಪ್ಪನ್ನೂ ತೆಗೆದುಕೊಂಡೇ ಬಂದಿದ್ದ. ಇಲ್ಲಿ ಅದಾವುದೂ ಇರಲಿಲ್ಲ. ಬರೀ ಅನ್ನ ಮಾತ್ರ. ಅನ್ನದ ಉರುಳಿಗೊಂದು ಬಾಳೆಯ ಎಲೆ ಮುಚ್ಚಲಾಯಿಗಿತ್ತು ಪುಣ್ಯಕ್ಕೆ.

ತಿಮ್ಮ ಬಿಂದಿಗೆಯಿಂದ ಬಾವಿಯ ನೀರು ತೆಗೆದು ಹತ್ತಿರ ಇಟ್ಟುಕೊಂಡ. ಅನ್ನವನ್ನು ಎಲೆಗೆ ಹಾಕಿಕೊಂಡು ಉಪ್ಪು ಮೆಣಸಿನಕಾಯಿಗಳನ್ನು ಸುರುಗಿ ಮಿಶ್ರಮಾಡಿ, ಮಜ್ಜಿಗೆ ಎಂದು ಭಾವಿಸಿಕೊಂಡು ನೀರನ್ನೇ ಅನ್ನಕ್ಕೆ ಹೊಯಿದು ಕಲಸಿ ಮುದ್ದೆ ಮಾಡಿ ಊಟ ಮಾಡುವಾಗ, ನಿಜಕ್ಕೂ ಅದು ಬಹಳ ರುಚಿಯೆನಿಸಿತು. ಆ ರುಚಿಯನ್ನು ಅವನೆಂದೂ ಮರೆಯಲಾರ. ಹಸಿವೆಯೇ ರುಚಿಯೆಂಬುದು ಎಷ್ಟು ಸತ್ಯ. ತಿಮ್ಮನಿಗೆ ತೋರಿದ್ದು, ಕಡಲ ತಡಿಯ ಆ ವೀರಭದ್ರ ಗುಡಿಯ ನೈವೇದ್ಯ ವೀರಭದ್ರದೇವರ ಮಹಿಮೆಯಿಂದಲೇ ಅಷ್ಟು ರುಚಿಯಾಗಿದೆಯೆಂದು! ಈ ದೇವರ ನೈವೇದ್ಯದ ಆರೋಗಣೆಯಿಂದ ಇನ್ನೆರಡು ದಿನ ಅನ್ನವಿಲ್ಲದಿದ್ದರೂ ಪರವಾಯಿಲ್ಲ ಎಂಬಷ್ಟು ತೃಪ್ತಿಯಾಗಿತ್ತು!

"ನಾಳೆಯೂ ನೈವೇದ್ಯ ಇಡಲು ಹೇಳ—ಬೇಕೆ?" ಎಂದು ಕೆಲಸದವಳು ಕೇಳಿದ್ದಕ್ಕೆ "ಬೇಡ ಬೇಡ. ಇವತ್ತಿಗೆ ಉತ್ಸವ ಮುಗಿಯುತ್ತದಲ್ಲ? ನಾಳೆ ಬೆಳಿಗ್ಗೆ ನಾವೆಲ್ಲ ಹೋಗುತ್ತೇವೆ" ಎಂದು ಉತ್ತರಕೊಟ್ಟಳು ಕುಟ್ಯಪ್ಪೆ.

ತಿಮ್ಮನ ಊಟವಾದ ಮೇಲೆ ಸ್ವಲ್ಪ ಹೊತ್ತು ಇಬ್ಬರೂ ವಿಶ್ರಾಂತಿಗೆ ಕುಳಿತರು. ಆಗ ಕುಟ್ಯಪ್ಪೆ ಕೆಲಸದವಳ ಹತ್ತಿರ ಒಂದೊಂದೇ ಮಾತು ಶುರುಮಾಡಿ ಅವಳ ಸಮಾಚಾರವನ್ನು ಹೊರಬರಿಸತೊಡಗಿದ. ಅವಳ ಮನೆ ಅಲ್ಲೇ ಸಮೀಪವಿತ್ತು. ಆ ಗುಡಿಯ ಅರ್ಚಕ ಎಂಬ್ರಾಂದ್ರಿ ಅವಳನ್ನು ಸಂಬಂಧ ಮಾಡಿಕೊಂಡಿದ್ದಾನೆ. ಅವಳಿಗೆ ನಾಲ್ಕು ಮಕ್ಕಳಾಗಿವೆ. ಈ ಮಕ್ಕಳ ತಂದೆಯಾದ ಅರ್ಚಕ ಎಂಬ್ರಾಂದ್ರಿ ಒಬ್ಬ ಋಷಿಯ ಹಾಗಿನ ಮಹಾ ಮಡಿವಂತ, ಆಚಾರನಿಷ್ಠ ಬ್ರಾಹ್ಮಣನೆಂದೂ, ಹಗಲಲ್ಲಿ ಅವಳ ಮನೆಗೆ ಕಾಲು ಸಹಾ ಇಡುವುದಿಲ್ಲವೆಂದೂ, ದೂರದ ಹಳ್ಳಿಯಲ್ಲಿರುವ ಅವನ ಮಠದಲ್ಲಿ ಸ್ವಯಂಪಾಕ ಮಾಡಿಕೊಂಡು, ಮಧ್ಯಾಹ್ನ ಒಂದೇ ಹೊತ್ತು ಊಟ ಮಾಡುವನೆಂದೂ, ಅವನ ಮಹಿಮೆಯನ್ನು ಬಣ್ಣಿಸಿದಳು. ಅವನು ರಾತ್ರಿಯಲ್ಲಿ ದೇವಸ್ಥಾನಕ್ಕೆ ಬಂದರೆ, ಪೂಜೆ ಮುಗಿಸಿ ದೇವರ ನೈವೇದ್ಯದ ಬಾಳೇಹಣ್ಣನ್ನು ತಿಂದು ಹಾಲು ಕುಡಿದು ಉಪವಾಸವಿರುತ್ತಾನಂತೆ.

"ಮತ್ತೆ ಅವರು ರಾತ್ರಿ ಮಲಗಲಿಕ್ಕೆ ಅಷ್ಟು ದೂರ ಹಳ್ಳಿಗೆ ಹೋಗುತ್ತಾರೇನು?" ಎಂದು ಕೇಳಿದ ತುಂಟ ಕುಂಟ್ಯಪ್ಪೆ.

"ನನ್ನ ಮನೆ ಇಲ್ಲೇ ಸಮೀಪ ತಾನೇ ಇದೆ? ಅಲ್ಲಿಗೇ ಬರ್ತಾರೇ. ಮತ್ತ್ಯಾರಿದ್ದಾರೆ ಅವರಿಗೆ ಹೆಂಡತಿಯಾ? ಮಕ್ಕಳಾ? ನಾವೇ ಆ ಪುಣ್ಯಾತ್ಮರ ಹೆಂಡ್ತೀ ಮಕ್ಳೂ ಎಲ್ಲಾ" ಎಂದಳು ನಗುತ್ತ.

ಆಗ ತಿಮ್ಮ ಒಂದು ಪ್ರಶ್ನೆ ಕೇಳಿದ: "ಅಷ್ಟು ಮಡಿವಂತ ಬ್ರಾಹ್ಮಣರು ನಿನ್ನ ಸಂಬಂಧ ಮಾಡಿಕೊಂಡರೆ ಮೈಲಿಗೆ ಆಗುತ್ತೋ ಇಲ್ಲವೋ? ನಿಮ್ಮ ಮನೆಗೆ ಬಂದರೆ ನಿಮ್ಮನೆಲ್ಲ ಮುಟ್ಟೋದಿಲ್ಲವೇ ಅವರು?"

ಅವಳು ಮುಖ ಸೊಟ್ಟ ಮಾಡಿ ನಗುತ್ತ, "ಒಳ್ಳೇ ಪ್ರಶ್ನೆ ಕೇಳ್ತಾರಲ್ಲಾ ಈ ಕುಟ್ಟಿಸ್ವಾಮಿ? ನೀವು ಈ ಊರಿನವರು ಅಲ್ಲಾ ಅಂತ ಕಾಣುತ್ತೆ.

ಬಹಳ ದಿಡ್ಡಿ[ಮೂರ್ಖ]ಯಾಗಿದ್ದೀರಿ. ಚಿಕ್ಕವರು ನನಗೇನು ಗೊತ್ತಿದೆ? ನೀವು ಎಂಬ್ರಾಂದ್ರಿಯಾ, ಪಟ್ಟರ್ರಾ?'' ಎಂದು ಕೇಳಿದಳು.

''ಅಸ್ಸಲು ಎಂಬ್ರಾಂದ್ರಿ ಬ್ರಾಹ್ಮಣರಿವರು'' ಎಂದ ಕುಟ್ಟಪ್ಪ

''ಹಾಗೋ? ಇನ್ನೊಂದು ನಾಲ್ಕೈದು ವರ್ಷ ಹೋದರೆ ಗೊತ್ತಾಗುತ್ತೆ. ಎಲ್ಲಾದರೊಂದು ಅಂಬಲದಲ್ಲಿ ಶಾಂತಿ ಸಿಕ್ಕೀತು ಹಾಗೆಯೇ ಯಾರಾದರೂ ನಾಯರ್ಚಿಯೂ ಸಿಕ್ಕಿಯಾಳು ಸಂಬಂಧಕ್ಕೆ. ಎಂಬ್ರಾಂದ್ರಿ ಬ್ರಾಹ್ಮಣರೆಂದರೆ ಬೆಂಕಿಯ ಹಾಗೆ! ಏನೆಂದುಕೊಂಡಿರೋ! ನಿಮ್ಮ ಮೈಮೆ ನಿಮಗೇ ಗೊತ್ತಿಲ್ಲ. ನಂಬೂದರಿಯನ್ನು ಬಿಟ್ಟರೆ ಎಂಬ್ರಾಂದ್ರಿ ತಾನೇ ಶ್ರೇಷ್ಠರು? ಆಗೆಲ್ಲಾ ನಿಮಗೇ ಗೊತ್ತಾಗುತ್ತೆ ಕುಟ್ಟಿ ಎಂಬ್ರಾಂದ್ರಿ ಸ್ವಾಮೀ! ನಿಮಗಿನ್ನೂ ಗಡ್ಡ ಬೆಳೀಲಿಕ್ಕೆ ಶುರುವಾಗಿಲ್ಲ. ಆಗಲೇ ಪ್ರಶ್ನೆ ಮಾಡಿಬಿಟ್ರಾ?'' ಎಂದು ನಕ್ಕಳು.

ಕುಟ್ಟಪ್ಪ ಜೋರಾಗಿ ನಕ್ಕ.

ತರುವಾಯ ಹುಡುಗರಿಬ್ಬರೂ ಹೊರಟರು. ಆಗ ಕುಟ್ಟಪ್ಪ ತಿಮ್ಮನನ್ನು ನೋಡಿ, ''ಅವಳು ಹೇಳಿದ್ದು ನಿಜವೇ ಮಾಣೀ. ನೀವಿನ್ನು ವೆಪ್ಪು (ಅಡಿಗೆ) ಮಾಣಿಯಲ್ಲ. ಎಂಬ್ರಾಂದ್ರಿಗಳ್. ಅಂಬಲತ್ತ್ ತಿಮ್ಮನೆಂಬ್ರಾಂದ್ರಿಗಳ್!'' ಎಂದ.

''ಅಯ್ಯಯ್ಯೊ! ದೇವಸ್ಥಾನದ ಪೂಜೆ ಮಾಡುವ ಕ್ರಮಗಳೊಂದೂ ನನಗೆ ಗೊತ್ತಿಲ್ಲಪ್ಪ! ಕಡೆಗೆ ಅವಮಾನವಾಗಿ ಹೋದೀತು. ಮುಖ್ಯವಾಗಿ ಅದಕ್ಕೆಲ್ಲ ಎಂತೆಂತಹ ಮಂತ್ರ ಕಲೀಬೇಕೋ ಏನೋ! ಆ ಮಂತ್ರ ಹೇಳುವಾಗ ಮಾಡಬೇಕಾದ ಕ್ರಮ ಏನೂ ಅಂತಲೂ ತಿಳೀಬೇಕಲ್ಲ. ಅದೆಲ್ಲಾ ನನಗೆ ಹ್ಯಾಗೆ ಗೊತ್ತಾಗುತ್ತೆ?'' ಎಂದ ತಿಮ್ಮ.

''ಅದಕ್ಕೇನು ನಾಡದು ಜಾಂಬಳೇ ಅರಮನೆಯಿಂದ ಅರಮನೆಯ ಅಡಿಗಿಯವರಾದ ಗುಂಡೂಭಟ್ರು ಬರುತ್ತಾರೆ. ಮತ್ತೆ ಅಡಿಗೇ ಮಾಡುವ ಕೆಲಸ ನಿಮಗಿಲ್ಲ. ನಮ್ಮ ಅಂಬಲದಲ್ಲಿ ನಾಲ್ಕು ದಿನ ಇದ್ದು ಬಿಟ್ಟರೆ ಶಾಂತಿಗೆ ಬೇಕಾದ ಮಂತ್ರ ತಂತ್ರ ಕೈಕಾಟ ಮೈಕಾಟ ಎಲ್ಲಾ ಬಂದುಬಿಡುತ್ತೆ. ಶಾಂತಿ ಕೆಲಸವೂ ಸಿಕ್ಕಿಬಿಡುತ್ತೆ. ಆ ಮೇಲೆ ನಿಮಗೆ ಸುಖವಾಗಿ ಇದ್ದು ಬಿಡಬಹುದು. ಸುಮ್ಮನೆ ಒಲೆ ಊದುವ ಈ ಅಡಿಗೇ ಕೆಲಸ ಯಾಕೆ? ನಾನು ಅಮ್ಮೇ (ತಾಯಿ) ಹತ್ರ ಹೇಳಿ ಆ ಏರ್ಪಾಡು ಮಾಡಿಸುತ್ತೇನೆ" ಎಂದ ಕುಟ್ಟಪ್ಪ.

"ಅಣ್ಣಯ್ಯನ ಹತ್ತರ ಕೇಳಬೇಡವೆ?"

"ಮತ್ತೆ ಕೇಳಿದರಾಯಿತಲ್ಲ? ಈಗ ನಾಲ್ಕು ದಿನ ಅಂಬಲಂದಲ್ಲಿ ಇದ್ದು ಬರಲಿಕ್ಕೆ ಭಾಗವತರನ್ನೇನು ಕೇಳುವುದು?" [ತಿಮ್ಮನ ಅಣ್ಣ ಶ್ರೀಮದ್ರಾಮಾಯಣನನ್ನು ಅಲ್ಲಿನವರೆಲ್ಲ ಭಾಗವತರೆನ್ನುವುದೆಂದು ನೆನಪಿದೆ ತಾನೆ?]

ಆದರೆ ತುಂಟ ಕುಟ್ಟಪ್ಪ ಮೂಪಮ್ಮಯೊಡನೆ ಹೇಳಿದ ರೀತಿಯೇ ಬೇರೆ.

"ಅಮ್ಮೇ. (ಅಮ್ಮಾ) ಆ ಅಂಬಲಂದ ಎಂಬ್ರಾಂದ್ರಿ ಸಂಬಂಧದ ಹೆಂಡ್ತೀನ ನೋಡಿದ ಮೇಲೆ ನಮ್ಮ ಮಾಣಿ ಶಾಂತಿ ಮಾಡಿ ತಾನೂ ಅವರ ಹಾಗೇ ನೆಮ್ಮದಿಯಾಗಿರಬೇಕೂ ಅಂತ ಹೇಳುತ್ತಾರೆ. ನಾಲ್ಕು ದಿನ ಅಂಬಲಂದಲ್ಲಿ ಇದ್ದು ಶಾಂತಿ ಮಾಡುವ ಕ್ರಮಗಳನು ಎಲ್ಲಾ ಕಲೀಬೇಕಂತ ಇದ್ದಾರೆ. ನಮಗೆ ಹ್ಯಾಗೂ ಇನ್ನು ನಮ್ಮ ಗುಂಡೂಭಟ್ರೇ ಬರುತ್ತಾರಲ್ಲವೇನೇ?"

ಮೂಪಮ್ಮ, ತನ್ನ ಕೆಂಬಲ್ಲುಗಳ ಕಿಡಿಕಿಯ ಬಾಯಿಯನ್ನಗಲಿಸಿಕೊಂಡು ನಗುತ್ತ, "ಓಹೋ! ಮಾಣಿಗೆ ಈಗಲೇ ದೈವಗಳ ಅನುಗ್ರಹವಾದ ಹಾಗಿದೆ. ಈಗಲೇ ಶಾಂತಿಗೆ ಸೇರಿ, ನಾಯರ್ಚಿಯ ಸಂಬಂಧಂ ಮಾಡಿಕೊಂಡು ಬಿಡಲು ಸಿದ್ಧರಾದರಲ್ಲ!" ಎಂದು ಎಲ್ಲರ ಮುಖ ನೋಡಿ ನಕ್ಕಳು

"ಮಾಣಿಗೆ ಸಂಬಂಧವೆ? ಎಲ್ಲಿ? ಯಾರವಳು? ಹೇಗಿದ್ದಾಳೆ ಮಾಣೀ? ನಿಮಗಿಂತ ಉದ್ದದವಳೋ? ಗಿಡ್ಡನವಳೋ? ನಮ್ಮ ಚೀರಿದೇಯಾಮಗಳ ಹಾಗಿದ್ದಾಳೋ?" ಎಂದು ಕುಞ್ಞೀಮೆಗಳು ಒಬ್ಬೊಬ್ಬರೂ ಒಂದೊಂದು ಪ್ರಶ್ನೆ ಕೇಳಿದರು.

ಕುಟ್ಟಪ್ಪ ಬಿದ್ದು ಬಿದ್ದು ನಗಹತ್ತಿದ.

"ಕುಟ್ಟಪ್ಪ ಏನೇನೋ ಸುಳ್ಳು ಹೇಳ್ತಿದಾನೇ. ನಾನು ಹಾಗೆಲ್ಲಾ ಹೇಳ್ಲೇ ಇಲ್ಲಾ" ಎಂದು ತಿಮ್ಮ ಕೋಪದಿಂದ ಕೂಡಿದ ಮುಗುಳ್ನಗೆ ನಕ್ಕ.

೧೮

ಆದರೆ ಕುಟ್ಟಪ್ಪ ಎತ್ತಿದ ಮಾತು ಮಾತ್ರ ಹುಸಿ ಹೋಗಲಿಲ್ಲ. ಶಾಂತಿ ಮಾಡುವ ಚಪ್ಪಡಿ ವಿದ್ಯೆಗಳನ್ನು ತಿಮ್ಮನೆಂಬ್ರಾಂದ್ರಿ ತಿಳಿದಿರುವುದು ಅಗತ್ಯವೆಂಬುದನ್ನು ಎಲ್ಲರೂ ಒಪ್ಪಿಕೊಂಡರು. ತಿಮ್ಮ ಹೇಗಾದರೂ ಮುಂದೆ ಒಳ್ಳೆಯ ಜೀವನ ನಡೆಸಬೇಕೆಂಬುದು ಎಲ್ಲರ ಇಚ್ಛೆಯಾಗಿತ್ತು. ಮಲೆಯಾಳದ ದೇವಾಲಯಗಳಲ್ಲಿ ಶಾಂತಿ ಮಾಡುವವರಿಗೆ ದೇವಾಲಯದಿಂದ ಬತ್ತ ಸಿಕ್ಕುತ್ತದೆ. ಅಲ್ಲದೆ ದೇವಸ್ಥಾನಕ್ಕೆ ಬರುವ ಹುಂಡಿಗಳೂ, ಹಣ್ಣುಕಾಯಿ, ಅಕ್ಕಿದಕ್ಷಿಣೆಗಳೂ ಎಲ್ಲ ಕೂಡಿದರೆ ನಿಶ್ಚಿಂತೆಯಾಗಿ ಒಂದು ಕುಟುಂಬವನ್ನೇ ಪೋಷಿಸಿಕೊಂಡಿರಬಹುದು. ಗೌರವವೂ ಇರುತ್ತೆ. ಅದಕ್ಕೆ ತಕ್ಕ ಹಾಗೆ ಬೆರಳಿಗೆ ಚಿನ್ನದುಂಗುರ. ಉಡಿದಾರಗಳನೂ, ಮಾಡಿಸಿಕೊಂಡರೆ ಇನ್ನೂ ಗೌರವ ಹೆಚ್ಚುತ್ತೆ. ಒಳ್ಳೆಯ ನಾಯರ್ ಜಾತಿಯ ಚೆಲುವೆಯೇ ಅಂತಹ ಎಂಬ್ರಾಂದ್ರಿಯ ಸಂಬಂಧವನ್ನಾಶಿಸಿ ಬರಬಲ್ಲಳು. ತಿಮ್ಮನ ತಂದೆಯೂ ಹಿಂದೆ ಮಲೆಯಾಳದಲ್ಲಿ 'ಶಾಂತಿ' ಮಾಡಿಕೊಂಡಿದ್ದಾಗ ಸಂಬಂಧದ ಹೆಂಡತಿಯೂ ಮಕ್ಕಳೂ ಎಲ್ಲ ಇದ್ದರಂತೆ

ಅರಸುಗಳ ಅಡಿಗೆಗೆ ಅವರ ಸ್ವಂತ ಗುಂಡೂಭಟ್ರೇ ಬರುವಂತಾದ ಮೇಲೆ, ತಿಮ್ಮ 'ಶಾಂತಿ'ಯಂತಹ ಎಂಬ್ರಾಂದ್ರಿ ಬ್ರಾಹ್ಮಣನಿಗೆ ತಕ್ಕ ಕೆಲಸದಲ್ಲೇ ಮೇಲೆ ಬರುವುದಾದರೆ ಎಲ್ಲರಿಗೂ ಒಳ್ಳೆಯದೆನಿಸಿತು. ಅಡಿಗೆ ಮಾಡುವುದು ಸಾಮಾನ್ಯ ಬ್ರಾಹ್ಮಣರೆನಿಸಿದ ಪಟ್ಟನ್ಮಾರ್‌ರಿಗೇ ಹೇಳಿದ್ದು.

ತಿಮ್ಮನಂತಹ ಸದ್‌ಬ್ರಾಹ್ಮಣನನ್ನು ತಮ್ಮ ಸ್ವಾರ್ಥಕ್ಕಾಗಿ, ಅಬ್ರಾಹ್ಮಣರೆನಿಸಿದ ತಾವು ಅಡಿಗೆ ಮಾಡಿಸಿಕೊಂಡಿರುವುದು ಒಂದು ಬಗೆಯ ಪಾಪವೇ ಸರಿ. ಅವನ ಅಣ್ಣನಿಗೂ ಅದೇ ಅಭಿಪ್ರಾಯವಿತ್ತೆಂದು ಮೂಪಮ್ಮಗೆ ನೆನಪಾಯಿತು. "ಸಂದರ್ಭ ಬಂದಾಗ ಎಲ್ಲಾದರೂ ಶಾಂತಿಗೆ ಹಾಕಬಹುದು ಅದುವರೆಗೆ ಅಡಿಗೆಯನ್ನಾದರೂ ಕಲಿಯಲಿ" ಎಂದಿದ್ದ ತಿಮ್ಮನ ಅಣ್ಣ.

"ಯಾಕೆ ಅವರನ್ನು ನಿಮ್ಮ ಹಾಗೇ ಸಂಗೀತ ಹೇಳಿಕೊಟ್ಟು ಭಾಗವತರನ್ನಾಗಿ ತರಬೇತು ಮಾಡಿಸಬಾರದೆ?" ಎಂದು ಮೂಪಮ್ಮ ಕೇಳಿದ್ದಕ್ಕೆ "ಸಂಗೀತದಲ್ಲಿ ಪಾಂಡಿತ್ಯ ಬರಬೇಕಾದರೆ ಹುಟ್ಟುವಾಸನೆ ಇರಬೇಕು. ಅದೇನೂ ಅವನಿಗಿಲ್ಲ. ಸ್ವರವೂ ಚೆನ್ನಾಗಿಲ್ಲ. ಇಲ್ಲದಿದ್ದರೆ ಕಲಿಸುತ್ತಿದ್ದೆನಲ್ಲ?" ಎಂದಿದ್ದ ಶ್ರೀಮದ್ರಾಮಣ್ಣ.

ಆದರೆ ಆ ಭಾಗವತ ಶಿಖಾಮಣಿಗಳ ಒಳಗುಟ್ಟು ಮೂಪಮ್ಮಗೆ ಗೊತ್ತಿತ್ತು. ತಿಮ್ಮನಿಗೆ ಕಲಿಸಿದರೆ ಸಂಬಳ ಕೊಡುವುದಾರು? ಸಂಬಳವಿಲ್ಲದೆ ಸ್ವಂತ ಮಗನಿಗಾದರೂ ಸಂಗೀತ ಕಲಿಸುವವರಲ್ಲ ಶ್ರೀಮದ್ರಾಮಾಯಣಂ ಭಾಗವತರ್. ಅದು ಮಾತ್ರವಲ್ಲದೆ ತಿಮ್ಮನ ಹೊಟ್ಟೆಗೂ ಬಟ್ಟೆಗೂ ಯಾರು ಒದಗಿಸುತ್ತಾರೆ?

ಹೀಗೆ ಮೂಪಮ್ಮಯೂ ಅರಸುಗಳೂ ತಿಮ್ಮನನ್ನು ಶಾಂತಿ ಕಲಿಯಲು ಅಂಬಲಕ್ಕೆ ಕಳುಹಿಸುವುದೇ ಒಳ್ಳೆಯದೆಂದು ತೀರ್ಮಾನಿಸಿಕೊಂಡರು. ಆ ಸಂದರ್ಭವೂ ಬಂದಿತು. ಅರಸುಗಳ ಮನೆಗೆ ಜಾಂಬಳೆಯ ಗುಂಡೂಭಟ್ಟರು ಬಂದೆ ಬಂದರು.

ಗುಂಡೂಭಟ್ಟರು ಹೆಸರಿಗೆ ತಕ್ಕಂತೆಯೇ ಗುಂಡುಗುಂಡಾಗಿದ್ದರು. ಬಹಳ ಬಲಶಾಲಿ. ಎಷ್ಟು ಮಂದಿಗೆ ಬೇಕಾದರೂ ತಾವೊಬ್ಬರೇ ಅನ್ನದ ಕೊಪ್ಪರಿಗೆಯನ್ನೆತ್ತಿ ಕೆಳಗಿಳಿಸಿ ಬಸಿದು ಹಾಕಬಲ್ಲರು. ಹೊಸ ಹೊಸ ರೀತಿಯ ಪಕ್ವಾನ್ನಗಳನ್ನು ಮಾಡುವುದರಲ್ಲಿ ಸಿದ್ಧಹಸ್ತರು. ಅವರಿಗೆ ಒಳ್ಳೆಯದಾಗಿ ಕನ್ನಡವೂ ಬರುತ್ತಿತ್ತು. ಬರುವುದೇನು ಅವರ ಸ್ವಂತ ಭಾಷೆಯೇ ಕನ್ನಡ. ಮಾತಾಡುವಾಗ ಅಭ್ಯಾಸಬಲದಿಂದ ಮಲೆಯಾಳವು ಮಿಶ್ರವಾಗುತ್ತಿತ್ತು. ಆದರೂ ತಿಮ್ಮನಿಗೆ ಅವರ ರೀತಿನೀತಿ ಮಾತುಗಳೆಲ್ಲ ತುಂಬ ಹಿಡಿಸಿದುವು

ಗುಂಡೂಭಟ್ಟರು ಅರಸುಗಳಿಗೆ ಮಾತ್ರವೇ ಅಡಿಗೆ ಮಾಡುವುದಲ್ಲ, ಎಲ್ಲರಿಗೂ ಲೀಲಾಜಾಲವಾಗಿ ಮಾಡಿಬಿಡುತ್ತಿದ್ದರು. "ಇವತ್ತು ಅದು ಮಾಡಿ ಗುಂಡೂಭಟ್ಟರೆ. ಇದು ಮಾಡಿ ಗುಂಡೂಭಟ್ಟರೆ –" ಎಂದು ಕುಞ್ಞೀಮೆಗಳು ಅವರಿಂದ ಹೊಸ ಹೊಸ ಪಾಕಪದಾರ್ಥಗಳನ್ನು ಮಾಡಿಸುತ್ತಿದ್ದರು

ಗುಂಡೂಭಟ್ಟರು ವರ್ಷಕ್ಕೆ ಒಂದು ಸಾರಿ, ಜಾಂಬಳೆಯಲ್ಲಿ ಪ್ರಸಿದ್ಧವಾದ ಗೋಳೂರು ಗಣಪತಿಯ ಗುಳಿಯಪ್ಪಗಳ ಪ್ರಸಾದವನ್ನು ಅರಸುಗಳಿಗಾಗಿ ತೆಗೆದುಕೊಂಡು ಬರುತ್ತಿದ್ದರು. ಬಂದರೆ ಮೂರು ನಾಲ್ಕು ದಿನಗಳಲ್ಲಿ ಹೊರಟು

ಹೋಗುವುದು ವಾಡಿಕೆ. ಆದರೆನೆ ಈ ಸಾರಿ ಇಲ್ಲಿಯೇ ಉಳಿದುಕೊಳ್ಳುವ ತೀರ್ಮಾನ ದೊಂದಿಗೇ ಬಂದಿದ್ದರು. ಅದಕ್ಕೆ ಅವರು ಹೇಳಿದ ಕಾರಣ ಹೀಗಿತ್ತು.

"ಅರಸುಗಳೇ ಅಲ್ಲಿಯ ಆಡಳಿತವನ್ನು ಪೂರಾ ಬಿಟ್ಟು ಕೊಟ್ಟು ಇಲ್ಲಿಗೆ ಬಂದ ಮೇಲೆ ಅಲ್ಲಿ ಯಾರಿಗೆ ಬೇಕಾಗಿದೆ ನಮ್ಮ ಸತ್ಯ ಸೇವೆಗಳು? ನಮ್ಮ ಮೇಲೆ ನೀವುಗಳು ತೋರಿಸುತ್ತಿದ್ದ ವಾತ್ಸಲ್ಯವನ್ನು ಈಗ ಯಾರೂ ತೋರಿಸುವವರಿಲ್ಲ. ನಿಮ್ಮ ಬಂಧುಗಳು ಮೊದಲಿನ ವೈಭವ ನಡೆಸುವುದೂ ಇಲ್ಲ. ಎಲ್ಲಾ ಸ್ವಲ್ಪದರಲ್ಲೇ ಕಣ್ಣು ಮುಚ್ಚುವವರು. ಅದಕ್ಕೇ ಇನ್ನು ಮೇಲೆ ಹಿರಿಯ ಅರಸುಗಳ ಸನ್ನಿಧಾನದಲ್ಲೇ ಕಾಲ ಕಳೆಯುವಾ ಅಂತ ಮಾಡಿಬಿಟ್ಟೆ"

ಅನೇಕ ವರ್ಷಗಳ ಹಿಂದೆ ಅರಸುಗಳೂ ಮೂಪನ್ಮೆಯೂ ಕುನ್ನೀಮೆಗಳೂ ಜಾಂಬಳೆಯಲ್ಲೇ ಇದ್ದವರು. ಕುಟ್ಟಪ್ಪೆ ಹುಟ್ಟಿದ್ದು ಅಲ್ಲಿಯೇ. ಅದಗೀ ಶಾಲೆಯ ಮುಖ್ಯಸ್ಥರಾದ ಗುಂಡೂಭಟ್ಟರ ಹತ್ತಿರ ಕುಟ್ಟಪ್ಪೆ ಆಡಿಕೊಂಡಿದ್ದವನು. ಇತರ ಕುನ್ನೀಮೆಗಳೂ ಅಷ್ಟೇ. ಎಲ್ಲರಿಗೂ ಗುಂಡೂ ಭಟ್ಟರ ಮೇಲೆ ತುಂಬ ಸಲಿಗೆ. ಆ ಸಲಿಗೆಯ ಮೇಲೆ ಈಗ ತುಸು ತುಂಟನೂ ಆದ ಕುಟ್ಟಪ್ಪೆ ಗುಂಡೂಭಟ್ಟರನ್ನು ಕುರಿತು,

"ನಿಮ್ಮ ಹೆಂಡತಿ ತೀರಿ ಹೋದರಂತಲ್ಲಾ ಗುಂಡೂಭಟ್ಟರೆ?" ಎಂದು ಕೇಳಿದ.

ಆದು ಗುಂಡೂಭಟ್ಟರು ಪ್ರಸಾದದೊಂದಿಗೆ ಬಂದ ಕೂಡಲೇ ಮೂಪನ್ಮೆಯೊಂದಿಗೆ ಹೇಳಿದ ಸಮಾಚಾರವನ್ನು ಕುಟ್ಟಪ್ಪೆ ಕೇಳಿಕೊಂಡಿದ್ದ ಸಂಗತಿ.

"ಏನು ಮಾಡೋದು? ಆಯುಷ್ಯ ತೀರಿತ್ತು ಅವಳಿಗೆ" ಎಂದರು ಗುಂಡೂ ಭಟ್ಟರು.

"ಗುಂಡೂಭಟ್ರೇ; ಹೆಂಡತಿ ಹೇಗಿದ್ದರೇನಂತೆ? ಧರ್ಮಕ್ಕೊಬ್ಬಳು ಧರ್ಮಪತ್ನಿ, ಸಂಬಂಧಂ ಕೂಡಾ ಮಾಡಿಕೊಂಡಿದ್ದೀರಲ್ಲವೇ ಭಟ್ರೆ?" ಕುಟ್ಟಪ್ಪೆ ಕೇಳಿದ

"ಅಡಅಡ! ಇಷ್ಟು ಸಣ್ಣ ಮುಂದಿರಿಕೊಟ್ಟಿಗೇರುಬೀಜ! ನೀನು ಎಂತೆಂಥಾ ಪ್ರಶ್ನೆ ಕೇಳ್ಲಿಕ್ಕೆ ಶುರು ಮಾಡಿಬಿಟ್ಟೆಲ್ಲ!"

"ಯಾಕೆ ತಪ್ಪು ಪ್ರಶ್ನೆ ಕೇಳಿದೆ ನೀನು?"

"ಛೀ ಛೀ! ಅದೇನಿಲ್ಲಪ್ಪ ನಮ್ಮತ್ಲಾಗಿ ಸಂಬಂಧಂಗಿಂಬಂಧಂ ಅಂತ ಮಾತಾಡ್ಲೇ ಕೂಡದು ಹುಗಿದು ಹಾಕಿಯಾರು ಹುಗಿದು"

"ಓಹೋ! ಅದಕ್ಕೇ ಅಂತ ಕಾಣುತ್ತೆ ಕನ್ನಡ ಎಂಬ್ರಾಂದ್ರಿಗಳು ಈ ಕಡೆಗೆ ಬಂದು ಸಂಬಂಧಂ ಮಾಡಿಕೊಳ್ಳೋದೂ ಅಂತ ಕಾಣುತ್ತೆ. ಅಲ್ಲ ಗುಂಡೂಭಟ್ರೆ, ಹಾಗಾದರೆ ಅಲ್ಲಿ ಬೇರೆ ಸಂಬಂಧಂ ಗಿಂಬಂಧಂ ಎಂಬ ಮಾತೇ ಇಲ್ಲವೆ?"

"ಇಲ್ಲದೆ ಏನು? ಅದೆಲ್ಲಾ ಕಳ್ಳಾಟಕೇಲೇ ನಡೀವಂಥಾದ್ದು. ಗೊತ್ತಾದರೆ ಮರ್ಯಾದಿ ಮಾತಾ ಎಲ್ಲಾ ಹೋಗಿಬಿಡುತ್ತೆ. ಅಂಥಾ ಕಳ್ಳಾಟಕೆಯಲ್ಲಿ ಕೂಡಾ ಸಲಿದೇ ಹಾಕಿಬಿಡ್ತಾವೆ ಹೆಣ್ಣುಗಳು! ಈ ಕಡೇಲಿರುವ ನ್ಯಾಯಾ ಅಲ್ಲಿಲ್ಲದೆ"

"ಹಾಗಾದರೆ ಈ ಕಡೆಯ ಸಂಬಂಧಂ ಬಹಳ ನ್ಯಾಯ ಅಂತಲೋ ನಿಮ್ಮ ಅಭಿಪ್ರಾಯ?"

"ಅಲ್ಲವೇ ಮತ್ತೆ, ಯಾವ ಕಳ್ಳಾಟಕೆಯೂ ಇಲ್ಲದ ಸಂಬಂಧಂ ನಡೀತಲ್ಲಾ. ಖರ್ಚು ಕೂಡಾ ಇಲ್ಲ ಮಹಾ. ಉಡ್ತಾನುಂ ತೇಕ್ಕಾನುಂ ಕೂಡ್ತಾಲೆ ಮದಿಯಲ್ಲೊ?"! [ಉಡಲಿಕ್ಕೂ ಹಚ್ಚಲಿಕ್ಕೂ ಕೊಟ್ಟರೆ ಸಾಕಲ್ಲ!]

"ಹಾ! ಹಾಗೆ ಹೇಳಿ ಗುಂಡೂಭಟ್ರೆ. ಅದಕ್ಕೆ ನೀವು ಇಲ್ಲೇ ಇರೋದು ಅಂತ ಕಾಣುತ್ತೆ" ಎಂದು ಹೇಳಿ ಕುಟ್ಟಪ್ಪೆ ನಕ್ಕ.

ಗುಂಡೂಭಟ್ರು ಕಣ್ಣರಳಿಸಿ, "ಅಂದರೆ, ಏನು ಹೇಳುತ್ತಿಯೋ ಕುಟ್ಟಪ್ಪೆ: ನೀನು ನಿಜವಾಗಿಯೂ ಮುಂದಿರಿಕೊಟ್ಟಿಯೇ! ನೋಡಲಿಕ್ಕೆ ಸಣ್ಣವನಾಗಿ ಕಂಡರೂ ಒಳ್ಳೇ ಬೆಳೆದ ನೊರಟೆ ನೀನು! ಎಲ್ಲಾ ತಿಳಿದುಕೊಂಡೇ ಕೇಳ್ತಾಯಿದ್ದೀನು?" ಎಂದು ಹುಸಿ ಕೆಸಿದರು.

"ಸಿಟ್ಟು ಮಾಡಬೇಡಿ ಗುಂಡೂಭಟ್ರೆ: ನನಗೆಲ್ಲಾ ಗೊತ್ತು ಬಿಡಿ. ಕಣಾರ ಎಲ್ಲಾ ನನಗೆ ಹೇಳಿಬಿಟ್ಟಿದ್ದಾನೆ. ಅವನ ಜತೇಲಿ ಹೋಗಿ ನೋಡಿದ್ದೇನೆ, ನಿಮ್ಮ ಕುಪ್ಪಾಯಿಂನ!" ಎಂದು ನೆಗಾಡಿದ.

"ಆ ಹಾಂ! ಸರಿಸರಿ. ನಿಮಗೂ ಈಗಲೇ ಮದುವೇ ಮಾಡಬೇಕಾಯಿತು. ಹೇಳಿಬಿಡ್ತೇನೆ ಅರಸುಗಳ ಹತ್ತಿರ."

"ಅಯ್ಯಯ್ಯೋ! ಹಾಗೆಲ್ಲಾ ಹೇಳಬೇಡಿ ಭಟ್ರೇ. ನಿಮ್ಮ ದಮ್ಮಯ್ಯ"

ಗುಂಡೂಭಟ್ಟರ ಪಕ್ಕದಲ್ಲೇ ಇದ್ದು ಈ ಸಂಭಾಷಣೆ ಕೇಳುತಾ ಇದ್ದ ತಿಮ್ಮ, "ಉಡ್ತಾನುಂ ತೇಕ್ಕಾನುಂ ಕೊಡ್ತಾಲ್ ಮದಿ ಅಂದರೇನು?" ಎಂದು ಪ್ರಶ್ನೆ ಹಾಕಿದ.

"ಕುಟ್ಟಪ್ಪೇನೇ ಕೇಳು. ನಿನಗೂ ಒಂದು ಕುಟ್ಟೀನ ಸಂಬಂಧಂ ಮಾಡಿಸಿ ಬಿಡುವಷ್ಟು ಗಟ್ಟಿಗನವ" ಎಂದರು ಗುಂಡೂಭಟ್ಟರು.

ಕುಟ್ಟಪ್ಪೆ ತಿಮ್ಮನನ್ನು ಕುರಿತು, "ಇಲ್ಲಿ ಹೆಂಡತಿ ಬೇಕಾದರೆ ವರ್ಷಕ್ಕೆ ಒಂದು ಜತೆ ನಾಲ್ಕು ಮೊಳದ ಪಂಚೆ ಮತ್ತು ವಾರ ವಾರ ಅಭ್ಯಂಜನಕ್ಕೆಷ್ಟು ಎಣ್ಣೆ ಸೀಗೆ ಕೊಡುವ ಏರ್ಪಾಡು ಮಾಡಿದರೆ ಸಾಕು. ಸಂಬಂಧಂ ಆಗಿ ಬಿಡುತ್ತೆ. ದಿನಾ ರಾತ್ರಿ ಸುಖವಾಗಿ ನಿದ್ದೆ ಮಾಡಬಹುದು" ಎಂದ.

"ಛಿ ಛಿ! ಕುಟ್ಟಪ್ಪೆ! ತಿಮ್ಮನ್ನ ಕೆಡಿಸಿ ಹಾಕಬೇಡವೋ? ನಿನ್ನ ಹಾಗೆ ಅರಸುಗಳ ಮಗನಲ್ಲಾ ಇವನು!" ಎಂದರು ಗುಂಡೂಭಟ್ಟರು.

ಇದರಿಂದ ಕುತೂಹಲವೆದ್ದ ತಿಮ್ಮ ಗುಟ್ಟಾಗಿ ಕುಟ್ಟಪ್ಪೆ ಹತ್ತಿರ ಅನೇಕ ವಿಷಯಗಳನ್ನು ಕೇಳಿ ಅವನಿಂದ ಗುಟ್ಟಾಗಿ ಅದಕ್ಕೆಲ್ಲ ಉತ್ತರ ಪಡೆದುಕೊಂಡ. ತನಗಿಂತ ಮೂರು ವರ್ಷ ಮಾತ್ರ ದೊಡ್ಡವನಾದ ಕುಟ್ಟಪ್ಪೆಗೆ ವಿಷಯಗಳು ಗೊತ್ತಿವೆ! ಹೆಣ್ಣು ಗಂಡುಗಳ ಗುಟ್ಟಿನ ವಿಷಯಗಳು!

ಕನ್ನಡಿಗರಾದ ಗುಂಡೂಭಟ್ಟರ ಸಹವಾಸವನ್ನು ಬಿಟ್ಟು, ಅವರು ಮಾಡುವ ಹೊಸ ರೀತಿಯ ಅಡಿಗೇ ವಿಧಾನ ನೋಡುವ, ಕಲಿದು ಕೊಳ್ಳುವ ಸಂದರ್ಭಗಳನ್ನು ಬಿಟ್ಟು, 'ಶಾಂತಿ' ಯನ್ನು ಕಲಿಯಲು ಅಂಬಲಕ್ಕೆ ಹೋಗುವುದೆಂದರೆ ತಿಮ್ಮನಿಗೆ ಹೇಗೆ ಹೇಗೊ ಅನಿಸಿತು. ಹೋಗಲಾರೆನೆಂದು ಹೇಳುವ ಅಧಿಕಾರವೂ ಅವನಿಗಿರಲಿಲ್ಲ. ಅವನ ಬಾಡಿದ ಮುಖವನ್ನು ನೋಡಿ ಮೂಪನ್ಮೆ, "ನೀನೇನು ಅಂಬಲಂದಲ್ಲೇ ಇರಬೇಕಂತಿಲ್ಲ ಮಾಣೀ, ಅಲ್ಲಿ ಹಿಡಿಯದಿದ್ದರೆ ಹೊರಟು ಬಂದು ಬಿಡಿ. ಹ್ಯಾಗಿದ್ದರೂ ಪ್ರತಿ ಶನಿವಾರವೂ ಇಲ್ಲಿಗೇ ಬಂದು ಎಣ್ಣೆ ಹಚ್ಚಿಕೊಂಡು ಸ್ನಾನಮಾಡಿ ಹೋಗಲೇಬೇಕು. ಆಗಾಗ ಕುನ್ಹಂಬುನಾಯರು ಅಂಬಲಕ್ಕೆ ಬರುತ್ತಾ ಇರುತ್ತಾರೆ. ಖುಶಾಲಾಗಿ ಶಾಂತಿ ಕಲಿತು ಬಿಟ್ಟರೆ ಮತ್ತೆ ನಿಮಗೇ ಒಳ್ಳೆದಲ್ಲವೆ?" ಎಂದು ಮುಂತಾಗಿ ಬೋಧಿಸಿ ಅವನಲ್ಲಿ ಉತ್ಸಾಹ ತುಂಬಿದಳು.

"ಕುನ್ಹಂಬುನಾಯರು ದಿನಾ ಅಂಬಲಕ್ಕೆ ಹೋಗಿ ಬರುವ ಪದ್ಧತಿವುಳ್ಳವನು. ಮೂಪನ್ಮೆ, ಅವನ ಮೂಲಕ ಅಂಬಲಂದ ಅರ್ಚಕನ ಹತ್ತಿರ ಹೇಳಬೇಕಾದ್ದನ್ನು ಹೇಳಿ ತಿಮ್ಮನನ್ನು ಅವನ ಜತೆಯಲ್ಲಿ ಅಂಬಲಂಕ್ಕೆ ಹೊರಡಿಸಿದಳು. ತಿಮ್ಮ ತನ್ನ ಮಂತ್ರ ಪುಸ್ತಕ, ಪಾಠ ಪುಸ್ತಕಗಳನ್ನೂ ಚಿತ್ರ ಬರೆಯಲು ಕೆಲವು ಕಾಗದ, ಪೆನ್ಸಿಲು, ರಬ್ಬರುಗಳನ್ನೂ, ತೆಗೆದುಕೊಂಡು ಉಟ್ಟ ಬಟ್ಟೆ ವಸ್ತ್ರಗಳೊಂದಿಗೆ ಹೊರಟ. ಅವನ ಪೆಟ್ಟಿಗೆ, ಇನ್ನೂ ಬೇರೆ ಪುಸ್ತಕಗಳನ್ನು ಅರಸುಗಳ ಮನೆಯಲ್ಲೇ ಬಿಟ್ಟಿದ್ದನು.

ಆ ಅಂಬಲದಲ್ಲಿ ಅರ್ಚಕನಾಗಿರುವವನು ಕೃಷ್ಣನ್ ಪೋತಿ ಎಂಬ ನಂಬೂದರಿ ಶಾಖೆಯ ಬ್ರಾಹ್ಮಣ. ಅಲ್ಲಿ ಈ ಮೊದಲಿದ್ದ ಎಂಬ್ರಾಂದ್ರಿಯನ್ನು ಬೇರೊಂದು ದೇವಸ್ಥಾನಕ್ಕೆ ಕಳುಹಿಸಿಬಿಟ್ಟರಂತೆ. ಪೋತಿಗಳೂ ಒಳ್ಳೆಯ ಪೂಜೆ ಮಾಡುವವರೆಂದು ಖ್ಯಾತರಾದವರೇ. ತಿಮ್ಮನನ್ನು ಅವನೇ ಬಹಳ ಪ್ರೀತಿಯಿಂದಲೇ ಸ್ವಾಗತ ಮಾಡಿಕೊಂಡನು.

ಅಂಬಲದಲ್ಲಿ ಪೋತಿಯ ಜತೆಯಲ್ಲಿ ಇನ್ನೊಬ್ಬ ನಂಬೀಶನೂ ಇದ್ದಾನೆ. ನಂಬೀಶನು ದೇವಾಲಯದ ಪರಿಚಾರಕ. ಅವನೂ ಬ್ರಾಹ್ಮಣ ಶಾಖೆಯವನೇ ಆದರೂ ಪೋತಿ, ಎಂಬ್ರಾಂದ್ರಿಗಳೊಂದಿಗೆ ಅವನಿಗೆ ಪಂಕ್ತಿಭೋಜನವಿಲ್ಲ. ಪಟ್ಟನ್ಮಾರಿಗಿಂತಲೂ ಕೆಳಗಿನವನಂತೆ ನಂಬೀಶ!

ತಿಮ್ಮನಿಗೆ ಪೂಜೆ ಮಾಡುವ ಹರಕೆ ಒಪ್ಪಿಸುವ ಮುಂತಾದ ದೇವಸ್ಥಾನದ ಎಲ್ಲ ವಿಧಾನಗಳನ್ನೂ ಕಲಿಸಿಕೊಡಬೇಕೆಂದು ಪೋತಿಗೆ ಕುನ್ಹಂಬುನಾಯರು ಹೇಳಿದ್ದ ಮೂಪನ್ಮೆಯ ಸೂಚನೆಯಂತೆ. ಆದರೆ ಅಂಬಲಂದ ಸ್ಥಿತಿಗತಿ

ಗಳನ್ನು ನೋಡಿದ ಮೇಲೆ ಅಲ್ಲಿ ಮಂತ್ರಪದ್ಧತಿಗಳಿಗಿಂತಲೂ ತಂತ್ರ ನಟನೆಗಳೇ ಮುಖ್ಯವೆಂದು ತಿಮ್ಮನಿಗೆ ತಿಳಿಯಿತು. ಅವನು ದೇವಪೂಜಾ ಪದ್ಧತಿ, ಸಂಧ್ಯಾವಂದನೆ ಮಂತ್ರಗಳನ್ನೆಲ್ಲ ಕಲಿತೇ ಇದ್ದ. ಆ ಮಂತ್ರಗಳೊಂದೂ ಪೋತಿಗೆ ಬರುವದಿಲ್ಲವೆಂದು ತಿಮ್ಮನಿಗೆ ಗೊತ್ತಾಯಿತು. ಕೆಲವು ಮಂತ್ರಗಳ ಪ್ರಾರಂಭದ ಪಾದಮಾತ್ರವೇ ಪೋತಿಗೆ ಗೊತ್ತು. ತಿಮ್ಮ ಅದೇ ಮಂತ್ರವನ್ನು ಮುಂದುವರಿಸಿ ಹೇಳಲು ಪ್ರಾರಂಭಿಸಿದರೆ, ಪೋತಿ ಅವನನ್ನು ತಡೆದು, "ಅಡೋ, ಎಂಬ್ರಾಂದ್ರಿಮಾಣಿ! ಹೀಗೆ ಇಡೀ ಮಂತ್ರವೆಲ್ಲಾ ಹೇಳುತ್ತ ತುಂಬ ಹೊತ್ತು ಪೂಜೆ ಮಾಡ್ತಾ ಇದ್ದರೆ, ಕಾಲು ನೋವು ಕೈನೋವು ಎಲ್ಲಾ ಬಂದು ನಾಳೆ ಮಲಗಿದರೆ ಯಾರು ಗತಿ? ಹೊತ್ತು ಹಾಳಾಗುತ್ತೆ, ಬಾಯಿಯ ಪಸೆ ಆರುತ್ತೆ ಎಂಜಲೆಲ್ಲಾ ಹಾರಿಹೋಗುತ್ತೆ. ಯಾರಾದರೂ ತುಂಬ ದಕ್ಷಿಣೆ ಕೊಡುವಂಥ ಮುಖ್ಯ ಮುಖ್ಯ ಮನುಷ್ಯರು ಬಂದಾಗ ಮಾತ್ರ ಅವರಿಗೆ ತೃಪ್ತಿಯಾಗುವ ಹಾಗೆ ಸ್ವಲ್ಪ ಹೆಚ್ಚು ಹೊತ್ತು ಮರು ಮರು ಹೇಳಬೇಕು. ಅದರಲ್ಲೂ ಬಂದವರು ಅವಸರದವರೋ ನಿಧಾನದವರೋ ಅಂತ ನೋಡಿಕೊಳ್ಳಬೇಕು. ಕೆಲವರಿಗೆ ತುಂಬ ಹೊತ್ತು ಪೂಜೆ ಮಾಡ್ತಾ ಇದ್ರೆ ಬೇಜಾರಾಗುತ್ತದೆ. ಕೆಲವರಿಗೆ ತುಂಬ ಹೊತ್ತು ಪೂಜೆ ನೋಡಿದಷ್ಟೂ ಖುಶಿಯಾಗುತ್ತದೆ. ಮುಖ್ಯವಾಗಿ ಜನರ ಮುಖ ನೋಡಿ ದೇವ್ರಿಗೆ ಮಂಗಳಾರತಿ ಎತ್ತಬೇಕು. ಆರತಿಯ ಪ್ರಕಾಶವನ್ನಿಷ್ಟು ದೊಡ್ಡದು ಮಾಡಿಕೊಂಡು ನಾಲ್ಕು ಸುತ್ತು ಸುತ್ತಿದರೆ ಕೆಲವರಿಗೆ ತೃಪ್ತಿ. ಬಂದಾಗ ಹೆಚ್ಚು ದಕ್ಷಿಣೆ ಕೊಡ್ತಾರೆ. ಗಂಧದ ಬೊಟ್ಟು, ವಿಭೂತಿ ಪಟ್ಟೆ, ಅಥವಾ ನಿನ್ನ ಎಂಬ್ರಾಂದ್ರಿ ನಾಮ ಎಲ್ಲಾ ಎದ್ದು ಕಾಣುವ ಹಾಗೆ ಹಾಕ್ಕೋ. ತಲೆಗೂದಲು ಸಡಿಲಾಗಿ ತುದಿಗಂಟು ಹಾಕಿಕೋ. ಅದರ ಗಂಟನ್ನು ನೆತ್ತಿಯ ಬದಿಯಲ್ಲಿ ಕೂಡಿಸಿದರೆ ಪೂಜಾನಿಷ್ಠನ ಹಾಗೆ ಕಾಣಿಸುತ್ತೀ ... "ಎಂದು ಮುಂತಾಗಿ ಮುಖ್ಯ ಸೂತ್ರ ಲಕ್ಷಣಾದಿಗಳನ್ನು ಬೋಧಿಸಿದನು.

೧೯

ಹೀಗೆ ತಿಮ್ಮ ಮಾಣಿಯ ಸಾವಧಾನದ, ಸಕ್ರಮವಾದ, ಪ್ರಾಣಾಯಾಮಗಳೊಂದಿಗೆ ಕೂಡಿದ ಆ ಸಂಧ್ಯಾವಂದನೆಯನ್ನು ನೋಡಿ ಪೋತಿ ಸಹಿಸದಾದ. ಅವನೊಬ್ಬ ತನ್ನ ಕೈಕೆಳಗಿನ ಪರಿಚಾರಕನೆಂಬರಿತೆ, "ಜಲ್ದೀ ಬಾಡೋ ಎಂಬ್ರಾಂದ್ರಿ ಭಡವಾ! ನೀನೂ ನಿನ್ನ ಜಪವೂ! ಶುದ್ಧ ಸೋಂಬೇರಿ ಮಾಣಿ! ಅಲ್ಲಿಗೆ ಹೋಗಿ ಅದನ್ನು ತಾ ಇದನ್ನು ತೆಗೆದಿಡು; ಹೀಗೆ ಕುಳಿತುಬಿಟ್ಟರೆ ನೀನು ಶಾಂತಿ ಮಾಡಿ ಸಂಪಾದಿಸಿಕೊಂಡ ಹಾಗೇ ಇದೆ ನಮಗಿಂತಲೂ ದೊಡ್ಡ ಬ್ರಾಹ್ಮಣನೋ ನೀನು?" ಎಂದು ಏನಾದರೂ ಕೆಲಸ ಹೇಳುತ್ತ ಕೋಪ ಕಾರತೊಡಗಿದ.

ಅರಸುಗಳ ಮನೆಯಲ್ಲಿ ತಿಮ್ಮ ಸಂಧ್ಯಾವಂದನೆಗೆ ಕುಳಿತಿರುವನೆಂದರೆ ಮೂಪೆನ್ನಯಾಗಲೀ, ಮತ್ತೆ ಯಾರೇ ಆಗಲಿ ಅವನನ್ನು ಕರೆಯುವದಿಲ್ಲ. ತಿಳಿಯದೆ ಕರೆದರೂ ತಿಮ್ಮ ಜಪದಲ್ಲಿದ್ದಾನೆಂದು ತಿಳಿದರೆ, "ಓ ಜಪ ಮಾಡ್ತೀರಾ? ಮಾಡಿ ಮಾಡಿ! ನಿಧಾನವಾಗಿ ಜಪ ಮುಗಿಸಿಕೊಂಡು ಬನ್ನಿ ಮಾಣೀ" ಎನ್ನುವರು. ಅವನೇ ಬೇಗ ಜಪ ಮುಗಿಸಿಕೊಂಡು ಏಳುತ್ತಿದ್ದನು. ಇಲ್ಲಿ ಸಂಧ್ಯಾವಂದನೆಯ ಮಂತ್ರಗಳನ್ನೇ ಮರೆತುಕೊಂಡ ಈ ಪೋತಿ ಬ್ರಾಹ್ಮಣ ಸಂಧ್ಯಾವಂದನೆಗೇ ಬಿಡುವದಿಲ್ಲವಲ್ಲ! ಹೊಟ್ಟೆಕಿಚ್ಚಲ್ಲದೆ ಮತ್ತೇನಿದು?

ತಿಮ್ಮ ಅಲ್ಲಿಗೆ ಬಂದ ನಾಲ್ಕನೇ ದಿನದಲ್ಲಿ ಪೋತಿ "ಇವತ್ತು ನೀನೇ ಪೂಜೆ ಮಾಡು. ನಾನು ಹೇಳಿಕೊಟ್ಟದ್ದು ನೆನಪಿದೆಯಷ್ಟೆ?" ಎಂದನು.

ತಿಮ್ಮ ತಾನು ಕಲಿತಿರುವ ದೇವಪೂಜೆಯ ಮಂತ್ರಗಳನ್ನು ಸರಿಯಾಗಿ ಉಚ್ಚರಿಸುತ್ತ, ಮಂಟಪಧ್ಯಾನ, ದ್ವಾರಪಾಲಕರ ಸ್ತುತಿ, ಸಂಕಲ್ಪ, ಶಂಖಪೂಜೆ, ಕಲಶಪೂಜೆ, ಅಭಿಷೇಕ, ಅಲಂಕಾರಗಳನ್ನು ಮಾಡುತ್ತ ಹೊತ್ತು ಕಳೆಯುವದನ್ನು ನೋಡಿದ ಪೋತಿ, "ಹೀಗೆ ಪೂಜೆ ಮಾಡುತ್ತಾ ನಿಂತರೆ ನೀನು ಉದ್ಧಾರವಾದ ಹಾಗೇಡೋ! ಯಾವಾಗ ನಿನ್ನ ನೈವೇದ್ಯ ಆದೀತು? ಯಾವಾಗ ಹೊಟ್ಟೆಗಿಷ್ಟು ಬಿದ್ದೀತು? ಬಿಡುಬಿಡುಡೋ!" ಎಂದು ತಿಮ್ಮನನ್ನು ಆಚೆಗೆ ದೂಡಿ, ತಾನೇ ತನ್ನ ತುಂಗಣೆಪಂಗಣೆಯ ಪೂಜೆಯನ್ನು ಮಾಡಿದ.

"ಇದೊಂದು ಪೀಡೆ. ಸುಮ್ಮನೆ ಅನ್ನದಂಡಕ್ಕೆ ಬಂದು ಬಿದ್ದಿದೆ!" ಎಂದು ಪೋತಿ ಹುಬ್ಬು ಸುರುಗಿಸಿಕೊಂಡು ಗೊಣಗಿಕೊಂಡದ್ದು ತಿಮ್ಮನ ಕಿವಿಗೆ ಬಿತ್ತು.

"ಸುಮ್ಮನೆ ನಿಂತಿದ್ದಿ ಯಾಕೆಡೋ! ಹೋಗಾಚೆ ಗಂಧ ತೇದು, ಕಟ್ಟಿಗೆ ಉಂಟೋ ನೋಡು. ಇಲ್ಲದಿದ್ದರೆ ಕೊತ್ತಳಿಕೆ ಸೀಳಿ ಹಾಕು. ಕಟ್ಟಿಗೆ ಒಡಿಯಲಿಕ್ಕಾದೀ ನೀನು" ಎಂದು ಮುಂತಾಗಿ ಪೋತಿಯ ಬಾಯಿಯಿಂದ ಹೊರಡುವ ಕೋಪ ತಿರಸ್ಕೃತ ಶಬ್ದಗಳನ್ನು ಕೇಳುತ್ತ ಬಹಳ ನೊಂದುಕೊಂಡ ತಿಮ್ಮ. ಕಣ್ಣೀರು ಬರುವ ಹಾಗಾಯಿತು.

ಮಾತಾಡದೆ ಮೂಲೆಯಲ್ಲಿ ತನ್ನ ಮಂತ್ರದ ನೋಟು ಪುಸ್ತಕವನ್ನು ಬಿಡಿಸಿಕೊಂಡು ಕುಳಿತುಬಿಡುವನು ತಿಮ್ಮ. ಅರ್ಚಕ ಪೋತಿ ಹೊಸ ಹೊಸ ಮಂತ್ರಗಳನ್ನು ಹೇಳಿಕೊಟ್ಟಾನು, ಬರೆದುಕೊಳ್ಳಬಹುದು ಎಂದುಕೊಂಡರೆ, ಅದೆಲ್ಲಾ ಸುಮ್ಮನಾಯಿತು. ತಿರುಗಿ ಕೇಳಿದರೆ ತಿಮ್ಮನಿಂದ ಆ ಪೋತಿಯೇ ಮಂತ್ರಗಳನ್ನು ಕಲಿತುಕೊಳ್ಳಬೇಕಿತ್ತು. ಬೇಸರವಾದಾಗ ಮಂತ್ರದ ಪುಸ್ತಕವನ್ನೋ, ಪಾಠ ಪುಸ್ತಕಗಳನ್ನೋ ಓದುತ್ತಾ ಕುಳಿತುಕೊಳ್ಳುವುದು ತಿಮ್ಮನ ಅಭ್ಯಾಸ. ಅದರಿಂದ ಮನಸ್ಸಿಗೆ ಶಾಂತಿಯುಂಟಾಗುವುದನ್ನು ಅನುಭವಿಸಿಕೊಂಡಿದ್ದ. ಹಿಂದೆ ಅವನಿಗೆ ಉಪನಯನವಾದಾಗ ತಂದೆ "ಊರ್ಧ್ವಮೂಲಮಧಶ್ಶಾಖ—" ಎಂದು ಪ್ರಾರಂಭವಾಗುವ ಶ್ಲೋಕಗಳನ್ನು ಬರೆದುಕೊಟ್ಟು ಇದನ್ನೆಲ್ಲ ಬಾಯಿಪಾಠ ಮಾಡಬೇಕು ಎಂದು ಹೇಳಿದ್ದರು. ಆದರೆ ಮೇಲೆ ಅವನಿಗೇನೂ ಲಕ್ಷ್ಯವಿದ್ದಿಲ್ಲ. ತಾಯಿಯೂ ಅವನಿಗೆ ವಿಷ್ಣು ಸಹಸ್ರನಾಮವನ್ನು ಕಲಿಯಲು ಒತ್ತಾಯಿಸಿದ್ದಳು. ಅಷ್ಟು ದೊಡ್ಡ ಸಹಸ್ರನಾಮ ಹೇಗೆ ಕಲಿಯಲಿ?— ಎಂದು ತಿಮ್ಮ ಮೂಗು ಮುರಿದರೆ, "ದಿನಾ ಓದುತ್ತಾ ಇದ್ದರೆ ತನ್ನಂತೆ ಬರುತ್ತೆ. ನಮಗೆಲ್ಲ ಲಕ್ಷ್ಮೀಶೋಭಾನೆ, ಪ್ರಹ್ಲಾದ ಚರಿತ್ರೆ ಹಾಡುಗಳು ಬಾಯಿಗೆ ಬರುವುದಿಲ್ಲವೆ?" ಎನ್ನುತ್ತಿದ್ದಳು ತಾಯಿ. ಓದುಬರೆಹವೇ ಬಾರದ ಅಜ್ಜಿಗೂ ಎಷ್ಟೋ ಪುರಾಣ ಕಥೆಗಳ ಹಾಡುಗಳು ಸರಾಗವಾಗಿ ಬರುತ್ತಿದ್ದುವು "ಕಸರೊಳಗಣ ಮಾಣಿಕದಂದದಲಿ. ಅಸುರಗೆ ಪ್ರಹ್ಲಾದನು ಜನಿಸಿದನು—" ಎಂದು ಕೆಲಸ ಮಾಡುತ್ತಾ ಹೆಂಗಸರು ರಾಗದಿಂದ ಹೇಳುತ್ತಿರುವ ಹಾಡನ್ನು ತಿಮ್ಮ ಕೇಳಿದ್ದ. ಊರು ಬಿಟ್ಟು ಹೊರಡುವಾಗ ತಾಯಿ "ಸಹಸ್ರನಾಮ ಕಲಿ. ದಿನಾ ಸಮಯವಿರುವಾಗ ಕಲಿತ ಶಾಲೆಯ ಪಾಠಗಳನ್ನು ಓದುತ್ತಾ ಕೋಪಿ ಬರೆಯುತ್ತಾ ಇರು" ಎಂದು ಹೇಳಿದ್ದಳು. "ವಿಷ್ಣುಸಹಸ್ರನಾಮ ಪಾರಾಯಣದಿಂದ ಕಷ್ಟಗಳನ್ನು ತಾಳಿಕೊಳ್ಳುವ ಶಕ್ತಿಗಳನ್ನು ದೇವರು ಕೊಡುತ್ತಾನೆ." ಎಂದು ಪುರೋಹಿತರು ಅವನಿಗೆ ಬೋಧಿಸಿದ್ದರೊ ಏನೋ. ಅದೆಲ್ಲ ಅವನಿಗೆ ಈಗ ನೆನಪಾಗುತ್ತಿತ್ತು. ಅದಕ್ಕೇ ಚಿಕ್ಕಂದಿನ ಬೋಧನೆಗಳು ಸಮಯಕ್ಕೆ ನೆನಪಾಗುವಂತಹವುಗಳು—ಎನ್ನುವುದು.

ಓದಲಾರಂಭಿಸುವಾಗ "ಊರ್ಧ್ವಮೂಲಮಧಶ್ಶಾಖ"ವು ಪೂರ್ಣ ಬಾಯಿಗೆ ಬರುವ ಹಾಗೆ ತೋರಿತು. ಕೊನೆಯದಾಗಿ "ಕೃತಕೃತ್ಯಶ್ಚ ಭಾರತ, ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನ ಸಂವಾದೇ ಪುರುಷೋತ್ತಮ ಪ್ರಾಪ್ತಿಯೋಗೋ ನಾಮ ಪಂಚದಶೋಧ್ಯಾಯಃ" ಎಂದು ಮುಗಿಸಿದನು. ಭಗವದ್ಗೀತೆ ಎಂದರೇನೆಂಬುದು ಅಷ್ಟೇನೂ ಅವನಿಗೆ ತಿಳಿಯದಿದ್ದರೂ ತಂದೆ ಕಲಿಯುವಂತೆ ಒತ್ತಾಯಿಸಿ ಬರೆದುಕೊಟ್ಟದ್ದು ಬಾಯಿಗೆ ಬಂತಲ್ಲ ಎಂಬ ಸಮಾಧಾನವುಂಟಾಯಿತು. ಹಾಗೆಯೇ ತಾಯಿಯು ಒತ್ತಾಯಿಸಿದ ವಿಷ್ಣು ಸಹಸ್ರನಾಮವೂ ಬಂದೀತೆಂಬ ನಂಬುಗೆಯೂ ಉಂಟಾಯಿತು!

೨೦

ಆ ದಿನ ಊಟ ಮಾಡುವಾಗ ನಂಬೀಶನಿಗೂ ಪೋತಿಗೂ ಹಿಡಿದು ಬಂತು. ಕಾರಣ, ನಂಬೀಶನದು ಸ್ವಲ್ಪ ದೊಡ್ಡ ಹೊಟ್ಟೆ. ಆದರಂತೆ ಪೋತಿಯ ಸಂಬಂಧದವಳು ನಾಯರ್‌ಚಿಯ ಪರಿವಾರವೂ ತುಸು ದೊಡ್ಡದು. ಅವಳನ್ನು ಆಧಾರವಾಗಿಟ್ಟುಕೊಂಡು ಬದುಕುವವರು ಅವಳ ತಾಯಿ, ತಮ್ಮ, ಮಕ್ಕಳು ಎಲ್ಲ ಇದ್ದಾರಂತೆ. ದೇವಾಲಯದ ನೈವೇದ್ಯದ ಖರ್ಚಿಗೆ ಸಿಗುವ ಅಕ್ಕಿಯನ್ನೇ ಉಳಿಸಿ ಪೋತಿ ತನ್ನ ಸಂಬಂಧದ ಹೆಂಡತಿಗೆ ಒಯ್ದು ಕೊಡುತ್ತಾನೆ. ತಿಮ್ಮ ಬಂದ

ಮೇಲೆ ಅವನಿಗಾಗಿ ಮೂಪನ್ನ್ ದಿನಕ್ಕೆರಡು ಎಡಂಗಳಿ (ಪಾವು) ಅಕ್ಕಿಯ ಲೆಕ್ಕದಂತೆ ಕೂಡಿ ಇಡುವ ಏರ್ಪಾಡು ಮಾಡಿದ್ದನು. ಅದರಲ್ಲಿ ಪೋತಿ ಒಂದು ಎಡಂಗಳಿ ಅಕ್ಕಿಯನ್ನು ಉಳಿಸಿಕೊಂಡು ರಾತ್ರಿಯ ಹೊತ್ತಿನಲ್ಲಿ ತನ್ನ ಸಂಬಂಧದವಳಿಗೆ ಒಯ್ದು ಕೊಡುತ್ತಿದ್ದ.

ದೇವಸ್ಥಾನದಲ್ಲಿ ದೇವರ ನೈವೇದ್ಯ ಹೇಗೂ ಆಗಲೇಬೇಕು. ಅದರೊಂದಿಗೆ ಏನಾದರೂ 'ಕೂಟಾನ್'[ಮೇಲೋಗರ]ಗಳನ್ನೂ ಮಾಡಿಕೊಂಡು, ಪೋತಿ, ತಿಮ್ಮ, ನಂಬೀಶ ಈ ಮೂವರೂ ಊಟ ಮಾಡುತ್ತಿದ್ದರು. ತಿಮ್ಮನು ಸ್ವಲ್ಪವೇ ಊಟ ಮಾಡುವುದರಿಂದ ಅವನ ಅಕ್ಕಿ ಮಿಗುಲುತ್ತಿತ್ತು.

ಈ ಬಗೆಯ ಅಡಿಗೇ ಕೆಲಸವು ತಿಮ್ಮನ ಪಾಲಿಗೇ ಹೊರಳಿಕೊಂಡಿತ್ತು. ನಂಬೀಶ ತರಕಾರಿಗಳನ್ನು ತರಿದು ಕೊಡುತ್ತಿದ್ದ. ಅವನೊಬ್ಬ ಮದುವೆ ಸಂಬಂಧಾದಿ ತಂಟೆಗಳನ್ನು ಹಚ್ಚಿಕೊಳ್ಳದ ಶುದ್ಧ ಬ್ರಹ್ಮಚಾರಿ ಪಿಂಡದಂಥವನು. ಅವನು ಮುಟ್ಟಿದ್ದು ದೇವರ ನೈವೇದ್ಯಕ್ಕಾಗದು. ಆದರೂ ಅವನು ಮುಚ್ಚುಮರೆಯಾಗಿ ದೇವರ ಪಾಯಸವನ್ನು ಕದ್ದು ಕುಡಿಯುವುದುಂಟು. ಅಲ್ಲದೆ ಬೆಲ್ಲ ತೆಂಗಿನ ಕಾಯಿಗಳು ಸಿಕ್ಕಿದಾಗಲೆಲ್ಲ ಬಾಯಿಗೆ ಹಾಕಿಕೊಳ್ಳದೆ ಬಿಡುವವನಲ್ಲ. ಹಾಗೆ ಮಾಡುವುದು ತಪ್ಪು ಕೆಲಸ, ಭ್ರಷ್ಟ ಕೆಲಸಗಳಾದುದರಿಂದ, ಕಳ್ಳತನದಿಂದಲೇ ನಡೆಸಿಕೊಳ್ಳುತ್ತಿದ್ದನು.

ತಿಮ್ಮ ಬಂದ ಮೇಲೆ ದೇವರ ಪಾಲ್ಪಾಯಸವನ್ನು ಕದ್ದು ಕುಡಿಯಲಿಕ್ಕೆ ನಂಬೀಶನಿಗೆ ಅವಕಾಶವಾಗದಿದ್ದುದರಿಂದ, ಅವನು ತಿಮ್ಮನನ್ನೆ ಒಳ್ಳೆಯದು ಮಾಡಿಕೊಂಡು, ತನ್ನ ಲೋಟೆಯನ್ನು ಅಡಿಗೇ ಮನೆಯ ಕಡೆಗೆ ಚಾಚಿ, ಪಾಲ್ಪಾಯಸ ಹಾಕುವಂತೆ ಸನ್ನೆ ಮಾಡುವನು. "ಅಣ್ಣಾ! ದೇವರ ನೈವೇದ್ಯ ಮಾಡದೆ ಹಾಕಬಹುದೆ?'' ಎಂದು ತಿಮ್ಮ ಆಕ್ಷೇಪಣೆ ಮಾಡಿದರೆ, ''ಆಂ, ಬಿಡೀ! ದೇವರೆಲ್ಲಿ ನೋಡ್ತಾನೆ? ಎಲ್ಲಾ ನಾವೇ ಮಾಡಿಕೊಂಡದ್ದು ದೇವರು ದಿಂಡರೂ ಅಂತ. ಆ ಕಳ್ಳ ಪೋತಿ ಆ ಮೇಲೆ ನನಗೆ ಕೊಡುವುದೇ ಇಲ್ಲ. ಉಳಿದದ್ದೆಲ್ಲಾ ಅವನ ಭಾರ್ಯೆಗೆ ಕೊಂಡೊಯ್ಯುತ್ತಾನೆ ಘಟಿಂಗ!" ಎನ್ನುವನು.

ಹುಡುಗ ತಿಮ್ಮ ಅವನಿಗಿಂತ ಮೂರು ಸಾಲು ಹಿರಿಯನಾದ ನಂಬೀಶನ ಒತ್ತಾಯಕ್ಕೆ ಒಳಗಾಗಿ ಎರಡು ಸೌಟು ಪಾಯಸ ಗುಟ್ಟಾಗಿ ಅವನ ಲೋಟೆಗೆ ಹಾಕುವನು.

ಹೀಗೆ ಬಾಯಿ ಚಪಲ, ತಿಂಡಿಪೋತ ನಂಬೀಶನಿಗೆ ಹೊಟ್ಟೆಯೂ ದೊಡ್ಡದಾದುದರಿಂದ, ಹಸಿವೆಯೂ ಹೆಚ್ಚೇ. ಎಷ್ಟೇ ಅನ್ನ ಬಡಿಸಿದರೂ "ಸಾಕು" ಎಂದು ಅವನ ಬಾಯಿಯಲ್ಲಿ ಬರುವುದಿಲ್ಲ. ಪೋತಿ ಅವನಿಗೊಂದು ಅಂದಾಜಿಯ ಲೆಕ್ಕದಷ್ಟು ಅನ್ನ, ಕೂಟಾನ್ ಬಡಿಸಿಬಿಟ್ಟು, ಉಳಿದುದನ್ನು ಅಡಗಿಸಿಟ್ಟು ರಾತ್ರಿ ಸಂಬಂಧದವಳ ಮನೆಗೆ ಕೊಂಡೊಯ್ಯುತ್ತಿದ್ದನು.

ಇದು ನಂಬೀಶನಿಗೆ ತಿಳಿದೇ ಇತ್ತು. ಪೋತಿಯ ಮೇಲೆ ಒಳಗೊಳಗೇ ಅವನಿಗೆ ಕೋಪ.

ಕದ್ದು ಮೈಲಿಗೆ ಮಾಡಿಯೇ ಹೊಟ್ಟೆ ತುಂಬಿಸಿಕೊಳ್ಳುವವನಾದ ನಂಬೀಶನಿಗೆ, ತಿಮ್ಮ ಬೇರೆ ಅಲ್ಲೇ ಇರುವವನಾದುದರಿಂದ ಕದಿಯಲಿಕ್ಕಾಗದೆ, ಹಸಿವೆ ಮಾತ್ರ ಹೆಚ್ಚಾಗುತಿತ್ತು.

"ಇನ್ನೂ ಸ್ವಲ್ಪ ಅನ್ನ, ಕೂಟಾನ್ ಬಡಿಸಿ ಪೋತಿಗಳೇ" ಎಂದ ನಂಬೀಶ.

"ಆಗಿಹೋಯ್ತಲ್ಲಾ?" ಎಂದ ಪೋತಿ.

ನಂಬೀಶನ ಹೊಟ್ಟೆಯಲ್ಲಿ ತುಂಬಿಹೋದ ಸಿಟ್ಟು ಅಂದು ಕಟ್ಟೊಡೆಯಿತು. "ಏ ಪೋತಿಗಳೆ! ನನಗೆಲ್ಲಾ ಗೊತ್ತಿದೆ ನಿಮ್ಮ ತಂತ್ರ! ಅಕ್ಕಿಯನ್ನು ಮುಚ್ಚಿಟ್ಟು ನನಗೆ ಅನ್ನಲೊಟ್ಟೆ ಮಾಡ್ತೀರಾ! ಒಳ್ಳೆಯ ಕೂಟಾನ್ ಎಲ್ಲಾ ಬಚ್ಚಿಟ್ಟು ನನಗೆ ನೀರು ಬೆರೆಸಿ ಬಡಿಸ್ತೀರಿ. ನೀವು ನಿಮ್ಮ ಭಾರ್ಯಾಳಿಗೆ ಕೊಡಿ, ಕೂತಿಚ್ಚಿ (ಸೂಳೆ)ಗೆ ಕೊಡಿ. ಆದರೆ ನನಗೆ ಮಾತ್ರ ಹೊಟ್ಟೆ ತುಂಬ ಸರಿಯಾದ ಊಟ ಬಡಿಸದೇ ಇದ್ರೆ ನಾನು ಮೂಪ್ಪರ (ದೇವಾಲಯದ ಧರ್ಮಕರ್ತ) ಹತ್ರ ಹೇಳಿಬಿಡುವುದು ಮಾತ್ರವೇ ಅಂತ ಆಲೋಚನೆ ಮಾಡಬೇಡಿ. ಮೊದಲು ಊರಿಗೆಲ್ಲಾ ಹೇಳಿ ನಿಮ್ಮ ಮರ್ಯಾದಿ ಮೂರು ಕಾಸಿಗೆ ಹೋಗುವಾಗ ಮೂಪ್ಪರು ತಾವಾಗಿಯೇ ಬಂದು ನಿಮ್ಮ ಮುಖಕ್ಕೆ ಮಂಗಳಾರತಿ ಮಾಡುವ, ಹಾಗೆ ಮಾಡಿಸುವ ಸಾಮರ್ಥ್ಯ ಈ ನಂಬೀಶನಿಗುಂಟು. ಆ ಮೇಲೆ ನಿಮಗೆ ಯಾವ ಅಂಬಲದಲ್ಲೂ ಕೆಲಸ ಸಿಕ್ಕೋದಿಲ್ಲ. ಏನೆಂದು ಕೊಂಡಿರೋ ಈ ನಂಬೀಶನ್ನ?" ಎಂದ ತನ್ನ ಬಹುದಿನದ ಕೋಪವನ್ನು ಬಸಬಸನೆ ಬಿಚ್ಚಿಕೊಂಡ ಆ ದಿನ.

ಭಯಶೀಲ ಪೋತಿ ತುಂಬ ಹೆದರಿದ. "ಸ್ವಲ್ಪ ತಾಳಪ್ಪಾ, ನಂಬೀಶಾ! ಶಾಂತನಾಗಪ್ಪ. ಹಾಳಾದ ಈ ಎಂಬ್ರಾಂದ್ರಿ ಮಾಣಿ ಎಲ್ಲಿಂದ ಬಂತೋ! ಅಕ್ಕಿ ತೊಳೆಯುವಾಗ ಅಕ್ಕಿಯನ್ನೇ ಬಾಯಿಗೆ ಹಾಕ್ಕೊಳ್ತಾನೆ. ಅದ್ರಿಂದ್ಲೇ ಅನ್ನ ಕಮ್ಮಿಯಾಗುವುದಪ್ಪಾ..."

ಆಗ ತಿಮ್ಮ ನಡುವೇ ಬಾಯಿ ಹಾಕಿ, "ಅಯ್ಯಯ್ಯೋ! ನಾನು ಅಕ್ಕಿಗಿಕ್ಕಿ ಬಾಯಿಗೆ ಹಾಕೊಳ್ಳೋದಿಲ್ಲಲ್ಲಾ!" ಎಂದ.

ಪೋತಿ ತಿಮ್ಮನನ್ನು ಹೆದರಿಸುವ ಹಾಗೆ ಕಣ್ಣು ಮಾಡಿ, "ಮುಚ್ಚು ಬಾಯಿ, ಯಾರು ಕೇಳಿದರು ನಿನ್ನ! ಕೇಳಿದರೆ ಸತ್ಯ ಹೇಳಬಿಡುವಿಯಾ ನೀನು? ನಾನು ಕಣ್ಣಾರೆ ಕಂಡದ್ದು. ಅಷ್ಟು ಮಾತ್ರವೇ? ಈ ಮಾಣಿ ನೋಡಲಿಕ್ಕೆ ಹೀಗಿದ್ದರೂ ಅನ್ನ ಹೊತ್ತಿಗೆ ಎರಡೆರಡು ಎಡಂಗಳಿ ಬೇಕು ಗೊತ್ತಾ? ಕುನ್ನಂಬುವಾಯರೀ ಬರಲಿ. ಇವನ ಲೆಕ್ಕಕ್ಕೆ ದಿನಕ್ಕೆ ನಾಲ್ಕು ಎಡಂಗಳಿ ಅಕ್ಕಿ ಕೊಡಬೇಕು ಅಂತ ಹೇಳುತ್ತೇನೆ. ಸ್ವಲ್ಪ ಕೂಗಾಡದೆ ಸುಮ್ಮನಿರಯ್ಯ, ನಂಬೀಶಾ!" ಎನ್ನುತ್ತ ಪೋತಿ ಒಳಗೆ ಅಡಗಿಸಿಟ್ಟ ಇಷ್ಟು ಅನ್ನವನ್ನು ತಂದು ನಂಬೀಶನ ಎಲೆಗೆ ಹಾಕಿದ. ಹಾಗೆಯೇ ಇಷ್ಟು ಕೂಟಾನೂ ತಂದು ಸುರಿದ.

"ಹೌದೌದು. ನೀವು ಮಾಡುವ ಹಿಕ್ಮತ್ತುಗೆಲ್ಲ ಈ ಪಾಪದ ಎಂಬ್ರಾಂದ್ರಿ ಮಾಣೀ ಮೇಲೆ ಹಾಕ್ತೀರಾ? ನಾನು ನಂಬುವೆನೇ? ಅಸಲು ಕುನ್ನಂಬುವಾಯರು ನಂಬುವರೆ? ಅವರಿಗೆ ಗೊತ್ತಿಲ್ಲವೇ ಅವರ ಮಾಣೀ ವಿಷಯ? ದೇವಸ್ಥಾನದಲ್ಲಿ ವಿನಿಯೋಗವಾಗುವ ವಸ್ತುಗಳು ನಿಮ್ಮ ಭಾರ್ಯಾಳಲ್ಲಿ ಹೋಗದಿದ್ದರೆ ಎಲ್ಲಾ ಸರಿಯಾಗುತ್ತದೆ. ಈಗ ಇದು ಹ್ಯಾಗೆ ಹೊರಗೆ ಬಂತೂ?" ಎಂದ ನಂಬೀಶ ದುಃಖವನ್ನು ವ್ಯಂಗ್ಯ ಮಾಡಿಕೊಂಡು.

"ನಿನ್ನ ಪುಣ್ಯ, ನಂಬೀಶಾ. ಸದ್ಯ ಬಾಯಿ ಮುಚ್ಚು. ಬೇಕಾದರೆ ನಿನ್ನ ಹಸಿವೆಗೆ ಕಾಸು ಕೊಡ್ತೇನೆ, ಅವಲಕ್ಕಿ ಬಾಳೇಹಣ್ಣು ಕೊಂಡುಕೊಂಡು ತಿನ್ನು. ಇನ್ನು ಮೇಲೆ ನಿನ್ನ ಹೊಟ್ಟೆಗೆ ಕಡಮೆಯಾಗದ ಹಾಗೆ ನೋಡಿದರೆ ಆಯಿತಲ್ಲೋ!" ಎಂದು ಲಜ್ಜೆ ಬಿಟ್ಟು ಅಂಗಲಾಚಿಕೊಂಡ ಪೋತಿ.

ಇದನ್ನೆಲ್ಲ ಕೇಳುತ್ತಿದ್ದ ತಿಮ್ಮನಿಗೆ ಬಹಳ ಅಸಹ್ಯವೆನಿಸಿತು. ಕೂಡಲೇ ತನ್ನ ಪುಸ್ತಕ ಪೆನ್ಸಿಲು ಮುಂತಾದುವನ್ನು ಕಟ್ಟಿ ಎತ್ತಿಕೊಂಡು, "ನಾನು ಹೋಗಿ ಬಿಡುತ್ತೇನೆ ಸ್ವಾಮಿಗಳೆ! ನನಿಂದಾಗಿ ನೀವ್ಯಾಕೆ ಜಗಳ ಮಾಡಿಕೊಳ್ತೀರಿ? ನನಗೆ ಇಲ್ಲಿ ಏನೂ ಬರೋದಿಲ್ಲ. ನನ್ನ ಪೂಜೇನೂ ನಿಮಗೆ ಸರಿಯಾಗೋದಿಲ್ಲ. ಮತ್ತ್ಯಾಕೆ ಇಲ್ಲಿ?" ಎಂದು ಹೊರಟು ನಿಂತ.

ಪೋತಿ ಆಶ್ಚರ್ಯದಿಂದ, "ನಿನ್ನನ್ನು ನಾನು ಹೋಗು ಅಂದನೆ?" ಎಂದು ಕೇಳಿದ.

"ಇಲ್ಲ"


"ಅಲ್ಲಿಗೆ ಹೋಗಿ ನಾನು ಬೈದು ಬಡಿದು ಓಡಿಸಿಬಿಟ್ಟೆ ಅಂತ ಹೇಳುತ್ತಿ, ಹೌದಾ?"

"ಇಲ್ಲವಲ್ಲಾ. ನೀವು ನನಗೆ ಬೈಯಲೂ ಇಲ್ಲ, ಹೊಡೆಯಲೂ ಇಲ್ಲ. ಸುಳ್ಳು ಯಾಕೆ ಹೇಳಲಿ?"

"ಮತ್ತೆ ಏತಕ್ಕೆ ಬಂದೆ ಎಂದು ಮೂಪನ್ನ್ ಕೇಳಿದರೆ ಏನು ಹೇಳುತ್ತಿ?"

"ನನಗೇ ಇಲ್ಲಿ ಬೇಜಾರಾಯಿತು. ದೇವಾಲಯದ ಪೂಜೆ ನನಗೆ ಬರೋದಿಲ್ಲ. ಕಲಿಯಲು ಇಷ್ಟವಿಲ್ಲ ಅಂತ ಹೇಳುತ್ತೇನೆ"

ಪೋತಿ ಬಹಳ ಸಂತೋಷದಿಂದ ಅವನ ಬೆನ್ನು ತಟ್ಟಿ, "ನಿಜವಪ್ಪ. ನೀನು ಅಡಿಗೇ ಭಕ್ಷ್ಯ ಮುಂತಾದ್ದೆಲ್ಲಾ ಮಾಡೋದರಲ್ಲಿ ಬಹಳ ಗಟ್ಟಿಗ. ನೀನು ಹೋಗೋದರಿಂದ ಇನ್ನು ಒಳ್ಳೊಳ್ಳೇ ಕೂಟಾನ್ ಇಲ್ಲಾಂತ ನಮಗೆ ವ್ಯಸನವಾಗುತ್ತೆ. ನಿನ್ನ ಕೈ ಮುಟ್ಟಿದರೆ ಎಂಥ ನೀರಿಗಾದರೂ ಸುರುಚಿ ಬಂದು ಬಿಡುತ್ತೆ. ಅದರಲ್ಲೇ ನೀನು ಮುಂದಕ್ಕೆ ಬಂದು ಭಾರೀ ದೇಹಣ್ಣಕ್ಕಾರನಾಗಿ ಹೆಸರು ಪಡೆ. ಹಾಳಾದ ಈ ಶಾಂತಿ ಕೆಲಸದಿಂದ ಏನು ಸುಖವಿದೆ ಬಡ- ಸಪ್ಪೆ ನೈವೇದ್ಯ ನುಂಗಿಕೊಂಡು! ಆದರೂ ನೀನು ಆಗಾಗ ಅಂಬಲಕ್ಕೆ ಬರುತ್ತಾ ಇರುತ್ತಿ ತಾನೆ? ನನ್ನ ದೂರು ಗೀರು ಯಾರ ಹತ್ರವೂ ಹೇಳ


ಶುಭಂ ಕರೋತಿ ಕಲ್ಯಾಣಂ ಆರೋಗ್ಯಂ ಧನಸಂಪದಾ ।
ಶತ್ರುಬುದ್ಧಿ ವಿನಾಶಾಯ ದೀಪಜ್ಯೋತಿರ್ನಮೋಽಸ್ತು ತೇ॥
ಸ್ಟೇಟ್ ಬ್ಯಾಂಕ್

ಗೀಳಿ ಬಿಡಬೇಕೋ. ನಾನೇನಾದರೂ ಬಯ್ದಿದ್ದರೆ ಅದನ್ನೆಲ್ಲಾ ಮನಸಿನಲ್ಲಿಟ್ಟುಕೊಳ್ಳಬೇಡೋ. ಹೇಳುವುದಿಲ್ಲ ತಾನೇ ದೇವರಾಣೆಗೂ?" ಎಂದು ತಿಮ್ಮನಿಂದ ಪ್ರಮಾಣ ಮಾಡಿಸಿಕೊಂಡ ಹಾಗೆ ಮಾತು ತೆಗೆದುಕೊಂಡು ಹೋಗಲು ಬಿಟ್ಟ.

ತಿಮ್ಮನಿಗೆ ಆ ಒಂದು ವಾರ ದಿನಗಳ ಕಾಲ ದೇವಸ್ಥಾನದ ವಾಸ ಸೆರೆಮನೆಯ ವಾಸದ ಹಾಗಾಗಿತ್ತು. ಇಲ್ಲಿ ಆಟಕ್ಕೆ ಅವನಿಗೆ ಯಾರೂ ಇಲ್ಲ. ಆದುದರಿಂದ ಸಮಯ ತುಂಬ ಇದ್ದರೂ ಚಿತ್ರ ಬರೆಯುಲಿಕ್ಕೋ, ಕವಿತೆ ಕಟ್ಟಲಿಕ್ಕೋ ಉತ್ಸಾಹವೇ ಬರಲಿಲ್ಲ. ಅರಸುಗಳ ಮನೆಯಲ್ಲಾದರೋ ಕೆಲಸಕ್ಕೆ ಕೆಲಸ, ಆಟಕ್ಕೆ ಆಟ, ವಿಶ್ರಾಂತಿಗೆ ವಿಶ್ರಾಂತಿ ಎಲ್ಲ ಇತ್ತು. ಅಲ್ಲಿ ಕೆಲಸ ಮಾಡಮಾಡುತ್ತ ಕನ್ನಡ ಕವಿತೆಗಳನ್ನು ಬರೆದಿದ್ದಾನೆ; ಕತೆಗಳನ್ನೂ, ಚಿತ್ರಗಳನ್ನೂ ಬರೆದಿದ್ದಾನೆ. ಈ ದೇವಸ್ಥಾನದಲ್ಲಿ ವಾತಾವರಣ ಚೆನ್ನಾಗಿದ್ದರೇನು? ಮನುಷ್ಯರು ನಿಷ್ಠುರಿಗಳಾಗಿರುವುದರಿಂದ, ಶಾಂತಿಯ ಸ್ಥಳವೂ ಅಶಾಂತಿಯುತವಾಗಿತ್ತು.

೨೧

ತಿಮ್ಮ ಅರಸುಗಳ ಮನೆಗೆ ಹಿಂದಿರುಗಿ ಬಂದ. ಅವನನ್ನು ನೋಡಿದ ಕೂಡಲೇ ಮೂಕಮ್ಮ "ಮಾಣಿ ಬಂದುಬಿಟ್ಟನಲ್ಲಾ! ಏನು ಮಾಣೀ, ಶಾಂತಿ ಮಾಡಲು ಕಲಿತಿರಾ? ಇಷ್ಟು ಬೇಗದಲ್ಲಿ ಪೂಜೆಗೀಜೆಯೆಲ್ಲಾ ಬಂದಿತೆ?" ಎಂದು ಪ್ರಶ್ನೆ ಮಾಡಿದಳು.

"ಓ, ಆ ಪೂಜೆಯೆಲ್ಲಾ ನನಗೆ ಗೊತ್ತೇಯಿದೆ ಮೂಕಮ್ಮೋ" ಎಂದ ತಿಮ್ಮ.

"ಮತ್ತೆ ಇವತ್ತು ಶನಿವಾರ ಅಂದುಕೊಂಡು ಬಂದಿರಾ? ಹೋದ ಶನಿವಾರ ನೀವು ಬಾರದ್ದು ನೋಡಿ, ಅಲ್ಲೇ ಎಣ್ಣೆ ಹಾಕಿ ಸ್ನಾನ ಮಾಡಿದಿರಿ ಅಂದುಕೊಂಡೆವು. ಪೋತಿಗಳು ಎಣ್ಣೆ ಗೀಗೆ ಎಲ್ಲಾ ಕೊಟ್ಟರೆ?" ಕೇಳಿದಳು ಮೂಕಮ್ಮ.

ತಿಮ್ಮನಿಗೆ ಅಂಬಲದಲ್ಲಿರುವಷ್ಟು ಏನೋ ಓದಿಬಿಟ್ಟವನ ಹಾಗಾಗಿ ವಾರ ವಾರ ಅಭ್ಯಂಜನ ಮಾಡುವುದರ ನೆನಪೇ ಬರಲಿಲ್ಲ. "ಓ! ಅದೆಲ್ಲಾ ಯಾರಿಗೆ ನೆನಪಿತ್ತು!" ಅಂದ.

"ಯಾಕೆ? ಪೋತಿಗಳು ಶನಿವಾರ ಶನಿವಾರ ಎಣ್ಣೆ ಹಾಕಿ ಮೀಯುವುದಿಲ್ಲವೇ?"

"ಅದೇನೂ ಇರುವ ಹಾಗೆ ಕಾಣಲಿಲ್ಲ ಮೂಕಮ್ಮ"

"ಓಹೋ! ಶಾಂತಿ ಎಷ್ಟೇ ವರೆಗೆ ಬಂತು ನಿಮಗೆ?"

"ಅಲ್ಲಿಯ ಶಾಂತಿಯೆಲ್ಲಾ ನನಗೆ ಬರುವಂಥಾದ್ದೇ. ಹೊಸತಾಗಿ ಕಲಿಯುವಂಥಾದ್ದೇನೂ ಕಾಣಲಿಲ್ಲ. ನಾನು ಈ ಪುಸ್ತಕದಲ್ಲಿ ಬರೆದುಕೊಂಡು ಕಲಿತಿರುವ ಮಂತ್ರಗಳ ಹೊರತು ಹೊಸ ಮಂತ್ರವೇನೂ ಇಲ್ಲವಂತೆ. ಕ್ರಮಗಳೂ ಅಷ್ಟೆ. ಎಲ್ಲಾ ನನಗೆ ಗೊತ್ತಿದ್ದದ್ದೇ. ಅದಕ್ಕೆ ನಾನು ಹೋಗುತ್ತೇನೆ ಅಂತ ಹೇಳಿ ಬಂದುಬಿಟ್ಟೆ" ಎಂದ ತಿಮ್ಮ.

"ನನಗೊತ್ತಿತ್ತು. ಈ ಮಾಣಿಗೆ ಎಲ್ಲಾ ಮಂತ್ರಗಳೂ ಗೊತ್ತುಂಟೂ ಅಂತ. ಅಸಲು ಪೋತಿಗಳೇ ಈ ಮಾಣೀ ಹತ್ರ ಮಂತ್ರ ಕಲೀಬೇಕಾದೀತು. ಆ ಪೋತಿ ಬಹಳ ಮೋಸದವ ಅಂತ ಹೇಳ್ತಾರೆ. ಅತ ಮಂತ್ರ ಹೇಳಿ ಎಲ್ಲಿ ಪೂಜೆ ಮಾಡ್ತಾನೆ? ಎಲ್ಲಾ ತಂತ್ರ. ತಂತ್ರ, ಅಲ್ಲವೇ ಮಾಣೀ?" ಎಂದು ಮೂಕಮ್ಮ ಹೇಳಿದಾಗ ತಿಮ್ಮ ತಲೆಯಾಡಿಸುತ್ತ ನಕ್ಕ.

"ಅಯ್ಯೋ! ಬ್ರಾಹ್ಮಣಂಗೆ ಹಾಸ್ಯ ಮಾಡಿದೆನಲ್ಲ! ತಪ್ಪು ತಪ್ಪು!" ಎಂದು ಮೂಕಮ್ಮ ತನಗೆ ತಾನೇ ಹೇಳಿಕೊಂಡು ಕಣ್ಣು ಮುಚ್ಚಿ ಕೈಮುಗಿದು ಮೇಲ್ಮೊಗ ಮಾಡಿ "ಕ್ಷಮಿಸ್ಬೇಕೇ ಭಗವಾನೇ!" ಎಂದು ಗಲ್ಲ ಬಡಿದುಕೊಂಡಳು.

"ನಿಮ್ಮ ಅಣ್ಣ ಭಾಗವತರು ಮೊನ್ನೆ ಬಂದಿದ್ದರು ಅವರು. ಇನ್ನೊಂದು ಹದಿನೈದು ದಿವಸಗಳಲ್ಲಿ ಊರಿಗೆ ಹೋಗುತ್ತಾರಂತೆ. ನೀವು ಇಲ್ಲಿಗೆ ಬಂದು ಒಂದು ವರ್ಷಕ್ಕೆ ಮೇಲೆ ಆಯಿತಲ್ಲಾ. ನಿಮ್ಮ ತಾಯಿಗೆ ನಿಮ್ಮನ್ನು ನೋಡಬೇಕಂತ ಇದ್ದೀತು ಪಾಪ. ನಿಮಗೂ ತಾಯೀನ ನೋಡಬೇಕಂತ ಇದ್ದೀತಲ್ಲವೇ ಮಾಣೀ? ನಿಮ್ಮ ತಂದೆಯ ವೈದೀಕವೂ ಹತ್ರ ಬಂತಂತೆ. ಊರಿನಲ್ಲೇ ಮಾಡಬೇಕೂ ಅಂತ ನಿಮ್ಮಮ್ಮ ಕಾಗದ ಹಾಕಿದ್ದಾರಂತೆ. ಹೋಗಿ ಬನ್ನಿ ಮಾಣೀ. ಆ ಮೇಲೆ ನಿಮ್ಮನ್ನು ನನ್ನ ಮಗಳ ಜತೆಯಲ್ಲಿ ಎಡಂಗಳೂ ರಾಜರಲ್ಲಿಗೆ ಕಳುಹಿಸಿ ಕೊಡುತ್ತೇನೆ. ಅವರು ನಿಮಗೆ ತಿಂಗಳಿಗೆ ಆರು ರೂಪಾಯಿ ಸಂಬಳ ಕೊಡ್ತಾರೆ. ಈ ಮಾತು ಭಾಗವತರ ಹತ್ರವೂ ಹೇಳಿದ್ದೇವೆ. ಇಲ್ಲಿ ಹೇಗೂ ನಮ್ಮ ಸ್ವಂತ ಗುಂಡಾಭಟ್ಟರು ಬಂದಿದ್ದಾರಲ್ಲ? ಎಲ್ಲರಿಗೂ ಅವರೇ ನಿಮಿಷ ಮಾತ್ರದಲ್ಲಿ ಅಡಿಗೇ ಮಾಡಿಬಿಡುತ್ತಾರೆ" ಎಂದಳು ಮೂಕಮ್ಮ.

ಈ ಮಾತನ್ನು ಕೇಳಿ ತಿಮ್ಮನಿಗೊಂದು ಅಪೂರ್ವ ಸಂತೋಷವಿದ್ದಿತು—ಬೇರೆ ಕಡೆಯಲ್ಲಿ ಕೆಲಸಕ್ಕೆ ಹೋಗಬೇಕಾಯಿತೆಂಬುದಕ್ಕಲ್ಲ, ಊರಿಗೆ ಹೋಗುವ ಸಂದರ್ಭ ಬಂದುದಕ್ಕೆ. ಅದೂ ಈ ಸಾರಿಯ ವೈದಿಕಕ್ಕೆ ಹೋಗುವುದು. ಕಳೆದ ವರ್ಷದ ವರ್ಷಾಂತಿಕವನ್ನು ಮುದ್ರಾಮಣ್ಣ ಅಂಬಲದ ಕೆರೆಯ ಹತ್ತಿರ ಬ್ರಾಹ್ಮಣನಿಗೆ ಅಕ್ಕೀ ದಾನ ಕೊಡಿಸಿ ಮುಗಿಯಿಸಿದ್ದ. ಬ್ರಾಹ್ಮಣ ಭೋಜನವಿರಲಿಲ್ಲ, ಗದ್ದಲವಿರಲಿಲ್ಲ; ಹೋಮವಿಲ್ಲ ಹೊಗೆಯಿಲ್ಲ ಎಲ್ಲಾ ಒಂದು ಮೂರು ರೂಪಾಯಿಯೊಳಗೇ ಮುಗಿದಿತ್ತು. ಆ ವಿವರಗಳನ್ನೇ ಅಣ್ಣನೇ ಜಲಜಮ್ಮನಿಗೆ ಬರೆದು ತಿಳಿಸಿದ್ದ—"ವರ್ಷಾಂತಿಕ ಸಕ್ರಮವಾಗಿ ಮಾಡಿಸಿದ್ದೇನೆ" ಅಂತ. ಅದು ವರೆಗೂ ತಿಮ್ಮನ ವಿಷಯವಾಗಿ ಊರಿಗೆ ಕಾಗದ ಬರೆಯುವುದಲ್ಲ ಅಣ್ಣನೇ. ತಾಯಿಯೂ ಅಣ್ಣನಿಗೇ ತಿಮ್ಮನ ವಿಷಯವಾಗಿ ಬರೆಯಿಸುವಳು. ತಿಮ್ಮನು ಈ ವರೆಗೆ ಸ್ವಂತವಾಗಿ ತಾಯಿಗೆ ಕಾಗದ ಬರೆದಿರಲಿಲ್ಲ.

ಒಂದು ವರ್ಷದ ವರೆಗೆ ಅಡಗಿ ಹೋಗಿದ್ದ ಊರು, ತಾಯಿ, ತಮ್ಮ, ತಂಗಿ, ಮನೆ, ನಾಯಿ ಮೊದಲಾದುವೆಲ್ಲಾ ನೆನಪಾಗಿ, ಯಾವಾಗ ಊರಿಗೆ ಹೊರಡುವ ದಿನ ಹತ್ತಿರ ಬಂದೀತು ಎಂದು ತಿಮ್ಮನ ಹೃದಯ ತವಕಗೊಳ್ಳತೊಡಗಿತು.

ಬಂತು, ಬಂತು; ಆ ದಿನವು ಬಂತು. ಕರೆದುಕೊಂಡು ಹೋಗಲು ದೊಡ್ಡಣ್ಣ ಬಂದ. ಅರಸುಗಳು ತಿಮ್ಮನಿಗೆ ಒಂದು ಜತೆ ಹೊಸ ಪಂಚೆ ಕೊಟ್ಟರು.

ತಿಮ್ಮ ಊರಿಗೆ ಹೋದ ಮೇಲೆ ಮತ್ತೆ ಅಲ್ಲಿಗೆ ಬರುವುದಿಲ್ಲವೆಂಬ ಸುದ್ದಿಯನ್ನು ಅಣ್ಣ ತಿಮ್ಮನಿಗೂ ಮೂಕಮ್ಮಗೂ ತಿಳಿಸಿದ. ತಮ್ಮೂರಿನವರೇ ಆದ ಶ್ರೀಮಂತ ಮನೆತನದ ಗೋವರ್ಧನರಾವ್ ಎಂಬವರು ಸರಕಾರಿ ಡಾಕ್ಟರಾಗಿದ್ದಾರೆಂದೂ ಅವರಿಗೆ ಮಲೆಯಾಳದ "ಸೊನ್ನಾನಕ್ಕಾಡು" ಎಂಬಲ್ಲಿಗೆ ವರ್ಗವಾಗಿದೆಯೆಂದೂ, ಗಂಡ ಹೆಂಡತಿ ಎರಡು ಮಕ್ಕಳು ಇರುವರೆಂದೂ, ತಿಮ್ಮನಿಗೆ ಅವರು ಎಂಟು ರೂಪಾಯಿ ಸಂಬಳ ಕೊಡುವುದಾಗಿ ಮಾತಾಡಿದ್ದೇನೆಂದೂ ಮುದ್ರಾಮ ತಿಳಿಸಿದ. ಸಣ್ಣ ಸಂಸಾರಕ್ಕೆ ಅಡಿಗೆ ಮಾಡಿಹಾಕುವುದು ಬಹು ಸುಲಭವೆಂದೂ ತಿಮ್ಮನಿಗೆ ಹೇಳಿ ಒಪ್ಪಿಸಿದ.

ಹೇಗೂ ಪರವೂರ ಜೀವನ; ಎಲ್ಲಿಯಾದರೇನು ಎಂದುಕೊಂಡ ತಿಮ್ಮ. ಸದ್ಯ ಗೋವರ್ಧನರಾಯರು ಒಂದು ತಿಂಗಳ ರಜೆಯಲ್ಲಿ ಊರಲ್ಲಿದ್ದಾರೆಂದೂ, ತಿಮ್ಮ ಊರಿಗೆ ಹೋದ ಮೇಲೆ ಅಲ್ಲಿಂದ ಅವರ ಜತೆಯಲ್ಲಿ ಸೊನ್ನಾನಕ್ಕಾಡಿಗೆ ಹೋಗಬೇಕೆಂದೂ ಗೊತ್ತಾಯಿತು. ಇದೆಲ್ಲ ಅಣ್ಣ ಪತ್ರ ಮುಖಾಂತರವೇ ತಿಮ್ಮನಿಗಾಗಿ ಮಾಡಿದ ಕೆಲಸಗಳು

ಹೀಗೆ ಈ ಸಾರಿ ಅರಸುಗಳ ಮನೆಯಿಂದ ಹೊರಟುಹೋಗುವ ತಿಮ್ಮ ಮಾಣಿ ಮತ್ತೆ ಅಲ್ಲಿಗೆ ಬರುವುದಿಲ್ಲ. ಅದಕ್ಕಾಗಿ ಹೋಗುವ ಮುಂಚಿನ ದಿನ ರಾತ್ರಿ ಬಹು ಹೊತ್ತಿನವರೆಗೆ ಕಾಸ್ಲೇಮಗಳೂ, ಕುಟ್ಟಿಪ್ಪೆಯೂ ತಿಮ್ಮನೊಂದಿಗೆ ಮಾತಾಡಿದ್ದೇ ಮಾತಾಡಿದ್ದು. ತಿಮ್ಮನೊತ್ತ ಮೊದಲು ಅಡಿಗೇ ಕೆಲಸ ಕಲಿತದ್ದು ಅಲ್ಲೇ. ಮುಂದೆ ಕ್ರಮೇಣ ಅವನು ದೊಡ್ಡವನಾದಂತೆ, ಅರಸುಗಳನ್ನೂ, ಮೂಕಮ್ಮನನ್ನೂ ಕಾಸ್ಲೇಮು ಮೊದಲಾದವರನ್ನೂ ಮರೆಯಬಹುದು. ಹಾಗೆ ಅವನು ಕೊನೆಯವರೆಗೂ ಮರೆಯದ ಹಾಗೆ ಒಂದು ಜ್ಞಾಪಕ ಚಿಹ್ನೆ ಹಾಕಬೇಕು ಎಂದು ಎಲ್ಲರೂ ತೀರ್ಮಾನಿಸಿಕೊಂಡರು.

ಅದೇನೆಂದರೆ, ಒಂದು ಕಂಗಿನ ಮಡಲಿನ ಒಣ ಕಡ್ಡಿಯನ್ನು ದೀಪದಲ್ಲಿ ಹಿಡಿದು ಅದು ಒಂದಿಂಚು ಉದ್ದದ ವರೆಗೆ ಸುಟ್ಟ ಕೂಡಲೇ, ಬೂದಿಯಾಗುವ ಮೊದಲು ಅದನ್ನು ಚುಂ ಅಂತ ನೀರಿನಲ್ಲಿ ಮುಳುಗಿಸುವುದು. ಕೂಡಲೆ ಅದು ಕರಕಡ್ಡಿಯಾಗುತ್ತೆ. ಆ ಒಂದಿಂಚು ಉದ್ದದ ಕರಿಕಡ್ಡಿಯನ್ನು ತಿಮ್ಮನ ಎಡಗೈಯ ಮಣಿಗಂಟಿನ ಹತ್ತಿರ ಒತ್ತಿ ನಿಲ್ಲಿಸಿ, ಅದರ ತಲೆಗೆ ಮತ್ತೊಮ್ಮೆ ಬೆಂಕಿ ತಾಗಿಸಿ ನೋಡುತ್ತಾ

ಇರಲು ಅದು ಬೂದಿಯಾಗುತ್ತಾ ಬೆಂಕಿ ಕೆಳತನಕ ಬಂದು ಚರ್ಮವನ್ನು ಚುರುಕ್ಕನೆ ಚುಚ್ಚಿ ನಂದಿ ಹೋಗುತ್ತದೆ. ಆ ಸ್ಥಳದಲ್ಲಿ ಸಣ್ಣ ಗುಳ್ಳೆ ಏಳುತ್ತದೆ. ಅದೇ ಜ್ಞಾಪಕ ಚಿಹ್ನೆ. ಮತ್ತೆ ಅವನು ಸಾಯುವ ವರೆಗೂ ಆ ಸ್ಥಳದಲ್ಲಿ ಪುಟ್ಟ ವೃತ್ತಾಕಾರದಲ್ಲಿ ರೋಮ ನಾಶವಾಗಿ ಗುರುತು ಹಾಗೇ ಸ್ಥಿರವಾಗಿರುತ್ತೆ. ಹೀಗೆ ತಿಮ್ಮನ ಕೈಗೆ ಕರಿ ಕಡ್ಡಿಯನ್ನು ಕಾಯಿಸಿ ಗುರುತು ಮಾಡಿದರು.

ತಿಮ್ಮನನ್ನು ಅವರೂ ಮರೆಯದ ಹಾಗೆ ತಿಮ್ಮ ಕುಟ್ಟೆಪ್ಪೆಯ ಕೈಯಲ್ಲಿಯೂ, ಎಳೆಯ ಕುನ್ನೀಮಿಯ ಕೈಯಲ್ಲಿಯೂ ಕರಿ ಕಡ್ಡಿಯನ್ನು ಕುತ್ತಿ ಕಾಯಿಸಿಬಿಟ್ಟನು. ಆಗ ನಗುತ್ತಾ ಅನುಭವಿಸಿದ ಚುರುಕ್ಕೆಂಬ ನೋವು ನೋವಿನಂತೆ ಯಾರಿಗೂ ಕಾಣಿಸಲಿಲ್ಲ.

೧೧

ಊರಿಗೆ ಬಂದ ತಿಮ್ಮನಿಗೆ ಸಮಯ ಹೋಗುವುದೇ ತಿಳಿಯದಷ್ಟು ಸಡಗರವೆನಿಸಿತು. ತಂದೆಯ ವೈದಿಕ ಶಾಸ್ತ್ರೀಯವಾಗಿ ನಡೆಯಿತು. ತೀರ ಹತ್ತಿರದವರಾದ ೫ ಜನರು ಊಟಕ್ಕೆ ಬಂದಿದ್ದ ಆ ವೈದಿಕ ಬಹಳ ಗೌಜಿಯ ಸಮಾರಾಧನೆಯಂತೆ ತೋರಿತು. ಹೋದ ಸಾರಿಯ ವರ್ಷಾಂತಿಕ ಬಹಳ ಗದ್ದಲ ಗೌಜಿಯಿಂದ ನಡೆಯಬೇಕಿತ್ತು ಅದು ಕೆರೆಯ ಬದಿಯಲ್ಲಿ ಬ್ರಾಹ್ಮಣನಿಗೆ ಅಕ್ಕಿದಾನ ಕೊಡುವುದರಲ್ಲಿ ಮುಗಿಸಿದ ಕತೆಯನ್ನು ತಿಮ್ಮನ ಬಾಯಿಯಿಂದ ಕೇಳಿ ಜಲಜಮ್ಮನಿಗೆ ಬಹಳ ದುಃಖವಾಯಿತು "ಕ್ರಮವಾಗಿ ಮಾಡಿಸಿದ್ದೇನೆ" ಅಂತ ಮುದ್ದಾಮಣ್ಣ ಬರೆದುದರ ಅರ್ಥ ಅದೇ ಎಂದು ಈಗ ತಿಳಿಯಿತು. ನಿಜವೇ ಗೌಜಿಯಿಂದ ಮಾಡಲು ಹಣ ಖರ್ಚು ಮಾಡುವುದೆಲ್ಲಿಂದ?

ಇನ್ನು ಹದಿನೈದೇ ದಿನದಲ್ಲಿ ತಿಮ್ಮನು ಡಾಕ್ಟರ್ ಗೋವರ್ಧನರಾಯರೊಂದಿಗೆ ಹೋಗಬೇಕಾದುದರಿಂದ ತಾಯಿಗೆ ಮಗನೆಂದರೆ ನೆಂಟನ ಹಾಗೆ, ಅತಿಥಿಯ ಹಾಗೆ ಆದನು. ಹುಟ್ಟಿದೂರು ಅವನಿಗೊಂದು ವಿಹಾರ ಸ್ಥಾನವೆನಿಸಿತು. ತಾಯಿಮಗಂದಿಗೆ ಮಾತಾಡಿಕೊಂಡಷ್ಟು ಸಾಲದು. ಮನೆ ರಿಪೇರಿ, ಕಟ್ಟಿಗೆ ಬಿದಿರು ಹಾಕಿದ್ದು, ಮನೆಗೊಂದು ಹಸುವನ್ನು ಕೊಂಡುಕೊಳ್ಳಬೇಕಾಗಿ ಬಂದದ್ದು, ಹಿಂದಿನ ನಾಯಿ ರಸ್ತೆಯಲ್ಲಿ ಮೋಟಾರಿನಡಿಗೆ ಬಿದ್ದು ಸತ್ತದ್ದು, ಕಟ್ಟಪುಣಿಗೆ ಮಣ್ಣು ಹಾಕಿಸಿದ್ದು, ಹೀಗೆ ಊರಲ್ಲಿ ನಡೆದ ಎಷ್ಟೋ ಸುಖದುಃಖಗಳನ್ನು ತಾಯಿ ಮಗನಿಗೆ ಹೇಳಿದಳು.

ತಿಮ್ಮ ತಾನು ಕಲಿತ ಶಾಲೆಗೊಮ್ಮೆ ಹೋಗಿ ತಿರುಗಾಡಿಕೊಂಡು ಬಂದನು. ಕನ್ನಡ ಮಾಸ್ತರೂ ಮತ್ತೆ ಕೆಲವರೂ ಅವನ ಕುಶಲವನ್ನು ವಿಚಾರಿಸಿದರು. "ಕಲಿತದ್ದನ್ನು ಮರೆಯದೆ ಓದುತ್ತಾ ಬರೆಯುತ್ತ ಮುಂದುವರಿಸಿಕೊಂಡಿರು. ಅಭ್ಯಾಸದಿಂದ ದೊಡ್ಡ ಶಕ್ತಿ ಹುಟ್ಟಿಕೊಳ್ಳುತ್ತದೆ" ಎಂದು ಜೋಗಂಬಳಿ ವೆಂಕಟರಾಯ ಮಾಸ್ತರು ತಿಮ್ಮನ ಬೆನ್ನು ತಟ್ಟಿದರು.

ಅಲ್ಲಿ ಹಿಂದೆ ಅವನ ಗೆಳೆಯರಾಗಿದ್ದ ಕೆಲವರು ಮೇಲಿನ ಕ್ಲಾಸಿನಲ್ಲಿ ಕಲಿಯುತ್ತಿದ್ದರು. ಆ ಗೆಳೆಯರು ತಮ್ಮತಮ್ಮೊಳಗೆ ಇಂಗ್ಲೀಷಿನಲ್ಲಿ ಮಾತಾಡಿಕೊಳ್ಳುವುದನ್ನು ನೋಡಿ, ತಿಮ್ಮನಿಗೆ ಆಶ್ಚರ್ಯವೂ ಲಜ್ಜೆಯೂ ಚಿಂತೆಯೂ ಉಂಟಾಯಿತು. ತನ್ನ ಸಹಪಾಠಿಗಳಾಗಿದ್ದ ಆ ವೆಂಕಪ್ಪ, ಕೋಚಪ್ಪಂದಿರು ಎಷ್ಟು ಚೆನ್ನಾಗಿ ಇಂಗ್ಲೀಷು ಮಾತಾಡ್ತಾರೆ! ಆರನೇ ಕ್ಲಾಸಂತೆ, ತಾನೂ ಶಾಲೆಗೆ ಹೋಗಿರುತ್ತಿದ್ದರೆ ಈ ಅವರೊಂದಿಗೆ ಸರಿಸಮಾನನಾಗಿ ಕೂಡಬಹುದಿತ್ತಲ್ಲ! ಅಯ್ಯೋ!

ತಿಮ್ಮನಿಗೇನೋ ಗಂಟಲು ಒತ್ತಿಕೊಂಡ ಹಾಗಾಗಿ ಮನೆಗೆ ಬಂದು ತಾಯಿಯ ಹತ್ತಿರ, "ಇನ್ನು ನಾನು ಶಾಲೆಗೆ ಹೋಗಿ ಕಲಿಯಲಿಕ್ಕೆ ಆಗುವುದಿಲ್ಲವೇ ಅಮ್ಮಾ?" ಎಂದು ಕೇಳಿದ.

"ಇನ್ನು ಹ್ಯಾಗಾಗುತ್ತೆ ಮಗಾ? ಸುಮಾರು ಒಂದು ವರ್ಷಕ್ಕೂ ಹೆಚ್ಚು ಕಾಲ ಶಾಲೆ ಬಿಟ್ಟಾಯ್ತು. ಮತ್ತೆ ನಾಲ್ಕನೇ ಕ್ಲಾಸಿಗೆ ಸೇರಿದರೆ ನಾಚಿಗೆಯಲ್ಲವ? ಅಲ್ಲದೆ ಡಾಕ್ಟರ್ ಗೋವರ್ಧನರಾಯರ ಕೈಯಿಂದ ನಿನ್ನ ಸಂಬಳದಲ್ಲಿ ಮುರಿದುಕೊಳ್ಳಲಿಕ್ಕೆ ಹೇಳಿ ಮುಂದಾಗಿ ನೂರುರೂಪಾಯಿ ತೆಗೊಂಡಾಯಿತಲ್ಲಪ್ಪ. ಎಲ್ಲಾ ಮುದ್ದಾಮನೇ ಮಾಡಿದ ಏರ್ಪಾಡು. ಈಗ ನೀನು ಶಾಲೆಗೆ ಸೇರುವುದಾದರೆ ಅವರಿಗೆ ಹಣ ವಾಪಾಸು ಕೊಡಬೇಕಲ್ಲ? ಎಲ್ಲಿಂದ ಕೊಡುವುದು ಹೇಳು? ಮುಖ್ಯ ನೀನು ಕಲಿತದ್ದನ್ನು ಮರೆಯದೆ ಅಭಿವೃದ್ಧಿ ಮಾಡಿಕೊಂಡೇ ಬಾಪ್ಪ. ಕಲಿತು ಗುಡ್ಡೆ ಹಾಕಿದವರೂ ಕೆಲಸ ತಾನೇ ಮಾಡಬೇಕು? ನೀನು ಸಹಾ ಈಗ ಕೆಲಸಕ್ಕೆ ತಾನೇ ಹೋಗುವುದು? ನಿನ್ನ ಕೆಲಸ ಡಾಕ್ಟರ್ರಿಗೆ ಹಿಡಿಸಿಬಿಟ್ಟರೆ ಮುಂದೆ ಸಂಬಳಾನೂ ಹೆಚ್ಚು ಮಾಡ್ತಾರಂತೆ. ಕಂಪೌಂಡ್ರಿಕೇನೂ ಕಲೀಬೋದೂ ಅಂತ ಅಂದಿದಾರಂತೆ. ಹಾಗೇ ಕುಶಾಲಾಗು ಮಗಾ" ಎಂದು ಹೇಳಿ ಸಮಾಧಾನಪಡಿಸಿದಳು ಜಲಜಮ್ಮ.

ಈ ವಿಷಯವನ್ನು ಜಲಜಮ್ಮ ಮುದ್ದಾಮಣ್ಣನೊಂದಿಗೂ ಹೇಳಿದಳು. ಅದಕ್ಕೆ ಅಣ್ಣ "ಅದನ್ನೆಲ್ಲ ನಾನು ಡಾಕ್ಟರ್ ಗೋವರ್ಧನರಾಯರ ಹತ್ತಿರ ಹೇಳಿದ್ದೇನಲ್ಲ. ಇವನನ್ನು ಹೇಗೆ ಮುಂದಕ್ಕೆ ತರಬೇಕು ಎಂಬುದೆಲ್ಲ ಅವರೇ ಕಂಡುಹಿಡಿದು ನಡೆಸಿಕೊಂಡು ಹೋಗ್ತಾರೆ. ಐದು ವರ್ಷದೊಳಗೆ ಇವನು ಅಲ್ಲಿ ಅಡಿಗೆ ಮಾಡಿಕೊಂಡೇ ಕಂಪೌಂಡರ್ ಆಗಿಬಿಡ್ತಾನೆ ನೋಡುಬೇಕಾದರೆ. ಅದಕ್ಕೆ ಬೇಕಾದ ಇಂಗ್ಲೀಷನ್ನೆಲ್ಲ ಅವರೇ ಹೇಳಿಕೊಡ್ತೇನೆ ಅಂದಿದಾರೆ. ಇದನ್ನೆಲ್ಲ ಆಲೋಚನೆ ಮಾಡಿಕೊಂಡೇ ಇವನನ್ನು ಅರಸುಗಳ ಮನೆಯಿಂದ ತಪ್ಪಿಸಿದ್ದು. ಎರಡು ಹೊತ್ತು ಬಂದಿಷ್ಟು ಬೇಯಿಸಿ ಹಾಕಲಿಕ್ಕೆ ಇಪ್ಪತ್ತಾಲ್ಕು ಗಂಟೆಯೂ ಬೇಕೇನು? ಉಳಿದ ಸಮಯದಲ್ಲಿ ಓದಲಿ, ಬರೆಯಲಿ, ಕಲಿಯಲಿ. ಮುಖ್ಯವಾಗಿ ಅವರು ಸಮ್ಮಜನ" ಎಂದು ತಿಮ್ಮನ ಇದಿರೇ ಜಲಜಮ್ಮನೊಂದಿಗೆ ಹೇಳಿದ.

ಮನಸ್ಸು ಬೇರೊಂದಕ್ಕಿದ್ದರೂ ವಿಧಿ ತಿಮ್ಮನನ್ನು ಅಡಿಗೆ ಮನೆಗೇ ಎಳೆದೊಯ್ಯುತ್ತಿದ್ದಿತು. ಅಣ್ಣ ತಿಮ್ಮನನ್ನು ಡಾಕ್ಟರ್ ಗೋವರ್ಧನರಾಯರಲ್ಲಿಗೂ ಕರೆದುಕೊಂಡು ಹೋಗಿ ಅವರ ಪರಿಚಯವನ್ನೂ ಮಾಡಿಸಿದ

ಡಾಕ್ಟರ್ ಗೋವರ್ಧನರಾಯರು ಹೆಚ್ಚು ಮಾತಾಡುವವರಲ್ಲ. ಬಹಳ ಗಂಭೀರ ಸ್ವಭಾವದವರು. ಅವರ ಹೆಂಡತಿ ಬಹಳ ಮಧುರವಾಗಿ ತಿಮ್ಮನೊಡನೆ ಮಾತಾಡಿದಳು. ಅವರು ಹೊರಡುವ ದಿನವೂ ಹತ್ತಿರ ಹತ್ತಿರ ಬರುತ್ತಿದ್ದಿತು.

ತಿಮ್ಮ ಊರಲ್ಲಿ ನೋಡುವವರನ್ನೆಲ್ಲ ನೋಡಿದ. ಅಜ್ಜಿಯ ಮನೆಯಲ್ಲಿಯೂ ಅಣ್ಣನ ಮನೆಯಲ್ಲಿಯೂ ಒಂದೊಂದು ದಿನ ಇದ್ದ. ಪಕ್ರೋಡೆಯಾಯಿತು, ಪಾಯಸವಾಯಿತು; ತಾಯಿ ಅವನಿಗೆ ಪ್ರೀತಿಯ ಗುಳ್ಳದ ಪಲ್ಯ ಮಾಡಿ ಹಾಕಿದ್ದೂ ಆಯಿತು. ಡಾಕ್ಟರ್ ಗೋವರ್ಧನರಾಯರು ಶಿಮೊಗ್ಗೆಯವರೇ ಆದುದರಿಂದ ಇಂತಹ ಗುಳ್ಳದ ಪಲ್ಯ ಅವರಲ್ಲಿಯೂ ಮಾಡುವ ಅವಕಾಶವಿರುವದರಿಂದ ಅದನ್ನು ಮಾಡುವ ಕ್ರಮವನ್ನೆಲ್ಲ ತಾಯಿಯಿಂದ ಕೇಳಿಕೇಳಿ ತಿಳಿದುಕೊಂಡ ತಿಮ್ಮ.

ತಿಮ್ಮ, ತಂಗಿ, ಗೆಳೆಯಂದಿರೊಡನೆ ಆಡಿದ್ದಾಯಿತು. ತಿಮ್ಮ ಅರಸುಗಳ ಮನೆಯಲ್ಲಿ ನಡೆದ ಬಗೆ, ಅಲ್ಲಿಯ ರೀತಿನೀತಿಗಳು, ಕುರ್ಚಿಪ್ಪಳದ ಭೂತದ ಉತ್ಸವ, ಮುಂತಾದವುಗಳ ವಿವರಣೆಗಳನ್ನು ಕೇಳಲು ಎಲ್ಲರೂ ಅವನನ್ನು ಮುತ್ತಿಕೊಂಡೇ ಇದ್ದರು. ಅವನು ಅಲ್ಲಿ ಬರೆದ ಕೆಲವು ಕತೆಗಳನ್ನೂ, ಪದ್ಯಗಳನ್ನೂ, ಚಿತ್ರಗಳನ್ನೂ ಅವನ ಅಭಿಮಾನಿಗಳಿಗೆಲ್ಲ ತೋರಿಸಿ ಮೆಚ್ಚುಗೆ ಪಡೆದ. "ಎಲ್ಲಿ ಇದ್ದರೂ ಕತೆ ಕಟ್ಟೋದು ಚಿತ್ರ ಬರಿಯೋದು ಬಿಡೋದಿಲ್ಲಾಂತ ಕಾಣುತ್ತೆ ಈ ಹುಚ್ಚು ಮಾಣಿ" ಎಂದು ಜಲಜಮ್ಮ ಕಂಬನಿ ತುಂಬಿಕೊಂಡೇ ಉದ್ಗರಿಸಿದಳು. "ಹ್ಯಾಗೋ ದೇವರು ಒಳ್ಳೇದು ಮಾಡ್ಲಿ" ಎಂದಳು ದೊಡ್ಡಮ್ಮ.

ನಿರ್ದಿಷ್ಟ ದಿನದಲ್ಲಿ ಡಾಕ್ಟರ್ ಗೋವರ್ಧನರಾಯರೊಂದಿಗೆ ತಿಮ್ಮನು ರೈಲು ಹತ್ತಿದ. ಈಗ ಅವನು ಹಾಕಿಕೊಂಡ ದುಸ್ತುಗಳು ಡಾಕ್ಟರೇ ಅವನಿಗೆ ಕೊಡಿಸಿದ್ದು. ಹೊಸ ಅಂಗಿ ವಸ್ತ್ರಗಳು ಅವನಿಗೆ ಒಳ್ಳೆಯ ಲಕ್ಷಣವಾಗಿ ಒಪ್ಪಿದವು.

'ಪೊನ್ನಾನಕ್ಕಾಡು' ದಕ್ಷಿಣ ಮಲೆಯಾಳದ ಕೊನೆಯಲ್ಲಿದೆ. ಉತ್ತರ ಮಲೆಯಾಳವನ್ನೂ ಅರಸುಗಳಿರುವ ಊರನ್ನೂ ದಾಟಿಕೊಂಡೇ ರೈಲು ಹೋಯಿತು. ಸಂಜೆಗೆ ರೈಲಿಳಿದ ಮೇಲೆ ಬಸ್ಸು ಹತ್ತಿ ಘಟ್ಟಪ್ರದೇಶದ ಕಡೆಗೆ ಮೂವತ್ತು ಮೈಲು ಸಾಗಿ ಪೊನ್ನಾನಕ್ಕಾಡು ಊರನ್ನು ಮುಟ್ಟಿದ್ದಾಯಿತು

ಅಲ್ಲಿಂದ ಚಾರ್ಜ್ ಕೊಟ್ಟು ಹೊರಟು ಹೋಗುವ ಡಾಕ್ಟರ್ರ ಮನೆಯೇ ಗೋವರ್ಧನರಾಯರಿಗೂ ಆಗುತ್ತದೆಂದು ಮೊದಲು ನಿಶ್ಚಯಿಸಲ್ಪಟ್ಟಿತ್ತು. ಆದರೆ ಆ ಮನೆಗೆ ಬಾಡಿಗೆ ಹೆಚ್ಚು, ಸೌಕರ್ಯ ಕಡಮೆ; ನೆರೆಕರೆಗಳೆಲ್ಲ ಮಾಪಿಳ್ಳೆಯರದು. ಅದಲ್ಲದೇ ಗೋವರ್ಧನರಾಯರಿಗಿಂತ, ಅವರ ಹೆಂಡತಿ ಪದ್ಮಾವತಮ್ಮನಿಗೇ

ಬಹಳ ಗಲೀಜೆನಿಸಿತು. ಅಂತೆಯೇ ಬೇರೆ ಮನೆ ಹುಡುಕಬೇಕಾಯಿತು ಅಷ್ಟಕ್ಕೆ ಜನಾನ ರಾವುಣ್ಣಿ ನಾಯರ್ ಊರೆಲ್ಲ ಗಾಳಿಸಿದ ಸದ್ಭಾವತನ್ನು ನಿಗೊಪ್ಪುವ ಲಕ್ಷಣ ಸೌಕರ್ಯಗಳುಳ್ಳ ಮನೆ ಸುಲಭದಲ್ಲಿ ಸಿಕ್ಕುವಂತಿಲ್ಲ. ರಾವುಣ್ಣಿ ನಾಯರ್ ಒಂದೊಂದೇ ಮನೆಯ ವರ್ಣನೆಯನ್ನು, ಅದರ ಬಾಡಿಗೆಯನ್ನೂ ಹೇಳುತ್ತಿದ್ದಾಗ ಒಂದು ಮನೆಯ ವಿಷಯ ಡಾಕ್ಟರನ್ನು ತುಂಬ ಆಕರ್ಷಿಸಿತು ಆ ಮನೆ ಬಹಳ ಚೆನ್ನಾಗಿತ್ತು. ಅಂಟಿಕೊಂಡ ಹಾಗೆ ನೆರೆಹೊರೆಗಳ ಕಾಟವಿಲ್ಲ. ಮನೆಯ ಸುತ್ತಲೂ ತೆಂಗಿನ ಮರಗಳು ಮುಂದೆ ಅಂಗಳ, ಬಾವಿ. ದನ ಕಟ್ಟಲು ಬೇಕಾದರೆ ಹಟ್ಟಿಯೂ ಇದೆ. ಮನೆಯ ಒಡೆಯ ದಿನಾ ಆ ಮನೆಯನ್ನು ಕಸಗುಡಿಸಿ ಚೊಕ್ಕಟವಾಗಿ ಡುತ್ತಾ ಇದ್ದಾನೆ ತೋಟ ಮನೆ ಎಲ್ಲಾ ಸೇರಿ ಬಾಡಿಗೆ ಬರೇ ಆರೇ ರೂಪಾಯಿ ಅಂತಹ ಮನೆ ಸಿಕ್ಕುವುದು ತನ್ನ ಪುಣ್ಯವೆನ್ನಿಸಿತು ಸದ್ಭಾವತನ್ನನಿಗೆ.

೨೩

ಆದರೆ ಅದು ಬಹಳ ಕಾಲದಿಂದ ಖಾಲಿಯಾಗಿರುವ ಮನೆಯೆಂದು ತಿಳಿದಾಗ. ಗೋವರ್ಧನರಾಯರು ರಾವುಣ್ಣಿ ನಾಯರನ್ನು ಕುರಿತು, "ಅದೇಕೆ ಒಕ್ಕಲಿಲ್ಲದ ಮನೆಯಾಗಿದೆ? ಬಾಡಿಗೆಯೂ ಕಡಿಮೆಯಾಗಿರುವಾಗ? ಅಂತಹ ಮನೆಗೆ ಕಡೇ ಪಕ್ಷ ಹತ್ತು ರೂಪಾಯಿಯಾದರೂ ಬಾಡಿಗೆ ಹೇಳಬೇಕಿತ್ತಲ್ಲಾ?" ಎಂದು ಕೇಳಿದರು

"ಅದರ ವಿಷಯ ಕೂಡಾ ಆ ಮನೆಯ ಯಜಮಾನ ಇದ್ದದ್ದನ್ನೇ ಹೇಳ್ತಾನೆ ಏನೂ ಮುಚ್ಚು ಮರೆ ಮಾಡೋದಿಲ್ಲ ಪಾಪ. ಆ ಮನೆಯಲ್ಲಿ ಪಿಶಾಚಿವುಂಟಂತೆ ಸುಮ್ಮನೆ ಕೊಟ್ರೂ ಬೇಡಾ ಅನ್ನುತ್ತಾರಂತ ಜನ. ನಮಗೆ ಕೂಡಾ ಅವನು ಆರು ರೂಪಾಯಿ ಅಂತ ಹೇಳಿದನೇ ಹೊರತು ಏನೂ ಕೊಟ್ಟರೂ ತಕೊಳ್ತಾನೆ ಮುಖ್ಯವಾಗಿ ಸ್ನಾನ ಸಂಧ್ಯಾ ಜಪ ತಪಗಳನ್ನು ಮಾಡುವ ಬ್ರಾಹ್ಮಣರು ಧೈರ್ಯದಿಂದ ಆ ಮನೆಯಲ್ಲಿ ಇರಬಹುದಂತೆ. ಅಂತಹರ ಸಮೀಪ ಸುಹಾ ಪಿಶಾಚಿ ಬರೋದಿಲ್ಲಂತೆ. ಅಂಥವರ್ಯಾರಿಗೂ ಧೈರ್ಯವಿಲ್ಲದೆ ಹಾಗೆ ಖಾಲಿ ಬಿದ್ದಿದೆ ಮನೆ ಸ್ವತಃ ಯಜಮಾನನೇ ಪ್ರತಿದಿನಾ ಬಂದು ಕಸ ಗಿಸ ಬಳೆದು, ಒಕ್ಕಲಿರುವ ಮನೆಯ ಹಾಗೆ ಮಾಡಿಸುತ್ತಾನೆ ಪಾಪ" ಎಂದ ರಾವುಣ್ಣಿ ನಾಯರ್

"ಹಾಗಾದರೆ ನಮಗೇನೂ ಭಯವಿಲ್ಲಾಂತಾಯಿತು ನಮ್ಮ ಅಪ್ಪ ಅಜ್ಜಂದಿರೆಲ್ಲ ಅತ್ಯಂತ ಕರ್ಮನಿಷ್ಠ ಬ್ರಾಹ್ಮಣರು. ನಾನೂ ಏನೂ ಕಡಿಮೆಯವನಲ್ಲಾಂತ ಇಟ್ಟುಕೋ. ಒಂದಿಷ್ಟು ಇಂಗ್ಲೀಷ್ ಕಲಿತು ಡಾಕ್ಟರಾದರೇನಂತೆ? ಮಂತ್ರಗಳೆಲ್ಲಾ ಗೊತ್ತಿವೆ. ಇನ್ನು ಮೇಲೆ ಸ್ವಲ್ಪ ಸರಿಯಾಗಿಯೇ ಜಪ ತಪ ಮಾಡಿದರಾಯಿತಲ್ಲ? ಅಲ್ಲೊ. ಯಾರಾದರೂ ಪಿಶಾಚಿಯ ಬಾಧೆಯಿಂದ ಸತ್ತಿದ್ದಾರಂತೇನು?" ಕೇಳಿದರು ಡಾಕ್ಟರು.

"ಅದೇನಿಲ್ಲ. ಆರು ವರ್ಷಗಳ ಹಿಂದೆ ಇಲ್ಲೆಲ್ಲಾ ಮಾಪ್ಲಾ ಲಹಳೆ ಆಯಿತಲ್ಲಾ? ಆಗ ಈ ಊರಲ್ಲಿದ್ದವರೆಲ್ಲ ಹೆದರಿ ಓಡಿಹೋದರು. ಆ ಮನೆಯಲ್ಲಿ ಭಾರಿ ಶ್ರೀಮಂತ ಕುಟುಂಬವೊಂದಿತ್ತು. ಅವರೆಲ್ಲ ಓಡಿ ಹೋಗುವಾಗ ಆ ಮನೆಯ ಯಜಮಾನ ಎಲ್ಲವನ್ನೂ ಈಗಿನ ಯಜಮಾನ ಮಂಪಣಿಕ್ಕರನಿಗೆ ಇನ್ನೂರೇ ರೂಪಾಯಿಗೆ ಮಾರಿ ಹೋಗಿಬಿಟ್ಟರಂತೆ ತಾವು ತಿರುಗಿ ಬಂದರೆ ಮತ್ತೆ ತಮಗೆ ಮನೆಯನ್ನು ಒಪ್ಪಿಸಬೇಕು ಅಂತ ಬಾಯ್ಮಾತಿನ ಕರಾರೇನೋ ಇತ್ತಂತೆ. ಆದರೆ ಅವರ್ಯಾರೂ ಬರಲೇ ಇಲ್ಲ. ಅವರ ಶತ್ರುಗಳು ಮಾಪ್ಲಾ ಲಹಳೆಯ ಗಲಾಟೆಯಲ್ಲಿ ಅವರೆಲ್ಲರನ್ನೂ ಕೊಲೆ ಮಾಡಿ ಹಾಕಿಬಿಟ್ಟರು ಅಂತ ಮತ್ತೆ ಗೊತ್ತಾಯಿತು. ಅವರು ಓಡಿ ಹೋಗುವಾಗ ಆ ಮನೆಯ ತೋಟದಲ್ಲೆಲ್ಲೋ ಆಭರಣಗಳನ್ನೆಲ್ಲ ಹುಗಿದಿಟ್ಟಿದ್ದಾರೆಂದು ಪ್ರತೀತಿ. ಈಗ ಮಂಪಣಿಕ್ಕರನೇ ಅದರ ಯಜಮಾನ ಒಂದು ಸಾರಿ ಯಾರೋ ಬಾಡಿಗೆಗೆ ಬಂದು, ಹೆದರಿಕೊಂಡು ಮನೆ ಖಾಲೀ ಮಾಡಿ ಹೊರಟು ಹೋಗಿಬಿಟ್ಟರು. ಅಂದಿನಿಂದ ಆ ಮನೆಗೆ ಬಾಡಿಗೆಗೆ ಹೋಗಲು ಎಲ್ಲರೂ ಹೆದರುತ್ತಾರೆ."

"ಹಾಗಾದರೆ ಅಲ್ಲಿ ತೋಟದಲ್ಲಿ ಅಗೆದರೆ ನಿಧಿ ಸಿಕ್ಕೀತು ಅನ್ನು."

"ಮಂಪಣಿಕ್ಕರ್ ತುಂಬಾ ಅಗೆದು ನೋಡಿದ್ದಾನೆ. ಏನೂ ಸಿಕ್ಕಿಲ್ಲಂತೆ; ಯಾರಿಗೆ ಗೊತ್ತು? ಆ ಹಾಳಾದ ಮಾಪ್ಲಾ ಲಹಳೆಯ ದಿನಗಳಲ್ಲಿ ಈ ಊರೇ ಮುಕ್ಕಾಲು ಪಾಲು ಖಾಲಿ— ಯಾಗಿತ್ತು. ಎಷ್ಟು ಜನರು ಎಲ್ಲೆಲ್ಲಿ ಏನೇನು ಹುಗಿದಿಟ್ಟು ಓಡಿದರೋ! ಬದುಕಿ ಬಂದವರೆಷ್ಟು ಮಂದಿಯೋ?" ಎಂದ ರಾವುಣ್ಣಿ ನಾಯರ್

ಮಾಪ್ಲಾ ಲಹಳೆಯನ್ನು ಕುರಿತು ಡಾಕ್ಟರು ಸಮಾಚಾರ ಕೇಳಿದರು. ಒಂದು ಮಸೀದಿಯ ಹತ್ತಿರ ಹಿಂದುಗಳ ಮದುವೆ ಮೆರವಣಿಗೆ ಹೋದಾಗ ಪ್ರಾರಂಭವಾದ ಗಲಾಟೆ, ಭಯಂಕರ ಹಿಂದು ಮುಸಲ್ಮಾನ್ ವರ್ಣದ್ವೇಷವಾಗಿ ಪರಿಣಮಿಸಿತ್ತು. ಸುಮಾರು ಮಲೆಯಾಳ ದೇಶವನ್ನೆಲ್ಲಾ ಆಕ್ರಮಿಸಿತ್ತು. ಸಿಂತಲ್ಲೇ ಕೊಲೆ, ಚರ್ಮ ಸೀಳುವ, ಕಣ್ಣು ಕೀಳುವ ಚಿತ್ರವಧೆಗಳು. ಪೋಲೀಸು ದಳಕ್ಕೂ ಮಿಲಿಟ್ರೀ ಸೇನೆಗೂ ಆ ಜಗಳವನ್ನಡಗಿಸಲಾಗದೆ ಹೋಗಿ, ಕೊನೆಗೆ ಗೂರ್ಖಾ ಸೇನೆ ಬಂದು ಶಾಂತಪಡಿಸಿತಂತೆ!

ಮಲೆಯಾಳದಲ್ಲಿ ಅದರ ಘೋರ ವರ್ಣನೆಗಳನ್ನು ಹಾಡು ಕಟ್ಟಿ ಹಾಡುತ್ತಿದ್ದರು

ಡಾಕ್ಟರ್ ಗೋವರ್ಧನರಾಯರಿಗೆ ಆ ಮನೆಯ ವಿಷಯವಾಗಿ ಕುತೂಹಲವೆದ್ದಿತು. ಅವರಿಗೆ ಭೂತ ಪಿಶಾಚಿಗಳ ಮೇಲೆ ಸ್ವಲ್ಪವೂ ನಂಬುಗೆಯಿರಲಿಲ್ಲ. "ಅದೆಲ್ಲಾ ಮಾನಸಿಕ ಭ್ರಮೆ. ಭ್ರಮೆ ಹಿಡಿದುಕೊಂಡಿರುವಾಗ ನೆರಳೂ ಭೂತದ ಹಾಗೆ ತೋರುತ್ತದೆ" ಎನ್ನುವವರು. ಅಂದ ಮಾತ್ರಕ್ಕೆ ಅವರು ನಾಸ್ತಿಕರಲ್ಲ. ಮತ ಸಂಪ್ರದಾಯಗಳಲ್ಲಿ ಒಳ್ಳೆಯ ನಿಷ್ಠೆಯುಳ್ಳವರು. ಪುಟ್ಟ ಸಂಪುಷ್ಟ ಸಾಲಿಗ್ರಾಮಗಳೂ ಅವರ ಹತ್ತಿರ ಇವೆ ಕ್ರಮ ತಪ್ಪದೆ ಪೂಜೆ ಮಾಡುತ್ತಾರೆ. ಒಂದು ವೇಳೆ ಭೂತ ಪಿಶಾಚಿಗಳಿದ್ದರೂ ಸರ್ವಶಕ್ತ ದೇವರನ್ನು ನಂಬಿಕೊಂಡಿರುವವರಿಗೆ ಭಯವೇನಿಲ್ಲವೆಂಬುದು ನಿಜವೆಂದೇ ಅವರಿಗೆ ತೋರಿತು

ಅವರ ಮನೋಗತಿಗೆ ತಕ್ಕಂತೆ ಅವರ ಹೆಂಡತಿಯೂ ಇದ್ದುದರಿಂದ, ಅಭಿಪ್ರಾಯಭೇದವೇನೂ ಉಂಟಾಗಲಿಲ್ಲ ಆ ಮನೆಯನ್ನೇ ನಿಷ್ಕರ್ಷೆ ಮಾಡಿಸಿ ಅಲ್ಲಿಗೆ ಬಿಡಾರ ಹೋದರು.

ಮಂಜುಣಿಕ್ಕರನು ಬಹಳ ಸಂತೋಷದಿಂದ ಡಾಕ್ಟರಿಗೆ ಬೇಕಾದ ಎಲ್ಲಾ ಸಹಾಯಗಳನ್ನೂ ಮಾಡಿಕೊಟ್ಟನು.

ತಿಮ್ಮ ಡಾಕ್ಟರ ಕುಟುಂಬಕ್ಕೆ ಹಿಡಿಸುವವನಾಗಿದ್ದ. ಎಲ್ಲಾ ಕೆಲಸಗಳಿಗೂ ಅವನೇ ಮುಂದೆ. ಅಡಿಗೆ, ನೀರು ಕಾಸುವುದು, ತರಕಾರಿ ತರುವುದು, ಬಟ್ಟೆ ಒಗೆಯುವುದು, ಹೀಗೆ ಪ್ರತಿಯೊಂದು ಕೆಲಸವನ್ನೂ ಅವನಿಂದಲೇ ನಗುನಗುತ್ತಾ ಮಾಡಿಬಿಡುವ ಪ್ರಿಯ ಸಾಮರ್ಥ್ಯ ಪದ್ಮಾವತಿಯವರಿಗಿತ್ತು.

ಸುತ್ತಮುತ್ತಲೂ ಮಲಯಾಳೀಮಯವಾದ ಅಲ್ಲಿ, ಅಚ್ಚ ಕನ್ನಡಿಗರಾದ ಡಾಕ್ಟರ ಹೆಂಡತಿಗೆ ಕಥೆ ಕಾದಂಬರಿಗಳನ್ನೋದುವ ಹುಚ್ಚು ತುಂಬ ಇತ್ತು. ಅಂತಯೇ ಅವರು "ಸದ್ಬೋಧ ಚಂದ್ರಿಕೆ" "ಕರ್ಮವೀರ" "ರಾಷ್ಟ್ರಬಂಧು" ಮೊದಲಾದ ಪತ್ರಿಕೆಗಳನ್ನು ತರಿಸುತ್ತಿದ್ದರು. ಆ ಕಾಲದಲ್ಲಿ ವಾಚನಾಭಿರುಚಿಗೆ ಆಸಕ್ತಿ ಹೆಚ್ಚಿಸುವ "ಗಳಗನಾಥ" "ವೆಂಕಟಾಚಾರ್ಯ"ರ ಕಾದಂಬರಿಗಳನ್ನು ತಿಮ್ಮನೂ ಅಲ್ಲಿ ಓದಿ ತಲ್ಲೀನನಾದ. ಕಾದಂಬರಿಯೆಂದರೇನೆಂಬುದನ್ನೇ ಕಂಡರಿಯದ ಅವನಿಗೆ ಅವುಗಳ ಸ್ವಾರಸ್ಯ ಅಂಟಿಕೊಂಡಿತು. ಕಲ್ಪನಾಮಾನಸನಾದ ಅವನಿಗೆ ಅವುಗಳ ತಂತ್ರ, ನಿರೂಪಣಾವಿಧಾನಗಳು ಚಾಲನೆ ಕೊಟ್ಟುವು. ಪತ್ರಿಕೆಗಳಲ್ಲಿಯ ವಿವಿಧ ರಚನೆಗಳನ್ನು ಓದುತ್ತ ತಾನೂ ಬರೆಯತೊಡಗಿದನು. ಕೆಲಸ ಮುಗಿದಕೂಡಲೇ ಓದುವುದು ಬರೆಯುವುದೇ ತಿಮ್ಮನ ಮುಖ್ಯ ಕೆಲಸವಾಯಿತು. ಅದಕ್ಕೆಲ್ಲ ಪ್ರೋತ್ಸಾಹ ಕೊಡುವವರಾಗಿಯೇ ಇದ್ದರು ಡಾಕ್ಟರೂ ಪದ್ಮಾವತಮ್ಮನೂ.

ಡಾಕ್ಟರು ದಿನಾ "ಹಿಂದೂ" ತರಿಸುವರು. ವಾರವಾರವೂ "ಟೈಮ್ಸ್ ಆಫ್ ಇಂಡಿಯಾ ಇಲಸ್ಟ್ರೇಟೆಡ್ ವೀಕ್ಲಿ" ಬರುತ್ತಿತ್ತು. ಅವುಗಳಲ್ಲಿರುವ ಪ್ರಕಟನಗಳ ಚಿತ್ರಗಳನ್ನೂ, ಫೋಟೋಗಳನ್ನೂ ನೋಡಿ ಪ್ರತಿಕೃತಿ ಮಾಡುವುದೂ ತಿಮ್ಮನ ಉತ್ಸಾಹದ ಪ್ರತ್ಯೇಕವಾದೊಂದು ಕಾರ್ಯವಾಯಿತು. ಡಾಕ್ಟರು ಈಸೀ ಚೇರಿನಲ್ಲಿ ಬಿದ್ದುಕೊಂಡು "ಟೈಮ್ಸ್" ಓದುತ್ತಿರುವಾಗ ತಿಮ್ಮ ಅವರ ಹಿಂದೆ "ಇರಿಕಪಲಗ"(ಜಗಲಿಯ ಬದಿಯ ದಂಡೆ)ಯ ಮೇಲೆ ಕುಳಿತುಕೊಂಡು ಅದರಲ್ಲಿದ್ದ ಚಿತ್ರವನ್ನು ಬರೆದುಕೊಳ್ಳುವನು. ರಾತ್ರಿಯ ಹೊತ್ತಿನಲ್ಲಿ ಎಲ್ಲ ಕೆಲಸವಾದಮೇಲೆ ಆ ಪುಸ್ತಕ ಅವನ ಕೈಗೇ ಸಿಗುತ್ತದೆ, ರುಚಿಯಾದ ಹಣ್ಣು ಸಿಕ್ಕಿದಂತೆ.

ಆದರೆ ಡಾಕ್ಟರು ಮದ್ರಾಮಣ್ಣನೊಂದಿಗೆ ಹೇಳಿದ ಹಾಗೆ ತಿಮ್ಮನಿಗೆ ಕಂಪೌಂಡ್ರಿಕೆಯನ್ನಾಗಲೀ, ಆಂಗ್ಲ ಪಾಠವನ್ನಾಗಲೀ ಹೇಳಿಕೊಡಲಿಲ್ಲ. ಅದೇನೋ ಸುಮ್ಮನೆ ಮುಖ ಸಮಾಧಾನಕ್ಕೆ ಹೇಳಿದ ಮಾತು, ಅಷ್ಟೇ. ಇಡೀ ದಿನ ಬಂದವರೊಂದು ಮನೆ ಕೆಲಸವೇ ತುಂಬಿರುವಾಗ ಅವನಿಗೆ ವಿದ್ಯೆ ಕಲಿಸುವ ಬಗೆ ಹೇಗೆ? ಹಾಗೆ ಕಲಿಸಲು ನೋಡಿದರೆ ಮನೆಗೆಲಸಕ್ಕೆ ಬೇರೊಬ್ಬನನ್ನು ಇಟ್ಟುಕೊಳ್ಳಬೇಕಲ್ಲ? ಅಷ್ಟೊಂದು ಧಾರಾಳತನಕ್ಕೆ ಅವನು ಅವರ ಸ್ವಂತ ಮಗನೆ? ಸಂಬಳಕ್ಕೆ ನಿಶ್ಚಯಿಸಲ್ಪಟ್ಟವನಿಗೆ ಸಂದರ್ಭಾನುಸಾರವಾಗಿ ಸ್ವಯಂ ಕಲಿತುಕೊಳ್ಳಲು ಅನುಕೂಲವಾಗಿದ್ದುದೆ ದೊಡ್ಡ ವಿಷಯವಾಗಿತ್ತು. ಕಂಪೌಂಡಿಂಗಿನ ಮೇಲೆ ತಿಮ್ಮನಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಮನೆಗೆಲಸವಾಗಿತ್ತು, ಚಿತ್ರವಾಯಿತು, ಕತೆಯಾಯಿತು, ಪುಸ್ತಕವಾಯಿತು ಅಂತ ಇದ್ದ.



೨೪

ಪೊನ್ನಾನಿಕ್ಕಾಡಿನ ದೇವಾಲಯದ ಅರ್ಚಕರಾದ ಅಚ್ಯುತಭಟ್ಟರಿಗೂ ಡಾಕ್ಟರಿಗೂ ಬಹಳ ಸ್ನೇಹವೇ ಆಯಿತೆನ್ನಬಹುದು. ಅದಕ್ಕೆ ಕಾರಣ ಅಚ್ಯುತಭಟ್ಟರು ಬಳಸುವ ಶುದ್ಧ ಕನ್ನಡವನ್ನು



ಮಾತಾಡುವವರು. ಅದೂ ಸ್ವಾರಸ್ಯವಾಗಿ ಮಾತಾಡುವರು. ಅನೇಕವಾಗಿ ಪ್ರತಿದಿನಾ ರಾತ್ರಿಯಲ್ಲೋ ಹಗಲಿನಲ್ಲೋ ಒಮ್ಮೆಯಾದರೂ ಬಂದು ಕದ್ದಾವತಮ್ಮನ ಹತ್ತಿರವೂ ಮಕ್ಕಳ ಹತ್ತಿರವೂ ಸರಸ ಸಂಭಾಷಣೆಗಳನ್ನು ಮಾಡುವರು. ಮಲೆಯಾಳದಲ್ಲಿ ಪ್ರಚಲಿತವಿರುವ ಅದ್ಭುತರಮ್ಯ ಆಚಾರ ವಿಚಾರಗಳನ್ನು ಕತೆಯ ಹಾಗೆ ಹೇಳುವರು. ಅವರಿಗೆ ತಿಳಿಯದ ವಿಷಯವೇ ಇಲ್ಲವೆನಿಸುತಿತ್ತು. ಅವರು ದೇವಾಲಯದ ಅರ್ಚಕರಾದರೂ ಪ್ರೈವೇಟು ಟ್ಯೂಶನ್ ಇಡಿಸಿಕೊಂಡು ಇಂಗ್ಲೀಷನ್ನು ಓದಲಿಕ್ಕೂ ಮಾತಾಡಲಿಕ್ಕೂ ಕಲಿತಿದ್ದರು. ಅವರಿಗೆ ಇಂಗ್ಲೀಷು ಹೇಳಿಕೊಟ್ಟ ಮೇನನ್ನನ್ನೇ ಡಾಕ್ಟರ್ರ ಮಕ್ಕಳಿಗೂ ಟ್ಯೂಶನ್ ಕೊಡಿಸಲು ಏರ್ಪಡಿಸಲಾಯಿತು.

ಸಿಕ್ಕಿದ ಈ ಸಂದರ್ಭವನ್ನು ತಿಮ್ಮ ಬಿಡಲಿಲ್ಲ. ಟ್ಯೂಶನ್ ಮಾಸ್ತರ ಮೇನನ್ ಗಟ್ಟಿಯಾಗಿ ಹುಡುಗರಿಗೆ ಪಾಠ ಹೇಳಿ ಕೊಡುವಾಗ, ತಿಮ್ಮ ಅಡಿಗೀ ಮನೆಯ ಬಾಗಿಲ ಹತ್ತಿರವೇ ನಿಂತುಕೊಂಡು ಬರೆದುಕೊಳ್ಳುತ್ತಿದ್ದ. "cat ಕೇಟ್ ಅಂದರೆ ಬೆಕ್ಕು" ಎಂಬ ರೀತಿಯಲ್ಲಿ. ಹಾಗೆ ಬಹಳ ಶಬ್ದಗಳನ್ನು ಬರೆದು ಸಮಯ ಸಿಕ್ಕಾಗಲೆಲ್ಲಾ ಉರುವು ಹಾಕಿಕೊಳ್ಳುವನು. ಅನೇಕ ಶಬ್ದಗಳನ್ನು ಅಚ್ಯುತಭಟ್ಟರ ಹತ್ತಿರ ಕೇಳುತ್ತ, ಹುಣಿಸೆಕಾಯಿಗೆ ಇಂಗ್ಲೀಷಿನಲ್ಲಿ ಏನು ಹೇಳುತ್ತಾರೆ? ಹುಣಿಸೇ ಹಣ್ಣಿಗೆ, ಅದಕ್ಕೆ ಇದಕ್ಕೆ ಅಂತ ಕೇಳುತ್ತ ಒಂದು ನೋಟು ಪುಸ್ತಕ ತುಂಬ ಬರೆದುಕೊಂಡ. ದಿನಾ ರಾತ್ರಿ ಮಲಗುವ ಮುಂಚೆ ಮಂತ್ರ ಪಾರಾಯಣಗಳೊಂದಿಗೆ ಈ ಶಬ್ದಜಾಲಗಳನ್ನು ಪಾರಾಯಣ ಮಾಡುವುದು ಅವನ ಪದ್ಧತಿಯಾಯಿತು. ಹಾಗೆಯೆ ಒಂದು ಕನ್ನಡ ನೋಟು ಪುಸ್ತಕವನ್ನು ತಯಾರಿಸಿಕೊಂಡು, ಅದಕ್ಕೆ "ಸರ್ವ ಸಂಗ್ರಹದರ್ಶಿನಿ" ಎಂದು ಹೆಸರಿಟ್ಟುಕೊಂಡ. ಅವನು ಓದಿದ ಪತ್ರಿಕೆಗಳ ಪುಸ್ತಕಗಳ ಆಕರ್ಷಕ ಶಬ್ದಗಳು, ಗಾದೆಗಳು, ಚಮತ್ಕಾರವಾದ ವಾಕ್ಯಗಳು. ಹೊಸ ಹೊಸ ಶಬ್ದಗಳು, ಪದ್ಯಗಳು, ಶ್ಲೋಕಗಳು, ಒಳ್ಳೊಳ್ಳೆ ಶೈಲಿಯ ಚೂರುಗಳು ಹೀಗೆ ಒಂದೆರಡಲ್ಲ ಹೀಗೆ ಅನೇಕ ವಿಷಯಗಳು ಅದರಲ್ಲಿ ಸೇರಿಕೊಂಡವು. ದಿನಾ ಅದರ ಎರಡೆರಡೇ ಪುಟಗಳನ್ನು ಓದುತ್ತ ಹೋಗುವುದು ಅವನ ಪದ್ಧತಿಯಾಯಿತು.

ಅವನು ಬರೆದ ಚಿತ್ರಗಳನ್ನು ನೋಡಿ ಅಚ್ಯುತಭಟ್ಟರು ತುಂಬ ಮೆಚ್ಚಿಕೊಂಡರು. ಅವನ ಕತೆಗಳನ್ನು ಓದಿ ನೋಡಿದ ಅಚ್ಯುತಭಟ್ಟರು "ಚೆನ್ನಾಗಿದೆಯಲ್ಲಾ! ಡಾಕ್ಟರ್ರಾಯರಿಗೆ ತೋರಿಸು. ರಾಷ್ಟ್ರಬಂಧುವಿಗೆ ಕಳುಹಿಸಿದರೆ ಪ್ರಕಟಿಸಿಯಾರು" ಎಂದು ಅಭಿಪ್ರಾಯಪಟ್ಟರು. ತಿಮ್ಮನು ಡಾಕ್ಟರಿಗೆ ತೋರಿಸಲು ಸಂಕೋಚಿಸಿಕೊಂಡನು. ಆದರಿಂದ ಅಚ್ಯುತಭಟ್ಟರೇ ತಿಮ್ಮ ಬರೆದ ಒಂದು ಕಥೆಯನ್ನು ಡಾಕ್ಟರರಿಗೆ ಓದಿ ತೋರಿಸಿದರು.

ಆಗ ಡಾಕ್ಟರು, "ಇದನ್ನು ಪತ್ರಿಕೆಯವರು ಪ್ರಕಟಿಸಲಿಕ್ಕಿಲ್ಲ. ಇನ್ನೂ ಬರವಣಿಗೆ ನುರೀಬೇಕು. ಕಥೆ ಚೆನ್ನಾಗಿದ್ದರೂ ಬೇಡದ ಶಬ್ದಗಳು ತುಂಬಾ ಇವೆ. ಅಲ್ಲದೆ ಭೂತ ಪಿಶಾಚಿಗಳು ಬೇರೆ ಇವೆಯಲ್ಲಾ! ಇಂಥಾದ್ದೆಲ್ಲಾ ಓದಿದರೆ ಓದಿದವರಿಗೆ ಹೆದರಿಕೆಯಾದೀತು. ಏನೋ ತಿಮ್ಮ, ನಿನ್ನ ಕಥೆ ನೋಡಿದರೆ ನಿನಗೆ ಭೂತಪಿಶಾಚಿಗಳೆಂದರೆ ತುಂಬ ಇಷ್ಟ ಅಂತ ಕಾಣುತ್ತೆ? ಇಂಥಾದ್ದೆಲ್ಲಾ ಓದಿದರೆ ಜನರೆಲ್ಲಾ ಹೇಡಿಗಳಾಗಿ ಹೋದಾರು. ಹೀಗೆಯೇ ಬರೆಯುತ್ತಿರು, ಓದುತ್ತಿರು. ಮುಂದೆ ನಿನಗೇ ತಿಳಿಯುತ್ತೆ ಇದರಲ್ಲಿರುವ ತಪ್ಪುಗಳು ಏನೇನು ಅಂತ. ಆಗ ಪತ್ರಿಕೆಗೆ ಕಳುಹಿಸುವ ಆಲೋಚನೆ ಮಾಡುವ" ಎಂದರು.

ಡಾಕ್ಟರ ಮಾತು ಕೇಳಿ ತಿಮ್ಮನಿಗೆ ಒಂದು ತರಹ ಕಳವಳವಾಯಿತು.

ಅಚ್ಯುತಭಟ್ಟರು ಭೂತಪಿಶಾಚಗಳ ವಿವರಣೆಗೆ ತೊಡಗಿಬಿಟ್ಟರು. ಭೂತ ಪಿಶಾಚಗಳನ್ನು ನಂಬಿಕೊಂಡು ಧೈರ್ಯದಿಂದ ಅವುಗಳನ್ನು ಎದುರಿಸಿದರೆ ಮನುಷ್ಯರು ಹೇಡಿಗಳಾಗುದಿಲ್ಲ ಎಂಬುದು ಅವರ ಸಿದ್ಧಾಂತವಾಗಿತ್ತು.

"ಭೂತಪಿಶಾಚಿಗಳು ಇಲ್ಲ ಅಂತ ಮಾತ್ರ ಹೇಳಬೇಡಿ. ಅವುಗಳ ಇರುವಿಕೆಯನ್ನು ನಂಬಿ ಧೈರ್ಯದಿಂದ ಇರುವವರಿಗೂ ಅವು ಕಾಣಿಸುತ್ತವೆ, ಹೇಡಿಗಳಿಗೂ ಅವು ಕಾಣಿಸುತ್ತವೆ. ಧೈರ್ಯದಿಂದಿರುವವರನ್ನು ಅವೇನೂ ಮಾಡವುದಿಲ್ಲ. ಹೇಡಿಗಳು ಮಾತ್ರ ತಮ್ಮ ಭಯದಿಂದಲೇ ಸಾಯುತ್ತಾರೆ; ಆ ದೆವ್ವಗಳಿಂದಲ್ಲ. ಅದಕ್ಕೆಷ್ಟೋ ಉದಾಹರಣೆಗಳಿವೆ. ನಂಬಿ ಭಯಪಡುವುದು ಬೇರೆ. ನಂಬಿ ಧೈರ್ಯದಿಂದಿರುವುದು ಬೇರೆ" ಎಂದರು ಅಚ್ಯುತಭಟ್ಟರು.

"ನೀವು ಭೂತಗಳನ್ನು ಕಂಡಿದೀರಾ?"

"ಆಹಾ!"

"ಎಲ್ಲಿ ಹೇಗೆ?"

ಎಲ್ಲರೂ ಆಸಕ್ತಿಯಿಂದ ಕೇಳತೊಡಗಲು, ಅಚ್ಯುತಭಟ್ಟರು ತಮ್ಮ ಅನುಭವಗಳನ್ನು ಹೇಳಿದರು. ಒಂದು ಸಾರಿ ದೂರದಲ್ಲಿ ಕಾಣಿಸುವ ಪಾರಂಪಳಿಯಾಚಿಗಿರುವ ಕಶಾಂಚೇರಿಯ ದೇವಾಲಯದಲ್ಲಿ ನಾಲ್ಕು ದಿನ ಪೂಜೆ ಮಾಡಬೇಕಾದ ಅಗತ್ಯ ಅಚ್ಯುತಭಟ್ಟರಿಗೆ ಬಂತಂತೆ. ಅವರು ಬೆಳಿಗ್ಗೆ ಇಲ್ಲಿಯ ದೇವಾಲಯದ ಪೂಜೆ ತೀರಿಸಿ ನಡೆದುಕೊಂಡೇ ಕಶಾಂಚೇರಿಗೆ ಹೋಗಿ, ನಾಲ್ಕನೇ ದಿನ ರಾತ್ರಿ ಅಲ್ಲಿಯ ಪೂಜೆ ಮುಗಿಸಿ ಈ ಕಡೆಗೆ ಹಿಂದಿರುಗಿದರಂತೆ. ಅಲ್ಲಿಂದ ಹೊರಡುವಾಗ ರಾತ್ರಿ ಎಂಟು ಗಂಟೆಯಾಗಿತ್ತು. ಗುಡ್ಡಗಾಡು, ದಾರಿಯಾದುದರಿಂದ, ಕೈಯಲ್ಲಿರುವ ಸೂಟಿಗಳನ್ನು ಹಿಡಿದುಕೊಂಡು, ಬರುತ್ತಿದ್ದರಂತೆ

ಸುಮಾರು ನಡುರಾತ್ರಿಯ ಹೊತ್ತು. ಆಗ ದಾರಿಯಲ್ಲಿ ಅನೇಕ ಕೊಳ್ಳಿ ದೆವ್ವಗಳು ಬತ್ತಲೆಯಾಗಿ ಬೆಂಕಿ ಕೊಳ್ಳಿಗಳನ್ನು ಹಿಡಿದುಕೊಂಡು ಕೋಕೋ ಎಂದು ಕೂಗುತ್ತ ಹುಚ್ಚುಚ್ಚಾಗಿ ನರ್ತನ ಮಾಡುತ್ತಿರುವುದನ್ನು ನೋಡಿದರಂತೆ. ಅಚ್ಯುತಭಟ್ಟರು ಮನಸ್ಸಿನಲ್ಲಿ ನೃಸಿಂಹಸ್ತೋತ್ರ ಮಾಡುತ್ತ, ಉಟ್ಟ ಬಟ್ಟೆಯನ್ನು ಅಂಗವಸ್ತ್ರವನ್ನೂ ಕಂಕುಳಲ್ಲಿ ಮುಡುಚಿಟ್ಟುಕೊಂಡು ಅವುಗಳ ಹಾಗೆಯೇ ಉರಿಯುವ ಸೂಟಿಯನ್ನು ಆಡಿಸಿಕೊಂಡು ಕುಣಿಯುತ್ತಾ ಅವುಗಳ ಮಧ್ಯದಲ್ಲೇ ಮುಂದಕ್ಕೆ ದಾಟಿಕೊಂಡು, ಹಿಂತಿರುಗಿ ನೋಡದೆಯೇ ಸೀದಾ ಬಂದುಬಿಟ್ಟರಂತೆ. ಅವರ ಕೂದಲು ಸಹ ಕೊಂಕಲಿಲ್ಲ.

ಇದಕ್ಕೆ ಕಾರಣ ಅಚ್ಯುತಭಟ್ಟರು ತಪ್ಪದೆ ಸಕ್ರಮವಾಗಿ ಸಂಧ್ಯಾವಂದನೆ ಮಾಡುವವರಂತೆ. ಮತ್ತೊಂದು ಅವರ ಧೈರ್ಯ. ಹೆದರುವವರನ್ನು ಹೆದರಿಸುವುದೇ ದೆವ್ವಗಳ ಸ್ವಭಾವವೆಂದೂ ಧೈರ್ಯಶಾಲಿಗಳನ್ನು ಅವೇನೂ ಮಾಡುವುದಿಲ್ಲವೆಂದೂ ಅವರಿಗಿರುವ ಗಟ್ಟಿ ವಿಶ್ವಾಸ. ಎಂತಹ

ಶವ ಗಳ ಬ್ರಾಹ್ಮಣನಾದರೂ ಭೂತವನ್ನು ನೋಡಿ ಹೆದರಿಕೆಯಾದರೆ ಜ್ವರ ಬಂದು ಸಾಯು ವುದು ಖಂಡಿತವಂತೆ. ಹಾಗೆ ಇತ್ತ ಅನೇಕರ ವಿಷಯಗಳನ್ನು ಅಚ್ಯುತಭಟ್ಟರು ಹೇಳಿದರು.

ಅಚ್ಯುತ ಭಟ್ಟರ ಅನುಭವ ಸಾರದ ಪ್ರಕಾರ, "ದೆವ್ವ ಭೂತಗಳು ಬೇರೆ, ಪಿಶಾಚಿಗಳು ಬೇರೆ. ಪಿಶಾಚಿಗಳೆಂದರೆ ಸತ್ತ ಮಾನವರ ಅತೃಪ್ತ ಜೀವಾತ್ಮಗಳೇ. ಕಳೆದ ಮಾಪ್ಲ ದಹಳೆಯ ಕಾಲದ ಘೋರ ಚಿತ್ರಹಿಂಸೆಗಳಿಂದಾಗಿ ಕೊಲೆಗೊಂಡವರಿಗೆ ಲೆಕ್ಕವೇ ಇಲ್ಲ. ಅಂಥವರು ಅವರವರ ಆಸ್ತಿ ಪಾಸ್ತಿ ಹೆಣ್ಣು ಹೊನ್ನುಗಳ ಮೋಹ ಸಂಬಂಧಗಳಿಂದ ಪಿಶಾಚಿಗಳಾಗಿದ್ದಾರಂತೆ. ಅವುಗಳು ಗಾಳಿಯಲ್ಲಿ ಕಾಣಿಸಿ ನೆಲ್ಲನ ಮಾಯವಾಗಿ ಹೋಗುವಂತಹ ನಿರ್ಬಲವಾದ ಆಕೃತಿಗಳು. ಅವುಗಳಿಗೆ ಏನು ಮಾಡಲಿಕ್ಕೂ ಶಕ್ತಿಯಿರುವುದಿಲ್ಲ. ಅವುಗಳನ್ನು ಅಳೈದಯ ವರು ನೋಡಿದರೆ, ಹೆದರಿಕೊಂಡು ಜ್ವರಹಿಡಿದು ಸಾಯುವರೇ ಹೊರತು ಅವುಗಳು ಕೊಲ್ಲು ವುದಿಲ್ಲ ಪಾಪ"

ಇಂಥ ಪಿಶಾಚಿಗಳು ಹೇಗೆ ಆಗುತ್ತವೆಂಬು ದಕ್ಕೂ ಅಚ್ಯುತ ಭಟ್ಟರು ವಿವರಣೆ ಕೊಟ್ಟರು: "ಮನುಷ್ಯನು ಸಾಯುವಾಗ ಎಷ್ಟೋ ಆಸೆ ಗಳಿಂದಿರುವ ಮನಸ್ಸು ಜೀವಾತ್ಮಕ್ಕೆ ಅಂಟ ಕೊಂಡಿರುತ್ತದೆ. ಜೀವಾತ್ಮದಂತೆ ಮನಸ್ಸಿಗೂ ಆಕೃತಿ ಇರುವುದಿಲ್ಲ. ಅದು ಜೀವಾತ್ಮವನ್ನು ಮೇಲೆ ಹೋಗಲಿಕ್ಕೆ ಬಿಡದೆ ತನ್ನ ಆಸೆಗಳಿಂದ ಕೆಳಕ್ಕೆ ಎಳೆದುಕೊಂಡು, ತನಗಿರುವ ಕಲ್ಪನಾ ಶಕ್ತಿಯಿಂದ, ಪ್ರಕೃತಿಯಲ್ಲಿರುವ ಪೃಥಿವೀ ಆಪ, ತೇಜ ವಾಯು, ಆಕಾಶಗಳೆಂಬ ಪಂಚ ಭೂತಗಳ ಸಹಾಯದಿಂದ ಆಕೃತಿಯನ್ನು ಕಲ್ಪಿಸಿಕೊಂಡು ಕೆಲವು ಬಾರಿ ನಮ್ಮ ಕಣ್ಣಿಗೆ ಕಂಡು ಮಾಯವಾಗುತ್ತದೆ."

ಆದರೆ ಭಯಂಕರವಾದ ಸಂಗತಿ ಬೇರೊಂ ದಿತ್ತು.



ನೋಲೆ ಮನೆಯ ಹೊಸ್ತಿಲು ದಾಟಿ ಅಂಗಳಕ್ಕೆ ಸಹ ಕಾಲಿಡುವುದಿಲ್ಲ. ಅದಕ್ಕೇ ತಲೆ ಸುತ್ತ ಮನೆ ಯಲ್ಲಿಯೂ ಬಚ್ಚಲು ಮೋರಿಗಳೆಲ್ಲ ಮನೆ ಯೊಳಗೇ ಇರುತ್ತವೆ.

ಆ ಮಲೆ ಪ್ರಾಂತದಲ್ಲಿ ಒಬ್ಬ ಮಾದಿಮಂತ್ರ ವಾದಿ ಬಹಳ ಪ್ರಸಿದ್ಧನಾಗಿದ್ದ. ಎಷ್ಟು ಪ್ರಸಿ ದ್ಧನೋ ಅಷ್ಟೇ ಭಯಂಕರನು. ಭಯಂಕರತೆ ಯಿಂದಲೇ ಪ್ರಸಿದ್ಧನಾದವನು. ಅವನ ಶಕ್ತ ಲಾದ ಕೂಡಲೇ, ನಾಯಿ, ಬೆಕ್ಕು, ಹಸು ಮೊದಲಾದ ಯಾವುದಾದರೊಂದು ಗ್ರಾಮ ಮೃಗದ ರೂಪ ತಾಳಿ ಊರೊಳಗೆ ಬರುತ್ತಾನೆ. ಆಗ ಯಾರಾದರೂ ಹಿಂದಿನಿಂದ ನೋಡಿ ಪರೀಕ್ಷಿ ಸಿದರೆ ಅದಕ್ಕೆ ಇರುವುದೋ ಒಂದು ಅವಯವ ಲೋಪವಾಗಿರುವುದು ತಿಳಿಯುತ್ತದೆ. ಒಂದು ಕಣ್ಣು, ಒಂದು ಕಿವಿ, ನಾಲ್ಕು ಬೆರಳು, ಬಾಲ ವಿಲ್ಲದಿರುವಿಕೆ ಹೀಗೆ ಏನೋ ಒಂದು ಲೋಪ ವಿರುವ ಪ್ರಾಣಿಯನ್ನು ಕಂಡರೆ, ಅದು ಆ ಮಾದಿಮಂತ್ರವಾದಿ ಎಂದೇ ಅರ್ಥ. ಹಾಗೆ ಗುರುತಿಸಿಕೊಂಡವರು ಆ ಪ್ರಾಣಿಗೆ ಪ್ರತೀಕಾರ ಮಾಡಲು ಮುಂದಡಿಯಿಟ್ಟರೆ, ಇದ್ದ ಕಾಲು ಮತ್ತೆ ತೆಗೆಯಲಿಕ್ಕೇ ಬಾರದೆ ಬೇತಾಳ ಹಾಗೇ ಕಂಬದ ರೂಪದಲ್ಲಿ ನಿಂತಿರುತ್ತಾನೆ. ಮೃಗ ರೂಪದ ಮಂತ್ರವಾದಿ ತನ್ನ ಹಾದಿಗೆ ಹೋಗಿ ಬಿಡುತ್ತಾನೆ.

ಅವನು ಏತಕ್ಕೆ ಹಾಗೆ ಬರುವನೆಂದರೆ, ಗರ್ಭಿಣಿ ಸ್ತ್ರೀಯರ ಬೇಟೆಗಾಗಿ. ಯಾವಳಾದರೂ ನಿರ್ಭಾಗ್ಯ ಗರ್ಭಿಣಿ ಅವನ ಕಣ್ಣಿಗೆ ಬಿದ್ದಳು ಅಂದರೆ, ಕೂಡಲೇ ಆ ಮೃಗ ಮೂಗಿನಿಂದ ಒಂದು ಗಾಳಿಯನ್ನು ಅವಳ ಮೇಲೆ ಊದಿ ಅದರ ಹಾದಿಗೆ ಹುಟ್ಟಿಕ್ಕೆ ಹೋಗಿ ಬಿಡುತ್ತೆ.

ಮಾರುದಿನ ರಾತ್ರಿ ಆ ಗರ್ಭಿಣಿ ಸ್ತ್ರೀ ಒಬ್ಬಳೇ

೨೫

ಅಚ್ಯುತಭಟ್ಟರು ಅದನ್ನು ಕುರಿತು ಕೂಡಾ ಕತೆ ಕತೆಯಾಗಿ ಹೇಳುತ್ತಿದ್ದರು. ಅದು ಕೂಡ ಸ್ವಾರಸ್ಯ ವಿಷಯವಾಗಿತ್ತು.

ಅದು ಮೊದಲೇ ಗುಡ್ಡಗಾಡು ಪ್ರದೇಶ. ದೂರದಲ್ಲಿ ನಾಲ್ಕು ಸುತ್ತಲೂ ಘಟ್ಟಗಳೂ ಅವು ಗಳ ಶಿಖರಗಳಲ್ಲಿ ಹಿಮ ಮೋಡಗಳೂ ಕಾಣಿಸು ತ್ತಿರುತ್ತವೆ. ರಾತ್ರಿಯಲ್ಲಿ ಉದ್ದಕ್ಕೆ ಬೆಟ್ಟಗಳ ಶಿಖರಗಳಲ್ಲಿ ಕಾಡ್ಗಿಚ್ಚಿನ ಅಗ್ನಿಮಾಲೆ ರುದ್ರ ಸುಂದರವಾಗಿ ಕಾಣಿಸುತ್ತದೆ. ಆಕಾಶವನ್ನು ಏರ ಬಳಸುವ ಅಗ್ನಿ ಸರ್ಪಗಳ ಹಾಗೆ.

ಅಂತಹ ಶಿಖರ ಪ್ರದೇಶಗಳಲ್ಲಿ "ಮಲೆಯರು" ಎಂಬ ಕಾಡು ಮನುಷ್ಯರು ವಾಸವಾಗಿರು ತ್ತಾರೆ. ಮಂತ್ರವಿದ್ಯೆಗಳಲ್ಲಿ ಅವರಿಗೆ ಅವರೇ ಸಾಟಿ. ಆ ಮಂತ್ರವಾದಿಗಳ ಭಯಕ್ಕಾಗಿಯೇ ಸುತ್ತು ಮುತ್ತಣ ಪ್ರಾಂತಗಳಲ್ಲಿಯ ಸ್ತ್ರೀಯರು, ಮುಖ್ಯವಾಗಿ ಗರ್ಭಿಣಿ ಸ್ತ್ರೀಯರು ಕತ್ತಲಾದ

ಮನೆಯ ಬಾಗಿಲು ತೆರೆದುಕೊಂಡು, ಯಾರಿಂದಲೋ ಎಳೆಯಲ್ಪಡುವವಳ ಹಾಗೆ, ದಾರಿ ಗೊತ್ತಿದ್ದೇ ಸಾಗುವವಳ ಚೆಂದದಿಂದ ಸೀದಾ ಹೊರಟಳು... ಆ ಮುದುಕ ಮಂತ್ರವಾದಿಯ ಬಳಿಗೇ ಹೋಗಿ ಬಿಡುತ್ತಾಳೆ ಅಲ್ಲಿ ಅವನು ಅವಳ ಗರ್ಭಪಿಂಡವನ್ನು ತೆಗೆದು ಆ ಸ್ಥಾನದಲ್ಲಿ ಬೇರೊಂದು ಮುದ್ದೆಪಿಂಡವನ್ನಿಟ್ಟು ಮನೆಗೆ ಕಳುಹಿಸುತ್ತಾನೆ ಅವಳ ಹೆಣವು ಗುಡ್ಡ ದಾರಿಯಲ್ಲಿ ಎಲ್ಲಾದರೂ ಬಿದ್ದಿರುತ್ತದೆ

ಮಂತ್ರವಾದಿ ಆ ಗರ್ಭದ ಪಿಂಡದಿಂದ ಎಣ್ಣೆ ತೆಗೆದು ಅದರಿಂದ ಭಾರೀ ಭಾರೀ ದುಷ್ಕಾರ್ಯಗಳನ್ನು ಸಾಗಿಸುತ್ತಾನೆ. ಮುಖ್ಯವಾಗಿ ಮಲೆಯರು ಕೊಳ್ಳೆ ಹೊಡೆಯುವುದು ಆ ಗರ್ಭದೆಣ್ಣೆಯ ಸಹಾಯದಿಂದಲೇ. ಅದರ ಸಹಾಯದಿಂದ ಅವರು ಎಷ್ಟೋ ಚಪ್ಪಡಿ ವಿದ್ಯೆಗಳನ್ನು ತೋರಿಸಿ ಭ್ರಮೆ ಹುಟ್ಟಿಸುತ್ತಾರೆ. ಗರ್ಭದ ಎಣ್ಣೆಯ ದೊಂದಿ ಹಿಡಿದುಕೊಂಡು ಮನೆಯೊಳಗೆ ನುಗ್ಗಿದರೆ ಮನೆಯಲ್ಲಿದ್ದವರು ಚಿತ್ರದ ಬೊಂಬೆಗಳಂತೆ ಪಿಳಿಪಿಳಿ ನೋಡುತ್ತಾ ನಿಂತಿರುತ್ತಾರೆ. ಕಳ್ಳರು ಆ ದೊಂದಿಯ ಬೆಳಕಿನಿಂದ ಮನೆಯವರ ಮುಂದೆಯೇ ಸಕಲವನ್ನು ಸೂರೆ ಮಾಡಿಕೊಂಡು ಹೋಗಿಬಿಡುತ್ತಾರೆ. ಅವರು ಕಣ್ಮರೆಯಾದ ಮೇಲೆ ಅಷ್ಟೇ ಮನೆಯವರಿಗೆ ಬುದ್ಧಿ ಬರುತ್ತದೆ

"ಹೌದೌದು ಇಂಥಾ ಕಳ್ಳತನಗಳ ಸುದ್ದಿ ಪತ್ರಿಕೆಯಲ್ಲಿ ಬಂದಿತ್ತು." ಎಂದರು ಗೋವರ್ಧನರಾಯರು.

"ನಿಜ. ಕಳ್ಳರು ಈ ಮಲೆಯರ ಕೈಯಿಂದ ಆ ಮಾಮಾಚಾರದ ಎಣ್ಣೆಯನ್ನು ತುಂಬ ಬೆಲೆ ಕೊಟ್ಟು ಕೊಳ್ಳುತ್ತಾರೆ. ಕಡೆಗೆ ಏನಾಯಿತು ಗೊತ್ತಾ? ಕಳೆದ ವರ್ಷ, ಆ ಭಯಂಕರ ಮುದಿ ಮಂತ್ರವಾದಿಯನ್ನು ಮದರಾಸಿನ ಸರ್ಕಲ್ ಇನ್‌ಸ್ಪೆಕ್ಟರ್ ರಾಮಾನುಜಾಚಾರಿ ಕೊನೆಗೆ ಗುಂಡು ಹೊಡೆದೇ ಕೊಲ್ಲಬೇಕಾಯಿತು." ಎಂದು ಅಚ್ಯುತಭಟ್ಟರು ಹೇಳಲು.

"ಹೌದಂತೆ. ಆ ಸರ್ಕಲ್ ಇನ್ಸ್‌ಪೆಕ್ಟರು ಇತ್ತೀಚೆಗೆ ತಾನೇ ಸತ್ತರು? ಪೇಪರಿನಲ್ಲಿ ಬಂದಿತ್ತಲ್ಲಾ! ಬಹಳ ಗಟ್ಟಿಗನಂತೆ ಅತ" ಎಂದರು ಗೋವರ್ಧನರಾಯರು

"ನಿಜವೇ. ಬಹಳ ಸಾಹಸೀ ಇನ್ಸ್‌ಪೆಕ್ಟರು ಪಾಪ, ಆ ಮುದುಕನನ್ನು ಕೊಂದಂದಿನಿಂದ ಅವರ ಕೈ ನಡುಗುತ್ತ, ಕೊನೆಗೆ ಸರ್ವಾಂಗವೂ ನಡುಗತೊಡಗಿ, ಅವರು ಮಲಗಿದ ಮಂಚವು ಗಡಗಡ ನಡುಗುತ್ತಾ ಇದ್ದು ಕೊನೆಗೆ ಅವರು ಸಾಯುವಾಗ ಇಡೀ ಮನೆಯೇ ನಡುಗಿತಂತೆ!" ಎಂದರು ಅಚ್ಯುತಭಟ್ಟರು.

"ಅವರು ಗುಂಡು ಹೊಡೆದು ಹ್ಯಾಗಪ್ಪ ಅವನನ್ನು ಕೊಂದರು?" ಎಂದು ಪದ್ಮಾವತಮ್ಮ ಆಶ್ಚರ್ಯೋದ್ಗಾರ ತೆಗೆದಳು.

ಆ ವಿಷಯವನ್ನು ಕೂಡಾ ಕಣ್ಣಾರೆ ಕಂಡವರ ಹಾಗೆ ಬಣ್ಣಿಸಿ ಹೇಳಿದರು ಅಚ್ಯುತಭಟ್ಟರು.

ಆ ಮೊದಲೇ ರಾಮಾನುಜಾಚಾರಿ ಸಮರ್ಥ ಸರ್ಕಲ್ ಇನ್ಸ್‌ಪೆಕ್ಟರೆಂದು ಹೆಸರುವಾಸಿಯಾದವರು. ಎಂತೆಂಥಾ ಗಜಚೋರರನ್ನೆಲ್ಲಾ ಹಿಡಿದು ಹಾಕಿದವರು. ಆ ಭಯಂಕರ ಮಾಯಾ ಮಂತ್ರವಾದೀ ಮುದಿಮಲೆಯನನ್ನು ಹಿಡಿಯಲು, ಅಥವಾ ಕೊಲ್ಲಲು ಆಜ್ಞೆ ಹೊಂದಿ ಇಲ್ಲಿಗೆ ಬಂದ ರಾಮಾನುಜಾಚಾರಿ, ಗಟ್ಟ ಬೆಟ್ಟಗಳಲ್ಲಿ ಸುತ್ತಾಡಿ, ಆ ಮುದುಕನ ವಾಸಸ್ಥಳವನ್ನು ಕಂಡು ಹಿಡಿದು ಬಿಟ್ಟರು. ಆಗ ಅವರು ಒಬ್ಬ ಮಲೆಯನ ಹಾಗೇ ವೇಷ ಹಾಕಿಕೊಂಡಿದ್ದರಂತೆ. ಉಪಾಯವಾಗಿ ಆ ಮುದಿ ಮಂತ್ರವಾದಿಯನ್ನ ಮೃಗವನ್ನು ಹಿಡಿಯುವ ಹಾಗೆ ಬಲೆ ಹಾಕಿ ಹಿಡಿದು, ಅವನನ್ನು ಸಾಗಿಸಿಕೊಂಡು ಇಲ್ಲಿಗೇ ತಂದರು.

ಅಲ್ಲಿ ಕಾಣುವ ಪೋಲೀಸ್ ಸ್ಟೇಶನ್ನಿನ ಹಿಂದಿನ ದೊಡ್ಡ ಮೈದಾನದಲ್ಲಿ ಆ ಮಂತ್ರವಾದಿಯನ್ನ ನೋಡಲು ಭಾರೀ ಜನರ ಗುಂಪು ಕೂಡಿತ್ತು. ಅಷ್ಟು ಜನರ ನಡುವೆ ಕಬ್ಬಿಣದ ಗೂಡಿನಲ್ಲಿ ಆ ಮುದಕನನ್ನು ಪ್ರದರ್ಶನಕ್ಕಿಡಲಾಯಿತು.

ಆಗ ರಾಮಾನುಜಾಚಾರಿ ಸುಮ್ಮನಿರದೆ, "ಏ ಮುದುಕಾ, ನಿನಗೆ ಏನೇನು ವಿದ್ಯೆ ಗೊತ್ತಿದೆಯೋ ಈಗ ತೋರಿಸು ನೋಡುವಾ" ಅನ್ನಬೇಕೆ?

"ನನ್ನ ಮೇಲೊಂದು ಕಂಬಳಿ ಹೊದೆಸಿ ಒಂದು ಅದ್ಭುತ ತಮಾಶೆ ತೋರಿಸುತ್ತೇನೆ" ಎಂದ ಆ ಮಹಾ ಮುದುಕ

ಹಾಗೆಯೇ ಹೊದೆಸಿದರೊಂದು ಕಂಬಳಿ.

ಎಷ್ಟು ಹೊತ್ತಾದರೂ ಕಂಬಳಿ ಹಾಗೇ ಇತ್ತು. ಕರೆದರೆ ಮಾತಿಲ್ಲ, ಚಲನೆಯಿಲ್ಲ. ಕೊನೆಗೆ ಸಂದೇಹದಿಂದ, ಅನೇಕ ಪೋಲೀಸರು ಬಾರು ಮಾಡಿದ ಕೋವಿಗಳನ್ನು ಹಿಡಿದು ಕೊಂಡು ಆ ಕಂಬಳಿಯನ್ನು ಎತ್ತಿ ನೋಡಿದರೆ ಅಲ್ಲೇನಿದೆ? ಖಾಲಿ! ಆಸಾಮಿ ಮಾಯ! ಪ್ರತಿಯೊಬ್ಬನಿಗೂ ಆ ಮಾಯಾ ಮಂತ್ರವಾದಿ ತಮ್ಮ ಬದಿಯಲ್ಲೇ ಇದ್ದಾನೇಬ ಭಯವಾಯಿತು! ಗುಂಪುಗೂಡಿದ ಹೆಂಗಸರು ಮಕ್ಕಳು ಮುದುಕರು ಯುವಕರು ಎಲ್ಲರೂ ಭೀತಿಯಿಂದ ಕಿರಿಚಿಕೊಂಡು ದಿಕ್ಕು ದಿಕ್ಕಿಗೆ ಓಡಿ ಹೋದರು ಎಲ್ಲಾ ಮನೆಗಳ ಬಾಗಿಲನ್ನೂ ಒಡಬಡನೆ ಮುಚ್ಚಿಕೊಂಡರು ಎಂಥದೋ ಭೀತಿಯ ಭೂತವೊಂದು ಊರಿನೊಳಗೆ ಹೊಕ್ಕ ಹಾಗಾಯಿತು. ಆ ಭಯ ನಿವಾರಣೆಯಾಗಲು ಮತ್ತೆ ಮೂರು ದಿವಸ ಹಿಡಿಯಿತನ್ನಿ.

ಆದರೆ ಸಾಹಸ ಶಿಖಾಮಣಿಗಳಾದ ರಾಮಾನುಜಾಚಾರಿ ಅಲ್ಲಿಗ ಬಿಡಲಿಲ್ಲ. ಮತ್ತೊಮ್ಮೆ ಪ್ರಯತ್ನ ಮಾಡಿ ಆ ಮುದಿ ಭಯಂಕರನನ್ನು ಕಂಡು ಹಿಡಿದೇ ಬಿಟ್ಟರು. ಆಗ ಆ ಮುದುಕ ಬೆಟ್ಟದ ಒಂದು ಗುಹೆಯ ಹತ್ತಿರ ಒಂದು ಮಗುವಿನೊಂದಿಗೆ ಲಲ್ಲಾಟವಾಡುತ್ತಿದ್ದ. ಹಾಗೆಯೇ ರಾಮಾನುಜಾಚಾರಿಯನ್ನು ನೋಡಿ ಭಯಂಕರವಾಗಿ ನಕ್ಕ. ಇನ್ನು ಅವನು ತಪ್ಪಿಸಿಕೊಳ್ಳುವನೇನೋ ಎಂಬ ಭಯದಿಂದ ರಾಮಾನುಜಾಚಾರಿ ಗುಂಡು ಹಾರಿಸಿ ಅವನನ್ನು ಕೊಂದುಬಿಟ್ಟರು. ಅಂದಿನಿಂದಲೇ ಅವರ ಜೀವನ ಅಸ್ತಂಗತವಾಗಲು ತೊಡಗಿತು. ಶಂಕಿನವ್ಯಾಧಿ ಹಿಡಿದು ನರಳಿನರಳಿ ಸತ್ತರಂತೆ ಪಾಪ!

ಬಹುಶಃ ಆ ಮಾಯಾ ಮುದುಕ ತನಗೆ ತಿಳಿದ ಮಂತ್ರ ತಂತ್ರ ವಿಧಾನಗಳನ್ನು ಬೇರೆ ಯಾರಿಗಾದರೂ ಉಪದೇಶಿಸಿದ್ದಾನೋ ಏನೋ ಎಂದು ಅನೇಕರು ಹೆದರಿದ್ದಾರೆ

ಹೀಗೆಲ್ಲ ಅಚ್ಯುತಭಟ್ಟರು ಹೇಳುವುದನ್ನು ಕೇಳುತ್ತಿರುವಾಗ ತಿಮ್ಮನಿಗೂ ಒಂದು ವಿಷಯವನ್ನು ಹೇಳಬೇಕೆಂದು ನಾಲಗೆಯ ತುದಿಯವರೆಗೂ ಬರುತ್ತಿತ್ತು. ಅದನ್ನು ಹೇಳಿದರೆ ಡಾಕ್ಟರ್ ರಾಯರು ಏನು ಹೇಳುವರೋ ಎಂದು ಆಶಂಕಿಸಿ ಕೊಳ್ಳುತ್ತಿದ್ದನು. ಆದುದರಿಂದ ಕೆಲವು ದಿನಗಳ ವರೆಗೂ ಅವನು ಬಾಯಿ ಬಿಡಲೇ ಇಲ್ಲ. ಆದದ್ದಾಗಲಿ ಎಂಬ ಮೊಂಡು ಧೈರ್ಯದಿಂದ ದಿವಸ ದೂಡುತ್ತಿದ್ದನು.

೨೬

ಡಾಕ್ಟರ್ ಗೋವರ್ಧನರಾಯರು ಆ ಮನೆಗೆ ಬಂದ ಮೇಲೆ ಮನೆಯವರಾರೂ ಹೆದರಿಕೊಳ್ಳಬಾರದೆಂಬ ಮನೋಗತದಿಂದ. "ರಾತ್ರಿಯಲ್ಲಿ ಏನಾದರೂ ಕಂಡರೆ ಕೂಡಲೇ ಹೆದರಿಕೊಳ್ಳಬೇಡಿ; ಅದೇನೂ ಅಂತ ನಿಧಾನವಾಗಿ ನೋಡಿದರೆ ಅದರ ಸತ್ಯ ಗೊತ್ತಾದೀತು. ಭ್ರಮೆಯ ಕಣ್ಣಿಗೆ ನೆರಳೂ ಭೂತದ ಹಾಗೆ ಕಾಣಿಸೀತು. ನೆನಪಿಟ್ಟುಕೊಳ್ಳಿ" ಎನ್ನುತ್ತಿದ್ದರು

ಅಚ್ಯುತಭಟ್ಟರು ಕೂಡಾ ಆ ಬಗೆಯ ಧೋರಣೆಯವರೇ.

ಡಾಕ್ಟರು ಪಿಶಾಚಿಗಳ ವಿಷಯದಲ್ಲಿ ಮಾತ್ರವಲ್ಲ. ರೋಗಿಗಳ ವಿಷಯದಲ್ಲಿ ಸಹಾ ಧೈರ್ಯಶಾಲಿಗಳು. ಧೈರ್ಯಶಾಲಿಗಳಲ್ಲದವರು ಡಾಕ್ಟರಾಗಲು ಸಾಧ್ಯವಿಲ್ಲವಷ್ಟೆ?

ಆ ಊರಿನಲ್ಲಿ ಕಾಲರಾ ಶುರುವಾದಾಗ ಊರೆಲ್ಲ ಗೋಳು ಭೀತಿಗಳಿಂದ ತುಂಬಿ ಹೋಯಿತು. ಆಸ್ಪತ್ರಿಗೂ ಮನೆಗೂ ಕಾಲರಾ ಕೇಸುಗಳು ಬರತೊಡಗಿದವು. ಕೆಲವು ಅರ್ಜಂಟು ಕೇಸಿಗೊಳಗಾದ ಶ್ರೀಮಂತರು ತಮ್ಮ ಮನೆಗೇ ಡಾಕ್ಟರನ್ನು ಕರೆದೊಯ್ಯುತ್ತಿದ್ದರು. ನೆರೆಹೊರೆಗಳಲ್ಲಿಯೂ ಕಾಲರಾ ಹತ್ತಿಕೊಂಡಿತು.

"ಈ ಕಾಲರಾ ವಿಷಯದಲ್ಲಿ ಧೈರ್ಯವೇ ಮುಖ್ಯ. ಅದೇ ಔಷಧ. ಇದು ನೊಣಗಳಿಂದಲೇ ಹರಡುವಂಥ ರೋಗ. ಆದರೆ ಸುಮಾರು ಅರ್ಧವಾಸಿ ಜನರಿಗೆ ಭಯದಿಂದಲೇ ಕಾಲರಾದ ಹಾಗೆ ಬರುತೆ. ಈ ಸಮಯದಲ್ಲಿ ಏನು ತಿನ್ನುವುದಾದರೂ ಕುಡಿಯುವುದಾದರೂ ಒಳ್ಳೆಯ ಬಿಸಿಬಿಸಿಯಾಗಿರಲಿ. ನೀರನ್ನು ಕುದಿಸಿ ಮುಚ್ಚಿಡಬೇಕು. ಮಜ್ಜಿಗೆಗೂ ಕುದಿಸಿದ ನೀರನ್ನೇ ಹಾಕಬೇಕು. ತರಕಾರಿಗಳನ್ನೆಲ್ಲ ಅಂಗಳದಲ್ಲೇ ಸುರಿದು ಚೆನ್ನಾಗಿ ತೊಳೆದು ಒಳಗಿಡಬೇಕು. ಬೀದಿ ತಿಂಡಿ ಕಣ್ಣೆತ್ತಿಯೂ ನೋಡಬಾರದು. ಇಷ್ಟು ನಿಯಮ ಪಾಲಿಸಿಕೊಂಡಿದ್ದರೆ ಕಾಲರಾಕ್ಕೆ ಮಾತ್ರ ಭಯಪಡ

ಬೇಕಾಗಿಲ್ಲ" ಎಂದು ಡಾಕ್ಟರ್ ಎಲ್ಲರಿಗೂ ಉಪದೇಶಿಸುತ್ತ, ತಮ್ಮ ಮನೆಯಲ್ಲಿಯೂ ಅದನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಮಾಡಿದ್ದರು.

ಇಂತಹ ಧೈರ್ಯಶಾಲಿಗಳ ಮನೆಯಲ್ಲಿರುವ ತಾನು ತನ್ನ ಅನುಭವಗಳನ್ನು ಹೇಳಿದರೆ ತನ್ನನ್ನು ಎಲ್ಲರೂ ಹೇಡಿ, ಪುಕ್ಕ, ಅಳ್ಳೆದೆಯವ ಎನ್ನಬಹುದು ಎಂದು ತಿಮ್ಮ ಸುಮ್ಮನಿದ್ದನು.

ಕೊನೆಗೆ ಅಚ್ಯುತಭಟ್ಟರು ತಮಗಾದ ಪಿಶಾಚಿಯ ಅನುಭವಗಳನ್ನು ಹೇಳಿದ ಮೇಲೆ ತಿಮ್ಮನಿಗೆ ತನಗಾಗುವ ಅನುಭವಗಳನ್ನು ಅವರ ಹತ್ತಿರ ಹೇಳೋಣವೆನಿಸಿತು. ಹಾಗೆಯೇ ಒಂದು ದಿನ ತಿಮ್ಮ ಅವರೊಂದಿಗೆ ಮಾರ್ಕೆಟ್ಟಿಗೆ ಹೋಗುತ್ತ, "ಅಚ್ಯುತಭಟ್ರೆ, ಈ ಮನೆಯಲ್ಲಿ ಪಿಶಾಚಿಯುಂಟೆಂಬುದು ನಿಜ, ನನಗೆ ಗೊತ್ತಾಗಿದೆ" ಎಂದ.

"ಹೇಗೆ? ಏನಾಯಿತು ನಿನಗೆ?"

"ನಾನು ಜಗಲಿಯಲ್ಲಿ ಇರಿಸಿ ಹಲಗೆಯ ಬುಡದಲ್ಲಿ ಚಾಪೆ ಹಾಸಿಕೊಂಡು ಮಲಗುತ್ತೇನಷ್ಟೆ? ಲಾಂದ್ರ ನಂದಿಸಿ ನನ್ನ ತಲೆ ಹತ್ತಿರವೇ ಇಟ್ಟಿರುತ್ತೇನೆ, ಮಲಗುವ ಮೊದಲು ಒಂದೂ ಇಲಸ್ಟ್ರೇಟೆಡ್ ವೀಕ್ಲಿ, ಅಥವಾ ಏನಾದರೂ ಪುಸ್ತಕ ನೋಡುತ್ತಾ, ತೂಕಡಿಕೆ ಬರುವಾಗ ದೀಪ ನಂದಿಸಿ ಮಲಗುವುದು ವಾಡಿಕೆ. ಮಲಗಿದ ಕೂಡಲೇ ನಿದ್ದೆ ಹಿಡಿದು ಬಿಡುತ್ತದೆ. ನಿದ್ದೆ ಹಿಡಿದ ಮೇಲೆ ಅಂಗಳದಲ್ಲಿ ಚರ್ರ ಚರ್ರ ಅಂತ ಜಗಲಿಯ ವರೆಗೂ ಯಾರೋ ಬಂದ ಹಾಗೆ ಚಪ್ಪಲಿಯ ಶಬ್ದ ಕೇಳಿಸುತ್ತೆ. ಕೆಲವು ಸಾರಿ ಎಚ್ಚತ್ತುಕೊಂಡು ಅಂಗಳಕ್ಕೆ ಹಣಕಿ ನೋಡುತ್ತೇನೆ. ಆಗ ಯಾರೂ ಇರುವುದಿಲ್ಲ. ಕೆಲವು ಸಾರಿ ಅರ್ಜಂಟಾಗಿ ಡಾಕ್ಟರನ್ನು ಕರೆದುಕೊಂಡು ಹೋಗಲು ಯಾರಾದರೂ ಮಧ್ಯರಾತ್ರಿಗೆ ಸಹಾ ಬರುವುದುಂಟು, ಯಾರೂ ಕಾಣಿಸದಿರುವಾಗ ಮಾತ್ರ ನನಗೆ ಆಶ್ಚರ್ಯವಾಗುತ್ತದೆ. ಕನಸೋ ಏನೋ ಅಂದುಕೊಂಡು ಮಲಗಿಬಿಡುತ್ತೇನೆ. ಬೆಳಿಗ್ಗೆ ಎದ್ದಾಗ ರಾತ್ರಿಯಲ್ಲಿ ಕಂಡದ್ದು ಕೇಳಿದ್ದು ಎಲ್ಲವೂ ನೆನಪಾಗುತ್ತದೆ. ಅಂಗಳದಲ್ಲಿ ಯಾರೊ ಓಡಾಡಿದ ಹಾಗೆ ಚಪ್ಪಲಿಯ ಶಬ್ದ, ಕ್ಯಾಕರಿಸಿ ಉಗುಳಿದ ಹಾಗೆ ಶಬ್ದ, ಯಾರೋ ಇಣಿಕಿ ಹಲಗೆಯ ಮೇಲಿನಿಂದ ಬಾಗಿ ನಾನು ಮಲಗಿರುವುದನ್ನು ಮಿಳಿ ಮಿಳಿ ನೋಡಿದ ಹಾಗೆ, ಆ ಕಣ್ಣುಗಳು ಚೌಕನಾಗಿ ಕೆಂಪಗೆ ಹೊಳೆಯುತ್ತಿರುವ ಹಾಗೆ ಉದ್ದನಾದ ಕೈಗಳನ್ನು ಒಳಕ್ಕೆ ಚಾಚಿ ನನ್ನ ತಲೆದಿಂಬಿನ ಹತ್ತಿರವಿದ್ದ ಪುಸ್ತಕಗಳನ್ನು ಎತ್ತಿಕೊಂಡು ಧೊಪ್ಪಂತ ಕೆಳಗೆ ಹಾಕುವ ಹಾಗೆ ಕಾಣುತ್ತಿದೆ. ಅದಕ್ಕೆ ಸರಿಯಾಗಿ ಎದ್ದು ನೋಡಿದರೆ ಪುಸ್ತಕ ಪತ್ರಿಕೆಗಳು ನಾನಿಟ್ಟ ಹಾಗೆ ಇರುವುದೂ ಇಲ್ಲ. ಅನೇಕ ಸಲ ಹೀಗಾಗುತ್ತಾ ಇದೆ. ಆದರೆ ನಾನು ಹೆದರಲಿಲ್ಲ. ನರಸಿಂಹ ಸ್ಮರಣೆ ಮಾಡುತ್ತಾ ಮಲಗಿಕೊಳ್ಳುತ್ತೇನೆ. ಮಧ್ಯರಾತ್ರಿಯಲ್ಲೆದ್ದು ಅಂಗಳಕ್ಕಿಳಿಯುತ್ತೇನೆ. ಆಚೀಚೆ ನೋಡುತ್ತೇನೆ. ಆಗ ಮಾತ್ರ ಏನೂ ಕಾಣಿಸುವುದಿಲ್ಲ. ನಿದ್ರೆಯಲ್ಲಿರುವಾಗ ಮಾತ್ರ ಹಾಗೆ ಶಬ್ದ ಕೇಳುವುದೂ, ದೃಶ್ಯ ಕಾಣುವುದೂ ಪಿಶಾಚಿಯೋ ಅಂತ ಅನುಮಾನವಾಗಿದೆ. ಇದನ್ನು ಡಾಕ್ಟರರಾಯರಿಗೆ ಹೇಳಿದರೆ ನಗಾಡಿಯಾರು. ಅಂತ ಸುಮ್ಮನಿದ್ದೇನೆ."

ಅಚ್ಯುತಭಟ್ಟರು ತಿಮ್ಮ ಹೇಳಿದ್ದನ್ನು ಶ್ರದ್ಧೆಯಿಂದಲೇ ಕೇಳಿ, "ಹೌದಪ್ಪ. ನಿನಗೆ ಈ ವರೆಗೂ ಬಾರದ ಅಂಥಾ ಸ್ವಪ್ನ, ಅದೂ ಒಂದೇ ರೀತಿಯ ಸ್ವಪ್ನ ಆ ಮನೆಯ ವಿಶೇಷದಿಂದಲೇ ಬರುತ್ತದೆನ್ನಲು ಸಂದೇಹವೇ ಇಲ್ಲ. ಇದೆಲ್ಲ ಅವುಗಳ ಚೇಷ್ಟೆಗಳೆಂತಲೇ ಇಟ್ಕೊ. ಧೈರ್ಯವಿಲ್ಲದಿದ್ದರೆ ದಿನಾ ಇಂಥಾದ್ದೆಲ್ಲಾ ನೋಡಿಕೊಂಡು ಇರಲಾಗುತಿತ್ತೆ? ಇದರಿಂದ ಅವೇನೂ ಮಾಡಲಾರವೆಂಬುದು ಸ್ಪಷ್ಟವಾಯಿತಷ್ಟೆ? ಆದರೂ ನೀನು ಅಲ್ಲೇ ಏಕೆ ಮಲಗಬೇಕು? ಒಳಗೆ ಮಲಗಿಕೊಂಡು ಬಿಡೇನು?" ಎಂದರು.

"ಏಕೆ ಒಳಗೆ ಮಲಗುವುದೆಂದು ಅವರು ಕೇಳಿದರೆ ಎಲ್ಲಾ ಹೇಳಬೇಕಾಗುತ್ತೆ ನೋಡಿ."

"ಹೇಳಿದರಾಯಿತು. ಅದಕ್ಕೇನಂತೆ? ನಿನ್ನನ್ನು ಅಂಜುಬುರುಕನೆಂದು ತಮಾಷೆ ಮಾಡುವರೆಂತಲೆ? ಸರಿ ಸರಿ ನಾಳೆ ನಾನೇ ಮೆಲ್ಲನೆ ಈ ವಿಷಯ ಪ್ರಸ್ತಾಪಿಸುತ್ತೇನೆ. ಅವರೇನು ಹೇಳುತ್ತಾರೋ ಕೇಳುವ."

ತಿಮ್ಮನಿಗೂ ಅದೇ ಬೇಕಾಗಿತ್ತು.

ಮರುದಿನ ರಾತ್ರಿ ಅಚ್ಯುತ ಭಟ್ಟರು ಹರಟೆಗೆ ಬಂದಾಗ, ಡಾಕ್ಟರನ್ನು ಕುರಿತು, "ಅಂದ ಹಾಗೆ ನಿಮಗೆ ಈ ಮನೆಯಲ್ಲಿ ಯಾವುದೊಂದು ಉಪದ್ರವೂ ಕಾಣಿಸಲೇ ಇಲ್ಲವೆ?" ಎಂದು ಪ್ರಶ್ನೆ ಮಾಡಿದರು.

"ಏನೂ ಇಲ್ಲವಲ್ಲ! ನಾವೇ ಪಿಶಾಚಿಗಳು!" ಎಂದರು ಡಾಕ್ಟರು.

"ಸ್ವಪ್ನದಲ್ಲಾಗಲೀ ಬೇರೆ ವಿಧದಲ್ಲಾಗಲೀ ಏನೂ ಕಂಡಿಲ್ಲವೆ? ಆದರೆ ನಿಮ್ಮ ತಿಮ್ಮನಿಗೆ ದಿನಾ ರಾತ್ರಿ ಏನೋ ಕಾಣಿಸುತ್ತದಂತೆ ನಿಮ್ಮೊಡನೆ ಹೇಳಲೇ ಇಲ್ಲವೆ?"

"ಇಲ್ಲವಲ್ಲಾ! ನಿಮ್ಮ ಹತ್ರ ಹೇಳಿದನೇನು? ಏನಂತೆ ಅದು? ಏನೋ ತಿಮ್ಮ?"

ಕುತೂಹಲದಿಂದ ಎಲ್ಲರೂ ತಿಮ್ಮನ ಮುಖ ನೋಡಿದಾಗ, "ಮತ್ತೇನಿಲ್ಲ. ಅದು ಪಿಶಾಚಿಗಿಶಾಚಿ ಇರಲಿಕ್ಕಿಲ್ಲ. ಏನೋ ಹಾಳು ಸ್ವಪ್ನ" ಎಂದು ತಿಮ್ಮ ಅಚ್ಯುತಭಟ್ಟರ ಹತ್ತಿರ ಹೇಳಿದುದನ್ನೆಲ್ಲಾ ವರದಿ ಮಾಡಿದ.

ಡಾಕ್ಟರ್ ಜನಾರ್ಧನರಾಯರ ಗಂಭೀರ ಮುಖಮಂಡಲದಲ್ಲಿ ಮುಗುಳುನಗೆ ಲಾಸ್ಯವಾಡಲು, "ಇವನು ಮನಸ್ಸಿನಲ್ಲಿ ಅದನ್ನೇ ಕುರಿತು ಆಲೋಚನೆಮಾಡುತ್ತಿದ್ದು ಮಾಡಿದರೆ ಹಾಗೆಲ್ಲಾ ಸ್ವಪ್ನ ಕಾಣದೆ ಇರುತ್ತಯೇ ಮತ್ತೆ? [illegible] ಕತೆಗಳನ್ನು ಕೂಡಾ ಬರೆಯುತ್ತಾನೇ? ಇಂಥವರ ಮನಸ್ಸೇ ಕಲ್ಪನಾಮಯ. ಹೀಗೂ ಕಂಡೀತು, ಇದಕ್ಕಿಂತ ಹೆಚ್ಚೂ ಕಂಡೀತು. ಹೋಗಲಿ ತಿಮ್ಮ, ಇನ್ನು ಮೇಲೆ ಜಗಲೀಲಿ ಮಲಗಬೇಡ, ಒಳಗೆ ಕೋಣೆಯಲ್ಲೇ ಮಲಗಿಕೊ" ಎಂದರು.

ಹಾಗೆಯೇ ಆ ದಿನ ರಾತ್ರಿ ತಿಮ್ಮ ಕೋಣೆಯೊಳಗೆ ಮಲಗಿದ.

ಆದರೆ ರಾತ್ರಿ ಅನೇಕ ಬಾರಿ ಎಚ್ಚರಾಗತೊಡಗಿತು. ಯಾರೋ ಅಂಗಳದಲ್ಲಿ ಬರುವ ಸದ್ದು ಮಾತ್ರವಲ್ಲ, ಬಡಬಡ ಬಾಗಿಲು ಜೋರೆ ಗುದ್ದಿದರಂತೆ. ಯಾರೋ ಡಾಕ್ಟರನ್ನು ಕರೆಯಲು ಬಂದಿರಬಹುದೆಂದು ತಿಮ್ಮ ಬಾಗಿಲು ತೆರೆದು ಹೊರಗೆ ನೋಡುತ್ತಾನೆ. ಯಾರೂ ಇಲ್ಲ. ಯಾರೂ ಬಂದ ಸೂಚನೆಯು ಕುರುಹೂ ಕಾಣಲಿಲ್ಲ. ಎಲ್ಲಾ ನಿಃಶಬ್ದ. ಮತ್ತೆ ಕೋಣೆಯೊಳಗೆ ಹೊಕ್ಕು ಕಣ್ಣು ಮುಚ್ಚಿದ ಕೂಡಲೇ ಏನೇನೋ ಭಯಂಕರಾಕಾರಗಳು ಕಾಣಿಸತೊಡಗುವುವು.

ಮರುದಿನ ಡಾಕ್ಟರ್ರಾಯರು, "ಏನೋ ತಿಮ್ಮ? ರಾತ್ರಿ ಏನೂ ಕಾಣಲಿಲ್ಲವಷ್ಟೆ? ಸರಿಯಾಗಿ ನಿದ್ದೆ ಬಂತೇನೋ?" ಎಂದು ಕೇಳಿದರು.

"ಏನು ನಿದ್ದೆಯೋ ಮಣ್ಣೊ! ನಾಲ್ಕಾರು ಸರ್ತಿ ಹೊರಗೆ ಯಾರೋ ಬಂದ ಹಾಗಾಯಿತು. ನೋಡಿದರೆ ಯಾರೂ ಇಲ್ಲ."

"ಹಾಗೇನು? ಈ ದಿನ ರಾತ್ರಿ ಹಾಗಾದಾಗ ನನ್ನನ್ನು ಕರೆ."

"ಅದೆಲ್ಲ ಬೇಡ, ನಾನು ಒಳಗೆ ಮಾತ್ರ ಮಲಗಲಾರೆ. ಆಕಾಶ ಕಾಣದ ಹಾಗೆ ಒಳಗೆ ಮಲಗಿದರೆ, ಏನೋ ಪಾತಾಳದಲ್ಲಿರುವ ಹಾಗೆ ಕಾಣುತ್ತೆ. ಜಗಲಿಯಲ್ಲೇ ಮಲಗುತ್ತೇನೆ."

"ಹೋಗಲಿ, ಉಪ್ಪರಿಗೇಲಿ ನಮ್ಮ ಹತ್ತಿರವೇ ಮಲಕ್ಕೊ."

"ಬೇಡ ಬೇಡ. ನಾನು ಜಗಲಿಯಲ್ಲೇ ಮಲಗುತ್ತೇನೆ."

ಜಗಲಿಯಲ್ಲಿ ಮಲಗುವುದರಿಂದ ತಿಮ್ಮನಿಗಿರುವ ಮುಖ್ಯ ಉಪಯೋಗವೇನೆಂದರೆ. ರಾತ್ರಿ ಎಷ್ಟು ಹೊತ್ತಿನವರೆಗೆ ಬೇಕಾದರೂ ಪುಸ್ತಕಗಳನ್ನು ನೋಡುವ ಸ್ವಾತಂತ್ರ್ಯವಿರುತ್ತದೆ. ಡಾಕ್ಟರ್ರಾಯರ ಹತ್ತಿರ ಮಲಗಿದರೆ ಅದಕ್ಕೆಲ್ಲ ಸಾಧ್ಯವಾಗದು.

ಅಂತೆಯೇ ತಿಮ್ಮ ಜಗಲಿಯಲ್ಲೇ ತನ್ನ ಪಾಡಿಗೆ ಮಲಗಿಕೊಂಡ. ಕೆಲವು ದಿನಗಳವರೆಗೆ ವಿಶೇಷವೇನೂ ಕಾಣಿಸಲಿಲ್ಲ.

೨೭

ಮತ್ತೊಂದು ದಿನ ಬೆಳದಿಂಗಳ ರಾತ್ರಿ. ತಿಮ್ಮ ನಡುರಾತ್ರಿಯಲ್ಲಿ ಎದ್ದು ಅಂಗಳದ ಬದಿಗೆ ಹೋಗಿ ಮತ್ತೆ ಬಂದು ಚಾಪೆಯಲ್ಲಿ ಕುಳಿತನಷ್ಟೇ; ಅಷ್ಟರಲ್ಲಿ ಬೇಲಿಯ ಬದಿಯಲ್ಲಿ "ಕಡಕ್" ಎಂಬ ಶಬ್ದ ಕೇಳಿಸಿತು.

ಏನೆಂದು ಕುಳಿತಲ್ಲೇ ಬಾಗಿ ನೋಡಿದ. ಬೇಲಿಗೆ ಅಳವಡಿಸಿದ ತಡಿಕೆ ಬಾಗಿಲ ಹತ್ತಿರ ಕುಳ್ಳಗಾದೊಂದು ಮನುಷ್ಯಾಕೃತಿ ಅವನ ಕಣ್ಣಿಗೆ ಕಂಡಿತು. ಅದು ಬಹಳ ಮಂದಗತಿಯಿಂದ ಮುಂದೆ ಮುಂದೆ ಸರಿದು ಬರುತ್ತಿತ್ತು!

ಶುಭ್ರವಾದ ಬಿಳಿ ಬಟ್ಟೆಯನ್ನು ನೆತ್ತಿಯಿಂದ ಉಂಗುಷ್ಠದವರೆಗೂ ಮುಸುಕು ಹಾಕಿತ್ತು. ಎಳ್ಳಿನಷ್ಟು ಕೂಡ ದೇಹಭಾಗವು ಕಾಣಿಸುತ್ತಿ-

ದ್ದಿಲ್ಲ. ಪರಿಮಾಣ ಎರಡೂವರೆ ಅಡಿಗಿಂತ ಹೆಚ್ಚಿರದು.

ಅದು ಮೆಲ್ಲಮೆಲ್ಲನೆ ಅಳಿಯಾಲಿಕೊಂಡು ಬಂದು, ಮನೆಯ ಬಾಗಿಲಿಗಿದಿರಾಗಿ ಅಂಗಳದ ದಂಡೆಯಲ್ಲಿ ನಿಂತಿತು.

ಅದರ ಮುಂದೆಯೇ ತುಲಸೀ ಕಟ್ಟೆಯಿತ್ತು. ಅದು ತುಲಸೀ ಕಟ್ಟೆಯ ಆಚೆಗೆ, ಬಾಳೇಗಿಡದ ಬುಡದಲ್ಲಿ ಹಾಗೆ ನಿಂತುಕೊಂಡು ಮುಖವನ್ನು ತಗ್ಗಿಸಿತಗ್ಗಿಸಿ, ತನ್ನನ್ನೇ ನೋಡುವ ಹಾಗೆ ಶಿವ್ಯನಿಗೆ ಕಂಡಿತು. ಅವನೂ ಇರಿಕಿಪಲಗಿಯ ಮರೆಯಿಂದ ಅದನ್ನೇ ನೋಡುತ್ತಿದ್ದ.

ಅದು ತನ್ನನ್ನು ನೋಡಿತೆಂದು ಶಿವ್ಯನಿಗೆ ಗೊತ್ತಾದ ಕೂಡಲೇ ಶಿವ್ಯ "ಆರದು?" ಎಂದ.

ಅದು ಪುನಃ ಅವನನ್ನು ಬಗ್ಗಿ ನೋಡಿ, "ನಾಂಂಂಂ" ಎಂದು ಬೆಕ್ಕಿನ ಹಾಗೆ ಸಪ್ಪೂರವಾದ ರಾಗವೊಂದನ್ನು ತೆಗೆದು ಮೌನವಾಯಿತು.

ಶಿವ್ಯ ನರಸಿಂಹ ಸ್ಮರಣೆ ಮಾಡುತ್ತಾ ಜನಿವಾರ ಹಿಡಿದುಕೊಂಡು ಮರದ ತುಂಡಿನ ಹಾಗೇ ಕುಳಿತುಬಿಟ್ಟ.

ಬಹುಶಃ ಅದರ ಮುಂದೆ ಪವಿತ್ರವಾದ ತುಲಸೀಕಟ್ಟೆಯಿದ್ದುದರಿಂದ ಅದು ಮುಂದಡಿ ಇಡಲಿಲ್ಲವೆಂದು ಕಾಣುತ್ತದೆ. ಶಿವ್ಯ ತುಲಸೀ ವೃಂದಾವನಕ್ಕೂ ಮನಸಾ ವಂದಿಸಿದ.

ಮತ್ತೆ ಅವನು ಕಣ್ಣು ಹಾಯಿಸಿದಾಗ ಆ ಮಾನವಾಕೃತಿ, ಬಂದಷ್ಟೇ ಸಾವಧಾನವಾಗಿ ಹಿಂದೆ ಹಿಂದೆ ಸರಿದುಕೊಂಡು ಹೋಗತೊಡಗಿತು. ವಿಚಿತ್ರವೆಂದರೆ ಅದು ಹಿಂದಕ್ಕೆ ತಿರುಗಿ ಹೋದುದೇ ಅಲ್ಲ. ನಿಂತ ಹಾಗೇ ಹಿಂದೆ ಹಿಂದೆ ಹೋಗಿ ಬೇಲಿಯ ಕಡಿಕೆಯ ಬಾಗಿಲನ್ನು ಮುಟ್ಟಿತು. ಮತ್ತೆ "ಕರಕ್" ಎಂಬ ಶಬ್ದ. ಶಬ್ದದೊಂದಿಗೇ ಅದು ಮಾಯವಾಗಿತ್ತು.

ಶಿವ್ಯ ತನಗೆ ಧೈರ್ಯವುಂಟೋ ಇಲ್ಲವೋ ನೋಡಿಕೊಳ್ಳಲು ನರಸಿಂಹ ಸ್ಮರಣೆ ಮಾಡುತ್ತಾ, ಮತ್ತೊಮ್ಮೆ ಅಂಗಳಕ್ಕಿಳಿದು ಬೇಲಿಯವರೆಗೂ ಹೋಗಿ, ಅದರಾಚೆಗಿನ ಬೀದಿಯನ್ನು ಆಚೆಯಿಂದೀಚೆಯ ತಲೆಯ ವರೆಗೆ ಒಮ್ಮೆ ನೋಡಿ, ಏನೂ ಕಾಣದೆ ನೆಮ್ಮದಿಯಿಂದ ಹಿಂದಿರುಗಿ ಬಂದು ಮಲಗಿ ನಿದ್ದೆ ಮಾಡಿದ.

ಮರುದಿನ ಅವನು ತಾನು ರಾತ್ರಿ ಕಂಡದ್ದನ್ನು ಡಾಕ್ಟರ್‌ರಾಯರ ಹತ್ತಿರ ಹೇಳಿದಾಗ ಅವರು, "ಎಲ್ಲಿಯೋ ದೀಪದ ಪ್ರಕಾಶವೋ, ಬೆಳದಿಂಗಳೋ ನಿನಗೆ ಹಾಗೆ ಕಾಣಿಸಿರಬೇಕು" ಎಂದರು.

ಇದನ್ನು ಕೇಳಿ ಅಚ್ಯುತಭಟ್ಟರು ಕೂಡ ಡಾಕ್ಟರರ ಅಭಿಪ್ರಾಯವನ್ನೇ ಸಮರ್ಥಿಸಿದರು.

ಮುಂದೆ ನಾಲ್ಕಾರು ದಿನಗಳಲ್ಲಿ ಶಿವ್ಯ ಹೇಳಿದ್ದೆಲ್ಲ ನಿಜವೆಂದು ಡಾಕ್ಟರ್‌ರಾಯರಿಗೆ ಖಚಿತವಾಯಿತು. ಆ ದಿನ ಅವರು ಮಧ್ಯರಾತ್ರಿ ಹೊತ್ತಿಗೆ ಎದ್ದು ಉಪ್ಪರಿಗೆಯ ಕಿಟಕಿಯ ಮೂಲಕ ಹೊರಗೆ ನೋಡಿದಾಗ, ಒಂದು ತೆಂಗಿನ ಮರಕ್ಕೆ ಒರಗಿ ಕಾಲನ್ನು ಹಿಂದೂಗೆ ಮಡಚಿ ನಿಂತಿದ್ದ ಒಂದು ಬಿಳಿ ಮನುಷ್ಯಾಕೃತಿಯನ್ನು ಡಾಕ್ಟರ್ ಗೋವರ್ಧನರಾಯರು ನೋಡಿ, "ಆರದು? ಆಂ?" ಎಂದು ಕೂಗಿದರು.

ಆ ಶಬ್ದ ಕೇಳಿದ ಕೂಡಲೇ ಆ ಆಕೃತಿ ಮಾಯವಾಯಿತು.

ಕೂಡಲೇ ಡಾಕ್ಟರು ಕೆಳಗೆ ಬಂದು, ಶಿವ್ಯನನ್ನು ಎಬ್ಬಿಸಿ ಲಾಂದ್ರ ಹಿಡಿದುಕೊಂಡು ಮನೆಯ ಸುತ್ತಲೂ ಒಮ್ಮೆ ಸುತ್ತಾಡಿ ಏನನ್ನೂ ಕಾಣದೆ "ಹುಂ, ನೀನು ಹೇಳಿದ್ದೆಲ್ಲ ನಿಜವೇ ಅಂತ ನಂಬಲೇಬೇಕಾಯ್ತು! ಅಚ್ಯುತಭಟ್ಟರು ಹೇಳುವ ಹಾಗೆ ಪಿಶಾಚಗಳಿದ್ದರೂ ಇದ್ದಾವು. ಅವುಗಳೇನೂ ಉಪದ್ರವ ಮಾಡುವುದಿಲ್ಲವೆಂಬುದೂ ನಿಜವೇ. ಆದರೆ ಮಕ್ಕಳುಗಿಕ್ಕಳು ಹೆದರಿಕೊಂಡರೆ ಅಪಾಯವಿದೆಯಷ್ಟೆ?" ಎಂದರು ತಮಗೆ ತಾವೇ ಹೇಳಿಕೊಂಡಂತೆ.

ಮತ್ತೆ ಕೂಡಲೇ ಬೇರೆ ಮನೆಯನ್ನು ಹುಡುಕಿಕೊಂಡು, ಆ ಮನೆಯನ್ನು ಬಿಟ್ಟದ್ದೂ ಆಯಿತು.

೨೮

ಆ ವೇಳೆ ಶಿವ್ಯನಿಗೆ ಸ್ವಲ್ಪ ಕಾಲ ಯಾವ ಕಷ್ಟವೂ ಎನಿಸಲಿಲ್ಲ. ಆ ಊರೂ ಅವನಿಗೆ ಹಿಡಿ

ತ್ತು. ಊರಿಗೆ ಅವನೇ ಸ್ವತಃ ಕಾಗದ ಬರೆಯು ವನು. ತಾಯಿಯವರು ಅವನಿಗೆ ಬರೆಯಿಸುವಳು.

ಡಾಕ್ಟರ‍್ರಾಯರು, ಕುಟುಂಬದವರು ಕೂಡ ಅವನ ಮೇಲೆ ಕೆಲಸದಾಳೆಂಬ ಭೇದಭಾವನೆ ಏನೂ ತೋರಿಸಲಿಲ್ಲ. ಡಾಕ್ಟರ ಮಕ್ಕಳೂ ತಿಮ್ಮನೊಡನೆ ಚೆನ್ನಾಗಿ ಆಡಿಕೊಳ್ಳುವರು. ಮೊತ್ತಮೊದಲು "ಬೈಸ್ಕೋಪು" ಎಂಬ ವಿಚಿತ್ರ ಚಿತ್ರವು (ಮೂಕ ಸಿನಿಮಾ) ಪೊನ್ನಾ ನಕ್ಕಾಡಿಗೆ ಬಂದು ಡೇರೆ ಹಾಕಿತು. ಡಾಕ್ಟರು ತಿಮ್ಮನನ್ನು ಸಹ ಕರೆದುಕೊಂಡು ಸಕುಟುಂಬ ರಾಗಿ ಅದಕ್ಕೆ ಹೋದರು. ಹಾಗೆಯೇ ಒಂದು ಸರ್ಕಸ್ಸಿಗೂ ತಿಮ್ಮನನ್ನು ಸಹ ಕರೆ ದೊಯ್ದರು.

ಆದರೆ ಡಾಕ್ಟರ್ ರಾಯರು ಬಹಳ ಮುಂಗೋಪಿಗಳು. ಅದು ಅವರ ರೋಗೀ ಪರಿ ವಾರಗಳೊಂದಿಗೆ ಅವರು ವರ್ತಿಸುವ ರೀತಿ ಯಿಂದ ಆಗಾಗ ಗೊತ್ತಾಗುತಿತ್ತು. ಅವರು ಹೇಳಿದುದಕ್ಕೆಲ್ಲ ರೋಗಿಗಳು ಅಥವಾ ಅವರ ಕಡೆಯವರು ಒಪ್ಪಲೇಬೇಕು. ಅವರು ಹೇಳಿದ ಹಾಗೆಯೇ ಮಾಡಬೇಕು. ತಪ್ಪಿದವರನ್ನು ಹೀನಾಮಾನ ಬಯ್ಯುವರು. ಮುಸುರೆ ತಿಕ್ಕುವ ಕೆಲಸದವಳೊಬ್ಬಳು ಒಂದಾಣೆ ಕದ್ದದ್ದಕ್ಕೆ, ಅವಳ ಸಂಬಳದ ದುಡ್ಡನ್ನೆಲ್ಲ ಅವಳ ಮುಖಕ್ಕೆ ಬಿಸಾಡಿ "ಇನ್ನು ಈ ಮನೆಗೆ ಮುಖ ತೋರಿಸಬೇಡ" ಎಂದು ಗರ್ಜಿಸಿದ್ದರು.

ಈ ಬಗೆಯ ಅವರ ಸಿಟ್ಟಿಗೆ ತಾನು ತುತ್ತಾಗ ದಂತೆ ತಿಮ್ಮ ಬಹಳ ಜಾಗರೂಕತೆಯಿಂದಿದ್ದ. ಆದರೂ ಒಮ್ಮೆ ನಡೆದ ಪ್ರಸಂಗದಿಂದ ಅವರಿಗೆ ಸಿಟ್ಟು ಬಂದು ತಿಮ್ಮನೂ ಅವರಿಗೇನೂ ಕಡಮೆಯಿಲ್ಲವೆಂಬಷ್ಟು ರೋಷವನ್ನೇ ಎಬ್ಬಿಸಿ ಬಿಟ್ಟಿತು.

ಪೊನ್ನಾನಕ್ಕಾಡಿನ ಮಲೆಯಲ್ಲಿ ವರುಷದಲ್ಲಿ ಒಂದೆರಡು ಬಾರಿ ಆನೆ ಬೀಳುವುದುಂಟು. ಹಾಗೆ ದೊರೆಯುವ ಆನೆಗಳೆಲ್ಲ ಅಲ್ಲಿಯ ಮಹಾ ಧನಿಕ ಪ್ರಮುಖರಾದ ಮೂಪನ್ನಾಯರಿಗೇ ಸೇರುತ್ತವೆ. ಅವರೇ ಆ ಬೆಟ್ಟ ಪ್ರಾಂತಗಳ ಒಡೆಯರು.

ಕಾಡಾನೆಗಳನ್ನು ಹಿಡಿಯಲು ಮಲೆ ಪ್ರಾಂತ ದಲ್ಲಿ ಬಾವಿಗಳನ್ನು ತೋಡಿ ಅದರ ಮೇಲೆ ಕೃತ್ರಿಮ ರೀತಿಯಲ್ಲಿ ಕೊಂಬೆ ಎಲೆ ಓಲೆ, ಮಣ್ಣುಗಳಿಂದ ಮುಚ್ಚಿ ಹುಲ್ಲು ಮುಂತಾದ್ದು ಬೆಳೆಯುವ ಹಾಗೆ ಮಾಡುತ್ತಾರೆ. ನೋಡಿದರೆ ಎಲ್ಲಾ ಬೆಟ್ಟಗೆ ಒಂದೇ ಬಗೆಯ ನೆಲದ ಹಾಗೆಯೇ ಕಾಣಿಸುತ್ತದೆ. ಅಕಸ್ಮಾತ್ತಾಗಿ ಗುಂಪಿನಿಂದ ತಪ್ಪಿದ ಆನೆ ಬಾವಿಯ ಮೇಲೆ ಕಾಲಿಟ್ಟು ಒಳಗೆ ಬಿದ್ದುಬಿಡುತ್ತದೆ. ಕೂಡಲೇ ಮಲೆಯನೊಬ್ಬ ಓಡಿ ಬಂದು "ಆನೆ ಬಿತ್ತು" ಎಂದು ಮೂಪನ್ನಾಯರ‍್ರಿಗೆ ತಿಳಿಸಿ ಬಹುಮಾನ ಪಡೆಯುತ್ತಾನೆ.

ಹಾಗೆ ಈ ಸಾರೆ ಒಂದು ಗಂಡಾನೆ ಬಿದ್ದಿತ್ತು. ಮೂಪನ್ನಾಯರು ಕೂಡಲೇ ದೇವಸ್ಥಾನದ ಇದಿರಿನ ಮೈದಾನದಲ್ಲಿ ಭಾರಿ ದೊಡ್ಡ ಬಲವಾದ ಮರದ ಗೂಡನ್ನು ನಿರ್ಮಿಸಲು ಹೇಳಿ ಆನೆ ಯನ್ನು ತರಲು ಏರ್ಪಡಿಸಿದರು.

ಭಾರಿ ಕೋಲಾಹಲದಿಂದ ಕಾಡಾನೆ ನಾಡಿಗೆ ಬರುವಾಗ ಜನರೆಲ್ಲ ಮುಗಿಗಿಬಿದ್ದು ನಿಂತು ಅದನ್ನು ನೋಡುವರು. ದೂರದಿಂದ ಆನೆ ಬರುವ ಶಬ್ದ ಕೇಳಿ ಬಂದ ಕೂಡಲೇ ಅಡಿಗೇ ಕೆಲಸದಲ್ಲಿದ್ದ ತಿಮ್ಮ ಕುತೂಹಲದಿಂದ ಹೊರಗೋಡಿ ಬಂದು ಬೀದಿ ಬದಿಯಲ್ಲಿ ನಿಂತ. ಡಾಕ್ಟರೂ ಅವರ ಹೆಂಡತಿಯೂ ಮಕ್ಕಳೂ ಬೀದಿಯ ಕಡೆಗೇ ಕಣ್ಣಾಗಿದ್ದರು.

ಮುಂದೂ ಹಿಂದೂ ಆನೆಗಳು ಎಳೆಯುತ್ತಿ ರಲು, ನೂಕುತ್ತಿರಲು ನಡುವೆ ನಡೆಯುತ್ತಿತ್ತು ಆ ಕಾಡಾನೆ. ಅದರ ದೇಹವೆಲ್ಲಾ ಹುಣ್ಣು ಹುಣ್ಣಾಗಿ ಗಂಟು ಗಾಯ ಬೊಕ್ಕೆ ಹಳ್ಳಗಳಿಂದ ಕೂಡಿದೆ. ತುಂಬ ಸೊರಗಿ ಸೊಂಟ ಗಂಟುಗಳ ಎಲುವುಗಳು ಕಾಣುತ್ತಿದೆ. ನೋಡಿದರೆ ಅಯ್ಯೋ ಎನಿಸುವ ಹಾಗಿತ್ತು ಪಾಪ. ಬೆಟ್ಟನ ಮೇಲೆ ಎಲ್ಲರೂ ಆ ಮಹಾಕೋಲಾಹಲಪೂರಿತವಾದ ನೂತನ ಗಜಾಗಮನದ ವೈಭವವನ್ನು ಕುತೂ ಹಲದಿಂದ ನೋಡಿದ್ದಾಯಿತು.

ಕಾಡಾನೆಯನ್ನು ಅದಕ್ಕಾಗಿ ತಯಾರಿಸಲ್ಪಟ್ಟ ಗೂಡಿನೊಳಗೆ ಸೇರಿಸಲಾಯಿತು.

೨೯

ತಿಮ್ಮ ಅಡಿಗೇ ಮನೆಗೆ ಹಿಂದಿರುಗಿ ಬಂದು ನೋಡಿದಾಗ ಹಾಗಲಕಾಯಿ ಪಲ್ಯ ಅಡಿ ಹೊತ್ತಿ ಸೀದು ವಾಸನೆ ಬರುತ್ತಿತ್ತು. ಮೊದಲು ಅದರ ವಾಸನೆ ಪದ್ಮಾವತಮ್ಮನ ಮೂಗಿಗೇ ಬಡಿಯಿತು.

"ಏನೋಡೂ ತಿಮ್ಮಾ! ಪಲ್ಯ ಹೊತ್ತಿ ನಾತ ಬಡಿಯುತ್ತಿದ್ದರೂ ಗೊತ್ತಾಗೋಲ್ವೇ ನಿಂಗೆ?" ಎಂದು ಕೂಗಿದಳು ಪದ್ಮಾವತಮ್ಮ.

ತಿಮ್ಮನೇನಾದರೂ ಸಣ್ಣಪುಟ್ಟ ತಪ್ಪುಗಳನ್ನು ಮಾಡುವುದೂ ಪದ್ಮಾವತಮ್ಮ ಹಾಗಲ್ಲ, ಹೀಗೆ ಅಂತ ಸೌಮ್ಯವಾಗಿ ಬಯ್ದು ಬುದ್ಧಿ ಹೇಳು ವುದೂ ಎಷ್ಟೋ ಸಲ ನಡೆದ ಸಂಗತಿಯೇ.

ತಿಮ್ಮ ಏನೋ ಹೇಳಬೇಕೆಂದು ಬಾಯಿ ತೆರೆ ಯುವಷ್ಟರಲ್ಲಿ, ಡಾಕ್ಟರ‍್ರಾಯರಿಗೆ ಆಸ್ಪತ್ರೆಗೆ ಹೊರಡುವ ಹೊತ್ತಾದುದರಿಂದ "ಬಡಿಸು ಬಡಿಸು" ಎನ್ನುತ್ತ ಒಳಗೆ ಬಂದು, ಪಟ್ಟಾಲ್ಲನೆ ಮಣೆಯನ್ನಿಟ್ಟುಕೊಂಡು ಕುಳಿತರು.

"ಏನು ಬಡಿಸ್ತಾನೋ ಇವನ ಕರ್ಮ. ಒಳ್ಳೇ ಹಾಗಲ್ಕಾಯಿ ಪಲ್ಯ. ನಿಮಗಿಷ್ಟದ್ದು, ಪೂರಾ ಹೊತ್ತಿಸಿ ಮಸಿ ಮಾಡಿಬಿಟ್ಟಿದಾನೆ ಆನೆ ನೋಡ ಲಿಕ್ಕೆ ಹೋಗುವಾಗ ಆ ಪಲ್ಯ ಕೆಳಗಿಟ್ಟು ಹೋಗಬೇಕಂತ ಅಷ್ಟೂ ತಿಳೀಬೇಡವೇ? ಹದಿ ನೆದು ವಯಸ್ಸಿನ ಗೋಣನಿಗೆ!" ಎಂದಳು ಪದ್ಮಾವತಮ್ಮ.

"ಗೌಜಿ! ಎಲ್ಲೋ ಬೀದೀಲಿ ಗೌಜಿ ಕೇಳಿದ ಕೂಡ್ಲೇ ಬಂತು ಇವನಿಗೆ ದರುಶನ! ಅವಸರ! ಎಲ್ಲಿಟ್ಟಿದ್ದಿಯೋ ಬುದ್ಧೀನ?" ಎಂದು ಗುರು ಗುಟ್ಟುತ್ತ ಡಾಕ್ಟರ‍್ರಾಯರು ಪಟಕ್ಕನೆ ಎದ್ದು ಬಂದು, ಒಲೆಯಲ್ಲಿದ್ದ ಕಟ್ಟಿಗೆ ಕೊಳ್ಳಿಯನ್ನು ಎಳೆದು ತಿಮ್ಮನ ಬೆನ್ನಿಗೊಂದು ಏಟು ಕೊಟ್ಟು, ಪಟಕ್ಕನೆ ಆ ಕೊಳ್ಳಿಯನ್ನು ಕೆಳಗೆ ಒಗೆದು ಅವನ ಕಿವಿ ಹಿಂಡುತ್ತ, "ಮುಂಗಿ" ಇನ್ನು ಮೇಲೆ ಕೆಲಸ ಮಾಡುವಾಗ ಎಂಥಾ ಆಟ ಬಂದರೂ ಬುದ್ಧಿ ಕಳಕೊಳ್ಳಬಾರದು, ತಿಳೀತಾ? ತಿಳೀತಾ? ಮೊದಲು ಕೆಲಸ, ಮತ್ತೆ ಆಟ ನೋಟ," ಎಂದು ಹೇಳಿ, ಮಣೆಯ ಮೇಲೆ ಕುಳಿತು, "ಹೂಂ ಬಡಿಸೋ! ಆ ಪಲ್ಯವನ್ನು ಬಡಿಸುತ್ತ ಮತ್ತೆ ಅಳು" ಎಂದು ಗದರಿಸಿದರು.

ಪೆಟ್ಟು ಜೋರಾಗಿ ಕೊಡದಿದ್ದರೂ, ಆ ಕೊಳ್ಳಿಯಲ್ಲಿ ಬೆಂಕಿಯಿದ್ದದರಿಂದ, ಅವನ ಬೆನ್ನಿಗೆ ಬಿಸಿ ತಾಗಿತ್ತು, ಅದರ ಮೇಲೆ ಹೊಡೆದು ಬಿಟ್ಟರಲ್ಲ ಎಂಬ ಅವಮಾನ! ರೋಷ! ಕಣ್ಣನಲ್ಲಿ ದಳದಳನೆ ನೀರಿಳಿಯುತ್ತಿರಲು ಕಂಬದ ಹಾಗೆ ನಿಂತುಬಿಟ್ಟ ತಿಮ್ಮ !

"ಬಡಿಸೋ!" ಎಂದು ಮೂರುಮನೆ ದೂರ ಕೇಳಿಸುವಷ್ಟು ಜೋರಾಗಿ ಕೂಗಿದರು ಡಾಕ್ಟರು.

"ಸುಮ್ನಿರೀಂದ್ರೆ" ಎನ್ನುತ್ತಾ ಪದ್ಮಾವತಮ್ಮ ಸೆರಗು ಬಿಗಿದು ಕೊಂಡು ಬಂದು ಬೇಗಬೇಗನೆ ಡಾಕ್ಟರ‍್ರಿಗೆ ಬಡಿಸಿದಳು.

ತಿಮ್ಮ ನಿಂತೇ ಇದ್ದ.

"ಹಾಗೇನಾಯಿತು ಧಾಡಿ? ಭಾರಿ ಪೆಟ್ಟು ತಾಗಿತೇನು? ಗಾಯಗೀಯ ಆದರೆ ಬುದ್ಧಿ ಗಾಯಿತು. ಹೋಗು. ಮದ್ದು ಇದೆಯಲ್ಲಾ ಹಚ್ಚಿಕೋ" ಎಂದರು ಡಾಕ್ಟರು ಊಟ ಮಾಡುತ್ತಾ.

"ಹಾಗೇನೂ ಆಗಿಲ್ಲ. ನೀವು ಹೊಡೆದಿರೀ ಅಂತ ಮರ್ಯಾದೆ ಹೋಯ್ತು, ಅಷ್ಟೆ" ಎಂದಳು ಪದ್ಮಾವತಮ್ಮ.

"ಮರ್ಯಾದೆಗೇನೂ ಕಡಿಮೆಯಿಲ್ಲ ಮಹಾ ರಾಯರಿಗೆ!" ಎಂದರು ಡಾಕ್ಟರು.

ಡಾಕ್ಟರು ಊಟ ಮಾಡಿ ಎದ್ದು ಹೋದ ಮೇಲೆ ಮೂಲೆಯಲ್ಲಿ ಕಣ್ಣೀರು ಸುರಿಸುತ್ತಾ ಹಾಗೇ ನಿಂತಿದ್ದ ತಿಮ್ಮನಿಗೆ ಪದ್ಮಾವತಮ್ಮ ಸಮಾಧಾನ ಹೇಳಿದಳು. "ಸಾಕು ಬಿಡಾ. ಅದ ನ್ನೆಲ್ಲಾ ಮನಸ್ಸಿಗೆ ಹಚ್ಚಿಗೋಬೇಡ. ಅವರಿಗೆ ಮುಂಗೋಪ ಅಂತ ಗೊತ್ತಿಲ್ಲವೆ? ಅದರ ಮೇಲೆ ಆಸ್ಪತ್ರೆಗೆ ಹೊತ್ತಾದ್ದು ಬೇರೆ. ಸ್ವಲ್ಪ ಜಾಗ್ರತೆ ಯಾಗಿ ಕೆಲಸ ಮಾಡಿದರಾಯ್ತಲ್ಲ. ಬಾ, ಮುಖ ತೊಳೆದುಕೊಂಡು ಬಂದು ನನಗೂ ಬಡಿಸಿ ನೀನೂ ಕೂತುಕೊ."

ತಿಮ್ಮನಿಗೆ ಏನೇನೋ ಹೇಳಬೇಕೆನಿಸಿತು, ಕೇಳಬೇಕೆನಿಸಿತು, ಆದರೆ ಪದ್ಮಾವತಮ್ಮನ ಹತ್ತಿರ ಹೇಳಿ ಪ್ರಯೋಜನವಿಲ್ಲವೆಂಬುದೂ ಅವ ನಿಗೆ ಗೊತ್ತು. ಡಾಕ್ಟರ‍್ರಾಯರ ಹತ್ತಿರ ಹೇಳಿ ಇನ್ನೂ ಹೆಚ್ಚಿನ ಗಲಾಟೆ ಮಾಡಿಸಿಯಾಳು. ಮಕ್ಕಳೂ ದೂರು ಹೇಳಿಯಾವು ಅಪ್ಪನ ಹತ್ತಿರ. ಅಲ್ಲದೆ ಪದ್ಮಾವತಮ್ಮನನ್ನು ಕುರಿತು ಅವನ ಮನಸ್ಸು ತೀವ್ರವಾಗಿ ಆಲೋಚನೆ ಮಾಡಲು ತೊಡಗಿತ್ತು.

ಅವಳು ಅವನಿಂದ ಉಪಾಯವಾಗಿ ಕೆಲಸ ಮಾಡಿಸುವುದರಲ್ಲಿ ಬಹಳ ಗಟ್ಟಿಗಿತ್ತಿ. ತಿಮ್ಮನು ಬಂದ ಮೇಲೆ ಅವಳು ಯಾವ ಕೆಲಸಕ್ಕೂ ಸ್ವತಃ ಮೈ ಬಗ್ಗಿಸುತ್ತಲೇ ಇಲ್ಲ. ಎಲ್ಲದಕ್ಕೂ "ತಿಮ್ಮಾ,

ತಿನ್ಕಾ" ಎನ್ನುವಳು. ಮಕ್ಕಳ ಕೆಲಸಗಳಿಂದ ಹಿಡಿದು ಸೀರೆ ಒಗೆಯುವುದಕ್ಕೂ ತಿಮ್ಮನೇ.

ಎಲ್ಲರ ಮನೆಯಲ್ಲಿಯೂ ಆಳುಕಾಳುಗಳಿದ್ದರೂ ಮನೆಯೊಡತಿಯೂ ಏನೋ ಒಂದು ಕೆಲಸ ಮಾಡುತ್ತಲೇ ಇರುತ್ತಾಳೆ. ನೆರೆಮನೆಯ ಹೆಂಗುಸೊಬ್ಬಳು ತಿಮ್ಮನನ್ನು ಕುರಿತು ಹೇಳಿದ ಮಾತು ಅವನ ಕಿವಿಗೆ ಒಂದೆರಡುಬಾರಿ ಬಿದ್ದಿತ್ತು. "ಡಾಕ್ಟರ ಹೆಂಡ್ತಿ ಆ ಹುಡುಗನ ಕೈಲಿ ಸೀರೆ ಸಹಾ ಒಗಿಸುತ್ತಾಳಲ್ಲ!" ಎಂದುದಕ್ಕೆ ಇನ್ನೊಬ್ಬಳು, "ಅವಳು ಬಹಳ ಗಟ್ಟಿಗಿತ್ತಿ. ಯಜಮಾನ್ತಿ ಅಂದರೆ ಹಾಗಿರಬೇಕು" ಎಂದಳು.

"ಅದೇನು ಗಟ್ಟಿಗಿತ್ತನವೋ! ಅದು ಬರೀ ಪಾಪದ ಹುಡುಗ! ಎಲ್ಲಾ ಕೆಲಸಕ್ಕೂ ನಾನು ನಾನು ಅಂತ ಮುಂದೆ ಓಡುತ್ತೆ. ಗಂಡು ಹುಡುಗರ ಕೈಲಿ ಹೆಂಗುಸರ, ಮಕ್ಕಳ ಬಟ್ಟೆ ಒಗೆಸಬಾರದೂ ಅಂತ ಅವಳಿಗೇ ಗೊತ್ತಾಗಬೇಕು" ಎಂದಳು ಮೊದಲನೆಯವಳು.

"ಹೌದು, ತನ್ನದೇ ತಪ್ಪು" ಎಂದುಕೊಂಡ ತಿಮ್ಮ.

ಎಂತೆಂತಹ ಕೆಲಸಗಳನ್ನೋ ತನ್ನಿಂದ ಮಾಡಿಸುತ್ತಿದ್ದಾಳೆ ಈ ಪದ್ಮಾವತಮ್ಮ. ಈಗ ತನಗೆ ಸಿಟ್ಟು ಬಂದಿದೆ ಎಂದು ತಿಳಿದು, ಸಮಾಧಾನ ಮಾಡಲು ನೋಡುತ್ತಾಳೆ, ಸೋಮಾರಿ ಮುದ್ದಮ್ಮ. ಈ ಪೆದ್ದಮ್ಮ! ಪದ್ಮಾವತಮ್ಮನಂತೆ...ಮನಸ್ಸಿನೊಳಗೇ ಬಯ್ದುಕೊಂಡ.

"ನಾನು ಕೆಲಸವೇ ಮಾಡದಿದ್ದರೆ ಏನು ಮಾಡಿಬಿಟ್ಟಾರಿವರು?" ಎಂದುಕೊಂಡ ರೋಷದಲ್ಲಿ.

ಪದ್ಮಾವತಮ್ಮ ಸಮಾಧಾನ ಹೇಳುತ್ತ ಕರೆಯುವಾಗ ತಿಮ್ಮ ಗದ್ಗದ ಸ್ವರದಿಂದ,

"ಮತ್ತೆ ಅವರು ನನ್ನ ಕಟ್ಟಿಗೆ ಕೋಲಿಲಿ ಹೊಡೀಬಹುದಾ?" ಎಂದ.

"ದೊಡ್ಡವರು. ಸಿಟ್ಟಿನಿಂದ ಒಂದು ಹೊಡೆದರು. ಮಾಸ್ತರು ಹೊಡೆಯೋದಿಲ್ಲವೆ? ಏನು ಹೋಯ್ತು ನಿನಗೆ? ಬುದ್ಧಿಗಾಯ್ತು ಅಂದುಕೋ ಹೊಡೆಯಬಾರದಿತ್ತು ಅಂತ ಅವರಿಗೂ ಗೊತ್ತಾಗಿದೆ. ಬಾ ಬಾ."

ತಿಮ್ಮ ನಿಟ್ಟುಸಿರು ಬಿಟ್ಟು ಕಣ್ಣೊರೆಸಿಕೊಂಡು ಕೆಲಸಕ್ಕೆ ತೊಡಗಿದ.

ಆ ದಿನ ಅವನು ಸೀರೆಯನ್ನೂ ಹುಡುಗಿಯ ಲಂಗಗಳನ್ನೂ ಹಾಗೆಯೇ ಬಿಟ್ಟು, ಡಾಕ್ಟರ್‍ರಾಯರ ಬಟ್ಟೆಗಳನ್ನು ಮಾತ್ರವೇ ಹಿಂಡಿ ಆರ ಹಾಕಿದ.

ಬಟ್ಟೆಗಳನ್ನು ಒಗೆಯಲಿಕ್ಕೂ ಮುಸುರೆ ತಿಕ್ಕಲಿಕ್ಕೂ ಕೆಲಸದ ಹೆಂಗುಸೊಬ್ಬಳಿದ್ದಳು. ಅವಳು ಒಗೆದಿಟ್ಟ ಬಟ್ಟೆಗಳನ್ನು ಶುದ್ಧಕ್ಕಾಗಿ ಮತ್ತೊಮ್ಮೆ ನೀರು ಹಾಕಿ ಕಾಲುರೆ ಹಿಂಡಿ ಒಣಗಿಸಬೇಕಾಗಿತ್ತು. ಮೊದಮೊದಲು ಪದ್ಮಾವತಮ್ಮನೂ ತಿಮ್ಮನೂ ಸೇರಿಕೊಂಡೇ ಆ ಕೆಲಸ ಮಾಡುತಿದ್ದರು. "ನೀವು ಸುಮ್ಮನಿರೀ ಚಿಕ್ಕಮ್ಮ ನಾನು ಮಾಡುತ್ತೇನೆ. ನಾನು ಹಿಂಡುತ್ತೇನೆ. ನಾನು ಆರ ಹಾಕುತ್ತೇನೆ" ಎನ್ನುತ್ತ, ತಿಮ್ಮನೇ ಮುಂಬಿದ್ದು ಮುಂಬಿದ್ದು ಕೆಲಸ ಮಾಡುತ್ತಿದ್ದ. ಅದು ಪದ್ಮಾವತಮ್ಮನಿಗೂ ಹಿತವೆನಿಸಿತ್ತು. "ಹುಶಾರು ಹುಡುಗ, ತುಂಬ ಗಟ್ಟಿಗ" ಎಂದು ಬಾಯ್ತುಂಬ ಮೆಚ್ಚಿಕೊಂಡಳು. ಹೊಗಳಿಕೆಯ ಉಬ್ಬಿನಿಂದ ತಿಮ್ಮ ಕುರುಡನಾದ.

೩೦

ಕಟ್ಟಿಗೆಕೋಲಿನ ಪೆಟ್ಟು ಬಿದ್ದ ದಿನ ಅವನು ರಾಯರ ಬಟ್ಟೆಗಳನ್ನೂ, ಹುಡುಗನ ಅಂಗಿ ಇಜಾರುಗಳನ್ನು ಹಿಂಡಿ ಆರಿಸಿ. ಸೀರೆ ರವಿಕೆ ಲಂಗಗಳನ್ನು ಹಾಗೇ ಬಕೆಟ್ಟಿನಲ್ಲಿ ಬಿಟ್ಟುಬಿಟ್ಟನಷ್ಟೆ? ಸಾಯಂಕಾಲ ಮುಸುರೇ ಹೆಂಗುಸು ಬಾವಿಯ ಬದಿಯಲ್ಲಿ ಬಕೆಟ್ಟಿನಲ್ಲಿದ್ದ ಬಟ್ಟೆಗಳನ್ನು ನೋಡಿ, "ಇದೇಂದಾ ಅಂಗನೆ ಉಂಡಲ್ಲೋ!" ಎಂದು ಉಚ್ಚರಾಗದಿಂದ ಕೂಗಿದಳು.

ಗರ್ಭಿಣಿಯಾಗಿದ್ದ ಪದ್ಮಾವತಮ್ಮ "ಏನೇ ಅದೂ?" ಎನ್ನುತ್ತ ಹೊರಗೆ ಬಂದಳು. ಸಂಗತಿ ತಿಳಿಯಿತು.

"ಏನೋ ತಿಮ್ಮಾ, ಮರೆತೇಬಿಟ್ಟೆಯಲ್ಲಾ! ಸೀರೇ, ಲಂಗಾ ಎಲ್ಲಾ ಹಾಗೇ ಬಿಟ್ಟುಬಿಟ್ಟೆ. ಅಯ್ಯೋ! ಇನ್ನು ಅಂಗಳದಲ್ಲಿ ಬಿಸಿಲೂ ಇಲ್ಲ.

ಮಗ್ಗೂ ಇಲ್ಲ. ಸರಿ ಒಳಗೇ ಕೋಲಿನಲ್ಲಿ ಹಾಕಿಬಿಡಪ್ಪ" ಎಂದಳು ಪದ್ಮಾವತಮ್ಮ.

ಆದರೆ ತಿಮ್ಮನ ಮಾರುಡಿಯೇ ಇಲ್ಲದ್ದು ನೋಡಿ, "ಏನೋ ನಾನು ಹೇಳಿದ್ದು ಕೇಳ್ತೇನೋ ತಿಮ್ಮಾ! ಬಕೆಟು ಖಾಲಿಮಾಡಿ ಕೊಡಪ್ಪಾ ಅವಳಿಗೆ" ಎಂದು ಕೂಗಿದಳು ಪದ್ಮಾವತಮ್ಮ.

"ಬೇಕಾದರೆ ಅವಳೇ ಒಣಗಹಾಕಲಿ"—ಒಳಗಿನಿಂದ ಗುದ್ದಿದ ಹಾಗೆ ಬಂತು ತಿಮ್ಮನ ಬಾಯಿಯಿಂದ ಶಬ್ದ.

"ಅದೇನನು? ಏನಾಯಿತು ನಿನಗೆ? ಅವಳ ಕೈಯಿಂದ ಒಣಗಿಸಿದರೆ ಮೈಲಿಗೆ ಆಗುತ್ತೇ ಅಂತ ತಾನೇ ನಾನೇ ಒಣಗಿಸೋದು? ಓಹೋ! ಬೇಕಂತಲೇ ಬಿಟ್ಟಹಾಗಿದೆ ನಿನ್ನಿಂದಾಗದಿದ್ದರೆ ಆಗಲೇ ಹೇಳಬಹುದಿತ್ತಲ್ಲಾ? ಇಷ್ಟು ಹೊತ್ತು ಸುಮ್ಮನಿದ್ದೆಯಾಕೋ?" ಎನ್ನುತ್ತ ಪದ್ಮಾವತಮ್ಮ, ತಾನೇ ಸೀರೆ. ಲಂಗ ಮೊದಲಾದವನ್ನು ನೀರು ಹಾಕಿ ಹಿಂಡಿಕೊಂಡು, ಹೇಳುತ್ತ "ಹುಂ. ಬರುತ್ತಾ ಬರುತ್ತಾ ರಾಯರ ಕುದುರೆ ಕತ್ತೇ ಅಯ್ತಂತೆ. ನಮ್ಮನೇದು ಅನ್ನಾನ ತಿನ್ತಾ ತಿನ್ತಾ ಸೊಕ್ಕು ಬಂತು ಇವನಿಗೆ. ದೊಡ್ಡ ಗಂಡುಸಾಗಿ ಬಿಟ್ನಾಂತ ಕಾಣುತ್ತೆ" ಎಂದು ಗೊಣಗುತ್ತ ಕೋಲಿನಲ್ಲಿ ಸೀರೆಯನ್ನು ಒಣಗ ಹಾಕುತ್ತಿರುವಾಗ, ಡಾಕ್ಟ್ರಾಯರೂ ಆಸ್ಪತ್ರೆಯಿಂದ ಮನೆಗೆ ಬಂದು, ಹೆಂಡತಿಯು ಹೊಯಿಲನ್ನು ನೋಡಿ, "ಏನಿದೂ? ಏನಾಯ್ತು?" ಎಂದರು

"ಮತ್ತೇನೊಂದ್ರೆ. ಬೆಳಿಗ್ಗೆ ನೀವು ಹೊಡೆದಿರಲ್ಲಾ ಅಂತ ಸಾಧಿಸ್ತಾ ಇದ್ದಾನೆ ಹಗೆ. ಇಷ್ಟು ದಿವಸ ಸಾಧು ಬೆಕ್ಕಿನ ಹಾಗೆ ಇದ್ದವ ಈಗ ನನಗೇ ಕೆಲಸ ಕೊಟ್ಟುಬಿಟ್ಟ" ಎಂದು ಸೀರೆ ಲಂಗಗಳ ವಿಷಯ ಹೇಳಿದಳು ಪದ್ಮಾವತಮ್ಮ.

ಗರ್ಭಿಣಿಯಾದ ಹೆಂಡತಿ, ಮೈ ಬಗ್ಗೀ ಎತ್ತೀ ಕೆಲಸ ಮಾಡುತ್ತ ತೇಕುವುದನ್ನು ನೋಡಿದ ಕೂಡಲೇ ಡಾಕ್ಟ್ರಾಯರು, "ಇಲ್ಲಿ ಬಾರೋ ತಿಮ್ಮಾ!" ಎಂದು ಗರ್ಜನೆ ಹಾಕಿದರು.

ತಿಮ್ಮ ಆದುದಾಗಲೆಂಬ ಧೋರಣೆಯಲ್ಲಿ ಬಂದು ಅವರ ಮುಂದೆ ಗಟ್ಟಿಯಾಗಿ ನಿಂತ.

"ಯಾಕೋ ಹೀಗೆ ಮಾಡಿದೆ?"

ತಿಮ್ಮ ಮಾತಾಡಲಿಲ್ಲ.

"ದಿನಾ ಮಾಡುವ ಕೆಲಸ ಮಾಡದಿರಲಿಕ್ಕೆ ಇವತ್ತು ಏನಾಯ್ತು ಧಾಡಿ ನಿನಗೆ?"—ಜೋರಾಗಿ ಕೇಳಿದರು ಡಾಕ್ಟರು.

ಅದಕ್ಕೂ ಉತ್ತರ ಕೊಡಲಿಲ್ಲ ತಿಮ್ಮ.

"ಬೆಳಿಗ್ಗೆ ನಾನು ಹೊಡೆದೆನೆಂತಲೊ? ನೋಡೋಣ ಎಷ್ಟು ದೊಡ್ಡ ಹುಣ್ಣಾಗಿದೆ ಅಂತ?" ಎಂದು ಡಾಕ್ಟ್ರಾಯರು ಅವನ ಬೆನ್ನನ್ನು ಪರೀಕ್ಷೆ ಮಾಡಿ, "ಇಲ್ಲಿ ಕಪ್ಪಾಗಿದೇಲ್ಲಾ. ಅದೇನು? ಇದೊಂದು ದೊಡ್ಡ ಗಾಯವೆ? ಛು! ಇದರ ಅಪ್ಪನಂಥ ಗಾಯ ಅಡಿಗೇ ಮಾಡುವಾಗ ಆಗುವುದಿಲ್ಲವೆ? ಹಾಗೆ ನಿನಗೆ ಕೆಲಸ ಮಾಡಲಿಕ್ಕೆ ನೋವಿನಿಂದ ಸಾಧ್ಯವಿಲ್ಲದಿದ್ರೆ ಬಿದ್ಕೋ ಮೂಲೇಲಿ ನಾಯೀ ಹಾಗೆ. ನೀನು ಇಂಥಾ ನೊಂದಾ ಅಂತ ಗೊತ್ತಿರ್ತಿದ್ರೆ ನಿನಗೆ ಅಡ್ವಾನ್ಸಾಗಿ ಒಂದು ವರ್ಷದ ಸಂಬಳ ಕೊಡ್ತಿದ್ದೆನೇ? ಇವನ ಅಣ್ಣ ಇವನನ್ನು ಕುರಿತು ಹಾಗೆ ಹೀಗೆ ಲಟ್ಟಿಪಟ್ಟೀಂತ ಎಷ್ಟೆಲ್ಲ ಹೊಗಳಿದ? ಸತ್ಯಾ ಅಂತ ನಂಬಿ ಹಣ ಕೊಟ್ಟು, ದಾರೀ ಖರ್ಚು ಎಲ್ಲಾ ಹಾಕ್ಕೊಂಡು ದೇವರ ಹಾಗೆ ಕರಕೊಂಡು ಬಂದರೆ ಹೀಗೋ ಮಾಡೋದು ನೀನು? ಏನೋ ನಿನ್ನ ಅಭಿಪ್ರಾಯ? ಸರಿಯಾಗಿ ಹೇಳೋ. ಇಷ್ಟು ದಿನ ಕೆಲಸ ಮಾಡಿದ ಹಾಗೆ ಮಾಡಿಕೊಂಡಿರುತ್ತೀಯಾ? ಅಲ್ಲ ಹೀಗೆ ಸತಾಯಿಸ್ತಾ ಇವಳ ಪ್ರಾಣ ತೆಗೀತ್ಯಾ?"

ತಿಮ್ಮನ ಎರಡು ಕಣ್ಣುಗಳಲ್ಲಿಯೂ ನೀರು ತುಂಬಿ ಸೂಸಿತು. ಗಂಟಲು ಬಿಗಿದುಕೊಂಡಿತು. ಅವನೇನೂ ಉತ್ತರ ಕೊಡದಿರುವುದನ್ನು ನೋಡಿ ಡಾಕ್ಟರ್ ಅವನ ಕಿವಿ ಹಿಡಿದು, "ಹೇಳೋ?! ಬಗುಳೋ! ಹೆದರಿ ಸಾಯ್ಲಿಕ್ಕೆ ಏನಾಯ್ತು ನಿನಗೆ? ನಾವೇನು ಹುಲಿಗಳೋ?" ಎಂದು ಗರ್ಜಿಸಿದರು.

"ಇರ್ತೇನೇ" ಎಂದ ಅಳುದನಿಯಿಂದ ತಿಮ್ಮ.

"ಇರು ಹಾಗಾದರೆ ಮರ್ಯಾದೆಯಿಂದ. ನಿನ್ನ ಒಳ್ಳೆಯದಕ್ಕೇ ಹೇಳೋದು" ಎಂದು ಅವನ ಕಿವಿಯನ್ನು ಬಿಟ್ಟರು ಡಾಕ್ಟರು.

ತಿಮ್ಮ ಸೀದಾ ಅಡಿಗೇ ಮನೆಗೆ ಬಂದು ಹುಳಿಯೊಳಗೆ ಒಂದು ಮುಷ್ಟಿ ಉಪ್ಪನ್ನು ಹಾಕಿಬಿಟ್ಟ.

ಸರಿ ಊಟಮಾಡುವಾಗ ಮತ್ತೆ ರಗಳೆ ಎದ್ದಿತು. ಒಳ್ಳೆಯ ಗಮಗಮಾಯಿಸುವ ಬೆಂಡೇಕಾಯಿ ಬೇಳೇ ಹುಳಿ, ಉಪ್ಪಿನ ಕಷವಾಯ್ತು.

ಅದು ಹ್ಯಾಗೆ ಅಷ್ಟು ಉಪ್ಪು ಬಿತ್ತೂ ಅಂತ ಎಷ್ಟು ಕೇಳಿದರೂ ತಿಮ್ಮ ಒಂದು ತುಟಿ ಎರಡು ಮಾಡಲಿಲ್ಲ.

"ಬೇಕಂತ ಹಾಕಿದಿಯಾ? ಗೊತ್ತಾಗದೆ ಹಾಕಿದೆಯಾ?" ಎಂದು ಕೇಳುತ್ತ ಗೋವರ್ಧನ ರಾಯರು ಸಿಟ್ಟುಬೆಂಕಿಯಾಗಿ ಒತ್ತೊತ್ತಿ ಕೇಳಿದರು. ಕೊನೆಗೆ ಎಂಜಲು ಕೈಯಿಂದಲೇ ಅವನ ತಲೆಗೆ ಕುಟ್ಟಿದರು.

'ಗೊತ್ತಾಗದೆ ಹಾಕಿದ್ದೇ ಅಂತ ಸುಳ್ಳು ಹೇಳಿದರೆ ಅದಕ್ಕೆ ಕಾರಣ ಕೇಳುತ್ತಾರೆ, ಅಲಕ್ಷ್ಯ, ಅಂತ ಬಯ್ಯುತ್ತಾರೆ. ಸತ್ಯವೇ ಹೇಳಿಬಿಡುತ್ತೇನೆ, ಆದ್ದದ್ದಾಗಲಿ, ಅಂದುಕೊಂಡು ತಿಮ್ಮ. "ಹೌದು. ಬೇಕಂತಲೇ ಹಾಕಿದೆ" ಎಂದು ಒತ್ತಿ ಹೇಳಿದವನೇ ಸರಸರನೆ ಹೊರಗೆ ಹೋಗಿ ತಲೆಯನ್ನು ತೊಳೆದುಕೊಂಡು ಕೂದಲನ್ನು ಒರೆಸಿ ಕಟ್ಟಿಕೊಂಡ.

ಇತ್ತ ಗಂಡಾ ಹೆಂಡ್ತಿ ಮುಖ ಮುಖ ನೋಡುತ್ತಾ ಸ್ವಲ್ಪ ಹೊತ್ತು ಸುಮ್ಮನಾಗಿ ಬಿಟ್ಟರು.

"ಇದು ಸಾಧಾರಣ ಪಿಂಡ ಅಲ್ಲ! ಬಹಳ ಸೊಕ್ಕು ಬಂದಿದೆ. ಎರಡರಲ್ಲೊಂದು ಮುಗಿಸಿಬಿಡ್ತೇನೀಗ. ನನಗೇ ಹೊಡೆದಹಾಗೆ ಉತ್ತರ ಕೊಟ್ಟುಬಿಟ್ನಲ್ಲ!" ಎಂದು ನಡುಗಿದರು ಡಾಕ್ಟರು

ಪದ್ಮಾವತಮ್ಮ ಮೆಲ್ಲನಿಂದ, "ಸ್ವಲ್ಪ ಸಮಾಧಾನ ಮಾಡ್ಕೊಳ್ಳೀಂದ್ರೆ. ನಾನು ಮೈ ಕಳೆದುಕೊಳ್ಳುವವರೆಗೆ ಸ್ವಲ್ಪ ಸುಮ್ಮನಿರಿ. ಇದಕ್ಕೆಲ್ಲ ಕಾರಣ ಇವತ್ತು ಬೆಳಿಗ್ಗೆ ನೀವು ಕಟ್ಟಿಗೆ ಕೊಳ್ಳೀಲಿ ಹೊಡೆದರಲ್ಲಾ. ಅದೇ ಕೋಪ ಅವನಿಗೆ. ಆದರೂ ನೀವು ಹಾಗೆ ಹೊಡೀಬಾರದಿತ್ತು" ಎಂದಳು.

"ಹಾಗಾದರೆ ನಾನು ಅವನ ಹತ್ರ ಕ್ಷಮೆ ಕೇಳಿಕೊಳ್ಳೇನು?"

"ನೀವು ಸುಮ್ಮನಿದ್ರೆ ಸಾಕೂಂದೆ."

ತಿಮ್ಮ ಒಳಗೇ ಬರಲೇ ಇಲ್ಲ. ಕಣ್ಣೀರು ಸುರಿಸಿಕೊಂಡು ಅಂಗಳದ ಮೂಲೆಯಲ್ಲೇ ನಿಂತು ಬಿಟ್ಟ ರಾತ್ರಿಯು ಹೊತ್ತು; ಅವನಿಗೆ ಏನೇನೋ ಆಲೋಚನೆಗಳು ಸುಳಿದುವು; ತಾಯಿಯೂ ಅಣ್ಣನೂ ಸೇರಿಕೊಂಡು ತನ್ನನ್ನು ಇವರಿಗೆ ಮಾರಿಬಿಟ್ಟರೆನಿಸಿತು. ಓದಿ ಓದಿಯೇ ಸಾಕಷ್ಟು ಚರಿತ್ರೆ ತಿಳಿದುಕೊಂಡಿದ್ದ ಅವನಿಗೆ ಅಮೇರಿಕದ ಗುಲಾಮರ ಕತೆ ನೆನಪಾಯಿತು. ಮೊನ್ನೆ "ರಾಷ್ಟ್ರಬಂಧು"ವಿನಲ್ಲಿ ಗುಲಾಮನೊಬ್ಬನ ಕತೆಯೊಂದನ್ನು ಓದಿದ್ದ. ಅವನದು ಇಡೀ ಜನ್ಮವೇ ಗುಲಾಮಗಿರಿಯದಾಗಿತ್ತು; ತಾನು ಒಂದು ವರ್ಷಕ್ಕೆ ಮಾರಿಹೋದ ಗುಲಾಮ. ಆ ಅವಧಿ ಮುಗಿಯುವುದರೊಳಗೆ ಇವರು ಮತ್ತೊಂದು ವರ್ಷಕ್ಕೆ ಹಣ ಕಳುಹಿಸಿ ತನ್ನ ಗುಲಾಮಗಿರಿಯನ್ನು ಮುಂದುವರಿಸಿಕೊಳ್ಳುವರೇನೋ ಎಂದು ಹೆದರಿಕೊಂಡನು—ನಾಳೆಯೇ ತಾಯಿಗೊಂದು ಕಾಗದ ಬರೆಯಬೇಕು ಇವರಿಗೆ ಗೊತ್ತಾಗದ ಹಾಗೆ ಬರೆಯಬೇಕು. ಅವನು ತಾಯಿಗೆ ಕಾಗದ ಬರೆದರೆ ಪದ್ಮಾವತಮ್ಮ ಓದಿನೋಡಿ ಟಪಾಲಿಗೆ ಕಳುಹಿಸುತ್ತಾಳೆ. ಏನು ಮಾಡುವುದು?

ಕಾರ್ಡಿಗೆ ದುಡ್ಡೂ ಅವನ ಹತ್ತಿರ ಇಲ್ಲ. ಕ್ಷವರ, ಸಾಬೂನು ಬಟ್ಟೆ, ಎಲ್ಲದಕ್ಕೂ ಅವರೇ ಕೊಡಬೇಕಾಗಿತ್ತು ದುಡ್ಡು...ತಾನೆಂತಹ ಪರತಂತ್ರದಲ್ಲಿ ಸಿಕ್ಕಿಬಿದ್ದೆನೆಂದೂ ಯೋಚಿಸಿಕೊಂಡಂತೆ ಅವನಿಗೆ ದುಃಖ ಉಮ್ಮಳಿಸಿಕೊಂಡೇ ಬರುತಿತ್ತು.

ಅರಸುಗಳ ಮನೆಯಲ್ಲಿ ಹೀಗೆ ತಾನು ದುಃಖಿಸುತ್ತಿದ್ದರೆ ಅಲ್ಲಿ ಯಾರೂ ಸಹಿಸಿಕೊಂಡಿರಲಾರರು. ಮೂಪಮ್ಮ, ಕುನ್ನೇಮೆಗಳೆಲ್ಲರೂ ಯಾವ ಕೆಲಸವನ್ನು ಹೇಳದೆ, ಅವನನ್ನು ಸಮಾಧಾನ ಮಾಡಲು ಮುತ್ತಿಕೊಳ್ಳುವರು. ತನ್ನ ಮೇಲೊಂದು ಗೌರವ ಕೂಡ ಅವರಿಗಿತ್ತು...

ಆದರೆ ಕೊನೆಗೆ ಅವರಿಗೂ ತನ್ನ ಅಗತ್ಯವಿಲ್ಲದೆ ಹೋಯಿತು. ಅವರ ಸ್ವಂತ ಅಡಿಗೇ ಜನವಾದ ಸಮರ್ಥ ಗುಂಡೂಭಟ್ಟರು ಬಂದರು. ಆದರೂ ಅವರಿಗೆಲ್ಲ ತನ್ನ ಮೇಲೆ ಎಷ್ಟು ಪ್ರೀತಿಯಪ್ಪ!

ಅವರು ತನ್ನ ಕೈಯಲ್ಲಿ ಕಾಯಿಸಿಟ್ಟ ಗುರುತನ್ನು ತಡವಿಕೊಂಡ ತಿಮ್ಮ.

ಹೌದು. ಎಂದೆಂದಿಗೂ ಅಲ್ಲೇ ಇರಲು ಸಾಧ್ಯವೆ? ತಾನು ದೊಡ್ಡವನಾದ ಹಾಗೆ ಎಲ್ಲಿಗಾದರೂ ಹೋಗಿ ಪರಚಾಕರಿ ಮಾಡಬೇಕಾದ್ದೆ.



"ತಿನಗಾ ನನಗೆ ಸ್ವಲ್ಪ ಮಜ್ಜಿಗೆ ಹಾಕು ತ್ತೀಯೇನೋ?" ಎಂದು ಪದ್ಮಾವತಮ್ಮ ಗಟ್ಟಿಯಾಗಿ ಕರೆದಳು.

ತಿಮ್ಮಪ್ಪ ಮಾತಾಡಲಿಲ್ಲ.

ಡಾಕ್ಟರೂ, ಪದ್ಮಾವತಮ್ಮನೂ, ಮಕ್ಕಳೂ ಊಟ ಮುಗಿಸಿ ಎದ್ದರು. ಪದ್ಮಾವತಮ್ಮ ತಿಮ್ಮನನ್ನು ಕರೆದು ತರಲು ಮಗನನ್ನು ಕಳುಹಿಸಿದಳು. ಆ ಹುಡುಗ ಕತ್ತಲೆಯಲ್ಲಿ ನಿಂತ ತಿಮ್ಮನ ಹತ್ತಿರ ಬಂದು, "ಬಾ ತಿಮ್ಮಣ್ಣ, ನೀನು ಊಟ ಮಾಡದಿದ್ದರೆ ನಮಗೆ ಕಷ್ಟ ಆಗುತ್ತೆ. ಅಮ್ಮ ಕರೀತಾಳೆ, ಬಾ, ಬಾರೋ" ಎಂದು ಅವನ ಕೈಹಿಡಿದೆಳೆಯುತ್ತ ಒತ್ತಾಯಮಾಡಿದ.

ತನ್ನೊಡನೆ ನಾನಾ ವಿಧವಾಗಿ ಆಟವಾಡುತ್ತಿರುವ ಆ ಹುಡುಗ ಕೈಹಿಡಿದೆಳೆದಾಗ, ಅಡಿಗೆ ಮನೇ ಹತ್ತಿರ ಬಂದ ತಿಮ್ಮ.

"ಬಾ ಊಟಕ್ಕೆ ಕೂತುಕೊ ನೋಡುವಾ" ಎಂದು ಪದ್ಮಾವತಮ್ಮ ಅವನಿಗೆ ತಟ್ಟೆಯಿಟ್ಟು ಬಡಿಸಲು ಸಿದ್ಧಳಾದಳು.

"ನಾನು ಬಡಿಸುತ್ತೇನೆ ಇವತ್ತು ನಿನಗೆ. ಬಾ. ಕೋಪ ಬಿಡು. ನಿನಗೆ ನನ್ನ ಮೇಲೆ ಕೋಪ ಬಂದರೂ ಅನ್ನದ ಮೇಲೆ ಕೋಪ ಮಾಡಬಾರದು. ನಾಳೆ ನೀನು ಎಲ್ಲಿಗೆ ಹೋದರೂ ಈ ಅನ್ನವಂತೂ ನಿನಗೆ ಬೇಕಾದ್ದು ಗೊತ್ತಾ? ಕೂತುಕೋ; ಮತ್ತೆ ಎಲ್ಲಾ ಮಾತು" ಎಂದು ವಾತ್ಸಲ್ಯದಿಂದ ಹೇಳುವಾಗ ಅವನಿಗೆ ತಾಯಿಯ ನೆನಪಾಯಿತು.

"ನೀವು ಹೋಗಿಬಿಡಿ ಚಿಕ್ಕಮ್ಮ, ನಾನೇ ಬಡಿಸಿಕೊಳ್ತೇನೆ" ಎಂದ. ಅವನ ದುಃಖ ಶಮನವಾಗಿತ್ತು.

ಒಂದು ವಿಧದಲ್ಲಿ ತನಗೇ ವಿಜಯವಾಗಿದೆ ಎಂಬ ಸಮಾಧಾನ ಅವನ ಬಾಲಹೃದಯಕ್ಕಾಗಿತ್ತು. ಮುಂಗೋಪಿಗಳಾದ ಡಾಕ್ಟರ್ರಾಯರು ಅಲ್ಲಿಗೇ ತಪ್ಪೆಯಾಗಿ ಹೋಗಿಬಿಟ್ಟರಲ್ಲ! ಚಿಕ್ಕಮ್ಮ ಬೇರೆ ಮಂಗಾಡಿಸುತ್ತಿದ್ದಾರೆ! ಮಾತೃವಾತ್ಸಲ್ಯವಿಲ್ಲದಿದ್ದರೇನಾಯಿತು? ಅಂತೂ ತಾನು ಬಗ್ಗಿಸಿಬಿಟ್ಟೆನಲ್ಲ ಇವರನ್ನು? ತಾನು ಹೊರಟು ಹೋದರೆ ಬೇರೆ ಯಾವನು ಬಂದರೂ ತನ್ನ ಹಾಗೆ ಎಂದಿಗೂ ಕೆಲಸ ಮಾಡಲಾರ. ತನ್ನಿಂದ ಇನ್ನೂ ಕೆಲಸ ಮಾಡಿಸಿಕೊಳ್ಳಲಿಕ್ಕೇ ಇವರ ಈ ಶಾಂತತೆಯ ಪ್ರಯತ್ನ. ಹೌದು.

ತಿಮ್ಮನಲ್ಲಿ ಇನ್ನೊಬ್ಬರ ಹೃದಯವನ್ನು ಊಹಿಸಿಕೊಳ್ಳುವ ಶಕ್ತಿ ಸ್ವಲ್ಪಸ್ವಲ್ಪ ಬರುತ್ತಿದ್ದಿತು. ಸ್ವಲ್ಪ ಸ್ವಲ್ಪ ಬುದ್ಧಿವಂತನಾಗುತ್ತಿದ್ದ ಅವರು ಹೇಳುವ ಒಳ್ಳೆಯ ಮಾತನ್ನು ನೆನಪಿಟ್ಟುಕೊಳ್ಳುವಂತೆಯೇ ಕೆಟ್ಟದನ್ನು ಕುರಿತೂ ಆಲೋಚಿಸತೊಡಗಿದ್ದಾನೆ. ತಾನು ಎಂಥಾ ತಪ್ಪು ಮಾಡಿದರೂ ಕಟ್ಟಿಗೆ ಕೊಳ್ಳಿಯಲ್ಲಿ ಹೊಡೆಯಬಾರದಿತ್ತು. ಹಾಗೆ ತಾನೇನು ದೊಡ್ಡ ತಪ್ಪು ಮಾಡಿದ್ದು' ಅನೆ ನೋಡಲಿಕ್ಕೆ ಹೋದದ್ದು ಸಹಜವಾದ ಕುತೂಹಲದಿಂದ ತಾನೆ? ಎಲ್ಲರೂ ಹೋಗಿದ್ದರಲ್ಲ?

ಅಕ್ಕಿದೆ ಸೀರೆ ಲಂಗಗಳನ್ನು ಹಿಂಡುವುದನ್ನು ಇನ್ನು ಮೇಲೆ ತಾನು ಮಾಡಲಾರೆ.

೩೮

ತಿಮ್ಮನ ಊಟ ಮುಗಿಯುವಷ್ಟರಲ್ಲಿ ಹರಟೆ ಕೊಚ್ಚಲು ಅಚ್ಯುತಭಟ್ಟರು ಬಂದು ಎಂದಿನಂತೆ ಡಾಕ್ಟರ್ರಾಯರ ಇದಿರು ಇರಿಕಿಪಲಗಿಯ ಮೇಲೆ ಕಂಬಕ್ಕೆ ಒರಗಿ ಕುಳಿತರು. (ಮಲೆಯಾಳದಲ್ಲಿ ಅನೇಕವಾಗಿ ಪ್ರತಿ ಮನೆಯಲ್ಲಿಯೂ ಇರಿಕಿಪಲಗೆ ಎಂಬ ಜಗಲಿಯ ದಂಡೆ ಇರುತ್ತದೆ.)

ಡಾಕ್ಟರ್ರಾಯರು ಪೇಪರನ್ನು ಬದಿಗಿಟ್ಟು "ಇವತ್ತು ನಮ್ಮಲ್ಲಿ ಒಂದು ವಿಶೇಷ ಅಚ್ಯುತಭಟ್ರೆ. ನಮ್ಮ ತಿಮ್ಮನಿಗೆ ಭೂತ ಹಿಡೀತು" ಎಂದರು.

"ಅಯೊ! ತಿಮ್ಮನಿಗೊ? ಏನಾಯ್ತು?"

"ಸಿಟ್ಟಿನ ಭೂತಾಂದ್ರೆ"

ಆಗ ಜಗಲಿಯಲ್ಲಿ ಗೋಡೆಗೆ ಒರಗಿ ಕುಳಿತಿದ್ದ ಪದ್ಮಾವತಮ್ಮ, "ಅದೇ ನೋಡಿ, ಇವರಿಗೆ ಉಂಟಲ್ಲಾ ಎದುರುಸಿಟ್ಟಿನ ಭೂತ. ಅದೇ ಸ್ವಲ್ಪ ಅವನಿಗೂ ಬಡಕೊಂಡಿತು, ನೀನು ಹೆಚ್ಚೋ ನಾನು ಹೆಚ್ಚೋ ಅಂತ" ಎಂದಳು ನಗುತ್ತ.

"ಅಂದರೆ?" — ಅಚ್ಯುತಭಟ್ಟರು ಪ್ರಶ್ನಾರ್ಥಕವಾಗಿ ಬಾಯಿ ತೆರೆದರು.

ಗಂಡಾಹೆಂಡಿರು ಆನೆ ಬಂದಲ್ಲಿಂದ ತೊಡಗಿ, ನಡೆದ ಒಂದೊಂದೇ ಸಂಗತಿ ಹೇಳಿದರು.

ಅಷ್ಟರಲ್ಲಿ ತಿಮ್ಮನೂ ಎಲ್ಲಾ ಕೆಲಸಗಳನ್ನೂ ಮುಗಿಸಿಕೊಂಡು ಬಂದು, ಇರಿಕಿಪಲಗೆಯ ಇನ್ನೊಂದು ಬದಿಯಲ್ಲಿ, ಡಾಕ್ಟರ ಹಿಂದಿನಿಂದ ಕುಳಿತ.

"ನೀವೇ ಇವನಿಗೆ ಸ್ವಲ್ಪ ಸಮಾಧಾನ ಹೇಳಿ ಅಚ್ಯುತಭಟ್ರೆ" ಎಂದರು ಡಾಕ್ಟರು.

ಅಚ್ಯುತಭಟ್ಟರು ತಿಮ್ಮನನ್ನು ನೋಡಿ, "ಏನು ತಿಮ್ಮಪ್ಪಾ, ಏನೋ ಪರಾಮೋಶೆಯಿಂದ ಪಲ್ಯ ಸೀದುಹೋಗೋದೂ, ಉಪ್ಪು ಹೆಚ್ಚಾಗೋದೂ ಸಹಜವೇ. ಆಗ ದೊಡ್ಡವರಿಗೆ ಫಕ್ಕನೆ ಸಿಟ್ಟು ಬಂದು, ನೀನು ಸಣ್ಣವನಾದ್ದರಿಂದ ಒಂದು ಪೆಟ್ಟು ಕೊಟ್ಟರೂ ಅನ್ಯಾಯ ತಪ್ಪೇನೂ ಇಲ್ಲಪ್ಪ. ಅದನ್ನೆಲ್ಲ ಮನಸ್ಸಿಗೆ ಹಚ್ಚಿಕೋಬಾರದು. ಎಂದಿನಂತೆ ಸಂತೋಷವಾಗಿರಪ್ಪ, ಇರುತ್ತಿ ತಾನೆ?"

"ಇಲ್ಲದೆ ಮತ್ತೇನು ಮಾಡಲಿ? ಎಲ್ಲಿಗೆ ಹೋಗಲಿ? ಹ್ಯಾಗೆ ಹೋಗಲಿ? ಊರು ಹತ್ತಿರ ವಿದೆಯೇ ಫಕ್ಕನೆ ಹೋಗಿಬಿಡಲಿಕ್ಕೆ?" ಎಂದು ಪಟಪಟನೆ ಪ್ರಶ್ನರೂಪದಲ್ಲೇ ಉತ್ತರಕೊಟ್ಟದ್ದು ನೋಡಿ ಡಾಕ್ಟರ್ ದಂಪತಿಗಳಿಗೆ ಆಶ್ಚರ್ಯವಾಯಿತು. 'ಓ! ಇವನು ಜೋರಿದ್ದಾನೆ!' ಎಂಬ ಅರ್ಥದಲ್ಲಿ ಮುಖ ಮುಖ ನೋಡಿಕೊಂಡರು ಮೂವರೂ.

ಅಚ್ಯುತಭಟ್ಟರು ತುಸು ತಡೆದು, "ಹಾಗಲ್ಲ ತಿಮ್ಮಪ್ಪ. ನಿನಗೆ ಹೋಗಬೇಕೂ ಅಂತ ಕಂಡರೆ ಇಲ್ಲಿ ಇಟ್ಟುಕೊಳ್ಳಲಿಕ್ಕಾಗುತ್ತದೆಯೆ? ನಿನ್ನನ್ನು ಭದ್ರವಾಗಿ ಊರಿಗೆ ಕಳುಹಿಸಬೇಕಾಗುತ್ತದೆ ಅಷ್ಟೇ ಹೊರತು ನಿನ್ನನ್ನು ನಿನ್ನಿಷ್ಟ ಪ್ರಕಾರ ಹೋಗಲಿಕ್ಕೆ ಬಿಡುವುದು ಹೇಗೆ? ಇದು ಘಟ್ಟ ಪ್ರದೇಶದ ಊರು. ಒಬ್ಬನೇ ಎಲ್ಲಿಗೆ ಹೋಗಬಲ್ಲೆ ನೀನು?" ಎಂದರು.

"ಹೌದು. ಇಷ್ಟವಿಲ್ಲದಿದ್ದರೆ ಅದನ್ನಾದರೂ ಹೇಳಿಬಿಡಲಿ. ಯೋಚನೆ ಮಾಡುವ" ಎಂದರು ಡಾಕ್ಟರು.

ತಿಮ್ಮ ಸುಮ್ಮನಿರುವುದನ್ನು ನೋಡಿ ಅಚ್ಯುತಭಟ್ಟರು, "ಇಷ್ಟವಿಲ್ಲದಿರಲು ಹಾಗೇನಾಯಿತು ಮಹಾ? ಇವರಿಗೆ ಆಗುವ ಹಾಗಿದ್ದರೆ ನಿನಗೇ ಒಳ್ಳೇದು" ಎಂದರು.

"ಈಗಲೇ ಯಾರು ಹೋಗುತ್ತಾರೆ ಇಲ್ಲಿಂದ? ಒಟ್ಟು ಒಂದು ವರುಷ ಆಗಬೇಕಲ್ಲ? ಇನ್ನೂ ಮೂರು ತಿಂಗಳಿವೆ. ಆದರೆ ನಾನು ಇನ್ನು ಮೇಲೆ ಸೀರೆ ಲಂಗ ರವಿಕೆಗಳನ್ನು ಹಿಂಡುವುದಿಲ್ಲ. ನೆರೆಕರೆಯವರೆಲ್ಲ ಹಾಸ್ಯ ಮಾಡುತ್ತಾರೆ" ಎಂದುಬಿಟ್ಟ ತಿಮ್ಮ.

೩೯

ಮರುದಿನ ಅವನು ಮಾರ್ಕೆಟ್ಟಿಗೆ ಹೋದಾಗ, ಅಚ್ಯುತಭಟ್ಟರ ಕೋಣೆಗೆ ಹೋಗಿ ಅವರನ್ನು ಕಂಡು "ನೋಡಿ ಅಚ್ಯುತಭಟ್ರೆ. ನಾನು ಇನ್ನು ಮೇಲೆ ಸೀರೆ ಲಂಗ ರವಿಕೆಗಳನ್ನು ಖಂಡಿತಾ ಹಿಂಡಲಾರೆ. ಏನು ಬೇಕಾದರೂ ಆಗಲಿ!" ಎಂದುಬಿಟ್ಟ. ಮತ್ತು ತನ್ನ ಕಷ್ಟವನ್ನೆಲ್ಲ ಹೇಳಿಕೊಂಡು ಅದು ಪರರ ಮನೆಯೇ ಎಂದು ಸ್ಪಷ್ಟಪಡಿಸಿದ.

ಅಚ್ಯುತಭಟ್ಟರು ಅವನ ಮೇಲೆ ಅನುತಾಪಪಡುತ್ತ, "ನಿನ್ನ ಮಾತು ನಿಜಪ್ಪ. ನಾನು ಅವರಿಗಾಗುವ ಹಾಗೆ ಮಾತಾಡಬೇಕಾಗುತ್ತೆ. ಆದರೂ ಅವರು ನಿನ್ನ ಹತ್ರ ಅಷ್ಟೆಲ್ಲ ದುಡಿಸಿ ಮಾಡಿಸೋದು ನನಗೇನೂ ನ್ಯಾಯವಾಗಿ ಕಾಣುವುದಿಲ್ಲ. ಕೆಲಸದವಳಿರುವಾಗ ಸೀರೆ ನೀನೇಕಪ್ಪಾ ಹಿಂಡಬೇಕು?" ಎಂದರು.

"ಅವಳಿಂದಲೇ ಒಣಗ ಹಾಕಿಸಿದ್ದು ಮೈಲಿಗೆಯಂತೆ. ಮಡಿನೀರಿನಿಂದ ಹಿಂಡಿ ಒಣಗಿಸಿದರೇ ಮಡಿಯಂತೆ"

"ಅದೊಂದು ನೆವನ ಮಾತ್ರ. ಕೆಲಸದವಳು ಸರಿಯಾಗಿ ಒಗೆಯುವುದಿಲ್ಲಾಂತಲೇ ನಿನ್ನಿಂದ ಬೇರೆ ನೀರು ಹಾಕಿ ಕುಕ್ಕಿಸೋದು. ಅದನ್ನೇ ಅವಳ ಹತ್ರ ಹೇಳಿ ಮಾಡಿಸಿದರಾಯಿತು. ಅವಳಿಗೆ ಒಂದೂವರೆ ರೂಪಾಯಿ ಕೊಡುತ್ತಾರಲ್ವೇ ತಿಂಗಳಿಗೆ?"

"ಹೌದು, ಎರಡು ರೂಪಾಯಿ ಕೇಳಿದ್ದಳು. ಮುಸುರೆ ತಿಕ್ಕುವುದು, ಬಟ್ಟೆ ಒಗೆಯುವುದು ಅಷ್ಟೇ ಕೆಲಸ. ಬಟ್ಟೆಗಳನ್ನು ಒಗೆದಿಟ್ಟರೆ ಸಾಕು, ನಾವೇ ನೀರು ಹಾಕಿ ಹಿಂಡಿಕೊಳ್ತೇವೆ ಅಂತ ಹೇಳಿಯೇ ಒಂದೂವರೆ ರೂಪಾಯಿ ಮಾಡಿದ್ದಾರೆ."

"ಮತ್ತೇನು ಬಿಡು. ನೀನು ಧೈರ್ಯದಿಂದ ಅಷ್ಟು ಹೇಳಿದ್ದು ಒಳ್ಳೇದಾಯಿತು, ನೀನು ಮಾಡದೇ ಇದ್ದುಬಿಟ್ರೆ ಅವಳಿಂದಲೇ ಮಾಡಿಸಿಕೊಳ್ತಾರೆ. ನೀನೇನೂ ಹೆದರಬೇಡ, ಕೆಲಸವಿಲ್ಲ

ಗೊತ್ತಿದ್ದವನಿಗೆ ಭಯವೇಕಪ್ಪ? ಎಲ್ಲಿಗೆ ಹೋದರೂ ಅಡಿಗೆ ಕೆಲಸ ಸಿಕ್ಕುತ್ತೆ. ಹಾಗೆ ನಿನಗೆ ಅಲ್ಲಿಂದ ಬಿಡಲೇಬೇಕಾಗಿ ಬಂದರೆ, ನಾನು ಬೇರೆ ಕಡೆಗೆ ಏರ್ಪಾಡು ಮಾಡುತ್ತೇನೆ ನನ್ನ ಹೆಸರು ಮಾತ್ರ ಅಲ್ಲಿ ಎತ್ತಬೇಡ"

"ಯಾವುದಕ್ಕೂ ಇನ್ನು ಮೂರು ತಿಂಗಳು ಹಲ್ಲು ಕಚ್ಚಿಕೊಂಡು ಇರುತ್ತೇನೆ"

"ಹಾಗಾದರೆ ಈಗಲೇ ಅವರಿಗೆ ಸೂಚನೆ ಕೊಟ್ಟುಬಿಡು. ಅವರೂ ಬೇರೆ ಜನ ನೋಡಿಕೊಳ್ಳಲು ಸಮಯ ಕೊಡಬೇಕಲ್ಲವೆ?"

ಅಚ್ಯುತಭಟ್ಟರಿಂದ ಶಿವುನಿಗೆ ಇನ್ನಿಷ್ಟು ಧೈರ್ಯ ಬಂದಿತು.

ತಾಯಿಗೆ ಕಾಗದ ಬರೆಯಲು ಶಿವುನಿಗೊಂದು ಕಾರ್ಡ್ ಬೇಕಾಗಿತ್ತು. ತರಕಾರಿ ತರಲಿಕ್ಕೆ ಹೋದಾಗ, ತೆಗೆದುಕೊಂಡದ್ದಕ್ಕೆಲ್ಲ ಒಂದೊಂದು ಪೈ ಹೆಚ್ಚಿಗೆ ಹೇಳುವ ನಿರ್ಧಾರ ಮಾಡಿಕೊಂಡ ಹಾಗೆ ಸಂಪಾದಿಸಿಕೊಂಡ ದುಡ್ಡಿನಿಂದ, ಪೋಸ್ಟಾಫೀಸಿಗೆ ಹೊಕ್ಕು ಮೂರು ಪೈಗೆ ಒಂದು ಕಾರ್ಡ್ ತಂದು ಅಡಗಿಸಿಟ್ಟುಕೊಂಡ. ಪದ್ಮಾವತಮ್ಮನ ಹತ್ತಿರ ಲೆಕ್ಕ ಒಪ್ಪಿಸುವಾಗ ಒಂದೊಂದು ಪೈ ಏರಿಸಿ ಹೇಳಿ ಬಚಾವಾದ. ಅವನು ಕದಿಯಲೂ ಸುಳ್ಳಾಡಲೂ ಇದೇ ಪ್ರಾರಂಭವಾಯಿತು.

ಯಾವಾಗಲೂ ಬರೆಯುವ ಅಭ್ಯಾಸವುಳ್ಳ ಅವನಿಗೆ ಶಾಯಿ ದೌತಿ ಲೆಕ್ಕಣಿಕೆಗಳನ್ನು ಪದ್ಮಾವತಮ್ಮನೇ ಕೊಡಿಸಿದ್ದಳು. ರಾತ್ರಿಯ ಹೊತ್ತಿನಲ್ಲಿ ತಾಯಿಗೆ ತನ್ನ ಕಷ್ಟಗಳನ್ನು ಸೂಚಿಸಿ ಕಾರ್ಡ್ ಬರೆದ ತನ್ನ ಲೆಕ್ಕ ಮುಗಿಯುವ ವರೆಗೆ ಇನ್ನು ಮೂರು ತಿಂಗಳು ಇಲ್ಲಿದ್ದು, ಅನಂತರ ಇಲ್ಲಿಂದ ಬೇರೆ ಕಡೆಗೆ ಹೋಗಿ ಕಾಗದ ಬರೆಯುತ್ತೇನೆ. ಎಂದು ಕಾರ್ಡ್ ಬರೆದು ಮುಗಿಸಿ, ಮರುದಿನ ಮಾರ್ಕೆಟ್ಟಿಗೆ ಹೋಗುವಾಗ ಅದನ್ನು ಟಪಾಲಿಗೆ ಸೇರಿಸಿದ

ಆ ದಿನದಿಂದ ಸೀರೆ ಲಂಗಗಳನ್ನು ಮುಟ್ಟಲಿಲ್ಲ, ಶಿವು. ಆ ಬಗ್ಗೆ ಪದ್ಮಾವತಮ್ಮ ಮಾತಾಡಲೂ ಇಲ್ಲ. ಆದರೆ ತಾನೇ ಸೀರೆ ಲಂಗಗಳನ್ನು ಹಿಂಡಿ ಹಾಕಲು ಹೋಗುತ್ತ "ಇಲ್ಲಿ ಬನ್ನೀ ಮಕ್ಕು! ಸ್ವಲ್ಪ ಹಿಡೀರಿ ನೋಡುವಾ. ಸೀರೆ ಹಿಂಡಿ ಹಾಕಬೇಕಲ್ಲ!" ಎಂದು ತನ್ನ ಮಕ್ಕಳನ್ನು ಕರೆದಳು.

"ಶಿವುಣ್ಣ ಹಿಂಡೋಲ್ವಾಮ್ಮಾ?" ಎಂದು ಮಗಳು ಕೇಳಲು, "ಅವ ದೊಡ್ಡವನಾಗಿ ಬಿಟ್ಟವ್ನೆ. ಮೀಸೆ ಬಂದ ಗಂಡಸಾದ" ಎಂದಳು, ಮರೆ ಮೊಗವಾಗಿ ಚುಚ್ಚುವ ಹಾಗೆ. ಅವುಗಳನ್ನು ಒಣಗ ಹಾಕುವಾಗ ಸ್ಟೂಲಿನ ಮೇಲೆ ಹತ್ತಿ ಇಳಿದು ಉಬ್ಬಸ ಬಡುತ್ತ ತರುವಾಯ ಉಸ್ಸೆಂದು ಕುಳಿತುಕೊಳ್ಳುವಳು ಗೋಡೆಗೊರಗಿ.

ಅದನ್ನು ನೋಡಿ ಡಾಕ್ಟರ್ರಾಯರು, "ಹೋಗಲಿ, ನೀನೇ ಏಕೆ ಕಷ್ಟ ಪಡಬೇಕು? ಕೆಲಸದವಳಿಗೇ ಹೇಳಿಬಿಡು. ಅವಳಿಗೇನಂದರೂ ಕೊಟ್ಟರಾಯಿತು" ಎಂದರು.

"ಏನೂ ಬೇಡ ಕಣ್ರಿ. ಹಾಗೆ ಮಾಡಿದರೆ ಅವನಿಗೇನು ಕಂಡೀತು? ಇನ್ನೊಬ್ಬರಿಂದ ದುಡ್ಡು ಕೊಟ್ಟು ಮಾಡಿಸುವ ಕೆಲಸವನ್ನು ತನ್ನ ಹತ್ತಿರ ಸುಮ್ಮನೆ ಇಷ್ಟು ದಿನ ಮಾಡಿಸಿಕೊಂಡರೂ ಅಂತ ಕಾಣೋದಿಲ್ವೇ ಅವನಿಗೆ? ಮೈಲಿಗೆ ಆಗುತ್ತೇ ಅಂತ ಬೇರೆ ಹೇಳಿಬಿಟ್ಟಿದ್ದೇನೆ. ನಾನೇ ಮಾಡಿಕೊಳ್ತೇನೆ" ಎಂದಳು ಮೆಲ್ಲನೆ ಪದ್ಮಾವತಮ್ಮ.

ಇದರಿಂದ ಡಾಕ್ಟರ್ರಾಯರಿಗೂ ಶಿವುನ ಮೇಲೆ ಒಂದು ತರದ ಜೀರ್ಣವಾಗದ ಕೋಪದ ಉಂಡೆಯೇ ಸೇರಿಕೊಂಡ ಹಾಗಾಯಿತು.

ಆ ದಿನ ಸಾಯಂಕಾಲ ಡಾಕ್ಟರು ಆಸ್ಪತ್ರೆಯಿಂದ ಬಂದ ಮೇಲೆ ಶಿವು ಅವರಿಗೆ ಕಾಫಿ ಟಿಫಿನು ತಂದು ಕೊಟ್ಟ. ಅದಾದ ಮೇಲೆ ಅವರು ತಮ್ಮ ಹೆಂಡತಿಯೊಂದಿಗೆ ಸರಸವಾಗಿರುವ ಹೊತ್ತು ನೋಡಿ ಶಿವು ಅವರ ಹತ್ತಿರ ಬಂದು, "ನನ್ನ ಸಂಬಳದ ಲೆಕ್ಕಾಚಾರ ಇನ್ನು ಎಷ್ಟು ದಿನಕ್ಕೆ ಸರಿಯಾಗುತ್ತೆ?" ಎಂದು ಕೇಳಿದ.

"ಯಾಕೆ? ಏನಾಯ್ತು?" ಎಂದು ಪದ್ಮಾವತಮ್ಮ ಕೇಳಿದಳು.

ಶಿವು ಉತ್ತರ ಕೊಡಲು ಹಿಂದೆ ಮುಂದೆ ನೋಡುವಾಗ ಡಾಕ್ಟರು, "ಅದೆಲ್ಲ ನಿನಗೇಕಪ್ಪ? ನಿನ್ನ ಅಣ್ಣ, ತಾಯಿ ಕೇಳಿದರೆ ಅವರ ಹತ್ತಿರ ಹೇಳುತ್ತೇವೆ. ನಿನ್ನನ್ನು ಇಲ್ಲಿಗೆ ಕಳುಹಿಸಿ ಎಲ್ಲಾ ಏರ್ಪಾಡು ಮಾಡಿಕೊಂಡವರು ಅವರೇ ಅಲ್ಲವೆ? ನಿನಗೇನಾಗಬೇಕು ಅದನ್ನೆಲ್ಲ ತಿಳಿದು?" ಎಂದು ಗುರುಗಿ ಕೇಳಿದರು.

"ಇಲ್ಲಿ ಕೆಲಸ ಮಾಡುವವನು ನಾನು. ನಿಮಗೆಲ್ಲ ಆಗುವ ಹಾಗೆ ಇರಲಿಕ್ಕೆ ನನಗೆ ಸಾಧ್ಯವಾಗುವುದಿಲ್ಲ. ನಿಮಗೂ ನನ್ನ ವಿಷಯದಲ್ಲಿ ತುಂಬ ಬೇಜಾರಾಗಿದೆ. ಇರುವಷ್ಟು ದಿನ ಸೀರೆಗೀರೆ ಎಲ್ಲಾ ನಾನೇ ಒಗೆದುಹಾಕಿಬಿಡುತ್ತೇನೆ. ಲೆಕ್ಕಾಚಾರ ಮುಗಿಯುವವರೆಗೆ ಮಾತ್ರ ಇರ್ತೇನೆ. ಆ ಮೇಲೆ ಹೋಗಿಬಿಡುತ್ತೇನೆ. ಅದಕ್ಕೇ ಕೇಳುತ್ತೇನೆ" ಎಂದ ಶಿವು.

ಸ್ವತಂತ್ರವಾಗಿ ವ್ಯವಹಾರದ ಮಾತೇ ಶಿವುನ ಬಾಯಿಯಿಂದ ಹೊರಟಿತ್ತು—ಪ್ರಪ್ರಥಮವಾಗಿ.

"ಓಹೋ! ಕಾನೂನು ಸಹ ಕಲಿತುಬಿಟ್ಟಿದ್ದಾನೆ ಅಲ್ವೋ! ಕೇಳುತ್ತೇನೆ ಇನ್ನೂ ಒಂದು ವರುಷದ ಸಂಬಳ ಸಹಾ ನಿನ್ನ ತಾಯಿಗೆ ಮುಂದಾಗಿ ಕಳಿಸಿಬಿಡುತ್ತೇನೆ ಅಂತ ಇಟ್ಟುಕೊ. ಆಗೇನು ಮಾಡುತ್ತಿ?" ಎಂದು ಕೇಳಿದರು ಡಾಕ್ಟರು

"ಹಾಗೆ ಕಳುಹಿಸಿಕೊಡಬೇಡಿ ಅನ್ನುತ್ತೇನೆ ಅದಕ್ಕೇ ಕೇಳುವುದು."

"ಹಾಗಾದರೆ ಕೇಳು, ಇನ್ನು ಮೂರು ತಿಂಗಳು ನೀನು ನಮ್ಮಲ್ಲಿದ್ದರೆ ಅಡ್ವಾನ್ಸಿಗೆ ಸರಿ ಹೋಗುತ್ತೆ. ಆ ಕೂಡಲೇ ನೀನು ಹೇಗೆ ಹೋಗುತ್ತಿ? ರೈಲು ಛಾರ್ಜಿಗೆ ಹತ್ತು ಹನ್ನೆರಡು ರೂಪಾಯಿ ಬೇಕಾಗುತ್ತಲ್ಲ! ಅದಕ್ಕೇನು ಮಾಡುತ್ತಿ?"

ಶಿವು ಏನೂ ಮಾತಾಡಲಿಲ್ಲ. ಇಷ್ಟೆಲ್ಲ ಕೆಲಸ ತಾನು ಮಾಡುವುದಕ್ಕೆ ರೈಲು ಛಾರ್ಜಿಗೆ ಇವರೇ ಕೊಡಬಾರದೆ?—ಎಂದು ಅವನ ಮನಸ್ಸು ಕೇಳುತ್ತಿತ್ತು.

"ಏನು ಮಾತಿಲ್ಲವಲ್ಲ? ಮತ್ತೂ ಎರಡು ತಿಂಗಳು ಇದ್ದರೇನೇ ದಾರೀಖರ್ಚಾಗೂ ಒಗೆಯಾದೀತು. ಒಟ್ಟು ಐದು ತಿಂಗಳು. ತಿಳೀತೇನೊ?"

"ಸರಿ. ಇನ್ನು ಐದು ತಿಂಗಳಷ್ಟೇ ನಾನು ನಿಮ್ಮಲ್ಲಿರುವುದು" ಎಂದು ಹೇಳಿಬಿಟ್ಟು ಅತ್ತ ಹೋಗಿಬಿಟ್ಟ ಶಿವು.

ಇನ್ನು ಮೂರು ತಿಂಗಳಲ್ಲಿ ಪದ್ಮಾವತಮ್ಮ ಹಡೆಯುತ್ತಾಳೆ. ಆ ಮೇಲೆ ಎರಡು ತಿಂಗಳು—ಬಾಣಂತಿ ಸ್ವಸ್ಥಳಾಗುವವರೆಗೆ ತಾನಲ್ಲಿರಬೇಕು. ಇದನ್ನೆಲ್ಲ ಅಚ್ಯುತಭಟ್ಟರಿಗೂ ತಿಳಿಸಿದ.

ಹೀಗೆ ಮಾಸವರ ರೀತಿಯಲ್ಲಿ ಐದು ತಿಂಗಳು ಅಲ್ಲಿರುವಂತೆ ಒಪ್ಪಂದವಾದರೂ ದೈವ ನಿರ್ಣೀತ ಅವಧಿ ಮುಗಿಯುತ್ತಾ ಬಂದಿತ್ತು. ಅದಕ್ಕೂ ಆ ಕಾಡಾನೆಯೇ ಒಂದು ಕಾರಣವೆನ್ನಬಹುದು.

೨೨

ಶಿವು ಪ್ರತಿದಿನ ಮುಂಜಾನೆ ಐದುಗಂಟೆಗೇ ಎದ್ದು, ಎರಡು ಫರ್ಲಾಂಗ್ ದೂರ, ದೇವಸ್ಥಾನದ ಹತ್ತಿರವಿರುವ ಸೊಗಸಾದ ತಣ್ಣಗಿನ ನದಿ "ಕುಂತಿಪ್ಪೂಳೆ"ಯಲ್ಲಿ ತುಸು ಈಜಾಡಿ ಸ್ನಾನ ಮುಗಿಸಿ, ಅರ್ಘ್ಯ ಬಿಟ್ಟು ಸಂಧ್ಯಾವಂದನೆ ತೀರಿಸಿಕೊಂಡು, "ಊರ್ಧ್ವಮೂಲ" ಮೊದಲಾದ ಮಂತ್ರಗಳನ್ನು ಗುಣಗುಣಿಸಿಕೊಳ್ಳುತ್ತ ಹಿಂದಿರುಗಿ ಮನೆಗೆ ಬರುವುದು ವಾಡಿಕೆ. ಬಂದ ಕೂಡಲೇ ಒಲೆ ಹಚ್ಚಿ ಕೆಲಸಕ್ಕೆ ತೊಡಗುವನು.

ಹಾಗೆ ಬರುವ ದಾರಿಯಲ್ಲಿ ದೇವಸ್ಥಾನದ ಇದಿರು ಮೈದಾನದಲ್ಲಿ, ಮರದ ದಿಮ್ಮಿಗಳಿಂದಾದ ದೊಡ್ಡ ಗೂಡಿನೊಳಗೆ ಇತ್ತೀಚೆಗೆ ಹಿಡಿಯಲಾದ ಕಾಡಾನೆಯನ್ನು ಪಳಗಿಸಲಿಟ್ಟಿದ್ದರು. ಶಿವು ಸ್ವಲ್ಪ ಹೊತ್ತು ಅಲ್ಲಿ ನಿಂತು ಆನೆಯನ್ನು ನೋಡಿಕೊಂಡೇ ಬರುವನು.

ಆ ದಿನ ಅವನು ಸ್ನಾನ ಮುಗಿಸಿಕೊಂಡು ಬರುವಾಗ ಒಬ್ಬ ಬೈರಾಗಿ ಆನೆಯ ಗೂಡಿನ ಹೊರಗೆ ನಿಂತುಕೊಂಡು, ತನ್ನ ಕೈಯಲ್ಲಿದ್ದ ದಂಡದಿಂದ ಅದನ್ನು ತಿವಿಯುತ್ತ ಪದೇ ಪದೇ ಕೀಟಲೆ ಮಾಡುತ್ತಿದ್ದ. ಹತ್ತಿರ ಬೇರೆ ಯಾರೂ ಇರಲಿಲ್ಲ. ಆ ಬೈರಾಗಿ ದೇವಾಲಯದ ಮಂಟಪದಲ್ಲೇ ರಾತ್ರಿ ಕಳೆದಿರಬೇಕು, ಆಳು ಗಟ್ಟಿಮುಟ್ಟಾಗಿ ಚೆನ್ನಾಗಿಯೇ ಇದ್ದ ಪಾಪ

ಇದ್ದಕ್ಕಿದ್ದ ಹಾಗೆ ಆನೆ ಮಿಂಚಿನಂತೆ ಅವನ ಕಡೆಗೆ ಹಾಯ್ದುಬಿಟ್ಟಿತ್ತು. ಅದರ ದಾಡೆಯೊಂದು ಆ ನಿರ್ಭಾಗ್ಯನ ಪಕ್ಕೆಯಲ್ಲಿ ಹೊಕ್ಕು ಬೆನ್ನಿನ ಬದಿಯಲ್ಲಿ ಕಾಣಿಸಿಕೊಂಡು ಹೋಗಿತ್ತು! ಭಯಂಕರ ಬೊಬ್ಬೆಯಿಂದ ಅವನು [illegible] ಕಳಕೊಂಡು ಬಿದ್ದ. "ಅಯ್ಯೋ" ಎಂದು ಕೂಗುತ್ತ, ಶಿವುನೂ ಅವನ ಹತ್ತಿರ ಓಡಿದ. ದೂರ ದೂರ ಇದ್ದವರೆಲ್ಲ ಓಡಿ ಬಂದರು.

ದೈನಾಗಿ ರಕ್ತದ ಕೆರೆಯಲ್ಲಿ ಬಿದ್ದಿದ್ದಾನೆ. ಅವನ ಅಸ್ಪಷ್ಟ ಆರ್ತನಾದವೂ, ನಡುಗುತ್ತಿರುವ ಕೈಕಾಲುಗಳೂ ಕ್ರಮೇಣ ಅಚಲವಾದುವು.

"ಬೇಗ ಎತ್ತಿರಿ. ಡಾಕ್ಟರಲ್ಲಿಗೆ ಒಯ್ಯಿರಿ" ಎಂದೊಬ್ಬ ಕೂಗಿದ.

"ಇದೋ ಡಾಕ್ಟರ್ ಮನೆಯ ಸಮೀಪ. ಇಲ್ಲೇ ಇದ್ದಾರಲ್ಲ. ತಿಮ್ಮಯ್ಯನರೆ. ಡಾಕ್ಟರು ಮನೇಲಿದ್ದಾರಪ್ಪ?" ಎಂದು ಕೇಳಿದನೊಬ್ಬ.

ಇದ್ದಾರೆ ಇದ್ದಾರೆ; ಬೇಗ ಬನ್ನಿರಪ್ಪಾ!" ಎಂದ ತಿಮ್ಮ.

ಜನರು ಅವನನ್ನು ಮಂಚದಲ್ಲಿ ಎತ್ತಿ ಮಲಗಿಸಿ, ಅದನ್ನು ಹೊತ್ತುಕೊಂಡು ತಿಮ್ಮನ ಹಿಂದೆ ಹೊರಟರು. ಅವರ ಹಿಂದೆ ದೊಡ್ಡ ಗುಂಪೂ ನಡೆಯಿತು

ಈ ಘಟನೆಯಿಂದ ಆ ದಿನ ತಿಮ್ಮ ಸ್ನಾನ ಮುಗಿಸಿಕೊಂಡು ಮನೆ ಮುಟ್ಟುವಾಗ ಎಂದಿಗಿಂತ ಮುಕ್ಕಾಲು ಗಂಟೆ ಹೊತ್ತು ತಡವಾಗಿತ್ತು. ಹಾಲಿನವನು ಬಂದು ಕರೆಯುವಾಗ ಪದ್ಮಾವತಮ್ಮನೇ ಎದ್ದು ಹಾಲು ತೆಗೆದುಕೊಂಡು ಮುಚ್ಚಿಟ್ಟು ಮತ್ತೆ ಮಲಗಿದ್ದಳು. ಡಾಕ್ಟರ್‍ರಾಯರು ಎದ್ದು ಹಲ್ಲುಜ್ಜಿ, ಈಸೀಚೇರಿನಲ್ಲಿ ಒರಗಿಕೊಂಡು ಟೈಮ್ಸ್ ಪೇಪರ್ ಬಿಡಿಸಿಕೊಂಡು ಕುಳಿತಿದ್ದರು.. ಅಷ್ಟರಲ್ಲೇ ಸಬ್ಬಕ್ಕಿ ಗಂಜಿಗೆ ಹಾಲು ಸಕ್ಕರೆ ಹಾಕಿ ಸಿದ್ಧ ಮಾಡಿ ತರಬೇಕಿತ್ತು ತಿಮ್ಮ.

ಅವರು "ತಿಮ್ಮಾ" ಎಂದು ಗಂಭೀರ ಧ್ವನಿಯಿಂದ ಕರೆದರು.

ಪದ್ಮಾವತಮ್ಮನೂ ಹಲ್ಲುಜ್ಜಿ, ಕಾಫೀ ಬಾರದ್ದರಿಂದ ಜಡ ಹತ್ತಿಕೊಂಡವಳಂತೆ ಹಾಸಿಗೆಯಲ್ಲಿ ಮಲಗಿಕೊಂಡು, ಅಡಿಗೇ ಮನೆಯ ಕಡೆಗೆ ಕಿವಿಯಾನಿಸಿಕೊಂಡಿದ್ದಳು ಅಲ್ಲಿಂದ ಯಾವ ಸದ್ದೂ ಕೇಳಿಸಲಿಲ್ಲ. ಡಾಕ್ಟರಿಗೆ ಸಬ್ಬಕ್ಕಿ ಗಂಜಿ ಅವರ ಹೆಂಡತಿಗೆ ಬೀಜದ ಕಾಫಿ, ಮಕ್ಕಳಿಗೆ ಕೊತ್ತಂಬರಿ ಕಷಾಯ ಹೀಗೆ ತಯಾರಾಗಬೇಕಿತ್ತು.

"ಇನ್ನೂ ತಿಮ್ಮ ಬಂದ ಹಾಗಿಲ್ಲಾಂದ್ರೇ" ಎಂದಳು ಪದ್ಮಾವತಮ್ಮ.

"ಏನಾಯಿತವನಿಗೆ ಧಾಡಿ? ಹೊಳೇಲಿ ತೇಲಿಗೀಲಿ ಹೋಗಿಬಿಟ್ಟನೋ - ಕರ್ಮ?"

"ತೇಲಿ ಹೋಗುವಷ್ಟೇನೂ ಕೈಲಾಗದವನಲ್ಲ; ಮೈ ತಿಳಿಯದೆ ಈಜಾಡಿಕೊಂಡಿದ್ದಾನು, ಆಟದ ಬುದ್ಧಿ" ಎಂದಳು ಪದ್ಮಾವತಮ್ಮ.

"ತನ್ನ ಲೆಕ್ಕಾಚಾರದ ವಿವರ ಕೇಳಿಬಿಟ್ಟೆ ನೋಡು. ಇನ್ನು ಮೇಲೆ ಅವನಿಗೆ ಲಕ್ಷ್ಯವಿದ್ದೀತೇ ಕೆಲಸದ ಮೇಲೆ? ಬರಲಿ ಸರಿಯಾದ ಬಿಸಿ ತಾಗಿಸಬೇಕು. ಸಲಿಗೆ ಕೊಡಬಾರದಿನ್ನು"

ಹೀಗೆ ಗಂಡಹೆಂಡಿರೊಳಗೆ ಬಿಸಿ ಬಿಸಿ ಮಾತು ನಡೆಯುತ್ತಿದ್ದಾಗ ದೊಡ್ಡ ಗುಂಪು ಅವರ ಮನೆಗೆ ಬಂತು. ಮುಂದಾಗಿ ತಿಮ್ಮ ಓಡಿ ಬಂದು,- "ಆನೆ. ಆನೆ— ಮಾವಾ. (ಡಾಕ್ಟರನ್ನು ಮಾವಾ ಎಂದೂ, ಅವರ ಹೆಂಡತಿಯನ್ನು ಚಿಕ್ಕಮ್ಮ ಎಂದೂ ಕರೆಯಲು ಅವರೇ ಹೇಳಿದ್ದರು.) ಅದು, ಆ ಕಾಡಾನೆ ಒಬ್ಬನನ್ನು ದಾಡೆಯಿಂದ ಗುತ್ತಿ — ಅಯ್ಯೋ!— ಪಾಪ — ಭಾರಿ ರಕ್ತ" ಎಂದು ಅವಸರವಸರದಿಂದ ತಡವರಿಸುತ್ತ ಹೇಳುವಾಗ, ಡಾಕ್ಟರು ದಢಕ್ಕನೆ ಎದ್ದು ನಿಂತು, "ನಡಿಯೋ ಒಳಗೆ! ನಿನ್ನ ಕೆಲಸ ನೋಡೋ ಘಟಿಂಗಾ!" ಎಂದು ಗರ್ಜಿಸಿದರು.

"ಬೀದೀಗಲಾಟೆ ಮನೆಗೆ ತರ್ತಾನೆ! ಮಂಗಾ! ಇನ್ನೂ ನಿಂತಿದ್ದೀನೋ? ನಡೀ ನನ್ನ ಕಣ್ಣೆದುರಿನಿಂದ!" ಎಂದು ಪುನಃ ಅವರು ಗರ್ಜಿಸಲು ತಿಮ್ಮ ಸಪ್ಪೆ ಮುಖದಿಂದ ಒಳಗೆ ಹೋದ.

ಒಳಗೆ ಮುಚ್ಚಿಟ್ಟಿದ್ದ ಹಾಲನ್ನು ಮುಚ್ಚಳ ಪಾರೆ ಮಾಡಿಕೊಂಡು ಕುಡಿಯುತ್ತಿದ್ದ, ಒಂದಲ್ಲ- ಎರಡು ಬೆಕ್ಕುಗಳು ತಿಮ್ಮ ಬರುತ್ತಲೇ ದಬಕ್ಕನೆ ಹಾರಿ ಓಡಿ ಹೋದುವು. ಆ ರಭಸಕ್ಕೆ ಒಲೆ ದಂಡೆಯ ಮೇಲಿದ್ದ ಹಾಲಿನ ಪಾತ್ರೆ ಕೆಳಕ್ಕೆ ಬೋರ್ಲ ಉರುಳಿ ಹೋಯಿತು.

ಈ ಶಬ್ದ ಕೇಳಿ ಪದ್ಮಾವತಮ್ಮ ಬಂದು ಹೊಸ್ತಿಲ ಹತ್ತಿರ ಕಣ್ಣರಳಿಸುತ್ತಾ ನಿಂತಳು.

"ಒಳ್ಳೇ ಗ್ರಹಚಾರ ಬಡೀತು ಇವತ್ತು. ಕಿಟಕೀ ಬಾಗಿಲು ತೆಗೆದಿಟ್ಟಿದ್ರಿಂದ್ಲೇ ಬೆಕ್ಕು ಬಂತು" ಎಂದಳು ಪದ್ಮಾವತಮ್ಮ.

"ಕಿಟಕೀ ಬಾಗಿಲು ನಾನು ತೆಗೀಲಿಲ್ಲ ಚಿಕ್ಕಮ್ಮ"

"ನಾನೇ ತೆಗೆದೆನಪ್ಪಾ. ಹಾಲಿನವ ಬಂದು ಕರೆದ. ನೀನಿಲ್ಲದ್ದು ತಿಳಿದು ನಾನು ಬಂದು ಕೋಣೆಗೆ ಬೆಳಕು ಬರಲೀ ಅಂತ ಕಿಟಕಿ ಬಾಗಿಲು ತೆಗೆದೆ. ನೀನಿಷ್ಟು ತಡ ಮಾಡ್ತೀ ಅಂತ ನನಗೇನು ಗೊತ್ತು? ಸರಿ ಸರಿ ಈಗ ಹೇಳುತ್ತಾ ಕೇಳುತ್ತಾ ನಿಂತರಾಗಲಿಲ್ಲ. ಓಡಿಹೋಗಿ ಹಾಲಿನವನ ಮನೆಯಿಂದ ಸಿಕ್ಕಿದಷ್ಟು ಹಾಲು ತಾ ಬೇಗ" ಎಂದಳು ಪದ್ಮಾವತಮ್ಮ.

ತಿಮ್ಮ ಒದ್ದೆ ಬಟ್ಟೆಯಲ್ಲೇ ಪಾತ್ರೆ ಎತ್ತಿಕೊಂಡು ಹೊರಟ.

ಆಗ ಡಾಕ್ಟರು ಗುಂಪಿನ ನಡುವೆ ಇದ್ದ ಗಾಯಾಳು ಬೈರಾಗಿಯ ಅವಸ್ಥೆಯನ್ನು ಸುಮ್ಮನೆ ಒಮ್ಮೆ ನೋಡಿ, "ಇವನನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿರಿ ಇಲ್ಲಿ ನೋಡಲು ಸಾಧ್ಯವೇ ಇಲ್ಲ" ಎಂದರು.

ದೇವಸ್ಥಾನದ ಮುಖಂಡ,—"ಪಾಪ, ಯಾರೋ ದಿಕ್ಕಿಲ್ಲದವ ಡಾಕ್ಟ್ರೇ. ರಕ್ತ ಮಾಂಸ ಬಾರದ ಹಾಗೆ ಒಂದು ಕಟ್ಟಾದರೂ-" ಎನ್ನುವಷ್ಟರಲ್ಲಿ ಡಾಕ್ಟರು "ಅದೇನು ಮಾಡಲಿಕ್ಕೂ ಇಲ್ಲಿ ಸಾಧ್ಯವಿಲ್ಲ. ಆಸ್ಪತ್ರೆಗೆ ಒಯ್ಯಬೇಕು. ಅಲ್ಲಿ ಕಂಪೌಂಡರ್ ಇದ್ದಾನೆ. ಹೂಂ, ನಡೆಯಿರಿ ಇಲ್ಲಿಂದ" ಎಂದವರೇ ಬಾಗಿಲು ಹಾಕಿಕೊಂಡುಬಿಟ್ಟರು

ತಿಮ್ಮನಿಗೆ ಮುಂದೆ ಹೋಗಲು ಕಾಲೇ ಬರಲಿಲ್ಲ. ಸ್ವಲ್ಪ ಅಲ್ಲೇ ನಿಂತು. ಬೈರಾಗಿಯ ಮೇಲೆ ಅನುತಾಪ ಪಡುತ್ತಾ, ಡಾಕ್ಟರ್‍ರಾಯರ ಖಂಡಿತ ಕಠೋರತೆಗಳಿಗೆ ಆಶ್ಚರ್ಯ ಪಡುತ್ತಾ,

ಜನರು ಬೈರಾಗಿಯ ಕಳೇಬರವನ್ನು ಎತ್ತಿಕೊಂಡು ಅಲ್ಲಿಂದ ಕದಲಿದ ಮೇಲೆ. ಅವನೂ ಬೇಗಬೇಗನೆ ಹಾಲಿನವನ ಮನೆಗೆ ಹೋದ.

ಆ ಬೈರಾಗಿ ಸಾಯುವನೋ ಬದುಕುವನೋ? ಅಲ್ಲ ಈಗಾಗಲೇ ಸತ್ತೇ ಹೋದನೋ? ತಿಮ್ಮನ ಮನಸ್ಸು ಪೇಚಾಡುತ್ತಿತ್ತು.

ಹಾಲಿನವನ ಮನೆಗೆ ಹೋದಾಗ, ಅಲ್ಲಿ ಅಷ್ಟಟ ಹಾಲಿರಲಿಲ್ಲ ಇರುವ ಹಾಲಿಗೆ ನೀರು ಬೆರೆಸಿ ಕಾಯಿಸಿಯಾಯಿತಂತೆ.

ಅದನ್ನೇ ಸ್ವಲ್ಪ ಹಾಕಿಸಿಕೊಂಡು ಮನೆಗೆ ಬಂದ

ಆಗ ಪದ್ಮಾವತಮ್ಮ ಕಷ್ಟ ಪಡುತ ಒಲೆಗೆ ಬೆಂಕಿ ಹಚ್ಚಿ, ಸಬ್ಬಕ್ಕಿ ಬೇಯಲಿಕ್ಕಿಟ್ಟು, ಕಾಫಿಗೂ ನೀರಿಟ್ಟಿದ್ದಳು.

ಆ ಸಮಯದಲ್ಲಿ ಇನ್ನೊಂದು ಗಾಬರಿಯ ಕಥೆಯಾಯಿತು ಡಾಕ್ಟರ ಮಗಳು ಚಿಕ್ಕ ಹುಡುಗಿ ನಡುನಡುಗುತ್ತಾ ಮೂರ್ಛೆ ಹೋಗಿ ಬಿದ್ದುಬಿಟ್ಟಳು. ಡಾಕ್ಟರು ಬೇಗ ಬೇಗನೇ ಅವಳಿಗೆ ಶೈತ್ಯೋಪಚಾರ ಮಾಡಿ, ತಮ್ಮ ಔಷಧ ಬ್ಯಾಗಿನಿಂದ ಒಂದು ಇಂಜೆಕ್ಷನ್ ಕೊಟ್ಟರು. ಅವಳು ಕಣ್ಣು ಬಿಡಿಸುತ್ತ "ಅಯ್ಯೋ! ರಕ್ತ! ಕೆಂಪು! ಓ! ಕೆಂಪುಮುದ್ದೇ "ಎಂದು ನಡುಗುತ್ತ ಮತ್ತೆ ಮೂರ್ಛೆಹೋದಳು.

ಪದ್ಮಾವತಮ್ಮನಿಗೆ ಗಾಬರಿಯಾಯಿತು.

"ಹೆದರಬೇಡ್ವೇ ನೀನೂ ಬೇರೆ! ಆ ಬೈರಾಗಿಯ ರಕ್ತ ಗಾಯ ಎಲ್ಲಾ ನೋಡಿ ಹುಡುಗಿ ಹೆದರಿಕೊಂಡಿದೆ. ನಿದ್ದೆಮಾಡಲಿ ಹೀಗೆಯೇ, ಸರಿ ಹೋಗುತ್ತೆ" ಎಂದರು ಡಾಕ್ಟರು.

ಆಗ ಹಾಲು ಹಿಡಿದುಕೊಂಡು ಬಂದ ತಿಮ್ಮನನ್ನು ನೋಡಿ ಡಾಕ್ಟರು, "ಸಿಕ್ಕಿತೇನೋ ಹಾಲೂ?" ಎಂದು ಜೋರಾಗಿಯೇ ಕೇಳಿದರು.

"ಕಾಯಿಸಿದ ನೀರು ಹಾಲಿತ್ತು. ಅದನ್ನೇ ಎರಡು ಅಡಂಗಳಿ ತಂದೆ" ಎಂದ ತಿಮ್ಮ.

ಡಾಕ್ಟರು ಹುಲಿಯ ಹಾಗೆ ಅವನ ಬಳಿಗೆ ಹಾರಿ, ಅವನ ಹಿಂದಲೆಯ ಮೇಲೆ ಒಂದು ಕುಟ್ಟಿ, "ನಿನ್ನ ತಲೆಗೆ ಈ ಹಾಲು. ಅವನ ಕೊಳಕು ಪಾತ್ರದಲ್ಲಿದ್ದ ಕಾಸಿದ ಹಾಲನ್ನೇ ನೀನು ತರೋದು?" ಎಂದು ಗರ್ಜಿಸುವಾಗ, ಬಿಸಿಯಾಗಿದ್ದ ಹಾಲಿನ ಪಾತ್ರೆಯನ್ನು ನಾಜೂಕಾಗಿ ಹಿಡಿದಿದ್ದ ತಿಮ್ಮನ ಕೈ ನಡುಗಿ ಪಾತ್ರವು ಒಪ್ಪರೆಯಾಗಿ ಎಲ್ಲಾ ಹಾಲೂ ಕೆಳಗೆ ಚೆಲ್ಲಿ ಹೋಯಿತು ಸಿಟ್ಟು ಬಂದ ತಿಮ್ಮ "ಚೆಲ್ಲಲಿ" ಎಂದುಕೊಂಡು ಕೈಯನ್ನು ಬೇಕೆಂದೇ ಒಪ್ಪರೆ ಮಾಡಿಕೊಂಡಿದ್ದ

ಮತ್ತೆ ಕೂಡಲೇ ಡಾಕ್ಟರು ಅವನ ಕಿವಿ ಹಿಂಡುತ್ತಾ, "ಬೆಳಿಗ್ಗೆ ಎದ್ದು ನಿನ್ನ ಕೆಲಸ ನೀನು ಮಾಡುತ್ತ ನಿನ್ನಷ್ಟಕ್ಕೆ ಬರೋದು ಬಿಟ್ಟು, ಆ ಗಂಪನ್ನು ಏಕೋ ಕರೆದು ತಂದೆ?" ಎಂದು ಕೇಳದರು

"ನಾ ನಾ ಕರೆದು ತಂದೆ?" ಎಂದ ಅಳುಗೊರಲಿನಿಂದ ತಿಮ್ಮ.

"ಹಾಗಾದರೆ ನೀನು ಸ್ನಾನ ಮಾಡಿಕೊಂಡು ಬರಲಿಕ್ಕೆ ಅಷ್ಟು ಹೊತ್ತು ಯಾಕೋ ಆಯಿತು. ಬೊಗಳು"

"ಬೊಗಳುತ್ತೇನೆ. ಕಿವೀನ ಬಿಡಿ. ಆಕ್ತಿ ತಂದು ಕೊಡ್ತೇನೆ. ಕೊಯ್ದುಬಿಡಿ" - ಹಲ್ಲು ಕಚ್ಚಿದ ಹಾಗೆ ಹೇಳಿದ ತಿಮ್ಮ.

ಡಾಕ್ಟರು ಗಬಕ್ಕನೆ ಕಿವಿಯನ್ನು ಬಿಟ್ಟು, "ಏನು, ಏನಂದಿ? ಆ ಮಾತು ಇನ್ನೊಮ್ಮೆ ಹೇಳೋ ಕತ್ತೆ!"

ತಿಮ್ಮ ಜೋರೆಂದು ಅಳುತ್ತ, "ಮತ್ತೆ ಎಂಥದು ಮಾವಾ ನೀವೂ, ಕೊಂದು ಬಿಡೀ ನನ್ನ ಒಂದೇ ಸಾರೀ!" ಎಂದ.

"ಎಲಾ ಇವನ! ಸುಳ್ಳು ಬೇರೆ ಹೇಳುತ್ತ ಹೆಣ್ಣಿನ ಹಾಗೆ ಅಳುತ್ತಾನಲ್ಲ!"

"ನಾನೇನೂ ಸುಳ್ಳು ಹೇಳ್ಲಿಲ್ಲ. ನಾನು ಹೊಳೆಯಿಂದ ಬೇಗನೇ ಸ್ನಾನಾ ಮಾಡಿ ಬರುತ್ತಾ ಇದ್ದೆ. ಆಗ ಆನೆ ಅವನನ್ನು ಕುತ್ತಿ ಬಿಟ್ಟಿದ್ದು ನೋಡಿದೆ. ನನಗೆ ಕೈಕಾಲೇ ಬಾರದ ಹೋಯ್ತು. ಅಲ್ಲೇ ನಿಂತೆ ಸ್ವಲ್ಪ. ಜನರು, ಡಾಕ್ಟರು ಮನೇಲಿದ್ದಾರಾ ಅಂತ ಕೇಳಿದ್ದಕ್ಕೆ ಇದ್ದಾರೆ ಅಂದೆ ನಾನು ಹೇಳದಿದ್ದರೂ ಬೆಳಗ್ಗೆ ಡಾಕ್ಟರು ಮನೇಲೇ ಇರುತ್ತಾರೇ ಅಂತ ಅವರಿಗೂ ಗೊತ್ತಿತ್ತು."

"ಅಷ್ಟು ಹೊತ್ತೂ ನೀನು ಅಲ್ಲೇ ನಿಂತಿದ್ದಿಯಪ್ಪ?"

"ಇದ್ದೆ. ಬಿದ್ದವ ಒದ್ದಾಡ್ತಾ ಇರುವಾಗ ಸ್ವಲ್ಪ ಹೊತ್ತು ನೋಡ್ತಾ ಇದ್ದೆ."

"ಯಾಕೋ ಇದ್ದಿ? ಏನನ್ನೋ ನೋಡೋದು ನೀನು? ಇಕ್ಕ ಕೆಲಸದ ಜವಾಬ್ದಾರೀದು ಭಯ ಇರ್ತಿದ್ರೆ ಹಾಗೆ ನೋಡುತ್ತಾ ಇರ್ತಿದ್ದಿಯಾ? ನಿನಗೆ ಬುದ್ಧಿ ಇದೆಯೇನೋ? ಇಂಥಾ ಸಾಯುವ ಕೇಸನ್ನೆಲ್ಲ ಮನೆಗೆ ತರಬೇಡಿ. ಆಸ್ಪತ್ರಿಗೇ ತೆಗಿದುಕೊಂಡು ಹೋಗೀ ಅಂತ ಅವರಿಗೆ ಹೇಳಬೇಡವೇ ನೀನು? ಇಂಥಾ ಭಿಕ್ಷುಕರಿಗೆಲ್ಲ ಚಿಕಿತ್ಸೆ ಮಾಡಿದರೆ ಯಾವ್ನೋನೋ ಫೀಸು ಕೊಡ್ತಾನೆ? ಅಷ್ಟೂ ತಿಳೀಬೇಡ್ವೇನೊ ನಿಂಗೆ?"

"ನೀವೇನಾದರೂ ಕಟ್ಟು ಗಿಟ್ಟು ಕಟ್ತೀರಿ ಅಂತ ಮಾಡಿದೆ"

"ಸರಿ ಹಾಗಾದರೆ ನೀನೇ ಅವರನ್ನು ಕರಕೊಂಡು ಬಂದದ್ದು ಅಂತ ಆಯಿತಲ್ಲ. ಕತ್ತೇ! ನಿನ್ನಿಂದ ಎಂಥಾ ಅಪಾಯ ಮನೆಗೆ ಬಂತೆಂದು ಗೊತ್ತೇನೋ ನಿನಗೆ? ಶುದ್ಧ ಮುಟ್ಠಾಳ! ಕತೆ ಬರೀತಾನಂತೆ! ತೆಗೆದು ಬೆಂಕಿಗೆ ಹಾಕೋ ನಿನ್ನ ಪುಸ್ತಕ ಭಂಡಾರಾನ! ನಡೀ ಆಚೆ ನನ್ನ ಕಣ್ಣೆದುರಿನಿಂದ!"

ಡಾಕ್ಟರ್ರಾಯರ ಕುಟ್ಟುವಿಕೆಯಿಂದ ತಿಮ್ಮನ ತಲೆ ಗಂಟು ಬಿಚ್ಚಿ ಹೋಗಿತ್ತು. ಹಾಗೆಯೇ ತಲೆತಗ್ಗಿಸಿಕೊಂಡು ಅಡಿಗೇಮನೆಗೆ ಹೋದ. ಕಸಬರಿಕೆ ತಂದು ಚೆಲ್ಲಿದ ಹಾಲನ್ನೆಲ್ಲ ತೊಳೆದ ಆ ದಿನ ಡಾಕ್ಟರರು ಹಾಲೀದ ಸಬ್ಬಕ್ಕಿ ಗಂಜಿಯನ್ನೇ ಕುಡಿದು ಆಸ್ಪತ್ರೆಗೆ ಹೋದರು. ಅವನು ಮನಸ್ಸಿಲ್ಲದ ಮನಸ್ಸಿನಿಂದ ಅಳುತ್ತಾ ಅಡಿಗೆ ಮಾಡಿದ ಮಾಡದೇ ಇದ್ದ ಅಪರಾಧಗಳೆಲ್ಲ ತನ್ನ ಮೇಲೆ ಬಿದ್ದುದಕ್ಕೆ ಮನಸ್ಸಿಗೆ ಬಹಳ ವೇದನೆಯಾಗಿತ್ತು. ಹುಡುಗಿ ಬೇರೆ ಹೆದರಿಕೊಂಡು ಮಲಗಿದ್ದಾಳೆ. ಡಾಕ್ಟರ್ರಾಯರು ಬಹಳ ಕಠಿನವಾಗಿ ಬಯ್ದುಬಿಟ್ಟರು. ಇನ್ನು ಹೇಗಪ್ಪ ಇಲ್ಲಿರುವುದು? ಯಾವ ಮುಖದಿಂದ?

೩೪

ಮಧ್ಯಾಹ್ನ ಡಾಕ್ಟರು ಮನೆಗೆ ಬರುವಾಗ ಹುಡುಗಿ ಸ್ವಲ್ಪ ಹುಶಾರಾಗಿ ಊಟ ಮಾಡುತ್ತಿದ್ದಳು. ಅದೂ ತಾಯಿಯ ಒತ್ತಾಯದ ಊಟವಾದುದರಿಂದಲೋ ಏನೋ, ಉಂಡದ್ದೆಲ್ಲಾ ವಾಂತಿಯಾಗಿ ಹೋಯಿತು. ಬೆಳಗ್ಗಿನ ವಿಷಯವಾವುದೂ ಆ ಹುಡುಗಿಯ ನೆನಪಿಗೆ ಬಾರದ ಹಾಗೆ ಡಾಕ್ಟರು ಅವಳಿಗೆ ಬೇರೆ ಬೇರೆ ವಿಷಯದ ಪ್ರಶ್ನೆಗಳನ್ನೂ, ಕಥೆಗಳನ್ನೂ ಹೇಳತೊಡಗಿ,- "ನಾಳೆ ಸಾಯಂಕಾಲ ಒಬ್ಬ ಹೊಸ ಅಡಿಗೇ ಹುಡುಗ ಬರುತ್ತಾನೆ. ಅವನೊಟ್ಟಿಗೆ ನೀನು ಆಡಬಹುದು. ಕರ್ರಗೆ ಗುಂಡಗಾಗಿದ್ದಾನೆ. ಮುಟ್ಟಿದರೆ ಮಾಸಿಹತ್ತಿಕೊಂಡೀತು. ಆ ಮೇಲೆ ಶುಭ್ರವಾಗಿ ಸ್ನಾನ ಮಾಡಿಬಿಟ್ಟರೆ ಮೈ ಬೆಳ್ಳಗಾಗುತ್ತೆ" ಎಂದಾಗ ಆ ಹುಡುಗಿಗೆ ನಗೆಬಂತು.

"ತಿಮ್ಮಣ್ಣ ಹೋಗುತ್ತಾನೆ?" ಎಂದು ಕೇಳಿದಳು

"ಹೌದು. ಅವನ ಅಮ್ಮನಿಗೆ ಅವನನ್ನು ನೋಡಬೇಕು ಅಂತ ಕಾಣುತ್ತಂತೆ. ಅದಕ್ಕೆ ಹೋಗಿಬರಲಿ ಅಂತ ಮಾಡಿದ್ದೇವೆ. ಪಾಪ, ಹೋಗಿ ಬರಲಿ ಅಗದೆ?" ಎಂದರು ಡಾಕ್ಟರು ಮುದ್ದು ಮಾತಿನಿಂದ

ಹುಡುಗಿ ತಿಮ್ಮನ ಮುಖನೋಡಿ, "ಹ್ ದೇ ತಿಮ್ಮಣ್ಣ? ಮತ್ತೆ ಯಾವಾಗ ಬರುತ್ತಿ? ನಿನ್ನ ಅಮ್ಮ ಬಿಡುತ್ತಾಳಾ?" ಎಂದು ಕೇಳಿದಳು.

"ಬಿಡದೇ ಏನು? ನನ್ನ ಅಮ್ಮ ಕಳುಹಿಸಿದ ಕೂಡಲೇ ಬಂದು ಬಿಡುತ್ತೇನೆ" ಎಂದ ತಿಮ್ಮ ನಗುತ್ತ. ಸ್ವಲ್ಪ ಮಟ್ಟಿಗೆ ವಾತಾವರಣ ತಿಳಿಯಾಯಿತು.

ಡಾಕ್ಟರಾಯರು ತಿಮ್ಮನನ್ನು ಕರೆದು ಸಮಾಧಾನವಾಗಿ ಹೇಳಿದರು "ನೋಡಪ್ಪ, ನಾಳೆ ಬೆಳಿಗ್ಗೆಯೇ ನಿನ್ನನ್ನು ಕಳುಹಿಸಿಬಿಡುವುದು ಅಂತ ಮಾಡಿದ್ದೇನೆ. ನೀನು ಇದ್ದಷ್ಟು ದಿವಸ ನಮಗೆಲ್ಲ ಸಂತೋಷವಾಗುವ ಹಾಗೆಯೇ ಇದ್ದೆಯಪ್ಪ. ಏನೋ ಈಗ ಕೆಲವು ದಿನಗಳಿಂದ ನೀನು ಸರಿಯಾಗಿಲ್ಲ ಅಷ್ಟೇ ಊರಿನ ಯೋಚನೆ ಬಂದಿದೆ. ಹೋಗಿ ಬಾ ಪುನಃ ಬರಲಿಕ್ಕೆ ಇಷ್ಟವಿಲ್ಲದಿದ್ದರೆ ಹೇಳಿಬಿಡು. ನನಗೇನೂ ಕೋಪವಿಲ್ಲ" ಎಂದರು

"ಪುನಃ ಬರಬೇಕೂ ಅಂತ ನಾನು ಆಲೋಚನೆ ಮಾಡಲಿಲ್ಲ. ಆದರೆ—" ಎಂದು ಮೆಲ್ಲನೆ ಹೇಳುತ್ತ ಮಾತು ನಿಲ್ಲಿಸಿಕೊಂಡ ತಿಮ್ಮ

"ಬಹಳ ಒಳ್ಳೆಯದು ನಿನ್ನ ಆತಂಕವೂ ಗೊತ್ತಾಯಿತು. ನೀನು ಮಾಡಿದ ಕೆಲಸಗಳನ್ನೆಲ್ಲ ಆಲೋಚನೆ ಮಾಡಿ ನಿನ್ನ ಬಾಬ್ತು ಬಾಕಿ ಹಣವನ್ನೆಲ್ಲ ಬಿಡುತ್ತೇನೆ ಅದರ ಮೇಲೆ ರೈಲು ಚಾರ್ಜ್ ಕೂಡಾ ಕೊಡುತ್ತೇನೆ. ಸರಿಯಷ್ಟೆ?"

"ಸರಿ ಮಾವ."

ಡಾಕ್ಟರ್ ಗೋವರ್ಧನರಾಯರಿಗೆ ತಿಮ್ಮನ ಹೊಲಬು ತಿಳಿದುಹೋಗಿತ್ತು. ಅದರಲ್ಲಿ ತಮ್ಮದೂ ತಪ್ಪು ಇರುವುದೆಂಬ ಪ್ರಜ್ಞೆಯೂ ಆಗಿತ್ತು. ಆದರೆ ಅದನ್ನು ಬಹಿರಂಗವಾಗಿ ಒಪ್ಪಿಕೊಂಡು ಆ ಸಣ್ಣ ಹುಡುಗನ ಮುಂದೆ ಕ್ಷಮೆ ಕೇಳಿಕೊಳ್ಳುವುದು ಆಗದ ಮಾತು. ಅಸಲು– ಅವನ ಹಂಗು ತಮಗೇಕೆ?

ಅವರು ಹೇಗೆ ಅಧಿಕಾರ ಮಾಡಿದರೂ ಹೆದರಿಕೊಂಡು "ಇನ್ನು ಮೇಲೆ ಹಾಗೆ ಮಾಡುವುದಿಲ್ಲ, ಕ್ಷಮಿಸಿ" ಎಂಬ ಶರಣಾಗತ, ವಿನಯಯುಕ್ತಭಾವವುಳ್ಳ, ಸ್ವಾಭಿಮಾನಶೂನ್ಯನಾದ ಅಡಿಗೆಯ ಹುಡುಗ ಅವರಿಗೆ ಬೇಕಾಗಿದ್ದ. ತಿಮ್ಮನ ಹಠ, ಸ್ವಾಭಿಮಾನ, ನಿರ್ಭಯತೆಗಳು ಅವರಿಗೆ ಹೊಂದಿಕೊಳ್ಳಲಿಲ್ಲ.

ಡಾಕ್ಟರ್ ಅಂದು ಬೆಳಗ್ಗೆ ಆಸ್ಪತ್ರೆಗೆ ಹೋದ ಕೂಡಲೇ, ತಮ್ಮ ಜವಾನನನ್ನು ಕಳುಹಿಸಿ, ಅಚ್ಯುತಭಟ್ಟರನ್ನು ಬರಮಾಡಿಕೊಂಡು, "ನಮ್ಮ ತಿಮ್ಮ ಊರಿಗೆ ಹೋಗಬೇಕು ಅಂತ ಒಂಟಿಗಾಲಲ್ಲಿ ನಿಂತಿದ್ದಾನೆ. ಯಾವ ಕೆಲಸವನ್ನೂ ಸರಿಯಾಗಿ ಮಾಡುವುದಿಲ್ಲ. ಬೇರೆ ಅಡಿಗೇ ಹುಡುಗನೊಬ್ಬ ಇವತ್ತೇ ಸಿಕ್ಕಿದರೆ ನಾಳೆಯೇ ಅವನನ್ನು ಕಳುಹಿಸಿ ಬಿಡುತ್ತೇನೆ" ಎಂದು ಪ್ರಸ್ತಾಪಿಸಿದರು

ಆ ಊರನ್ನೆಲ್ಲ ಚೆನ್ನಾಗಿ ಬಲ್ಲವರಾದ ಅಚ್ಯುತಭಟ್ಟರು ಕೂಡಲೇ ಹೋಗಿ ಒಬ್ಬ ಬಡಪಟ್ಟರ್ ಮನೆಯಿಂದ ಹನ್ನೆರಡು ವಯಸ್ಸಿನ ಹುಡುಗನನ್ನು ಕರೆದುಕೊಂಡು, ಆಸ್ಪತ್ರೆಯಲ್ಲೇ ಡಾಕ್ಟರಿಗೆ ತೋರಿಸಿ, "ಇವನಿಗೆ ಅಡಿಗೆ ಮಾಡಲಿಕ್ಕೆ ಗೊತ್ತುಂಟು. ಆದರೆ ನಿಮ್ಮ ಅಡಿಗೆಯ ಕ್ರಮಗಳನ್ನು ಎರಡುದಿನ ಹೇಳಿಕೊಟ್ಟರೆ ಸಾಕು, ಹಿಡಿದುಕೊಂಡು ಬಿಡುತ್ತಾನೆ. ಭಾಷೆಮಾತ್ರ ಇವನಿಗೆ ಮಲಿಯಾಳವೊಂದೇ ಗೊತ್ತು. ಕನ್ನಡ ಸುಟ್ಟು ತಿನ್ನಲಿಕ್ಕೂ ಬಾರದು" ಎಂದರು.

ಡಾಕ್ಟರಿಗೂ ಅವರ ಹೆಂಡತಿಗೂ ಮಲಿಯಾಳ ಗೊತ್ತೇ ಇತ್ತು. ಆ ಹುಡುಗನಿಗೆ ಮೊದಲು ಎರಡು ತಿಂಗಳಿಗೆ ಮೂರು ರೂಪಾಯಿ ಸಂಬಳವೆಂದೂ, ಅನಂತರ ನಾಲ್ಕು, ಐದು ಹೀಗೆ ಹೆಚ್ಚಿಸಬಹುದೆಂದೂ ನಿರ್ಣಯವಾಯಿತು.

ಆ ದಿನ ಸಾಯಂಕಾಲವೇ ತನ್ನ ಬಟ್ಟೆಯ ಚೀಲ ಹಿಡಿದುಕೊಂಡು ಆ ಹುಡುಗ ಬಂದ.

ತಿಮ್ಮ ತಾನೊಬ್ಬನೇ ಹೋಗಬಲ್ಲೆನೆಂದು ಹೇಳಿದನಾದರೂ, ಅಚ್ಯುತಭಟ್ಟರು ಬಸ್ಸಿನಲ್ಲಿ ಅವನೊಂದಿಗೆ ಒಲವಕ್ಕೋಡಿನ ವರೆಗೆ ಹೋಗಿ ರೈಲು ಹತ್ತಿಸಿಬಿಡುವುದಾಗಿ ಏರ್ಪಾಡಾಯಿತು. ಡಾಕ್ಟರು, ಅಚ್ಯುತಭಟ್ಟರ ಹತ್ತಿರ ಸ್ವಲ್ಪ ಹಣ ಕೊಟ್ಟು, "ಇವನಿಗೆ ಬೇಕಾದ ಬಟ್ಟೆ ಅಂಗಿ ತೆಗೆಸಿಕೊಡಿ" ಎಂದು ಹೇಳಿ ತಿಮ್ಮನನ್ನೂ ಅವರೊಂದಿಗೆ ಕಳುಹಿಸಿದರು.

ಆಗ ದಾರಿಯಲ್ಲಿ ನಡೆದ ಎಲ್ಲಾ ಸಂಗತಿಯನ್ನೂ ಅಚ್ಯುತಭಟ್ಟರಿಗೆ ಹೇಳಿದ ತಿಮ್ಮ. "ಸರಿ ಒಳ್ಳೇದಾಯಿತು ಬಿಡು. ಈಗ ನೀನು ಸುಮ್ಮನೆ ಊರಿಗೆ ಹೋದರೂ ಮತ್ತೆ ಬೇರೊಂದು ಕೆಲಸ ಹುಡುಕಲೇ ಬೇಕಷ್ಟೆ? ನೀನು ಹೋಗುವಾಗ ಮಧ್ಯದಲ್ಲಿ ಕೊಯಂಬತ್ತೂರು ಬರುತ್ತೆ. ಅಲ್ಲಿರುವ ನನ್ನ ಸ್ನೇಹಿತರೊಬ್ಬರ ವಿಳಾಸ ಕೊಡುತ್ತೇನೆ. ಅವರು ರೇಲ್ವೇ ಸ್ಟೇಶನ್ನಿಗೆ ಸಮೀಪದಲ್ಲೇ ಸೋಡಾ ಶಾಪು ಇಟ್ಟಿದ್ದಾರೆ. ಅಲ್ಲಿ ಒಬ್ಬರು ರೈಲ್ವೇ ಕಾಶಿಯರ್ ಉದ್ಯೋಗಸ್ಥರಿಗೆ ಅಡಿಗೆಗೆ ಹುಡುಗಬೇಕಂತೆ. ಸಂಬಳ ಹತ್ತು ರೂಪಾಯಿ ಕೊಡುತ್ತಾರೆ. ಸಾಧ್ಯವಾದರೆ ಅಲ್ಲಿ ಕೆಲವು ದಿನ ಇದ್ದು ನೋಡು. ಹಿಡಿಸದಿದ್ದರೆ ಅಲ್ಲಿಂದ ಊರಿಗೆ ಹೋದರಾಯಿತಲ್ಲ" ಎಂದರು ಅಚ್ಯುತಭಟ್ಟರು.

ಈ ಏರ್ಪಾಡು ತಿಮ್ಮನಿಗೆ ಹಿಡಿಸಿತು.

ತಾನು ಹೊರಡಲು ಕೋಪತಾಪಗಳೇ ಕಾರಣವಾದರೂ ಡಾಕ್ಟರ್ರಾಯರು ಪ್ರಸನ್ನತೆಯಿಂದ ಹೊಸ ಬಟ್ಟೆ ಅಂಗಿ ತೆಗೆಸಿಕೊಟ್ಟು ಕಳುಹಿಸುವುದನ್ನು ನೋಡಿ ಅವನಿಗೊಂದು ಬಗೆಯ ತೃಪ್ತಿಯುಂಟಾಯಿತು. ಇಷ್ಟು ಕಾಲ ತಾಯಿಯ, ಅಣ್ಣನ ಮೂಲಕವಾಗಿ ಅವರ ಹೇಳಿಕೆ, ದಾಕ್ಷಿಣ್ಯಗಳಿಗೆ ಕಟ್ಟುಬಿದ್ದು ತೀರ ಪರತಂತ್ರತೆಯಲ್ಲಿದ್ದ ತಾನೂ ಇನ್ನು ಮೇಲೆ ತನಿಷ್ಟಪ್ರಕಾರ ತಾನೇ ಸಂಪಾದಿಸಿಕೊಳ್ಳುವಂತಹ ಕೆಲಸದಲ್ಲಿರುವ ಹಾಗೆ ಆಯಿತಲ್ಲ. ಇದೊಂದು ಹೆಮ್ಮೆಯ ಸಂಗತಿಯಾಗಿತ್ತು ಅವನಿಗೆ

ಆ ದಿನ ರಾತ್ರಿಯಲ್ಲೇ ಅವನು ಗೋವರ್ಧನರಾಯರಲ್ಲಿಂದ ಹೊರಟು ಅಚ್ಯುತಭಟ್ಟರ ಬಿಡಾರಕ್ಕೆ ಹೋದನು. ತನ್ನ ಪೆಟ್ಟಿಗೆಯೊಂದಿಗೆ ಅವನು ಹೊರಡುವಾಗ 'ಚಿಕ್ಕಮ್ಮ' ಹಾಗು 'ಮಾವ' ಇಬ್ಬರ ಕಾಲಿಗೂ ಅಡ್ಡಬಿದ್ದನು. ಹೊರಡುವ ಮೊದಲು ಅವರು ತಿಮ್ಮ ಅಲ್ಲಿ ಮಾಡಿದ ಕಾರ್ಯಗಳನ್ನು ಕುರಿತು ತುಂಬಾ ಹೊಗಳಿಕೊಂಡು ಮಾತಾಡಿದರು. ಊರಿಗೆ ಹೋಗಿ ಅವನು ತಮ್ಮನ್ನು ಕುರಿತು ದೂರ ಬಾರದೆಂಬುದೇ ಅವರ ಉದ್ದೇಶವಾಗಿತ್ತು. "ಯಾರು ಯಾರಿಗೆ ಎಲ್ಲೆಲ್ಲಿ ಎಷ್ಟೆಷ್ಟು ಋಣವುಂಟೋ ಅಷ್ಟೇ ದಿನ ಇರುತ್ತಾರೆ. ಇಲ್ಲಿಗೆ ಬರುವ ಮೊದಲು ಅರಸುಗಳ ಮನೆಯಲ್ಲಿದ್ದನಲ್ಲಾ; ಆಗ ತಿಳಿದಿತ್ತೇ ಬರುತ್ತಾನೆ ಅಂತ. ಹಾಗೇ ಇಲ್ಲಿಂದ ಹೊರಡಲಿಕ್ಕೆ ಏನೋ ಒಂದು ಕಾರಣ ಹುಟ್ಟಿಕೊಂಡಿತು ಅಷ್ಟೆ" ಎಂದಳು ಪದ್ಮಾವತಮ್ಮ. ಡಾಕ್ಟರೂ ಅದಕ್ಕೆ ದನಿಗೂಡಿಸಿಕೊಂಡರು. ಆ ರಾತ್ರಿ ಅಲ್ಲಿಯೇ ಊಟಕ್ಕಿದ್ದ ಅಚ್ಯುತಭಟ್ಟರೂ "ಹೌದು, ಹೌದೆಂ"ದು ತಲೆಯಾಡಿಸಿದರು.

ಆಗ ತಿಮ್ಮನಿಗೆ ಇಲ್ಲೇ ಇರಬಹುದಿತ್ತು ಎನಿಸಿತು.

ಆ ದಿನ ರಾತ್ರಿಯ ಅಡಿಗೆಯನ್ನು ಹೊಸ ಹುಡುಗನೂ ತಿಮ್ಮನೂ ಕೂಡಿಯೇ ಮಾಡಿದ್ದರು. ಹೊರಡುವಾಗ ಡಾಕ್ಟರ್‌ರಾಯರು ರೈಲು, ಬಸ್ಸು ಖರ್ಚುಗಳು ಹೋಗಲಾಗಿ ಮೇಲೆ ಹತ್ತು ರೂಪಾಯಿಯನ್ನೂ ತಿಮ್ಮನ ಕೈಗೆ ಕೊಟ್ಟರು.

೩೫

ಕೊಯಂಬತ್ತೂರಿನಲ್ಲಿ ರೈಲ್ವೇ ಕ್ಯಾಶಿಯರ್ ಗಣೇಶ ಕರಂಜಿಯಾರ್ ಮನೆಯಲ್ಲಿ ಅಡಿಗೆಯವನಾಗಿ ತಿಮ್ಮನ ಪ್ರವೇಶವಾಯಿತು. ಇದು ಅಚ್ಯುತಭಟ್ಟರ ಗೆಳೆಯರ ಮೂಲಕ ಸಿಕ್ಕಿದ ಕೆಲಸವಾದರೂ ತಿಮ್ಮನ ಸ್ವಂತ ಪ್ರಯತ್ನದಿಂದ ಸಿಕ್ಕಿದುದಕ್ಕೆ ಸಮಾನವಾಗಿತ್ತು. ಈ ಮೊದಲು ತಿಮ್ಮನಿಗೆ ತಾನು ಮಾಡಬೇಕೆಂಬ ಕೆಲಸವೇನೆಂಬುದಾಗಲೀ, ಸಂಬಳವೆಷ್ಟೆಂಬುದಾಗಲೀ ಅವನಿಗೆ ತಿಳಿಯದು. ಒಟ್ಟಾರೆ ಕೆಲಸದ, ಎಲ್ಲಾ

ಕೆಲಸವನ್ನು ಮಾಡಬೇಕಾದವ ಎಂಬ ಅರ್ಥದಲ್ಲೇ ಇದ್ದವನು. ಈಗ ಅವನ ವಯಸ್ಸು ಹದಿನೈದಾಗಿತ್ತು; ವಿಚಾರ ವಿಸ್ತರಿಸಿತ್ತು. ತನ್ನ ಕಾಲಲ್ಲಿ ತಾನು ನಿಲ್ಲಬೇಕೆಂಬ ಅಭಿಮಾನಪ್ರಜ್ಞೆ ಮೂಡಿತ್ತು.

ಅವನು ಪೊನ್ನಾನಕ್ಕಾಡಿನಿಂದ ಹೊರಡುವ ಮೊದಲು, ತಾನು ಇಲ್ಲಿಂದ ಹೊರಟು ಕೊಯಂಬತ್ತೂರಿಗೆ ಹೋಗಿ ಆಮೇಲೆ ಹೆಚ್ಚಿನ ವಿವರ ತಿಳಿಸುವೆನೆಂದು ತಾಯಿಗೆ ಕಾಗದ ಬರೆದಿದ್ದ. ಈ ವಿಷಯವನ್ನು ಡಾಕ್ಟರ್ ಗೋವರ್ಧನರಾಯರಿಗೆ ತಿಳಿಸಬಾರದೆಂದೂ ಅದರಲ್ಲಿ ಸೂಚಿಸಿದ್ದ. ಅವನು ಊರಿಗೆ ಹೋಗುವನೆಂದೇ ಗೋವರ್ಧನರಾಯರು ತಿಳಿದಿದ್ದರು.

ತಿಮ್ಮನ ಹೊಸ ಯಜಮಾನರಾದ ಗಣೋಬಾ ಕರೆಂಜಯಾರ ಕ[illegible]ಗ, "ಸ್ವಾಮಿ ನನ್ನ ವಿಷಯವನ್ನೆಲ್ಲಾ ನೊ[illegible] ಹೇಳಿ ಬಿಡುತ್ತೇನೆ. ನನಗೆ ಕನ್ನಡಿಗರ ಅಡಿಗೇ ಕ್ರಮವೂ ಮಲೆಯಾಳದ ಅಡಿಗೇ ಕ್ರಮವೂ ಗೊತ್ತಿದೆ. ನಿಮ್ಮ ಮರಾಠೀ ಅಡಿಗೇ ಕ್ರಮಗಳನ್ನು ಎರಡೇ ದಿನ ಹೇಳಿಕೊಟ್ಟರೆ ಸಾಕು, ಕಲಿತು ಬಿಡುತ್ತೇನೆ. ಒಂದು ತಿಂಗಳು ಮಾತ್ರ ಹತ್ತು ರೂಪಾಯಿಗೆ ಒಪ್ಪಿಕೊಳ್ಳುವೆ. ಆ ಮೇಲೆ ನನ್ನ ಕೆಲಸ ನಿಮಗೆ ಹಿಡಿಸಿದರೆ ಹನ್ನೆರಡು ರೂಪಾಯಿ ಸಂಬಳ ಕೊಡಬೇಕು. ಅಡಿಗೆ ಮಾಡುವುದು, ಬಡಿಸುವುದರ ಹೊರತು ಮತ್ತೆ ಯಾವ ಕೆಲಸವನ್ನೂ ಮಾಡಲಾರೆ. ಕೆಲಸ ಮುಗಿದ ಮೇಲೆ ನಾನು ಓದುತ್ತಾ ಬರೆಯುತ್ತಾ ಇರುವವನು. ಇದು ನಿಮಗೆ ಒಡಿಸಿದ್ದರೆ ಈಗಲೇ ಹೇಳಿಬಿಡಿ" ಎಂದು ಜಳಜಳ ಹೇಳಿದನು.

ಹುಡುಗನ ಸ್ಪಷ್ಟ ಮಾತನ್ನು ಕೇಳಿ ಗಣೋಬರು ಮೆಚ್ಚಿಕೊಂಡವರ ಹಾಗೆ ಮೀಸೆಗಳೆಡೆಯಿಂದ ಮುಗುಳ್ನಗು ಸೂಸುತ್ತ, "ಬೇಷ್ಕತೆ. ಒಳ್ಳೇ ಶಾಣೇಹುಡುಗಾ ಆಗಿದೀ ನೀನು ಹಾಂಗೇ ಆಗಲಂತಪಾ ನಿನ್ನ ಕೆಲಸಾ ಮಾಡಿ ಮುಗಿಸಿದ ಮ್ಯಾಲೆ ನೀನು ಓದೂ ಬರೀ ಎಲ್ಲಿ ಬೇಕಾದರೂ ಹೋಗೂ ಬಾ ನಮಗೇನಪ್ಪ? ಆದರೆ ಒಂದು ನಮ್ಮನ್ಯಾಗೆ ಅಡಿಗೇ ಊಟಾ ಎಲ್ಲಾ ಭಾಳ ಮಡಿಯಲ್ಲೇ ಆಗಬೇಕು ನೋಡಪಾ; ಅದನೆಲ್ಲಾ ಹೆಂಗಸರು ಹೇಳಿಕೊಡುತ್ತಾರೆ, ಒಳಗೆ ಹೋಗಪಾ," ಎಂದರು.

ಅವರ ಸ್ವಂತಭಾಷೆ ಮರಾಠಿಯಾದರೂ ಕನ್ನಡವೂ ಗೊತ್ತಿತ್ತು. ಅವರ ಕನ್ನಡದ ಮಾತಿನ ಹೊಯಿಲು, ಧ್ವನಿ, ರಾಗ, ರೀತಿಗಳೆಲ್ಲ ತಿಮ್ಮನಿಗೆ ವಿಚಿತ್ರ ಸ್ವಾದಿಷ್ಟದ್ದಾಗಿ ತೋರಿತು. ಕರೆಂಜಯಾರ ಹೆಂಡತಿ ಗೋದೂಬಾಯಿ ತಿಮ್ಮನಿಗೆ "ಅಮ್ಮಾವರು" ಆದರು. ಆ ಅಮ್ಮಾವರಿಗೊಬ್ಬರು ವಯಸ್ಸಾದ ಅತ್ತೆಮ್ಮಾ ಇದ್ದರು. ಅವರು ತಿಮ್ಮನಿಗೆ "ಅಜ್ಜಮ್ಮ"; ಕರೆಂಜಿಯಾರು "ರಾಯರು" ಹೀಗೆ ಅವರನ್ನೆಲ್ಲ ಸಂಬೋಧಿಸಬೇಕೆಂದು ತಿಮ್ಮನಿಗೆ ಗೊತ್ತಾದದು "ರಂಗಪ್ಪ" ಎಂಬ ಹೊರಗೆಲಸದ ಹುಡುಗನಿಂದ. ಆ ರಂಗಪ್ಪ, ತಿಮ್ಮನಷ್ಟೇ ಪ್ರಾಯದವ ಅವನು ಮನೆಯವರನ್ನು ಸಂಬೋಧಿಸಿಕೊಳ್ಳುವ ಹಾಗೆಯೇ ತಿಮ್ಮನೂ ಅನುಸರಿಸಿಕೊಂಡನು.

ರಂಗಪ್ಪ ಹಾರಿ ಹಾರಿ ಓಡಿಯೋಡಿ ಕೆಲಸ ಮಾಡುತಿರುವ ಬಲ ಚೂಟಿ ಹುಡುಗ ತಿಳಿಗನ್ನಡ ಮಾತಾಡುತ್ತಿದ್ದ. ಅವನು ಆ ಊರಿನವನೇ ಆದ ಗೊಲ್ಲರ ಜಾತಿಯವನಂತೆ. ತಿಮ್ಮನಿಗೂ ಅವನಿಗೂ ಬಹಳ ಅಚ್ಚುಮೆಚ್ಚಿನ ಸ್ನೇಹ ಬಿತ್ತು.

ಆದರೆ ಬೆಳಿಗ್ಗೆ ಸ್ನಾನ ಮಾಡಿ ತಿಮ್ಮ ಅಡಿಗೇಮನೆ ಹೊಕ್ಕಬಿಟನೆಂದರೆ ಮಧ್ಯಾಹ್ನ ಒಂದು ಗಂಟೆಯವರೆಗೂ, ಅಡಿಗೇ ಮನೆಯ ಹೊಸ್ತಿಲು ದಾಟಿ ಹೊರಗೆ ಬರುವಂತಿಲ್ಲ. ಅಷ್ಟು ಕಠಿನ ಮಡಿ. ಆ ಮಡಿಯಲ್ಲಿ ಏನಾದರೂ ಮೈಲಿಗೆಯು ಗೆರೆ ಬಿತ್ತೋ, ಅಮ್ಮಾವರು ಉಪವಾಸವೆಂದೇ ಹೇಳಬೇಕು. ಉಳಿದವರಾರಿಗೂ ಮಡಿ ಮೈಲಿಗೆಯ ಭೇದವೇನೂ ಇರಲಿಲ್ಲವಾದರೂ, ಅಮ್ಮಾವರ ಕಟ್ಟಾಜ್ಞೆಗೊಳಗಾಗಿ ರಾಯರೂ ಅಮ್ಮಾವರೂ ಊಟ ಮಾಡುವಾಗ ಮಾತ್ರ ಮಡಿಯುಟ್ಟುಕೊಂಡು, ಆ ಮೇಲೆ ಆ ಮಡಿಬಟ್ಟೆಗಳನ್ನು ಬಿಚ್ಚಿ ಮಡಿಸ್ಥಾನದಲ್ಲಿಟ್ಟುಬಿಡುತಾರೆ. ಈ ಮಡಿಬಟ್ಟೆಗಳನ್ನು ಅಮ್ಮಾವರೇ ರಾತ್ರಿಯಲ್ಲಿ ಹಿಂಡಿ ಒಣಗಹಾಕುವರು.

ತಿಮ್ಮನಿಗೆ ಅಡಿಗೆಯ ಕ್ರಮಗಳನ್ನೆಲ್ಲ ಅಮ್ಮಾವರೇ ಹೇಳಿಸಿಕೊಟ್ಟರು. ಮುಸುರಿ ಮಡಿ, ಮೈಲಿಗೆ, ಎಂಜಲು ಮುಂತಾದವುಗಳ ವಿಷಯವನ್ನು ತನ್ನ ತಾಯಿಂದ ಸ್ವಲ್ಪ ಮಟ್ಟಿಗೆ ತಿಳಿದುಕೊಂಡಿದ್ದ ತಿಮ್ಮನಿಗೆ ಇಲ್ಲಿಯ ಮಡಿ ನೋಡಿ, ತಾನು ತಿಳಿದುದು ತೀರ ಸ್ವಲ್ಪವೆನಿಸಿತು; ವಿಚಿತ್ರವೆನಿಸಿತು, ಕಠಿನವೆನಿಸಿತು. ಪ್ರಾರಂಭದಲ್ಲಿ ಆ ಮಡಿ ಸೆರೆಯ ಹೊಗೆಯ ಕೋಣೆಯೊಳಗಿನಿಂದ ಹೇಳದೆ ಕೇಳದೆ ಓಡಿಬಿಡೋಣವೆನಿಸಿತು. ಇದಕ್ಕಿಂತ ಗೋವರ್ಧನರಾಯರ ಮನೆ ಎಷ್ಟೋ ಪಾಲಿಗೆ ಒಳ್ಳೆಯದಿತ್ತೆನಿಸಿತು. ಅವರು ಮುಂಗೋಪಿಗಳಾದರೂ ತಿಮ್ಮನ ಸುಖದುಃಖಗಳಲ್ಲಿ ಬಾಧ್ಯತೆಯುಳ್ಳವರಾಗಿದ್ದರು. ಅಡಿಗೆ ಊಟ ವಿಧಾನಗಳಲ್ಲಿ ಕನ್ನಡತನವಿತ್ತು. ಕನ್ನಡ ಪತ್ರಿಕೆಗಳೂ ಪುಸ್ತಕಗಳೂ ದೊರೆಯುತ್ತಿದ್ದುವು

ಊಟಕ್ಕೆ ಒಬ್ಬೊಬ್ಬರೇ ಬರುವರು. ಒಂಭತ್ತು ಗಂಟೆಯಿಂದ ಬಡಿಸಲು ಪ್ರಾರಂಭ. ತಿಮ್ಮನೇ ಬಡಿಸಬೇಕು. ಅರ್ಧಂಬರ್ಧ ಅಡಿಗೆಯಾಗುವಾಗಲೇ ಶಾಲೆಗೆ ಹೋಗುವ ಹುಡುಗ ಶಟ್ಟೆಯಿಟ್ಟುಕೊಂಡು "ಬಡಿಸೀ ಸಣ್ಣಾಚಾರೀ" ಅನ್ನುತ್ತಾನೆ. ಆ ಮೇಲೆ ಹತ್ತು ಗಂಟೆಗೆ ಶಾಲೆಗೆ ಹೊರಡುವ ಹುಡುಗಿ ಊಟಕ್ಕೆ ಸಿದ್ಧಳಾಗುತ್ತಾಳೆ. ಈ ಹುಡುಗಿ ತಿಮ್ಮನೊಡನೆ ಬಲು ಹಾಸ್ಯವಾಗಿ ಮಾತಾಡುತ್ತಾ ಊಟ ಮಾಡುವಳು.

ಆ ಹುಡುಗಿ ಗಂಗೂಬಾಯಿಗೆ ಅಮ್ಮಾವ್ರ ಮಡೀ ಮೇಳ ಸ್ವಲ್ಪವೂ ಹಿಡಿಸದು. ಅಮ್ಮಾವರು ಸಮೀಪದಲ್ಲಿಲ್ಲದಿದ್ದರೆ ಗಂಗೂಬಾಯಿ "ಹಾಳಾದ ಈ ಮಡಿಗೆಲ್ಲಾ ಶಾನೇಮುಣ್ಣಾ ಹಾಂಕಬೇಕು. ಎಲ್ಲಾ ಮುಟ್ಟೀ ಹಾಂಕಿ ಬಿಡ್ತಾನೂ ಅಮ್ಮಾವರಿಗೆ ಹೇಳಬ್ಯಾಡ್ರೀ ತಿಳೀಂತಾ" ಎಂದು ಅಡಿಗೆ ಮನೆಗೆ ಬರುವುದೂ, ತಿಮ್ಮ ಅವಳನ್ನು ತಡೆಯುವುದೂ, ಅವಳು ಫಕ್ಕನೆ ತಿಮ್ಮನ ಮೈಯನ್ನು ಮುಟ್ಟಿ "ಹುಂ, ಆತಲಾ, ಸ್ನಾನಾ ಮಾಡ್ರಿ ಇನ್ನು ಮತ್ತೆ ನೆಗಡಿ ಆದಾತು, ನಾಂ ಹೇಳ್ತೀನಿ" ಎಂದು ನಗುವುದೂ ಎಲ್ಲವೂ ತಿಮ್ಮನಿಗೆ ಬಹಳ ಮೋದವನಿಸಿತು

ಅವಳೇ ತಿಮ್ಮ ಆ ಮನೆಗೆ ಬಂದಾಗ ಅವನನ್ನು ಹೇಗೆ ಕರೆಯಬೇಕೆಂದು ಚರ್ಚೆ ಮಾಡುತ್ತ, ತಿಮ್ಮಪ್ಪ, ತಿಮ್ಮಣ್ಣ, ತಿಮ್ಮಾಭಟ್ರು ಮುಂತಾದ ಹೆಸರುಗಳೊಳಗಿಂದ "ಸಣ್ಣಾಚಾರ್ರೀ" ಎಂದು ಕರೆದುಬಿಟ್ಟಳು. ಅದು ಎಲ್ಲರಿಗೂ ಹಿಡಿಸಿದ್ದರಿಂದ ಎಲ್ಲರೂ ಹಾಗೇ ಕರೆಯಲಾರಂಭಿಸಿದರು.

ಆ ಸಂಬೋಧನೆಗೆ ತುಂಬಾ ಮೆಚ್ಚಿಕೊಂಡ ಅಮ್ಮಾವರು "ಹ್ಞೂಂದು, ಒಳ್ಳೇ ಛಲೋ ಹೆಸರಿಟ್ಟು ಬಿಟ್ಟಿತೂ ನನ್ನ ಬಂಗಾರ ಗಂಗೂಬಾಯಿ. ಹೆಸರೀಗೆ ತಕ್ಕಹಾಂಗಾ ಇದಾನಾ ನಮ್ಮಪ್ಪ ತಿಮ್ಮಪ್ಪ!" ಎಂದರು ಮುಕ್ತ ಕಂಠದಿಂದ. ಈ ಅಮ್ಮಾವರಿಗೆ ತೃಪ್ತಿಯಾಗಲೆಂದೇ ತಿಮ್ಮ ಗೋಪೀನಾಮ, ಮುದ್ರೆಗಳನ್ನು ಧರಿಸಿಕೊಂಡು, ಸ್ವಲ್ಪ ಹೊತ್ತು ಅಡಿಗೇ ಮನೆಯಲ್ಲಿ ಕುಳಿತು ಲಕ್ಷಣವಾಗಿ ಸಂಧ್ಯಾವಂದನೆ ಮಾಡುತ್ತಿದ್ದ. ಆಗ ಅವನಿಗೆ ತೊಂದರೆಕೊಡಬಾರದೆಂದು ಅಮ್ಮಾವರೇ ಒಲೇಹತ್ರ ಕೂತು ಸ್ವಲ್ಪ ಹಾಗೆ ಹೀಗೆ ಮಾಡಿ ಮುಗುಚುವರು.

ಹೀಗೆ ಮಡಿಬದ್ಧನಾಗಿರುವ ಸಣ್ಣಾಚಾರ್ರು ದೂರದಿಂದ ಎಲ್ಲರಿಗೂ ಬಡಿಸಬಹುದಾಗಿತ್ತೇ ಹೊರತು, ಎಂಜಲುಗಿಂಜಲು ತೆಗೆಯುವಂತಿರಲಿಲ್ಲ. ಅದೆಲ್ಲ ರಂಗಪ್ಪನ ಕೆಲಸ. ಕೊನೆಗೆ ಅಮ್ಮಾವರ ಸ್ನಾನಪೂಜೆ ಎಲ್ಲಾ ಮುಗಿದ ಮೇಲೆ, ಅವರು ತಿಮ್ಮನನ್ನು ಮಣೆಯ ಮೇಲೆ ಕೂಡಿಸಿ, ವೀಳ್ಯದಲ್ಲಿ ಕಾಲಾಣೆಯಿಟ್ಟು ದಕ್ಷಿಣೆ ತಾಂಬೂಲ ಕೊಟ್ಟು. ಅನಂತರ ಊಟಕ್ಕೆ ಕುಳಿತುಕೊಳ್ಳುವರು. ಹೀಗೆ ಅಲ್ಲಿ ತಿಮ್ಮ ಕಟ್ಟುನಿಟ್ಟು ಆಚಾರಬದ್ಧನಾದ ಶುದ್ಧ ಬ್ರಾಹ್ಮಣನೆನಿಸಿದ

"ಬ್ರಹ್ಮಚ್ಯಾರ್‍ರು ವೀಳ್ಯಾ ಹಾಂಕಬಾರದಪ್ಪಾ, ಕೆಲಸದವಳಿಗೆ ಕೊಟ್ಟುಬಿಡೂ ವೀಳ್ಯಾನ" ಎನ್ನುವರು ಅಮ್ಮಾವರು. ಅರ್ಧ ಊಟ ಮಾಡುವಾಗ ತಿಮ್ಮನೂ ಬಡಿಸಿಕೊಂಡು ಊಟಕ್ಕೆ ಕೂಡುವನು. ತರುವಾಯ ಅಮ್ಮಾವರದೂ ತನ್ನದೂ ಎಂಜಲು ತೆಗೆದು ಸೆಗಣಿಹಾಕಿ ಸಾರಿಸಬೇಕು. ಸಾರಿಸಲಿಕ್ಕೂ ಪದ್ಧತಿಯುಂಟು. ಮಡಿ ಮುಸುರೆಗಳಲ್ಲಿಯೂ ಭೇದಗಳುಂಟು. ಅಮ್ಮಾವರದೂ ತಿಮ್ಮನದೂ ಉತ್ತಮ ಮಡಿ; ರಾಯರದೂ, ಪ್ರತೀಂಗಳೂ ಹೊರಗ ಸೇರುವ ಅಮ್ಮಾವರದೂ ಸಾಮಾನ್ಯ ಮಡಿ; ಅವರು ತಮ್ಮ ಮಡಿಯಲ್ಲಿ ಊಟ ಮಾಡಬಹುದೇ ಹೊರತು ಅಡಿಗೆ ಪದಾರ್ಥಗಳನ್ನು ಮುಟ್ಟಬಾರದು. ಅಮ್ಮಾವರು ಮಡಿಯಿಂದ ಅಡಿಗೇ ಮಾಡಿದರು ಕೂಡ ಅದು ದೇವರ ನೈವೇದ್ಯಕ್ಕೆ ಆಗದಂತೆ. ಅನ್ನವೂ ಅಕ್ಕಿಯಿಂದಾದ ಪದಾರ್ಥಗಳೂ ಕಡುಮುಸುರೆ ಪಲ್ಯ ಹುಳಿ ಮೊದಲಾದುವು ಅನ್ನದ ಪಾತ್ರೆಗೆ ತಗಲದಿದ್ದರೆ ಅರ್ಧ ಮುಸುರೆ, ಅನ್ನ ಬಡಿಸಿದ ಕೈಯನ್ನು ತೊಳೆದು ಪಲ್ಯಹುಳಿಗಳನ್ನು ಮುಟ್ಟಬೇಕು. ಇವುಗಳನ್ನು ಬಡಿಸಿದ ಕೈಯನ್ನು ತೊಳೆಯದ ಉಪ್ಪಿನಕಾಯಿ ತುಪ್ಪಗಳನ್ನು



ಮುಟ್ಟಬಾರದು. ಕೈ ತೊಳೆಯುವುದೇದರೆ ಸುಮ್ಮನೆ ನೀರಿನ ಪಸೆಯಿಂದ ಕೈಬೆರಳು ನೆನೆಯಿಸಿಕೊಳ್ಳುವುದು ಅಷ್ಟೇ. ಇನ್ನು ಎಂಜಲು ಎಂದರೆ ಗೊತ್ತೇ ಇದೆಯಲ್ಲ, ಬಾಯಿಗೆ ತಗಲಿದ್ದೆಲ್ಲಾ ಎಂಜಲು. ತನ್ನ ಬಾಯಿಗೆ ಬೆರಳು ತಗಲಿದರೆ ಕೂಡಾ ಕೈ ತೊಳೆದುಕೊಳ್ಳದೆ ಏನನ್ನೂ ಮುಟ್ಟಬಾರದು.

ಮುಸುರೆಯ ಪ್ರಭಾವ ಬೆಂಕಿಗೂ ತಗಲುತ್ತದೆ. ಅಡಿಗೆ ಮುಗಿದ ಮೇಲೆ ಉಳಿದ ತುಂಡು ಉರಿಕಟ್ಟಿಗೆಗಳು ಕೂಡಾ ಮುಸುರೆಯೇ. ಆ ಕಟ್ಟಿಗೆ ಮರುದಿನಕ್ಕೆ ತಂಗಳು ಮುಸುರೆ ಎನಿಸುವುದರಿಂದ, ಆ ಕಟ್ಟಿಗೆ ತುಂಡುಗಳನ್ನು ಅರ್ಧ ಮುಳುಗುವರ ಸಾನದ ನೀರಿನ ಒಲೆಗೆ ಹಾಕಿ ಬಿಡುತ್ತಾಳೆ ಕೆಲಸದವಳು.

ರಾತ್ರಿ ಎಲ್ಲಾ ಕೆಲಸ ಮುಗಿಸಿ ಒಲೆಗೆ ಸೆಗಣಿ ಹಚ್ಚಿದರೆ, ಆ ಒಲೆ ಮರುದಿನದ ಅಡಿಗೆಗೆ ಪರಿಶುದ್ಧವೆನಿಸುತ್ತದೆ. ಬೆಳಗ್ಗೆ ಒಲೆಯ ಮೇಲೆ ರಂಗೋಳಿಯಿಟ್ಟಳದೇ ಬೆಂಕಿ ಹಚ್ಚಬೇಕು.

೩೬

ಕೆಲಸವೆಲ್ಲ ಹೀಗೆ ನಿರ್ಬಂಧಗಳಿಂದ ಕೂಡಿದ್ದರೂ ಮಧ್ಯಾಹ್ನದ ಮೇಲೆ ಸಂಜೆಯ ವರೆಗೂ ತಿಮ್ಮನು ಎಲ್ಲಿಗೆ ಬೇಕಾದರೂ ಹೋಗಬಹುದು. ಮತ್ತೆ ರಾತ್ರಿ ಒಂಬತ್ತೂವರೆ ಗಂಟೆಯ ವೇಳೆಯೂ ತಿಮ್ಮನಿಗೆ ಸ್ವತಂತ್ರವಿತ್ತು. ಅದೇ ಅವನನ್ನು ಅಲ್ಲಿರಗೊಳಿಸಿತೆನ್ನಬಹುದು.

ಮತ್ತೊಂದು ಸೌಕರ್ಯವೆಂದರೆ, ಬೆಳಗ್ಗೆ ಅಡಿಗೆಯಾದ ಮೇಲೆ ಒಬ್ಬೊಬ್ಬರೇ ಊಟಕ್ಕೆ ಬರುವುದನ್ನು ಇದಿರು ನೋಡುತ್ತಾ, ಓದುತ್ತ, ಬರೆಯುತ್ತ, ಚಿತ್ರ ಮಾಡುತ್ತ ಅಡಿಗೆ ಮನೆಯ ಮೂಲೆಯಲ್ಲೇ ಕುಳಿತಿರುತ್ತಾನೆ, ತಿಮ್ಮ. ಅವನಿಗೆ ಆ ಮಠ ಸೆರೆಮನೆ ಹಿಡಿಸದಿದ್ದರೂ ಆ ಬಗೆಯ ಏಕಾಂತತೆ ಹಿಡಿಸಿತು.

ಅಲ್ಲದೆ ಕೊಯಂಬತ್ತೂರು ನಗರವೂ ಹಿಡಿಸಿತು. ಅವನ ಅನುಭವಕ್ಕೆ ಬರುವ ಮೊತ್ತ ಮೊದಲನೇ ನಗರವೇ ಅದು. ರಂಗಪ್ಪನೊಂದಿಗೆ ನಗರವೆಲ್ಲ ತಿರುಗಾಡಿದನು. ಅಪ್ಪಾವರು ದಿನಾ ಕೊಡುವ ಕಾಲಣೆ ದಕ್ಷಿಣೆಯಿಂದ ಕಾಗದ, ಬಣ್ಣದ ಪೆನ್ಸಿಲುಗಳನ್ನು ತೆಗೆದುಕೊಳ್ಳುವನು.

ಇನ್ನೊಂದು ಬಲವಾದ ಆಕರ್ಷಣೆಯೆಂದರೆ ಸಿನಿಮಾ.

ಅದು ಮೂಕ ಸಿನಿಮಾದ ಕಾಲ. ಕರಂಜಿಯಾರ್ ಮನೆಗೆ ಅರ್ಧ ಫರ್ಲಾಂಗು ದೂರದಲ್ಲೇ ಸಿನಿಮಾಥಿಯೇಟರಿತ್ತು. ರಾತ್ರಿ ಕೆಲಸವಾದ ಕೂಡಲೇ ರಂಗಪ್ಪನೂ ಅವನೂ ನೋಡಿ ಬಂದು ಮಲಗುವರು. ಡೊಗ್ಲಾಸ್ ಫಯರ್ ಬ್ಯಾಂಕ್ಸ್, ಬಿಲಿಮೋರಿಯಾ, ಮಾಸ್ಟರ್ ವಿಠಲ್, ಜುಬೇದಾ, ಗೋಹರ ಮೊದಲಾದ ಹೆಸರು ಅವನಿಗೆ ಬಾಯಿಪಾಠಗಳಾದುವು. ಮಧ್ಯಾಹ್ನದಿಂದ ಸಂಜೆಯ ವರೆಗೂ ಆ ಥಿಯೇಟರಿನಲ್ಲಿಯೇ, ಅಲ್ಲಿಟ್ಟಿರುವ ಚಿತ್ರಗಳನ್ನು ನೋಡುತ್ತ ಹೊತ್ತು ಕಳೆಯುವನು.

ಅಲ್ಲೊಂದು ಬದಿಯಲ್ಲಿ ವಾಲ್ ಪೋಸ್ಟರುಗಳನ್ನು, ಮೂರು ಭಾಷೆಗಳಲ್ಲಿ ಬರೆಯುವುದನ್ನು ನೋಡುವನು. ಡಬ್ಬಿಯಲ್ಲಿರುವ ಬಣ್ಣದ ರಸಗಳನ್ನು ಬ್ರಶ್ಶಿನಿಂದ ಅದ್ದಿಕೊಂಡು ಬರೆಯುವವನ ಕೈ ತಿರುಗುವ ವಿಧಾನಗಳನ್ನೆಲ್ಲ ಕಣ್ಣಿಟ್ಟು ಅತ್ಯಾಸಕ್ತಿಯಿಂದ ನೋಡುವನು. ಆ ಊರಲ್ಲಿ ಕನ್ನಡ, ತಮಿಳು, ಮಲಯಾಳೀ ಭಾಷೆಗಳು ಪ್ರಚಲಿತವಿದ್ದುವು. ಕನ್ನಡ ಮತ್ತು ಮಲೆಯಾಳ ಭಾಷೆಗಳನ್ನು ತಪ್ಪು ತಪ್ಪಾದ ಅಕ್ಷರಗಳಿಂದ ಹೇಗೋ ಬರೆಯುತ್ತಿದ್ದರು.

ಅವೆರಡು ಭಾಷೆಗಳನ್ನು ಬಲ್ಲ ತಿಮ್ಮ, "ಈ ಅಕ್ಷರ ಹೀಗೆ ಸಾಗಬೇಕು. ಇತ್ತ ಹೀಗೆ ಬರಬೇಕು" ಎಂದು ಬರೆಯುವ ಅವನಿಗೆ

ಹೇಳುವಾಗ, ಒಮ್ಮೆ ಥಿಯೇಟರ್ ಒಡೆಯ ಶಿವ್ಯನನ್ನು ಕುರಿತು, ಯಾರು ಏನೆಂಬುದ ನ್ನೆಲ್ಲ ವಿಚಾರಿಸಿದ. "ಎಲ್ಲಿ, ನೀನೇ ಬರೆದು ತೋರಿಸು ನೋಡುವಾ" ಎಂದು ಥಿಯೇಟರ್ ಒಡೆಯ ಹೇಳಿದಾಗ ಶಿವ್ಯನಿಗೆ ಬಹಳ ಸಂತೋಷವಾಯಿತು. ಬ್ರಶ್ಶನ್ನು ಹಿಡಿದು ಬಣ್ಣ ದಲ್ಲಿ ಅದ್ದಿ ಅಕ್ಷರಗಳನ್ನು ಬರೆದು ತೋರಿಸಿದ ಸರಿಯಾಗಿಯೇ ಬಂತು.

"ಪರವಾಯಿಲ್ಲ. ಇಲ್ಲಿಯೇ ಸಮೀಪದಲ್ಲಿರುವಿ ಯಾನೇ, ದಿನಾ ಬಂದು ಒಂದು ಗಂಟೆ ಹೊತ್ತು ಕನ್ನಡ ಮಲಿಯಾಳ ಪೋಸ್ಟರ್ ಬರಿ ಎಂಟಾಣೆ ಕೊಡುತ್ತೇನೆ" ಎಂದು ಥಿಯೇಟರ್ ಒಡೆಯ ಹೇಳಿದ್ದು ಕೇಳಿ ಶಿವ್ಯನಿಗೆ ಬಹಳ ಸಂತೋಷ ವಾಯಿತು.

ಹೀಗೂ ಸಂಪಾದನೆಯಾಗುವಾಗ, ಹಾಗೆ ಬರೆಯಲಿಕ್ಕೂ ಅಭ್ಯಾಸವಾಯಿತು.

ಆ ಬಣ್ಣದ ಪುಡಿಗಳನ್ನಿಟ್ಟು ಸಂಗ್ರಹಿಸಿ ಕೊಂಡು ಎರಡು ಬ್ರಶ್ಶನ್ನೂ ಕೊಂಡುಕೊಂಡು ಕರೆಂಜಿಯಾರವರ ಅಡಿಗೆ ಮನೆಯ ಹಿಂದಿರುವ ಬಾವೀದಂಡೆಯ ಗೋಡೆಯಲ್ಲಿ ಲಕ್ಷ್ಮಿಯ ಚಿತ್ರ ವೊಂದನ್ನು ಬಣ್ಣಗಳಿಂದ ಚಿತ್ರಿಸಿಟ್ಟ.

ಏನೋ ಹೊತ್ತು ಹೋಗಲಿಕ್ಕಾಗಿಯೇ ಅವನು ಆ ಚಿತ್ರವನ್ನು ಚಿತ್ರಿಸಿದ್ದ. ಅದನ್ನು ರಾಯರ ಮಗನೂ, ಮಗಳು ಗಂಗೂ ಬಾಯಿಯೂ ನೋಡಿ, "ಆಹಾ! ಸಣ್ಣಾಚಾರ್ರು ಹ್ಯಾಂಗ ಲಕ್ಷ್ಮೀದೇವೀನ ಬರೆದಾರ! ಸಾಕ್ಷಾತ್ ಮಹಾಲಕ್ಷ್ಮೀ ನಿಂತ ಹಾಂಗಿದೆ!" ಎಂದು ಕೂಣಿ ದಾಡಿ ಮನೆ ಪೂರಾ ಪ್ರಚಾರ ಮಾಡಿದರು. ಎಲ್ಲರೂ ಅದನ್ನು ನೋಡಿ ತಲೆದೂಗಿದರು.

ಅಮ್ಮಾವರಿಗೆ ಅದನ್ನು ನೋಡಿ ಒಂದು ಆಲೋಚನೆ ಬಂತು "ಊಟದ ಕೋಣೆಯ ಗೋಡೇಲಿ ಗಜಲಕ್ಷ್ಮೀ ಚಿತ್ರವೊಂದು ಹೀಂಗೇ ಮಾಡಿಕೊಡೇನಾ ಶಿವ್ಯಪ್ಪ. ನಮ್ಮಪ್ಪ ಪೂಜೇಗೆ ಕೈಯಾಗ ಮಾಡಿದ್ರೆ ತುಂಬ ಪ್ರಶಸ್ತಾ ಅಂತಾರಪಾ" ಎಂದು ತಮ್ಮ ಕೋರಿಕೆ ಯನ್ನು ತೋಡಿಕೊಂಡರು ಶಿವ್ಯನ ಹತ್ತಿರ.

ಶಿವ್ಯ ಉತ್ಸಾಹದಿಂದ ಮಡಿಯಾಗಿ ಕುಳಿತು, ಬಣ್ಣದ ಪುಡಿಗಳನ್ನು ಸಹ ಮಡಿ ನೀರಿನಿಂದಲೇ ಕಲಿಸಿ, ಅಮ್ಮಾವರ ಇಷ್ಟದಂತೆ ಒಂದು ಗಜ-ಲಕ್ಷ್ಮೀ ಚಿತ್ರವನ್ನು ಗೋಡೆಯಲ್ಲಿ ಬರೆದು ಮೆಚ್ಚುಗೆಗಳಿಸಿದ. ಅವನಿಗೆ ಪೂಜೆಯ ಮಂತ್ರ ಗಳೂ ಗೊತ್ತಿರುವುದೆಂದು ತಿಳಿದು ಬಂದ ಮೇಲೆ ಅಮ್ಮಾವರು ಅವನಿಂದಲೇ ಪೂಜೆ ಮಾಡಿಸಿ, ಅವನಿಗೆ ಇನ್ನೊಂದು ಕಾಲಾಣೆ ಹೆಚ್ಚಿಗೆ ದಕ್ಷಿಣೆ ಕೊಡತೊಡಗಿದರು.

೩೭

ಬಾವಿದಂಡೆಯಾಚೆಗೆ ಬಚ್ಚಲು ಮನೆಯೂ, ಅದರ ಆಚೆಯ ಪಕ್ಕದಲ್ಲಿ ಒಂದು ಕೋಣೆಯೂ ಉಂಟು. ಅದು ಕೆಲಸದಾಳುಗಳಿಗಾಗಿ ಕೊಡ ಲ್ಪಟ್ಟ ಕೋಣೆ. ಅಲ್ಲಿಯೇ ಶಿವ್ಯನ ಹಾಗು ರಂಗಪ್ಪನ ಅಂಗಿ ಬಟ್ಟೆ, ಪೆಟ್ಟಿಗೆಗಳೆಲ್ಲ ಇರು ತ್ತವೆ. ಶಿವ್ಯ ಬರೆಯುವುದು ಓದುವುದು, ಚಿತ್ರ ಬರೆಯುವುದು ಮುಂತಾದವುಗಳನ್ನು ಅಲ್ಲಿಯೂ ಮಾಡುತ್ತಿರುವನು.

ಶನಿವಾರ, ಆದಿತ್ಯವಾರ ಮುಂತಾದ ರಜಾ ದಿನಗಳಲ್ಲಿ ರಾಯರ ಮಕ್ಕಳು ಅವನ ಹತ್ತಿರವೇ ಇದ್ದು, ಅವನು ಚಿತ್ರ ಬರೆಯುತ್ತಿರುವುದನ್ನು ನೋಡುತ್ತಿರುವರು. ರಾಯರ ಮಗಳು ತುಂಟ ಗಂಗೂಬಾಯಿಯಂತೂ ಬಹಳ ವಾಚಾಳಿ ತಾನೆ? ಅವಳು ಶಿವ್ಯನ ಮೈಮೇಲೆ ಬಿದ್ದು ಬಿದ್ದು ನಗೆ ಚೇಷ್ಟೆ ಮಾಡುತ್ತ, ಅವ ನಿಂದ ಅದೂ ಇದೂ ಬರೆಸುತ್ತಿರುವಳು, ಉಳಿದ ಹುಡುಗರು ಗೆಳೆಯರೊಂದಿಗೆ ಆಡಲು ಹೋಗಿ ಬಿಡುವರು.

ಗಂಗೂಬಾಯಿ ಅವನೊಂದಿಗೆ ತಾನೂ ಚಿತ್ರ ಬರೆಯುತ್ತ ಅಲ್ಲೇ ಕೂಡುವಳು. ಇಲ್ಲವೇ ಚಿತ್ರ ವಿಚಿತ್ರವಾದ ಕತೆಗಳನ್ನು ಶಿವ್ಯನಿಂದ ಹೇಳಿ ಸುವಳು. ಅವನು ಅರಸುಗಳ ಮನೆಯಲ್ಲಿ ಕುನ್ನೇಷುಗಳಿಂದ ಕೇಳಿದ ಅನೇಕ ಗಂಧರ್ವರ, ಯಕ್ಷರ, ರಾಕ್ಷಸರ, ರಾಜಕುಮಾರರ ಕಥೆ ಗಳನ್ನು ಹೇಳುವನು. ಒಂದೊಂದು ಕಥೆಯಲ್ಲಿ ರಾಜಕುಮಾರನು ಅನೇಕ ರಾಜಕುಮಾರಿಯ ರನ್ನು ಮದುವೆಯಾಗುತ್ತಾನೆ.

ಈ ರೀತಿಯಾಗಿ ಅವಳಿಗೆ ಅವನ ಮೇಲೆ ಸಲಿಗೆ ಬೆಳೆಯಿತು. ಅವನಿಗೂ ಅವಳ ಸಾಮೀಪ್ಯ ದಲ್ಲಿ ಒಂದು ಬಗೆಯ ಅನಿರ್ವಚನೀಯ ಸವಿ ಒಸರತೊಡಗಿತು. ಸಿನಿಮಾಗಳನ್ನು ನೋಡಿ, ಕಾದಂಬರಿಗಳನ್ನು ಓದಿ ಹೆಣ್ಣುಗಂಡಿನ ಸಂಬಂಧ ಗಳನ್ನು ತಿಳಿದುಕೊಂಡವನವನು. ಅವಳ ಚೇಷ್ಟೆ ಗಳನ್ನು ನೋಡಿದಾಗ ಅವನಿಗೆ ಯಾವುದೋ ಒಂದು ಕಾದಂಬರಿಯಲ್ಲಿ ಬಂದ ಸಂಗತಿ ನೆನಪಾ ಯಿತು. ಅವಳು ಅವನ ಮೇಲೆ ಒರಗಾಡುವಾಗ ಅವಳ ಅರೆ ಮರೆಯಾದ ಮಿಡಿಗಳಿದೆ ಅವನಿ ಗೊಂದು ಸವಿ ಸಂಕೋಚವನ್ನಿತ್ತುವು. ಅವಳ ಅನುಸ್ವಾರಮಯ ಕನ್ನಡ ಉಚ್ಚಾರವೂ ಮೋದಕವಾಗಿತ್ತು.

ಆ ಮೇಲೆ ಕೆಲವೇ ದಿನಗಳಲ್ಲಿ ಗಂಗೂಬಾಯಿ ದೊಡ್ಡವಳಾದಳು. ಗೋಡೆಯ ಬದಿಯ ಮೂಲೆ ಯಲ್ಲಿ ಅವಳನ್ನು ಕುಳ್ಳಿರಿಸಿದ್ದರು. ಕೆಲವಾರು ಮುತ್ತೈದೆಯರು ಬಂದರು. ಚುಂಗುಳಿ ಮೆದ್ದಿಸಿ, ಗುಂಡುಗಳಿಗೆ ಅರಸಿನ ಕುಂಕುಮ ಹಚ್ಚಿಸಿ ಪೂಜೆ ಮಾಡಿಸಿ, ಅವಳ ಅಂಗೈಗೆ ಅರಸಿನ ಕುಂಕುಮಗಳ ಮುದ್ದೆಯನ್ನು ಹಾಕಿ ಗೋಡೆಯ ಮೇಲೆ ಅವಳ ಅಂಗೈಯ ಚಿತ್ರಗಳನ್ನು ಎಬ್ಬಿಸಿ ದರು. ಏನೇನೋ ಶಾಸ್ತ್ರ ಕ್ರಮ ನಡೆಯಿತು. ಹೆಂಗಸರು ಹಾಡು ಹಾಡಿದರು. ಮೂಲೆಯಲ್ಲಿ ತಲೆವಾಗಿ ಕುಳಿತಿದ್ದ ಗಂಗೂಬಾಯಿ ದೂರದಲ್ಲಿ ಶಿವ್ಯನನ್ನು ಅಡ್ಡಗಣ್ಣಿನಿಂದ ನೋಡಿ ನೋಡಿ ಮುಗುಳು ನಗುವಳು.

ಮತ್ತೊಂದು ತಿಂಗಳಲ್ಲಿ ಅವಳಿಗೆ ಮದುವೆ ನಿಶ್ಚಯವಾಯಿತು ವರ ಅವಳನ್ನು ನೋಡಲಿಕ್ಕೆ ಬಂದ. ೨೫ ವಯಸ್ಸಿನ ಸೂಟು ಹ್ಯಾಟುಗಳಿಂದ ಒಪ್ಪುವ ಕಪ್ಪಗಿನ ನಾಗರಿಕ ತರುಣ. ಹುಡು ಗಿಯೂ ಅವನನ್ನು ನೋಡಿದಳು. ಕೆಂಪಗಿನ ಸುಂದರಿಯಾದ ಹುಡುಗಿಗೆ ಕಪ್ಪಗಿನ ಶೋಕಾದ ತರುಣ ಜತೆ ಚೆನ್ನಾಗಿಯೇ ಇದೆ ಎನಿಸಿತ ಶಿವ್ಯನಿಗೆ

ಅದೇ ಬಾವಿಯ ಆಚೆಗಿನ ಕೋಣೆಯಲ್ಲಿ ಮಧ್ಯಾಹ್ನದ ಹೊತ್ತು ಶಿವು, ವಿಶ್ರಾಂತಿಯೀದಿ ರುವಾಗ, ಗಂಗೂಬಾಯಿ ಅವನ ಹತ್ತಿರ ಬಂದು ಕುಳಿತು, "ನಂಗ ಮದುವೆ ಗೊತ್ತಾದಾತು ಸಣ್ಣಾಚಾರ್ರೆ, ಅವನ ಮುಸುಡೀನ ನೋಡಿದರ ನಂಗ ಭಯಾ ಆಗುತ್ತೆ" ಎಂದಳು ದುಗುಡ ದಿಂದ.

"ಭಯಕ್ಕೇನಿದೇವು? ಚೆನ್ನಾಗಿದಾರಲ್ಲಾ ಆಫೀಸರ್ರಾಯರ ಹಾಗೆ. ನೀನಿನ್ನು ದೊರೆಸಾನಿ ಹಾಗೆ ಆಗಿಬಿಡುತ್ತಿ"

"ಅಯ್ಯೋ! ಹ್ಯಾಂಗಿರುತ್ತೇನೋ! ನಂಗೊ ತ್ತಿಲ್ಲ ಸಣ್ಣಾಚಾರ್ರೇ. ನಂಗ ನಿಮ್ಮದೇ ನೆನಪಾಗು ತ್ತದಲ್ಲಾ ಸಣ್ಣಾಚಾರ್ರೇ"

ಶಿವು, ಅವಳಿಗೆ ಸಮಾಧಾನ ಹೇಳಿದ.

ಬೇಡ ಬೇಡವೆಂದರೂ ಕೇಳದೆ ಅವಳು ಶಿವ್ಯ ನನ್ನು ಬಿಗಿಯಾಗಿ ಅಪ್ಪಿಕೊಂಡು ಕಣ್ಣೀರಿ ಸಿದಳು.

ಸಣ್ಣಾಚಾರ್ರ ಹತ್ತಿರ ಹೀಗೆಲ್ಲಾ ಹೋಗಬಾರದು ಅಂತ ತಾಯಿ ಅವಳಿಗೆ ಒತ್ತೊತ್ತಿ ಹೇಳಿದ್ದರೂ ಅವಳು ಕೇಳುತ್ತಿರಲಿಲ್ಲ. ಮಧ್ಯಾಹ್ನದ ಮೇಲೆ ಎಲ್ಲರೂ ನಿದ್ದೆ ಹೊಡೆಯುತ್ತಿರುವಾಗ ಅವಳು ಬಚ್ಚಲು ಮನೆಗೆ ಬರುವ ನೆವದಲ್ಲಿ ಅವನ ಕೋಣೆಗೆ ಬಂದು ಹುಡುಗಾಟ ನಡೆಸುತ್ತಿದ್ದಳು. ಈಚೆಗೆ ಶಿವ್ಯನ ಕೋಣೆಯಾದರೆ, ಆಚೆಯಿಂದ ಬಚ್ಚಲು ಮನೆ ಹೀಗಿತ್ತು ಆ ಪ್ರದೇಶ

ತಾನು ಗಂಡನ ಮನೆಗೆ ಹೋದರೂ ಶಿವ್ಯ ಈ ಮನೆ ಬಿಟ್ಟುಹೋಗಬಾರದೆಂದೂ, ಮುಂದೆ ತನ್ನ ಗಂಡ ಕಲೆಕ್ಟರನಾಗಲಿರುವುದರಿಂದ, ಸಂದರ್ಭ ಸಾಧಿಸಿ ಶಿವ್ಯನನ್ನೂ ತನ್ನ ಜತೆಗೆ ಕರೆಯಿಸಿಕೊಳ್ಳುವೆನೆಂದೂ ಅವಳು ಕೇಳಿಕೊಂಡು ದಕ್ಕೆ ಶಿವ್ಯ ಸಂತೋಷದಿಂದ ಒಪ್ಪಿದ. ಇದೆಲ್ಲ ಘೋರ ತಪ್ಪು ಎಂದು ಗೊತ್ತಿದ್ದರೂ, ಸುಳ್ಳು ಹೇಳುವುದೂ, ಕಳವು ಮಾಡುವುದೂ ತಪ್ಪೆಂದು ಗೊತ್ತಿದ್ದೂ ಮಾಡುವ ಹಾಗೆ. ಚೆಲುವೆ ಯಾದ ಆ ಹುಡುಗಿಯ ಆಕರ್ಷಣೆಯ ಮೋಹದಿಂದ. ಅವಳೇ ಸವಿಯಿಸಿ ರುಚಿ ತೋರಿ ಸಿದ ಆನಂದದ ಮಧುವಿನಿಂದ ಮತ್ತನಾದ ಶಿವ್ಯ ತಾನಿನ್ನು ಸಾಯುವ ವರೆಗೂ ಅವಳ ಅಡಿಗೆಯವನಾಗಿದ್ದು, ಸ್ವರ್ಗಸುಖವನ್ನು ಅನು ಭವಿಸಬಹುದೆಂದು ಭ್ರಮಿಸಿಕೊಂಡನು.

ಅವನ ಭ್ರಮೆ ಬೇಗದಲ್ಲೇ ನೀರುಗುಳ್ಳೆಯ ಹಾಗ ಒಡೆದುಹೋಯಿತು. ಮದುವೆಗೆ ನಾಲ್ಕೇ ದಿನಗಳಿದ್ದುವು. ಮನೆಯಲ್ಲಿ ಆವರಿವರು ಬಂದು ಹೋಗುತ್ತ ಮದುವೆಯ ಏರ್ಪಾಡು ದಡಬಡನೆ ಸಾಗುತಿದ್ದುವು.

ಮಗಳ ಮೇಲೆ ಏನೋ ಸಂದೇಹ ಬಂದು, ನಿಗಾ ಇಟ್ಟುಕೊಂಡೇ ಇದ್ದ ಅಮ್ಮಾವರು, ಹುಡುಗಿ ಶಿವ್ಯನ ಕೋಣೆಯಲ್ಲಿರುವಾಗ ಥಕ್ಕನೆ ಬಂದು ಅವರಿಬ್ಬರ ಅವ್ಯವಸ್ಥನಾಟವನ್ನು ನೋಡಿಬಿಟ್ಟರು.



ತಿಮ್ಮ ನಾಚಿಕೆಯಿಂದಲೂ, ಭಯದಿಂದಲೂ, ಅವಮಾನದಿಂದಲೂ ಬೆವರಿಹೋದ.

ಅಮ್ಮಾವರು ಮಗಳ ಕಿವಿ ಹಿಂಡಿ, ತಿಮ್ಮನನ್ನು ನಾನಾ ವಿಧವಾಗಿ ಬಯ್ಯುತ್ತ, "ಇವನ ಹತ್ರ ಜಾಗ್ರತೆಯಾಗಿರೇ ಇರೇ ಅಂತ ಎಷ್ಟು ಸಾರಿ ಒದಕೊಂಡೆ! ಏನು ಕೆಲಸಾ ಮಾಡಿಬಿಟ್ಟಾ ನೋಡಿದಿಯೇನೇ! ಚೋಟುದ್ದ ಹುಡುಗಾ! ನಮ್ಮ ಸಂಬ್ಳಾ ತಿಂದೂ ಅನ್ನಾ ತಿಂದೂ ನಮ್ಮ ಹೆಣ್ಣನ್ನೇ ಹಾಳು ಮಾಡಾಕೆ ಬಂದ್ನಲ್ಲ! ರಾಯರ ಹತ್ರ ಹೇಳಿ ಇವನ ಬಲೀ ಹಾಕ್ಸಿಬಿಡಬೇಕು. ಸಂಗ ಹುಡುಗಾಂತ ಮಾಡಿದರೇ ಹೆಣ್ಣು ಮಕ್ಕಳು ಒಚ್ಚಲು ಮನೆಗೆ ಬರೋಕೆ ಸಾಧ್ಯವಿಲ್ಲಾಪ್ಪ..."

ಆಗ ಗಂಗೂಬಾಯಿ ತಾಯಿಯನ್ನು ಕುರಿತು. "ಬೇಡಾಮ್ಮ ಅಪ್ಪನ ಹತ್ರ ಹೇಳಬೇಡಾಮ್ಮ ಇನ್ನು ಮೇಲೆ–" ಎಂದೇನೋ ಹೇಳಲಿರಲು, ತಾಯಿ ಅವಳನ್ನು ತಡೆದು, "ಯಾಕೆ ಹೇಳಬೇಡಾ? ನಾಳೆ ಮದುವೆಯಾಗೋ ಹುಡುಗೀ ಹತ್ರ ಇಂವನಿಗೇನು ಆಟಾಂತ?" ಎಂದಳು.

"ನಾನೇ ಇವರ ಹತ್ರ ಆಟ ಆಡಾಕೆ ಬಂದೇನಮ್ಮಾ. ತಪ್ಪು ನನ್ನದೇ ಅಮ್ಮಾ, ನನ್ನದೇ ತಪ್ಪೂ ಅಂತ ಅಪ್ಪನ ಹತ್ರ ಬೇಕಾರೆ ಹೇಳು. ಇವರೇನೂ ಮಾಡಿಲ್ಲ ಪಾಪ" ಎಂದಳು ಕಣ್ಣೀರು ತುಂಬಿ.

"ಥೂ ಥೂ! ಎಂಥಾ ನಾಚಿಗೆಗೇಡಿನ ಮಾತಾಡ್ತೀ? ನಡೀಮ್ಮೊಳಗೆ..."

ಹುಡುಗಿಯನ್ನು ಎಳೆದುಕೊಂಡೇ ಮನೆಯೊಳಗೆ ಹೋದರು ಅಮ್ಮಾವರು.

ತಿಮ್ಮ ಕಂಬದ ಹಾಗೆ ಅಲ್ಲೇ ನಿಂತುಬಿಟ್ಟ.

ಸ್ವಲ್ಪ ಹೊತ್ತಿನಲ್ಲಿ "ತಿಮ್ಮಾಚಾರೀ" ಎಂಬ ಶಾಂತವಾದ ಸೌಮ್ಯ ಧ್ವನಿಯೊಂದಿಗೆ ರಾಯರು ಅವನ ಬಳಿಗೆ ಬಂದರು.

ತಲೆಯ ಮೇಲೆ ಭಯಂಕರ ಸಿಡಿಲನ್ನು ಇದಿರು ನೋಡಿಕೊಂಡಿದ್ದ ತಿಮ್ಮನಿಗೆ ರಾಯರ ಶಾಂತ ಸ್ವರ ಕೇಳಿ ಜೀವ ಕಣ್ಣು ತೆರೆದು ಕೊಂಡಿತು.

"ಇಕ್ಕೋಪಾ, ನಿನ್ನ ಇವತ್ತಿನ ವರೆಗೆ ಸಂಬಳದ ಲೆಕ್ಕಾಚಾರ ಚುಕ್ತಾ ಮಾಡಿದ್ದೇನು. ನಿನ್ನ ಸಾಮಾನು ಗೀಮಾನು ಎಲ್ಲಾ ಕಟ್ಕೊಂಡು ಹೋಗಿಬಿಡಪ್ಪಾ. ಇನ್ನು ಈ ಮನೇ ಕಡೆಗೆ ಮುಖಾ ತೋರಿಸಬ್ಯಾಡಾ. ತಿಳೀತೇ, ಮಾತಾಡಬ್ಯಾಡಾ. ನಡಿ" ಎಂದು ರೂಪಾಯಿಯ ನೋಟುಗಳನು ಅವನ ಮುಂದೆ ನೀಡಿದರು.

ತಿಮ್ಮ ಕಿಂ ಕಂ ಎನ್ನದೆ ಅದನ್ನು ತೆಗೆದುಕೊಂಡ.

ಮತ್ತೆ ಹದಿನೈದೇ ನಿಮಿಷಗಳಲ್ಲಿ ರಾಯರಿಗೊಂದು ಮೌನ ನಮಸ್ಕಾರ ಮಾಡಿ, ಬೇರೆ ಯಾರ ಮುಖವನ್ನೂ ನೋಡದೆ ಬೀದಿಗಿಳಿದ.

೩೮

ಹತ್ತಿರ ಹತ್ತಿರ ಒಂದೂವರೆ ವರ್ಷ ತಿಮ್ಮ ಕರೆಂಜಿಯಾರ ಮನೆಯಲ್ಲಿದ್ದಿದ್ದ. ಉದಯ ವೈದಿಕವನ್ನು ಅಲ್ಲಿಯೇ ಮುಗಿಸಿದ್ದ. ಎರಡು ಮೂರು ಬಾರಿ ತಾಯಿಗೂ ಹಣ ಕಳುಹಿಸಿದ್ದ. ವಿಶೇಷ ವಿವರಗಳಿಗೆ ಕಾಗದ ಪತ್ರಗಳು ನಡೆಯುತ್ತಿದ್ದರೂ, ಯಾವುದೊಂದು ಸೂಚನೆಯೂ ಇಲ್ಲದೆ ಥಕ್ಕನೆ ಮನೆಗೆ ಬಂದ ಮಗನನ್ನು ನೋಡಿ ಜಲಜಮ್ಮನಿಗೆ ಅತ್ಯಾಶ್ಚರ್ಯವಾಯಿತು

ಮೂರು ವರ್ಷಗಳು ಕಳೆದ ಮೇಲೆ ಮಗ ಮನೆಗೆ ಬಂದ ಹಾಗೆ ತಾಯಿಗೆ ತೋರಿತು– ಎರಡೂವರೆ ವರ್ಷಗಳಷ್ಟೇ ಆಯಿತೆಂದರೆ, ಮೂರು ವರ್ಷವೆಂದೇ ಅವಳ ಲೆಕ್ಕ. ಹೇಗಾಗಿದಾನೆ ಮಗ! ಮುಖದಲ್ಲಿ ಕಿರು ಮೀಸೆಯ ಹೊಳಪಿನಿಂದ. ತಾರುಣ್ಯದ ಸ್ವಾವ್ಯೇಜದು, ಸ್ವಲ್ಪ ಪರಿಪುಷ್ಟನಾದ ಮಗನನ್ನು ನೋಡಿ ತಾಯಿಗೊಂದು ಆನಂದದ ಶ್ವಾಸ ಬಂತು. ಅದರೊಂದಿಗೆ ಶ್ರೀಮಂತರ ಮನೆಯಲ್ಲಿ ಹೊಟ್ಟೆ ತುಂಬ ಸಂತೃಪ್ತಿಯಾಗಿ ತಿಂದುಂಡು ಹೊಳಪಾಗಿದಾನೆ ಮಗ. ಇನ್ನು ಮನೆಯ ಗೊಜ್ಜನ್ನ ಉಂಡರೆ ಹೇಗಾಗುತ್ತಾನೋ ಅನಿಸಿತು

"ಎಷ್ಟು ದಿನ ರಜೆ ಪಡೆದು ಬಂದಿರುವಿ

ಹೋಗಾ?" ಏನೋ ಸರಕಾರೀ ಉದ್ಯೋಗದಲ್ಲಿದ್ದ ಹಾಗೆ ರಜೆ ತಗೆದುಕೊಂಡು ಬಂದ ಹಾಗೆ ತಾಯಿಯ ಪ್ರಶ್ನೆ.

"ಬೇರೆ ಕೆಲಸ ಸಿಕ್ಕುವ ವರೆಗೂ ರಜೆಯೇ ಅಮ್ಮಾ."

ತಾನು ಅಡಿಗೆ ಮಾಡಿದ ಮನೆಯ ಕಡು ನಿಕರವಾದ ಮಡಿ ಮುಸುರೆಗಳ ವಿವರಗಳನ್ನು ವರ್ಣಿಸುತ್ತ, "ಸಾಕೋ ಸಾಕಾಯ್ತಮ್ಮ ಆ ಮಡಿ ಪಂಜರದ ಕೆಲಸ. ಬಿಟ್ಟು ಬಂದೆ" ಎಂದ ನಿಜವಾದ ಕಾರಣ ಹೇಳಲಿಲ್ಲ.

ಅದೊಂದು ದುರಂತದಲ್ಲಿ ಕೊನೆಗೊಂಡ ಮಧುರ ಸ್ವಪ್ನದಂತಹುದು. ಪಾಪ, ಆ ಹುಡುಗಿಯ ಮೇಲೆ ಒಂದು ಬಗೆಯ ಪರಿತಾಪ. ಅವಳು ಅವಳ ತಾಯಿಗೆ ಅಡ್ಡ ನಿಂತು ತನ್ನನ್ನು ರಕ್ಷಿಸಿದ್ದನ್ನು ನೆನೆನೆನೆದು ಕೃತಜ್ಞತೆಯಿಂದ ಕರಗಿಹೋಗುತ್ತಿದ್ದ ತಿಮ್ಮ. ಆ ಕೃತಜ್ಞತೆಯನ್ನು ತೋರಿಸುವ ಬಗೆ ಹೇಗೆಂಬುದೇ ಅವನ-ರಿಯ. ಅವಳ ಸಾಂಗತ್ಯವನ್ನಂತೂ ಎಂದೆಂದೂ ಮರೆಯಲಾರ. ಇನ್ನು ಮುಂದೆ ಅವಳ ಗತಿ ಏನಾದೀತು? ಮದುವೆಯಂತೂ ಆಗುತ್ತೆ. ಆ ಮೇಲೆ ಆ ಕರಿಯ ಗಂಡನೊಂದಿಗೆ ಅವಳು ಸಂತೋಷವಾಗಿದ್ದಾಳೆ? ಅವನ ಕಲ್ಪನೆಗೆ ಚಾಲನೆ ಕೊಡುವಂತಹ ಸಮಸ್ಯೆಯಾಗಿತ್ತು ಅದು.

ರಾಯರು ಬಹಳ ಬುದ್ಧಿವಂತರಪ್ಪ! ಎಷ್ಟು ಸಂಯಮ ತಂದುಕೊಂಡರು ಆ ಸಮಯದಲ್ಲಿ! ಇನ್ನೊಬ್ಬರಾಗುತ್ತಿದ್ದರೆ ತನ್ನ ಕೊಲೆಯೇ ಮಾಡಿ ಬಿಡುತ್ತಿದ್ದರು. ಪಾಪ! ಅವರೂ ಅಡ್ಡ ದಾರಿ ತುಳಿದು ಅನುಭವ ಪಟ್ಟ ಮಹಾರಾಯರು ತಾನೆ! ಬಹಳ ಸಂಯಮ ತೋರಿಸಿಬಿಟ್ಟರು ಆ ಸಮಯದಲ್ಲಿ. ನಾಲ್ಕು ಜನಕ್ಕೆ ತಿಳಿದು ಅಸಹ್ಯ ಹುಟ್ಟಕೊಳ್ಳಬಾರದಂತಲೇ ತನ್ನನ್ನು ಮರ್ಯಾದೆಯಿಂದ ಹೊರಗೆ ಹಾಕಿದರು.

ಆ ಹುಡುಗಿ ಎಷ್ಟೆಲ್ಲ ಆಟ ತೋರಿಸಿತು! ಕತೆ ಬರೆಯುವ ಸಾಮರ್ಥ್ಯವುಳ್ಳ ತಿಮ್ಮ ಅಧಕ್ಕಿರುವ ಹಿನ್ನೆಲೆಯನ್ನು ಕಂಡುಕೊಳ್ಳದಿರಲಿಲ್ಲ. ಆ ಮನೆಯಲ್ಲಿ ರಾಯರು ಅಮ್ಮಾವರ ಸಂಬಂಧವೇ ಸರಿಯಿಲ್ಲ. ಅಮ್ಮಾವರು ಅಮ್ಮಾವರ ಪೂರ್ವಾಚಾರ ಪ್ರಭಾವಕ್ಕೊಳಗಾದ ದೊಡ್ಡ ಮುತ್ತೈದೇ ಹಾಗಿನವರು. ರಾಯರು ಕಡಿವಾಣ ಹರಿದ ಕುದುರೆ. ಅದಕ್ಕೇ ಮಗಳು ಹಾಗಾಗಿಬಿಟ್ಟಳು ನಿಜಕ್ಕೂ ತಿಮ್ಮನದೇನೂ ತಪ್ಪಿರಲಿಲ್ಲ. ಅವಳೇ ಮೇಲೆ ಬಿದ್ದು ಹುಚ್ಚು ಹಿಡಿಸಿದ್ದು.

ಹಾಗೆ ತನ್ನಲ್ಲಿ ಯಾವ ಆಕರ್ಷಣೆಯಿದೆ? ಅವಳ ಹಾಗೆ ಗುಲಾಬೀ ಬಣ್ಣದ ಶರೀರ ವರ್ಣವಲ್ಲ ತನ್ನದು. ಸಾಧಾರಣ ಎಣ್ಣೆಗಪ್ಪು. ಉಳಿದ ವಿಷಯದಲ್ಲಿ ಕೇವಲ ಅಡಿಗೇಭಟ್ಟ. ಅಂತಹ ತನ್ನ ಮೇಲೆ ಅವಳಿಗೆ ಪ್ರೇಮವೆ? ಮೋಹವೆ? ಪ್ರೇಮ ಕುರುಡು ಎಂಬುದು ಸುಳ್ಳಲ್ಲ. ಮತ್ತೆ ಪ್ರೇಮ ಪವಿತ್ರವಾದುದೆಂದೂ ಹೇಳುತ್ತಾರಲ್ಲ. ಇರಬಹುದು. ಪ್ರೇಮ ಪವಿತ್ರವಾದುದೇ. ಮೋಹದಿಂದ ಅದು ಕುರುಡಾಗುತ್ತದೆ ಅಂತ ಕಾಣುತ್ತದೆ.

ಅಬ್ಬ! ಎಲ್ಲರೂ ಬಿದ್ದು ಸಾಯುವ ಹೆಣ್ಣಿನ ಸುಖ ಸಹವಾಸವೆಂದರೆ ಏನೆಂಬುದನ್ನು ಅವಳು ಎಷ್ಟು ಚೆಂದಾಗಿ ತೋರಿಸಿದಳು! ಹೆಣ್ಣು! ಆ ಗಂಗೂಬಾಯಿಯ ಸಹವಾಸ ದೊರೆಯುವ ಮೊದಲು ಹೆಣ್ಣುಗಳ ನಡುವೆ ಇರಲೇ ಇಲ್ಲವೇ ತಾನು? ತಾಯಿ, ತಂಗಿ, ಅತ್ತೆ, ಅಕ್ಕ, ದೊಡ್ಡಮ್ಮ, ಕುನ್ನೇಮೇಗಳು ಹೀಗೆ ಎಷ್ಟೋ ಹೆಣ್ಣುಗಳೊಂದಿಗೆ ತಾನೇ ಬೆಳೆದಿದ್ದೇನೆ! ಅಡಗೇ ಮನೆಯ ಕೆಲಸದವನಾದ ತಾನು ಮನೆಯ ಹೆಂಗುಸರ ನಡುವೇ ತಾನೇ ಇದ್ದೆ. ಅಸಲು ಕರಂಜಿಯಾರ ಮನೆಯಲ್ಲಿಯೇ ಬೇರೆ ಹುಡುಗಿಯರೂ ಇದ್ದರು. ಇದೆಲ್ಲದಕ್ಕಿಂತಲೂ ಗಂಗೂಬಾಯಿ ಹುಡುಗಿ ತೋರಿಸಿದ ಹೆಣ್ತನ ವಿಶಿಷ್ಟವಾಗಿತ್ತು. ಹೊಸತಾಗಿತ್ತು. ತನ್ನಲ್ಲಿರುವ ಯಾವುದೋ ಕೊರತೆಯನ್ನು ತುಂಬುವಂತಹದಾಗಿತ್ತು. ಪ್ರಾಯ ಬರುವಾಗಲೇ ಏರ್ಪಡುವ ಕೊರತೆಯದು. ಆ ಕೊರತೆ ತುಂಬಲಿಕ್ಕೇ 'ಹೆಂಡತಿ' ಅಂತ ಒಂದು ಹೆಣ್ಣು ಬೇಕು.

ತಾಯಿಗೂ ಯೋಚನೆಯಾಗಿತ್ತು. ಅದರ ವಿಧಾನ ಬೇರೆ. ಮಗ ಕೆಲಸವಿಲ್ಲದೆ ಮನೆಯಲ್ಲಿ ಸುಮ್ಮನೆ ಬಿಳೀ ಕಾಗದವನ್ನು ಕಪ್ಪು ಮಾಡುತ್ತ ಕೂತಿದ್ದಾನೆ. ಏನೋ ಸ್ವಲ್ಪ ರೂಪಾಯಿಯನ್ನು ತಂದು ಕೊಟ್ಟಿದ್ದಾನೆ ನಿಜ. ಆ ರೂಪಾಯಿ ಬೇಗನೆ ತೀರಿ ಹೋಗಲು, ಅತೀ ಅಗತ್ಯವಾದ ಆರೆಂಟು ದಾರಿಗಳಿವೆ. ಮತ್ತೆ ಹಟ್ಟಿ ದುರಸ್ತಿಯಾಗಬೇಕು. ಕೆರೆಯ ಕೆಸರು ತೆಗಿಸಬೇಕು. ಕಟ್ಟ ಹುಣಿಗಟ್ಟ ಮಾಡಿಸಬೇಕು. ಇದೆಲ್ಲಕ್ಕೂ ಮೇಲೆ ನಿತ್ಯ ಖರ್ಚಿಗೆ ಬೇರೆ ಬೇಕು, ದನಕ್ಕೆ ಹಿಂಡಿ, ಉಪ್ಪು, ಮೆಣಸು. ಎಣ್ಣೆ ಇತ್ಯಾದಿ. ಮಗ ಇನ್ನೆಷ್ಟು ದಿವಸ ಹೀಗೆ ಸುಮ್ಮನೆ ಕುಳಿತಿರುತ್ತಾನೋ? ಇನ್ನೆಲ್ಲಿ ಕೆಲಸ ಸಿಕ್ಕುತ್ತೋ? ಪರರ ಮನೆಯಲ್ಲಿ ಪುಷ್ಟವಾಗಿ ಊಟ ಮಾಡುತ್ತಿದ್ದವನಿಗೆ ಸ್ವಲ್ಪ ಒಳ್ಳೊಳ್ಳೆಯ ಅಡಿಗೇನೇ ಮಾಡಿಹಾಕಬೇಕು. ತಿಂಡಿ ಮಾಡಿಕೊಡಬೇಕು. ತುಪ್ಪ ಹಾಲು ಮಾರಬಾರದು. ಅವನು ತಂದು ಕೊಟ್ಟ ದುಡ್ಡು ಇದಕ್ಕೇ ಸವೆದುಹೋಗುತ್ತದಲ್ಲಾ. ಅಯ್ಯೋ! ನಮ್ಮ ಮಗು ಮನೆಗೆ ಬಂದರೆ ಯಾವನೋ ನೆಂಟ ಬಂದಹಾಗೆ ಲೆಕ್ಕ ಹಾಕಬೇಕಾಯಿತು ತಾಯಿಯಾದ ತಾನು.

ಪುತ್ರಪಾಶವು ಒಂದು ಕಡೆ ಎಳೆಯುತ್ತಿದ್ದರೆ, ಅದಕ್ಕಿಂತ ಹೆಚ್ಚಿನ ಶಕ್ತಿಯುಳ್ಳ ದರಿದ್ರಾವಸ್ಥೆ ಅವನಿಗೆ ಬೇಗನೆ ಕೆಲಸ ಸಿಕ್ಕಿ ಮನೆಯಿಂದ ಹೊರಟು ಹೋಗಲಿ ಎಂದು ಹಾರೈಸುತ್ತದೆ!

ಹಾಗೆಯೇ ಆಯಿತು. ತಿಮ್ಮನಿಗೆ ಮಾತ್ರ ಆಲೋಚನೆಯಿಲ್ಲವೆ? ತಾಯಿಯ ಆಲೋಚನೆಯನ್ನೂ ಊಹಿಸಿಕೊಳ್ಳುವ ಶಕ್ತಿ ಅವನಿಗಿತ್ತು. ಅವಳು ಅವನಿಗಾಗಿ ಅದೂ ಇದೂ ಮಾಡ ಹೋದರೆ, "ಬೇಡಮ್ಮಾ ಇಷ್ಟೆಲ್ಲಾ ಯಾಕೆ ಮಾಡುತ್ತಿ? ತಿಮರೆಯೋ ಕೇಪಳ ಹೂವೋ ತಂಬುಳಿ ಮಾಡು. ಒಂದು ಗೊಜ್ಜು ಸಾರು ಮಾಡು. ಸಾಕು ಕುಚ್ಚಿಲಕ್ಕಿ ಎಂಬಲ್ಲಿ ಬರೀ ಅನ್ನ ತಿಂದು ಹೊಟ್ಟೆ ತುಂಬಿಸಿಕೊಂಡವನು ನಾನು. ಹಸಿವೆಯೇ ರುಚಿಯಮ್ಮಾ." ಎನ್ನುವನು. ತುಪ್ಪ, ಹಾಲು ಯಾವುದೂ ತನಗಾಗಿ ಬೇಡ ಎನ್ನುವನು.

ಆದರೆ ಅವನಿಗೆ ಕೆಲಸವಿಲ್ಲದೆ ಸುಮ್ಮನೆ ದಿನ ದೂಡುವುದು ಸರಿಯಾಗಿರಲಿಲ್ಲ... ಕೆಲಸವಿಲ್ಲದೆ ಹಳ್ಳಿ ಮನೆಯಲ್ಲಿ ಹೀಗೆ ದಿನಗಳೆಯಲು ಏನೂ ಇಷ್ಟವಿರಲಿಲ್ಲ. ನಗರದ ಸೊಗಸಿನಲ್ಲಿ ನಡೆದಾಡಿದ ಅವನು ಹಳ್ಳಿ ಮನೆಯಲ್ಲಿ ಸುಖವಾಗಿರಬಲ್ಲನೆ?

"ನನಗೇನಮ್ಮ? ಅಡಿಗೇ ಕೆಲಸ ಗೊತ್ತೇ ಇದೆ. ಪ್ರಪಂಚದಲ್ಲಿ ಶ್ರೀಮಂತರೂ ಬಹಳ ಮಂದಿ ಇದ್ದಾರೆ. ಎಲ್ಲಿಯಾದರೂ ಕೆಲಸ ಹುಡುಕಿಕೊಂಡೇನು. ಕೊಯಂಬತ್ತೂರಿನಲ್ಲೇ ಬೇರೊಂದು ಕೆಲ್ಸ ನೋಡಿಕೊಳ್ಳುತ್ತಿದ್ದೆ. ಒಮ್ಮೆ ನಿಮ್ಮನ್ನೆಲ್ಲ ನೋಡಬೇಕೆಂತಲೇ ಊರಿಗೆ ಬಂದೆ. ನಾನು ಮಂಗಳೂರಿನಲ್ಲೇ ಕೆಲಸ ದೊರಕಿಸಿಕೊಳ್ಳುತ್ತೇನೆ ನೋಡ್ತಾ ಇರು" ಎನ್ನುತ್ತಿದ್ದ.

ಎರಡು ಮೂರು ಬಾರಿ ಮಂಗಳೂರಿಗೆ ಹೋಗಿಬಂದ. ಅಲ್ಲಿ ಅವನ 'ದೊಡ್ಡಮ್ಮ' ಒಬ್ಬರಿದ್ದರು. ಅಲ್ಲಿಗೆ ಹೋಗುವ ನೆವನದಲ್ಲಿ ಮಂಗಳೂರು ನಗರವನ್ನೆಲ್ಲಾ ಸುತ್ತಾಡಿದ. ಸುಂದರ ದೃಶ್ಯವನ್ನೀವ ಬಾವಟೆಗುಡ್ಡೆ, ವಿಶಾಲವಾದ ನೆಹರೂ ಮೈದಾನ, ಸಿನಿಮಾ ಥಿಯೇಟರುಗಳು ಮೊದಲಾದ ಸ್ಥಳಗಳಲ್ಲಿ ತಿರುಗಾಡಿದ.

ಅಷ್ಟರಲ್ಲಿ ದೊಡ್ಡಮ್ಮನ ಮನೆಯ ನೆರೆಮನೆಯಲ್ಲಿರುವ ಗುಮಾಸ್ತರೊಬ್ಬರ ಮೂಲಕವಾಗಿ ಮಂಗಳೂರಿನಲ್ಲಿರುವ ಇಂಡಸ್ಟ್ರಿಯಲ್ ಸೂಪರಿಂಟೆಂಡೆಂಟರೊಬ್ಬರಿಗೆ ಅಡಿಗೆಗೆ ಒಬ್ಬ ಹುಡುಗ ಬೇಕೆಂದು ಗೊತ್ತಾಯಿತು. ಆ ಗುಮಾಸ್ತನಿಗೆ ಅಲ್ಲಿಯೇ ಕೆಲಸ. ಆ ಸುಪರಿಂಟೆಂಡೆಂಟರು ಮದರಾಸಿನ ಅಯ್ಯರ್ ಅಂತೆ. ಆ ಗುಮಾಸ್ತನೇ ತಿಮ್ಮನನ್ನು ಕರೆದುಕೊಂಡು ಹೋಗಿ ಅವರ ಭೇಟಿ ಮಾಡಿಸಿದ.

ಅವರು ತಮಿಳಿನಲ್ಲಿ ಕೇಳಿದ್ದಕ್ಕೆಲ್ಲ ತಿಮ್ಮ ಮಲೆಯಾಳದಲ್ಲಿ ಉತ್ತರಕೊಟ್ಟ. ತಮಿಳರ ಅಡಿಗೇ ವಿಧಾನ ಗ್ರಹಿಸಿಕೊಳ್ಳುವವರೆಗೆ, ಮೊದಲನೇ ತಿಂಗಳು ಎಂಟು ರೂಪಾಯಿ ಸಂಬಳ ಕೊಟ್ಟು, ಅನಂತರ ಹತ್ತು ರೂಪಾಯಿಯಂತೆ ಕೊಡುವುದಾಗಿ ಹೇಳಿದರು. ಊರೊಳಗೆ ಅಷ್ಟು ಸಿಕ್ಕಿದರೆ ಸಾಕು ಎಂದುಕೊಂಡು ಒಪ್ಪಿಕೊಂಡ ತಿಮ್ಮ.

೩೯

ಆ ಸುಪರಿಂಟೆಂಡೆಂಟರ ಹೆಸರು ನಟರಾಜನ್. ಅವರ ಮನೆ ಕಂಕನಾಡಿಯಲ್ಲಿತ್ತು. ಅವರಿಗೆ ಮಂಗಳೂರಿಗೆ ವರ್ಗವಾಗಿ ಕೆಲವೇ ದಿನಗಳಾಗಿದ್ದುವು. ಅಡಿಗೇ ಹುಡುಗ ಸಿಕ್ಕಿದ ಮೇಲೆ ಹೆಂಡತಿಯನ್ನೂ ಮಗುವನ್ನೂ ಕರೆಸಿಕೊಳ್ಳುವರಾಗಿದ್ದರು.

ನಟರಾಜನ್ನಿಗೆ ಸ್ವತಃ ಒಳ್ಳೆಯ ಅಡಿಗೆ ಮಾಡಲು ಗೊತ್ತಿತ್ತು. ಅವರು ತಿಮ್ಮನೊಂದಿಗೆ ಅರ್ಧರ್ಧ ತಮಿಳು ಮಲೆಯಾಳ ಮಿಶ್ರಭಾಷೆಯಲ್ಲಿ ಮಾತಾಡುತ್ತ, ಅವರ ಅಡಿಗೇ ಪದ್ಧತಿಯನ್ನು ಸ್ವತಃ ಕಲಿಸಿಕೊಟ್ಟುಬಿಟ್ಟರು. ತಮಿಳಿನವರ ಪ್ರತ್ಯೇಕ ಅಡಿಗೆಯಾದ, ವತ್ತಲ್ ಕೊಳಂಬು, ರಸವಾಂಗಿ, ಸಾಂಬಾರು, ಕೂಟು, ಮೋರುಕೊಳಂಬುಗಳನ್ನು ತಿಮ್ಮ ಚೆನ್ನಾಗಿ



ಹೂಡತೊಡಗಿದೆ. ಅದರೊಂದಿಗೆ ಮಲಬಾರಿ ಅವಿಯಲ್, ಓಲನಗಳ ರುಚಿಯನ್ನು ಅವರಿಗೆ ಹಿಡಿಸಿದ ಮಾತ್ರವಲ್ಲ, ತಾಯಿಯಿಂದ ಕಲಿತ ಹೀರೇಕಾಯಿ ಸಿಪ್ಪೆ, ಪಡವಲಕಾಯಿ ಬೀಜ, ಬದನೇಕಾಯಿ ತೊಟ್ಟು ಮೊದಲಾದ ಬಿಸುಡುವ ವಸ್ತುಗಳಿಂದ ಚಟ್ನಿ, ಸಮ್ಮಂದಿಗಳನ್ನು ಮಾಡಿ ತೋರಿಸಿ, ಅವರನ್ನು ಆಶ್ಚರ್ಯ ಪಡಿಸಿ ಮೆಚ್ಚಿಸಿದ. ಅವರು ತಮ್ಮ ಹೆಂಡತಿಗೆ ಶಿವ್ಮನನ್ನು ಕುರಿತು ಬರೆಯುತ್ತ, "ದಿವ್ಮನ್ ಎಂಬ ವಿಚಿತ್ರ ಹೆಸರಿನ ಅಡಿಗೀ ಹುಡುಗ ಸಿಕ್ಕಿದ್ದಾನೆ. ಬಹಳ ಗಟ್ಟಿಗ. ತರಕಾರಿಗಳ ಸಿಪ್ಪೆ, ತೊಟ್ಟು, ಬೀಜಗಳಿಂದಲೂ ರುಚಿಯಾದ ಬಗೆಗಳನ್ನು ಮಾಡುತ್ತಾನೆ. ಕನ್ನಡಿಗರಡಿಗೆ, ಮಲೆಯಾಳದ ಅಡಿಗೆ ಮರಾಟರ ಅಡಿಗೆ ಗೊತ್ತಿದ್ದವ. ನಮ್ಮ ಕ್ರಮವನ್ನು ಬಲು ಚೆನ್ನಾಗಿ ಮಾಡುತ್ತಾನೆ ಬರೀ ಅಡಿಗೆಯವನೆಂದು ತಿಳಿಯಬೇಡ. ಕವಿ, ಚಿತ್ರಗಾರ, ಕತೆಗಾರ ಎಲ್ಲಾ. ಮಗುವಿನೊಂದಿಗೆ ಕೂಡಲೇ ಹೊರಟು ಬಾ" ಎಂದು ಬರೆದರು ಈ ಪತ್ರದಿಂದಲೇ ನಟರಾಜನ್ ಒಳ್ಳೆಯ ಕಲಾಭಿಮಾನಿಗಳೆಂದು ತಿಳಿಯುತ್ತದಷ್ಟೆ? ನಿಜ

ಅವರ ಹೆಂಡತಿ ಜಾನಕಮ್ಮ ತಮ್ಮ ಒಂದು ವರ್ಷದ ಹೆಣ್ಣು ಮಗುವಿನೊಂದಿಗೆ ಬಂದಳು. ಅಷ್ಟರೊಳಗೆ ನಟರಾಜನ್ ಒಂದು ಬೇಬೀ ಆಸ್ಟಿನ್ ಕಾರನ್ನು ಕೊಂಡುಕೊಂಡಿದ್ದರು. ಗಂಡ ಹೆಂಡಿರಿಬ್ಬರಿಗೂ ಡ್ರೈವಿಂಗ್ ಬರುತ್ತಿತ್ತು. ಬಿ.ಎ. ಪದವೀಧರೆಯಾದ ಜಾನಕಮ್ಮ ಮನೆಯಲ್ಲಿ ಸಾಮಾನ್ಯ ಹುಡುಗಿಸಿನ ಹಾಗೆಯೇ ಇದ್ದಳು. ಅಡಿಗೀ ಮನೆಯಲ್ಲಿ ಶಿವ್ಮನಿಗೂ ಸಹಾಯ ಮಾಡುತ್ತ, ಅವನಿಂದ ಪ್ರಿಯವಾಗಿ ಕೆಲಸ ಮಾಡಿಸುತ್ತಿದ್ದಳು.

ಚಿತ್ರ ಬರೆಯುವ ಶಿವ್ಮನ ಮೇಲೆ ಜಾನಕಮ್ಮನಿಗೆ ಪ್ರತ್ಯೇಕ ಮಮತೆಯುಂಟಾಗಿತ್ತು. ಕಾರಣವೇನಂದರೆ, ಆಕೆಗೂ ಚಿತ್ರಕಲೆಯ ಮೇಲೆ ಬಹಳ ಪ್ರೀತಿ. ಸ್ವತಃ ಬಣ್ಣಗಳನ್ನಿಟ್ಟುಕೊಂಡು ಪೈಂಟಿಂಗ್ ಮಾಡುವಳು ಆದರೆ ಅವಳಿಗೆ ಬಣ್ಣಗಳನ್ನು ಹಚ್ಚುವ ಕ್ರಮಗಳು ಗೊತ್ತಿದ್ದುವೇ ಹೊರತು ರೇಖೆಗಳನ್ನು ಬರೆಯಲು ಬಾರದು. ಆಗ ಅವಳು "ದಿವ್ಮನ್! ಕೊಂಚೆಂ ಇಂಗೇವಾಡಾ" (ಶಿವ್ಮ ಸ್ವಲ್ಪ ಇಲ್ಲಿ ಬಾರೊ) ಎಂದು ಆಗಾಗ ಶಿವ್ಮನನ್ನು ಕರೆಯುವಳು ಬಣ್ಣದ ಬ್ರಶ್ಶನ್ನು ಅವನ ಕೈಗೆ ಕೊಟ್ಟು ಚಿತ್ರದಲ್ಲಿರುವ ಕಣ್ಣಿನ ಹುಬ್ಬು, ತುಟಿ ಮುಂತಾದ ಸ್ಥಾನಗಳನ್ನು ತೋರಿಸಿ. "ಇದು ಎನಕ್ಕು ವರಲೇಡಾ, ಕೊಂಚೆಂ ಪೊಟ್ಟು ಕೊಡೇನ್" (ಇದು ನನಗೆ ಬರೋದಿಲ್ಲ; ಸ್ವಲ್ಪ ಹಾಕಿ ಕೊಡೇನು) ಎನ್ನುವಳು.

ಅವನು ಹಾಕಿದ ಬಣ್ಣಗಳನ್ನು ನೋಡಿ "ಅರೆ ಎಷ್ಟು ಚೆನ್ನಾಗಿ ಬಂತೀಗ ನೀನು ಬಹಳ ಗಟ್ಟಿಗನಪ್ಪ." ಎಂದು ಹೊಗಳಿ ಗಂಡನೊಂದಿಗೂ ಅವನ ಕಲಾಪ್ರತಿಭೆಯನ್ನು ಹೇಳುವಳು. ಈ ಬಗೆಯ ಗಂಡ ಹೆಂಡಿರಿಬ್ಬರ ಪ್ರೋತ್ಸಾಹಗಳಿಂದ, ಶಿವ್ಮನ ಚಿತ್ರಕಲೆಗೆ ಅಲ್ಲಿ ಒಳ್ಳೆಯ ಅಭ್ಯಾಸ ದೊರೆಯತೊಡಗಿತು.

ಅವನು ಬರೆಯುತ್ತಾ ಓದುತ್ತಾ ಇರುವುದನ್ನು ನೋಡಿ ನಟರಾಜನ್, ಜಾನಕಮ್ಮ ಇಬ್ಬರೂ ತುಂಬ ಮೆಚ್ಚಿಕೊಳ್ಳುತ್ತಿದ್ದರು. ಇಬ್ಬರೂ ವಿದ್ಯಾಭಿಮಾನಿಗಳು. ಜಾನಕಮ್ಮ ಇಂಗ್ಲಿಷಿನಲ್ಲಿ ಕತೆಗಳನ್ನು ಬರೆದು "ಮ್ಯಾ ಮ್ಯಾಗಜಿನ್" ಪತ್ರಿಕೆಗೆ ಕಳುಹಿಸುವುದಿತ್ತು. ಶಿವ್ಮನಿಂದ ಕತೆಗೆ ತಕ್ಕ ಚಿತ್ರವನ್ನೂ ಬಿಡಿಸಲಿಕ್ಕೆ ಹೇಳಿ. ಅದನ್ನು ಕತೆಯೊಂದಿಗೆ ಕಳುಹಿಸಿಕೊಟ್ಟಾಗ, ಆ ಚಿತ್ರದೊಂದಿಗೇ ಕತೆ ಪ್ರಕಟವಾಯಿತು. ಅದಕ್ಕೆ ಹದಿನೈದು ರೂಪಾಯಿ ಸಂಭಾವನೆ ಬಂದಾಗ, ಅದರಲ್ಲಿ ಅರ್ಧವನ್ನು ಶಿವ್ಮನಿಗೂ ಕೊಟ್ಟಳು ಜಾನಕಮ್ಮ.

ನಟರಾಜನ್ ಅವರ ಗೆಳೆಯರ ಹತ್ತಿರವೆಲ್ಲ "ನಮ್ಮ ಅಡಿಗೇ ದಿವ್ಮನ್ ಒಬ್ಬ ಕಲಾವಿದ, ಸಾಹಿತಿ" ಎಂದು ಹೆಮ್ಮೆಯಿಂದ ಹೇಳಲಾರಂಭಿಸಿದರು. ಆದರೆ ಶಿವ್ಮ ಬರೆದು ಬರೆದು ಇಟ್ಟುಕೊಳ್ಳುವುದೆಲ್ಲ ಕನ್ನಡದಲ್ಲೇ ಆದುದರಿಂದ ಅವರಿಗೆ ಅದೇನೆಂಬುದು ಅರ್ಥವಾಗುತ್ತಿರಲಿಲ್ಲ. ಆದರೂ ಸೂಕ್ಷ್ಮಗ್ರಾಹಿಯಾದ ಜಾನಕಮ್ಮ ಶಿವ್ಮನು ಬರೆದ ಕನ್ನಡದ ಕತೆಯನ್ನು ಓದಿಸಿ ಕೇಳಿ ಅರ್ಥ ಮಾಡಿಕೊಂಡು, "ಬಹಳ ಚೆನ್ನಾಗಿ ಬರೆದಿದ್ದಾನೆ ಯಾವುದಾದರೂ ಕನ್ನಡ ಪತ್ರಿಕೆಗಳಿಗೆ ಕೊಡಬಹುದಲ್ಲಾ" ಎಂದಳು.

ಆದರೆ ಶಿವ್ಮನಿಗೆ ಧೈರ್ಯ ಬರಲಿಲ್ಲ. ನಟರಾಜನ್ ಬಿಡಲಿಲ್ಲ ಅವರಿಗೆ "ಸ್ವಭಾಷಾಭಿಮಾನಿ" ಕನ್ನಡ ಪತ್ರಿಕೆಯ ಸಂಪಾದಕರು

ಗೆಳೆಯರಾಗಿದ್ದರು. ಅವರ ಹತ್ತಿರ ನಟರಾಜನ್ ತಿಮ್ಮನ ಒಂದು ಸಣ್ಣ ಕತೆಯನ್ನು ಕೊಟ್ಟು, "ಈ ಕತೆ ಹೇಗಿದೆ ನೋಡಿ, ಒಳ್ಳೇದಿದ್ದರೆ ಪ್ರಕಟಿಸಿರಲಿಲ್ಲ" ಎಂದರು.

ಆ ಕತೆ "ಸ್ವಭಾಷಾಭಿಮಾನಿ" ಪತ್ರಿಕೆಯಲ್ಲಿ ಪ್ರಕಟವಾದಾಗ ತಿಮ್ಮನಿಗಾದ ಸಂತೋಷ ಅಷ್ಟಿಷ್ಟಲ್ಲ. ಆ ಮೊದಲೇ ತಿಮ್ಮ ತನ್ನ ಜ್ಞಾನಾಭಿವೃದ್ಧಿಯನ್ನು ಹೆಚ್ಚಿಸಲು ಮಂಗಳೂರಿನ ಲ್ಲೊಂದು ಲೈಬ್ರರಿಗೂ ಚಂದಾದಾರನಾಗಿದ್ದ. ಕನ್ನಡದಲ್ಲಿ ಪ್ರಕಟವಾದ ಎಲ್ಲಾ ಪುಸ್ತಕಗಳನ್ನೂ ಒಂದರಮೇಲೊಂದು ಓದಲಾರಂಭಿಸಿದ್ದ. ಸಣ್ಣ ಕತೆಗಳನ್ನೂ ಕಾದಂಬರಿಗಳನ್ನೂ ಬರೆದು ತನ್ನ ಪೆಟ್ಟಿಗೆಯನ್ನು ತುಂಬಿಸತೊಡಗಿದ್ದ. ಅದೊಂದು ಚಟ. ಪ್ರಕಟಿಸಬೇಕೆಂಬ ಚಪಲತೆ ಅವನಿಗಿರಲಿಲ್ಲ. ಕೇವಲ ಹುಚ್ಚು.

ಆದರೆ "ಸ್ವಭಾಷಾಭಿಮಾನಿ"ಯಲ್ಲಿ ಒಂದು ಕತೆ ಪ್ರಕಟವಾದ ಮೇಲೆ "ಪರವಾಯಿಲ್ಲ ಹಾಗಾದರೆ. ನನ್ನ ಕತೆಯನ್ನೂ ಪ್ರಕಟಿಸಬಹುದೆಂದಾಯಿತು." ಎಂದುಕೊಂಡನು. ಮತ್ತೆ ಕೆಲವು ಕತೆಗಳನ್ನು "ಸ್ವಭಾಷಾಭಿಮಾನಿ"ಗೂ, "ಕೇಸರಿ"ಗೂ ತಾನೇ ಸ್ವತಃ ಹೋಗಿ ಕೊಟ್ಟ. "ಕೇಸರಿ"ಯವರು ಅವನ "ಘಾತುಕ ಮಿತ್ರ" ಎಂಬ ಪತ್ತೇದಾರಿ ಕಾದಂಬರಿಯನ್ನು ಪ್ರಕಟಿಸಲು ಸ್ವೀಕರಿಸಿಕೊಂಡರು.

ಈ ಸಂತೋಷ ಸಮಾಚಾರವನ್ನು ಅವನು ಊರಿಗೆ ಹೋಗಿ ತಾಯಿಗೆ ಹೇಳಿದಾಗ "ಹೀಗೆ ಸುಮ್ಮನೆ ತಲೆ ಖರ್ಚು ಮಾಡಿ, ಬೆನ್ನು ಬಾಗಿಸಿ ಬರೆದು ಬರೆದು ಕೊಡುವುದರಿಂದ ಏನಾದರೂ ಲಾಭವಿದೆಯೇ ಮಗಾ? ಹೊಟ್ಟೆಯಾದರೂ ತುಂಬುತ್ತೆಯೇ ಇದರಿಂದ? ಬೇಡಪ್ಪ ಈ ಹುಚ್ಚು" ಎಂದಳು ತಾಯಿ.

ಆದರೆ ಆ ಹುಚ್ಚು ಬಿಡಲು ಅವನಿಂದಂತೂ ಆಗದು.

ತಾಯಿಯ ಮಾತಿನಲ್ಲಿಯೂ ಅರ್ಥವಿತ್ತು. ತಲೆ ಖರ್ಚು ಮಾಡಿ, ರಾತ್ರಿಯಲ್ಲಿ ಬೆನ್ನು ಬಗ್ಗಿಸಿ, ಕಣ್ಣು ಬಿಡಿಸಿಕೊಂಡು ಬರೆದ ಕತೆಗಳು. ಏನೂ ಸಿಕ್ಕದಿದ್ದರೆ ಏನು ಪ್ರಯೋಜನ?

ಅಂತೆಯೇ ತಿಮ್ಮ "ಕೇಸರಿ" ಆಫೀಸಿಗೆ ಹೋಗಿ, "ನನ್ನ ಘಾತುಕ ಮಿತ್ರ ಕತೆಗೆ ಏನಾದರೂ ಪ್ರತಿಫಲ ಕೊಡಲಾರಿರಾ?" ಎಂದು ಕೇಳಿಯೆ ಬಿಟ್ಟ.

ಕೂಡಲೇ ಆ ವೃದ್ಧ ಸಂಪಾದಕರು ಮುಗುಳು ನಗುತ್ತ ಅವನ ಬೆನ್ನು ತಟ್ಟಿ, "ನೋಡಿ ತಿಮ್ಮಣ್ಣನವರೆ, ಸಾಹಿತಿಯಾಗುವುದು ಒಂದು ಜನ್ಮದ ಸಂಸ್ಕಾರವಲ್ಲ, ಜನ್ಮಾಂತರದ ಸಂಸ್ಕಾರ. ಪ್ರತಿಫಲ ಸಿಕ್ಕಿದರೂ ಸಿಕ್ಕದೆ ಹೋದರೂ ನಿಜವಾದ ಸಾಹಿತಿ ತನ್ನ ಕೆಲಸ ಮಾಡುತ್ತಲೇ ಇರುತ್ತಾನೆ. ಅಂತೆಯೇ ತರುಣರಾದ ನೀವು ನಿರಪೇಕ್ಷ ಬುದ್ಧಿಯಿಂದ ಭಾಷಾ ಮಾತೆಯನ್ನು ಸೇವಿಸಬೇಕು. ಒಂದಾನೊಂದು ಕಾಲದಲ್ಲಿ ನಿಮಗೆ ಖಂಡಿತವಾಗಿ ಪ್ರತಿಫಲ ಸಿಗುತ್ತದೆ. ನಂಬಿರಿ ಆ ಕಾಲ ಬೇಗನೇ ಬರಲೆಂದು ನನ್ನ ಹಾರೈಕೆ. ನಮ್ಮದು ಬಡ ಪತ್ರಿಕೆಗಳು. ನಿಮ್ಮಂಥ ನಿರಪೇಕ್ಷಿಗಳಿಂದ ತರುಣರ ಸಹಕಾರದಿಂದ, ನಿಮ್ಮಂಥವರ ಉಪಯೋಗಕ್ಕಾಗಿಯೇ ಸೇವಾ ಭಾವದಿಂದ ಹೇಗೋ ಹೆಣಗಾಡುತ್ತ ಹೊರಡಿಸುತ್ತಿದ್ದೇವೆ. ನಿಮ್ಮ ಹೆಸರನ್ನು ಫ್ರೀ ಲಿಸ್ಟಿನಲ್ಲಿ ಹಾಕಿಸುತ್ತೇನೆ." ಎಂದು ಅಪ್ಪಣೆ ಕೊಡಿಸಿದರು.

ಆ ಮೇಲೆ ವಾರ ವಾರವೂ "ಕೇಸರಿ" ಪತ್ರಿಕೆ ಅವನ ಕೈಗೆ ಬರುತ್ತಿತ್ತು. ವಾರ ವಾರವೂ ಪೋಸ್ಟ್‌ಮ್ಯಾನ್ ತನ್ನ ಹೆಸರಿಗೆ ಪತ್ರಿಕೆಯನ್ನು ತಂದು ಕೊಡುವುದೇ ಅವನಿಗೊಂದು ಹೆಮ್ಮೆಯ ವಿಷಯವಾಯಿತು. ಅವನು ಕತೆಗಾರ, ಕವಿ, ಎಂದು ಊರಲ್ಲೆಲ್ಲ ಗೊತ್ತಾಯಿತು. "ನಮ್ಮ ಶಾಲೆಯಲ್ಲಿ ಅಕ್ಷರಾಭ್ಯಾಸ ಕಲಿತ ಹುಡುಗ ಸಾಹಿತಿಯಾಗಿ ಪ್ರಸಿದ್ಧಿಗೆ ಬರುವನೆಂದರೆ, ನಮ್ಮ ಶಾಲೆಗೇ ಹೆಮ್ಮೆಯ ಸಂಗತಿ" ಎಂದು ಅವನು ಕಲಿತ ಶಾಲೆಯ ಹಳೇವಿದ್ಯಾರ್ಥಿ ಸಂಘವು ಅವನ ಹೆಸರನ್ನು ತನ್ನ ರಿಜಿಸ್ಟರಿನಲ್ಲಿ ದಾಖಲೆ ಮಾಡಿಸಿಕೊಂಡಿತು. ಅಲ್ಲಿ ನಡೆಯುವ ವಾರ್ಷಿಕೋತ್ಸವ ಮೊದಲಾದುವುಗಳಿಗೆ ತಿಮ್ಮನಿಗೂ ಒಂದು ಆಮಂತ್ರಣ ಬರತೊಡಗಿತು.

ಊರವರು ಅವನ ತಾಯಿಯ ಹತ್ತಿರ ಕೂಡ,- "ನಿಮ್ಮ ಮಗ ಬರೆದ ಕತೆ ಓದಿದೆ. ತುಂಬ ಚೆನ್ನಾಗಿತ್ತು. ಯಾರೋ ದೊಡ್ಡವರು ಬರೆದ ಹಾಗಿತ್ತು ಅಂದ್ರೆ!" ಎಂದು ಆಶ್ಚರ್ಯವನ್ನೂ ಮೆಚ್ಚುಗೆಯನ್ನೂ ವ್ಯಕ್ತಪಡಿಸುತ್ತಿದ್ದರು. ತಾಯಿಯೂ ತಿಮ್ಮನ ಕತೆಗಳನ್ನು ಓದಿಸಿ ಕೇಳಿ ಮೆಚ್ಚಿಕೊಂಡಳಾದರೂ, ತಿಮ್ಮ ಮನೆಗೆ ಬಂದಾಗ ಅವನನ್ನು ಕುರಿತು, ತನ್ನ ಪಲ್ಲವಿಯನ್ನು ಮಾತ್ರ ಹೇಳದೆ ಬಿಡಲಿಲ್ಲ.

ಅದಕ್ಕೆ ತಿಮ್ಮ "ಅಮ್ಮ, ಬರೆಯುತ್ತಾ, ಓದುತ್ತಾ ಇರುವುದರಿಂದ ಮಿದುಳು ಬೆಳೆಯುತ್ತೆಯೇ ಹೊರತು ಕಡುವುದಿಲ್ಲ. ಅದು ಕಬ್ಬಿಣ ಇದ್ದ ಹಾಗೆ. ಕೆಲಸ ಮಾಡಿದಷ್ಟು ಅದಕ್ಕೆ ಹೊಳಪು ಬರುತ್ತೆ. ಆಲೋಚನೆ ಬರುವಾಗ ಬರೆಯದಿದ್ದರೇನೇ ತಲೆ ಕೆಡೋದು" ಎನ್ನುತ್ತಿದ್ದ.

"ಏನು ಲಾಭ?" ಎಂದು ಕೇಳಿದರೆ,- "ಲಾಭವಿಲ್ಲ. ಬದಲಾಗಿ ಖರ್ಚೇ ನಿಜ. ಕಾಗದ ಖರ್ಚು, ಪೋಸ್ಟು ಖರ್ಚು ಎಲ್ಲಾ ಆಗುತ್ತೆ. ಈ ಖರ್ಚನ್ನು ನನ್ನ ಸಂಪಾದನೆಯಿಂದಲೇ ಮಾಡಿಕೊಳ್ಳುತ್ತೇನಲ್ಲವಮ್ಮಾ? ನಾನು ಶಾಲೆ, ಕಾಲೇಜು ಕಲಿಯುತ್ತಿದ್ದರೆ ಎಷ್ಟೋ ಹಣ ಖರ್ಚಾಗುತ್ತಿದ್ದಿಲ್ಲವೆ? ಅದಕ್ಕೆ ಬದಲಾಗಿ ಇದೊಂದಿಷ್ಟು ಆಗುತ್ತೆ ಅಂದುಕೋ ಅಮ್ಮ" ಎನ್ನುವನು.

"ಹುಂ, ಹುಟ್ಟುಗುಣ ಹುಗಿದರೂ ಹೋಗದು" ಎನ್ನುವಳು ಜಲಜಮ್ಮ.

ಬೆಂಕಿ ಪೆಟ್ಟಿಗೆಯ ಕಡ್ಡಿಗಳನ್ನು ಸಹ ಲೆಕ್ಕ ಮಾಡಿ ಉಪಯೋಗಿಸುತ್ತಿದ್ದ ಜಲಜಮ್ಮ, ತಿಮ್ಮನ ಸಂಬಳದ ದುಡ್ಡಿನ ಲೆಕ್ಕವನ್ನು ಕೂಡಾ ಸರಿಯಾಗಿ ವಿಚಾರಿಸದೆ ಬಿಡುತ್ತಿದ್ದಿಲ್ಲ. ಅವನು ಸಂಬಳದ ಹಣವನ್ನು ಹಾಗೆಯೇ ತಾಯಿಗೆ ಕೊಟ್ಟು ಬಿಡುವನು. ಹಾಗಾದರೆ ಇತರ ಖರ್ಚುಗಳಿಗೆಲ್ಲ ಅವನೇನು ಮಾಡುವನು? ಹೊಸ ಸಿನಿಮಾ ಬಂದರೆ ನೋಡದೆ ಬಿಡುವವನಲ್ಲ. ಕಾಗದ, ಪೆನ್ನು, ಪೆನ್ಸಿಲು, ರಬ್ಬರು ಮೊದಲಾದ ಖರ್ಚುಗಳಿಗೆಲ್ಲ ಹಣವಾಗಬೇಕಪ್ಪ?

ಹೌದು. ಇದಕ್ಕೆಲ್ಲಾ ಕದ್ದುಕೊಳ್ಳುತ್ತಿದ್ದನು. ಅದೇನೂ ಪ್ರತ್ಯಕ್ಷ ಕಳ್ಳತನವಲ್ಲ. ನಟರಾಜನ್ ತರಕಾರಿ ತರಲು ದಿನಾ ಎಂಟಾಣೆ ಹತ್ತಾಣೆ ಕೊಡುವರು. ಉಳಿದ ಚಿಲ್ಲರೆಯನ್ನು ಅವರು ವಾಪಾಸು ಕೇಳುವುದೂ ಇಲ್ಲ, ತಿಮ್ಮ ಕೊಡುವುದೂ ಇಲ್ಲ. ಅಪ್ಪಿತಪ್ಪಿ ಕೇಳಿದರೆ "ಸರಿಯಾಯ್ತು" ಎನ್ನುವನು. ಉಳಿದುದನ್ನು ಅವನೇ ತೆಗೆದುಕೊಳ್ಳಲಿ ಎಂಬುದೇ ಅವರ ಭಾವ ಮಾತ್ರವಲ್ಲ. ಅವನ ಕಲೆ, ಕತೆಗಳಿಗೆ ಪ್ರೋತ್ಸಾಹ ಕೊಡುವ ರೂಪದಲ್ಲಿ ಕಾಗದ, ಟಪಾಲು ಖರ್ಚು ಮುಂತಾದುವನ್ನು ಅವರೇ ಕೊಡುವುದೂ ಉಂಟು.

ತಿಮ್ಮನ ಸಂಪಾದನೆಯ ಆಧಾರದಿಂದ ಅವನ ಇಬ್ಬರು ತಂಗಿಯರ ಮದುವೆಯಾಯಿತು. ತಮ್ಮನೊಬ್ಬ ಕಲಿಯುತ್ತಿದ್ದ. "ಅವನು ನನ್ನ ಹಾಗೆ ಆಗಬಾರದು. ಕಲಿಯಲಿ" ಎನ್ನುತ್ತಿದ್ದ ತಿಮ್ಮ.

ಈಗ ಜಲಜಮ್ಮ ಮನೆಯಲ್ಲಿ ಒಬ್ಬಳೇ ಆದಳು. ಹೆಣ್ಣಿನ ಜತೆ ಬೇಕೆನಿಸಿತು. ಅದು ಸೊಸೆಯೇ ಆದರೆ ಎಷ್ಟು ಒಳ್ಳೆಯದು. ತಿಮ್ಮನಿಗೂ ಪ್ರಾಯಬಂದಿದೆ.

ಆದರೆ ತಾಯಿಯ ಆಲೋಚನೆಗೆ ತಿಮ್ಮ ಒಪ್ಪಿಗೆ ಕೊಡಲಿಲ್ಲ. "ಉಹುಂ. ನಾನು ಕೈಯಲ್ಲಿ ಐನೂರು ರೂಪಾಯಿಯನ್ನಾದರೂ ಮಾಡಿಕೊಳ್ಳದೆ ಮದುವೆಯಾಗಲಾರೆ" ಎಂದು ಖಂಡಿತವಾಗಿ ಹೇಳಿಬಿಟ್ಟ.

ಆ ಮೇಲೆ ತಿಮ್ಮ ಪ್ರತಿತಿಂಗಳೂ ತನ್ನ ಸಂಬಳವನ್ನು ತಾಯಿಯ ಕೈಗೆ ಕೊಟ್ಟುಬಿಡುವುದನ್ನು ನಿಲ್ಲಿಸಿಬಿಟ್ಟ. "ನಿನಗೆ ಬೇಕಾದಾಗ ಎಷ್ಟು ಬೇಕೋ ಕೇಳು, ಕಳುಹಿಸುತ್ತೇನೆ" ಎಂದು ಹೇಳಿ, ತನ್ನ ಸಂಬಳವನ್ನು ಸೇವಿಂಗ್ಸ್ ಬ್ಯಾಂಕಿನಲ್ಲಿ ಜಮೆ ಮಾಡತೊಡಗಿದ.

"ಹೌದು. ಮಗ ಬೆಳೆದ. ದೊಡ್ಡವನಾದ. ಅವನೀಗ ಮುದ್ದು ಮಗು ಅಲ್ಲ. ಬುದ್ಧಿಯ ಮಗ. ಇನ್ನು ಅವನೊಡನೆ ಪ್ರತಿ ಕಾಸಿನ ಲೆಕ್ಕವನ್ನೂ ಕೇಳುವುದು ಸರಿಯಲ್ಲ. ಬೇಗದಲ್ಲೇ ಅವನು ಮದುವೆಗೆ ಒಪ್ಪುವ ಹಾಗಾಗಲಿ" ಎಂದುಕೊಂಡಳು ಜಲಜಮ್ಮ.

೪೦

ತನ್ನ ಮದುವೆಯ ವಿಷಯದಲ್ಲಿ ತಿಮ್ಮನ ಮನಸ್ಸು ಹೊಯ್ದಾಡಿಕೊಂಡಿತ್ತು. ಮದುವೆಯಾಗಬೇಕಾದರೆ ಹೆಂಡತಿಯನ್ನು ಕಾಪಾಡುವಷ್ಟು ಶಕ್ತಿ ತನಗಿರಬೇಕು. ಅಂತಹ ಶಕ್ತಿ ತನಗೆ ಹೇಗೆ ಬಂದೀತು? ಅಡಿಗೆ ಕೆಲಸದಲ್ಲಿ ಸಿಗುವ ಸಂಬಳ ಊರಿನ ಖರ್ಚಿಗೇ ಸರಿಹೋಗುತ್ತದೆ. ಪರರ ಮನೆಯಲ್ಲಿ ಹೊಟ್ಟೆ ತುಂಬಿಸಿಕೊಂಡಿರುವ ತನಗೆ ಹೆಂಡತಿಯೊಬ್ಬಳಿರಲು ಹೇಗೆ ಸಾಧ್ಯ? ದುಡುಕಿ ಮಾಡಿಕೊಂಡವನನ್ನು ಬಯ್ಯುವ ... ಮಾನವ ...



ಬಿಡುವುದೆಂದರೇನು? ತಾನು ಎಲ್ಲಿರುವೆನೋ? ಯಾವ ಊರೋ? ಏನು ಕಥೆಯೋ? ಇಂತಹ ತನಗೆ ಮದುವೆಯಂತೆ! ಪಾಪ, ತಾಯಿಗೆ ಇದೆಲ್ಲ ಏನು ಗೊತ್ತು! ಸೊಸೆ ಅಂತ ಒಬ್ಬಳು ಮನೆಗೆ ಬಂದು ತನ್ನ ಹತ್ತಿರವೇ ಕುಳಿತುಬಿಟ್ಟರಾಯಿತು ಅವಳಿಗೆ.

ಆದರೆ ತಾರುಣ್ಯದ ಹಸಿವೆಯನ್ನು ತಣಿಸಲು ತಿಮ್ಮನಿಗೆ ಹೆಣ್ಣು ಬೇಕೆಂಬ ಆಸೆಯೇನೋ ಇತ್ತು. ತಾನು ಯಾವಳನ್ನಾದರೂ ಪ್ರೇಮಿಸಬೇಕೆಂದು ತುಂಬ ಹಾತೊರೆದನು. ಅವಳು ಸುಂದರಿಯಾಗಿರಬೇಕೆಂತಲೂ ಆಸೆಯಿತ್ತು. ಅವನ ಆಸೆಗೆ ತಕ್ಕ ಹಾಗೆಯೇ ನಟರಾಜನ್ [illegible]ವೆಗೆ ಮಗುವನ್ನು ನೋಡಿಕೊಳ್ಳಲಿಕ್ಕಾಗಿ ಒಬ್ಬಳು ಹುಡುಗಿಯನ್ನು ಕೆಲಸಕ್ಕೆ ನಿಯಮಿಸಿಕೊಂಡರು.

ಕ್ರಿಶ್ಚನ್ನಳಾದ ಆ ಹುಡುಗಿಯ ಹೆಸರು ಹೆಲೆನ್. ಅವಳಿಗೆ ಒಬ್ಬ ಅಜ್ಜ ಮಾತ್ರವೇ ಇದ್ದ. ಬಡತನದ ಕಾಟದಿಂದಾಗಿ ಆ ಹುಡುಗಿಯನ್ನು ಅವಳ ಅಜ್ಜ ನಟರಾಜನ್ ಮನೆಯಲ್ಲಿ ಮಗುವನ್ನು ನೋಡಲು ಇಟ್ಟನು. ಊಟ ತಿಂಡಿ ಹೋಗಿ ನೂರು ರೂಪಾಯಿ ಸಂಬಳ ಅವಳಿಗೆ.

ಹೆಲೆನ್ ಬೆಳ್ಳಗೆ ಬಟ್ಟಮೊಗದ ಚೆಲುವೆ. ಲಂಗ ಜಾಕೆಟ್ಟುಗಳೇ ಅವಳ ದಿರಸು. ವಯಸ್ಸು ಹದಿನೆಂಟಾಗಿ ಸರಿಯಾದ ಪ್ರಾಯವೆಂದು ಅವಳ ಎದೆ ಸಾರುತ್ತಿದ್ದಿತು. ರಾತ್ರಿ ಹಗಲೂ ಮನೆಯಲ್ಲೇ ಇರುವವಳು. ಸಂಜೆಯಲ್ಲಿ ಮಗುವನ್ನು ತಳ್ಳುಬಂಡಿಯಲ್ಲಿ ಕೂಡಿಸಿಕೊಂಡು ಒಂದು ಗಾಳಿಸವಾರಿಗೂ ಅವಳು ಒಯ್ಯಬೇಕು. ಆಗ ತಿಮ್ಮನೂ ಅವಳೊಂದಿಗೆ ಮಾತಾಡುತ್ತ ಸಾಗುವನು. ಅವಳ ಶುಭ್ರವಾದ ಹೂವೆಸಳುಗಳಂತೆ ಪದರುಪದರಾಗಿ [illegible] ಲಂಗ ಜಾಕೆಟ್ಟುಗಳೂ ಪೌಡರ್ ರಂಜಿತವಾಗಿ ಸುವಾಸನೆಯನ್ನು ಬೀರುವ ಅವಳ ಮೋಜನ್ನೂ ತಿಮ್ಮನಿಗೆ ಬಹಳ ಮೋಹಕವಾಯಿತು. ಒಡನಾಡಿದರೂ ಮಂಗಳೂರು ನಗರದ ನಾಗರಿಕತೆಯ ವೇಷಕ್ಕೆ ಮನಸೋತ ಹುಡುಗಿ ಹೆಲೆನ್. ಇಲ್ಲಿ ಮಗುವನ್ನು ನೋಡತಕ್ಕ ಅಂತರಂಗದ ಕೆಲಸದವಳಾದುದರಿಂದ, ಅವಳಿಗೆ ಒಳ್ಳೊಳ್ಳೆಯ ದುಸ್ತುಗಳನ್ನೂ ಪರಿಮಳ ದ್ರವ್ಯಗಳನ್ನೂ ಜಾನಕಮ್ಮನೇ ಒದಗಿಸಿದ್ದಳು.

ಹೆಲೆನ್ನಳಿಗೆ ಅಯ್ಯರರ ಸಾಂಬಾರು ಕೂಟುಗಳ ಊಟವನ್ನು ಉಂಡುಂಡು ಬೇಸರವಾಯಿತು. ನಗುನಗುತ್ತ ತಿಮ್ಮನೊಡನೆ ಸಲಿಗೆ ಬೆಳೆಸಿಕೊಂಡಿದ್ದ ಅವಳು, ರಹಸ್ಯವಾಗಿ ಕೋಳಿ ಮೊಟ್ಟೆಗಳನ್ನು ತಂದು ತಿಮ್ಮನಿಗೆ ಕೊಡುತ್ತ, "ಇದನ್ನೊಂದು ಕುದಿಸಿಕೊಡುವಿರಾ ಭಟ್ಟರೆ?" ಎಂದಳು.

ತಿಮ್ಮ ಮೊದಲು ಅಸಹ್ಯಪಟ್ಟರೂ ಅವಳ ಮೋಹಕ ಪ್ರಶ್ನೆಗ ಮರುಳಾಗಿ, ಮನೆಯವರಿಗೆ ತಿಳಿಯದಂತೆ ಗುಟ್ಟಾಗಿ ಕೋಳಿ ಮೊಟ್ಟೆಗಳನ್ನು ಕುದಿಸಿ ಕೊಟ್ಟನು. ಬ್ರಾಹ್ಮಣರು ಗುಟ್ಟಾಗಿ ಕೋಳಿ ಮೊಟ್ಟೆಗಳನ್ನೂ ಮೀನನ್ನೂ ತಿನ್ನುವರೆಂದು ಹೇಳುತ್ತ ತಿಮ್ಮನನ್ನು ಪುಸಲಾಯಿಸಿ ಕೋಳಿ ಮೊಟ್ಟೆಯ ಪಲ್ಯ ಮಾಡುವ ವಿಧಾನವನ್ನೂ ಹೇಳಿ, ಅವನಿಂದ ಅದನ್ನು ಗುಟ್ಟಾಗಿ ಮಾಡಿಸಿ, ತಾನು ತಿನ್ನುತ್ತ, "ರುಚಿ ನೋಡಿ ಭಟ್ರೆ, ಮತ್ತೆ ಕದ್ದು ತಿಂತೀರಿ!" ಎನ್ನುತ್ತ ಅವನ ಬಾಯಿಗೂ ತುರುಕಿ ತಿನ್ನಿಸಿ, "ಎಲ! ನಮ್ಮ ಬಟಾಟೆ ಪಲ್ಯದ ಹಾಗೇ ಇದೆಯಲ್ಲಾ!" ಎನ್ನಿಸಿದಳು. ಆಗ ಮೋಹಪರವಶನಾದ ತಿಮ್ಮ ಅವಳ ಸುಂದರವಾದ ಚೆಂದುಟಿಗಳ ಮೇಲೆ ತನ್ನ ತುಟಿಗಳ ಮುದ್ರೆಯನ್ನು ಒತ್ತಿಬಿಟ್ಟ. ಮತ್ತೇನು? ಸಮಯ ಸಂದರ್ಭಗಳು ಬೇಕಾದಷ್ಟಿದ್ದುವು. ನಟರಾಜನ್ ಆಫೀಸಿಗೆ ಹೋಗುವವರಾಯಿತು. ಪದವೀಧರೆಯಾದ ಜಾನಕಮ್ಮ ಸಾಯಂಕಾಲದ ಹೊತ್ತಿನಲ್ಲಿ ಮಗುವನ್ನು ಹೆಲೆನ್ನಳ ವಶದಲ್ಲಿ ಬಿಟ್ಟು ಲೇಡೀಸ್ ಕ್ಲಬ್ಬಿಗೆ ಹೋಗುವಳು.

ಮನೆಯಲ್ಲಿ ತಿಮ್ಮಾಭಟ್ಟರೂ ಹೆಲೆನ್ನಳೂ ಆಡಿದ್ದೇ ಆಟವಾಗಿತ್ತು. ಆ ಕ್ರಿಶ್ಚನ್ ಸುಂದರಿಯ ಮೋಹಪಾಶಕ್ಕೆ ಬಿದ್ದ ತಿಮ್ಮನ ರೂಪಾಕಾರವೇ ಬದಲಾಯಿತು. ಅವಳ ಸಲಹೆಯಂತೆ ತನ್ನ ಜುಟ್ಟನ್ನು ತೆಗಿಸಿ ಕ್ರಾಪು ಮಾಡಿಸಿಕೊಂಡ. ಅವನ ಅಂಗಿಬಟ್ಟೆಗಳೂ ಸ್ವಲ್ಪ ಜೋರಿನದಾದುವು

ಆದರೆ ತಿಮ್ಮನಿಗೆ ಮನಸ್ಸಿನೊಳಗೇ ಒಂದು ಭಯವಿತ್ತು. ಇವಳಿಗೆ ಎಲ್ಲಿಯಾದರೂ ಹೊಟ್ಟೆ ಗಿಟ್ಟೆ ಬಂದರೆ ತನ್ನ ಗತಿಯೇನಾದೀತು? ಅದಕ್ಕೆ ತಕ್ಕಂತೆ ಹೆಲೆನ್ "ನನ್ನನ್ನು ಮದುವೆ ಮಾಡಿಕೊಂಡು ಬಿಡೀ ಭಟ್ರೆ. ನಮ್ಮ ಜಾತಿಗೇ ಸೇರಿಬಿಡಿ ಭಟ್ರೆ. ನಾನು ಅಜ್ಜನ ಹತ್ತಿರ ಹೇಳ್ತೇನೆ. ಆಗ ನಮ್ಮ ಗುರುಗಳು ನಿಮಗೆ ಸ್ವಲ್ಪ ಹಣವನ್ನೂ ಕೊಡುತ್ತಾರೆ..." ಎಂದು ಹೇಳತೊಡಗಿದಳು. "ನಮ್ಮ ಈ ಪವಿತ್ರ ಪ್ರೇಮವನ್ನು ಕಳಂಕಗೊಳಿಸಬಾರದು" ಎನ್ನುತ್ತಿದ್ದಳು. ಎಷ್ಟೇ ಶುದ್ಧಾತಿಶುದ್ಧ ಬ್ರಾಹ್ಮಣರು ಕ್ರಿಶ್ಚನ್

ಮಾತ್ರಕ್ಕೆ ಸೇರಿ ಮದುವೆಯಾಗಿ ಪರಮಪವಿತ್ರರಾದ ಉದಾಹರಣೆಯನ್ನೂ ಹೇಳಿದಳು. ಸಾಕ್ಷಾತ್ ಅವಳ ತಂದೆಯೇ ಬ್ರಾಹ್ಮಣನಂತೆ. ತಾಯಿ ಕ್ರಿಶ್ಚನ್ನಳಂತೆ. ತಂದೆ ಮತಾಂತರ ಹೊಂದಿ ಅವಳ ತಾಯಿಯನ್ನು ಮದುವೆಯಾದನಂತೆ. ಅದೇ ಮೇಲ್ಪಂಕ್ತಿಯನ್ನು ತಾನೂ ಹಿಡಿಯುವುದಾಗಿ ಅವಳು ನಿಶ್ಚಯಿಸಿರುವಳಂತೆ.

ಅಂಟಿನಲ್ಲಿ ಸಿಕ್ಕ ನೊಣದ ಹಾಗೆ ಅವಳ ಸೌಂದರ್ಯದಲ್ಲಿ ಸಿಕ್ಕಿಕೊಂಡಿದ್ದ ತಿಮ್ಮನಿಗೆ, ಯಾಕಾಗಬಾರದು – ಎನ್ನಿಸಿತು. ಮತಾಂತರ ಹೊಂದುವುದಕ್ಕೆ ತನಗೆ ಅಡ್ಡ ಬರುವವರಾರು? ತಾಯಿ, ತಾಯಿಯೊಬ್ಬಳೇ ತಾನೆ? ಉಳಿದ ಯಾರದೂ ತಿಮ್ಮನಿಗೆ ಲಕ್ಷ್ಯವಿಲ್ಲ. ತಾಯಿಗೆ ಆಗಾಗ ಹಣ ಕಳುಹಿಸುತ್ತಾ ಇದ್ದರೆ ಆಯಿತಲ್ಲ?

ಆದರೆ ಹಣ? ಹಣವೆಲ್ಲಿ ಸಿಕ್ಕೀತು? ಹೇಗೆ ಸಿಕ್ಕೀತು? ಈ ಬಗೆಯ ಬ್ರಾಹ್ಮಣತನದ ಅಡಿಗೇ ಕೆಲಸ ಮತ್ತೆ ಮಾಡುವಂತಿಲ್ಲ. ಕ್ರೈಸ್ತನಾಗಿ ದೊರೆಗಳ ಮನೆಯಲ್ಲಿ ಮಾಂಸಗಳ ಅಡಿಗೇ ಮಾಡುತ್ತ ನರಕವಾಸ ಪಡೆಯಬೇಕಾದ್ದೇ ಅಲ್ಲವೆ?

ಏನೂ ಮಾಡಲು ಶಕ್ತಳಲ್ಲದ ತಾಯಿ ದಿನಾ ಶಾಪ ಕೊಟ್ಟಾಳು. ತಾಯಿ ಮಗನಿಗೆ ಶಾಪ ಕೊಡದಿದ್ದರೂ ಅವಳು ಅನುಭವಿಸುವ ವ್ಯಸನವೇ ಶಾಪದ ಹಾಗೆ ತನ್ನನ್ನು ಬಾಧಿಸೀತು.

ಮಾತೃದ್ರೋಹ, ಮಹಾಪಾಪ!

ಮಾಂಸದ ಅಡಿಗೇಮನೆ, ನರಕವಾಸ! ಇದನ್ನು ನೆನೆದರೇ ವಾಕರಿಕೆ ಬರುತ್ತದೆ.

ನೀನೆ ಹೇಳು

In the land of the Kama Sutra
Kissing is an import from the West, they say
ಒಪ್ಪುವೆಯಾ ನೀನು?
ಕಿಸ್ಸಿಗೂ ಬೇಕೆ ಲೈಸೆನ್ಸು?

ವ್ಯೋಮರೆತು ಮಲಗಿದ್ದಿ
ವ್ಯೋಮಲೆತು ಎದ್ದಿ
ವಾತ್ಸ್ಯಾಯನನ ನೆನಪು ನಿನಗಾಗ ಬಂದಿತ್ತೆ?
ಹೇಳು, ಇದು ಕಳವಲ್ಲ; ಮುಚ್ಚುಮರೆಯೇಕೆ?
ಏನು, ಅದ ಹೇಳಲು ಭಾಷ್ಯದ್ದನೇ ಬೇಕೆ?

ನೀನು
ಆದಿಯಲ್ಲ ಅಂತ್ಯವಲ್ಲ, ಮಧ್ಯಬಿಂದು
ಕಾಯಿಯಲ್ಲ ಹಣ್ಣು ಅಲ್ಲ, ಪಾಡು
ಪಾಡನೆಂತು ಸವಿಯಲೆಂದು ಅವರಿವರ ಕೇಳಬೇಕೆ?
ಹೇಳು, ಇದು ಕಳವಲ್ಲ; ಮುಚ್ಚುಮರೆಯೇಕೆ

— ನಾಥನ ನಾ. ಮಹಿಸಿ

೪೧

ಪುಣ್ಯಕಾಲ! ಆ ಸಂದಿಗ್ಧ ಪರಿಸ್ಥಿತಿಯಲ್ಲಿ ನಟರಾಜನ್ನಿಗೆ ಬಳ್ಳಾರಿಗೆ ವರ್ಗವಾಯಿತು. ತಿಮ್ಮನೂ ಅವರೊಂದಿಗೆ ಬಳ್ಳಾರಿಗೆ ಹೋದ. ಅಲ್ಲಿಗೆ ಹೆಲೆನ್ನಳ ಪೀಡೆ ಬಿಟ್ಟುಹೋಯಿತು. ಹೊರಡುವಾಗ ಜಾನಕಮ್ಮ ಹೆಲೆನ್ನಳಿಗೆ ಕೊಟ್ಟ ಬಹುಮಾನ ವಸ್ತುಗಳಿಂದ ಸಂತೋಷಪಟ್ಟ ಅವಳು ತಿಮ್ಮನಿಂದ ಮದುವೆಯನ್ನು ಕುರಿತು ಯಾವ ಭರವಸೆಯನ್ನೂ ಕೇಳಲಿಲ್ಲ.

ಬಳ್ಳಾರಿಗೆ ಹೋದ ತಿಮ್ಮ ಸುಲಭವಾಗಿಯೇ ಹೆಲೆನ್ನಳನ್ನು ಮರೆಯಲು ಸಮರ್ಥನಾದ. ಅಲ್ಲಿ ಅವನ ಅಡಿಗೆ, ಬರವಣಿಗೆ, ಪತ್ರಿಕೆಗಳು ಮುಂತಾದ ಅವನ ಸ್ವಂತ ಕೆಲಸಗಳೇ ಅವನಿಗೆ ಸರಿಯಾದುವು. ಬೇಕಾದಾಗ ದೇಹದ ಹಸಿವೆಗೂ ಯಾವಳೋ ಒಬ್ಬಳು ಸಿಕ್ಕೇಸಿಗುತ್ತಿದ್ದಳು.

ಬಳ್ಳಾರಿಯಲ್ಲಿ ಎರಡು ವರ್ಷವಿದ್ದ ಮೇಲೆ ನಟರಾಜನ್ ಜತೆಯಲ್ಲಿಯೇ ಮದರಾಸಿಗೂ, ಅಲ್ಲಿಂದ ಕೊಡೈಕ್ಯಾನಲ್, ತಿರುನಲ್ವೇಲಿ, ಮಧುರೆ ಮುಂತಾದ ಊರುಗಳಿಗೂ ಹೋದನು. ಅವನ ಯಜಮಾನರೂ ಬದಲಾವಣೆಯಾದರು. ಕೆಲವು ತಿಂಗಳು ಉಪಾಯವಿಲ್ಲದೆ ಹೋಟಿಲುಗಳಲ್ಲಿಯೂ ಅಡಿಗೆ ಮಾಡಿದನು. ಆದರೆ ಹೋಟಿಲು ಕೆಲಸ ಅವನಿಗೆ ಹಿಡಿಸಲಿಲ್ಲ ಅಂತೆಯೇ ದೊಡ್ಡ ಅಧಿಕಾರಿಗಳ ಮನೆಯ ಅಡಿಗೆಯವನಾಗಿಯೇ ಕಾಲ ದೂಡುತ್ತಿದ್ದನು.

ಅವನು ಅಡಿಗೇ ಮಾಡುತ್ತಿರುವ ಮನೆಯ ಅಡಿಗೇ ಕೋಣೆಯೊಂದು ಚಿತ್ರಶಾಲೆಯಾಗುತ್ತಿತ್ತು ಸಾಹಿತ್ಯ ಶಾಲೆಯಾಗುತ್ತಿತ್ತು. ತಮಿಳು ನಾಡಿನಲ್ಲಿದ್ದು ತಮಿಳು ಭಾಷೆಯನ್ನೂ ಕಲಿತು, ತಮಿಳು ಗ್ರಂಥಗಳನ್ನೂ ಸಾಕಷ್ಟು ಓದಿದನು. ಹಾಗೆಯೇ ಕರ್ನೂಲು, ನೆಲ್ಲೂರು ಮುಂತಾದ ತೆಲುಗು ದೇಶಗಳಿಗೂ ಅಡಿಗೆಗಾರನಾಗಿ ಹೋಗಿ ತೆಲುಗು ಸಾಹಿತ್ಯವನ್ನೂ ಸಾಕಷ್ಟು ಅಭ್ಯಾಸ ಮಾಡಿದನು.

ಇದರಿಂದಾಗಿ ಅವನ ಕನ್ನಡ ಸಾಹಿತ್ಯಕೃಷಿ ಕುಂಠಿಸಲಿಲ್ಲ; ಬದಲಾಗಿ ಕಳೆಗೊಂಡಿತು. ಕನ್ನಡದಲ್ಲಿ ಕತೆ ಕವಿತೆಗಳನ್ನು ಬರೆಬರೆದು ಪತ್ರಿಕೆಗಳಿಗೆ ಕಳುಹಿಸುತ್ತಲೇ ಇದ್ದನು. ಅನೇಕ ಕನ್ನಡ ಪತ್ರಿಕೆಗಳು ಅವನಿಗೆ ಪುಕ್ಕಟೆ ಬರುತ್ತಾ ಇದ್ದುವು. ಅನೇಕ ಸಾಮಾಜಿಕ ಐತಿಹಾಸಿಕ ಕಾದಂಬರಿಗಳನ್ನು ಸಚಿತ್ರವಾಗಿ ಬರೆದು ಪೆಟ್ಟಿಗೆಯೊಳಗಿಟ್ಟುಕೊಂಡನು. ಅವನ ಹಾಸ್ಯಚಿತ್ರಗಳು ಕೂಡ ಆಗಾಗ ಪತ್ರಿಕೆಗಳಲ್ಲಿ ಬರುತ್ತಿದ್ದುವು. ಅವನ ಹಾಸಿಗೆಯ ಕಟ್ಟಿಗಿಂತಲೂ ಪುಸ್ತಕದ ಕಟ್ಟು ದೊಡ್ಡದಾಯಿತು.

ತಿಮ್ಮನೀಗ ಮೊದ್ದು ಮಗುವಲ್ಲ. ಅವನ ತಂದೆ ಕಂಡ ಕನಸನ್ನು ನಿಜಗೊಳಿಸುವಂತಹ ಬುದ್ಧಿಯ ಮಗ. ಪಾಠಶಾಲೆಯಲ್ಲಿ ಕಲಿಯದೆ ಲೋಕಶಾಲೆಯಲ್ಲಿ ಕಲಿತು ಬುದ್ಧಿವಂತನೆನಿಸಿದ. ಎರಡು ದಿನಕ್ಕೊಮ್ಮೆ ಮುಖ ಕ್ಷೌರಮಾಡಿಕೊಳ್ಳುತ್ತಿದ್ದಾನೆ. ಚುರುಕುತನವನ್ನೂ ಉತ್ಸಾಹವನ್ನೂ ಸೂಚಿಸುವ ಕೆಳ್ಳಗಿನ ಆರೋಗ್ಯದ ದೇಹ ಮಳೆ ಬಿಸಿಲು ಚಳಿಗಳೊಂದಿಗೆ ಸಮರಸನಾಗಿ ಬೆರೆಯುವಂತಹ ಪ್ರಕೃತಿ. ಸದಾ ಕಾರ್ಯತತ್ಪರ. ವಿಶ್ರಾಂತಿ ವೇಳೆಯಲ್ಲಿ ವಾಚನ ಕೃತಿರಚನೆ. ಅವನು ಯಾವ ಭಾಷಾ ಪ್ರಾಂತದ ಅಡಿಗೇ ಮನೆಯಲ್ಲಿದ್ದರೂ ಅಲ್ಲಿ ಇತರ ಸಾಹಿತ್ಯಗಳೊಂದಿಗೇ ಕನ್ನಡ ಸಾಹಿತ್ಯವೇ ಅಗ್ರಗಣ್ಯವಾಗಿರುತ್ತಿತ್ತು. ಅವನ ಕಾದಂಬರಿಗಳು, ಕಥಾಸಂಗ್ರಹಗಳು ಒಂದೊಂದೇ ಹೊರಗೆ ಬಿದ್ದು ಕನ್ನಡ ನಾಡಿನಲ್ಲಿ ಪ್ರಚಾರವಾದುವು. ತಾನೊಬ್ಬ ಅಡಿಗೆಯವನೆಂದು ಗೊತ್ತಾಗದ ಹಾಗೆ "ಕನ್ನಡ ಕಂದ" ಎಂದು ಸಂಕೇತ ನಾಮವನ್ನಿಟ್ಟುಕೊಂಡಿದ್ದನು. ಒಂದೊಂದು ಪುಸ್ತಕಕ್ಕೆ ಪ್ರಕಾಶಕರಿಂದ ಅವನಿಗೆ ದೊರೆತ ಪ್ರತಿಫಲ ೩೦, ೩೫ ರೂಪಾಯಿಗಳಷ್ಟೇ ಆದರೂ ಸಿಕ್ಕಿದ್ದು ಸಾಕು. ನಾನು ಬರೆದುದನ್ನು ನಾಲ್ಕು ಮಂದಿ ಓದಿ ಸಂತೋಷ

ಪಡುವ ಹಾಗಾಯಿತು!" ಎಂಬುದೇ ಅವನ ಸಂತೃಪ್ತಿ ಮಧ್ಯನು ತರಗತಿಯ. ಸಾಲುಗಳಲ್ಲಿ ಅವನೂ ಒಬ್ಬನೆಂದು ಗಣ್ಯನಾಗಿ, ಸಾಹಿತ್ಯ ಪ್ರಪಂಚದಲ್ಲಿ ಒಂದು ಸ್ಥಾನವನ್ನೂ ಗಳಿಸಿಕೊಂಡನು "ಕನ್ನಡ ಕಂದ" ತಿಮ್ಮ.

ಅದೊಂದು ಕನ್ನಡಿಗ ರಾಯರ ಮನೆಯಲ್ಲಿ ತಿಮ್ಮ ಬಹಳ ಅಚ್ಚುಮೆಚ್ಚಿನ ಅಡಿಗೆಯವನಾಗಿದ್ದ. ಅಲ್ಲಿಯ ಅಮ್ಮನವರು ಒಮ್ಮೆ ಅವನನ್ನು ಕರೆದು, "ಯಾಕೊ ತಿಮ್ಮಾಚಾರ್ರೆ ನೀವು ಇನ್ನೂ ಮದುವೆ ಮಾಡಿಕೊಳ್ಳಲಿಲ್ಲ?" ಎಂದು ಪ್ರಶ್ನಿಸಿದರು.

ಅದಕ್ಕೆ ತಿಮ್ಮ ನಗುತ್ತ, "ನಾನು ಮದುವೆಯಾಗಿ ಏನು ಮಾಡಲಮ್ಮಾ? ಈ ಮದರಾಸು ನಗರದಲ್ಲಿ ಹೆಂಡತಿಯನ್ನು ಕಾಪಾಡುವಷ್ಟು ವರಮಾನ ಬೇಕಲ್ಲಮ್ಮಾ" ಎಂದ.

"ಅದು ಯಾಕೆ ಹಾಗಂತೀರಿ ಆಚಾರ್ರೇ? ನೀವು ನಿಮ್ಮ ಹೆಂಡತೀನೊಟ್ಟಿಗೆ ನಮ್ಮಲ್ಲೇ ಇರಬೇಕೆಂಬುದೇ ನಮ್ಮ ಇಚ್ಛೆ! ನನಗೆ ಹಾಗೂ ನನ್ನ ಜತೆಯಲ್ಲಿರಲು ಒಂದು ಹೆಣ್ಣಾಳು ಬೇಕೇ ಬೇಕು. ಒಳಗಿನ ಜನವೇ ಆದರೆ ಎಷ್ಟು ಒಳ್ಳೇದು! ಅಲ್ಲದೆ ನಿಮ್ಮ ಕೈ ಹಿಡಿದವಳ ಪುಣ್ಯದಿಂದಲೂ ಮುಂದೆ ನಿಮಗೆ ಒಳ್ಳೇ ವರಮಾನ ಬರುವ ಹಾಗೂ ಆಗುತ್ತೆ. ನನ್ನ ಮಾತು ಸುಳ್ಳಾಗೋದಿಲ್ಲ ಆಚಾರ್ರೇ" ಎಂದರು ಅಮ್ಮನವರು.

ಈ ಮಾತು ತಿಮ್ಮನ ಮನಸ್ಸಿನಲ್ಲಿ ಕೆಲಸ ಮಾಡತೊಡಗಿತು.

ಅದು ತಿಮ್ಮ ಮೂರು ವರ್ಷಗಳಿಂದ ಕೆಲಸ ಮಾಡುತ್ತಿರುವ ಮನೆ. ಆ ಮನೆಯವರು ಅವನ ಮೇಲೆ ತುಂಬ ಅಭಿಮಾನ ಗೌರವ ಎಲ್ಲ ಇಟ್ಟಿದ್ದರು. ಅಮ್ಮನವರಿಗೆ ಒಂದು ಬಗೆಯ ಶ್ರೀಮಂತ ಕಾಯಿಲೆ. ರಾಯರು ಆಫೀಸಿಗೆ ಹೋದ ಮೇಲೆ, ಯಾವಾಗಲೂ ಅಮ್ಮನವರ ಹತ್ತಿರವೇ ಕುಳಿತಿರಲು ಹೆಣ್ಣಾಳು ಬೇಕೇ ಬೇಕು. ಅದಕ್ಕಾಗಿಯೇ ಅವರು ತಮ್ಮ ತಿಮ್ಮಾಚಾರ್ರ ಹೆಂಡತಿಯನ್ನೆ ಆಶಿಸುತ್ತಿದ್ದಾರೆ.

ತಿಮ್ಮನಲ್ಲಿ ಅದುವರೆಗೆ ಸುಪ್ತವಾಗಿದ್ದ ಮದುವೆಯ ಬಯಕೆ ಕೆರಳಿತು. ಅವನ ತಾಯಿಯಂತೂ ಆಗಾಗ ಅವನ ಮದುವೆಯ ಪ್ರಸ್ತಾಪ ಮಾಡುತ್ತಲೇ ಇದ್ದಳು. ಮಗನು ಸೂಚ್ಯವಾಗಿ ತಿಳಿಸಿದ ಭಾವವನ್ನು ನೋಡಿ ತಾಯಿಗೆ ಸಂತೋಷವಾಯಿತು. ಎಷ್ಟು ಪ್ರಯತ್ನ ಮಾಡಿದರೂ ಜಾತಕದಲ್ಲಿ ಗುರುಬಲ ಬಾರದೆ ಮದುವೆಯಾಗುವುದಿಲ್ಲವಂತೆ. ತಿಮ್ಮನಿಗೆ ಮದುವೆಯ ಮನಸ್ಸಾಗುತ್ತಲೇ ಗುರುಬಲ ಬಂದುದಕ್ಕೆ ಗುರುತೆಂದು ಅವನ ತಾಯಿ ತಿಳಿದುಕೊಂಡು "ಕೂಡಲೇ ಹೊರಟು ಬಾ, ಹುಡುಗಿ ತಯಾರಿದೆ" ಎಂದು ಅವನಿಗೆ ಕಾಗದ ಹಾಕಿದಳು.

ಒಂದು ತಿಂಗಳಲ್ಲಿ ಹೆಂಡತಿಯೊಂದಿಗೇ ಬರುವುದಾಗಿ ಅಮ್ಮನವರಿಗೆ ಹೇಳಿ ತಿಮ್ಮನೂ ಊರಿಗೆ ಹೊರಟುಬಿಟ್ಟ.

ಕತೆ, ಕಾದಂಬರಿ, ಸಿನಿಮಾಗಳನ್ನು ನೋಡುತ್ತ ಸ್ವತಃ ಕತೆಗಾರನೆನಿಸಿಕೊಳ್ಳಬೇಕೆಂದು ಆಗಿದ್ದ ತಿಮ್ಮ, ತಾನು ಒಬ್ಬಳನ್ನು ಪ್ರೇಮಿಸಿ ಮದುವೆಯಾಗಬೇಕೆಂದು ಬಯಸಿದ್ದನು. ಆದರೆ ಅದುವರೆಗಿನ ಅವನ ಅನುಭವದಿಂದ ಪ್ರೇಮವೆಂಬುದೆಲ್ಲ ಕತೆ ಕಾದಂಬರಿಗಳಲ್ಲಿಯ ಊಹೆ! ಕಲ್ಪನೆಗಳ ಸಂಗತಿ, ಅದಕ್ಕೂ ತನಗೂ ಬಹಳ ದೂರ; ಹೋಗಲಿ, ತನ್ನ ಹೆಂಡತಿ ಸುಂದರಿಯಾಗಿಯಾದರೂ ಇದ್ದರೆ ಸಾಕಲ್ಲ, ಆ ಮೇಲೆ ಅವಳನ್ನು ರಾಣೀ, ವಾಣೀ, ವೇಣೀ ಅಂದುಕೊಂಡು ಪ್ರೇಮಿಸಿಕೊಂಡರಾಯಿತು ಎಂದುಕೊಂಡ.

ಅವನ ತಾಯಿ ಜಲಜಮ್ಮ ಮೊದಲೇ ಒಂದು ಹುಡುಗಿಯನ್ನು ನೋಡಿಯೇ ಇಟ್ಟಿದ್ದಳು. ಜಾತಕವೂ ಕೂಡಿತ್ತು. ಅವಳನ್ನು ಬಾಲೆಯಾಗಿ ತಿಮ್ಮನು ನೋಡಿದ್ದನಾದುದರಿಂದ ಆಗ ಬಹುದೆನಿಸಿತು. ತೀರ ಬಡ ಹುಡುಗಿ. ಬೆಳ್ಳಗೆ ಕೆಂಪಗೆ ಸುಂದರಿಯಾಗಿದ್ದಳು. ರೈಲಿನಲ್ಲಿ ಬರುವಾಗ ತಾಯಿ ಸೂಚಿಸಿರುವ ಆ ಹುಡುಗಿಯನ್ನೇ ನೆನೆದುಕೊಳ್ಳುತ್ತಿದ್ದನು ಈಗ ಬೆಳೆದು ಹೇಗಾಗಿದ್ದಾಳೋ...! ಅವಳ ಹೃದಯಕ್ಕೆ ಎರೆಯಲು ತನ್ನ ಹೃದಯದಲ್ಲಿ ಪ್ರೇಮರಸವನ್ನು ಆದಷ್ಟು ತುಂಬಿಸಿಕೊಳ್ಳುತ್ತ ಮನೆಗೆ ಬಂದ ತಿಮ್ಮ.

ಆದರೂ ಪದ್ಧತಿಯಂತೆ ಹುಡುಗಿಯನ್ನು ನೋಡುವ ಕ್ರಮವನ್ನು ನಡೆಸಬೇಕಿತ್ತು. ತಿಮ್ಮ ತನ್ನ ಬಾವಯ್ಯನೊಂದಿಗೆ ಹುಡುಗಿ ನೋಡಲು ಅವರ ಮನೆಗೆ ಹೋದ. ಹೀಗೆ ಹುಡುಗಿಯನ್ನು ನೋಡಲು ಬರುವವರು ಮುಂದಾಗಿ ಅವರಿಗೆ ತಿಳಿಸುವ ಪದ್ಧತಿಯಿರಲಿಲ್ಲ. ಹಾಗೆ ತಿಳಿಸಿದರೆ ಅವರು ಶುಭ ಶಕುನಗಳನ್ನೇ ಪಡಿಸಿಕೊಂಡು ಸಿದ್ಧವಾಗಿರುವರೆಂದೂ, ಹುಡುಗಿಯನ್ನು ಅಲಂಕಾರಗೊಳಿಸಿ ಕೃತ್ರಿಮವಾಡುವರೆಂದೂ ಭಾವಿಸಲಾಗುತಿತ್ತು.

ತಿಮ್ಮ ಆ ಮನೆಗೆ ಬರುವಾಗ ಹುಡುಗಿ ತಲೆ ಬಾಚಿಕೊಳ್ಳಲಿಕ್ಕಾಗಿ ಕೂದಲಿಗೆ ಎಣ್ಣೆ ತೀಡಿಕೊಂಡು ಕುಳಿತಿದ್ದಳು. ತಿಮ್ಮನನ್ನು ನೋಡಿದ ಕೂಡಲೆ ಹುಡುಗಿ ಎದ್ದು ಒಳಗೆ ಓಡಿಹೋಯಿತು. ಆ ವೇಳೆ ಅವಳ ತಾಯಿ ಬಂದವರಿಗೆ ಚಾಪೆ ಹಾಸಿ, ಒಳಗೆ ಹೋಗಿ ಹುಡುಗಿಯ ಕೈಯಲ್ಲಿ ಬೆಲ್ಲ ನೀರು ಕೊಟ್ಟು ಕಳುಹಿಸಿದಳು. ಬಿಚ್ಚಿದ ತಲೆಯನ್ನು ಗಂಟು ಹಾಕಿಕೊಂಡು ಹುಡುಗಿ ಬೆಲ್ಲ ನೀರುಗಳನು ತಂದಿಟ್ಟು ಒಳಕ್ಕೆ ಜಾರಿಕೊಂಡಿತು.

ಹೀಗೆ ಸುಳಿದು ಹೋದ ಕನ್ಯೆಯ ಸಹಜ ಸೌಂದರ್ಯವು ತಿಮ್ಮನ ಹೃದಯಕ್ಕೆ ಮುದಾನಿಲ ಬೀಸಿದಂತಾಯಿತು.

ತಾಯಿ ಹುಡುಗಿಯ ವಿದ್ಯೆಯನ್ನು ಕುರಿತು, "ಮೂರನೇ ಕ್ಲಾಸು ಕಲಿತಿದ್ದಾಳೆ" ಎಂದು ಹೇಳಿ, ಅಡಿಗೆ ಮನೆಗೆಲಸ ಮೊದಲಾದುವುಗಳಲ್ಲಿ ಬಹಳ ಗಟ್ಟಿಗಿತ್ತಿಯಾಗಿದ್ದಾಳೆಂದು ವಿವರಿಸಿದಳು. "ಇನ್ನೆಂಟು ದಿನದೊಳಗೇ ಮದುವೆಗೆ ಮುಹೂರ್ತವಿದೆ. ಬೇಗನೇ ತೀರಿಸಿಬಿಡಬೇಕು. ನಾನು ಈ ಕಾಯಿಲೆಯಿಂದ ಮೇಲೇಳುವೆನೋ ಇಲ್ಲವೋ ನನಗೆ ಕುಜ-ರಾಹು ಸಂಧಿ ಹ್ಯಾಗಾಗುತ್ತೋ! ಆದಷ್ಟು ಬೇಗನೇ ಮಗಳ ಮದುವೆ ಮುಗಿಯಬೇಕು" ಎಂದರು ಹುಡುಗಿಯ ತಂದೆ. ತಿಮ್ಮನಿಗೂ ಅವಸರವಿತ್ತು.

ಅಲ್ಲಿಂದ ಹಿಂದಿರುಗಿ ಬರುವಾಗ ಬಾವಯ್ಯ ಸ್ವಲ್ಪ ಮುಖ ಸೊಟ್ಟ ಮಾಡಿ, "ನಾವು ಹೋಗುವಾಗ ಹುಡುಗಿ ಎಣ್ಣೆ ಹಚ್ಚಿಕೊಳ್ಳುತ್ತಿತ್ತು. ಅದು ಶುಭ ಶಕುನವಲ್ಲ. ಸ್ವಲ್ಪ ಯೋಚಿಸಬೇಕಾದ ವಿಷಯವಿದು" ಎಂದು ಅಡ್ಡ ಮಾತಾಡಿದರು.

"ಅದೆಲ್ಲ ಸುಮ್ಮನೆ ಬಾವಾ. ಮುಂದುವರಿಸಿಬಿಡೋಣ ಕೆಲಸ" ಎಂದ ತಿಮ್ಮ.

ಮುಹೂರ್ತ ದಿನ ನಿಶ್ಚಯವಾಯಿತು. ಇನ್ನು ವೀಳ್ಯ ಬದಲಾಯಿಸಿಕೊಳ್ಳುವ "ನಿಶ್ಚಿತಾರ್ಥ"ದ ದಿನವೂ ಗೊತ್ತು ಮಾಡಲ್ಪಟ್ಟಿತು. ಅದಾದ ಮೇಲೆ ನಾಂದಿ ಇಟ್ಟು ಮದುವೆ ಜರುಗಿಸುವುದು ಪದ್ಧತಿ.

ಆದರೆ ನಿಶ್ಚಿತಾರ್ಥದ ದಿನ ಬೆಳಗ್ಗಿನ ಹೊತ್ತಿನಲ್ಲಿ ಹುಡುಗಿಯ ತಂದೆ ಕಣ್ಣು ಮುಚ್ಚಿದರೆಂಬ ಸುದ್ದಿ ಬಂತು. "ಸತ್ತ ಮನೆಯಿಂದ ಇನ್ನೊಂದು ವರ್ಷದವರೆಗೆ ಹುಡುಗಿ ತರಲು ಸಾಧ್ಯವಿಲ್ಲ. ಇದು ಶಾಸ್ತ್ರ" ಎಂದರು ಹಿರಿಯರು.

ಆಗ ಆ ಹುಡುಗಿಯ ಚಿಕ್ಕಪ್ಪ ಬಂದು, "ಉತ್ತರ ಕ್ರಿಯೆಗಳೆಲ್ಲ ಮುಗಿದು ಶುದ್ಧವಾದ ಮೇಲೆ ಮದುವೆ ಮಾಡುವ. ಬೇರೆ ಯೋಚನೆ ಮಾಡಬೇಡಿ. ಕಾಲ ಬದಲಾಗುತ್ತ ಬರುವಾಗ ಹಳೇ ಸಂಪ್ರದಾಯಕ್ಕೆ ನೇತಾಡಿಕೊಳ್ಳುವುದರಲ್ಲಿ ಅರ್ಥವಿಲ್ಲ' ಎಂದು ತುಂಬಾ ಬೋಧನೆ ಮಾಡಿದರು. ಅವರಿಗೆ ಈ ವರ ತಪ್ಪಬಾರದೆಂದೇ ಇತ್ತು. ತಿಮ್ಮನಿಗೂ ಆ ಹುಡುಗಿಯ ಮೇಲೆ ಆಶೆಯೇ. ತಾಯಿ, ಮಾವ, ಬಾವ, ಅಣ್ಣ ಮೊದಲಾದವರ ಮುಖಗಳನ್ನೂ ನೋಡಿದ

ಮಾವನೂ ಬಾವನೂ ಬಲವಾಗಿ ಖಂಡಿಸಿದರು. "ಮೊದಲೇ ಶಕುನ ಚೆನ್ನಾಗಿರಲಿಲ್ಲ. ನೋಡಿದಿಯಾ ಅದರ ಪರಿಣಾಮ? ನಿನಗೆ ಆ ಹುಡುಗಿಯ ಪ್ರಾಪ್ತಿಯಿಲ್ಲ ತಿಮ್ಮಾ, ಬೇರೆ ನೋಡೋಣ. ಸಿಕ್ಕಿದರೆ ಈ ತಿಂಗಳಲ್ಲೇ ಮದುವೆ ಮಾಡೋಣ. ಈ ಹುಡುಗಿಯ ಮಾತು ಮರೆತುಬಿಡು." ಎಂದರು ಬಾವ.

"ಆ ಹುಡುಗಿ ಕೆಟ್ಟ ಗಳಿಗೇಲಿ ಹುಟ್ಟಿರಬೇಕಂತೆ. ಮದುವೆ ಆಗಲಿ ಅಂತ ಜಾತಕ ಬದಲಾಯಿಸಿದ್ದಾರಂತೆ? ಆ ಕೆಡುಕನ್ನೇ ಶಕುನ ಸೂಚಿಸುತ್ತಿದೆಯಾ?" ಎಂದರೊಬ್ಬರು ಜಲಜಮ್ಮನ ಕಿವಿಯಲ್ಲಿ.

"ಬಹುಶಃ ನಿನಗೆ ಬೇರೆ ಹುಡುಗೀನೇ ಗೊತ್ತು ಮಾಡಿದ್ದಾನೆ ಮಗಾ" ಎಂದಳು ಜಲಜಮ್ಮ.

"ಹೀಗೆಲ್ಲಾ ಮೂಢ ನಂಬಿಕೆಗೆ ಜೋತು ಕೊಂಡರೆ ಹೇಗಪ್ಪಾ! ಬರೀ ರಗಳೆ!" ಎಂದ ಸಿಡುಕಿನಿಂದ ತಿಮ್ಮ.

"ಅವನಿಗೆ ಆ ಹುಡುಗೀ ಮೇಲೆ ತುಂಬ ಇಷ್ಟ ಪಾಪ. ನಮ್ಮ ರಿಷೀ ಮೇಲೇ ಭಾರ ಹಾಕಿ ಬಿಡೀ ಅಂದ್ರೆ ಎಷ್ಟೋ ಮದುವೆಗಳನ್ನು ಮಾಡಿಸಿದ್ದೀರಿ ಮಹಾತಾಯಿ ಚಿತ್ರಪುರದ ದೇವಿಗೆ ಹೊರೆಟ್ಟಿ ಹಾಕಿ ನೋಡಿಬಿಡಿ. ಬೇರೆ ಯೋಚನೆ ಬೇಡ' ಎಂದರು ಆಚೀಮನೆ ಅತ್ತೆ.

"ಹೀಗಿದ್ದು ಹಾಗೇ ನೋಡುವ" ಎಂದಳು ಜಲಜಮ್ಮ.

ತಿಮ್ಮನೂ ಅದನ್ನು ಸಮರ್ಥಿಸಿದ. "ಹೂ ಕಟ್ಟಿ ಹಾಕ ಸರೀ ಅಂತ ಕಂಡರೆ ಬೇರೆ ಸೊಲ್ಲು ಸೊಟ್ಟೇ ಅಂತ ಯಾರೂ ಏನೂ ಹೇಳಕೂಡದು" ಎಂದು ಎಲ್ಲರಿಗೂ ನಿಬಂಧನೆಯನ್ನೂ ಹಾಕಿದ ತಿಮ್ಮ.

ಆ ಪ್ರಾಂತದಲ್ಲಿ ಅದೊಂದು ಪದ್ಧತಿಯೂ ಇತ್ತು. ಮದುವೆಯ ವಿಷಯದಲ್ಲಿ ಏನಾದರೂ ಸಮಸ್ಯೆ ಅಡ್ಡ ಬಂದಾಗ, ಚಿತ್ರಾಪುರದ ದೇವಿಗೆ ಕೆಂಪು–ಬಿಳಿಯ ಹೂಗಳನ್ನು ಸಮರ್ಪಿಸಿ "ನಿನ್ನ ಚಿತ್ತ ಹೇಗೋ ಹಾಗೆ ದೇವೀ. ದಯೆ ದೋರು!" ಎಂದು ಪ್ರಾರ್ಥಿಸಿಕೊಂಡು ನಿಂತಾಗ ಸಾಧಕವೆನಿಸುವುದಾದರೆ ಬಿಳಿಯ ಹೂವೂ, ಬಾಧಕವೆನಿಸುವುದಾದರೆ ಕೆಂಪು ಹೂವೂ ದೇವಿಯ ಮೇಲಿನಿಂದ ಕೆಳಕ್ಕೆ ಉದುರುತ್ತದೆ.

ಆ ಪ್ರಕಾರವಾಗಿ ನೋಡಿದಾಗ ತಿಮ್ಮನ ಪಾಲಿಗೆ ಕೆಂಪು ಹೂವೇ ಬಿತ್ತು!

"ಆ ಹುಡುಗಿಯ ನೆನಪನ್ನು ಬಿಡು" ಎಂದು ದೇವಿಯೇ ಅವನಿಗೆ ಹೇಳಿಬಿಟ್ಟಳು.

ಬಾವ ಗೆಲುವಿನಿಂದ ಕಣ್ಣರಳಿಸಿ ತಿಮ್ಮನನ್ನು ನೋಡಿದ.

ತಾನು ಹೇಳಿದ ನಿಬಂಧನೆ ತನಗೇ ಬಡಿದಂತಾಯಿತು ತಿಮ್ಮನಿಗೆ. ಮುಖ ಬಾಡಿಸಿಕೊಂಡ. ಆ ಹುಡುಗಿಯ ಆಸೆಯನ್ನು ಬಿಡಲೇಬೇಕಾಯಿತು. ಬಿಟ್ಟ.

ತಿಮ್ಮನಿಗೆ ಮದುವೆಯಂತೆ, ದಿನವಿಟ್ಟಾಯಿತಂತೆ. ನಿಂತು ಹೋಯಿತಂತೆ ಎಂಬುದು ಊರಿಗೆಲ್ಲಾ ಗೊತ್ತಾದ ಸಂಗತಿಯಾಯಿತು. ತಿಮ್ಮನ ಮನೆಯಲ್ಲಿ ಕೂಡ ಅರ್ಧ ಮುಕ್ಕಾಲು ಭಾಗದಷ್ಟು ಮದುವೆಯ ಸನ್ನಾಹಗಳು ನಡೆದಿದ್ದುವು. ಆಸೆಪಟ್ಟದ್ದು ಕೈತಪ್ಪಿ ಹೋದ ವೈರಾಗ್ಯದಿಂದ ತಿಮ್ಮ ತನಗೆ ಮದುವೆಯೇ ಬೇಡನೆಂದು ಸುಮ್ಮನಿದ್ದರೂ ಊರ ಹಿರಿಯರೊಬ್ಬರ ಮೂಲಕವಾಗಿ ಸೋಣೂರಿನ ಪ್ರಸಿದ್ಧ ಶ್ರೀಮಂತರಾದ ಉಪರಿಗೇ ಶಂಭಟ್ರಾಯರ ನಾಲ್ಕನೇ ಕುಮಾರಿ ಚಿ ಸೌ. ತುಲಸಿಯೊಂದಿಗೆ ನಮ್ಮ ಚಿರಂಜೀವಿ ತಿಮ್ಮಪ್ಪಯ್ಯನ ವಿವಾಹ ನೆರವೇರಿಯೇಬಿಟ್ಟಿತು.

ಹಿಂದಿನ ಕಾಲದ ಪದ್ಧತಿಯಲ್ಲೇ ನಡೆದ ನಾಲ್ಕು ದಿನಗಳ ಗೌಜಿಯ ಮದುವೆ. ಅದಕ್ಕೆ ಸಲ್ಪ ಮಟ್ಟಿಗಾದರೂ ಈಡು ಕೊಡುವ ಹಾಗೆ ತಿಮ್ಮ ತನ್ನ ಮನೆಯಂಗಳದ ಚಪ್ಪರವನ್ನು ತುಂಬಿಸಿಕೊಂಡೇ ಗೃಹಪ್ರವೇಶ ಮಾಡಿಸಿಕೊಂಡ. ಹೀಗೆ ಅಡಿಗೆ ತಿಮ್ಮನ ಬಡಮನೆಗೆ ಶ್ರೀಮಂತ ವಧುವಿನ ಪ್ರವೇಶವಾಯಿತು.

ಶಂಭಟ್ರಾಯರಂತಹ ಶ್ರೀಮಂತರು ತನ್ನಂತಹ ಬಡ ಅಡಿಗೆಯವನಿಗೆ ಹುಡುಗಿ ಕೊಟ್ಟದ್ದು ನೋಡಿ ತಿಮ್ಮನಿಗೆ ಬಹಳ ಆಶ್ಚರ್ಯವಾಗಿತ್ತು. ಅವಕ್ಕೆ ಘಟಕರು ಹೇಳಿದ ಕಾರಣ, "ನೀನು ಅಡಿಗೆ ಭಟ್ಟನಾದರೇನಾಯಿತು? ಕನ್ನಡ ಸಾಹಿತ್ಯದಲ್ಲಿ ನಿನಗಿರುವ ಹೆಸರನ್ನು ನೋಡಿ ಅವರು ತುಂಬ ಮೆಚ್ಚಿಕೊಂಡುಬಿಟ್ಟಿದ್ದಾರೆ. ಮುಂದೆ ನೀನು ದೊಡ್ಡ ಸ್ಥಿತಿಗೆ ಬರುವ ಮಾರ್ಗದಲ್ಲೇ ನಡೆಯುವಿ ಎಂದು ಅವರು ಹೇಳುತ್ತಾರೆ. ಇದಕ್ಕಿಂತ ಹೆಚ್ಚಿನ ಯೋಗ್ಯತೆ ಇನ್ನೇನು ಬೇಕಪ್ಪ?" ಎಂದರು. ಇದು ತಿಮ್ಮನಿಗೆ ಹೆಮ್ಮೆಯ ಕಾರಣವೆನಿಸಿತು. ಆ ಮೇಲೆ ಬೇರೆ ಬೇರೆ ಜನರು ಬೇರೆ ಬೇರೆ ಕಾರಣಗಳನ್ನೂ ಗುಸುಗುಟ್ಟಿಕೊಂಡರು. "ಶಂಭಟ್ರಾಯರು ಭಾರೀ ಶ್ರೀಮಂತರಾದರೂ ತುಂಬ ಹೆಣ್ಣು ಹೆತ್ತವರು. ಆರು ಹೆಣ್ಣು ನಾಲ್ಕು ಗಂಡುಗಳ ತಂದೆ ಅವರು. ತಿಮ್ಮ ವರದಕ್ಷಿಣೆ ಕೇಳುವವನಲ್ಲ. ಉದ್ಯೋಗಂ ಪುರುಷ ಲಕ್ಷಣಂ ಎಂಬಂತೆ ಅವನಿಗೆ ಅಡಿಗೇ ಕೆಲಸ ಯಾವಾಗಲೂ ಇದ್ದೇ ಇರುತ್ತೆ. ಅಡಿಗೆಯವನಾದರೇನಾಯಿತು? ಮಾಡುವ ಸಂಪಾದನೆಯನ್ನು ಪೋಲು ಮಾಡದೆ ತಾಯಿಯನ್ನೂ ಮನೆಯನ್ನೂ ಕಾಪಾಡುತ್ತಿರುವವನು ಹೆಂಡತಿಯನ್ನು ಕಾಪಾಡದಿರುವನೆ? ಅಲ್ಲದೆ ಅವರ ಎರಡನೆಯ ಮಗಳನ್ನು ದೊಡ್ಡ ಶ್ರೀಮಂತರ ಮನೆಗೇ ಕೊಟ್ಟಿತ್ತು. ಆದರೇನು? ಆ ಮನೆಯವರು ಸಾಲದಿಂದ ಪೂರಾ ಮುಳುಗಿ ಹೋಗಿ ತೀರ ಬಡವರಾದರು. ಆ ಹುಡುಗಿಯ ಗಂಡ ಹೊಟ್ಟೆಗಿದ್ದರೆ ಬಟ್ಟೆಗಿಲ್ಲ, ಬಟ್ಟೆಗಿದ್ದರೆ ಹೊಟ್ಟೆಗಿಲ್ಲದ ಸ್ಥಿತಿಗೆ ಬಂದುಬಿಟ್ಟ. ಆದ್ದರಿಂದ ದೊಡ್ಡಸ್ತಿಕೆ ಬಡಸಿಕೆ ಎಲ್ಲಾ ನಂಬುವಂತಹುದಲ್ಲ. ಅವರ ಇನ್ನೊಬ್ಬಳು ಮಗಳನ್ನು ದೊಡ್ಡ ಆಫೀಸರನಿಗೆ ಕೊಟ್ಟಿತ್ತು. ಅವಳ ಗಂಡ ಗರ್ವದಿಂದ ಮಾವನೊಡನೆ ಜಗಳಾಡಿದ್ದಾನೆ"

"ಆದರೆ ಈ ಮೊದಲು ನೋಡಲ್ಪಟ್ಟ ಹುಡುಗಿಯ ಹಾಗೆ ಜಾತಕದಲ್ಲಿ ಕಪಟವೇನಿಲ್ಲ. ಜಾತಕ ಹಾಲು ಜೇನಿನ ಹಾಗೇ ಕೂಡಿತ್ತು. ಆದ್ದರಿಂದಲೇ ಕಣ್ಣು ಮುಚ್ಚಿ ಬಿಡಿಸುವುದರೊಳಗೇ ಆಯಿತು ಮದುವೆ. ಜಾತಕದಲ್ಲಿ ಮರೆಮೋಸ ಮಾಡಿದರೂ ಶಕುನಗಳ ಉದಾಹರಣೆ ತೋರಿಸಿತಲ್ಲಾ ಸತ್ಯವನ್ನು! ದೇವರು ಕಣ್ಣು ಮುಚ್ಚುತ್ತಾನೆಯೆ?" ಎಂದು ಬೇರೊಬ್ಬರು ರಹಸ್ಯಭೇದನ ಮಾಡಿದ್ದೂ ತಿಮ್ಮನ ಕಿವಿಗೆ ಬಿತ್ತು.

೪೨

ಯಾರಿಗೆ ಗೊತ್ತು? ಮದುವೆಯೆಂಬುದು ಮನಸ್ಸಿಗೆ ಆಗುವ ಹಾಗೆ ನಡೆಯುವ ವಿಷಯವಲ್ಲವೊ ಏನೊ! ತಿಮ್ಮನಿಗಂತೂ ಹಾಗೇ ಆಯಿತು. ತನ್ನ ಹೆಂಡತಿ ಹಾಗಿರಬೇಕು, ಹೀಗಿರಬೇಕು. ತಾನು ಕೋಣೆಯಲ್ಲಿ ಈಸೀ ಚೇಯರಿನಲ್ಲಿ ಬಿದ್ದುಕೊಂಡು ಓದುತ್ತಿರುವಾಗ, ಅಥವಾ ಮೇಜಿಯ ಮುಂದೆ ಕುಳಿತುಕೊಂಡು ಬರೆಯುತ್ತಿರುವಾಗ ಅವಳು ತನಗೆ ಕಾಫೀ ತಂದು ಕೊಡಬೇಕು. ಅವಳನ್ನು ಇದಿರಲ್ಲಿ ಕೂಡಿಸಿಕೊಂಡು ಅವಳ ಮುಖ ನೋಡುತ್ತಾ ಹೊಸ ಹೊಸ ಭಾವನೆಗಳನ್ನು ಹುಡುಕಬೇಕು. ರಸಯುತವಾಗಿ ಬರೆಯಬೇಕು. ಬರೆದುದನ್ನು ಅವಳು ಓದಿ ಹಾಗಲ್ಲ ಹೀಗೆ–ಇದು ಬಹಳ ಚೆನ್ನು ಎಂದು ಮುಂತಾಗಿ ವಿಮರ್ಶೆ ಮಾಡಬೇಕು...ಎಲ್ಲಾ ಬರಿಯ ಆಕಾಶ–ಕೋಟೆಗಳು. ನಿಜ ಪರಿಸ್ಥಿತಿಗೆ ಅದೆಷ್ಟೋ ದೂರ.

ಮೊದಲು ಪ್ರೇಮ. ಮತ್ತೆ ಅವಳೊಂದಿಗೇ ಮದುವೆಯೆಂಬುದು ಬರಿಯ ಊಹೆಯಾಯಿತು. ಇದು ಬಹುಶಃ ಯಾರಿಗೂ ನಿಜಜೀವನದಲ್ಲಿ ಬರುವುದಿಲ್ಲವೇನೊ? ಮನಸ್ಸಿನಂತೆ ಸುಖ ಅನುಭವಿಸುವವರು ಎಲ್ಲೋ ಸಾವಿರಕ್ಕೊಬ್ಬರಿರಬಹುದು. ಅದೂ ಇರುವ ಹಾಗೆ ಇತರರಿಗೆ ಕಾಣಬರದು. ನಿಜಕ್ಕೂ ಅವರ ಸುಖವೆಂತಹದೋ ಅವರಿಗೆ ಗೊತ್ತು.

ಸರಿ, ತನಗೊಬ್ಬಳು ಹೆಂಡತಿ ಬಂದುದಾಯಿತು; ತುಲಸೀ ಹೆಂಡತಿಯೆಂದರೆ ಜನ್ಮಾಂತರವರೆಗಿನ ಸಂಬಂಧದವಳು. ಪ್ರಸ್ತುತ ಏನೋ

ರಾಯರ ಮನೆಯಲ್ಲಿ ಹೆಂಡತಿಯೊಂದಿಗೆ ಖುಷಿಯಾಗಿದ್ದುಬಿಡಬಹುದು. ಎಷ್ಟು ದಿನ ಅಲ್ಲಿ ಸಾಗೀತು? ಮುಂದೆ?

ಹರಪ್ಪೂರಿನಲ್ಲಿ ಪರಚಾಕರಿ ಮಾಡುತ್ತ ಬಾಡಿಗೆ ಬಿಡಾರ ಹೂಡಲು ತನಗೆ ಬರುವ ಸಂಬಳ ಸಾಲದು. ಆದುದರಿಂದ ಹೆಂಡತಿಯನ್ನು ಊರಲ್ಲಿ ತಾಯಿಯ ಬಳಿಯಲ್ಲಿ ಬಿಟ್ಟೇ ತಾನು ದುಡಿಯಲಿಕ್ಕೆ ಹೋಗಬೇಕು. ಆಗ ಸುಂದರಿಯಾದ ಹೆಂಡತಿಯಾಗಿರುತ್ತಿದ್ದರೆ, ತನಗೆ ಅವಳದೇ ಚಿಂತೆ ಹತ್ತಿಕೊಳ್ಳುತ್ತೆ; ಅವಳ ಮೇಲೆ ಕೂಡಾ ಕಂಡವರ ಕಣ್ಣು ಬೀಳುತ್ತೆ? ಪರಿಣಾಮ?

ಬೇಡ, ತನಗೆ ಈ ತುಲಸಿಯೇ ಸಾಕು. ಚಿತ್ರಾಪುರದ ದೇವಿ ಒಳ್ಳೆಯ ವಧುವನ್ನೇ ಕೊಡಿಸಿದಳು.

ಸುಂದರಿಯಾದ ಹೆಂಡತಿ ಪ್ರಾಪ್ತವಾಗಬೇಕಾದರೆ, ಯಾವಾಗಲೂ ಹೆಂಡತಿಯನ್ನು ತನ್ನೊಂದಿಗೇ ಇರಿಸಿಕೊಳ್ಳಲು ಸಮರ್ಥರಾದ ಶ್ರೀಮಂತರಿಗೆ, ತನ್ನಂಥವನಿಗಿಲ್ಲ.

ಕಲ್ಲಿನ ಮೇಲೆ ದೇವರನ್ನು ಆವಾಹಿಸಿಕೊಳ್ಳು, ಜೊತೆ ನನ್ನ ತುಲಸಿಯಲ್ಲೇ ಸಿನಿಮಾ ಸುಂದರಿಯರನ್ನೂ ಕಾದಂಬರೀ ಕಾದಂಬಿನಿಗಳನ್ನೂ ಆವಾಹಿಸಿಕೊಂಡು ತೃಪ್ತಿಪಡಬೇಕು. ಅದೇ ಸರಿ.

ಸಂತೃಪ್ತವಾಯಿತು ತಿಮ್ಮನ ಹೃದಯ.

ತುಲಸಿ ಎಂಟನೇ ಕ್ಲಾಸು ಕಲಿತಿದ್ದಳು. ಅಂದರೆ ತಿಮ್ಮನಿಗಿಂತ ನಾಲ್ಕು ಕ್ಲಾಸು ಹೆಚ್ಚಿಗೇ ಕಲಿತವಳು. ಆ ಮೇಲೆ ಮನೆಯಲ್ಲೇ ಅಡಿಕೊಂಡಿದ್ದಳಂತೆ. ಶ್ರೀಮಂತರ ಮಗಳಾದುದರಿಂದ ಬಡವರ ಮನೆಗೆ ಬೇಕಾದ ಕೆಲಸ ಬೊಗಸೆಗಳ ಹೊಲಬು ಅರಿತವಳಲ್ಲ. ಸಾಮಾನ್ಯ ಅಡಿಗೆ, ಕಸಮುಸುರೆ ಮುಂತಾದ ಸಾಧಾರಣ ಕೆಲಸಗಳಲ್ಲೂ ಪಳಗಿದವಳಲ್ಲ; ಆದರೆ ಹೇಳಿದರೆ ಎಲ್ಲವನ್ನೂ ಮಾಡಬಲ್ಲಂತಹ ಸಾಧು ಸರಳ ಹುಡುಗಿ. "ಅದನ್ನು ನಾನು ಮಾಡ್ತೇನೆ ಅತ್ತೆ, ಇದನ್ನು ನಾನು ಮಾಡ್ತೇನೆ ಅತ್ತೆ." ಎಂದು ಪ್ರತಿ ಕೆಲಸಕ್ಕೂ ಮುಂದೆ ಬರುತ್ತಿದ್ದಳು.

ಆದರೆ ಜಲಜಮ್ಮ ಅವಳಿಗೆ ಏನನ್ನು ತಾನೇ ಕಲಿಸಿ ಕೊಡಬಲ್ಲಳು? ಕೇವಲ ನಾಲ್ಕಾರು ದಿನಗಳ ಮಾತಿಗೆ ಮಾತ್ರ ತಾನೆ? ಮತ್ತೆ ತಿಮ್ಮ ತುಲಸಿಯನ್ನು ತನ್ನೊಂದಿಗೆ ಮದರಾಸಿಗೆ ಕರೆದೊಯ್ಯುತ್ತಾನೆ! ಅಲ್ಲಿಯೂ ಅವಳಿಗೇನೂ ಕೆಲಸವಿಲ್ಲ. ಗಂಡ ಮಾಡಿದ ಅಡಿಗೆಯನ್ನು ಊಟ ಮಾಡುವುದೇ ಅಲ್ಲಿ ಅವಳ ಕೆಲಸ.

"ಪುಣ್ಯಾತ್ಮ! ಹೂಂ. ಎಷ್ಟು ದಿನ ನಡೆಯೀತು ಹಾಗೆ ಒಂದು ಕೂಸು ಹುಟ್ಟುವವರೆಗೆ.

ಮತ್ತೆ ಹೆಂಡತಿಯನ್ನು ತನ್ನಂತೆ ಮನೆಗೆ ತಂದು ಬಿಡುತ್ತಾನೆ." ಎಂದುಕೊಳ್ಳುತ್ತಿದ್ದಳು ಜಲಜಮ್ಮ. ತಿಮ್ಮ ಹೆಂಡತಿಯನ್ನು ಕರೆದುಕೊಂಡು ಹೋಗುತ್ತೇನೆಂದು ಹೇಳಿದ್ದಕ್ಕೆ ಜಲಜಮ್ಮ ಏನೂ ಆಕ್ಷೇಪಣೆ ಎತ್ತಲಿಲ್ಲ.

ಅಂದುಕೊಂಡ ಹಾಗೆಯೇ ರಾಯರ ಮನೆಯಲ್ಲಿ ತಿಮ್ಮನ ಜೀವನ ಸೊಗಸಾಗಿಯೇ ಸಾಗಿತು. ಇಷ್ಟರಲ್ಲಿ ಸಾಹಿತ್ಯಕ್ಷೇತ್ರದಿಂದ ತಿಮ್ಮನ ಎರಡು ಮೂರು ಪುಸ್ತಕಗಳಿಗೆ ಬಹುಮಾನಗಳು ಬಂದುವು. ಪ್ರಸಿದ್ಧ ಪತ್ರಿಕೆಗಳ ಕಡೆಯಿಂದ "ನಿಮ್ಮ ಲೇಖನ ಕಳುಹಿಸಿರಿ ಸನ್ಮಾನಿಸಲಾಗುವುದು" ಎಂದು ಆಹ್ವಾನ ಪತ್ರಗಳು ಬರಲಾರಂಭಿಸಿದುವು.

ಅನೇಕ ವರ್ಷಗಳಿಂದ "ಹುಗ್ಗುಟ್ಟಿ ಲೇಖಕ" ನೆನಿಸಿಕೊಂಡ ತಿಮ್ಮನ ಮೇಲೆ ಕನ್ನಡ ತಾಯಿ ಅನುಗ್ರಹ ದೃಷ್ಟಿ ಬೀರತೊಡಗಿದಳು. ಹಾಗೆ ಪತ್ರಿಕೆಗಳಿಂದಲೂ ಪುಸ್ತಕಗಳಿಂದಲೂ ಬಂದ ಹಣವನ್ನು ಪ್ರತ್ಯೇಕಿಸಿಟ್ಟುಕೊಳ್ಳತೊಡಗಿದನು.

ಮುಂದೆ ಕೆಲವೇ ತಿಂಗಳಲ್ಲಿ ಅವನ ಅದೃಷ್ಟವೇ ಬದಲಾಯಿಸುವ ಹಾಗಾಯಿತು. ಮದ್ರಾಸಿನ ದೊಡ್ಡದೊಂದು ಜಾಹೀರಾತು ಸಂಸ್ಥೆ ಪ್ರಕಟಿಸಿದ ಒಂದು ಸ್ಪರ್ಧೆಯಲ್ಲಿ ತಿಮ್ಮನೂ ಭಾಗವಹಿಸಿದ್ದ. ಅವನು ಕಳುಹಿಸಿದ ಚಿತ್ರಕ್ಕೆ ಮೊದಲನೇ ಬಹುಮಾನ ನೂರು ರೂಪಾಯಿ ಬಂತು, ಮಾತ್ರವೇ, ಆ ಸಂದರ್ಭದಲ್ಲಿ ತಿಮ್ಮನೊಬ್ಬ ಅಡಿಗೆಯವನೆಂದು ಆ ಸಂಸ್ಥೆಯ ಪ್ರೊಪ್ರೈಟರಿಗೆ ತಿಳಿದು ಆಶ್ಚರ್ಯಪಟ್ಟರು. ಅವರ ಆಶ್ಚರ್ಯವು ಅಭಿಮಾನವಾಗಿ ಮಾರ್ಪಟ್ಟು, ಅವನನ್ನು ತಮ್ಮ ಸಂಸ್ಥೆಯಲ್ಲಿ ೩೦೦ ರೂಪಾಯಿಗಳ ಸಂಬಳದ ಮೇಲೆ ಕೆಲಸಕ್ಕೆ ತೆಗೆದುಕೊಳ್ಳುವುದಾಗಿ ಹೇಳಿದರು.


ತಿಮ್ಮನಿಗೆ ತಮಿಳು, ತೆಲುಗು ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಕೂಡಾ ಬಳಕೆಯುಂಟೆಂಬುದನ್ನು ತಿಳಿದುಕೊಂಡ ಅವರು ಜಾಹೀರಾತುಗಳ ಭಾಷಾಂತರ ಕೆಲಸಗಳನ್ನು ಅವನಿಗೇ ಒಪ್ಪಿಸಿದರು. ಮುಖ್ಯವಾಗಿ ಕನ್ನಡ ಜಾಹೀರಾತುಗಳೆಲ್ಲ ತಿಮ್ಮನ ಭಾಷಾಂತರಗಳೇ.

ಅದಕ್ಕಾಗಿ ಅವನ ರಾಯರಿಗೂ ಅಮ್ಮನವರಿಗೂ ಒಂದಿಷ್ಟೂ ಬೇಸರವಾಗಲಿಲ್ಲ; ಬದಲಾಗಿ ಸಂತೋಷವಾಯಿತು. "ನನಗೊತ್ತು ಆಚಾರ್ರೇ-ನಾನು ಮೊದಲೇ ಹೇಳಲಿಲ್ಲವೆ? ಮದುವೆಯಾದ ಮೇಲೆ ನಿಮಗೆ ಒಳ್ಳೇದಾಗುತ್ತೇ ಅಂತ. ಎಲ್ಲಾ ನಿಮ್ಮ ಹೆಂಡತಿ ತುಲಸೀ ಕಾಲಗುಣಾ ಅಂತ ತಿಳೀರಿ. ನಿಮ್ಮ ಯೋಗ್ಯತೆಯೂ ಉಂಟನ್ನಿ. ಆದರೂ ಯೋಗ್ಯತೆ ಇರೋವರಿಗೆಲ್ಲಾ ಒಳ್ಳೇದಾಗಿಬಿಡುತ್ತೆಯೇ? ಅದಕ್ಕೆ ಇನ್ನೊಬ್ಬರ ಪುಣ್ಯದ ಪಾಲೂ ಬೇಕಾಗುತ್ತೆ ಆಚಾರ್ರೇ" ಎಂದರು ಅಮ್ಮನವರು.

ತಿಮ್ಮನಾದರೋ ಇದೆಲ್ಲಾ ಪತ್ನಿಯ ರೂಪದಲ್ಲಿ ಬಂದ ಕನ್ನಡದೇವಿಯ ದಯೆ ಎಂದುಕೊಂಡ. ಹುಟ್ಟಿದಂದಿನಿಂದಲೂ ನಿರಪೇಕ್ಷಕನಾಗಿ ತನ್ನ ಸೇವೆ ಮಾಡಿಕೊಂಡೇ, ಪರಾನ್ನಭುಕ್ತನಾಗಿ ಬೆಳೆದವನಿಗೆ, ಕೊನೆಗೆ ನಿಜವಾದ ಬರೆಹಗಾರಿಕೆಯಿಂದಲೇ ಹೊಟ್ಟೆಪಟ್ಟೆಗೆ ತುಂಬುವ ದಾರಿ ಕಾಣಿಸಿದವಳು ಕನ್ನಡದೇವಿಯಲ್ಲದೆ ಮತ್ತಾರು? "ಕೇಸರಿ" ಸಂಪಾದಕರು ಹೇಳಿದ ಮಾತನ್ನು ಮರೆಯಲಾರ ತಿಮ್ಮ. ಆ ಜಾಹೀರಾತ ಸಂಸ್ಥೆಯ ಕೆಲಸದಲ್ಲಿ ಅವನ ಸ್ವಂತ ಪ್ರತಿಭೆಗೆ ಹೆಚ್ಚಿನ ಅವಕಾಶವಿಲ್ಲದಿದ್ದರೂ, ಸಂಕೇತ ನಾಮದಿಂದ ಅವನ ಕೃತಿಗಳು ಕನ್ನಡನಾಡಿನಲ್ಲಿ ತುಂಬ ಬರತೊಡಗಿದುವು. ಅದರಿಂದ ಅವನಿಗೆ ಸಿಕ್ಕುವ ಸನ್ಮಾನ, ಪಾರಿತೋಷಕಾದಿಗಳಿಂದ ತನ್ನ ಮನೆಗೆ ಆಧುನಿಕ ಸೌಕರ್ಯಗಳನ್ನೂ ಒದಗಿಸಿಕೊಳ್ಳಲಾರಂಭಿಸಿದನು.

ಅಡಿಗೆಯ ಭಟ್ಟನಾಗಿದ್ದ ತಿಮ್ಮ ಈಗ ತನ್ನ ಸ್ವಂತ ಮನೆಗೆ ಯಜಮಾನ. ಅವನಿಂದಲೇ ಅಡಿಗೇ ಪದ್ಧತಿಗಳನ್ನು ಕಲಿತ ತುಲಸಿ ಅವನಿಗೇ ಅಡಿಗೆ ಕಲಿಸಿ ಕೊಡುವಷ್ಟು ಜಾಣೆಯಾಗಿ ಗಂಡನಿಗೆ ಅಡಿಗೆ, ತಿಂಡಿ ಮಾಡಿ ಬಡಿಸಿ ತಣಿಸಿ ಉಣಿಸಿ ಆಫೀಸಿಗೆ ಕಳುಹಿಸುತ್ತಿದ್ದಾಳೆ. ನಿಜಕ್ಕೂ ತುಲಸಿ ತಿಮ್ಮನಿಗೆ ತಕ್ಕ ಪತ್ನಿ. ಸಾಮಾನ್ಯ ರೂಪದವಳಾದ ಅವಳ ಮೇಲೆ ತಿಮ್ಮನಿಗೂ ತುಂಬ ಪ್ರೇಮ ಸೂಸಿತು. ಈ ಪ್ರೇಮ ಬಲವಾದುದು; ಗಂಗೂಬಾಯಿ, ಹೆಲೆನ್‌ಗಳಂತೆ ಮೋಹಮೂಲವಾಗಿದ್ದು ಅಸ್ಥಿರವಾದುದಲ್ಲ.

ತಿಮ್ಮ ತಾಯಿಯನ್ನು ಕೂಡ ಮದರಾಸಿಗೆ ಕರೆದುಕೊಂಡು ಬಂದ. ಅವಳಿಗೆ ತಿರುಪತಿ, ರಾಮೇಶ್ವರಗಳ ಯಾತ್ರೆ ಮಾಡಿಸಿದ. ತಿಮ್ಮನ ಮನೆಯಲ್ಲಿ ರೇಡಿಯೋ ಸಂಗೀತ ಹಾಡುವಾಗ, ಜಲಜಮ್ಮನಿಗೆ ಆನಂದವೂ ಒತ್ತೊತ್ತಿ ಕಣ್ಣೀರು ತುಂಬುವುದುಂಟು. ತಾನೆಲ್ಲಿ? ದರಿದ್ರ ಮಗನೆಲ್ಲಿ? ಅವನ ಅಡಿಗೇ ಭಟ್ಟತನವೆಲ್ಲಿ? ಆಫೀಸರನ ಹಾಗೆ ಮಾರ್ಪಟ್ಟಿರುವ ಈ "ಮಿಸ್ಟರ್ ತಿಮ್ಮನ್" ಅವರೆಲ್ಲಿ? ಪ್ರೀತಿಯ ಮಗನ ಈ ಭಾಗ್ಯವನ್ನು ನೋಡುವ ಪುಣ್ಯ ಇವನ ತಂದೆಗೆ ಇಲ್ಲದೆ ಹೋಯಿತಲ್ಲ! ಅವರು ಹೇಳುತ್ತಿದ್ದರು, ಇವನಿಗೆ ಕಲಿಸಬೇಕು; ಕಲಿಸಬೇಕು ಅಂತ. ಇವನ ಎಲ್ಲರ ಹಾಗೆ ಕಲಿಯದೆ ಸ್ವಂತ ಅಭ್ಯಾಸದಿಂದಲೇ ವಿದ್ಯಾದೇವಿಯನ್ನು ಒಲಿಸಿಕೊಂಡುಬಿಟ್ಟ...!





ಬಿ. ಸರೋಜಾದೇವಿ ಶ್ರೀಹರ್ಷ

* ನನ್ನ ನೂರು ಚಿತ್ರಗಳು

ನಿರೂಪಣೆ :
ಶ್ಯಾಮಸುಂದರ ಕುಲಕರ್ಣಿ

ಫೋಟೋ :
ಬಿ ಕೇಸರಿಸಿಂಗ್

ನೂರು ಚಿತ್ರಗಳ ನಟಿ, ಚತುರ್ಭಾಷಾ ತಾರೆ, ಅಭಿನಯ ಸರಸ್ವತಿ ಎಂದು ಪತ್ರಿಕೆಗಳು ಆಗಾಗ ನನ್ನ ಮೇಲೆ ಹೊಗಳಿಕೆಯ ಹೂಳೆಯನ್ನು ಹೊರಿಸುತ್ತಲೇ ಬಂದಿವೆ.

ಈಗ 'ಕರ್ಮವೀರ' ಪತ್ರಿಕೆಯ ಸಂಪಾದಕರಂತೂ 'ನನ್ನ ನೂರು ಚಿತ್ರಗಳು' ಎಂಬ ವಿಷಯದ ಮೇಲೆ ನನಗೊಂದು ಲೇಖನ ಬರೆಯಲು ತಿಳಿಸಿದ್ದಾರೆ. ನನ್ನ ಬಗ್ಗೆ ನಾನೇ ಏನೆಂದು ಬರೆದುಕೊಳ್ಳಲಿ?

ಮನುಷ್ಯನ ಯಶಸ್ಸಿಗೆ ಅದೃಷ್ಟ ಮೊದಲು ನಂತರ ಮನುಷ್ಯ ಪ್ರಯತ್ನ ಎಂದು ನಂಬಿದವಳು ನಾನು.

ಅಲ್ಲದೇ ಮತ್ತೇನು? ರಂಗಭೂಮಿಯ ಮೇಲೆ ಬಣ್ಣ ಹಚ್ಚಿಕೊಂಡವಳಲ್ಲ. ಕಾನ್ವೆಂಟ್ ಓದುತ್ತಾ ಇರುವಾಗ ಸಿನೇಮ ನೋಡಿದವಳಲ್ಲ. ಇನ್ನು ನಟಿಯಾಗುವ ಕನಸು ಕಾಣುವದಂತೂ ದೂರವೇ ಉಳಿಯಿತು.

ಆದರೂ ನಾನೊಬ್ಬ ನಟಿಯಾಗಿ ಬಿಟ್ಟೆ. ಪ್ರಥಮಚಿತ್ರ ತೆರೆಕಂಡ ವರ್ಷವೇ ಮೂವತ್ತು ಚಿತ್ರಗಳಲ್ಲಿ ನಾಯಿಕಿಯಾಗಿ ಅಭಿನಯಿಸಲು ನನಗೆ ಆಹ್ವಾನ ಬಂದಿತು. ಚೋದ್ಯವೆಂದರೆ ತಮಿಳು ಭಾಷೆಯೇ ಗೊತ್ತಿಲ್ಲದ ಈ ಹುಡುಗಿಗೆ ತಮಿಳು ಚಿತ್ರರಂಗದಿಂದಲೇ ಹೆಚ್ಚಿನ ಕರೆ ಬಂದಿತು.

ದೈವೀ ಸಂಕಲ್ಪ

ಇದನ್ನೇ ನಾನು ಅದೃಷ್ಟ ಎನ್ನುವದು. ಮುಖ್ಯ ಮನುಷ್ಯನ ಹಣೆಯಲ್ಲಿ ಬರೆದಿರಬೇಕು. ನಾನು ಕಲಾವಿದೆ ಆಗಬೇಕು ಎಂಬುದು ದೈವೀಸಂಕಲ್ಪವಾಗಿತ್ತೆಂದು ಕಾಣುತ್ತದೆ. ಅಂತೇ ಯಾವುದೋ ಒಂದು ಪ್ರಸಂಗದಿಂದಾಗಿ ನಾನು ತಾರೆಯಾದೆ.

ಮುಂದೆ ನಾನು ಕಲಾವಿದೆಯ ಜವಾಬ್ದಾರಿಯನ್ನು ಅರಿತು, ನನ್ನ ಸ್ಥಾನಮಾನಕ್ಕೆ ತಕ್ಕಂತೆ ಕಷ್ಟಪಟ್ಟು ದುಡಿದೆ. ಸಾಕಷ್ಟು ಶ್ರದ್ಧೆಯಿಂದ ಕೆಲಸ ಮಾಡಿದೆ. ಅದೃಷ್ಟ ನನಗೆ ಅವಕಾಶ ನೀಡಿತು. ಸ್ವಪ್ರಯತ್ನ ನನ್ನನ್ನು ಮುಂದಕ್ಕೆ ತಂದಿತು.

ಸರಿಯಾಗಿ ಹದಿನೈದು ವರ್ಷಗಳ ಹಿಂದಿನ ಮಾತು. ನಾನಿನ್ನೂ ಆಗ ಕಾನ್ವೆಂಟ್ ಸ್ಕೂಲಿನಲ್ಲಿ ಓದುತ್ತಿದ್ದ ಲಂಗದ ಹುಡುಗಿ. ಆಗಿನಿಂದಲೂ ಸಂಗೀತದ ಖಯಾಲಿ.

ಒಮ್ಮೆ ಬೆಂಗಳೂರಿನ ಮೇಯೊ ಹಾಲಿನಲ್ಲಿ ಸಂಗೀತಸಭೆ ಸೇರಿತ್ತು. ನಾನು ಆ ದಿನ 'ಅನಾರಕಲಿ' ಚಿತ್ರದಲ್ಲಿ ಲತಾ ಮಂಗೇಶ್ಕರ್ ಹಾಡಿದ 'ಏ ಜಿಂದಗೀ ಉಸೀಕಾ ಹೈ' ಎಂಬ ಗೀತವನ್ನು ಹಾಡಿದೆ.

ನನ್ನ ಹಾಡುಗಾರಿಕೆಗೆ ಜನಸ್ತೋಮ ಚಪ್ಪಾಳೆ ತಟ್ಟಿ ತನ್ನ ಮೆಚ್ಚಿಕೆ ವ್ಯಕ್ತಪಡಿಸಿತು. ಆದರೆ ಜನಸಂದಣಿಯಿಂದ ಒಬ್ಬರು ಮಾತ್ರ ನೇರವಾಗಿ ನನ್ನ ಬಳಿ ಬಂದು ಬೆನ್ನು ಚಪ್ಪರಿಸಿದರು. ಅವರೇ ನಿರ್ಮಾಪಕ – ಹೊನ್ನಪ್ಪ ಭಾಗವತರ್.


ನನ್ನ ಕಂಠವನ್ನು ಮೆಚ್ಚಿದ ಭಾಗವತರ್ ನನ್ನ ರೂಪವನ್ನು ಮೆಚ್ಚಿರಬೇಕು. ಒಳ್ಳೆ ಫೋಟೋಜೆನಿಕ್ ಮುಖ ಇದೆ ಎಂದರು. 'ಮಹಾಕವಿ ಕಾಳಿದಾಸ' ಚಿತ್ರದಲ್ಲಿ ನಾಯಕಿಯ ಪಾತ್ರ ವಹಿಸುವಿಯಾ? ಎಂದು ಕೇಳಿದರು.

ಅದೃಷ್ಟ ಬಾಗಿಲು ತೆರೆದಾಗ ಇಲ್ಲ ಎನ್ನಲಿಕ್ಕೆ ಬಂದೀತೆ. ಹೂಂ, ಎಂದೆ. ನಾನು ನಟಿಯಾದದ್ದು ಹೀಗೆ.

ಮುಖ ಅಂದವಾಗಿದ್ದರೆ ಸಾಲದು. ನಾಯಕಿಯಾಗಬೇಕಾದವಳು ದಷ್ಟ–ಪುಷ್ಟವಾಗಿರಬೇಕು. ಆದರೆ ನನ್ನದಿನ್ನೂ ಎಳೆಯ ವಯಸ್ಸು. ತೆಳುವಾದ ಮೈಕಟ್ಟು. ಹೀಗಾಗಿ ನನ್ನ



ಚಿತ್ರೀಕರಣಕ್ಕೆ ಹೊರಡುವ ಸಿದ್ಧತೆ



ಪತಿ ಶ್ರೀ ಹರ್ಷರೊಂದಿಗೆ ಸರೋಜಾದೇವಿ

ಮೈ-ಕೈಗೆಲ್ಲಾ ಪ್ಯಾಡು ಬಳಿದು ಹೊನ್ನಪ್ಪ ಭಾಗವತರ್ ನನ್ನನ್ನು ಕ್ಯಾಮರಾದ ಮುಂದೆ ನಿಲ್ಲಿಸಬೇಕಾಯಿತು.

ಆರು ವರ್ಷಗಳಲ್ಲಿ ೫೦ ಚಿತ್ರಗಳು

ನನ್ನ ಪ್ರಥಮ ಚಿತ್ರವೇ (೧೯೫೫) ರಾಷ್ಟ್ರಪತಿಗಳ ರಜತಪದಕ ಗಳಿಸಿತು. ಮುಂದಿನ ಆರು ವರ್ಷಗಳಲ್ಲಿ ನಾನು ಐವತ್ತು ಚಿತ್ರಗಳಲ್ಲಿ ಅಭಿನಯಿಸಿದೆ. ಬಹುಶಃ ಇದು ನಟಿಯೊಬ್ಬಳ ಜೀವನದ ಅಪೂರ್ವ ಸಾಧನೆಯಾಗಿರಬೇಕು.

"ಮಹಾಕವಿ ಕಾಳಿದಾಸ"ದ ನಂತರ, "ಶ್ರೀರಾಮ ಪೂಜಾ", "ಕಚದೇವಯಾನಿ", "ಕೋಕಿಲವಾಣಿ", "ಪಂಚರತ್ನ", "ಚಿಂತಾಮಣಿ", "ಅಣ್ಣ ತಂಗಿ", "ಆಷಾಢಭೂತಿ", "ಸ್ಕೂಲ್ ಮಾಸ್ಟರ್", "ಜಗಜ್ಯೋತಿ ಬಸವೇಶ್ವರ", "ಕಿತ್ತೂರು ಚೆನ್ನಮ್ಮ", "ವಿಜಯನಗರದ ವೀರ ಪುತ್ರ", "ದೇವಸುಂದರಿ", "ಅಮರಶಿಲ್ಪಿ ಜಕಣಾಚಾರಿ", "ಬೆರೆತ ಜೀವ", ಹಾಗೂ ಇತ್ತೀಚೆ ತೆರೆ ಕಂಡ "ಮಲ್ಲಮ್ಮನ ಪವಾಡ" ಹೀಗೆ ಒಟ್ಟು ಹದಿನೆಂಟು ಚಿತ್ರಗಳಲ್ಲಿ ನಾನು ಅಭಿನಯಿಸಿರುವೆ.

ಇವುಗಳಲ್ಲಿ ಸ್ಕೂಲ್ ಮಾಸ್ಟರ್ (೧೯೫೮) ಚಿತ್ರವು ರಜತಮಹೋತ್ಸವ ಆಚರಿಸಿತಲ್ಲದೆ ರಾಷ್ಟ್ರಪತಿಗಳ ಪ್ರಶಸ್ತಿ ಪತ್ರವನ್ನು ಗಳಿಸಿತು.

ಅಮರಶಿಲ್ಪಿ ಜಕಣಾಚಾರಿ, ಅಣ್ಣ ತಂಗಿ ಹಾಗೂ ಕಿತ್ತೂರು ಚೆನ್ನಮ್ಮ ಚಿತ್ರಗಳು ಶತದಿನೋತ್ಸವ ಆಚರಿಸಿದವು. ಕಿತ್ತೂರು ಚೆನ್ನಮ್ಮ (೧೯೬೧) ಹಾಗೂ ಜಗಜ್ಯೋತಿ ಬಸವೇಶ್ವರ (೧೯೫೯) ಚಿತ್ರಗಳು ರಾಷ್ಟ್ರಪತಿಗಳ ಪ್ರಶಸ್ತಿಪತ್ರವನ್ನು ಪಡೆದವು.

ಕನ್ನಡದ ಪ್ರಥಮ ವರ್ಣಚಿತ್ರವಾದ "ಅಮರಶಿಲ್ಪಿ ಜಕಣಾಚಾರಿ" ಚಿತ್ರದಲ್ಲಿನ ನನ್ನ ಅಭಿನಯವನ್ನು ಮೆಚ್ಚಿ ೧೯೬೪ರಲ್ಲಿ ರಾಜ್ಯದ ಆಗಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ನನಗೆ "ಅಭಿನಯ ಸರಸ್ವತಿ" ಎಂಬ ಬಿರುದನ್ನು ದಯಪಾಲಿಸಿದರು.

ತಮಿಳಿನಲ್ಲಿ ಅಧಿಕ ಚಿತ್ರಗಳು

೧೯೬೭ರ ವರೆಗೆ ನಾನು ಪಾತ್ರವಹಿಸಿದ ಒಟ್ಟು ನೂರು ಚಿತ್ರಗಳ ಪೈಕಿ ತಮಿಳಿನಲ್ಲಿ ೫೮, ತೆಲುಗಿನಲ್ಲಿ ೧೫ ಹಾಗೂ ಹಿಂದಿಯಲ್ಲಿ ೧೦ ಚಿತ್ರಗಳಲ್ಲಿ ನಾನು ಅಭಿನಯಿಸಿರುವೆ.

ನನ್ನ ಏಳು ಚಿತ್ರಗಳು ರಜತ ಮಹೋತ್ಸವವನ್ನು ಆಚರಿಸಿವೆ. ಮೂವತ್ತು ಚಿತ್ರಗಳು ಶತದಿನೋತ್ಸವವನ್ನು ಕಂಡಿವೆ. ಉಳಿದ ಚಿತ್ರಗಳಲ್ಲೂ ಗಲ್ಲಾಪೆಟ್ಟಿಗೆಯಲ್ಲಿ ವಿಫಲವಾದ ಚಿತ್ರಗಳು ಇಲ್ಲವೆಂದೇ ಹೇಳಬಹುದು.

ಒಬ್ಬ ತಾರೆಯ ಯೋಗ್ಯತೆಯನ್ನು ಅಳೆಯಲು ಆಕೆ ಅಭಿನಯಿಸಿದ ಎಷ್ಟು ಚಿತ್ರಗಳು ಹೆಚ್ಚು ಹಣ ಗಳಿಸಿವೆ ಎಂಬುದೇ ಒರೆಗಲ್ಲು, ಎಂಬುದು ನನ್ನ ಸ್ಪಷ್ಟ ಅಭಿಮತ.

ಚಲಚ್ಚಿತ್ರರಂಗವು ಒಂದು ಕಲೆಯೆಂಬುದನ್ನು ಒಪ್ಪಿದರೂ, ನಿರ್ಮಾಪಕನಾದವನು ಆ ಕಲೆಯ ಅಭಿವೃದ್ಧಿಗಾಗಿ ಬಂಡವಲು ಹೂಡುತ್ತ ಹೋಗಲು ಆತನಿಗೆ ಸಾಕಷ್ಟು ಲಾಭ ಬರಬೇಕಾದುದು ನ್ಯಾಯ.

ಅಂತೇ ನಿರ್ಮಾಪಕನು ಆಯ್ಕೆ ಮಾಡುವ ನಟಿ – ಇಲ್ಲವೇ ನಟಿಯಲ್ಲಿ ಇರಬೇಕಾದ ಮೊದಲ ಯೋಗ್ಯತೆಯೆಂದರೆ ಹಣ ಗಳಿಸುವ ಸಾಮರ್ಥ್ಯ.

ಇಂಥ ನಟಿ ಅಭಿನಯಿಸಿದ ಚಿತ್ರಗಳು ಹೆಚ್ಚು ಹಣ ಗಳಿಸುವವೆಂದು ನಿರ್ಮಾಪಕ ಹೇಳುವನಾದರೆ, ಆಕೆ ಯಶಸ್ವೀ ಅಭಿನೇತ್ರಿ ಎಂಬುದು ನನ್ನ ವಾದ.

ಆ ದೃಷ್ಟಿಯಿಂದ ನನ್ನ ಮುಕ್ಕಾಲು ಪಾಲು ಚಿತ್ರಗಳು ನಿರ್ಮಾಪಕರಿಗೆ 'ಶುಕ್ರದೆಸೆ'ಯನ್ನೇ ತಂದುಕೊಟ್ಟಿವೆ.

ಮಾಸ್ಕೊದಲ್ಲಿ



ದುಡ್ಡೇ ಮುಖ್ಯವಲ್ಲ ಎಂದು ನನ್ನೊಬ್ಬಳ ಅನೇಕ ಸಹಕಲಾವಿದೆಯರು ವಾದಿಸಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ಯಾವದೇ ಕೆಲಸಕ್ಕೆ ದುಡ್ಡೇ ಮುಖ್ಯವಾಗಿರದಿದ್ದರೂ, ದುಡ್ಡಿಲ್ಲದೇ ಅದು ಯಶಸ್ವಿಯಾಗುವದಿಲ್ಲ ಎಂದು ನನ್ನ ಅಭಿಪ್ರಾಯ.

ದುಡ್ಡು ಅಷ್ಟೊಂದು ಗೌಣ ವಸ್ತುವಾಗಿದ್ದರೆ, ಮನುಷ್ಯ ಜೀವನಕ್ಕಾಗಿ ಇಷ್ಟೊಂದು ಹೋರಾಡುವ ಅಗತ್ಯವಿರಲಿಲ್ಲ. ಕಾರ್ಮಿಕನಿಂದ ಹಿಡಿದು ಉದ್ಯೋಗಪತಿಯ ವರೆಗೆ ಪ್ರತಿಯೊಬ್ಬರು ಬೆವರು – ರಕ್ತಗಳನ್ನು ಒಂದುಗೂಡಿಸಿ ಮಡಿಯುವುದೆಲ್ಲ ಏತಕ್ಕಾಗಿ?

ಪ್ರಭಾವ ಬೀರಿದ ವ್ಯಕ್ತಿ

ನನ್ನ ಜೀವನದಲ್ಲಿ ಪ್ರಭಾವ ಬೀರಿದ ವ್ಯಕ್ತಿ ಯಾರೆಂದು ಅನೇಕರು ನನ್ನನ್ನು ಪ್ರಶ್ನಿಸಿದ್ದಾರೆ. ಈ ಬಗ್ಗೆ ನಾನು ಹೇಳಬಹುದಾದ ಒಂದೇ ಒಂದು ಹೆಸರೆಂದರೆ ನನ್ನ ತಾಯಿಯದು.

"ತಾಯಿಗಿಂತ ಬಂಧುವಿಲ್ಲ". ಎಂಬ ಗಾದೆ ಪ್ರತಿಯೊಬ್ಬರ ಜೀವನದಲ್ಲಿ ನಿಜವಾಗಿಯೇ ಇರುತ್ತದೆ. ಆದರೆ ನನ್ನ ಹಾಗೂ ನನ್ನ ತಾಯಿ ಶ್ರೀಮತಿ ರುದ್ರಮ್ಮನವರ ಸಂಬಂಧ ಹೆಚ್ಚು ಅನ್ಯೋನ್ಯವಾದುದು.

ಇತಿಹಾಸದ ಒಂದು ಘಟನೆ ನನಗಿಲ್ಲಿ ನೆನಪಾಗುತ್ತದೆ. ಹುಮಾಯೂನನು ಸಾಯುವ ಸ್ಥಿತಿಯಲ್ಲಿದ್ದಾಗ ಅವನ ತಂದೆ ಬಾಬರನು ಮಂಡಿಯೂರಿ ದೇವರನ್ನು ಬೇಡಿಕೊಂಡನಂತೆ "ನನ್ನ ಪ್ರಾಣವನ್ನಾದರೂ ತೆಗೆದುಕೊಂಡು ನನ್ನ ಮಗನ ಪ್ರಾಣವುಳಿಸು" ಎಂದು.

ನನ್ನ ತಾಯಿ ಕೂಡ ಇದೇ ರೀತಿ ಬೇಡಿಕೊಂಡು ನನ್ನನ್ನು ಕಾಪಾಡಿದ್ದಾಳೆ. ದುರ್ದೈವವೆಂದರೆ ಅಂದಿನಿಂದ ಅಪಘಾತಗಳಲ್ಲಿ ಏಟು ಅವಳಿಗೇ ಬೀಳುತ್ತಿದೆ.

ಚಿಕ್ಕ ಹುಡುಗಿಯಾಗಿದ್ದಾಗಿನಿಂದಲೂ ನಾನು ತಾಯಿಯನ್ನು ಬಿಟ್ಟವಳಲ್ಲ. ಚಿತ್ರರಂಗ ಸೇರಿದಾಗಂತೂ ಇದ್ದಕ್ಕಿದ್ದಂತೆ ನಾನು ದಿನ **ಕ್ಯೂಮ್ಸ್ ಕಾಯಿಲೆ** ಬೀಳುತ್ತಿದ್ದೆ. ಅಪಘಾತಗಳಲ್ಲಿ ಪೆಟ್ಟು ಬೀಳುವದು, ಶಸ್ತ್ರಚಿಕಿತ್ಸೆ ನಡೆಸುವದು ಆಗ ಸಾಮಾನ್ಯವಾಗಿಬಿಟ್ಟಿತು.

ಆಗ ನನ್ನ ತಾಯಿ ಮಾಡಿದ ಸೇವೆ, ಚಿತ್ರರಂಗಕ್ಕೇ ಶರಣೆನ್ನಬೇಕೆಂದು ನಿರ್ಧರಿಸಿದ ನನಗೆ ಆಕೆ ನೀಡಿದ ಉತ್ತೇಜನವನ್ನು ನಾನು ಸದಾ ಸ್ಮರಿಸುವೆ.

ಅಪಘಾತಗಳಿಂದ ಪಾರಾದೆ

ಪುಣೆಯಲ್ಲಿ "ದೂಜ್ ಕಾ ಚಾಂದ್" ಹಿಂದೀ ಚಿತ್ರದ ಹೊರಾಂಗಣ ಚಿತ್ರೀಕರಣ ನಡೆದಾಗ ನನ್ನ ತಲೆಗೆ ಭಾರೀ ಪೆಟ್ಟು ಬಿತ್ತು. ಇನ್ನೇನು ನನ್ನ ತಲೆಯೇ ಕೆಟ್ಟುಹೋಗುವದೆಂದು ವೈದ್ಯರು ಶಂಕಿಸಿದರು. ಆದರೂ ನಾನು ಪಾರಾದೆ.



ಪುಷ್ಪವೆಂದರೆ ಈ ಕಮಲಮುಖಿಗೆ ಬಹಳ ಇಷ್ಟ.

"ನಾಡೋಡಿ ಮನ್ನನ್" ತಮಿಳು ಚಿತ್ರದ ಚಿತ್ರೀಕರಣ ನಡೆದಾಗ ಹಾವೊಂದರ ಜೊತೆ ಅಭಿನಯಿಸಬೇಕಿತ್ತು. ಕೃತಕ ಹಾವಿನ ಬದಲು, ನಿಜಸರ್ಪವನ್ನೇ ಬಳಸಬೇಕೆಂಬುದು ನಿರ್ದೇಶಕರ ಹಟ. ಸರಿ, ನಾನೂ ಒಪ್ಪಿದೆ. ಆದರೆ ಚಿತ್ರೀಕರಣ ನಡೆದಾಗ ಹಾವು ನನ್ನ ಪೂರ್ತಿ ಶರೀರವನ್ನು ಗಟ್ಟಿಯಾಗಿ ಬಿಗಿದು ಸುತ್ತಿಕೊಂಡಿತು.

ಹೇಗೂ ಹೆಣಗಾಡಿ ಹಾವಿನ ಬಿಗಿಯಿಂದ ತಪ್ಪಿಸಿಕೊಂಡದ್ದಾಯಿತು. ಆದರೆ ಮೂರು ತಿಂಗಳು ಮೈಕೈಯೆಲ್ಲಾ ಮುಳ್ಳು ಚುಚ್ಚಿದಂತೆ ನೋವನ್ನು ಅನುಭವಿಸಿದೆ.

ಆಗ ಹಗಲು – ರಾತ್ರಿ ನನ್ನ ಸೇವೆ ಮಾಡಿದವರು ನನ್ನ ತಾಯಿ.

ಊಟಿಯಲ್ಲಿ ತಮಿಳು ಚಿತ್ರದ ಶೂಟಿಂಗ್ ನಡೆದಾಗ ಆನೆಯೊಂದು ಸೊಂಡಿಲಿನಿಂದ ಎತ್ತಿ ಎತ್ತರದ ಸ್ಥಳದಿಂದ ನನ್ನನ್ನು ಬಿಸಾಕಿತು. ಇನ್ನೇನು ನಾನು ಸತ್ತುಬಿಟ್ಟೆ ಎಂದೇ ನನ್ನ ತಾಯಿ ಭಾವಿಸಿದಳು. ಆದರೆ ಹೇಗೊ ನಾನು ಬದುಕಿದೆ.

ಮುಂದೆ ಟಿ. ಪ್ರಕಾಶರಾವ್ ದಿಗ್ದರ್ಶನದ ಚಿತ್ರವೊಂದರ ಶೂಟಿಂಗ್ ನಡೆದಾಗಲೂ ಇಂಥದೇ ಒಂದು ವಿಪತ್ತು ನನಗೆ ಕಾದಿತ್ತು. ಆ ಚಿತ್ರದಲ್ಲಿ ನನ್ನದು ರಾಜಕುಮಾರಿಯ ಪಾತ್ರ. ಕೊನೆಯಲ್ಲಿ ರಾಜಕುಮಾರಿಯನ್ನು ಗುಡಿಸಲೊಂದರಲ್ಲಿ ಬಂಧಿಸಿ ಅದಕ್ಕೆ ಬೆಂಕಿ ಹಚ್ಚುವ ದೃಶ್ಯ ಚಿತ್ರಿತವಾಗಬೇಕಿತ್ತು. ಉರಿ ಹಚ್ಚಿದರು. ಆದರೆ ಒಳಗೆ ನನಗೆ ಕಟ್ಟಿದ



ಪ್ರಿಯತಮನಿಂದ ಫೋನ ಬಂದಾಗ

ಗಂಟನ್ನು ಯಾರೂ ಬಿಚ್ಚಿರಲಿಲ್ಲ. ಮೈ-ಕೈ ಎಲ್ಲ ಬೆಂಕಿ ಆವರಿಸಿ, ಪೂರ್ತಿ ದೇಹವೇ ಸುಟ್ಟು ಹೋಯಿತು. ಗಾಬರಿಯಾಗಿ ಮುಖವನ್ನು ಮುಚ್ಚಿಕೊಂಡಿದ್ದರಿಂದ ದೈವವಶಾತ್ ಮುಖಕ್ಕೆ ಮಾತ್ರ ಏನೂ ಆಗಿರಲಿಲ್ಲ.

ಮದ್ರಾಸಿನ ಉಡ್‌ಲ್ಯಾಂಡ್ ಹೋಟೆಲಿನಲ್ಲಿ ಎರಡು ತಿಂಗಳು ಬಂದಿಯಾಗಿ ನಾನು ಚಿಕಿತ್ಸೆ ಪಡೆದೆ. ಈ ಸಲ ನಾನು ಬದುಕುವ ಆಸೆಯೇ ಇರಲಿಲ್ಲ. ಗಾಬರಿಯಾಗ ತಾಯಿಯವರು ನನ್ನನ್ನು ತಿರುಪತಿಗೆ ಕರೆದೊಯ್ದು ದೇವರೆದುರು ಅತ್ತುಬಿಟ್ಟರು.

"ದೇವರೆ, ಏನು ತಪ್ಪು ಮಾಡಿದೆ ಅಂತ ನನ್ನ ಮಗಳಿಗೆ ಈ ಶಿಕ್ಷೆ ವಿಧಿಸುತ್ತಿರುವಿ. ಅವಳ ಬದಲು ನನಗಾದರೂ ಆ ಶಿಕ್ಷೆ ವಿಧಿಸಬಾರದೆ ?" ಎಂದು.

ಅದೇನು ಚಮತ್ಕಾರವೊ, ಅಂದಿನಿಂದ ಪ್ರತಿ ಸಲ ಅಪಘಾತದಲ್ಲಿ, ನನ್ನ ಬದಲು ಅವಳಿಗೇ ಏಟು ಬೀಳುತ್ತಿದೆ. ತಾಯಿಯ ಈ ತ್ಯಾಗ-ಸಹನೆಯನ್ನು ನಾನು ಹೇಗೆ ಮರೆತೇನು !

ನಾನು ಭಾವನಾಜೀವಿ. ಕೊಂಚ ಅಂಜುಬುರುಕಿ. ಬಾತ್‌ರೂಂಗೆ ಕೂಡ ಒಬ್ಬಳೇ ಹೋಗಲು ನನಗೆ ಭಯ. ಕೋಣೆಯಲ್ಲಿ ಒಬ್ಬಳೇ ಇರಲು ಈಗ ಸಹ ನನ್ನಿಂದಾಗದು.

ನಾಜೂಕು ಹುಡುಗಿಗೆ ವರಾನ್ವೇಷಣೆ

ಇಂಥ ನಾಜೂಕು ಹುಡುಗಿಗೆ ವರ ಹುಡುಕಲು ನನ್ನ ತಾಯಿ ಪಟ್ಟ ಬವಣೆ ಹೇಳತೀರದು. ವರಾನ್ವೇಷಣೆ ಮಾಡುತ್ತ ಅವರು ವರ್ಷಗಟ್ಟಲೆ ಊರೂರು ಅಲೆದದ್ದುಂಟು.

ಆದರೂ ಅವರ ಮನಸ್ಸಿಗೆ ಬರುವ ಒಬ್ಬ ವರನೂ ಸಿಗಲಿಲ್ಲ. ಆಗ ಹಿರಿಯ ರಾಜಕಾರಣಿಯೊಬ್ಬರು ಬೇರೆ ಜಾತಿಯ ವರ ಹುಡುಕಲು ಸಲಹೆ ಮಾಡಿದರು. ಮದುವೆ ಬೇಗ ನಿಶ್ಚಯವಾಗದ ಚಿಂತೆಯಿಂದ ಸೊರಗಿ ಹೋಗಿದ್ದರೂ ತಾಯಿಯವರಿಗೆ ಈ ಮಾತು ಸರಿಬರಲಿಲ್ಲ. ಕಾರಣ ಕಂಡ ಕಂಡ ದೇವರಿಗೆ ಹರಕೆ ಹೊತ್ತಾಯಿತು.

ಕಾಶೀ ವಿಶ್ವನಾಥ ಒಬ್ಬ ಬಾಕೀ ಉಳಿದಿದ್ದ. ಸರಿ ಅಲ್ಲಿಗೂ ತಾಯಿ- ಮಗಳ ಪ್ರಯಾಣದ ಸಿದ್ಧತೆ ನಡೆಯಿತು. ನಮ್ಮನ್ನು ಕಂಡು ಸ್ನೇಹಿತೆಯರಿಗೆ ನಗು. ಇದೇನು, ಸನ್ಯಾಸ ಸ್ವೀಕರಿಸಿದವರಂತೆ ಕಾಶೀಯಾತ್ರೆ ಕೈಕೊಂಡಿರುವಿಯಲ್ಲ ! ಎಂದು ಗೇಲಿ ಮಾಡಲು ಶುರು ಮಾಡಿದರು.

ಆದರೆ ತಾಯಿಯವರ ಮನಸ್ಸಿಗೆ ನೋವುಂಟು ಮಾಡಲಾಗದೇ ಕಾಶಿಗೆ ಹೋಗಿ, ಒಳ್ಳೆಯ ಗಂಡನನ್ನು ಕರುಣಿಸು, ಎಂದು ಬೇಡಿಕೊಂಡದ್ದಾಯಿತು.

ಆಶ್ಚರ್ಯವೆಂದರೆ – ಅಲ್ಲಿಂದ ಬೆಂಗಳೂರಿಗೆ ಬರುವಷ್ಟರಲ್ಲೇ – ಶ್ರೀ ಹರ್ಷ ಅವರ ಕುಂಡಲಿ ತೆಗೆದುಕೊಂಡು ಯಾರೋ ಬಂದಿದ್ದರು. ತಾಯಿಯವರಿಗೂ ವರ ಮನಸ್ಸಿಗೆ ಬಂದರು. ಆದರೆ ಅದೇ ವೇಳೆಗೆ ಮತ್ತೆ ನಾಲ್ಕಾರು ಒಳ್ಳೆಯ ವರಗಳ ಕುಂಡಲಿ ಕೈಸೇರಿದವು. ತಾಯಿಯವರು ಪುನಃ ಗೊಂದಲದಲ್ಲಿ ಸಿಕ್ಕಿ ಶೃಂಗೇರಿಗೆ ಓಡಿದರು.

ಅಲ್ಲಿ ಚೀಟಿ ಎತ್ತಿದಾಗ – ಪುಣ್ಯಕ್ಕೆ ಶ್ರೀ ಹರ್ಷ ಅವರ ಹೆಸರೇ ಬಂದಿತಂತೆ. ಶ್ರೀಹರ್ಷ ನನ್ನ ಬಾಳ ಜೊತೆಗಾರರಾದುದು ಹೀಗೆ.

ಶ್ರೀ ಹರ್ಷರೊಂದಿಗೆ ವಿವಾಹ

೧೯೬೭ ಮಾರ್ಚ್ ೧ನೇ ತಾರೀಖು ನನ್ನ ಮದುವೆ ಬೆಂಗಳೂರಿನಲ್ಲಿ ನಡೆಯಿತು. ವೈಭವದಿಂದಲೇ ಮದುವೆ ಆಯಿತೆನ್ನಿ.

ಆದರೆ ಮದುವೆಯಾದ ನಂತರ – ಎಲ್ಲರೂ ಹನಿಮೂನ್‌ಗೆ ಹೋದರೆ ನಾನು ತಾಯಿಯವರ ಹರಕೆಯನ್ನು ಪೂರ್ತಿಗೊಳಿಸಲು ತೀರ್ಥಯಾತ್ರೆ ಕೈಗೊಳ್ಳಬೇಕಾಯಿತು.

ಮಧುರೆ, ರಾಮೇಶ್ವರ ಮೊದಲಾದ ನಾನಾ

ರಷ್ಯ ಹೋಟೆಲ್ ದೃಶ್ಯ. ರಶಿಯದ ಅತಿದೊಡ್ಡ ಹೋಟೆಲ್. ಅದರೆದುರು ತಾರೆ



ಸ್ಥಳಗಳಲ್ಲಿ ಪುನಃ ನನ್ನ ಮದುವೆಯ ಶಾಸ್ತ್ರ ನಡೆಯಿತು. "ಒಳ್ಳೆಯ ವರ ಸಿಕ್ಕರೆ ನಿನ್ನ ಆಶ್ರಯದಲ್ಲೇ ಮದುವೆ ಮಾಡುವೆ" ಎಂದು ನನ್ನ ತಾಯಿ ಆ ದೇವರುಗಳಿಗೆಲ್ಲ ಬೇಡಿಕೊಂಡಿದ್ದರಂತೆ.

ತಾಯಿಯ, ಆಕೆ ಹರಕೆ ಹೊತ್ತ ದೇವರುಗಳ ಅನುಗ್ರಹದಿಂದ ನನ್ನ ಕೈ ಹಿಡಿದ ಪತಿ ಒಳ್ಳೆಯವರೇ ಸಿಕ್ಕಿದ್ದಾರೆ.

ಮದುವೆಯಾದ ನಂತರ ನಾವು ಕ್ಷೇತ್ರ ಸಂದರ್ಶನ ನಡೆಸಿದಾಗ ಶ್ರೀಹರ್ಷ ಅವರ ಹೃದಯವಂತಿಕೆಯನ್ನು ನಾನು ತಿಳಿದುಕೊಂಡೆ. ನಾವು ಮಧುರೆಯಲ್ಲಿದ್ದಾಗ ನಾನು ಗಂಭೀರ ಸ್ವರೂಪದ ಕಾಯಿಲೆ ಬಿದ್ದೆ. ಹೊಟ್ಟೆಯಲ್ಲಿ ಅದೇನೊ ವೇದನೆ, ಮೈ ಉರಿ, ಮೇಲೆ ಚಳಿಜ್ವರ. ಒಮ್ಮೆ ವಿಪರೀತ ವಾಂತಿ ಮಾಡಿಕೊಂಡೆ. ಆಗ ನನ್ನ ಪತಿ ಸ್ವತಃ ತಮ್ಮ ಬೊಗಸೆಯಲ್ಲಿ ವಾಂತಿಯನ್ನು ಹಿಡಿದು ಹೊರಗೆ ಚೆಲ್ಲಿದರು. ಈ ಘಟನೆ ನನ್ನಲ್ಲಿ ಮಹತ್ವದ ಬದಲಾವಣೆ ಮಾಡಿತು.

ಮದುವೆಯ ನಂತರ ನಾನು ಚಿತ್ರರಂಗ ಬಿಡಬೇಕೆಂದು ನನ್ನ ತಾಯಿಯ ಇಚ್ಛೆ. ನಾನೂ ಹಾಗೇ ನಿರ್ಧರಿಸಿದೆ. ಈ ಸುದ್ದಿ ಕಾಳ್ಗಿಚ್ಚಿನಂತೆ ಎಲ್ಲೆಡೆ ಹಬ್ಬಿತು. ಸಚಿವರು, ನಿರ್ಮಾಪಕರು, ಬಂಧು-ಮಿತ್ರರಿಂದ ಮನೆಗೆ ಫೋನ್ ಕರೆ ಬರಲು ಶುರುವಾಯಿತು.

ಎಲ್ಲರದೂ ಒಂದೇ ಮಾತು, "ಕಿತ್ತೂರು ಚೆನ್ನಮ್ಮ"ದಂಥ ಚಿತ್ರದ ಅಭಿನೇತ್ರಿಯು ಒಮ್ಮೆಲೆ ಕಲಾರಂಗದಿಂದ ದೂರಸರಿಯುವುದೆಂದರೆ ಹೇಗೆ – ಎಂದು.


ಚಿತ್ರರಂಗದಲ್ಲಿ ಮುಂದುವರಿಯಲು ನಿರ್ಧಾರ

ಬಿ. ನಾಗಿರೆಡ್ಡಿಯವರಂಥ ಹಿರಿಯ ನಿರ್ಮಾಪಕರು ಕೂಡ ನಾನು ಚಿತ್ರರಂಗ ಬಿಡುವುದು ಸರಿಯಲ್ಲ ಎಂದರು. ಆಗ ನಾನು ೯೬ ಚಿತ್ರಗಳಲ್ಲಿ ಅಭಿನಯಿಸಿದ್ದೆ. ೧೦೦ ಚಿತ್ರಗಳನ್ನಾದರೂ ಪೂರ್ತಿ ಮುಗಿಸು ಎಂದು ನನ್ನ ಪತಿ ಹೇಳಿದರು. ಮನೆಯ ಇತರರೂ ಅಸ್ತು ಎಂದರು.

ನನ್ನ ಪತಿ ಅಂದು ಒಪ್ಪಿಗೆ ನೀಡಿರದಿದ್ದರೆ ಈ ಎರಡೂವರೆ ವರ್ಷಗಳಲ್ಲಿ ಬಿ. ಸರೋಜಾದೇವಿಯ ಹೆಸರೇ ಎಲ್ಲರ ಸ್ಮೃತಿಪಟಲದಿಂದ ಮರೆಯಾಗಿ ಬಿಡುತ್ತಿತ್ತೇನೊ.

ಕಲಾವಿದರು, ರಾಜಕಾರಣಿಗಳ ಬದುಕೇ ಹೀಗೆ. ಅವರು ಕಣ್ಣೆದುರು ಇರುವವರೆಗೆ ಮಾತ್ರ ಅವರ ನೆನಪು.

ನನ್ನ ಪತಿ ಶ್ರೀಹರ್ಷ ಈಗಲೂ ಬಿ.ಈ.ಎಲ್. ಫ್ಯಾಕ್ಟರಿಯಲ್ಲಿ ಎಂಜಿನೀಯರ್ ಕೆಲಸ ಮಾಡುತ್ತಾರೆ. ನನ್ನ ವೃತ್ತಿಯಲ್ಲಿ ಅವರೆಂದೂ ಅಡ್ಡಾಗಿಲ್ಲ. ಅವರಿಂದಾಗಿ ಒಮ್ಮೆಯಾದರೂ ನಾನು ಶೂಟಿಂಗ್‌ಗೆ ತಡವಾಗಿ ಹೋಗುವ ಪ್ರಸಂಗ ಬಂದಿಲ್ಲ.



ಕರ ಕೌಶಲದ ವಸ್ತುಗಳ ಸಂಗ್ರಹಣೆಯಲ್ಲಿ ತಾರೆಗೆ ವಿಶೇಷ ಆಸ್ಥೆ


ಸ್ಟುಡಿಯೊ ಕೆಲಸ ಮುಗಿಸಿ ಮನೆಗೆ ಬಂದರೆ ನಾನು ತಾರೆಯಲ್ಲ; ಗೃಹಿಣಿ. ಪತಿಯ ಸೇವೆ, ಅವರ ಇಚ್ಛೆಗೆ ತಕ್ಕಂತೆ ನಡೆಯುವುದರಲ್ಲೇ ನನಗೆ ತೃಪ್ತಿ. ನನ್ನ ಅತ್ತೆ ಮಾವಂದಿರು ಕೂಡ ಚಿನ್ನದಂಥ ಮನುಷ್ಯರು. ಸೊಸೆಯನ್ನು ಮಗಳಂತೆ ನೋಡಿಕೊಳ್ಳುವ ಇಂಥ ಹಿರಿಯರು ಅಪರೂಪ.

ಪದ್ಮಶ್ರೀ ಪ್ರಶಸ್ತಿ

ಈ ಸಲ ನನಗೆ ಪದ್ಮಶ್ರೀ ಪ್ರಶಸ್ತಿ ದೊರೆತಾಗ ನನಗಿಂತ ಅವರಿಗಾದ ಹೆಮ್ಮೆ ಅಷ್ಟಿಷ್ಟಲ್ಲ. ನನ್ನ ಜೊತೆಯ ಕಲಾವಿದರೂ, ಸಹೋದ್ಯೋಗಿಗಳೂ ನನ್ನ ಈ ಆನಂದದಲ್ಲಿ ಪಾಲ್ಗೊಂಡುದನ್ನು ನೋಡಿದಾಗ ನನ್ನ ಜೀವನ ಸಾರ್ಥಕ ಎನಿಸುತ್ತದೆ. ಆರ್. ನಾಗೇಂದ್ರರಾಯರಂಥ ಚಿತ್ರರಂಗದ ಭೀಷ್ಮರು ಕೂಡ ನನಗೆ ಸನ್ಮಾನ ನೀಡಿ, ಗೌರವಿಸಿ, ಆಶೀರ್ವದಿಸಿದರು. ಇದಕ್ಕಿಂತ ಬೇರೆ ಇನ್ನಾವ ಭಾಗ್ಯವಿದೆ?

ಇತ್ತೀಚೆ ಇನ್ನೊಂದು ಭಾಗ್ಯವೂ ನನಗೆ ಲಭಿಸಿತು. ಈ ವರ್ಷ ಆಗಸ್ಟ ತಿಂಗಳಲ್ಲಿ ತಾಷ್ಕೆಂಟಿನಲ್ಲಿ ನಡೆದ ಚತುರ್ಥ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪಾಲ್ಗೊಳ್ಳಲು ನನ್ನನ್ನೂ ನನ್ನ ಪತಿಯನ್ನೂ ರಷ್ಯ ಸರ್ಕಾರದವರು ಆಮಂತ್ರಿಸಿದ್ದರು. ಇದು ನನ್ನ ಪ್ರಥಮ ವಿದೇಶಯಾತ್ರೆ.

ಕಳೆದ ವರ್ಷವೇ ರಷ್ಯದಿಂದ ಇಂಥದೊಂದು ಆಹ್ವಾನ ಬಂದಿತ್ತು. "ಪಣಮಾ ಪಾಶಮಾ" ತಮಿಳು ಚಿತ್ರವನ್ನು ತಾಷ್ಕೆಂಟಿನಲ್ಲಿ ಪ್ರದರ್ಶಿಸಿದಾಗ ನಾನು ಭಾರತೀಯ ಚಿತ್ರರಂಗದ



ತೋಟಗಾರಿಕೆಯಲ್ಲಿ ತುಂಬ ಆಸಕ್ತಿಯಿರುವ ಸರೋಜಾದೇವಿ ಮನೆಯ ಸುತ್ತ ಅಂದವಾದ ತೋಟವನ್ನು ಬೆಳೆಸಿದ್ದಾಳೆ.

ಚೆಲುವೆ ಎಂದು ನನ್ನನ್ನು ಅಲ್ಲಿನ ಪತ್ರಿಕೆಗಳು ಬಣ್ಣಿಸಿದುವಂತೆ. ಆದರೆ ಆಗ ನನಗೊಬ್ಬಳಿಗೇ ಆಹ್ವಾನ ಬಂದಿದ್ದರಿಂದ ನಾನು ಹೋಗಲಿಲ್ಲ.

೧೫ ವರ್ಷಕಾಲ ಬಿಡುವಿಲ್ಲದೆ ಚಿತ್ರರಂಗದಲ್ಲಿ ದುಡಿದ ನನಗೆ ನಾಲ್ಕು ವಾರಗಳ ಈ ವಿದೇಶಯಾತ್ರೆ ಬಹಳಷ್ಟು ತೃಪ್ತಿ ನೀಡಿತು. ಪಂಜರದಿಂದ ಹೊರಗೆ ಬಂದ ಗಿಣಿಯಂತೆ ನಾನು ಸ್ವಚ್ಛಂದವಾಗಿ ವಿಹರಿಸಿದೆ. ಬೇಕಾದಲ್ಲಿ ಓಡಾಡಿದೆ. ಹತ್ತಾರು ಮೈಲಿ ನಡೆದೆ.

ರಷ್ಯ, ಜರ್ಮನ್, ಫ್ರಾನ್ಸ್, ಬ್ರಿಟನ್, ಸ್ವಿತ್ಸರ್ಲೆಂಡ್ ಮೊದಲಾದ ದೇಶಗಳಲ್ಲಿ ಸುತ್ತಾಡಿದ ನನಗೆ ಭಾರತವು ಇನ್ನೂ ಅದೆಷ್ಟು ಪ್ರಗತಿ ಸಾಧಿಸಬೇಕಾಗಿದೆ ಎಂಬುದರ ಸಾಕ್ಷಾತ್ ದರ್ಶನವಾಯಿತು.

ಅಮೆರಿಕದವರ ಪ್ರಚಾರದಿಂದಾಗಿ ರಷ್ಯದ ಬಗ್ಗೆ ನಾವು ವೃಥಾ ಭಯಪಡುತ್ತೇವೆ. ಕಮ್ಯುನಿಸ್ಟ ದೇಶದ ಜನತೆ ನಮ್ಮಂತೇ ಸ್ವತಂತ್ರರಾಗಿದ್ದಾರೆ, ಇಷ್ಟೇ ಅಲ್ಲ ಅವರು ನಮಗಿಂತ ಸುಖಿಗಳು.

ರಷ್ಯದಲ್ಲಿ ಐದು ಸಹಸ್ರ ಕೋಣೆಗಳುಳ್ಳ "ಹೋಟೆಲ್ ರಶಿಯಾ" ಎಂಬ ಬೃಹತ್ ಹೋಟೆಲ್ಲಿನಲ್ಲಿ ನಾವು ಇಳಿದುಕೊಂಡಿದ್ದವು.

ಅಲ್ಲಿ ನಡೆದ ಸ್ವಾರಸ್ಯಕರ ಘಟನೆಯೊಂದನ್ನು ನಾನಿಲ್ಲಿ ಹೇಳಲೇಬೇಕು.

ತಾರೆ ವೈಜಯಂತಿಮಾಲಾಳ ಜೊತೆಗೇನೆ ನಾವು ಮಾಸ್ಕೋಗೆ ತೆರಳಿದೆವು. ಅಲ್ಲಿ ವಿಮಾನದಿಂದ ಇಳಿಯುವದೇ ತಡ – ನನಗೂ ವೈಜಯಂತಿಗೂ ವಿಪರೀತ ಬಾಯಾರಿಕೆ.

ನೀರು ಬೇಡಿದರೆ – ಅಲ್ಲಿ ಯಾರೂ ದುಡ್ಡು ಬೇಡಿದರು. "ವಿಮಾನ ಇಳಿಯುವದೊಂದೇ ತಡ ನಮಗೆ ಅವಮಾನವಾಯಿತಲ್ಲಾ!" ಎಂದು ನೇರವಾಗಿ ಹೋಟೆಲ್ಲಿಗೆ ಬಂದೆವು.

ಅಲ್ಲಿ ಕೂಡ ಅದೇ ಗತಿ. ನೀರು ಬೇಡಿದರೆ ಏಕೆ? ಎಂಬ ಪ್ರಶ್ನೆ. ಒಬ್ಬ ಅಧಿಕಾರಿಯಂತೂ ವಿನಮ್ರನಾಗಿ ಕೇಳಿದ "ನೀರು ಬೇಕೆನ್ನುತ್ತೀರಿ, ಎಂಥ ನೀರು? ಏತಕ್ಕೆ ಬೇಕು" ಎಂದು.

ನೀರನ್ನು ಆ ಜನ ಕುಡಿಯುವದಿಲ್ಲ. ನಮಗೂ ನೀರು ಕುಡಿಯದಿದ್ದರೆ ಬಾಯಾರಿಕೆ ತಣ್ಣಗಾಗುವಂತಿಲ್ಲ. ಕೊನೆಗೆ ನಾನು ಬಾಥ್‌ರೂಂಗೆ ಹೋದಾಗ, ಅಲ್ಲಿಯ ನಲ್ಲಿಯಲ್ಲೇ ಗುಟ್ಟಾಗಿ ಹೊಟ್ಟೆ ತುಂಬ ನೀರು ಕುಡಿದೆ.

ಹೊರಗೆ ಬಂದು ವೈಜಯಂತಿಗೂ ಕಿವಿಯಲ್ಲಿ ಇದನ್ನೇ ಹೇಳಿದೆ. "ಬಾಥರೂಂಗೆ ಹೋಗಿ ಬೇಕಾದಷ್ಟು ನೀರು ಕುಡಿ. ಇಲ್ಲಿ ಗಲಾಟೆ ಮಾಡಿದರೆ ಏನೂ ಉಪಯೋಗವಿಲ್ಲ" ಎಂದು.

ವೈಜಯಂತಿ ಮಾಸ್ಕೋದಲ್ಲಿರುವ ವರೆಗೆ ಅನೇಕ ಸಲ ಈ ಮಾರ್ಗವನ್ನೇ ಅನುಸರಿಸಿದಳು. ನನಗೂ ಬೇರೆ ವಿಧಿಯೇ ಇರಲಿಲ್ಲ.


ರಷ್ಯಾ ಪ್ರವಾಸದಲ್ಲಿ ನಡೆದ ಇಂಥ ಕೆಲವು ಮೋಜಿನ ಘಟನೆಗಳನ್ನು ಬಿಟ್ಟರೆ – ನನ್ನ ಜೀವನದಲ್ಲಿ ಅದೊಂದು ಅವಿಸ್ಮರಣೀಯ ಯಾತ್ರೆ.

ರಷ್ಯಾದಲ್ಲಿ ನಾನು ತಾರೆ ಸೋಫಿಯ ಲಾರೆನ್ಳನ್ನು ಭೆಟ್ಟಿಯಾಗಿದ್ದೆ. ಅಮೇರಿಕದ ಗಗನ ಯಾತ್ರಿಗಳು ಚಂದ್ರನ ಮೇಲೆ ಇಳಿಯುವದನ್ನು ಟೆಲಿವಿಷನ್ ಮೂಲಕ ನಾವು ಅಲ್ಲಿಯೇ ಪ್ರತ್ಯಕ್ಷವಾಗಿ ಕಂಡೆವು.

ಮಗಳು – ಅಳಿಯ ಯಶಸ್ವಿಯಾಗಿ ಪ್ರವಾಸ ಮುಗಿಸಿಕೊಂಡು ಬಂದಾಗ ನನ್ನ ತಾಯಿಗಾದ ಆನಂದ ಅಷ್ಟಿಷ್ಟಲ್ಲ. ಪುಣ್ಯಕ್ಕೆ ಅದಕ್ಕಾಗಿ ಆಕೆ ಬೇರೆ ಎಲ್ಲಿಯೂ ಹರಕೆ ಹೊತ್ತಿರಲಿಲ್ಲ!

ಆದರೂ ತಾಯಿಯ ತವರೂರಿನ ದೇವಸ್ಥಾನಕ್ಕೆ ಮಾತ್ರ ನಾವು ಹೋಗಲೇಬೇಕಾಯಿತು. ಚೆನ್ನಪಟ್ಟಣ ಬಳಿಯ ದಶಾವರ ಗ್ರಾಮ ನನ್ನ ತಾಯಿಯ ಊರು. ಅಲ್ಲಿನ ರೇವಣಸಿದ್ಧೇಶ್ವರ ಆಕೆಯ ಇಷ್ಟದೇವತೆ. ಅಲ್ಲೇ

ಸ್ವಿಝರ್ಲಂಡದಲ್ಲಿ ಶ್ರೀ ಹರ್ಷ ಅವರೊಂದಿಗೆ.



ದೀಪಾವಳಿಯ ಶುಭಾಶಯಗಳು




ಸಂತಸದ ದೀಪಾವಳಿಯನ್ನು ಸಂಭ್ರಮದಿಂದ ಸ್ವಾಗತಿಸಲು...**ಕರೋನಾ !**


ಸ್ಪ್ರಿಂಗ್‌ಫ್ಲವರ್
ರೂ. 10·95*




ಸನ್-ಎನ್-ಸ್ಯಾಂಡ್
ರೂ. 11·95* (ಪುರುಷರಿಗೆ)
ರೂ. 10·25* (ಹುಡುಗರಿಗೆ)



ಕ್ಯಾಪ್ಟನ್
ರೂ. 17·95*



ವೇರ್‌ವೆಲ್
ರೂ. 32·95* (ಪುರುಷರಿಗೆ)
ರೂ. 25·75* (ಹುಡುಗರಿಗೆ)



* ತೆರಿಗೆಗಳು ಪ್ರತ್ಯೇಕ

ಕರೋನಾ ಪಾದರಕ್ಷೆಗಳಿಗೆ ದೀರ್ಘಕಾಲ ಬಾಳಿಕೆ, ಅತ್ಯಧಿಕ ತಾಳಿಕೆ !

ಕರೋನಾ ಸಾಹು ಕಂ. ಲಿ.
221, ದಾದಾಭಾಯಿ ನವರೋಜಿ ರೋಡ್, ಬೊಂಬಾಯಿ-1

ನಮ್ಮ ತೋಟ ಗದ್ದೆಗಳಿವೆ. ತಾಯಿಯ ಹೆಸರಿನಲ್ಲಿ ನಾವು ಆಲೂರೊಂದು ಶಾಲೆ ಕಟ್ಟಿಸಿದ್ದೇವೆ. ತಿರುಪತಿಯಲ್ಲಿ ಒಂದು ಗೆಸ್ಟ್‌ಹೌಸ್ ಕೂಡ ಕಟ್ಟಿಸಿದ್ದೇವೆ.

ಗಂಡುಸಂತಾನವಿಲ್ಲದ ನಮ್ಮ ತಾಯಿಗೆ ನಾವು ಮೂವರು ಹೆಣ್ಣುಮಕ್ಕಳು. ಅವರಲ್ಲಿ ನಾನು ಕಿರಿಯವಳು.

ನಾನು ಹುಟ್ಟುವಾಗ ನನ್ನ ತಾಯಿಗೆ ತೀವ್ರ ಪ್ರಸವ ವೇದನೆ. ಬೇಗ ಹೆರಿಗೆಯೇ ಆಗಲಿಲ್ಲ. ಆಗ ಹಿರಿಯರೊಬ್ಬರ ಸಲಹೆಯಂತೆ ಸತ್ಯನಾರಾಯಣ ಪ್ರಸಾದ ಸೇವಿಸಿದ ನಂತರ ಅವರಿಗೆ ಸುಸೂತ್ರವಾಗಿ ಹೆರಿಗೆ ಆಯಿತಂತೆ'

ಅಂತೇ ನಾನು ಹುಟ್ಟಿದ ದಿನ (ಜನವರಿ - ೭) ಸತ್ಯನಾರಾಯಣ ಪೂಜೆ ಮಾಡುವದು ನಮ್ಮ ಮನೆಯ ಸಂಪ್ರದಾಯ. ಈಗಲೂ ಅದು ಮುಂದುವರಿದಿದೆ.

ಎರಡು ಹೆಣ್ಣು ಹಡೆದ ನಮ್ಮ ತಾಯಿಗೆ ಮೂರನೆಯದಾದರೂ ಗಂಡು ಹುಟ್ಟಲಿ ಎಂಬುದು ನಮ್ಮ ತಾತನ ಬಯಕೆಯಾಗಿತ್ತು. ಆದರೆ ನಾನು ಹೆಣ್ಣಾಗಿ ಹುಟ್ಟಿದ್ದರಿಂದ ಅವರಿಗೆ ಅಸಮಾಧಾನವಾಯಿತು. "ಯಾರದಾದರೂ ಮನೆಗೆ ಕೊಟ್ಟು ಮದುವೆ ಮಾಡಿಬಿಡು" ಎಂದು ನನ್ನ ತಾಯಿಗೆ ಆಗವರು ಉದಾಸೀನರಾಗಿಯೇ ಹೇಳಿದ್ದರಂತೆ.

ನನ್ನ ತಾಯಿ ನನ್ನನ್ನು ಗಂಡು ಮಗುವಿನಂತೇ ಸಲಹಿದರು. ಬಾಲ್ಯದಲ್ಲಿ ನಾನು ಗಂಡುಹುಡುಗರಂತೆ ಬಟ್ಟೆ ಧರಿಸಿದ್ದೇ ಜಾಸ್ತಿ.

ನೂರು ವರ್ಷಗಳ ಅಂಚಿನಲ್ಲಿರುವ ನನ್ನ ತಾತ ನಾನು ದಶಾವರ ಗ್ರಾಮಕ್ಕೆ ಹೋದಾಗಲೆಲ್ಲ ಈ ಮಾತನ್ನು ನೆನೆಸಿಕೊಳ್ಳುತ್ತಾರೆ.



ಕಟ್ಟೊಪ್ಪ ಕೈಕೊಟ್ಟಾಗ?!

ನಾನು ಗಂಡಾಗಿ ಹುಟ್ಟದಿದ್ದುದೇ ಒಳ್ಳೆಯದಾಯಿತೆಂದು ಈಗವರು ಹೇಳುತ್ತಾರೆ. ಹೆಣ್ಣಾಗಿ ಹುಟ್ಟಿದರೂ ಮನೆತನಕ್ಕೆ ಕೀರ್ತಿ ತರುವಂತಾದೆನಲ್ಲಾ ಎಂಬ ಅಭಿಮಾನ ಅವರದು.

ನನ್ನ ಪತಿ ಹಾಗೂ ನನ್ನ ಅನ್ಯೋನ್ಯ ಸೌಹಾರ್ದವನ್ನು ಕಂಡು ನನ್ನ ತಾಯಿ ತಮ್ಮ ಜೀವನವು ಸಾರ್ಥಕವಾಯಿತೆಂದು ಹೇಳುತ್ತಾರೆ. ರಷ್ಯ ಯಾತ್ರೆ ಕೈಕೊಂಡಾಗ ನನಗೆ ಕೂಡ ನನ್ನ ಜೀವನ ಸಾರ್ಥಕ ಎನಿಸುವ ಘಟನೆಗಳು ನಡೆದುವು.

ನನ್ನ ಹಾಗೂ ನನ್ನ ಪತಿ ಶ್ರೀಹರ್ಷ ಅವರ ಗುಣಸಾಮ್ಯ ಹಾಗೂ ಒಂದೇ ಬಗೆಯ ದೃಷ್ಟಿಕೋನವನ್ನು ಗುರುತಿಸಿದ ಅನೇಕರು ನಮಗೆ "ನಿಮ್ಮದು ಪ್ರೇಮ ವಿವಾಹವೆ?" ಎಂದು ಕೇಳಿದರು.

"ಇಲ್ಲ ಮೊದಲೇ ಕುಂಡಲಿ ಕೂಡಿಸಿ, ಪರಸ್ಪರ ಹಿರಿಯರ ಆಶಯದಂತೆ ನಾವು ಮದುವೆಯಾದೆವು" ಎಂದು ಹೇಳಿದರೆ ಅಲ್ಲಿ ಯಾರಿಗೂ ನಂಬಿಕೆಯಾಗಲಿಲ್ಲ.

ಕೆಲವರಂತೂ ನಾವು ಅಲ್ಲಿರುವ ವರೆಗೆ ನಮ್ಮನ್ನು 'ಆದರ್ಶ ಜೋಡಿ' ಎಂದೇ ಕರೆಯುತ್ತಿದ್ದರು.

"ಪೆಣ್ ಎಂಡ್ರಾಳ್ ಪೆಣ್" ಚಿತ್ರದ ಮೂಲಕ ನೂರು ಚಿತ್ರಗಳ ಅಭಿನಯವನ್ನು ಪೂರ್ತಿಗೊಳಿಸಿದ ನನಗೆ ತಾರಾಜೀವನದ ಎಳೆಯ ಪ್ರಾಯದಲ್ಲೇ ಪದ್ಮಶ್ರೀ ಪ್ರಶಸ್ತಿ ಸಿಕ್ಕಿರುವದು ಅದೃಷ್ಟವೆಂದೇ ಹೇಳಬೇಕು.

ನನಗಿಂಥ ಒಳ್ಳೆಯ ಪತಿ ಸಿಕ್ಕಿರುವದೂ ನನ್ನ ತಾಯಿ ಹೊತ್ತ ಹರಕೆಯ ಫಲ.

ಹೋಗಲಿ. ನನ್ನ ತಾಯಿ ಹೊತ್ತ ಹರಕೆ ಇಷ್ಟಕ್ಕೇ ಮುಗಿಯಿತು ಎನ್ನುತ್ತೀರಾ?

ಈಗವಳದು ಬೇರೊಂದು ಆಶೆ. ನಾನು ಗಂಡುಮಗುವೊಂದನ್ನು ಹೆತ್ತು ಆಕೆಯ ಉಡಿಯಲ್ಲಿ ಹಾಕಬೇಕಂತೆ.

ತಾಯಿಯ ಇಚ್ಛೆಯನ್ನು ಪೂರ್ತಿಗೊಳಿಸಬೇಕು ಎಂಬುದೇ ನನ್ನ ಬಯಕೆ. ★

ಮುಗ್ಗುರಿಸಿ ಮುನ್ನಡೆದ ಕನ್ನಡ ಚಿತ್ರರಂಗ

— ವಿಜಯನಾರಸಿಂಹ

ಕನ್ನಡ ಚಿತ್ರರಂಗದಲ್ಲೀಗ ನವೋದಯವಾಗಿದೆ. ಹಿಂದಿನಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಚಿತ್ರಗಳು ತೆರೆಗಾಣುತ್ತಿವೆ. ಹೊಸ ಹೊಸ ಚಿತ್ರಮಂದಿರಗಳ ನಿರ್ಮಾಣವಾಗುತ್ತಿದೆ. ಹೊಸ ಹೊಸ ನಿರ್ದೇಶಕ, ನಿರ್ಮಾಪಕರೂ ಮುಂಬರುತ್ತಿದ್ದಾರೆ.

ಸ್ಟುಡಿಯೋಗಳು ಚಟುವಟಿಕೆಯಿಂದಿವೆ. ಮೈಸೂರಿನ ಪ್ರೀಮಿಯರ್ ಸ್ಟುಡಿಯೊ ಹಿಂದೆಂದೂ ಇಲ್ಲದಷ್ಟು ಚುರುಕಿನಿಂದ ದುಡಿಯುತ್ತಿದೆ. ನಟ ಶ್ರೀ ಟಿ. ಎನ್. ಬಾಲಕೃಷ್ಣರ ಅಭಿಮಾನ್ ಸ್ಟುಡಿಯೋದಲ್ಲಿಯೂ ಚಿತ್ರಗಳು ತಯಾರಾಗಹತ್ತಿವೆ. ಸುಜಾತಾ ಸ್ಟುಡಿಯೋ ಇದೀಗ ನವಚೈತನ್ಯ ಹೊಂದಿದೆ. ಪ್ರತಿಷ್ಠಿತ ಸ್ಟುಡಿಯೋ "ಪಕ್ಷಿರಾಜ"ದ ಶ್ರೀ ಶ್ರೀರಾಮುಲು ನಾಯಿಡುರವರು ಬೆಂಗಳೂರಿನಲ್ಲಿರುವ ತಮ್ಮ ಚಾಮುಂಡೇಶ್ವರಿ ಸ್ಟುಡಿಯೋವನ್ನು ಸುಸಜ್ಜಿತ, ಸ್ವಪರಿಪೂರ್ಣಗೊಳಿಸುತ್ತಿದ್ದಾರೆ. ಶೀಘ್ರದಲ್ಲೇ ಕಂಠೀರವ ಸ್ಟುಡಿಯೊ ಕೂಡ ಸ್ಥಾಪಿತವಾಗಲಿದೆ.

ನಿರ್ಮಾಪಕ ಶ್ರೀ ಪಂತುಲುರವರು ವಿಜಯನಗರದ "ಶ್ರೀಕೃಷ್ಣದೇವರಾಯ" ಚಾರಿತ್ರಿಕ ಚಿತ್ರದ ಅಮೋಘ ತಯಾರಿಕೆ ಕೈಕೊಂಡಿದ್ದಾರೆ. ಕನ್ನಡದಲ್ಲಿ ಮೊಟ್ಟಮೊದಲನೆಯ ವರ್ಣಚಿತ್ರ ತಯಾರಿಸಿದ ಶ್ರೀ ಬಿ. ಎಸ್. ರಂಗಾರವರು ಈಗ ಕನ್ನಡ ಚಿತ್ರರಂಗದ ಮೊದಲ ಸಾಮಾಜಿಕ ವರ್ಣಚಿತ್ರ ತಯಾರಿಸುತ್ತಿದ್ದಾರೆ.

ಸದ್ಯದಲ್ಲ 'ಆರ್ವೋ' ವರ್ಣದಲ್ಲಿ ಮತ್ತೊಂದು ಕನ್ನಡ ತಯಾರಿಕೆ ಆರಂಭವಾಗಲಿದೆ.

ನಿರರ್ಥಕ ಕೃತಿಗಳು


ಈ ಚಟುವಟಿಕೆ ಇತ್ತೀಚೆಗೆ ಪ್ರಾರಂಭವಾಗಿದೆ ಎಂಬುದು ನಿಸ್ಸಂದೇಹ. ಕನ್ನಡದವರೇ ಸ್ಥಾಪಿಸಿ ನಡೆಸುತ್ತಿರುವ ಪ್ರೀಮಿಯರ್ ಸ್ಟುಡಿಯೊ ಸರ್ಕಾರದ ಸಹಾಯಧನದ ಯೋಜನೆಯಿಂದಾಗಿ ಇಷ್ಟು ಲವಲವಿಕೆ ಪಡೆಯಿತು. ಚಿತ್ರ ಹೇಗೇ ಇರಲಿ ಸರ್ಕಾರ ಕೊಡುವ ಐವತ್ತು ಸಾವಿರ ರೂಪಾಯಿ ಸಹಾಯಧನ ಖಾತ್ರಿ ಎಂಬ ಆಶೆಯಿಂದ ಹಲವು ನಿರ್ಮಾಪಕರು ಮುಂದೆ ಬಂದುದರಿಂದ ಚಿತ್ರಗಳ ಸಂಖ್ಯೆ ಹೆಚ್ಚಿಸಿತೇ ವಿನಾ ಇದರಿಂದ ಉದ್ಯಮಕ್ಕೆ ಕೀರ್ತಿ ತರುವಂಥ ಕೃತಿಗಳು ತೆರೆಗೆ ಮೂಡಲಿಲ್ಲ. ಕನ್ನಡ ನಾಡಿನ ಯಾವ ಮೂಲೆಯಲ್ಲೇ ಚಿತ್ರ ತಯಾರಿಸಿದರೂ ಸರ್ಕಾರದ ಹಣ ದೊರೆಯುವದೆಂದು ಕನ್ನಡ ನಾಡಿನ ಕಾಡುಮೇಡುಗಳಲ್ಲಿ ಸ್ಟುಡಿಯೋ ಸಂಪರ್ಕವಿಲ್ಲದೆ ಚಿತ್ರ ತಯಾರಿಸಲು ಕೆಲ

— ೨೨೦ ನೆಯ ಪುಟಕ್ಕೆ




" ಗಂಡೊಂದು ಹೆಣ್ಣಾರು " ಚಿತ್ರದಲ್ಲಿ ರಾಜಕುಮಾರ ಹಾಗು ಬಾಳಕೃಷ್ಣ

ಭಾರತದ ಚಿತ್ರರಂಗದಲ್ಲಿಯೆ ಹಿಂದುಳಿದಿದ್ದ ಕನ್ನಡ ಚಿತ್ರೋದ್ಯಮವು ಇಂದು ಭರದಿಂದ ಮುನ್ನಡೆಯುತ್ತಿದೆ. ಯಾವುದೇ ಉದ್ಯಮ ಯಶಸ್ವಿಯಾಗಿ ಮುಂದರಿಯಲು ಕ್ಷೇತ್ರಕರ್ಮಚಾರಿಗಳ ಸಹಕಾರ ಸ್ವಪ್ರಯತ್ನ ಅಗತ್ಯ. ಚಿತ್ರರಂಗವೂ ಇದಕ್ಕೆ ಹೊರತಾಗಿಲ್ಲ. ಸಾಮೂಹಿಕ ಪ್ರಯತ್ನ ಸಾಧನೆಯಿಂದ ಬೆಳಕು ಕಾಣುವ ಚಲಚ್ಚಿತ್ರ ಯಾರೊಬ್ಬರ ಸಾಹಸದ ಫಲ ಮಾತ್ರವಲ್ಲ. ಯಾರೂ ಕಡಿಮೆಯೆಂಬ ಪ್ರಶ್ನೆಯೂ ಇಲ್ಲಿಲ್ಲ. ಎಲ್ಲರ ಮೆಚ್ಚುಗೆ, ಪ್ರಶಂಸೆಗಳಿಗೆ ಪಾತ್ರವಾಗುವ ಚಲಚ್ಚಿತ್ರ ಚಿತ್ರರಂಗದ ಎಲ್ಲರ ಸೌಹಾರ್ದ ಪ್ರಯತ್ನದ ಫಲವೇ ಆಗಿರುತ್ತದೆ. ಇದರಲ್ಲಿ ನಿರ್ಮಾಪಕನಿಂದ ಚಿತ್ರನಿರ್ದೇಶನದ ಹೊಣೆ ಹೊತ್ತ ನಿರ್ದೇಶಕ ಹಾಗು ನಟನಟಿಯರ ಜವಾಬ್ದಾರಿ ಗುರುತರವಾದದ್ದು. ಇವರೀರ್ವರ ಸಹಕಾರ, ಸೌಹಾರ್ದವನ್ನೇ ಚಿತ್ರದ ಯಶಸ್ಸು ಬಹುಮಟ್ಟಿಗೆ ಅವಲಂಬಿಸಿರುತ್ತದೆ. ಅಂತೆಯೆ ನಿರ್ದೇಶಕ, ನಟ ನಟಿಯರ ಸೌಹಾರ್ದಯುತ ಜವಾಬ್ದಾರಿಯೆಂತಹದೆಂಬುದನ್ನು ತಾರೆಯರೇ ಇಲ್ಲಿ ಹೇಳಿದ್ದಾರೆ-'ಕರ್ಮವೀರ'ನ ವಾಚಕರಿಗಾಗಿ ಸದಭಿಮಾನದಿಂದ.



ತಾರೆ ನಿರ್ದೇಶಕನ ಕೈಗೊಂಬೆಯೇ?





ಯಾರು ಯಾರ ಕೈಗೊಂಬೆಯಾದರೇನು ?

ನನಗೇನೊ "ತಾರೆ ನಿರ್ದೇಶಕನ ಕೈಗೊಂಬೆಯೆ?" ಎಂಬ ಪ್ರಶ್ನೆ ತಮಾಷೆಯಾಗಿದೆ. ಕೆಲವೊಮ್ಮೆ, ಕೆಲವು ಸಂದರ್ಭಗಳಲ್ಲಿ ತಾರೆಗೆ ನಿರ್ದೇಶಕ ಕೈಗೊಂಬೆಯಾಗಿರುವುದನ್ನು ನೋಡಿದ್ದೇನೆ, ತಾರೆ ನಿರ್ದೇಶಕನ ಕೈಗೊಂಬೆಯಾಗಿರುವುದನ್ನೇನೋ ಬಲ್ಲೆ ! ಇದು ನಿಜವಾಗಿಯೂ ಬಿಡಿಸಲಾಗದ ಒಗಟು. ಬೀಜದಿಂದ ಮರವೊ? . ಮರದಿಂದ ಬೀಜವೊ? ಯಾರು ಯಾರ ಕೈಗೊಂಬೆಯಾದರೇನು? ತಿನ್ನುವವರಿಗೆ ಹಣ್ಣು ಮುಖ್ಯವಿದ್ದಂತೆ. ಪ್ರೇಕ್ಷಕರಿಗೆ ಚಿತ್ರ ಮುಖ್ಯ ಅಲ್ಲವೆ?

— ಸುದರ್ಶನ್



ನಿರ್ದೇಶಕನೇ ಕೈಗೊಂಬೆ!

"ಕೈಗೊಂಬೆ" ಎಂದರೆ ಆಡಿಸಿದಂತೆ ಆಡುವ, ಚೇತನರಹಿತ ವಸ್ತುವಿಗೆ ಸಮಾನವಾದದ್ದು. ತಾರೆ ನಿರ್ದೇಶಕನ ಕೈಗೊಂಬೆಯಾದರೆ ಅವನ ಇಚ್ಛೆಯ ಪ್ರಕಾರ ತನ್ನ ಪ್ರತಿಭೆಯನ್ನು ಮೂಲೆಪಾಲು ಮಾಡಿ ಕುಣಿಯಬೇಕಾಗುತ್ತದೆ. ನಿಜವಾದ ನಟಿಗೆ ಇಂಥ ಪರಿಸ್ಥಿತಿ ಬರುವುದೇ ಇಲ್ಲ. ಬಂದರೂ ನಿರ್ದೇಶಕನೇ ಆಕೆಯ ಅಭಿನಯಕ್ಕೆ ಮುಗ್ಧನಾಗಿ ಆಕೆಯ ಕೈಗೊಂಬೆಯಾಗುತ್ತಾನೆ.

— ಲೀಲಾವತಿ

ಸೋದರವಾತ್ಸಲ್ಯ

ನಾವು ಕನ್ನಡ ಚಿತ್ರರಂಗದಲ್ಲಿ ಪ್ರೀತಿ ವಾತ್ಸಲ್ಯವನ್ನು ಕಂಡಿದ್ದೇವೆ. ನಿರ್ದೇಶಕರು ತಾರೆಯರನ್ನು ಸೋದರಿಯಂತೆ, ತಾಯಂತೆ, ಕಾಣುತ್ತಾರೆ. ನಿರ್ದೇಶಕರು ತಾರೆಯನ್ನು ಕೈಗೊಂಬೆಯಂತೆ ಕಾಣುವುದಿಲ್ಲ.

— ಪಂಢರಿಬಾಯಿ



ಬುದ್ಧಿವಂತರ ಪ್ರಪಂಚದಲ್ಲಿ...

ತಾರೆ ನಿರ್ದೇಶಕನ ಕೈಗೊಂಬೆಯಲ್ಲ. ಆಕೆಗೆ ಸ್ವತಂತ್ರ ವಿಚಾರಶಕ್ತಿ ಇದೆ. ಕಥೆಯ ಸಮಯ, ಸನ್ನಿವೇಶ, ಪಾತ್ರದ ಉಚಿತಾನುಚಿತತೆಯನ್ನು ಬಲ್ಲವರ ನಿರ್ದೇಶನಕ್ಕೆ ಮಾನ್ಯತೆ ಕೊಡಬೇಕಾದದ್ದು ಯೋಗ್ಯವೆ. ಆದರೆ ತೀಕ್ಷ್ಣಬುದ್ಧಿಯ ತಾರೆ, ನಿರ್ದೇಶಕ ಎಂದು ವೇಳೆ ಎಡವಿದರೂ ತಿದ್ದಬಲ್ಲಳು. ಇದು ಕೇವಲ ಬುದ್ಧಿಯ ಪ್ರಪಂಚ! ಬುದ್ಧಿವಂತರು ಯಾರ ಕೈಗೊಂಬೆಯೂ ಆಗಲಾರರು.

— ಮೈನಾವತಿ

ನಿರ್ದೇಶಕನಿಗೇ ಸ್ಫೂರ್ತಿ!

ಮನೆಗೊಬ್ಬ ಯಜಮಾನನಿರುವಂತೆ ಚಿತ್ರಕ್ಕೆ ಒಬ್ಬ ನಿರ್ದೇಶಕ ಮುಖ್ಯ. ಜವಾಬ್ದಾರಿ ಅರಿತ ಮನೆಯ ಯಜಮಾನ ನುರಿತ ವ್ಯಕ್ತಿಗಳನ್ನು ಹೇಗೆ ನೋಡಿಕೊಳ್ಳುತ್ತಾನೆಯೋ ಹಾಗೆಯೇ ಜವಾಬ್ದಾರಿ ಅರಿತ ತಾರೆಯನ್ನು ನಿರ್ದೇಶಕ ನೋಡಿಕೊಳ್ಳುತ್ತಾನೆ. ಅಭಿನಯದ ಅನುಭವ, ಜವಾಬ್ದಾರಿಯರಿಯದ ಹೊಸ ನಟಿ ನಿರ್ದೇಶಕನ ಕೈಗೊಂಬೆಯಂತೆ ನಡೆದುಕೊಂಡರೂ, ಪಾತ್ರಾಭಿನಯದ ತಂತ್ರವರಿತ ನಟಿ ನಿರ್ದೇಶಕನ ಕೈಗೊಂಬೆಯಲ್ಲ; ಆತನಿಗೇ ಸ್ಫೂರ್ತಿ ನೀಡಿ ಆತನ ಯಶಸ್ಸಿಗೆ ಕಾರಣಳಾಗುವ ಭಾಗ್ಯತಾರೆ!

— ಭಾರತಿ



ಯಾರೂ ಇಲ್ಲ, ಆದರೂ...!

ಯಾರಿಗೆ ಯಾರೂ ಅಧೀನರಲ್ಲ. ಎಲ್ಲರೂ ಅವರಷ್ಟಕ್ಕೆ, ಅವರು ಸ್ವತಂತ್ರರೆ! ಹೀಗಿರುವಾಗ "ತಾರೆ ನಿರ್ದೇಶಕನ ಕೈಗೊಂಬೆಯ?" ಎಂಬ ಪ್ರಶ್ನೆ ಉದ್ಭವಿಸುವುದೇ ಇಲ್ಲ. ಆದರೂ ಚಾಣಾಕ್ಷ ನಿರ್ದೇಶಕನಿಗೆ ಎಲ್ಲವೂ ಕೈಗೊಂಬೆಯೆ!

— ಉದಯಕುಮಾರ್

ಸಹಕಾರ-ಕರ್ತವ್ಯ

ಚಿತ್ರನಿರ್ಮಾಣ ಒಬ್ಬರಿಂದಾಗುವ ಕೆಲಸವಲ್ಲ. ಹಲವಾರು ಪ್ರತಿಭೆಗಳು ಒಟ್ಟುಗೂಡಿ ತಯಾರಾಗಬೇಕಾದ ಸಂಯುಕ್ತ ಪ್ರಯತ್ನವಿದು. ಈ ಪ್ರಯತ್ನದ ಹೊಣೆ ಹೊತ್ತ ನಿರ್ದೇಶಕನ ಸಲಹೆ ಸೂಚನೆಗಳನ್ನು ತಾರೆಯರು ತಮ್ಮ ಹೊಣೆ ಅರಿತು ನೆರವೇರಿಸಿದರೆ ನಿರ್ದೇಶಕನ ಕೈಗೊಂಬೆಯಾದಂತೇನೂ ಅಲ್ಲ. ನಿರ್ದೇಶಕನಿಗೆ ವಿಶಿಷ್ಟ ದಕ್ಷತೆ ಇರುವುದರಿಂದಲೇ ಆ ಸ್ಥಾನದಲ್ಲಿರುತ್ತಾನೆ. ಆತ್ಮಾಭಿಮಾನವನ್ನು ಕಾಯ್ದುಕೊಂಡು ಪ್ರತಿಭಾವಂತ ನಿರ್ದೇಶಕನಿಗೆ ಸಹಕಾರ ನೀಡುವುದು ನಟ ನಟಿಯರ ಕರ್ತವ್ಯ.

— ಜಯಂತಿ



(೨೧೭ ನೇ ಪುಟದಿಂದ)

ನಿರ್ಮಾಪಕರು ಯೋಜಿಸಿದ್ದಾರೆ. ಚಿತ್ರಕ್ಕೆ ಬೇಕಾಗುವ ಕಚ್ಚಾ ಸರಕು (ಯಾವ ಬಗೆಯ ದಾದರೇನು) ಕೊಂಡುಕೊಳ್ಳಲು ಅಥವಾ ಸಾಲ ಪಡೆಯುವ ಸಾಮರ್ಥ್ಯವಿದ್ದರೆ ಸಾಕು! ನಾಟಕದ ಕಂಪೆನಿಗಳಿಂದ ವಿಲಾಸಿ ನಟೀ ನಟರನ್ನು ಕಲೆ ಹಾಕಿ, ತೆರೆಯ ಮೇಲೆ ಚಿತ್ರಗಳನ್ನೂ ಹೆಚ್ಚಾಗಿ ನೋಡಿರದ (ಸ್ಟುಡಿಯೊ ಕೂಡ ಅಲ್ಲ) "ಸ್ಟಾರ್ಟ್", "ಕಟ್" ಎಂದು ಕೂಗಬಲ್ಲ ವ್ಯಕ್ತಿ ನಿರ್ದೇಶಕ, ಹಾರ್ಮೋನಿಯಂ ಬಾರಿಸಿದರೆ ಸಾಕು ಸಂಗೀತ ನಿರ್ದೇಶಕ. ಹೀಗೆ ಯಾರೋ ಛಾಯಾಗ್ರಾಹಕ, ಯಾರೋ ಸಾಹಿತಿ, ಸಂಭಾಷಣರಚಯಿತರನ್ನು ಕೂಡಿ ಹಾಕಿ ಒಂದು ಚಿತ್ರ ತಯಾರಿಸಿ ಸರ್ಕಾರದ ಸಹಾಯಧನವನ್ನು ಲಪಟಾಯಿಸುವ ಮನೋಭಾವದ ನಿರ್ಮಾಪಕರೇ ಈಗ ಹೆಚ್ಚುತ್ತಿರುವಂತಿದೆ. ಇಂತಹ ಸಂತೆಸರಕಿಗಾಗಿ ಸರ್ಕಾರದ ಸಹಾಯಧನ ದುರುಪಯೋಗವಾಗುವ ಬದಲು ಉದ್ದಿಶ್ಯಪೂರ್ಣ ಉತ್ತಮ ಗುಣಮೌಲ್ಯವುಳ್ಳ ಚಿತ್ರಗಳಿಗೇ ಮೀಸಲಾಗಿದ್ದರೆ ಸರ್ಕಾರದ ಸದುದ್ದೇಶಕ್ಕೆ ಮಸಿ ಬಳಿಯುವ ಹಾಸ್ಯಾಸ್ಪದ ಚಿತ್ರಗಳು ಹೇರಳವಾಗಿ ತಯಾರಾದಾವು! ಈ ದೃಷ್ಟಿಯಿಂದ ನೋಡಿದರೆ ಕನ್ನಡ ಚಿತ್ರರಂಗದಲ್ಲಿ ಪ್ರಗತಿಯನ್ನು ಬಯಸುವ ಸರ್ಕಾರ ಸೂಕ್ತರೀತಿಯಲ್ಲಿ ಪ್ರೋತ್ಸಾಹಿಸುವ ಹೊಸ ದೃಷ್ಟಿಕೋನವನ್ನು ಸೃಷ್ಟಿಸಿಕೊಳ್ಳಬೇಕಾಗುವದೇನೊ!

ರಾಜಕುಮಾರ ಹಾಗು ಚಂದ್ರಕಲಾ 'ಮಾರ್ಗದರ್ಶಿ' ಚಿತ್ರದಲ್ಲಿ



ಹೊಸ ದೃಷ್ಟಿಕೋನ

ವರ್ಣಚಿತ್ರಗಳ ಮಾತೂ ಅಷ್ಟೆ. ಆಡಂಬರದ ವರ್ಣಚಿತ್ರ ತಯಾರಿಸಿದರೆ ಮಾತ್ರ ಉದ್ದಿಶ್ಯ ಸಾಧನೆಯಾಗದು. ಅಥವಾ "ಕಪ್ಪು-ಬಿಳುಪಿ"ನಲ್ಲಿ ಕಾಲಿಲ್ಲದ ಕತೆಯನ್ನು ರೂಪಿಸಿದರೆ ಸಾಲದು. ತೆಗೆಯುವ ಚಿತ್ರಕ್ಕೆ ಒಂದು ನೈತಿಕ ಉದ್ದಿಶ್ಯ ಅಗತ್ಯ. (ಐವತ್ತು ಸಾವಿರ ರೂಪಾಯಿಗಳ ಸಬ್ಸಿಡಿ ಉದ್ದಿಶ್ಯವಲ್ಲ!) ಸಮಾಜವನ್ನು ಸರಿಹಾದಿಯಲ್ಲಿ ನಡೆಸಲು ಸಾಧಕವಾಗುವ ವಿಚಾರ ಪ್ರಚೋದಕ ಕಥೆಗಳನ್ನೂ, ವೈಜ್ಞಾನಿಕ, ಮನೋವೈಜ್ಞಾನಿಕ ಕಥೆಗಳನ್ನು ಸತ್ವಪೂರ್ಣವಾಗಿ ನಿರೂಪಿಸುವ ಹೊಸ ದೃಷ್ಟಿಕೋನ ನಿರ್ಮಾಪಕ-ನಿರ್ದೇಶಕರಲ್ಲಿ ಮೂಡಿಬರಬೇಕು. ಸಂಸ್ಕೃತಿಯ ಮಟ್ಟವನ್ನು ಹೆಚ್ಚಿಸುವ ಸದಭಿರುಚಿಯ ಚಿತ್ರಗಳು ತಯಾರಾಗಬೇಕು. ರಷ್ಯಾ ದೇಶ ನಮ್ಮ ನಾಡಿನ ಯೋಗಾಭ್ಯಾಸದ ಮೇಲೆ ಚಿತ್ರ ತಯಾರಿಸುತ್ತದೆ! ನಮ್ಮಲ್ಲಿ ಮಿನಿಸ್ಕರ್ಟ್ ಮಿನಿ ಸಂಸ್ಕೃತಿಯ ಮಾನಹೀನ ಚಿತ್ರ ತಯಾರಿಸುತ್ತಿದ್ದೇವೆ!

ಕನ್ನಡನುಡಿಯ ಇತಿಹಾಸ ಮದಾತ್ತನವಾದದ್ದು. ಕನ್ನಡ ಭಾಷೆಯಲ್ಲೂ ವ್ಯಾಕರಣ, ಛಂದಸ್ಸು, ಅಲಂಕಾರ ಶಾಸ್ತ್ರಗಳಿವೆ. ಇಂಥ ಉತ್ತಮ ಭಾಷೆಗೆ ದ್ರೋಹವೆಸಗಬಾರದೆಂಬ ಪ್ರಜ್ಞೆಯಿಂದ ಕನ್ನಡ-ಚಿತ್ರ ಸಾಹಿತ್ಯ ಸೃಷ್ಟಿಸುವ "ಸಿನಿ ಸಾರಸ್ವತಭಂಡಾರಿ" ಹೊಸ ದೃಷ್ಟಿಕೋನ ಬೆಳೆಸಿಕೊಳ್ಳಬೇಕು.

ಸಿನಿಮಾ ಅಭಿನಯವೆಂದರೆ ಅಂಗಾಂಗ ಪ್ರದರ್ಶನವಲ್ಲ, ಭಾವದ ಅಭಿವ್ಯಕ್ತಿ ಎಂಬ ಭಾವನೆ ನಟ ನಟಿಯರಲ್ಲಿ ಮೂಡಿಬರಬೇಕು. ಅದಕ್ಕೆ ನಿರ್ದೇಶಕ ನಿರ್ಮಾಪಕರೂ ನೆರವಾಗಬೇಕು. ಇಲ್ಲವಾದರೆ ತಾರಾವರ್ಗ ಅಸಹಾಯಕ. ಕಲಾವಿದರು ಪ್ರಗತಿಶೀಲ ಚಿತ್ರಗಳನ್ನು ನೋಡಿ, ಪ್ರಗತಿಶೀಲ ಅಭಿನಯ ಕಲೆಯನ್ನು ಕಂಡು ತಮ್ಮ ಪಾತ್ರವರಿತು ಅಭಿನಯಿಸುವ ತಂತ್ರವನ್ನು ಅನುಸರಿಸಬೇಕು.

ನಮ್ಮಲ್ಲೂ ಉತ್ತಮ ಸಾಹಿತ್ಯವಿದೆ-ಉತ್ತಮ ಕಥೆಗಳಿವೆ; ಶ್ರೇಷ್ಠತರದ ಮನರಂಜನ ಸಾಹಿತ್ಯವನ್ನು ಸೂಕ್ತರೀತಿಯಲ್ಲಿ ತೆರೆಯ ಮೇಲೆ ನಿರೂಪಿಸಬೇಕಲ್ಲದೆ ಕೀಳು ಮನರಂಜನೆಯ ಉದ್ದೇಶ ಚಿತ್ರದ್ದಾಗಿರಬಾರದು.

ತಾಂತ್ರಿಕವರ್ಗದಲ್ಲೂ ಹೊಸ ಬಗೆಯ ಚಮತ್ಕಾರ ಅಥವಾ ನವ್ಯಪ್ರಯೋಗಗಳನ್ನು ನೀಡಬಲ್ಲ ಹೊಸ ದೃಷ್ಟಿಕೋನ ಮೂಡಬೇಕು.

ಈ ಎಲ್ಲ ದೃಷ್ಟಿಕೋನದಿಂದಲೂ ಕನ್ನಡ ಚಿತ್ರರಂಗದಲ್ಲಿ ಹೊಸ ಚೇತನ, ಹೊಸ ದೃಷ್ಟಿಕೋನ ಮೂಡಿದರೆ ಹೊಸ ನಿರ್ಮಾಣ ಸಾಧ್ಯ. ಆಗಲೆ ಕನ್ನಡ ಚಿತ್ರರಂಗ ಇತರರಿಗೆ ಆದರ್ಶವಾಗಬಲ್ಲದು.

★★★★★

— ಮೀನಾಕುಮಾರಿ



ಮೀನಾಕುಮಾರಿಯ ಬಗ್ಗೆ ಬರೆಯಲು ಸಂಪಾದಕರು ನನ್ನನ್ನು ಕೇಳಿಕೊಂಡಿದ್ದಾರೆ. ಇದು ಅಷ್ಟು ಸುಲಭವಲ್ಲ. ಕಾರಣ ನಾನೇ ಮೀನಾಕುಮಾರಿ. ನನ್ನ ಬಗ್ಗೆ ನಾನೇ ಏನು ಬರೆಯಲಿ? ಏನು ನಿವೇದಿಸಿಕೊಳ್ಳಲಿ? ನನ್ನ ಬಗ್ಗೆ ನಾನು ತಿಳಿದಿರುವುದು ಬೇಕಾದಷ್ಟಿದೆ, ನಿಜ. ಆದರೆ ತಿಳಿದುದನ್ನೆಲ್ಲ ಪ್ರಾಮಾಣಿಕವಾಗಿ ಬರೆಯುವ ಧೈರ್ಯವಿರಬೇಕಲ್ಲ!

ಮೀನಾಕುಮಾರಿಗೆ ಆ ಧೈರ್ಯವಿದೆ. ಇದೇ ಧೈರ್ಯದಿಂದ ಆಕೆ ತನ್ನ ಜೀವನಚರಿತ್ರೆಯನ್ನೇ ಬರೆದಾಳು. ಅದು ಬಹುಶಃ ಪ್ರಕಟವೂ ಆದೀತು. ಆದರೆ ಅದನ್ನೋದಲು, ಕುತೂಹಲದ ಪ್ರಶ್ನೆಗಳಿಗುತ್ತರಿಸಲು ಆಕೆಯಾಗ ಇರದಿರಲೂ ಬಹುದು.

ಮೀನಾಕುಮಾರಿ ಏನೇ ಬರೆದರೂ ಮೊದಲು ಆಕೆ ತನ್ನನ್ನು 'ಮೀನಾಕುಮಾರಿಯ ಪಟ್ಟ'ಕ್ಕೇರಿಸಿದವರನ್ನು ಮಾತ್ರ ಸ್ಮರಿಸದಿರಲಾರಳು.

ಪ್ರೇಮವೊಂದು ಮರೀಚಿಕೆ

ಮೀನಾಕುಮಾರಿ ಕೆಟ್ಟವಳೇನು? ಹೌದು. ದುರ್ಬಲಳು ಎಂಬರ್ಥದಲ್ಲಿ ನಾನು ಕೆಟ್ಟವಳು. ನನ್ನಲ್ಲಿ ಅನೇಕ ದೌರ್ಬಲ್ಯಗಳಿವೆ, ಅನೇಕ ತಪ್ಪುಗಳಿವೆ, ದೋಷಗಳಿವೆ. ನಾನು ಏಕಾಂಗಿಯಾದಾಗ, ಅತ್ಯಂತ ದುಃಖಿಯಾದಾಗ, ಈ ಜಗತ್ತಿನಿಂದ ದೂರ ಓಡಿಹೋಗಬೇಕೆನ್ನಿಸಿದಾಗ, ನನಗೆ ನಾನೇ ಕನಿಕರಿಸಿಕೊಂಡಾಗ, ಜರಿದುಕೊಳ್ಳುವಾಗ ಮಾತ್ರ ನಾನು ಕೆಟ್ಟವಳೆನಿಸುವುದಿಲ್ಲ. ದೌರ್ಬಲ್ಯಗಳ ಒಂದು ಮೂಟೆಯೇ ನಾನು ಅನಿಸುತ್ತದೆ.

ಜೀವನದಲ್ಲಿ ನಾನು ಯಾರನ್ನಾದರೂ ಪ್ರೀತಿಸಿದ್ದೇನೆಯೆ? ಹೌದು. ಪ್ರೇಮವೇ ನನ್ನ ದೊಡ್ಡ ಶಕ್ತಿ; ನನ್ನ ದೊಡ್ಡ ದೌರ್ಬಲ್ಯ ಕೂಡ. ಪ್ರೇಮವನ್ನೇ ನಾನು ಪ್ರೀತಿಸುತ್ತೇನೆ. ಅದಕ್ಕಾಗಿ ನಾನು ಹಾತೊರೆಯುತ್ತಿದ್ದೇನೆ, ಚಿಕ್ಕಂದಿನಿಂದಲೂ.

ತಾಯಿ ಮಗಳನ್ನು ಪ್ರೀತಿಸುವುದಿಲ್ಲವೆ? ಯಾವ ತಾಯಿ ತನ್ನ ಮಕ್ಕಳನ್ನು ಪ್ರೀತಿಸಳು? ಆದರೆ ನನಗೆ ಅಂಥ ಪ್ರೀತಿ ದೊರಕಲಿಲ್ಲವೆನಿಸುತ್ತದೆ. ನನಗಿಂತಲೂ ನನ್ನ ತಂಗಿ ಮಾಧುರಿಯನ್ನು ಕಂಡರೆ ತಾಯಿಗೆ ಹೆಚ್ಚು ಪ್ರೀತಿಯಿತ್ತು. ಅಂದರೆ ನನ್ನನ್ನು ಆಕೆ ಪ್ರೀತಿಸಲೇ ಇಲ್ಲವೆನ್ನಲೆ? ಇಲ್ಲ. ನಾನು ಜನಿಸಿದಾಗ ನನ್ನ ತಾಯಿಗೆ ಬಹು ಅಸಮಾಧಾನವಾಯಿತಂತೆ. ಕಾರಣ, ಆಕೆ ಬಯಸಿದುದು ಗಂಡು ಕೂಸನ್ನು. ನಾನು ಬೆಳೆದಾಗ, ಕೆಲಸಕ್ಕೆ ಬಾರದವಳು ಎಂಬ ಬಿರುನುಡಿಗಳನ್ನು ತಾಯಿಯಿಂದ ಕೇಳಬೇಕಾಯಿತು. ತನ್ನ ಕೆಲಸ, ತನ್ನ ವಿಚಾರಗಳಲ್ಲೇ ಸದಾ ಮುಳುಗಿರುತ್ತಿದ್ದ ತಂದೆಗೆ, ನಾನು ಬಯಸಿದ ಪ್ರೀತಿಯನ್ನೆರೆಯಲು ಸಮಯವೇ ಇರಲಿಲ್ಲ. ಬಾಲ್ಯದಲ್ಲಿ ನಾನು ಪ್ರೇಮ, ಅಂತಃಕರಣಗಳಿಲ್ಲದೆಯೆ ಬೆಳೆದೆ. ಈ ವಾತಾವರಣದಲ್ಲಿ ಬೆಳೆದು ದೊಡ್ಡವಳಾದಂತೆಲ್ಲ ಪ್ರೇಮಕ್ಕಾಗಿ ಹಾತೊರೆಯುತ್ತಿದ್ದೇನೆ. ಅದಕ್ಕಾಗಿ ಹುಡುಕುತ್ತಿದ್ದೇನೆ.

ಅನೇಕ ಬಾರಿ ಪ್ರೇಮದ ಗುರಿ ಎಟುಕುವುದರಲ್ಲಿದೆ, ಬಹುದಿನಗಳಿಂದ ಆಶಿಸುತ್ತಿದ್ದ ಪ್ರೇಮವನ್ನು ನಾನಿನ್ನು ಪಡೆಯಬಲ್ಲೆನೆಂದುಕೊಳ್ಳುತ್ತೇನೆ. ಆದರೆ ಅದು ಮರೀಚಿಕೆಯಾಗಿ

ರುತ್ತದೆಂದು ಕೊನೆಗೆ ತಿಳಿಯುತ್ತದೆ–ಮತ್ತೆ ಮತ್ತೆ ಹಣಗಿದೆ.

ಪ್ರೇಮವನ್ನರಸುತ್ತ ನಾನು ಹುಚ್ಚಳಂತೆ ಅಲೆದಿದ್ದೇನೆ. ಹೂವೆಂದು ಬಗೆದುದು ಕಲ್ಲಾಗಿ ನನ್ನ ವೇದನೆಯನ್ನು ಮತ್ತೂ ಹೆಚ್ಚಿಸಿಕೊಂಡಿದ್ದೇನೆ. ಪ್ರೇಮವೆಂದರೆ ಕೊಡುತಗೆದು ಕೊಳ್ಳುವದಕ್ಕಿಂತಲೂ ಹೆಚ್ಚಿನದು. ಹೃದಯವೇ ಇದನ್ನು ತಿಳಿಯಬಲ್ಲದು. ಇದನ್ನರಿತ ಸ್ನೇಹಿತರನ್ನು ಪಡೆದವರೇ ನಿಜವಾಗಿಯೂ ಧನ್ಯ!

ನಾನು ಸ್ವತಂತ್ರಳಾಗಿರಬಯುಸುವೆ. ಆದರೂ ಪ್ರೀತಿ, ವಿಶ್ವಾಸ, ಸ್ನೇಹಗಳ ನೈತಿಕ ಆಸರ ನೀಡುವವರೊಬ್ಬರು ನನಗೆ ಬೇಕೆನ್ನಿಸುತ್ತದೆ. ನನ್ನ ಮುಖವನ್ನು ತನ್ನ ಕೈಗಳಲ್ಲಿರಿಸಿಕೊಂಡು ನೆಟ್ಟ ನೋಟದಿಂದ ನನ್ನನ್ನೇ ನೋಡುತ್ತ 'ನಿನ್ನನ್ನು ನಾನು ಪ್ರೀತಿಸುವೆ' ಎಂದೆನ್ನುವವರೊಬ್ಬರಿರಬೇಕೆಂದು ನನಗೆ ಆಶೆಯಾಗಿದೆ. ಕೊನೆಯ ಕ್ಷಣದ ತನಕವೂ ನನ್ನೊಂದಿಗಿರಬಲ್ಲವರು ನನಗೆ ಬೇಕಾಗಿದೆ–ನಾನು ಬಯಸುವುದು ಇದಿಷ್ಟೆ.

ಯಾವ ಪತ್ನಿಯಿಂದಲೂ ಆಕೆಯ ಪತಿಯನ್ನಗಲಿಸಲು ನಾನಿಚ್ಛಿಸುತ್ತಿಲ್ಲ; ತಂದೆಯಿಂದ ಮಕ್ಕಳನ್ನಗಲಿಸುವುದು ನನಗಿಷ್ಟವಿಲ್ಲ; ಸ್ನೇಹಿತರು ಅಗಲಬೇಕೆನ್ನುವವಳಲ್ಲ ನಾನು. ಪ್ರತಿಯೊಬ್ಬನೂ ತನ್ನ ತಾಯಿ, ತಂದೆ, ಸೋದರ ಸೋದರಿಯರು ಪತ್ನಿ ಮಿತ್ರರು ಎಲ್ಲರನ್ನೂ ಪ್ರೀತಿ ವಿಶ್ವಾಸದಿಂದ ಕಾಣುತ್ತಾನೆ. ಎಲ್ಲರೂ ಆತನಿಂದ ತಮ್ಮ ತಮ್ಮ ಪಾಲು ಪಡೆಯುತ್ತಾರೆ, ಯಾವ ಭೀತಿ ಅಥವಾ ಚಿಂತೆಯಿಲ್ಲದೆ. ಇವರಲ್ಲಿ ನಾನು ಬೇಡುವುದಿಷ್ಟೆ–ನಿಮ್ಮ ಪ್ರೀತಿ, ವಿಶ್ವಾಸಗಳಲ್ಲಿ ನನಗೂ ನನ್ನ ಪಾಲು ನೀಡಿರಿ ಎಂದು. ಈ ಪಾಲು ದೊರಕುವ ಹಾಗು ಅದು ಮತ್ತೆ ಕಳೆಯದಿರುವ ಭರವಸೆ ಸಿಕ್ಕಾಕ್ಷಣವೇ ಮೀನಾಕುಮಾರಿ ಹೊಸಬಳಾಗಿ ಬಿಡುತ್ತಾಳೆ. ಈಗಿನ ಮೀನಾಕುಮಾರಿಗಿಂತ ಹೆಚ್ಚು ಉತ್ತಮ ವ್ಯಕ್ತಿಯಾಗುತ್ತಾಳೆ, ಉತ್ತಮ ಅಭಿನೇತ್ರಿಯಾಗುತ್ತಾಳೆ. ಆಗ ಈ ಮೀನಾಕುಮಾರಿಯ ಜೀವನ ಸ್ವಲ್ಪ ಮಟ್ಟಿಗಾದರೂ ಸಾರ್ಥಕವಾಗುತ್ತದೆ. ಜೀವನ ನಿರುಪಯುಕ್ತವಾಗುವುದು ತಪ್ಪುತ್ತದೆ.

ಮೀನಾಕುಮಾರಿಯ ಜೀವನ ನಿರುಪಯೋಗಿ ಎಂದು ಯಾರೆನ್ನುತ್ತಾರೆ? ಆಕೆಯ ಜೀವನ ಸಾರ್ಥಕವಲ್ಲವೆಂದೆನ್ನುವರಾರು? ಈಗಲೇ, ಈ ಕ್ಷಣದಲ್ಲಿಯೆ ಮೀನಾಕುಮಾರಿ ತನ್ನ ಜೀವನವಿಡೀ ಪರಿತಪಿಸುತ್ತಿದ್ದ ಪ್ರೇಮ ವಿಶ್ವಾಸಗಳ ಭರವಸೆಯನ್ನು ನಾನು ಕೊಡುವೆ. ಇನ್ನು ಆಕೆ ಚಿಂತಿಸುವ ಅಗತ್ಯವಿಲ್ಲ.

ವರ್ಷಗಟ್ಟಲೆ ಪ್ರೇಮದ ತಪಸ್ಸು ಮಾಡಿದವರು ದೊರೆತಾಗ ಗೌರವ, ಯಶಸ್ಸು, ಕೀರ್ತಿ, ಹೆಸರು ದಶೆ ಎಲ್ಲವನ್ನು ಮರೆತು, ಸಾಮಾಜಿಕ ಕಟ್ಟುನಿಟ್ಟುಗಳನ್ನೂ ಮರೆತು ಬಿಡುವುದು ಸಹಜ. ಆದರೆ ಸಮಾಜದಲ್ಲಿ ಕುಹಕತನಕ್ಕೆ ಇದೇ ಹೆಚ್ಚು ಅವಕಾಶವೀಯುವಂತಾಗುತ್ತದೆ. ಹಸಿದವನಿಗೆ ಸುಗ್ರಾಸ ಭೋಜನ ದೊರೆತಾಗ ಅವನು ಹುಚ್ಚನಂತೆ ವರ್ತಿಸುವುದನ್ನು ಕಂಡು ನಾನು ಅವನನ್ನು ಜರೆಯುವುದಿಲ್ಲ, ಖಂಡಿಸುವುದಿಲ್ಲ. ಅವನಿಗಾಗಿ ನನ್ನಲ್ಲಿ ಅನುಕಂಪ ಉಕ್ಕಿಬರುತ್ತದೆ. ಇಂತಹ ಸ್ಥಿತಿಯಲ್ಲಿ ಅವನನ್ನು ಅರ್ಥಮಾಡಿಕೊಳ್ಳುವ ಬದಲು ಜಗತ್ತು ನಗುತ್ತದೆ, ಜರೆಯುತ್ತದೆ.

ಮನುಷ್ಯನಿಗೆ ಮೂರು ವ್ಯಕ್ತಿತ್ವಗಳಿರುತ್ತವೆಯಂತೆ. ಒಂದು ವ್ಯಕ್ತಿತ್ವವನ್ನು ಅವನೇ ಬಲ್ಲ. ಇನ್ನೊಂದು ಎರಡನೆಯವರು ಬಲ್ಲರು, ಮೂರನೆಯದನ್ನು ಪರಮಾತ್ಮ ಬಲ್ಲ. ಪರಮಾತ್ಮನ ದೃಷ್ಟಿಯಲ್ಲಿ ಮೀನಾಕುಮಾರಿ ಹೇಗೊ ನಾನು ಹೇಳಲಾರೆ. ಆದರೆ ಮೀನಾಕುಮಾರಿ ಅನೇಕರಿಗೆ ಅನೇಕ ಬಗೆಯಾಗಿದ್ದಾಳೆ. ಚಿತ್ರ ತೆರೆಯ ಮೇಲೆ ಆಕೆಯನ್ನು ಕಂಡವ ಆಕೆ ಒಬ್ಬ ಉತ್ತಮ ಆದರ್ಶ ವ್ಯಕ್ತಿ. ಕಷ್ಟ ಸಹಿಸಿ ಇನ್ನೊಬ್ಬರಿಗೆ ಉಪಕಾರ ಮಾಡಲೆಂದು ಜನಿಸಿದವಳು. 'ಪಾಲಿ ಹಿಲ್' ದಿಂದ ಆಕೆ ನಿಷ್ಕ್ರಮಿಸಿದಾಗ ಪತ್ರಿಕೆಗಳು ಸಾಕಷ್ಟು ಬರೆದವು. ತಾರಾಭಿಮಾನಿಗಳು ಬರೆದ ಪತ್ರಗಳಿಗೆ ಲೆಕ್ಕವಿಲ್ಲ. ಇವರ ಅಭಿಪ್ರಾಯದಂತೆಯೆ ನುಡಿಯಬೇಕಾದರೆ 'ಪಾಲಿ ಹಿಲ್'ದಿಂದ ಮೀನಾಕುಮಾರಿ ನಿರ್ಗಮಿಸಿದುದು ಅವರಿಗೆ ಸಮಾಧಾನದ ಸಂಗತಿಯೆ. ಆದರೆ ಆಗ ಮೀನಾಕುಮಾರಿಯು 'ದೇವತೆ'ಯ ವ್ಯಕ್ತಿತ್ವ ನುಚ್ಚುನೂರಾಯಿತು. ಸ್ನೇಹಿತರಿಗಿಂತ ಚಿತ್ರಾಭಿಮಾನಿಗಳೇ ಆಗ ಮೀನಾಗೆ ಹೆಚ್ಚು ಕನಿಕರ ತೋರಿದರು. ಪುಕ್ಯ 'ಶಕಶಾಂತಿ' ನಿವಾಸಕ್ಕೆ ಮೀನಾಕುಮಾರಿ ಬಂದುದು ಅಭಿಮಾನಿಗಳಿಗೆ ಸಂತಸವಿತ್ತಿತು.

ಚಲಚ್ಚಿತ್ರ ನೋಡುವ ಇಂದಿನ ಜನರ್ಯಾ, ಚಿತ್ರದಲ್ಲಿಯಂತೆ ತಾರೆ ಮನೆಯಲ್ಲಿ ಪಾತ್ರೆ ತೊಳೆಯುವುದಿಲ್ಲವೆಂಬುದನ್ನು ಬಲ್ಲರು. ತಾರೆಯರು ದೇವತೆಗಳಲ್ಲ; ಎಲ್ಲರಂತೆ ಅವರೂ ಜೀವಿಸುತ್ತಾರೆ, ಪ್ರೀತಿ, ವಿಶ್ವಾಸ, ಕೀರ್ತಿ, ಯಶಸ್ಸುಗಳಿಗಾಗಿ ಹಾತೊರೆಯುತ್ತಾರೆ, ಎಂಬುದನ್ನು ಬಲ್ಲರು. ಮೀನಾಕುಮಾರಿ ತನ್ನ ಅಭಿಮಾನಿಗಳ ಈ ಭಾವನೆಯನ್ನು ಮನ್ನಿಸುತ್ತಾಳೆ. ಕಾರಣ ಆಕೆ ತಾನು ಬಯಸಿದ ಊಟವನ್ನು ಕೆಲವು ವೇಳೆ ತಾನೇ ತಯಾರಿಸುತ್ತಾಳೆ. ಸ್ವೆಟರ್ ಹೆಣೆಯುತ್ತಾಳೆ. ಆದರೆ ಅಡುಗೆ ಮಾಡುವಾಗ ಹೆಣೆಯುವಾಗ ಫೋಟೊ ತೆಗಿಸಿಕೊಳ್ಳುವುದಿಲ್ಲ.

ಎಲ್ಲರನ್ನೂ ಮೆಚ್ಚಿಸುವುದು ಯಾರಿಗೂ ಸಾಧ್ಯವಿಲ್ಲ, ಆದರೆ ಯಾರನ್ನು ಮೆಚ್ಚಿಸಲೂ ನಾನು ವಿಷಯ ಬಚ್ಚಿಡಲಾರೆ. ನಾನು ದೇವತೆಯಾಗಿಲ್ಲ, ಆಗಲೂ ಬಯಸುವುದೂ ಇಲ್ಲ. ಚಿತ್ರಪಟದಲ್ಲಿ ನೀವು ನೋಡುವ ಆದರ್ಶ ಸ್ತ್ರೀಯೂ ನಾನಾಗಿಲ್ಲ. ಎಲ್ಲರಂತೆ ಜೀವಿಸಿ, ಎಲ್ಲರಂತೆ ಪ್ರೇಮದಿಂದಿರಬಯಸುವೆ. ನನ್ನ ಒಂದು ದೌರ್ಬಲ್ಯವೆಂದರೆ ಪ್ರೇಮಕ್ಕಾಗಿ ಹಂಬಲಿಸುವುದು. ಅದೇ ಒಂದು ದೊಡ್ಡ ತಪ್ಪು ನನ್ನದು. ಪ್ರೇಮವು ಪಾಪವೆನ್ನುವುದಾದರೆ ಮೀನಾಕುಮಾರಿ ಪಾಪಿ. ಬಯಸಿದ ಪ್ರೇಮ ಪಡೆಯುವುದೇ ನನ್ನ ಅತೀವ ಆಕಾಂಕ್ಷೆ. ಅದರಿಂದಲೇ ನನಗೆ ಶಾಂತಿ, ಸಮಾಧಾನ.

ಇನ್ನು ಮೀನಾಕುಮಾರಿ ಸ್ನೇಹಿತರ ದೃಷ್ಟಿಯಲ್ಲಿ ಹೇಗೆಂದು ಸ್ನೇಹಿತರೇ ಹೇಳಬೇಕಾದ ಮಾತು. ಆದರೆ ಇಷ್ಟು ಮಾತ್ರ ನಿಜ. ಶ್ರಮಿಕರಾದಿಯಾಗಿ ರಾಷ್ಟ್ರಾಧ್ಯಕ್ಷರವರೆಗೂ ಆಕೆಯ ಸನ್ಮಿತ್ರರಿದ್ದಾರೆ. ಮೀನಾಕುಮಾರಿ ಯಾರನ್ನೂ ದ್ವೇಷಿಸುವುದಿಲ್ಲ. ಎಲ್ಲರಿಂದ ಪ್ರೀತಿ, ವಿಶ್ವಾಸಗಳನ್ನು ಬಯಸುವ ಆಕೆಗೆ ದ್ವೇಷವೆಂದರೇನೆಂಬುದು ಗೊತ್ತಿಲ್ಲ.

ಆದರೂ ಮೀನಾಕುಮಾರಿಯನ್ನು ನಾನೇ ಪೂರ್ಣ ಅರ್ಥ ಮಾಡಿಕೊಂಡಿಲ್ಲವೆನಿಸುತ್ತದೆ. ವೈವಿಧ್ಯಮಯ ಆಕರ್ಷಕ ವ್ಯಕ್ತಿತ್ವದ ಮೀನಾಕುಮಾರಿಯ ಜೀವನವೇ ಅಭಿನಯ, ಅಭಿನಯವೆ ಜೀವನ! ಆಕೆಯ ಬಗ್ಗೆ ಅರಿತಷ್ಟೂ ಉಂಟು. ಪ್ರೇಮವೆಂಬುದು ಮೀನಾಳ ವ್ಯಕ್ತಿತ್ವದ ಜೀವಾಳ. ಆಕೆಯ ಪ್ರೇಮದ ತಪಸ್ಸು ನಿರಂತರ. ಬಯಸಿದ ಪ್ರೇಮ ದಕ್ಕಿದಾಗ ಜಗತ್ತನ್ನೆ ಮರೆತು ಪ್ರೇಮಸಾಗರದಲ್ಲಿ ಮೈಮರೆಯಲೆತ್ನಿಸುತ್ತಾಳೆ. ತಾನು ಕಂಡ ಪ್ರೇಮ ಕೇವಲ ಬಿಸಿಲುಗುದುರೆಯೆಂದರಿತು ಸೋಲನುಭವಿಸಿದರೂ ಮೀನಾ ಸೋಲಲಾರಳು. ಮಗುವಿನ ಸಾವನ್ನು ಬಯಸದೆ, ಯೋಚಿಸದೆ, ನಂಬದ ತಾಯಿಯಂತೆ ಮೀನಾ ಪ್ರೇಮವನ್ನು ಪ್ರೀತಿಸುತ್ತಾಳೆ; ಪ್ರೇಮವನ್ನರಸುತ್ತಾಳೆ.

— * —

ಬಾಪೂ ಶತಾಬ್ದಿ



ಬಾಪೂ ಶತಾಬ್ದಿ ಈ ವರ್ಷ ದೀಪಾವಳಿ
ಸೂತ್ರಯಜ್ಞದ ಸತ್ಯದೀಪ ಬೆಳಬೆಳಗಲಿ
ಆ ಅಹಿಂಸೆಯು ನಾಡ ನರನರಕು ಇಳಿಯಲಿ
ಭಾರತವು ಲೋಕಗುರು ಪಾತ್ರ ನಿರ್ವಹಿಸಲಿ

— ಶ್ರೀದೇವದತ್ತ


ಚಿತ್ರರಂಗದ ಚಿರನೂತನ ನಟ ಅಶೋಕ ಕುಮಾರ

— ವಸಂತ ಜೋಗಳೇಕರ

'ಹಮ್' ಎನ್ನಬೇಕಿದ್ದ ನಾನು 'ಮೈ' ಎಂದು ಅಂದುದಕ್ಕಾಗಿ ಇಂದು ಮತ್ತೊಮ್ಮೆ ಅದೇ ದೃಶ್ಯವನ್ನು ಚಿತ್ರೀಕರಿಸಬೇಕಾಯಿತು."

ಅಶೋಕ ಕುಮಾರನ ದಿನಚರಿಯಲ್ಲಿರುವ ಒಂದು ಟಿಪ್ಪಣಿಯಿದು. 'ಆಜ್ ಔರ್ ಕಲ್' ಚಿತ್ರದಲ್ಲಿ ಮಹಾರಾಜನಾಗಿ ಅಭಿನಯಿಸಿದ ಅಶೋಕಕುಮಾರ ತಪ್ಪಿಯಾದರೂ 'ನಾನು' ಎಂದು ಏಕವಚನ ಪ್ರಯೋಗಿಸಬಾರದಿತ್ತು. ಅಶೋಕಕುಮಾರ ಕ್ಯಾಮರಾದ ಮುಂದೆ ಅಭಿನಯಕ್ಕಣಿಯಾಗಿ ನಿಂತನೆಂದರೆ, ಉಳಿದ ನಟರೊಂದಿಗೆ ಹತ್ತು ತಾಸು ಹಿಡಿಯುವ ಕೆಲಸವನ್ನು ನಾಲ್ಕೇ ತಾಸುಗಳಲ್ಲಿ ಪೂರೈಸಬಹುದು-ಯಾವ ದೋಷವೂ ಇಲ್ಲದೆ ಅಷ್ಟು ಕರಾರುವಾಕ್ಕಾದ ಸಿದ್ಧತೆ ಅಶೋಕಕುಮಾರನದು. ತನ್ನ ಅಭಿನಯದಲ್ಲಿ ಎಂದೂ, ಎಲ್ಲಿಯೂ ತಪ್ಪುವ ನಟನಲ್ಲ ಈತ. ನಿರ್ದೇಶಕ, ಛಾಯಾಗ್ರಾಹಕ, ಧ್ವನಿಮುದ್ರಣಕರ್ತ, ಸಹನಟ ನಟಿಯರೆಲ್ಲರಿಗೂ ಅಶೋಕಕುಮಾರನೆಂದರೆ ಪ್ರಜ್ಞಾವಂತ ನಟನೆಂದು ಗೊತ್ತು. ಆದರೀಗ ಆತನಿಂದ ಒಂದು ಚಿಕ್ಕ ತಪ್ಪು ಘಟಿಸಿ ಹೋಗಿತ್ತು. ಇದನ್ನರಿತ ಕೆಲ ಸನ್ಮಿತ್ರರು ಅಶೋಕ ಕುಮಾರನನ್ನು ವಿನೋದಕ್ಕಾಗಿ ಛೇಡಿಸಬೇಕೆಂದು ಯೋಚಿಸಿದರು. ಇಂಥ ಅವಕಾಶ ದೊರೆಯುವುದು ವಿರಳ. ಆದರೆ ಅವರೆಣಿಸಿದ ಆ ಅವಕಾಶ ಬರಲೇ ಇಲ್ಲ. ಅಶೋಕಕುಮಾರ ಚಿತ್ರದ ಪ್ರಾಯೋಗಿಕ ಪ್ರದರ್ಶನ ನೋಡಿದ ಕೂಡಲೆ ಪಕ್ಕದಲ್ಲೇ ಕುಳಿತಿದ್ದ ಚಿತ್ರದ ನಿರ್ದೇಶಕ ವಸಂತ ಜೋಗಳೇಕರರಿಗೆ ಹೇಳಿದ, "ಸಂಕಲನ ವಿಭಾಗದವರು ದೋಷಯುಕ್ತ ಸಂಭಾಷಣೆಯ ದೃಶ್ಯವನ್ನು ಸೇರಿಸಿಬಿಟ್ಟಿದ್ದಾರೆ. ಆದರೆ ಮತ್ತೊಮ್ಮೆ ಇದೇ ದೃಶ್ಯ ಚಿತ್ರೀಕರಣವಾದ ಸರಿಯಾದ ಭಾಗವಿದೆ" ಎಂದು. ಕೂಡಲೇ ನಿರ್ದೇಶಕ ಜೋಗಳೇಕರರು ಪರಿಶೀಲಿಸಿ ನೋಡಲಾಗಿ ಈ ಸಂಗತಿ ನಿಜವೆಂದು ಕಂಡುಬಂದಿತು.

ಈ ಸಂಗತಿ ಏಕೆ ಹೇಳಿದನೆಂದರೆ ಚಿತ್ರ ಸಂಭಾಷಣೆಯಲ್ಲಿ ಶಬ್ದಪ್ರಯೋಗ ಮತ್ತು ವ್ಯಾಕರಣಬದ್ಧ ಉಚ್ಚಾರ ಬಹು ಮುಖ್ಯವೆಂದು ನಂಬಿರುವವರಲ್ಲಿ ಅಶೋಕಕುಮಾರ



ಒಬ್ಬ. ತಾನು ಅಭಿನಯಿಸಬೇಕಾದ ದೃಶ್ಯ, ಅದರ ಸನ್ನಿವೇಶ, ಸಂಭಾಷಣೆ ಮುಂತಾದುವನ್ನು ಅಶೋಕಕುಮಾರ ಮೊದಲೇ ತಿಳಿದುಕೊಂಡು ವ್ಯಾಕರಣಶುದ್ಧವಾಗಿ ನುಡಿಯಬೇಕಾದ ಪ್ರತಿಯೊಂದು ಶಬ್ದವನ್ನು ಗಮನಿಸುತ್ತಾನೆ. ನಟನ ಭಾವಾಭಿವ್ಯಕ್ತಿಗೆ ನಾಲ್ಕು ಸಂಗತಿಗಳು ಅತಿಮುಖ್ಯ ಎಂದು ಅಶೋಕಕುಮಾರ ಹೇಳುತ್ತಾನೆ– ವಿಚಾರ, ನುಡಿ, ನೋಟ ಮತ್ತು ಭಂಗಿ; ಮಿದುಳು, ವಾಕ್, ಕಣ್ಣು ಮತ್ತು ಅಂಗಾಂಗ ಇವು ಅಭಿನಯಕಲೆಯಲ್ಲಿ ಅತಿ ಗಹನ ಪಾತ್ರವಹಿಸುವಂಥವು. ಸಾಹಿತ್ಯಿಕ ಭಾಷೆಯಂತೆ ಚಿತ್ರಸಂಭಾಷಣೆಗೂ ವ್ಯಾಕರಣ ಬೇಕಾಗುತ್ತದೆ. ಈ ಗುಟ್ಟನ್ನರಿತ ಅಶೋಕಕುಮಾರ ನುಡಿಗೆ ತಕ್ಕ ಭಾವಾಭಿನಯದಿಂದ ಸನ್ನಿವೇಶಕ್ಕೆ ಜೀವಂತ ಕಳೆ ತುಂಬುತ್ತಾನೆ.

ಔಪಚಾರಿಕವಾಗಿಯಾಗಲಿ, ಅಥವಾ ಹೊಗಳಿಕೆಗಾಗಿಯೆ ಹೊಗಳಬೇಕೆಂದಾಗಲಿ ಈ ಮಾತನ್ನು ಹೇಳುತ್ತಿಲ್ಲ. ಅಶೋಕಕುಮಾರ ಅಭಿನಯಿಸಿರುವ ಚಿತ್ರವಾವುದಾದರೂ ಕಳಪೆಯಾಗಿರಬಹುದು, ಸೋತಿರಬಹುದು. ಆದರೆ ಅಶೋಕಕುಮಾರನ ಅಭಿನಯ ಕಳಾಹೀನವಾದ ಅಥವಾ ಅಸಮರ್ಪಕವೆನಿಸಿದ ಸಂದರ್ಭ ಆತನ ಚಿತ್ರರಂಗದ ಇತಿಹಾಸದಲ್ಲಿಯೆ ಇಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಲ್ಲದಿದ್ದರೆ 'ಚಿರ ತಾರುಣ್ಯದ ನಟ' ಎಂದು ಅಶೋಕಕುಮಾರನಿಗಿರುವ ಅದ್ವಿತೀಯ ಅಭಿದಾನ ಕೇವಲ ಆಲಂಕಾರಿಕವೆ? ಅನೇಕ ಚಿತ್ರಗಳಲ್ಲಿ ಅಶೋಕಕುಮಾರ ಅಭಿನಯಿಸಿದ್ದಾನೆ. ಅನೇಕ ಬಗೆಯ ಪಾತ್ರಗಳನ್ನು ನಿರ್ವಹಿಸಿದ್ದಾನೆ – ಅರಸನಾಗಿ ಆಳಾಗಿ, ಕುಡುಕನಾಗಿ, ಖೂನಿಕೋರನಾಗಿ, ದರೋಡೆಕೋರನಾಗಿ, ದಯಾಳುವಾಗಿ, ನಾಯಕನಾಗಿ, ಖಳನಾಯಕನಾಗಿ, ಪ್ರಣಯಿಯಾಗಿ, ಪಿತನಾಗಿ; ಈ ನಟನ ಅಭಿನಯಲಾಲಿತ್ಯ ವೈವಿಧ್ಯಮಯ.

ಅಶೋಕಕುಮಾರ ಜನ್ಮತಃ ನಟನೇ ಆಗಿದ್ದಾನೆಂದು ಅನೇಕರು ಹೇಳುವುದುಂಟು. ಆದರೆ ಇದು ಸರಿಯಲ್ಲ. ಈತ ನಟನಾಗಬೇಕೆಂದು ಕನಸಿನಲ್ಲಿಯೂ ಯೋಚಿಸಿರಲಿಲ್ಲ. ದಿವಂಗತ ಹಿಮಾಂಶು ರಾಯ್ ಅವರಿಂದ ತೆರೆಯ ಮೇಲೆ ಮುಖ ತೋರಿಸಬೇಕಾಗಿ ಬಂದು ಅಭಿನಯವನ್ನೇ ಜೀವನ ವೃತ್ತಿಯಾಗಿಸಿಕೊಳ್ಳಬೇಕಾಯಿತು. ಆರಂಭದಲ್ಲಿ ಅಶೋಕಕುಮಾರನ ಚಿತ್ರಗಳು ಹೆಸರು ಗಳಿಸಿದವು. ಆದರೆ ಬಾಂಬೆ ಟಾಕೀಜಿನವರು ಬೇರೆ ಹೊಸ ನಟರನ್ನು ಹತ್ತಿ ಅಶೋಕಕುಮಾರನನ್ನು ದೂರ ಇಟ್ಟರು. ಇದರಿಂದ ಅಶೋಕಕುಮಾರ ನಿರಾಶನಾಗಲಿಲ್ಲ. ತನ್ನ ನಿರ್ಧಾರ ಬದಲಿಸಲಿಲ್ಲ. ಚಲಚ್ಚಿತ್ರ ನಟನಾಗಿಯೆ ಮುಂದುವರಿಯಬೇಕೆಂದು ನಿಶ್ಚಯಿಸಿ ಕೆಲಸವಿಲ್ಲದೆ ಸುಮಾರು ಒಂದು ವರ್ಷದತನಕ ಅಭಿನಯ ಕಲೆಯನ್ನು ತಾನೇ ಅಭ್ಯಸಿಸಿದ. ಆಗ ಈತನ ಮಿತ್ರ, ಗುರು ಎಲ್ಲಾ ಕನ್ನಡಿಯೆ! ಯಾವ ದೋಷವನ್ನು ಮುಚ್ಚಿಡದೆ ತೋರಿಸುವ, ಚಿಂತನೆಗೆ ದಾರಿ ಮಾಡಿ ಕೊಡುವ ಇಂತಹ ಗುರು ಇನ್ನಾರು ಇರಲು ಸಾಧ್ಯ? ತನ್ನ ಮೇಕಪ್‌ರೂಮಿನಲ್ಲಿ ತಯಾರಾದ 'ನಟ' ಅಶೋಕಕುಮಾರ ಚಿತ್ರ ತಯಾರಿಕೆ, ಚಿತ್ರಾಭಿನಯ, ಛಾಯಾಗ್ರಹಣಗಳ ಬಗ್ಗೆ ಪುಸ್ತಕಗಳನ್ನು ಕೊಂಡು ಅಭ್ಯಸಿಸಿದ. ಚಲಚ್ಚಿತ್ರಗಳನ್ನು ನೋಡಿ ಚಿತ್ರದ ಅಭಿನಯದ ಒಳಿತು ಕೆಡುಕುಗಳನ್ನು ಅರಿತುಕೊಂಡ. ಅಭಿನಯಕಲೆಯ ಸಾಧನೆಯಲ್ಲಿ ಅಶೋಕಕುಮಾರ ತನ್ನ ದೋಷಯುಕ್ತ ನಡಿಗೆಯನ್ನೇ ಒಂದು 'ಸ್ಟೈಲ್' ಮಾಡಿಕೊಂಡ! ಬಾಂಬೇ ಟಾಕೀಜಿನವರ 'ಕಿಸ್ಮತ್' ಚಿತ್ರದಲ್ಲಿ ಕಾಣಿಸಿಕೊಂಡ ಅಶೋಕಕುಮಾರ ಮತ್ತೆ ಹೊಸ ನಟನಾಗಿದ್ದ. ಅಂದು ಹೊಸ ನಟನಾದ ಈತ ಇಂದಿಗೂ ತನ್ನ ಹೊಸತನ ಉಳಿಸಿಕೊಂಡಿ-

ಸಾಲದ ಸಿಪಾಯಿ



ಆದಾಯ ನಾಲ್ಕಾಣೆ ವೆಚ್ಚ ರೂಪಾಯಿ
ಭಾರತವು ಆಗಿಹುದು ಸಾಲದ ಸಿಪಾಯಿ
ಮಂತ್ರಿ-ಸಮಿತಿ ಸದಸ್ಯರಧಿಕಾರ ಟೀಪಾಯಿ
ತುಂಬಿಲ್ಲಬೇಕು ಆಧ್ಯಕ್ಷೆಯ ಭರಪಾಯಿ

— ಶ್ರೀದೇವದತ್ತ

ದ್ದಾನೆ. ಅಪಾರ ಅನುಭವ ಪಡೆದಿದ್ದಾನೆ. ಕ್ಯಾಮೆರಾದ ಯಾವ ಕೋನದಲ್ಲಿ ಎಂತಹ ಭಂಗಿಯಿರಬೇಕು, ಯಾವ ಪ್ರಕಾಶದಲ್ಲಿ ಯಾವ – ಎಂತಹ ಮುಖಭಂಗಿ, ಭಾವವಿರಬೇಕು, ಯಾವ ಸಂಭಾಷಣೆ ಎಷ್ಟು ಗಟ್ಟಿಯಾಗಿ, ಮೆದುವಾಗಿ ಯಾವ ಭಾವದಿಂದ ಮಾತನಾಡಬೇಕು, ಇದಾವುದನ್ನೂ ನಿರ್ದೇಶಕರಾಗಲಿ, ಛಾಯಾಗ್ರಾಹಕರಾಗಲಿ ಅಶೋಕಕುಮಾರನಿಗೆ ಹೇಳಬೇಕಿಲ್ಲ. ಅಭಿನಯಪಟು ಅಶೋಕಕುಮಾರ ಸಿದ್ಧಹಸ್ತ ನಟ. ಸಹನಟರಿಗೂ ಧೈರ್ಯ, ಮಾರ್ಗದರ್ಶನ ನೀಡುವ ತುಂಬು ಹೃದಯವಿತನದು. ತಾನೇ ಸಮರ್ಥಶಾಲಿ ನಟನೆಂದು ಯಾರ ಅಭಿನಯವಕಾಶವನ್ನೂ ಕಳೆಯುವುದಿಲ್ಲ. ಹೊಸಬರನ್ನು ದುರ್ಬಲಗೊಳಿಸುವುದಿಲ್ಲ. ನುರಿತ ನಟನಾದ ತಾನು ತನ್ನ ಲೋಪದೋಷಗಳನ್ನು ತಿದ್ದಿಕೊಳ್ಳಬಲ್ಲವನಂತೆ ಇತರರಿಗೂ ತಿದ್ದಿಕೊಳ್ಳಲು ನೆರವಾಗುತ್ತಾನೆ.

ಚಾರಿತ್ರ್ಯಶೀಲ ನಟ ಅಶೋಕಕುಮಾರ ಚಿತ್ರರಂಗ ಎಲ್ಲರಿಗೂ ಬೇಕಾಗಿರುವ ವ್ಯಕ್ತಿ. ಈ ಹಿರಿಯ ನಟನಲ್ಲಿ ಚಿತ್ರರಂಗದಲ್ಲಿ ಎಲ್ಲರಿಗೂ ಗೌರವ. ಈತನಿಗೂ ಎಲ್ಲರಲ್ಲಿ ಗೌರವ, ವಿಶ್ವಾಸ. ಚಿತ್ರಪ್ರೇಮಿಗಳಿಗಂತೂ ಅಶೋಕಕುಮಾರನೆಂದರೆ ಚಿತ್ರರಂಗದ ಪಿತಾಮಹ ನಟ. ಈತನ ಒಂದೊಂದು ಚಿತ್ರವೂ ನೋಡುವಂತಹದು. ಈತನ ಒಂದೊಂದು ಪಾತ್ರದ ಅಭಿನಯ ಇತರ ನಟರಿಗೆ, ಹೆಚ್ಚಾಗಿ ಹೊಸ ನಟರಿಗೆ ಆದರ್ಶನೀಯ. ಚಿತ್ರರಂಗದಲ್ಲಿ ಅಶೋಕ ಕುಮಾರ ಪಡೆದ ಅನುಭವ ಒಂದು ಗ್ರಂಥವನ್ನೇ ಬರೆಯುವಷ್ಟಿರುವಾಗ ಆತನ ಬಗ್ಗೆ ಎಷ್ಟು ಬರೆದರೂ ಕಡಮೆಯೆ! ಇಂತಹ ಶ್ರೇಷ್ಠತಮ ನಟರಿಂದ ಚಿತ್ರರಂಗ ಚಿರಕಾಲ ಬಾಳಬಲ್ಲುದು.

★

ಈ ಶುಭ ಸಮಯದಲ್ಲಿ ನಮ್ಮ ಗ್ರಾಹಕರಿಗೆ, ಹಿತಚಿಂತಕರಿಗೆ
ದೀಪಾವಳಿಯ ಶುಭಾಶಯಗಳನ್ನು ಕೋರುತ್ತೇವೆ



ಪ್ರಖ್ಯಾತ ನಂಬರ್ "ಮೂವತ್ತು" ಮಾರ್ಕಿನ ಬೀಡಿಗಳ

ತಯಾರಕರು:

ದಿ ಭಾರತ್ ಬೀಡಿ ವರ್ಕ್ಸ್ (ರಿಜಿಸ್ಟರ್ಡ್)

ಪೋಸ್ಟ್ ಬಾಕ್ಸ್ ನಂಬರ್ 30 ಕಾರ್ಕಳ (ದ.ಕ.)

ದೀಪಾವಳಿಯ ಶುಭಾಶಯಗಳು

ಪ್ರಕಾಶ ಬೀಡೀಸ್

ತಯಾರಕರು:

ಕೆ. ಎಮ್. ಆನಂದ ಪ್ರಭು ಅಂಡ್ ಸನ್ಸ್

ಮಂಗಳೂರು-೧

ಫೋನ್ : { H. O. : 3718 / Factory : 3532 }   Grams : "ANAND"

ಚಲನ ಚಿತ್ರ ಪ್ರೇಮಿಗಳಿಗೆ
ದೀಪಾವಳಿಯ ಶುಭಾಶಯಗಳು

ಜಯಶ್ರೀ ಟಾಕೀಸ್

ಸಿಲ್ವರ್ ಜ್ಯುಬಿಲಿ ರೋಡ್

ಜನ್ನಾಪುರ – ಭದ್ರಾವತಿ

ನವೀನ ಸಂಶೋಧನೆಗಳಿಂದಲೂ, RCA ಫೋಟೋ ಫೋನ್ ಪ್ರೊಜೆಕ್ಟರಗಳಿಂದ ಜೋಡಿಸಲ್ಪಟ್ಟಿರುವ ಏಕೈಕ ಭವ್ಯ ಚಿತ್ರಮಂದಿರ

ಪ್ರೊ. ಕೆ. ಎಂ. ಜವರಯ್ಯ & ಸನ್ಸ್

ಸಿವಿಲ್ ಇಂಜಿನಿಯರಿಂಗ್ ಮತ್ತು
ಜನರಲ್ ಕಂಟ್ರಾಕ್ಟರ್ಸ್

Phone :
Talkies : 246   Residence : 245

ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ

ಎಂ. ಗಣಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು

ಇವರ 1876 ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ದೇಹಪುಷ್ಟಿ ಲೇಹ (ಸುವರ್ಣ ಮಾಲಿನಿ ವಸಂತ ಮಿಶ್ರಿತ)
ಶರೀರದ ಉಷ್ಣತೆ, ಸೊಂಟ ನೋವು, ಕೈಕಾಲು ಬಚ್ಚುವುದು, ಒಳಜ್ವರ, ಅಶಕ್ತತೆ, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿ ಉಂಟಾಗುವುದು.

ಕಸ್ತೂರಿ ಮಿಶ್ರಣ ದಶಮೂಲ ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅನೋಘವಾದ ಶಕ್ತಿವರ್ಧಕ ರಸಾಯನ

ಚವನಪ್ರಾಶ (ಸ್ಪೆಶಲ್), ಅತ್ಯಂತ ಶಕ್ತಿವರ್ಧಕ, ಕೆಮ್ಮು, ಶೀತ, ಉಬ್ಬಸ ಇವುಗಳ ಮೇಲೆ ದಿವ್ಯ ಔಷಧ.

ಇದಲ್ಲದೆ ಇನ್ನೂ ಅನೇಕ ತರದ ಆಸವಾರಿಷ್ಟಗಳು, ನಮ್ಮಲ್ಲಿ ದೊರೆಯುತ್ತವೆ. ಪೋಸ್ಟ್ ಮುಖಾಂತರ ಔಷಧಿ ಬೇಕಾದವರು ಮುಂಗಡವಾಗಿ ರೂಪಾಯಿ 3.00 ನ್ನು ಮನಿಯಾರ್ಡರ್ ಮೂಲಕ ರವಾನಿಸತಕ್ಕದ್ದು.

ಔಷಧಿ ಸಿಗುವ ಸ್ಥಳ :— 1) ನ್ಯೂ ಕೆನರಾ ಜನರಲ್ ಸ್ಟೋರ್ಸ್ ವಿಕ್ಟೋರಿಯಾ ಗಾರ್ಡನ್ ರೋಡ್, ಬ್ಯಾಕ್ ಬ್ಲಾಕ್, ಬೊಂಬಾಯಿ. 2) ಕೆನರಾ ಸ್ಟೋರ್ಸ್ ಮಾಟುಂಗಾ, ಬೊಂಬಾಯಿ. 3) ಕರ್ನಾಟಕ ಸ್ಟೋರ್ಸ್ ಹುಬ್ಳಿ. 4) ಕರ್ನಾಟಕ ಜನರಲ್ ಸ್ಟೋರ್ಸ್, ಹುಬ್ಳಿ. 5) ಶ್ರೀಧರ ಅಣ್ ಬ್ರದರ್ಸ್, ಪುತ್ತೂರು.

ನಮ್ಮ ಗ್ರಾಹಕರಿಗೆ ಹಾಗೂ
ನಮ್ಮ ಹಿತಚಿಂತಕರಿಗೆ ನೂತನ ವರುಷ
ಹಾಗೂ ದೀಪಾವಳಿಯ ಹಾರ್ದಿಕ ಅಭಿನಂದನೆಗಳು



ಅತಿಕಡಿಮೆ ಖರ್ಚಿನಲ್ಲಿ
ಬಟ್ಟೆಗಳ ಶುಭ್ರತೆಗೆ

NATRAJ

ನಟರಾಜ


ಸಾಬೂನನ್ನೇ ಉಪಯೋಗಿಸಿರಿ

ತಯಾರಕರು :

ಹಿಂದ ಸೋಪ್ ವರ್ಕ್ಸ್

ರವಿವಾರ ಪೇಠ   ಬೆಳಗಾವಿ

ಸೇಲ್ಸ್ ಡಿಪೋ — ಹುಬ್ಬಳ್ಳಿ, ಸಾಗರ ಜಿಲ್ಲಾ (ಶಿವಮೊಗ್ಗಾ)



ಸುತ್ತಲೂ ತೂಗಿಸು—
ತಾನು ಸುರಕ್ಷಿತ ಕೈಗಳಲ್ಲಿರುವೆನೆಂದು ಆಕೆಗೆ ಗೊತ್ತು
ಆಕೆ ದೊಡ್ಡವಳಾದಂತೆಲ್ಲ ನಿಮ್ಮ ಪ್ರೀತಿ ಮತ್ತು ವಾತ್ಸಲ್ಯ ಹೆಚ್ಚು ಕ್ರಿಯಾತ್ಮಕವಾಗಿ ವ್ಯಕ್ತವಾಗಲೆಂದು ಆಶಿಸುತ್ತಾಳೆ. ಉಚ್ಚ ಶಿಕ್ಷಣವೇ ಆಗಲಿ, ಮದುವೆಯಾಗಲಿ—ಅಥವಾ ಎರಡೂ—ನೀವು ಅಲಕ್ಷಿಸಲಾರಿರೆಂದು ಆಕೆ ಬಲ್ಲಳು. ■ ನಿಮ್ಮ ಮಕ್ಕಳು ನಿಮ್ಮಿಂದ ತಮ್ಮ ಹಕ್ಕು ಎಂದು ಬಯಸುವ ದೀರ್ಘ ಸುಭದ್ರತೆ ಮತ್ತು ಪೋಷಣೆಯನ್ನು ಉಳಿತಾಯವು ಒದಗಿಸುವುದು. ■ ನಿಮ್ಮ ಉದ್ದೇಶವೀಡೇರುವ ಅನೇಕ ಉಳಿತಾಯ ಸೌಲಭ್ಯಗಳನ್ನು ಆಕರ್ಷಕ ಬಡ್ಡಿದರಗಳಲ್ಲಿ ಬ್ಯಾಂಕ್ ಆಫ್ ಇಂಡಿಯಾ ಒದಗಿಸುತ್ತದೆ. □ ನಮ್ಮ ಯಾವುದೇ ಶಾಖೆಯಲ್ಲಿ ವಿಚಾರಿಸಿರಿ.
ಬ್ಯಾಂಕ್ ಆಫ್ ಇಂಡಿಯಾ

RAAS/B/121

ದೀಪಾವಳಿಯು ನಮ್ಮ ಎಲ್ಲ ಗ್ರಾಹಕರಿಗೂ ಹಿತೈಷಿಗಳಿಗೂ ಶುಭದಾಯಕವಾಗಲಿ !!



ನಂಬಲರ್ಹವಾದ ಕಾರಖಾನೆ

ಬಾಬಾ ಆಟೋ ವರ್ಕ್ಸ

ಹುಬಳೀಕರ ಕಂಪೌಂಡ ಕೊಪ್ಪೀಕರ ರೋಡ, ಹುಬ್ಬಳ್ಳಿ.

ಒವರಾಲಿಂಗಿನಲ್ಲಿ ಪ್ರವೀಣರು

★ ಟಾಟಾ-ಮರ್ಸಿಡಿಸ್-ಬೆಂಝು ★ ಲೇಲ್ಯಾಂಡ್ ★ ಬೆಡ್‌ಫೋರ್ಡ ★ ಫಾರ್ಗೊ ಟ್ರಕ್ಕುಗಳು ಮತ್ತು ಪರ್ಕಿನ್ಸಡಿಜಲ್ ಇಂಜಿನ್ ಮತ್ತು ಕಾರುಗಳನ್ನು ಖಾತ್ರಿಪೂರ್ವಕ ದುರುಸ್ತಿ ಮಾಡುತ್ತೇವೆ.

ವಿನಯಶೀಲತೆ* ಕ್ಷಿಪ್ರವಾಗಿ ಗಮನ ಕೊಡುವಿಕೆ* ಅರ್ಜಂಟ ಕೆಲಸಮಾಡಿ ಡಿಲೆವ್ಹರಿ ಕೊಡುವದು ನಮ್ಮ ಮುಖ್ಯ ಧ್ಯೇಯ.

ಸೂಚನೆ: ನಾವು ಎಲ್ಲ ತರದ ವಾಹನಗಳ ದುರುಸ್ತಿ ಕೆಲಸಗಳನ್ನು ಮಾಲಕರಿಗೆ ಸಮಾಧಾನವಾಗುವಂತೆ ವೇಳೆಗೆ ಸರಿಯಾಗಿ ಮಾಡಿ ಕೊಡುತ್ತೇವೆ.

ಮಾಲಕರು: **ಡಿ.ಜಿ.ಪೈ** (ಬಾಬಾ ಮೇಸ್ತ್ರಿ)



ದೀಪಾವಳಿಯ ಶುಭಾಶಯಗಳು

ಪ್ರಿಮಿಯರ್ ಸ್ಟುಡಿಯೋಸ್

ಮೈಸೂರು - ೨

ಇಲ್ಲಿ ರಾಜ್ಯ ಪ್ರಶಸ್ತಿ ಪಡೆದ ಮತ್ತು
ಬಾಕ್ ಆಫೀಸ್ ಚಿತ್ರಗಳನ್ನು ತೆಗೆಯಲಾಗಿವೆ

★ ಸ್ವತಂತ್ರ ಚಿತ್ರನಿರ್ಮಾಪಕರಿಗೆ ಇದು ಆದರ್ಶ ಸ್ಟುಡಿಯೋ
★ ಆಧುನಿಕ ಸಲಕರಣೆಗಳು, ★ ನಿಪುಣ ತಾಂತ್ರಿಕರು, ★ ಇಷ್ಟೆಲ್ಲ ಇದ್ದರೂ
ಅತ್ಯಂತ ಮಿತವಾದ ದರಗಳು.

ನಾವು ನಿಮಗಾಗಿ ಸುಂದರ ಮುದ್ರಣ ಮಾಡಬಲ್ಲೆವು

ಉತ್ತರ ಕರ್ನಾಟಕದಲ್ಲೇ ಹೊಸತಾಗಿ ಪ್ರಾರಂಭಿಸಿದ



ಭಾರತ ಫೋಟೋ ಆಫ್‌ಸೆಟ್ ವರ್ಕ್ಸ್,
ಸ್ಟೇಶನ್ ರೋಡ್ ಧಾರವಾಡ-7

ವರ್ಣರಂಜಿತ
ಮುದ್ರಣಕೇಂದ್ರ

ಇಂದಿನ ಮಕ್ಕಳೇ
ನಾಳಿನ ನಾಗರಿಕರು



ಮಕ್ಕಳಿಗೆ
ತಕ್ಕ ಮಾರ್ಗದರ್ಶನ
ಅಗತ್ಯ

ಮ್ಯಾಗಝಿನ ಪಬ್ಲಿಕೇಶನ್ಸ್, ಚಂದ್ರಸದನ ಧಾರವಾಡ-7

ದೀಪಾವಳಿಯು ನೂತನ ವರ್ಷವು ಸರ್ವರ ಸಂಬಂಧವನ್ನು ವೃದ್ಧಿಸಲಿ

ಕರ್ನಾಟಕದಾದ್ಯಂತ ಜಯಭೇರಿಹೊಡೆದ ಚಿತ್ರ

★ ಸಂಬಂಧ

★ ಸಂಬಂಧ



[ಶ್ರೀಕಾರ ಚಿತ್ರ]

ದೀಪಾವಳಿ ನವ್ಯಜ್ಯೋತಿ ಬೆಳಗಿಸಲಿ

ಸುಭೋಧ ಮುಖರ್ಜಿಯವರ

ಅಬಿನೇತ್ರಿ (ಕಲರ)

ಭೂಮಿಕಾ:-

ಶಶಿಕಪೂರ, ಹೇಮಾಮಾಲಿನಿ,

ಸಂಗೀತ:-

ಲಕ್ಷ್ಮೀಕಾಂತ-ಪ್ಯಾರೇಲಾಲ

Master Movies


ರಾಹಗೀರ

RAGHIR

ಭೂ: ಬಿಸ್ವಜಿತ

ಸಂಗೀತ: ಹೇಮಂತಕುಮಾರ

Master Movies


Kirloskar


ಭವ್ಯ ಸುಮನೋಹರ ಖಟಾವು ವಾಯಿಲ್‌ಗಳಲ್ಲಿ
ಖಟಾವು
ವಾಯಿಲ್ಸ
SISTA'S-KMS

ದೀಪಾವಳಿಯು ಸರ್ವರಿಗೂ ಶುಭದಾಯಕವಾಗಲಿ!

ರಾಷ್ಟ್ರೀಯ ಉತ್ಪಾದನೆ

೩೫,೦೦೦ ಕ್ಕೂ ಹೆಚ್ಚಿಗೆ ಕೆಲಸಗಾರರಿಗೆ
ಕೆಲಸವನ್ನು ಒದಗಿಸುತ್ತಿದೆ

ಶ್ರೇಷ್ಠವಾದ ವಸ್ತುಗಳಿಂದ ತಯಾರಿಸ-ಲಾಗಿದ



ಬೀಡಿ ಸೇದುವವರು ಇವನ್ನು ಎಂದಿಗೂ ಬಿಡುವುದಿಲ್ಲ

ಮುಖ್ಯ ಕಚೇರಿ:

ಮಂಗಳೂರು ಗಣೇಶ ಬೀಡಿ ವರ್ಕ್ಸ್

ವಿನೋಬಾ ಬೀದಿ, ಮೈಸೂರು-೧


ತಂತಿ: AROMA :: ಫೋನ್: 20241

This Deepavali Number of Karmaveer Weekly owned by Loka Shikshana Trust Hubli is printed by B. G. Guttal at the Samyukta Karnatak Press, Koppikar Road, Hubli and published by him at the Samyukta Karnatak, Koppikar Road, Hubli-20 and 2, Residency Road, Bangalore-25.

Licence No. 38 Licensed to post without prepayment
KARMAVEER 10-11-69 Registered with the Registrar of News Papers of India under No. 3558/57 Reg. No. BG.



ಶ್ರೀಗಂಧದ ಸಾಬೂನಿನ ರಹಸ್ಯ ಹಂಚಿಕೊಳ್ಳುವದು
ಅದನ್ನು ದೂರ ದೂರದ ವರೆಗೆ ಪಸರಿಸುವದು





ಮೈಸೂರ
ಶ್ರೀಗಂಧದ ಸಾಬೂನ

ಮೈಸೂರು ಗವ್ಹರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು-12